॥ ಶ್ರೀರಾಮಶ್ರೀ ॥

॥ ಶ್ರೀವೇದವ್ಯಾಸೋ ವಿಜಯತೇ ॥

ಭಗವಾನ್ ಶ್ರೀವೇದವ್ಯಾಸ ಪ್ರಣೀತ

ಮಹಾಭಾರತ

ಭಾಗ-೧೬

ದ್ರೋಣಪರ್ವ

ಸಮಗ್ರ ಶ್ಲೋಕಗಳ ಕನ್ನಡಾನುವಾದ

(ಶ್ರೀಮದಾನಂದತೀರ್ಥರ ತಾತ್ಪರ್ಯನಿರ್ಣಯ ಶ್ರೀವಾದಿರಾಜಗುರುಸಾರ್ವಭೌಮರ

ಲಕ್ಷಾಲಂಕಾರದೊಂದಿಗೆ)

ಅನುಗ್ರಹ :

ಪರಮಪೂಜ್ಯ ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು

ಶ್ರೀಹೃಷೀಕೇಶತೀರ್ಥಸಂಸ್ಥಾನಂ, ಪಲಿಮಾರು ಮಠ, ಉಡುಪಿ

ಅನುವಾದಕರು :

ಪಿ. ಎಸ್. ಶೇಷಗಿರಿ ಆಚಾರ್ಯ, ಮೈಸೂರು.

ಪ್ರಕಾಶಕರು :

ತತ್ವಸಂಶೋಧನಸಂಸತ್ (ರಿ.)

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ

ಶ್ರೀಪಲಿಮಾರು ಮಠ, ಉಡುಪಿ.

ಮಹಾಭಾರತ ದ್ರೋಣಪರ್ವ-ಭಾರತತಾತ್ಪರ್ಯನಿರ್ಣಯ- ಲಕ್ಷಾಲಂಕಾರ ಕನ್ನಡಾನುವಾದದ ಸಮಗ್ರ ಯೋಜನೆಯ ಈ ಕೃತಿಯು ತೈಲೋಕ್ಯಾಚಾರ್ಯ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರಿಂದ ಪ್ರತಿಷ್ಠಿತನಾದ ಉಡುಪಿ ಶ್ರೀಕೃಷ್ಣನ ಸನ್ನಿಧಾನದಲ್ಲಿ ಪರಮಪೂಜ್ಯ ಶ್ರೀ ಶ್ರೀವಿದ್ಯಾಧೀಶತೀರ್ಥ ಶ್ರೀಪಾದರ ದ್ವಿತೀಯ ಪರ್ಯಾಯದ ಶುಭಸಂದರ್ಭದಲ್ಲಿ ಅನೇಕ ಪೀಠಾಧಿಪತಿಗಳ ಮತ್ತು ಸಾಧಕರ ಸಮಕ್ಷಮದಲ್ಲಿ ಅನಾವರಣಗೊಂಡಿತು.

ದ್ರೋಣಪರ್ವ - ಭಾಗ ೧೬

© ತತ್ವಸಂಶೋಧನ ಸಂಸತ್ (ರಿ.), ಪಲಿಮಾರು ಮಠ, ಉಡುಪಿ.

ISBN : 978-93-81807-73-6

ಈ ಗ್ರಂಥವು ಕರ್ನಾಟಕ ಸರ್ಕಾರದ ಆರ್ಥಿಕ ನೆರವಿನಿಂದ ಮುದ್ರಿತವಾಗಿದೆ

ಪುಟಗಳು	-	XX + 581 = 601
ಮುದ್ರಿತ ಪ್ರತಿಗಳು	-	1000
ಬೆಲೆ	-	**ರೂ. 425/-**
ಅನುವಾದಕರು	-	ವಿದ್ವಾನ್ ಪಿ.ಎಸ್. ಶೇಷಗಿರಿ ಆಚಾರ್ಯ, ಮೈಸೂರು.
ಪ್ರಕಾಶಕರು	-	ತತ್ವಸಂಶೋಧನಸಂಸತ್, ಪಲಿಮಾರು ಮಠ, ಉಡುಪಿ.
ಸಂಸ್ಕೃತ ಶ್ಲೋಕ ಲಿಪ್ಯಂತರ	-	ಪ್ರಹ್ಲಾದ ದೇಶಪಾಂಡೆ ಹಾಗೂ ಎಂ. ಶರತ್ ಚಂದ್ರ
ಪುಟ ಸಂಯೋಜನೆ ಮತ್ತು ಅಕ್ಷರ ಜೋಡಣೆ	-	ಎಂ. ಶರತ್ ಚಂದ್ರ, ಪವನ್ ಗ್ರಾಫಿಕ್ಸ್ ಮತ್ತು ಪ್ರಿಂಟರ್ಸ್ ಮೈಸೂರು. ಮೊ :
ಮುದ್ರಕರು	-	**ಪವನ್ ಪ್ರಿಂಟರ್ಸ್**, ಬೆಂಗಳೂರು-18 **ಮೊಬೈಲ್** : 9686489131
ಗ್ರಂಥಪ್ರಾಪ್ತಿ	-	ಪಲಿಮಾರು ಮಠ, ಉಡುಪಿ.

ವಾಸಿಷ್ಠಕೃಷ್ಣ ಮಮ ದೇಹಿ ಕರಾವಲಂಬಮ್

ನವನವಗುಣಸಾಂದ್ರಂ ನೌಮಿ ಮಧ್ವಾಖ್ಯಚಂದ್ರಮ್

ಶ್ರೀಮದ್ವಾದಿರಾಜಕೇಸರಿಣೇ ನಮಃ

ನವನವಗುಣಸಾಂದ್ರಂ ನೌಮಿ ಮಧ್ವಾಖ್ಯಚಂದ್ರಮ್

ಶ್ರೀಮದ್ವಾದಿರಾಜಕೇಸರಿಣೇ ನಮಃ

ಸಲ ಆಲೋಚನೆ ಮಾಡಿದರೆ ಊಹಿಸಲೂ ಅಸಾಧ್ಯ. ಅದಕ್ಕಾಗಿಯೇ ಹೇಳಿದ್ದು 'ಮಹಾಂತಂ ವಿರಜಂ ಧರ್ಮಂ ದ್ವಿಷಾಮ' ದೋಷರಹಿತವಾದ ಧರ್ಮವನ್ನು ಜೀವನದಲ್ಲಿ ಕೊನೆಯವರೆಗೂ ಮೈಗೂಡಿಸಿಕೊಂಡವರು ಎಂದು. ಯಾರನ್ನೂ ಯಾಚನೆ ಮಾಡಿದವರಲ್ಲ ಈ ದ್ರೋಣರು. ಅವರಿಗೆ ಅನುರೂಪವಾಗಿರುವ ಮಡದಿ ಕೃಪಿಯೂ ಕೂಡ ಕೃಪಾಪಾತ್ರಳು. ಇಂತಹ ದ್ರೋಣರು ಭರದ್ವಾಜರಲ್ಲಿ ಅಧ್ಯಯನ ಮಾಡಿದ ದ್ರುಪದನ ಮಿತ್ರರಾಗಿದ್ದರು. ಹಾಗಾಗಿ ಅವರ ಜೊತೆಗೆ ಸಖ್ಯವಿತ್ತು. ತನ್ನ ಮಗನಾದ ಅಶ್ವತ್ಥಾಮನಿಗೆ ಹಾಲು ಕುಡಿಸಬೇಕಿತ್ತು. ಆದರೆ ಅಶ್ವತ್ಥಾಮ ದುರ್ಯೋಧನನು ಕುಡಿಸಿದ ಹಾಲನ್ನು ಕುಡಿದು 'ಅಮ್ಮಾ! ನೀನು ಕುಡಿಸುತ್ತಿರುವುದು ಹಾಲಲ್ಲ ಅದು ಹಿಟ್ಟುಕದಡಿಸಿ ಕುಡಿಸುತ್ತಿರುವುದು' ಎಂದು ಚೆಲ್ಲಿದಾಗ ಕೃಪಿಯು ದ್ರೋಣರಿಗೆ ಮಗುವಿಗಾಗಿ ಹಾಲನ್ನು ಕೊಡಲು ಬಯಸಿದಳು. ಯಾರನ್ನು ಯಾಚಿಸದ ವರ್ಗ ದ್ರೋಣಾಚಾರ್ಯರು ಕಡೆಗೆ ದ್ರುಪದನ ಬಳಿಗೆ ಹೋದಾಗ ದ್ರುಪದನು ಹಾಸ್ಯಾಸ್ಪದವಾಗಿ ಮಾತನಾಡಿ ರಾಜನಿಗೆ ಬಡವನಿಗೆ ಮೈತ್ರಿಯೇ ಇಲ್ಲವೆಂದು ಹೇಳುತ್ತಾನೆ. ಕಡೆಗೆ ದ್ರೋಣರು ಪರಶುರಾಮರ ಬಳಿಗೆ ಬರುತ್ತಾರೆ. ಪರಶುರಾಮರು ನನ್ನ ಬಳಿ ಹಸುವಿಲ್ಲ ನನ್ನ ಬಳಿ ಇರುವುದು ವಿದ್ಯೆ ಒಂದೇ ಎಂದಾಗ ಹನ್ನೆರಡು ವರ್ಷಗಳ ಕಾಲ ವಿದ್ಯಾಭ್ಯಾಸಕ್ಕೆ ತೊಡಗುತ್ತಾರೆ. ಮಗನಿಗೆ ಹಾಲು ಕುಡಿಸಲು ಹಸುವನ್ನು ತರಲು ಹೋದವರು, ಹಾಲು ಕರೆಯುವ ಗೋವನ್ನು ಮರೆತು ಶಾಸ್ತ್ರದ ಗೋವನ್ನು ಪಡೆದು ಮಹಾವಿದ್ವಾಂಸರಾಗಿ ಮೆರೆದವರು ದ್ರೋಣಾಚಾರ್ಯರು ಎಂಬುದನ್ನು ಮಹಾಭಾರತ ಹೇಳಿದೆ. ವಯಸ್ಸು, ಹೆಂಡತಿ, ಮಕ್ಕಳು, ದುಃಖ ಯಾವುದೂ ಲೆಕ್ಕಕ್ಕೆ ಬರದೆ ಗುರುಭಕ್ತಿ, ಅಧ್ಯಯನದಲ್ಲಿ ನಿರತರಾದುದಕ್ಕೆ ದ್ರೋಣರು ಒಳ್ಳೆಯ ಉದಾಹರಣೆ.

ಆದರೆ ದ್ರೋಣರು ದ್ರುಪದನ ಮೇಲಿನ ಸೇಡನ್ನು ಬಿಡದೆ ಪಾಂಡವರಿಗೆ-ದುರ್ಯೋಧನಾದಿಗಳಿಗೆ ಪಾಠ ಹೇಳಿ ಅವರ ಶತ್ರುವಾದ ದ್ರುಪದನನ್ನು ಸದೆಬಡಿದದ್ದು ದ್ರೋಣರ ವೈಭವವೇ. ದ್ರೋಣಾಚಾರ್ಯರು ಬ್ರಾಹ್ಮಣರು ಆದರೆ ಕ್ಷತ್ರಿಯರ ಜೊತೆಗೆ ಕಲಹಕ್ಕೆ ನಿಂತಾಗ ಕ್ಷತ್ರಿಯರನ್ನು ಸದೆಬಡಿಯುವ ಮಹಾಕ್ಷತ್ರಿಯರು. 'ಇದಂ ಬ್ರಾಹ್ಮಂ ಇದಂ ಕ್ಷಾತ್ರಂ ಶಾಪಾದಪಿ ಶರಾದಪಿ' ಎಂಬಂತೆ ಎರಡರಲ್ಲೂ ಸೈ ಎನಿಸಿಕೊಂಡವರು ದ್ರೋಣರು. ಕೊನೆಗೆ ದುರ್ಯೋಧನನ ಪಕ್ಷಪಾತಿಗಳಾಗಿ ಅವನ ಪರವಾಗಿ ಮಹಾಭಾರತ ಯುದ್ಧದಲ್ಲಿ ಶಸ್ತ್ರ ಹಿಡಿದವರು. ಕೃಷ್ಣನ ವಿರುದ್ಧ ಪಾಂಡವರ ವಿರೋಧ ಪಕ್ಷದಲ್ಲಿ ನಿಂತು ಯುದ್ಧವನ್ನು ಮಾಡಿದವರು ದ್ರೋಣರು. ಪ್ರಾಯಶಃ ಅದಕ್ಕೆ ಬೃಹಸ್ಪತ್ಯಾಚಾರ್ಯರು ಭಗವಂತನ ಕೈಂಕರ್ಯ ಮಾಡಿ ಸಾಧನೆ ಮಾಡಬೇಕು ಎಂದು ಹೊರಟವರು, ಅದಕ್ಕೆ ವಿರುದ್ಧವಾದ ಕೈಂಕರ್ಯ ಮಾಡುವಂತಾಯಿತಲ್ಲ ಎಂದು

ಕಕ್ಕಾಬಿಕ್ಕಿಯಾದುದುಂಟು. ಹಾಗಾಗಿಯೇ ಬೃಹಸ್ಪತಿಗಳು ಆಲೋಚಿಸಿ ಇನ್ನೊಂದು ರೂಪವನ್ನು ಪಡೆದು ಉದ್ಧವನಾಗಿ ಕೃಷ್ಣನ ಅನುಯಾಯಿಗಳಾಗಿ, ಅಂತರಂಗ ಭಕ್ತರಾಗಿ ಮೆರೆಯುತ್ತಾರೆ. ಹೀಗೆ ಬೃಹಸ್ಪತ್ಯಾಚಾರ್ಯರದ್ದು ಎರಡು ರೂಪ- ಒಂದು ದ್ರೋಣರಾಗಿ, ಇನ್ನೊಂದು ಉದ್ಧವನಾಗಿ ಕೃಷ್ಣನ ಸೇವೆ. ದ್ರೋಣರಾಗಿ ಪಾಠ- ಪ್ರವಚನ ಹಾಗೂ ಕ್ಷತ್ರಿಯರನ್ನು ತಿದ್ದುವುದರಲ್ಲೇ ಜೀವನ ಕಳೆಯಿತು. ಸಾಧನೆಗಾಗಿ ಈ ಬದುಕನ್ನು ಮೀಸಲಿಡಬೇಕು ಎನ್ನುವ ದೃಷ್ಟಿಯಿಂದ ಬೃಹಸ್ಪತ್ಯಾಚಾರ್ಯರು ಇನ್ನೊಂದು ರೂಪವನ್ನು ತೆಗೆದುಕೊಂಡು ಒಂದು ಕ್ಷಣ ಕೃಷ್ಣನನ್ನು ಬಿಡದೆ ಅವನ ಕೃಷ್ಣನ ಛಾಯೆಯ ಹಾಗಿ ಅನುಸರಿಸಿ ಹೊರಟರು.

ಬೃಹಸ್ಪತ್ಯಾಚಾರ್ಯರ ಅವತಾರರಾದಂತಹ ದ್ರೋಣರು ದ್ರುಪದನ ಮೇಲೆ ಸಿಟ್ಟಿನಿಂದ ಪಾಠ-ಪ್ರವಚನವನ್ನು ಕೈಗೆತ್ತಿಕೊಂಡರು. ಭೀಷ್ಮರು ದ್ರೋಣರನ್ನು ವ್ಯವಸ್ಥೆ ಮಾಡಿದರು. ದ್ರೋಣರು ಪಾಂಡವರನ್ನು ಸೆಳೆದ ಬಳಿಯೇ ಅಪೂರ್ವ. ಧರ್ಮರಾಜನ ಉಂಗುವು ಆಟದ ಸಮಯದಲ್ಲಿ ಬಾವಿಗೆ ಬಿದ್ದಿತು. ಭೀಮನು ಬಾವಿಗೆ ಹಾರಿ ಉಂಗುರವನ್ನು ತೆಗೆದುಕೊಂಡು ಬರುವುದಾಗಿ ತಿಳಿಸಿದನು. ಆಗ ದ್ರೋಣರು ದರ್ಭೆಗೆ ದರ್ಭೆಗೆ ಕಟ್ಟಿ ಬಾವಿಗೆ ಇಳಿಸಿ ಮಂತ್ರದಿಂದಲೇ ಆ ಉಂಗುರವನ್ನು ತೆಗೆದುಕೊಟ್ಟಾಗ ಎಲ್ಲಾ ಕುರುಗಳು ಮೂಕವಿಸ್ಮಿತರಾದರು. ಇವರಿಂದಲೇ ವಿದ್ಯೆ ಕಲಿಯಲು ಎಲ್ಲರೂ ತೀರ್ಮಾನಿಸಿದರು. ಆಗ ಅಜ್ಜನಾದ ಭೀಷ್ಮರ ಬಳಿ ಎಲ್ಲಾ ಮಕ್ಕಳು ಓಡಿಹೋಗಿ ಕಲಿಸಿಕೊಡಲು ದ್ರೋಣಾಚಾರ್ಯರ ಶಿಷ್ಯರನ್ನಾಗಿ ಅವಲಂಬನೆ ಮಾಡಿಕೊಂಡರು. ದ್ರೋಣಾಚಾರ್ಯರ ವಿದ್ಯೆ ಪಾಂಡವರನ್ನೂ ಹಾಗೂ ವಿಶೇಷವಾಗಿ ಅರ್ಜುನನನ್ನು ನೋಡಿದರೆ ಗೊತ್ತಾಗುತ್ತದೆ. ಹೀಗೆ ಮಕ್ಕಳಿಗೆ ವಿದ್ಯೆಯನ್ನು ಹೇಳಿಕೊಡುವ ವೀರಸಂಕಲ್ಪವನ್ನು ಮಾಡಿದವರು ದ್ರೋಣರು.

ದ್ರೋಣಾಚಾರ್ಯರು ದುರ್ಯೋಧನನ ಕೃಪಾಪಾತ್ರರು. ಕೃಷ್ಣನ ಅಂತರಂಗ ಭಕ್ತಿ ಉದ್ಧವನ ಮೂಲಕ ನಡೆಯಿತೇ ಹೊರತು ದ್ರೋಣರ ಮೂಲಕ ನಡೆಯಲಿಲ್ಲ. ದ್ರೋಣರು 'ಧನುಶ್ರೇಷ್ಠಂ ಕರಿಷ್ಯಾಮಿ' ಧನ್ವಿಗಳಲ್ಲಿ ಶ್ರೇಷ್ಠನನ್ನಾಗಿ ಮಾಡಬೇಕು ಎಂದು ಸಂಕಲ್ಪವನ್ನು ಮಾಡಿ ಅರ್ಜುನನನ್ನು 'ಪಾರ್ಥೇವ ಧನುರ್ಧರಃ' ಎಂದು ಹೇಳುವ ಹಾಗೆ ಮಾಡಿದರು. ಹೀಗೆ ಶಿಷ್ಯ ಪರಂಪರೆಯನ್ನೇ ಬೆಳೆಸಿದರು. ದ್ರೋಣರ ಪಾಂಡಿತ್ಯ ಎರಡು ರೀತಿ- 'ಛಾತ್ರೇನ ಉಪಾಧ್ಯಾಯಃ' ಎಂದು ಮಕ್ಕಳನ್ನು ನೋಡಿ ಉಪಾಧ್ಯಾಯರನ್ನು ಗುರುತಿಸುವುದು ಒಂದು ಬಗೆಯಾದರೆ ಇನ್ನೊಂದು ಬಗೆ ಸ್ವಯಂ ಸಾಮರ್ಥ್ಯ. ದ್ರೋಣರಲ್ಲಿ ಎರಡು ಇದ್ದಿತು. ಶಿಷ್ಯರನ್ನು ನೋಡಿಯೂ ದ್ರೋಣರ

ವಿದ್ಯೆ ಅಪೂರ್ವ ಮತ್ತು ಸ್ವಯಂ ವಿದ್ವಾಂಸರು. ಅವರು ಶಾಸ್ತ್ರಪಾಂಡಿತ್ಯ ಹಾಗೂ ಶಸ್ತ್ರ ವೈವಿದ್ಯ ಎರಡರಲ್ಲೂ ಮೆರೆದವರು ದ್ರೋಣರು ಅಯೋನಿಜರು.

ದುರ್ಯೋಧನನು ದ್ರೋಣರನ್ನು ಬಿಟ್ಟುಕೊಡಲಿಲ್ಲ. ತಾನೇ ಅವರನ್ನು ಚೆನ್ನಾಗಿ ನೋಡಿಕೊಂಡು ದ್ರೋಣರಿಗೆ ಅವನ ಮೇಲೆ ಪ್ರೀತಿ ಬರುವಾಗ ಹಾಗೆ ಮಾಡಿದ. ಹಾಗಾಗಿಯೇ ದ್ರೋಣರು ಕೊನೆಯ ತನಕ ದುರ್ಯೋಧನನ ಪಕ್ಷಪಾತಿಯಾಗಿಯೇ ಯುದ್ಧ ಮಾಡಿದರು. ಅವರ ಸುಪುತ್ರನಾದ ಅಶ್ವತ್ಥಾಮನಿಗೆ ಎಲ್ಲ ವಿದ್ಯೆಯನ್ನೂ ಧಾರೆಯೆರೆದರು ಆದರೆ ಅರ್ಜುನನಿಗೆ ಕೊಟ್ಟಷ್ಟು ಅಲ್ಲ. ದ್ರೋಣರ ಕೆಲವರು ದೌರ್ಬಲ್ಯಗಳಿವೆ. ದ್ರೋಣರು 'ಇಂದ್ರಿಯಾಣ್ಯೇವ' ಎಂದು ಆಚಾರ್ಯರು ಹೇಳುತ್ತಾರೆ. ಇಂದ್ರಿಯದಲ್ಲಿ ಎಷ್ಟೇ ಒಳ್ಳೆಯದಿದ್ದರೂ ದೌರ್ಬಲ್ಯವೂ ಇರುತ್ತದೆ. ದ್ರೋಣರು ಪಾಂಡವರ ಜೊತೆಗೆ ಬೇಟೆಗೆ ಹೋದಾಗ ಬೊಗಳುವ ಧರ್ಮರಾಜನ ನಾಯಿಗೆ ಮುಖಮುದ್ರೆಯನ್ನು ಮಾಡಿದ್ದು ಒಂದು ಅಸ್ತ್ರ. ಅದು ಏಕಲವ್ಯ. ಅದನ್ನು ನೋಡಿ ಆಶ್ಚರ್ಯಪಟ್ಟಾಗ ಏಕಲವ್ಯ ದ್ರೋಣರ ಪ್ರತಿಮೆಯನ್ನು ತೋರಿಸಿ ನೀವೇ ನನ್ನ ಗುರುಗಳು ಎಂದು ತಿಳಿಸುತ್ತಾನೆ. ಆಗ ಅರ್ಜುನನು ನನಗೆ ಈ ಶಬ್ದವೇದಿ ವಿದ್ಯೆಯನ್ನು ಹೇಳಿಕೊಡಲಿಲ್ಲ ಎಂದು ದ್ರೋಣಾಚಾರ್ಯರನ್ನು ಕೇಳಿದಾಗ ಏಕಲವ್ಯನನ್ನು ನಿಯಂತ್ರಿಸಲು ದಕ್ಷಿಣಾಂಗುಷ್ಠವನ್ನೇ ದಕ್ಷಿಣೆಯಾಗಿ ಕೇಳಿ ಧನುರ್ವಿದ್ಯೆಯಲ್ಲಿ ಏಕಲವ್ಯನನ್ನು ನಿಯಂತ್ರಣೆ ಮಾಡುತ್ತಾರೆ. ಲೋಕದಲ್ಲಿ ದ್ರೋಣಾಚಾರ್ಯರು ತಪ್ಪು ಮಾಡಿದರು ಎಂದು ನಿಂದಿಸುವುದುಂಟು. ಆದರೆ ಏಕಲವ್ಯ ಒಬ್ಬ ಅಸುರ ಹಾಗೂ ಅವನು ಈ ಧನುರ್ವಿದ್ಯೆಗೆ ಅನರ್ಹನಾದವನು. ಆದ್ದರಿಂದಲೇ ದ್ರೋಣರು ಹಾಗೆ ಮಾಡಿದರು.

ಮಹಾಭಾರತ ಯುದ್ಧದಲ್ಲಿ ಭೀಷ್ಮರ ಪಾತ್ರದ ನಂತರ ಸಮರ್ಥರಾಗಿ ಅಸ್ತ್ರಗಳನ್ನು ಪ್ರಯೋಗ ಮಾಡಿ ಯುದ್ಧದಲ್ಲಿ ವೈಭವದಿಂದ ಮೆರೆದವರು ದ್ರೋಣರು. ಧರ್ಮರಾಜನನ್ನು ಬಂಧಿಸಲು ಯೋಜನೆಯನ್ನು ರೂಪಿಸಿ, ಅಭಿಮನ್ಯುವಂತಹ ಮಹಾಪರಾಕ್ರಮಿಯನ್ನು ಕೊಂದದ್ದು ದ್ರೋಣರ ಸೇನಾಧಿಪತ್ಯದಲ್ಲೇ. ಆದರೆ ಅವರ ಅಂತ್ಯಕ್ಕಾಗಿ ಕೃಷ್ಣನು ಧರ್ಮರಾಜನ ಬಳಿಗೆ ಹೋಗಿ 'ಅಶ್ವತ್ಥಾಮ ಹತಃ' ಎಂದು ಹೇಳಲು ಹೇಳಿದಾಗ ಧರ್ಮರಾಜ ಒಪ್ಪದೇ 'ಕುಂಜರಃ' ಎಂದು ಸೇರಿಸಿ ಹೇಳುತ್ತಾನೆ. ಧರ್ಮರಾಜನಿಗೆ ಒಂದು ಕಡೆ ನಾನು ಸುಳ್ಳು ಹೇಳಬೇಕಾಗುತ್ತದೆ ಎಂಬ ಚಿಂತೆಯಾದಾಗ ಕೃಷ್ಣನು ಹೇಳುತ್ತಾನೆ ನೀನು 'ಅಶ್ವತ್ಥಾಮ ಹತಃ ಕುಂಜರಃ' ಎಂದು ಹೇಳು ಕುಂಜರಃ ಎಂದು ಹೇಳುವಾಗ ನಾನು ಶಂಖನಾದವನ್ನು ಮಾಡುತ್ತೇನೆ. ಆಗ ನೀನು ಚಿಂತಿಸುವ

ಪ್ರಮೇಯವಿಲ್ಲ ಎಂದು. ಆಗ ದ್ರೋಣಪರ್ವದ ಯುದ್ಧದಲ್ಲಿ 'ಅಶ್ವತ್ಥಾಮ ಹತಃ' ಎಂದು ಕೇಳಿ ದ್ರೋಣರು ಶಸ್ತ್ರಸಂನ್ಯಾಸವನ್ನು ಮಾಡಿ ತಮ್ಮ ಪ್ರಾಣವನ್ನು ಸಮರ್ಪಿಸಿಕೊಳ್ಳುತ್ತಾರೆ. ದ್ರೋಣರು ಶಸ್ತ್ರಸಂನ್ಯಾಸವನ್ನು ಮಾಡಿ ಬಿದ್ದಾಗ ಅಷ್ಟಕ್ಕೇ ಮುಗಿಯದೆ ಧೃಷ್ಟದ್ಯುಮ್ನನು ಅಲ್ಲಿಗೆ ಬಂದು ಎಲ್ಲರೂ ತಡೆದರೂ ಖಡ್ಗದಿಂದ ದ್ರೋಣಾಚಾರ್ಯರ ತಲೆಯನ್ನು ಕತ್ತರಿಸುತ್ತಾನೆ.

ದ್ರೋಣರನ್ನು ಆಕಾಶದಲ್ಲಿರುವ ಮುನಿಗಳೆಲ್ಲರೂ 'ಇಷ್ಟು ದಿನ ನೀನು ನಿನ್ನ ಸ್ವಧರ್ಮವನ್ನು ಬಿಟ್ಟು ಕ್ಷತ್ರಿಯಧರ್ಮವನ್ನು ಅನುಸರಿಸುತ್ತಿರುವಿ. ಇನ್ನು ಸಾಕು, ನೀನು ಬಾ' ಎಂದು ಕರೆದಾಗ ದ್ರೋಣರು ತಮ್ಮ ಪ್ರಾಣವನ್ನು ಬಿಟ್ಟು ಹೊರಟರು. ಹೀಗೆ ದ್ರೋಣರು ರಣರಂಗದಲ್ಲಿ ಯುದ್ಧ ಮಾಡುತ್ತಾ ಯೋಗದಿಂದಲೇ ತಮ್ಮ ಪ್ರಾಣವನ್ನು ಬಿಟ್ಟವರು.

ದ್ರೋಣರನ್ನು ಇಂದ್ರಿಯ ಎಂದು ಇಟ್ಟುಕೊಂಡರೆ, ಆ ಇಂದ್ರಿಯ ಯಾರ ಪಕ್ಷಕ್ಕೆ ಇರಬೇಕು? ದುರ್ಯೋಧನನ ಪಕ್ಷದಲ್ಲಿ ಇದ್ದುದ್ದರಿಂದ ಅದು ಕೆಳಗೆ ಬಿದ್ದಿತು. ಅದೇ ಕೃಷ್ಣನ-ಪಾಂಡವರ ಪಕ್ಷದಲ್ಲಿದ್ದಿದ್ದರೆ ಉದ್ಧಾರವಾಗುತ್ತಿತ್ತು . ಇಂತಹ ಚಿಂತನೆ ದ್ರೋಣಪರ್ವದಲ್ಲಿ ನಮಗೆ ಸಿಗುತ್ತದೆ. ಈ ಪರ್ವದಲ್ಲಿಯೇ ಶತರುದ್ರೀಯದ ವಿಶ್ಲೇಷಣೆಯೂ ಬರುತ್ತದೆ.

ಈ ವಿಸ್ತೃತವಾದಂತಹ ದ್ರೋಣಪರ್ವವನ್ನು ವಿದ್ವಾನ್ ಪಿ.ಎಸ್. ಶೇಷಗಿರಿ ಆಚಾರ್ಯರು ಸುಂದರವಾಗಿ ಭಾಷಾಂತರ ಮಾಡಿ ನಮಗೆ ನೀಡಿರುತ್ತಾರೆ. ಇಷ್ಟೊಂದು ಶ್ಲೋಕಗಳನ್ನು ಓದುವುದೇ ಒಂದು ಸಾಹಸ, ಇನ್ನು ಇದಕ್ಕೆ ಅನುವಾದ ಮಾಡುವುದು ಮಹಾಸಾಹಸವೇ ಸರಿ. ಇದನ್ನು ಒಂದು ಯಜ್ಞವೆಂಬ ಅನುಸಂಧಾನದಿಂದ ಅವರು ಅನುವಾದ ಮಾಡಿರುತ್ತಾರೆ. ಇಂತಹ ಅವರನ್ನು ನಾವು ಅಭಿನಂದಿಸುತ್ತೇವೆ.

ನಾರಾಯಣ ಸ್ಮರಣೆಗಳು

ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದಂಗಳವರು

ಶ್ರೀ ಪಲಿಮಾರು ಹೃಷೀಕೇಶ ಮಠ, ಉಡುಪಿ.

ನಿರ್ದೇಶಕರ ನುಡಿ

ದ್ರೋಣರು ಪ್ರತಿಯೊಬ್ಬ ಜೀವರಾಶಿಗೂ ಕೂಡ, ವಿಶೇಷವಾಗಿ ಸಾಧಕನಿಗೆ ಆದರ್ಶ ವ್ಯಕ್ತಿ . ಸಾಧಕ ಹೇಗಿರಬೇಕೆಂಬ ಚಿಂತನೆಯನ್ನು ಜಗತ್ತಿಗೆ ಸಾರಿದವರು ದ್ರೋಣಾಚಾರ್ಯರು. ಅವರು ಅವತಾರ ಮಾಡಿದ್ದು ಬ್ರಾಹ್ಮಣ ಕುಲದಲ್ಲಿಯಾದರೂ ಕೂಡ ಅವರ ಸಾಧನೆ, ಕೃತಿ ಎಲ್ಲವೂ ಹೆಚ್ಚಿನ ಪಾಲು ಕ್ಷತ್ರಿಯರಿಗೆ ಸಂಬಂಧಪಟ್ಟಂತೆ ಇತ್ತು. ಒಂದು ರೀತಿಯಲ್ಲಿ ಭಗವಂತನ ಭೂಭಾರಹರಣ ಎಂಬ ದೊಡ್ಡ ಕಾರ್ಯದಲ್ಲಿ ದ್ವಾಪರಯುಗದಲ್ಲಿ ಒಂದಷ್ಟು ಪ್ರಧಾನ ಪಾತ್ರವಹಿಸಿದವರು ದ್ರೋಣಾಚಾರ್ಯರು ಎಂದರೆ ತಪ್ಪಾಗಲಾರದು.

ಕೌರವ-ಪಾಂಡವರು ಪುಟ್ಟ ಮಕ್ಕಳಾಗಿದ್ದಾಗ ಅವರಿಗೆ ವಿದ್ಯಾಭ್ಯಾಸದ ಅಗತ್ಯ ವಿದ್ದಾಗ ಅವರಿಗೆ ಶಸ್ತ್ರವಿದ್ಯೆ-ಅಸ್ತ್ರವಿದ್ಯೆ-ಶಾಸ್ತ್ರವಿದ್ಯೆಯನ್ನು ಧಾರೆಯೆರೆದು ಮುಂದೆ ಆಗುವಂತಹ ಭೂಭಾರಹರಣ ಕುರುಕ್ಷೇತ್ರಯುದ್ಧಕ್ಕೆ ನಾಂದಿ ಹಾಡಿದವರು ದ್ರೋಣಾಚಾರ್ಯರು. ಭಗವಂತನು ಭೂಭಾರಹರಣಕ್ಕೆ ನಾಂದಿ ಹಾಡಲು ದ್ರೋಣರನ್ನು ಆರಿಸಿದರು. ಅಶ್ವತ್ಥಾಮರಿಗೆ ಹಾಲು ಬೇಕೆಂಬ ಒಂದು ಸಣ್ಣ ನೆಪವನ್ನಿಟ್ಟುಕೊಂಡು ಗೋವನ್ನು ಅರಸಿಕೊಂಡು ತೆರೆಳಿದ ದ್ರೋಣಾಚಾರ್ಯರಿಗೆ 'ಗೋ' ಶಬ್ದವಾಚ್ಯವಾಗಿರುವ ಶಸ್ತ್ರವಿದ್ಯೆ ಸಿಕ್ಕಿತು. ಅದೂ ಕೂಡ ಭಗವಂತನೇ ತನ್ನ ಪರಶುರಾಮ ರೂಪದಿಂದ ಅವರಿಗೆ ಉಪದೇಶವನ್ನು ಮಾಡಿ ಕಳುಹಿಸಿದನು. ಯಾವುದೇ ರೀತಿಯ ಶಸ್ತ್ರದ ಅಗತ್ಯ ಆ ದ್ರೋಣರಿಗೆ ಆಗ ಇರಲಿಲ್ಲ. ಹಾಗಿದ್ದರೂ ಭಗವಂತನು ಒಂದು ವಿಚಿತ್ರ ಘಟನೆಯನ್ನು ಸೃಷ್ಟಿಸಿ, ಭೂಭಾರಹರಣಕ್ಕಾಗಿಯೇ ಆರಿಸಿರುವ ವ್ಯಕ್ತಿ ದ್ರೋಣಾಚಾರ್ಯರು. ಅಂತಹ ಮಹಾಚೇತನ ದ್ರೋಣರು. ಭಗವಂತನು ಒಂದು ರೀತಿಯಾದ ವಿಪರೀತ ಸೇವೆಯನ್ನು

ಭಗವಂತನ ವಿರೋಧ ಪಕ್ಷದಲ್ಲಿ ಇದ್ದುಕೊಂಡು ನಾಂದಿಯಾಗಿರುವಂತಹ ದ್ರೋಣರು ಮುಂದೆ ಈ ರೀತಿ ಸೇವೆ ಸಾಲದು ಎಂಬ ದೃಷ್ಟಿಯಿಂದೇ ಉದ್ಧವರಾಗಿಯೂ ಬಂದು ಸೇವೆ ಸಲ್ಲಿಸಿದವರು ಬೃಹಸ್ಪತ್ಯಾಚಾರ್ಯರು. ಅಂತಹ ಆ ಉದ್ಧವ ಮತ್ತು ದ್ರೋಣರ ಮೇಲೆ ಎಷ್ಟರಮಟ್ಟಿಗೆ ಕೃಷ್ಣನಿಗೆ ಪ್ರೀತಿ ಎಂದರೆ ತನ್ನ ಭಕ್ತಿಯ ಪಾಶದಿಂದ ಪರಂಧಾಮಕ್ಕೆ ತೆರಳಿರುವ ಕೃಷ್ಣನನ್ನು ನಿಲ್ಲಿಸಿ ಈ ಕಲಿಯುಗದಲ್ಲಿ ನಮಗೆ ಅಂದರೆ ಪ್ರತಿಯೊಬ್ಬ ಮುಮುಕ್ಷುವಿಗೆ ಬೇಕಾಗಿರುವಂತಹ ಸಾಧನೆಗಳನ್ನು ಕೃಷ್ಣನ ಬಾಯಿಯಿಂದಲೇ ಕೇಳಿ ಕೊಡುಗೆಯಾಗಿ ಕೊಟ್ಟಿರುವಂತಹವರು ಉದ್ಧವನಾಗಿದ್ದ ಇದೇ ದ್ರೋಣರು. ಇಂತಹ ದ್ರೋಣಾಚಾರ್ಯರು ಧರ್ಮಕ್ಕೆ ತಮ್ಮ ಒಂದು ಮಾತಗೆ ಕಟ್ಟುಬಿದ್ದು ತಮ್ಮ ಜೀವವನ್ನೇ ಕಳೆದುಕೊಂಡ ಒಬ್ಬ ಮಹಾಬ್ರಾಹ್ಮಣ, ಮಹಾನ್ ಸಾಧಕರೂ ಹೌದು. ಇಂತಹ ದ್ರೋಣ-ಭೀಷ್ಮ-ಕೃಪ-ಅಶ್ವತ್ಥಾಮರ ಬಲದಿಂದಲೇ ದುರ್ಯೋಧನ ಯುದ್ಧಕ್ಕೆ ಸನ್ನದ್ಧನಾದವನು. ಆ ಯುದ್ಧಕ್ಕೆ ಸನ್ನದ್ಧನಾಗಲು ಧೈರ್ಯವನ್ನು ಕೊಟ್ಟವರಲ್ಲಿ ಒಂದು ಪಾಲು ದ್ರೋಣರು ಎಂದು ಹೇಳಿದರೆ ಖಂಡಿತ ತಪ್ಪಾಗಲಾರದು. ಶ್ರೀಮದಾಚಾರ್ಯರೂ ಇದನ್ನು ಉಲ್ಲೇಖ ಮಾಡಿದ್ದಾರೆ.

ಹೀಗೆ ದ್ರೋಣರು ತಮ್ಮ ಶಿಲೋಂಛವೃತ್ತಿಯಿಂದ ಜೀವನವನ್ನು ಮಾಡಿ, ಭಗವಂತನ ಭೂಭಾರಹರಣ ಕಾರ್ಯದಲ್ಲಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟವರು. ಕುರುಕ್ಷೇತ್ರ ಯುದ್ಧಕ್ಕೆ ಭೀಷ್ಮರ ನಂತರ ಸೇನಾಧಿಪತ್ಯವನ್ನು ವಹಿಸಿಕೊಂಡು ಅಶ್ವತ್ಥಾಮರ ಮರಣ ವಾರ್ತೆಯನ್ನು ಕೇಳಿ, ಮಾನಸಿಕವಾಗಿ ಆಂತರಿಕವಾಗಿ ಕುಗ್ಗಿಹೋಗಿ, ಕೃಷ್ಣನ ಮಾತಿಗೆ ಕಟ್ಟುಬಿದ್ದು ತನ್ನ ಜೀವನವನ್ನು ಕೃಷ್ಣನ ಪಾದಾರವಿಂದಗಳಲ್ಲಿ ಅರ್ಪಣೆ ಮಾಡಿದ ಮಹಾನ್ ಚೇತನರು ನಮ್ಮ ದ್ರೋಣರು.

ಅಂತಹ ತನ್ನ ಭಕ್ತನಾಗಿರುವ ದ್ರೋಣಾಚಾರ್ಯರ ಬಗ್ಗೆ ವ್ಯಾಸರು ನಮ್ಮೆದುರಿಗೆ ಬಿಚ್ಚಿಟ್ಟಿರುವ ಮಹಾಭಾರತದ 'ದ್ರೋಣಪರ್ವ' ಇದೀಗ ನಮ್ಮ ತತ್ವಸಂಶೋಧನ ಸಂಸ್ಥ ನ ವತಿಯಿಂದ ಬಿಡುಗಡೆಯಾಗಿ ಲೋಕಾರ್ಪಣೆಯಾಗುತ್ತಿರುವುದು ತುಂಬಾ ಸಂತೋಷದ ವಿಷಯವಾಗಿದೆ. ಒಂದು ದೃಷ್ಟಿಯಲ್ಲಿ ಶುದ್ಧವಾದ ಮಹಾಭಾರತದ ಪ್ರತಿ, ಅದರಲ್ಲಿ ದ್ರೋಣಪರ್ವದ ವಿಶೇಷ ಅಂಶಗಳು ಕೂಡಿದೆ. ಈ ಪರ್ವದಲ್ಲಿ ಬರೀ ದ್ರೋಣರ ಬಗ್ಗೆ ಮಾತ್ರವಲ್ಲ, ಶತರುದ್ರೀಯದ ಬಗ್ಗೆ, ಅನೇಕ ಅಂಶಗಳು ನಮಗೆ ಆಚಾರ್ಯಮಧ್ವರ

ಸಿದ್ಧಾಂತಕ್ಕೆ ಅನುಗುಣವಾಗಿ, ಆಚಾರ್ಯಮಧ್ವರ ತಾತ್ಪರ್ಯನಿರ್ಣಯ ಹಾಗೂ ಭಾವೀ ಸಮೀರ ಶ್ರೀ ವಾದಿರಾಜ ಶ್ರೀಪಾದರ ಲಕ್ಷಾಲಂಕಾರದ ಬೆಳಕಿನಡಿಯಲ್ಲಿ ತಾಳಪತ್ರವನ್ನು ಸಂಶೋಧನೆ ಮಾಡಿ ಶುದ್ಧ ಮಹಾಭಾರತದ ಪ್ರತಿಯಲ್ಲಿ ದ್ರೋಣಪರ್ವವನ್ನು ಕೊಡುತ್ತಿರುವ ಹೆಗ್ಗಳಿಕೆ ನಮ್ಮ ಸಂಶೋಧನ ಕೇಂದ್ರಕ್ಕೆ ಸಲ್ಲುತ್ತದೆ. ನಮ್ಮ ಸಂಶೋಧನ ಕೇಂದ್ರ ಅನ್ನುವುದಕ್ಕಿಂತಲೂ ಸಂಶೋಧನ ಕೇಂದ್ರಕ್ಕೆ ಪೂರ್ಣ ಬೆಂಬಲವಾಗಿರುವಂತಹ, ನಮ್ಮ ಸ್ವರೂಪೋದ್ಧಾರಕರಾಗಿರುವ **ಪರ್ಯಾಯ ಪೀಠಾಧಿಪತಿಗಳಾದ ಪಲಿಮಾರು ಮಠದ ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು.** ಈ ಸಂಸ್ಥೆಯ ಅಧ್ಯಕ್ಷರಾಗಿ ಸಂಪೂರ್ಣ ಮುತುವರ್ಜಿ ವಹಿಸಿ ಸಾಧಕರಿಗೆ ಶುದ್ಧವಾದ ಮಹಾಭಾರತ ನೀಡಬೇಕೆಂಬ ಹಂಬಲ ಅವರಲ್ಲಿ ಅಷ್ಟಿಷ್ಟಲ್ಲ. ಇಂತಹ ನಮ್ಮ ಗುರುಗಳಿಗೆ ನಮ್ಮ ಸಂಸತ್ತಿನ ಪರವಾಗಿ 'ಭೂಯಿಷ್ಠಾಂ ತೇ ನಮ ಉಕ್ತಿಂ ವಿಧೇಮ' ಎಂದು ಅನಂತ ಸಾಷ್ಟಾಂಗ ನಮನಗಳನ್ನು ಸಮರ್ಪಣೆ ಮಾಡುತ್ತಿದ್ದೇವೆ.

ಅದೇ ರೀತಿಯಲ್ಲಿ ಈ ದ್ರೋಣಪರ್ವದ ಚಿಂತನೆ, ದ್ರೋಣಪರ್ವದ ಇಡೀ ನಾಲ್ಕು ಭಾಗದಲ್ಲಿ ಎಲ್ಲಿಯೂ ಕೂಡ ಶಾಸ್ತ್ರದ ತಿರುಳಿಗೆ ತೊಂದರೆ ಬಾರದ ರೀತಿಯಲ್ಲಿ ಸಂಪೂರ್ಣ ಕನ್ನಡಾನುವಾದವನ್ನು ಮಾಡಿಕೊಟ್ಟಿರುವಂತಹ, ಹಗಲಿರುಳು ಶಾಸ್ತ್ರಕ್ಕಾಗಿಯೇ ತಮ್ಮ ಜೀವನವನ್ನು ಮುಡಿಪಾಗಿಟ್ಟಿರುವಂತಹ ನಾಡಿನ ಖ್ಯಾತ ಸಂಶೋಧಕರೂ, ವಿದ್ವಾಂಸರೂ ಆಗಿರುವ ವಿದ್ವಾನ್ ಶ್ರೀ ಪಿ.ಎಸ್. ಶೇಷಗಿರಿ ಆಚಾರ್ಯರಿಗೆ ಇಡೀ ವಿದ್ವತ್‌ವೃಂದ, ಸಾಧಕವರ್ಗ ಆಭಾರಿಯಾಗಿದೆ. ಆ ದೃಷ್ಟಿಯಲ್ಲಿ ನಮ್ಮ ಸಂಶೋಧನ ಸಂಸತ್ತಿನ ಪರವಾಗಿ ಸಾಷ್ಟಾಂಗ ನಮನಗಳ ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತಿದ್ದೇನೆ.

ಅದೇ ರೀತಿಯಲ್ಲಿ ಇಂತಹ ಅದ್ಭುತವಾದ ಈ ಕೃತಿ ಹೊರಬರಲು ಆರ್ಥಿಕವಾಗಿ ಎಲ್ಲರೀತಿಯ ಸಹಕಾರ ನೀಡಿರುವಂತಹ ನಮ್ಮ ಘನವೆತ್ತ ಕರ್ನಾಟಕ ಸರ್ಕಾರಕ್ಕೆ, ಅದರ ಎಲ್ಲಪದಾಧಿಕಾರಿಗಳಿಗೆ ಸಂಶೋಧನ ಸಂಸತ್‌ನ ಪರವಾಗಿ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಅದೇ ರೀತಿಯಲ್ಲಿ ಈ ಶ್ರೀಮಹಾಭಾರತ ಶುದ್ಧಪಾಠದ ಸಂಪೂರ್ಣ ಜವಾಬ್ದಾರಿಯನ್ನು ಹೊತ್ತು, ಸಮರ್ಥವಾಗಿ ಆ ಯೋಜನೆ ಕಾರ್ಯಗತ ಆಗುವಲ್ಲಿ ಪೂರ್ಣಪ್ರಮಾಣದಲ್ಲಿ ಶ್ರಮಿಸುತ್ತಿರುವ ನಮ್ಮ ನಾಡಿನ ಖ್ಯಾತ ಪ್ರವಚನಕಾರರೂ,

ವಿದ್ವಾಂಸರೂ ಆಗಿರುವಂತಹ ಡಾ॥ ಬೆ.ನಾ. ವಿಜಯೀಂದ್ರಾಚಾರ್ಯರಿಗೆ ಮತ್ತು ಇದಕ್ಕಾಗಿ ಶ್ರಮವಹಿಸಿದ ಎಲ್ಲಾ ವಿದ್ಯನ್ಮಣಿಗಳಿಗೆ ಸಂಸ್ಥೆಯ ಪರವಾಗಿ ಧನ್ಯವಾದಗಳು.

ಶ್ರೀಮಹಾಭಾರತದ ಮುದ್ರಣದ ಬೃಹತ್ ಯೋಜನೆಯಲ್ಲಿ ಈ ಇಳಿ ವಯಸ್ಸಿನಲ್ಲಿಯೂ ನಮ್ಮ ಜೊತೆಗೇ ಇದ್ದುಕೊಂಡು ಸಂಪೂರ್ಣ ಸಹಕಾರವನ್ನು ನೀಡುತ್ತಿರುವ ಶ್ರೀಯುತ ರಘುಪತಿ ತಂತ್ರಿ ಇವರಿಗೂ ಸಂಸ್ಥೆಯ ಪರವಾಗಿ ಹೃತ್ಪೂರ್ವಕ ಧನ್ಯವಾದಗಳು. ಮೂಲ ಸಂಸ್ಕೃತ ಶ್ಲೋಕಗಳನ್ನು ದೋಷರಹಿತವಾಗಿ ಕನ್ನಡಕ್ಕೆ ಲಿಪ್ಯಂತರವನ್ನು ಮಾಡಿಕೊಟ್ಟ ಶ್ರೀಯುತ ಪ್ರಹ್ಲಾದ ದೇಶಪಾಂಡೆ ಇವರಿಗೂ ಹಾಗೂ ದೋಷರಹಿತವಾಗಿ ಅಕ್ಷರಜೋಡನೆಯನ್ನು ಮಾಡಿದ ಶ್ರೀಯುತ ಶರತ್‌ಚಂದ್ರ ಎಂ., ಪವನ್ ಗ್ರಾಫಿಕ್ಸ್ ಮತ್ತು ಪ್ರಿಂಟರ್ಸ್ ಅವರಿಗೂ ಸಂಸ್ಥೆಯ ಪರವಾಗಿ ಧನ್ಯವಾದಗಳು. ಹಾಗೆಯೇ ಇಡೀ ದ್ರೋಣಪರ್ವದ ತಿದ್ದುಪಡಿಯಲ್ಲಿ ಸಹಕಾರ ಮಾಡಿಕೊಟ್ಟಿರುವಂತಹ ಶ್ರೀಯುತ ಶ್ರೀವತ್ಸ ಆಚಾರ್ಯ (ಸಿದ್ಧಾಂತಿ) ಇವರಿಗೂ ಧನ್ಯವಾದಗಳು. ಹಾಗೆಯೇ ನಮಗೆ ಬೇಕಾದ ಕ್ಲಪ್ತ ಸಮಯದಲ್ಲಿ ಸುಂದರವಾಗಿ ಮುದ್ರಣವನ್ನು ಮಾಡಿಕೊಟ್ಟಿರುವ ಪವನ್ ಪ್ರಿಂಟರ್ಸ್‌ನ ಮಂಜುನಾಥ್‌ರವರಿಗೂ ನಮ್ಮ ಸಂಸ್ಥೆಯ ಪರವಾಗಿ ವಿಶೇಷ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇವೆ. ಈ ಕಾರ್ಯದಲ್ಲಿ ಶ್ರಮಿಸಿದ ಸಂಶೋಧನ ಮಂದಿರದ ಎಲ್ಲಾ ಕಾರ್ಯಕಾರಿಣಿ ವರ್ಗಕ್ಕೂ ಈ ಮೂಲಕ ಧನ್ಯವಾದಗಳನ್ನು ಸಮರ್ಪಿಸುತ್ತಿದ್ದೇನೆ.

ಈ ದ್ರೋಣಪರ್ವದ ಅಧ್ಯಯನವನ್ನು ಮಾಡಿ ತನ್ಮೂಲಕ ಸಾಧನೆ ಮಾರ್ಗವನ್ನು ನಾವು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು, ಭಗವಂತನನ್ನು ಒಲಿಸಿಕೊಳ್ಳುವುದರ ಬಗ್ಗೆ ಅವನ ಸಂಕಲ್ಪಕ್ಕೆ ಅನುಗುಣವಾಗಿ ಅವನ ಪ್ರೇರಣೆಯಂತೆ ಎಲ್ಲರೂ ಕೈ ಜೋಡಿಸುವ ಮೂಲಕ ಶ್ರೀಕೃಷ್ಣನ ಕೃಪಾಕಟಾಕ್ಷಕ್ಕೆ ಪಾತ್ರರಾಗೋಣ ಎಂದು ಅಪೇಕ್ಷಿಸುತ್ತಿದ್ದೇನೆ.

ಪ್ರಕಾಶಕರು

ಡಾ. ವಂಶೀಕೃಷ್ಣಾಚಾರ್ಯ ಪುರೋಹಿತ್

ನಿರ್ದೇಶಕರು, ತತ್ವಸಂಶೋಧನಸಂಸತ್,

ಶ್ರೀ ಪಲಿಮಾರು ಹೃಷೀಕೇಶ ಮಠ, ಉಡುಪಿ.

ದ್ರೋಣಪರ್ವವನ್ನು ಕುರಿತು

ದ್ರೋಣಪರ್ವ ಮಹಾಭಾರತದ ಏಳನೆಯ ಪರ್ವ. ದ್ರೋಣರು ಸೈನ್ಯಾಧಿಪತ್ಯವನ್ನು ವಹಿಸಿಕೊಂಡು ಐದು ದಿನಗಳ ಕಾಲ ಯುದ್ಧವನ್ನು ಮಾಡಿ ಶಸ್ತ್ರಸಂನ್ಯಾಸವನ್ನು ಮಾಡಿ ಪರಲೋಕಕ್ಕೆ ಹೋದ ಕಥೆಯು ಇಲ್ಲಿ ನಿರೂಪಿಸಲ್ಪಡುತ್ತದೆ. ಇದರಲ್ಲಿ ದ್ರೋಣಾಭಿಷೇಕಪರ್ವ, ಸಂಶಪ್ತಕವಧ ಪರ್ವ, ಅಭಿಮನ್ಯುವಧಪರ್ವ, ಪ್ರತಿಜ್ಞಾಪರ್ವ, ಜಯದ್ರಥವಧಪರ್ವ, ಘಟೋತ್ಕಚವಧಪರ್ವ, ದ್ರೋಣವಧ ಪರ್ವ, ನಾರಾಯಣಾಸ್ತ್ರ ವಿಮೋಚನಪರ್ವ ಎಂಬ ಎಂಟು ಅವಾಂತರ ಪರ್ವಗಳಿವೆ. ಆಯಾ ಹೆಸರುಗಳೇ ಸೂಚಿಸುವಂತೆ ಆಯಾ ವಿಷಯಗಳು ಆಯಾ ಅವಾಂತರ ಪರ್ವಗಳಲ್ಲಿ ಪ್ರಧಾನವಾದ ವಿಷಯಗಳು. ದ್ರೋಣಪರ್ವದಲ್ಲಿರುವ ಒಟ್ಟು ಅಧ್ಯಾಯ ಸಂಖ್ಯೆಯು ಪುಸ್ತಕದಿಂದ ಪುಸ್ತಕಕ್ಕೆ ಭಿನ್ನವಾಗಿದೆ. ಅದು 170 ರಿಂದ ಹಿಡಿದು 204 ರವರೆಗೂ ಇದೆ. ಅಷ್ಟಮಠದ ತಾಳೆಯ ಗರಿಗಳನ್ನು ಅವಲಂಬಿಸಿದ ನಮ್ಮ ಪಾಠದಲ್ಲಿ ಅಧ್ಯಾಯಗಳ ಸಂಖ್ಯೆ 185 ಆಗುತ್ತದೆ. ಲಕ್ಷಾಲಂಕಾರದಲ್ಲಿ ಸೂಚಿಸಿರುವ ಅಧ್ಯಾಯ ಸಂಖ್ಯೆ 201. ಅಧ್ಯಾಯ ಸಂಖ್ಯೆಯಲ್ಲಿ ಹೀಗೆ ವ್ಯತ್ಯಾಸವಿದ್ದರೂ ಶ್ಲೋಕಗಳು ಹೆಚ್ಚು ಕಡಿಮೆ ಸಂಖ್ಯೆಯಲ್ಲಿ ಸಮವಾಗಿರುತ್ತವೆ. ಕುಂಭಕೋಣ ಪ್ರತಿಯಲ್ಲಿ ಮಾತ್ರ ಶ್ಲೋಕಸಂಖ್ಯೆಯು ಉಳಿದವುಗಳಿಗಿಂತ ಹೆಚ್ಚಾಗಿರುತ್ತದೆ. ಒಂದು ಪುಸ್ತಕದಲ್ಲಿನೂರು ಸಂಖ್ಯೆಗಳಿರುವ ಒಂದು ಅಧ್ಯಾಯವು ಇನ್ನೊಂದು ಪುಸ್ತಕದಲ್ಲಿ ಎರಡು-ಮೂರು ಅಧ್ಯಾಯಗಳಾಗಿ ಮಾಡಲ್ಪಟ್ಟಿರುವುದರಿಂದ ಅಧ್ಯಾಯ ಸಂಖ್ಯೆಯಲ್ಲಿ ವ್ಯತ್ಯಾಸವು ಕಂಡುಬರುತ್ತದೆ.

ದ್ರೋಣಪರ್ವದ ಕೊನೆಯಲ್ಲಿ ಶತರುದ್ರೀಯವಿದೆ. ಇದು ವೇದವ್ಯಾಸರು ರುದ್ರದೇವರನ್ನು ಕುರಿತು ಮಾಡುವ ಸ್ತೋತ್ರ. ಈ ಸ್ತೋತ್ರ ಮತ್ತು ಅನಂತರ ಬರುವ ಭಾಗಗಳಲ್ಲಿ ಆದಿಸೃಷ್ಟಿಯನ್ನು ರುದ್ರದೇವರ ಕಾರ್ಯವೆಂದು ವರ್ಣಿಸಿರುವುದರಿಂದ ಮತ್ತು ರುದ್ರದೇವರು ಸಂಹಾರಕರ್ತೃಗಳೆಂಬುದು ನಿರ್ವಿವಾದವಾಗಿರುವುದರಿಂದ ಇದು ವೇದವ್ಯಾಸರು ರುದ್ರದೇವರ ಅಂತರ್ಯಾಮಿಯಾದ ನಾರಾಯಣನನ್ನು ಕುರಿತು ಮಾಡಿದ ಸ್ತೋತ್ರವೆಂದು ವಾದಿರಾಜರು ಲಕ್ಷಾಲಂಕಾರದಲ್ಲಿ ತಿಳಿಸಿದ್ದಾರೆ. ನಾರಾಯಣನನ್ನು ಕುರಿತು ಮಾಡಿದ ಸ್ತೋತ್ರವೆಂದು ವಾದಿರಾಜರು ಲಕ್ಷಾಲಂಕಾರದಲ್ಲಿ ತಿಳಿಸಿದ್ದಾರೆ. ಸ್ತೋತ್ರಗಳು ಶುದ್ಧಸ್ತುತಿ ಮತ್ತು ಮಿಶ್ರಸ್ತುತಿ ಎಂದು ಎರಡು ವಿಧ. ನೇರವಾಗಿ ಪರಮಾತ್ಮನ ರೂಪಗಳನ್ನು ಎಂದರೆ ರಾಮ, ಕೃಷ್ಣ, ವರಾಹ, ನರಸಿಂಹ ಮೊದಲಾದ ರೂಪಗಳನ್ನೇ ಪ್ರಶಂಸಿಸುವ ಸ್ತುತಿಯು ಶುದ್ಧಸ್ತುತಿ. ಬ್ರಹ್ಮ, ರುದ್ರ ಮೊದಲಾದ ಅಧಿಷ್ಠಾನಗಳಲ್ಲಿ ಮಾಡುವ ಸ್ತೋತ್ರವು ಮಿಶ್ರಸ್ತುತಿ. ಇಂತಹ ಮಿಶ್ರಸ್ತುತಿಗಳಲ್ಲಿ

ಅಧಿಷ್ಠಾನವಾದ ಬ್ರಹ್ಮರುದ್ರಾದಿಗಳಲ್ಲಿ ಹೊಂದುವಷ್ಟು ಗುಣಗಳನ್ನು ಮಾತ್ರ ಬ್ರಹ್ಮ ರುದ್ರಾದಿಗಳಲ್ಲಿ ಅನ್ವಯವನ್ನು ಮಾಡಬೇಕು. ಅಲ್ಲಿ ಹೊಂದದಿರುವ ಗುಣಗಳನ್ನು ಅಂತರ್ಯಾಮಿಯಾದ ಪರಮಾತ್ಮನಲ್ಲಿಯೇ (ನಾರಾಯಣನಲ್ಲಿಯೇ) ಅನ್ವಯವನ್ನು ಮಾಡಬೇಕು. ಶತರುದ್ರೀಯವೂ ಒಂದು ಮಿಶ್ರಸ್ತುತಿಯಾದ್ದರಿಂದ ಇಲ್ಲಿಯೂ ಅದೇ ನ್ಯಾಯವನ್ನು ಅನುಸರಿಸಬೇಕು.

ಹರಿಪದವಾಸಿಗಳಾದ ಶ್ರೀವಿದ್ಯಾಮಾನ್ಯತೀರ್ಥರ, ಪೇಜಾವರ ಅಧೋಕ್ಷಜ ಮಠಾಧೀಶರಾದ ನಮ್ಮ ವಿದ್ಯಾಗುರುಗಳಾದ ಶ್ರೀ ವಿಶ್ವೇಶತೀರ್ಥರ ಮತ್ತು ಇವರಿಬ್ಬರ ಪ್ರೇಮ ಪೂರ್ಣಪಾತ್ರರಾದ ಪಲಿಮಾರು ಮಠಾಧೀಶರಾದ ಶ್ರೀ ವಿದ್ಯಾಧೀಶತೀರ್ಥರ ಪರಮಾನುಗ್ರಹದಿಂದ ಈ ಕಷ್ಟಸಾಧ್ಯವಾದ ಕಾರ್ಯವು ನಡೆಯುತ್ತಿದೆ. ಸಂಶೋಧನೆ, ಸಂಪಾದನೆ ಮತ್ತು ಅನುವಾದವನ್ನು ಮಾಡುವ ನಾವು ಅಲ್ಪಜ್ಞರು. ಆದ್ದರಿಂದ ಇದರಲ್ಲಿ ಸಂಭವಿಸಿರಬಹುದಾದ ದೋಷಗಳನ್ನು ವಿದ್ವಾಂಸರು ತಮ್ಮ ಗಮನಕ್ಕೆ ತಂದುಕೊಂಡು ನಮಗೂ ತಿಳಿಸಿ ಉಪಕರಿಸಬೇಕಾಗಿ ಪ್ರಾರ್ಥಿಸುತ್ತೇನೆ.

ಈ ಕಾರ್ಯದಿಂದ ಅಧ್ಯೇತೃಗಳಿಗೆ ಮತ್ತು ಉಳಿದ ಸಜ್ಜನರಿಗೂ ಉಪಯೋಗವಾದರೆ ನಾವು ಕೃತಾರ್ಥರು.

ಇತಿ ಶ್ರೀಪಾದ ಅಜ್ಞಾಧಾರಕ

ಶೇಷಗಿರಿ ಆಚಾರ್ಯ

★ ★ ★ ★ ★

ವಿಷಯಾನುಕ್ರಮಣಿಕೆ

ಮಹಾಭಾರತ - ಭಾಗ-೧೬

ದ್ರೋಣಪರ್ವ

ಪುಟ ಸಂ.

೧. **ದ್ರೋಣಾಭಿಷಿಕ್ತಪರ್ವ**

1. ಭೀಷ್ಮಪಾತಾನಂತರ ನಡೆದ ಯುದ್ಧವಿಷಯದಲ್ಲಿ ಧೃತರಾಷ್ಟ್ರನ ಪ್ರಶ್ನೆ ಮತ್ತು ಸಂಜಯನ ಉತ್ತರ 1

2. ಪಾಂಡವರ ಉಚ್ಛೇದನದ ಪ್ರತಿಜ್ಞೆಯನ್ನು ಮಾಡಿ ಕರ್ಣನಿಂದ ಯುದ್ಧಕ್ಕೆ ಪ್ರಯಾಣ 12

3. ಭೀಷ್ಮರ ಸಮೀಪಕ್ಕೆ ಹೋಗಿ ಕರ್ಣನಿಂದ ಯುದ್ಧಕ್ಕೆ ಅನುಮತಿಯ ಯಾಚನೆ 24

4. ಭೀಷ್ಮರ ಅನುಜ್ಞೆಯನ್ನು ಪಡೆದು ಕರ್ಣನ ಯುದ್ಧ ಪ್ರಯಾಣ 29

5. ಕರ್ಣನ ಸಹಮತಿಯಿಂದ ದುರ್ಯೋಧನನಿಂದ ದ್ರೋಣರಿಗೆ ಸೇನಾಪತಿಯ ಪಟ್ಟದಲ್ಲಿ ಅಭಿಷೇಕ 34

6. ಸಂಜಯನಿಂದ ದ್ರೋಣರ ಪರಾಕ್ರಮದ ವರ್ಣನೆ 43

7. ಸಂಜಯನಿಂದ ದ್ರೋಣರ ನಿಧನ ಕಥನ 52

8. ದ್ರೋಣ ವಧೆಯ ವಾರ್ತೆಯನ್ನು ಕೇಳಿ ಧೃತರಾಷ್ಟ್ರನ ಶೋಕ ಮತ್ತು ವಿಲಾಪ 61

9. ಮೂರ್ಛೆಯಿಂದ ಧೃತರಾಷ್ಟ್ರನು ಎಚ್ಚರಿಕೆ. ಸಂಜಯನನ್ನು ಕುರಿತು ಪುನಃ ಯುದ್ಧದ ಪ್ರಶ್ನೆ 72

10. ಧೃತರಾಷ್ಟ್ರನಿಂದ ಕೃಷ್ಣನ ಮಹಿಮೆಯನ್ನು ವರ್ಣಿಸಿ ಯುದ್ಧದ ವರ್ಣನೆಯನ್ನು ಮಾಡುವಂತೆ ಸಂಜಯನಿಗೆ ಆದೇಶ 90

11. ದುರ್ಯೋಧನ ಪ್ರೇರಿತರಾದ ದ್ರೋಣರಿಂದ ಯುಧಿಷ್ಠಿರನನ್ನು ಜೀವ ಸಹಿತವಾಗಿ ಹಿಡಿಯುವ ಪ್ರತಿಜ್ಞೆ 101

12. ದ್ರೋಣರ ಪ್ರತಿಜ್ಞೆಯನ್ನು ಕೇಳಿದ ಯುಧಿಷ್ಠಿರನಿಗೆ ಅರ್ಜುನನಿಂದ ಆಶ್ವಾಸನೆ. ಯುದ್ಧಾರಂಭ 108

13. ದ್ವೈರಥ ಯುದ್ಧಗಳು ಮತ್ತು ಅಭಿಮನ್ಯುವಿನ ಪರಾಕ್ರಮ 114

14. ಗದಾಯುದ್ಧದಲ್ಲಿ ಭೀಮನಿಂದ ಶಲ್ಯನ ಪರಾಜಯ 133

15. ದ್ರೋಣರಿಂದ ಯುಧಿಷ್ಠಿರನ ಗ್ರಹಣೋದ್ಧನದಲ್ಲಿ ಅರ್ಜುನನಿಂದ ಪ್ರತಿಬಂಧ. ಮೊದಲನೆಯ ದಿನದ ಯುದ್ಧದಲ್ಲಿ ದ್ರೋಣರಿಂದ ಸೈನ್ಯಾವಹಾರ 142

೨. ಸಂಶಪ್ತಕವಧಪರ್ವ

16. ಸಂಶಪ್ತಕರಿಂದ ಅರ್ಜುನನಿಗೆ ಯುದ್ಧಾಹ್ವಾನ. ಸತ್ಯಜಿತನನ್ನು ಯುಧಿಷ್ಠಿರನ ರಕ್ಷಣೆಗೆ ನಿಲ್ಲಿಸಿ ಅರ್ಜುನನಿಂದ ಯುದ್ಧಕ್ಕೆ ಪ್ರಯಾಣ 164

17. ಸಂಶಪ್ತಕರ ಜೊತೆಯಲ್ಲಿ ಅರ್ಜುನನ ಯುದ್ಧ 175

18. ಸಂಶಪ್ತಕರ ಜೊತೆಯಲ್ಲಿ ಮುಂದುವರಿದ ಅರ್ಜುನನ ಯುದ್ಧ 182

19. ಸಂಕುಲಯುದ್ಧ 191

20. ಯುಧಿಷ್ಠಿರನನ್ನು ಹಿಡಿಯಲು ಬಯಸಿದ ದ್ರೋಣರಿಗೆ ಸತ್ಯಜಿತನಿಂದ ವಿರೋಧ. ಯುಧಿಷ್ಠಿರನ ಅಪಯಾನ. ದ್ರೋಣರಿಂದ ಪಾಂಚಾಲ ಯೋಧರ ವಧೆ. 204

21. ದ್ರೋಣರ ಪರಾಕ್ರಮವನ್ನು ನೋಡಿ ದುರ್ಯೋಧನನಿಂದ ಕರ್ಣನನ್ನು ಕುರಿತು ಭೀಮಾದಿಗಳ ಅವಹೇಳನ. ಭೀಮಾದಿಗಳನ್ನು ಪ್ರಶಂಸಿಸಿ ಕರ್ಣನಿಂದ ಅದರ ನಿಷೇಧ 218

22. ಸಂಜಯನಿಂದ ರಥಗಳ, ಅಶ್ವಗಳ ಮತ್ತು ಧ್ವಜಗಳ ವರ್ಣನೆ 225

23. ಪುತ್ರನನ್ನು ಕುರಿತು ಶೋಕಪಡುತ್ತಾ ಯುದ್ಧವನ್ನು ವರ್ಣಿಸುವಂತೆ ಸಂಜಯನಿಗೆ ಧೃತರಾಷ್ಟ್ರನ ಪ್ರಾರ್ಥನೆ 242

24. ದ್ವಂದ್ವಯುದ್ಧಗಳು 246

25. ಭಗದತ್ತನ ಪರಾಕ್ರಮ 262

26. ಅರ್ಜುನನಿಂದ ಸಂಶಪ್ತಕರ ವಧೆ 277

27. ಭಗದತ್ತ ಮತ್ತು ಅರ್ಜುನರ ಸಂಘರ್ಷ 284

28. ಅರ್ಜುನನಿಂದ ಭಗದತ್ತ ಮತ್ತು ಸುಪ್ರತೀಕ ವಧೆ 291

29. ಅರ್ಜುನನ ಯುದ್ಧದ ವರ್ಣನೆ 302

30. ಅಶ್ವತ್ಥಾಮರಿಂದ ನೀಲನ ವಧೆ. 311

31. ಸಂಕುಲ ಯುದ್ಧ ವರ್ಣನೆ. ದ್ರೋಣರ ಸೇನಾಪತ್ಯದಲ್ಲಿ ಎರಡನೆಯ ದಿವಸದ ಸೇನಾವಹಾರ. 318

೩. ಅಭಿಮನ್ಯು ವಧಪರ್ವ

32. ಯುಧಿಷ್ಠಿರನನ್ನು ಹಿಡಿಯುವುದಿದ್ದಕ್ಕಾಗಿ ದುರ್ಯೋಧನನಿಂದ ದ್ರೋಣರ ನಿಂದನೆ. ಪಾಂಡವರ ಯಾರಾದರೂ ಒಬ್ಬ ಮಹಾರಥರನ್ನು ಕೊಲ್ಲುವ ದ್ರೋಣರ ಪ್ರತಿಜ್ಞೆ. ಸಂಕ್ಷೇಪವಾಗಿ ಅಭಿಮನ್ಯುವಿನ ವಧೆಯ ಕಥನ. 341

33. ಸಂಜಯನಿಂದ ಪಾಂಡವರ ಮತ್ತು ಅಭಿಮನ್ಯುವಿನ ಪ್ರಶಂಸೆ. ಧೃತರಾಷ್ಟ್ರನಿಂದ ಅಭಿಮನ್ಯುವಿನ ವಧೆಯನ್ನು ವಿಸ್ತಾರವಾಗಿ ಹೇಳುವಂತೆ ಸಂಜಯನಿಗೆ ಪ್ರಶ್ನೆ. 347

34. ದ್ರೋಣರಿಂದ ಪದ್ಮವ್ಯೂಹ ರಚನೆ. ಆ ವ್ಯೂಹವನ್ನು ಭೇದಿಸುವಂತೆ ಯುಧಿಷ್ಠಿರನಿಂದ ಅಭಿಮನ್ಯುವಿಗೆ ಪ್ರಚೋದನೆ 352

35. ಅಭಿಮನ್ಯುವಿನ ಯುದ್ಧದ ವರ್ಣನೆ 361

36. ಅಭಿಮನ್ಯುವಿನ ಪರಾಕ್ರಮದ ವರ್ಣನೆ 372

37. ಅಭಿಮನ್ಯುವಿನ ಪರಾಕ್ರಮದ ವರ್ಣನೆ 380

38. ಅಭಿಮನ್ಯು-ದುಶ್ಶಾಸನರ ಸಮಾಗಮ 385

39. ಅಭಿಮನ್ಯುವಿನಿಂದ ಕರ್ಣ-ದುಶ್ಶಾಸನರ ಪರಾಜಯ 391

40. ಅಭಿಮನ್ಯುವಿನ ಪರಾಕ್ರಮ ವರ್ಣನೆ 399

41. ಸಂಜಯನಿಂದ ರುದ್ರದೇವರ ವರಬಲದಿಂದ ಸೈಂಧವನಿಂದ ಪಾಂಡವರ ನಿರೋಧ ಕಥನ. 404

42. ರುದ್ರನ ವರಬಲದಿಂದ ಜಯದ್ರಥನಿಂದ ಪಾಂಡವರ ನಿರೋಧ. 410

43. ಅಭಿಮನ್ಯುವಿನ ಪರಾಕ್ರಮ ವರ್ಣನೆ 414

44. ಅಭಿಮನ್ಯುವಿನಿಂದ ದುರ್ಯೋಧನನ ಪರಾಜಯ 419

45. ಅಭಿಮನ್ಯುವಿನಿಂದ ಲಕ್ಷ್ಮಣನ ವಧೆ 425

46. ಅಭಿಮನ್ಯು ಪರಾಕ್ರಮ ವರ್ಣನೆ 432

47. ದ್ರೋಣಾದಿ ಷಡ್ರಥರಿಂದ ಅಭಿಮನ್ಯುವಿನ ರಥದ ನಾಶ ಮತ್ತು ಅಭಿಮನ್ಯುವಿನ ವಧೆ 437

48. ಅಭಿಮನ್ಯುವನ್ನು ಕುರಿತು ಶೋಕಿಸುತ್ತಾ ಯುಧಿಷ್ಠಿರನ ಪ್ರಲಾಪ 458

49. ಯುಧಿಷ್ಠಿರನನ್ನು ಸಮಾಧಾನ ಪಡಿಸಲು ವ್ಯಾಸರ ಆಗಮನ. ಅಕಂಪನೋಪಾಖ್ಯಾನ ಕಥನ ಪ್ರಾರಂಭ. 463

50. ಬ್ರಹ್ಮ-ರುದ್ರರ ಸಂವಾದ. ಮೃತ್ಯುದೇವತೆಯ ಉತ್ಪತ್ತಿ 475

51. ಮೃತ್ಯು-ಬ್ರಹ್ಮ ಸಂವಾದವನ್ನು ಕೇಳಿ ನಾರದರಿಂದ ಅಕಂಪನನ ಶೋಕ ಪರಿಹಾರ. ವ್ಯಾಸರಿಂದ ಯುಧಿಷ್ಠಿರನ ಶೋಕಪರಿಹಾರ 480

52. ವ್ಯಾಸರಿಂದ ಯುಧಿಷ್ಠಿರನನ್ನು ಕುರಿತು ಷೋಡಶ ರಾಜರ ಉಪಾಖ್ಯಾನದ ಪ್ರಾರಂಭ. ಅದರಲ್ಲಿ ಮರುತ್ತ ರಾಜನ ಚರಿತೆ 495

53. ಷೋಡಶ ರಾಜೋಪಾಖ್ಯಾನದಲ್ಲಿ ಸುಹೋತ್ರ ಚರಿತ 507

54. ಷೋಡಶರಾಜೋಪಾಖ್ಯಾನದಲ್ಲಿ ಅಂಗರಾಜನ ಚರಿತೆ 510

55. ಷೋಡಶ ರಾಜೋಪಾಖ್ಯಾನದಲ್ಲಿ ಶಿಬಿಯ ಚರಿತೆ 513

56. ಷೋಡಶರಾಜೋಪಾಖ್ಯಾನದಲ್ಲಿ ರಾಮ ಮಹಿಮೆಯ ಕಥನ 516

57. ಷೋಡಶರಾಜೋಪಾಖ್ಯಾನದಲ್ಲಿ ಭಗೀರಥನ ಚರಿತೆ 524

58. ಷೋಡಶರಾಜೋಪಾಖ್ಯಾನದಲ್ಲಿ ದಿಲೀಪನ ಚರಿತೆ 527

59. ಚತುರ್ದಶ ರಾಜೋಪಾಖ್ಯಾನದಲ್ಲಿ ಮಾಂಧಾತೃ ಚರಿತೆ 532

60. ಷೋಡಶ ರಾಜೋಪಾಖ್ಯಾನದಲ್ಲಿ ಯಯಾತಿ ಚರಿತೆ 536

61. ಷೋಡಶರಾಜೋಪಾಖ್ಯಾನದಲ್ಲಿ ಅಂಬರೀಶನ ಚರಿತೆ 539

62. ಷೋಡಶ ರಾಜೋಪಾಖ್ಯಾನದಲ್ಲಿ ಶಶಿ(ಶಶ)ಬಿಂದು ಚರಿತೆ 543

63. ಷೋಡಶ ರಾಜೋಪಾಖ್ಯಾನದಲ್ಲಿ ಗಯ ಚರಿತೆ 546

64. ಷೋಡಶರಾಜೋಪಾಖ್ಯಾನದಲ್ಲಿ ರಂತಿದೇವನ ಚರಿತೆ 550

65. ಷೋಡಶರಾಜೋಪಾಖ್ಯಾನದಲ್ಲಿ ಭರತನ ಚರಿತೆ 555

66. ಷೋಡಶರಾಜೋಪಾಖ್ಯಾನದಲ್ಲಿ ಪೃಥುಚರಿತೆ 559

67. ಷೋಡಶರಾಜೋಪಾಖ್ಯಾನದಲ್ಲಿ ಪರಶುರಾಮ ಚರಿತೆ 570

68. ಯುಧಿಷ್ಠಿರನನ್ನು ಸಮಾಧಾನಗೊಳಿಸಿ ವ್ಯಾಸರ ಅಂತರ್ಧಾನ 575

★ ★ ★ ★ ★

ಮಹಾಭಾರತ - ದ್ರೋಣಪರ್ವ

೧. ದ್ರೋಣಾಭಿಷೇಕಪರ್ವ

ಒಂದನೆಯ ಅಧ್ಯಾಯ

ಭೀಷ್ಮಪಾತಾನಂತರ ನಡೆದ ಯುದ್ಧವಿಷಯದಲ್ಲಿ ಧೃತರಾಷ್ಟ್ರನ ಪ್ರಶ್ನೆ ಮತ್ತು ಸಂಜಯನ ಉತ್ತರ.

ಜನಮೇಜಯಃ

ತಮಪ್ರತಿಮಸತ್ತ್ವೌಜೋಬಲವೀರ್ಯಪರಾಕ್ರಮಮ್ ।
ಹತಂ ದೇವವ್ರತಂ ಶ್ರುತ್ವಾ ಪಾಂಚಾಲ್ಯೇನ ಶಿಖಂಡಿನಾ ॥ ೧ ॥

ಧೃತರಾಷ್ಟ್ರಸ್ತದಾ ರಾಜಾ ಬಾಷ್ಪವ್ಯಾಕುಲಲೋಚನಃ ।
ಕಿಮಚೇಷ್ಟತ ವಿಪ್ರರ್ಷೇ ಹತೇ ಪಿತರಿ ವೀರ್ಯವಾನ್ ॥ ೨ ॥

ಜನಮೇಜಯ– ಅಸದೃಶವಾದ ಸಾಮರ್ಥ್ಯ, ಬಲ, ಶೌರ್ಯ ಮತ್ತು ಪರಾಕ್ರಮಗಳನ್ನುಳ್ಳ ದೇವವ್ರತರು (ಭೀಷ್ಮರು) ಪಾಂಚಾಲದೇಶದ ಶಿಖಂಡಿಯಿಂದ ಹತರಾದುದನ್ನು ಕೇಳಿ ಎಲೈ ವಿಪ್ರರ್ಷಿಗಳೇ, ಬಾಷ್ಪಪೂರಿತ ಲೋಚನನೂ, ಪರಾಕ್ರಮಶಾಲಿಯೂ ಆದ ಧೃತರಾಷ್ಟ್ರನು ತಂದೆಯು ಹತನಾಗುತ್ತಿರಲು ಏನು ಮಾಡಿದನು?

ಯಸ್ಯ ಪುತ್ರೋ ಹಿ ಭಗವನ್ ಭೀಷ್ಮದ್ರೋಣಮುಖೈ ರಥೈಃ ।
ಪರಾಜಿತ್ಯ ಮಹೇಷ್ವಾಸಾನ್ ಪಾಂಡವಾನ್ ರಾಜ್ಯಮಿಚ್ಛತಿ ॥ ೩ ॥

ತಸ್ಮಿನ್ ಹತೇ ತು ಭಗವನ್ ಕೇತೌ ಸರ್ವಧನುಷ್ಮತಾಮ್ ।
ಯದಚೇಷ್ಟತ ಕೌರವ್ಯಃ ತನ್ಮೇ ಬ್ರೂಹಿ ದ್ವಿಜೋತ್ತಮ ॥ ೪ ॥

ಪೂಜ್ಯರೇ, ಬ್ರಾಹ್ಮಣಶ್ರೇಷ್ಠರೇ, ಯಾವನ ಪುತ್ರನು ಭೀಷ್ಮ-ದ್ರೋಣ ಮೊದಲಾದ ಮಹಾರಥರ ಸಹಾಯದಿಂದ ಮಹಾಧನುರ್ಧಾರಿಗಳಾದ ಪಾಂಡವರನ್ನು ಸೋಲಿಸಿ ರಾಜ್ಯವನ್ನು ಬಯಸುತ್ತಾನೆಯೋ ಅಂತಹ ಕೌರವ್ಯನಾದ ಧೃತರಾಷ್ಟ್ರನು ಸರ್ವಧನುರ್ಧಾರಿಗಳಿಗೆ ಧ್ವಜಪ್ರಾಯರಾಗಿದ್ದ ಭೀಷ್ಮರು ಹತರಾದಾಗ ಏನು ಮಾಡಿದನೆಂದು ನನಗೆ ಹೇಳಿ.

ವೈಶಂಪಾಯನಃ

ಶ್ರುತ್ವಾ ಭೀಷ್ಮಸ್ಯ ನಿಧನಮಪ್ರಹೃಷ್ಟಮನಾ ಭೃಶಮ್ ।
ಪುತ್ರಾಣಾಂ ಜಯಮಾಕಾಂಕ್ಷನ್ ವಿಲಲಾಪ ಸುದುಃಖಿತಃ ॥ ೫ ॥

ವೈಶಂಪಾಯನ– ಭೀಷ್ಮರ ನಿಧನದ ವಾರ್ತೆಯನ್ನು ಕೇಳಿ, ಮನಸ್ಸಿನಲ್ಲಿ ಸಂತೋಷವಿಲ್ಲದೆ, ದುಃಖದಿಂದ ಕೂಡಿದವನಾಗಿ, ತನ್ನ ಪುತ್ರರ ಜಯವನ್ನು ಬಯಸುತ್ತಾ ಧೃತರಾಷ್ಟ್ರನು ವಿಲಾಪವನ್ನು ಮಾಡಿದನು.

ನಿಹತಂ ಪಿತರಂ ಶ್ರುತ್ವಾ ಧೃತರಾಷ್ಟ್ರೋ ಜನಾಧಿಪಃ ।
ಲೇಭೇ ನ ಶಾಂತಿಂ ಕೌರವ್ಯಶ್ಚಿಂತಾಶೋಕಪರಾಯಣಃ ॥ ೬ ॥

ತನ್ನ ತಂದೆಯು ಹತನಾದುದನ್ನು ಕೇಳಿ ಜನಾಧಿಪನೂ, ಕೌರವ್ಯನೂ ಆದ ಧೃತರಾಷ್ಟ್ರನು ಚಿಂತಾ-ಶೋಕಪರಾಯಣನಾಗಿ ಶಾಂತಿಯನ್ನು ಹೊಂದಲಿಲ್ಲ.

ತಸ್ಯ ಚಿಂತಯತೋ ದುಃಖಮನಿಶಂ ಕೌರವಸ್ಯ ತತ್ ।
ಆಜಗಾಮ ವಿಶುದ್ಧಾತ್ಮಾ ಪುನರ್ಗಾವಲ್ಗಣಿಸ್ತದಾ। ॥ ೭ ॥

ವ್ಯಾಸಪ್ರಸಾದಾದ್ ವಿಜ್ಞಾಯ ಸರ್ವವೃತ್ತಾಂತಮುತ್ತಮಮ್ ।
ಸೈನಿಕಾನಾಂ ಚ ಸರ್ವೇಷಾಂ ಸೇನಯೋರುಭಯೋರಪಿ ॥ ೮ ॥

ಕೌರವನಾದ ಅವನು ಸತತವಾಗಿ ದುಃಖದಿಂದ ಅದನ್ನೇ ಚಿಂತಿಸುತ್ತಿರುವಾಗ, ಶುದ್ಧವಾದ ಮನಸ್ಸುಳ್ಳ ಸಂಜಯನು ವ್ಯಾಸರ ಅನುಗ್ರಹದಿಂದ, ಎರಡು ಸೈನ್ಯಗಳಲ್ಲಿಯೂ ನಡೆಯುವ ಎಲ್ಲ ಯೋಧರ ಶ್ರೇಷ್ಠವಾದ ವೃತ್ತಾಂತವನ್ನು ತಿಳಿದು ಪುನಃ ಅವನ ಸಮೀಪಕ್ಕೆ ಬಂದನು.

ಶಿಬಿರಾತ್ ಸಂಜಯಂ ಪ್ರಾಪ್ತಂ ನಿಶಿ ನಾಗಾಹ್ವಯಂ ಪುರಮ್ ।
ಆಂಬಿಕೇಯೋ ಮಹಾರಾಜ ಧೃತರಾಷ್ಟ್ರೋಽನ್ವಪೃಚ್ಛತ ॥ ೯ ॥

ಎಲೈ ಮಹಾರಾಜನೇ, ಶಿಬಿರದಿಂದ ರಾತ್ರಿಯ ಕಾಲದಲ್ಲಿ ಹಸ್ತಿನಪುರಕ್ಕೆ ಬಂದ ಸಂಜಯನನ್ನು ಅಂಬಿಕಾಪುತ್ರನಾದ ಧೃತರಾಷ್ಟ್ರನು ಪ್ರಶ್ನೆ ಮಾಡಿದನು.

ಧೃತರಾಷ್ಟ್ರಃ

ಸಂಕಾಲ್ಯ ತು ಮಹಾತ್ಮಾನಂ ಭೀಷ್ಮಂ ಭೀಮಪರಾಕ್ರಮಮ್ ।
ಕಿಮಚೇಷ್ಟನ್ ಪರಂ ತಾತ ಕುರವಃ ಕಾಲಚೋದಿತಾಃ ॥ ೧೦ ॥

ಧೃತರಾಷ್ಟ್ರ– ಭಯಂಕರ ಪರಾಕ್ರಮವುಳ್ಳ, ಮಹಾತ್ಮರಾದ ಭೀಷ್ಮರನ್ನು ನಾಶಗೊಳಿಸಿ ಎಲೈ ಪ್ರೀತಿಪಾತ್ರನೇ, ಮೃತ್ಯುಚೋದಿತರಾದ ಕುರುಗಳು ಅನಂತರ ಏನು ಮಾಡಿದರು?

ತಸ್ಮಿಂಸ್ತು ನಿಹತೇ ವೀರೇ ಭೀಷ್ಮೇ ಯುಧಿ ಮಹೌಜಸಿ ।
ಕಸ್ಯ ಸ್ಮ ಕುರವೋಽಸ್ಮಾರ್ಷುಃ ನಿಮಗ್ನಾಃ ಶೋಕಸಾಗರೇ ॥ ೧೧ ॥

ವೀರರೂ, ಮಹಾಸಾಮರ್ಥ್ಯವುಳ್ಳವರೂ ಆದ ಭೀಷ್ಮರು ಯುದ್ಧದಲ್ಲಿ ನಿಧನವನ್ನು ಹೊಂದುತ್ತಿರಲು ಶೋಕಸಾಗರದಲ್ಲಿ ಮುಳುಗಿದ ಕುರುಗಳು ಯಾರನ್ನು ಸ್ಮರಿಸಿದರು?

ತದ್ ದ್ವಿತೀಯಂ ಮಹತ್ ಖಂಡಂ ತ್ರೈಲೋಕ್ಯಸ್ಯಾಪಿ ಭೀಷಣಮ್ ।
ಭಯಮುತ್ಪಾದಯಂಸ್ತೀವ್ರಂ ಬಾಧೇನ್ನಾಮ ಮಹದ್ಬಲಮ್ ।
ಭೀಷ್ಮತಃ ಕೌರವೇಯಾಣಾಮಪಿ ಯಾಸ್ಯತಿ ಕಿನ್ನು ತತ್ ॥ ೧೨ ॥

ನಮ್ಮ ಸೈನ್ಯಕ್ಕಿಂತಲೂ ದೊಡ್ಡದಾದ, ಮೂರುಲೋಕಕ್ಕೂ ಭಯವನ್ನುಂಟು ಮಾಡುವ ಪಾಂಡವರ ಸೇನಾಭಾಗವನ್ನು ಭೀಷ್ಮರು ಬಾಧಿಸಬಹುದಾಗಿದ್ದಿತು! ಕೌರವ್ಯರಾದ ನಮ್ಮ ಸೈನ್ಯವು ಭೀಷ್ಮರನ್ನು ಬಿಟ್ಟು ಬೇರೆ ಯಾರನ್ನು ಶರಣು ಹೊಂದುವುದು?

ದೇವವ್ರತೇ ತು ನಿಹತೇ ಕುರೂಣಾಮೃಷಭೇ ತದಾ ।
ಕಿಮಕುರ್ವನ್ ನೃಪತಯಃ ತನ್ಮಾಚಕ್ಷ್ವ ಸಂಜಯ ॥ ೧೩ ॥

ಕುರುಶ್ರೇಷ್ಠರಾದ ದೇವವ್ರತರು ಹತರಾಗುತ್ತಿರಲು ಆಗ ಎಲೈ ಸಂಜಯನೇ, ರಾಜರು ಏನು ಮಾಡಿದರು ಎಂದು ನನಗೆ ಹೇಳು.

ಸಂಜಯಃ

ಶೃಣು ರಾಜನ್ನೇಕಮನಾ ವಚನಂ ಬ್ರುವತೋ ಮಮ ।
ಯತ್ ತೇ ಪುತ್ರಾಸ್ತದಾऽಕಾರ್ಷುಃ ಹತೇ ದೇವವ್ರತೇ ಮೃಧೇ ॥ ೧೪ ॥

ಸಂಜಯ– ಎಲೈ ರಾಜನೇ, ದೇವವ್ರತರು ಯುದ್ಧದಲ್ಲಿ ಹತರಾದ ಮೇಲೆ ನಿನ್ನ ಪುತ್ರರು ಏನು ಮಾಡಿದರೆಂದು ನಾನು ಹೇಳುತ್ತೇನೆ, ಒಂದೇ ಮನಸ್ಸಿನಿಂದ ಅದನ್ನು ಕೇಳು.

ನಿಹತೇ ತು ತದಾ ಸಂಖೇ ಭೀಷ್ಮೇ ಸತ್ಯಪರಾಕ್ರಮೇ ।
ತಾವಕಾಃ ಪಾಂಡವೇಯಾಶ್ಚ ಪ್ರವದಂತಃ ಪೃಥಕ್ಪೃಥಕ್ ॥ ೧೫ ॥

ವಿಸ್ಮಿತಾಶ್ಚ ಪ್ರಹೃಷ್ಟಾಶ್ಚ ಕ್ಷತ್ರಧರ್ಮಂ ವಿಶಾಂಪತೇ ।
ಸ್ವಧರ್ಮಂ ನಿಂದಮಾನಾಸ್ತೇ ಪ್ರಣಿಪತ್ಯ ಮಹಾತ್ಮನೇ ॥ ೧೬ ॥

ಶಯನಂ ಕಲ್ಪಯಾಮಾಸುಃ ಭೀಷ್ಮಾಯಾಮಿತತೇಜಸೇ ।
ಸೋಪಧಾನಂ ನರವ್ಯಾಘ್ರ ಶರೈಃ ಸನ್ನತಪರ್ವಭಿಃ ॥ ೧೭ ॥

ಸತ್ಯಪರಾಕ್ರಮವುಳ್ಳ ಭೀಷ್ಮರು ಯುದ್ಧದಲ್ಲಿ ಹತರಾಗುತ್ತಿರಲು ನಿನ್ನವರು ಮತ್ತು ಪಾಂಡವರು ಬೇರೆ ಬೇರೆಯಾಗಿ ಮಾತನಾಡಿದರು. ಎಲೈ ರಾಜನೇ, ಅವರು ವಿಸ್ಮಯದಿಂದಲೂ, ಸಂತೋಷದಿಂದಲೂ ಕೂಡಿದವರಾಗಿ, ತಮ್ಮ ಧರ್ಮವಾದ ಕ್ಷತ್ರಿಯ ಧರ್ಮವನ್ನು ನಿಂದಿಸುತ್ತಾ, ಮಹಾತ್ಮರಾದ ಭೀಷ್ಮರಿಗೆ ನಮಸ್ಕಾರವನ್ನು ಮಾಡಿ, ಅಮಿತ ತೇಜಸ್ವಿಗಳಾದ ಅವರಿಗೆ ಬಾಗಿದ ತುದಿಯುಳ್ಳ ಬಾಣಗಳಿಂದ ತಲೆದಿಂಬಿನಿಂದ ಸಹಿತವಾದ ಶಯನವನ್ನು ಕಲ್ಪಿಸಿದರು.

ವಿಧಾಯ ರಕ್ಷಾಂ ಭೀಷ್ಮಾಯ ಪ್ರಣಿಪತ್ಯ ಪಿತಾಮಹಮ್ ।
ಅನುಮಾನ್ಯ ಚ ಗಾಂಗೇಯಂ ಕೃತ್ವಾ ಚಾಪಿ ಪ್ರದಕ್ಷಿಣಮ್ ॥ ೧೮ ॥

ಕ್ರೋಧಸಂರಕ್ತನಯನಾಃ ಸಮವೇತ್ಯ ಪರಸ್ಪರಮ್ ।
ಪುನರ್ಯುದ್ಧಾಯ ಸಂಜಗ್ಮುಃ ಕ್ಷತ್ರಿಯಾಃ ಕಾಲಚೋದಿತಾಃ ॥ ೧೯ ॥

ಭೀಷ್ಮರ ರಕ್ಷಣೆಯ ವ್ಯವಸ್ಥೆಯನ್ನು ಮಾಡಿ, ಪಿತಾಮಹರಾದ, ಗಂಗಾಪುತ್ರರಾದ ಅವರಿಗೆ ನಮಸ್ಕಾರವನ್ನು ಮಾಡಿ, ಅವರಿಗೆ ಪ್ರದಕ್ಷಿಣೆಯನ್ನು ಮಾಡಿ, ಅವರ ಅನುಮತಿಯನ್ನು ಪಡೆದು, ಕೋಪದಿಂದ ಕೆಂಪಾದ ಕಣ್ಣುಳ್ಳವರಾಗಿ, ಮೃತ್ಯುಚೋದಿತರಾದ ಕ್ಷತ್ರಿಯರು ಪರಸ್ಪರವಾಗಿ ಒಂದುಗೂಡಿ ಪುನಃ ಯುದ್ಧಕ್ಕೆ ಹೊರಟರು.

ತತಸ್ತೂರ್ಯನಿನಾದೈಶ್ಚ ಭೇರೀಣಾಂ ಚ ಮಹಾಸ್ವನೈಃ ।
ತಾವಕಾನಾಮನೀಕಾನಿ ಪರೇಷಾಂ ಚಾಪಿ ನಿರ್ಯಯುಃ ॥ ೨೦ ॥

ಆಗ ತೂರ್ಯನಿನಾದಗಳಿಂದಲೂ, ಭೇರಿಯ ಮಹಾಶಬ್ದಗಳಿಂದಲೂ ಸಹಿತವಾಗಿ ನಿನ್ನ ಮತ್ತು ಪಾಂಡವರ ಸೈನ್ಯಗಳು ಹೊರಟವು.

ತಸ್ಮಿನ್ನಹನಿ ರಾಜೇಂದ್ರ ಪತಿತೇ ಶಂತನೋಃ ಸುತೇ ।
ಅಮರ್ಷವಶಮಾಪನ್ನಾಃ ಕಾಲೋಪಹತಚೇತಸಃ ॥ ೨೧ ॥

ಅನಾದೃತ್ಯ ವಚಃ ಪಥ್ಯಂ ಗಾಂಗೇಯಸ್ಯ ಮಹಾತ್ಮನಃ ।
ನಿರ್ಯಯುಃ ಭರತಶ್ರೇಷ್ಠಾಃ ಶಸ್ತ್ರಾಣ್ಯಾದಾಯ ಸರ್ವಶಃ ॥ ೨೨ ॥

ಎಲೈ ರಾಜೇಂದ್ರನೇ, ಶಂತನು ಪುತ್ರರಾದ ಭೀಷ್ಮರು ಆ ದಿವಸದಲ್ಲಿ ಬೀಳುತ್ತಿರಲು, ಕ್ರೋಧಕ್ಕೆ ವಶರಾದ ಮತ್ತು ಮೃತ್ಯುವಿನಿಂದ ಪ್ರೇರಿತವಾದ ಬುದ್ಧಿಯುಳ್ಳ ಭರತಶ್ರೇಷ್ಠರು ಮಹಾತ್ಮರಾದ ಭೀಷ್ಮರ ಹಿತನುಡಿಗಳನ್ನು ಆದರಿಸದೆ ಶಸ್ತ್ರಗಳನ್ನು ತೆಗೆದುಕೊಂಡು ಎಲ್ಲ ಕಡೆಗಳಿಂದಲೂ ಹೊರಟರು.

ಮೋಹಾತ್ ತವ ಚ ಪುತ್ರಸ್ಯ ವಧಾಚ್ಛಂತನವಸ್ಯ ಚ ।
ಕೌರವಾ ಮೃತ್ಯುನಾऽऽವಿಷ್ಟಾಃ ಸಹಿತಾಃ ಸರ್ವರಾಜಭಿಃ ॥ ೨೩ ॥

ಅಜಾವಯ ಇವಾಗೋಪಾ ವನೇ ಶ್ವಾಪದಸಂಕುಲೇ ।
ಕರ್ಣ ಕರ್ಣೇತಿ ಚಾಕ್ರುಶ್ಯ ಶೇಷಾ ಭಾರತ ತಾವಕಾಃ ॥ ೨೪ ॥

ನಿನ್ನ ಮತ್ತು ನಿನ್ನ ಪುತ್ರನ ಮೋಹದಿಂದಲೂ ಮತ್ತು ಭೀಷ್ಮರ ವಧೆಯಿಂದಲೂ (ಪ್ರೇರಿತರಾಗಿ) ಮೃತ್ಯುವಿನಿಂದ ಆದೇಶಿಸಲ್ಪಟ್ಟ ಕೌರವರು ಎಲ್ಲ ರಾಜರಿಂದಲೂ ಸಹಿತರಾಗಿ, ಮಾಂಸಾಹಾರಿಗಳಿಂದ ತುಂಬಿದ ಕಾಡುಗಳಲ್ಲಿ ರಕ್ಷಕರಿಲ್ಲದ ಆಡು-ಕುರಿಗಳಂತೆ ಕರ್ಣ, ಕರ್ಣ ಎಂದು ಕಿರುಚುತ್ತಾ ಎಲೈ ಭಾರತನೇ, ನಿನ್ನ ಉಳಿದ ಸೈನಿಕರು ಭೀಷ್ಮರಿಲ್ಲದೆ ಬಹಳ ಉದ್ವೇಗಗೊಂಡ ಮನಸ್ಸುಳ್ಳವರಾಗಿ ಹೀನಸ್ಥಿತಿಯನ್ನು ತಲುಪಿದರು.

ಭೃಶಮುದ್ವಿಗ್ನಮನಸೋ ಹೀನಾ ದೇವವ್ರತೇನ ತೇ ॥ ೨೫ ॥

ಪತಿತೇ ಭರತಶ್ರೇಷ್ಠೇ ಬಭೂವ ಕುರುವಾಹಿನೀ ।
ದ್ಯೌರಿವಾಪೇತನಕ್ಷತ್ರಾ ಹೀನಂ ಖಮಿವ ಭಾನುನಾ ॥ ೨೬ ॥

ಭರತಶ್ರೇಷ್ಠರಾದ ಭೀಷ್ಮರು ಪಾತವನ್ನು ಹೊಂದುತ್ತಿರಲು ಕೌರವ ಸೇನೆಯು ನಕ್ಷತ್ರಗಳಿಲ್ಲದ ಆಕಾಶದಂತೆ ಮತ್ತು ಸೂರ್ಯನಿಲ್ಲದ ಆಕಾಶದಂತೆ ಆಯಿತು.

ವಿಪನ್ನಸಸ್ಯೇವ ಮಹೀ ವಾಕ್ ಚೈವಾಸಂಸ್ಕೃತಾ ಯಥಾ ।
ಆಸುರೀವ ಯಥಾ ಸೇನಾ ನಿಗೃಹೀತೇ ನೃಪೇ ಬಲೌ ॥ ೨೭ ॥

ಎಲ್ಲಸಸ್ಯಗಳು ನಾಶಹೊಂದಿದ ಭೂಮಿಯಂತೆ, ಅಸಂಸ್ಕೃತವಾದ ವಾಣಿಯಂತೆ, ರಾಜನಾದ ಬಲಿಯು ನಿಗ್ರಹಿಸಲ್ಪಡುತ್ತಿರಲು ದೈತ್ಯರ ಸೇನೆಯಂತೆ ಆಯಿತು.

ವಿಧವಾ ತು ಯಥಾ ನಾರೀ ಶುಷ್ಕತೋಯೇವ ಸಿಮ್ನಗಾ ।
ವೃಕೈರಿವ ವನೇ ರುದ್ಧಾ ಪೃಷತೀ ಹತಯೂಥಪಾ ॥ ೨೮ ॥

ವಿಧವೆಯಾದ ನಾರಿಯಂತೆ, ನೀರು ಒಣಗಿದ ನದಿಯಂತೆ, ತನ್ನ ಪತಿಯನ್ನು ಕಳೆದುಕೊಂಡು ತೋಳಗಳಿಂದ ಹೆದರಿಸಲ್ಪಟ್ಟ ಹೆಣ್ಣುಜಿಂಕೆಯಂತೆ ಆಯಿತು.

ಯಥಾ ಸಿಂಹೇ ವಿನಿಷ್ಕ್ರಾಂತೇ ಪರ್ವತಸ್ಯೇವ ಕಂದರಾ ॥ ೨೯ ॥

ಸಾ ಸೇನಾ ಭರತಶ್ರೇಷ್ಠೇ ಪತಿತೇ ಜಾಹ್ನವೀಸುತೇ ।
ಶರಭಾಹತಸಿಂಹೇವ ಮಹತೀ ಗಿರಿಕಂದರಾ ॥ ೩೦ ॥

ವಿಷ್ವಗ್ ವಾತಾಹತಾ ಕ್ಷುಬ್ಧಾ ನೌರಿವಾಸೀನ್ಮಹಾರ್ಣವೇ ॥ ೩೧ ॥

ಜಾಹ್ನವಿಯ ಪುತ್ರರಾದ, ಭರತಶ್ರೇಷ್ಠರಾದ ಭೀಷ್ಮರು ಬೀಳುತ್ತಿರಲು ಕೌರವ ಸೇನೆಯು, ಸಿಂಹವು ಹೊರಟುಹೋದ ಪರ್ವತದ ಗುಹೆಯಂತೆ, ಶರಭದ ಆಕ್ರಮಣಕ್ಕೆ ಸಿಲುಕಿದ ಸಿಂಹದಂತೆ, ಮಹಾಸಾಗರದಲ್ಲಿ ಎಲ್ಲ ಕಡೆಯಲ್ಲಿಯೂ ಬೀಸುವ ಸುಂಟರಗಾಳಿಯಿಂದ ಕ್ಷೋಭೆಗೊಂಡ ಹಡಗಿನಂತೆ ದುಃಖಕ್ಕೆ ಈಡಾಯಿತು.

ಬಲಿಭಿಃ ಪಾಂಡವೈರ್ದರ್ಪೈಃ ಲಬ್ಧಲಕ್ಷೈರ್ಭೃಶಾರ್ದಿತಾ ।
ಸಾ ತಥಾ ನಿಹತಾ ಸೇನಾ ವ್ಯಾಕುಲಾಶ್ವರಥದ್ವಿಪಾ ॥ ೩೨ ॥

ವಿಷಣ್ಣಭೂಯಿಷ್ಠನರಾ ಕೃಪಣಾ ದ್ರಷ್ಟುರಾಬಭೌ ॥ ೩೩ ॥

ಬಲಿಷ್ಠರೂ, ಲಕ್ಷ್ಯಭೇದಿಗಳೂ, ದರ್ಪಶೀಲರೂ ಆದ ಪಾಂಡವರಿಂದ ಚೆನ್ನಾಗಿ ಪೀಡಿಸಲ್ಪಟ್ಟು, ನಿಹತವಾದ ಆ ಸೈನ್ಯವು ವ್ಯಾಕುಲಗೊಂಡ ಅಶ್ವ-ರಥ- ಗಜಗಳಿಂದ ಕೂಡಿದುದಾಗಿ ವಿಷಾದವನ್ನು ಹೊಂದಿದ ಅನೇಕ ಯೋಧರಿಂದ ಕೂಡಿದುದಾಗಿ ನೋಡುವವರಿಗೆ ಕಾರ್ಪಣ್ಯವನ್ನು ಹೊಂದಿದಂತೆ ಕಂಡುಬರುತ್ತಿದ್ದಿತು.

ತಸ್ಯಾಂ ದೃಪ್ತಾ ನೃಪತಯಃ ಸೈನಿಕಾಶ್ಚ ಪೃಥಗ್ವಿಧಾಃ ।
ಪಾತಾಳ ಇವ ಮಜ್ಜಂತೋ ಹೀನಾ ದೇವವ್ರತೇನ ತೇ ॥ ೩೪ ॥

ಕರ್ಣಂ ಹಿ ಕುರವೋಽಸ್ಮಾರ್ಷುಃ ಸ ಹಿ ದೇವವ್ರತೋಪಮಃ ॥ ೩೫ ॥

ಆ ಸೈನ್ಯದಲ್ಲಿದ್ದ ದರ್ಪಿಷ್ಠರಾದ ರಾಜರು ಮತ್ತು ಅನೇಕ ವಿಧವಾದ ಸೈನಿಕರು ಮತ್ತು ಕುರುಗಳು ಭೀಷ್ಮರಿಲ್ಲದೆ ಪಾತಾಳದಲ್ಲಿ ಮುಳುಗಿದವರಂತೆ ಕರ್ಣನನ್ನು ಸ್ಮರಿಸಿದರು. ಅವನು ಭೀಷ್ಮರಿಗೆ ಸದೃಶನಷ್ಟೆ!

ಸರ್ವಶಸ್ತ್ರಭೃತಾಂ ಶ್ರೇಷ್ಠಂ ರೋಚಮಾನಮಿವಾನಲಮ್ ।
ಬಂಧುಮಾಪದ್ಗತಸ್ಯೇವ ತೇಷಾಮಾಸೀದ್ ಗತಂ ಮನಃ ॥ ೩೬ ॥

ಆಪತ್ತಿಗೆ ಸಿಲುಕಿದವರು ಬಂಧುಗಳನ್ನು ಸ್ಮರಿಸಿದಂತೆ ಸರ್ವಶಸ್ತ್ರಧಾರಿಗಳಲ್ಲಿ ಶ್ರೇಷ್ಠನಾದ, ಅಗ್ನಿಯಂತೆ ಕಂಗೊಳಿಸುವ ಕರ್ಣನಲ್ಲಿ ಅವರ ಮನಸ್ಸು ಹೋಯಿತು.

ಚುಕ್ರುಶುಃ ಕರ್ಣ ಕರ್ಣೇತಿ ಶೇಷಾ ಭಾರತ ಪಾರ್ಥಿವಾಃ ।
ರಾಧೇಯೋ ಹಿ ಹಿತೋಽಸ್ಮಾಕಂ ಸೂತಪುತ್ರಸ್ತನುತ್ಯಜಃ ॥ ೩೭ ॥

ತ್ವಯಾ ತು ಪಾಂಡವೇಯೇಷು ನಿಹತೇಷು ಮಹಾಮೃಧೇ ।
ದುರ್ಯೋಧನಮನುಜ್ಞಾಪ್ಯ ವನಂ ಯಾಸ್ಯಾಮಿ ಕೌರವ ॥ ೪೩ ॥

ಎಲೈ ಕೌರವರೇ, ನೀವು ದೊಡ್ಡ ಯುದ್ಧದಲ್ಲಿ ಪಾಂಡವರನ್ನು ವಧಿಸಿದ ಮೇಲೆ ದುರ್ಯೋಧನನ ಅನುಮತಿಯನ್ನು ಪಡೆದು ನಾನು ಕಾಡಿಗೆ ಹೋಗುವೆನು.

ಹತೇ ವಾ ಯುಧಿ ಪಾರ್ಥೈಸ್ತು ತ್ವಯಿ ಸ್ವರ್ಗಂ ಸಮೇಯುಷಿ ।
ಹಂತಾಸ್ಮ್ಯೇಕರಥೇನೈವ ಕೃತ್ಸ್ನಾನ್ ಯಾನ್ ಮನ್ಯಸೇ ರಥಾನ್ ॥೪೪॥

ಅಥವಾ ನೀವೇ ಪಾಂಡವರಿಂದ ಹತರಾಗಿ ಸ್ವರ್ಗಕ್ಕೆ ಹೋದರೆ ನೀವು ಯಾರನ್ನು ರಥರು ಎಂದು ತಿಳಿಯುತ್ತೀರೋ ಅವರೆಲ್ಲರನ್ನೂ ಒಂದೇ ರಥದಿಂದ ಕೊಲ್ಲುವೆನು (ಎಂದು ಹೇಳಿದನು).

ಸಂಜಯಃ

ಏವಮುಕ್ತ್ವಾ ಮಹಾತೇಜಾ ದಶಾಹಾನ್ಯೇಕ ಏವ ಸಃ ।
ನಾಯುದ್ಧ್ಯತ ತದಾ ಕರ್ಣಃ ಪುತ್ರಸ್ಯ ತವ ಸಮ್ಮತೇ ॥ ೪೫ ॥

ಸಂಜಯ– ಹೀಗೆ ಹೇಳಿ ಮಹಾತೇಜಸ್ವಿಯಾದ ಕರ್ಣನೊಬ್ಬನೇ ನಿನ್ನ ಪುತ್ರನ ಅನುಮತಿಯನ್ನು ಪಡೆದು ಹತ್ತುದಿನಗಳ ಕಾಲ ಯುದ್ಧವನ್ನು ಮಾಡಲಿಲ್ಲ.

ಭೀಷ್ಮಸ್ತ್ವಮಿತವಿಕ್ರಾಂತಃ ಪಾಂಡವೇಯಸ್ಯ ಪಾರ್ಥಿವ ।
ಜಘಾನ ಸಮರೇ ಯೋಧಾನ್ ಅಸಂಖ್ಯೇಯಪರಾಕ್ರಮಾನ್ ॥ ೪೬ ॥

ಅಮಿತಪರಾಕ್ರಮಿಗಳಾದ ಭೀಷ್ಮರು ಎಲೈ ರಾಜನೇ, ಅಗಣಿತ ಪರಾಕ್ರಮವುಳ್ಳ ಪಾಂಡವಸೇನೆಯ ಯೋಧರನ್ನು ಯುದ್ಧದಲ್ಲಿ ಕೊಂದರು.

ತಸ್ಮಿಂಸ್ತು ನಿಹತೇ ಶೂರೇ ತವ ಪುತ್ರಾ ಮಹಾರಥಮ್ ।
ಕರ್ಣಂ ರಾಜಂಸ್ತದಾ ಜಗ್ಮುಃ ತರ್ತುಕಾಮಾ ಇವ ಪ್ಲವಮ್ ॥ ೪೭ ॥

ಎಲೈ ರಾಜನೇ, ಅಂತಹ ಶೂರರಾದ ಭೀಷ್ಮರು ಹತರಾದ ಮೇಲೆ ನಿನ್ನ ಪುತ್ರರು ನದಿಯನ್ನು ದಾಟಲು ದೋಣಿಯನ್ನು ಬಯಸುವಂತೆ ಮಹಾರಥನಾದ ಕರ್ಣನನ್ನು ಸ್ಮರಿಸಿದರು.

ಎಲೈ ಭಾರತನೇ, ಉಳಿದ ರಾಜರು ಕರ್ಣ, ಕರ್ಣ ಎಂದೂ, ಸೂತಪುತ್ರನು ತನ್ನ ಶರೀರವನ್ನು ತ್ಯಜಿಸುವುದಕ್ಕೆ ಸಿದ್ಧನಾದವನೂ ಆದ, ರಾಧಾಪುತ್ರನಾದ ಕರ್ಣನು ನಮಗೆ ಹಿತನಾದವನು ಎಂದೂ ಕಿರುಚಿದರು.

ಸ ಹಿ ನಾಯುದ್ಧ್ಯತ ತದಾ ದಶಾಹಾನ್ಯೇಕ ಏವ ಚ ।
ಸಾಮಾತ್ಯಬಾಂಧವಃ ಕರ್ಣಃ ಸಮಾನಯತ ಮಾಚಿರಮ್ ॥ ೩೮ ॥

ಅಮಾತ್ಯ-ಬಾಂಧವರಿಂದ ಕೂಡಿದ ಕರ್ಣನೊಬ್ಬನೇ ಹತ್ತು ದಿನಗಳವರೆಗೆ ಯುದ್ಧವನ್ನು ಮಾಡಲಿಲ್ಲ. ಅವನನ್ನು ಶೀಘ್ರವಾಗಿ ಕರೆದು ತನ್ನಿ.

ಭೀಷ್ಮೇಣ ಹಿ ಮಹಾಬಾಹುಃ ಸರ್ವಕ್ಷತ್ರಸ್ಯ ಪಶ್ಯತಃ ।
ರಥೇಷು ಗಣ್ಯಮಾನೇಷು ಬಲವಿಕ್ರಮಶಾಲಿಷು ॥೩೯॥

ಸಂಖ್ಯಾತೋಽರ್ಧರಥಃ ಕರ್ಣೋ ದೋಷಾನುಕ್ತ್ವಾ ಮಹಾರಥಃ ॥೪೦॥

ಸರ್ವಕ್ಷತ್ರಿಯರ ಎದುರಿನಲ್ಲಿ ಬಲ- ಪರಾಕ್ರಮಶಾಲಿಗಳಾದ ಮಹಾರಥರನ್ನು ಎಣಿಸುವ ಸಂದರ್ಭದಲ್ಲಿ ಭೀಷ್ಮರು ಮಹಾರಥನಾದ ಕರ್ಣನ ದೋಷಗಳನ್ನು ಹೇಳಿ ಮಹಾಬಾಹುವಾದ ಅವನನ್ನು ಅರ್ಧರಥನೆಂದು ಪರಿಗಣಿಸಿದರು.

ರಥಾತಿರಥಸಂಖ್ಯಾಯಾಂ ಯೋಽಗ್ರಣೀಃ ಶೂರ ಉತ್ತಮಃ ।
ಪಿತೃವಿತ್ತಾಂಬುದೇವೇಶಾನಪಿ ಯೋದ್ಧುಂ ಸಮುತ್ಸಹೇತ್ ॥ ೪೧ ॥

ಯಾವನು ಶ್ರೇಷ್ಠನಾದ ಶೂರನೋ, ನಾಯಕನೋ, ಯಮನ ಜೊತೆಯಲ್ಲಿ, ಕುಬೇರನ ಜೊತೆಯಲ್ಲಿ, ವರುಣನ ಜೊತೆಯಲ್ಲಿ ಮತ್ತು ಇಂದ್ರನ ಜೊತೆಯಲ್ಲಿಯೂ ಯುದ್ಧ ಮಾಡಲು ಉತ್ಸುಕನಾದವನೋ ಅಂತಹವನನ್ನು ರಥಾತಿರಥರ ಗಣನೆಯ ಸಂದರ್ಭದಲ್ಲಿ (ಅರ್ಧರಥನೆಂದು ಎಣಿಸಿದರು).

ಸ ಚ ತೇನೈವ ಕೋಪೇನ ರಾಜನ್ ಗಾಂಗೇಯಮುಕ್ತವಾನ್ ।
ತ್ವಯಿ ಯುದ್ಧ್ಯತಿ ಕೌರವ್ಯ ನಾಹಂ ಯೋತ್ಸ್ಯೇ ಕಥಂಚನ ॥ ೪೨ ॥

ಎಲೈ ರಾಜನೇ, ಅವನು ಅದೇ ಕೋಪದಿಂದ ಭೀಷ್ಮರನ್ನು ಕುರಿತು ಎಲೈ ಕೌರವ್ಯರೇ, ನೀವು ಯುದ್ಧ ಮಾಡುತ್ತಿರುವವರೆಗೆ ನಾನು ಯಾವ ಕಾರಣದಿಂದಲೂ ಯುದ್ಧವನ್ನು ಮಾಡುವುದಿಲ್ಲ.

ತ್ವಯಾ ತು ಪಾಂಡವೇಯೇಷು ನಿಹತೇಷು ಮಹಾಮೃಧೇ ।
ದುರ್ಯೋಧನಮನುಜ್ಞಾಪ್ಯ ವನಂ ಯಾಸ್ಯಾಮಿ ಕೌರವ ॥ ೪೩ ॥

ಎಲೈ ಕೌರವರೇ, ನೀವು ದೊಡ್ಡ ಯುದ್ಧದಲ್ಲಿ ಪಾಂಡವರನ್ನು ವಧಿಸಿದ ಮೇಲೆ ದುರ್ಯೋಧನನ ಅನುಮತಿಯನ್ನು ಪಡೆದು ನಾನು ಕಾಡಿಗೆ ಹೋಗುವೆನು.

ಹತೇ ವಾ ಯುಧಿ ಪಾರ್ಥೈಸ್ತು ತ್ವಯಿ ಸ್ವರ್ಗಂ ಸಮೇಯುಷಿ ।
ಹಂತಾಸ್ಮ್ಯೇಕರಥೇನೈವ ಕೃತ್ಸ್ನಾನ್ ಯಾನ್ ಮನ್ಯಸೇ ರಥಾನ್ ॥೪೪॥

ಅಥವಾ ನೀವೇ ಪಾಂಡವರಿಂದ ಹತರಾಗಿ ಸ್ವರ್ಗಕ್ಕೆ ಹೋದರೆ ನೀವು ಯಾರನ್ನು ರಥರು ಎಂದು ತಿಳಿಯುತ್ತೀರೋ ಅವರೆಲ್ಲರನ್ನೂ ಒಂದೇ ರಥದಿಂದ ಕೊಲ್ಲುವೆನು (ಎಂದು ಹೇಳಿದನು).

ಸಂಜಯಃ

ಏವಮುಕ್ತ್ವಾ ಮಹಾತೇಜಾ ದಶಾಹಾನ್ಯೇಕ ಏವ ಸಃ ।
ನಾಯುದ್ಧ್ಯತ ತದಾ ಕರ್ಣಃ ಪುತ್ರಸ್ಯ ತವ ಸಮ್ಮತೇ ॥ ೪೫ ॥

ಸಂಜಯ– ಹೀಗೆ ಹೇಳಿ ಮಹಾತೇಜಸ್ವಿಯಾದ ಕರ್ಣನೊಬ್ಬನೇ ನಿನ್ನ ಪುತ್ರನ ಅನುಮತಿಯನ್ನು ಪಡೆದು ಹತ್ತುದಿನಗಳ ಕಾಲ ಯುದ್ಧವನ್ನು ಮಾಡಲಿಲ್ಲ.

ಭೀಷ್ಮಸ್ತ್ವಮಿತವಿಕ್ರಾಂತಃ ಪಾಂಡವೇಯಸ್ಯ ಪಾರ್ಥಿವ ।
ಜಘಾನ ಸಮರೇ ಯೋಧಾನ್ ಅಸಂಖ್ಯೇಯಪರಾಕ್ರಮಾನ್ ॥ ೪೬ ॥

ಅಮಿತಪರಾಕ್ರಮಿಗಳಾದ ಭೀಷ್ಮರು ಎಲೈ ರಾಜನೇ, ಅಗಣಿತ ಪರಾಕ್ರಮವುಳ್ಳ ಪಾಂಡವಸೇನೆಯ ಯೋಧರನ್ನು ಯುದ್ಧದಲ್ಲಿ ಕೊಂದರು.

ತಸ್ಮಿಂಸ್ತು ನಿಹತೇ ಶೂರೇ ತವ ಪುತ್ರಾ ಮಹಾರಥಮ್ ।
ಕರ್ಣಂ ರಾಜಂಸ್ತದಾ ಜಗ್ಮುಃ ತರ್ತುಕಾಮಾ ಇವ ಪ್ಲವಮ್ ॥ ೪೭ ॥

ಎಲೈ ರಾಜನೇ, ಅಂತಹ ಶೂರರಾದ ಭೀಷ್ಮರು ಹತರಾದ ಮೇಲೆ ನಿನ್ನ ಪುತ್ರರು ನದಿಯನ್ನು ದಾಟಲು ದೋಣಿಯನ್ನು ಬಯಸುವಂತೆ ಮಹಾರಥನಾದ ಕರ್ಣನನ್ನು ಸ್ಮರಿಸಿದರು.

ತಾವಕಾಸ್ತವ ಪುತ್ರಾಶ್ಚ ಸಹಿತಾಃ ಸರ್ವರಾಜಭಿಃ ।
ಹಾ ಕರ್ಣ ಇತಿ ಚಕ್ರಂದುಃ ಕಾಲೋಽಯಮಿತಿ ಚಾಬ್ರುವನ್ ॥ ೪೮ ॥

ಎಲ್ಲ ರಾಜರಿಂದ ಸಹಿತರಾದ ನಿನ್ನ ಯೋಧರು ಮತ್ತು ಪುತ್ರರು ಅಯ್ಯೋ ಕರ್ಣ! ಎಂದು ಆಕ್ರಂದನವನ್ನು ಮಾಡಿದರು. ಇದು ನೀನು ಪೌರುಷವನ್ನು ತೋರಿಸಬೇಕಾದ ಕಾಲ ಎಂದು ಹೇಳಿದರು.

ಜಾಮದಗ್ನ್ಯಾಭ್ಯನುಜ್ಞಾತಮ್ ಅಸ್ತ್ರೈರ್ದುರ್ವಾರಪೌರುಷಮ್ ।
ಅಗಮನ್ ಮನಸಾ ಕರ್ಣಂ ಮನ್ಯುನಾಭ್ಯಧಿಕೇಷ್ವಿಹ ॥ ೪೯ ॥

ಶ್ರೇಷ್ಠರಾದ ಪಾಂಡವರಲ್ಲಿ ಕ್ರೋಧವನ್ನು ಹೊಂದಿದ ಕಾರಣದಿಂದ ಆ ರಾಜರು ಪರಶುರಾಮರಿಂದ ಅನುಜ್ಞೆಯನ್ನು ಪಡೆದು ಅಸ್ತ್ರಗಳಿಂದ ನಿವಾರಿಸಲು ಸಾಧ್ಯವಿಲ್ಲದಂತಹ ಪರಾಕ್ರಮವನ್ನು ಹೊಂದಿದ ಕರ್ಣನನ್ನು ಮನಸ್ಸಿನಲ್ಲಿಯೇ ಯೋಚಿಸಿದರು.

ಸ ಹಿ ಶಕ್ತೋ ರಣೇ ರಾಜಂಸ್ತ್ರಾತುಮಸ್ಮಾನ್ಮಹಾಭಯಾತ್ ।
ತ್ರಿದಶಾನಿವ ಗೋವಿಂದಃ ಸತತಂ ಸ್ವಾಸುರಾದ್ ಭಯಾತ್ ॥೫೦॥

ವಿಷ್ಣುವು ಅಸುರರ ಭಯದಿಂದ ದೇವತೆಗಳನ್ನು ಸತತವಾಗಿ ರಕ್ಷಿಸುವಂತೆ ಎಲೈ ರಾಜನೇ, ಈ ಮಹಾಭಯದಿಂದ ತಮ್ಮನ್ನು ರಕ್ಷಿಸಲು ರಣರಂಗದಲ್ಲಿ ಅವನೊಬ್ಬನೇ ಶಕ್ತನಾಗಿದ್ದಾನೆ (ಎಂದು ಚಿಂತಿಸಿದರು).

ವೈಶಂಪಾಯನಃ

ತಥಾ ತು ಸಂಜಯೇ ಕರ್ಣಂ ಕೀರ್ತಯಾನೇ ಪುನಃಪುನಃ ।
ಅಶೀತಮಿವ ನಿಃಶ್ವಸ್ಯ ಧೃತರಾಷ್ಟ್ರೋಽಬ್ರವೀದಿದಮ್ ॥ ೫೧ ॥

ವೈಶಂಪಾಯನ– ಹಾಗೆ, ಸಂಜಯನು ಪುನಃ ಪುನಃ ಕರ್ಣನ ಹೆಸರನ್ನು ಹೇಳುತ್ತಿರಲು ಧೃತರಾಷ್ಟ್ರನು ಬಿಸಿಯಾದ ನಿಟ್ಟುಸಿರನ್ನು ಬಿಟ್ಟು ಈ ಮಾತನ್ನಾಡಿದನು.

ಯತ್ ತದ್ ವೈಕರ್ತನಂ ಕರ್ಣಮಗಮದ್ವೋ ಮನಸ್ತದಾ ।
ಅಪ್ಯರಕ್ಷತ್ ಸ ರಾಧೇಯಃ ಸೂತಪುತ್ರಸ್ತನುತ್ಯಜಃ ॥ ೫೨ ॥

ಧೃತರಾಷ್ಟ್ರ– ನಿಮ್ಮ ಮನಸ್ಸು ಆಗ ಕರ್ಣನನ್ನು ಕುರಿತು ಹೋಯಿತಪ್ಪೆ! ಶರೀರತ್ಯಾಗಕ್ಕೆ ಸಿದ್ಧನಾದ ಆ ಸೂತಪುತ್ರನಾದ ಕರ್ಣನು ನಿಮ್ಮನ್ನು ರಕ್ಷಿಸಿದನೇ?

ಅಪಿ ತನ್ನ ಮೃಷಾ ಕರ್ಣೋ ಯುಧಿ ಸತ್ಯಪರಾಕ್ರಮಃ ।
ಸಂಭ್ರಾಂತಾನಾಂ ತದಾರ್ತಾನಾಂ ತ್ರಸ್ತಾನಾಂ ತ್ರಾಣಮಿಚ್ಛತಾಮ್॥೫೩॥

ಸತ್ಯಪರಾಕ್ರಮನಾದ ಕರ್ಣನು ಸಂಭ್ರಾಂತರಾಗಿ, ಆರ್ತರಾಗಿ, ಹೆದರಿ ಅವರಿಂದ ರಕ್ಷಣೆಯನ್ನು ಬಯಸುವವರ ಆಸೆಯನ್ನು (ಸ್ಮರಣೆಯನ್ನು) ವ್ಯರ್ಥಗೊಳಿಸಲಿಲ್ಲವಷ್ಟೆ?

ಅಪಿ ತತ್ ಪೂರಯಾಂಚಕ್ರೇ ಧನುರ್ಧರವರೋ ಯುಧಿ ।
ಯತ್ ತದ್ ವಿನಿಹತೇ ಭೀಷ್ಮೇ ಕೌರವಾಣಾಂ ಮಹಾವ್ರತೇ ॥ ೫೪ ॥

ಧನುರ್ಧಾರಿಗಳಲ್ಲಿ ಶ್ರೇಷ್ಠನಾದ ಅವನು ಕೌರವರಿಗೆ ಶ್ರೇಷ್ಠವಾದ ಆಶ್ರಯರಾಗಿದ್ದ ಭೀಷ್ಮರು ಹತರಾದಾಗ ಉಂಟಾದ ಶೂನ್ಯಪ್ರದೇಶವನ್ನು ತುಂಬಿದನಷ್ಟೆ?

ತತ್ ಖಂಡಂ ಪೂರಯನ್ ಕರ್ಣಃ ಪರೇಷಾಮಾದಧದ್ ಭಯಮ್ ।
ಕೃತವಾನ್ ಮಮ ಪುತ್ರಾಣಾಂ ಜಯಾಶಾಂ ಸಫಲಾಮಪಿ ॥ ೫೫ ॥

ಸೈನ್ಯದ ಆ ಭಾಗವನ್ನು ತುಂಬಿ ಶತ್ರುಗಳಿಗೆ ಭಯವನ್ನುಂಟು ಮಾಡುತ್ತಾ, ನನ್ನ ಪುತ್ರರ ಜಯದ ಆಸೆಯನ್ನು ಸಫಲವನ್ನಾಗಿ ಮಾಡಿದನೆ?

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಪ್ರಥಮೋऽಧ್ಯಾಯಃ ॥

ದ್ರೋಣಾಭಿಷೇಕಪರ್ವಣಿ ಪ್ರಥಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಮೂರನೆಯ ಅಧ್ಯಾಯ **ಮುಗಿಯಿತು.**

★ ★ ★ ★ ★

ಎರಡನೆಯ ಅಧ್ಯಾಯ

ಪಾಂಡವರ ಉಚ್ಛೇದನದ ಪ್ರತಿಜ್ಞೆಯನ್ನು ಮಾಡಿ
ಕರ್ಣನಿಂದ ಯುದ್ಧಕ್ಕೆ ಪ್ರಯಾಣ.

ಸಂಜಯಃ

ಶ್ರುತ್ವಾ ತು ಕರ್ಣಃ ಪುರುಷೇಂದ್ರಮಚ್ಯುತಂ
ನಿಪಾತಿತಂ ಶಾಂತನವಂ ರಿಪುಘ್ನಮ್ ।
ಅಘೋಪಾಯಾತ್ ತೂರ್ಣಮಮಿತ್ರಘಾತೀ
ಧನುರ್ಧರಾಣಾಂ ಪ್ರವರಃ ಕ್ಷಿತೌ ರುಷಾ ॥ ೧ ॥

ಸಂಜಯ– ಧನುರ್ಧಾರಿಗಳಲ್ಲಿ ಶ್ರೇಷ್ಠನಾದವನೂ, ಶತ್ರುಸಂಹಾರಿಯಾದವನೂ ಆದ ಕರ್ಣನು ಪುರುಷಶ್ರೇಷ್ಠರೂ, ತಮ್ಮ ವ್ರತದಿಂದ ಚ್ಯುತರಾಗದವರೂ, ಶತ್ರು ಸಂಹಾರಕರೂ ಆದ ಭೀಷ್ಮರು ನಿಪಾತಿತರಾದುದನ್ನು ಕೇಳಿ ಕೋಪದಿಂದ ಅವರ ಬಳಿಗೆ ಹೊರಟನು.

ಹತಂ ಭೀಷ್ಮಂ ಚಾಧಿರಥಿರ್ವಿದಿತ್ವಾ
ಭಿನ್ನಾಂ ನಾವಂ ವಾರಿಧಾವತ್ಯಗಾಧೇ ।
ಸೋದರ್ಯವದ್ ವ್ಯಸನಾತ್ ಸೂತಪುತ್ರಃ
ಸಂತಾರಯಿಷ್ಯಂಸ್ತವ ಪುತ್ರಸೇನಾಮ್ ॥ ೨ ॥

ಅಧಿರಥಪುತ್ರನಾದ ಕರ್ಣನು ಅಗಾಧವಾದ ಸಮುದ್ರದಲ್ಲಿ ಭಿನ್ನವಾದ ನೌಕೆಯಂತೆ ಭೀಷ್ಮರು ಬಿದ್ದುದನ್ನು ತಿಳಿದು, ಸೂತಪುತ್ರನಾದ ಅವನು ನಿನ್ನ ಪುತ್ರರ ಸೇನೆಯನ್ನು ಸಂಕಟದಿಂದ ಪಾರುಮಾಡಲು ಬಯಸಿ ಸಹೋದರನಂತೆ ಹೊರಟನು.

ಹತೇ ತು ಭೀಷ್ಮೇ ರಥಸತ್ತಮೇ ತದಾ
ನಿಮಜ್ಜತೀಂ ನಾವಮಿವಾರ್ಣವೇ ಕುರೂನ್ ।
ಪಿತೇವ ಪುತ್ರಾಂಸ್ತ್ವರಿತೋऽಭ್ಯಗಾತ್ ತದಾ
ಸಂತಾರಯಿಷ್ಯಂಸ್ತವ ಪುತ್ರಸ್ಯ ಸೇನಾಮ್ ॥ ೩ ॥

ರಥಶ್ರೇಷ್ಠರಾದ ಭೀಷ್ಮರು ಹತರಾಗುತ್ತಿರಲು, ಸಮುದ್ರದಲ್ಲಿ ಮುಳುಗುವ ನೌಕೆಯಂತಿದ್ದ ಕುರುಗಳನ್ನು ಮತ್ತು ನಿನ್ನ ಪುತ್ರನ ಸೈನ್ಯವನ್ನು ಸಂಕಟದಿಂದ ಪಾರು

ಮಾಡಲು ಬಯಸಿ, ಆಗ ತಂದೆಯು ಪುತ್ರರ ಕಡೆಗೆ ಹೋಗುವಂತೆ ತ್ವರಿತವಾಗಿ ಹೊರಟನು.

ಸಮ್ಮೃಜ್ಯ ದಿವ್ಯಂ ಧನುರಾತತಜ್ಯಂ
ಸ ರಾಮದತ್ತಂ ರಿಪುಸಂಘಹಂತಾ ।
ಬಾಣಾಂಶ್ಚ ಕಾಲಾನಲತುಲ್ಯರೂಪಾನ್
ಉಲ್ಲಾಲಯನ್ ವಾಕ್ಯಮಿದಂ ಬಭಾಷೇ ॥ ೪ ॥

ಪರಶುರಾಮರು ಕೊಟ್ಟ ದೀರ್ಘವಾದ ದಿವ್ಯವಾದ ತನ್ನ ಧನುಸ್ಸಿನ ಹೆದೆಯನ್ನು ಸವರುತ್ತಾ, ಕಾಲಾನಲ ಸದೃಶವಾದ ರೂಪವನ್ನು ಹೊಂದಿದ ಬಾಣಗಳನ್ನು ಲಾಲಿಸುತ್ತಾ, ರಿಪುಸಮೂಹ ಘಾತಕನಾದ ಅವನು ಈ ಮಾತನ್ನು ಆಡಿದನು.

ಯಸ್ಮಿನ್ ಧೃತಿರ್ಧರ್ಮದಮೌ ಬಲಂ ಹ್ರೀಃ
ಸತ್ಯಂ ಚ ದಾನಂ ಚ ಪರಾಕ್ರಮಶ್ಚ ।
ಶಸ್ತ್ರಾಣಿ ದಿವ್ಯಾನ್ಯಥ ಸನ್ನತಿಶ್ರೀಃ
ಧೀಶ್ಚಾಪಿ ಭೀಷ್ಮೇ ನಿಯತಾಃ ಸದೈವ ॥ ೫ ॥

ಬ್ರಹ್ಮದ್ವಿಷಘ್ನೇ ಸತತಂ ಕೃತಜ್ಞೇ
ಸನಾತನೀ ಚಾಂದ್ರಮಸೀವ ಲಕ್ಷ್ಮೀಃ ।
ಸ ಚೇತ್ ಪ್ರಶಾಂತಃ ಪರವೀರಹಂತಾ
ಸರ್ವಾನನ್ಯಾನಾತುರಾನದ್ಯ ಮನ್ಯೇ ॥ ೬ ॥

ಯಾವ ಭೀಷ್ಮರಲ್ಲಿ ಧೈರ್ಯ, ಧರ್ಮ, ಇಂದ್ರಿಯನಿಗ್ರಹ, ಬಲ, ನಾಚಿಕೆ, ಸತ್ಯ, ದಾನ, ಪರಾಕ್ರಮ, ದಿವ್ಯಶಸ್ತ್ರಗಳು, ವಿನಯ ಸಂಪತ್ತು ಮತ್ತು ಬುದ್ಧಿಯು ಚಂದ್ರನಲ್ಲಿಯ ಶಾಶ್ವತ ಕಾಂತಿಯಂತೆ ಯಾವಾಗಲೂ ನಿಯತವಾಗಿದ್ದವೋ, ಯಾವ ಭೀಷ್ಮರು ಬ್ರಹ್ಮದ್ವೇಷಿಗಳನ್ನು ಸಂಹರಿಸಿ ಯಾವಾಗಲೂ ಕೃತಜ್ಞರಾಗಿದ್ದರೋ, ಅಂತಹ ಪರವೀರಘಾತಕರಾದ ಅವರು ಪ್ರಶಾಂತರಾದರೆ ಉಳಿದ ಎಲ್ಲರನ್ನೂ ನಾನು ಈ ದಿನ ರೋಗಗ್ರಸ್ತರಾದವರೆಂದು ತಿಳಿಯುತ್ತೇನೆ.

ನೇಹ ಧ್ರುವಂ ಕಿಂಚನ ಜಾತು ವಿದ್ಯತೇ
ಅಸ್ಮಿಲ್ಲೋಕೇ ಕರ್ಮಣೋऽನಿತ್ಯಯೋಗಾತ್ ।

ಸೂರ್ಯೋದಯೇ ಕೋ ಹಿ ವಿಮುಕ್ತಸಂಶಯೋ
ಭಾವಂ ಕುರ್ಯಾತಾದ್ಯ ಮಹಾವ್ರತೇ ಹತೇ ॥ ೭ ॥

ಈ ಲೋಕದಲ್ಲಿ ಅನಿತ್ಯವಾದ ಕರ್ಮಗಳ ಕಾರಣದಿಂದ ದೃಢವಾದುದು ಯಾವುದೂ ಇಲ್ಲ. ಸೂರ್ಯನ ಉದಯಕ್ಕೆ ಸದೃಶವಾದ ಉದಯವನ್ನು ಹೊಂದಿದ್ದ ಮಹಾವ್ರತರಾದ ಭೀಷ್ಮರು ಹತರಾದ ಮೇಲೆ ಈ ದಿನ ಯಾವನು ನಿಸ್ಸಂಶಯವಾಗಿ 'ನಾನು ಪಾಂಡವರನ್ನು ಗೆಲ್ಲುವೆನು' ಎಂಬ ಬುದ್ಧಿಯನ್ನು ಹೊಂದಿಯಾನು?

ವಸುಪ್ರಭಾವೇ ವಸುವೀರ್ಯಸಂಭವೇ
ಗತೇ ವಸೂನೇವ ವಸುಂಧರಾಧಿಪೇ ।
ವಸೂನಿ ಪುತ್ರಾಂಶ್ಚ ವಸುಂಧರಾಂ ತಥಾ
ಕುರೂಂಶ್ಚ ಶೋಚಧ್ವಮಿಮಾಂ ಚ ವಾಹಿನೀಮ್ ॥ ೮ ॥

ವಸುಗಳ ಪ್ರಭಾವವುಳ್ಳವರೂ, ವಸುವೀರ್ಯದಿಂದ ಜನಿಸಿದವರೂ, ವಸುಂಧರಾಧಿಪರೂ ಆದ ಭೀಷ್ಮರು ವಸುಗಳನ್ನೇ ಹೋಗಿ ಸೇರಿದ ಮೇಲೆ ಅವರ ಸಂಪತ್ತನ್ನು, ಪುತ್ರರನ್ನು, ಭೂಮಿಯನ್ನು, ಕುರುಗಳನ್ನು ಮತ್ತು ಈ ಸೈನ್ಯವನ್ನು ಕುರಿತು ಶೋಕವನ್ನು ಹೊಂದುವವರಾಗಿ;

ಸಂಜಯಃ

ಮಹಾಪ್ರಭಾವೇ ವರದೇ ನಿಪಾತಿತೇ
ಲೋಕಜ್ಯೇಷ್ಠೇ ಶಾಂತನವೇऽಮಿತೌಜಸಿ ।
ಪರಾಜಿತೇಷು ಭರತೇಷು ದುರ್ಮನಾಃ
ಕರ್ಣೋ ಭೃಶಂ ನಿಃಶ್ವಸನ್ನಶ್ರ್ವವರ್ತಯತ್ ॥ ೯ ॥

ಮಹಾಪ್ರಭಾವವುಳ್ಳವರೂ, ಲೋಕದಲ್ಲಿ ಹಿರಿಯರಾದವರೂ, ಅಮಿತ ಪರಾಕ್ರಮಿಗಳೂ, ವರಪ್ರದರೂ ಆದ ಭೀಷ್ಮರು ನಿಪಾತವನ್ನು ಹೊಂದುತ್ತಿರಲು, ಕೌರವರು ಪರಾಜಿತರಾಗುತ್ತಿರಲು ಖೇದಗೊಂಡ ಕರ್ಣನು ಬಹಳವಾಗಿ ನಿಟ್ಟುಸಿರನ್ನು ಬಿಡುತ್ತಾ ಕಣ್ಣೀರನ್ನು ಸುರಿಸಿದನು.

ಇದಂ ತು ರಾಧೇಯವಚೋ ನಿಶಮ್ಯ ತೇ
ಸುತಾಶ್ಚ ರಾಜಂಸ್ತವ ಸೈನಿಕಾಶ್ಚ ಯೇ ।

ಪರಸ್ಪರಂ ಚುಕ್ರುಶುರಂಬು ಚಾರ್ತಿಜಂ
ತದಾऽಶು ನೇತ್ರೈರ್ಮುಮುಚುರ್ಹಿ ಶಬ್ದವತ್ ॥ ೧೦ ॥

ಎಲೈ ರಾಜನೇ, ಕರ್ಣನ ಈ ಮಾತುಗಳನ್ನು ಕೇಳಿ ಆ ನಿನ್ನ ಪುತ್ರರು ಮತ್ತು ಸೈನಿಕರು ಪರಸ್ಪರವಾಗಿ ಕಿರುಚಿ ತಮ್ಮ ನೇತ್ರಗಳಿಂದ ದುಃಖದ ಕಣ್ಣೀರನ್ನು ಶಬ್ದ ಸಹಿತವಾಗಿ ಸುರಿಸಿದರು.

ಪ್ರವರ್ತಮಾನೇ ತು ಪುನರ್ಮಹಾಹವೇ
ಮಹಾರಥಾನಾಂ ಚ ಮದೇ ಸಮುತ್ಥಿತೇ ।
ಅಥಾಬ್ರವೀದ್ ಹರ್ಷಕರಂ ವಚಸ್ತದಾ
ರಥರ್ಷಭಾನ್ ಸರ್ವಮಹಾರಥರ್ಷಭಃ ॥ ೧೧ ॥

ಪುನಃ ದೊಡ್ಡ ಯುದ್ಧವು ಪ್ರವೃತ್ತವಾಗುತ್ತಿರಲು ಮಹಾರಥರಿಗೆ ಮದವು ಉಂಟಾಗುತ್ತಿರಲು, ಸರ್ವಮಹಾರಥರಲ್ಲಿ ಶ್ರೇಷ್ಠನಾದ ಕರ್ಣನು ಆ ರಥಶ್ರೇಷ್ಠರಿಗೆ ಹರ್ಷಕರವಾದ ಮಾತುಗಳನ್ನು ಆಡಿದನು.

ಜಗತ್ಯನಿತ್ಯೇ ಸತತಂ ಪ್ರಧಾವಿತೇ
ವಿಚಿಂತಯನ್ನಸ್ಥಿರಮದ್ಯ ಲಕ್ಷಯೇ ।
ಭವತ್ಸು ತಿಷ್ಠತ್ಸ್ವಿಹ ಪಾತಿತೋ ರಣೇ
ಗಿರಿಪ್ರಕಾಶಃ ಕುರುಪುಂಗವಃ ಪರೈಃ ॥ ೧೨ ॥

ಸತತವಾಗಿ ಓಡುತ್ತಿರುವ ಈ ಅನಿತ್ಯವಾದ ಜಗತ್ತಿನಲ್ಲಿ ಯೋಚನೆ ಮಾಡಿದರೆ ಈ ದಿನ ಎಲ್ಲವೂ ಅಸ್ಥಿರವೆಂದು ಭಾವಿಸುತ್ತೇನೆ. ನೀವೆಲ್ಲರೂ ಇರುವಾಗಲೇ ಪರ್ವತದಂತಿದ್ದ ಕುರುಪುಂಗವರಾದ ಭೀಷ್ಮರು ಯುದ್ಧದಲ್ಲಿ ಶತ್ರುಗಳಿಂದ ಕೆಡವಲ್ಪಟ್ಟರು.

ನಿಪಾತಿತೇ ಶಾಂತನವೇ ನರರ್ಷಭೇ
ದಿವಾಕರೇ ಭೂತಳಮಾಶ್ರಿತೇ ಯಥಾ ।
ನ ಪಾರ್ಥಿವಾಃ ಸೋಢುಮಲಂ ಧನಂಜಯಂ
ಗಿರಿಪ್ರವೋಢಾರಮಿವಾನಿಲಂ ದ್ರುಮಾಃ ॥ ೧೩ ॥

ಸೂರ್ಯನು ಭೂತಳದಲ್ಲಿ ಬಿದ್ದಂತೆ ನರಶ್ರೇಷ್ಠರಾದ ಭೀಷ್ಮರು ಭೂತಳದಲ್ಲಿ ಕೆಡವಲ್ಪಡುತ್ತಿರಲು ಈ ದಿನ ಪರ್ವತವನ್ನೇ ಹೊತ್ತುಕೊಂಡು ಹೋಗುವ ವಾಯುವನ್ನು ವೃಕ್ಷಗಳು ತಡೆಯಲು ಸಾಧ್ಯವಿಲ್ಲದಂತೆ ಯಾವ ರಾಜರೂ ಅರ್ಜುನನನ್ನು ತಡೆಯಲು (ಸಹಿಸಲು) ಸಮರ್ಥರಾಗುವುದಿಲ್ಲ.

ಹತಪ್ರಧಾನಂ ತ್ವಿದಮಾರ್ತಮಾತುರಂ
ಪರೈರಭಿಗ್ರಸ್ತಮನಾಥವದ್ ದ್ರುತಮ್ ।
ಮಯಾ ಕುರೂಣಾಂ ಪರಿಪಾಲ್ಯಮಾಹವೇ
ಬಲಂ ತಥಾ ತೇನ ಮಹಾತ್ಮನಾ ಯಥಾ ॥ ೧೪ ॥

ಪ್ರಧಾನರನ್ನು ಕಳೆದುಕೊಂಡ ಈ ಸೈನ್ಯವು ಆರ್ತವಾಗಿ ರೋಗದಿಂದ ಕೂಡಿದಂತಿದೆ. ಶತ್ರುಗಳಿಂದ ಉಪದ್ರವಕ್ಕೆ ಒಳಗಾಗಿ ಅನಾಥರಂತೆ ಓಡುತ್ತಿದೆ. ನಾನು ಕುರುಗಳ ಸೈನ್ಯವನ್ನು ಯುದ್ಧದಲ್ಲಿ ಆ ಮಹಾತ್ಮರು ರಕ್ಷಿಸಿದಂತೆಯೇ ರಕ್ಷಿಸಬೇಕು.

ಸಮಾಹಿತಂ ಚಾತ್ಮನಿ ಭಾರಮೀದೃಶಂ
ಜಗತ್ ತಥಾऽನಿತ್ಯಮಹಂ ಚ ಲಕ್ಷಯೇ ।
ನಿಪಾತಿತಂ ಚಾಹವಶೌಂಡಮಾಹವೇ
ಕಥಂ ನು ಕುರ್ಯಾಮಹಮಾಹವೇ ಭಯಮ್ ॥ ೧೫ ॥

ನನ್ನ ಮೇಲೆ ಹೊರಿಸಿದ ಈ ಭಾರವನ್ನು ಬಹಳ ಭಾರಭೂತವಾದುದು ಎಂದು ಭಾವಿಸುತ್ತೇನೆ. ಹಾಗೆಯೇ ಜಗತ್ತು ಅನಿತ್ಯವಾದುದು ಎಂದೂ ಭಾವಿಸುತ್ತೇನೆ. ಯುದ್ಧಕುಶಲರಾದ ಭೀಷ್ಮರು ರಣರಂಗದಲ್ಲಿ ಕೆಡವಲ್ಪಡುವುದನ್ನು ನೋಡಿ ನಾನು ಹೇಗೆ ಯುದ್ಧಕ್ಕೆ ಹೆದರಲು ಸಾಧ್ಯ ?

ಅಹಂ ಹಿ ತಾನ್ ಕುರುವೃಷಭಾನಜಿಹ್ಮಗೈಃ
ಪ್ರಯಾಪಯನ್ ಯಮಸದನಂ ರಣೇ ಚರನ್
ಯಶಃ ಪರಂ ಜಗತಿ ವಿಭಾವ್ಯ ವರ್ತಯೇ
ಪರೈರ್ಹತಃ ಸ ಇವ ಭವಾಮಿ ವಾ ಪುನಃ ॥ ೧೬ ॥

ನಾನು ಕುರುಶ್ರೇಷ್ಠರಾದ ರಣರಂಗದಲ್ಲಿ ಸಂಚರಿಸುತ್ತಾ ಆ ಪಾಂಡವರನ್ನು ನೇರವಾಗಿ ಸಾಗುವ ನನ್ನ ಬಾಣಗಳಿಂದ ಯಮಲೋಕಕ್ಕೆ ಕಳುಹಿಸುತ್ತಾ ಜಗತ್ತಿನಲ್ಲಿ

ಶ್ರೇಷ್ಠವಾದ ಕೀರ್ತಿಯನ್ನು ಹೊಂದಿ ಬದುಕುತ್ತೇನೆ ಅಥವಾ ಅವರಿಂದಲೇ ಹತನಾಗಿ ಭೀಷ್ಮರಂತೆಯೇ ಆಗುತ್ತೇನೆ.

ಯುಧಿಷ್ಠಿರೋ ಧೃತಿಮತಿಸತ್ಯಸತ್ತ್ವವಾನ್
ವೃಕೋದರೋ ಗಜಶತತುಲ್ಯವಿಕ್ರಮಃ ।
ಅಥಾರ್ಜುನಸ್ತ್ರಿದಶವರಾತ್ಮಜೋ ಯತೋ
ನ ತದ್ಬಲಂ ಸುಜಯಮಿಹಾಮರೈರಪಿ ॥ ೧೭ ॥

ಯುಧಿಷ್ಠಿರನು ಧೈರ್ಯ, ಬುದ್ಧಿ, ಸತ್ಯ ಮತ್ತು ಬಲಗಳಿಂದ ಕೂಡಿದವನು. ವೃಕೋದರನು ನೂರು ಗಜಗಳಿಗೆ ಸಮಾನವಾದ ಪರಾಕ್ರಮವುಳ್ಳವನು ಮತ್ತು ಅರ್ಜುನನು ದೇವಶ್ರೇಷ್ಠನಾದ ಇಂದ್ರನ ಪುತ್ರನು. ಆ ಕಾರಣದಿಂದ ದೇವತೆಗಳೂ ಆ ಸೈನ್ಯವನ್ನು ಸುಲಭವಾಗಿ ಗೆಲ್ಲಲಾರರು.

ಯಮೌ ರಣೇ ಯತ್ರ ಯಮೋಪಮೌ ಬಲೇ
ಸಸಾತ್ಯಕಿರ್ಯತ್ರ ಚ ದೇವಕೀಸುತಃ ।
ಸ ತದ್ಬಲಂ ಕಃ ಪುರುಷೋಽಭ್ಯುಪೇಯಿವಾನ್
ನಿವರ್ತತೇ ಮೃತ್ಯುಮುಖಾದಿವಾಸಕೃತ್ ॥ ೧೮ ॥

ಯಮರಿಗೆ ಸದೃಶರಾದ ನಕುಲ-ಸಹದೇವರು ಯಾವ ಸೈನ್ಯದಲ್ಲಿ ಇರುತ್ತಾರೆಯೋ, ಯಾವ ಸೈನ್ಯದಲ್ಲಿ ಸಾತ್ಯಕಿಯಿಂದ ಸಹಿತನಾದ ದೇವಕೀಪುತ್ರನು ಇರುತ್ತಾನೆಯೋ ಆ ಸೈನ್ಯವನ್ನು ಪ್ರವೇಶಿಸಿ ಮೃತ್ಯುಮುಖದಿಂದ ಹಿಂದೆ ಬಂದಂತೆ ಯಾವನು ಪುನಃ ಹಿಂದೆ ಬರುತ್ತಾನೆ?

ತಪೋಽಭ್ಯುದೀರ್ಣಂ ತಪಸೈವ ಧಾರ್ಯತೇ
ಬಲಂ ಬಲೇನಾಪ್ಯರಿಣಾ ಮನಸ್ವಿನಾ ।
ಮನಶ್ಚ ಮೇ ಶತ್ರುನಿವಾರಣೇ ಧ್ರುವಂ
ಸ್ವರಕ್ಷಣೇ ಚಾಚಲವದ್ ವ್ಯವಸ್ಥಿತಮ್ ॥ ೧೯ ॥

ಶ್ರೇಷ್ಠವಾದ ತಪಸ್ಸು ತಪಸ್ಸಿನಿಂದಲೇ ಎದುರಿಸಲ್ಪಡುತ್ತದೆ. ಸೈನ್ಯವೂ ಸಹ ಧೈರ್ಯಶಾಲಿಯಾದ ಶತ್ರುಭೂತವಾದ ಸೈನ್ಯದಿಂದ ಎದುರಿಸಲ್ಪಡುತ್ತದೆ. ನನ್ನ ಮನಸ್ಸು ನನ್ನ ರಕ್ಷಣೆಯಲ್ಲಿಯೂ ಮತ್ತು ಶತ್ರುನಿವಾರಣೆಯಲ್ಲಿಯೂ ಪರ್ವತದಂತೆ ಸ್ಥಿರವಾಗಿದೆ.

ಏವಂ ತೇಷಾಂ ಬಾಧಮಾನಃ ಪ್ರಭಾವಂ
ಗತ್ವೈವಾಹಂ ತಾನ್ ಜಯಾಮ್ಯದ್ಯ ಸೂತ ।
ಮಿತ್ರದ್ರೋಹೋ ಮರ್ಷಣೀಯೋ ನ ಮೇಽಯಮ್
ಭಗ್ನೇ ಸೈನ್ಯೇ ಯಃ ಸಮೇಯಾತ್ ಸ ಮಿತ್ರಮ್ ॥ ೨೦ ॥

ಎಲೈ ಸಾರಥಿಯೇ, ಈಗ ನಾನು ಅವರ ಪ್ರಭಾವವನ್ನು ಬಾಧಿಸಿ ಈ ದಿನ ರಣರಂಗವನ್ನು ಸೇರಿ ಅವರನ್ನು ಗೆಲ್ಲುತ್ತೇನೆ. ಈ ಮಿತ್ರದ್ರೋಹವನ್ನು ನಾನು ಸಹಿಸಲಾರೆ. ಸೈನ್ಯವು ಭಗ್ನವಾಗಿರುವಾಗ ಯಾವನು ಸಹಾಯಕ್ಕೆ ಒದಗುತ್ತಾನೆಯೋ ಅವನೇ ಮಿತ್ರನಾದವನು.

ಆಹುರ್ಹ್ಯೇತತ್ ಸತ್ಪುರುಷಸ್ಯ ಕರ್ಮ
ತ್ಯಕ್ತ್ವಾ ಪ್ರಾಣಾನ್ ಯೋಧಯೇದ್ ಯತ್ ಸಪತ್ನೈಃ ।
ಸರ್ವಾನ್ ಶತ್ರೂನಾಹವೇಽಹಂ ಹನಿಷ್ಯೇ
ತೈರ್ವಾ ಹತೋ ಮೃತ್ಯುಲೋಕಂ ಗಮಿಷ್ಯೇ ॥ ೨೧ ॥

ಪ್ರಾಣಗಳನ್ನು ತ್ಯಜಿಸಿ ಶತ್ರುಗಳ ಜೊತೆಯಲ್ಲಿ ಯುದ್ಧವನ್ನು ಮಾಡುವುದನ್ನು ಸತ್ಪುರುಷರು ಮಾಡಬೇಕಾದ ಕಾರ್ಯವೆಂದು ಹಿರಿಯರು ಹೇಳುತ್ತಾರೆ. ನಾನು ಎಲ್ಲ ಶತ್ರುಗಳನ್ನೂ ಯುದ್ಧದಲ್ಲಿ ಕೊಲ್ಲುವೆನು ಅಥವಾ ಅವರಿಂದ ಕೊಲ್ಲಲ್ಪಟ್ಟು ಮೃತ್ಯುಲೋಕಕ್ಕೆ ಹೋಗುವೆನು.

ಸಂಪ್ರಾಕೃಷ್ಟೇ ರುದಿತೇ ಸ್ತ್ರೀ ಕುಮಾರೇ
ಪರಾಜಿತೇಽಪೌರುಷೇ ಧಾರ್ತರಾಷ್ಟ್ರೇ ।
ಮಯಾ ಕಾರ್ಯಂ ಸಾಹ್ಯಮದ್ಯೈವ ಸೂತ
ತಸ್ಮಾಚ್ಛತ್ರೂನ್ ಧಾರ್ತರಾಷ್ಟ್ರಸ್ಯ ಜೇಷ್ಯೇ ॥ ೨೨ ॥

ಶಿಶುವು ಅತ್ತರೆ ತಾಯಿಯು ಅಳುತ್ತಾಳೆ. ಹಾಗೆ ಅಳುವುದು ವೀರಭಟನ ಧರ್ಮವಲ್ಲ. ಎಲೈ ಸಾರಥಿಯೇ, ದುರ್ಯೋಧನನು ಹೀನಪೌರುಷನಾಗಿ ಪರಾಜಿತನಾಗಿರುವಾಗ ನಾನು ಈ ದಿನ ಅವನಿಗೆ ಸಹಾಯವನ್ನು ಮಾಡಲೇಬೇಕು. ಆದ್ದರಿಂದ ಅವನ ಶತ್ರುಗಳನ್ನು ಗೆಲ್ಲುವೆನು.

ಕುರೂನ್ ರಕ್ಷನ್ ಪಾಂಡುಪುತ್ರಾನ್ ಜಿಘಾಂಸನ್
ತ್ಯಕ್ತ್ವಾ ಪ್ರಾಣಾನನುಯಾಸ್ಯಾಮಿ ಭೀಷ್ಮಮ್ ।
ಸರ್ವಾನ್ ವಾऽಹಂ ಶತ್ರುಸಂಘಾನ್ ವಿಜಿತ್ಯ
ತಸ್ಮೈ ದಾಸ್ಯೇ ಧಾರ್ತರಾಷ್ಟ್ರಾಯ ರಾಜ್ಯಮ್ ॥ ೨೩ ॥

ಕುರುಗಳನ್ನು ರಕ್ಷಿಸುತ್ತಾ ಪಾಂಡವರನ್ನು ವಧೆ ಮಾಡಲು ಬಯಸಿ ನಾನು ಪ್ರಾಣಗಳನ್ನು ಬಿಟ್ಟು ಭೀಷ್ಮರನ್ನು ಹಿಂಬಾಲಿಸುವೆನು ಅಥವಾ ಎಲ್ಲ ಶತ್ರುಸಮೂಹವನ್ನು ಗೆದ್ದು ದುರ್ಯೋಧನನಿಗೆ ರಾಜ್ಯವನ್ನು ನೀಡುವೆನು.

ನಿಬದ್ಧ್ಯತಾಂ ಮೇ ಕವಚಂ ವಿಚಿತ್ರಂ
ಹೈಮಂ ಚಿತ್ರಂ ಮಣಿಮತ್ ಸ್ವಾವಭಾಸಿ ।
ಶಿರಸ್ತ್ರಾಣಂ ಚಾರ್ಕಸಮಾನಭಾಸಂ
ಧನುಃ ಶರಾಂಶ್ಚಾಪಿ ವಿಷಾಗ್ನಿಕಲ್ಪಾನ್ ॥ ೨೪ ॥

ನನಗೆ ವಿಚಿತ್ರವಾದ, ಸುವರ್ಣಮಯವಾದ, ಮಣಿಗಳಿಂದ ಭೂಷಿತವಾದ, ತಾನಾಗಿಯೇ ಹೊಳೆಯುವ ಕವಚವನ್ನು ತೊಡಿಸಿ. ಸೂರ್ಯನ ಕಾಂತಿಗೆ ಸಮಾನವಾದ ಕಾಂತಿಯುಳ್ಳ ಶಿರಸ್ತ್ರಾಣವನ್ನು, ಧನುಸ್ಸನ್ನು ಮತ್ತು ವಿಷಾಗ್ನಿ ಸದೃಶವಾದ ಬಾಣಗಳನ್ನು ರಥದಲ್ಲಿ ಸಿದ್ಧಪಡಿಸಿ.

ಉಪಾಸಂಗಾನ್ ಷೋಡಶ ಯೋಜಯಂತು
ಧನೂಂಷಿ ದಿವ್ಯಾನಿ ಸಮಾಹರಂತು ।
ಅಸೀನ್ ಶತಘ್ನೀಶ್ಚ ಗದಾಶ್ಚ ಗುರ್ವೀಃ
ಶಂಖಂ ಚ ಜಾಂಬೂನದಚಿತ್ರನಾಭಮ್ ॥ ೨೫ ॥

ಹದಿನಾರು ಬತ್ತಳಿಕೆಗಳನ್ನು ರಥದಲ್ಲಿ ಸೇವಕರು ಜೋಡಿಸಲಿ. ದಿವ್ಯವಾದ ಧನುಸ್ಸುಗಳನ್ನು ತೆಗೆದುಕೊಂಡು ಬರಲಿ. ಖಡ್ಗಗಳು, ಶತಘ್ನಿಗಳು, ದೊಡ್ಡ ಗದೆಗಳು, ಸುವರ್ಣಾಲಂಕೃತ ನಾಭಿಯುಳ್ಳ ಶಂಖ (ಇವುಗಳನ್ನೂ ತೆಗೆದುಕೊಂಡು ಬರಲಿ).

ಶ್ವೇತಾಂ ರೌಗ್ಮೀಂ ನಾಗಕಕ್ಷ್ಯಾಂ ವಿಚಿತ್ರಾಂ
ಛತ್ರಂ ಶ್ವೇತಂ ಧ್ವಜಮಿಂದೀವರಾಭಮ್ ।

ಏವಂ ತೇಷಾಂ ಬಾಧಮಾನಃ ಪ್ರಭಾವಂ
ಗತ್ವೈವಾಹಂ ತಾನ್ ಜಯಾಮ್ಯದ್ಯ ಸೂತ ।
ಮಿತ್ರದ್ರೋಹೋ ಮರ್ಷಣೀಯೋ ನ ಮೇಽಯಮ್
ಭಗ್ನೇ ಸೈನ್ಯೇ ಯಃ ಸಮೇಯಾತ್ ಸ ಮಿತ್ರಮ್ ॥ ೨೦ ॥

ಎಲೈ ಸಾರಥಿಯೇ, ಈಗ ನಾನು ಅವರ ಪ್ರಭಾವವನ್ನು ಬಾಧಿಸಿ ಈ ದಿನ ರಣರಂಗವನ್ನು ಸೇರಿ ಅವರನ್ನು ಗೆಲ್ಲುತ್ತೇನೆ. ಈ ಮಿತ್ರದ್ರೋಹವನ್ನು ನಾನು ಸಹಿಸಲಾರೆ. ಸೈನ್ಯವು ಭಗ್ನವಾಗಿರುವಾಗ ಯಾವನು ಸಹಾಯಕ್ಕೆ ಒದಗುತ್ತಾನೆಯೋ ಅವನೇ ಮಿತ್ರನಾದವನು.

ಆಹುರ್ಹ್ಯೇತತ್ ಸತ್ಪುರುಷಸ್ಯ ಕರ್ಮ
ತ್ಯಕ್ತ್ವಾ ಪ್ರಾಣಾನ್ ಯೋಧಯೇದ್ ಯತ್ ಸಪತ್ನೈಃ ।
ಸರ್ವಾನ್ ಶತ್ರೂನಾಹವೇಽಹಂ ಹನಿಷ್ಯೇ
ತೈರ್ವಾ ಹತೋ ಮೃತ್ಯುಲೋಕಂ ಗಮಿಷ್ಯೇ ॥ ೨೧ ॥

ಪ್ರಾಣಗಳನ್ನು ತ್ಯಜಿಸಿ ಶತ್ರುಗಳ ಜೊತೆಯಲ್ಲಿ ಯುದ್ಧವನ್ನು ಮಾಡುವುದನ್ನು ಸತ್ಪುರುಷರು ಮಾಡಬೇಕಾದ ಕಾರ್ಯವೆಂದು ಹಿರಿಯರು ಹೇಳುತ್ತಾರೆ. ನಾನು ಎಲ್ಲ ಶತ್ರುಗಳನ್ನೂ ಯುದ್ಧದಲ್ಲಿ ಕೊಲ್ಲುವೆನು ಅಥವಾ ಅವರಿಂದ ಕೊಲ್ಲಲ್ಪಟ್ಟು ಮೃತ್ಯುಲೋಕಕ್ಕೆ ಹೋಗುವೆನು.

ಸಂಪ್ರಾಕೃಷ್ಟೇ ರುದಿತೇ ಸ್ತ್ರೀ ಕುಮಾರೇ
ಪರಾಜಿತೇಽಪೌರುಷೇ ಧಾರ್ತರಾಷ್ಟ್ರೇ ।
ಮಯಾ ಕಾರ್ಯಂ ಸಾಹ್ಯಮದ್ಯೈವ ಸೂತ
ತಸ್ಮಾಚ್ಛತ್ರೂನ್ ಧಾರ್ತರಾಷ್ಟ್ರಸ್ಯ ಜೇಷ್ಯೇ ॥ ೨೨ ॥

ಶಿಶುವು ಅತ್ತರೆ ತಾಯಿಯು ಅಳುತ್ತಾಳೆ. ಹಾಗೆ ಅಳುವುದು ವೀರಭಟನ ಧರ್ಮವಲ್ಲ. ಎಲೈ ಸಾರಥಿಯೇ, ದುರ್ಯೋಧನನು ಹೀನಪೌರುಷನಾಗಿ ಪರಾಜಿತನಾಗಿರುವಾಗ ನಾನು ಈ ದಿನ ಅವನಿಗೆ ಸಹಾಯವನ್ನು ಮಾಡಲೇಬೇಕು. ಆದ್ದರಿಂದ ಅವನ ಶತ್ರುಗಳನ್ನು ಗೆಲ್ಲುವೆನು.

ಕುರೂನ್ ರಕ್ಷನ್ ಪಾಂಡುಪುತ್ರಾನ್ ಜಿಘಾಂಸನ್
ತ್ಯಕ್ತ್ವಾ ಪ್ರಾಣಾನನುಯಾಸ್ಯಾಮಿ ಭೀಷ್ಮಮ್ ।
ಸರ್ವಾನ್ ವಾऽಹಂ ಶತ್ರುಸಂಘಾನ್ ವಿಜಿತ್ಯ
ತಸ್ಮೈ ದಾಸ್ಯೇ ಧಾರ್ತರಾಷ್ಟ್ರಾಯ ರಾಜ್ಯಮ್ ॥ ೨೩ ॥

ಕುರುಗಳನ್ನು ರಕ್ಷಿಸುತ್ತಾ ಪಾಂಡವರನ್ನು ವಧೆ ಮಾಡಲು ಬಯಸಿ ನಾನು ಪ್ರಾಣಗಳನ್ನು ಬಿಟ್ಟು ಭೀಷ್ಮರನ್ನು ಹಿಂಬಾಲಿಸುವೆನು ಅಥವಾ ಎಲ್ಲ ಶತ್ರುಸಮೂಹವನ್ನು ಗೆದ್ದು ದುರ್ಯೋಧನನಿಗೆ ರಾಜ್ಯವನ್ನು ನೀಡುವೆನು.

ನಿಬದ್ಧ್ಯತಾಂ ಮೇ ಕವಚಂ ವಿಚಿತ್ರಂ
ಹೈಮಂ ಚಿತ್ರಂ ಮಣಿಮತ್ ಸ್ವಾವಭಾಸಿ ।
ಶಿರಸ್ತ್ರಾಣಂ ಚಾರ್ಕಸಮಾನಭಾಸಂ
ಧನುಃ ಶರಾಂಶ್ಚಾಪಿ ವಿಷಾಗ್ನಿಕಲ್ಪಾನ್ ॥ ೨೪ ॥

ನನಗೆ ವಿಚಿತ್ರವಾದ, ಸುವರ್ಣಮಯವಾದ, ಮಣಿಗಳಿಂದ ಭೂಷಿತವಾದ, ತಾನಾಗಿಯೇ ಹೊಳೆಯುವ ಕವಚವನ್ನು ತೊಡಿಸಿ. ಸೂರ್ಯನ ಕಾಂತಿಗೆ ಸಮಾನವಾದ ಕಾಂತಿಯುಳ್ಳ ಶಿರಸ್ತ್ರಾಣವನ್ನು, ಧನುಸ್ಸನ್ನು ಮತ್ತು ವಿಷಾಗ್ನಿ ಸದೃಶವಾದ ಬಾಣಗಳನ್ನು ರಥದಲ್ಲಿ ಸಿದ್ಧಪಡಿಸಿ.

ಉಪಾಸಂಗಾನ್ ಷೋಡಶ ಯೋಜಯಂತು
ಧನೂಂಷಿ ದಿವ್ಯಾನಿ ಸಮಾಹರಂತು ।
ಅಸೀನ್ ಶತಘ್ನೀಶ್ಚ ಗದಾಶ್ಚ ಗುರ್ವೀಃ
ಶಂಖಂ ಚ ಜಾಂಬೂನದಚಿತ್ರನಾಭಮ್ ॥ ೨೫ ॥

ಹದಿನಾರು ಬತ್ತಳಿಕೆಗಳನ್ನು ರಥದಲ್ಲಿ ಸೇವಕರು ಜೋಡಿಸಲಿ. ದಿವ್ಯವಾದ ಧನುಸ್ಸುಗಳನ್ನು ತೆಗೆದುಕೊಂಡು ಬರಲಿ. ಖಡ್ಗಗಳು, ಶತಘ್ನಿಗಳು, ದೊಡ್ಡ ಗದೆಗಳು, ಸುವರ್ಣಾಲಂಕೃತ ನಾಭಿಯುಳ್ಳ ಶಂಖ (ಇವುಗಳನ್ನೂ ತೆಗೆದುಕೊಂಡು ಬರಲಿ).

ಶ್ವೇತಾಂ ರೌಗ್ಮೀಂ ನಾಗಕಕ್ಷ್ಯಾಂ ವಿಚಿತ್ರಾಂ
ಛತ್ರಂ ಶ್ವೇತಂ ಧ್ವಜಮಿಂದೀವರಾಭಮ್ ।

ಶಕ್ಷ್ಣೈರ್ವಸ್ತ್ರೈರ್ವಿಪ್ರಮೃಜ್ಯಾನಯಸ್ವ
ಚಿತ್ರಾಂ ಮಾಲಾಂ ತತ್ರ ಬದ್ಧ್ವಾ ಸಜಾಲಾಮ್ ॥ ೨೬ ॥

ಶುದ್ಧವಾದ, ಸುವರ್ಣಮಯವಾದ, ವಿಚಿತ್ರವಾದ ಸರ್ಪಾಕಾರ ಉದರಬಂಧನವನ್ನೂ ಶ್ವೇತಚ್ಛತ್ರ, ಇಂದೀವರ ಕಾಂತಿಯುಳ್ಳ ಧ್ವಜಗಳನ್ನೂ ಸೂಕ್ಷ್ಮವಸ್ತ್ರಗಳಿಂದ ಉಜ್ಜಿದ ವಿಚಿತ್ರವಾದ ಮಾಲೆಗಳನ್ನೂ ಮತ್ತು ಜಾಲಗಳನ್ನೂ ರಥದಲ್ಲಿ ಬಂಧಿಸಿ.

ಅಶ್ವಾನಗ್ರ್ಯಾನ್ ಪಾಂಡರಾಭ್ರಪ್ರಕಾಶಾನ್
ಪುಷ್ಪಾನ್ ಸ್ನಾತಾನ್ ವೇದಪೂತಾಭಿರದ್ಭಿಃ ।
ಚಿತ್ರೈರ್ಭಾಂಡೈಃ ಕಾಂಚನೈರಭ್ಯುಪೇತಾನ್
ಶೀಘ್ರಂ ಶೀಘ್ರಾನ್ ಸೂತಪುತ್ರಾನಯಸ್ವ ॥ ೨೭ ॥

ಎಲೈ ಸೂತಪುತ್ರನೇ, ಬಿಳಿಯ ಮೋಡದ ಪ್ರಕಾಶವನ್ನು ಹೊಂದಿದ, ಪುಷ್ಪವಾದ, ವೇದಗಳಿಂದ ಅಭಿಮಂತ್ರಿತವಾದ ಜಲದಲ್ಲಿ ಸ್ನಾನವನ್ನು ಮಾಡಿಸಿದ, ವಿಚಿತ್ರವಾದ, ಸುವರ್ಣಾಲಂಕೃತವಾದ, ಶೀಘ್ರಗಾಮಿಗಳಾದ, ಶ್ರೇಷ್ಠವಾದ ಅಶ್ವಗಳನ್ನು ಶೀಘ್ರವಾಗಿ ತೆಗೆದುಕೊಂಡು ಬಾ.

ರಥಂ ಚಾಗ್ರ್ಯಂ ಹೇಮಮಾಲಾವನದ್ಧಂ
ರತ್ನೈಶ್ಚಿತ್ರಂ ಚಂದ್ರಸೂರ್ಯಪ್ರಕಾಶೈಃ ।
ದಿವ್ಯೈರ್ಯುಕ್ತಂ ಸಂಪ್ರಹಾರೋಪಪನ್ನೈಃ
ವಾಹೈರ್ಯುಕ್ತಂ ತೂರ್ಣಮಾವರ್ತಯಸ್ವ ॥ ೨೮ ॥

ಹೇಮಮಾಲೆಗಳಿಂದ ಭೂಷಿತವಾದ, ಚಂದ್ರ-ಸೂರ್ಯರಂತೆ ರತ್ನಗಳಿಂದ ಹೊಳೆಯುವ, ವಿಚಿತ್ರವಾದ ಸಂಪ್ರಹಾರವನ್ನು ತಡೆಯುವ, ದಿವ್ಯವಾದ ಅಶ್ವಗಳಿಂದ ಯುಕ್ತವಾದ, ಶ್ರೇಷ್ಠವಾದ ರಥವನ್ನು ಶೀಘ್ರವಾಗಿ ತೆಗೆದುಕೊಂಡು ಬಾ.

ಚಿತ್ರಾಣಿ ಚಾಪಾನಿ ಚ ವೇಗವಂತಿ
ಜ್ಯಾಶ್ಚೋತ್ತಮಾಃ ಸಂಹನನೋಪಪನ್ನಾಃ ।
ತೂಣಾನಿ ಪೂರ್ಣಾನಿ ಚ ಮರ್ಮಭಿದ್ಭಿಃ
ಆಸಜ್ಯ ತತ್ರಾವರಣಾನಿ ಚೈವ ॥ ೨೯ ॥

ವೇಗಶಾಲಿಗಳಾದ ವಿಚಿತ್ರವಾದ ಧನುಸ್ಸುಗಳನ್ನು, ಬಲದಿಂದ ಕೂಡಿರುವ ಉತ್ತಮವಾದ ಹೆದೆಗಳನ್ನು; ಮರ್ಮಭೇದಕವಾದ ಬಾಣಗಳಿಂದ ತುಂಬಿರುವ ಬತ್ತಳಿಕೆಗಳನ್ನು ಮತ್ತು ಆವರಣಗಳನ್ನು ಅಲ್ಲಿ ತೂಗಿಹಾಕಿ (ರಥವನ್ನು ತೆಗೆದುಕೊಂಡು ಬಾ).

ಪ್ರಾಯಾತ್ರಿಕಂ ಚಾನಯ ಸರ್ವಮಾಶು
ಪೂರ್ಣಂ ಕಾಂತ್ಯಾ ವೀರಕಾಂಸ್ಯಂ ಚ ಹೈಮಮ್ ।
ಆನೀಯ ಮಾಲಾಮವಲಂಬ್ಯ ಚಾಂಗೇ
ಪ್ರವಾದಯಿತ್ವಾ ವಿಜಯಾಯ ಭೇರೀಮ್ ॥ ೩೦ ॥

ರಣರಂಗಕ್ಕೆ ಹೋಗಲು ಬೇಕಾದ ಎಲ್ಲ ಸಾಮಗ್ರಿಗಳನ್ನೂ ತೆಗೆದುಕೊಂಡು ಬಾ. ವೀರರ ಕೊರಳಿಗೆ ಯೋಗ್ಯವಾದ ಸುವರ್ಣಮಯವಾದ ಮಾಲೆಗಳನ್ನೂ, ಪುಷ್ಪಮಾಲೆಗಳನ್ನೂ ನನ್ನ ಶರೀರದಲ್ಲಿ ಧರಿಸಿ ವಿಜಯ ಭೇರಿಯನ್ನು ಬಾರಿಸಿ (ನಾನು ಯುದ್ಧಕ್ಕೆ ಹೊರಡುವೆನು).

ಪ್ರಯಾಹಿ ಸೂತಾಶು ಯತಃ ಕಿರೀಟೀ
ವೃಕೋದರೋ ಧರ್ಮಸುತೋ ಯಮೌ ಚ ।
ತಾನ್ ವಾ ಹನಿಷ್ಯಾಮಿ ಸಮೇತ್ಯ ಸಂಖ್ಯೇ
ಭೀಷ್ಮಾಯ ವೈಷ್ಯಾಮಿ ಹತೋ ದ್ವಿಷದ್ಭಿಃ ॥ ೩೧ ॥

ಎಲೈ ಸೂತನೇ, ಎಲ್ಲಿ ಅರ್ಜುನ, ಭೀಮಸೇನ, ಯುಧಿಷ್ಠಿರ ಮತ್ತು ನಕುಲ ಸಹದೇವರು ಇದ್ದಾರೆಯೋ ಅಲ್ಲಿಗೆ ಶೀಘ್ರವಾಗಿ ಹೋಗುವವನಾಗು. ಯುದ್ಧದಲ್ಲಿ ಅವರನ್ನು ಸಂಧಿಸಿ ಅವರನ್ನಾದರೂ ಕೊಲ್ಲುವೆನು ಅಥವಾ ಶತ್ರುಗಳಿಂದ ಹತನಾಗಿ ಭೀಷ್ಮರನ್ನಾದರೂ ಸೇರುವೆನು.

ಯತ್ರ ರಾಜಾ ಸತ್ಯಧೃತಿರ್ಯುಧಿಷ್ಠಿರಃ
ಸಮಾಸ್ಥಿತೋ ಭೀಮಸೇನಾರ್ಜುನೌ ತೌ ।
ವಾಸುದೇವಃ ಸಾತ್ಯಕಿಃ ಸೃಂಜಯಾಶ್ಚ
ಯಮೌ ಪಾಂಚಾಲಾಃ ಕೇಕಯಾಶ್ಚೈವ ಸರ್ವೇ ॥ ೩೨ ॥

ತಿಷ್ಠೇನ್ಮೃತ್ಯುಃ ಸರ್ವಹರೋಽಭಿರಕ್ಷನ್
ಸ್ಯಾದಪ್ರಮತ್ತಃ ಸಮರೇ ಕಿರೀಟಿನಮ್
ತಂ ವಾ ಹನಿಷ್ಯಾಮಿ ಸಮೇತ್ಯ ಸಂಖೇ
ಯಾಸ್ಯಾಮಿ ವಾ ಭೀಷ್ಮಮುಖೋ ಯಮಾಯ ॥ ೩೩ ॥

ಎಲ್ಲಿ ಸತ್ಯವಾದ ಧೈರ್ಯವುಳ್ಳ ರಾಜನಾದ ಯುಧಿಷ್ಠಿರನು ಇರುತ್ತಾನೆಯೋ, ಆ ಭೀಮಾರ್ಜುನರು ಇರುತ್ತಾರೆಯೋ, ಕೃಷ್ಣ-ಸಾತ್ಯಕಿ- ಸೃಂಜಯರು, ನಕುಲ-ಸಹದೇವರು, ಪಾಂಚಾಲರು ಮತ್ತು ಎಲ್ಲ ಕೈಕೇಯರು ಇರುತ್ತಾರೆಯೋ ಅಲ್ಲಿ ಸರ್ವಸಂಹಾರಕವಾದ ಮೃತ್ಯುವು ಇರುತ್ತದೆ. ಆದ್ದರಿಂದ ಎಚ್ಚರಿಕೆಯಿಂದ ನಿನ್ನನ್ನು (ಮತ್ತು ನನ್ನನ್ನು) ರಕ್ಷಿಸಿಕೊಂಡು, ರಣರಂಗದಲ್ಲಿ ಅರ್ಜುನನಿದ್ದಲ್ಲಿಗೆ ಹೋಗಿ, ಅವನ ಜೊತೆಯಲ್ಲಿ ಯುದ್ಧವನ್ನು ಮಾಡಿ ಅವನನ್ನು ಕೊಲ್ಲುವೆನು ಅಥವಾ ಭೀಷ್ಮರನ್ನು ಮುಂದೆ ಮಾಡಿಕೊಂಡು ಯಮನ ಬಳಿಗೆ ಹೋಗುವೆನು.

ನ ತ್ವೇವಾಹಂ ನ ಗಮಿಷ್ಯಾಮಿ ಯೇಷಾಂ
ಮಧ್ಯೇ ಶೂರಾಣಾಂ ತತ್ರ ಸತ್ಯಂ ಬ್ರವೀಮಿ
ಮಿತ್ರದ್ರುಹೋ ದುರ್ಬಲಾಭಕ್ತಯೋ ಯೇ
ಪಾಪಾತ್ಮಾನೋ ಮಮ ನ ಸ್ಯುಃ ಸಹಾಯಾಃ ॥ ೩೪ ॥

ನಾನು ಶೂರರಾದ ಅವರ ಮಧ್ಯದಲ್ಲಿ ಹೋಗುವುದಿಲ್ಲವೆಂಬುದು ಎಂದೂ ಇಲ್ಲ. ಶೂರರ ಮಧ್ಯವನ್ನು ಪ್ರವೇಶಿಸಿದ ಮೇಲೆ ನನ್ನ ಅಭೀಷ್ಟವನ್ನು ಹೇಳುತ್ತೇನೆ. ಮಿತ್ರದ್ರೋಹಿಗಳೂ, ದುರ್ಬಲರೂ, ಸ್ವಾಮಿನಿಷ್ಠೆ ಇಲ್ಲದವರೂ ಮತ್ತು ಪಾಪಿಷ್ಠರೂ ನನ್ನ ಸಹಾಯಕ್ಕೆ ಬರುವುದು ಬೇಡ.

ಸಂಜಯಃ

ತಂ ಸಿದ್ಧಿಮಂತಂ ದೃಢಮುತ್ತಮಂ ರಥಂ
ಸುಕೂಬರಂ ಹೇಮಪರಿಷ್ಕೃತಂ ಶುಭಮ್
ಪತಾಕಿನಂ ವಾತಜವೈರ್ಹಯೋತ್ತಮೈಃ
ಯುತಂ ಸಮಾಸ್ಥಾಯ ಯಯೌ ಜಯಾಯ ॥ ೩೫ ॥

ಸಂಜಯ– ಅವನು ಒಳ್ಳೆಯ ಸಿದ್ಧಿಯುಳ್ಳ, ಒಳ್ಳೆಯ ಕೂಬರದಿಂದ ಸಹಿತವಾದ, ಸುವರ್ಣಾಲಂಕೃತವಾದ, ಶುಭವಾದ ಪತಾಕೆಗಳಿಂದ ಕೂಡಿದ, ವಾಯುವೇಗವುಳ್ಳ ಅಶ್ವಗಳನ್ನು ಹೂಡಿದ, ದೃಢವಾದ ಮತ್ತು ಉತ್ತಮವಾದ ರಥವನ್ನು ಏರಿ ಜಯವನ್ನು ಸಂಪಾದಿಸಲು ಹೊರಟನು.

ಸಂಪೂಜ್ಯಮಾನಃ ಕುರುಭಿರ್ಮಹಾತ್ಮಾ
ರಥರ್ಷಭಃ ಪಾಂಡರವಾಜಿವಾಹಃ
ಯಯೌ ತದಾಯೋಧನಮುಗ್ರಧನ್ವಾ
ಯತ್ರಾವಸಾನಂ ಭರತರ್ಷಭಸ್ಯ ॥ ೩೬ ॥

ಮಹಾತ್ಮನೂ, ರಥಶ್ರೇಷ್ಠನೂ, ಉಗ್ರವಾದ ಧನುಸ್ಸುಳ್ಳವನೂ, ಪಾಂಡುವರ್ಣದ ಅಶ್ವಗಳನ್ನು ಹೊಂದಿದ ರಥವುಳ್ಳವನೂ ಆದ ಅವನು ಕೌರವರಿಂದ ಪೂಜಿತನಾಗಿ ರಣರಂಗದಲ್ಲಿ ಭರತರ ಸೈನ್ಯವು ಕೊನೆಗೊಳ್ಳುವಲ್ಲಿಗೆ ಹೋದನು.

ವರೂಥಿನಾ ಮಹತಾ ಸಧ್ವಜೇನ
ಸುವರ್ಣಮುಕ್ತಾಮಣಿವಜ್ರಶಾಲಿನಾ
ಸದಶ್ವಯುಕ್ತೇನ ರಥೇನ ಕರ್ಣೋ
ಮೇಘಸ್ವನೇನಾರ್ಕ ಇವಾವಭಾಸೇ ॥ ೩೭ ॥

ದೊಡ್ಡ ರಕ್ಷಣೆಯಿಂದ ಕೂಡಿದವನಾಗಿ, ಸುವರ್ಣ ಮತ್ತು ಮುತ್ತು-ರತ್ನ-ವಜ್ರಗಳಿಂದ ಅಲಂಕೃತವಾದ, ಒಳ್ಳೆಯ ಅಶ್ವಗಳನ್ನು ಹೂಡಿದ, ಧ್ವಜಸಹಿತವಾದ, ಮೇಘದಂತೆ ಧ್ವನಿಯುಳ್ಳ ರಥದಿಂದ ಕೂಡಿದವನಾಗಿ ಕರ್ಣನು ಸೂರ್ಯನಂತೆ ಕಂಗೊಳಿಸಿದನು.

ಹುತಾಶನಾಭಃ ಸ ಹುತಾಶನಪ್ರಭೇ
ಶುಭಃ ಶುಭೇ ಸರ್ವಧನುರ್ಧರೇ ರಥೇ
ಸ್ಥಿತೋ ರರಾಜಾಧಿರಥಿರ್ಮಹಾರಥೋ
ಯಥಾ ವಿಮಾನೇ ಸುರರಾಡವಸ್ಥಿತಃ ॥ ೩೮ ॥

ಅಧಿರಥನ ಪುತ್ರನಾದ, ಮಹಾರಥನಾದ, ಶುಭನಾದ ಅವನು ಅಗ್ನಿಯ ಕಾಂತಿಯನ್ನು ಹೊಂದಿದ ಎಲ್ಲವಿಧವಾದ ಧನುಸ್ಸುಗಳನ್ನು ತುಂಬಿದ ಶುಭವಾದ ರಥದಲ್ಲಿ ನಿಂತು ವಿಮಾನದಲ್ಲಿ ಕುಳಿತ ದಿವಾಕರನಂತೆ ಶೋಭಿಸಿದನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ದ್ವಿತೀಯೋಽಧ್ಯಾಯಃ ॥

ದ್ರೋಣಾಭಿಷೇಕಪರ್ವಣಿ ದ್ವಿತೀಯೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಎರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮೂರನೆಯ ಅಧ್ಯಾಯ

ಭೀಷ್ಮರ ಸಮೀಪಕ್ಕೆ ಹೋಗಿ ಕರ್ಣನಿಂದ ಯುದ್ಧಕ್ಕೆ ಅನುಮತಿಯ ಯಾಚನೆ.

ಸಂಜಯಃ

ಶರತಲ್ಪೇ ಮಹಾತ್ಮಾನಂ ಶಯಾನಮಪರಾಜಿತಮ್ ।
ಮಹಾವಾತಸಮುತ್ಥೇನ ಸಮುದ್ರಮಿವ ಶೋಷಿತಮ್ ॥ ೧ ॥

ಉತ್ಸಾದ್ಯ ಚಾಖಿಲಾಮುರ್ವೀಂ ಸರ್ವಕ್ಷತ್ರಾಂತಕಂ ಗುರುಮ್ ।
ದಿವ್ಯೈರಸ್ತ್ರೈರ್ಮಹೇಷ್ವಾಸಂ ಪಾತಿತಂ ಸವ್ಯಸಾಚಿನಾ ॥ ೨ ॥

ಜಯಾಶಾ ತವ ಪುತ್ರಾಣಾಂ ಸಂಭಗ್ನಾ ಶರ್ಮ ವರ್ಮ ಚ ।

ಅಪರಾಜಿತರಾದ, ಮಹಾತ್ಮರಾದ, ಮಹಾಬಿರುಗಾಳಿಗೆ ಸಿಲುಕಿ ಒಣಗಿದ ಸಮುದ್ರದಂತಿದ್ದ, ಸಮಗ್ರ ಭೂಮಿಯನ್ನೂ ನಾಶಮಾಡಿ ಸರ್ವಕ್ಷತ್ರಿಯಾಂತಕರಾದ ಪರಶುರಾಮರನ್ನು ಗುರುಗಳಾಗಿ ಹೊಂದಿದ, ಸವ್ಯಸಾಚಿಯಾದ ಅರ್ಜುನನಿಂದ ದಿವ್ಯಾಸ್ತ್ರಗಳಿಂದ ಉರುಳಿಸಲ್ಪಟ್ಟ ಮಹಾಧನುರ್ಧಾರಿಗಳಾದ, ಶರತಲ್ಪದಲ್ಲಿ ಮಲಗಿದ, ನಿನ್ನ ಪುತ್ರರಿಗೆ ಸುಖದಾಯಕರೂ ಮತ್ತು ಕವಚಸ್ಥಾನೀಯರೂ ಆಗಿದ್ದ ಭೀಷ್ಮರನ್ನು ನೋಡಿ ನಿನ್ನ ಪುತ್ರರ ಜಯದ ಆಸೆಯು ಭಗ್ನವಾಯಿತು.

ಅಪಾರಾಣಾಮಿವ ದ್ವೀಪಮಗಾಧೇ ಗಾಧಮಿಚ್ಛತಾಮ್ ॥ ೩ ॥

ಸ್ರೋತಸಾ ಯಾಮುನೇನೇವ ಶರೌಘೇಣ ಪರಿಪ್ಲುತಮ್ ।
ಮಹಾಂತಮಿವ ಮೈನಾಕಮ್ ಇಂದ್ರೇಣೇವ ಚ ಪಾತಿತಮ್ ॥ ೪ ॥

ನಭಶ್ಚ್ಯುತಮಿವಾದಿತ್ಯಂ ಶಕ್ರಸ್ಯೇವಾಮೃತಂ ಹೃತಮ್ ।
ಶತಕ್ರತೋರಿವಾಚಿಂತ್ಯಂ ಪುರಾ ವೃತ್ರೇಣ ನಿರ್ಜಯಮ್ ॥ ೫ ॥

ಮೋಹನಂ ಸರ್ವಲೋಕಸ್ಯ ಯುಧಿ ಭೀಷ್ಮಂ ನಿಪಾತಿತಮ್ ।
ಕಕುದಂ ಸರ್ವಸೈನ್ಯಾನಾಂ ಲಕ್ಷ್ಯಂ ಸರ್ವಧನುಷ್ಮತಾಮ್ ॥ ೬ ॥

ಧನಂಜಯಶರವ್ಯಾಪ್ತಂ ವೃದ್ಧಂ ಕುರುಪಿತಾಮಹಮ್ ।
ತಂ ವೀರಶಯನೇ ಶ್ರೇಷ್ಠೇ ಶಯಾನಂ ಪುರುಷರ್ಷಭಮ್ ॥ ೭ ॥

ಕರ್ಣಸ್ತ್ವತಿರಥಂ ದೃಷ್ಟ್ವಾ ಭರತಾನಾಂ ಪಿತಾಮಹಮ್ ।
ಪ್ರಸ್ಕಂದ್ಯ ಸ ರಥಾತ್ ತೂರ್ಣಂ ಶೋಕಮೋಹಪರಿಪ್ಲುತಃ ।
ಪದ್ಭ್ಯಾಮೇವ ಜಗಾಮಾತೋರ್ ಬಾಷ್ಪವ್ಯಾಕುಲಲೋಚನಃ ॥ ೮ ॥

ಅಭಿವಾದ್ಯಾಂಜಲಿಂ ಕೃತ್ವಾ ವಂದಮಾನೋಽಭ್ಯಭಾಷತ ॥ ೯ ॥

ಅಗಾಧವಾದ ಸಮುದ್ರದಲ್ಲಿ ರಕ್ಷಣೆಯನ್ನು ಬಯಸುವವರಿಗೆ ದ್ವೀಪದಂತಿದ್ದ, ದಡವಿಲ್ಲದವರಿಗೆ ರಕ್ಷಕವಾದ ದಡದಂತಿದ್ದ, ಯಮುನಾ ಪ್ರವಾಹದಂತಿದ್ದ ಬಾಣಸಮೂಹಗಳಿಂದ ಶರೀರವೆಲ್ಲಾ ತುಂಬಿದ, ಇಂದ್ರನಿಂದ ಬೀಳಿಸಲ್ಪಟ್ಟ ದೊಡ್ಡ ಮೈನಾಕ ಪರ್ವತದಂತಿದ್ದ, ಭೂಮಿಯ ಮೇಲೆ ಬಿದ್ದ ಸೂರ್ಯನಂತಿದ್ದ, ಇಂದ್ರನ ಅಪಹೃತವಾದ ಅಮೃತದಂತಿದ್ದ, ವೃತ್ರನು ಉಂಟುಮಾಡಿದ ಅಚಿಂತ್ಯವಾದ ಇಂದ್ರನ ಪರಾಭವದಂತೆ ತೋರುವ, ಸರ್ವಲೋಕಕ್ಕೂ ಯುದ್ಧದಲ್ಲಿ ಮೋಹವನ್ನು ಉಂಟುಮಾಡುವ, ಎಲ್ಲ ಸೈನ್ಯಗಳಿಗೂ ಶಿಖರಪ್ರಾಯರಾಗಿದ್ದ, ಎಲ್ಲ ಧನುರ್ಧಾರಿಗಳಿಗೂ ರಕ್ಷಕವಾಗಿದ್ದ, ಕುರು ಪಿತಾಮಹರೂ, ಪುರುಷಶ್ರೇಷ್ಠರೂ, ವೃದ್ಧರೂ, ಗುಣಗಳಿಂದ ಶ್ರೇಷ್ಠರೂ ಆದ ಅತಿರಥರಾದ ಭೀಷ್ಮರು ಅರ್ಜುನನ ಬಾಣಗಳಿಂದ ದೇಹವೆಲ್ಲ ತುಂಬಿದವರಾಗಿರುವುದನ್ನು ನೋಡಿ ಕರ್ಣನು ಶೀಘ್ರವಾಗಿ ತನ್ನ ರಥದಿಂದ ಇಳಿದು, ಶೋಕ-ಮೋಹದಿಂದ ತುಂಬಿದವನಾಗಿ, ನೀರು ತುಂಬಿದ ಕಣ್ಣುಗಳಿಂದ ಆರ್ತನಾಗಿ, ನಡೆದುಕೊಂಡೇ ಅವರ ಬಳಿಗೆ ಹೋದನು. ಅವರಿಗೆ ನಮಸ್ಕಾರವನ್ನು ಮಾಡಿ ಕೈಗಳನ್ನು ಮುಗಿದು ಮಾತನಾಡಿದನು.

ಕರ್ಣೋSಹಮಸ್ಮಿ ಭದ್ರಂ ತೇ ಅದ್ಯ ಮಾಂ ವದ ಭಾರತ ।
ಪುಣ್ಯಯಾ ಕ್ಷೇಮಯಾ ವಾಚಾ ಚಕ್ಷುಷಾ ಚಾವಲೋಕಯ ॥ ೧೦ ॥

ಎಲೈ ಭಾರತರೇ, ನಾನು ಕರ್ಣ. ನಿಮಗೆ ಕ್ಷೇಮವಾಗಲಿ. ನನ್ನನ್ನು ಕಣ್ತೆರೆದು ನೋಡಿ ಪುಣ್ಯಕರವಾದ ಮತ್ತು ಕ್ಷೇಮಕರವಾದ ಮಾತುಗಳನ್ನು ಆಡಿ.

ನ ನೂನಂ ಸುಕೃತಸ್ಯೇಹ ಫಲಂ ಕಶ್ಚಿತ್ ಸಮಶ್ನುತೇ ।
ಯತ್ರ ಧರ್ಮಪರೋ ವೃದ್ಧಃ ಶೇತೇ ಭುವಿ ಭವಾನಿಹ ॥ ೧೧ ॥

ಧರ್ಮಪರರೂ, ವೃದ್ಧರೂ ಆದ ನೀವು ಭೂಮಿಯಲ್ಲಿ ಮಲಗಿರುವುದನ್ನು ನೋಡಿ ಪುಣ್ಯಕರ್ಮದ ಫಲವನ್ನು ಈ ಲೋಕದಲ್ಲಿ ಯಾರೂ ಅನುಭವಿಸುವುದಿಲ್ಲವೆಂದು ತಿಳಿಯುತ್ತೇನೆ.

ಕೋಶಸಂಜನನೇ ಮಂತ್ರೇ ವ್ಯೂಹೇ ಪ್ರಹರಣೇಷು ಚ ।
ನಾಹಮನ್ಯಂ ಪ್ರಪಶ್ಯಾಮಿ ಕುರೂಣಾಂ ಕುರುಸತ್ತಮ ॥ ೧೨ ॥

ಬುದ್ಧ್ಯಾ ವಿಶುದ್ಧಯಾ ಯುಕ್ತೋ ಯಃ ಕುರೂಂಸ್ತಾರಯೇದ್ ಭಯಾತ್ ।
ಯೋಧಾಂಸ್ತ್ವಮಪ್ಲವೇ ಹಿತ್ವಾ ಪಿತೃಲೋಕಂ ಗಮಿಷ್ಯಸಿ ॥ ೧೩ ॥

ಎಲೈ ಕುರುಶ್ರೇಷ್ಠರೇ, ಕೋಶವನ್ನು ಬೆಳೆಸುವುದರಲ್ಲಿ, ಮಂತ್ರಾಲೋಚನೆಯಲ್ಲಿ, ಸೈನ್ಯವನ್ನು ವ್ಯೂಹ ಮಾಡುವುದರಲ್ಲಿ, ಪ್ರಹಾರ ಮಾಡುವುದರಲ್ಲಿ, ವಿಶುದ್ಧವಾದ ಬುದ್ಧಿಯಿಂದ ಯುಕ್ತರಾಗಿ ಕುರುಗಳನ್ನು ಭಯದಿಂದ ದಾಟಿಸುವ ಇನ್ನೊಬ್ಬ ವ್ಯಕ್ತಿಯನ್ನು ನಾನು ಕುರುಗಳಲ್ಲಿ ಕಾಣುವುದಿಲ್ಲ. ಕೌರವ ಸೈನಿಕರನ್ನು ನೌಕೆಯಿಲ್ಲದ ಸೈನ್ಯಸಾಗರದಲ್ಲಿ ಬಿಟ್ಟು ಪಿತೃಲೋಕಕ್ಕೆ ಹೊರಟಿರುವಿರಿ.

ಅದ್ಯಪ್ರಭೃತಿ ಸಂಕ್ರುದ್ಧಾ ವ್ಯಾಘ್ರಾ ಇವ ಮೃಗಕ್ಷಯಮ್ ।
ಪಾಂಡವಾ ಭರತಶ್ರೇಷ್ಠ ಕರಿಷ್ಯಂತಿ ಕುರುಕ್ಷಯಮ್ ॥ ೧೪ ॥

ಎಲೈ ಭರತಶ್ರೇಷ್ಠರೇ, ಇಂದಿನಿಂದ ಆರಂಭಿಸಿ ಕೋಪಗೊಂಡ ಪಾಂಡವರು ವ್ಯಾಘ್ರಗಳು ಜಿಂಕೆಗಳನ್ನು ನಾಶಮಾಡುವಂತೆ ಕೌರವರನ್ನು ನಾಶಮಾಡುವರು.

ಅದ್ಯ ಗಾಂಡೀವಘೋಷೇಣ ವೀರ್ಯಜ್ಞಾಃ ಸವ್ಯಸಾಚಿನಃ ।
ಕುರವಃ ಸಂತ್ರಸಿಷ್ಯಂತಿ ವಜ್ರಘೋಷಾದಿವಾಸುರಾಃ ॥ ೧೫ ॥

ಈ ದಿನ ಅರ್ಜುನನ ಗಾಂಡೀವ ಘೋಷದ ಸಾಮರ್ಥ್ಯವನ್ನು ತಿಳಿದ ಕುರುಗಳು ವಜ್ರಾಯುಧದ ಘೋಷಕ್ಕೆ ಅಸುರರು ಹೆದರಿರುವಂತೆ ಹೆದರುವರು.

ಅದ್ಯ ಗಾಂಡೀವಮುಕ್ತಾನಾಮಶನೀನಾಮಿವ ಸ್ವನಃ ।
ನಿಪಾತಃ ಶರಧಾರಾಣಾಂ ಕುರೂನ್ ಸಂತ್ರಾಸಯಿಷ್ಯತಿ ॥೧೬॥

ಈ ದಿನ ಗಾಂಡೀವದಿಂದ ಹೊರಬರುವ ಬಾಣಗಳ ಸಿಡಿಲಿನಂತಹ ಶಬ್ದವು ಮತ್ತು ಆ ಬಾಣಸಮೂಹಗಳ ಪಾತವು ಕುರುಗಳನ್ನು ಭಯಕ್ಕೆ ಒಳಪಡಿಸುವುದು.

ಅಗ್ನೇರಿವ ಸಮಿದ್ಧಸ್ಯ ಮಹಾಜ್ವಾಲಾ ವನೇ ದ್ರುಮಾನ್ ।
ಧಾರ್ತರಾಷ್ಟ್ರಾನ್ ಪ್ರಧಕ್ಷ್ಯಂತಿ ತಥಾ ಬಾಣಾಃ ಕಿರೀಟಿನಃ ॥ ೧೭ ॥

ಬಹಳವಾಗಿ ಪ್ರವೃದ್ಧವಾದ ಅಗ್ನಿಯ ಮಹಾಜ್ವಾಲೆಗಳು ಕಾಡಿನಲ್ಲಿ ವೃಕ್ಷಗಳನ್ನು ದಹಿಸುವಂತೆ ಅರ್ಜುನನ ಬಾಣಗಳು ಧಾರ್ತರಾಷ್ಟ್ರರನ್ನು ದಹಿಸುವವು.

ಯೇನ ಯೇನ ಪ್ರವಹತಿ ವಾಯುರಗ್ನಿರ್ಮಹಾವನೇ ।
ತೇನ ತೇನ ಪ್ರದಹತಿ ಭಗವಾನ್ ವಾಯುತೇಜಸಾ ॥ ೧೮ ॥

ಯಾದೃಗಗ್ನಿಃ ಸಮಿದ್ಧೋ ಹಿ ತಾದೃಕ್ ಪಾರ್ಥೋ ನ ಸಂಶಯಃ ।
ತಾದೃಗೇವ ಹಿ ಕೌಂತೇಯೋ ದವಾಗ್ನಿರಿವ ಪರ್ವತೇ ॥ ೧೯ ॥

ದೊಡ್ಡ ಕಾಡಿನಲ್ಲಿ ವಾಯುವು ಹೇಗೆ ಹೇಗೆ ಬೀಸುತ್ತದೆಯೋ, ಅದರಂತೆ ವಾಯುವಿನ ಸಾಮರ್ಥ್ಯದಿಂದ ಯುಕ್ತವಾದ ಅಗ್ನಿಯು ಸುಡುತ್ತಾನೆ. ಅರ್ಜುನನು ಅಂತಹ ಪ್ರವೃದ್ಧವಾದ ಅಗ್ನಿಯಂತಿದ್ದಾನೆ ಎಂಬುದರಲ್ಲಿ ಸಂಶಯವಿಲ್ಲ. ಕುಂತೀಪುತ್ರನಾದ ಅವನು ಪರ್ವತದಲ್ಲಿ ಇರುವ ದವಾಗ್ನಿಯಂತೆಯೇ ಇದ್ದಾನೆ.

ಯಥಾ ವಾಯುರ್ನರವ್ಯಾಘ್ರ ತಥಾ ಕೃಷ್ಣೋ ನ ಸಂಶಯಃ ।
ನಿರ್ದಹಂತಮನೀಕಾನಿ ಪ್ರಧಕ್ಷ್ಯತಿ ಜನಾರ್ದನಃ ॥ ೨೦ ॥

ಎಲೈ ನರಶ್ರೇಷ್ಠರೇ, ವಾಯುವು ಹೇಗೆಯೋ ಹಾಗೆಯೇ ಕೃಷ್ಣನೆಂಬ ವಿಷಯದಲ್ಲಿ ಸಂಶಯವಿಲ್ಲ. ಅರ್ಜುನನು ಸೈನ್ಯಗಳನ್ನು ದಹಿಸಿದಂತೆ ಕೃಷ್ಣನೂ ದಹಿಸುವನು.

ಸೂರ್ಯಚಂದ್ರಪ್ರಕಾಶಸ್ಯ ಪೂರ್ಯಮಾಣಸ್ಯ ವಿಷ್ಣುನಾ ।
ನದತಃ ಪಾಂಚಜನ್ಯಸ್ಯ ರಸತೋ ಗಾಂಡಿವಸ್ಯ ಚ ।
ಶ್ರುತ್ವಾ ಸರ್ವಾಣಿ ಭೂತಾನಿ ವಿತ್ರಸಂತ್ಯಮಿತೌಜಸಃ ॥ ೨೧ ॥

ಕೃಷ್ಣನು ಊದುವ ಸೂರ್ಯ-ಚಂದ್ರರ ಪ್ರಕಾಶವನ್ನು ಹೊಂದಿದ ಪಾಂಚಜನ್ಯ ಘೋಷವನ್ನು ಮತ್ತು ಗಾಂಡೀವ ಧನುಸ್ಸಿನ ಘೋಷವನ್ನು ಕೇಳಿ ಅಮಿತ ಪರಾಕ್ರಮಿಗಳಾದ ಎಲ್ಲ ಯೋಧರೂ ಹೆದರುತ್ತಾರೆ.

ಕಪಿಧ್ವಜಸ್ಯ ಚಾಪಸ್ಯ ರಥಸ್ಯಾಮಿತ್ರಕರ್ಶಿನಃ ।
ಶಬ್ದಂ ಸೋಢುಂ ನ ಶಕ್ಷ್ಯಂತಿ ತ್ವಾಮೃತೇ ಸರ್ವಪಾರ್ಥಿವಾಃ ॥ ೨೨ ॥

ಶತ್ರುಸೂದನನಾದ ಅವನ ಕಪಿಧ್ವಜದ ಧನುಸ್ಸಿನ ಮತ್ತು ರಥದ ಶಬ್ದವನ್ನು ಸಹಿಸಲು ನಿಮ್ಮನ್ನು ಬಿಟ್ಟು ಬೇರೆ ಯಾವ ರಾಜರೂ ಸಮರ್ಥರಾಗುವುದಿಲ್ಲ.

ಕೋ ಹ್ಯರ್ಜುನಂ ರಣೇ ಯೋದ್ಧುಂ ತ್ವದನ್ಯಃ ಪಾರ್ಥಿವೋಽರ್ಹತಿ ।
ಯಸ್ಯ ದಿವ್ಯಾನಿ ಕರ್ಮಾಣಿ ಪ್ರವದಂತಿ ಮನೀಷಿಣಃ ॥ ೨೩ ॥

ಯಾವನ ದಿವ್ಯವಾದ ಕರ್ಮಗಳನ್ನು ವಿವೇಕಿಗಳಾದವರು ಹೇಳುತ್ತಾರೆಯೋ ಅಂತಹ ಅರ್ಜುನನ ಜೊತೆಯಲ್ಲಿ ನಿಮ್ಮನ್ನು ಬಿಟ್ಟು ಬೇರೆ ಯಾವ ರಾಜನು ಯುದ್ಧ ಮಾಡಲು ಸಮರ್ಥನಾಗುತ್ತಾನೆ?

ಅಮಾನುಷಶ್ಚ ಸಂಗ್ರಾಮಃ ತ್ರ್ಯಂಬಕೇಣ ಚ ಧೀಮತಃ ।
ತಸ್ಮಾಚ್ಚೈವ ವರಃ ಪ್ರಾಪ್ತೋ ದುಷ್ಪ್ರಪಶ್ಯಾಕೃತಾತ್ಮಭಿಃ ॥ ೨೪ ॥

ಮೇಧಾವಿಯಾದ ಅರ್ಜುನನು ರುದ್ರದೇವನ ಜೊತೆಯಲ್ಲಿ ಯುದ್ಧವನ್ನು ಮಾಡಿ ಅವನಿಂದಲೇ ಪುಣ್ಯಶಾಲಿಗಳಲ್ಲದವರು ಪಡೆಯಲು ಸಾಧ್ಯವಿಲ್ಲದ ವರವನ್ನು ಪಡೆದಿದ್ದಾನೆ.

ಕೋ ಹಿ ಶಕ್ತೋ ರಣೇ ಜೇತುಂ ಪೂರ್ವಂ ಯೋ ನ ಜಿತಸ್ತ್ವಯಾ ।
ಜಿತೋ ಹಿ ಚ ರಣೇ ರಾಮೋ ಭವತಾ ರಣಶಾಲಿನಾ ।
ಕ್ಷತ್ರಿಯಾಂತಕರೋ ಘೋರೋ ದೇವದೇವೇನ ಪೂಜಿತಃ ॥ ೨೫ ॥

ಕ್ಷತ್ರಿಯಾಂತಕರಾದ, ಘೋರರಾದ, ದೇವದೇವತೆಗಳಿಂದಲೂ ಪೂಜಿತರಾದ, ಯುದ್ಧಕುಶಲರಾದ ಪರಶುರಾಮರನ್ನು ಪರಾಜಯಗೊಳಿಸಿದ, ನಿಮ್ಮಿಂದಲೂ ಹಿಂದೆ ಯಾವನು ಪರಾಭವವನ್ನು ಹೊಂದಲಿಲ್ಲವೋ ಅಂತಹ ಅರ್ಜುನನನ್ನು ಯುದ್ಧದಲ್ಲಿ ಜಯಿಸಲು ಯಾವನು ಶಕ್ತನಾಗುತ್ತಾನೆ?

ಅಹಂ ಹ್ಯೇಕಃ ಪಾಂಡವಂ ಯುದ್ಧಶೌಂಡಮ್
ಅಮೃಷ್ಯಮಾಣೋ ಭವತಾऽನುಶಿಷ್ಟಃ ।
ಆಶೀವಿಷಂ ದೃಷ್ಟಿವಿಷೋ ಯಥೋರಗಃ
ಶಕ್ಷ್ಯಾಮ್ಯೇನಂ ಹ್ಯಸ್ತ್ರಬಲೇನ ಹಂತುಮ್ ॥ ೨೭ ॥

ನಾನೊಬ್ಬನು ಮಾತ್ರ ಅರ್ಜುನನ ಆ ಪರಾಕ್ರಮವನ್ನು ಸಹಿಸದೆ ನಿಮ್ಮ ಆಜ್ಞೆಯನ್ನು ಪಡೆದು ದೃಷ್ಟಿವಿಷವುಳ್ಳ ಒಂದು ಸರ್ಪವು ಇನ್ನೊಂದು ಸರ್ಪವನ್ನು ಕೊಂದಂತೆ ನನ್ನ ಅಸ್ತ್ರಬಲದಿಂದ ಯುದ್ಧ ಕುಶಲನಾದ ಪಾಂಡವನಾದ ಅರ್ಜುನನನ್ನು ಕೊಲ್ಲಲು ಸಮರ್ಥನಾಗುವೆನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ತೃತೀಯೋऽಧ್ಯಾಯಃ ॥

ದ್ರೋಣಾಭಿಷೇಕಪರ್ವಣಿ ತೃತೀಯೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನಾಲ್ಕನೆಯ ಅಧ್ಯಾಯ

ಭೀಷ್ಮರ ಅನುಜ್ಞೆಯನ್ನು ಪಡೆದು ಕರ್ಣನ ಯುದ್ಧ ಪ್ರಯಾಣ.

ಸಂಜಯಃ

ತಸ್ಯ ಲಾಲಪಿತಂ ಶ್ರುತ್ವಾ ವೃದ್ಧಃ ಕುರುಪಿತಾಮಹಃ ।
ದೇಶಕಾಲೋಚಿತಂ ವಾಕ್ಯಂ ಭೀಷ್ಮಃ ಶಾಂತನವೋऽಬ್ರವೀತ್ ॥ ೧ ॥

ಕರ್ಣನ ವಿಲಾಪವನ್ನು ಕೇಳಿ ವೃದ್ಧರೂ, ಕುರುಪಿತಾಮಹರೂ, ಶಂತನು ಪುತ್ರರೂ ಆದ ಭೀಷ್ಮರು ದೇಶ-ಕಾಲೋಚಿತವಾದ ಮಾತುಗಳನ್ನು ಆಡಿದರು.

ಸಮುದ್ರ ಇವ ಸಿಂಧೂನಾಂ ಜ್ಯೋತಿಷಾಮಿವ ಭಾಸ್ಕರಃ ।
ಸತ್ಯಸ್ಯ ಚ ಯಥಾ ಸಂತೋ ಬೀಜಾನಾಮಿವ ಚೋರ್ವರಾ ॥ ೨ ॥

ಪರ್ಜನ್ಯ ಇವ ಭೂತಾನಾಂ ಪ್ರತಿಷ್ಠಾ ಸುಹೃದಾಂ ಭವಾನ್ ।
ಬಾಂಧವಾಸ್ತ್ವಾನುಜೀವಂತು ಸ್ವಾದುವೃಕ್ಷಮಿವಾಂಡಜಾಃ ॥ ೩ ॥

ಭೀಷ್ಮ ಎಲ್ಲ ನದಿಗಳಿಗೆ ಸಮುದ್ರದಂತೆ, ಜ್ಯೋತಿಸ್ಸುಗಳಿಗೆ ಸೂರ್ಯನಂತೆ, ಸತ್ಯಕ್ಕೆ ಸಜ್ಜನರಂತೆ, ಬೀಜಗಳಿಗೆ ಭೂಮಿಯಂತೆ, ಪ್ರಾಣಿಗಳಿಗೆ ಮಳೆಯಂತೆ ಸುಹೃದಯರಿಗೆ ನೀನು ಆಶ್ರಯನಾಗು. ಸಿಹಿಯಾದ ಹಣ್ಣನ್ನು ಹೊಂದಿದ ಮರವನ್ನು ಪಕ್ಷಿಗಳು ಆಶ್ರಯಿಸುವಂತೆ ಬಾಂಧವರು ನಿನ್ನನ್ನು ಆಶ್ರಯಿಸಿ ಜೀವಿಸಲಿ.

ಮಾನಹಾ ಭವ ಶತ್ರೂಣಾಂ ಮಿತ್ರಾಣಾಂ ಹರ್ಷವರ್ಧನಃ ।
ಕೌರವಾಣಾಂ ಭವ ಗತಿರ್ಯಥಾ ವಿಷ್ಣುರ್ದಿವೌಕಸಾಮ್ ॥ ೪ ॥

ಶತ್ರುಗಳ ಮಾನವನ್ನಪಹರಿಸಿ, ಮಿತ್ರರಿಗೆ ಸಂತೋಷವನ್ನುಂಟು ಮಾಡಿ ದೇವತೆಗಳಿಗೆ ವಿಷ್ಣುವು ಗತಿಯಾದಂತೆ ನೀನು ಕೌರವರಿಗೆ ಗತಿಯಾಗು.

ಸ್ವಬಾಹುಬಲವೀರ್ಯೇಣ ಧಾರ್ತರಾಷ್ಟ್ರಪ್ರಿಯೈಷಿಣಾ ।
ಕರ್ಣ ರಾಜಪುರಂ ಗತ್ವಾ ಕಾಂಬೋಜಾ ನಿಹತಾಸ್ತ್ವಯಾ ॥ ೫ ॥

ಎಲೈ ಕರ್ಣನೇ, ದುರ್ಯೋಧನನ ಪ್ರಿಯವನ್ನು ಬಯಸಿದ ನೀನು ರಾಜಪುರಕ್ಕೆ ಹೋಗಿ ನಿನ್ನ ಬಾಹುಗಳ ಬಲದಿಂದ ಮತ್ತು ಪರಾಕ್ರಮದಿಂದ ಕಾಂಬೋಜರನ್ನು ಸಂಹರಿಸಿದೆ.

ಗಿರಿವ್ರಜಗತಾಶ್ಚಾಪಿ ನಗ್ನಜಿತ್ಪ್ರಮುಖಾ ನೃಪಾಃ ।
ಅಂಬಷ್ಠಾಶ್ಚ ವಿದೇಹಾಶ್ಚ ಗಾಂಧಾರಾಶ್ಚ ಜಿತಾಸ್ತ್ವಯಾ ॥ ೬ ॥

ಪರ್ವತ ಪ್ರದೇಶಗಳಲ್ಲಿದ್ದ ನಗ್ನಜಿತ್ ಮೊದಲಾದ ರಾಜರು, ಅಂಬಷ್ಠರು, ವಿದೇಹರು ಮತ್ತು ಗಾಂಧಾರರು ನಿನ್ನಿಂದ ಪರಾಜಿತರಾದರು.

ಹಿಮವದ್ದುರ್ಗನಿಲಯಾಃ ಕಿರಾತಾ ರಣಕರ್ಕಶಾಃ ।
ದುರ್ಯೋಧನಸ್ಯ ವಶಗಾಸ್ತ್ವಯಾ ಕರ್ಣ ಕೃತಾಃ ಪುರಾ ॥ ೭ ॥

ಎಲೈ ಕರ್ಣನೇ, ಹಿಮಾಲಯದ ದುರ್ಗಗಳಲ್ಲಿ ವಾಸಿಸುವ ರಣಕರ್ಕಶರಾದ ಕಿರಾತರನ್ನು ನೀನು ಹಿಂದೆ ದುರ್ಯೋಧನನ ವಶವರ್ತಿಗಳನ್ನಾಗಿ ಮಾಡಿದ್ದೀಯೆ.

ಉತ್ಕಲಾ ಮೇಕಲಾಃ ಪುಂಡ್ರಾಃ ಕಳಿಂಗಾದ್ಯಾಶ್ಚ ಸಂಯುಗೇ ।
ನಿಷಾದಾಶ್ಚ ತ್ರಿಗರ್ತಾಶ್ಚ ಬಾಹ್ಲೀಕಾಶ್ಚ ಜಿತಾಸ್ತ್ವಯಾ ॥ ೮ ॥

ಉತ್ಕಲರು, ಮೇಕಲರು, ಪುಂಡ್ರರು, ಕಳಿಂಗಾದಿಗಳು, ನಿಷಾದರು, ತ್ರಿಗರ್ತರು, ಬಾಹ್ಲೀಕರು- ಇವರೆಲ್ಲರನ್ನೂ ನೀನು ಯುದ್ಧದಲ್ಲಿ ಜಯಿಸಿದ್ದೀಯೆ.

ತತ್ರ ತತ್ರ ಚ ಸಂಗ್ರಾಮೇ ದುರ್ಯೋಧನಹಿತೈಷಿಣಾ ।
ಬಹವೋ ನಿರ್ಜಿತಾಃ ಕರ್ಣ ತ್ವಯಾऽರ್ಣವಸಮೌಜಸಾ ॥ ೯ ॥

ಯಥಾ ದುರ್ಯೋಧನಸ್ತಾತ ಸಜ್ಞಾತಿಕುಲಬಾಂಧವಃ ।
ತಥಾ ತ್ವಮಪಿ ಸರ್ವೇಷಾಂ ಕೌರವಾಣಾಂ ಗತಿರ್ಭವ ॥ ೧೦ ॥

ಎಲೈ ಕರ್ಣನೇ, ದುರ್ಯೋಧನನ ಹಿತವನ್ನು ಬಯಸಿದ, ಸಾಗರದಂತೆ ಸಾಮರ್ಥ್ಯವುಳ್ಳ ನೀನು ಅಲ್ಲಲ್ಲಿ ಯುದ್ಧಗಳಲ್ಲಿ ಬಹಳ ಯೋಧರನ್ನು ಪರಾಭವಗೊಳಿಸಿದ್ದೀಯೆ ಮತ್ತು ಎಲೈ ಪ್ರೀತಿಪಾತ್ರನೇ, ಜ್ಞಾತಿ-ಕುಲ-ಬಾಂಧವರಿಗೆ ದುರ್ಯೋಧನನು ಹೇಗೆ ಆಶ್ರಯನೋ ಹಾಗೆ ಎಲ್ಲ ಕೌರವರಿಗೂ ನೀನೂ ಸಹ ಆಶ್ರಯನಾಗು.

ಶಿವೇನಾಭಿವದಾಮಿ ತ್ವಾ ಗಚ್ಛ ಯುದ್ಧ್ಯಸ್ವ ಶತ್ರುಭಿಃ ।
ಅನುಶಾಸ್ಯ ಕುರೂನ್ ಸರ್ವಾನ್ ಧತ್ಸ್ವ ದುರ್ಯೋಧನೇ ಜಯಮ್ ॥೧೧॥

ಕಲ್ಯಾಣಕರವಾದ ಮಾತುಗಳಿಂದ ಆಶೀರ್ವಾದ ಮಾಡುತ್ತಿದ್ದೇನೆ. ಹೋಗಿ ಶತ್ರುಗಳ ಜೊತೆಯಲ್ಲಿ ಯುದ್ಧವನ್ನು ಮಾಡು. ಎಲ್ಲ ಕುರುಗಳಿಗೂ ಶಾಸನವನ್ನು ಮಾಡಿ ದುರ್ಯೋಧನನಿಗೆ ಜಯವನ್ನು ತಂದುಕೊಡು.

ಭವಾನ್ ಪೌತ್ರಸಮೋऽಸ್ಮಾಕಂ ಯಥಾ ದುರ್ಯೋಧನಸ್ತಥಾ ।
ತವಾಪಿ ಧರ್ಮತಃ ಸರ್ವೇ ಯಥಾ ತಸ್ಯ ವಯಂ ತಥಾ ॥ ೧೨ ॥

ನೀನು ದುರ್ಯೋಧನನಂತೆ ನಮಗೆ ಮೊಮ್ಮಗನಿಗೆ ಸಮಾನನಾದವನು. ಧರ್ಮದ ದೃಷ್ಟಿಯಿಂದ ನಾವೆಲ್ಲರೂ ಅವನಿಗೆ ಹೇಗೋ ಹಾಗೆ ನಿನಗೂ ಪಿತಾಮಹ ಸಮರಾದವರು.

ಯೌನಾತ್ ಸಂಬಂಧಕಾಲ್ಲೋಕೇ ವಿಶಿಷ್ಟಃ ಸಂಗಮಃ ಸತಾಮ್ ।
ಸದ್ಭಿಃ ಸಂಗಮಮಿಚ್ಛಂತಿ ತಸ್ಮಾತ್ ಪ್ರಾಜ್ಞಾಃ ಪರೈರಪಿ ॥ ೧೩ ॥

ಸ ಸತ್ಯಸಂಗರೋ ಭೂತ್ವಾ ಮಮೈತದಿತಿ ನಿಶ್ಚಿತಮ್ ।
ಕುರೂಣಾಂ ಪಾಲಯ ಬಲಂ ಯಥಾ ದುರ್ಯೋಧನಸ್ತಥಾ ॥ ೧೪ ॥

ಶರೀರ ಸಂಬಂಧಕ್ಕಿಂತಲೂ ಸಜ್ಜನ ಸಂಬಂಧವೇ ಶ್ರೇಷ್ಠವಾದುದು. ಆದ್ದರಿಂದ ಪ್ರಾಜ್ಞರು ಸಜ್ಜನರ ಸಮಾಗಮವನ್ನು ಬಯಸುತ್ತಾರೆ. ಶತ್ರುಗಳ ಜೊತೆಯಲ್ಲಿ ಸಂಗತನಾಗಿ ಈ ಭಾರವು ನನ್ನದು ಎಂದು ತಿಳಿದು, ಸತ್ಯಸಂಧನಾಗಿ ದುರ್ಯೋಧನನಂತೆ ಕೌರವರ ಸೈನ್ಯವನ್ನು ರಕ್ಷಿಸು.

ಯಥಾ ಚ ಕುರವೋ ಯುದ್ಧೇ ಯೋಧಯಂತಿ ಸ್ಮ ಪಾಂಡವಾನ್ ।
ತಥಾ ಕರ್ಣ ತ್ವಯಾ ಕಾರ್ಯಂ ದುರ್ಯೋಧನಹಿತೈಷಿಣಾ ॥ ೧೫ ॥

ಎಲೈ ಕರ್ಣನೇ, ದುರ್ಯೋಧನನ ಹಿತೈಷಿಯಾದ ನೀನು ಕುರುಗಳು ಪಾಂಡವರ ಜೊತೆಯಲ್ಲಿ ಯುದ್ಧವನ್ನು ಮಾಡುವಂತೆ ಮಾಡಬೇಕು.

ಸಂಜಯಃ

ನಿಶಮ್ಯ ವಚನಂ ತಸ್ಯ ಚರಣಾವಭಿವಾದ್ಯ ಚ ।
ಯಯೌ ವೈಕರ್ತನಃ ಕರ್ಣಃ ತೂರ್ಣಮಾಯೋಧನಂ ಪ್ರತಿ ॥ ೧೬ ॥

ಸಂಜಯ– ವೈಕರ್ತನನಾದ ಕರ್ಣನು ಅವರ ಮಾತನ್ನು ಕೇಳಿ, ಅವರ ಪಾದಗಳಿಗೆ ನಮಸ್ಕರಿಸಿ ಶೀಘ್ರವಾಗಿ ರಣರಂಗಕ್ಕೆ ಹೊರಟನು.

ಸೋಽಭಿವೀಕ್ಷ್ಯ ನರೌಘಾಣಾಂ ಸ್ಥಾನಮಪ್ರತಿಮಂ ಮಹತ್ ।
ವ್ಯೂಢಪ್ರಹರಣೋರಸ್ಕಂ ಸೈನ್ಯಂ ತತ್ ಸಮಬೃಂಹಯತ್ ॥ ೧೭ ॥

ಅವನು ಯೋಧರ ಸಮೂಹಗಳ ಅಪ್ರತಿಮವಾದ ದೊಡ್ಡ ಸ್ಥಾನವು ಆಯುಧಾದಿಗಳನ್ನು ಹಿಡಿದು ನಿಂತಿರುವುದನ್ನು ನೋಡಿ ಅದನ್ನು ಪ್ರವೇಶಿಸಿ ಅದನ್ನು ಪುಷ್ಟೀಕರಿಸಿದನು.

ಅಥೋಷಸಿ ಮಹೇಷ್ವಾಸೋ ವ್ಯಾದಿಶ್ಯ ರಥಿನೋऽಯುತಮ್ ।
ವಾರಣಾಂಸ್ತತ್ಪ್ರಮಾಣೇನ ಚಕಾರ ತದನಂತರಮ್ ॥ ೧೮ ॥

ಅನಂತರ ಮಹಾಧನುರ್ಧಾರಿಯಾದ ಕರ್ಣನು ಪ್ರಾತಃಕಾಲದಲ್ಲಿ ಹತ್ತುಸಾವಿರ ರಥಿಕರಿಗೆ ಆದೇಶವನ್ನು ನೀಡಿ ಅವರ ಹಿಂದೆ ಅಷ್ಟೇ ಸಂಖ್ಯೆಯ ಗಜಗಳನ್ನು ನಿಲ್ಲಿಸಿದನು.

ಸಾದಿನೋऽಥ ಪದಾತೀಂಶ್ಚ ಯಥಾಶಾಸ್ತ್ರಂ ಬೃಹಸ್ಪತೇಃ ।
ಸ್ಥಾಪಯಾಮಾಸ ಚ ತತಃ ಪುತ್ರಾಣಾಂ ತೇ ಜಯೇ ಧೃತಃ ॥ ೧೯ ॥

ನಿನ್ನ ಪುತ್ರರ ಜಯದಲ್ಲಿ ನಿರತನಾಗಿ ಬೃಹಸ್ಪತಿಯ ಶಾಸ್ತ್ರಕ್ಕೆ ಅನುಗುಣವಾಗಿ ಅಶ್ವಾರೋಹಿಗಳನ್ನು ಮತ್ತು ಪದಾತಿಗಳನ್ನು ನಿಲ್ಲಿಸಿದನು.

ತತಃ ಪಕ್ಷೌ ಪ್ರಪಕ್ಷೌ ಚ ವಿಧಾಯ ಭರತರ್ಷಭ ।
ಪಕ್ಷಕೋಟೀ ಪುನರ್ದ್ವಾಭ್ಯಾಂ ಪಶ್ಚಾದ್ ದ್ವಾಭ್ಯಾಮಬೃಂಹಯತ್ ॥೨೦॥

ಎಲೈ ಭರತಶ್ರೇಷ್ಠನೇ, ಅನಂತರ ಸೈನ್ಯವನ್ನು ಪಕ್ಷ ಮತ್ತು ಪ್ರಪಕ್ಷಗಳಾಗಿ (ಪ್ರಪಕ್ಷ ಎಂದರೆ ಮುಂದಿರುವ ಪಕ್ಷಕ್ಕೆ ಹಿಂಭಾಗದಲ್ಲಿ ಬೆಂಬಲವಾಗಿ ನಿಂತ ಸೈನ್ಯದ ಭಾಗ) ಭಾಗವನ್ನಾಗಿ ಮಾಡಿ, ಅವೆರಡು ಭಾಗಗಳನ್ನು ಪುನಃ ಹಿಂದುಗಡೆಯಿಂದ ಇನ್ನೆರಡು ಭಾಗಗಳಿಂದ ಬಲಪಡಿಸಿದನು.

ಏವಮೇತಂ ಮಹಾವ್ಯೂಹಂ ಕರ್ಣೇನ ವಿಹಿತಂ ಪುನಃ ।
ಪ್ರೇಕ್ಷಣೀಯಮಮನ್ಯಂತ ರಾಜಾನಃ ಕುರುಭಿಃ ಸಹ ॥ ೨೧ ॥

ನೃತ್ಯಂತಮಿವ ತಂ ವ್ಯೂಹಂ ದಿಧಕ್ಷಂತಮಿವಾಹಿತಾನ್ ।
ಕೃತಂ ಬೃಹಸ್ಪತ್ಯುಶನಸೋಃ ಮತೇ ಕರ್ಣೇನ ದುರ್ಜಯಮ್ ।
ಬಲಂ ವ್ಯೂಹಶರೀರಸ್ಯ ಸಾರಾನೀಕಂ ಪರಸ್ಪರಮ್ ॥ ೨೨ ॥

ಕರ್ಣನಿಂದ ಹೂಡಲ್ಪಟ್ಟ, ನರ್ತನವನ್ನು ಮಾಡುವಂತೆ ತೋರುತ್ತಿರುವ, ಶತ್ರುಗಳನ್ನು ದಹಿಸಲು ಬಯಸುವ, ಬೃಹಸ್ಪತಿ ಮತ್ತು ಶುಕ್ರರ ಮತಕ್ಕೆ ಅನುಸಾರವಾಗಿ ಮಾಡಿದ, ದುರ್ಜಯವಾದ ಆ ಮಹಾವ್ಯೂಹವನ್ನು ನೋಡಿ ರಾಜರು ಮತ್ತು ಕುರುಗಳು ಮನೋಹರವಾಗಿದೆ ಎಂದು ತಿಳಿದರು. ಶ್ರೇಷ್ಠವಾದ ಅಶ್ವ-ಗಜಗಳಿಂದ ವ್ಯೂಹ.... ಪರಸ್ಪರವಾಗಿ ಬಲಪಡಿಸಲ್ಪಟ್ಟಿತು.

ದ್ರೋಣಂ ದೃಷ್ಟ್ವಾ ಮಹೇಷ್ವಾಸಂ ಯುದ್ಧಾಯ ಸಮುಪಸ್ಥಿತಮ್ ।
ತಮಾಗತಂ ಮಹಾಬಾಹುಂ ಸರ್ವಾನೀಕಪುರಃಸರಮ್ ॥ ೨೩ ॥

ಕ್ಷ್ವೇಡಿತಾಸ್ಫೋಟಿತಾಕ್ರುಷ್ಟೈಃ ಸಿಂಹನಾದರವೈರಪಿ ।
ಧನುಃಶಬ್ದೈಶ್ಚ ವಿವಿಧೈಃ ಕುರವಃ ಸಮಪೂಜಯನ್ ॥ ೨೪ ॥

ಮಹಾಧನುರ್ಧಾರಿಗಳಾದ ದ್ರೋಣರು ಯುದ್ಧಕ್ಕೆ ಸಿದ್ಧರಾಗಿ ನಿಂತಿರುವುದನ್ನೂ, ಮಹಾಬಾಹುವಾದ ಕರ್ಣನು ಬಂದು ಎಲ್ಲ ಸೈನ್ಯದ ಮುಂಭಾಗದಲ್ಲಿರುವುದನ್ನೂ ನೋಡಿದ ಕುರುಗಳು ಸಿಂಹನಾದಗಳಿಂದಲೂ, ಹಸ್ತ-ತಳ ಶಬ್ದಗಳಿಂದಲೂ, ಆಕ್ರೋಶಗಳಿಂದಲೂ, ವಿವಿಧವಾದ ಧನುಶ್ಶಬ್ದಗಳಿಂದಲೂ ಅವರನ್ನು ಪೂಜಿಸಿದರು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಚತುರ್ಥೋಽಧ್ಯಾಯಃ ॥

ದ್ರೋಣಾಭಿಷೇಕಪರ್ವಣಿ ಚತುರ್ಥೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಐದನೆಯ ಅಧ್ಯಾಯ

ಕರ್ಣನ ಸಹಮತಿಯಿಂದ ದುರ್ಯೋಧನನಿಂದ ದ್ರೋಣರಿಗೆ
ಸೇನಾಪತಿಯ ಪಟ್ಟದಲ್ಲಿ ಅಭಿಷೇಕ.

ಸಂಜಯಃ

ರಥಸ್ಥಂ ಪುರುಷವ್ಯಾಘ್ರಂ ದೃಷ್ಟ್ವಾ ಕರ್ಣಮವಸ್ಥಿತಮ್ ।
ಹೃಷ್ಟೋ ದುರ್ಯೋಧನೋ ರಾಜಾ ಕರ್ಣಂ ವಚನಮಬ್ರವೀತ್ ॥೧॥

ಸನಾಥಮಿವ ಮನ್ಯೇಽಹಂ ಭವತಾ ಪಾಲಿತಂ ಬಲಮ್ ।
ಮನ್ಯೇ ಕಿಂತು ತದೇತದ್ ವೈ ಯದ್ದಿತಂ ತತ್ ಪ್ರಧಾರ್ಯತಾಮ್ ॥೨॥

ಸಂಜಯ– ರಥದಲ್ಲಿ ಕುಳಿತ ಪುರುಷವ್ಯಾಘ್ರನಾದ ಕರ್ಣನನ್ನು ನೋಡಿ ಸಂತೋಷಗೊಂಡ ದುರ್ಯೋಧನನು ಅವನನ್ನು ಕುರಿತು, ನಿನ್ನಿಂದ ರಕ್ಷಿತವಾದ ನನ್ನ ಸೈನ್ಯವು ಸನಾಥವಾಗಿದೆ ಎಂದು ಭಾವಿಸುತ್ತೇನೆ. ಆದರೆ ಈಗ ಮಾಡಬೇಕಾದುದರಲ್ಲಿ ಯಾವುದು ಹಿತವೋ ಅದನ್ನು ನಿರ್ಧರಿಸಬೇಕು.

ಕರ್ಣಃ

ಬ್ರೂಹಿ ತತ್ ಪುರುಷವ್ಯಾಘ್ರ ತ್ವಂ ಹಿ ಪ್ರಾಜ್ಞತಮೋ ನೃಷು ।
ಯಥಾ ಚಾರ್ಥಪತಿಃ ಕೃತ್ಯಂ ಪಶ್ಯತೇ ನ ತಥೇತರಃ ॥೩॥

ವಯಂ ಸರ್ವೇ ತವ ವಚಃ ಶ್ರೋತುಕಾಮಾ ನರೇಶ್ವರ ।
ನಾನ್ಯಾಯ್ಯಂ ಹಿ ಭವಾನ್ ವಾಕ್ಯಂ ಬ್ರೂಯಾದಿತಿ ಮತಿರ್ಮಮ ॥೪॥

ಕರ್ಣ– ಎಲೈ ಪುರುಷವ್ಯಾಘ್ರನೇ, ನೀನೇ ಮನುಷ್ಯರಲ್ಲಿ ಅತ್ಯಂತ ಪ್ರಾಜ್ಞನಾದವನು. ಆದ್ದರಿಂದ ನೀನೇ ಹೇಳು. ಮಾಡಬೇಕಾದ ಕಾರ್ಯವನ್ನು ಸ್ವಾಮಿಯಾದವನು ಹೇಗೆ ಗಮನಿಸುತ್ತಾನೆಯೋ ಹಾಗೆ ಇನ್ನೊಬ್ಬನು ಗಮನಿಸುವುದಿಲ್ಲ. ಎಲೈ ರಾಜನೇ, ನಾವೆಲ್ಲರೂ ನಿನ್ನ ಮಾತನ್ನು ಕೇಳಲು ಬಯಸಿದ್ದೇವೆ. ನೀನು ಎಂದೂ ಅನ್ಯಾಯದ ಮಾತುಗಳನ್ನು ಆಡುವುದಿಲ್ಲವೆಂದು ನನ್ನ ಭಾವನೆ.

ದುರ್ಯೋಧನಃ

ಭೀಷ್ಮಃ ಸೇನಾಪ್ರಣೇತಾಽಽಸೀದ್ ವಯಸಾ ವಿಕ್ರಮೇಣ ಚ ।
ಶ್ರುತೇನ ಚ ಸುಸಂಪನ್ನಃ ಸರ್ವೈರ್ಯೋಧಗಣೈಃ ಸಹ ॥ ೫ ॥

ದುರ್ಯೋಧನ– ವಯಸ್ಸಿನಿಂದಲೂ, ಪರಾಕ್ರಮದಿಂದಲೂ, ವಿದ್ಯೆಯಿಂದಲೂ ಸಂಪನ್ನರಾದ ಭೀಷ್ಮರು ಸರ್ವ ಯೋಧಗಣಗಳ ಜೊತೆಯಲ್ಲಿ ಇದುವರೆಗೆ ಸೇನಾ ನಾಯಕರಾಗಿದ್ದರು.

ತೇನಾತಿರಥಿನಾ ಕರ್ಣ ಘ್ನತಾ ಶತ್ರುಗಣಾನ್ ಮಮ ।
ಸುಯುದ್ಧೇನ ದಶಾಹಾನಿ ಪಾಲಿತಾಃ ಸ್ಮ ಮಹಾತ್ಮನಾ ॥ ೬ ॥

ತಸ್ಮಿನ್ನಸುಕರಂ ಕರ್ಮ ಕೃತವತ್ಯಾಸ್ಥಿತೇ ದಿವಮ್ ।
ಕಂ ನು ಸೇನಾಪ್ರಣೇತಾರಂ ಮನ್ಯಸೇ ತದನಂತರಮ್ ॥ ೭ ॥

ಎಲೈ ಕರ್ಣನೇ, ಆ ಅತಿರಥರಾದ ಮಹಾತ್ಮರು ಹತ್ತು ದಿನಗಳ ಕಾಲ ಘೋರವಾದ ಯುದ್ಧವನ್ನು ಮಾಡಿ ನನ್ನ ಶತ್ರುಗಳನ್ನು ಕೊಂದು ನಮ್ಮನ್ನು ರಕ್ಷಿಸಿದರು. ದುಸ್ಸಾಧ್ಯವಾದ ಕಾರ್ಯವನ್ನು ಮಾಡಿ ಈಗ ಅವರು ಸ್ವರ್ಗಕ್ಕೆ ಹೊರಟಿರುವಾಗ ಅವರ ಅನಂತರದಲ್ಲಿ ಯಾರನ್ನು ನೀನು ಸೇನಾಪತಿಯೆಂದು ಭಾವಿಸುತ್ತೀಯೆ?

ಋತೇ ತು ನಾಯಕಂ ಸೇನಾ ಮುಹೂರ್ತಂ ನಾವತಿಷ್ಠತೇ ।
ಆಹವೇಷು ವಿಶೇಷೇಣ ಭ್ರಷ್ಟನೇತ್ರೇಷ್ವಿವಾಂಜನಮ್ ।
ಆಹವೇಷ್ವಾಹವಶ್ರೇಷ್ಠ ನೇತೃಹೀನೇವ ನೌರ್ಜಲೇ ॥ ೮ ॥

ಯಥಾ ಹ್ಯಕರ್ಣಧಾರಾ ನೌ ರಥಶ್ಚಾಸಾರಥಿರ್ಯಥಾ ।
ದ್ರವೇದ್ ಯಥೇಷ್ಟಂ ತದ್ವತ್ ಸ್ಯಾದ್ ಋತೇ ಸೇನಾಪತೇರ್ಬಲಮ್ ॥ ೯ ॥

ಅದೇಶಿಕೇ ಯಥಾ ಸಾರ್ಥಃ ಸರ್ವಂ ಕೃಚ್ಛ್ರಂ ಸಮೃಚ್ಛತಿ ।
ಅನಾಯಕೇ ತಥಾ ಸೇನಾ ಸರ್ವಾನ್ ದೋಷಾನ್ ಸಮೃಚ್ಛತಿ ॥ ೧೦ ॥

ಎಲೈ ಯುದ್ಧಶ್ರೇಷ್ಠನೇ, ನೇತ್ರರಹಿತರಾದವರಲ್ಲಿ ಅಂಜನದಂತೆ, ಸಾಗರದಲ್ಲಿ ನಾಯಕನಿಲ್ಲದಿರುವ ನೌಕೆಯಂತೆ ಸೈನ್ಯವು ಒಂದು ಮುಹೂರ್ತವೂ ನಿಲ್ಲುವುದಿಲ್ಲ. ನಾವಿಕನಿಲ್ಲದ ದೋಣಿಯಂತೆ, ಸಾರಥಿಯಿಲ್ಲದ ರಥದಂತೆ, ಸೇನಾಪತಿ ಇಲ್ಲದ ಸೈನ್ಯವು ಮನಸ್ಸಿಗೆ ಬಂದಂತೆ ಓಡಿಹೋದೀತು! ನಾಯಕನಿಲ್ಲದ ವಣಿಕ್ ಸಮೂಹವು ಕಷ್ಟವನ್ನು ಹೊಂದುವಂತೆ ನಾಯಕನಿಲ್ಲದ ಸೈನ್ಯವು ಎಲ್ಲ ದೋಷಗಳನ್ನು ಹೊಂದುತ್ತದೆ.

ಸ ಭವಾನ್ ಈಕ್ಷ್ಯ ಸರ್ವೇಷು ಮಾಮಕೇಷು ಮಹಾತ್ಮಸು ।
ಪಶ್ಯ ಸೇನಾಪತಿಂ ಯುಕ್ತಮ್ ಅನುಶಾಸ್ತು ಭವಾನಿಹ ॥೧೧॥

ಯಂ ಹಿ ಸೇನಾಪ್ರಣೇತಾರಂ ಮನ್ಯಸೇ ತದನಂತರಮ್ ।

ಆದ್ದರಿಂದ ನೀನು ನಮ್ಮ ಸೈನ್ಯದಲ್ಲಿರುವ ಎಲ್ಲ ಮಹಾತ್ಮರನ್ನೂ ನೋಡಿ ಯಾವನು ಯೋಗ್ಯನಾದ ಸೇನಾಪತಿಯಾಗುತ್ತಾನೆ ಎಂದು ಗಮನಿಸಿ, ಭೀಷ್ಮರ ಅನಂತರದಲ್ಲಿ ಯಾರು ಸೇನಾನಾಯಕರಾಗುತ್ತಾರೆಂದು ತಿಳಿದು ನನಗೆ ಆದೇಶವನ್ನು ಮಾಡು.

ಯಂ ಹಿ ಸೇನಾಪ್ರಣೇತಾರಂ ಭವಾನ್ ವಕ್ಷ್ಯತಿ ಸಂಯುಗೇ ।
ತಂ ವಯಂ ಸಹಿತಾಃ ಸರ್ವೇ ಪ್ರಕರಿಷ್ಯಾಮ ನಾಯಕಮ್ ॥ ೧೨ ॥

ನೀನು ಯುದ್ಧದಲ್ಲಿ ಯಾರನ್ನು ಸೇನಾನಾಯಕರನ್ನಾಗಿ ಮಾಡಬೇಕೆಂದು ಹೇಳುವಿಯೋ ನಾವೆಲ್ಲರೂ ಸೇರಿ ಅವನನ್ನು ಸೇನಾನಾಯಕರನ್ನಾಗಿ ಮಾಡುವೆವು.

ಕರ್ಣಃ

ಸರ್ವ ಏವ ಮಹಾತ್ಮಾನ ಇಮೇ ಪುರುಷಸತ್ತಮಾಃ ।
ಸೇನಾಪತಿತ್ವಮರ್ಹಂತಿ ನಾತ್ರ ಕಾರ್ಯಾ ವಿಚಾರಣಾ ॥ ೧೩ ॥

ಕುಲಸಂಹನನಜ್ಞಾನಬಲವಿಕ್ರಮಬುದ್ಧಿಭಃ ।
ಯುಕ್ತಾಃ ಕೃತಜ್ಞಾ ಹ್ರೀಮಂತ ಆಹವೇಷ್ವನಿವರ್ತಿನಃ ॥ ೧೪ ॥

ಕರ್ಣ– ಈ ಪುರುಷಶ್ರೇಷ್ಠರಾದ ಮಹಾತ್ಮರೆಲ್ಲರೂ ಸೇನಾಪತಿಗಳಾಗಲು ಯೋಗ್ಯರಾದವರು. ಇದರಲ್ಲಿ ವಿಚಾರ ಮಾಡಬೇಕಾದ ಅಗತ್ಯವಿಲ್ಲ. ಇವರು ಒಳ್ಳೆಯ ಕುಲದಲ್ಲಿ ಜನಿಸಿ, ದೃಢವಾದ ಶರೀರವನ್ನು ಹೊಂದಿ, ಜ್ಞಾನ-ಬಲ-ಪರಾಕ್ರಮ-ಬುದ್ಧಿಗಳಿಂದ ಯುಕ್ತರಾಗಿ, ಕೃತಜ್ಞರೂ, ನಾಚಿಕೆಯುಳ್ಳವರೂ, ಯುದ್ಧದಲ್ಲಿ ಹಿಮ್ಮೆಟ್ಟದವರೂ ಆಗಿದ್ದಾರೆ.

ಯುಗಪನ್ನ ತು ತೇ ಶಕ್ಯಾಃ ಕರ್ತುಂ ಸರ್ವೇ ಪುರಸ್ಸರಾಃ ।
ಏಕ ಏವಾತ್ರ ಕರ್ತವ್ಯೋ ಯಸ್ಮಿನ್ ವೈಶೇಷಿಕಾ ಗುಣಾಃ ॥ ೧೫ ॥

ಅವರೆಲ್ಲರನ್ನೂ ಒಂದೇ ಬಾರಿಗೆ ನಾಯಕರನ್ನಾಗಿ ಮಾಡಲು ಸಾಧ್ಯವಿಲ್ಲ. ಯಾವನಲ್ಲಿ ವಿಶೇಷವಾದ ಗುಣವಿದೆಯೋ ಅಂತಹ ಒಬ್ಬನನ್ನು ಮಾಡಬೇಕು.

ಅನ್ಯೋನ್ಯಸ್ಪರ್ಧಿನಾಂ ತೇಷಾಂ ಯದ್ಯೇಕಂ ತ್ವಂ ಕರಿಷ್ಯಸಿ ।
ಶೇಷಾ ವಿಮನಸೋಽತ್ಯರ್ಥಂ ನ ಯೋತ್ಸ್ಯಂತೀಹ ಭಾರತ ॥ ೧೬ ॥

ಎಲೈ ಭಾರತನೇ, ಪರಸ್ಪರವಾಗಿ ಸ್ಪರ್ಧಿಸುವ ಅವರಲ್ಲಿ ಒಬ್ಬನನ್ನು ಸೇನಾನಾಯಕನನ್ನಾಗಿ ಮಾಡಿದರೆ ಉಳಿದವರು ಬೇಸರಗೊಂಡು ಚೆನ್ನಾಗಿ ಯುದ್ಧವನ್ನು ಮಾಡುವುದಿಲ್ಲ.

ಅಯಂ ತು ಸರ್ವಸೈನ್ಯಾನಾಮಾಚಾರ್ಯಃ ಸ್ಥವಿರೋ ಗುರುಃ ।
ಯುಕ್ತಃ ಸೇನಾಪತಿತ್ವಾಯ ದ್ರೋಣಃ ಶಸ್ತ್ರಭೃತಾಂ ವರಃ ॥ ೧೭ ॥

ಆಚಾರ್ಯರೂ, ವೃದ್ಧರೂ, ಎಲ್ಲರಿಗೂ ಗುರುಗಳೂ, ಶಸ್ತ್ರಧಾರಿಗಳಲ್ಲಿ ಶ್ರೇಷ್ಠರೂ ಆದ ಈ ದ್ರೋಣರಾದರೋ ಎಲ್ಲಸೈನ್ಯಗಳಿಗೆ ಸೇನಾಪತಿಗಳಾಗಲು ಅರ್ಹರಾದವರು.

ಕೋ ಹಿ ತಿಷ್ಠತಿ ಸಂಗ್ರಾಮೇ ದ್ರೋಣೇ ಬ್ರಾಹ್ಮಣಪುಂಗವೇ ।
ಸೇನಾಪತಿರಿಹಾನ್ಯೋಽಸ್ಮಾಚ್ಛುಕ್ರಾಂಗಿರಸದರ್ಶನಾತ್ ॥ ೧೮ ॥

ಶುಕ್ರ-ಬೃಹಸ್ಪತಿಗಳ ದರ್ಶನಕ್ಕೆ ಅನುಗುಣವಾದ ಬ್ರಾಹ್ಮಣಶ್ರೇಷ್ಠರಾದ ದ್ರೋಣರು ಸಂಗ್ರಾಮದಲ್ಲಿರುವಾಗ ಇನ್ನೊಬ್ಬ ಯಾವನು ಸೇನಾಪತಿಯಾಗಲು ಅರ್ಹನಾಗುತ್ತಾನೆ?

ನಚ ಸ ಹ್ಯಸ್ತಿ ಯೋಧಸ್ತೇ ಸರ್ವರಾಜಸು ಭಾರತ ।
ಯೋ ದ್ರೋಣಂ ಸಮರಂ ಯಾಂತಮನುಯಾಸ್ಯತಿ ಸಂಯುಗೇ ॥೧೯॥

ಎಲೈ ಭಾರತನೇ, ದ್ರೋಣರು ಯುದ್ಧದಲ್ಲಿ ನಿಂತಾಗ ಯುದ್ಧದಲ್ಲಿ ಅವರನ್ನು ಎದುರಿಸುವ ಯಾವ ಯೋಧನೂ ಸರ್ವರಾಜರುಗಳಲ್ಲಿಯೂ ಇಲ್ಲ.

ಏಷ ಸೇನಾಪ್ರಣೇತೃಣಾಮೇಷ ಶಸ್ತ್ರಭೃತಾಂ ವರಃ ।
ಏಷ ಬುದ್ಧಿಮತಾಂ ಶ್ರೇಷ್ಠೋ ಬ್ರಾಹ್ಮಣಃ ಸ್ಥವಿರೋ ಗುರುಃ ॥ ೨೦ ॥

ಇವರು ಸೇನಾನಾಯಕರಲ್ಲಿ ಶ್ರೇಷ್ಠರಾದವರು, ಶಸ್ತ್ರಧಾರಿಗಳಲ್ಲಿ ಶ್ರೇಷ್ಠರಾದವರು. ಬ್ರಾಹ್ಮಣರೂ, ವೃದ್ಧರೂ, ಗುರುಗಳೂ ಆದ ಇವರು ಮೇಧಾವಿಗಳಲ್ಲಿ ಶ್ರೇಷ್ಠರಾದವರು.

ಏನಂ ದುರ್ಯೋಧನಾಚಾರ್ಯಮಾಶು ಸೇನಾಪತಿಂ ಕುರು ।
ಜಿಗೀಷಂತೋಽಸುರಾನ್ ಸಂಖೇ ಕಾರ್ತ್ತಿಕೇಯಮಿವಾಮರಾಃ ॥ ೨೧ ॥

ಎಲೈ ದುರ್ಯೋಧನನೇ, ಅಸುರರನ್ನು ಗೆಲ್ಲಲು ಬಯಸಿದ ದೇವತೆಗಳು ಯುದ್ಧದಲ್ಲಿ ಷಣ್ಮುಖನನ್ನು ಸೇನಾಪತಿಯನ್ನಾಗಿ ಮಾಡಿದಂತೆ ಈ ಆಚಾರ್ಯರನ್ನು ಶೀಘ್ರವಾಗಿ ಸೇನಾಪತಿಯನ್ನಾಗಿ ಮಾಡು.

ಸಂಜಯಃ

ಕರ್ಣಸ್ಯ ವಚನಂ ಶ್ರುತ್ವಾ ರಾಜಾ ದುರ್ಯೋಧನಸ್ತದಾ ।
ಸೇನಾಮಧ್ಯಗತಂ ದ್ರೋಣಮಿದಂ ವಚನಮಬ್ರವೀತ್ ॥ ೨೨ ॥

ಸಂಜಯ– ಕರ್ಣನ ಮಾತನ್ನು ಕೇಳಿ ಆಗ ರಾಜನಾದ ದುರ್ಯೋಧನನು ಸೇನೆಯ ಮಧ್ಯದಲ್ಲಿದ್ದ ದ್ರೋಣರನ್ನು ಕುರಿತು ಈ ಮಾತನ್ನಾಡಿದನು.

ವರ್ಣಶ್ರೈಷ್ಠ್ಯಾತ್ ಕುಲೋತ್ಪತ್ತ್ಯಾಯ ಶ್ರುತೇನ ವಯಸಾ ಧಿಯಾ ।
ವೀರ್ಯಾದ್ ದಾಕ್ಷ್ಯಾದಧೃಷ್ಯತ್ವಾದರ್ಥಜ್ಞಾನಾನ್ನಯಾನ್ವಯಾತ್ ॥ ೨೩ ॥

ತಪಸಾ ಚ ಕೃತಜ್ಞತ್ವಾದ್ ವೃದ್ಧಃ ಸರ್ವಗುಣೈಸ್ತಥಾ ।
ಯುಕ್ತೋ ಭವತ್ಸಮೋ ಗೋಪ್ತಾ ರಾಜ್ಞಾಮನ್ಯೋ ನ ವಿದ್ಯತೇ ।
ಸ ಭವಾನ್ ಪಾತು ನಃ ಸರ್ವಾನ್ ವಿಬುಧಾನಿವ ವಾಸವಃ ॥ ೨೪ ॥

ಶ್ರೇಷ್ಠವಾದ ವರ್ಣದಿಂದ ಕೂಡಿರುವುದರಿಂದಲೂ, ಒಳ್ಳೆಯ ಕುಲದಲ್ಲಿ ಜನ್ಮದಿಂದಲೂ, ವಿದ್ಯೆಯಿಂದಲೂ, ವಯಸ್ಸಿನಿಂದಲೂ, ಬುದ್ಧಿಯಿಂದಲೂ, ಪರಾಕ್ರಮದಿಂದಲೂ, ದಕ್ಷತೆಯಿಂದಲೂ, ಅರ್ಥ-ಜ್ಞಾನದಿಂದಲೂ, ರಾಜನೀತಿಯ ಪ್ರಯೋಗದಿಂದಲೂ, ಅಧೃಷ್ಯತ್ವದಿಂದಲೂ (ಇನ್ನೊಬ್ಬರಿಗೆ ಸೋಲದಿರುವುದರಿಂದಲೂ), ತಪಸ್ಸಿನಿಂದಲೂ, ಕೃತಜ್ಞತೆಯಿಂದಲೂ ಮತ್ತು ಸರ್ವಗುಣಗಳಿಂದಲೂ ಕೂಡಿದ ವೃದ್ಧರಾದ ನಿಮಗೆ ಸಮಾನರಾದ ರಕ್ಷಕನು ರಾಜರಲ್ಲಿ ಬೇರೆ ಯಾವನೂ ಇರುವುದಿಲ್ಲ. ಇಂದ್ರನು ದೇವತೆಗಳನ್ನು ರಕ್ಷಿಸಿದಂತೆ ನೀವು ನಮ್ಮೆಲ್ಲರನ್ನೂ ರಕ್ಷಿಸಿ.

ತ್ವಯಾ ನೇತ್ರಾ ಪರಾನ್ ಜೇತುಮಿಚ್ಛಾಮೋ ದ್ವಿಜಸತ್ತಮ ।
ರುದ್ರಾಣಾಮಿವ ಕಾಪಾಲಿರ್ವಸೂನಾಮಿವ ಪಾವಕಃ ॥ ೨೫ ॥

ಕುಬೇರ ಇವ ಯಕ್ಷಾಣಾಂ ಮರುತಾಮಿವ ವಾಸವಃ ।
ವಸಿಷ್ಠ ಇವ ವಿಪ್ರಾಣಾಂ ತೇಜಸಾಮಿವ ಭಾಸ್ಕರಃ ॥ ೨೬ ॥

ಪಿತೄಣಾಮಿವ ಧರ್ಮೋಽಥ ಆದಿತ್ಯಾನಾಮಿವಾಂಬುರಾಟ್ ।
ನಕ್ಷತ್ರಾಣಾಮಿವ ಶಶೀ ವೀರುಧಾಮಂಶುಮಾನಿವ ॥ ೨೭ ॥

ಸರ್ವೇಷಾಮಿಹ ಲೋಕಾನಾಂ ವಿಶ್ವಸ್ಯ ಚ ಯಥಾ ಕ್ಷಯಃ ।
ವಿಶ್ವೋತ್ಪತ್ತಿಸ್ಥಿತಿಶ್ಚೈವ ಶ್ರೇಷ್ಠೋ ನಾರಾಯಣಃ ಪ್ರಭುಃ ।
ಏವಂ ಸೇನಾಪ್ರಣೇತೃಣಾಂ ಮಮ ಸೇನಾಪತಿರ್ಭವ ॥ ೨೮॥

ಎಲೈ ಬ್ರಾಹ್ಮಣಶ್ರೇಷ್ಠರೇ, ನಿಮ್ಮನ್ನು ನಾಯಕರನ್ನಾಗಿ ಹೊಂದಿ ನಾವು ಶತ್ರುಗಳನ್ನು ಜಯಿಸಲು ಇಚ್ಛಿಸುತ್ತೇವೆ. ರುದ್ರರಿಗೆ ಕಪಾಲಿಯಾದ ಪಾರ್ವತೀ ಪತಿಯಂತೆ, ವಸುಗಳಿಗೆ ಅಗ್ನಿಯಂತೆ, ಯಕ್ಷರಿಗೆ ಕುಬೇರನಂತೆ, ಮರುತ್ತುಗಳಿಗೆ ಇಂದ್ರನಂತೆ, ಬ್ರಾಹ್ಮಣರಿಗೆ ವಸಿಷ್ಠರಂತೆ, ತೇಜಸ್ವಿಗಳಿಗೆ ಸೂರ್ಯನಂತೆ, ಪಿತೃಗಳಿಗೆ ಯಮನಂತೆ, ಅದಿತಿಪುತ್ರರಿಗೆ ವರುಣನಂತೆ, ನಕ್ಷತ್ರಗಳಿಗೆ ಚಂದ್ರನಂತೆ, ಸಸಿಗಳಿಗೆ ಸೂರ್ಯನಂತೆ, ಸರ್ವಲೋಕಗಳಿಗೂ ಉತ್ಪತ್ತಿ-ಸ್ಥಿತಿ-ಸಂಹಾರಗಳಿಗೆ ಕಾರಣನಾದ ಪ್ರಭುವಾದ ಶ್ರೇಷ್ಠ ನಾರಾಯಣನಂತೆ ನಮ್ಮೆಲ್ಲ ಸೇನಾನಾಯಕರಿಗೂ ನೀವು ಸೇನಾಪತಿಯಾಗಿ.

ಏಕಾದಶೇಮಾ ವಶಗಾ ಅಕ್ಷೋಹಿಣ್ಯಸ್ತವಾನಘ ।
ತಾಭಿಃ ಶತ್ರೂನ್ ಪ್ರತಿವ್ಯೂಹ್ಯ ಜಹೀಂದ್ರೋ ದಿತಿಜಾನಿವ ॥ ೨೯ ॥

ಎಲೈ ದೋಷರಹಿತರೇ, ಈ ಹನ್ನೊಂದು ಅಕ್ಷೋಹಿಣಿ ಸೈನ್ಯಗಳು ನಿಮ್ಮ ವಶವಾಗಿವೆ. ಅವುಗಳಿಂದ ಪಾಂಡವರ ವ್ಯೂಹಕ್ಕೆ ಪ್ರತಿಯಾಗಿ ವ್ಯೂಹವನ್ನು ರಚಿಸಿ, ಇಂದ್ರನು ದೈತ್ಯರನ್ನು ಸಂಹರಿಸಿದಂತೆ ಶತ್ರುಗಳನ್ನು ಸಂಹರಿಸಿ.

ಪ್ರಯಾತು ಸ ಭವಾನಗ್ರೇ ದೇವಾನಾಮಿವ ಪಾವಕಿಃ ।
ಅನುಯಾಸ್ಯಾಮಹೇ ತ್ವಾऽऽಜೌ ಸೌರಭೇಯಾ ಇವರ್ಷಭಮ್॥ ೩೦ ॥

ನೀವು ದೇವತೆಗಳ ಮುಂಭಾಗದಲ್ಲಿ ಷಣ್ಮುಖನು ಹೋದಂತೆ ಮುಂದೆ ಹೋಗಿ. ನಾವು ಗೋವುಗಳು ವೃಷಭವನ್ನು ಹಿಂಬಾಲಿಸುವಂತೆ ರಣರಂಗದಲ್ಲಿ ನಿಮ್ಮನ್ನು ಹಿಂಬಾಲಿಸುವೆವು.

ಉಗ್ರಧನ್ವಾ ಮಹೇಷ್ವಾಸೋ ದಿವ್ಯಂ ವಿಸ್ಫಾರಯನ್ ಧನುಃ ।
ದೃಷ್ಟ್ವಾ ಭವಂತಂ ಸಂಗ್ರಾಮೇ ನಾರ್ಜುನಃ ಪ್ರಸಹಿಷ್ಯತೇ ॥ ೩೧ ॥

ನಿಮ್ಮನ್ನು ಯುದ್ಧದಲ್ಲಿ ನೋಡಿ ಉಗ್ರಧನುಸ್ಸುಳ್ಳ, ಮಹಾಧನುರ್ಧಾರಿಯಾದ, ದಿವ್ಯವಾದ ಧನುಸ್ಸನ್ನು ಎಳೆಯುವ ಅರ್ಜುನನು ಸಹಿಸುವುದಿಲ್ಲ.

ಧ್ರುವಂ ಯುಧಿಷ್ಠಿರಂ ಸಂಖೇ ಸಸೈನ್ಯಂ ಸಹಬಾಂಧವಮ್ ।
ಜೇತಾಸ್ಮಿ ಪುರುಷವ್ಯಾಘ್ರ ಭವಾನ್ ಸೇನಾಪತಿರ್ಯದಿ ॥ ೩೨ ॥

ಎಲೈ ಪುರುಷವ್ಯಾಘ್ರರೇ, ನೀವು ಸೇನಾಪತಿಗಳಾದರೆ ನಿಶ್ಚಿತವಾಗಿ ತಮ್ಮ ಸೈನ್ಯ ಮತ್ತು ಬಾಂಧವರಿಂದ ಕೂಡಿದ ಯುಧಿಷ್ಠಿರನನ್ನು ಯುದ್ಧದಲ್ಲಿ ಗೆಲ್ಲುವೆನು.

ಸಂಜಯಃ

ಏವಮುಕ್ತೇ ತತೋ ದ್ರೋಣೇ ಜಯೇತ್ಯೂಚುರ್ನರಾಧಿಪಾಃ ।
ಸಿಂಹನಾದೇನ ಸಂಹೃಷ್ಟಾ ಹರ್ಷಯಂತಸ್ತವಾತ್ಮಜಮ್ ॥೩೩॥

ಸೈನಿಕಾಶ್ಚ ಮುದಾ ಯುಕ್ತಾ ವರ್ಧಯಂತೋ ದ್ವಿಜೋತ್ತಮಮ್ ।
ದುರ್ಯೋಧನಂ ಪುರಸ್ಕೃತ್ಯ ಪ್ರಾರ್ಥಯಂತೋ ಮಹದ್ ಯಶಃ ॥೩೪॥

ಸಂಜಯ– ದ್ರೋಣರಿಗೆ ದುರ್ಯೋಧನನು ಹೀಗೆ ಹೇಳುತ್ತಿರಲು, ರಾಜರು ಸಂತೋಷಗೊಂಡು ನಿನ್ನ ಪುತ್ರನನ್ನು ಸಂತೋಷಪಡಿಸುತ್ತಾ ಸಿಂಹನಾದವನ್ನು ಮಾಡಿ, ದ್ರೋಣರಿಗೆ ಜಯವಾಗಲಿ ಎಂದು ಹೇಳಿದರು. ದುರ್ಯೋಧನನನ್ನು ಮುಂದೆ ಮಾಡಿಕೊಂಡು ದೊಡ್ಡ ಕೀರ್ತಿಯನ್ನು ಬಯಸುವ ಸೈನಿಕರೂ ಸಹ ಸಂತೋಷದಿಂದ ಕೂಡಿದವರಾಗಿ ಬ್ರಾಹ್ಮಣಶ್ರೇಷ್ಠರಾದ ಅವರಿಗೆ ಶುಭಾಶಂಸನೆಯನ್ನು ಮಾಡುತ್ತಾ ಜಯವಾಗಲಿ ಎಂದು ಹೇಳಿದರು.

ದ್ರೋಣಃ

ವೇದಾನ್ ಷಡಂಗಾನ್ ವೇದಾಹಮರ್ಥವಿದ್ಯಾಂ ಚ ಮಾನವೀಮ್ ।
ತ್ರೈಯ್ಯಂಬಕಮಥೇಷ್ವಸ್ತ್ರಮಸ್ತ್ರಾಣಿ ವಿವಿಧಾನಿ ಚ ॥ ೩೫ ॥

ದ್ರೋಣ– ನಾನು ಷಡಂಗ ಸಹಿತವಾದ ವೇದಗಳನ್ನು ಮತ್ತು ಮನುವಿನ ಅರ್ಥಶಾಸ್ತ್ರವನ್ನು ತಿಳಿದಿದ್ದೇನೆ. ರುದ್ರದೇವರ ಯುದ್ಧಶಾಸ್ತ್ರವನ್ನು ಮತ್ತು ವಿವಿಧವಾದ ಅಸ್ತ್ರಗಳನ್ನು ತಿಳಿದಿದ್ದೇನೆ.

ಯೇ ಚಾಪ್ಯುಕ್ತಾ ಮಯಿ ಗುಣಾ ಭವದ್ಭಿರ್ಜಯಕಾಂಕ್ಷಿಭಿಃ ।
ಚಿಕೀರ್ಷಂಸ್ತಾನಹಂ ಸತ್ಯಾನ್ ಯೋಧಯಿಷ್ಯಾಮಿ ಪಾಂಡವಾನ್ ॥೩೬॥

ಜಯಾಪೇಕ್ಷಿಗಳಾದ ನೀವು ನನ್ನಲ್ಲಿ ಯಾವ ಗುಣಗಳನ್ನು ಹೇಳಿದ್ದೀರೋ ಅಂತಹ ನಿಮ್ಮ ಮಾತನ್ನು ಸತ್ಯವನ್ನಾಗಿ ಮಾಡಲು ಬಯಸಿ ನಾನು ಪಾಂಡವರ ಜೊತೆಯಲ್ಲಿ ಯುದ್ಧವನ್ನು ಮಾಡುವೆನು.

ಪಾರ್ಷತಂ ತು ರಣೇ ರಾಜನ್ ನ ಹನಿಷ್ಯೇ ಕಥಂಚನ ।
ಸ ಹಿ ಸೃಷ್ಟೋ ವಧಾರ್ಥಾಯ ಮಮೈವ ಪುರುಷರ್ಷಭಃ ॥ ೩೭ ॥

ಎಲೈ ರಾಜನೇ, ಧೃಷ್ಟದ್ಯುಮ್ನನನ್ನು ಯುದ್ಧದಲ್ಲಿ ಯಾವ ಕಾರಣದಿಂದಲೂ ಕೊಲ್ಲುವುದಿಲ್ಲ. ಪುರುಷಶ್ರೇಷ್ಠನಾದ ಅವನು ನನ್ನ ವಧೆಗಾಗಿಯೇ ಜನಿಸಿದ್ದಾನೆ.

ಯೋಧಯಿಷ್ಯಾಮಿ ಸೈನ್ಯಾನಿ ನಾಶಯನ್ ಸರ್ವಸೋಮಕಾನ್ ।
ನ ಚ ಮಾಂ ಪಾಂಡವಾ ಯುದ್ಧೇ ಯೋಧಯಿಷ್ಯಂತಿ ಹರ್ಷಿತಾಃ ॥೩೮॥

ಸರ್ವಸೋಮಕರನ್ನು ನಾಶ ಮಾಡುತ್ತಾ ಉಳಿದ ಸೈನ್ಯದ ಜೊತೆಯಲ್ಲಿ ಯುದ್ಧವನ್ನು ಮಾಡುವೆನು. ಹರ್ಷಯುಕ್ತರಾದ ಪಾಂಡವರು ನನ್ನ ಜೊತೆಯಲ್ಲಿ ಯುದ್ಧವನ್ನು ಮಾಡುವುದಿಲ್ಲ.

ಸಂಜಯಃ

ಏವಮುಕ್ತೋಽಭ್ಯನುಜ್ಞಾತಃ ಚಕ್ರೇ ಸೇನಾಪತಿಂ ತದಾ ।
ದ್ರೋಣಂ ತವ ಸುತೋ ರಾಜನ್ ವಿಧಿದೃಷ್ಟೇನ ಕರ್ಮಣಾ ॥ ೩೯ ॥

ಸಂಜಯ– ದ್ರೋಣರಿಂದ ಹೀಗೆ ಹೇಳಲ್ಪಟ್ಟು ಅನುಮತಿಯನ್ನು ಪಡೆದ ನಿನ್ನ ಪುತ್ರನು ವಿಧಿವತ್ತಾದ ಕರ್ಮದಿಂದ ದ್ರೋಣರನ್ನು ಆಗ ಸೇನಾಪತಿಯನ್ನಾಗಿ ಮಾಡಿದನು.

ತಥಾಽಭಿಷಿಷಿಚುರ್ದ್ರೋಣಂ ದುರ್ಯೋಧನಮುಖಾ ನೃಪಾಃ ।
ಯಥಾ ಸೇನಾಪತಿಂ ಸ್ಕಂದಂ ಪುರಾ ಶಕ್ರಮುಖಾಃ ಸುರಾಃ ॥ ೪೦ ॥

ಇಂದ್ರ ಮೊದಲಾದ ದೇವತೆಗಳು ಹಿಂದೆ ಷಣ್ಮುಖನನ್ನು ಸೇನಾಪತಿಯಾಗಿ ಮಾಡಿದಂತೆ ದುರ್ಯೋಧನ ಮೊದಲಾದ ರಾಜರು ದ್ರೋಣರಿಗೆ ಅಭಿಷೇಕವನ್ನು ಮಾಡಿದರು.

ತತೋ ವಾದಿತ್ರಘೋಷೇಣ ಶಂಖಾನಾಂ ಚ ಮಹಾಸ್ವನೈಃ ।
ಪ್ರಾದುರಾಸೀತ್ ತತೋ ದ್ರೋಣೇ ಕೃತೇ ಸೇನಾಪತೌ ರವಃ ॥ ೪೧ ॥

ದ್ರೋಣರು ಸೇನಾಪತಿಯಾಗಿ ಮಾಡಲ್ಪಡುತ್ತಿರಲು ವಾದ್ಯಘೋಷಗಳಿಂದಲೂ, ಶಂಖಘೋಷಗಳಿಂದಲೂ ಮಹಾಶಬ್ದವು ಉಂಟಾಯಿತು.

ತತಃ ಪುಣ್ಯಾಹಘೋಷೇಣ ಸಾಶೀರ್ವಾದಸ್ವನೇನ ಚ ।
ಸೂತಮಾಗಧವಂದೀನಾಂ ಸಂಸ್ತವೈರ್ಗೀತಮಂಗಲೈಃ ॥೪೨॥

ಜಯಶಬ್ದೈರ್ಮನೋಜ್ಞೈಶ್ಚ ನರ್ತನೈಸ್ತತ್ರ ತಂ ಪ್ರತಿ ।
ಸತ್ಕೃತ್ಯ ವಿಧಿವದ್ ದ್ರೋಣಂ ಜಿತಾನ್ ಮನ್ಯಂತ ಪಾಂಡವಾನ್ ॥೪೩॥

ಅನಂತರ ಪುಣ್ಯಾಹ ಘೋಷಗಳಿಂದಲೂ, ಆಶೀರ್ವಾದ ವಚನಗಳಿಂದಲೂ, ಸೂತ-ಮಾಗಧ-ವಂದಿಗಳ ಸ್ತೋತ್ರಗಳಿಂದಲೂ, ಮಂಗಳ ಗೀತೆಗಳಿಂದಲೂ, ಜಯಶಬ್ದಗಳಿಂದಲೂ, ಮನೋಹರವಾದ ನರ್ತನಗಳಿಂದಲೂ ದ್ರೋಣರನ್ನು ಶಾಸ್ತ್ರೋಕ್ತ ರೀತಿಯಿಂದ ಸತ್ಕರಿಸಿ ದುರ್ಯೋಧನನು ಪಾಂಡವರನ್ನು ಗೆದ್ದಿದ್ದೇನೆ ಎಂದು ತಿಳಿದನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಪಂಚಮೋऽಧ್ಯಾಯಃ ॥

॥ ದ್ರೋಣಾಭಿಷೇಕಪರ್ವಣಿ ಪಂಚಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಐದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಆರನೆಯ ಅಧ್ಯಾಯ

ಸಂಜಯನಿಂದ ದ್ರೋಣರ ಪರಾಕ್ರಮದ ವರ್ಣನೆ.

ಸಂಜಯಃ

ಸೈನಾಪತ್ಯಂ ತು ಸಂಪ್ರಾಪ್ಯ ಭಾರದ್ವಾಜೋ ಮಹಾರಥಃ ।
ಯುಯುತ್ಸುರ್ವ್ಯೂಹ್ಯ ಸೈನ್ಯಾನಿ ಪ್ರಾಯಾತ್ ತವ ಸುತೈಃಸಹ ॥ ೧ ॥

ಸಂಜಯ– ಮಹಾರಥರಾದ ದ್ರೋಣರು ಸೇನಾಧಿಪತ್ಯವನ್ನು ಹೊಂದಿ ಯುದ್ಧವನ್ನು ಮಾಡಲು ಬಯಸಿ, ಸೈನ್ಯವನ್ನು ವ್ಯೂಹಗೊಳಿಸಿ ನಿನ್ನ ಪುತ್ರರ ಜೊತೆಯಲ್ಲಿ ಹೊರಟರು.

ಸೈಂಧವಶ್ಚ ಕಳಿಂಗಶ್ಚ ವಿಕರ್ಣಶ್ಚ ತವಾತ್ಮಜಃ ।
ದಕ್ಷಿಣಂ ಪಕ್ಷಮಾಸ್ಥಾಯ ಸಮತಿಷ್ಠಂತ ದಂಸಿತಾಃ ॥ ೨ ॥

ಸೈಂಧವ, ಕಳಿಂಗ ಮತ್ತು ನಿನ್ನ ಪುತ್ರನಾದ ವಿಕರ್ಣ ಇವರು ಕವಚಗಳನ್ನು ಧರಿಸಿ ಸೈನ್ಯದ ದಕ್ಷಿಣಭಾಗದಲ್ಲಿ ನಿಂತರು.

ಪ್ರಪಕ್ಷಂ ಶಕುನಿಸ್ತೇಷಾಂ ಪ್ರವರೈರ್ಹಯಸಾದಿಭಿಃ ।
ಯಯೌ ಗಾಂಧಾರಕೈಃ ಸಾರ್ಧಂ ವಿಮಲಪ್ರಾಸಯೋಧಿಭಿಃ ॥ ೩ ॥

ಶುದ್ಧವಾದ ಪ್ರಾಸಗಳಿಂದ ಯುದ್ಧವನ್ನು ಮಾಡುವ ಗಾಂಧಾರಕರಿಂದಲೂ ಮತ್ತು ಶ್ರೇಷ್ಠರಾದ ಅಶ್ವಾರೋಹಿಗಳಿಂದಲೂ ಸಹಿತನಾದ ಶಕುನಿಯು ಅವರಿಗೆ ಹಿಂದಿನಿಂದ ಬಲವನ್ನು ಕೊಡುವ ಪ್ರಪಕ್ಷನಾಗಿದ್ದನು.

ಕೃಪಶ್ಚ ಕೃತವರ್ಮಾ ಚ ಚಿತ್ರಸೇನೋ ವಿವಿಂಶತಿಃ ।
ದುಃಶಾಸನಮುಖಾ ಯತ್ತಾಃ ಸವ್ಯಂ ಪಕ್ಷಮಪಾಲಯನ್ ॥ ೪ ॥

ಕೃಪರು, ಕೃತವರ್ಮ, ಚಿತ್ರಸೇನ, ವಿವಿಂಶತಿ, ದುಶ್ಶಾಸನ ಮೊದಲಾದವರು ಎಚ್ಚರಿಕೆಯಿಂದ ಸೈನ್ಯದ ಎಡಭಾಗವನ್ನು ರಕ್ಷಿಸಿದರು.

ತೇಷಾಂ ಪ್ರಪಕ್ಷಾಃ ಕಾಂಬೋಜಾಃ ಸುದಕ್ಷಿಣಪುರಃಸರಾಃ ।
ಯಯುರಶ್ವೈರ್ಮಹಾವೇಗೈಃ ಶಕಾಶ್ಚ ಯವನೈಃ ಸಹ ॥ ೫ ॥

ಕಾಂಬೋಜದೇಶದ ಸುದಕ್ಷಿಣ ಮೊದಲಾದವರು ಮಹಾವೇಗವುಳ್ಳ ಅಶ್ವಗಳಿಂದಲೂ, ಶಕರಿಂದಲೂ ಮತ್ತು ಯವನರಿಂದಲೂ ಸಹಿತರಾಗಿ ಅವರಿಗೆ ಪ್ರಪಕ್ಷವಾಗಿ ಹೊರಟರು.

ಅಂಗಾಸ್ತ್ರಿಗರ್ತಾಃ ಸಾಂಬಷ್ಠಾಃ ಪ್ರತೀಚ್ಯೋದೀಚ್ಯವಾಸಿನಃ ।
ಶಿಬಯಃ ಶೂರಸೇನಾಶ್ಚ ಮಲ್ಲಾಶ್ಚ ಮಗಧೈಃ ಸಹ ॥ ೬ ॥

ಸೌವೀರಾಃ ಕಿತವಾಃ ಪ್ರಾಚ್ಯಾ ದಾಕ್ಷಿಣಾತ್ಯಾಶ್ಚ ಸರ್ವಶಃ ।
ತವಾತ್ಮಜಂ ಪುರಸ್ಕೃತ್ಯ ಸೂತಪುತ್ರಸ್ಯ ಪೃಷ್ಠತಃ ॥ ೭ ॥

ಅಂಗರು, ತ್ರಿಗರ್ತರು, ಅಂಬಷ್ಠರು, ಪಶ್ಚಿಮ ಮತ್ತು ಉತ್ತರದಿಕ್ಕಿನಲ್ಲಿ ವಾಸವಿರುವ ಯೋಧರು, ಶಿಬಿಗಳು, ಶೂರಸೇನರು, ಮಲ್ಲರು, ಮಗಧರು, ಸೌವೀರರು, ಕಿತವರು, ಪೂರ್ವದಿಕ್ಕಿನಲ್ಲಿ ವಾಸಿಸುವವರು ಮತ್ತು ದಕ್ಷಿಣ ದಿಕ್ಕಿನಲ್ಲಿ ವಾಸಿಸುವವರು ಎಲ್ಲರೂ

ನಿನ್ನ ಪುತ್ರನಾದ ದುರ್ಯೋಧನನನ್ನು ಮುಂದೆ ಮಾಡಿಕೊಂಡು ಕರ್ಣನ ಹಿಂದೆ ನಡೆದರು.

ಹರ್ಷಯನ್ ಸರ್ವಸೈನ್ಯಾನಿ ಬಲೇಷು ಬಲಮಾದಧತ್ ।
ಯಯೌ ವೈಕರ್ತನಃ ಕರ್ಣಃ ಪ್ರಮುಖಃ ಸರ್ವಧನ್ವಿನಾಮ್ ॥ ೮ ॥

ತಸ್ಯ ದೀಪ್ತೋ ಮಹಾಕಾಯಃ ಸ್ವಾನ್ಯನೀಕಾನಿ ಹರ್ಷಯನ್ ।
ಹಸ್ತಿಕಕ್ಷ್ಯೋ ಮಹಾಕೇತುರ್ಬಭೌ ಸೂರ್ಯಸಮದ್ಯುತಿಃ ।
ನ ಭೀಷ್ಮವ್ಯಸನಂ ಕಶ್ಚಿದ್ ದೃಷ್ಟ್ವಾ ಕರ್ಣಮಮನ್ಯತ ॥ ೯ ॥

ಎಲ್ಲ ಸೈನ್ಯಕ್ಕೂ ಹರ್ಷವನ್ನುಂಟು ಮಾಡುತ್ತ, ಸೈನ್ಯಗಳಿಗೆ ಬಲವನ್ನು ಕೊಡುತ್ತ ವೈಕರ್ತನಾದ ಕರ್ಣನು ಎಲ್ಲ ಧನುರ್ಧಾರಿಗಳ ಮುಂದೆ ನಡೆದನು. ಕಾಕಚಿಹ್ನೆಯುಳ್ಳ ದೊಡ್ಡದಾದ ಮತ್ತು ದೀಪ್ತವಾದ ಮಹಾಧ್ವಜವು, ಸೂರ್ಯನಿಗೆ ಸಮಾನವಾದ ಕಾಂತಿಯನ್ನು ಹೊಂದಿ ತನ್ನ ಸೈನ್ಯವನ್ನು ಹರ್ಷಗೊಳಿಸುತ್ತಾ ಶೋಭಿಸಿತು. ಕರ್ಣನನ್ನು ನೋಡಿ ಯಾವನೂ ಭೀಷ್ಮರ ದುಃಖದ ಬಗ್ಗೆ ಚಿಂತಿಸಲಿಲ್ಲ.

ವಿಶೋಕಾಃ ಸಮಪದ್ಯಂತ ರಾಜಾನಃ ಕುರುಭಿಃ ಸಹ ।
ಹೃಷ್ಟಾಶ್ಚ ಬಹವೋ ಯೋಧಾಃ ತತ್ರ ಜಲ್ಪಂತಿ ಸಂಯುಗೇ ॥೧೦॥

ನ ಹಿ ಕರ್ಣಂ ರಣೇ ದೃಷ್ಟ್ವಾ ಯುದ್ಧೇ ಸ್ಥಾಸ್ಯಂತಿ ಪಾಂಡವಾಃ ॥೧೧॥

ಕರ್ಣೋ ಹಿ ಸಮರೇ ಶಕ್ತೋ ಜೇತುಂ ದೇವಾನಪಿ ಧ್ರುವಮ್ ।
ಕಿಂ ಪುನಃ ಪಾಂಡವಾನ್ ಯುದ್ಧೇ ಹೀನವೀರ್ಯಪರಾಕ್ರಮಾನ್ ॥೧೨॥

ಭೀಷ್ಮೇಣ ತು ರಣೇ ಪಾರ್ಥಾಃ ಪಾಲಿತಾ ಬಲಶಾಲಿನಾ ।
ತಾಂಸ್ತು ಕರ್ಣಃ ಶರೈಸ್ತೀಕ್ಷ್ಣೈಃ ನಾಶಯಿಷ್ಯತ್ಯಸಂಶಯಮ್ ॥ ೧೩ ॥

ರಾಜರು ಕೌರವರ ಜೊತೆಯಲ್ಲಿ ಶೋಕಹೀನರಾಗಿ ಹರ್ಷಗೊಂಡರು. ಬಹಳ ಯೋಧರು-ಯುದ್ಧದಲ್ಲಿ ಕರ್ಣನನ್ನು ನೋಡಿ ಪಾಂಡವರು ರಣರಂಗದಲ್ಲಿ ನಿಲ್ಲುವುದಿಲ್ಲ. ಕರ್ಣನು ಖಂಡಿತವಾಗಿ ಯುದ್ಧದಲ್ಲಿ ದೇವತೆಗಳನ್ನೂ ಗೆಲ್ಲಲು ಸಮರ್ಥನಾದವನು. ಇನ್ನು ಹೀನ ಬಲ-ಪರಾಕ್ರಮವುಳ್ಳ ಪಾಂಡವರನ್ನು ಯುದ್ಧದಲ್ಲಿ ಗೆಲ್ಲುವುದು ಯಾವ ದೊಡ್ಡ ವಿಷಯ? ಬಲಶಾಲಿಗಳಾದ ಭೀಷ್ಮರಾದರೋ ಯುದ್ಧದಲ್ಲಿ

ಪಾಂಡವರನ್ನು ರಕ್ಷಿಸಿದರು. ಕರ್ಣನಾದರೋ ಅವರನ್ನು ತನ್ನ ತೀಕ್ಷ್ಣವಾದ ಬಾಣಗಳಿಂದ ನಿಸ್ಸಂಶಯವಾಗಿ ನಾಶಗೊಳಿಸುವನು- ಎಂದು ಮಾತನಾಡಿಕೊಂಡರು.

ಏವಂ ಬ್ರುವಂತಸ್ತೇऽನ್ಯೋನ್ಯಂ ಹೃಷ್ಟರೂಪಾ ವಿಶಾಂಪತೇ ।
ರಾಧೇಯಂ ಪೂಜಯಂತಶ್ಚ ಪ್ರಶಂಸಂತಶ್ಚ ನಿರ್ಯಯುಃ ॥ ೧೪ ॥

ಎಲೈ ರಾಜನೇ, ಹೀಗೆ ಸಂತೋಷಗೊಂಡ ಅವರು ಪರಸ್ಪರವಾಗಿ ಮಾತನಾಡುತ್ತಾ, ಕರ್ಣನನ್ನು ಪೂಜಿಸುತ್ತಾ ಮತ್ತು ಪ್ರಶಂಸಿಸುತ್ತಾ ಹೊರಟರು.

ಅಸ್ಮಾಕಂ ಶಕಟವ್ಯೂಹೋ ದ್ರೋಣೇನ ವಿಹಿತೋऽಭವತ್ ।
ಪರೇಷಾಂ ಕ್ರೌಂಚ ಏವಾಸೀದ್ ವ್ಯೂಹೋ ರಾಜನ್ ಮಹಾತ್ಮನಾಮ್ ।
ಪ್ರೀಯಮಾಣೇನ ವಿಹಿತೋ ಧರ್ಮರಾಜೇನ ಮಾರಿಷ ॥ ೧೫ ॥

ದ್ರೋಣರು ನಮ್ಮ ಸೈನ್ಯದಲ್ಲಿ ಶಕಟ ವ್ಯೂಹವನ್ನು ರಚಿಸಿದರು. ಎಲೈ ರಾಜನೇ, ಪೂಜ್ಯನೇ, ಸಂತೋಷಗೊಂಡ ಧರ್ಮರಾಜನು ಮಹಾತ್ಮರಾದ ಪಾಂಡವರ ಸಲುವಾಗಿ ಕ್ರೌಂಚವ್ಯೂಹವನ್ನೇ ರಚಿಸಿದ್ದನು.

ವ್ಯೂಹಪ್ರಮುಖತಸ್ತೇಷಾಮಾಸ್ಥಿತೌ ಪುರುಷರ್ಷಭೌ ।
ವಾನರಧ್ವಜಮುಚ್ಛ್ರಿತ್ಯ ವಿಷ್ವಕ್ಸೇನಧನಂಜಯೌ ॥ ೧೬ ॥

ಕಕುದಂ ಸರ್ವಸೈನ್ಯಾನಾಂ ಲಕ್ಷ್ಮ ಸರ್ವಧನುಷ್ಮತಾಮ್ ।

ಅವರ ವ್ಯೂಹದ ಮುಂಭಾಗದಲ್ಲಿ ಸರ್ವಸೈನ್ಯಗಳಿಗೂ ಶಿಖರಪ್ರಾಯರಾಗಿದ್ದ, ಸರ್ವಧನುರ್ಧಾರಿಗಳಿಗೂ ಲಕ್ಷ್ಯರಾಗಿದ್ದ, ಪುರುಷಶ್ರೇಷ್ಠರಾದ ಕೃಷ್ಣಾರ್ಜುನರು ವಾನರ ಧ್ವಜವನ್ನು ಎತ್ತಿ ನಿಂತರು.

ಆದಿತ್ಯಪಥಗಃ ಕೇತುಃ ಪಾರ್ಥಸ್ಯಾಮಿತತೇಜಸಃ ॥ ೧೭ ॥

ದೀಪಯಾಮಾಸ ತತ್ ಸೈನ್ಯಂ ಪಾಂಡವಸ್ಯ ಮಹಾತ್ಮನಃ ।
ಯಥಾ ಪ್ರಜ್ವಲಿತಃ ಸೂರ್ಯೋ ಯುಗಾಂತೇ ವೈ ವಸುಂಧರಾಮ್ ॥೧೮॥

ಮಹಾತ್ಮನಾದ ಮತ್ತು ಅಮಿತಪರಾಕ್ರಮಿಯಾದ ಅರ್ಜುನನ ಆ ಧ್ವಜವು ಸೂರ್ಯಮಾರ್ಗದಲ್ಲಿನಿಂತು ಆ ಸೈನ್ಯವನ್ನು ಪ್ರಕಾಶಿಸುತ್ತಿದ್ದಿತು. ಯುಗಾಂತ ಕಾಲದಲ್ಲಿ

ಪ್ರಜ್ವಲಿತನಾದ ಸೂರ್ಯನು ಭೂಮಿಯನ್ನು ದಹಿಸುವಂತೆ ಮೇಧಾವಿಯಾದ ಅರ್ಜುನನ ಆ ಧ್ವಜವು ಸೈನ್ಯವನ್ನು ದಹಿಸುವಂತೆ ಇದ್ದಿತು.

ಪ್ರದಹನ್ ದೃಶ್ಯತೇ ತದ್ವತ್ ಕೇತುಃ ಪಾರ್ಥಸ್ಯ ಧೀಮತಃ ॥ ೧೮ ॥

ಅಸ್ಯತಾಮರ್ಜುನಃ ಶ್ರೇಷ್ಠೋ ಗಾಂಡೀವಂ ಧನುಷಾಂ ವರಮ್ ।
ವಾಸುದೇವಶ್ಚ ಭೂತಾನಾಂ ಚಕ್ರಾಣಾಂ ಚ ಸುದರ್ಶನಮ್ ॥ ೧೯ ॥

ಚತ್ವಾರ್ಯೇತಾನಿ ತೇಜಾಂಸಿ ವಹನ್ ಶ್ವೇತಹಯೋ ರಥಃ ।
ಪರೇಷಾಮಗ್ರತಸ್ತಸ್ಥೌ ಕಾಲಚಕ್ರಮಿವೋದ್ಯತಮ್ ॥ ೨೦ ॥

ಬಾಣವನ್ನು ಪ್ರಯೋಗಿಸುವವರಲ್ಲಿ ಅರ್ಜುನನು ಶ್ರೇಷ್ಠನಾದವನು. ಗಾಂಡೀವವು ಧನುಸ್ಸುಗಳಲ್ಲಿ ಶ್ರೇಷ್ಠವಾದುದು. ಕೃಷ್ಣನು ಎಲ್ಲ ಚೇತನಗಳಿಗಿಂತಲೂ ಶ್ರೇಷ್ಠನಾದವನು. ಸುದರ್ಶನವು ಎಲ್ಲ ಚಕ್ರಗಳಲ್ಲಿ ಶ್ರೇಷ್ಠವಾದುದು. ಅರ್ಜುನನ ಶ್ವೇತಾಶ್ವಗಳಿಂದ ಕೂಡಿದ ರಥವು ಈ ನಾಲ್ಕು ತೇಜಸ್ಸುಗಳನ್ನು ಹೊತ್ತು ಉದಯಿಸಿದ ಕಾಲಚಕ್ರದಂತೆ ಪಾಂಡವರ ಅಗ್ರಭಾಗದಲ್ಲಿ ನಿಂತಿದ್ದಿತು.

ಏವಮೇತೌ ಮಹಾತ್ಮಾನೌ ಬಲಸಾಗರಗಾವುಭೌ ।
ತಾವಕಾನಾಂ ಮುಖಂ ಕರ್ಣಃ ಪರೇಷಾಂ ತು ಧನಂಜಯಃ ॥ ೨೧ ॥

ಹೀಗೆ ಈ ಇಬ್ಬರು ಮಹಾತ್ಮರು ಸೈನ್ಯಸಾಗರದ ಮುಂಭಾಗದಲ್ಲಿದ್ದು, ನಿನ್ನ ಸೈನಿಕರ ಮುಂಭಾಗದಲ್ಲಿ ಕರ್ಣನೂ, ಅವರ ಮುಂಭಾಗದಲ್ಲಿ ಅರ್ಜುನನೂ ಇದ್ದರು.

ಯೌ ತೌ ಜಾತಾಭಿಸಂರಂಭೌ ಪರಸ್ಪರವಧೈಷಿಣೌ ।
ಅವೇಕ್ಷೇತಾಂ ತದಾऽನ್ಯೋನ್ಯಂ ಸಮರೇ ಕರ್ಣಪಾಂಡವೌ ॥ ೨೨ ॥

ಪರಸ್ಪರ ವಧೆಯನ್ನು ಬಯಸಿದ ಕರ್ಣಾರ್ಜುನರು ಆಗ ಕೋಪದಿಂದ ಕೂಡಿದವರಾಗಿ ರಣರಂಗದಲ್ಲಿ ಒಬ್ಬರನ್ನೊಬ್ಬರು ನೋಡಿದರು.

ಸಂಪ್ರಯಾತೇ ತು ಸಹಸಾ ಭಾರದ್ವಾಜೇ ಮಹಾರಥೇ ।
ಸಿಂಹನಾದೇನ ಮಹತಾ ವಸುಧಾ ಸಮಕಂಪತ ॥ ೨೩ ॥

ಮಹಾರಥರಾದ ದ್ರೋಣರು ಶೀಘ್ರವಾಗಿ ಹೋಗುತ್ತಿರಲು ಸೈನಿಕರ ದೊಡ್ಡ ಸಿಂಹನಾದದಿಂದ ಭೂಮಿಯು ನಡುಗಿತು.

ತತಸ್ತುಮುಲಮಾಕಾಶಮಾವೃಣೋತ್ ಸದಿವಾಕರಮ್ ।
ವಾತೋದ್ಧತಂ ರಜಸ್ತೀವ್ರಂ ಕೌಶೇಯನಿಕರೋಪಮಮ್ ॥ ೨೪ ॥

ಆ ತೀವ್ರವಾದ ಶಬ್ದವೂ ಮತ್ತು ಗಾಳಿಯಿಂದ ಕೆಂಪಾದ ರಕ್ತವಸ್ತ್ರದ ರಾಶಿಯಂತಿದ್ದ ಧೂಳೂ ಸಹ ಸೂರ್ಯನಿಂದ ಸಹಿತವಾದ ಆಕಾಶವನ್ನು ಆವರಿಸಿದವು.

ಅನಭ್ರೇ ವರ್ಷತಿ ವ್ಯೋಮ್ನಿ ಮಾಂಸಾಸ್ಥಿರುಧಿರಾಣ್ಯುತ ।
ಗೃಧ್ರಾಃ ಕಂಕಾ ಬಲಶ್ಯೇನಾ ವಾಯಸಾಶ್ಚ ಸಹಸ್ರಶಃ ।
ಉಪರ್ಯುಪರಿ ಸೇನಾಂ ತೇ ತದಾ ಪರ್ಯಪತನ್ ನೃಪ ॥ ೨೫ ॥

ಮೋಡವಿಲ್ಲದ ಆಕಾಶವು ರಕ್ತ-ಮಾಂಸದ ಮಳೆಯನ್ನು ಸುರಿಸುತ್ತಿರಲು ಎಲೈ ರಾಜನೇ, ಹದ್ದುಗಳು, ಕಂಕಗಳು, ಬಲಗಳು, ಶ್ಯೇನಗಳು (ಹದ್ದು) ಮತ್ತು ಕಾಗೆಗಳು ಸಹಸ್ರ ಸಂಖ್ಯೆಯಲ್ಲಿ ಆಗ ನಿನ್ನ ಸೈನ್ಯದ ಮೇಲ್ಭಾಗದಲ್ಲಿ ಸಂಚರಿಸಿದವು.

ಗೋಮಾಯವಶ್ಚ ವ್ಯಾಕ್ರೋಶನ್ ಭಯದಾ ದಾರುಣಸ್ವರಾಃ ।
ಅಕಾರ್ಷುರಪಸವ್ಯಂ ಚ ಪೃತನಾಂ ಬಹುಶಸ್ತವ ॥೨೬॥

ಚಿಖಾದಿಷಂತೋ ಮಾಂಸಾನಿ ಪಿಪಾಸಂತಶ್ಚ ಶೋಣಿತಮ್ ।

ಭಯವನ್ನುಂಟು ಮಾಡುವ ದಾರುಣಸ್ವರದಿಂದ ಕೂಡಿದ ನರಿಗಳು ರೋದಿಸಿದವು. ಮಾಂಸವನ್ನು ತಿನ್ನಲು ಬಯಸಿ, ರಕ್ತವನ್ನು ಪಾನ ಮಾಡಲು ಬಯಸಿ ಅವು ಬಹುಸಂಖ್ಯೆಯಲ್ಲಿ ನಿನ್ನ ಸೈನ್ಯಕ್ಕೆ ಅಪಸವ್ಯದ ಮಾರ್ಗದಲ್ಲಿ ಹೋದವು.

ಅಪತನ್ ದೀಪ್ಯಮಾನಾಶ್ಚ ನಿರ್ಘಾತಾಶ್ಚ ಸುದಾರುಣಾಃ ॥೨೭॥

ಉಲ್ಕಾ ಜ್ವಲಂತ್ಯಃ ಸೇನಾಂ ತೇ ಪುಚ್ಛೈರಾವೃತ್ಯ ಸರ್ವಶಃ ।
ಅಪತನ್ ದೀಪ್ಯಮಾನಾಶ್ಚ ನಿರ್ಘಾತಾ ವೈ ಸುದಾರುಣಾಃ ॥ ೨೮ ॥

ಬಹಳ ದಾರುಣವೂ, ಪ್ರಕಾಶಮಾನವೂ ಆದ ಜ್ವಲಿಸುವ ಉಲ್ಕೆಗಳು (ಧೂಮಕೇತುಗಳು) ತಮ್ಮ ಪುಚ್ಛದಿಂದ ನಿನ್ನ ಸೈನ್ಯಗಳೆಲ್ಲವನ್ನೂ ಆವರಿಸಿದವು.

ಮೋಡಗಳಿಲ್ಲದೆಯೇ ದಾರುಣವಾದ, ಪ್ರಕಾಶಮಾನವಾದ ಉಲ್ಕೆಗಳು ನಿನ್ನ ಸೈನ್ಯದ ಮೇಲೆ ಬಿದ್ದವು.

ಪರಿವೇಷೋ ಮಹಾಂಶ್ಚೈವ ಸವಿದ್ಯುತ್‌ಸ್ತನಯಿತ್ನುಮಾನ್ ।
ಭಾಸ್ಕರಸ್ಯಾಭವದ್ ರಾಜನ್ ಪ್ರಯಾತೇ ವಾಹಿನೀಪತೌ ॥ ೨೯ ॥

ಎಲೈ ರಾಜನೇ, ಸೇನಾಪತಿಗಳಾದ ದ್ರೋಣರು ಹೋಗುತ್ತಿರಲು ಸೂರ್ಯನಿಗೆ ಮಿಂಚು, ಸಿಡಿಲುಗಳಿಂದ ಸಹಿತವಾದ ದೊಡ್ಡ ಪರಿವೇಷವು ಉಂಟಾಯಿತು.

ಏತೇ ಚಾನ್ಯೇ ಚ ಬಹವಃ ಪ್ರಾದುರಾಸನ್ ಸುದಾರುಣಾಃ ।
ಉತ್ಪಾತಾ ಯುಧಿ ವೀರಾಣಾಂ ಜೀವಿತಕ್ಷಯಕಾರಕಾಃ ॥ ೩೦ ॥

ಯುದ್ಧದಲ್ಲಿ ವೀರರಿಗೆ ಪ್ರಾಣಹಾನಿಯನ್ನು ಸೂಚಿಸುವ ಈ ಅಪಶಕುನಗಳೂ ಮತ್ತು ಇನ್ನೂ ಅನೇಕ ಘೋರವಾದ ಅಪಶಕುನಗಳೂ ಉಂಟಾದವು.

ತತಃ ಪ್ರವವೃತೇ ಯುದ್ಧಂ ಪರಸ್ಪರವಧೈಷಿಣಾಮ್ ।
ಕುರುಪಾಂಡವಯೋಧಾನಾಂ ಶಬ್ದೇನಾನಾದಯಜ್ಜಗತ್ ॥ ೩೧ ॥

ಅನಂತರ ಪರಸ್ಪರ ವಧೆಯನ್ನು ಬಯಸಿದ ಕುರು-ಪಾಂಡವ ಯೋಧರಿಗೆ ಯುದ್ಧವು ಪ್ರಾರಂಭವಾಯಿತು. ಆ ಯುದ್ಧವು ಜಗತ್ತನ್ನು ಶಬ್ದದಿಂದ ತುಂಬಿತು.

ತೇ ತ್ವನ್ಯೋನ್ಯಂ ಸುಸಂರಬ್ಧಾಃ ಪಾಂಡವಾಃ ಸಹ ಕೌರವೈಃ ।
ಪ್ರತ್ಯಹ್ನನ್ ನಿಶಿತೈರ್ಬಾಣೈರ್ಜಯಗೃದ್ಧಾಃ ಪ್ರಹಾರಿಣಃ ॥ ೩೨ ॥

ಪರಸ್ಪರವಾಗಿ ಕೋಪಗೊಂಡ, ಪ್ರಹಾರಶೀಲರಾದ, ಜಯಾಕಾಂಕ್ಷಿಗಳಾದ ಪಾಂಡವರು ಕೌರವರ ಜೊತೆಯಲ್ಲಿ ಯುದ್ಧವನ್ನು ಮಾಡಿ, ಅವರನ್ನು ನಿಶಿತವಾದ ಬಾಣಗಳಿಂದ ಹೊಡೆದರು.

ಸ ಪಾಂಡವಾನಾಂ ಮಹತೀಂ ಮಹೇಷ್ವಾಸೋ ಮಹಾದ್ಯುತಿಃ ।
ವೇಗೇನಾಭ್ಯದ್ರವತ್ ಸೇನಾಂ ಕಿರನ್ ಶರಶತೈರ್ಗುರುಃ ॥ ೩೩ ॥

ಗುರುಗಳೂ, ಮಹಾಧನುರ್ಧಾರಿಗಳೂ, ಮಹಾಕಾಂತಿಯುಕ್ತರೂ ಆದ ದ್ರೋಣರು ನೂರಾರು ಬಾಣಗಳನ್ನು ಪಾಂಡವರ ಸೈನ್ಯದ ಮೇಲೆ ಸುರಿಸುತ್ತಾ ಪಾಂಡವರ ದೊಡ್ಡ ಸೈನ್ಯದ ಕಡೆಗೆ ವೇಗದಿಂದ ಮುನ್ನುಗ್ಗಿದರು.

ದ್ರೋಣಮಭ್ಯಾಗತಂ ದೃಷ್ಟ್ವಾ ಪಾಂಡವಾಃ ಸಹಸೃಂಜಯೈಃ ।
ಪ್ರತ್ಯಗೃಹ್ಣಂಸ್ತದಾ ರಾಜನ್ ಶರವರ್ಷೈಃ ಪೃಥಕ್ ಪೃಥಕ್ ॥ ೩೪ ॥

ದ್ರೋಣರು ತಮ್ಮ ಕಡೆಗೆ ಬರುವುದನ್ನು ನೋಡಿ ಸೃಂಜಯರಿಂದ ಸಹಿತರಾದ ಪಾಂಡವರು ಎಲೈ ರಾಜನೇ, ಬೇರೆ ಬೇರೆ ಶರವರ್ಷಗಳಿಂದ ಅವರನ್ನು ಸ್ವೀಕರಿಸಿದರು.

ಸಂಕ್ಷೋಭ್ಯಮಾಣಾ ದ್ರೋಣೇನ ಭಿದ್ಯಮಾನಾ ಚ ಸಾ ಚಮೂಃ ।
ವ್ಯಶೀರ್ಯತ ಸಪಾಂಚಾಲಾ ವಾತೇನೇವ ಬಲಾಹಕಾಃ ॥ ೩೫ ॥

ದ್ರೋಣರಿಂದ ಭಗ್ನವಾಗಿ ಕ್ಷೋಭೆಗೆ ಒಳಗಾದ, ಪಾಂಚಾಲರಿಂದ ಕೂಡಿದ ಆ ಸೈನ್ಯವು ವಾಯುವಿನಿಂದ ಮೋಡಗಳು ನಾಶ ಹೊಂದುವಂತೆ ನಾಶವನ್ನು ಹೊಂದಿತು.

ಬಹೂನ್ಯಪಿ ಏಕುರ್ವಾಣೋ ದಿವ್ಯಾನ್ಯಸ್ತ್ರಾಣಿ ಸಂಯುಗೇ ।
ಅಪೀಡಯತ್ ಕ್ಷಣೇನೈವ ದ್ರೋಣಃ ಪಾಂಡವಸೃಂಜಯಾನ್ ॥ ೩೬ ॥

ದ್ರೋಣರು ಒಂದು ಕ್ಷಣದಲ್ಲಿಯೇ ಯುದ್ಧದಲ್ಲಿ ಅನೇಕ ದಿವ್ಯಾಸ್ತ್ರಗಳನ್ನು ಪ್ರಯೋಗಿಸುತ್ತಾ ಪಾಂಡವ-ಸೃಂಜಯರನ್ನು ಪೀಡಿಸಿದರು.

ತೇ ಹನ್ಯಮಾನಾ ದ್ರೋಣೇನ ವಾಸವೇನೇವ ದಾನವಾಃ ।
ಪಾಂಚಾಲಾಃ ಸಮಕಂಪಂತ ಧೃಷ್ಟದ್ಯುಮ್ನಪುರೋಗಮಾಃ ॥ ೩೭ ॥

ದ್ರೋಣರಿಂದ ಹೊಡೆಯಲ್ಪಟ್ಟ ಧೃಷ್ಟದ್ಯುಮ್ನ ಮೊದಲಾದ ಆ ಪಾಂಚಾಲರು ಇಂದ್ರನಿಂದ ಹೊಡೆಯಲ್ಪಟ್ಟ ದಾನವರಂತೆ ನಡುಗಿದರು.

ತತೋ ದಿವ್ಯಾಸ್ತ್ರವಿಚ್ಛೂರೋ ಯಾಜ್ಞಸೇನಿರ್ಮಹಾರಥಃ ।
ಅಭಿನಚ್ಛರವರ್ಷೇಣ ದ್ರೋಣಾನೀಕಮನೇಕಧಾ ॥ ೩೮ ॥

ಅನಂತರ ದಿವ್ಯಾಸ್ತ್ರವೇತ್ತನೂ, ಶೂರನೂ, ಮಹಾರಥನೂ ಆದ ಧೃಷ್ಟದ್ಯುಮ್ನನು ತನ್ನ ಶರವರ್ಷದಿಂದ ದ್ರೋಣರ ಸೈನ್ಯವನ್ನು ಅನೇಕ ರೀತಿಯಲ್ಲಿ ಭಗ್ನಗೊಳಿಸಿದನು.

ದ್ರೋಣಸ್ಯ ಶರವರ್ಷಾಣಿ ಶರವರ್ಷೇಣ ಪಾರ್ಷತಃ ।
ಸನ್ನಿವಾರ್ಯ ತತಃ ಸರ್ವಾನ್ ಕುರೂನಭ್ಯಪತದ್ ಬಲೀ ॥ ೩೯ ॥

ಧೃಷ್ಟದ್ಯುಮ್ನನು ದ್ರೋಣರ ಬಾಣದ ಮಳೆಯನ್ನು ತನ್ನ ಬಾಣಗಳ ಮಳೆಯಿಂದ ನಿವಾರಿಸಿ ಅನಂತರ ಎಲ್ಲ ಕುರುಗಳ ಮೇಲೆ ಎರಗಿದನು.

ಸಂಗೃಹ್ಯ ತು ತತೋ ದ್ರೋಣಃ ಸಮವಸ್ಥಾಪ್ಯ ಚಾಹವೇ ।
ಸ್ವಮನೀಕಂ ಮಹಾಬಾಹುಃ ಪಾರ್ಷತಂ ಸಮುಪಾದ್ರವತ್ ॥ ೪೦ ॥

ಆಗ ಯುದ್ಧದಲ್ಲಿ ಮಹಾಬಾಹುಗಳಾದ ದ್ರೋಣರು ತಮ್ಮ ಸೈನ್ಯವನ್ನು ಒಂದುಗೂಡಿಸಿ, ನಿಲ್ಲಿಸಿ, ಧೃಷ್ಟದ್ಯುಮ್ನನ ಮೇಲೆ ಮುನ್ನುಗ್ಗಿದರು.

ಸ ಬಾಣವರ್ಷಂ ಸುಮಹದ್ ಅಸೃಜತ್ ಪಾರ್ಷತಂ ಪ್ರತಿ ।
ಮಘವಾನ್ ಸಮಭಿಕ್ರುದ್ಧಃ ಸಹಸಾ ದಾನವೇಷ್ವಿವ ॥ ೪೧ ॥

ಅವರು ಕೋಪಗೊಂಡ ಇಂದ್ರನು ದಾನವರ ಮೇಲೆ ಸುರಿಸಿದಂತೆ ಧೃಷ್ಟದ್ಯುಮ್ನನ ಮೇಲೆ ಶೀಘ್ರವಾಗಿ ದೊಡ್ಡ ಬಾಣಗಳ ಮಳೆಯನ್ನು ಸೃಷ್ಟಿಸಿದರು.

ತೇ ಕಂಪ್ಯಮಾನಾ ದ್ರೋಣೇನ ಬಾಣೈಃ ಪಾಂಡವಸೃಂಜಯಾಃ ।
ಪುನಃಪುನರಭಜ್ಯಂತ ಸಿಂಹೇನೇವೇತರೇ ಮೃಗಾಃ ॥ ೪೨ ॥

ದ್ರೋಣರ ಬಾಣಗಳಿಂದ ನಡುಗಿಸಲ್ಪಟ್ಟ ಪಾಂಡವ-ಸೃಂಜಯರು ಸಿಂಹದಿಂದ ನಡುಗಿದ ಮೃಗಗಳಂತೆ ಪುನಃ ಪುನಃ ಭಗ್ನಗೊಂಡರು.

ಅಥ ಪರ್ಯಪತದ್ ದ್ರೋಣಃ ಪಾಂಡವಾನಾಂ ಬಲಂ ಬಲೀ ।
ಅಲಾತಚಕ್ರವದ್ ರಾಜನ್ ತದದ್ಭುತಮಿವಾಭವತ್ ॥ ೪೩ ॥

ಎಲೈ ರಾಜನೇ, ಆಗ ಬಲಿಷ್ಠರಾದ ದ್ರೋಣರು ಅಲಾತಚಕ್ರ (ಕೊಳ್ಳಿಯ ಚಕ್ರ) ದಂತೆ ತಿರುಗುತ್ತಾ ಪಾಂಡವರ ಸೈನ್ಯವನ್ನು ಸಂತಾಪಗೊಳಿಸಿದರು, ಅದು ಅದ್ಭುತವಾಗಿದ್ದಿತು.

ಖಚರನಗರಕಲ್ಪಂ ಕಲ್ಪಿತಂ ಶಾಸ್ತ್ರದೃಷ್ಟ್ಯಾ
ಪವನಚಲಪತಾಕಂ ಹ್ಯಾದಿನಂ ವಲ್ಗಿತಾಶ್ವಮ್ ।

ಸ್ಫಟಿಕವಿಮಲಕೇತುಂ ತಾಪನಂ ಶಾತ್ರವಾಣಾಂ
ರಥವರಮಧಿರೂಢಃ ಸಂಜಹಾರಾರಿಸೇನಾಮ್ ॥ ೪೪ ॥

ದ್ರೋಣರು ಗಂಧರ್ವ ನಗರದಂತಿದ್ದ, ಶಾಸ್ತ್ರವಿಧಾನದಂತೆ ಸಿದ್ಧಗೊಳಿಸಿದ, ಗಾಳಿಗೆ ಚಲಿಸುವ ಪತಾಕೆಗಳನ್ನು ಹೊಂದಿದ್ದ, ಘೋಷದಿಂದ ಕೂಡಿದ, ಕೆನೆಯುವ ಅಶ್ವಗಳಿಂದ ಕೂಡಿದ, ಸ್ಫಟಿಕದಿಂದ ಮಾಡಿದ ಶುದ್ಧವಾದ ಧ್ವಜಗಳನ್ನುಳ್ಳ, ಶತ್ರುಗಳಿಗೆ ತಾಪವನ್ನುಂಟು ಮಾಡುವ, ಶ್ರೇಷ್ಠವಾದ ರಥವನ್ನು ಏರಿದವರಾಗಿ ಶತ್ರುಸೈನ್ಯವನ್ನು ಸಂಹಾರ ಮಾಡಿದರು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಷಷ್ಠೋಽಧ್ಯಾಯಃ ॥
॥ ದ್ರೋಣಾಭಿಷೇಕಪರ್ವಣಿ ಷಷ್ಠೋಽಧ್ಯಾಯಃ ॥
ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಆರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಏಳನೆಯ ಅಧ್ಯಾಯ

ಸಂಜಯನಿಂದ ದ್ರೋಣರ ನಿಧನದ ಕಥನ

ಸಂಜಯಃ

ತಥಾ ದ್ರೋಣಮಭಿಘ್ನಂತಂ ಸಾಶ್ವಸೂತರಥದ್ವಿಪಾನ್ ।
ವ್ಯಥಿತಾಃ ಪಾಂಡವಾ ರಾಜನ್ ನ ಚೈನಂ ಪ್ರತ್ಯವಾರಯನ್ ॥ ೧ ॥

ಸಂಜಯ– ಅಶ್ವ, ಸಾರಥಿ, ರಥ-ಗಜಗಳನ್ನು ಆ ರೀತಿಯಲ್ಲಿ ಸಂಹರಿಸುತ್ತಿದ್ದ ದ್ರೋಣರನ್ನು ಎಲೈ ರಾಜನೇ, ವ್ಯಥೆಯಿಂದ ಕೂಡಿದ ಪಾಂಡವರು ತಡೆಯಲು ಸಾಧ್ಯವಾಗಲಿಲ್ಲ.

ತತೋ ಯುಧಿಷ್ಠಿರೋ ರಾಜಾ ಧೃಷ್ಟದ್ಯುಮ್ನಧನಂಜಯೌ ।
ಅಬ್ರವೀತ್ ಸರ್ವತೋ ಯತ್ತಾತ್ ಕುಂಭಯೋನಿರ್ನಿವಾರ್ಯತಾಮ್ ॥೨॥

ಆಗ ರಾಜನಾದ ಯುಧಿಷ್ಠಿರನು ಅರ್ಜುನ ಮತ್ತು ಧೃಷ್ಟದ್ಯುಮ್ನರನ್ನು ಕುರಿತು ಸರ್ವಪ್ರಯತ್ನದಿಂದ ದ್ರೋಣರನ್ನು ನಿವಾರಿಸಿ ಎಂದು ಹೇಳಿದನು.

'ಆಚಾರ್ಯಃ ಕಲಶಾಜ್ಜಾತಃ ಶರಸ್ತಂಬಾದ್‌ಗುರುಕೃಪಃ' – ದ್ರೋಣಾಚಾರ್ಯರು ಕಲಶದಿಂದ ಜನಿಸಿದರು. ನೊಜೆಯ ಹುಲ್ಲಿನ ಗೆಡ್ಡೆಯಿಂದ ಕೃಪಾಚಾರ್ಯರು ಜನಿಸಿದರು ಎಂಬ ಸ್ಪಷ್ಟವಚನವಿರುವುದರಿಂದ, ದೊನ್ನೆಯಲ್ಲಿ(ದ್ರೋಣದಲ್ಲಿ) ಪತಿತವಾದ ರೇತಸ್ಸನ್ನು ಪುನಃ ಕಲಶದಲ್ಲಿ ಇಟ್ಟು ರಕ್ಷಿಸಿದ ಕಾರಣದಿಂದ ದ್ರೋಣರಿಗೆ 'ಕುಂಭಯೋನಿ' ಎಂದು ಹೆಸರು – ಲಕ್ಷಾಲಂಕಾರ.

ತತ್ರೈನಮರ್ಜುನಶ್ಚೈವ ಧೃಷ್ಟದ್ಯುಮ್ನಶ್ಚ ಪಾರ್ಷತಃ ।
ಯೇ ಚಾನ್ಯೇ ಪಾರ್ಥಿವಾ ರಾಜನ್ ಪಾಂಡವಸ್ಯಾನುಸೈನಿಕಾಃ ।
ಪರ್ಯಗೃಹ್ಣಂಸ್ತತಸ್ತತ್ರ ಸಮಾಗಚ್ಛನ್ ಮಹಾರಥಾಃ ॥ ೩ ॥

ಆಗ ಧೃಷ್ಟದ್ಯುಮ್ನನೂ, ಅರ್ಜುನನೂ ಮತ್ತು ಪಾಂಡವರ ಅನುಯಾಯಿಗಳಾಗಿ ಅಲ್ಲಿಗೆ ಬಂದ, ತಮ್ಮ ಸೈನ್ಯದಿಂದ ಒಡಗೂಡಿದ ಮಹಾರಥರಾದ ರಾಜರೂ ಎಲ್ಲರೂ ಸೇರಿ ದ್ರೋಣರನ್ನು ಎದುರಿಸಿದರು.

ಕೇಕಯಾ ಭೀಮಸೇನಶ್ಚ ಸೌಭದ್ರಶ್ಚ ಘಟೋತ್ಕಚಃ ।
ಯುಧಿಷ್ಠಿರೋ ಯಮೌ ಮಾತ್ಸ್ಯೋ ದ್ರುಪದಸ್ಯಾತ್ಮಜಾಸ್ತಥಾ ॥ ೪ ॥

ದ್ರೌಪದೇಯಾಶ್ಚ ಸಂಹೃಷ್ಟಾ ಧೃಷ್ಟಕೇತುಃ ಸಸಾತ್ಯಕಿಃ ।
ಚೇಕಿತಾನಶ್ಚ ಸಂಕ್ರುದ್ಧೋ ಯುಯುತ್ಸುಶ್ಚ ಮಹಾರಥಃ ॥ ೫ ॥

ಯೇ ಚಾನ್ಯೇ ಪಾರ್ಥಿವಾ ರಾಜನ್ ಪಾಂಡವಸ್ಯಾನುಯಾಯಿನಃ ।
ಕುಲವೀರ್ಯಾನುರೂಪಾಣಿ ಚಕ್ರುಃ ಕರ್ಮಾಣ್ಯಶೇಷತಃ ॥ ೬ ॥

ಕೇಕಯರು, ಭೀಮಸೇನ, ಅಭಿಮನ್ಯು, ಘಟೋತ್ಕಚ, ಯುಧಿಷ್ಠಿರ, ನಕುಲ-ಸಹದೇವರು, ವಿರಾಟ, ದ್ರುಪದನ ಪುತ್ರರು, ಸಂತೋಷಗೊಂಡ ದ್ರೌಪದಿಯ ಪುತ್ರರು, ಧೃಷ್ಟಕೇತು, ಸಾತ್ಯಕಿ, ಕೋಪಗೊಂಡ ಚೇಕಿತಾನ, ಮಹಾರಥನಾದ ಯುಯುತ್ಸು, ಎಲೈ ರಾಜನೇ, ಇವರಲ್ಲದೆ ಪಾಂಡವರ ಅನುಯಾಯಿಗಳಾದ ಉಳಿದ ರಾಜರೆಲ್ಲರೂ ತಮ್ಮ ಕುಲ-ವೀರ್ಯಗಳಿಗೆ ಅನುಗುಣವಾದ ಕಾರ್ಯಗಳನ್ನು ಮಾಡಿದರು.

ಸಂಭಿದ್ಯಮಾನಾಂ ತಾಂ ದೃಷ್ಟ್ವಾ ಪಾಂಡವೈರ್ವಾಹಿನೀಂ ರಣೇ ।
ವ್ಯಾವೃತ್ಯ ಚಕ್ಷುಷೀ ಕೋಪಾದ್ ಭಾರದ್ವಾಜೋऽನ್ವವೈಕ್ಷತ ॥ ೭ ॥

ರಣರಂಗದಲ್ಲಿ ಪಾಂಡವರಿಂದ ಭಗ್ನಗೊಳಿಸಲ್ಪಡುತ್ತಿರುವ ತಮ್ಮ ಸೈನ್ಯವನ್ನು ನೋಡಿ ದ್ರೋಣರು ಕಣ್ಣುಗಳನ್ನು ಅರಳಿಸಿ ನೋಡಿದರು.

ಸ ತೀವ್ರಂ ವೇಗಮಾಸ್ಥಾಯ ವಿಷ್ವಗ್ವಾತ ಇವೋತ್ಥಿತಃ ।
ಸ ತೀವ್ರಂ ಕೋಪಮಾಸ್ಥಾಯ ರಥೇ ಸಮರದುರ್ಮದಃ ।
ವ್ಯಧಮತ್ ಪಾಂಡವಾನೀಕಂ ಅಭ್ರಾಣೀವ ಸದಾಗತಿಃ ॥ ೮ ॥

ಸಮರ ದುರ್ಮದರಾದ ಅವರು ತೀವ್ರವಾದ ಕೋಪವನ್ನು ಹೊಂದಿ, ಮೇಲೆದ್ದ ಸುಂಟರಗಾಳಿಯಂತೆ ತೀವ್ರವಾದ ವೇಗವನ್ನು ಹೊಂದಿ, ವಾಯುವು ಮೋಡಗಳನ್ನು ಚದುರಿಸುವಂತೆ ಪಾಂಡವರ ಸೈನ್ಯವನ್ನು ಚದುರಿಸಿದರು.

ರಥಾನಶ್ವಾನ್ ನರಾನ್ ನಾಗಾನಭ್ಯಧಾವತ್ ಸಮಂತತಃ ।
ಚಚಾರೋನ್ಮತ್ತವದ್ ದ್ರೋಣೋ ವೃದ್ಧೋऽಪಿ ತರುಣೋ ಯಥಾ ॥೯॥

ರಥಗಳು, ಅಶ್ವಗಳು, ಪದಾತಿಗಳು, ಗಜಗಳು ಇವುಗಳ ಮೇಲೆ ಎಲ್ಲ ಕಡೆಯಲ್ಲಿಯೂ ಧಾವಿಸಿದರು. ದ್ರೋಣರು ವೃದ್ಧರಾದರೂ ತರುಣನಂತೆ, ಉನ್ಮತ್ತನಂತೆ ರಣರಂಗದಲ್ಲಿ ತಿರುಗಿದರು.

ತಸ್ಯ ಶೋಣಿತದಿಗ್ಧಾಂಗಾಃ ಶೋಣಾಃ ಪವನರಂಹಸಃ ।
ಆಜಾನೇಯಾ ಹಯಾ ರಾಜನ್ ವಿಭ್ರಮನ್ ವೈ ಶಿವಂ ವಪುಃ॥೧೦॥

ಎಲೈ ರಾಜನೇ, ಅವರ ವಾಯುವೇಗವುಳ್ಳ ರಕ್ತಲೇಪಿತವಾದ ಅಂಗಗಳುಳ್ಳ, ಒಳ್ಳೆಯ ಜಾತಿಯ ಶೋಣಾಶ್ವಗಳು ವಿಶ್ರಾಂತಿ ಇಲ್ಲದೆ ಸುಖವಾಗಿ ಸಂಚರಿಸಿದವು (ವಿಶ್ರಾಂತಿ ಇಲ್ಲದಿದ್ದರೂ ಒಳ್ಳೆಯ ಕಾಂತಿಯನ್ನು ಹೊಂದಿದ್ದವು).

ತಮಂತಕಮಿವ ಕ್ರುದ್ಧಮಾಪತಂತಂ ಯತವ್ರತಮ್ ।
ದೃಷ್ಟ್ವಾ ಸಂಪ್ರಾದ್ರವನ್ ಯೋಧಾಃ ಪಾಂಡವಸ್ಯ ತತಸ್ತತಃ ॥ ೧೧ ॥

ಯಮನಂತೆ ಕೋಪಗೊಂಡು ತಮ್ಮ ಮೇಲೆ ಎರಗುತ್ತಿದ್ದ, ದೃಢವ್ರತರಾದ ದ್ರೋಣರನ್ನು ನೋಡಿ ಪಾಂಡವರ ಸೈನ್ಯದ ಯೋಧರು ಅಲ್ಲಲ್ಲಿಂದ ಓಡಿಹೋದರು.

ತೇಷಾಂ ಪ್ರದ್ರವತಾಂ ಭೀಮಃ ಪುನರಾವರ್ತತಾಮಪಿ ।
ವೀಕ್ಷತಾಂ ತಿಷ್ಠತಾಂ ಚಾಸೀಚ್ಛಬ್ದಃ ಪರಮದಾರುಣಃ ॥ ೧೨ ॥

ಕೆಲವರು ಓಡುತ್ತಾ, ಕೆಲವರು ಹಿಂದಿರುಗಿ ಬರುತ್ತಾ, ಕೆಲವರು ನೋಡುತ್ತಾ, ಕೆಲವರು ಅಲ್ಲಿಯೇ ನಿಲ್ಲುತ್ತಾ ಇದ್ದ ಅವರಿಂದ ಉಂಟಾದ ಶಬ್ದವು ಬಹಳ ದಾರುಣವಾಗಿದ್ದಿತು.

ಶೂರಾಣಾಂ ಹರ್ಷಜನನೋ ಭೀರೂಣಾಂ ಭಯವರ್ಧನಃ ।
ದ್ಯಾವಾಪೃಥಿವ್ಯೋರ್ವಿವರಂ ಸಮಾಲಂಬತ ಸ ಸ್ವನಃ ॥ ೧೩ ॥

ಶೂರರಿಗೆ ಹರ್ಷದಾಯಕವೂ, ಹೇಡಿಗಳಿಗೆ ಭಯವರ್ಧಕವೂ ಆದ ಆ ಶಬ್ದವು ಭೂಮಿಯ ಮತ್ತು ಆಕಾಶದ ಮಧ್ಯಭಾಗವನ್ನು ತುಂಬಿತು.

ತತಃ ಪುನರಪಿ ದ್ರೋಣೋ ನಾಮ ವಿಶ್ರಾವ್ಯ ಚಾತ್ಮನಃ ।
ಅಕರೋದ್ ರೌದ್ರಮಾತ್ಮಾನಂ ಕಿರನ್ ಶರಶತೈಃ ಪರಾನ್ ॥ ೧೪ ॥

ಆಗ ದ್ರೋಣರು ಪುನಃ ತಮ್ಮ ಹೆಸರನ್ನು ಘೋಷಿಸುತ್ತಾ, ನೂರಾರು ಬಾಣಗಳಿಂದ ಶತ್ರುಗಳನ್ನು ಪೀಡಿಸುತ್ತಾ ತಮ್ಮನ್ನು ಭಯಂಕರರನ್ನಾಗಿ ಮಾಡಿದರು.

ಸ ತಥಾ ಪಾಂಡವೇಯಸ್ಯ ತಾನ್ಯನೀಕಾನಿ ಭಾರತ ।
ಕಾಲವನ್ನ್ಯಹನದ್ ದ್ರೋಣೋ ಯುವೇವ ಸ್ಥವಿರೋ ಬಲೀ ॥ ೧೫ ॥

ಆ ದ್ರೋಣರು ವೃದ್ಧರಾದರೂ ಬಲಿಷ್ಠನಾದ ಯುವಕನಂತೆ ಎಲೈ ಭಾರತನೇ, ಯುಧಿಷ್ಠಿರನ ಆ ಸೈನ್ಯಗಳನ್ನು ಯಮನಂತೆ ಸಂಹರಿಸಿದರು.

ಉತ್ಕೃತ್ಯ ತು ಶಿರಾಂಸ್ಯುಗ್ರೋ ಬಾಹೂನಪಿ ಸುಭೂಷಣಾನ್ ।
ಕೃತ್ವಾ ಶೂನ್ಯಾನ್ ರಥೋಪಸ್ಥಾನ್ ಉದಕ್ರೋಶನ್ಮಹಾರವಾನ್ ॥ ೧೬ ॥

ಉಗ್ರರಾದ ಅವರು ಯೋಧರ ಶಿರಸ್ಸುಗಳನ್ನು ಕತ್ತರಿಸಿ, ಭೂಷಿತವಾದ ಬಾಹುಗಳನ್ನೂ ಕತ್ತರಿಸಿ, ರಥೋಪಸ್ಥಗಳನ್ನು ಶೂನ್ಯಗಳನ್ನಾಗಿ ಮಾಡಿ ಮಹಾನಾದಗಳನ್ನು ಮಾಡಿದರು.

ತಸ್ಯ ಹರ್ಷಪ್ರಣಾದೇನ ಬಾಣವೇಗೇನ ಚಾಭಿಭೋ ।
ಅಕಂಪಂತ ರಣೇ ಯೋಧಾ ಗಾವಃ ಶೀತಾರ್ದಿತಾ ಇವ ॥ ೧೭ ॥

ಎಲೈ ಶತ್ರುಸಂಹಾರಕನೇ, ಹರ್ಷದಿಂದ ಕೂಡಿದ ಅವರ ನಾದದಿಂದ ಮತ್ತು ಬಾಣಗಳಿಂದ ರಣರಂಗದಲ್ಲಿ ಯೋಧರು ಶೀತದಿಂದ ಪೀಡಿಸಲ್ಪಟ್ಟ ಗೋವುಗಳಂತೆ ನಡುಗಿದರು.

ದ್ರೋಣಸ್ಯ ರಥಘೋಷೇಣ ಮೌರ್ವೀನಿಷ್ಪೇಷಣೇನ ಚ ।
ಧನುಃಶಬ್ದೇನ ಚಾಕಾಶೇ ಶಬ್ದಃ ಸಮಭವನ್ಮಹಾನ್ ॥ ೧೮ ॥

ದ್ರೋಣರ ರಥಘೋಷದಿಂದ, ಹೆದೆಯನ್ನು ಎಳೆಯುವುದರಿಂದ ಮತ್ತು ಧನುಶ್ಶಬ್ದದಿಂದ ಆಕಾಶದಲ್ಲಿ ದೊಡ್ಡ ಶಬ್ದವು ಉಂಟಾಯಿತು.

ಅಥಾಸ್ಯ ಧನುಷೋ ಬಾಣಾ ನಿಸ್ಸರಂತಃ ಸಹಸ್ರಶಃ ।
ವ್ಯಾಪ್ಯ ಸರ್ವಾ ದಿಶಃ ಪೇತುರ್ನಾಗಾಶ್ವರಥಪತ್ತಿಷು ॥ ೧೯ ॥

ಆಗ ಅವರ ಧನುಸ್ಸಿನಿಂದ ಸಹಸ್ರ ಸಂಖ್ಯೆಯಲ್ಲಿ ಹೊರಬರುತ್ತಿದ್ದ ಬಾಣಗಳು ಸರ್ವದಿಕ್ಕುಗಳನ್ನೂ ವ್ಯಾಪಿಸಿ ಗಜಾಶ್ವ-ರಥ-ಪದಾತಿಗಳ ಮೇಲೆ ಬಿದ್ದವು.

ತಂ ಕಾರ್ಮುಕಮಹಾವೇಗಮಸ್ತ್ರಜ್ವಲಿತಪಾವಕಮ್ ।
ದ್ರೋಣಮಾವಾರಯಾಂಚಕ್ರುಃ ಪಾಂಚಾಲಾಃ ಪಾಂಡವೈಃ ಸಹ ॥ ೨೦ ॥

ಧನುಸ್ಸಿನ ಮಹಾವೇಗವುಳ್ಳ, ಅಸ್ತ್ರಗಳಿಂದ ಅಗ್ನಿಯನ್ನು ಜ್ವಲಿಸುತ್ತಿದ್ದ, ಆ ದ್ರೋಣರನ್ನು ಪಾಂಚಾಲರು ಪಾಂಡವರ ಜೊತೆಯಲ್ಲಿ ಸುತ್ತುವರಿದರು.

ಸ ನಾಗರಥಪತ್ತ್ಯಶ್ವಾನ್ ಪ್ರಾಹಿಣೋದ್ ಯಮಸಾದನಮ್ ।
ಅಚಿರಾದಕರೋದ್ ದ್ರೋಣೋ ಮಹೀಂ ಶೋಣಿತಕರ್ದಮಾಮ್ ॥೨೧॥

ದ್ರೋಣರು ಗಜಾಶ್ವ-ರಥ-ಪದಾತಿಗಳನ್ನು ಯಮಲೋಕಕ್ಕೆ ಕಳುಹಿಸಿ, ಶೀಘ್ರವಾಗಿ ಭೂಮಿಯನ್ನು ರಕ್ತದ ಕೆಸರಿನಿಂದ ಕೂಡಿರುವಂತೆ ಮಾಡಿದರು.

ತನ್ವತಾ ಪರಮಾಸ್ತ್ರಾಣಿ ಶರಾನ್ ಸತತಮಸ್ಯತಾ ।
ದ್ರೋಣೇನ ವಿಹಿತಂ ದಿಕ್ಷು ಬಾಣಜಾಲಮದೃಶ್ಯತ ॥ ೨೨ ॥

ಪರಮಾಸ್ತ್ರಗಳನ್ನು ಪ್ರಯೋಗಿಸುತ್ತಾ, ಸತತವಾಗಿ ಬಾಣಗಳನ್ನು ಪ್ರಯೋಗಿಸುತ್ತಿದ್ದ ದ್ರೋಣರಿಂದ ದಿಕ್ಕುಗಳಲ್ಲಿ ಉಂಟಾದ ಬಾಣಗಳ ಜಾಲಗಳು ಕಂಡುಬಂದವು.

ಪದಾತಿಷು ರಥಾಶ್ವೇಷು ವಾರಣೇಷು ಚ ಸರ್ವಶಃ ।
ತಸ್ಯ ವಿದ್ಯುದಿವಾಭ್ರೇಷು ಚರನ್ ಕೇತುರದೃಶ್ಯತ ॥ ೨೩ ॥

ಪದಾತಿಗಳಲ್ಲಿಯೂ, ರಥಗಳಲ್ಲಿಯೂ, ಅಶ್ವಗಳಲ್ಲಿಯೂ ಮತ್ತು ಗಜಗಳಲ್ಲಿಯೂ ಎಲ್ಲ ಕಡೆಗಳಲ್ಲಿಯೂ ಸಂಚರಿಸುತ್ತಿದ್ದ ಅವರ ಧ್ವಜವು ಮೋಡಗಳಲ್ಲಿ ಮಿಂಚಿನಂತೆ ಕಂಡುಬಂದಿತು.

ಸ ಕೇಕಯಾನಾಂ ಪ್ರವರಾಂಶ್ಚ ಪಂಚ
ಪಾಂಚಾಲರಾಜಂ ಚ ಶರೈಃ ಪ್ರಮೃದ್ಯ ।
ಯುಧಿಷ್ಠಿರಾನೀಕಮದೀನಸತ್ತ್ವೋ
ದ್ರೋಣೋಽಭ್ಯಯಾತ್ ಕಾರ್ಮುಕಬಾಣಪಾಣಿಃ ॥ ೨೪ ॥

ಧೈರ್ಯಶಾಲಿಗಳೂ ಮತ್ತು ಬಲಿಷ್ಠರೂ ಆದ ದ್ರೋಣರು ಕೇಕಯ ದೇಶದ ಐದು ವೀರರನ್ನು ಮತ್ತು ಪಾಂಚಾಲ ರಾಜನಾದ ದ್ರುಪದನನ್ನು ಬಾಣಗಳಿಂದ ಪೀಡಿಸಿ, ಬಿಲ್ಲು ಬಾಣಗಳನ್ನು ಕೈಯಲ್ಲಿ ಹಿಡಿದು ಯುಧಿಷ್ಠಿರನ ಸೈನ್ಯದ ಮೇಲೆ ಎರಗಿದರು.

ತಂ ಭೀಮಸೇನಶ್ಚ ಧನಂಜಯಶ್ಚ
ಶಿನೇಶ್ಚ ನಪ್ತಾ ದ್ರುಪದಾತ್ಮಜಶ್ಚ ।
ತಥಾಽರ್ಜುನಿಃ ಕಾಶಿಪತಿಃ ಶಿಬಿಶ್ಚ
ಹೃಷ್ಟಾ ನದಂತೋ ವ್ಯಕಿರನ್ ಶರೌಘೈಃ ॥ ೨೫ ॥

ಭೀಮಸೇನ, ಅರ್ಜುನ, ಸಾತ್ಯಕಿ, ದ್ರುಪದ ಪುತ್ರನಾದ ಧೃಷ್ಟದ್ಯುಮ್ನ, ಅರ್ಜುನ ಪುತ್ರನಾದ ಅಭಿಮನ್ಯು, ಕಾಶೀರಾಜನಾದ ಸುದಕ್ಷಿಣ, ಶಿಬಿ ಎಲ್ಲರೂ ಸಂತೋಷದಿಂದ ಗರ್ಜಿಸುತ್ತಾ ದ್ರೋಣರ ಮೇಲೆ ಬಾಣಗಳ ಸಮೂಹವನ್ನು ಸುರಿಸಿದರು.

ತೇಷಾಂ ಶರಾ ದ್ರೋಣಶರೈರ್ನಿಕೃತ್ತಾ
ಭೂಮಾವದೃಶ್ಯಂತ ವಿವರ್ತಮಾನಾಃ ।

ಶ್ರೇಣೀಕೃತಾಃ ಸಂಯತಿ ಮೋಘವೇಗಾ
ದ್ವೀಪೇ ನದೀನಾಮಿವ ಕಾಶರೋಹಾಃ ॥ ೨೬ ॥

ಅವರ ಬಾಣಗಳು ದ್ರೋಣರ ಬಾಣಗಳಿಂದ ಕತ್ತರಿಸಲ್ಪಟ್ಟು ಭೂಮಿಯಲ್ಲಿ ಬೀಳುವುದು ಕಂಡುಬಂದಿತು. ಆ ಬಾಣಗಳ ವೇಗಗಳು ವ್ಯರ್ಥವಾಗಿ, ನದಿಗಳ ದ್ವೀಪದಲ್ಲಿ ಕಾಶಗಳೆಂಬ ಹುಲ್ಲಿನ ರಾಶಿಯಂತೆ ಅವು ರಣರಂಗದಲ್ಲಿ ಒಟ್ಟಾಗಿ ಬಿದ್ದಿರುವುದು ಕಂಡುಬಂದಿತು.

ತೇ ದ್ರೋಣಬಾಣಾಸನವಿಪ್ರಮುಕ್ತಾಃ
ಪತತ್ರಿಣಃ ಕಾಂಚನಚಿತ್ರಪುಂಖಾಃ ।
ಭಿತ್ತ್ವಾ ಶರೀರಾಣಿ ಗಜಾಶ್ವಯೂನಾಂ
ಜಗ್ಮುರ್ಮಹೀಂ ಶೋಣಿತದಿಗ್ಧವಾಜಾಃ ॥ ೨೭ ॥

ದ್ರೋಣರ ಧನುಸ್ಸಿನಿಂದ ಹೊರಹೊಮ್ಮಿದ ಸುವರ್ಣಮಯವಾದ, ವಿಚಿತ್ರವಾದ ಪುಂಖಗಳನ್ನುಳ್ಳ ಬಾಣಗಳು ಗಜಾಶ್ವ-ಯುವಕರ ಶರೀರಗಳನ್ನು ಭೇದಿಸಿ ರಕ್ತದಿಂದ ಸಿಕ್ತವಾದ ವಾಜಗಳನ್ನು (ಪುಂಖಗಳನ್ನು ಹೊಂದಿ) ಭೂಮಿಯಲ್ಲಿ ಇಳಿದವು.

ಸಾ ಯೋಧಸಂಘೈಶ್ಚ ರಥೈಶ್ಚ ಭೂಮಿಃ
ಶರೈರ್ವಿಭಿನ್ನೈರ್ಗಜವಾಜಿಭಿಶ್ಚ ।
ಪ್ರಚ್ಛಾದ್ಯಮಾನಾ ಪತಿತೈಃ ಬಭೂವ
ಸಮಾವೃತಾ ದ್ಯೌರಿವ ಲೋಹಿತಾಭ್ರೈಃ ॥ ೨೮ ॥

ಬಾಣಗಳಿಂದ ಭೇದಿಸಲ್ಪಟ್ಟು ಭೂಮಿಯ ಮೇಲೆ ಬಿದ್ದ ಗಜಾಶ್ವಗಳಿಂದಲೂ, ಯೋಧರ ಸಮೂಹಗಳಿಂದಲೂ ಮತ್ತು ರಥಗಳಿಂದಲೂ ಆವೃತವಾದ ಭೂಮಿಯು ಕೆಂಪು ಮೋಡಗಳಿಂದ ಆವೃತವಾದ ಆಕಾಶದಂತೆ ತೋರಿತು.

ಶೈನೇಯಭೀಮಾರ್ಜುನವಾಹಿನೀಪಾನ್
ಶೈಬ್ಯಾಭಿಮನ್ಯೂ ಚ ಸಕಾಶಿರಾಜೌ ।
ಅನ್ಯಾಂಶ್ಚ ವೀರಾನ್ ಸಮರೇ ಮಮರ್ದ
ದ್ರೋಣಃ ಸುತಾನಾಂ ತವ ಭೂತಿಕಾಮಃ ॥ ೨೯ ॥

ದ್ರೋಣರು ನಿನ್ನ ಪುತ್ರರಿಗೆ ಸಂಪತ್ತನ್ನು ಬಯಸಿ ಸಾತ್ಯಕಿ, ಭೀಮ, ಅರ್ಜುನ ಮೊದಲಾದ ಸೇನಾನಾಯಕರನ್ನೂ ಕಾಶಿರಾಜರಿಂದ ಸಹಿತರಾದ ಶೈಬ್ಯ ಮತ್ತು ಅಭಿಮನ್ಯುವನ್ನೂ ಮತ್ತು ಉಳಿದ ವೀರರನ್ನೂ ಯುದ್ಧದಲ್ಲಿ ಮರ್ದಿಸಿದರು.

ಏತಾನಿ ಚಾನ್ಯಾನಿ ಚ ಕೌರವೇಂದ್ರ
ಕರ್ಮಾಣಿ ಕೃತ್ವಾ ಸಮರೇ ಮಹಾಂತಿ ।
ಪ್ರತಾಪ್ಯ ಲೋಕಾನಿವ ಕಾಲಸೂರ್ಯೋ
ದ್ರೋಣೋ ಗತಃ ಸ್ವರ್ಗಮಿತೋ ಹಿ ರಾಜನ್ ॥ ೩೦ ॥

ಎಲೈ ರಾಜನೇ, ಕೌರವೇಂದ್ರನೇ, ದ್ರೋಣರು ಇಂತಹ ಮತ್ತು ಇನ್ನೂ ಅನೇಕ ಮಹತ್ಕರ್ಮಗಳನ್ನು ಮಾಡಿ ಯುದ್ಧದಲ್ಲಿ ಕಾಲಸೂರ್ಯನಂತೆ ಯೋಧರನ್ನು ಸಂತಾಪಗೊಳಿಸಿ ಇಲ್ಲಿಂದ ಸ್ವರ್ಗಕ್ಕೆ ಹೋದರು.

ಸ ತು ಕೃತ್ವಾ ಮಹತ್ ಕರ್ಮ ದ್ರೋಣಃ ಪರಬಲಾರ್ದನಃ ।
ಏವಂ ರುಗ್ಮರಥಃ ಶೂರೋ ಹತ್ವಾ ಶತಸಹಸ್ರಶಃ ।
ಪಾಂಡವಾನಾಂ ರಣೇ ಯೋಧಾನ್ ಪಾರ್ಷತೇನ ನಿಪಾತಿತಃ ॥ ೩೧ ॥

ಸುವರ್ಣರಥವನ್ನು ಹೊಂದಿದ ಶೂರರಾದ, ಶತ್ರುಸಮೂಹವನ್ನು ನಾಶ ಮಾಡುವ ದ್ರೋಣರು ಹೀಗೆ ಮಹತ್ಕರ್ಮವನ್ನು ಮಾಡಿ ಪಾಂಡವರ ಯೋಧರನ್ನು ನೂರರ-ಸಾವಿರದ ಸಂಖ್ಯೆಯಲ್ಲಿ ಕೊಂದು ಧೃಷ್ಟದ್ಯುಮ್ನನಿಂದ ಕೆಡವಲ್ಪಟ್ಟರು.

ಅಕ್ಷೋಹಿಣೀಮಭ್ಯಧಿಕಾಂ ಶೂರಾಣಾಮನಿವರ್ತಿನಾಮ್ ।
ನಿಹತ್ಯ ಪಶ್ಚಾದ್ ಧೃತಿಮಾನಗಚ್ಛತ್ ಪರಮಾಂ ಗತಿಮ್ ॥೩೨॥

ಧೈರ್ಯಶಾಲಿಗಳಾದ ಅವರು ಯುದ್ಧದಿಂದ ಹಿಮ್ಮೆಟ್ಟದಿರುವ ಒಂದು ಅಕ್ಷೋಹಿಣಿಗಿಂತಲೂ ಅಧಿಕವಾದ ಶೂರರನ್ನು ಕೊಂದು ಅನಂತರ ಶ್ರೇಷ್ಠವಾದ ಗತಿಯನ್ನು ಹೊಂದಿದರು.

ಪಾಂಡವೈಃ ಸಹಪಾಂಚಾಲೈರಶಿವೈಃ ಕ್ರೂರಕರ್ಮಿಭಿಃ ।
ಹತೋ ರುಗ್ಮರಥೋ ರಾಜನ್ ಕೃತ್ವಾ ಕರ್ಮ ಸುದುಷ್ಕರಮ್ ।
ಅಹೋ ಧಿಗಿತಿ ಭೂತಾನಾಂ ಶಬ್ದಃ ಸಮಭವನ್ಮಹಾನ್ ॥ ೩೩ ॥

ಎಲೈ ರಾಜನೇ, ಒಬ್ಬ ರಥರಾದ ಅವರು ಸುದುಷ್ಕರವಾದ ಕರ್ಮವನ್ನು ಮಾಡಿ, ಕ್ರೂರಕರ್ಮಿಗಳೂ ಮತ್ತು ಅಮಂಗಳರೂ ಆದ ಪಾಂಡವರಿಂದ ಮತ್ತು ಪಾಂಚಾಲರಿಂದ ಕೊಲ್ಲಲ್ಪಟ್ಟರು. ಆಗ ಅಯ್ಯೋ ಧಿಕ್ಕಾರವಿರಲಿ! ಎಂಬ ಯೋಧರ ದೊಡ್ಡ ಶಬ್ದವು ಉಂಟಾಯಿತು.

ದೇವಾಶ್ಚ ಪಿತರಶ್ಚೈವ ಪೂರ್ವೇ ಯೇ ಚಾಸ್ಯ ಬಾಂಧವಾಃ ।
ದದೃಶುರ್ನಿಹತಂ ತತ್ರ ಭಾರದ್ವಾಜಂ ಮಹಾರಥಮ್ ॥ ೩೪ ॥

ದೇವತೆಗಳು, ಪಿತೃಗಳು ಮತ್ತು ದ್ರೋಣರ ಪೂರ್ವಜರಾದ ಬಂಧುಗಳೆಲ್ಲರೂ ಮಹಾರಥರಾದ ಅವರು ಅಲ್ಲಿ ನಿಹತರಾದುದನ್ನು ನೋಡಿದರು.

ಪಾಂಡವಾಸ್ತು ಜಯಂ ಲಬ್ಧ್ವಾ ಸಿಂಹನಾದಾನ್ ಪ್ರಚಕ್ರಿರೇ ।
ತತೋ ನಿನಾದೋ ಭೂತಾನಾಮಾಕಾಶೇ ಸಮಪದ್ಯತ ॥ ೩೫ ॥

ಪಾಂಡವರಾದರೋ ಜಯವನ್ನು ಪಡೆದು ಸಿಂಹನಾದಗಳನ್ನು ಮಾಡಿದರು. ಆಕಾಶದಲ್ಲಿ ಭೂತಗಳ ದೊಡ್ಡ ನಾದ ಉಂಟಾಯಿತು.

ಸೈನ್ಯಾನಾಂ ಚ ತತೋ ರಾಜನ್ನಾಚಾರ್ಯೇ ನಿಹತೇ ಯುಧಿ ।
ಧರಾಂ ಖಂ ದ್ಯಾಂ ದಶ ದಿಶಃ ಪ್ರದಿಶಶ್ಚಾನ್ವನಾದಯತ್ ।
ತೇನ ನಾದೇನ ಮಹತಾ ಸಮಕಂಪತ ಮೇದಿನೀ ॥ ೩೬ ॥

ಎಲೈ ರಾಜನೇ, ಆಚಾರ್ಯರು ಯುದ್ಧದಲ್ಲಿ ನಿಹತರಾದಾಗ ಉಂಟಾದ ಸೈನ್ಯಗಳ ನಾದವು ಭೂಮಿಯನ್ನು, ಆಕಾಶವನ್ನು, ಅಂತರಿಕ್ಷವನ್ನು, ಹತ್ತು ದಿಕ್ಕುಗಳನ್ನು ಮತ್ತು ಪ್ರದಿಕ್ಕುಗಳನ್ನು ಪ್ರತಿಧ್ವನಿಸಿತು. ಆ ದೊಡ್ಡ ನಾದದಿಂದ ಭೂಮಿಯು ನಡುಗಿತು.

ವಿಚಿತ್ರಜಾಂಬೂನದಭೂಷಿತಧ್ವಜಂ
ಮಹಾರಥಂ ರುಗ್ಮರಥಂ ನಿಪಾತಿತಮ್ ।
ನಿಶಾಮ್ಯ ಕಶ್ಚಿದ್ ಹತಹರ್ಷ ಏವ
ಋತೇ ಮೃಧೇ ದ್ರುಪದಸುತಾತ್ ಸಸೃಂಜಯಾತ್ ॥ ೩೭ ॥

ವಿಚಿತ್ರ ಸುವರ್ಣಭೂಷಣದಿಂದ ಭೂಷಿತವಾದ, ಧ್ವಜದಿಂದ ಕೂಡಿದ, ಸುವರ್ಣಮಯವಾದ ರಥವನ್ನು ಹೊಂದಿದ ಮಹಾರಥರಾದ ದ್ರೋಣರು

ಮೃತರಾದುದನ್ನು ನೋಡಿ ನಿನ್ನ ಸೈನ್ಯದಲ್ಲಿ ಯಾವನಿಗೂ ಸಂತೋಷವಾಗಲಿಲ್ಲ. ರಣರಂಗದಲ್ಲಿದ್ದ ದ್ರುಪದಪುತ್ರರು ಮತ್ತು ಸೃಂಜಯರು ಮಾತ್ರ ಸಂತೋಷವನ್ನು ಹೊಂದಿದರು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ದ್ರೋಣಪರ್ವಣಿ ಸಪ್ತಮೋऽಧ್ಯಾಯಃ ॥

॥ ದ್ರೋಣಾಭಿಷೇಕಪರ್ವಣಿ ಸಪ್ತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಏಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಂಟನೆಯ ಅಧ್ಯಾಯ

ದ್ರೋಣರ ವಧೆಯ ವಾರ್ತೆಯನ್ನು ಕೇಳಿ ಧೃತರಾಷ್ಟ್ರನ ಶೋಕ ಮತ್ತು ವಿಲಾಪ.

ಧೃತರಾಷ್ಟ್ರಃ

ಕಿಂ ಕುರ್ವಾಣಂ ರಣೇ ದ್ರೋಣಂ ಜಘ್ನುಃ ಪಾಂಡವಸೃಂಜಯಾಃ ।
ತಥಾ ನಿಪುಣಮಸ್ತ್ರೇಷು ಸರ್ವಶಸ್ತ್ರಭೃತಾಮಪಿ ॥ ೧ ॥

ಧೃತರಾಷ್ಟ್ರ- ಆ ರೀತಿಯಲ್ಲಿ ಸರ್ವಶಸ್ತ್ರಧಾರಿಗಳಲ್ಲೂ ಮತ್ತು ಅಸ್ತ್ರ ಪ್ರಯೋಗಗಳಲ್ಲಿಯೂ ನಿಪುಣರಾದ ದ್ರೋಣರನ್ನು ಅವರು ಏನು ಮಾಡುತ್ತಿದ್ದಾಗ, ಯುದ್ಧದಲ್ಲಿ ಪಾಂಡವ- ಸೃಂಜಯರು ಹೇಗೆ ಕೊಂದರು?

ರಥಃ ಪರ್ಯಪತದ್ ವಾऽಸ್ಯ ಧನುರ್ವಾऽಶೀರ್ಯತಾಸ್ಯತಃ ।
ಪ್ರಮತ್ತೋ ವಾऽಭವದ್ ದ್ರೋಣೋ ಯಥಾ ಮೃತ್ಯುಮುಪೇಯಿವಾನ್ ॥

ಅವರ ರಥವು ಬಿದ್ದುಹೋಯಿತೇ? ಅಥವಾ ಬಾಣಗಳನ್ನು ಪ್ರಯೋಗಿಸುವಾಗ ಅವರ ಧನುಸ್ಸು ಮುರಿಯಿತೇ? ಅಥವಾ ಅವರು ಮರಣ ಹೊಂದಿದುದನ್ನು ನೋಡಿದರೆ ದ್ರೋಣರು ಪ್ರಮಾದಕ್ಕೆ ಒಳಗಾದರೇ?

ಕಥಂ ನು ಪಾರ್ಷತಸ್ತಾತ ಶತ್ರುಭಿರ್ದುಷ್ಪ್ರಧರ್ಷಣಮ್ ।
ಕಿರಂತಮಿಷುಸಂಘಾಂಸ್ತಾನ್ ರುಗ್ಮಪುಂಖಾನನೇಕಶಃ ॥ ೩ ॥

ಕ್ಷಿಪ್ರಹಸ್ತಂ ದಿವ್ಯಶ್ರೇಷ್ಠಂ ಕೃತಿನಂ ಚಿತ್ರಯೋಧಿನಮ್ ।
ದೂರೇಷುಪಾತಿನಂ ದಾಂತಮಸ್ತ್ರಯುದ್ಧೇ ಚ ಪಾರಗಮ್ ॥ ೪ ॥

ಪಾಂಚಾಲಪುತ್ರೋ ನ್ಯಹನದ್ ಇಷ್ವಾಸವರಮಚ್ಯುತಮ್ ।
ಕುರ್ವಾಣಂ ದಾರುಣಂ ಕರ್ಮ ರಣೇ ಯತ್ತಂ ಮಹಾಬಲಮ್ ॥ ೫ ॥

ಎಲೈ ಪ್ರೀತಿಪಾತ್ರನೇ, ಶತ್ರುಗಳಿಗೆ ಸೋಲಿಸಲು ಅಸಾಧ್ಯರಾದ, ಸುವರ್ಣ ಪುಂಖಗಳುಳ್ಳ ಬಾಣಗಳ ಸಮೂಹಗಳನ್ನು ಅನೇಕ ರೀತಿಯಲ್ಲಿ ಪ್ರಯೋಗಿಸುವ, ಕ್ಷಿಪ್ರ ಹಸ್ತರೂ, ಅಭ್ಯಾಸಪಟುಗಳೂ, ವಿಚಿತ್ರವಾಗಿ ಯುದ್ಧವನ್ನು ಮಾಡುವವರೂ, ದೂರದವರೆಗೂ ಬಾಣಪ್ರಯೋಗವನ್ನು ಮಾಡುವವರೂ, ಇಂದ್ರಿಯನಿಗ್ರಹ-ವುಳ್ಳವರೂ, ಅಸ್ತ್ರವಿದ್ಯೆಯಲ್ಲಿ ಪಾರಂಗತರಾದವರೂ, ಧನುರ್ಧಾರಿಗಳಲ್ಲಿ ಶ್ರೇಷ್ಠರಾದವರೂ, ಗುಣಗಳಿಂದ ಚ್ಯುತರಾಗದವರೂ, ಯುದ್ಧದಲ್ಲಿ ದಾರುಣವಾದ ಕರ್ಮಗಳನ್ನು ಮಾಡುವವರೂ, ಪ್ರಯತ್ನಪೂರ್ವಕವಾಗಿ ಯುದ್ಧವನ್ನು ಮಾಡುವವರೂ, ಮಹಾಬಲರೂ ಆದ ಅವರನ್ನು ಪಾಂಚಾಲಪುತ್ರನಾದ ಧೃಷ್ಟದ್ಯುಮ್ನನು ಹೇಗೆ ಕೊಂದನು?

ವ್ಯಕ್ತಂ ದಿಷ್ಟಂ ಹಿ ಬಲವತ್ ಪೌರುಷಾದಿತಿ ಮೇ ಮತಿಃ ।
ಯತ್ರ ದ್ರೋಣೋ ಹತಃ ಶೂರಃ ಪಾರ್ಷತೇನ ದುರಾತ್ಮನಾ ॥ ೬ ॥

ಶೂರರಾದ ದ್ರೋಣರು ದುರಾತ್ಮನಾದ ಧೃಷ್ಟದ್ಯುಮ್ನನಿಂದ ಹತರಾದ ಮೇಲೆ ಪುರುಷ ಪ್ರಯತ್ನಕ್ಕಿಂತಲೂ ದೈವನಿಯಮವೇ ಪ್ರಬಲವಾದುದೆಂದು ನನ್ನ ಸ್ಪಷ್ಟವಾದ ಅಭಿಪ್ರಾಯ.

ಅಸ್ತ್ರಂ ಚತುರ್ವಿಧಂ ಶೂರೇ ಯಸ್ಮಿನ್ ನಿತ್ಯಂ ಪ್ರತಿಷ್ಠಿತಮ್ ।
ತಮಿಷ್ವಸ್ತ್ರವರಾಚಾರ್ಯಂ ದ್ರೋಣಂ ಶಂಸಸಿ ಮೇ ಹತಮ್ ॥ ೭ ॥

ಮಂತ್ರ, ಬಾಣ, ಪ್ರಯೋಗ ಮತ್ತು ಉಪಸಂಹಾರಗಳಿಂದ ಕೂಡಿದ ನಾಲ್ಕು ಅಂಗಗಳುಳ್ಳ ಅಸ್ತ್ರವಿದ್ಯೆಯು ಯಾವ ಶೂರರಾದ ಅವರಲ್ಲಿ ಯಾವಾಗಲೂ ಪ್ರತಿಷ್ಠಿತವಾಗಿದ್ದಿತೋ ಅಂತಹ, ಧನುರ್ಧಾರಿಗಳಿಗೂ ಮತ್ತು ಶ್ರೇಷ್ಠವಾದ ಅಸ್ತ್ರಗಳನ್ನು ಹೊಂದಿದವರಿಗೂ ಆಚಾರ್ಯರಾದ ದ್ರೋಣರು ಹತರಾದರೆಂದು ನನಗೆ ಹೇಳುತ್ತಿದ್ದೀಯೆ!

ಶ್ರುತ್ವಾ ಹತಂ ರುಗ್ಮರಥಂ ವೈಯಾಘ್ರಪರಿವಾರಣಮ್ ।
ಜಾತರೂಪಪರಿಷ್ಕಾರಂ ನಾದ್ಯ ಶೋಕಮಪಾನುದೇ ॥ ೮ ॥

ವ್ಯಾಘ್ರಚರ್ಮದಿಂದ ಸುತ್ತುವರಿದ, ಸುವರ್ಣಾಲಂಕಾರಗಳಿಂದ ಕೂಡಿದ ಸುವರ್ಣ ರಥವುಳ್ಳ ಅವರು ಹತರಾದರೆಂದು ಕೇಳಿ ನಾನು ಈ ದಿನ ಶೋಕವನ್ನು ಪರಿಹರಿಸಿಕೊಳ್ಳಲಾರೆ.

ನ ನೂನಂ ಪರದುಃಖೇನ ಕಶ್ಚಿನ್ಮ್ರಿಯತಿ ಸಂಜಯ ।
ಯತ್ರ ದ್ರೋಣಮಹಂ ಶ್ರುತ್ವಾ ಹತಂ ಜೀವಾಮಿ ನ ಮ್ರಿಯೇ ॥ ೯ ॥

ಎಲೈ ಸಂಜಯನೇ, ದ್ರೋಣರು ಹತರಾದುದನ್ನು ಕೇಳಿಯೂ ನಾನು ಮರಣವನ್ನು ಹೊಂದದಿರುವುದರಿಂದ ಇನ್ನೊಬ್ಬರ ದುಃಖದಿಂದ ಯಾವನೂ ಮರಣವನ್ನು ಹೊಂದುವುದಿಲ್ಲವೆಂಬುದು ನಿಶ್ಚಿತವಾದುದು.

ಅಶ್ಮಸಾರಮಯಂ ನೂನಂ ಸುದೃಢಂ ಹೃದಯಂ ಮಮ ।
ಶ್ರುತ್ವಾ ಚ ನಿಹತಂ ದ್ರೋಣಂ ಶತಧೇದಂ ನ ದೀರ್ಯತೇ ॥ ೧೦ ॥

ದ್ರೋಣರ ಮರಣದ ವಾರ್ತೆಯನ್ನು ಕೇಳಿಯೂ ನೂರು ಭಾಗಗಳಾಗಿ ಬಿರಿದು ಹೋಗದಿರುವ ನನ್ನ ಈ ಕಠಿಣವಾದ ಹೃದಯವು ಕಲ್ಲಿನ ಸಾರದಿಂದ ಕೂಡಿದುದಾಗಿದೆ.

ಬ್ರಾಹ್ಮೇ ವೇದೇ ತಥೇಷ್ವಸ್ತ್ರೇ ಯಮುಪಾಸನ್ ಗುಣಾರ್ಥಿನಃ ।
ಬ್ರಾಹ್ಮಣಾ ರಾಜಪುತ್ರಾಶ್ಚ ಸ ಕಥಂ ಮೃತ್ಯುನಾ ಹತಃ ॥ ೧೧ ॥

ಗುಣವನ್ನು ಬಯಸುವ ಬ್ರಾಹ್ಮಣರು ಮತ್ತು ಕ್ಷತ್ರಿಯರು ಬ್ರಹ್ಮಪ್ರತಿಪಾದಕ ವೇದಗಳಲ್ಲಿಯೂ ಮತ್ತು ಶಸ್ತ್ರಾಸ್ತ್ರಗಳ ವಿಷಯದಲ್ಲಿಯೂ ಯಾರನ್ನು ಉಪಾಸನೆ ಮಾಡುತ್ತಿದ್ದರೋ ಅಂತಹ ದ್ರೋಣರು ಹೇಗೆ ಮೃತ್ಯುವಿನಿಂದ ಹತರಾಗಿದ್ದಾರೆ?

ಶೋಷಣಂ ಸಾಗರಸ್ಯೇವ ಮೇರೋಃ ಪರ್ಯಸನಂ ಯಥಾ ।
ಪತನಂ ಭಾಸ್ಕರಸ್ಯೇವ ನ ಮೃಷ್ಯೇ ದ್ರೋಣಪಾತನಮ್ ॥ ೧೨ ॥

ಸಮುದ್ರದ ಬತ್ತುವಿಕೆಯಂತೆ, ಮೇರುಪರ್ವತವನ್ನು ಎತ್ತಿ ಎಸೆದಂತೆ, ಸೂರ್ಯನ ಪತನದಂತೆ ಈ ದ್ರೋಣರ ಪತನವನ್ನು ನಾನು ಸಹಿಸಲಾರೆ.

ದುಷ್ಟಾನಾಂ ಪ್ರತಿರೋದ್ಧಾऽऽಸೀದ್ ಧಾರ್ಮಿಕಾಣಾಂ ಚ ರಕ್ಷಿತಾ ।
ಅತ್ಯಾಕ್ಷೀತ್ ಕೃಪಣಸ್ಯಾರ್ಥೇ ಪ್ರಾಣಾನಪಿ ಪರಂತಪಃ ॥ ೧೩ ॥

ಪರಂತಪರಾದ ದ್ರೋಣರು ದುಷ್ಟರನ್ನು ತಡೆಯುವವರೂ, ಧಾರ್ಮಿಕರನ್ನು ರಕ್ಷಿಸುವವರೂ ಆಗಿದ್ದರು. ಕಷ್ಟದಲ್ಲಿರುವವರ ಸಲುವಾಗಿ ಪ್ರಾಣಗಳನ್ನು ಬೇಕಾದರೂ ಬಿಡುತ್ತಿದ್ದರು.

ಮಂದಾನಾಂ ಮಮ ಪುತ್ರಾಣಾಂ ಜಯಾಶಾ ಯಸ್ಯ ವಿಕ್ರಮೇ ।
ಬೃಹಸ್ಪತ್ಯುಶನಸ್ತುಲ್ಯೋ ಬುದ್ಧ್ಯಾ ಸ ನಿಹತಃ ಕಥಮ್ ॥ ೧೪ ॥

ಬೃಹಸ್ಪತಿ ಮತ್ತು ಶುಕ್ರರಿಗೆ ಸಮಾನರಾದ ಯಾರ ಬುದ್ಧಿಯಲ್ಲಿ ಮತ್ತು ಪರಾಕ್ರಮದಲ್ಲಿ ನನ್ನ ಮಂದರಾದ ಪುತ್ರರಿಗೆ ಜಯದ ಆಸೆ ಇದ್ದಿತೋ ಅಂತಹ ದ್ರೋಣರು ಹೇಗೆ ಹತರಾದರು?

ತೇ ಹಿ ಶೋಣಾ ಬೃಹಂತೋऽಶ್ವಾಃ ಚ್ಛನ್ನಾ ಜಾಲೈರ್ಹಿರಣ್ಮಯೈಃ ।
ರಥೇ ವಾತಜವಾ ಯುಕ್ತಾಃ ಸರ್ವಶಬ್ದಾತಿಪಾತಿನಃ ॥ ೧೫ ॥

ಬಲಿನೋ ಘೋಷಿಣೋ ದಾಂತಾಃ ಸೈಂಧವಾಃ ಸಾಧುವಾಹಿನಃ ।
ದೃಢಾಃ ಸಂಗ್ರಾಮಮಧ್ಯೇ ತು ಕಚ್ಚಿದಾಸನ್ ನ ವಿಹ್ವಲಾಃ ॥ ೧೬ ॥

ಅವರ ದೃಢವಾದ ಶೋಣಾಶ್ವಗಳು, ಸುವರ್ಣಮಯವಾದ ಬಲೆಗಳಿಂದ ಮುಚ್ಚಲ್ಪಟ್ಟಿದ್ದವು. ರಥದಲ್ಲಿ ಹೂಡಿದಾಗ ವಾಯುವೇಗವನ್ನು ಹೊಂದಿದ್ದವು. ಎಲ್ಲ ಶಬ್ದಗಳನ್ನು ಮೀರಿ ನಡೆಯುತ್ತಿದ್ದವು. ಸೈಂಧವದೇಶದ, ಚೆನ್ನಾಗಿ ರಥವನ್ನು ತೆಗೆದುಕೊಂಡು ಹೋಗುವ ದೃಢವಾದವುಗಳೂ, ಬಲಿಷ್ಠವೂ, ಹೇಷಾರವವನ್ನು ಮಾಡುವವೂ, ಪಳಗಿದವೂ ಆದ ಆ ಕುದುರೆಗಳು ಸಂಗ್ರಾಮಮಧ್ಯದಲ್ಲಿ ವಿಹ್ವಲವಾದವೆ?

ಕರಿಣಾಂ ಬೃಂಹತಾಂ ಯುದ್ಧೇ ಶಂಖದುಂದುಭಿನಿಃಸ್ವನೇ ।
ಜ್ಯಾಕ್ಷೇಪಶರವರ್ಷಾಣಾಂ ಶಸ್ತ್ರಾಣಾಂ ಚ ಸಹಿಷ್ಣವಃ ॥ ೧೭ ॥

ಆಶಂಸಂತಃ ಪರಾನ್ ಜೇತುಂ ಜಿತಶ್ವಾಸಾ ಜಿತವ್ಯಥಾಃ ।
ಹಯಾಃ ಪರಾಜಿತಾಃ ಶೇಷ್ಮಾ ಭಾರದ್ವಾಜರಥೋದ್ವಹಾಃ ॥ ೧೮ ॥

ಅವು ಯುದ್ಧದಲ್ಲಿ ಗಜಗಳ ಬೃಂಹಣವನ್ನು, ಶಂಖ-ದುಂದುಭಿ ನಾದಗಳನ್ನು, ಹೆದೆಯ ಶಬ್ದಗಳನ್ನು, ಬಾಣಗಳ ಮತ್ತು ಶಸ್ತ್ರಗಳ ಮಳೆಯನ್ನು ಸಹಿಸಿಕೊಳ್ಳುತ್ತಿದ್ದವು. ಶತ್ರುಗಳನ್ನು ಗೆಲ್ಲಲು ಬಯಸುತ್ತಿದ್ದ, ತಮ್ಮ ಶ್ವಾಸವನ್ನು ಗೆದ್ದಿರುತ್ತಿದ್ದ, ವ್ಯಥೆಯಿಲ್ಲದೆ ಶೀಘ್ರವಾಗಿ ದ್ರೋಣರ ರಥವನ್ನು ಎಳೆಯುವ ಆ ಅಶ್ವಗಳು ಹೇಗೆ ಪರಾಜಿತವಾದವು?

ತೇ ಚ ರುಗ್ಮರಥೇ ಯುಕ್ತಾಃ ನರವೀರಸಮಾಸ್ಥಿತಾಃ ।
ಕಥಂ ನಾಭ್ಯತರನ್ ಶೀಘ್ರಂ ಪಾಂಡವಾನಾಮನೀಕಿನೀಮ್ ॥ ೧೯ ॥

ಸುವರ್ಣರಥದಲ್ಲಿ ಹೂಡಲ್ಪಟ್ಟ ನರಶ್ರೇಷ್ಠರಾದ ದ್ರೋಣರಿಂದ ಅಧಿಷ್ಠಿತವಾದ ಆ ಅಶ್ವಗಳು ಪಾಂಡವರ ಸೈನ್ಯವನ್ನು ಏಕೆ ಶೀಘ್ರವಾಗಿ ದಾಟಲಿಲ್ಲ?

ತಂ ತು ರುಗ್ಮರಥಂ ದೃಷ್ಟ್ವಾ ವಿದ್ರವಂತಿ ಸ್ಮ ಶತ್ರವಃ ।
ದಿವ್ಯಮಸ್ತ್ರಂ ವಿಕುರ್ವಾಣಂ ಸಂಗತಾಃ ಸರ್ವತಃ ಪರೇ ॥ ೨೦ ॥

ದಿವ್ಯಾಸ್ತ್ರಗಳನ್ನು ಪ್ರಯೋಗಿಸುವ, ರುಗ್ಮರಥದಲ್ಲಿ ನಿಂತ ಅವರನ್ನು ನೋಡಿ, ಅವರ ಜೊತೆಯಲ್ಲಿ ಸಂಗತರಾದ ಶತ್ರುಗಳು ಓಡಿಹೋಗುತ್ತಾರಷ್ಟೆ!

ಜಾತರೂಪಪರಿಷ್ಕಾರಮಾಸ್ಥಿತೋ ರಥಮುತ್ತಮಮ್ ।
ಭಾರದ್ವಾಜಃ ಕಿಮಕರೋತ್ ಶೂರಃ ಸಂಕ್ರಂದನೋ ಯುಧಿ ॥ ೨೧ ॥

ಸುವರ್ಣಾಭರಣಗಳಿಂದ ಅಲಂಕೃತವಾದ, ಶ್ರೇಷ್ಠರಥದಲ್ಲಿದ್ದ, ಶೂರರಾದ, ಯುದ್ಧದಲ್ಲಿ ಶತ್ರುಗಳನ್ನು ರೋಧಿಸುವ ದ್ರೋಣರು ಏನು ಮಾಡಿದರು?

ವಿದ್ಯಾಸ್ತ್ರ ಸ್ಯೋಪಜೀವಂತಿ ಸರ್ವಲೋಕಧನುರ್ಭೃತಃ ।
ಸ ಸತ್ಯಸಂಧೋ ಬಲವಾನ್ ದ್ರೋಣಃ ಕಿಮಕರೋದ್ ಯುಧಿ ॥೨೨॥

ಸರ್ವಲೋಕದ ಧನುರ್ಧಾರಿಗಳು ಅವರ ವಿದ್ಯೆಯನ್ನೇ ಉಪಜೀವಿಸುತ್ತಾರೆ. ಅಂತಹ ಸತ್ಯಸಂಧರೂ, ಬಲಿಷ್ಠರೂ ಆದ ದ್ರೋಣರು ಯುದ್ಧದಲ್ಲಿ ಏನು ಮಾಡಿದರು?

ದಿವಿ ಶಕ್ರಮಿವ ಶ್ರೇಷ್ಠಂ ಮಹಾಮಾತ್ರಂ ಧನುರ್ಭೃತಾಮ್ ।
ಕೇ ತು ತಂ ರೌದ್ರಕರ್ಮಾಣಂ ಯುದ್ಧೇ ಪ್ರತ್ಯುದ್ಯಯೂ ರಥಾಃ ॥೨೩॥

ಸ್ವರ್ಗದಲ್ಲಿ ಶ್ರೇಷ್ಠನಾದ ಇಂದ್ರನಂತೆ, ಧನುರ್ಧಾರಿಗಳಲ್ಲಿ ಪ್ರಧಾನರಾದ, ಭಯಂಕರ ಕರ್ಮವನ್ನು ಮಾಡುವ ಅವರನ್ನು ಯಾವ ಮಹಾರಥರು ಯುದ್ಧದಲ್ಲಿ ಎದುರಿಸಿದರು?

ಕೇತುಂ ರುಗ್ಮರಥಂ ದೃಷ್ಟ್ವಾ ಪ್ರದ್ರವಂತಿ ಸ್ಮ ಪಾಂಡವಾಃ ।
ದಿವ್ಯಮಸ್ತ್ರಂ ವಿಕುರ್ವಾಣಂ ಸೇನಾಂ ಕ್ಷಿಣ್ವಂತಮವ್ಯಯಾಮ್ ॥ ೨೪ ॥

ದಿವ್ಯಾಸ್ತ್ರಗಳನ್ನು ಪ್ರಯೋಗಿಸುತ್ತಾ, ಪಾಂಡವರ ಅಗಾಧವಾದ ಸೇನೆಯನ್ನು ನಾಶಪಡಿಸುವ ಅವರ ರುಗ್ಮರಥವನ್ನು ಮತ್ತು ಧ್ವಜವನ್ನು ನೋಡಿ ಪಾಂಡವರು ಓಡಿಹೋಗುತ್ತಾರಷ್ಟೆ!

ಉತಾಹೋ ಸರ್ವಸೈನ್ಯೇನ ಧರ್ಮರಾಜಃ ಸಹಾನುಜಃ ।
ಪಾಂಚಾಲ್ಯಗ್ರಾಹಕೋ ದ್ರೋಣಂ ಸರ್ವತಃ ಪರ್ಯವಾರಯತ್ ॥೨೫॥

ಅಥವಾ ಸರ್ವಸೈನ್ಯದಿಂದಲೂ ಮತ್ತು ತಮ್ಮಂದಿರಿಂದಲೂ ಸಹಿತನಾದ ಧರ್ಮರಾಜನು ಧೃಷ್ಟದ್ಯುಮ್ನನಿಗೆ ಅನುಗ್ರಹವನ್ನು ಮಾಡಲು ಬಯಸಿ ದ್ರೋಣರನ್ನು ಎಲ್ಲಕಡೆಯಿಂದಲೂ ಸುತ್ತುವರಿದನೆ?

ನೂನಮಾವಾರಯತ್ ಪಾರ್ಥೋ ರಥಿನೋಽನ್ಯಾನಜಿಹ್ಮಗೈಃ ।
ತತೋ ದ್ರೋಣಂ ತದಾಽರೌತ್ಸೀತ್ ಪಾರ್ಷತಃ ಕ್ರೂರಕರ್ಮಕೃತ್ ॥೨೬॥

ಖಂಡಿತವಾಗಿ ಅರ್ಜುನನು ಉಳಿದ ಮಹಾರಥರನ್ನು ನೇರವಾಗಿ ಸಾಗುವ ತನ್ನ ಬಾಣಗಳಿಂದ ತಡೆದನು. ಆಗ ಕ್ರೂರಕರ್ಮವನ್ನು ಮಾಡುವ ಧೃಷ್ಟದ್ಯುಮ್ನನು ದ್ರೋಣರನ್ನು ಎದುರಿಸಿದನು ಎಂದು ತೋರುತ್ತದೆ.

ನ ಹ್ಯನ್ಯಂ ಪರಿಪಶ್ಯಾಮಿ ಹಂತಾರಂ ತಸ್ಯ ಶುಷ್ಮಿಣಃ ।
ಧೃಷ್ಟದ್ಯುಮ್ನಾದೃತೇ ರೌದ್ರಾತ್ ಪಾಲ್ಯಮಾನಾತ್ ಕಿರೀಟಿನಾ ॥ ೨೭ ॥

ಅರ್ಜುನನಿಂದ ಪಾಲಿಸಲ್ಪಟ್ಟ ಭೀಕರನಾದ ಧೃಷ್ಟದ್ಯುಮ್ನನೊಬ್ಬನನ್ನು ಬಿಟ್ಟು ಅಂತಹ ವೀರ್ಯಸಂಪನ್ನರಾದ ದ್ರೋಣರನ್ನು ಕೊಲ್ಲುವ ಇನ್ನೊಬ್ಬ ಯೋಧನನ್ನು ನಾನು ಕಾಣುವುದಿಲ್ಲ.

ಉತಾಹೋ ಸರ್ವಸೈನ್ಯೇನ ಧರ್ಮರಾಜಃ ಸಹಾನುಜಃ ।
ಉತ್ಸೃಜ್ಯ ಸರ್ವಸೈನ್ಯಾನಿ ದ್ರೋಣಮೇವಾಭಿದುದ್ರುವೇ ॥ ೨೮ ॥

ಅಥವಾ ಸರ್ವಸೈನ್ಯದಿಂದಲೂ, ಸಹೋದರರಿಂದಲೂ ಸಹಿತನಾದ ಧರ್ಮರಾಜನು ಉಳಿದ ಎಲ್ಲಸೈನ್ಯವನ್ನು ಬಿಟ್ಟುದ್ರೋಣರ ಮೇಲೆಯೇ ಎರಗಿದನೇ?

ತೈರ್ವೃತಃ ಸರ್ವತಃ ಕ್ಷುದ್ರೈಃ ಪಾಂಚಾಲಾಪಶದೈಸ್ತಥಾ ।
ಕೇಕಯೈಶ್ಚೇದಿಕಾರೂಶೈಃ ಮತ್ಸ್ಯೈರನ್ಯೈಶ್ಚ ಭೂಮಿಪೈಃ ॥ ೨೯ ॥

ವ್ಯಾಕುಲೀಕೃತಮಾಚಾರ್ಯಂ ಪಿಪೀಲೈರುರಗಂ ಯಥಾ ।
ಕರ್ಮಣ್ಯಸುಕರೇ ಸಕ್ತಂ ಜಘಾನೈಕಂ ಸಹಾಯವಾನ್ ॥ ೩೦ ॥

ಅಂತಹ ಪಾಂಚಾಲ ಅಧಮರಾದ ಕ್ಷುದ್ರರಿಂದ ಎಲ್ಲ ಕಡೆಗಳಿಂದಲೂ ಕೇಕಯರಿಂದಲೂ, ಚೇದಿ-ಕಾರೂಶರಿಂದಲೂ, ಮತ್ಸ್ಯರಿಂದಲೂ, ಉಳಿದ ರಾಜರಿಂದಲೂ ಪರಿವೃತನಾದ ಧರ್ಮರಾಜನು ವ್ಯಾಕುಲಗೊಳಿಸಲ್ಪಟ್ಟು ದುಷ್ಕರವಾದ ಕರ್ಮವನ್ನು ಮಾಡುತ್ತಿದ್ದ, ಒಂಟಿಯಾದ ದ್ರೋಣಾಚಾರ್ಯರನ್ನು ಇರುವೆಗಳು ಸರ್ಪವನ್ನು ಕೊಂದಂತೆ ಸಹಾಯದಿಂದ ಕೂಡಿದ ಯುಧಿಷ್ಠಿರನು ಕೊಂದನೇ?

ಯೋಽಧೀತ್ಯ ಚತುರೋ ವೇದಾನ್ ಸಾಂಗಾನಾಖ್ಯಾತಪಂಚಮಾನ್ ।
ಬ್ರಾಹ್ಮಣಾನಾಂ ಪ್ರತಿಷ್ಠಾಽಽಸೀತ್ ಸ್ರೋತಸಾಮಿವ ಸಾಗರಃ ।
ಕ್ಷತ್ರಂ ಚ ಬ್ರಹ್ಮ ಚೈವೇಹ ಯೋಽಭ್ಯತಿಷ್ಠತ್ ಪರಂತಪಃ ॥೩೧॥

ದೃಪ್ತಾನಾಂ ಪ್ರತಿಷೇದ್ಧಾ ಚ ಚಕ್ಷುರಾಸೀದಚಕ್ಷುಷಾಮ್ ।
ಅಮರ್ಷೀ ಚಾವಿಲಿಪ್ತೇಷು ಧಾರ್ಮಿಕೇಷು ಚ ಧಾರ್ಮಿಕಃ ॥೩೨॥

ಸ ಕಥಂ ಬ್ರಾಹ್ಮಣೋ ವೃದ್ಧಃ ಶಸ್ತ್ರೇಣ ವಧಮಾಪ್ತವಾನ್ ।
ಅಮರ್ಷಣೋ ಮರ್ಷಿತವಾನ್ ಕ್ಲಿಶ್ಯಮಾನೋ ಮಯಾಽಸಕೃತ್ ।
ಅನರ್ಹಮಾಣಃ ಕೌಂತೇಯಾನ್ ಕರ್ಮಣಸ್ತಸ್ಯ ತತ್ ಫಲಮ್ ॥೩೩॥

ಯಾವ ದ್ರೋಣರು ಅಂಗಗಳಿಂದ ಸಹಿತವಾದ ಮತ್ತು ಪಂಚಮವೇದವಾದ, ಇತಿಹಾಸ-ಪುರಾಣದಿಂದ ಸಹಿತವಾದ ನಾಲ್ಕು ವೇದಗಳನ್ನೂ ಅಧ್ಯಯನ ಮಾಡಿ,

ನದಿಗಳಿಗೆ ಸಾಗರದಂತೆ ಬ್ರಾಹ್ಮಣರಿಗೆ ಆಶ್ರಯರಾಗಿದ್ದರೋ, ಪರಂತಪರಾದ ಯಾರು ಕ್ಷತ್ರಿಯ ಧರ್ಮ ಮತ್ತು ಬ್ರಾಹ್ಮಣ ಧರ್ಮ ಎರಡನ್ನೂ ಅನುಷ್ಠಾನ ಮಾಡುತ್ತಿದ್ದರೋ, ದರ್ಪಿಷ್ಠರಾದವರನ್ನು ನಿಷೇಧಿಸುತ್ತಿದ್ದರೋ, ಶೂರರಿಗೆ ಕಣ್ಣಿನಂತೆ ಇದ್ದರೋ, ದುರಹಂಕಾರಿಗಳಲ್ಲಿ ರೋಷವನ್ನು ಹೊಂದಿದ್ದರೋ, ಧಾರ್ಮಿಕರ ವಿಷಯದಲ್ಲಿ ಧಾರ್ಮಿಕರಾಗಿದ್ದರೋ ಅಂತಹ ವೃದ್ಧರೂ, ಬ್ರಾಹ್ಮಣರೂ ಆದ ದ್ರೋಣರು ಹೇಗೆ ಶಸ್ತ್ರದಿಂದ ವಧೆಯನ್ನು ಹೊಂದಿದರು? ಬ್ರಾಹ್ಮಣರಾದುದರಿಂದ ಯುದ್ಧ ಮಾಡಲು ಅನರ್ಹರಾದ ಅವರು ಯುದ್ಧವನ್ನು ಸಹಿಸದಿದ್ದರೂ ನನ್ನಿಂದ ಬಹಳ ಒತ್ತಡಕ್ಕೆ ಒಳಗಾಗಿ ಪಾಂಡವರ ಜೊತೆಯಲ್ಲಿ ಯುದ್ಧವನ್ನು ಮಾಡಲು ಯುದ್ಧವನ್ನು ಸಹಿಸಿ ಒಪ್ಪಿದರು. ಇದು ಆ ಕರ್ಮದ ಫಲವಾಗಿದೆ.

ಯಸ್ಯ ಕರ್ಮಾನುಜೀವಂತಿ ಲೋಕೇ ಸರ್ವಧನುರ್ಭೃತಃ ।
ಸತ್ಯಸಂಧಃ ಸತ್ಯಧೃತಿಃ ಶ್ರೇಕಾಮೈರ್ನಿಹತಃ ಕಥಮ್ ॥ ೩೪ ॥

ಲೋಕದಲ್ಲಿ ಎಲ್ಲ ಧನುರ್ಧಾರಿಗಳೂ ಯಾರ ಕರ್ಮವನ್ನು ಉಪಜೀವಿಸುತ್ತಾರೆಯೋ, ಸತ್ಯಸಂಧರೂ, ಸತ್ಯವಾದ ಧೈರ್ಯವುಳ್ಳವರೂ ಆದ ಅವರು ಸಂಪತ್ತನ್ನು ಬಯಸುವ ಪಾಂಡವರಿಂದ ಹೇಗೆ ಹತರಾದರು?

ದಿವಿ ಶಕ್ರ ಇವ ಶ್ರೇಷ್ಠೋ ಮಹಾಸತ್ತ್ವೋ ಮಹಾಬಲಃ ।
ಸ ಕಥಂ ನಿಹತಃ ಪಾರ್ಥೈಃ ಕ್ಷುದ್ರಮತ್ಸ್ಯೈರ್ಝಷಿಮಿರ್ಯಥಾ ॥ ೩೫ ॥

ಸ್ವರ್ಗದಲ್ಲಿ ಇಂದ್ರನಂತೆ ಶ್ರೇಷ್ಠರಾದ, ಮಹಾಧೈರ್ಯವನ್ನು, ಮಹಾಬಲವನ್ನು ಹೊಂದಿದ, ಅವರು ಕ್ಷುದ್ರವಾದ ಮೀನುಗಳಿಂದ ತಿಮಿಂಗಿಲವು ಹತವಾದಂತೆ ಪಾಂಡವರಿಂದ ಹೇಗೆ ಹತರಾದರು?

ಕ್ಷಿಪ್ರಹಸ್ತೋ ಮಹಾಬಾಹುಃ ದೃಢಧನ್ವಾರಿಮರ್ದನಃ ।
ನ ಹ್ಯಸ್ಯ ಜೀವಿತಾಕಾಂಕ್ಷೀ ವಿಷಮಂ ಪ್ರಾಪ್ಯ ಜೀವತಿ ॥ ೩೬ ॥

ಮಹಾಬಾಹುಗಳೂ, ದೃಢವಾದ ಧನುಸ್ಸುಳ್ಳವರೂ, ಶತ್ರುಮರ್ದನರೂ, ಕ್ಷಿಪ್ರಹಸ್ತರೂ ಆದ ಅವರನ್ನು ಯುದ್ಧದಲ್ಲಿ ಸಂಧಿಸಿದ ತನ್ನ ಜೀವನಾಪೇಕ್ಷೆಯುಳ್ಳ ಯಾವನೂ ಬದುಕಿ ಉಳಿಯುತ್ತಿರಲಿಲ್ಲ.

ಯಂ ದ್ವೌ ನ ಜಹತುಃ ಶಬ್ದೌ ಜೀವಮಾನಂ ಕದಾಚನ ।
ಬ್ರಾಹ್ಮಶ್ಚ ವೇದಕಾಮಾನಾಂ ಜ್ಯಾಶಬ್ದಶ್ಚ ಧನುಷ್ಮತಾಮ್ ॥ ೩೭ ॥

ಅದೀನಂ ಪುರುಷವ್ಯಾಘ್ರಂ ಶ್ರೀಮಂತಮಪರಾಜಿತಮ್ ।
ನಾಹಂ ಮೃಷ್ಯೇ ಹತಂ ದ್ರೋಣಂ ಸಿಂಹಂ ದ್ವಿರದವಿಕ್ರಮಾತ್ ॥ ೩೮ ॥

ಯಾರು ಬದುಕಿರುವವರೆಗೆ ವೇದದ ಅಪೇಕ್ಷೆಯುಳ್ಳ ಬ್ರಾಹ್ಮಣರ ವೇದಶಬ್ದವೂ, ಧನುರ್ಧಾರಿಗಳ ಹೆದೆಯ ಶಬ್ದವೂ ಯಾರನ್ನು ತೊರೆಯಲಿಲ್ಲವೋ ಅಂತಹ ದೀನರಲ್ಲದ ಪುರುಷವ್ಯಾಘ್ರರಾದ, ಕಾಂತಿಯುಕ್ತರಾದ, ಅಪರಾಜಿತರಾದ ದ್ರೋಣರು ಗಜವಿಕ್ರಮದಿಂದ ಸಿಂಹವು ಹತವಾದಂತೆ ಹತರಾದುದನ್ನು ನಾನು ಸಹಿಸಲಾರೆ.

ಕಥಂ ಸಂಜಯ ದುರ್ಧರ್ಷಮನಾಧೃಷ್ಯಯಶೋಬಲಮ್ ।
ಪಶ್ಯತಾಂ ಪುರುಷೇಂದ್ರಾಣಾಂ ಸಮರೇ ಪಾರ್ಷತೋಽವಧೀತ್ ॥೩೯॥

ಎಲೈ ಸಂಜಯನೇ, ದುರ್ಧರ್ಷರೂ, ಮಾಸಿ ಹೋಗದ ಕೀರ್ತಿ ಮತ್ತು ಬಲವುಳ್ಳವರೂ ಆದ ಅವರನ್ನು ಪುರುಷಶ್ರೇಷ್ಠರು ನೋಡುತ್ತಿರುವಾಗಲೇ ಯುದ್ಧದಲ್ಲಿ ಧೃಷ್ಟದ್ಯುಮ್ನನು ಹೇಗೆ ಕೊಂದನು?

ಅಸ್ತ್ರಂ ಚತುಷ್ಪಾತ್ ಸಕಲಂ ಯಸ್ಮಿನ್ನಾಸೀತ್ ಪ್ರತಿಷ್ಠಿತಮ್ ।
ತಮಿಷ್ವಾಸವರಾಚಾರ್ಯಂ ದ್ರೋಣಂ ಜಘ್ನುಃ ಕಥಂ ರಥಾಃ ॥ ೪೦ ॥

ನಾಲ್ಕು ಅಂಗಗಳಿಂದ ಕೂಡಿದ ಸಕಲವಾದ ಅಸ್ತ್ರವಿದ್ಯೆಯು ಯಾರಲ್ಲಿ ಪ್ರತಿಷ್ಠಿತವಾಗಿದ್ದಿತೋ ಅಂತಹ ಶ್ರೇಷ್ಠರಾದ ಧನುರ್ಧಾರಿಗಳಿಗೆ ಗುರುಗಳಾದ ದ್ರೋಣರನ್ನು ಮಹಾರಥರು ಹೇಗೆ ಕೊಂದರು?

ನಾಹಂ ಮನ್ಯೇ ಹತಂ ದ್ರೋಣಂ ಸ ಹಿ ಲೋಕಮಯೋತ್ಸ್ಯತ ।
ಕೋ ಹಿ ಶಕ್ತೋ ರಣೇ ಜೇತುಮನಾಧೃಷ್ಯಯಶೋಬಲಮ್ ॥ ೪೧ ॥

ದ್ರೋಣರು ಹತರಾದರೆಂದು ನಾನು ನಂಬುವುದಿಲ್ಲ. ಅವರು ಸರ್ವಲೋಕಗಳ ಜೊತೆಯಲ್ಲಿಯೂ ಯುದ್ಧವನ್ನು ಮಾಡುತ್ತಿದ್ದವರು. ಮಾಸಿ ಹೋಗದ ಕೀರ್ತಿ ಮತ್ತು ಬಲಗಳುಳ್ಳ ದ್ರೋಣರನ್ನು ಯುದ್ಧದಲ್ಲಿ ಜಯಿಸಲು ಯಾರಿಗೆ ಸಾಧ್ಯವಾಗುತ್ತದೆ?

ಬ್ರಹ್ಮಕಲ್ಪೋ ಭವೇದ್ ಬ್ರಾಹ್ಮೇ ಕ್ಷಾತ್ರೇ ನಾರಾಯಣೋಪಮಃ ।
ಬ್ರಹ್ಮಕ್ಷತ್ರೇ ಚ ಯಸ್ಯಾಸ್ತಾಂ ವಶೇ ಸ್ಥಾಣೋರಿವಾಖಿಲೇ ॥ ೪೨ ॥

ಅವರು ಬ್ರಹ್ಮವಿದ್ಯೆಯಲ್ಲಿ ಬ್ರಹ್ಮದೇವರಿಗೆ ಸಮರು ಮತ್ತು ಕ್ಷಾತ್ರತೇಜಸ್ಸಿನಲ್ಲಿ ನಾರಾಯಣನಂತೆ ಇದ್ದವರು. ರುದ್ರದೇವರ ವಶದಲ್ಲಿ ಸಮಸ್ತ ಜಗತ್ತೂ ಇದ್ದಂತೆ, ಬ್ರಾಹ್ಮಣ-ಕ್ಷತ್ರಿಯರೆಲ್ಲರೂ ಅವರ ವಶವಾಗಿದ್ದರು.

ಸರ್ವಾನ್ ಹಿ ಮಾಮಕಾನ್ ವೀರಾನ್ ಸಹಾಶ್ವರಥಕುಂಜರಾನ್ ।
ಯುಧಿಷ್ಠಿರಸ್ಯ ತಪಸಾ ಹತಾನ್ ಮನ್ಯಾಮಹೇ ಕುರೂನ್ ॥ ೪೩ ॥

ಅಶ್ವ-ರಥ-ಕುಂಜರಗಳಿಂದ ಸಹಿತರಾದ, ವೀರರಾದ, ನನ್ನವರಾದ ಕುರುಗಳೆಲ್ಲರೂ ಯುಧಿಷ್ಠಿರನ ತಪಸ್ಸಿನಿಂದ ಹತರಾಗಿದ್ದಾರೆಂದು ತಿಳಿಯುತ್ತೇನೆ.

ಕೇऽರಕ್ಷನ್ ದಕ್ಷಿಣಂ ಚಕ್ರಂ ಕೇ ಸವ್ಯಂ ಕೇ ಚ ಪೃಷ್ಠತಃ ।
ಪುರಸ್ತಾತ್ ಕೇ ಚ ವೀರಸ್ಯ ಯುದ್ಧ್ಯಮಾನಸ್ಯ ಸಂಯುಗೇ ॥ ೪೪ ॥

ದ್ರೋಣರು ಯುದ್ಧವನ್ನು ಮಾಡುವಾಗ ಅವರ ಬಲಭಾಗವನ್ನು ಯಾರು ರಕ್ಷಿಸಿದರು? ಅವರ ಎಡಭಾಗದಲ್ಲಿ ಮತ್ತು ಹಿಂಭಾಗದಲ್ಲಿ ಯಾರಿದ್ದರು? ಆ ವೀರರ ಮುಂಭಾಗದಲ್ಲಿ ಯಾರಿದ್ದರು?

ಕೇ ಪುರಸ್ತಾದಯುದ್ಧ್ಯಂತ ರಕ್ಷಂತೋ ದ್ರೋಣಮಂತಿಕಾತ್ ।
ಕೇ ತು ಪಶ್ಚಾದಯುದ್ಧ್ಯಂತ ಗಚ್ಛಂತೋ ದುರ್ಗಮಾಂ ಗತಿಮ್ ॥೪೫॥

ದ್ರೋಣರನ್ನು ಸಮೀಪದಿಂದ ರಕ್ಷಿಸುತ್ತಾ ಅವರ ಮುಂಭಾಗದಲ್ಲಿ ಯಾರು ಯುದ್ಧವನ್ನು ಮಾಡಿದರು? ಯಾರು ದುರ್ಗಮವಾದ ಗತಿಯನ್ನು ಹೊಂದುತ್ತಾ ಅವರ ಹಿಂಭಾಗದಲ್ಲಿ ಯುದ್ಧವನ್ನು ಮಾಡಿದರು?

ಕೇ ನು ತತ್ರ ತನುಂ ತ್ಯಕ್ತ್ವಾ ಪ್ರತೀಪಂ ಮೃತ್ಯುಮಾವ್ರಜನ್ ।
ಅಮಾನುಷಾಣಾಂ ಜೇತಾರಂ ಯುದ್ಧೇಷ್ವಪಿ ಚ ಸಂಜಯ ॥ ೪೬ ॥

ಎಲೈ ಸಂಜಯನೇ, ಮನುಷ್ಯರನ್ನು ಮೀರಿದವರನ್ನೂ ಯುದ್ಧದಲ್ಲಿ ಗೆಲ್ಲುವ ಅವರನ್ನು ಹಿಂಬಾಲಿಸಿ ಯಾರು ತಮ್ಮ ದೇಹವನ್ನು ತ್ಯಾಗ ಮಾಡಿ ಪ್ರತೀಪಕಾರಿಯಾದ ಮೃತ್ಯುವನ್ನು ಹೊಂದಿದರು?

ದ್ರೋಣಸ್ಯ ಸಮರೇ ವೀರಾಃ ಕೇಽಕುರ್ವಂತ ಪರಾಂ ಗತಿಮ್ ।
ಕೇಚಿಚ್ಚೈನಂ ಭಯಾನ್ಮಂದಾಃ ಕ್ಷತ್ರಿಯಾ ವ್ಯಜಹೂ ರಣೇ ।
ರಕ್ಷಿತಾರೋ ಹತಾಃ ಶೂನ್ಯೇ ಕಶ್ಚಿದೇಕೋ ಹತಃ ಪರೈಃ ॥೪೭॥

ಯುದ್ಧದಲ್ಲಿ ಯಾವ ವೀರರು ದ್ರೋಣರಿಗೆ ಸಹಾಯವನ್ನು ಮಾಡಿದರು? ಯಾವ ಮಂದರಾದ ಕ್ಷತ್ರಿಯರು ಭಯದಿಂದ ರಣರಂಗದಲ್ಲಿ ಅವರನ್ನು ತೊರೆದರು? ಅವರನ್ನು ರಕ್ಷಿಸುವವರನ್ನೆಲ್ಲ ಕೊಂದು ಏಕಾಕಿಯಾಗಿದ್ದ ಅವರನ್ನು ಯಾರಾದರೂ ಶತ್ರುಗಳು ಕೊಂದರೆ?

ನ ಸ ಪೃಷ್ಠಮರೇಽಸ್ತ್ರಾಸಾದ್ ರಣೇ ಶೌರ್ಯಾತ್ ಪ್ರದರ್ಶಯೇತ್ ।
ಪರಾಮಪ್ಯಾಪದಂ ಪ್ರಾಪ್ಯ ಕಥಂ ಸ ನಿಹಿತಃ ಪರೈಃ ॥ ೪೮ ॥

ಯುದ್ಧದಲ್ಲಿ ಎಷ್ಟು ಸಂಕಟ ಒದಗಿದರೂ ಭಯದಿಂದ ಶತ್ರುಗಳಿಗೆ ಬೆನ್ನನ್ನು ತೋರಿಸದೆ ಶೌರ್ಯವನ್ನು ಅವಲಂಬಿಸಿದ ಅವರು ಹೇಗೆ ಶತ್ರುಗಳಿಂದ ಹತರಾದರು?

ಏತದಾರ್ಯೇಣ ಕರ್ತವ್ಯಂ ಕೃಚ್ಛ್ರಾ ಸ್ವಾಪತ್ಸು ಸಂಜಯ ।
ಪರಾಕ್ರಮೇದ್ ಯಥಾಶಕ್ತ್ಯಾ ದ್ವಿಷದ್ಭಿಃ ಸ್ವಾಂಶ್ಚ ಪಾಲಯೇತ್ ॥೪೯॥

ಎಲೈ ಸಂಜಯನೇ, ಪರಾಕ್ರಮವನ್ನು ಅವಲಂಬಿಸಿ ಶಕ್ತಿ ಇದ್ದಷ್ಟು ಶತ್ರುಗಳನ್ನು ಕೊಲ್ಲುವುದು ಮತ್ತು ತನ್ನವರನ್ನು ರಕ್ಷಿಸುವುದು ಇವೆರಡೂ ಶ್ರೇಷ್ಠರಾದವರು ಕಷ್ಟ ಕಾಲದಲ್ಲಿ ಮಾಡಬೇಕಾದ ಕಾರ್ಯ.

ಕಚ್ಚಿನ್ನೈನಂ ಭಯಾತ್ ಕ್ಷುದ್ರಾಃ ಪಾರ್ಥೇಭ್ಯಃ ಪ್ರದದೂ ರಣೇ ।
ಗೋಪ್ತೃಭಿಸ್ತೈಃ ಸಮುತ್ಸೃಷ್ಟಃ ಕಚ್ಚಿನ್ನೈಷ ಪರೈರ್ಹತಃ ॥ ೫೦ ॥

ಅಥವಾ ಕ್ಷುದ್ರರಾದ ನನ್ನ ಸೈನಿಕರು ಭಯದಿಂದ ಪಾಂಡವರಿಗೆ ರಣರಂಗದಲ್ಲಿ ಅವರನ್ನು ಒಪ್ಪಿಸಿದರೆ? ರಕ್ಷಕರಿಂದ ತೊರೆಯಲ್ಪಟ್ಟ ಅವರನ್ನು ಶತ್ರುಗಳು ಕೊಲ್ಲಲಿಲ್ಲವಷ್ಟೆ?

ಧೃಷ್ಟದ್ಯುಮ್ನಂ ಪ್ರಪಶ್ಯಾಮಿ ನಿಘ್ನಂತಮಿವ ಬ್ರಾಹ್ಮಣಮ್ ।
ವಾರ್ಯಮಾಣಂ ರಣೇ ತಾತ ದ್ರೌಣಿನಾಽಮಿತತೇಜಸಾ ॥ ೫೧ ॥

ಧೃತರಾಷ್ಟ್ರ- ಯಾವನು ನಿತ್ಯೋದಿತನಾದ ಸೂರ್ಯನಂತೆ ತನ್ನ ತೇಜಸ್ಸಿನಿಂದ ಅಂಧಕಾರವನ್ನು ಪರಿಹರಿಸುವನೋ ಅಂತಹ ಅಜಾತಶತ್ರುವು ಬಂದಾಗ ಯಾರು ಅವನನ್ನು ದ್ರೋಣರಿಂದ ತಡೆದರು?

ಪ್ರಭಿನ್ನಮಿವ ಮಾತಂಗಂ ತಥಾ ಕ್ರುದ್ಧಂ ತರಸ್ವಿನಮ್ ।
ಆಸಕ್ತಮನಸಂ ದೃಪ್ತಂ ಪ್ರತಿದ್ವಿರದಘಾತಿನಮ್ ॥ ೮ ॥

ವಾಸಿತಾಸಂಗಮೇ ಯಾಂತಮ್ ಅಜಯ್ಯಂ ಪ್ರತಿಯೂಥಪೈಃ ।
ಅತೀತ್ಯಾನ್ಯಾನ್ ರಣೇ ವೀರಾನ್ ವೀರಃ ಪುರುಷಸತ್ತಮಃ ॥ ೯ ॥

ಸ ಹ್ಯೇಕೋ ಹಿ ಮಹಾಬಾಹುರ್ನಿರ್ದಹೇದ್ ಘೋರಚಕ್ಷುಷಾ ।
ಕೃತ್ಸ್ನಂ ದುರ್ಯೋಧನಬಲಂ ಧೃತಿಮಾನ್ ಸತ್ಯಸಂಗರಃ ॥ ೧೦ ॥

ಚಕ್ಷುಷ್ಮಂತಂ ಜಯೇ ಸಕ್ತಮ್ ಇಷ್ವಾಸವರರಕ್ಷಿತಮ್ ।
ದಾಂತಂ ಲೋಕೇ ಬಹುಮತಂ ಕಸ್ತಂ ದ್ರೋಣಾದವಾರಯತ್ ॥ ೧೧ ॥

ಮದೋದಕವನ್ನು ಸುರಿಸುವ, ಕೋಪಗೊಂಡ, ವೇಗಶಾಲಿಯಾದ, ದರ್ಪದಿಂದ ಕೂಡಿದ, ಪ್ರತಿಗಜವನ್ನು ಸಂಹರಿಸುವ, ವಾಸಿತಾಸಂಗಮದಲ್ಲಿ ಆಸೆಯನ್ನು ಹೊಂದಿ ಮುಂದೆ ಹೋಗುವ, ಪ್ರತಿಗಜಗಳಿಂದ ಜಯಿಸಲು ಸಾಧ್ಯವಿಲ್ಲದ ಗಜದಂತೆ ರಣರಂಗದಲ್ಲಿ ಪುರುಷಶ್ರೇಷ್ಠನಾದ ಯುಧಿಷ್ಠಿರನು ಅನ್ಯವೀರರನ್ನು ದಾಟಿ ಮುಂದೆ ಹೋದನೋ ಅಂತಹ ಮಹಾಬಾಹುವೂ, ಧೈರ್ಯಶಾಲಿಯೂ, ಸತ್ಯಸಂಧನೂ ಆದ ಯುಧಿಷ್ಠಿರನು ತನ್ನ ಘೋರವಾದ ದೃಷ್ಟಿಯಿಂದ ದುರ್ಯೋಧನನ ಸಮಗ್ರವಾದ ಬಲವನ್ನೇ ಸುಟ್ಟಾನು! ಅಂತಹ ಚಕ್ಷುಸ್ಸನ್ನು ಹೊಂದಿದ, ಜಯದಲ್ಲಿ ಆಸಕ್ತನಾದ, ಶ್ರೇಷ್ಠ ಧನುರ್ಧಾರಿಗಳಿಂದ ರಕ್ಷಿತನಾದ, ಇಂದ್ರಿಯನಿಗ್ರಹವುಳ್ಳ, ಲೋಕದಲ್ಲಿ ಗೌರವಿಸಲ್ಪಡುವ ಯುಧಿಷ್ಠಿರನನ್ನು ಯಾರು ದ್ರೋಣರಿಂದ (ದ್ರೋಣರ ಬಳಿಗೆ ಹೋಗದಂತೆ) ತಡೆದರು?

ಕೇ ದುಷ್ಪ್ರಧರ್ಷಂ ರಾಜಾನಮ್ ಇಷ್ವಾಸವರಮಚ್ಯುತಮ್ ।
ಸಮಾಸೇದುರ್ನರವ್ಯಾಘ್ರಂ ಮದೀಯಾ ವೈ ಯುಧಿಷ್ಠಿರಮ್ ॥ ೧೨ ॥

ಸೋಲಿಸಲು ಕಷ್ಟಸಾಧ್ಯನಾದ, ಶ್ರೇಷ್ಠಧನುರ್ಧಾರಿಯಾದ, ತನ್ನ ಗುಣಗಳನ್ನು ಎಂದೂ ಕಳೆದುಕೊಳ್ಳದ ನರವ್ಯಾಘ್ರನಾದ ಯುಧಿಷ್ಠಿರನನ್ನು ನನ್ನವರು ಯಾರು ಸಮೀಪಿಸಿದರು?

ತರಸೈವಾಭಿಪದ್ಯಾಥ ಯೋ ವೈ ದ್ರೋಣಮುಪಾದ್ರವತ್ ।
ಯಃ ಕರೋತಿ ಮಹತ್ಕರ್ಮ ಶತ್ರೂಣಾಂ ವೈ ಮಹಾಬಲಃ ॥ ೧೩ ॥

ಮಹಾಕಾಯೋ ಮಹೋತ್ಸಾಹೋ ನಾಗಾಯುತಸಮೋ ಬಲೇ ।
ತಂ ಭೀಮಸೇನಮಾಯಾಂತಂ ಕೇ ವೀರಾಃ ಪರ್ಯವಾರಯನ್ ॥೧೪॥

ಯಾವನು ಶೀಘ್ರವಾಗಿ ದ್ರೋಣರ ಕಡೆಗೆ ಧಾವಿಸಿದನೋ? ಮಹಾಬಲನಾದ ಯಾವನು ಶತ್ರುಗಳಿಗೆ ದೊಡ್ಡ ಅನಿಷ್ಟಕಾರ್ಯವನ್ನು ಮಾಡುತ್ತಾನೆಯೋ ಅಂತಹ ಮಹಾಶರೀರವುಳ್ಳವನೂ, ಮಹಾ ಉತ್ಸಾಹವುಳ್ಳವನೂ, ಬಲದಲ್ಲಿ ಹತ್ತುಸಾವಿರ ಆನೆಗಳಿಗೆ ಸಮನಾದವನೂ ಆದ ಭೀಮಸೇನನು ದ್ರೋಣರ ಬಳಿಗೆ ಬರುವಾಗ ಯಾವ ವೀರರು ಅವನನ್ನು ತಡೆದರು?

ಸ ಯದಾ ಜಲದಪ್ರಖ್ಯೋ ರಥಘೋಷೇಣ ವೀರ್ಯವಾನ್ ।
ಪರ್ಜನ್ಯ ಇವ ಬೀಭತ್ಸುಃ ತುಮುಲಾಮಶನಿಂ ಸೃಜನ್ ॥ ೧೫ ॥

ವಿಸೃಜನ್ ಶರವರ್ಷಾಣಿ ವರ್ಷಾಣಿ ಮಘವಾನಿವ ।
ಇಷುಸಂಬಾಧಮಾಕಾಶಂ ಕುರ್ವನ್ ಕಪಿವರಧ್ವಜಃ ॥ ೧೬ ॥

ಮೇಘದ ಕಾಂತಿಯನ್ನು ಹೊಂದಿದ, ವೀರ್ಯಶಾಲಿಯಾದ, ರಥಘೋಷದಿಂದ ಪರ್ಜನ್ಯನಂತೆ ತೀವ್ರವಾದ ಸಿಡಿಲುಗಳನ್ನು ಸೃಷ್ಟಿಸುವ, ಇಂದ್ರನು ಮಳೆಯನ್ನು ಸುರಿಸಿದಂತೆ ಬಾಣದ ಮಳೆಯನ್ನು ಸುರಿಸುವ, ಆಕಾಶವನ್ನು ಬಾಣಗಳಿಂದ ತುಂಬುವ (ನಿಬಿಡವನ್ನಾಗಿ ಮಾಡುವ) ಕಪಿಧ್ವಜನಾದ ಅರ್ಜುನನು;

ಅವಸೃಜ್ಯನ್ ದಿಶಃ ಸರ್ವಾಸ್ತಳನೇಮಿಸ್ವನೇನ ಚ ।
ಚಾಪವಿದ್ಯುತ್ಪ್ರಭೋ ಘೋರೋ ರಥಗುಲ್ಮಬಲಾಹಕಃ ॥ ೧೭ ॥

ನೇಮಿಸ್ವನಾಭಿಸ್ತನಿತಃ ಶರಶಬ್ದಾತಿಬಂಧುರಃ ।
ರೋಷನಿರ್ಜಿತಜೀಮೂತೋ ಮನೋಭಿಪ್ರಾಯಶೀಘ್ರಗಃ ॥ ೧೮ ॥

ಎಲೈ ಪ್ರೀತಿಪಾತ್ರನೇ, ಅಮಿತ ಪರಾಕ್ರಮಿಗಳಾದ ಅಶ್ವತ್ಥಾಮರಿಂದ ನಿಷೇಧಿಸಲ್ಪಡುತ್ತಿದ್ದರೂ ಯುದ್ಧದಲ್ಲಿ ಧೃಷ್ಟದ್ಯುಮ್ನನು ಬ್ರಾಹ್ಮಣರಾದ ಅವರನ್ನು ಕೊಲ್ಲುತ್ತಿರುವವನಂತೆ ಕಾಣುತ್ತಿದ್ದೇನೆ?

ಮುಹ್ಯತೇ ಮೇ ಮನಸ್ತಾತ ಮಾ ತಾವತ್ ಕಿಂಚಿದುಚ್ಯತಾಮ್ ।
ಭೂಯಸ್ತು ಲಬ್ಧಸಂಜ್ಞಃ ಸನ್ ಪರಿಪ್ರಕ್ಷ್ಯಾಮಿ ಸಂಜಯ ॥ ೫೨ ॥

ಎಲೈ ಪ್ರೀತಿಪಾತ್ರನೇ, ನನ್ನ ಮನಸ್ಸಿಗೆ ಮೋಹವುಂಟಾಗುತ್ತಿದೆ (ನಾನು ಮೂರ್ಛೆಯನ್ನು ಹೊಂದುವೆನು). ಸದ್ಯಕ್ಕೆ ಏನನ್ನೂ ಹೇಳಬೇಡ. ಪ್ರಜ್ಞೆಯನ್ನು ಮರಳಿ ಪಡೆದ ಮೇಲೆ ನಿನ್ನನ್ನು ಪ್ರಶ್ನಿಸುವೆನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಅಷ್ಟಮೋऽಧ್ಯಾಯಃ ॥

॥ ದ್ರೋಣಾಭಿಷೇಕಪರ್ವಣಿ ಅಷ್ಟಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಎಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಒಂಬತ್ತನೆಯ ಅಧ್ಯಾಯ

ಮೂರ್ಛೆಯಿಂದ ಧೃತರಾಷ್ಟ್ರನ ಎಚ್ಚರಿಕೆ. ಸಂಜಯನನ್ನು ಕುರಿತು ಪುನಃ ಯುದ್ಧದ ಪ್ರಶ್ನೆ.

ವೈಶಂಪಾಯನಃ

ಏವಂ ಪೃಷ್ಟ್ವಾ ಸೂತಪುತ್ರಂ ಹೃಚ್ಛೋಕೇನಾರ್ದಿತೋ ಭೃಶಮ್ ।
ಜಯೇ ನಿರಾಶಃ ಪುತ್ರಾಣಾಂ ಧೃತರಾಷ್ಟ್ರೋऽಪತತ್ ಕ್ಷಿತೌ ॥ ೧ ॥

ವೈಶಂಪಾಯನ– ಧೃತರಾಷ್ಟ್ರನು ಸಂಜಯನನ್ನು ಕುರಿತು ಹೀಗೆ ಪ್ರಶ್ನೆಯನ್ನು ಮಾಡಿ, ಮನಶ್ಶೋಕದಿಂದ ಬಹಳ ಪೀಡಿತನಾಗಿ, ತನ್ನ ಪುತ್ರನ ಜಯದಲ್ಲಿ ಆಸೆಯನ್ನು ಕಳೆದುಕೊಂಡು ಭೂಮಿಯ ಮೇಲೆ ಬಿದ್ದನು.

ತಂ ವಿಸಂಜ್ಞಂ ನಿಪತಿತಂ ಸಿಷಿಚುಃ ಪರಿಚಾರಿಕಾಃ ।
ಜಲೇನಾತ್ಯಂತಶೀತೇನ ವೀಜಂತ್ಯಃ ಪುಣ್ಯಗಂಧಿನಾ ॥ ೨ ॥

ಭೂಮಿಯ ಮೇಲೆ ಬಿದ್ದ ಅವನನ್ನು ಪರಿಚಾರಿಕೆಯರು ಸುಗಂಧಯುಕ್ತವಾದ, ಅತ್ಯಂತ ಶೀತಲವಾದ ನೀರಿನಿಂದ ಚುಮುಕಿಸಿ ಅವನಿಗೆ ಗಾಳಿಯನ್ನು ಬೀಸಿದರು.

ಪತಿತಂ ಚೈನಮಾಜ್ಞಾಯ ಸಮಸ್ತಾ ಭಾರತಸ್ತ್ರಿಯಃ ।
ಪರಿವವ್ರುರ್ಮಹಾತ್ಮಾನಂ ಸಂಸ್ಪೃಶಂತ್ಯಶ್ಚ ಪಾಣಿಭಿಃ ॥ ೩ ॥

ಅವನು ಬಿದ್ದುದನ್ನು ತಿಳಿದ ಭಾರತಸ್ತ್ರೀಯರೆಲ್ಲರೂ ಮಹಾತ್ಮನಾದ ಅವನನ್ನು ತಮ್ಮ ಹಸ್ತಗಳಿಂದ ಸ್ಪರ್ಶಿಸುತ್ತಾ ಸುತ್ತುವರಿದರು.

ಉತ್ಥಾಪ್ಯ ಚೈನಂ ಶನಕೈ ರಾಜಾನಂ ಪೃಥಿವೀತಳಾತ್ ।
ಆಸನಂ ಪ್ರಾಪಯಾಮಾಸುರ್ಬಾಷ್ಪಕಂಠ್ಯೋ ವರಾಂಗನಾಃ ॥ ೪ ॥

ಬಾಷ್ಪಕಂಠದಿಂದ ಕೂಡಿದ ಆ ಸುಂದರಿಯರು ರಾಜನನ್ನು ಮೆಲ್ಲನೆ ಭೂತಳದಿಂದ ಎತ್ತಿ ಆಸನದಲ್ಲಿ ಕೂಡಿಸಿದರು.

ಆಸನಂ ಪ್ರಾಪ್ಯ ರಾಜಾ ತು ಮೂರ್ಚ್ಛಯಾऽಭಿಪರಿಪ್ಲುತಃ ।
ನಿಶ್ಚೇಷ್ಟೋऽತಿಷ್ಠತ ತದಾ ವೀಜ್ಯಮಾನಃ ಸಮಂತತಃ ॥ ೫ ॥

ಆಸನದಲ್ಲಿ ಕೂಡಿಸಲ್ಪಟ್ಟ ರಾಜನು ಎಲ್ಲ ಕಡೆಗಳಿಂದಲೂ ಗಾಳಿಯನ್ನು ಬೀಸಿದರೂ ಮೂರ್ಛಾಕ್ರಾಂತನಾಗಿ ನಿಶ್ಚೇಷ್ಟನಾಗಿದ್ದನು.

ಸ ಲಬ್ಧ್ವಾ ಶನಕೈಃ ಸಂಜ್ಞಾಂ ವೇಪಮಾನೋ ಮುಹುರ್ಮುಹುಃ ।
ಪುನರ್ಗಾವಲ್ಗಣಿಂ ಸೂತಂ ಪರ್ಯಪೃಚ್ಛದ್ ಯಥಾತಥಮ್ ॥ ೬ ॥

ಅವನು ಪುನಃ ನಿಧಾನವಾಗಿ ಪ್ರಜ್ಞೆಯನ್ನು ಪಡೆದು, ಪುನಃ ಪುನಃ ನಡುಗುತ್ತಾ, ಗಾವಲ್ಗಣಿಯಾದ ಸಂಜಯನನ್ನು ಕುರಿತು ಯುದ್ಧದ ಸತ್ಯಸಂಗತಿಗಳ ವಿಷಯದಲ್ಲಿ ಪುನಃ ಪ್ರಶ್ನೆಯನ್ನು ಮಾಡಿದನು.

ಧೃತರಾಷ್ಟ್ರಃ

ಯಃ ಸದೋದ್ಯನ್ನಿವಾದಿತ್ಯಃ ತೇಜಸಾ ಪ್ರಣುದನ್ ತಮಃ ।
ಆಯಾದಜಾತಶತ್ರುರ್ವೈ ಕಸ್ತಂ ದ್ರೋಣಾದವಾರಯತ್ ॥ ೭ ॥

ಧೃತರಾಷ್ಟ್ರ- ಯಾವನು ನಿತ್ಯೋದಿತನಾದ ಸೂರ್ಯನಂತೆ ತನ್ನ ತೇಜಸ್ಸಿನಿಂದ ಅಂಧಕಾರವನ್ನು ಪರಿಹರಿಸುವನೋ ಅಂತಹ ಅಜಾತಶತ್ರುವು ಬಂದಾಗ ಯಾರು ಅವನನ್ನು ದ್ರೋಣರಿಂದ ತಡೆದರು?

ಪ್ರಭಿನ್ನಮಿವ ಮಾತಂಗಂ ತಥಾ ಕ್ರುದ್ಧಂ ತರಸ್ವಿನಮ್ ।
ಆಸಕ್ತಮನಸಂ ದೃಪ್ತಂ ಪ್ರತಿದ್ವಿರದಘಾತಿನಮ್ ॥ ೮ ॥

ವಾಸಿತಾಸಂಗಮೇ ಯಾಂತಮ್ ಅಜಯ್ಯಂ ಪ್ರತಿಯೂಥಪೈಃ ।
ಅತೀತ್ಯಾನ್ಯಾನ್ ರಣೇ ವೀರಾನ್ ವೀರಃ ಪುರುಷಸತ್ತಮಃ ॥ ೯ ॥

ಸ ಹ್ಯೇಕೋ ಹಿ ಮಹಾಬಾಹುರ್ನಿರ್ದಹೇದ್ ಘೋರಚಕ್ಷುಷಾ ।
ಕೃತ್ಸ್ನಂ ದುರ್ಯೋಧನಬಲಂ ಧೃತಿಮಾನ್ ಸತ್ಯಸಂಗರಃ ॥ ೧೦ ॥

ಚಕ್ಷುಷ್ಮಂತಂ ಜಯೇ ಸಕ್ತಮ್ ಇಷ್ವಾಸವರರಕ್ಷಿತಮ್ ।
ದಾಂತಂ ಲೋಕೇ ಬಹುಮತಂ ಕಸ್ತಂ ದ್ರೋಣಾದವಾರಯತ್ ॥ ೧೧ ॥

ಮದೋದಕವನ್ನು ಸುರಿಸುವ, ಕೋಪಗೊಂಡ, ವೇಗಶಾಲಿಯಾದ, ದರ್ಪದಿಂದ ಕೂಡಿದ, ಪ್ರತಿಗಜವನ್ನು ಸಂಹರಿಸುವ, ವಾಸಿತಾಸಂಗಮದಲ್ಲಿ ಆಸೆಯನ್ನು ಹೊಂದಿ ಮುಂದೆ ಹೋಗುವ, ಪ್ರತಿಗಜಗಳಿಂದ ಜಯಿಸಲು ಸಾಧ್ಯವಿಲ್ಲದ ಗಜದಂತೆ ರಣರಂಗದಲ್ಲಿ ಪುರುಷಶ್ರೇಷ್ಠನಾದ ಯುಧಿಷ್ಠಿರನು ಅನ್ಯವೀರರನ್ನು ದಾಟಿ ಮುಂದೆ ಹೋದನೋ ಅಂತಹ ಮಹಾಬಾಹುವೂ, ಧೈರ್ಯಶಾಲಿಯೂ, ಸತ್ಯಸಂಧನೂ ಆದ ಯುಧಿಷ್ಠಿರನು ತನ್ನ ಘೋರವಾದ ದೃಷ್ಟಿಯಿಂದ ದುರ್ಯೋಧನನ ಸಮಗ್ರವಾದ ಬಲವನ್ನೇ ಸುಟ್ಟಾನು! ಅಂತಹ ಚಕ್ಷುಸ್ಸನ್ನು ಹೊಂದಿದ, ಜಯದಲ್ಲಿ ಆಸಕ್ತನಾದ, ಶ್ರೇಷ್ಠ ಧನುರ್ಧಾರಿಗಳಿಂದ ರಕ್ಷಿತನಾದ, ಇಂದ್ರಿಯನಿಗ್ರಹವುಳ್ಳ, ಲೋಕದಲ್ಲಿ ಗೌರವಿಸಲ್ಪಡುವ ಯುಧಿಷ್ಠಿರನನ್ನು ಯಾರು ದ್ರೋಣರಿಂದ (ದ್ರೋಣರ ಬಳಿಗೆ ಹೋಗದಂತೆ) ತಡೆದರು?

ಕೇ ದುಷ್ಪ್ರಧರ್ಷಂ ರಾಜಾನಮ್ ಇಷ್ವಾಸವರಮಚ್ಯುತಮ್ ।
ಸಮಾಸೇದುರ್ನರವ್ಯಾಘ್ರಂ ಮದೀಯಾ ವೈ ಯುಧಿಷ್ಠಿರಮ್ ॥ ೧೨ ॥

ಸೋಲಿಸಲು ಕಷ್ಟಸಾಧ್ಯನಾದ, ಶ್ರೇಷ್ಠಧನುರ್ಧಾರಿಯಾದ, ತನ್ನ ಗುಣಗಳನ್ನು ಎಂದೂ ಕಳೆದುಕೊಳ್ಳದ ನರವ್ಯಾಘ್ರನಾದ ಯುಧಿಷ್ಠಿರನನ್ನು ನನ್ನವರು ಯಾರು ಸಮೀಪಿಸಿದರು?

ತರಸ್ವೈವಾಭಿಪದ್ಯಾಥ ಯೋ ವೈ ದ್ರೋಣಮುಪಾದ್ರವತ್ ।
ಯಃ ಕರೋತಿ ಮಹತ್ಕರ್ಮ ಶತ್ರೂಣಾಂ ವೈ ಮಹಾಬಲಃ ॥ ೧೩ ॥

ಮಹಾಕಾಯೋ ಮಹೋತ್ಸಾಹೋ ನಾಗಾಯುತಸಮೋ ಬಲೇ ।
ತಂ ಭೀಮಸೇನಮಾಯಾಂತಂ ಕೇ ವೀರಾಃ ಪರ್ಯವಾರಯನ್ ॥೧೪॥

ಯಾವನು ಶೀಘ್ರವಾಗಿ ದ್ರೋಣರ ಕಡೆಗೆ ಧಾವಿಸಿದನೋ? ಮಹಾಬಲನಾದ ಯಾವನು ಶತ್ರುಗಳಿಗೆ ದೊಡ್ಡ ಅನಿಷ್ಟಕಾರ್ಯವನ್ನು ಮಾಡುತ್ತಾನೆಯೋ ಅಂತಹ ಮಹಾಶರೀರವುಳ್ಳವನೂ, ಮಹಾ ಉತ್ಸಾಹವುಳ್ಳವನೂ, ಬಲದಲ್ಲಿ ಹತ್ತುಸಾವಿರ ಆನೆಗಳಿಗೆ ಸಮನಾದವನೂ ಆದ ಭೀಮಸೇನನು ದ್ರೋಣರ ಬಳಿಗೆ ಬರುವಾಗ ಯಾವ ವೀರರು ಅವನನ್ನು ತಡೆದರು?

ಸ ಯದಾ ಜಲದಪ್ರಖ್ಯೋ ರಥಘೋಷೇಣ ವೀರ್ಯವಾನ್ ।
ಪರ್ಜನ್ಯ ಇವ ಬೀಭತ್ಸುಃ ತುಮುಲಾಮಶನಿಂ ಸೃಜನ್ ॥ ೧೫ ॥

ವಿಸೃಜನ್ ಶರವರ್ಷಾಣಿ ವರ್ಷಾಣಿ ಮಘವಾನಿವ ।
ಇಷುಸಂಬಾಧಮಾಕಾಶಂ ಕುರ್ವನ್ ಕಪಿವರಧ್ವಜಃ ॥ ೧೬ ॥

ಮೇಘದ ಕಾಂತಿಯನ್ನು ಹೊಂದಿದ, ವೀರ್ಯಶಾಲಿಯಾದ, ರಥಘೋಷದಿಂದ ಪರ್ಜನ್ಯನಂತೆ ತೀವ್ರವಾದ ಸಿಡಿಲುಗಳನ್ನು ಸೃಷ್ಟಿಸುವ, ಇಂದ್ರನು ಮಳೆಯನ್ನು ಸುರಿಸಿದಂತೆ ಬಾಣದ ಮಳೆಯನ್ನು ಸುರಿಸುವ, ಆಕಾಶವನ್ನು ಬಾಣಗಳಿಂದ ತುಂಬುವ (ನಿಬಿಡವನ್ನಾಗಿ ಮಾಡುವ) ಕಪಿಧ್ವಜನಾದ ಅರ್ಜುನನು;

ಅವಸೃಜ್ಯನ್ ದಿಶಃ ಸರ್ವಾಸ್ತಳನೇಮಿಸ್ವನೇನ ಚ ।
ಚಾಪವಿದ್ಯುತ್ಪ್ರಭೋ ಘೋರೋ ರಥಗುಲ್ಮಬಲಾಹಕಃ ॥ ೧೭ ॥

ನೇಮಿಸ್ವನಾಭಿಸ್ತನಿತಃ ಶರಶಬ್ದಾತಿಬಂಧುರಃ ।
ರೋಷನಿರ್ಜಿತಜೀಮೂತೋ ಮನೋಭಿಪ್ರಾಯಶೀಘ್ರಗಃ ॥ ೧೮ ॥

ಧೃತರಾಷ್ಟ್ರ- ಯಾವನು ನಿತ್ಯೋದಿತನಾದ ಸೂರ್ಯನಂತೆ ತನ್ನ ತೇಜಸ್ಸಿನಿಂದ ಅಂಧಕಾರವನ್ನು ಪರಿಹರಿಸುವನೋ ಅಂತಹ ಅಜಾತಶತ್ರುವು ಬಂದಾಗ ಯಾರು ಅವನನ್ನು ದ್ರೋಣರಿಂದ ತಡೆದರು?

ಪ್ರಭಿನ್ನಮಿವ ಮಾತಂಗಂ ತಥಾ ಕ್ರುದ್ಧಂ ತರಸ್ವಿನಮ್ ।
ಆಸಕ್ತಮನಸಂ ದೃಪ್ತಂ ಪ್ರತಿದ್ವಿರದಘಾತಿನಮ್ ॥ ೮ ॥

ವಾಸಿತಾಸಂಗಮೇ ಯಾಂತಮ್ ಅಜಯ್ಯಂ ಪ್ರತಿಯೂಥಪೈಃ ।
ಅತೀತ್ಯಾನ್ಯಾನ್ ರಣೇ ವೀರಾನ್ ವೀರಃ ಪುರುಷಸತ್ತಮಃ ॥ ೯ ॥

ಸ ಹ್ಯೇಕೋ ಹಿ ಮಹಾಬಾಹುರ್ನಿರ್ದಹೇದ್ ಘೋರಚಕ್ಷುಷಾ ।
ಕೃತ್ಸ್ನಂ ದುರ್ಯೋಧನಬಲಂ ಧೃತಿಮಾನ್ ಸತ್ಯಸಂಗರಃ ॥ ೧೦ ॥

ಚಕ್ಷುಷ್ಮಂತಂ ಜಯೇ ಸಕ್ತಮ್ ಇಷ್ವಾಸವರರಕ್ಷಿತಮ್ ।
ದಾಂತಂ ಲೋಕೇ ಬಹುಮತಂ ಕಸ್ತಂ ದ್ರೋಣಾದವಾರಯತ್ ॥ ೧೧ ॥

ಮದೋದಕವನ್ನು ಸುರಿಸುವ, ಕೋಪಗೊಂಡ, ವೇಗಶಾಲಿಯಾದ, ದರ್ಪದಿಂದ ಕೂಡಿದ, ಪ್ರತಿಗಜವನ್ನು ಸಂಹರಿಸುವ, ವಾಸಿತಾಸಂಗಮದಲ್ಲಿ ಆಸೆಯನ್ನು ಹೊಂದಿ ಮುಂದೆ ಹೋಗುವ, ಪ್ರತಿಗಜಗಳಿಂದ ಜಯಿಸಲು ಸಾಧ್ಯವಿಲ್ಲದ ಗಜದಂತೆ ರಣರಂಗದಲ್ಲಿ ಪುರುಷಶ್ರೇಷ್ಠನಾದ ಯುಧಿಷ್ಠಿರನು ಅನ್ಯವೀರರನ್ನು ದಾಟಿ ಮುಂದೆ ಹೋದನೋ ಅಂತಹ ಮಹಾಬಾಹುವೂ, ಧೈರ್ಯಶಾಲಿಯೂ, ಸತ್ಯಸಂಧನೂ ಆದ ಯುಧಿಷ್ಠಿರನು ತನ್ನ ಘೋರವಾದ ದೃಷ್ಟಿಯಿಂದ ದುರ್ಯೋಧನನ ಸಮಗ್ರವಾದ ಬಲವನ್ನೇ ಸುಟ್ಟಾನು! ಅಂತಹ ಚಕ್ಷುಸ್ಸನ್ನು ಹೊಂದಿದ, ಜಯದಲ್ಲಿ ಆಸಕ್ತನಾದ, ಶ್ರೇಷ್ಠ ಧನುರ್ಧಾರಿಗಳಿಂದ ರಕ್ಷಿತನಾದ, ಇಂದ್ರಿಯನಿಗ್ರಹವುಳ್ಳ, ಲೋಕದಲ್ಲಿ ಗೌರವಿಸಲ್ಪಡುವ ಯುಧಿಷ್ಠಿರನನ್ನು ಯಾರು ದ್ರೋಣರಿಂದ (ದ್ರೋಣರ ಬಳಿಗೆ ಹೋಗದಂತೆ) ತಡೆದರು?

ಕೇ ದುಷ್ಪ್ರಧರ್ಷಂ ರಾಜಾನಮ್ ಇಷ್ವಾಸವರಮಚ್ಯುತಮ್ ।
ಸಮಾಸೇದುರ್ನರವ್ಯಾಘ್ರಂ ಮದೀಯಾ ವೈ ಯುಧಿಷ್ಠಿರಮ್ ॥ ೧೨ ॥

ಸೋಲಿಸಲು ಕಷ್ಟಸಾಧ್ಯನಾದ, ಶ್ರೇಷ್ಠಧನುರ್ಧಾರಿಯಾದ, ಶತ್ರು ಗುಣಗಳನ್ನು ಎಂದೂ ಕಳೆದುಕೊಳ್ಳದ ನರವ್ಯಾಘ್ರನಾದ ಯುಧಿಷ್ಠಿರನನ್ನು ಸನ್ನಿವರು ಯಾರು ಸಮೀಪಿಸಿದರು?

ತಸ್ಯೈವಾಭಿಪದ್ಯಾಥ ಯೋ ವೈ ದ್ರೋಣಮುಪಾದ್ರವತ್ ।
ಯಃ ಕರೋತಿ ಮಹತ್ಕರ್ಮ ಶತ್ರೂಣಾಂ ವೈ ಮಹಾಬಲಃ ॥ ೧೩ ॥

ಮಹಾಕಾಯೋ ಮಹೋತ್ಸಾಹೋ ನಾಗಾಯುತಸಮೋ ಬಲೇ ।
ತಂ ಭೀಮಸೇನಮಾಯಾಂತಂ ಕೇ ವೀರಾಃ ಪರ್ಯುಪಾತಮನ್ ॥೧೪॥

ಯಾವನು ಶೀಘ್ರವಾಗಿ ದ್ರೋಣರ ಕಡೆಗೆ ಧಾವಿಸಿದನೋ? ಮಹಾಬಲನಾದ ಯಾವನು ಶತ್ರುಗಳಿಗೆ ದೊಡ್ಡ ಅನಿಷ್ಟಕಾರ್ಯವನ್ನು ಮಾಡುತ್ತಾನೆಯೋ ಅಂತಹ ಮಹಾಶರೀರವುಳ್ಳವನೂ, ಮಹಾ ಉತ್ಸಾಹವುಳ್ಳವನೂ, ಬಲದಲ್ಲಿ ಹತ್ತುಸಾವಿರ ಆನೆಗಳಿಗೆ ಸಮನಾದವನೂ ಆದ ಭೀಮಸೇನನು ದ್ರೋಣರ ಬಳಿಗೆ ಬರುವಾಗ ಯಾವ ವೀರರು ಅವನನ್ನು ತಡೆದರು?

ಸ ಯದಾ ಜಲದಪ್ರಖ್ಯೋ ರಥಘೋಷೇಣ ವೀರ್ಯವಾನ್ ।
ಪರ್ಜನ್ಯ ಇವ ಬೀಭತ್ಸುಃ ತುಮುಲಾಮತನಿಂ ಸೃಜನ್ ॥ ೧೫ ॥

ವಿಸೃಜನ್ ಶರವರ್ಷಾಣಿ ವರ್ಷಾಣಿ ಮಘವಾನಿವ ।
ಇಷುಸಂಬಾಧಮಾಕಾಶಂ ಕುರ್ವನ್ ಕಪಿವರಧ್ವಜಃ ॥ ೧೬ ॥

ಮೇಘದ ಕಾಂತಿಯನ್ನು ಹೊಂದಿದ, ವೀರ್ಯಶಾಲಿಯಾದ, ರಥಘೋಷದಿಂದ ಪರ್ಜನ್ಯನಂತೆ ತೀವ್ರವಾದ ಸಿಡಿಲುಗಳನ್ನು ಸೃಷ್ಟಿಸುವ, ಇಂದ್ರನು ಮಳೆಯನ್ನು ಸುರಿಸಿದಂತೆ ಬಾಣದ ಮಳೆಯನ್ನು ಸುರಿಸುವ, ಆಕಾಶವನ್ನು ಬಾಣಗಳಿಂದ ತುಂಬುವ (ನಿಬಿಡವನ್ನಾಗಿ ಮಾಡುವ) ಕಪಿಧ್ವಜನಾದ ಅರ್ಜುನನು;

ಅವಸ್ಫೂರ್ಜನ್ ದಿಶಃ ಸರ್ವಾಸ್ತಳನೇಮಿಸ್ವನೇನ ಚ ।
ಚಾಪವಿದ್ಯುತ್ಪ್ರಭೋ ಘೋರೋ ರಥಗುಲ್ಮಬಲಾಹಕಃ ॥ ೧೭ ॥

ನೇಮಿಸ್ವನಾಭಿಸ್ತನಿತಃ ಶರಶಬ್ದಾತಿಬಂಧುರಃ ।
ರೋಷನಿರ್ಜಿತಜೀಮೂತೋ ಮನೋಭಿಪ್ರಾಯಶೀಘ್ರಗಃ ॥ ೧೮ ॥

ತನ್ನ ರಥದ ನೇಮಿಶಬ್ದದಿಂದಲೂ, ಹಸ್ತ-ತಳಶಬ್ದದಿಂದಲೂ, ದಿಕ್ಕುಗಳನ್ನು ಪ್ರತಿಧ್ವನಿಸುತ್ತಾ, ಧನುಸ್ಸೆಂಬ ವಿದ್ಯುತ್ಪಭೆಯುಳ್ಳವನಾಗಿ, ಘೋರನಾಗಿ, ರಥಸಮೂಹವೆಂಬ ಮೋಡವನ್ನು ಹೊಂದಿ, ರಥನೇಮಿಸ್ವನವೆಂಬ ಗುಡುಗುಗಳಿಂದ ಕೂಡಿ, ಶರಶಬ್ದಗಳೆಂಬ ಬಂಧುಗಳಿಂದ ಕೂಡಿ, ರೋಷದಿಂದ ಮೇಘ ಗರ್ಜನೆಯನ್ನು ಜಯಿಸಿ, ಮನಸ್ಸಿನ ಅಭಿಪ್ರಾಯದಂತೆ ಶೀಘ್ರಗತಿಯನ್ನು ಹೊಂದಿ;

ಮರ್ಮಾತಿಗಃ ಬಾಣಧಾರಸ್ತುಮುಲಃ ಶೋಣಿತೋದಕ್ಕೈಃ ।
ದಿಶಶ್ಚ ಪ್ರದಿಶಃ ಸರ್ವಾ ಮಾನವೈರಾಸ್ತೃಣೋನ್ಮಹೀಮ್ ॥ ೧೯ ॥

ಗದಾಸಿವಿದ್ಯುತ್ಕಲಿಲಃ ಶಾತ್ರವಾಣಾಂ ಭಯಂಕರಃ ।
ಯುದ್ಧೇsಭವರ್ಷನ್ ಕೌಂತೇಯೋ ಗೃಧ್ರಪತ್ರೈಃ ಶಿಲಾಶಿತೈಃ ॥೨೦॥

ಗಾಂಡೀವಂ ಧನುರಾದಾಯ ಕ್ವ ತದಾ ಪ್ರತ್ಯವಸ್ಥಿತಃ।
ಕಚ್ಚಿದ್ಗಾಂಡೀವಶಬ್ದೇನ ನ ಪ್ರಣಶ್ಯತಿ ಮೇ ಬಲಮ್ ॥ ೨೧ ॥

ಬಾಣಗಳ ಮಳೆಯಿಂದ ಶತ್ರುಗಳ ಮರ್ಮವನ್ನು ಭೇದಿಸಿ, ರಕ್ತೋದಕದಿಂದ ಎಲ್ಲ ದಿಕ್ಕು-ವಿದಿಕ್ಕುಗಳಲ್ಲಿ ಭೂಮಿಯನ್ನು ಮೃತರಾದ ಯೋಧರಿಂದ ತುಂಬಿದನೋ, ಗದಾ-ಖಡ್ಗ ಎಂಬ ಮಿಂಚುಗಳಿಂದ ಕೂಡಿದ, ಶತ್ರುಭಯಂಕರನಾದ ಅರ್ಜುನನು ಗಾಂಡೀವ ಧನುಸ್ಸನ್ನು ತೆಗೆದುಕೊಂಡು ಕಲ್ಲಿನಲ್ಲಿ ಸಾಣೆಯನ್ನು ಹಿಡಿದ ಗೃಧ್ರಪತ್ರಗಳಿಂದ ಕೂಡಿದ ಬಾಣಗಳ ಮಳೆಯನ್ನು ಯುದ್ಧದಲ್ಲಿ ಸುರಿಸುವಾಗ ಅವನು ಎಲ್ಲಿ ಇದ್ದನು? ಗಾಂಡೀವ ಶಬ್ದದಿಂದಲೇ ನನ್ನ ಸೈನ್ಯವು ನಾಶ ಹೊಂದಲಿಲ್ಲವಷ್ಟೆ?

ಯದಾ ವೋ ಭೈರವಂ ಕುವನ್ನರ್ಜುನೋ ಭೃಶಮತ್ಯಗಾತ್ ।
ವಾತೋ ಮೇಘಾನಿವಾವಿದ್ಧ್ಯ ಬಲವಾನ್ ಭೀಮವಿಕ್ರಮಃ ।
ಕೋ ಹಿ ಶಕ್ತೋ ರಣೇ ಜೇತುಂ ಮಾನವಃ ಪಾರ್ಥಮೀಕ್ಷಿತುಮ್ ॥೨೨॥

ಯಾವ ಬಲಿಷ್ಠನೂ, ಭಯಂಕರ ಪರಾಕ್ರಮವುಳ್ಳವನೂ ಆದ ಅರ್ಜುನನು ವಾಯುವು ಮೇಘಗಳನ್ನು ಅಪ್ಪಳಿಸುವಂತೆ ಭಯಂಕರವಾದ ಕಾರ್ಯವನ್ನು ಮಾಡಿ ನಿಮ್ಮನ್ನು ದಾಟಿದನೋ ಆಗ ಯಾವ ಮಾನವನು ರಣರಂಗದಲ್ಲಿ ಅವನನ್ನು ನೋಡಲು ಶಕ್ತನಾಗುತ್ತಾನೆ?

ಕಚ್ಚಿನ್ನಾಪಾನುದತ್ ಪ್ರಾಣಾನ್ ಇಷುಭಿರ್ವೋ ಧನಂಜಯಃ ।
ವಾಯುರ್ಮೇಘಾನಿವಾವಿದ್ಧ್ಯತ್ ರೇಣೂನಿವ ಮಹಾಬಲಃ ॥ ೨೩ ॥

ವಾಯುವು ಧೂಳನ್ನು ಮತ್ತು ಮೇಘಗಳನ್ನು ಅಪ್ಪಳಿಸಿ ಹಾರಿಸುವಂತೆ ಮಹಾಬಲನಾದ ಅರ್ಜುನನು ತನ್ನ ಬಾಣಗಳಿಂದ ನಿಮ್ಮ ಪ್ರಾಣಗಳನ್ನು ಹಾರಿಸಲಿಲ್ಲವಷ್ಟೆ?

ಕೋ ಹಿ ಗಾಂಡೀವಧನ್ವಾನಂ ನರಃ ಸೋಢುಂ ರಣೇऽರ್ಹತಿ ।
ಯತ್ ಸೇನಾಃ ಸಮಕಂಪಂತ ಯದ್ ವೀರಾನಸ್ಪೃಶದ್ ಭಯಮ್ ॥೨೪॥

ಸೈನ್ಯವೆಲ್ಲವೂ ನಡುಗಿದುದರಿಂದ ಮತ್ತು ವೀರರಿಗೆ ಭಯವುಂಟಾದುದರಿಂದ ಗಾಂಡೀವ ಧನುರ್ಧಾರಿಯಾದ ಅರ್ಜುನನನ್ನು ಯುದ್ಧದಲ್ಲಿ ಯಾವನು ಸಹಿಸಲು ಸಾಧ್ಯವಾದೀತು?

ಕೇ ತತ್ರ ನ ಜಹುರ್ದ್ರೋಣಂ ಕೇ ಕ್ಷುದ್ರಾಃ ಪ್ರಾದ್ರವನ್ ಭಯಾತ್ ।
ಕೇ ವಾ ತತ್ರ ತನುಂ ತ್ಯಕ್ತ್ವಾ ಪ್ರತೀಪಂ ಮೃತ್ಯುಮಾವ್ರಜನ್ ॥ ೨೫ ॥

ಅಲ್ಲಿ ಯಾರು ದ್ರೋಣರನ್ನು ತ್ಯಜಿಸಲಿಲ್ಲ? ಯಾವ ಕ್ಷುದ್ರರು ಭಯದಿಂದ ಓಡಿಹೋದರು? ಯಾರು ಅಲ್ಲಿ ತಮ್ಮ ಶರೀರಗಳನ್ನು ತ್ಯಜಿಸಿ (ಪರಿಗಣಿಸದೆ) ವೈರಿಯೂ, ಮಾರಕನೂ, ದೇವತೆಗಳನ್ನೂ ಗೆಲ್ಲುವವನೂ ಆದ ಅರ್ಜುನನ ಮೇಲೆ ಎರಗಿದರು?

ಅಮಾನುಷಾಣಾಂ ಜೇತಾರಂ ಯುದ್ಧೇಷ್ವಪಿ ಧನಂಜಯಮ್ ।
ನ ವೈ ವೇಗಂ ಸಿತಾಶ್ವಸ್ಯ ಪ್ರಸಹಿಷ್ಯತಿ ಮಾನವಃ ।
ಗಾಂಡೀವಸ್ಯ ಚ ನಿರ್ಘೋಷಂ ಪ್ರಾವೃಡ್ಜಲದನಿಸ್ವನಮ್ ॥ ೨೬ ॥

ಅರ್ಜುನನ ವೇಗವನ್ನು ಮತ್ತು ಮಳೆಗಾಲದ ಮೋಡಗಳ ಗರ್ಜನೆಯಂತಿರುವ ಗಾಂಡೀವ ಧನುಸ್ಸಿನ ಘೋಷವನ್ನು ಯಾವ ಮಾನವನೂ ಸಹಿಸುವುದಿಲ್ಲ.

ವಿಷ್ವಕ್ಸೇನೋ ಯಸ್ಯ ಯಂತಾ ಯತ್ರ ಯೋದ್ಧಾ ಧನಂಜಯಃ ।
ಅಜಯ್ಯಂ ತಂ ರಥಂ ಮನ್ಯೇ ದೇವೈರಪಿ ಸವಾಸವೈಃ ॥ ೨೭ ॥

ಎಲ್ಲಿ ವಿಶ್ವಕ್ಸೇನನಾದ ಕೃಷ್ಣನು ಸಾರಥಿಯಾಗಿದ್ದಾನೆಯೋ, ಅರ್ಜುನನು ಯೋಧನಾಗಿದ್ದಾನೆಯೋ ಅಂತಹ ರಥವು ಇಂದ್ರಸಹಿತರಾದ ದೇವತೆಗಳಿಂದಲೂ ಜಯಿಸಲು ಅಸಾಧ್ಯವಾದುದು ಎಂದು ತಿಳಿಯುತ್ತೇನೆ.

ಸುಕುಮಾರೋ ಯುವಾ ಶೂರೋ ದರ್ಶನೀಯಶ್ಚ ಪಾಂಡವಃ ।
ಮೇಧಾವೀ ನಿಪುಣೋ ಧೀಮಾನ್ ಯುಧಿ ಸತ್ಯಪರಾಕ್ರಮಃ ॥ ೨೮ ॥

ತಂ ರಥಾನಾಂ ರಥಂ ವೀರಂ ಸದಾ ಯುದ್ಧೇಷು ದುರ್ಜಯಮ್ ।
ಆರಾವಂ ವಿಪುಲಂ ಕುರ್ವನ್ ವಿಧಮನ್ ಸರ್ವಸೈನಿಕಾನ್ ।
ನಕುಲಂ ಪಾಂಡವಶ್ರೇಷ್ಠಂ ಕೇ ವೀರಾಃ ಪರ್ಯವಾರಯನ್ ॥ ೨೯ ॥

ನಕುಲನು ಯುವಕನಾದವನು, ಸುಕುಮಾರ, ಶೂರ, ಸುಂದರ, ಮೇಧಾವಿ, ಕುಶಲ ಮತ್ತು ಯುದ್ಧದಲ್ಲಿ ಸತ್ಯಪರಾಕ್ರಮವುಳ್ಳವನು. ಅಂತಹ ಯುದ್ಧದಲ್ಲಿ ದುರ್ಜಯನಾದ, ವೀರನಾದ, ಪಾಂಡವಶ್ರೇಷ್ಠನಾದ ನಕುಲನು ರಥಗಳ ಮಧ್ಯದಲ್ಲಿ ಸಂಚರಿಸುತ್ತಾ, ಎಲ್ಲ ಸೈನಿಕರನ್ನು ನಾಶಪಡಿಸುತ್ತಾ , ವಿಪುಲವಾದ ಸಿಂಹನಾದವನ್ನು ಮಾಡುತ್ತಿರುವಾಗ ಯಾವ ವೀರರು ಅವರನ್ನು ತಡೆದರು?

ಆಶೀವಿಷ ಇವ ಕ್ರುದ್ಧಃ ಸಹದೇವೋ ಯದಾಭ್ಯಯಾತ್ ।
ಅಮೋಘಬಾಣಃ ಸಿದ್ಧೇಷುಃ ಶತ್ರುಭಿರ್ಯುಧಿ ದುರ್ಜಯಃ ॥ ೩೦ ॥

ಆರಾವಂ ತುಮುಲಂ ಕುರ್ವನ್ ವ್ಯಥಯನ್ ಭೈರವಾನ್ ರಣೇ ।
ಕದನಂ ಕರಿಷ್ಯಂಚ್ಛತ್ರೂಣಾಂ ಜೇತಾಸೀದ್ ದುರ್ಜಯೋ ಯುಧಿ ।
ಆರ್ಯವ್ರತಮಮೋಘೇಷುಂ ಹ್ರೀಮಂತಮಪರಾಜಿತಮ್ ।
ಯದಾಭ್ಯಯಾತ್ ತದಾ ದ್ರೋಣಂ ಕೇ ಶೂರಾಃ ಪರ್ಯವಾರಯನ್ ॥೩೧॥

ದೃಷ್ಟಿವಿಷವುಳ್ಳ ಸರ್ಪದಂತೆ ಕ್ರುದ್ಧನಾದ, ಅಮೋಘವಾದ ಬಾಣವುಳ್ಳ, ಗುರಿ ತಪ್ಪದ ಬಾಣಗಳನ್ನು ಹೊಂದಿದ, ಯುದ್ಧದಲ್ಲಿ ಶತ್ರುಗಳಿಂದ ದುರ್ಜಯನಾದ ಯಾವ ಸಹದೇವನು ಯಾವಾಗ ತೀವ್ರವಾದ ಮತ್ತು ಭಯಂಕರವಾದ ಸಿಂಹನಾದವನ್ನು ಮಾಡುತ್ತಾ, ಶತ್ರುಗಳಿಗೆ ವ್ಯಥೆಯನ್ನು ಉಂಟುಮಾಡಿ, ಯುದ್ಧವನ್ನು ಮಾಡುತ್ತಾ ಶತ್ರುಗಳನ್ನು ಜಯಿಸಿದನೋ ಅಂತಹ ಆರ್ಯವ್ರತವುಳ್ಳ, ವ್ಯರ್ಥವಲ್ಲದ ಬಾಣವುಳ್ಳ,

ನಾಚಿಕೆಯುಳ್ಳ, ಅಪರಾಜಿತನಾದ ಅವನು ದ್ರೋಣರ ಕಡೆಗೆ ಬಂದಾಗ ಯಾವ ಶೂರರು ಅವನನ್ನು ತಡೆದರು?

ಯಃ ಸ ಸೌವೀರರಾಜಸ್ಯ ಪ್ರಮಥ್ಯ ಮಹತೀಂ ಚಮೂಮ್ ।
ಆದತ್ತ ಮಹಿಷೀಂ ಭೋಜ್ಯಾಂ ಕಾಮ್ಯಾಂ ಸರ್ವಾಂಗಶೋಭನಾಮ್ ॥೩೨॥

ಸತ್ಯಂ ಧೃತಿಶ್ಚ ಶೌರ್ಯಂ ಚ ಬ್ರಹ್ಮಚರ್ಯಂ ಚ ಕೇವಲಮ್ ।
ಸರ್ವಾಣಿ ಯುಯುಧಾನೇऽಸ್ಮಿನ್ ನಿತ್ಯಾನಿ ಪುರುಷರ್ಷಭೇ ॥ ೩೩ ॥

ಬಲಿನಂ ಸತ್ಯಕರ್ಮಾಣಮ್ ಅದೀನಮಪರಾಜಿತಮ್ ।
ವಾಸುದೇವಸಮಂ ಯುದ್ಧೇ ವಾಸುದೇವಾದನಂತರಮ್ ।
ಧನಂಜಯೋಪದೇಶೇನ ಶ್ರೇಷ್ಠಮಿಷ್ವಸ್ತ್ರಕರ್ಮಣಿ ॥ ೩೪ ॥

ಯುಕ್ತಂ ಧನಂಜಯಹಿತೇ ಮಮಾನರ್ಥಾಯ ಕಲ್ಪಿತಮ್ ।
ಪಾರ್ಥೇನ ಸಮಮಸ್ತ್ರೇಷು ಕಸ್ತಂ ದ್ರೋಣಾದವಾರಯತ್ ॥ ೩೫ ॥

ಯಾವನು ಸೌವೀರರಾಜನ ದೊಡ್ಡ ಸೈನ್ಯವನ್ನು ನಾಶಗೊಳಿಸಿ, ಎಲ್ಲರಿಂದಲೂ ಅಪೇಕ್ಷಿತವಾದ, ಸರ್ವಾಂಗ ಸುಂದರಿಯಾದ ಕನ್ಯೆಯನ್ನು ಸ್ವೀಕರಿಸಿದನೋ, ಯಾವ ಪುರುಷಶ್ರೇಷ್ಠನಲ್ಲಿ ಧೈರ್ಯವೂ, ಶೌರ್ಯವೂ, ಶುದ್ಧವಾದ ಬ್ರಹ್ಮಚರ್ಯವೂ ಎಲ್ಲವೂ ಯಾವಾಗಲೂ ಇವೆಯೋ, ಅಂತಹ ಬಲಿಷ್ಠನಾದ, ಸತ್ಯಕರ್ಮನಾದ, ಧೈರ್ಯವನ್ನು ಹೊಂದದ, ಪರಾಜಯವನ್ನು ಹೊಂದದ, ಯುದ್ಧದಲ್ಲಿ ಕೃಷ್ಣನಿಗೆ ಸಮನಾದ, ಕೃಷ್ಣನ ಅನಂತರದವನಾದ, ಅರ್ಜುನನ ಉಪದೇಶದಿಂದ ಶಸ್ತ್ರಾಸ್ತ್ರಕರ್ಮಗಳಲ್ಲಿ ಶ್ರೇಷ್ಠನಾದ, ಧನಂಜಯನ ಹಿತದಲ್ಲೇ ನಿರತನಾದ, ನನ್ನ ಅನರ್ಥಕ್ಕಾಗಿ ಸೃಷ್ಟಿಸಲ್ಪಟ್ಟ, ಅಸ್ತ್ರಗಳಲ್ಲಿ ಅರ್ಜುನನಿಗೆ ಸಮನಾದ ಸಾತ್ಯಕಿಯನ್ನು ಯಾರು ದ್ರೋಣರಿಂದ ತಡೆದರು?

ವೃಷ್ಣೀನಾಂ ಪ್ರವರಂ ವೀರಂ ಶೂರಂ ಸರ್ವಧನುಷ್ಮತಾಮ್ ।
ರಾಮೇಣ ಸಮಮಸ್ತ್ರೇಷು ಕಸ್ತಂ ದ್ರೋಣಾದವಾರಯತ್ ॥ ೩೬ ॥

ಸರ್ವಧನುರ್ಧಾರಿಗಳಲ್ಲಿ ಶೂರನಾದ, ವೀರನಾದ, ವೃಷ್ಣಿಶ್ರೇಷ್ಠನಾದ, ಅಸ್ತ್ರಗಳಲ್ಲಿ ಪರಶುರಾಮರಿಗೆ ಸಮನಾದ ಅವನನ್ನು ಯಾರು ದ್ರೋಣರಿಂದ ತಡೆದರು?

ಸತ್ಯಂ ಧೃತಿಶ್ಚ ಶೌರ್ಯಂ ಚ ಬ್ರಹ್ಮಚರ್ಯಮನುತ್ತಮಮ್ ।
ಯಸ್ಮಿನ್ ನಿತ್ಯಾನಿ ಸಂತಿ ಸ್ಮ ವೀರೇ ಸತ್ಯಪರಾಕ್ರಮೇ ॥ ೩೭ ॥

ತಮೇವಂ ಗುಣಸಂಪನ್ನಂ ದುರ್ವಾರಮಪಿ ದೈವತೈಃ ।
ಸಮಾಸಾದ್ಯ ಮಹೇಷ್ವಾಸಂ ಕೇ ವೀರಾಃ ಪರ್ಯವಾರಯನ್ ॥ ೩೮ ॥

ಸತ್ಯ, ಧೈರ್ಯ, ಶೌರ್ಯ, ಶ್ರೇಷ್ಠವಾದ ಬ್ರಹ್ಮಚರ್ಯ ಇವುಗಳು ಸತ್ಯಪರಾಕ್ರಮವುಳ್ಳ ಯಾವ ವೀರನಲ್ಲಿ ಇವೆಯೋ ಅಂತಹ ಗುಣಸಂಪನ್ನನಾದ, ದೇವತೆಗಳಿಂದಲೂ ದುರ್ವಾರನಾದ, ಮಹಾಧನುರ್ಧಾರಿಯಾದ ಸಾತ್ಯಕಿಯನ್ನು ಸಮೀಪಿಸಿ ಯಾವ ವೀರರು ಅವನನ್ನು ತಡೆದರು?

ಪಾಂಚಾಲೇಷೂತ್ತಮಂ ವೀರಮುತ್ತಮಾಭಿಜನಪ್ರಿಯಮ್ ।
ನಿತ್ಯಮುತ್ತಮಕರ್ಮಾಣಮುತ್ತಮೌಜಸಮಾಹವೇ ॥೩೯॥

ಯುಕ್ತಂ ಧನಂಜಯಹಿತೇ ಮಮಾನರ್ಥಾರ್ಥಮುತ್ಥಿತಮ್ ।
ಯಮವೈಶ್ರವಣಾದಿತ್ಯಮಹೇಂದ್ರವರುಣೋಪಮಮ್ ॥೪೦॥

ಮಹಾರಥಂ ಸಮಾಖ್ಯಾತಂ ದ್ರೋಣಾಯೋದ್ಯಂತಮಾಹವೇ ।
ತ್ಯಜಂತಂ ತುಮುಲೇ ಪ್ರಾಣಾನ್ ಕೇ ಶೂರಾಃ ಸಮವಾರಯನ್ ॥೪೧॥

ಪಾಂಚಾಲಯೋಧರಲ್ಲಿ ಉತ್ತಮನಾದ, ವೀರನಾದ, ಶ್ರೇಷ್ಠವಾದ ಕುಲದಲ್ಲಿ ಜನಿಸಿದವರಿಗೆ ಪ್ರಿಯನಾದ, ಯಾವಾಗಲೂ ಶ್ರೇಷ್ಠವಾದ ಕರ್ಮವನ್ನು ಮಾಡುವ, ಅರ್ಜುನನ ಹಿತದಲ್ಲಿಯೇ ರತನಾದ, ನನ್ನ ಅನರ್ಥಕ್ಕಾಗಿಯೇ ಸೃಷ್ಟಿಸಲ್ಪಟ್ಟ, ಯಮ-ಕುಬೇರ-ಸೂರ್ಯ-ಮಹೇಂದ್ರ-ವರುಣರಂತೆ ಇರುವ, ಮಹಾರಥನೆಂದು ಪರಿಗಣಿತನಾದ, ದ್ರೋಣರ ಮೇಲೆ ಎರಗುವ, ತೀವ್ರವಾದ ಯುದ್ಧದಲ್ಲಿ ಪ್ರಾಣಗಳನ್ನು ಬಿಡಲು ಸಿದ್ಧನಿರುವ ಉತ್ತಮೌಜನನ್ನು ಯುದ್ಧದಲ್ಲಿ ಯಾರು ನಿವಾರಿಸಿದರು?

ಏಕೋಽಪಸೃತ್ಯ ಚೇದಿಭ್ಯಃ ಪಾಂಡವಾನ್ ಯಃ ಸಮಾಶ್ರಿತಃ ।
ಧೃಷ್ಟಕೇತುಂ ತಮಾಯಾಂತಂ ದ್ರೋಣಾತ್ ಕಃ ಸಮವಾರಯತ್ ॥೪೨॥

ಯಾವ ಧೃಷ್ಟಕೇತುವೊಬ್ಬನೇ ಚೇದಿಗಳನ್ನು ಬಿಟ್ಟು ಬಂದು ಪಾಂಡವರನ್ನು ಆಶ್ರಯಿಸಿದನೋ ಅಂತಹ ಅವನು ದ್ರೋಣರ ಮೇಲೆ ಎರಗುವಾಗ ಅವನನ್ನು ಯಾವನು ತಡೆದನು?

ಯೋಽವಧೀತ್ ಕೇತುಮಾನ್ ವೀರೋ ರಾಜಪುತ್ರಂ ಸುದರ್ಶನಮ್ ।
ಅಪರಾಂತೇ ಗಿರಿದ್ವಾರೇ ಕಸ್ತಂ ದ್ರೋಣಾದವಾರಯತ್ ॥ ೪೩ ॥

ಯಾವ ಕೇತುಮಾನ್ ವೀರನು ಪಶ್ಚಿಮ ನದಿದ್ವಾರದಲ್ಲಿ ರಾಜಪುತ್ರನಾದ ಸುದರ್ಶನನನ್ನು ಕೊಂದನೋ ಅವನನ್ನು ಯಾವನು ದ್ರೋಣರಿಂದ ನಿವಾರಿಸಿದನು?

ಸ್ತ್ರೀಪುಂಸೋಃ ಪುರುಷವ್ಯಾಘ್ರಂ ಯಃ ಸ ವೇದ ಗುಣಾಗುಣಾನ್ ।
ಶಿಖಂಡಿನಂ ಯಾಜ್ಞಸೇನಿಮಸ್ಯಂತಮಪರಾಜಿತಮ್ ॥ ೪೪ ॥

ದೇವವ್ರತಸ್ಯ ಸಮರೇ ಹೇತುಂ ಮೃತ್ಯೋರ್ಮಹಾತ್ಮನಃ ।
ದ್ರೋಣಾಯಾಭಿಮುಖಂ ಯಾಂತಂ ಕೇ ವೀರಾಃ ಪರ್ಯವಾರಯನ್॥

ಸ್ತ್ರೀ-ಪುರುಷ ಇಬ್ಬರ ಗುಣ-ದೋಷಗಳನ್ನು ತಿಳಿದ, ಪುರುಷ ವ್ಯಾಘ್ರನಾದ, ಅಪರಾಜಿತನಾದ, ಬಾಣಪ್ರಯೋಗವನ್ನು ಮಾಡುವ, ಯುದ್ಧದಲ್ಲಿ ಮಹಾತ್ಮರಾದ ಭೀಷ್ಮರ ಮೃತ್ಯುವಿಗೆ ಕಾರಣನಾದ, ಶಿಖಂಡಿಯು ದ್ರೋಣರಿಗೆ ಅಭಿಮುಖವಾಗಿ ಬರುವಾಗ ಅವನನ್ನು ಯಾವ ವೀರರು ತಡೆದರು?

ಯಸ್ಮಿನ್ನಭ್ಯಧಿಕಾ ವೀರೇ ಗುಣಾಃ ಸರ್ವೇ ಧನಂಜಯಾತ್ ।
ಯಸ್ಮಿನ್ನಸ್ತ್ರಾಣಿ ದಿವ್ಯಾನಿ ಬ್ರಹ್ಮಚರ್ಯಂ ಚ ನಿತ್ಯಶಃ ॥ ೪೬ ॥

ವಾಸುದೇವಸಮಂ ವೀರ್ಯೇ ಧನಂಜಯಸಮಂ ಬಲೇ ।
ತೇಜಸಾಽಽದಿತ್ಯಸದೃಶಂ ಬೃಹಸ್ಪತಿಸಮಂ ಮತೌ ॥ ೪೭ ॥

ಅಭಿಮನ್ಯುಂ ಮಹಾತ್ಮಾನಂ ವ್ಯಾತ್ತಾನನಮಿವಾಂತಕಮ್ ।
ದ್ರೋಣಾಯಾಭಿಮುಖಂ ಯಾಂತಂ ಕೇ ವೀರಾಃ ಪರ್ಯವಾರಯನ್ ॥

ಯಾವ ವೀರನಲ್ಲಿ ಅರ್ಜುನನಿಗಿಂತ ಎಲ್ಲ ಗುಣಗಳೂ ಅಧಿಕವಾಗಿವೆಯೋ, ಯಾವನಲ್ಲಿ ದಿವ್ಯವಾದ ಅಸ್ತ್ರಗಳು ಮತ್ತು ಬ್ರಹ್ಮಚರ್ಯವು ಯುಕ್ತವಾಗಿವೆಯೋ

ಅಂತಹ ಪರಾಕ್ರಮದಲ್ಲಿ ಕೃಷ್ಣನಿಗೆ ಸಮನಾದ, ಬಲದಲ್ಲಿ ಅರ್ಜುನನಿಗೆ ಸಮನಾದ, ತೇಜಸ್ಸಿನಲ್ಲಿ ಸೂರ್ಯನಿಗೆ ಸದೃಶನಾದ, ಬುದ್ಧಿಯಲ್ಲಿ ಬೃಹಸ್ಪತಿಗೆ ಸಮನಾದ, ಮಹಾತ್ಮನಾದ ಅಭಿಮನ್ಯುವು ಬಾಯ್ತೆರೆದ ಮೃತ್ಯುವಿನಂತೆ ದ್ರೋಣರಿಗೆ ಅಭಿಮುಖವಾಗಿ ಹೋಗುವಾಗ ಯಾವ ವೀರರು ಅವನನ್ನು ತಡೆದರು?

ತರುಣಸ್ತರಣಿಪ್ರಖ್ಯಃ ಸೌಭದ್ರಃ ಪರವೀರಹಾ ಯದಾऽಭ್ಯಯಾತ್ ।
ಸ ತಂ ದ್ರೋಣಂ ತದಾऽऽऽಸೀದ್ ವೋ ಮನಃ ಕಥಮ್ ॥೪೯॥

ಪರವೀರಘಾತಕನೂ, ತರುಣನೂ, ಸೂರ್ಯನಂತಿರುವವನೂ ಆದ ಅಭಿಮನ್ಯುವು ದ್ರೋಣರನ್ನು ಕುರಿತು ಬಂದಾಗ ನಿಮ್ಮ ಮನಸ್ಸು ಹೇಗಿದ್ದಿತು?

ದ್ರೌಪದೇಯಾ ನರವ್ಯಾಘ್ರಾಃ ಸಮುದ್ರಮಿವ ಸಿಂಧವಃ ।
ಯದ್ ದ್ರೋಣಮಾದ್ರವನ್ ಸಂಖೇ ಕೇ ವೀರಾಸ್ತಾನವಾರಯನ್ ॥

ನದಿಗಳು ಸಮುದ್ರಕ್ಕೆ ಬಂದು ಸೇರಿದಂತೆ ನರವ್ಯಾಘ್ರರಾದ ದ್ರೌಪದಿಯ ಐವರು ಪುತ್ರರು ಯುದ್ಧದಲ್ಲಿ ದ್ರೋಣರ ಮೇಲೆ ಓಡಿಬಂದಾಗ ಯಾವ ವೀರರು ಅವರನ್ನು ತಡೆದರು?

ಯೇ ತೇ ದ್ವಾದಶ ವರ್ಷಾಣಿ ಕ್ರೀಡಾಮುತ್ಸೃಜ್ಯ ಬಾಲಕಾಃ ।
ಅಸ್ತ್ರಾರ್ಥಮವಸನ್ ಭೀಷ್ಮೇ ಬಿಭ್ರತೋ ವ್ರತಮುತ್ತಮಮ್ ॥ ೫೧ ॥

ಕ್ಷತ್ರಂಜಯಃ ಕ್ಷತ್ರದೇವಃ ಕ್ಷತ್ರಧರ್ಮಾ ಚ ಮಾನಿನಃ ।
ಧೃಷ್ಟದ್ಯುಮ್ನಾತ್ಮಜಾನ್ ವೀರಾನ್ ಕಸ್ತಾನ್ ದ್ರೋಣಾದವಾರಯತ್ ॥

ಧೃಷ್ಟದ್ಯುಮ್ನನ ಪುತ್ರರಾದ, ವೀರರಾದ, ಅಭಿಮಾನಿಗಳಾದ ಬಾಲಕರಾದ ಕ್ಷತ್ರಂಜಯ, ಕ್ಷತ್ರದೇವ ಮತ್ತು ಶತ್ರಧರ್ಮರು ಆಟವಾಡುವುದನ್ನು ಬಿಟ್ಟು ಹನ್ನೆರಡು ವರ್ಷಗಳ ಕಾಲ ಶ್ರೇಷ್ಠವಾದ ವ್ರತವನ್ನು ಧರಿಸಿ, ಭೀಷ್ಮರಲ್ಲಿ ಅಸ್ತ್ರವಿದ್ಯೆಗಾಗಿ ವಾಸವನ್ನು ಮಾಡಿದರೋ ಅಂತಹ ವೀರರನ್ನು ಯಾವನು ದ್ರೋಣರಿಂದ ತಡೆದನು?

ಯಸ್ಮಾದ್ ವಿಶಿಷ್ಟಂ ಯಂ ಯುದ್ಧೇ ನ ಚಾಮನ್ಯಂತ ವೃಷ್ಣಯಃ ।
ಚೇಕಿತಾನಂ ಮಹೇಷ್ವಾಸಂ ಕಸ್ತಂ ದ್ರೋಣಾದವಾರಯತ್ ॥ ೫೩ ॥

ಯಾವ ಚೇಕಿತಾನನನ್ನು ವೃಷ್ಣಿಗಳು ಯುದ್ಧದಲ್ಲಿ ಅವನಿಗಿಂತ ಶ್ರೇಷ್ಠನಾದವನು ಇಲ್ಲ ಎಂದು ತಿಳಿದರೋ ಅಂತಹ ಮಹಾಧನುರ್ಧಾರಿಯಾದ ಅವನನ್ನು ಯಾವನು ದ್ರೋಣರಿಂದ ತಡೆದನು?

ವಾರ್ಧಕ್ಷೇಮಿಃ ಕಳಿಂಗಾನಾಂ ಯಃ ಕನ್ಯಾಮಾಹರದ್ ಯುಧಿ ।
ಅನಾಧೃಷ್ಟಿರದೀನಾತ್ಮಾ ಕಸ್ತಂ ದ್ರೋಣಾದವಾರಯತ್ ॥ ೫೪ ॥

ವೃದ್ಧಕ್ಷೇಮನ ಪುತ್ರನಾದ ಅನಾಧೃಷ್ಟಿಯು ಕಳಿಂಗ ರಾಜಕುಮಾರಿಯನ್ನು ಯುದ್ಧದಲ್ಲಿ ಕರೆದುಕೊಂಡು ಬಂದನು. ಅಂತಹ ಅಧೀನನಾದ ಅವನನ್ನು ಯಾವನು ದ್ರೋಣರಿಂದ ತಡೆದನು?

ಕೈಕಯಾ ಭ್ರಾತರಃ ಪಂಚ ಧಾರ್ಮಿಕಾಃ ಸತ್ಯವಿಕ್ರಮಾಃ ।
ಇಂದ್ರಗೋಪಕವರ್ಣಾಶ್ಚ ರಕ್ತವರ್ಣಾಯುಧಧ್ವಜಾಃ ॥ ೫೫ ॥

ಮಾತೃಷ್ವಸೃಸುತಾ ವೀರಾಃ ಪಾಂಡವಾನಾಂ ಜಯಾರ್ಥಿನಃ ।
ತಾನ್ ದ್ರೋಣಂ ಹಂತುಮಾಯಾತಾನ್ ಕೇ ವೀರಾಃ ಪರ್ಯವಾರಯನ್ ॥

ಕೇಕಯ ದೇಶದ ಐವರು ಸಹೋದರರು ಧಾರ್ಮಿಕರು, ಸತ್ಯವಾದ ಪರಾಕ್ರಮವುಳ್ಳವರು, ಇಂದ್ರಗೋಪದಂತೆ ಅರುಣವರ್ಣೋಪೇತರು, ರಕ್ತವರ್ಣದ ಆಯುಧವನ್ನು ಮತ್ತು ಧ್ವಜವನ್ನು ಧರಿಸಿದವರು. ಪಾಂಡವರ ಚಿಕ್ಕಮ್ಮನ ಮಕ್ಕಳಾದ ಜಯಾರ್ಥಿಗಳಾದ ಆ ವೀರರು ದ್ರೋಣರನ್ನು ಕೊಲ್ಲಲು ಬಂದಾಗ ಅವರನ್ನು ಯಾವ ವೀರರು ತಡೆದರು?

ಯಂ ಯೋಧಯಂತೋ ರಾಜಾನೋ ನಾಜಯನ್ ವಾರಣಾವತೇ ।
ಷಣ್ಮಾಸಾನಭಿಸಂರಬ್ಧಾ ಜಿಘಾಂಸಂತೋ ಯುಧಾಂಪತಿಮ್ ॥ ೫೭ ॥

ಧನುಷ್ಮತಾಂ ವರಂ ವೀರಂ ಸತ್ಯಸಂಧಂ ಮಹಾಬಲಮ್ ।
ದ್ರೋಣಾತ್ ಕಸ್ತಂ ನರವ್ಯಾಘ್ರಂ ಯುಯುತ್ಸುಂ ಸಮವಾರಯತ್ ॥

ಯಾವ ಯುದ್ಧಶ್ರೇಷ್ಠನಾದ ಯುಯುತ್ಸುವನ್ನು ಕೊಲ್ಲಲು ಬಯಸಿ ವಾರಣಾವತದಲ್ಲಿ ರಾಜರು ಆರು ತಿಂಗಳುಗಳ ಕಾಲ ಕೋಪದಿಂದ ಯುದ್ಧ

ಮಾಡಿದರೂ ಜಯಿಸಲಿಲ್ಲವೋ ಅಂತಹ ಧನುರ್ಧಾರಿಗಳಲ್ಲಿ ಶ್ರೇಷ್ಠನಾದ, ವೀರನಾದ, ಸತ್ಯಸಂಧನಾದ, ಮಹಾಬಲನಾದ, ನರವ್ಯಾಘ್ರನಾದ ಯುಯುತ್ಸುವನ್ನು ಯಾವನು ದ್ರೋಣರಿಂದ ತಡೆದನು?

ಯಃ ಪುತ್ರಂ ಕಾಶಿರಾಜಸ್ಯ ವಾರಾಣಸ್ಯಾಂ ಮಹಾರಥಮ್ ।
ಸಮರೇ ಸ್ಪೃಹು ಗೃದ್ಧ್ಯಂತಂ ಭಲ್ಲೇನಾಪಾಹರದ್ ರಥಾತ್ ॥ ೫೯ ॥

ಧೃಷ್ಟದ್ಯುಮ್ನಂ ಮಹೇಷ್ವಾಸಂ ಪಾರ್ಥಾನಾಂ ಮಂತ್ರಧಾರಿಣಮ್ ।
ಯುಕ್ತಂ ದುರ್ಯೋಧನಾನರ್ಥೇ ಸೃಷ್ಟಂ ದ್ರೋಣವಧಾಯ ಚ ॥ ೬೦ ॥

ನಿರ್ದಹಂತಂ ರಣೇ ಯೋಧಾನ್ ವಾರಯಂತಂ ಚ ಸರ್ವಶಃ ।
ದ್ರೋಣಾಯಾಭಿಮುಖಂ ಯಾಂತಂ ಕೇ ವೀರಾಃ ಪರ್ಯವಾರಯನ್ ॥

ಯಾವ ಧೃಷ್ಟದ್ಯುಮ್ನನು ವಾರಣಾಸಿಯಲ್ಲಿ ಕನ್ಯೆಯರಲ್ಲಿ ಆಸೆ ಪಡುವ ಕಾಶಿರಾಜನ ಶಿರಸ್ಸನ್ನು ಭಲ್ಲದಿಂದ ರಥದಿಂದ ಕೆಳಗೆ ಕೆಡವಿದನೋ ಅಂತಹ ಮಹಾಧನುರ್ಧಾರಿಯಾದ, ಪಾಂಡವರ ಮಂತ್ರಿಯಾದ, ದುರ್ಯೋಧನನ ಅನರ್ಥದಲ್ಲಿ ನಿರತನಾದ, ದ್ರೋಣರ ವಧೆಗಾಗಿಯೇ ಸೃಷ್ಟಿಯಾದ, ರಣರಂಗದಲ್ಲಿ ನಮ್ಮ ಯೋಧರನ್ನು ದಹಿಸುವ ಮತ್ತು ಎಲ್ಲ ಕಡೆಯಲ್ಲಿಯೂ ನಿವಾರಿಸುವ ಅಂತಹ ಧೃಷ್ಟದ್ಯುಮ್ನನು ದ್ರೋಣರಿಗೆ ಅಭಿಮುಖವಾಗಿ ಹೋಗುವಾಗ ಯಾವ ವೀರರು ಅವನನ್ನು ತಡೆದರು?

ಉತ್ಸಂಗ ಇವ ಸಂವೃದ್ಧಂ ದ್ರುಪದಸ್ಯಾಸ್ತ್ರವಿತ್ತಮಮ್ ।
ಶೈಖಂಡಿನಂ ಕ್ಷತ್ರಗುಪ್ತಂ ಕೇ ತು ದ್ರೋಣಾದವಾರಯನ್ ॥ ೬೨ ॥

ತೊಡೆಯ ಮೇಲೆ ಇಟ್ಟುಕೊಂಡು ಬೆಳೆಸಿದ, ದ್ರುಪದ ಪುತ್ರನಾದ, ಅಸ್ತ್ರವೇತ್ತರಲ್ಲಿ ಶ್ರೇಷ್ಠನಾದ, ಕ್ಷತ್ರಿಯರಿಂದ ರಕ್ಷಿತನಾದ ಶಿಖಂಡಿಯನ್ನು ಯಾರು ದ್ರೋಣರಿಂದ ನಿವಾರಿಸಿದರು?

ಯ ಇಮಾಂ ಪೃಥಿವೀಂ ಕೃತ್ಸ್ನಾಂ ಚರ್ಮವತ್ ಸಮವೇಷ್ಟಯನ್ ।
ಮಹತಾ ರಥವಂಶೇನ ಮುಖ್ಯಾರಿಘ್ನೋ ಮಹಾರಥಃ ॥ ೬೩ ॥

ದಶಾಶ್ವಮೇಧಾನಾಜಹ್ರೇ ಸ್ವನ್ನಪಾನಾನ್ ಸ್ವದಕ್ಷಿಣಾನ್ ।
ನಿರರ್ಗಲಾನ್ ಸರ್ವಮೇಧಾನ್ ಪುತ್ರವತ್ ಪಾಲಯನ್ ಪ್ರಜಾಃ ॥

ಗಂಗಾಸ್ರೋತಸ್ಸು ಯಾವತ್ಯಃ ಸಿಕತಾ ಅಪ್ಯಶೇಷತಃ ।
ತಾವತೀರ್ಗಾ ದದೌ ವೀರ ಉಶೀನರಸುತೋಽಧ್ವರೇ ॥ ೬೫ ॥

ಯಾವ ಮಹಾರಥನು ರಥ ಸಮೂಹದಿಂದ ಶ್ರೇಷ್ಠನಾದ ಶತ್ರುವನ್ನು ಕೊಂದು ಸಮಗ್ರವಾದ ಭೂಮಿಯನ್ನು ಚರ್ಮದಂತೆ ಸುತ್ತಿದನೋ, ಒಳ್ಳೆಯ ಅನ್ನಪಾನಗಳನ್ನು, ದಕ್ಷಿಣೆಗಳನ್ನು ಹೊಂದಿದ ಹತ್ತು ಅಶ್ವಮೇಧ ಯಾಗಗಳನ್ನು ಮತ್ತು ನಿರ್ದುಷ್ಟವಾದ ಎಲ್ಲ ಯಾಗಗಳನ್ನೂ ಮಾಡಿದನೋ, ಪ್ರಜೆಗಳನ್ನು ಪುತ್ರರಂತೆ ರಕ್ಷಿಸಿದನೋ, ಯಾವನು ಗಂಗೆಯ ದಡದ ಮರಳಿನ ಸಂಖ್ಯೆಯಷ್ಟು ಗೋವುಗಳನ್ನು ಯಜ್ಞಗಳಲ್ಲಿ ದಾನ ಮಾಡಿದನೋ ಅಂತಹ ಔಶೀನರ ಸುತನಾದ ಶಿಬಿಯು;

ನ ಪೂರ್ವೇ ನಾಪರೇ ಚಕ್ರುರಿದಂ ಕೇಚನ ಮಾನವಾಃ ।
ಇತಿ ಸಂಚುಕ್ರುಶುರ್ದೇವಾಃ ಕೃತೇ ಕರ್ಮಣಿ ದುಷ್ಕರೇ ॥ ೬೬ ॥

ಯಾವನ ವಿಷಯದಲ್ಲಿ ಅವನ ದುಷ್ಕರವಾದ ಕರ್ಮಗಳನ್ನು ಮಾಡಿದುದನ್ನು ನೋಡಿ ದೇವತೆಗಳು ಹಿಂದೆ ಬಂದ ಅಥವಾ ಮುಂದೆ ಬರುವ ಯಾರೇ ಮಾನವರು ಈ ಕಾರ್ಯವನ್ನು ಮಾಡಲಾರರು ಎಂದು ಕಿರುಚಿದರೋ;

ಪಶ್ಯಾಮಸ್ತ್ರಿಷು ಲೋಕೇಷು ನಚ ಸ್ಥಾಸ್ನು ಚರಿಷ್ಣು ಚ ।
ಜಾತಂ ವಾಪಿ ಜನಿಷ್ಯದ್ ವಾ ನಚ ಸಂಪ್ರತಿ ವರ್ತತೇ ।
ಅನ್ಯಮೌಶೀನರಾಚ್ಛೈಬ್ಯಾದ್ ಧುರೋ ವೋಢಾರಮಿತ್ಯುತ ॥ ೬೭ ॥

ಗತಿಂ ಯಸ್ಯ ನ ಯಾಸ್ಯಂತಿ ಮನುಷ್ಯಾ ಲೋಕವಾಸಿನಃ ।
ತಸ್ಯ ನಪ್ತಾರಮಾಯಾಂತಂ ಶೈಬ್ಯಂ ಕಃ ಸಮವಾರಯತ್ ॥ ೬೮ ॥

ಮೂರುಲೋಕಗಳಲ್ಲಿ ನೋಡಿದರೂ ಹಿಂದೆ ಜನಿಸಿದ, ಮುಂದೆ ಜನಿಸುವ ಮತ್ತು ಈಗ ಇರುವ ಯಾವ ಸ್ಥಾವರ-ಜಂಗಮ ಪ್ರಾಣಿಗಳಲ್ಲಿ ಔಶೀನರನಾದ ಶಿಬಿಗಿಂತಲೂ ಹೆಚ್ಚು ಭಾರವನ್ನು ಹೊರುವವನು ಮೂರುಲೋಕಗಳಲ್ಲಿ ಕಾಣುವುದಿಲ್ಲ ಎಂದು (ದೇವತೆಗಳು) ಕಿರುಚಿದರೋ, ಯಾವನ ಮಾರ್ಗವನ್ನು ಲೋಕವಾಸಿಗಳಾದ

ಮನುಷ್ಯರು ಅನುಸರಿಸಲು ಸಾಧ್ಯವಿಲ್ಲವೋ, ಅಂತಹ ಶಿಬಿಯ ಮೊಮ್ಮಗನಾದ ಶೈಬ್ಯನನ್ನು ಯಾರು ನಿವಾರಿಸಿದರು?

ದ್ರೋಣಾಯಾಭಿಮುಖಂ ಯಾಂತಂ ವ್ಯಾತ್ತಾನನಮಿವಾಂತಕಮ್ ।
ವಿರಾಟಸ್ಯ ರಥಾನೀಕಂ ಮಾತ್ಸ್ಯಸ್ಯಾಮಿತ್ರಘಾತಿನಃ ॥ ೬೯ ॥

ಬಾಯ್ತೆರೆದ ಯಮನಂತೆ ದ್ರೋಣರಿಗೆ ಅಭಿಮುಖವಾಗಿ ಬರುವ, ಶತ್ರುಘಾತಿಯಾದ, ಮತ್ಸ್ಯರಾಜನಾದ ವಿರಾಟನ ದ್ರೋಣರ ಸಮೀಪಕ್ಕೆ ಬರಲು ಯತ್ನಿಸುವ ರಥಸಮೂಹವನ್ನು ಯಾವ ವೀರರು ತಡೆದರು?

ಪ್ರೇಪ್ಸಂತಂ ಸಮರೇ ದ್ರೋಣಂ ಕೇ ವೀರಾಃ ಪರ್ಯವಾರಯನ್ ॥೭೦॥

ಸದ್ಯೋ ವೃಕೋದರಾಜ್ಜಾತೋ ಮಹಾಬಲಪರಾಕ್ರಮಃ ।
ಮಾಯಾವೀ ರಾಕ್ಷಸೋ ಘೋರೋ ಯಸ್ಮಾನ್ನಮ ಮಹದ್ ಭಯಮ್ ॥

ಪಾರ್ಥಾನಾಂ ಜಯಕಾಮಂ ತಂ ಪುತ್ರಾಣಾಂ ಮಮ ಕಂಟಕಮ್ ।
ಘಟೋತ್ಕಚಂ ಮಹಾಕಾಯಂ ಕಸ್ತಂ ದ್ರೋಣಾದವಾರಯತ್ ।
ತಂ ರಥಾನಾಂ ರಥಂ ವೀರಂ ಹೈಡಿಂಬಂ ಕೋ ನ್ಯವಾರಯತ್ ॥೭೨॥

ಮಹಾಪರಾಕ್ರಮವುಳ್ಳ ರಾಕ್ಷಸನಾದ ಮತ್ತು ಮಾಯಾವಿಯಾದ, ವೃಕೋದರನಿಂದ ತಕ್ಷಣದಲ್ಲಿಯೇ ಜನಿಸಿದ ಘೋರನಾದ ಯಾವ ಘಟೋತ್ಕಚನು ನನ್ನ ದೊಡ್ಡ ಭಯಕ್ಕೆ ಕಾರಣನಾಗಿದ್ದಾನೆಯೋ, ಪಾಂಡವರ ಜಯವನ್ನು ಬಯಸುವ ನನ್ನ ಪುತ್ರರಿಗೆ ಕಂಟಕಪ್ರಾಯನಾಗಿರುವ, ಮಹಾಕಾಯನಾದ ಅಂತಹ ಘಟೋತ್ಕಚನನ್ನು ಯಾವನು ದ್ರೋಣರಿಂದ ನಿವಾರಿಸಿದನು? ರಥಗಳ ಮಧ್ಯದಲ್ಲಿ ಸಂಚರಿಸುವ ವೀರನೂ, ಹಿಂಡಿಬಿಯ ಪುತ್ರನೂ ಆದ ಅವನನ್ನು ಯಾವನು ನಿವಾರಿಸಿದನು?

ಪಿತುಃ ಸ್ಮ ಮಾತುಃ ಪಿತರಂ ವಾಸುದೇವಂ ದ್ವಿಜಾತಯಃ ।
ಸ ಏಷ ನಿಯತಃ ಕೃಷ್ಣ ಆಪದರ್ಥಂ ಧನಂಜಯೇ ॥ ೭೩ ॥

ವಾಸುದೇವನನ್ನು ಅವನು ನಾರಾಯಣನ ಅವತಾರವಾದ ಕಾರಣದಿಂದ ತಂದೆಯಾದ ವಸುದೇವನಿಗೂ, ತಾಯಿಯಾದ ದೇವಕಿಗೂ ತಂದೆ ಎಂದು ಬ್ರಾಹ್ಮಣರು

ಹೇಳುತ್ತಾರೆ. ಅಂತಹ ಈ ಕೃಷ್ಣನು ಅರ್ಜುನನ ಆಪತ್ತನ್ನು ಪರಿಹಾರ ಮಾಡುವುದರಲ್ಲಿ ದೀಕ್ಷಿತನಾಗಿದ್ದಾನೆ.

ಸನ್ನಹ್ಯತೇ ಯಥಾऽನರ್ಥೇ ಧಾರ್ತರಾಷ್ಟ್ರಸ್ಯ ಸಂಜಯ ।
ಸ್ಥಾತಾರಂ ನಾಧಿಗಚ್ಛಾಮಿ ಪ್ರತ್ಯನೀಕೇ ಮಹೌಜಸಿ ॥ ೭೪ ॥

ಎಲೈ ಸಂಜಯನೇ, ಧೃತರಾಷ್ಟ್ರನಿಗೆ ಇಂತಹ ಅನರ್ಥವು ಗಂಟುಬೀಳುತ್ತಿರುವಾಗ, ಶತ್ರುಗಳ ಸೈನ್ಯವು ಮಹಾಸಾಮರ್ಥ್ಯದಿಂದ ಕೂಡಿರುವಾಗ, ಅವರ ಎದುರಿಗೆ ನಿಲ್ಲುವ ಯಾವನನ್ನೂ ನಾನು ಕಾಣುತ್ತಿಲ್ಲ.

ಸಂಕರ್ಷಣಗದೌ ಚೋಭೌ ಪ್ರದ್ಯುಮ್ನೋऽಥ ವಿಡೂರಥಃ ।
ಆಶಾಪ್ಲವಶ್ಚ ಸಾಂಬಶ್ಚ ವೃಷ್ಣಿವೀರಾಃ ಪ್ರಹಾರಿಣಃ ॥ ೭೫ ॥

ಏತೇ ವೈ ಸಹಿತಾಸ್ತತ್ರ ಪಾಂಡವಾರ್ಥೇ ಜಿಗೀಷವಃ ।
ಕೇಶವೋ ಯತ್ರ ತತ್ಕೈತೇ ಯತ್ಕೈತೇ ತತ್ರ ಕೇಶವಃ ॥ ೭೬॥

ಸಂಕರ್ಷಣ-ಗದಾ ಇವರಿಬ್ಬರೂ; ಪ್ರದ್ಯುಮ್ನ-ವಿಡೂರಥ, ಬಹಳ ಆಸೆಯುಳ್ಳ ಸಾಂಬ, ಪ್ರಹಾರಶೀಲರಾದ ವೃಷ್ಣಿವೀರರು ಇವರೆಲ್ಲರೂ ಪಾಂಡವರ ಸಲುವಾಗಿ ಜೊತೆಯಾಗಿ ಯುದ್ಧದಲ್ಲಿ ಗೆಲ್ಲಲು ಬಯಸುವವರು. ಕೃಷ್ಣನು ಎಲ್ಲಿದ್ದಾನೆಯೋ ಅಲ್ಲಿ ಇವರಿದ್ದಾರೆ. ಇವರು ಎಲ್ಲಿದ್ದಾರೆಯೋ ಅಲ್ಲಿ ಕೃಷ್ಣನಿದ್ದಾನೆ.

ಅರ್ಜುನಃ ಕೇಶವಸ್ಯಾತ್ಮಾ ಕೃಷ್ಣಶ್ಚಾತ್ಮಾ ಕಿರೀಟಿನಃ ।
ಏತೇ ಚಾನ್ಯೇ ಚ ಬಹವೋ ಯೇಷಾಮರ್ಥಾಯ ಸಂಜಯ ।
ತ್ಯಕ್ತಾರಃ ಸಂಯುಗೇ ಪ್ರಾಣಾನ್ ಕಿಂ ತೇಷಾಮಜಿತಂ ಯುಧಿ ॥ ೭೭ ॥

ಅರ್ಜುನನು ಕೇಶವನಿಗೆ ಆತ್ಮನಂತೆ ಇರುವವನು. ಕೃಷ್ಣನೂ ಸಹ ಅರ್ಜುನನಿಗೆ ಆತ್ಮನಂತೆ ಇರುವವನು (ಬಹಳ ಪ್ರಿಯನಾದವನು). ಎಲೈ ಸಂಜಯನೇ, ಇವರು ಮತ್ತು ಇವರ ಸಲುವಾಗಿ ಇನ್ನೂ ಅನೇಕರು ಯುದ್ಧದಲ್ಲಿ ಪ್ರಾಣಗಳನ್ನು ಬಿಡಲು ಸಿದ್ಧರಿರುವಾಗ ಯುದ್ಧದಲ್ಲಿ ಅವರು ಜಯಿಸಲಾರದುದು ಯಾವುದಿದೆ?

ಯೇಷಾಂ ಚ ಪುರುಷವ್ಯಾಘ್ರಃ ಶಾರ್ಂಗಧನ್ವಾ ವ್ಯಪಾಶ್ರಯಃ ।
ಹಿತಾರ್ಥೇ ಚಾಪಿ ಪಾರ್ಥಾನಾಂ ಕಥಂ ತೇಷಾಂ ಪರಾಜಯಃ ॥ ೭೮ ॥

ಪುರುಷವ್ಯಾಘ್ರನೂ, ಶಾರ್ಙ್ಗಧನುರ್ಧಾರಿಯೂ ಆದ ಕೃಷ್ಣನು ಯಾರಿಗೆ ಆಶ್ರಯನೂ ಮತ್ತು ಹಿತಚಿಂತಕನೂ ಆಗಿದ್ದಾನೆಯೋ ಅಂತಹ ಪಾಂಡವರಿಗೆ ಪರಾಜಯವು ಹೇಗೆ ಉಂಟಾದೀತು?

ಅರ್ಜುನೇ ತು ಜಯೋ ನಿತ್ಯಂ ಕೃಷ್ಣೇ ಕೀರ್ತಿಶ್ಚ ಶಾಶ್ವತೀ ॥ ೭೯ ॥

ಪ್ರಾಧಾನ್ಯಾದಪಿ ಭೂಯಾಂಸೋ ಹ್ಯಮೇಯಾಃ ಕೇಶವೇ ಗುಣಾಃ ।
ಮೋಹಾತ್ ತು ವಶಿನಂ ಕೃಷ್ಣಂ ನ ಸರ್ವೋ ವೇತ್ತಿ ಮಾಧವಮ್ ॥

ಅರ್ಜುನನಲ್ಲಿ ಜಯವು ನಿತ್ಯವಾದುದು. ಕೃಷ್ಣನಲ್ಲಿ ಕೀರ್ತಿಯು ಶಾಶ್ವತವಾದುದು. ಪ್ರಧಾನವಾದ ಗುಣಗಳನ್ನು ಎಣಿಸಿದರೂ ಕೇಶವನಲ್ಲಿರುವ ಗುಣಗಳ ಸಂಖ್ಯೆಯು ಪರಿಗಣಿಸಲು ಸಾಧ್ಯವಿಲ್ಲದವು.

ಮೋಹಿತೋ ದೇವಪಾಶೇನ ಮೃತ್ಯುಪಾಶಪುರಸ್ಕೃತಃ।
ನ ವೇದ ಕೃಷ್ಣಂ ದಾಶಾರ್ಹಮರ್ಜುನಂ ಜಯತಾಂ ವರಮ್ ॥ ೮೧ ॥

ದೈವಪಾಶದಿಂದ ಮೋಹಿತರಾದ, ಮೃತ್ಯುಪಾಶದಿಂದ ಬದ್ಧರಾದ ಎಲ್ಲ ಜನರು ತಮ್ಮ ಮೋಹದಿಂದ ಸರ್ವೇಶ್ವರನಾದ ಮಾಧವನಾದ ಕೃಷ್ಣನನ್ನು ಸರ್ವವಶೀ ಎಂದು ತಿಳಿಯುವುದಿಲ್ಲ.

ಆದಿದೇವೌ ಮಹಾತ್ಮಾನೌ ನರನಾರಾಯಣಾವುಭೌ ॥ ೮೨ ॥

ಆದಿದೇವತೆಗಳೂ, ಮಹಾತ್ಮರೂ, ನರ-ನಾರಾಯಣರೂ ಆದ ಅವರಿಬ್ಬರನ್ನು ಎಂದರೆ ದಾಶಾರ್ಹನಾದ ಕೃಷ್ಣನನ್ನು, ಜಯಿಸುವವರಲ್ಲಿ ಶ್ರೇಷ್ಠನಾದ ಅರ್ಜುನನನ್ನು (ಮೋಹಿತರಾದ ಜನರು ತಿಳಿಯುವುದಿಲ್ಲ).

ಮನಸಾऽಪಿ ಹಿ ದುರ್ಧರ್ಷೌ ಸೇನಾಮೇತಾಂ ತರಸ್ವಿನೌ ।
ನಾಶಯೇತಾಮಿಹೇಚ್ಛಂತೌ ಮಾನುಷತ್ವಾತ್ ತು ನೇಚ್ಛತಃ ॥ ೮೩ ॥

ವೇಗಶಾಲಿಗಳೂ ಮತ್ತು ದುರ್ಧರ್ಷರೂ ಆದ ಅವರು ಮನಸ್ಸಿನಿಂದಲೇ ಬಯಸಿದರೆ ಈ ಸೈನ್ಯವನ್ನು ನಾಶಮಾಡಬಹುದು. ಮನುಷ್ಯರಾಗಿ ಜನಿಸಿರುವುದರಿಂದ ಹಾಗೆ ಬಯಸುವುದಿಲ್ಲ.

ಯುಗಸ್ಯೇವ ವಿಪರ್ಯಾಸೋ ಭೂತಾನಾಮಿವ ಮೋಹನಮ್ ।
ಇತಿ ಮಾಂ ಪ್ರತಿಭಾತ್ಯೇತದ್ ಭೀಷ್ಮದ್ರೋಣನಿಪಾತನಮ್ ॥ ೮೪ ॥

ಎಲ್ಲ ಭೂತಗಳಿಗೆ ಮೋಹವನ್ನು ಉಂಟುಮಾಡುವ ಭೀಷ್ಮ-ದ್ರೋಣರ ನಿಪಾತನವು ಯುಗದ ವ್ಯತ್ಯಾಸದಂತೆ ನನಗೆ ಕಾಣುತ್ತಿದೆ.

ಲೋಕಸ್ಯ ಸ್ಥವಿರೌ ವೀರೌ ಮಂತ್ರಜ್ಞೌ ಮಂತ್ರಧಾರಿಣೌ ।
ಭೀಷ್ಮದ್ರೋಣೌ ಹತೌ ಯುದ್ಧೇ ಮನುಷ್ಯಾನ್ ಮೋಹಯಿಷ್ಯತಃ ॥೮೫॥

ಲೋಕದಲ್ಲಿ ಜ್ಞಾನವೃದ್ಧರೂ, ವೀರರೂ, ಮಂತ್ರಜ್ಞರೂ, ಮಂತ್ರಧಾರಿಗಳೂ ಆದ ಭೀಷ್ಮ-ದ್ರೋಣರು ಯುದ್ಧದಲ್ಲಿ ಹತರಾಗಿ ಮನುಷ್ಯರಿಗೆ ಮೋಹವನ್ನು ಉಂಟುಮಾಡುತ್ತಿದ್ದಾರೆ.

ಯಾಂ ತಾಂ ಶ್ರಿಯಮಸೂಯಾಮಿ ಪುರಾ ದೃಷ್ಟ್ವಾ ಯುಧಿಷ್ಠಿರೇ ।
ಅದ್ಯ ತಾಮನುಜಾನಾಮಿ ಭೀಷ್ಮದ್ರೋಣೌ ಯದಾ ಹತೌ ॥ ೮೬ ॥

ನಾನು ಹಿಂದೆ ಯುಧಿಷ್ಠಿರನ ಯಾವ ಸಂಪತ್ತನ್ನು ನೋಡಿ ಅಸೂಯೆಯನ್ನು ಪಡುತ್ತಿದ್ದೆನೋ, ಭೀಷ್ಮ-ದ್ರೋಣರು ಹತರಾದ ಈ ದಿನ ಅದು ಅವನಲ್ಲಿಯೇ ಇರಲೆಂದು ಸಮ್ಮತಿಸುತ್ತೇನೆ.

ಅಥವಾ ಮತ್ಕೃತೇ ಪ್ರಾಪ್ತಃ ಕುರೂಣಾಮೇಷ ಸಂಕ್ಷಯಃ ।
ಪಕ್ವಾನಾಂ ಹಿ ವಧೇ ಸೂತ ವಜ್ರಾಯಂತೇ ತೃಣಾನ್ಯಪಿ ॥ ೮೭ ॥

ಸಂಜಯನೇ, ಅಥವಾ ನನ್ನ ನಿಮಿತ್ತದಿಂದಾಗಿ ಕುರುಗಳ ಈ ವಿನಾಶವು ಪ್ರಾಪ್ತವಾಗಿದೆ. ಮಾಗಿದ ಹಣ್ಣುಗಳನ್ನು ಬೀಳಿಸಲು ತೃಣಗಳೂ ವಜ್ರಗಳಂತೆ ಆಗುತ್ತವೆ.

ಲೋಕಾನಾಂ ಗುರುರತ್ಯಂತಂ ಲೋಕನಾಥಃ ಸನಾತನಃ ।
ನಾರಾಯಣೋ ರಣೇ ನಾಥೋ ದಿವ್ಯೋ ದಿವ್ಯಾತ್ಮವಾನ್ ಪ್ರಭುಃ ॥

ಲೋಕನಾಥನೂ, ವೇದಪ್ರತಿಪಾದನೂ, ಲೋಕಗುರುವೂ, ದಿವ್ಯನೂ, ದಿವ್ಯಶರೀರವುಳ್ಳವನೂ, ಪ್ರಭುವೂ ಆದ ನಾರಾಯಣನು (ಕೃಷ್ಣನು) ಯುದ್ಧದಲ್ಲಿ ಸ್ವಾಮಿಯಾಗಿದ್ದಾನೆ.

ಯಸ್ಯ ದಿವ್ಯಾನಿ ಕರ್ಮಾಣಿ ಪ್ರವದಂತಿ ಮನೀಷಿಣಃ ।
ತಾನ್ಯಹಂ ಕೀರ್ತಯಿಷ್ಯಾಮಿ ಭಕ್ತ್ಯಾ ಸ್ಥೈರ್ಯಾರ್ಥಮಾತ್ಮನಃ ॥ ೮೯ ॥

ಜ್ಞಾನಿಗಳಾದವರು ಯಾವ ಅವನ ದಿವ್ಯಕರ್ಮಗಳನ್ನು ಹೇಳುತ್ತಾರೆಯೋ ಅವುಗಳನ್ನು ನಾನು ಮನಸ್ಸಿಗೆ ಸ್ಥೈರ್ಯವನ್ನು ಕಂಡುಕೊಳ್ಳಲು ಭಕ್ತಿಯಿಂದ ಕೀರ್ತಿಸುವೆನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ನವಮೋಽಧ್ಯಾಯಃ ॥

॥ ದ್ರೋಣಾಭಿಷೇಕಪರ್ವಣಿ ನವಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಒಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹತ್ತನೆಯ ಅಧ್ಯಾಯ

ಧೃತರಾಷ್ಟ್ರನಿಂದ ಕೃಷ್ಣನ ಮಹಿಮೆಯನ್ನು ವರ್ಣಿಸಿ, ಯುದ್ಧದ
ವರ್ಣನೆಯನ್ನು ಮಾಡುವಂತೆ ಸಂಜಯನಿಗೆ ಆದೇಶ

ಧೃತರಾಷ್ಟ್ರಃ

ಶೃಣು ದಿವ್ಯಾನಿ ಕರ್ಮಾಣಿ ವಾಸುದೇವಸ್ಯ ಸಂಜಯ ।
ಕೃತವಾನ್ ಯಾನಿ ಏಶ್ವಾತ್ಮಾ ಯಥಾ ನಾನ್ಯಃ ಪುಮಾನ್ ಕ್ವಚಿತ್ ॥ ೧ ॥

ಧೃತರಾಷ್ಟ್ರ- ಎಲೈ ಸಂಜಯನೇ, ಜಗತ್ಸ್ವಾಮಿಯಾದ ವಾಸುದೇವನು ಇನ್ನೊಬ್ಬ ಪುರುಷನು ಮಾಡಲು ಸಾಧ್ಯವಿಲ್ಲದ ಎಂತಹ ದಿವ್ಯಕರ್ಮಗಳನ್ನು ಮಾಡಿದನೋ ಅವುಗಳನ್ನು ಕೇಳು.

ಸಂವರ್ಧತಾ ಗೋಪಕುಲೇ ಬಾಲೇನ ಚ ಮಹಾತ್ಮನಾ ।
ವಿಖ್ಯಾಪಿತಂ ಬಲಂ ಬಾಲ್ಯೇ ತ್ರಿಷು ಲೋಕೇಷು ಸಂಜಯ ॥ ೨ ॥

ಎಲೈ ಸಂಜಯನೇ, ಮಹಾತ್ಮನಾದ ಅವನು ಬಾಲನಾಗಿ ಗೋಪಕುಲದಲ್ಲಿ ಬೆಳೆಯುತ್ತಿರುವಾಗಲೇ ಬಾಲ್ಯದಲ್ಲಿ ಅವನ ಬಲವು ಮೂರುಲೋಕಗಳಲ್ಲಿಯೂ ಪ್ರಸಿದ್ಧವಾಯಿತು.

ಪೂತನಾಂ ಶಕಟಂ ಹತ್ವಾ ಕೇಶಿನಂ ಚೈವ ವಾಜಿನಮ್ ।
ವತ್ಸಾಸುರಂ ಧೇನುಕಾದೀನ್ ಪ್ರಲಂಬಂ ಚಾವಧೀದ್ ವಿಭುಃ ॥ ೩ ॥

ಪೂತನಿಯನ್ನೂ, ಶಕಟನನ್ನೂ ಕೊಂದು ವಿಭುವಾದ ಅವನು ಅಶ್ವರೂಪದ ಕೇಶಿಯನ್ನು, ವತ್ಸಾಸುರನನ್ನು, ಧೇನುಕನನ್ನು ಮತ್ತು ಪ್ರಲಂಬನನ್ನು ಕೊಂದನು.

ಉಚ್ಚೈಃಶ್ರವಸ್ತುಲ್ಯಬಲಂ ವಾಯುವೇಗಂ ಸಮಂ ಜವೇ ।
ಜಘಾನ ಹಯರಾಜಾನಂ ಯಮುನಾವನವಾಸಿನಮ್ ॥ ೪ ॥

ಉಚ್ಚೈಃಶ್ರವಸ್ಸಿನ ಬಲಕ್ಕೆ ಸಮನಾದ ಬಲವುಳ್ಳ, ವಾಯುವೇಗಕ್ಕೆ ಸಮವಾದ ವೇಗವುಳ್ಳ, ಯಮುನಾ ತೀರವಾಸಿಯಾದ ಅಶ್ವರಾಜನನ್ನು ಕೊಂದನು.

ದಾನವಂ ಘೋರಕರ್ಮಾಣಂ ಗವಾಂ ಮೃತ್ಯುಮಿವೋದ್ಧತಮ್ ।
ವೃಷರೂಪಧರಂ ಬಾಲ್ಯೇ ಭುಜಾಭ್ಯಾಂ ನಿಜಘಾನ ಹ ॥ ೫ ॥

ಗೋವುಗಳಿಗೆ ಮೃತ್ಯುವಿನಂತೆ ಇದ್ದ, ಘೋರಕರ್ಮವನ್ನು ಮಾಡುವ, ವೃಷಭ ರೂಪವನ್ನು ಧರಿಸಿದ ದಾನವನನ್ನು ಬಾಲ್ಯದಲ್ಲಿ ತನ್ನ ಭುಜಗಳಿಂದ ಕೊಂದನು.

ಗವಾಂ ಮೋಕ್ತಾ ಮಹಾಬಾಹುಃ ಧೃತ್ವಾ ಗೋವರ್ಧನಂ ಗಿರಿಮ್ ।
ಚಾಣೂರಂ ಮುಷ್ಟಿಕಂ ಚೈವ ರಂಗಮಧ್ಯೇ ನಿಹತ್ಯ ಚ ॥ ೬ ॥

ದಾವಾಗ್ನಿಯಿಂದ ಗೋವುಗಳನ್ನು ಬಿಡಿಸಿದ ಮಹಾಬಾಹುವಾದ ಅವನು ಗೋವರ್ಧನಗಿರಿಯನ್ನು ಎತ್ತಿ, ರಂಗಮಧ್ಯದಲ್ಲಿ ಚಾಣೂರ-ಮುಷ್ಟಿಕರನ್ನು ವಧೆ ಮಾಡಿದನು.

ತಥಾ ಕಂಸೋ ಮಹಾರಾಜೋ ಜರಾಸಂಧೇನ ಪಾಲಿತಃ ।
ವಿಕ್ರಮೇಣೈವ ಕೃಷ್ಣೇನ ಸಾನುಬಂಧಾಶ್ರಯೋ ಹತಃ ॥ ೭ ॥

ಹಾಗೆಯೇ ಜರಾಸಂಧನಿಂದ ರಕ್ಷಿತನಾದ, ಮಹಾರಾಜನಾದ ಕಂಸನು ಅವನ ಬಂಧು-ಬಾಂಧವರಿಂದ ಸಹಿತನಾಗಿ ಕೃಷ್ಣನಿಂದ ಪರಾಕ್ರಮದಿಂದಲೇ ಹತನಾದನು.

ಸುನಾಮಾ ನಾಮ ವಿಕ್ರಾಂತಃ ಸಮಗ್ರಾಕ್ಷೋಹಿಣೀಪತಿಃ ।
ಭೋಜರಾಜಸ್ಯ ಮಧ್ಯಸ್ಥೋ ಭ್ರಾತಾ ಕಂಸಸ್ಯ ವೀರ್ಯವಾನ್ ॥ ೮ ॥

ಬಲದೇವದ್ವಿತೀಯೇನ ಕೃಷ್ಣೇನಾಮಿತ್ರಘಾತಿನಾ ।
ತರಸ್ವೀ ಸಮರೇ ದಗ್ಧಃ ಸಸೇನಃ ಶೂರಸೇನರಾಟ್ ॥ ೯ ॥

ಭೋಜರಾಜನಾದ, ಕಂಸನ ಮಧ್ಯಮ ಸಹೋದರನಾದ, ಪರಾಕ್ರಮಶಾಲಿಯಾದ, ಸಮಗ್ರ ಅಕ್ಷೋಹಿಣಿಗಳಿಗೆ ಪತಿಯಾದ, ವೇಗಶಾಲಿಯಾದ ಶೂರನಾದ ಸುನಾಮನೆಂಬುವನು ಶತ್ರುಘಾತಕನಾದ ಕೃಷ್ಣನಿಂದ ತನ್ನ ಸೈನ್ಯದ ಜೊತೆಯಲ್ಲಿಯುದ್ಧದಲ್ಲಿದಹಿಸಲ್ಪಟ್ಟನು.

ದುರ್ವಾಸಾ ನಾಮ ವಿಪ್ರರ್ಷಿಃ ತಥಾ ಪರಮಕೋಪನಃ ।
ಆರಾಧಿತಃ ಸದಾರೇಣ ಸ ಚಾಸ್ಮೈ ಪ್ರದದೌ ವರಮ್ ॥ ೧೦ ॥

ಪರಮಕೋಪನರಾದ ದುರ್ವಾಸ ಮಹರ್ಷಿಗಳು ಪತ್ನೀ ಸಹಿತನಾದ ಅವನಿಂದ ಪೂಜಿಸಲ್ಪಟ್ಟಿದ್ದರು ಮತ್ತು ಅವನಿಗೆ (ಅವಧ್ಯತ್ವ) ವರವನ್ನು ಕೊಟ್ಟಿದ್ದರು.

ತಥಾ ಗಾಂಧಾರರಾಜಸ್ಯ ಸುತಾಂ ವೀರಃ ಸ್ವಯಂವರೇ ।
ನಿರ್ಜಿತ್ಯ ಪೃಥಿವೀಪಾಲಾನವಹತ್ ಪುಷ್ಕರೇಕ್ಷಣಃ ॥ ೧೧ ॥

ಪುಷ್ಕರೇಕ್ಷಣನೂ, ವೀರನೂ ಆದ ಕೃಷ್ಣನು ಸ್ವಯಂವರದಲ್ಲಿಪೃಥಿವೀಪಾಲರನ್ನು ಗೆದ್ದು ಗಾಂಧಾರ ರಾಜಕುಮಾರಿಯನ್ನು ವಿವಾಹ ಮಾಡಿಕೊಂಡನು.

ಅಮೃಷ್ಯಮಾಣಾ ರಾಜಾನೋ ಯಸ್ಯ ಜಾತ್ಯಾ ಹಯಾ ಇವ ।
ರಥೇ ವೈವಾಹಿಕೇ ಯುಕ್ತಾಃ ಪ್ರತೋದೇನ ಕೃತವ್ರಣಾಃ ॥ ೧೨ ॥

ವೈವಾಹಿಕ ರಥದಲ್ಲಿ ಹೂಡಲ್ಪಟ್ಟ, ಚಾವಟಿಯಿಂದ ವ್ರಣವನ್ನು ಹೊಂದಿದ, ಒಳ್ಳೆಯ ಜಾತಿಯ ಅಶ್ವಗಳಂತಿದ್ದ ಆ ರಾಜರನ್ನು ಗೆದ್ದು (ರಾಜಕುಮಾರಿಯನ್ನು ವಿವಾಹವಾದನು).

ಜರಾಸಂಧಂ ಮಹಾರಾಜಮುಪಾಯೇನ ಜನಾರ್ದನಃ ।
ಪರೇಣ ಘಾತಯಾಮಾಸ ಸಮಗ್ರಾಕ್ಷೋಹಿಣೀಪತಿಮ್ ॥ ೧೩ ॥

ಜನಾರ್ದನನಾದ ಅವನು ಅನೇಕ ಅಕ್ಷೋಹಿಣೀ ಪತಿಯಾದ, ಮಹಾರಾಜನಾದ ಜರಾಸಂಧನನ್ನು ಉಪಾಯದಿಂದ ಇನ್ನೊಬ್ಬರಿಂದ ಕೊಲ್ಲಿಸಿದನು.

ಚೇದಿರಾಜಂ ಚ ವಿಕ್ರಾಂತಂ ರಾಜಸೇನಾಪತಿಂ ಬಲೀ ।
ಅಗ್ರ್ಯೇ ವಿವದಮಾನಂ ತಂ ಜಘಾನ ಪಶುವತ್ತದಾ ॥ ೧೪ ॥

ಬಲಿಷ್ಠನಾದ ಕೃಷ್ಣನು ರಾಜಸೇನಾಪತಿಯೂ, ಪರಾಕ್ರಮಶಾಲಿಯೂ ಆದ, ಅಗ್ರಪೂಜೆಯಲ್ಲಿ ವಿವಾದವನ್ನು ಮಾಡಿದ ಚೇದಿರಾಜನಾದ ಶಿಶುಪಾಲನನ್ನು ಆಗ ಪಶುವಿನಂತೆ ಕೊಂದನು.

ಸೌಭಂ ದೈತ್ಯಪುರಂ ಖಸ್ಥಂ ಸಾಲ್ವಗುಪ್ತಂ ದುರಾಸದಮ್ ।
ಸಮುದ್ರಕುಕ್ಷೌ ವಿಕ್ರಮ್ಯ ಪಾತಯಾಮಾಸ ಮಾಧವಃ ॥ ೧೫ ॥

ಮಾಧವನು ಸಾಲ್ವನಿಂದ ರಕ್ಷಿತವಾದ, ಸಮೀಪಿಸಲು ಕಷ್ಟಸಾಧ್ಯವಾದ, ದೈತ್ಯ ಪಟ್ಟಣವಾದ ಸೌಭ ವಿಮಾನವನ್ನು ತಮ್ಮ ಪರಾಕ್ರಮದಿಂದ ಸಮುದ್ರದ ಕುಕ್ಷಿಯಲ್ಲಿ ಕೆಡವಿದನು.

ಅಂಗಾನ್ ವಂಗಾನ್ ಕಳಿಂಗಾಂಶ್ಚ ಮಾಗಧಾನ್ ಕಾಶಿಕೋಸಲಾನ್ ।
ವತ್ಸಗರ್ಭಕರೂಶಾಂಶ್ಚ ಪುಂಡ್ರಾಂಶ್ಚಾಥಾಜಯದ್ ರಣೇ ॥ ೧೬ ॥

ಅನಂತರ ಅಂಗರನ್ನೂ, ವಂಗರನ್ನೂ, ಕಳಿಂಗರನ್ನೂ, ಮಾಗಧರನ್ನೂ, ಕಾಶಿ-ಕೋಸಲರನ್ನೂ, ವತ್ಸಗರ್ಭ-ಕರೂಷರನ್ನೂ, ಪುಂಡ್ರರನ್ನೂ ಯುದ್ಧದಲ್ಲಿ ಜಯಿಸಿದನು.

ಆವಂತ್ಯಾನ್ ದಾಕ್ಷಿಣಾತ್ಯಾಂಶ್ಚ ಪಾರ್ವತೀಯಾನ್ ದಶೇರುಕಾನ್ ।
ಕಾಶ್ಮೀರಕಾನೌರಸಕಾನ್ ಪಿಶಾಚಾಂಶ್ಚ ಸಮಂದರಾನ್ ॥ ೧೭ ॥

ಕಾಂಬೋಜಾನ್ ಮಾಲವಾಂಶ್ಚೈವ ಚೋಳಾನ್ ಪಾಂಡ್ಯಾಂಶ್ಚ ಸಂಜಯ ।
ತ್ರಿಗರ್ತಾನ್ ಮಗಧಾಂಶ್ಚೈವ ದರದಾಂಶ್ಚ ಸುದುರ್ಜಯಾನ್ ॥ ೧೮ ॥

ನಾನಾದಿಗ್ಭ್ಯಶ್ಚ ಸಂಪ್ರಾಪ್ತಾನ್ ಆಂಧ್ರಾನ್ ಮ್ಲೇಚ್ಛಗಣಾನಪಿ ।
ಜಿತವಾನ್ ಪುಂಡರೀಕಾಕ್ಷೋ ಯವನಾಂಶ್ಚ ಸಹಾನುಗಾನ್ ॥ ೧೯ ॥

ಆವಂತ್ಯರು, ದಾಕ್ಷಿಣಾತ್ಯರು, ಪರ್ವತ ಪ್ರದೇಶದವರು, ದಶೇರುಕರು, ಕಾಶ್ಮೀರಕರು, ಔರಸಕರು, ಪಿಶಾಚರು, ಮಂದರರು, ಕಾಂಬೋಜರು, ಮಾಲವರು, ಚೋಳರು, ಪಾಂಡ್ಯರು, ತ್ರಿಗರ್ತರು, ಮಗಧರು, ದುರ್ಜಯರಾದ ದರದರು, ನಾನಾ

ದಿಕ್ಕುಗಳಿಂದ ಬಂದ ಆಂಧ್ರರು ಮತ್ತು ಮ್ಲೇಚ್ಛಗಣಗಳು- ಎಲೈ ಸಂಜಯನೇ, ಇವರೆಲ್ಲರನ್ನೂ ಮತ್ತು ಅನುಯಾಯಿಗಳಿಂದ ಸಹಿತರಾದ ಯವನರನ್ನೂ ಪುಂಡರೀಕಾಕ್ಷನು ಗೆದ್ದನು.

ಪ್ರವಿಶ್ಯ ಮಕರಾವಾಸಂ ಯಾದೋಭಿರಭಿಸಂವೃತಮ್ ।
ಜಿಗಾಯ ವರುಣಂ ಯುದ್ಧೇ ಸಲಿಲಾಂತರ್ಗತಂ ಪುರಾ ॥ ೨೦ ॥

ಜಲಚರ ಪ್ರಾಣಿಗಳಿಂದ ರಕ್ಷಿಸಲ್ಪಟ್ಟ ಸಮುದ್ರವನ್ನು ಪ್ರವೇಶಿಸಿ, ಹಿಂದೆ ಜಲಾಂತರ್ಗತನಾದ ವರುಣನನ್ನು ಯುದ್ಧದಲ್ಲಿ ಗೆದ್ದನು.

ಯುಧಿ ಪಂಚಜನಂ ಹತ್ವಾ ಪಾತಾಳತಳವಾಸಿನಮ್ ।
ಪಾಂಚಜನ್ಯಂ ಹೃಷೀಕೇಶೋ ದಿವ್ಯಂ ಶಂಖಮವಾಪ್ತವಾನ್ ॥ ೨೧ ॥

ಹೃಷೀಕೇಶನು ಪಾತಾಳ ತಳದಲ್ಲಿ ವಾಸಿಸುವ ಪಂಚಜನ ದೈತ್ಯನನ್ನು ಯುದ್ಧದಲ್ಲಿ ಕೊಂದು ದಿವ್ಯವಾದ ಪಾಂಚಜನ್ಯ ಶಂಖವನ್ನು ಪಡೆದನು.

ಖಾಂಡವೇ ಪಾರ್ಥಸಹಿತಃ ತೋಷಯಿತ್ವಾ ಹುತಾಶನಮ್ ।
ಆಗ್ನೇಯಮಸ್ತ್ರಂ ದುರ್ಧರ್ಷಂ ಚಕ್ರಂ ಲೇಭೇ ಮಹಾಬಲಃ ॥ ೨೨ ॥

ಮಹಾಬಲನಾದ ಅವನು ಅರ್ಜುನನಿಂದ ಸಹಿತನಾಗಿ ಖಾಂಡವವನದಲ್ಲಿ ಅಗ್ನಿಯನ್ನು ಸಂತೋಷಪಡಿಸಿ, ಆಗ್ನೇಯಾಸ್ತ್ರವನ್ನು ಮತ್ತು ಗೆಲಿಸಲು ಅಸಾಧ್ಯವಾದ ಸುದರ್ಶನ ಚಕ್ರವನ್ನು ಪಡೆದನು.

ವೈನತೇಯಂ ಸಮಾರುಹ್ಯ ತ್ರಾಸಯಿತ್ವಾऽಮರಾವತೀಮ್ ।
ಮಹೇಂದ್ರಭವನಾದ್ ವೀರಃ ಪಾರಿಜಾತಮುಪಾನಯತ್ ॥ ೨೩ ॥

ಗರುಡನನ್ನು ಏರಿ ಹೋಗಿ, ಅಮರಾವತಿಯನ್ನು ಭಯಗೊಳಿಸಿ, ವೀರನಾದ ಅವನು ಇಂದ್ರನ ಮನೆಯಿಂದ ಪಾರಿಜಾತ ವೃಕ್ಷವನ್ನು ತಂದನು.

ತಚ್ಚ ಮರ್ಷಿತವಾನ್ ಶಕ್ರೋ ಜಾನಂಸ್ತಸ್ಯ ಪರಾಕ್ರಮಮ್ ।
ರಾಜ್ಞಾಂ ಚಾಪ್ಯಜಿತಂ ಕಂಚಿತ್ ಕೃಷ್ಣೇನೇಹ ನ ಶುಶ್ರುಮ ॥ ೨೪ ॥

ಕೃಷ್ಣನ ಪರಾಕ್ರಮವನ್ನು ತಿಳಿದ ಇಂದ್ರನು ಅದನ್ನು ಸಹಿಸಿದನು. ಕೃಷ್ಣನಿಂದ ಪರಾಜಿತನಾದ ಯಾವ ರಾಜನನ್ನೂ ನಾವು ಕೇಳಲಿಲ್ಲ.

ಯಚ್ಚ ತನ್ಮಹದಾಶ್ಚರ್ಯಂ ಸಭಾಯಾಂ ಮಮ ಸಂಜಯ ।
ಕೃತವಾನ್ ಪುಂಡರೀಕಾಕ್ಷಃ ತದನ್ಯಃ ಕಃ ಕರಿಷ್ಯತಿ ॥ ೨೫ ॥

ಎಲೈ ಸಂಜಯನೇ, ಪುಂಡರೀಕಾಕ್ಷನು ನನ್ನ ಸಭೆಯಲ್ಲಿ ಯಾವ ದೊಡ್ಡ ಆಶ್ಚರ್ಯವನ್ನು ಮಾಡಿದನೋ ಅದನ್ನು ಇನ್ನೊಬ್ಬನು ಯಾವನು ಮಾಡುವನು?

ಯಚ್ಚ ಭಕ್ತ್ಯಾ ಪ್ರಪನ್ನೋಽಹಮದ್ರಾಕ್ಷಂ ಕೃಷ್ಣಮೀಶ್ವರಮ್ ।
ತನ್ಮೇ ಸುವಿದಿತಂ ಸರ್ವಂ ಪ್ರತ್ಯಕ್ಷಮಿವ ಚಾಗಮಾತ್ ॥ ೨೬ ॥

ಈಶ್ವರನಾದ ಕೃಷ್ಣನಿಗೆ ಭಕ್ತಿಯಿಂದ ಶರಣಾಗತನಾದ ನಾನು ಏನನ್ನು ನೋಡಿದೆನೋ ಅದೆಲ್ಲವೂ ಪ್ರತ್ಯಕ್ಷದಂತೆ ಮತ್ತು ಆಗಮಕ್ಕೆ ಅನುಸಾರವಾಗಿ ನನಗೆ ಚೆನ್ನಾಗಿ ತಿಳಿದಿದೆ.

ನಾಂತೋ ವಿಕ್ರಮಯುಕ್ತಸ್ಯ ಬುದ್ಧ್ಯಾ ಯುಕ್ತಸ್ಯ ವಾ ಪುನಃ ।
ಕರ್ಮಣಃ ಶಕ್ಯತೇ ಗಂತುಂ ಹೃಷೀಕೇಶಸ್ಯ ಸಂಜಯ ॥ ೨೭ ॥

ಎಲೈ ಸಂಜಯನೇ, ಪರಾಕ್ರಮಯುಕ್ತನಾದ ಮತ್ತು ಮೇಧಾವಿಯಾದ ಆ ಹೃಷೀಕೇಶನು ಮಾಡಿದ ಕಾರ್ಯಗಳ ಅಂತವನ್ನು ಮುಟ್ಟಲು ಸಾಧ್ಯವಿಲ್ಲ.

ತಥಾ ಗದಶ್ಚ ಸಾಂಬಶ್ಚ ಪ್ರದ್ಯುಮ್ನೋಽಥ ವಿಡೂರಥಃ ।
ಆಶಾವಹೋಽನಿರುದ್ಧಶ್ಚ ಚಾರುದೇಷ್ಣಃ ಸಸಾರಣಃ ॥ ೨೮ ॥

ಉಲ್ಮುಕೋ ನಿಶಠಶ್ಚೈವ ವಿಬಭ್ರುಶ್ಚೈವ ವೀರ್ಯವಾನ್ ।
ಪೃಥುಶ್ಚ ವಿಪೃಥುಶ್ಚೈವ ಸಮಕ್ರೋಧಾಶ್ಚ ಸಂಜಯ ॥ ೨೯ ॥

ಹಾಗೆಯೇ, ಗದ, ಸಾಂಬ, ಪ್ರದ್ಯುಮ್ನ, ವಿಡೂರಥ, ಆಶಾಶಾಲಿಯಾದ ಅನಿರುದ್ಧ, ಸಾರಣನಿಂದ ಸಹಿತನಾದ ಚಾರುದೇಷ್ಣ, ಉನ್ಮುಖ, ನಿಶಠ, ಪರಾಕ್ರಮಶಾಲಿಯಾದ ವಿಬಭ್ರು, ಪೃಥು ಮತ್ತು ವಿಪೃಥುಗಳು - ಎಲೈ ಸಂಜಯನೇ, ಇವರು ಕೌರವರ ಮೇಲೆ ಕೃಷ್ಣನಿಗೆ ಸಮಾನವಾದ ಕ್ರೋಧವುಳ್ಳವರಾಗಿದ್ದಾರೆ.

ಏತೇ ವೈ ಬಲವಂತಶ್ಚ ವೃಷ್ಣಿವೀರಾಃ ಪ್ರಹಾರಿಣಃ ।
ಕಥಂಚಿತ್ ಪಾಂಡವಾನೀಕಂ ಶ್ರಯೇಯುಃ ಸಮರೇ ಸ್ಥಿತಾಃ ॥ ೩೦ ॥

ಆಹೂತಾ ವೃಷ್ಣಿವೀರೇಣ ಕೇಶವೇನ ಮಹಾತ್ಮನಾ ।
ತತಃ ಸಂಶಯಿತಂ ಸರ್ವಂ ಭವೇದಿತಿ ಮತಿರ್ಮಮ ॥ ೩೧ ॥

ಈ ವೃಷ್ಣಿವೀರರು ಪ್ರಹಾರ ಸಮರ್ಥರು ಮತ್ತು ಬಲಿಷ್ಠರಾದವರು. ಮಹಾತ್ಮನಾದ ವೃಷ್ಣಿವೀರನಾದ ಕೇಶವನಿಂದ ಆಹೂತರಾಗಿ ಯುದ್ಧದಲ್ಲಿ ಅವರು ಎಲ್ಲ ರೀತಿಯಿಂದಲೂ ಪಾಂಡವರ ಸೈನ್ಯವನ್ನೇ ಆಶ್ರಯಿಸುವರು. ಆಗ ಎಲ್ಲವೂ ಸಂಶಯಗ್ರಸ್ತವಾಗುವುದು ಎಂದು ನನ್ನ ಅಭಿಪ್ರಾಯ.

ನಾಗಾಯುತಬಲೋ ವೀರಃ ಕೈಲಾಸಶಿಖರೋಪಮಃ ।
ವನಮಾಲೀ ಹಲೀ ರಾಮೋ ಯತ್ರ ತತ್ರ ಜನಾರ್ದನಃ ॥ ೩೨ ॥

ಹತ್ತುಸಹಸ್ರ ಆನೆಗಳ ಬಲವುಳ್ಳ ವೀರನಾದ, ಕೈಲಾಸ ಶಿಖರದಂತೆ ಉನ್ನತನಾದ, ವನಮಾಲಿಯಾದ, ಹಲಾಯುಧಧಾರಿಯಾದ ಬಲರಾಮನೆಲ್ಲಿ ಇರುತ್ತಾನೆಯೋ ಅಲ್ಲಿ ಜನಾರ್ದನನು ಇರುತ್ತಾನೆ.

ಏಕ ಏವ ದ್ವಿಧಾ ಭೂತೋ ದೃಶ್ಯತೇ ಮಾನುಷೈರ್ಭುವಿ ।
ಯಮಾಹುಃ ಸರ್ವಪಿತರಂ ವಾಸುದೇವಂ ದ್ವಿಜಾತಯಃ ॥ ೩೩ ॥

ಪಿತೄಣಾಮಪಿ ಯಃ ಪೂರ್ವೋ ವೇದೇಷು ಪ್ರಶಸ್ಯತೇ ।
ಸೋಽಪಿ ಕೃಚ್ಛ್ರೇಷು ಪಾರ್ಥಾನಾಂ ಯೋತ್ಸ್ಯತೇಽರ್ಥಾಯ ಕೇಶವಃ ॥

ಕೃಷ್ಣನೊಬ್ಬನೇ ಕೃಷ್ಣ-ಬಲರಾಮ ರೂಪದಿಂದ ಎರಡು ಭಾಗವಾಗಿ ಭೂಮಿಯಲ್ಲಿ ಮನುಷ್ಯರಿಗೆ ಕಾಣಿಸುತ್ತಾನೆ. ಯಾವ ವಾಸುದೇವನನ್ನು ಬ್ರಾಹ್ಮಣರು ಎಲ್ಲರಿಗೂ ತಂದೆ ಎಂದು ಹೇಳುತ್ತಾರೆಯೋ, ಯಾವನನ್ನು ವೇದಗಳು ಪಿತೃಗಳಿಗೂ ಪ್ರಾಚೀನನಾದವನು ಎಂದು ಹೇಳುತ್ತವೆಯೋ ಅಂತಹ ಕೇಶವನೂ ಸಹ ಪಾಂಡವರಿಗೆ ಸಂಕಟ ಉಂಟಾದಾಗ ಅವರ ಸಲುವಾಗಿ ಯುದ್ಧವನ್ನು ಮಾಡುವನು.

ಸ ಯದಾ ತಾತ ಸನ್ನಹ್ಯೇತ್ ಪಾಂಡವಾರ್ಥಾಯ ಕೇಶವಃ ।
ನ ತದಾ ಪ್ರತ್ಯನೀಕೋಽನ್ಯೋ ಭವಿತಾ ತಸ್ಯ ಕಶ್ಚನ ॥ ೩೫ ॥

ಎಲೈ ಪ್ರೀತಿಪಾತ್ರನೇ, ಕೇಶವನು ಪಾಂಡವರ ಸಲುವಾಗಿ ಯಾವಾಗ ಶಸ್ತ್ರ ಕವಚವನ್ನು ಧರಿಸುವನೋ ಆಗ ಅವನಿಗೆ ಎದುರಾಗುವವನು ಯಾವನೂ ಇರುವುದಿಲ್ಲ.

ಯದಿ ಸ್ಮ ಕುರವಃ ಸರ್ವೇ ಜಯೇಯುರ್ನಾಮ ಪಾಂಡವಾನ್ ।
ವಾರ್ಷ್ಣೇಯೋಽರ್ಥಾಯ ತೇಷಾಂ ವೈ ಗೃಹ್ಣೀಯಾಚ್ಛಸ್ತ್ರಮುತ್ತಮಮ್ ॥

ಒಂದು ಪಕ್ಷ ಎಲ್ಲ ಕುರುಗಳೂ ಸೇರಿ ಪಾಂಡವರನ್ನು ಗೆದ್ದರೆ ವಾರ್ಷ್ಣೇಯನಾದ ಕೃಷ್ಣನು ಅವರ ಹಿತವನ್ನು ಸಾಧಿಸಲು ಉತ್ತಮವಾದ ಶಸ್ತ್ರವನ್ನು ಹಿಡಿದಾನು!

ತತಃ ಸರ್ವಾನ್ ನರವ್ಯಾಘ್ರಾನ್ ಹತ್ವಾ ನಾರಾಯಣೋ ರಣೇ ।
ಕೌರವಾಂಶ್ಚ ಮಹಾಬಾಹುಃ ಕುಂತ್ಯೈ ದದ್ಯಾತ್ ಸ ಮೇದಿನೀಮ್ ॥

ಆಗ ಮಹಾಬಾಹುವಾದ ನಾರಾಯಣನಾದ ಅವನು ಯುದ್ಧದಲ್ಲಿ ಎಲ್ಲ ನರಶ್ರೇಷ್ಠರನ್ನು ಮತ್ತು ಕೌರವರನ್ನು ಸಂಹರಿಸಿ ಕುಂತಿಗೆ ಭೂಮಿಯನ್ನು ಕೊಟ್ಟಾನು!

ಯಸ್ಯ ಯಂತಾ ಹೃಷೀಕೇಶೋ ಯೋದ್ಧಾ ಯಸ್ಯ ಧನಂಜಯಃ ।
ರಥಸ್ಯ ತಸ್ಯ ಕಃ ಸಂಖೇ ಪ್ರತ್ಯನೀಕೋ ಭವೇದ್ ರಥಃ ॥ ೩೮ ॥

ಯಾವ ರಥದಲ್ಲಿ ಹೃಷೀಕೇಶನು ಸಾರಥಿಯಾಗಿ, ಧನಂಜಯನು ಯೋಧನಾಗಿ ಇರುವನೋ, ಯುದ್ಧದಲ್ಲಿ ಅಂತಹ ರಥಕ್ಕೆ ಯಾವ ಮಹಾರಥನು ಎದುರಾಗಿ ಹೋದಾನು!

ನ ಕೇನಚಿದುಪಾಯೇನ ಕುರೂಣಾಂ ದೃಶ್ಯತೇ ಜಯಃ ।
ತಸ್ಮಾನ್ನೇ ಸಂಜಯಾಚಕ್ಷ್ವ ಯಥಾ ಯುದ್ಧಮವರ್ತತ ॥ ೩೯ ॥

ಎಲೈ ಸಂಜಯನೇ, ಯಾವ ರೀತಿಯಿಂದಲೂ ಕುರುಗಳಿಗೆ ಜಯವುಂಟಾಗುವುದು ಕಾಣುವುದಿಲ್ಲ. ಆದ್ದರಿಂದ ಯುದ್ಧವು ಹೇಗೆ ನಡೆಯಿತು ಎಂದು ನನಗೆ ಹೇಳು.

ಅರ್ಜುನಃ ಕೇಶವಸ್ಯಾತ್ಮಾ ಕೃಷ್ಣಶ್ಚಾತ್ಮಾ ಕಿರೀಟಿನಃ ।
ಅರ್ಜುನೇ ವಿಜಯೋ ನಿತ್ಯಂ ಕೃಷ್ಣೇ ಕೀರ್ತಿಶ್ಚ ಶಾಶ್ವತೀ ॥೪೦॥

ಅರ್ಜುನನು ಕೇಶವನ ಆತ್ಮನಾಗಿದ್ದಾನೆ. ಕೃಷ್ಣನೂ ಸಹ ಅರ್ಜುನನ ಆತ್ಮನಾಗಿದ್ದಾನೆ. ಅರ್ಜುನನಲ್ಲಿ ಯಾವಾಗಲೂ ವಿಜಯವಿದೆ ಮತ್ತು ಕೃಷ್ಣನಲ್ಲಿ ಶಾಶ್ವತವಾದ ಕೀರ್ತಿ ಇದೆ.

ಪ್ರಾಧಾನ್ಯೇನ ತು ಭೂಯಿಷ್ಠಾ ಅಮೇಯಾಃ ಕೇಶವೇ ಗುಣಾಃ ।
ಮೋಹಾತ್ ತು ವಶಿನಂ ಕೃಷ್ಣಂ ನ ಸರ್ವೋ ವೇತ್ತಿ ಮಾಧವಮ್ ॥

ಕೇಶವನಲ್ಲಿ ಪ್ರಧಾನವಾಗಿರುವ ಗುಣಗಳು ಅಸಂಖ್ಯಾತವಾಗಿವೆ. ಮೋಹಕ್ಕೆ ಒಳಗಾದ ಎಲ್ಲ ಮನುಷ್ಯರು ಸರ್ವವಶಿಯಾದ ಮಾಧವನನ್ನು ತಿಳಿಯುವುದಿಲ್ಲ.

ಮೋಹಿತೋ ದೈವಯೋಗೇನ ಮೃತ್ಯುಪಾಶಪುರಸ್ಕೃತಃ ।
ಮೋಹಾತ್ ದುರ್ಯೋಧನಃ ಕೃಷ್ಣಂ ಯೋ ನ ವೇತ್ತೀಹ ಕೇಶವಮ್ ॥

ನ ವೇದ ಕೃಷ್ಣಂ ದಾಶಾರ್ಹಮ್ ಅರ್ಜುನಂ ಚೈವ ಪಾಂಡವಮ್ ।
ಪೂರ್ವದೇವೌ ಮಹಾತ್ಮಾನೌ ನರನಾರಾಯಣಾವುಭೌ ।
ಏಕಾತ್ಮಾನೌ ದ್ವಿಧಾಭೂತೌ ದೃಶ್ಯೇತೇ ಮಾನವೈರ್ಭುವಿ ॥ ೪೩ ॥

ಯಾವನು ಕೇಶವನನ್ನು ಸರಿಯಾಗಿ ತಿಳಿಯುವುದಿಲ್ಲವೋ ಅಂತಹವನು ಮೃತ್ಯುಪಾಶದಿಂದ ಬದ್ಧನಾಗಿ ದೈವಯೋಗದಿಂದ ಮೋಹಿತನಾಗುತ್ತಾನೆ. ದುರ್ಯೋಧನನೂ ಸಹ ಅಂತಹ ಮೋಹದಿಂದ ಕೃಷ್ಣನನ್ನು ತಿಳಿದಿಲ್ಲ. ಅವನು ದಾಶಾರ್ಹನಾದ ಕೃಷ್ಣನನ್ನೂ ಮತ್ತು ಪಾಂಡುಪುತ್ರನಾದ ಅರ್ಜುನನನ್ನೂ ಸಹ ತಿಳಿದಿಲ್ಲ. ಅವರಿಬ್ಬರೂ ಮಹಾತ್ಮರಾದ, ಪೂರ್ವದೇವತೆಗಳಾದ ನರ-ನಾರಾಯಣರು. ಒಬ್ಬರೇ ಆದ ಅವರನ್ನು ಇಬ್ಬರನ್ನಾಗಿ ಭೂಮಿಯಲ್ಲಿ ಮನುಷ್ಯರು ನೋಡುತ್ತಾರೆ.

ಮನಸಾऽಪಿ ಹಿ ದುರ್ಧರ್ಷೌ ಸೇನಾಮೇತಾಂ ಯಶಸ್ವಿನೌ ।
ನಾಶಯೇತಾಮಿಹೇಚ್ಛಂತೌ ಮಾನುಷತ್ವಾಚ್ಚ ನೇಚ್ಛತಃ ॥ ೪೪ ॥

ಕೀರ್ತಿವಂತರಾದ ಮತ್ತು ದುರ್ಧರ್ಷರಾದ ಅವರು ಬಯಸಿದರೆ ತಮ್ಮ ಮನಸ್ಸಿನಿಂದಲೇ ಈ ಸೈನ್ಯವನ್ನು ನಾಶಗೊಳಿಸಬಹುದು. ಆದರೆ ಮನುಷ್ಯರಾಗಿ ಅವತಾರ ಮಾಡಿರುವುದರಿಂದ ಹಾಗೆ ಬಯಸುವುದಿಲ್ಲ.

ಯುಗಸ್ಯೇವ ವಿಪರ್ಯಾಸೋ ಲೋಕಾನಾಮಿವ ಮೋಹನಮ್ ।
ಭೀಷ್ಮಸ್ಯ ಚ ವಧಸ್ತಾತ ದ್ರೋಣಸ್ಯ ಚ ಮಹಾತ್ಮನಃ ॥ ೪೫ ॥

ಎಲೈ ಪ್ರೀತಿಪಾತ್ರನೇ, ಮಹಾತ್ಮರಾದ ಭೀಷ್ಮರ ಮತ್ತು ದ್ರೋಣರ ವಧೆಯು ಯುಗದ ವ್ಯತ್ಯಾಸರೂಪವಾಗಿ ಲೋಕಕ್ಕೆ ಮೋಹವನ್ನುಂಟು ಮಾಡುವುದಾಗಿದೆ.

ನಹ್ಯೇವ ಬ್ರಹ್ಮಚರ್ಯೇಣ ನ ವೇದಾಧ್ಯಯನೇನ ಚ ।
ನ ಕ್ರಿಯಾಭಿರ್ನ ಶಸ್ತ್ರೇಣ ಮೃತ್ಯೋರಧ್ವನಿ ಮುಚ್ಯತೇ ॥ ೪೬ ॥

ಬ್ರಹ್ಮಚರ್ಯದಿಂದಾಗಲೀ, ವೇದಾಧ್ಯಯನದಿಂದಾಗಲೀ, ಸತ್ಕರ್ಮ-ಗಳಿಂದಾಗಲೀ, ಶಸ್ತ್ರದಿಂದಾಗಲೀ ಯಾರೂ ಮೃತ್ಯುವಿನ ಮಾರ್ಗದಿಂದ ಬಿಡುಗಡೆಯನ್ನು ಹೊಂದುವುದಿಲ್ಲ.

ಲೋಕಸಂಭಾವಿತೌ ವೀರೌ ಕೃತಾಸ್ತ್ರೌ ಯುದ್ಧದುರ್ಮದೌ ।
ಭೀಷ್ಮದ್ರೋಣೌ ಹತೌ ಶ್ರುತ್ವಾ ಕಿಂ ನು ಜೀವಾಮಿ ಸಂಜಯ ॥ ೪೭ ॥

ಎಲೈ ಸಂಜಯನೇ, ಎಲ್ಲ ಲೋಕದಿಂದಲೂ ಪೂಜಿತರಾದ, ಶಸ್ತ್ರಪಾರಂಗತರಾದ, ಯುದ್ಧದುರ್ಮದರಾದ, ವೀರರಾದ, ಭೀಷ್ಮ-ದ್ರೋಣರು ಹತರಾದರು ಎಂದು ಕೇಳಿ ನಾನು ಏಕೆ ಬದುಕಿದ್ದೇನೆ?

ಯಾಂ ತಾಂ ಶ್ರಿಯಮಸೂಯಾಮಃ ಪಾಂಡವಸ್ಯ ಮಹಾತ್ಮನಃ ।
ಅದ್ಯ ತಾಮನುಜಾನೀಮೋ ಭೀಷ್ಮದ್ರೋಣವಧೇನ ಹ ॥ ೪೮ ॥

ನಾವು ಮಹಾತ್ಮನಾದ ಪಾಂಡವನ ಯಾವ ಸಂಪತ್ತನ್ನು ನೋಡಿ ಅಸೂಯೆ ಪಟ್ಟಿವೋ ಈ ದಿನ ಭೀಷ್ಮ-ದ್ರೋಣರ ವಧೆಯಿಂದ ಆ ಸಂಪತ್ತು ಅವನಲ್ಲಿಯೇ ಇರಲಿ ಎಂದು ಅನುಮೋದಿಸುತ್ತಿದ್ದೇವೆ.

ತಥಾ ಚ ಮತ್ಕೃತೇ ಪ್ರಾಪ್ತಃ ಕುರೂಣಾಮೇಷ ಸಂಕ್ಷಯಃ ।
ಪಕ್ವಾನಾಂ ಹಿ ವಧೇ ಸೂತ ವಜ್ರಾಯಂತೇ ತೃಣಾನ್ಯಪಿ ॥ ೪೯ ॥

ಅದರಂತೆ ನನ್ನ ನಿಮಿತ್ತದಿಂದಾಗಿ ಕುರುಗಳ ಈ ವಿನಾಶವು ಪ್ರಾಪ್ತವಾಗಿದೆ. ಎಲೈ ಸೂತನೇ, ಪಕ್ವವಾದ ಹಣ್ಣುಗಳನ್ನು ಕೆಡವುವದರಲ್ಲಿ ತೃಣಗಳೂ ಸಹ ವಜ್ರಾಯುಧಗಳಂತಾಗುತ್ತವೆ.

ಅನಂತಮಿದಮೈಶ್ವರ್ಯಂ ಲೋಕೇ ಪ್ರಾಪ್ತೋ ಯುಧಿಷ್ಠಿರಃ ।
ಯಸ್ಯ ಕೋಪಾನ್ಮಹೇಷ್ವಾಸೌ ಭೀಷ್ಮದ್ರೋಣೌ ನಿಪಾತಿತೌ ॥ ೫೦ ॥

ಅನಂತವಾದ ಈ ಐಶ್ವರ್ಯವನ್ನು ಪ್ರಪಂಚದಲ್ಲಿ ಯುಧಿಷ್ಠಿರನು ಪಡೆದಿದ್ದಾನೆ. ಅವನ ಕೋಪದಿಂದ (ಕೋಪದಿಂದಲೇ) ಮಹಾಧನುರ್ಧಾರಿಗಳಾದ ಭೀಷ್ಮ-ದ್ರೋಣರು ನಿಪಾತವನ್ನು ಹೊಂದಿದ್ದಾರೆ.

ಪ್ರಾಪ್ತಃ ಪ್ರಕೃತಿತೋಽಧರ್ಮೋ ಮಾ ಧರ್ಮೋ ಮಾನವಾನ್ ಪ್ರತಿ ।
ಕ್ರೂರಃ ಸರ್ವವಿನಾಶಾಯ ಕಾಲೋಽಯಂ ನಾತಿವರ್ತತೇ ॥ ೫೧ ॥

ಮನುಷ್ಯರಿಗೆ ಸ್ವಾಭಾವಿಕವಾಗಿಯೇ ಅಧರ್ಮವು ಬರುತ್ತದೆ; ಧರ್ಮವು ಬರುವುದಿಲ್ಲ. ಸರ್ವವಿನಾಶಕ್ಕಾಗಿ ಒದಗಿರುವ ಈ ಕ್ರೂರವಾದ ಕಾಲವು (ನಮ್ಮನ್ನು ವಿನಾಶ ಮಾಡದೆ) ಮುಂದೆ ಹೋಗುವುದಿಲ್ಲ.

ಅನ್ಯಥಾ ಚಿಂತಿತಾ ಹ್ಯರ್ಥಾ ನರೈಸ್ತಾತ ತಪಸ್ವಿಭಿಃ ।
ಅನ್ಯಥೈವ ಹಿ ಗಚ್ಛಂತಿ ದೈವಾದಿತಿ ಮತಿರ್ಮಮ ॥ ೫೨ ॥

ಎಲೈ ಪ್ರೀತಿಪಾತ್ರನೇ, ತಪಸ್ವಿಗಳು ಬೇರೆ ರೀತಿಯಲ್ಲಿ ಯೋಚಿಸಿದ ಅರ್ಥಗಳು ದೈವದಿಂದ ಬೇರೆಯ ಮಾರ್ಗದಲ್ಲಿಯೇ ಹೋಗುತ್ತವೆ ಎಂದು ನನ್ನ ಅಭಿಪ್ರಾಯ.

ತಸ್ಮಾದಪರಿಹಾರ್ಯೇಽರ್ಥೇ ಸಂಪ್ರಾಪ್ತಂ ಕೃಚ್ಛ್ರಮುತ್ತಮಮ್ ।
ಅವಾರಣೀಯೇ ದುಶ್ಚಿಂತ್ಯೇ ಯಥಾಭೂತಂ ಪ್ರಚಕ್ಷ್ವ ಮೇ ॥ ೫೩ ॥

ಆದ್ದರಿಂದ ಪರಿಹಾರ ಮಾಡಲು ಅಸಾಧ್ಯವಾದ, ಚಿಂತೆ ಮಾಡಿದರೂ ದುಃಖವನ್ನು ಕೊಡುವ ಶ್ರೇಷ್ಠವಾದ ಸಂಕಟವು ಪ್ರಾಪ್ತವಾಗಿದೆ. ಯುದ್ಧವು ಹೇಗೆ ನಡೆಯಿತೆಂದು ನನಗೆ ಹೇಳು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ದಶಮೋಽಧ್ಯಾಯಃ ॥

॥ ದ್ರೋಣಾಭಿಷೇಕಪರ್ವಣಿ ದಶಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಹತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹನ್ನೊಂದನೆಯ ಅಧ್ಯಾಯ

ದುರ್ಯೋಧನ ಪ್ರೇರಿತರಾದ ದ್ರೋಣರಿಂದ ಯುಧಿಷ್ಠಿರನನ್ನು ಜೀವ ಸಹಿತವಾಗಿ ಹಿಡಿಯುವ ಪ್ರತಿಜ್ಞೆ.

ಸಂಜಯಃ

ಸೇನಾಪತಿತ್ವಂ ಸಂಪ್ರಾಪ್ಯ ದ್ರೋಣೋ ಹರ್ಷಮುಪೇಯಿವಾನ್ ।
ಮಧ್ಯೇ ಸೈನ್ಯಸ್ಯ ರಾಜಾನಮಿದಂ ವಚನಮಬ್ರವೀತ್ ॥ ೧ ॥

ಸಂಜಯ– ಸೇನಾಪತಿ ಪಟ್ಟವನ್ನು ಪಡೆದ ದ್ರೋಣರು ಹರ್ಷಗೊಂಡರು. ಸೈನ್ಯದ ಮಧ್ಯದಲ್ಲಿ ರಾಜನಾದ ದುರ್ಯೋಧನನನ್ನು ಕುರಿತು ಈ ಮಾತನ್ನು ಆಡಿದರು.

ಯತ್ ಕೌರವಾಣಾಮೃಷಭಾದಾಪಗೇಯಾದನಂತರಮ್ ।
ಸೇನಾಪತ್ಯೇನ ಮಾಂ ರಾಜನ್ನದ್ಯ ಸತ್ಕೃತವಾನಸಿ ॥ ೨ ॥

ಅನುರೂಪಂ ಫಲಂ ತಸ್ಯ ಕರ್ಮಣೋ ಲಭ್ಯತಾಂ ತ್ವಯಾ ।
ಸದೃಶಂ ಕರ್ಮಣಸ್ತಸ್ಯ ಫಲಮಾಪ್ನುಹಿ ಪಾರ್ಥಿವ ।
ಕರೋಮಿ ಕಾಮಂ ಕಂ ತೇऽದ್ಯ ಪ್ರವೃಣೀಷ್ವ ಯಮಿಚ್ಛಸಿ ॥ ೩ ॥

ಕೌರವಶ್ರೇಷ್ಠರಾದ, ಗಂಗಾಸುತರಾದ ಭೀಷ್ಮರ ಅನಂತರ ಎಲೈ ರಾಜನೇ, ಈ ದಿನ ನೀನು ನನ್ನನ್ನು ಸೇನಾಪತಿಯನ್ನಾಗಿ ಮಾಡಿ ಗೌರವಿಸಿದ್ದೀಯೆ. ಈ ಕಾರ್ಯಕ್ಕೆ ಅನುಗುಣವಾದ ಫಲವು ನಿನ್ನಿಂದ ಹೊಂದಲ್ಪಡಲಿ. ಎಲೈ ರಾಜನೇ, ಈ ಕಾರ್ಯಕ್ಕೆ ಸದೃಶವಾದ ಫಲವನ್ನು ನೀನು ಹೊಂದುವವನಾಗು. ನಾನು ನಿನಗೆ ಈ ದಿನ ಯಾವ ಆಸೆಯನ್ನು ಪೂರೈಸಲಿ? ನೀನು ಬಯಸುವ ವರವನ್ನು ಕೇಳು.

ಸಂಜಯಃ

ತತೋ ದುರ್ಯೋಧನೋ ರಾಜಾ ಕರ್ಣದುಃಶಾಸನಾದಿಭಿಃ ।
ಸಮ್ಮಂತ್ರ್ಯೈವಾಚ ದುರ್ಧರ್ಷಮಾಚಾರ್ಯಂ ಜಯತಾಂ ವರಮ್ ॥

ಸಂಜಯ– ಆಗ ರಾಜನಾದ ದುರ್ಯೋಧನನು ಕರ್ಣ-ದುಶ್ಶಾಸನಾದಿಗಳ ಜೊತೆಯಲ್ಲಿ ಮಂತ್ರಾಲೋಚನೆಯನ್ನು ಮಾಡಿ ದುರ್ಧರ್ಷರೂ, ಜಯಿಸುವವರಲ್ಲಿ ಶ್ರೇಷ್ಠರೂ ಆದ ಆಚಾರ್ಯರನ್ನು ಕುರಿತು ಮಾತನಾಡಿದನು.

ದದಾಸಿ ಚೇದ್ ವರಂ ಮಹ್ಯಂ ಜೀವಗ್ರಾಹಂ ಯುಧಿಷ್ಠಿರಮ್ ।
ಗೃಹೀತ್ವಾ ರಥಿನಾಂ ಶ್ರೇಷ್ಠಂ ಮತ್ಸಕಾಶಮಿಹಾನಯ ॥ ೫ ॥

ನನಗೆ ವರವನ್ನು ಕೊಡುವುದಾದರೆ ರಥಿಶ್ರೇಷ್ಠನಾದ ಯುಧಿಷ್ಠಿರನನ್ನು ಜೀವಸಹಿತನಾಗಿ ಹಿಡಿದು ಇಲ್ಲಿ ನನ್ನ ಸಮೀಪಕ್ಕೆ ತನ್ನಿ.

ಇಚ್ಛೇಯಂ ವೈ ಮಹಾರಾಜಂ ಧರ್ಮಾತ್ಮಾನಂ ಯುಧಿಷ್ಠಿರಮ್ ।
ಭ್ರಾತೄಣಾಂ ಪಶ್ಯತಾಮೇವ ಜೀವಗ್ರಾಹೇಣ ಮೇ ದ್ವಿಜ ।
ಪ್ರೀಣಾಮ್ಯನೇನ ಕಾರ್ಯೇಣ ಸಸುಹೃಜ್ಜನಬಾಂಧವಃ ॥ ೬ ॥

ಎಲೈ ಬ್ರಾಹ್ಮಣರೇ, ಸೋದರರು ನೋಡುತ್ತಿರುವಂತೆಯೇ ಧರ್ಮಾತ್ಮನಾದ, ಮಹಾರಾಜನಾದ ಯುಧಿಷ್ಠಿರನನ್ನು ಜೀವಸಹಿತವಾಗಿ ಹಿಡಿಯುವುದನ್ನು ನಾನು ಬಯಸುವೆನು. ನಾನು ನನ್ನ ಸುಹೃಜ್ಜನ ಮತ್ತು ಬಾಂಧವರೊಡನೆ ಈ ಕಾರ್ಯದಿಂದ ಸಂತೋಷಗೊಳ್ಳುವೆನು.

ಸಂಜಯಃ

ತತಃ ಕುರೂಣಾಮಾಚಾರ್ಯಃ ಶ್ರುತ್ವಾ ಪುತ್ರಸ್ಯ ತೇ ವಚಃ ।
ಸೇನಾಂ ಪ್ರಹರ್ಷಯನ್ ಸರ್ವಾಮಿದಂ ವಚನಮಬ್ರವೀತ್ ॥ ೭ ॥

ಸಂಜಯ– ಆಗ ಕುರುಗಳ ಆಚಾರ್ಯರಾದ ದ್ರೋಣರು ನಿನ್ನ ಪುತ್ರನ ಮಾತನ್ನು ಕೇಳಿ ಎಲ್ಲ ಸೈನ್ಯಕ್ಕೂ ಸಂತೋಷವನ್ನುಂಟು ಮಾಡುತ್ತಾ ಈ ಮಾತನ್ನು ಆಡಿದರು.

ಧನ್ಯಃ ಕುಂತೀಸುತೋ ರಾಜನ್ ಯಸ್ಯ ಗ್ರಹಣಮಿಚ್ಛಸಿ ।
ನ ವಧಂ ತಸ್ಯ ದುರ್ಧರ್ಷ ವರಮದ್ಯ ಪ್ರಯಾಚಸೇ ॥ ೮ ॥

ಎಲೈ ರಾಜನೇ, ಯಾವನ ಗ್ರಹಣವನ್ನು ಬಯಸುವಿಯೋ ಅಂತಹ ಕುಂತೀಪುತ್ರನು ಧನ್ಯನಾದವನು. ಏಕೆಂದರೆ ಎಲೈ ದುರ್ಧರ್ಷನೇ, ನೀನು ಏತಕ್ಕೆ ಅವನ ವಧೆಯನ್ನು ವರವಾಗಿ ಕೇಳುತ್ತಿಲ್ಲ.

ಕಿಮಥಂ ಚ ನರವ್ಯಾಘ್ರ ನ ವಧಂ ತಸ್ಯ ಕಾಂಕ್ಷಸೇ ।
ನಾಶಂಸಸೇ ಕ್ರಿಯಾಮೇತಾಂ ಮಯಿ ದುರ್ಯೋಧನ ಧ್ರುವಮ್ ॥೯॥

ಎಲೈ ನರವ್ಯಾಘ್ರನೇ, ಅವನ ವಧೆಯನ್ನು ನೀನು ಏಕೆ ಬಯಸುವುದಿಲ್ಲ? ಎಲೈ ದುರ್ಯೋಧನನೇ, ನಾನು ಅಂತಹ ಕಾರ್ಯವನ್ನು ಮಾಡಬೇಕೆಂದು ನೀನು ಖಂಡಿತವಾಗಿಯೂ ಆಶಿಸುವುದಿಲ್ಲ.

ಆಹೋಸ್ವಿದ್ ಧರ್ಮರಾಜಸ್ಯ ದ್ವೇಷ್ಟಾ ಕಶ್ಚಿನ್ನ ವಿದ್ಯತೇ ।
ತಮಿಚ್ಛಸಿ ತ್ವಂ ಜೀವಂತಂ ಕುಲಂ ರಕ್ಷಸಿ ಚಾತ್ಮನಃ ॥ ೧೦ ॥

ಅಥವಾ ಧರ್ಮರಾಜನನ್ನು ದ್ವೇಷಿಸುವವನು ಯಾವನೂ ಇಲ್ಲ. ಆದ್ದರಿಂದ ನೀನು ಅವನು ಜೀವಂತವಾಗಿರುವುದನ್ನು ಬಯಸಿ ನಿನ್ನ ಕುಲವನ್ನು ರಕ್ಷಿಸುತ್ತಿದ್ದೀಯೆ!

ಅಥವಾ ಭರತಶ್ರೇಷ್ಠ ನಿರ್ಜಿತ್ಯ ಯುಧಿ ಪಾಂಡವಾನ್ ।
ರಾಜ್ಯಾಂಶಂ ಪ್ರತಿ ದತ್ವಾ ಚ ಸೌಭ್ರಾತ್ರಂ ಕರ್ತುಮಿಚ್ಛಸಿ ॥ ೧೧ ॥

ಎಲೈ ಭರತಶ್ರೇಷ್ಠನೇ, ಅಥವಾ ನೀನು ಯುದ್ಧದಲ್ಲಿ ಪಾಂಡವರನ್ನು ಗೆದ್ದು, ಅವರಿಗೆ ಅವರ ರಾಜ್ಯಭಾಗವನ್ನು ಕೊಟ್ಟು, ನಿನ್ನ ಒಳ್ಳೆಯ ಸಹೋದರ ಭಾವವನ್ನು ತೋರಿಸಲು ಬಯಸುತ್ತಿದ್ದೀಯೆ!

ಧನ್ಯಃ ಕುಂತೀಸುತೋ ರಾಜಾ ಸುಜಾತಾ ತಸ್ಯ ಧೀಮತಃ ।
ಅಜಾತಶತ್ರುತಾ ಯಸ್ಯ ಯೇನ ಸಂಶ್ಲಿಷ್ಯತೇ ಭವಾನ್ ॥ ೧೨ ॥

ರಾಜನಾದ ಕುಂತೀಪುತ್ರನಾದ ಯುಧಿಷ್ಠಿರನು ಧನ್ಯನಾದವನು. ಮೇಧಾವಿಯಾದ ಅವನ ಅಜಾತಶತ್ರುತ್ವವೂ ಸಹ ಈಗ ಚೆನ್ನಾಗಿ ವ್ಯಕ್ತವಾಗಿದೆ. ಏಕೆಂದರೆ ನೀನು ಅವನ ಜೊತೆಯಲ್ಲಿ ಸ್ನೇಹವನ್ನು ಹೊಂದಿದ್ದೀಯೆ (ಎಂದು ಹೇಳಿದರು).

ಸಂಜಯಃ

ದ್ರೋಣೇನ ಚೈವಮುಕ್ತಸ್ಯ ತವ ಪುತ್ರಸ್ಯ ಭಾರತ ।
ಸಹಸಾ ನಿಃಸೃತೋ ಭಾವೋ ಯೋಽಸ್ಯ ನಿತ್ಯಂ ಪ್ರವರ್ತತೇ ॥ ೧೩ ॥

ಸಂಜಯ– ಎಲೈ ಭಾರತನೇ, ದ್ರೋಣರಿಂದ ಹೀಗೆ ಹೇಳಲ್ಪಟ್ಟ ನಿನ್ನ ಪುತ್ರನಿಂದ ಅವನ ಮನಸ್ಸಿನಲ್ಲಿ ಯಾವಾಗಲೂ ಇರುವ ಅಭಿಪ್ರಾಯವು ತಕ್ಷಣ ಹೊರಬಿದ್ದಿತು.

ನಾಕಾರೋ ಗೂಹಿತುಂ ಶಕ್ಯೋ ಬೃಹಸ್ಪತಿಸಮೈರಪಿ ।
ತಸ್ಮಾತ್ ತವ ಸುತೋ ರಾಜನ್ ಪ್ರಹೃಷ್ಟೋ ವಾಕ್ಯಮಬ್ರವೀತ್ ॥ ೧೪ ॥

ಬೃಹಸ್ಪತಿಗೆ ಸಮರಾದವರೂ ಸಹ ತಮ್ಮ ಹೃದಯದ ಅಭಿಪ್ರಾಯವನ್ನು ಮುಚ್ಚಿಡಲು ಸಾಧ್ಯವಿಲ್ಲ. ಎಲೈ ರಾಜನೇ, ಆದ್ದರಿಂದ ನಿನ್ನ ಪುತ್ರನು ಸಂತೋಷಗೊಂಡು ಮಾತನಾಡಿದನು.

ವಧೇ ಕುಂತೀಸುತಸ್ಯಾಜಾವಾಚಾರ್ಯ ನ ಜಯೋ ಮಮ ।
ಹತೇ ಯುಧಿಷ್ಠಿರೇ ಪಾರ್ಥೋ ಹನ್ಯಾತ್ ಸರ್ವಾನ್ ಹಿ ನೋ ಧ್ರುವಮ್ ॥

ಆಚಾರ್ಯರೇ, ಕುಂತೀಸುತನ ವಧೆಯಿಂದ ನನಗೆ ಜಯವುಂಟಾಗುವುದಿಲ್ಲ. ಯುಧಿಷ್ಠಿರನು ಹತನಾದರೆ ಅರ್ಜುನನು ನಮ್ಮೆಲ್ಲರನ್ನೂ ಖಂಡಿತವಾಗಿ ಕೊಂದಾನು!

ನೈವ ಶಕ್ಯೋ ರಣೇ ಸರ್ವೈರ್ನಿರ್ಹಂತುಮಮರೈರಪಿ ॥ ೧೬ ॥

ಯದಿ ಸರ್ವೇ ಹನಿಷ್ಯಂತೇ ಪಾಂಡವಾಃ ಸಸುತಾ ಮೃಧೇ ।
ತತಃ ಕೃತ್ಸ್ನಂ ವಶೇ ಕೃತ್ವಾ ನಿಃಶೇಷಂ ನೃಪಮಂಡಲಮ್ ॥ ೧೭ ॥

ಸಸಾಗರವನಾಂ ಸ್ಫೀತಾಂ ವಿಜಿತ್ಯ ವಸುಧಾಮಿಮಾಮ್ ।
ವಿಷ್ಣುರ್ದಾಸ್ಯತಿ ಕೃಷ್ಣಾಯೈ ಕುಂತ್ಯೈ ವಾ ಪುರುಷೋತ್ತಮಃ ॥ ೧೮ ॥

ಅರ್ಜುನನನ್ನು ಯುದ್ಧದಲ್ಲಿ ಕೊಲ್ಲಲು ದೇವತೆಗಳಿಗೂ ಸಾಧ್ಯವಿಲ್ಲ. ಪಾಂಡವರೆಲ್ಲರೂ ತಮ್ಮ ಪುತ್ರರ ಜೊತೆಯಲ್ಲಿ ಯುದ್ಧದಲ್ಲಿ ಹತರಾದರೆ ಆಗ ಪುರುಷೋತ್ತಮನಾದ ವಿಷ್ಣುವು ರಾಜರ ಸಮೂಹವನ್ನೆಲ್ಲಾ ನಿಶ್ಶೇಷವಾಗಿ ನಾಶ ಮಾಡಿ ಎಲ್ಲವನ್ನೂ ತನ್ನ ವಶವನ್ನಾಗಿ ಮಾಡಿಕೊಂಡು, ಸಾಗರದಿಂದ ಸಹಿತವಾದ, ಈ ಸಂಪದ್ಯುಕ್ತವಾದ ಭೂಮಿಯನ್ನು ಗೆದ್ದು ದ್ರೌಪದಿಗೆ ಅಥವಾ ಕುಂತಿಗೆ ಕೊಡುವನು.

ಯದ್ಯೇಷ ಚೈಷಾಂ ಶೇಷಃ ಸ್ಯಾತ್ ಸ ಏವಾಸ್ಮಾನ್ನ ಶೇಷಯೇತ್ ।
ಸತ್ಯಪ್ರತಿಜ್ಞೋ ತ್ವಾನೀತೇ ಪುನರ್ದ್ಯೂತೇನ ನಿರ್ಜಿತೇ ॥ ೧೯ ॥

ತಸ್ಮಿನ್ ಜೀವತಿ ಚಾನೀತೇ ಹ್ಯುಪಾಯೈರ್ಬಹುಭಿಃ ಕೃತೈಃ ।
ಪುನರ್ಯಾಸ್ಯಂತ್ಯರಣ್ಯಾಯ ಕೌಂತೇಯಾಸ್ತಮನುವ್ರತಾಃ ॥ ೨೦ ॥

ಒಂದು ಪಕ್ಷ ಪಾಂಡವರ ಸಮೂಹದಲ್ಲಿ ಯಾವನಾದರೂ ಉಳಿದರೆ ಅವನೇ ನಮ್ಮನ್ನು ನಿಶ್ಶೇಷವಾಗಿ ನಾಶಮಾಡುವನು. ಸತ್ಯಪ್ರತಿಜ್ಞೆಯುಳ್ಳ ಯುಧಿಷ್ಠಿರನನ್ನು ಜೀವ ಸಹಿತವಾಗಿ ಹಿಡಿದು, ಅನೇಕ ಉಪಾಯಗಳನ್ನು ಮಾಡಿ, ಪುನಃ ದ್ಯೂತದಲ್ಲಿ ಅವನನ್ನು ಸೋಲಿಸಿದರೆ ಅವನನ್ನು ಅನುಸರಿಸುವ ಪಾಂಡವರೆಲ್ಲರೂ ಪುನಃ ಅರಣ್ಯಕ್ಕೆ ಹೋಗುವರು.

ಸೋಽಯಂ ಮಮ ಜಯೋ ನಿತ್ಯೋ ದೀರ್ಘಕಾಲಂ ಭವಿಷ್ಯತಿ ।
ಅತೋ ನ ವಧಮಿಚ್ಛಾಮಿ ಧರ್ಮರಾಜಸ್ಯ ಕರ್ಹಿಚಿತ್ ॥ ೨೧ ॥

ಆಗ ಈ ನನ್ನ ಜಯವು ದೀರ್ಘಕಾಲ ಸ್ಥಾಯಿಯೂ ಮತ್ತು ನಿತ್ಯವೂ ಆಗುವುದು. ಆದ್ದರಿಂದ ಯಾವ ರೀತಿಯಿಂದಲೂ ಧರ್ಮರಾಜನ ವಧೆಯನ್ನು ಬಯಸುವುದಿಲ್ಲ.

ಸಂಜಯಃ

ತಸ್ಯ ಜಿಹ್ಮಮಭಿಪ್ರಾಯಂ ಜ್ಞಾತ್ವಾ ದ್ರೋಣೋಽರ್ಥತತ್ತ್ವವಿತ್ ।
ತಂ ವರಂ ಸಾಂತರಂ ತಸ್ಮೈ ದದೌ ಸಂಚಿಂತ್ಯ ಬುದ್ಧಿಮಾನ್ ॥ ೨೨ ॥

ಸಂಜಯ– ಅರ್ಥತತ್ತ್ವವನ್ನು ತಿಳಿದ ದ್ರೋಣರು ಅವನ ಕುಟಿಲ ಅಭಿಪ್ರಾಯವನ್ನು ತಿಳಿದು, ಮೇಧಾವಿಗಳಾದ ಅವರು ಚೆನ್ನಾಗಿ ಯೋಚಿಸಿ ಅವನಿಗೆ ಪ್ರತಿಬಂಧಕ ಸಹಿತವಾದ ಆ ವರವನ್ನು ಕೊಟ್ಟರು.

ನ ಚೇದ್ ಯುಧಿಷ್ಠಿರಂ ವೀರಃ ಪಾಲಯೇದರ್ಜುನೋ ಯುಧಿ ।
ಮನ್ಯಸ್ವ ಪಾಂಡವಶ್ರೇಷ್ಠಮಾನೀತಂ ವಶಮಾತ್ಮನಃ ॥ ೨೩ ॥

ಯುದ್ಧದಲ್ಲಿ ವೀರನಾದ ಅರ್ಜುನನು ಯುಧಿಷ್ಠಿರನನ್ನು ರಕ್ಷಿಸದಿದ್ದರೆ ನಿನ್ನ ವಶಕ್ಕೆ ಪಾಂಡವ ಶ್ರೇಷ್ಠನಾದ ಯುಧಿಷ್ಠಿರನನ್ನು ತಂದಿದ್ದೇನೆ ಎಂದು ತಿಳಿ.

ನ ಹಿ ಪಾರ್ಥೋ ರಣೇ ಯತ್ತಃ ಶಕ್ಯೋ ದೇವಾಸುರೈರಪಿ ।
ಪ್ರತ್ಯುದ್ಯಾತುಮತಸ್ತಾತ ನೈತಸ್ಮಾದ್ದರ್ಷಯಾಮ್ಯಹಮ್ ॥ ೨೪ ॥

ಎಲೈ ಪ್ರೀತಿಪಾತ್ರನೇ, ಯುದ್ಧದಲ್ಲಿ ಸನ್ನದ್ಧನಾದ ಅರ್ಜುನನನ್ನು ದೇವಾಸುರರೂ ಎದುರಿಸಲಾರರು. ಆದ್ದರಿಂದ ಇದರಿಂದ (ಅರ್ಜುನನನ್ನು ಸೋಲಿಸಿ) ನಾನು ನಿನ್ನನ್ನು ಸಂತೋಷಪಡಿಸಲಾರೆ.

ಅಸಂಶಯಂ ಸ ಶಿಷ್ಯೋ ಮೇ ಮತ್ಪೂರ್ವಃ ಶಸ್ತ್ರಕರ್ಮಣಿ ।
ತರುಣಃ ಸುಕೃತೀ ಯುಕ್ತ ಏಕಾಯನಗತಶ್ಚ ಸಃ ॥ ೨೫ ॥

ನಿಸ್ಸಂಶಯವಾಗಿ ಅವನು ನನ್ನ ಶಿಷ್ಯ. ಶಸ್ತ್ರವಿದ್ಯೆಯಲ್ಲಿ ನಾನೇ ಅವನಿಗೆ ಮೊದಲನೆಯ ಗುರು. ಅವನು ತರುಣನಾದವನು, ಪುಣ್ಯಶಾಲಿಯಾದವನು, ಎಚ್ಚರಿಕೆಯಿಂದ ಇರುವವನು ಮತ್ತು ನನ್ನ ಜೊತೆಯಲ್ಲಿ ಒಟ್ಟಿಗೆ ಕುಳಿತವನು.

ಅಸ್ತ್ರಾಣೀಂದ್ರಾಚ್ಚ ರುದ್ರಾಚ್ಚ ಭೂಯಾಂಸಿ ಸಮವಾಪ್ತವಾನ್ ।
ಅಮರ್ಷಿತಶ್ಚ ತೇ ರಾಜನ್ ಸತತಂ ಮರ್ಷಯಾಮ್ಯಹಮ್ ॥ ೨೬ ॥

ಅವನು ಇಂದ್ರನಿಂದಲೂ ಮತ್ತು ರುದ್ರನಿಂದಲೂ ಅನೇಕ ಅಸ್ತ್ರಗಳನ್ನು ಪಡೆದಿದ್ದಾನೆ. ಎಲೈ ರಾಜನೇ, ನಿನ್ನ ಮೇಲೆ ಅವನು ರೋಷವನ್ನು ಹೊಂದಿದ್ದಾನೆ. ಅವನನ್ನು ನಾನು ಯಾವಾಗಲೂ ಸಹಿಸುತ್ತೇನೆ.

ಸ ತ್ವಪಕ್ರಮ್ಯತಾಂ ಯುದ್ಧಾದ್ ಯೇನೋಪಾಯೇನ ಶಕ್ಯತೇ ।
ಅಪನೀತೇ ತತಃ ಪಾರ್ಥೇ ಧರ್ಮರಾಜೋ ಜಿತಸ್ತ್ವಯಾ ॥ ೨೭ ॥

ಯಾವುದಾದರೂ ಉಪಾಯದಿಂದ ಅವನನ್ನು ಯುದ್ಧಸ್ಥಳದಿಂದ ಬೇರೆ ಕಡೆಗೆ ಕರೆದುಕೊಂಡು ಹೋಗಿ. ಅವನು ಬೇರೆ ಕಡೆಗೆ ಎಳೆದೊಯ್ಯಲ್ಪಟ್ಟರೆ ಧರ್ಮರಾಜನನ್ನು ನೀನು ಗೆದ್ದಿದ್ದೀಯೆ (ಎಂದು ತಿಳಿ).

ಗ್ರಹಣಂ ಹಿ ವಧಾತ್ ತಸ್ಯ ಧರ್ಮರಾಜಸ್ಯ ಮನ್ಯಸೇ ।
ಅನೇನೈವಾಭ್ಯುಪಾಯೇನ ಧ್ರುವಂ ಗ್ರಹಣಮೇಷ್ಯತಿ ॥ ೨೮ ॥

ನೀನು ಅವನ ವಧೆಗಿಂತಲೂ ಗ್ರಹಣವನ್ನೇ ಶ್ರೇಷ್ಠವೆಂದು ತಿಳಿದಿದ್ದೀಯೆ. ಈ ಉಪಾಯದಿಂದ ಅವನ ಗ್ರಹಣವು ಖಂಡಿತವಾಗಿ ಸಾಧ್ಯವಾಗುತ್ತದೆ.

ಅಹಂ ಗೃಹೀತ್ವಾ ರಾಜಾನಂ ಸತ್ಯವಾದಿನಮಾಹವೇ ।
ಆನಯಿಷ್ಯಾಮಿ ತೇ ರಾಜನ್ ವಶಮದ್ಯ ನ ಸಂಶಯಃ ॥ ೨೯ ॥

ಯದಿ ಸ್ಥಾಸ್ಯತಿ ಸಂಗ್ರಾಮೇ ಮುಹೂರ್ತಮಪಿ ಮೇಽಗ್ರತಃ ।
ಅಪನೀತೇ ನರವ್ಯಾಘ್ರೇ ಕುಂತೀಪುತ್ರೇ ಧನಂಜಯೇ ॥ ೩೦ ॥

ನರವ್ಯಾಘ್ರನಾದ, ಕುಂತೀಪುತ್ರನಾದ ಧನಂಜಯನು ದೂರ ಸರಿಸಲ್ಪಟ್ಟು ಯುಧಿಷ್ಠಿರನು ಯುದ್ಧದಲ್ಲಿ ನನ್ನ ಎದುರಿಗೆ ಒಂದು ಮುಹೂರ್ತದ ಕಾಲವಾದರೂ ಇರುವುದಾದರೆ ಎಲೈ ರಾಜನೇ, ನಾನು ಸತ್ಯವಾದಿಯಾದ ಆ ರಾಜನನ್ನು ಯುದ್ಧದಲ್ಲಿ ಹಿಡಿದು ಈ ದಿನ ನಿನ್ನ ವಶನನ್ನಾಗಿ ಮಾಡುವೆನು. ಇದರಲ್ಲಿ ಸಂಶಯವಿಲ್ಲ.

ಫಲ್ಗುನಸ್ಯ ಸಮಕ್ಷಂ ತು ನಹಿ ಶಕ್ಯೋ ಯುಧಿಷ್ಠಿರಃ ।
ಗ್ರಹೀತುಂ ಸಮರೇ ರಾಜನ್ ಸೇಂದ್ರೈರಪಿ ಸುರಾಸುರೈಃ ॥ ೩೧ ॥

ಎಲೈ ರಾಜನೇ, ಅರ್ಜುನನ ಎದುರಿನಲ್ಲಿ ಮಾತ್ರ ಇಂದ್ರನಿಂದ ಸಹಿತರಾದ ಸುರಾಸುರರಿಂದಲೂ ಯುಧಿಷ್ಠಿರನನ್ನು ಹಿಡಿಯಲು ಸಾಧ್ಯವಿಲ್ಲ.

ಸಂಜಯಃ

ಏವಮುಕ್ತೇ ತದಾ ತಸ್ಮಿನ್ ಯುದ್ಧೇ ದೇವಾಸುರೋಪಮೇ ।
ಸಾಂತರಂ ತು ಪ್ರತಿಜ್ಞಾತೇ ರಾಜ್ಞೋ ದ್ರೋಣೇನ ನಿಗ್ರಹೇ ।
ಗೃಹೀತಮೇವಾಮನ್ಯಂತ ತವ ಪುತ್ರಾಃ ಸುಬಾಲಿಶಾಃ ॥ ೩೨ ॥

ಸಂಜಯ– ದ್ರೋಣರು ಹೀಗೆ ಹೇಳುತ್ತಿರಲು, ಆಗ ಧರ್ಮರಾಜನನ್ನು ನಿಗ್ರಹಿಸುವ ವಿಷಯದಲ್ಲಿ ಒಂದು ಪ್ರತಿಬಂಧಕವನ್ನು ಇಟ್ಟು ಪ್ರತಿಜ್ಞೆಯನ್ನು ಮಾಡುತ್ತಿರಲು, ಅತ್ಯಂತ ಬಾಲಿಶರಾದ ನಿನ್ನ ಪುತ್ರರು ಯುಧಿಷ್ಠಿರನು ಸೆರೆಹಿಡಿಯಲ್ಪಟ್ಟಿದ್ದಾನೆ ಎಂದೇ ತಿಳಿದರು.

ತತೋ ದುರ್ಯೋಧನಶ್ಚಾಪಿ ಗ್ರಹಣಂ ಪಾಂಡವಸ್ಯ ತತ್ ।
ಸ್ಕಂಧಾವರೇಷು ಸರ್ವೇಷು ಯಥಾಸ್ಥಾನೇಷು ಮಾರಿಷ ।
ಸೈನ್ಯಸ್ಥಾನೇಷು ಸರ್ವೇಷು ಘೋಷಯಾಮಾಸ ಪಾರ್ಥಿವಃ ॥ ೩೩ ॥

ಎಲೈ ಪೂಜ್ಯನೇ, ಆಗ ದುರ್ಯೋಧನನು ಯುಧಿಷ್ಠಿರನ ಆ ಗ್ರಹಣವನ್ನು ತನ್ನ ಎಲ್ಲ ಸೈನ್ಯಶಿಬಿರಗಳಲ್ಲಿಯೂ, ಎಲ್ಲ ಸೈನ್ಯಸ್ಥಾನಗಳಲ್ಲಿಯೂ ಮತ್ತು ಉಳಿದ ಸ್ಥಾನಗಳಲ್ಲಿಯೂ ಘೋಷಣೆ ಮಾಡಿಸಿದನು.

ಪಾಂಡವೇಷು ಚ ಸಾಪೇಕ್ಷಂ ದ್ರೋಣಂ ಜಾನಾತಿ ತೇ ಸುತಃ ।
ತತಃ ಪ್ರತಿಜ್ಞಾಸ್ಥೈರ್ಯಾರ್ಥಂ ಸ ಮಂತ್ರೋ ಬಹುಲೀಕೃತಃ ॥ ೩೪ ॥

ನಿನ್ನ ಪುತ್ರನು, ದ್ರೋಣರು ಪಾಂಡವರಲ್ಲಿ ಸ್ನೇಹವುಳ್ಳವರು ಎಂದು ತಿಳಿದಿದ್ದಾನೆ. ಆದ್ದರಿಂದ ಅವರ ಪ್ರತಿಜ್ಞೆಯನ್ನು ದೃಢಪಡಿಸಲು ಅವನು ಆ ಮಂತ್ರಾಲೋಚನೆಯನ್ನು ಎಲ್ಲ ಕಡೆಗಳಲ್ಲಿಯೂ ಹರಡಿದನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಏಕಾದಶೋಽಧ್ಯಾಯಃ ॥

॥ ದ್ರೋಣಾಭಿಷೇಕಪರ್ವಣಿ ಏಕಾದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಹನ್ನೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹನ್ನೆರಡನೆಯ ಅಧ್ಯಾಯ

ದ್ರೋಣರ ಪ್ರತಿಜ್ಞೆಯನ್ನು ಕೇಳಿದ ಯುಧಿಷ್ಠಿರನಿಗೆ
ಅರ್ಜುನನಿಂದ ಆಶ್ವಾಸನೆ. ಯುದ್ಧಾರಂಭ.

ಸಂಜಯಃ

ತತಸ್ತೇ ಸೈನಿಕಾಃ ಶ್ರುತ್ವಾ ತಂ ಯುಧಿಷ್ಠಿರನಿಗ್ರಹಮ್ ।
ಸಿಂಹನಾದರವಾಂಶ್ಚಕ್ರುರ್ಬಾಣಶಂಖಿರವೈಃ ಸಹ ॥ ೧ ॥

ಸಂಜಯ– ಆಗ (ಕೌರವ) ಸೈನಿಕರು ಯುಧಿಷ್ಠಿರನ ಗ್ರಹಣದ ವಿಷಯದ ಪ್ರತಿಜ್ಞೆಯನ್ನು ಕೇಳಿ ಶಂಖ-ಬಾಣ ಶಬ್ದಗಳ ಜೊತೆಯಲ್ಲಿ ಸಿಂಹನಾದವನ್ನು ಮಾಡಿದರು.

ತತಃ ಸರ್ವಂ ಯಥಾವೃತ್ತಂ ಧರ್ಮರಾಜೇನ ಭಾರತ ।
ಆಪ್ತೈಶ್ಚಾರೈಃ ಪರಿಜ್ಞಾತಂ ಭಾರದ್ವಾಜಚಿಕೀರ್ಷಿತಮ್ ॥ ೨ ॥

ಎಲೈ ಭಾರತನೇ, ನಡೆದ ಎಲ್ಲ ವೃತ್ತಾಂತವನ್ನು ಮತ್ತು ದ್ರೋಣರ ಪ್ರತಿಜ್ಞೆಯನ್ನು ಆಪ್ತರಾದ ಗೂಢಚಾರರಿಂದ ಯುಧಿಷ್ಠಿರನು ತಿಳಿದನು.

ತತಃ ಸರ್ವಾನ್ ಸಮಾನಾಯ್ಯ ಭ್ರಾತೄನ್ ಸೈನ್ಯಾಂಶ್ಚ ಭಾರತ ।
ಅಬ್ರವೀದ್ ಧರ್ಮರಾಜೋ ವೈ ಧನಂಜಯಮಿದಂ ವಚಃ ॥ ೩ ॥

ಎಲೈ ಭಾರತನೇ, ಆಗ ಎಲ್ಲ ಸಹೋದರರನ್ನು ಮತ್ತು ಸೈನ್ಯವನ್ನು ಕರೆದು ಧರ್ಮರಾಜನು ಅರ್ಜುನನನ್ನು ಕುರಿತು ಈ ಮಾತನ್ನು ಆಡಿದನು.

ಶ್ರುತಂ ತೇ ಪುರುಷವ್ಯಾಘ್ರ ದ್ರೋಣಸ್ಯ ಚ ಚಿಕೀರ್ಷಿತಮ್ ।
ಯಥಾ ತನ್ನ ಭವೇತ್ ಸತ್ಯಂ ತಥಾ ನೀತಿರ್ವಿಧೀಯತಾಮ್ ॥ ೪ ॥

ಪುರುಷವ್ಯಾಘ್ರನೇ, ದ್ರೋಣರ ಸಂಕಲ್ಪವನ್ನು ನೀನು ಕೇಳಿದ್ದೀಯೆ. ಅದು ಸತ್ಯವಾಗದಂತೆ ನೀತಿಯನ್ನು ರೂಪಿಸುವವನಾಗು.

ಸಾಂತರಂ ತು ಪ್ರತಿಜ್ಞಾತಂ ದ್ರೋಣೇನಾಮಿತ್ರಕರ್ಶಿನಾ ।
ತಚ್ಚಾಂತರಮಮೋಘೇಷೌ ತ್ವಯಿ ತೇನ ಸಮಾಹಿತಮ್ ॥ ೫ ॥

ಶತ್ರುಘಾತಕರಾದ ದ್ರೋಣರು ಅಂತರ ಸಹಿತವಾಗಿ (ಒಂದು ಷರತ್ತಿನ ಜೊತೆಯಲ್ಲಿ) ಪ್ರತಿಜ್ಞೆಯನ್ನು ಮಾಡಿದ್ದಾರೆ. ಅವರು ಆ ಅಂತರವನ್ನು ಅಮೋಘ ಬಾಣಗಳುಳ್ಳ ನಿನ್ನಲ್ಲಿ ಇಟ್ಟಿದ್ದಾರೆ.

ತತ್ ತ್ವಮದ್ಯ ಮಹಾಬಾಹೋ ಯುದ್ಧ್ಯಸ್ವ ಮದನಂತರಮ್ ।
ಯಥಾ ದುರ್ಯೋಧನಃ ಕಾಮಂ ನೇಮಂ ದ್ರೋಣಾದವಾಪ್ನುಯಾತ್ ॥

ಎಲೈ ಮಹಾಬಾಹುವೇ, ದುರ್ಯೋಧನನು ದ್ರೋಣರಿಂದ ತನ್ನ ಈ ಕಾಮವನ್ನು ಪಡೆಯದಂತೆ ನೀನು ಈ ದಿನ ನನ್ನ ಸಮೀಪದಲ್ಲಿಯೇ ಯುದ್ಧವನ್ನು ಮಾಡು (ಎಂದು ಹೇಳಿದನು).

ಅರ್ಜುನಃ

ಯಥಾ ನ ಮೇ ವಧಃ ಕಾರ್ಯ ಆಚಾರ್ಯಸ್ಯ ಕಥಂಚನ ।
ತಥಾ ತವ ಪರಿತ್ಯಾಗೋ ನ ಮೇ ರಾಜಂಶ್ಚಿಕೀರ್ಷಿತಃ ॥ ೭ ॥

ಅರ್ಜುನ– ಹೇಗೆ ನಾನು ಆಚಾರ್ಯರ ವಧೆಯನ್ನು ಯಾವ ರೀತಿಯಿಂದಲೂ ಮಾಡುವುದಿಲ್ಲವೋ ಹಾಗೆಯೇ ಎಲೈ ರಾಜನೇ, ಹಾಗೆ ನಿನ್ನ ಪರಿತ್ಯಾಗವನ್ನು ಮಾಡಲೂ ಬಯಸುವುದಿಲ್ಲ.

ಅದ್ಯೈವ ಪಾಂಡವ ಪ್ರಾಣಾನುತ್ಸ್ಯಜೇಯಮಹಂ ಯುಧಿ ।
ಪ್ರತಿಯಾತಾऽಹಮಾಚಾರ್ಯಂ ತ್ವಾಂ ನ ಜಹ್ಯಾಂ ಕಥಂಚನ ॥ ೮ ॥

ಎಲೈ ಪಾಂಡವನೇ, ನಾನು ಆಚಾರ್ಯರ ಮೇಲೆ ಹೋಗಿ ಯುದ್ಧವನ್ನು ಮಾಡುವುದಾದರೆ ಈ ದಿನವೇ ಪ್ರಾಣಗಳನ್ನು ಬಿಟ್ಟೇನು. ನಾನು ಯಾವ ರೀತಿಯಿಂದಲೂ ನಿನ್ನನ್ನು ಬಿಟ್ಟು ದೂರ ಹೋಗುವುದಿಲ್ಲ.

ತ್ವಾಂ ನಿಗೃಹ್ಯಾಹವೇ ರಾಜನ್ ಧಾರ್ತರಾಷ್ಟ್ರೋ ಯಮಿಚ್ಛತಿ ।
ನ ಸ ತಂ ಜೀವಲೋಕೇऽಸ್ಮಿನ್ ಕಾಮಂ ಪ್ರಾಪ್ತಾ ಕಥಂಚನ ॥ ೯ ॥

ಎಲೈ ರಾಜನೇ, ನಿನ್ನನ್ನು ಹಿಡಿದು ದುರ್ಯೋಧನನು ಯಾವ ಕಾಮವನ್ನು ಪಡೆಯಲು ಬಯಸುತ್ತಾನೆಯೋ ಈ ಜೀವಲೋಕದಲ್ಲಿ ಅವನು ಅದನ್ನು ಯಾವ ರೀತಿಯಿಂದಲೂ ಹೊಂದುವುದಿಲ್ಲ.

ಪ್ರಪತೇದ್ ದ್ಯೌಃ ಸನಕ್ಷತ್ರಾ ಪೃಥಿವೀ ಶಕಲೀಭವೇತ್ ।
ನ ತ್ವಾಂ ದ್ರೋಣೋ ನಿಗೃಹ್ಣೀಯಾತ್ ಜೀವಮಾನೇ ಮಯಿ ಧ್ರುವಮ್ ॥

ನಕ್ಷತ್ರದಿಂದ ಕೂಡಿದ ಆಕಾಶವು ಬಿದ್ದೀತು, ಭೂಮಿಯು ಪುಡಿಯಾದೀತು, ಆದರೆ ನಾನು ಬದುಕಿರುವಾಗ ದ್ರೋಣರು ಖಂಡಿತವಾಗಿ ನಿನ್ನನ್ನು ಹಿಡಿಯಲಾರರು.

ಯದಿ ತಸ್ಯ ರಣೇ ಸಾಹ್ಯಂ ಕುರುತೇ ವಜ್ರಭೃತ್ ಸ್ವಯಮ್ ।
ವಿಷ್ಣುರ್ವಾ ಸಹಿತೋ ದೇವೈರ್ನ ತ್ವಾಂ ಪ್ರಾಪ್ತಾ ಹ್ಯಸೌ ರಣೇ ॥ ೧೧ ॥

ಒಂದು ಪಕ್ಷ ಯುದ್ಧದಲ್ಲಿ ವಜ್ರಧರನಾದ ಇಂದ್ರನೇ ಆಗಲಿ ಅಥವಾ ದೇವತೆಗಳಿಂದ ಸಹಿತನಾದ ವಿಷ್ಣುವೇ ಆಗಲಿ, ಅವರಿಗೆ ಸಹಾಯವನ್ನು ಮಾಡಿದರೂ ಅವರು ರಣರಂಗದಲ್ಲಿ ನಿನ್ನನ್ನು ಹೊಂದುವುದಿಲ್ಲ.

ಮಯಿ ಜೀವತಿ ರಾಜೇಂದ್ರ ನ ಭಯಂ ಕರ್ತುಮರ್ಹಸಿ ।
ದ್ರೋಣಾದಸ್ತ್ರಭೃತಾಂ ಶ್ರೇಷ್ಠಾತ್ ಸರ್ವಶಸ್ತ್ರಭೃತಾಮಪಿ ॥ ೧೨ ॥

ಎಲೈ ರಾಜೇಂದ್ರನೇ, ನಾನು ಬದುಕಿರುವಾಗ ಅಸ್ತ್ರಧಾರಿಗಳಲ್ಲಿ ಮತ್ತು ಸರ್ವಶಸ್ತ್ರಧಾರಿಗಳಲ್ಲಿ ಶ್ರೇಷ್ಠರಾದ ದ್ರೋಣರಿಂದ ನೀನು ಭಯಪಡುವ ಕಾರಣವಿಲ್ಲ.

ಅನ್ಯಚ್ಚ ಬ್ರೂಯಾಂ ರಾಜೇಂದ್ರ ಪ್ರತಿಜ್ಞಾ ಮಮ ನಿತ್ಯದಾ ।
ನ ಸ್ಮರಾಮ್ಯನೃತಂ ಪ್ರೋಕ್ತಂ ನ ಸ್ಮರಾಮಿ ಪರಾಜಯಮ್ ।
ನ ಸ್ಮರಾಮಿ ಪ್ರತಿಶ್ರುತ್ಯ ಕಿಂಚಿದಪ್ಯನೃತಂ ಕೃತಮ್ ॥ ೧೩ ॥

ಎಲೈ ರಾಜೇಂದ್ರನೇ, ನನ್ನ ಇನ್ನೊಂದು ನಿತ್ಯವಾದ ಪ್ರತಿಜ್ಞೆಯನ್ನು ಹೇಳುವೆನು– ನಾನು ಎಂದಾದರೂ ಸುಳ್ಳು ಹೇಳಿದುದು ನನ್ನ ಸ್ಮರಣೆಯಲ್ಲಿಲ್ಲ. ಪರಾಜಯವೂ ನನ್ನ ಸ್ಮರಣೆಯಲ್ಲಿಲ್ಲ. ಪ್ರತಿಜ್ಞೆಯನ್ನು ಮಾಡಿ ಅದನ್ನು ವ್ಯರ್ಥಗೊಳಿಸಿರುವುದನ್ನೂ ನಾನು ಸ್ಮರಿಸುವುದಿಲ್ಲ.

ಸಂಜಯಃ

ತತಃ ಶಂಖಾಶ್ಚ ಭೇರ್ಯಶ್ಚ ಮೃದಂಗಾಶ್ಚ ಸಹಸ್ರಶಃ ।
ಪ್ರಾವಾದ್ಯಂತ ಮಹಾರಾಜ ಪಾಂಡವಾನಾಂ ನಿವೇಶನೇ ॥ ೧೪ ॥

ಸಿಂಹನಾದಶ್ಚ ಸಂಜಾತಃ ಪಾಂಡವಾನಾಂ ಮಹಾತ್ಮನಾಮ್ ।
ಧನುಜ್ಯಾತಳಶಬ್ದಶ್ಚ ಗಗನಸ್ಪೃಕ್ ಸುಭೈರವಃ ॥ ೧೫ ॥

ಸಂಜಯ– ಎಲೈ ಮಹಾರಾಜನೇ, ಆಗ ಪಾಂಡವರ ಬಿಡಾರಗಳಲ್ಲಿ ಶಂಖ-ಭೇರಿ ಮತ್ತು ಮೃದಂಗಗಳು ಸಹಸ್ರ ಸಂಖ್ಯೆಯಲ್ಲಿ ಊದಲ್ಪಟ್ಟವು ಮತ್ತು ಬಾರಿಸಲ್ಪಟ್ಟವು. ಮಹಾತ್ಮರಾದ ಪಾಂಡವರ ಸಿಂಹನಾದವು ಉಂಟಾಯಿತು. ಧನುಸ್ಸುಗಳ ಮತ್ತು ತಳಗಳ ಭಯಂಕರವಾದ ಶಬ್ದವು ಆಕಾಶವನ್ನು ಮುಟ್ಟಿತು.

ತಂ ಶ್ರುತ್ವಾ ಶಂಖನಿಘೋರ್ಷಂ ಪಾಂಡವಸ್ಯ ಮಹೌಜಸಃ ।
ತ್ವದೀಯೇಷ್ವಪಿ ಸೈನ್ಯೇಷು ವಾದಿತ್ರಾಣ್ಯಭಿಜಘ್ನಿರೇ ॥ ೧೬ ॥

ಮಹಾಸಾಮರ್ಥ್ಯಶಾಲಿಯಾದ ಯುಧಿಷ್ಠಿರನ ಶಂಖಘೋಷವನ್ನು ಕೇಳಿ ನಿನ್ನ ಸೈನ್ಯಗಳಲ್ಲಿಯೂ ವಾದ್ಯಗಳು ಬಾರಿಸಲ್ಪಟ್ಟವು.

ತತೋ ವ್ಯೂಢಾನ್ಯನೀಕಾನಿ ತವ ತೇಷಾಂ ಚ ಭಾರತ ।
ಶನೈರುಪೇಯುರನ್ಯೋನ್ಯಂ ಯೋತ್ಸ್ಯಮಾನಾನಿ ಸಂಯುಗೇ ॥ ೧೭ ॥

ಎಲೈ ಭಾರತನೇ, ಅನಂತರ ವ್ಯೂಹಗೊಂಡ ನಿನ್ನ ಮತ್ತು ಅವರ ಸೈನ್ಯಗಳು ಯುದ್ಧ ಮಾಡುವವುಗಳಾಗಿ ರಣರಂಗದಲ್ಲಿ ಪರಸ್ಪರವಾಗಿ ನಿಧಾನವಾಗಿ ಸಂಧಿಸಿದವು.

ತತಃ ಪ್ರವವೃತೇ ಯುದ್ಧಂ ತುಮುಲಂ ಲೋಮಹರ್ಷಣಮ್ ।
ಪಾಂಡವಾನಾಂ ಕುರೂಣಾಂ ಚ ದ್ರೋಣಪಾಂಚಾಲಯೋರಪಿ ॥ ೧೮ ॥

ಅನಂತರ ಪಾಂಡವರಿಗೂ-ಕುರುಗಳಿಗೂ ಮತ್ತು ದ್ರೋಣರಿಗೂ-ಪಾಂಚಾಲರಿಗೂ ರೋಮಾಂಚಕಾರಿಯಾದ ತೀವ್ರವಾದ ಯುದ್ಧವು ಪ್ರಾರಂಭವಾಯಿತು.

ಯತಮಾನಾಃ ಪ್ರಯತ್ನೇನ ದ್ರೋಣಾನೀಕವಿಶಾತನೇ ।
ನ ಶೇಕುಃ ಸೃಂಜಯಾ ರಾಜಂಸ್ತದ್ದಿ ದ್ರೋಣೇನ ಪಾಲಿತಮ್ ॥ ೧೯ ॥

ಎಲೈ ರಾಜನೇ, ದ್ರೋಣಸೈನ್ಯವನ್ನು ಭೇದಿಸಲು ಪ್ರಯತ್ನಪಟ್ಟರೂ ಹಾಗೆ ಮಾಡಲು ಸೃಂಜಯರು ಸಮರ್ಥರಾಗಲಿಲ್ಲ. ಏಕೆಂದರೆ ಅದು ದ್ರೋಣರಿಂದ ರಕ್ಷಿಸಲ್ಪಟ್ಟಿದ್ದಿತು.

ತಥೈವ ತವ ಪುತ್ರಸ್ಯ ರಥೋದಾರಾಃ ಪ್ರಹಾರಿಣಃ ।
ನ ಶೇಕುಃ ಪಾಂಡವೀಂ ಸೇನಾಂ ಪಾಲ್ಯಮಾನಾಂ ಕಿರೀಟಿನಾ ॥ ೨೦ ॥

ಹಾಗೆಯೇ ಪ್ರಹಾರಿಗಳಾದ ನಿನ್ನ ರಥಶ್ರೇಷ್ಠರು ಅರ್ಜುನನಿಂದ ರಕ್ಷಿಸಲ್ಪಡುವ ಪಾಂಡವ ಸೇನೆಯನ್ನು ಭೇದಿಸಲು ಸಮರ್ಥರಾಗಲಿಲ್ಲ.

ತೇ ಸೇನೇ ಸ್ತಿಮಿತೇ ಆಸ್ತಾಂ ಸಂಪ್ರಸಕ್ತೇ ಪರಸ್ಪರಮ್ ।
ಸಮಾಸಕ್ತೇ ಯಥಾ ನಕ್ತಂ ವನರಾಜೀ ಸುಪುಷ್ಪಿತೇ ॥ ೨೧ ॥

ಪರಸ್ಪರವಾಗಿ ಸಂಧಿಸಿದ ಈ ಎರಡು ಸೈನ್ಯಗಳು ಒಂದನ್ನೊಂದು ಸಂಧಿಸಿ, ರಾತ್ರಿಯ ಕಾಲದಲ್ಲಿ ಚೆನ್ನಾಗಿ ಪುಷ್ಪಭರಿತವಾದ ಎರಡು ವನಶ್ರೇಣಿಗಳಂತೆ ನಿಶ್ಚಲವಾಗಿದ್ದವು.

ತತೋ ರುಗ್ಮರಥೋ ರಾಜನ್ನರ್ಕೇಣೇವ ವಿರಾಜತಾ ।
ವರೂಥಿನೀಂ ವಿನಿಷ್ಪತ್ಯ ವ್ಯಚರತ್ ಪೃತನಾಂತರೇ ॥ ೨೨ ॥

ಆಗ ಎಲೈ ರಾಜನೇ, ರುಗ್ಮರಥರಾದ ದ್ರೋಣರು ಸೂರ್ಯನಂತೆ ವಿರಾಜಿಸುವ ತಮ್ಮ ರಥದಿಂದ ಪಾಂಡವರ ಸೈನ್ಯದ ಮಧ್ಯದಲ್ಲಿ ಪ್ರವೇಶಿಸಿ ಸಂಚರಿಸಿದರು.

ತಮುದ್ಯಂತಂ ರಥೇನೈಕಮಾಶುಕಾರಿಣಮಾಹವೇ ।
ಅನೇಕಮಿವ ಸಂತ್ರಾಸಾನ್ನೇನಿರೇ ಪಾಂಡುಸೃಂಜಯಾಃ ॥ ೨೩ ॥

ಯುದ್ಧದಲ್ಲಿ ಕ್ಷಿಪ್ರಕಾರಿಗಳಾದ, ಒಂದು ರಥದಿಂದ ವಿಜೃಂಭಿಸುತ್ತಿದ್ದ ಅವರೊಬ್ಬರನ್ನು ನೋಡಿ ಹೆದರಿದ ಪಾಂಡು-ಸೃಂಜಯರು ಅವರನ್ನು ಅನೇಕರೆಂದು ತಿಳಿದರು.

ತೇನ ಮುಕ್ತಾಃ ಶರಾ ಘೋರಾ ವಿಚೇರುಃ ಸರ್ವತೋದಿಶಮ್ ।
ತ್ರಾಸಯಂತೋ ಮಹಾರಾಜ ಪಾಂಡವೇಯಸ್ಯ ವಾಹಿನೀಮ್ ॥ ೨೪ ॥

ಮಹಾರಾಜನೇ, ಅವರು ಪ್ರಯೋಗಿಸಿದ ಬಲವಾದ ಬಾಣಗಳು ಪಾಂಡವ ಸೈನ್ಯವನ್ನು ಭಯಗೊಳಿಸುತ್ತಾ ಎಲ್ಲ ದಿಕ್ಕುಗಳಲ್ಲಿಯೂ ಚಲಿಸಿದವು.

ಮಧ್ಯಂದಿನಮನುಪ್ರಾಪ್ತೋ ಗಭಸ್ತಿಶತಸಂವೃತಃ ।
ಯಥಾऽದೃಶ್ಯತ ಘರ್ಮಾಂಶುಸ್ತಥಾ ದ್ರೋಣೋऽಪ್ಯದೃಶ್ಯತ ॥ ೨೫ ॥

ನೂರು ಕಿರಣಗಳಿಂದ ಸಂವೃತನಾದ ಮಧ್ಯದಿನಗತನಾದ, ಉಷ್ಣಕಿರಣನಾದ ಸೂರ್ಯನಂತೆ ದ್ರೋಣರು ಕಂಡುಬಂದರು.

ನ ಚೈನಂ ಪಾಂಡವೇಯಾನಾಂ ಕಶ್ಚಿಚ್ಚಕ್ನೋತಿ ಭಾರತ ।
ವೀಕ್ಷಿತುಂ ಸಮರೇ ಕ್ರುದ್ಧಂ ಮಹೇಂದ್ರಮಿವ ದಾನವಾಃ ॥ ೨೬ ॥

ಎಲೈ ಭಾರತನೇ, ದಾನವರು ಯುದ್ಧದಲ್ಲಿ ಕೋಪಗೊಂಡ ಮಹೇಂದ್ರನು ನೋಡಲು ಸಾಧ್ಯವಾಗದಂತೆ ಪಾಂಡವರ ಸೈನ್ಯದಲ್ಲಿ ಯಾವನೂ ದ್ರೋಣರನ್ನು ನೋಡಲು ಸಮರ್ಥನಾಗಲಿಲ್ಲ.

ಮೋಹಯಿತ್ವಾ ತತಃ ಸೇನಾಂ ಭಾರದ್ವಾಜಃ ಪ್ರತಾಪವಾನ್ ।
ಧೃಷ್ಟದ್ಯುಮ್ನಬಲಂ ತೂರ್ಣಂ ವ್ಯಧಮನ್ನಿಶಿತೈಃ ಶರೈಃ ॥ ೨೭ ॥

ಪ್ರತಾಪಶಾಲಿಯಾದ ದ್ರೋಣರು ಪಾಂಡವರ ಸೇನೆಗೆ ಹೀಗೆ ಮೋಹವನ್ನು ಉಂಟುಮಾಡಿ, ಧೃಷ್ಟದ್ಯುಮ್ನನ ಸೈನ್ಯವನ್ನು ಶೀಘ್ರವಾಗಿ ನಿಶಿತವಾದ ಬಾಣಗಳಿಂದ ನಾಶಮಾಡಿದರು.

ಸ ದಿಶಃ ಸರ್ವತೋ ಗತ್ವಾ ಸಂವೃತ್ಯ ಖಮಜಿಹ್ಮಗೈಃ ।
ಪಾರ್ಷತೋ ಯತ್ರ ತತ್ಸೈನಾಮಭನತ್ ಪಾಂಡುವಾಹಿನೀಮ್ ॥ ೨೮ ॥

ಅನಂತರ ಪಾಂಡವರಿಗೂ-ಕುರುಗಳಿಗೂ ಮತ್ತು ದ್ರೋಣರಿಗೂ-ಪಾಂಚಾಲರಿಗೂ ರೋಮಾಂಚಕಾರಿಯಾದ ತೀವ್ರವಾದ ಯುದ್ಧವು ಪ್ರಾರಂಭವಾಯಿತು.

ಯತಮಾನಾಃ ಪ್ರಯತ್ನೇನ ದ್ರೋಣಾನೀಕವಿಶಾತನೇ ।
ನ ಶೇಕುಃ ಸೃಂಜಯಾ ರಾಜಂಸ್ತದ್ದಿ ದ್ರೋಣೇನ ಪಾಲಿತಮ್ ॥ ೧೯ ॥

ಎಲೈ ರಾಜನೇ, ದ್ರೋಣಸೈನ್ಯವನ್ನು ಭೇದಿಸಲು ಪ್ರಯತ್ನಪಟ್ಟರೂ ಹಾಗೆ ಮಾಡಲು ಸೃಂಜಯರು ಸಮರ್ಥರಾಗಲಿಲ್ಲ. ಏಕೆಂದರೆ ಅದು ದ್ರೋಣರಿಂದ ರಕ್ಷಿಸಲ್ಪಟ್ಟಿದ್ದಿತು.

ತಥೈವ ತವ ಪುತ್ರಸ್ಯ ರಥೋದಾರಾಃ ಪ್ರಹಾರಿಣಃ ।
ನ ಶೇಕುಃ ಪಾಂಡವೀಂ ಸೇನಾಂ ಪಾಲ್ಯಮಾನಾಂ ಕಿರೀಟಿನಾ ॥ ೨೦ ॥

ಹಾಗೆಯೇ ಪ್ರಹಾರಿಗಳಾದ ನಿನ್ನ ರಥಶ್ರೇಷ್ಠರು ಅರ್ಜುನನಿಂದ ರಕ್ಷಿಸಲ್ಪಡುವ ಪಾಂಡವ ಸೇನೆಯನ್ನು ಭೇದಿಸಲು ಸಮರ್ಥರಾಗಲಿಲ್ಲ.

ತೇ ಸೇನೇ ಸ್ತಿಮಿತೇ ಆಸ್ತಾಂ ಸಂಪ್ರಸಕ್ತೇ ಪರಸ್ಪರಮ್ ।
ಸಮಾಸಕ್ತೇ ಯಥಾ ನಕ್ತಂ ವನರಾಜೀ ಸುಪುಷ್ಪಿತೇ ॥ ೨೧ ॥

ಪರಸ್ಪರವಾಗಿ ಸಂಧಿಸಿದ ಈ ಎರಡು ಸೈನ್ಯಗಳು ಒಂದನ್ನೊಂದು ಸಂಧಿಸಿ, ರಾತ್ರಿಯ ಕಾಲದಲ್ಲಿ ಚೆನ್ನಾಗಿ ಪುಷ್ಪಭರಿತವಾದ ಎರಡು ವನಶ್ರೇಣಿಗಳಂತೆ ನಿಶ್ಚಲವಾಗಿದ್ದವು.

ತತೋ ರುಗ್ಮರಥೋ ರಾಜನ್ನರ್ಕವೇವ ವಿರಾಜತಾ ।
ವರೂಥಿನೀಂ ವಿನಿಷ್ಪತ್ಯ ವ್ಯಚರತ್ ಪೃತನಾಂತರೇ ॥ ೨೨ ॥

ಆಗ ಎಲೈ ರಾಜನೇ, ರುಗ್ಮರಥರಾದ ದ್ರೋಣರು ಸೂರ್ಯನಂತೆ ವಿರಾಜಿಸುವ ತಮ್ಮ ರಥದಿಂದ ಪಾಂಡವರ ಸೈನ್ಯದ ಮಧ್ಯದಲ್ಲಿ ಪ್ರವೇಶಿಸಿ ಸಂಚರಿಸಿದರು.

ತಮುದ್ಯಂತಂ ರಥೇನೈಕಮಾಶುಕಾರಿಣಮಾಹವೇ ।
ಅನೇಕಮಿವ ಸಂತ್ರಾಸಾನ್ನೇನಿರೇ ಪಾಂಡುಸೃಂಜಯಾಃ ॥ ೨೩ ॥

ಯುದ್ಧದಲ್ಲಿ ಕ್ಷಿಪ್ರಕಾರಿಗಳಾದ, ಒಂದು ರಥದಿಂದ ವಿಜೃಂಭಿಸುತ್ತಿದ್ದ ಅವರೊಬ್ಬರನ್ನು ನೋಡಿ ಹೆದರಿದ ಪಾಂಡು-ಸೃಂಜಯರು ಅವರನ್ನು ಅನೇಕರೆಂದು ತಿಳಿದರು.

ತೇನ ಮುಕ್ತಾಃ ಶರಾ ಘೋರಾ ವಿಚೇರುಃ ಸರ್ವತೋದಿಶಮ್ ।
ತ್ರಾಸಯಂತೋ ಮಹಾರಾಜ ಪಾಂಡವೇಯಸ್ಯ ವಾಹಿನೀಮ್ ॥ ೨೪ ॥

ಮಹಾರಾಜನೇ, ಅವರು ಪ್ರಯೋಗಿಸಿದ ಬಲವಾದ ಬಾಣಗಳು ಪಾಂಡವ ಸೈನ್ಯವನ್ನು ಭಯಗೊಳಿಸುತ್ತಾ ಎಲ್ಲ ದಿಕ್ಕುಗಳಲ್ಲಿಯೂ ಚಲಿಸಿದವು.

ಮಧ್ಯಂದಿನಮನುಪ್ರಾಪ್ತೋ ಗಭಸ್ತಿಶತಸಂವೃತಃ ।
ಯಥಾऽದೃಶ್ಯತ ಘರ್ಮಾಂಶುಸ್ತಥಾ ದ್ರೋಣೋऽಪ್ಯದೃಶ್ಯತ ॥ ೨೫ ॥

ನೂರು ಕಿರಣಗಳಿಂದ ಸಂವೃತನಾದ ಮಧ್ಯದಿನಗತನಾದ, ಉಷ್ಣಕಿರಣನಾದ ಸೂರ್ಯನಂತೆ ದ್ರೋಣರು ಕಂಡುಬಂದರು.

ನ ಚೈನಂ ಪಾಂಡವೇಯಾನಾಂ ಕಶ್ಚಿಚ್ಚಕ್ನೋತಿ ಭಾರತ ।
ವೀಕ್ಷಿತುಂ ಸಮರೇ ಕ್ರುದ್ಧಂ ಮಹೇಂದ್ರಮಿವ ದಾನವಾಃ ॥ ೨೬ ॥

ಎಲೈ ಭಾರತನೇ, ದಾನವರು ಯುದ್ಧದಲ್ಲಿ ಕೋಪಗೊಂಡ ಮಹೇಂದ್ರನು ನೋಡಲು ಸಾಧ್ಯವಾಗದಂತೆ ಪಾಂಡವರ ಸೈನ್ಯದಲ್ಲಿ ಯಾವನೂ ದ್ರೋಣರನ್ನು ನೋಡಲು ಸಮರ್ಥನಾಗಲಿಲ್ಲ.

ಮೋಹಯಿತ್ವಾ ತತಃ ಸೇನಾಂ ಭಾರದ್ವಾಜಃ ಪ್ರತಾಪವಾನ್ ।
ಧೃಷ್ಟದ್ಯುಮ್ನಬಲಂ ತೂರ್ಣಂ ವ್ಯಧಮನ್ನಿಶಿತೈಃ ಶರೈಃ ॥ ೨೭ ॥

ಪ್ರತಾಪಶಾಲಿಯಾದ ದ್ರೋಣರು ಪಾಂಡವರ ಸೇನೆಗೆ ಹೀಗೆ ಮೋಹವನ್ನು ಉಂಟುಮಾಡಿ, ಧೃಷ್ಟದ್ಯುಮ್ನನ ಸೈನ್ಯವನ್ನು ಶೀಘ್ರವಾಗಿ ನಿಶಿತವಾದ ಬಾಣಗಳಿಂದ ನಾಶಮಾಡಿದರು.

ಸ ದಿಶಃ ಸರ್ವತೋ ಗತ್ವಾ ಸಂವೃತ್ಯ ಖಮಜಿಹ್ಮಗೈಃ ।
ಪಾರ್ಷತೋ ಯತ್ರ ತತ್ಸೈನಾಮಭಿನತ್ ಪಾಂಡುವಾಹಿನೀಮ್ ॥ ೨೮ ॥

ಅನಂತರ ಪಾಂಡವರಿಗೂ-ಕುರುಗಳಿಗೂ ಮತ್ತು ದ್ರೋಣರಿಗೂ-ಪಾಂಚಾಲರಿಗೂ ರೋಮಾಂಚಕಾರಿಯಾದ ತೀವ್ರವಾದ ಯುದ್ಧವು ಪ್ರಾರಂಭವಾಯಿತು.

ಯತಮಾನಾಃ ಪ್ರಯತ್ನೇನ ದ್ರೋಣಾನೀಕವಿಶಾತನೇ ।
ನ ಶೇಕುಃ ಸೃಂಜಯಾ ರಾಜಂಸ್ತದ್ದಿ ದ್ರೋಣೇನ ಪಾಲಿತಮ್ ॥ ೧೯ ॥

ಎಲೈ ರಾಜನೇ, ದ್ರೋಣಸೈನ್ಯವನ್ನು ಭೇದಿಸಲು ಪ್ರಯತ್ನಪಟ್ಟರೂ ಹಾಗೆ ಮಾಡಲು ಸೃಂಜಯರು ಸಮರ್ಥರಾಗಲಿಲ್ಲ. ಏಕೆಂದರೆ ಅದು ದ್ರೋಣರಿಂದ ರಕ್ಷಿಸಲ್ಪಟ್ಟಿದ್ದಿತು.

ತಥೈವ ತವ ಪುತ್ರಸ್ಯ ರಥೋದಾರಾಃ ಪ್ರಹಾರಿಣಃ ।
ನ ಶೇಕುಃ ಪಾಂಡವೀಂ ಸೇನಾಂ ಪಾಲ್ಯಮಾನಾಂ ಕಿರೀಟಿನಾ ॥ ೨೦ ॥

ಹಾಗೆಯೇ ಪ್ರಹಾರಿಗಳಾದ ನಿನ್ನ ರಥಶ್ರೇಷ್ಠರು ಅರ್ಜುನನಿಂದ ರಕ್ಷಿಸಲ್ಪಡುವ ಪಾಂಡವ ಸೇನೆಯನ್ನು ಭೇದಿಸಲು ಸಮರ್ಥರಾಗಲಿಲ್ಲ.

ತೇ ಸೇನೇ ಸ್ತಿಮಿತೇ ಆಸ್ತಾಂ ಸಂಪ್ರಸಕ್ತೇ ಪರಸ್ಪರಮ್ ।
ಸಮಾಸಕ್ತೇ ಯಥಾ ನಕ್ತಂ ವನರಾಜೀ ಸುಪುಷ್ಪಿತೇ ॥ ೨೧ ॥

ಪರಸ್ಪರವಾಗಿ ಸಂಧಿಸಿದ ಈ ಎರಡು ಸೈನ್ಯಗಳು ಒಂದನ್ನೊಂದು ಸಂಧಿಸಿ, ರಾತ್ರಿಯ ಕಾಲದಲ್ಲಿ ಚೆನ್ನಾಗಿ ಪುಷ್ಪಭರಿತವಾದ ಎರಡು ವನಶ್ರೇಣಿಗಳಂತೆ ನಿಶ್ಚಲವಾಗಿದ್ದವು.

ತತೋ ರುಗ್ಮರಥೋ ರಾಜನ್ನರ್ಕೇಣೇವ ವಿರಾಜತಾ ।
ವರೂಥಿನೀಂ ವಿನಿಷ್ಪತ್ಯ ವ್ಯಚರತ್ ಪೃತನಾಂತರೇ ॥ ೨೨ ॥

ಆಗ ಎಲೈ ರಾಜನೇ, ರುಗ್ಮರಥರಾದ ದ್ರೋಣರು ಸೂರ್ಯನಂತೆ ವಿರಾಜಿಸುವ ತಮ್ಮ ರಥದಿಂದ ಪಾಂಡವರ ಸೈನ್ಯದ ಮಧ್ಯದಲ್ಲಿ ಪ್ರವೇಶಿಸಿ ಸಂಚರಿಸಿದರು.

ತಮುದ್ಯಂತಂ ರಥೇನೈಕಮಾಶುಕಾರಿಣಮಾಹವೇ ।
ಅನೇಕಮಿವ ಸಂತ್ರಾಸಾನ್ನೇನಿರೇ ಪಾಂಡುಸೃಂಜಯಾಃ ॥ ೨೩ ॥

ಯುದ್ಧದಲ್ಲಿ ಕ್ಷಿಪ್ರಕಾರಿಗಳಾದ, ಒಂದು ರಥದಿಂದ ವಿಜೃಂಭಿಸುತ್ತಿದ್ದ ಅವರೊಬ್ಬರನ್ನು ನೋಡಿ ಹೆದರಿದ ಪಾಂಡು-ಸೃಂಜಯರು ಅವರನ್ನು ಅನೇಕರೆಂದು ತಿಳಿದರು.

ತೇನ ಮುಕ್ತಾಃ ಶರಾ ಘೋರಾ ವಿಚೇರುಃ ಸರ್ವತೋದಿಶಮ್ ।
ತ್ರಾಸಯಂತೋ ಮಹಾರಾಜ ಪಾಂಡವೇಯಸ್ಯ ವಾಹಿನೀಮ್ ॥ ೨೪ ॥

ಮಹಾರಾಜನೇ, ಅವರು ಪ್ರಯೋಗಿಸಿದ ಬಲವಾದ ಬಾಣಗಳು ಪಾಂಡವ ಸೈನ್ಯವನ್ನು ಭಯಗೊಳಿಸುತ್ತಾ ಎಲ್ಲ ದಿಕ್ಕುಗಳಲ್ಲಿಯೂ ಚಲಿಸಿದವು.

ಮಧ್ಯಂದಿನಮನುಪ್ರಾಪ್ತೋ ಗಭಸ್ತಿಶತಸಂವೃತಃ ।
ಯಥಾऽದೃಶ್ಯತ ಘರ್ಮಾಂಶುಸ್ತಥಾ ದ್ರೋಣೋऽಪ್ಯದೃಶ್ಯತ ॥ ೨೫ ॥

ನೂರು ಕಿರಣಗಳಿಂದ ಸಂವೃತನಾದ ಮಧ್ಯದಿನಗತನಾದ, ಉಷ್ಣಕಿರಣನಾದ ಸೂರ್ಯನಂತೆ ದ್ರೋಣರು ಕಂಡುಬಂದರು.

ನ ಚೈನಂ ಪಾಂಡವೇಯಾನಾಂ ಕಶ್ಚಿಚ್ಚಕ್ಷೋತಿ ಭಾರತ ।
ವೀಕ್ಷಿತುಂ ಸಮರೇ ಕ್ರುದ್ಧಂ ಮಹೇಂದ್ರಮಿವ ದಾನವಾಃ ॥ ೨೬ ॥

ಎಲೈ ಭಾರತನೇ, ದಾನವರು ಯುದ್ಧದಲ್ಲಿ ಕೋಪಗೊಂಡ ಮಹೇಂದ್ರನು ನೋಡಲು ಸಾಧ್ಯವಾಗದಂತೆ ಪಾಂಡವರ ಸೈನ್ಯದಲ್ಲಿ ಯಾವನೂ ದ್ರೋಣರನ್ನು ನೋಡಲು ಸಮರ್ಥನಾಗಲಿಲ್ಲ.

ಮೋಹಯಿತ್ವಾ ತತಃ ಸೇನಾಂ ಭಾರದ್ವಾಜಃ ಪ್ರತಾಪವಾನ್ ।
ಧೃಷ್ಟದ್ಯುಮ್ನಬಲಂ ತೂರ್ಣಂ ವ್ಯಧಮನ್ನಿಶಿತೈಃ ಶರೈಃ ॥ ೨೭ ॥

ಪ್ರತಾಪಶಾಲಿಯಾದ ದ್ರೋಣರು ಪಾಂಡವರ ಸೇನೆಗೆ ಹೀಗೆ ಮೋಹವನ್ನು ಉಂಟುಮಾಡಿ, ಧೃಷ್ಟದ್ಯುಮ್ನನ ಸೈನ್ಯವನ್ನು ಶೀಘ್ರವಾಗಿ ನಿಶಿತವಾದ ಬಾಣಗಳಿಂದ ನಾಶಮಾಡಿದರು.

ಸ ದಿಶಃ ಸರ್ವತೋ ಗತ್ವಾ ಸಂವೃತ್ಯ ಖಮಜಿಹ್ಮಗೈಃ ।
ಪಾರ್ಷತೋ ಯತ್ರ ತತ್ಸೈನಾಮಭಿನತ್ ಪಾಂಡುವಾಹಿನೀಮ್ ॥ ೨೮ ॥

ಅವರು ಎಲ್ಲ ದಿಕ್ಕುಗಳಿಗೂ ಹೋಗಿ, ನೇರವಾಗಿ ಸಾಗುವ ಬಾಣಗಳಿಂದ ಆಕಾಶವನ್ನು ಆಚ್ಛಾದಿಸಿ, ಧೃಷ್ಟದ್ಯುಮ್ನನಿದ್ದ ಕಡೆಗೆ ಹೋಗಿ ಪಾಂಡವರ ಸೈನ್ಯವನ್ನು ಭೇದಿಸಿದರು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ದ್ವಾದಶೋಽಧ್ಯಾಯಃ ॥

॥ ದ್ರೋಣಾಭಿಷೇಕಪರ್ವಣಿ ದ್ವಾದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಹನ್ನೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹದಿಮೂರನೆಯ ಅಧ್ಯಾಯ

ದ್ವೈರಥ ಯುದ್ಧಗಳು ಮತ್ತು ಅಭಿಮನ್ಯುವಿನ ಪರಾಕ್ರಮ

ಸಂಜಯಃ

ತತಃ ಸ ಪಾಂಡವಾನೀಕೇ ಜನಯಂಸ್ತುಮುಲಂ ಭಯಮ್ ।
ವ್ಯಧಮತ್ ಪಾಂಡವಾನ್ ದ್ರೋಣೋ ದಹನ್ ಕಕ್ಷಮಿವಾನಲಃ ॥ ೧ ॥

ಸಂಜಯ– ಆಗ ಆ ದ್ರೋಣರು ಪಾಂಡವರ ಸೈನ್ಯಕ್ಕೆ ತೀವ್ರವಾದ ಭಯವನ್ನುಂಟು ಮಾಡುತ್ತಾ, ಅಗ್ನಿಯು ಹುಲ್ಲುಗಾವಲನ್ನು ಸುಡುವಂತೆ ಪಾಂಡವರ ಸೈನ್ಯವನ್ನು ಪುಡಿಮಾಡಿದರು.

ನಿರ್ದಹಂತಮನೀಕಾನಿ ಸಾಕ್ಷಾದಗ್ನಿಮಿವೋತ್ಥಿತಮ್ ।
ದೃಷ್ಟ್ವಾ ರುಗ್ಮರಥಂ ಸಂಖ್ಯೇ ಸಮಕಂಪಂತ ಸೃಂಜಯಾಃ ॥ ೨ ॥

ಪ್ರವೃದ್ಧವಾದ ಸಾಕ್ಷಾತ್ ಅಗ್ನಿಯಂತೆ ತಮ್ಮ ಸೈನ್ಯವನ್ನು ಯುದ್ಧದಲ್ಲಿ ಸುಡುತ್ತಿರುವ ರುಗ್ಮರಥರಾದ ದ್ರೋಣರನ್ನು ನೋಡಿ ಸೃಂಜಯರು ನಡುಗಿದರು.

ಸತತಂ ಚಾಸ್ಯಮಾನಸ್ಯ ಧನುಷೋಽಸ್ಯಾಶುಕಾರಿಣಃ ।
ಜ್ಯಾಘೋಷಃ ಶುಶ್ರುವೇಽತ್ಯರ್ಥಂ ವಿಸ್ಫೂರ್ಜಿತಮಿವಾಶನೇಃ ॥ ೩ ॥

ಸತತವಾಗಿ ಬಾಣಪ್ರಯೋಗವನ್ನು ಮಾಡುವ, ಶೀಘ್ರಕಾರಿಗಳಾದ ದ್ರೋಣರ ಧನುಸ್ಸಿನ ಜ್ಯಾಘೋಷವು ಸಿಡಿಲಿನ ಆರ್ಭಟದಂತೆ ತೀವ್ರವಾಗಿ ಕೇಳಿಬರುತ್ತಿದ್ದಿತು.

ರಥಿನಃ ಸಾದಿನಃ ಪತ್ತೀನ್ ದ್ವಿಪಾನ್ ದ್ವಿಪಗತಾನಪಿ ।
ರೌದ್ರಾ ಹಸ್ತವತಾ ಮುಕ್ತಾಃ ಪ್ರಮಥ್ನಂತಿ ಸ್ಮ ಸಾಯಕಾಃ ॥ ೪ ॥

ಪಳಗಿದ ಹಸ್ತವುಳ್ಳ ಅವರಿಂದ ಪ್ರಯೋಗಿಸಲ್ಪಟ್ಟ ಭಯಂಕರವಾದ ಬಾಣಗಳು ರಥಿಕರನ್ನು, ಅಶ್ವಾರೋಹಿಗಳನ್ನು, ಪದಾತಿಗಳನ್ನು, ಗಜಗಳನ್ನು ಮತ್ತು ಗಜಾರೋಹಿಗಳನ್ನು ಮರ್ದಿಸಿದವು.

ನಾನದ್ಯಮಾನಃ ಪರ್ಜನ್ಯಃ ಸಾಶನಿಃ ಶುಚಿಸಂಕ್ಷಯೇ ।
ಅಶ್ಮವರ್ಷಮಿವಾವರ್ಷತ್ ಪರೇಷಾಮಾದಧದ್ ಭಯಮ್ ॥ ೫ ॥

ಬೇಸಿಗೆಯು ಕಳೆದ ನಂತರ ಸಿಡಿಲಿನಿಂದ ಕೂಡಿದ ಮೋಡಗಳು ಪುನಃ ಪುನಃ ನಾದವನ್ನು ಮಾಡುತ್ತಾ ಕಲ್ಲಿನ ಮಳೆಯನ್ನು ಸುರಿಸಿದಂತೆ ದ್ರೋಣರು ಶತ್ರುಗಳಿಗೆ ಭಯವನ್ನುಂಟು ಮಾಡುತ್ತಾ ಬಾಣಗಳ ಮಳೆಯನ್ನು ಸುರಿಸಿದರು.

ವ್ಯಚರತ್ ಸ ದಿಶಃ ಸರ್ವಾಃ ಸೇನಾಂ ವಿಕ್ಷೋಭಯನ್ಮುಹುಃ ।
ವರ್ಧಯಾಮಾಸ ಸಂತ್ರಾಸಂ ಶತ್ರೂಣಾಮತಿಮಾನುಷಮ್ ॥ ೬ ॥

ಶತ್ರುಸೈನ್ಯವನ್ನು ವಿಕ್ಷೋಭಗೊಳಿಸುತ್ತಾ ಅವರು ಎಲ್ಲ ದಿಕ್ಕುಗಳಲ್ಲಿಯೂ ಸಂಚರಿಸಿದರು ಮತ್ತು ಶತ್ರುಗಳ ಅತಿಮಾನುಷವಾದ ಭಯವನ್ನು ಹೆಚ್ಚಿಸಿದರು.

ತಸ್ಯ ವಿದ್ಯುದಿವಾಭ್ರೇಷು ಚಾಪಂ ಹೇಮಪರಿಷ್ಕೃತಮ್ ।
ಭ್ರಾಜಮಾನಂ ರಥೇ ತಸ್ಮಿನ್ ದೃಶ್ಯತೇ ಸ್ಮ ಮಹಾಭಯಮ್ ।
ಭ್ರಮದ್ರಥಾಂಬುದೇ ತಸ್ಮಿನ್ ದೃಶ್ಯತೇ ಸ್ಮ ಮಹಾಪ್ರಭಮ್ ॥ ೭ ॥

ಅವರ ಆ ರಥದಲ್ಲಿ ಸುವರ್ಣಭೂಷಿತವಾದ, ಮಹಾಭಯವನ್ನುಂಟು ಮಾಡುವ ಅವರ ಧನುಸ್ಸು ಮೋಡಗಳಲ್ಲಿ ಮಿಂಚಿನಂತೆ ಶೋಭಿಸುವುದು ಕಂಡುಬಂದಿತು. ಸಂಚರಿಸುವ ರಥವೆಂಬ ಮೋಡದಲ್ಲಿ ಮಹಾಪ್ರಭೆಯುಳ್ಳ ಅವರ ಧನುಸ್ಸು ಕಂಡುಬರುತ್ತಿದ್ದಿತು.

ಸ ವೀರಃ ಸತ್ಯವಾಕ್ ಪ್ರಾಜ್ಞೋ ಧರ್ಮನಿತ್ಯೋ ದುರಾಸದಃ ।
ಯುದ್ಧಕಾಲೇ ಪ್ರಯತ್ನೇನ ರೌದ್ರೀಂ ಪ್ರಾಸ್ಯಂದಯನ್ನದೀಮ್ ॥ ೮ ॥

ಅಮರ್ಷಶೈಲಪ್ರಭವಾಂ ಶರವೇಗಮಹಾರವಾಮ್ ।
ಬಲೌಘೈಃ ಸರ್ವತಃ ಪೂರ್ಣಾಂ ವೀರವೃಕ್ಷಾಪಹಾರಿಣೀಮ್ ॥ ೯ ॥

ಶೋಣಿತೋದಾಂ ರಥಾವರ್ತಾಂ ಹಸ್ತ್ಯಶ್ವಕೃತರೋಧಸಮ್ ।
ಕವಚದ್ವೀಪಸಂಯುಕ್ತಾಂ ಮಾಂಸಪಂಕಸಮಾಕುಲಾಮ್ ॥ ೧೦ ॥

ವೀರರೂ, ಸತ್ಯವಚನರೂ, ಪ್ರಾಜ್ಞರೂ, ನಿತ್ಯವೂ ಧರ್ಮಶೀಲರೂ, ಶತ್ರುಗಳಿಂದ ಸಮೀಪಕ್ಕೆ ಬರಲೂ ಸಾಧ್ಯವಿಲ್ಲದವರೂ ಆದ ದ್ರೋಣರು ಯುದ್ಧಕಾಲದಲ್ಲಿ ಪ್ರಯತ್ನಪೂರ್ವಕವಾಗಿ ತಮ್ಮ ಕೋಪವೆಂಬ ಪರ್ವತದಿಂದ ಜನಿಸಿದ, ಶರವೇಗವೆಂಬ ಮಹಾಶಬ್ದವನ್ನು ಹೊಂದಿದ್ದ ಸೈನ್ಯಗಳೆಂಬಪ್ರವಾಹದಿಂದ ಎಲ್ಲ ಕಡೆಗಳಲ್ಲಿಯೂ ಪೂರ್ಣವಾದ, ವೀರರೆಂಬ ವೃಕ್ಷಗಳನ್ನು ಕೊಚ್ಚಿಕೊಂಡು ಹೋಗುವ, ರಕ್ತವೆಂಬ ಉದಕವುಳ್ಳ, ರಥಗಳೆಂಬ ಸುಳಿಗಳುಳ್ಳ, ಹಸ್ತಿ-ಅಶ್ವಗಳ ಶರೀರವೆಂಬ ತೀರವುಳ್ಳ, ಕವಚವೆಂಬ ದ್ವೀಪವುಳ್ಳ, ಮಾಂಸವೆಂಬ ಕೆಸರಿನಿಂದ ತುಂಬಿದ ಭಯಂಕರವಾದ ನದಿಯನ್ನು ಹರಿಸಿದರು.

ಮೇದೋಮಜ್ಜಾಸ್ಥಿಕಿತಾಮ್ ಉಷ್ಣೀಷಚಯಫೇನಿಲಾಮ್ ।
ಸಂಗ್ರಾಮರಜಸಾ ಪೂರ್ಣಾಮತ್ಯುಗ್ರಾಂ ವೀರಸೇವಿತಾಮ್ ॥ ೧೧ ॥

ನರನಾಗಾಶ್ವಕಲಿಲಾಂ ಶರವೇಗೌಘವಾಹಿನೀಮ್ ।
ಶರೀರದಾರುಸಂಘಾತಾಂ ಭುಜನಾಗಸಮಾಕುಲಾಮ್ ॥ ೧೨ ॥

ಉತ್ತಮಾಂಗೋಪಲಯುತಾಂ ನಿಸ್ತ್ರಿಂಶಝಷಸೇವಿತಾಮ್ ।
ರಥನಾಗಹ್ರದೋಪೇತಾಂ ನಾನಾಭರಣನೀರಜಾಮ್ ॥ ೧೩ ॥

ಮೇದಸ್ಸು, ಮಜ್ಜಾಮತ್ತು ಅಸ್ಥಿಗಳೆಂಬ ಮರಳುಳ್ಳ, ಉಷ್ಣೀಷಗಳ ಸಮೂಹವೆಂಬ ನೊರೆಯುಳ್ಳ, ಯುದ್ಧದಲ್ಲಿ ಎದ್ದ ಧೂಳಿನಿಂದ ತುಂಬಿದ, ವೀರರಿಂದ ಸೇವಿತವಾದ, ಬಹಳ ಉಗ್ರವಾದ, ಪದಾತಿ-ಗಜಾಶ್ವಗಳಿಂದ ನಿಬಿಡವಾದ, ಶರವೇಗಗಳೆಂಬ ಪ್ರವಾಹವನ್ನು ಹೊಂದಿದ, ಶರೀರವೆಂಬ ಮರಗಳಿಂದ ಕೂಡಿದ, ಭುಜಗಳೆಂಬ ಸರ್ಪಗಳಿಂದ ಕೂಡಿದ, ಶಿರಸ್ಸುಗಳೆಂಬ ಕಲ್ಲುಗಳಿಂದ ಕೂಡಿದ, ಖಡ್ಗಗಳೆಂಬ ಮಕರಗಳಿಂದ ಕೂಡಿದ, ರಥ-ಗಜಗಳೆಂಬ ಮಡುಗಳಿಂದ ಕೂಡಿದ,

ನಾನಾಭರಣವೆಂಬ ಕಮಲಗಳಿಂದ ಕೂಡಿದ (ಭಯಂಕರವಾದ ನದಿಯನ್ನು ಹರಿಸಿದರು).

ಮಹಾರಥಶತಾವರ್ತಾಂ ಭೂಮಿರೇಣೂರ್ಮಿಮಾಲಿನೀಮ್ ।
ಮಹಾವೀರ್ಯವತಾಂ ಸಂಖೇ ಸುತರಾಂ ಭೀರುದುಸ್ತರಾಮ್ ॥ ೧೪ ॥

ಶರೀರಶತಸಂಬಾಧಾಂ ಗೃಧ್ರಕಂಕನಿಷೇವಿತಾಮ್ ।
ಮಹಾರಥಸಹಸ್ರಾಣಿ ನಯಂತೀಂ ಯಮಸಾದನಮ್ ॥ ೧೫ ॥

ಶೂರವ್ಯಾಲಮೃಗಾಕೀರ್ಣಾಂ ಪ್ರಾಣಿವಾರಿಜಸೇವಿತಾಮ್ ।
ಛಿನ್ನಚ್ಛತ್ರಮಹಾಹಂಸಾಂ ಮುದ್ಗರೋಡುಪಸಂಕುಲಾಮ್ ॥ ೧೬ ॥

ಮಹಾರಥರೆಂಬ ನೂರಾರು ಸುಳಿಗಳನ್ನುಳ್ಳ, ಭೂಮಿಯ ಧೂಳೆಂಬ ಅಲೆಗಳ ಮಾಲೆಗಳನ್ನುಳ್ಳ, ಭೀರುಗಳು ದಾಟಲು ಸಾಧ್ಯವಿಲ್ಲದ, ಮಹಾಪರಾಕ್ರಮಶಾಲಿಗಳು ಮಾತ್ರ ಯುದ್ಧದಲ್ಲಿ ದಾಟಬಹುದಾದ, ನೂರಾರು ಶರೀರಗಳಿಂದ ಕೂಡಿದ, ಹದ್ದು-ಕಂಕ ಮೊದಲಾದ ಪಕ್ಷಿಗಳಿಂದ ಸೇವಿತವಾದ, ಸಾವಿರಾರು ಮಹಾರಥರನ್ನು ಯಮಲೋಕಕ್ಕೆ ಸೆಳೆದುಕೊಂಡು ಹೋಗುವ, ಶೂರರೆಂಬ ವ್ಯಾಳಮೃಗಗಳಿಂದ ತುಂಬಿದ, ಪ್ರಾಣಿಗಳೆಂಬ ಕಮಲಗಳಿಂದ ಕೂಡಿದ, ಕತ್ತರಿಸಲ್ಪಟ್ಟ ಛತ್ರವೆಂಬ ಮಹಾಹಂಸಗಳಿಂದ ಕೂಡಿದ, ಮುದ್ಗರಗಳೆಂಬ ಚಂದ್ರನಿಂದ ಕೂಡಿದ (ಘೋರವಾದ ನದಿಯನ್ನು ಹರಿಸಿದರು).

ಚಕ್ರಕೂರ್ಮಾಂ ಗದಾನಕ್ರಾಂ ಶರಶಂಕುಝಷಾಕುಲಾಮ್ ।
ಬಲಗೃಧ್ರಸೃಗಾಲಾನಾಂ ಘೋರೈಃ ಸಂಘೈರ್ನಿಷೇವಿತಾಮ್ ॥ ೧೭ ॥

ನಿಹತಾನ್ ಪ್ರಾಣಿನಃ ಸಂಖೇ ದ್ರೋಣೇನ ಬಲಿನಾ ರಣೇ ।
ವಹಂತೀಂ ಪಿತೃಲೋಕಾಯ ಶತಶೋ ರಾಜಸತ್ತಮ ॥ ೧೮ ॥

ಶರೀರಶತಸಂಬಾಧಾಂ ಕೇಶಶೈವಲಶಾದ್ವಲಾಮ್ ನದೀಂ ।
ಪ್ರಾಸ್ಯಂದಯದ್ ದ್ರೋಣಃ ಭೀರೂಣಾಂ ಭಯವರ್ಧಿನೀಮ್ ॥ ೧೯ ॥

ಚಕ್ರಗಳೆಂಬ ಕೂರ್ಮಗಳನ್ನುಳ್ಳ, ಗಜಗಳೆಂಬ ಮೊಸಳೆಗಳನ್ನುಳ್ಳ, ಶರ-ಶಂಕುಗಳೆಂಬ ಮೀನುಗಳನ್ನು ಹೊಂದಿದ, ಬಲ-ಗುಧ್ರ ಮತ್ತು ನದಿಗಳ

ಘೋರವಾದ ಸಮೂಹಗಳಿಂದ ಸೇವಿತವಾದ, ಬಲಿಷ್ಠರಾದ ದ್ರೋಣರಿಂದ ರಣರಂಗದಲ್ಲಿ ನಿಧನರಾದ ಪ್ರಾಣಿಗಳನ್ನು ನೂರಾರು ಸಂಖ್ಯೆಯಲ್ಲಿ ಯಮಲೋಕಕ್ಕೆ ಸೆಳೆದುಕೊಂಡು ಹೋಗುವ, ನೂರಾರು ಶರೀರಗಳಿಂದ ನಿಬಿಡವಾದ, ಕೇಶಗಳೆಂಬ ಪಾಚಿ ಮತ್ತು ಮೃದುಪ್ರದೇಶಗಳನ್ನು ಹೊಂದಿದ, ಭೀರುಗಳಿಗೆ ಭಯವನ್ನು ಹೆಚ್ಚಿಸುವ ಘೋರವಾದ ನದಿಯನ್ನು ಎಲೈ ರಾಜಶ್ರೇಷ್ಠನೇ, ದ್ರೋಣರು ಹರಿಸಿದರು.

ಸಾ ತದಾ ಪ್ರಾಣಿನಃ ಸಂಖೇ ದ್ರೋಣೇನ ಬಲಿನಾ ಕೃತಾ ।
ಉವಾಹ ಶತಶೋ ರಾಜನ್ ಪಿತೃಲೋಕಾಯ ವಾಹಿನೀ ॥ ೨೦ ॥

ಎಲೈ ರಾಜನೇ, ಯುದ್ಧದಲ್ಲಿ ಬಲಿಷ್ಠರಾದ ದ್ರೋಣರು ಸೃಷ್ಟಿಸಿದ ಆ ನದಿಯು ನೂರಾರು ಸಂಖ್ಯೆಯಲ್ಲಿ ಪ್ರಾಣಿಗಳನ್ನು ಯಮಲೋಕಕ್ಕೆ ಎಳೆದುಕೊಂಡು ಹೋಯಿತು.

ಶರೀರಶತಸಂಬಾಧಾ ಕ್ರವ್ಯಾದಗಣಸಂಕುಲಾ ।
ಬಭೂವ ಸಾ ನದೀ ರಾಜನ್ ಭೀರೂಣಾಂ ಘೋರದರ್ಶನಾ ॥ ೨೧ ॥

ರಾಜನೇ, ನೂರಾರು ಶರೀರಗಳಿಂದ ನಿಬಿಡವಾದ, ಮಾಂಸಾಹಾರಿ ಪ್ರಾಣಿಗಳಿಂದಲೂ ಮತ್ತು ಪಕ್ಷಿಗಳಿಂದಲೂ ತುಂಬಿದ ಆ ನದಿಯು ಭೀರುಗಳಿಗೆ ನೋಡಲು ಭಯಂಕರವಾಗಿ ತೋರುತ್ತಿದ್ದಿತು.

ತರ್ಜಯಂತಮನೀಕಾನಿ ತಾನಿ ತಾನಿ ನರರ್ಷಭ ।
ಸರ್ವತೋಽಭ್ಯದ್ರವನ್ ದ್ರೋಣಂ ಯುಧಿಷ್ಠಿರಪುರೋಗಮಾಃ ॥ ೨೨ ॥

ನರರ್ಷಭನೇ, ತಮ್ಮ ಆಯಾ ಸೈನ್ಯಗಳನ್ನು ಭಯಗೊಳಿಸುತ್ತಾ ಎಲ್ಲ ಕಡೆಯಲ್ಲಿಯೂ ಸಂಚರಿಸುವ ದ್ರೋಣರ ಕಡೆಗೆ ಯುಧಿಷ್ಠಿರ ಮೊದಲಾದವರು ಮುನ್ನುಗ್ಗಿದರು.

ತಾನಭಿದ್ರವತಃ ಶೂರಾಂಸ್ತಾವಕಾ ಜಿತಕಾಶಿನಃ ।
ಸರ್ವತಃ ಪ್ರತ್ಯಗೃಹ್ಣಂಸ್ತೇ ತದಾಽಭೂದ್ ರೋಮಹರ್ಷಣಮ್ ॥ ೨೩ ॥

ತಮ್ಮ ಕಡೆಗೆ ಬರುತ್ತಿದ್ದ ಆ ಪಾಂಡವರನ್ನು, ಜಯವನ್ನು ಬಯಸುವ ನಿನ್ನ ಶೂರರು ಎಲ್ಲ ಕಡೆಗಳಲ್ಲಿಯೂ ಸ್ವೀಕರಿಸಿದರು. ಆಗ ರೋಮಾಂಚ ಉಂಟಾಯಿತು.

ಯತಮಾನಸ್ತು ಶಕುನಿಃ ಸಹದೇವಮುಪಾದ್ರವತ್ ।
ಸಾದಿಯಂತ್ಯಧ್ವಜಹಯಂ ವಿವ್ಯಾಧ ನಿಶಿತೈಃ ಶರೈಃ ॥ ೨೪ ॥

ಶಕುನಿಯು ಪ್ರಯತ್ನಪಟ್ಟು ಸಹದೇವನನ್ನು ಸಮೀಪಿಸಿ, ಅವನ ಅಶ್ವ- ಸಾರಥಿ-ಧ್ವಜ ಸಹಿತವಾದ ರಥವನ್ನು ನಿಶಿತವಾದ ಬಾಣಗಳಿಂದ ಹೊಡೆದನು.

ತಸ್ಯ ಮಾದ್ರೀಸುತಃ ಕೇತುಂ ಧನುಸ್ಸೂತಂ ಹಯಾನಪಿ ।
ನಾತಿಕ್ರುದ್ಧಃ ಶರೈಶ್ಛಿತ್ತ್ವಾ ಷಷ್ಟ್ಯಾ ವಿವ್ಯಾಧ ಸೌಬಲಮ್ ॥೨೫॥

ಮಾದ್ರೀಸುತನಾದ ಸಹದೇವನು ಬಹಳ ಕೋಪಗೊಳ್ಳದೆ ಅವನ ಧ್ವಜ, ಧನುಸ್ಸು, ಸಾರಥಿ ಮತ್ತು ಅಶ್ವಗಳನ್ನು ಬಾಣಗಳಿಂದ ಕತ್ತರಿಸಿ, ಅವನ ಮೇಲೆ ಅರವತ್ತು ಬಾಣಗಳನ್ನು ಪ್ರಯೋಗಿಸಿದನು.

ಗದಾಂ ಗೃಹೀತ್ವಾ ಶಕುನಿಃ ಪ್ರಚಸ್ಕಂದ ರಥೋತ್ತಮಾತ್ ।
ಸ ತಯಾ ಗದಯಾ ರಾಜನ್ ಸೂತಮಾಪಾತಯದ್ ರಥಾತ್॥ ೨೬ ॥

ರಾಜನೇ, ಗದೆಯನ್ನು ಹಿಡಿದು ತನ್ನ ಶ್ರೇಷ್ಠ ರಥದಿಂದ ಕೆಳಗಿಳಿದ ಶಕುನಿಯು ಆ ಗದೆಯಿಂದ ಸಹದೇವನ ರಥದ ಸಾರಥಿಯನ್ನು ಭೂಮಿಯ ಮೇಲೆ ಕೆಡವಿದನು.

ವಿರಥೌ ರಥಿನಾಂ ಶ್ರೇಷ್ಠೌ ಗದಾಹಸ್ತೌ ಮಹಾಬಲೌ ।
ಚಿಕ್ರೀಡತೂ ರಣೇ ರಾಜನ್ ಸಶೃಂಗಾವಿವ ಪರ್ವತೌ ॥ ೨೭ ॥

ರಾಜನೇ, ರಥವನ್ನು ಕಳೆದುಕೊಂಡ ಮಹಾಬಲರಾದ ಆ ಇಬ್ಬರು ರಥಶ್ರೇಷ್ಠರು ಕೈಯಲ್ಲಿ ಗದೆಗಳನ್ನು ಹಿಡಿದು, ಶಿಖರಸಹಿತವಾದ ಪರ್ವತದಂತೆ ರಣರಂಗದಲ್ಲಿ ಆಟವಾಡಿದರು.

ತಯೋಸ್ತತ್ರ ಮಹಾರಾಜ ಬಾಣವರ್ಷೈಃ ಪ್ರಕಾಶಿತಮ್ ।
ಖದ್ಯೋತೈರಿವ ಚಾಕಾಶಂ ಪ್ರದೋಷೇ ಪುರುಷರ್ಷಭ ॥ ೨೮ ॥

ಎಲೈ ಮಹಾರಾಜನೇ, ಪುರುಷಶ್ರೇಷ್ಠನೇ, ಅವರು ಬಾಣಗಳಿಂದ ಯುದ್ಧ ಮಾಡುವಾಗ ಸಾಯಂಕಾಲ ಸಮಯದಲ್ಲಿ ಆಕಾಶವು ಮಿಣುಕು ಹುಳಗಳಿಂದ ಶೋಭಿಸಿದಂತೆ ಅವರ ಬಾಣಗಳ ಮಳೆಯಿಂದ ಶೋಭಿಸುತ್ತಿದ್ದಿತು.

ದ್ರೋಣಃ ಪಾಂಚಾಲರಾಜಾನಂ ವಿದ್ಧ್ವಾ ದಶಭಿರಾಶುಗೈಃ ।
ಬಹುಭಿಸ್ತೇನ ಚಾಭ್ಯಸ್ತಸ್ತಂ ವಿವ್ಯಾಧ ಶತಾಧಿಕೈಃ ॥ ೨೯ ॥

ದ್ರೋಣರು ಪಾಂಚಾಲ ರಾಜನಾದ ದ್ರುಪದನನ್ನು ಶೀಘ್ರಗಾಮಿಗಳಾದ ಹತ್ತು ಬಾಣಗಳಿಂದ ಹೊಡೆದು, ಅವನಿಂದಲೂ ಅನೇಕ ಬಾಣಗಳಿಂದ ಹೊಡೆಯಲ್ಪಟ್ಟು ಪುನಃ ಅವನನ್ನು ನೂರಕ್ಕಿಂತಲೂ ಹೆಚ್ಚು ಬಾಣಗಳಿಂದ ಹೊಡೆದರು.

ವಿವಿಂಶತಿಂ ಭೀಮಸೇನೋ ವಿಂಶತ್ಯಾ ನಿಶಿತೈಃ ಶರೈಃ ।
ವಿದ್ಧ್ವಾ ನಾಕಂಪಯದ್ ವೀರಸ್ತದದ್ಭುತಮಿವಾಭವತ್ ॥ ೩೦ ॥

ವೀರನಾದ ಭೀಮಸೇನನು ವಿವಿಂಶತಿಯನ್ನು ನಿಶಿತವಾದ ಇಪ್ಪತ್ತು ಬಾಣಗಳಿಂದ ಹೊಡೆದರೂ ಅವನನ್ನು ಅಲುಗಾಡಿಸಲು ಸಾಧ್ಯವಾಗಲಿಲ್ಲ, ಅದು ಅದ್ಭುತವಾಗಿದ್ದಿತು.

ವಿವಿಂಶತಿಸ್ತು ಸಹಸಾ ವ್ಯಶ್ವಕೇತುಶರಾಸನಮ್ ।
ಚಕ್ರೇ ತಂ ಸರ್ವಸೈನ್ಯಾನಿ ಪ್ರಹೃಷ್ಟಾನ್ಯಭ್ಯಪೂಜಯನ್ ॥ ೩೧ ॥

ವಿವಿಂಶತಿಯಾದರೋ ತಕ್ಷಣ ಭೀಮಸೇನನನ್ನು ಅಶ್ವ-ಧ್ವಜ-ಧನುಸ್ಸುಗಳಿಂದ ರಹಿತನನ್ನಾಗಿ ಮಾಡಿದನು. ಅದನ್ನು ನೋಡಿ ಸಂತೋಷಗೊಂಡ ನಿನ್ನ ಸೈನ್ಯಗಳು ಅವನನ್ನು ಪೂಜಿಸಿದವು.

ಸ ತನ್ನ ಮಮೃಷೇ ಭೀಮಃ ಶತ್ರೋರ್ವಿಜಯಮಾಹವೇ ।
ತತೋಽಸ್ಯ ಗದಯಾ ದಾಂತಾನ್ ಹಯಾನ್ ಸರ್ವಾನಪೋಥಯತ್ ॥

ಭೀಮಸೇನನು ಯುದ್ಧದಲ್ಲಿ ಶತ್ರುವಿನ ಆ ವಿಜಯವನ್ನು ಸಹಿಸಲಿಲ್ಲ. ಅವನು ವಿವಿಂಶತಿಯ ಪಳಗಿದ ಎಲ್ಲಾ ಅಶ್ವಗಳನ್ನೂ ಸಂಹರಿಸಿದನು.

ಹತಾಶ್ವಾತ್ ಸ ರಥಾದ್ ರಾಜನ್ ಗೃಹ್ಯ ಚರ್ಮ ಮಹಾಬಲಃ ।
ಅಭ್ಯಯಾದ್ ಭೀಮಸೇನಂ ತು ಮತ್ತೋ ಮತ್ತಮಿವ ದ್ವಿಪಮ್ ॥

ಮಹಾಬಲನಾದ ವಿವಿಂಶತಿಯು ಅಶ್ವಹೀನವಾದ ರಥದಿಂದ ಖಡ್ಗ-ಚರ್ಮಗಳನ್ನು ಹಿಡಿದು ಕೆಳಗೆ ಬಂದು ಒಂದು, ಮದಗಜವು ಇನ್ನೊಂದು ಮದಗಜವನ್ನು ಸಮೀಪಿಸಿದಂತೆ ಭೀಮಸೇನನ ಕಡೆಗೆ ನುಗ್ಗಿದನು.

ಭೂರಿಶ್ರವಾ ರಣೇ ರಾಜನ್ ಯಾಜ್ಞಸೇನಿಂ ಮಹಾರಥಮ್ ।
ಮಹತಾ ಸಾಯಕೌಘೇನ ಚ್ಛಾದಯಾಮಾಸ ವೀರ್ಯವಾನ್ ॥ ೩೪ ॥

ರಾಜನೇ, ಪರಾಕ್ರಮಶಾಲಿಯಾದ ಭೂರಿಶ್ರವನು ತನ್ನ ಬಾಣಗಳ ದೊಡ್ಡ ಸಮೂಹದಿಂದ ಮಹಾರಥನಾದ, ಯಜ್ಞಸೇನನ ಪುತ್ರನಾದ ಶಿಖಂಡಿಯನ್ನು ಯುದ್ಧದಲ್ಲಿ ಮುಚ್ಚಿಹಾಕಿದನು.

ಶಿಖಂಡೀ ತು ತತಃ ಕ್ರುದ್ಧಃ ಸೌಮದತ್ತಿಂ ವಿಶಾಂಪತೇ ।
ಧಾದಯಾಮಾಸ ನಾರಾಚೈಸ್ತಿಷ್ಠ ತಿಷ್ಠೇತಿ ಚಾಬ್ರವೀತ್ ॥ ೩೫ ॥

ರಾಜನೇ, ಶಿಖಂಡಿಯಾದರೋ ಆಗ ಕ್ರುದ್ಧನಾಗಿ ಸೌಮದತ್ತಿಯನ್ನು ನಾರಾಚಗಳಿಂದ ಮುಚ್ಚಿ ನಿಲ್ಲು, ನಿಲ್ಲು ಎಂದು ಹೇಳಿದನು.

ಋಕ್ಷಚರ್ಮಪಿನದ್ಧೌ ತು ಚಕ್ರತುಸ್ತೌ ಖರಸ್ವನಮ್ ।
ಬಾಹ್ಯಮಾಭ್ಯಂತರಂ ಮಾರ್ಗಂ ಸಂಪ್ಲವಂತೌ ಯಶಸ್ವಿನೌ ॥ ೩೬ ॥

ಕರಡಿಯ ಚರ್ಮವನ್ನು ಧರಿಸಿದ್ದ ಕೀರ್ತಿವಂತರಾದ ಅವರಿಬ್ಬರೂ ಘೋರವಾದ ನಾದವನ್ನು ಮಾಡಿ, ಒಳಗಿನ ಮತ್ತು ಹೊರಗಿನ ಮಾರ್ಗಗಳಲ್ಲಿ ಚಲಿಸುತ್ತಾ ತಿರುಗಾಡಿದರು.

ಯುದ್ಧಂ ಯೋಧವರೌ ಲೋಕೇ ಸೌಮದತ್ತಿಶಿಖಂಡಿನೌ ।
ಭೂತಾನಾಂ ತ್ರಾಸಜನನಂ ಚಕ್ರಾತೇಽಸ್ತ್ರವಿಶಾರದೌ ॥ ೩೭ ॥

ಅಸ್ತ್ರವಿಶಾರದರೂ, ಯೋಧಶ್ರೇಷ್ಠರೂ ಆದ ಭೂರಿಶ್ರವ ಮತ್ತು ಶಿಖಂಡಿ ಇವರು ಲೋಕದಲ್ಲಿ ಭೂತಗಳಿಗೆ ಭಯವನ್ನುಂಟು ಮಾಡುವಂತೆ ಯುದ್ಧವನ್ನು ಮಾಡಿದರು.

ಭೂರಿಶ್ರವಾ ರಣೇ ರಾಜನ್ ಯಾಜ್ಞಸೇನಿಂ ಮಹಾರಥಮ್ ।
ಮಹತಾ ಸಾಯಕೌಘೇನ ಧಾದಯಾಮಾಸ ವೀರ್ಯವಾನ್ ॥ ೩೮ ॥

ರಾಜನೇ, ಪರಾಕ್ರಮಶಾಲಿಯಾದ ಭೂರಿಶ್ರವನು ರಣರಂಗದಲ್ಲಿ ಮಹಾರಥನಾದ ಶಿಖಂಡಿಯನ್ನು ತನ್ನ ಬಾಣಗಳ ಸಮೂಹದಿಂದ ಮುಚ್ಚಿದನು.

ಶಿಖಂಡೀ ತು ತತಃ ಕ್ರುದ್ಧಃ ಸೌಮದತ್ತಿಂ ವಿಶಾಂಪತೇ ।
ನವತ್ಯಾ ಸಾಯಕಾನಾಂ ತು ಕಂಪಯಾಮಾಸ ಭಾರತ ॥ ೩೯ ॥

ರಾಜನೇ, ಭಾರತನೇ, ಶಿಖಂಡಿಯು ಆಗ ಕೋಪಗೊಂಡು ಸೋಮದತ್ತ ಪುತ್ರನಾದ ಭೂರಿಶ್ರವನನ್ನು ತೊಂಬತ್ತು ಬಾಣಗಳನ್ನು ಪ್ರಯೋಗಿಸಿ ನಡುಗಿಸಿದನು.

ದದೃಶಾತೇ ಮಹಾತ್ಮಾನೌ ಸುಪರ್ಣಾವಿವ ಪಕ್ಷಿಣೌ ।
ಪಿಶಿತಾಶನಸಂಯುಕ್ತೌ ವಾಹೈರುಲ್ಬಣಪಾತಿಭಿಃ ॥ ೪೦ ॥

ಆ ಇಬ್ಬರು ಮಹಾತ್ಮರು ಬಾಯಿಯಲ್ಲಿ ಮಾಂಸವನ್ನು ಹಿಡಿದ, ದೂರ ಕರೆದುಕೊಂಡು ಹೋಗುವ ಉತ್ತಮ ಗರಿಗಳಿಂದ ಕೂಡಿದ, ಒಳ್ಳೆಯ ರೆಕ್ಕೆಗಳುಳ್ಳ ಪಕ್ಷಿಗಳಂತೆ ಕಂಡುಬಂದರು.

ಬೃಹತ್ತಾಕೌ ತೂಣೀರೌ ಘೋರರೂಪೌ ಭಯಾನಕೌ ।
ಕಾಲಮೇಘಾವಿವ ಗತೌ ಲೋಕಾನಾಂ ಭತ್ಸ್ರ್ಯ ಗರ್ಜನೈಃ ॥ ೪೧ ॥

ಅವರು ಬೃಹತ್ತಾಕೆಗಳನ್ನು, ಘೋರರೂಪವಾದ ಮತ್ತು ಭಯಂಕರವಾದ ಬತ್ತಳಿಕೆಗಳನ್ನು ಹೊಂದಿ, ತಮ್ಮ ಗರ್ಜನೆಗಳಿಂದ ಯೋಧರನ್ನು ಬೆದರಿಸಿ, ಕಾಲ-ಮೇಘಗಳಂತೆ ಸಂಚರಿಸಿದರು.

ರಥಘೋಷೇಣ ಮಹತಾऽಪ್ಯಾಸ್ಥಿತೌ ಸ್ಯಂದನೋತ್ತಮೌ ।
ಬೃಹತ್ತಾಕೌ ತೂಣೀರೌ ಪೈಶಾಚೈರ್ವಾಹನೈರ್ಯುತೌ ॥ ೪೨ ॥

ರಾಕ್ಷಸೌ ರೌದ್ರಕರ್ಮಾಣೌ ಹೈಡಿಂಬಾಲಂಬಸಾವುಭೌ ।
ಚಕ್ರಾತೇऽತ್ಯದ್ಭುತಂ ಯುದ್ಧಂ ಪರಸ್ಪರವಧೈಷಿಣೌ ॥ ೪೩ ॥

ದೊಡ್ಡ ಪತಾಕೆಗಳಿಂದ ಕೂಡಿದ, ಬತ್ತಳಿಕೆಗಳನ್ನು ಹೊಂದಿದ, ಪೈಶಾಚದೇಶದ ಅಶ್ವಗಳಿಂದ ಹೂಡಲ್ಪಟ್ಟ, ದೊಡ್ಡ ಘೋಷದಿಂದ ಕೂಡಿದ, ಶ್ರೇಷ್ಠವಾದ ರಥಗಳನ್ನು ಏರಿದ, ಭಯಂಕರವಾದ ಕರ್ಮಗಳನ್ನು ಮಾಡುವ ರಾಕ್ಷಸರಾದ ಘಟೋತ್ಕಚ ಮತ್ತು ಅಲಂಬುಸರಿಬ್ಬರೂ ಪರಸ್ಪರ ವಧೆಯನ್ನು ಮಾಡಲು ಬಯಸಿ ಬಹಳ ಅದ್ಭುತವಾದ ಯುದ್ಧವನ್ನು ಮಾಡಿದರು.

ಮಾಯಾಶತಸೃಜೌ ದೃಪ್ತೌ ಮಾಯಾಭಿರಿತರೇತರಮ್ ।
ಅಂತರ್ಧಾನೇನ ದ್ರಷ್ಟೄಣಾಂ ಭೃಶಂ ವಿಸ್ಮಯಕಾರಿಣೌ ॥ ೪೪ ॥

ನೂರು ಮಾಯೆಗಳನ್ನು ಸೃಷ್ಟಿಸುವ ದರ್ಪಿಷ್ಠರಾದ ಅವರಿಬ್ಬರು ಪರಸ್ಪರವಾಗಿ ಮಾಯೆಗಳನ್ನು ಮತ್ತು ಅಂತರ್ಧಾನವನ್ನು ಸೃಷ್ಟಿಸಿ ನೋಡುವವರಿಗೆ ಬಹಳ ವಿಸ್ಮಯವನ್ನು ಉಂಟುಮಾಡಿದರು.

ಚೇಕಿತಾನೋಽನುವಿಂದೇನ ಯುಯುಧೇ ತ್ವತಿಭೈರವಮ್ ।
ಯಥಾ ದೇವಾಸುರೇ ಯುದ್ಧೇ ಬಲಿಶಕ್ರೌ ಮಹಾಬಲೌ ॥ ೪೫ ॥

ದೇವಾಸುರರ ಯುದ್ಧದಲ್ಲಿ ಮಹಾಬಲಿಷ್ಠರಾದ ಬಲಿ ಮತ್ತು ದೇವೇಂದ್ರರಂತೆ ಚೇಕಿತಾನ ಮತ್ತು ಅನುವಿಂದರು ಅತಿ ಭಯಂಕರವಾದ ಯುದ್ಧವನ್ನು ಮಾಡಿದರು.

ಲಕ್ಷಣಃ ಕ್ಷತ್ರದೇವೇನ ವಿಮರ್ದಮಕರೋನ್ಮಹತ್ ।
ಯಥಾ ವಿಷ್ಣುಃ ಪುರಾ ರಾಜನ್ ಹಿರಣ್ಯಾಕ್ಷೇಣ ಸಂಯುಗೇ ॥ ೪೬ ॥

ರಾಜನೇ, ವಿಷ್ಣುವು ಹಿಂದೆ ಹಿರಣ್ಯಾಕ್ಷನ ಜೊತೆಯಲ್ಲಿ ಯುದ್ಧವನ್ನು ಮಾಡಿದಂತೆ ದುರ್ಯೋಧನನ ಪುತ್ರನಾದ ಲಕ್ಷಣನು ಕ್ಷತ್ರದೇವನ ಜೊತೆಯಲ್ಲಿ ದೊಡ್ಡ ಯುದ್ಧವನ್ನು ಮಾಡಿದನು.

ಶಲ್ಯಸ್ತು ನಕುಲಂ ಶೂರಂ ಸ್ವಸ್ರೀಯಂ ಪ್ರಿಯಮಾತ್ಮನಃ ।
ವಿವ್ಯಾಧ ಪ್ರಹಸನ್ ಬಾಣೈರ್ಲೀಲಯಾ ಕೋಪಯನ್ನಿವ ॥

ಶಲ್ಯನಾದರೋ ಶೂರನೂ, ತನ್ನ ಸೋದರಳಿಯನೂ, ತನಗೆ ಪ್ರಿಯನೂ ಆದ ನಕುಲನನ್ನು ಕೋಪಗೊಳಿಸುವವನಂತೆ, ಲೀಲೆಯಿಂದ ನಗುತ್ತಾ ಅವನನ್ನು ಬಾಣಗಳಿಂದ ಹೊಡೆದನು.

ತಸ್ಯಾಶ್ವಾನಾತಪತ್ರಂ ಚ ಧ್ವಜಂ ಸೂತಮಥೋ ಧನುಃ ।
ನಿಪಾತಯಿತ್ವಾ ನಕುಲೋ ದಧ್ಮೌ ಶಂಖಂ ಮುದಾಽನ್ವಿತಃ ॥ ೪೮ ॥

ನಕುಲನು ಅವನ ಅಶ್ವಗಳನ್ನೂ, ಛತ್ರವನ್ನೂ, ಧ್ವಜವನ್ನೂ, ಸಾರಥಿಯನ್ನೂ ಮತ್ತು ಧನುಸ್ಸನ್ನೂ ಕತ್ತರಿಸಿ ಸಂತೋಷದಿಂದ ಕೂಡಿ ಶಂಖವನ್ನು ಊದಿದನು.

ಧೃಷ್ಟಕೇತುಃ ಕೃಪೇಣಾಸ್ತಾನ್ ಛಿತ್ತ್ವಾ ಬಹುವಿಧಾನ್ ಶರಾನ್ ।
ಕೃಪಂ ವಿವ್ಯಾಧ ಸಪ್ತತ್ಯಾ ಧ್ವಜಂ ಚಾಸ್ಯ ತ್ರಿಭಿಃ ಶರೈಃ ॥೪೯॥

ಧೃಷ್ಟಕೇತುವು ಕೃಪರು ಪ್ರಯೋಗಿಸಿದ ಅನೇಕ ವಿಧವಾದ ಬಾಣವನ್ನು ಕತ್ತರಿಸಿ, ಕೃಪರ ಮೇಲೆ ಎಪ್ಪತ್ತು ಬಾಣಗಳನ್ನು ಪ್ರಯೋಗಿಸಿದನು ಮತ್ತು ಅವರ ರಥದ ಧ್ವಜಕ್ಕೆ ಮೂರು ಬಾಣಗಳಿಂದ ಹೊಡೆದನು.

ತಂ ಕೃಪಃ ಶರವರ್ಷೇಣ ಮಹತಾ ಸಮವಾಕಿರತ್ ।
ನಿಹತ್ಯ ತಾನ್ ಶರಾನ್ ಕ್ಷಿಪ್ರಂ ಧೃಷ್ಟಕೇತುರಪೋಥಯತ್ ॥ ೫೦ ॥

ಕೃಪರು ಬಾಣಗಳ ದೊಡ್ಡ ಮಳೆಯನ್ನು ಅವನ ಮೇಲೆ ಸುರಿಸಿದರು. ಧೃಷ್ಟಕೇತುವು ಶೀಘ್ರವಾಗಿ ಆ ಬಾಣಗಳನ್ನೆಲ್ಲಾ ಬಾಣಗಳಿಂದ ಹೊಡೆದು ಪುಡಿ ಮಾಡಿದನು.

ಸಾತ್ಯಕಿಃ ಕೃತವರ್ಮಾಣಂ ನಾರಾಚೇನ ಸ್ತನಾಂತರೇ ।
ವಿದ್ಧ್ವಾ ವಿವ್ಯಾಧ ಸಪ್ತತ್ಯಾ ಪುನರನ್ಯೈಃ ಸ್ಮಯನ್ನಿವ ॥ ೫೧ ॥

ಸಾತ್ಯಕಿಯು ಕೃತವರ್ಮನನ್ನು ನಾರಾಚದಿಂದ ಸ್ತನಗಳ ಮಧ್ಯದಲ್ಲಿ ಹೊಡೆದು ಪುನಃ ಬೇರೆ ಎಪ್ಪತ್ತು ಬಾಣಗಳಿಂದ ನಗುತ್ತಾ ಅವನನ್ನು ಹೊಡೆದನು.

ತಂ ಭೋಜಃ ಸಪ್ತಸಪ್ತತ್ಯಾ ವಿದ್ಧ್ವಾ ಸುನಿಶಿತೈಃ ಶರೈಃ ।
ನಾಕಂಪಯತ ಶೈನೇಯಂ ವೀರೋ ವಾಯುರ್ಯಥಾಽಚಲಮ್ ॥

ಭೋಜನಾದ, ವೀರನಾದ ಕೃತವರ್ಮನು ಅವನನ್ನು ನಿಶಿತವಾದ ಎಪ್ಪತ್ತೇಳು ಬಾಣಗಳಿಂದ ಹೊಡೆದರೂ ವಾಯುವು ಪರ್ವತವನ್ನು ಅಲುಗಾಡಿಸಲು ಸಾಧ್ಯವಾಗದಂತೆ ಅವನನ್ನು ಅಲುಗಾಡಿಸಲು ಸಾಧ್ಯವಾಗಲಿಲ್ಲ.

ಸೇನಾಪತಿಃ ಸುಶರ್ಮಾಣಂ ಭೃಶಂ ಮರ್ಮಣ್ಯತಾಡಯತ್ ।
ಸ ಚಾಪಿ ತಂ ತೋಮರೇಣ ಜತ್ರುದೇಶೇಽಭ್ಯತಾಡಯತ್ ॥ ೫೩ ॥

ಸೇನಾಪತಿಯಾದ ಧೃಷ್ಟದ್ಯುಮ್ನನು ಸುಶರ್ಮನನ್ನು ಮರ್ಮಗಳಲ್ಲಿ ಚೆನ್ನಾಗಿ ಹೊಡೆದನು. ಸುಶರ್ಮನೂ ಸಹ ಅವನನ್ನು ತೋಮರದಿಂದ ಭುಜಸಂಧಿದೇಶದಲ್ಲಿ ಹೊಡೆದನು.

ವೀರಂ ವೈಕರ್ತನಂ ಕರ್ಣಂ ವಿರಾಟಃ ಪ್ರತ್ಯವಾರಯತ್ ।
ಸಹ ಮಾತ್ಸ್ಯೈರ್ಮಹಾವೀರ್ಯೈಃ ತದದ್ಭುತಮಿವಾಭವತ್ ॥ ೫೪ ॥

ವೀರನಾದ, ವೈಕರ್ತನನಾದ ಕರ್ಣನನ್ನು ಮಹಾಪರಾಕ್ರಮಿಗಳಾದ ಮತ್ಸ್ಯಯೋಧರ ಜೊತೆಯಲ್ಲಿ ವಿರಾಟನು ತಡೆದನು. ಅದು ಅದ್ಭುತವಾಗಿದ್ದಿತು.

ತತ್ರಾದ್ಭುತಮಪಶ್ಯಾಮ ಸೂತಪುತ್ರಸ್ಯ ಲಾಘವಮ್ ।
ಯತ್ ಸೈನ್ಯಂ ವಾರಯಾಮಾಸ ಶರೈಃ ಸನ್ನತಪರ್ವಭಿಃ ॥ ೫೫ ॥

ಅಲ್ಲಿ ಸೂತಪುತ್ರನಾದ ಕರ್ಣನ ಬಾಗಿದ ತುದಿಯುಳ್ಳ ಬಾಣಗಳಿಂದ ಆ ಸೈನ್ಯವನ್ನು ತಡೆದ ಅವನ ಅದ್ಭುತವಾದ ಕ್ಷಿಪ್ರತನವನ್ನು ನಾವು ನೋಡಿದೆವು.

ದ್ರುಪದಸ್ತು ಸ್ವಯಂ ರಾಜಾ ಭಗದತ್ತೇನ ಸಂಗತಃ ।
ತಯೋರ್ಯುದ್ಧಂ ಮಹಾರಾಜ ಚಿತ್ರರೂಪಮಿವಾಭವತ್ ॥ ೫೬ ॥

ಎಲೈ ಮಹಾರಾಜನೇ, ದ್ರುಪದ ರಾಜನು ಸ್ವತಃ ಭಗದತ್ತನ ಜೊತೆಯಲ್ಲಿ ಸಮಾಗಮವನ್ನು ಹೊಂದಿದನು. ಅವರಿಬ್ಬರಿಗೆ ವಿಚಿತ್ರರೂಪವನ್ನು ಹೊಂದಿದ ಯುದ್ಧವು ನಡೆಯಿತು.

ಭಗದತ್ತಸ್ತು ರಾಜಾನಂ ದ್ರುಪದಂ ನತಪರ್ವಭಿಃ ।
ಸನಿಯಂತೃಧ್ವಜರಥಂ ವಿವ್ಯಾಧ ಪುರುಷರ್ಷಭಃ ॥ ೫೭ ॥

ಪುರುಷಶ್ರೇಷ್ಠನಾದ ಭಗದತ್ತನು ಬಾಗಿದ ತುದಿಯುಳ್ಳ ಬಾಣಗಳಿಂದ ಅವನ ಸಾರಥಿ, ಧ್ವಜ ಮತ್ತು ರಥಗಳಿಂದ ಸಹಿತನಾದ ದ್ರುಪದನನ್ನು ಹೊಡೆದನು.

ದ್ರುಪದಸ್ತು ತತಃ ಕ್ರುದ್ಧೋ ಭಗದತ್ತಂ ಮಹಾರಥಮ್ ।
ಆಜಘಾನೋರಸಿ ಕ್ಷಿಪ್ರಂ ಶರೇಣ ನತಪರ್ವಣಾ ॥ ೫೮ ॥

ಆಗ ಕೋಪಗೊಂಡ ದ್ರುಪದನು ಮಹಾರಥನಾದ ಭಗದತ್ತನನ್ನು ಬಾಗಿದ ತುದಿಯುಳ್ಳ ಬಾಣದಿಂದ ಶೀಘ್ರವಾಗಿ ಎದೆಯಲ್ಲಿ ಹೊಡೆದನು.

ತತಃ ಪ್ರಜವಿತಾಶ್ವೇನ ವಿಧಿವತ್ ಕಲ್ಪಿತೇನ ಚ ।
ರಥೇನಾಭ್ಯದ್ರವದ್ ರಾಜನ್ ಸೌಭದ್ರಂ ಪೌರವೋ ನದನ್ ॥ ೫೯ ॥

ಎಲೈ ರಾಜನೇ, ಅನಂತರ ವೇಗಶಾಲಿಗಳಾದ ಅಶ್ವಗಳಿಂದ ವಿಧಿವತ್ತಾಗಿ ಹೂಡಿದ ರಥದಿಂದ ಪೌರವನು ಗರ್ಜಿಸುತ್ತಾ ಅಭಿಮನ್ಯುವಿನ ಮೇಲೆ ಎರಗಿದನು.

ತೇನಾಭಿಯಾತಸ್ತ್ವರಿತಃ ಶತಮನ್ಯೋಃ ಸುತಾತ್ಮಜಃ ।
ತಸ್ಮಿಂಶ್ಚಕ್ರೇ ಮಹದ್ ಯುದ್ಧಮ್ ಅಭಿಮನ್ಯುರರಿಂದಮಃ ॥ ೬೦ ॥

ಇಂದ್ರನ ಮಗನ ಮಗನಾದ, ಅರಿಂದಮನಾದ ಅಭಿಮನ್ಯುವು ಆ ಪೌರವನು ತನ್ನೆಡೆಗೆ ಓಡಿಬಂದಾಗ ಶೀಘ್ರವಾಗಿ ಅವನ ಜೊತೆಯಲ್ಲಿ ದೊಡ್ಡ ಯುದ್ಧವನ್ನು ಮಾಡಿದನು.

ಪೌರವಸ್ತ್ವಥ ಸೌಭದ್ರಂ ಶರವ್ರಾತೈರವಾಕಿರತ್ ।
ತಸ್ಯಾರ್ಜುನಿರ್ಧ್ವಜಂ ಛತ್ರಂ ಧನುಶ್ಚೋರ್ವ್ಯಾಮಪಾತಯತ್ ॥ ೬೧ ॥

ಅನಂತರ ಪೌರವನು ಅಭಿಮನ್ಯುವಿನ ಮೇಲೆ ಬಾಣಗಳ ಮಳೆಯನ್ನು ಕರೆದನು. ಅರ್ಜುನ ಪುತ್ರನಾದ ಅಭಿಮನ್ಯುವು ಅವನ ಧ್ವಜ-ಛತ್ರ ಮತ್ತು ಧನುಸ್ಸುಗಳನ್ನು ಭೂಮಿಯ ಮೇಲೆ ಕೆಡವಿದನು.

ಸೌಭದ್ರಃ ಪೌರವಂ ತ್ವನ್ಯೈರ್ವಿದ್ಧ್ವಾ ಸಪ್ತಭಿರಾಶುಗೈಃ ।
ಪಂಚಭಿಸ್ತಸ್ಯ ವಿವ್ಯಾಧ ಹಯಾನ್ ಸೂತಂ ಚ ಸಾಯಕೈಃ ॥ ೬೨ ॥

ಅಭಿಮನ್ಯುವು ಪೌರವನನ್ನು ಶೀಘ್ರಗಾಮಿಗಳಾದ ಬೇರೆ ಏಳು ಬಾಣಗಳಿಂದ ಹೊಡೆದು, ಐದು ಬಾಣಗಳಿಂದ ಅವನ ಅಶ್ವಗಳನ್ನೂ ಮತ್ತು ಸಾರಥಿಯನ್ನೂ ಹೊಡೆದನು.

ತತಃ ಸಂಹರ್ಷಯನ್ ಸೇನಾಂ ಸಿಂಹವದ್ ವಿನದನ್ ಮುಹುಃ ।
ಸಮಾಧತ್ತಾರ್ಜುನಿಸ್ತೂರ್ಣಂ ಪೌರವಾಂತಕರಂ ಶರಮ್ ॥ ೬೩ ॥

ಆಗ ಅಭಿಮನ್ಯುವು ತನ್ನ ಸೇನೆಗೆ ಸಂತೋಷವನ್ನುಂಟು ಮಾಡುತ್ತಾ, ಸಿಂಹದಂತೆ ಪುನಃ ಪುನಃ ಗರ್ಜಿಸುತ್ತಾ, ಪೌರವನ ಪ್ರಾಣಾಂತಕವಾದ ಬಾಣವನ್ನು ತನ್ನ ಧನುಸ್ಸಿನಲ್ಲಿ ಹೂಡಿದನು.

ತಂ ತು ಸಂಧಿತಮಾಜ್ಞಾಯ ಸಾಯಕಂ ಘೋರದರ್ಶನಮ್ ।
ದ್ವಾಭ್ಯಾಂ ಶರಾಭ್ಯಾಂ ಹಾರ್ದಿಕ್ಯಶ್ಚಕರ್ತ ಸಶರಂ ಧನುಃ ॥ ೬೪ ॥

ಘೋರವಾದ ಆ ಬಾಣವು ಧನುಸ್ಸಿನಲ್ಲಿ ಹೂಡಲ್ಪಟ್ಟುದನ್ನು ನೋಡಿ ಕೃತವರ್ಮನು ಎರಡು ಬಾಣಗಳಿಂದ ಬಾಣ ಸಹಿತವಾದ ಧನುಸ್ಸನ್ನು ಕತ್ತರಿಸಿದನು.

ತದುತ್ಸೃಜ್ಯ ಧನುಶ್ಛಿನ್ನಂ ಸೌಭದ್ರಃ ಪರವೀರಹಾ ।
ಉದ್ಬಬರ್ಹ ಶಿತಂ ಖಡ್ಗಮಾದದಾನಃ ಶರಾವರಮ್ ॥ ೬೫ ॥

ಪರವೀರಘಾತಕನಾದ ಅಭಿಮನ್ಯುವು ಕತ್ತರಿಸಲ್ಪಟ್ಟ ಧನುಸ್ಸನ್ನು ಬಿಟ್ಟು ಹರಿತವಾದ ಖಡ್ಗವನ್ನು ಒರೆಯಿಂದ ಎಳೆದು ಗುರಾಣಿಯನ್ನು ತೆಗೆದುಕೊಂಡನು.

ಸ ತೇನಾನೇಕತಾರೇಣ ಚರ್ಮಣಾ ಕೃತಹಸ್ತವತ್ ।
ಭ್ರಾಂತಾಸಿನಾऽಚರನ್ಮಾರ್ಗಾನ್ ದರ್ಶಯನ್ ವೀರ್ಯಮಾತ್ಮನಃ ॥

ಅವನು ಸುಶಿಕ್ಷಿತವಾದ ಹಸ್ತವುಳ್ಳವನಾಗಿ ಅನೇಕ ನಕ್ಷತ್ರಗಳನ್ನು ಮೆಟ್ಟಿದ ಗುರಾಣಿ ಮತ್ತು ಕೈಯಲ್ಲಿ ತಿರುಗಿಸುತ್ತಿರುವ ಕತ್ತಿಯಿಂದ ತನ್ನ ಪರಾಕ್ರಮವನ್ನು ತೋರಿಸುತ್ತಾ ವಿವಿಧ ಮಾರ್ಗಗಳಲ್ಲಿ ಸಂಚರಿಸಿದನು.

ಭ್ರಾಮಿತಂ ಪುನರುದ್ಭ್ರಾಂತಮಾಧೂತಂ ಪುನರುಚ್ಛ್ರಿತಮ್ ।
ಚರ್ಮನಿಸ್ತ್ರಿಂಶಯೋ ರಾಜನ್ ನಿರ್ವಿಶೇಷಮದೃಶ್ಯತ ॥ ೬೭ ॥

ಎಲೈ ರಾಜನೇ, ಪುನಃ ಮೇಲ್ಭಾಗದಲ್ಲಿ ತಿರುಗಿಸಲ್ಪಟ್ಟ, ಬೀಸಲ್ಪಟ್ಟ, ಪುನಃ ಮೇಲೆ ಎತ್ತಲ್ಪಟ್ಟ ಖಡ್ಗ ಮತ್ತು ಚರ್ಮಗಳಲ್ಲಿ ಯಾವ ವ್ಯತ್ಯಾಸವೂ ಕಾಣಲಿಲ್ಲ.

ಸ ಪೌರವರಥಸ್ಯೇಷಾಮಾಪ್ಲುತ್ಯ ಸಹಸಾ ನದನ್ ।
ಪೌರವಂ ರಥಮಾಸ್ಥಾಯ ಕೇಶಪಕ್ಷೇ ಪರಾಮೃಶತ್ ॥ ೬೮ ॥

ಅವನು ತಕ್ಷಣ ಗರ್ಜಿಸುತ್ತಾ ಪೌರವ ರಥದ ಮೂಕಿಯ ಮೇಲೆ ಹಾರಿ ರಥದಲ್ಲಿ ನಿಂತು ಪೌರವನನ್ನು ಅವನ ಕೇಶಗಳಲ್ಲಿ ಹಿಡಿದನು.

ಜಘಾನಾಸ್ಯ ಪದಾ ಸೂತಮಸಿನಾऽಪಾತಯದ್ ಧ್ವಜಮ್ ।
ಏಕ್ಷೋಭ್ಯಾಂಭೋನಿಧಿಂ ತಾರ್ಕ್ಷ್ಯಃ ತಂ ನಾಗಮಿವ ಚಾಗ್ರಹೀತ್ ॥೬೯॥

ತನ್ನ ಕಾಲಿನಿಂದ ಒದ್ದು ಅವನ ಸೂತನನ್ನು ಕೊಂದನು. ಅವನ ಧ್ವಜವನ್ನು ಖಡ್ಗದಿಂದ ಕೆಡವಿದನು. ಗರುಡನು ಸಮುದ್ರವನ್ನು ಕಲಕಿ ನಾಗನನ್ನು ಹಿಡಿದಂತೆ ಪೌರವನನ್ನು ಹಿಡಿದನು.

ತಮಾಕುಲಿತಕೇಶಾಂತಂ ದದೃಶುಃ ಸರ್ವಪಾರ್ಥಿವಾಃ ।
ಉಕ್ಷಾಣಮಿವ ಸಿಂಹೇನ ಪಾತ್ಯಮಾನಮಚೇತನಮ್ ॥ ೭೦ ॥

ಪೌರವನ ಕೇಶವು ವ್ಯತ್ಯಾಸವಾಗಿರುವುದನ್ನು ಮತ್ತು ಸಿಂಹದಿಂದ ವೃಷಭದಂತೆ ಪ್ರಜ್ಞೆಯಿಲ್ಲದೆ ಕೆಡಹುವುದನ್ನು ಎಲ್ಲ ರಾಜರೂ ನೋಡಿದರು.

ತಮಾರ್ಜುನಿವಶಂ ಪ್ರಾಪ್ತಂ ಕೃಷ್ಯಮಾಣಮನಾಥವತ್ ।
ಪೌರವಂ ಪತಿತಂ ದೃಷ್ಟ್ವಾ ನಾಮೃಷ್ಯತ ಜಯದ್ರಥಃ ॥ ೭೧ ॥

ಅಭಿಮನ್ಯುವಿಗೆ ವಶವಾಗಿ ಅನಾಥನಂತೆ ಎಳೆದಾಡಲ್ಪಡುತ್ತಿದ್ದ ಪೌರವನು ಬಿದ್ದುದನ್ನು ನೋಡಿ ಜಯದ್ರಥನು ಸಹಿಸಲಿಲ್ಲ.

ಸ ಬರ್ಹಿಣಮಹಾವಾಜಂ ಕಿಂಕಿಣೀಶತಜಾಲವತ್ ।
ಚರ್ಮ ಚಾದಾಯ ಖಡ್ಗಂ ಚ ನದನ್ ಪರ್ಯಪತದ್ ರಥಾತ್ ॥

ಅವನು ಪಕ್ಷಿಗಳ ಗರಿಗಳ ಪುಂಖವನ್ನು ಹೊಂದಿದ್ದ, ನೂರು ಕಿಂಕಿಣಿಗಳ ಮಾಲೆಯನ್ನು ಹೊಂದಿದ್ದ ಚರ್ಮವನ್ನು (ಗುರಾಣಿಯನ್ನು) ಮತ್ತು ಖಡ್ಗವನ್ನು ತೆಗೆದುಕೊಂಡು ಗರ್ಜಿಸುತ್ತಾ ತನ್ನ ರಥದಿಂದ ಹಾರಿ ಬಂದನು.

ಪ್ರಾಸಪಟ್ಟಸನಿಸ್ತ್ರಿಂಶಾನ್ ಸೌಭದ್ರೇಣಾಹಿತೇರಿತಾನ್ ।
ಅಪಶ್ಯಾಮ ಮಹಾರಾಜ ವಿಧೂತಾನಸಿಚರ್ಮಣಾ ॥ ೭೩ ॥

ಎಲೈ ಮಹಾರಾಜನೇ, ಅಭಿಮನ್ಯುವು ಪ್ರಯೋಗಿಸಿದ ಪ್ರಾಸ, ಪಟ್ಟಸ ಮತ್ತು ಖಡ್ಗಗಳು ಜಯದ್ರಥನ ಖಡ್ಗ-ಚರ್ಮಗಳಿಂದ ನಿವಾರಿಸಲ್ಪಡುವುದನ್ನು ನಾವು ನೋಡಿದೆವು.

ದರ್ಶಯನ್ ಸರ್ವಸೈನ್ಯಾನಾಂ ಸ್ವಬಾಹುಬಲಮಾತ್ಮವಾನ್ ।
ಉತ್ಪಪಾತ ರಥಾತ್ ತೂರ್ಣಂ ಶ್ಯೇನವನ್ನಿಪಪಾತ ಹ ॥ ೭೪ ॥

ಧೈರ್ಯಶಾಲಿಯಾದ ಅವನು ಎಲ್ಲ ಸೈನ್ಯಗಳಿಗೆ ತನ್ನ ಬಾಹುಬಲವನ್ನು ತೋರಿಸುತ್ತಾ, ರಥದಿಂದ ಶೀಘ್ರವಾಗಿ ಶ್ಯೇನದಂತೆ ಮೇಲಕ್ಕೆ ಹಾರಿ ಪುನಃ ಕೆಳಗೆ ಬರುತ್ತಿದ್ದನು.

ತತಃ ಸೈಂಧವಮಾಲೋಕ್ಯ ಕಾರ್ಷ್ಣಿಃ ಪೌರವಮುತ್ಸೃಜನ್ ।
ದುಧಾವ ಸಹಸಾ ಖಡ್ಗಂ ಚರ್ಮ ಚಾತಿರಥಃ ಪುನಃ ॥ ೭೫ ॥

ಆಗ ಅಭಿಮನ್ಯುವು ಸೈಂಧವನನ್ನು ನೋಡಿ, ಪೌರವನನ್ನು ಬಿಟ್ಟು ಅತಿರಥನಾದ ಅವನು ಖಡ್ಗ-ಚರ್ಮಗಳನ್ನು ಝಳುಪಿಸಿದನು.

ವೃದ್ಧಕ್ಷತ್ರಸ್ಯ ದಾಯಾದಂ ಪಿತುರತ್ಯಂತವೈರಿಣಮ್ ।
ಸಸಾರಾಭಿಮುಖಃ ಶೂರಃ ಶಾರ್ದೂಲ ಇವ ಕುಂಜರಮ್ ॥ ೭೬ ॥

ವೃದ್ಧಕ್ಷತ್ರನ ಪುತ್ರನೂ, ತನ್ನ ತಂದೆಗೆ ಅತ್ಯಂತ ವೈರಿಯೂ ಆದ ಸೈಂಧವನನ್ನು ವ್ಯಾಘ್ರವು ಗಜವನ್ನು ಸಮೀಪಿಸಿದಂತೆ ಅಭಿಮುಖವಾಗಿ ಸಮೀಪಿಸಿದನು.

ತೌ ಪರಸ್ಪರಮಾಸಾದ್ಯ ಖಡ್ಗದಂತನಖಾಯುಧೌ ।
ಹೃಷ್ಟವತ್ ಸಂಪ್ರಜಹ್ರಾತೇ ವ್ಯಾಘ್ರಕೇಸರಿಣಾವಿವ ॥ ೭೭ ॥

ಅವರಿಬ್ಬರೂ ವ್ಯಾಘ್ರಸಿಂಹಗಳಂತೆ ಪರಸ್ಪರವಾಗಿ ಸಮೀಪಿಸಿ, ಖಡ್ಗವೆಂಬ ದಂತದಿಂದಲೂ, ನಖವೆಂಬ ಆಯುಧದಿಂದಲೂ ಸಂತೋಷದಿಂದ ಹೊಡೆದಾಡಿದರು.

ಸಂಪಾತೇಷ್ವಭಿಪಾತೇಷು ನಿಪಾತೇಷ್ವಸಿಚರ್ಮಣಾಮ್ ।
ನ ತಯೋರಂತರಂ ಕಶ್ಚಿದ್ ದದರ್ಶ ನರಸಿಂಹಯೋಃ ॥ ೭೮ ॥

ನರಶ್ರೇಷ್ಠರಾದ ಅವರಿಬ್ಬರ ಖಡ್ಗಯುದ್ಧದ ಪ್ರಕಾರಗಳಾದ ಸಂಪಾತ, ಅಭಿಪಾತ, ನಿಪಾತಗಳಲ್ಲಿ ಯಾವ ವ್ಯತ್ಯಾಸವೂ ಕಾಣಲಿಲ್ಲ.

ಅವಕ್ಷೇಪೋಽಸಿನಿರ್ಹ್ರಾದಃ ಶಸ್ತ್ರಾಂತರನಿದರ್ಶನಮ್ ।
ಬಾಹ್ವಂತರನಿಪಾತಶ್ಚ ನಿರ್ವಿಶೇಷಮದೃಶ್ಯತ ॥ ೭೯ ॥

ಖಡ್ಗವನ್ನು ಕೆಳಗೆ ಬೀಸುವುದು, ಖಡ್ಗದಿಂದ ಶಬ್ದವನ್ನುಂಟು ಮಾಡುವುದು, ಖಡ್ಗದಿಂದ ಶಸ್ತ್ರಾಂತರದ ಕಾರ್ಯವನ್ನು ಮಾಡುವುದು, ಬಾಹುಗಳ ಮಧ್ಯದಲ್ಲಿ ಹೊಡೆಯುವುದು - ಇವುಗಳಲ್ಲಿಯೂ ಯಾವ ವ್ಯತ್ಯಾಸವೂ ಕಾಣಲಿಲ್ಲ.

ಬಾಹ್ಯಮಾಭ್ಯಂತರಂ ಮಾರ್ಗಂ ಸಂಪತಂತೌ ಯಶಸ್ವಿನೌ ।
ದದೃಶಾತೇ ಮಹಾತ್ಮಾನೌ ಸಪಕ್ಷಾವಿವ ಪರ್ವತೌ ॥ ೮೦ ॥

ಮಹಾತ್ಮರೂ, ಕೀರ್ತಿಶಾಲಿಗಳೂ ಆದ ಅವರು ಒಳಗಿನ ಮತ್ತು ಹೊರಗಿನ ಮಾರ್ಗಗಳಲ್ಲಿ ಸಂಚರಿಸುತ್ತಾ, ರೆಕ್ಕೆಗಳಿಂದ ಕೂಡಿದ ಪರ್ವತಗಳಂತೆ ಕಂಡುಬಂದರು.

ತತೋ ವಿಕ್ಷಿಪತಃ ಖಡ್ಗಂ ಸೌಭದ್ರಸ್ಯ ಯಶಸ್ವಿನಃ ।
ಶರಾವರಣಪಕ್ಷಾಂತೇ ಪ್ರಜಹಾರ ಜಯದ್ರಥಃ ॥ ೮೧ ॥

ಆಗ ಕೀರ್ತಿವಂತನಾದ ಅಭಿಮನ್ಯುವು ಖಡ್ಗವನ್ನು ಬೀಸುತ್ತಿರುವಾಗ ಜಯದ್ರಥನು ಅವನ ಗುರಾಣಿಯ ಪಕ್ಕದ ತುದಿಯನ್ನು ತನ್ನ ಖಡ್ಗದಿಂದ ಹೊಡೆದನು.

ರುಗ್ಮಪಕ್ಷಾಂತರೇ ಸಕ್ತಃ ತಸ್ಮಿಂಶ್ಚರ್ಮಣಿ ಭಾಸ್ವರೇ ।
ಸಿಂಧುರಾಜಕರೋದ್ಧೂತಃ ಸೋಽಭಜ್ಯತ ಮಹಾನಸಿಃ ॥ ೮೨ ॥

ಸಿಂಧುರಾಜನಾದ ಜಯದ್ರಥನಿಂದ ಬೀಸಿ ಹೊಡೆಯಲ್ಪಟ್ಟ ಆ ದೊಡ್ಡ ಖಡ್ಗವು, ಅಭಿಮನ್ಯುವಿನ ಪ್ರಕಾಶಮಾನವಾದ ಗುರಾಣಿಯ ಸುವರ್ಣಮಯವಾದ ಪಾರ್ಶ್ವದಲ್ಲಿ ನಾಟಿ ಮುರಿದು ಹೋಯಿತು.

ಭಗ್ನಮಾಜ್ಞಾಯ ನಿಸ್ತ್ರಿಂಶಮವಪ್ಲುತ್ಯ ಪದಾನಿ ಷಟ್ ।
ಸೋಽದೃಶ್ಯತ ನಿಮೇಷೇಣ ಸ್ವರಥಂ ಪುನರಾಸ್ಥಿತಃ ॥ ೮೩ ॥

ತನ್ನ ಖಡ್ಗವು ಮುರಿದುದನ್ನು ನೋಡಿ ಜಯದ್ರಥನು ಆರು ಹೆಜ್ಜೆ ಹಿಂದೆ ಹೋಗಿ, ಒಂದು ನಿಮಿಷದಲ್ಲಿ ತನ್ನ ರಥವನ್ನು ಏರಿದುದು ಕಂಡುಬಂದಿತು.

ತತಶ್ಚರ್ಮ ಚ ಖಡ್ಗಂ ಚ ಸಮುತ್ಕ್ಷಿಪ್ಯ ಮಹಾಬಲಃ ।
ನನಾದಾರ್ಜುನದಾಯಾದಃ ಪ್ರೇಕ್ಷಮಾಣೋ ಜಯದ್ರಥಮ್ ॥ ೮೪ ॥

ಆಗ ಅರ್ಜುನಪುತ್ರನಾದ, ಮಹಾಬಲನಾದ ಅಭಿಮನ್ಯುವು ತನ್ನ ಖಡ್ಗ-ಚರ್ಮಗಳನ್ನು ಝಳುಪಿಸುತ್ತಾ, ಜಯದ್ರಥನನ್ನು ನೋಡುತ್ತಾ, ಮಹಾನಾದವನ್ನು ಮಾಡಿದನು.

ಸಿಂಧುರಾಜಂ ಪರಿತ್ಯಜ್ಯ ಸೌಭದ್ರಃ ಪರವೀರಹಾ ।
ತಾಪಯಾಮಾಸ ತತ್ ಸೈನ್ಯಂ ಭುವನಂ ಭಾಸ್ಕರೋ ಯಥಾ ॥ ೮೫ ॥

ಅನಂತರ ಪರವೀರಘಾತಕನಾದ ಅಭಿಮನ್ಯುವು ಸೈಂಧವನನ್ನು ಬಿಟ್ಟು, ಅವನ ಸೈನ್ಯದ ಮೇಲೆ ತಿರುಗಿ, ಸೂರ್ಯನು ಜಲವನ್ನು ಶೋಷಿಸುವಂತೆ ಅದನ್ನು ಶೋಷಿಸಿದನು (ತಾಪಗೊಳಿಸಿದನು).

ತಂ ಕಾರ್ಷ್ಣಿಂ ಸಮರಾನ್ಮುಕ್ತಮಭಿಜ್ಞಾಯ ರಥೇ ಸ್ಥಿತಮ್ ।
ಸಹಸಾ ಸರ್ವರಾಜಾನಃ ಪರಿವವ್ರುಃ ಸಮಂತತಃ ॥ ೮೬ ॥

ಆ ಅಭಿಮನ್ಯುವು ಸೈಂಧವನ ಜೊತೆಯಲ್ಲಿನ ಯುದ್ಧದಿಂದ ಹೊರಗೆ ಬಂದು ರಥದಲ್ಲಿ ಇರುವುದನ್ನು ನೋಡಿ ಎಲ್ಲ ರಾಜರೂ ತಕ್ಷಣದಲ್ಲಿ ಅವನನ್ನು ಸುತ್ತುವರಿದರು.

ತಸ್ಯ ಸರ್ವಾಯಸೀಂ ಶಲ್ಯಃ ಶಕ್ತಿಂ ಕನಕಭೂಷಿತಾಮ್ ।
ಪ್ರಜಹಾರ ಭುಜಾಗ್ರೇಣ ದೀಪ್ತಮಗ್ನಿಶಿಖಾಮಿವ ॥ ೮೭ ॥

ಶಲ್ಯನು ಕನಕಭೂಷಿತವಾದ ಪೂರ್ಣವಾದ, ಅಯೋಮಯವಾದ, ಜ್ವಲಿಸುವ ಅಗ್ನಿಶಿಖೆಯಂತಿರುವ ಶಕ್ತಿಯನ್ನು ತನ್ನ ಭುಜದಿಂದ ಅವನ ಮೇಲೆ ಪ್ರಯೋಗಿಸಿದನು.

ತಾಮವಪ್ಲುತ್ಯ ಜಗ್ರಾಹ ವಿಕೋಶಂ ಕೃತವಾನಸಿಮ್ ।
ವೈನತೇಯೋ ಯಥಾ ಕಾರ್ಷ್ಣಿಃ ಪತಂತೀಮುರಗಾಂಗನಾಮ್ ॥ ೮೮ ॥

ಅಭಿಮನ್ಯುವು ರಥದಿಂದ ಕೆಳಗೆ ಹಾರಿ, ಶಕ್ತಿಯನ್ನು ಒರೆಯಿಂದ ಹಿಡಿದು ಗರುಡನು ಹೆಣ್ಣುಸರ್ಪವನ್ನು ಹಿಡಿದಂತೆ ಆ ಶಕ್ತಿಯನ್ನು ಹಿಡಿದನು.

ತಸ್ಯ ಲಾಘವಮಾಜ್ಞಾಯ ಸತ್ತ್ವಂ ಚಾಮಿತತೇಜಸಃ ।
ಸಹಿತಾಃ ಸರ್ವರಾಜಾನಃ ಸಿಂಹನಾದಮಥಾನದನ್ ॥ ೮೯ ॥

ಅಮಿತ ಸಾಮರ್ಥ್ಯವುಳ್ಳ ಅವನ ಬಲವನ್ನು ಮತ್ತು ಕ್ಷಿಪ್ರತೆಯನ್ನು ನೋಡಿ ಎಲ್ಲ ರಾಜರೂ ಆಗ ಸಿಂಹನಾದವನ್ನು ಮಾಡಿದರು.

ತತಸ್ತಾಮೇವ ಶಲ್ಯಾಯ ಸೌಭದ್ರಃ ಪರವೀರಹಾ ।
ಪ್ರಜಹಾರ ಮಹಾಶಕ್ತಿಂ ವೈಡೂರ್ಯವಿಕೃತಾಂ ಸ್ಥಿರಾಮ್ ॥ ೯೦ ॥

ಅನಂತರ ಪರವೀರಘಾತಕನಾದ ಅಭಿಮನ್ಯುವು ವೈಢೂರ್ಯಖಚಿತವೂ, ದೃಢವೂ ಆದ ಅದೇ ಮಹಾಶಕ್ತಿಯನ್ನು ಶಲ್ಯನ ಮೇಲೆ ಎಸೆದನು.

ಸಾ ಕಾರ್ಷ್ಣಿಭುಜನಿರ್ಮುಕ್ತಾ ಸಹಸಾ ಭುಜಗೋಪಮಾ ।
ಜಘಾನ ಸೂತಂ ಶಲ್ಯಸ್ಯ ರಥಾಚ್ಚೈನಮಪಾತಯತ್ ॥ ೯೧ ॥

ಅಭಿಮನ್ಯುವಿನ ಭುಜದಿಂದ ನಿರ್ಮುಕ್ತವಾದ ಸರ್ಪದಂತಿದ್ದ ಆ ಶಕ್ತಿಯು ತಕ್ಷಣ ಶಲ್ಯನ ಸೂತನನ್ನು ಕೊಂದು, ಅವನನ್ನು ರಥದಿಂದ ಕೆಳಗೆ ಉರುಳಿಸಿತು.

ತತೋ ವಿರಾಟದ್ರುಪದೌ ಧೃಷ್ಟಕೇತುರ್ಯುಧಿಷ್ಠಿರಃ ।
ಸಾತ್ಯಕಿಃ ಕೇಕಯಾ ಭೀಮೋ ಧೃಷ್ಟದ್ಯುಮ್ನಶಿಖಂಡಿನೌ ।
ಯಮೌ ಚ ದ್ರೌಪದೇಯಾಶ್ಚ ಸಾಧು ಸಾಧ್ವಿತಿ ಚುಕ್ರುಶುಃ ॥ ೯೨ ॥

ಆಗ ವಿರಾಟ- ದ್ರುಪದರೂ, ಧೃಷ್ಟಕೇತು, ಯುಧಿಷ್ಠಿರ, ಸಾತ್ಯಕಿ, ಕೇಕಯರೂ, ಭೀಮಸೇನ, ಧೃಷ್ಟದ್ಯುಮ್ನ, ಶಿಖಂಡಿ, ನಕುಲ-ಸಹದೇವರೂ ಮತ್ತು ದ್ರೌಪದಿಯ ಪುತ್ರರೆಲ್ಲರೂ ಸಾಧು-ಸಾಧು ಎಂದು ಕಿರುಚಿದರು.

ಸಾಧುವಾದಾಶ್ಚ ವಿವಿಧಾಃ ಸಿಂಹನಾದಾಶ್ಚ ಪುಷ್ಕಲಾಃ ।
ಪ್ರಾದುರಾಸನ್ ಹರ್ಷಯಂತಃ ಸೌಭದ್ರಮಪರಾಜಿತಮ್ ॥ ೯೩ ॥

ಅಪರಾಜಿತನಾದ ಅಭಿಮನ್ಯುವನ್ನು ಹರ್ಷಗೊಳಿಸುತ್ತಾ, ಅನೇಕವಿಧವಾದ ಸಾಧುವಾದಗಳು, ಪುಷ್ಕಳವಾದ ಸಿಂಹನಾದಗಳು ಉಂಟಾದವು.

ಪರಿವವ್ರುಃ ಸ್ಮ ತೇ ಸರ್ವೇ ಪಾಂಡವಾನಾಂ ಮಹಾರಥಾಃ ।
ಹರ್ಷಯಂತಶ್ಚ ಸೌಭದ್ರಂ ರೋಷಯಂತಃ ಸುತಾಂಶ್ಚ ತೇ ॥ ೯೪ ॥

ಪಾಂಡವರ ಮಹಾರಥರೆಲ್ಲರೂ ಅಭಿಮನ್ಯುವನ್ನು ಹರ್ಷಗೊಳಿಸುತ್ತಾ, ನಿನ್ನ ಪುತ್ರರನ್ನು ರೋಷಗೊಳಿಸುತ್ತಾ, ಅವನನ್ನು ಸುತ್ತುವರಿದರು.

ತನ್ನಾಮೃಷ್ಯಂತ ಪುತ್ರಾಸ್ತೇ ಶತ್ರೋರ್ವಿಜಯಲಕ್ಷಣಮ್ ।
ಅಥೈನಂ ಸಹಿತಾಃ ಸರ್ವೇ ಸಮಂತಾನ್ನಿಶಿತೈಃ ಶರೈಃ ।
ಅಭ್ಯಾಕಿರನ್ ಮಹಾರಾಜ ತೋಯದಾ ಇವ ಪರ್ವತಮ್ ॥ ೯೫ ॥

ಶತ್ರುವಿನ ಆ ವೀರಚಿಹ್ನೆಯನ್ನು ನಿನ್ನ ಪುತ್ರರು ಸಹಿಸಲಿಲ್ಲ. ಎಲೈ ಮಹಾರಾಜನೇ, ಆಗ ಅವರೆಲ್ಲರೂ ಒಟ್ಟಿಗೆ ಸೇರಿ, ಎಲ್ಲ ಕಡೆಗಳಿಂದಲೂ ಮೋಡವು ಪರ್ವತದ ಮೇಲೆ ಮಳೆಯನ್ನು ಸುರಿಸಿದಂತೆ ಅವನ ಮೇಲೆ ನಿಶಿತವಾದ ಬಾಣಗಳಿಂದ ಬಾಣಗಳ ಮಳೆಯನ್ನು ಸುರಿಸಿದರು.

ತೇಷಾಂ ತು ಪ್ರಿಯಮನ್ವಿಚ್ಛನ್ ಸೂತಸ್ಯ ತು ಪರಾಭವಾತ್ ।
ಆರ್ತಾಯನಿರಮಿತ್ರಘ್ನಃ ಕ್ರುದ್ಧಃ ಸೌಭದ್ರಮಭ್ಯಯಾತ್ ॥ ೯೬ ॥

ಅವರಿಗೆ ಪ್ರಿಯವನ್ನು ಮಾಡಲು ಬಯಸಿ, ತನ್ನ ಸೂತನು ಹತನಾದ ಕಾರಣದಿಂದಲೂ ಸಹ ಕ್ರುದ್ಧನಾದ, ಶತ್ರುಸಂಹಾರಕನಾದ, ಋತಾಯನ ಪುತ್ರನಾದ ಶಲ್ಯನು ಅಭಿಮನ್ಯುವಿನ ಕಡೆಗೆ ನುಗ್ಗಿದನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ತ್ರಯೋದಶೋಽಧ್ಯಾಯಃ ॥

॥ ದ್ರೋಣಾಭಿಷೇಕಪರ್ವಣಿ ತ್ರಯೋದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಹದಿಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹದಿನಾಲ್ಕನೆಯ ಅಧ್ಯಾಯ

ಗದಾಯುದ್ಧದಲ್ಲಿ ಭೀಮನಿಂದ ಶಲ್ಯನ ಪರಾಜಯ

ಧೃತರಾಷ್ಟ್ರಃ

ಬಹೂನಿ ಸುವಿಚಿತ್ರಾಣಿ ದ್ವಂದ್ವಯುದ್ಧಾನಿ ಸಂಜಯ ।
ತ್ವಯೋಕ್ತಾನಿ ನಿಶಮ್ಯಾಹಂ ಸ್ಪೃಹಯಾಮಿ ಸಚಕ್ಷುತಾಮ್ ॥ ೧ ॥

ಧೃತರಾಷ್ಟ್ರ– ಎಲೈ ಸಂಜಯನೇ, ನೀನು ಬಹಳ ವಿಚಿತ್ರವಾದ, ಅನೇಕ ದ್ವಂದ್ವ ಯುದ್ಧಗಳನ್ನು ಹೇಳುತ್ತಿದ್ದೀಯೆ. ಅವುಗಳನ್ನು ಕೇಳಿ ನಾನು ಚಕ್ಷುಸ್ಸನ್ನು ಬಯಸುತ್ತೇನೆ.

ನಹಿ ದೇವಾಸುರಂ ಯುದ್ಧಮೀದೃಗ್ರೂಪಂ ಭವೇದಿತಿ ।
ಚಿಂತಯಾಮಿ ಚ ಯುದ್ಧಾನಿ ಶ್ರುತ್ವಾ ಘೋರಾಣಿ ಸಂಜಯ ॥ ೨ ॥

ಎಲೈ ಸಂಜಯನೇ, ನೀನು ಹೇಳಿರುವ ಘೋರ ಯುದ್ಧಗಳನ್ನು ಕೇಳಿ, ದೇವಾಸುರ ಯುದ್ಧವೂ ಸಹ ಇಂತಹ ಆಕಾರವನ್ನು ಹೊಂದಿರಲಿಲ್ಲವೆಂದು ಚಿಂತಿಸುತ್ತೇನೆ.

ಆಶ್ಚರ್ಯಭೂತಂ ಲೋಕೇಽಸ್ಮಿನ್ ಕಥಯಿಷ್ಯಂತಿ ಮಾನವಾಃ ।
ಕುರೂಣಾಂ ಪಾಂಡವಾನಾಂ ಚ ಯುದ್ಧಂ ದೇವಾಸುರೋಪಮಮ್ ॥

ಕುರು-ಪಾಂಡವರಿಗೆ ನಡೆದ, ದೇವಾಸುರರ ಯುದ್ಧಕ್ಕೆ ಸದೃಶವಾದ ಯುದ್ಧವು ಆಶ್ಚರ್ಯಭೂತವಾದುದೆಂದು ಈ ಲೋಕದಲ್ಲಿ ಮಾನವರು ಮುಂದೆ ಹೇಳುವರು.

ನಹಿ ಮೇ ತೃಪ್ತಿರಸ್ತೀಹ ಶೃಣ್ವತೋ ಯುದ್ಧಮುತ್ತಮಮ್ ।
ತಸ್ಮಾದಾರ್ತಾಯನೇರ್ಯುದ್ಧಂ ಸೌಭದ್ರಸ್ಯ ಚ ಶಂಸ ಮೇ ॥ ೪ ॥

ನೀನು ಹೇಳುವ ಶ್ರೇಷ್ಠವಾದ ಯುದ್ಧವನ್ನು ಕೇಳುವ ನನಗೆ ತೃಪ್ತಿಯೇ ಆಗುತ್ತಿಲ್ಲ. ಆದ್ದರಿಂದ ಶಲ್ಯ ಮತ್ತು ಅಭಿಮನ್ಯು ಇವರ ಯುದ್ಧವನ್ನು ನನಗೆ ಹೇಳು.

ಸಂಜಯಃ

ಸಾದಿತಂ ಪ್ರೇಕ್ಷ್ಯ ಯಂತಾರಂ ಶಲ್ಯಃ ಸರ್ವಾಯಸೀಂ ಗದಾಮ್ ।
ಸಮುತ್ಕ್ಷಿಪ್ಯ ನದನ್ ಕ್ರುದ್ಧಃ ಪ್ರಚಸ್ಕಂದ ರಥೋತ್ತಮಾತ್ ॥ ೫ ॥

ಸಂಜಯ– ತನ್ನ ಸಾರಥಿಯು ಮೃತನಾದುದನ್ನು ನೋಡಿ ಶಲ್ಯನು ಪೂರ್ಣವಾಗಿ ಕಬ್ಬಿಣದಿಂದ ಮಾಡಿದ ಗದೆಯನ್ನು ಎತ್ತಿ, ಕ್ರುದ್ಧನಾಗಿ ಗರ್ಜಿಸುತ್ತಾ ತನ್ನ ಶ್ರೇಷ್ಠ ರಥದಿಂದ ಇಳಿದನು.

ಸೌಭದ್ರೋಽಪ್ಯಶನಿಪ್ರಖ್ಯಾಮಾದಾಯ ಸ್ವರಥಾದ್ ಗದಾಮ್ ।
ಏಹ್ಯೇಹೀತ್ಯಬ್ರವೀಚ್ಛಲ್ಯಂ ಯತ್ನಾದ್ ಭೀಮೇನ ವಾರಿತಃ ॥ ೬ ॥

ಅಭಿಮನ್ಯುವೂ ಸಹ ಸಿಡಿಲಿನಂತಿದ್ದ ಗದೆಯನ್ನು ತೆಗೆದುಕೊಂಡು, ತನ್ನ ರಥದಿಂದ ಇಳಿದು ಶಲ್ಯನನ್ನು ಕುರಿತು ಬಾ, ಬಾ ಎಂದು ಹೇಳುತ್ತಿದ್ದಾಗ, ಭೀಮಸೇನನು ಪ್ರಯತ್ನಪಟ್ಟು ಅವನನ್ನು ತಡೆದನು.

ವಾರಯಿತ್ವಾ ತು ಸೌಭದ್ರಂ ಭೀಮಸೇನಃ ಪ್ರತಾಪವಾನ್ ।
ಶಲ್ಯಮಾಸಾದ್ಯ ಸಮರೇ ತಸ್ಥೌ ಮೇರುರಿವಾಚಲಃ ॥ ೭ ॥

ಪ್ರತಾಪಶಾಲಿಯಾದ ಭೀಮಸೇನನು ಅಭಿಮನ್ಯುವನ್ನು ತಡೆದು, ಶಲ್ಯನನ್ನು ಸಮೀಪಿಸಿ ಮೇರುಪರ್ವತದಂತೆ ರಣರಂಗದಲ್ಲಿ ನಿಂತನು.

ತಥೈವ ಮದ್ರರಾಜೋಽಪಿ ಭೀಮಂ ದೃಷ್ಟ್ವಾ ಮಹಾಗದಮ್ ।
ಸಸಾರಾಭಿಮುಖಸ್ತೂರ್ಣಂ ಶಾರ್ದೂಲ ಇವ ಕುಂಜರಮ್ ॥ ೮ ॥

ಹಾಗೆಯೇ ಮದ್ರರಾಜನೂ ಸಹ ಭೀಮಸೇನನು ದೊಡ್ಡ ಗದೆಯನ್ನು ಹಿಡಿದಿರುವುದನ್ನು ನೋಡಿ, ವ್ಯಾಘ್ರವು ಗಜದ ಎದುರಿಗೆ ಬಂದಂತೆ ಶೀಘ್ರವಾಗಿ ಅವನಿಗೆ ಅಭಿಮುಖವಾಗಿ ಬಂದನು.

ತಂ ದೀಪ್ತಮಿವ ಕಾಲಾಗ್ನಿಂ ದಂಡಹಸ್ತಮಿವಾಂತಕಮ್ ।
ಜವೇನಾಭ್ಯಪತದ್ ಭೀಮಃ ಪ್ರಗೃಹ್ಯ ಮಹತೀಂ ಗದಾಮ್ ॥ ೯ ॥

ಭೀಮನು ದೊಡ್ಡ ಗದೆಯನ್ನು ಹಿಡಿದು ಜ್ವಲಿಸುವ ಕಾಲಾಗ್ನಿಯಂತೆ, ದಂಡವನ್ನು ಹಿಡಿದ ಯಮನಂತೆ ಇದ್ದ ಅವನ ಬಳಿಗೆ ಶೀಘ್ರವಾಗಿ ಧಾವಿಸಿದನು.

ತತಸ್ತೂರ್ಯನಿನಾದಶ್ಚ ಶಂಖಾನಾಂ ಚ ಸಹಸ್ರಶಃ ।
ಸಿಂಹನಾದಶ್ಚ ಸಂಜಜ್ಞೇ ಭೇರೀಣಾಂ ಚ ಮಹಾಸ್ವನಃ ॥ ೧೦ ॥

ಆಗ ಸಹಸ್ರಸಂಖ್ಯೆಯಲ್ಲಿ ತೂರ್ಯ ನಾದಗಳೂ, ಶಂಖನಾದಗಳೂ, ಸಿಂಹನಾದಗಳೂ ಮತ್ತು ಭೇರಿಯ ನಾದಗಳೂ ಉಂಟಾದವು.

ಪಶ್ಯತಾಂ ಶತಶೋ ಹ್ಯಾಸೀದ್ ಅನ್ಯೋನ್ಯಗತಚೇತಸಾಮ್ ।
ಪಾಂಡವಾನಾಂ ಕುರೂಣಾಂ ಚ ಸಾಧು ಸಾಧ್ವಿತಿ ನಿಸ್ವನಃ ॥ ೧೧ ॥

ಕೆಲವರು ಶಲ್ಯನಲ್ಲಿಯೂ, ಕೆಲವರು ಅಭಿಮನ್ಯುವಿನಲ್ಲಿಯೂ ಮನಸ್ಸಿನಲ್ಲಿ ಆಸಕ್ತರಾಗಿ, ಅವರಿಬ್ಬರನ್ನು ನೋಡುವ ನೂರಾರು ಸಂಖ್ಯೆಯ ಪಾಂಡವರಿಂದ ಮತ್ತು ಕೌರವರಿಂದ 'ಸಾಧು-ಸಾಧು' ಎಂಬ ದೊಡ್ಡ ಶಬ್ದವು ಕೇಳಿ ಬಂದಿತು.

ನಹಿ ಮದ್ರಾಧಿಪಾದನ್ಯಃ ಸರ್ವರಾಜಸು ಭಾರತ ।
ಸೋಢುಮುತ್ಸಹತೇ ವೇಗಂ ಭೀಮಸೇನಸ್ಯ ಸಂಯುಗೇ ॥ ೧೨ ॥

ಎಲೈ ಭಾರತನೇ, ಎಲ್ಲರಾಜರ ಮಧ್ಯದಲ್ಲಿ ಮದ್ರಾಧಿಪನಾದ ಶಲ್ಯನನ್ನು ಬಿಟ್ಟು ಬೇರೆ ಯಾವನೂ ಯುದ್ಧದಲ್ಲಿ ಭೀಮಸೇನನ ವೇಗವನ್ನು ತಡೆಯಲು ಸಮರ್ಥನಾಗುವುದಿಲ್ಲ.

ತಥಾ ಮದ್ರಾಧಿಪಸ್ಯಾಪಿ ಗದಾವೇಗಂ ಮಹಾತ್ಮನಃ ।
ಸೋಢುಮುತ್ಸಹತೇ ಲೋಕೇ ಯುಧಿ ಕೋಽನ್ಯೋ ವೃಕೋದರಾತ್ ॥

ಹಾಗೆಯೇ ಮಹಾತ್ಮನಾದ ಶಲ್ಯನ ಗದಾ ವೇಗವನ್ನು ಸಹಿಸಲು ಲೋಕದಲ್ಲಿ ಭೀಮಸೇನನನ್ನು ಬಿಟ್ಟು ಬೇರೆ ಯಾವನು ಸಮರ್ಥನಾಗುತ್ತಾನೆ?

ಪಟ್ಟೈರ್ಜಾಂಬೂನದೈರ್ಬದ್ಧಾ ಬಭೂವ ಜನಭೀಷಣೀ ।
ಪ್ರಜಜ್ವಾಲ ತದಾ ವಿದ್ಧಾ ಭೀಮೇನ ಮಹತೀ ಗದಾ ।
ಸಾಗ್ನಿದೀಪ್ತಾ ಮಹಾರೌದ್ರಾ ಗದಾ ಸಾ ಶುಶುಭೇ ತದಾ ॥ ೧೪ ॥

ಸುವರ್ಣಮಯವಾದ ಕಟ್ಟುಗಳಿಂದ ಬಿಗಿಯಲ್ಪಟ್ಟ, ನೋಡುವ ಜನರಿಗೆ ಭಯಂಕರವಾದ, ಭೀಮಸೇನನ ದೊಡ್ಡ ಗದೆಯು ಶಲ್ಯನನ್ನು ಅಪ್ಪಳಿಸಿ ಜ್ವಾಲೆಗಳನ್ನು ಸೂಸಿತು. ಮಹಾಭಯಂಕರವಾದ ಅಗ್ನಿಯಂತೆ ದೀಪ್ತವಾದ ಆ ಗದೆಯು ಆಗ ಶೋಭಿಸಿತು.

ತಥೈವ ಚರತೋ ಮಾರ್ಗಾನ್ ಮಂಡಲಾನಿ ಚ ಭಾಗಶಃ ।
ಮಹಾವಿದ್ಯುತ್ಪ್ರತೀಕಾಶಾ ಶಲ್ಯಸ್ಯ ಶುಶುಭೇ ಗದಾ ॥ ೧೫ ॥

ಹಾಗೆಯೇ ರಣರಂಗದ ಭಾಗಗಳಲ್ಲಿ, ಮಾರ್ಗಗಳಲ್ಲಿ ಮತ್ತು ಮಂಡಲಗಳಲ್ಲಿ ಸಂಚರಿಸುವ ಶಲ್ಯನ ದೊಡ್ಡ ಮಿಂಚಿನ ಕಾಂತಿಯನ್ನು ಹೊಂದಿದ ದೊಡ್ಡ ಗದೆಯೂ ಶೋಭಿಸಿತು.

ತೌ ವೃಷಾವಿವ ನರ್ದಂತೌ ಮಂಡಲಾನಿ ವಿಚೇರತುಃ ।
ಆವರ್ತಿತಗದಾಹಸ್ತಾವುಭೌ ಶಲ್ಯವೃಕೋದರೌ ॥ ೧೬ ॥

ಶಲ್ಯ-ವೃಕೋದರರು ಗೂಳಿಗಳಂತೆ ಗರ್ಜಿಸುತ್ತಾ, ಕೈಯಲ್ಲಿದ್ದ ಗದೆಗಳನ್ನು ತಿರುಗಿಸುತ್ತಾ ಮಂಡಲಗಳಲ್ಲಿ ಸಂಚರಿಸಿದರು.

ಕೋಪತಾಮ್ರೇಕ್ಷಣೌ ವೀರೌ ಶತ್ರುಸಂಘವಿಮರ್ದನೌ ।
ಮಹಾಮಾತ್ರೌ ಮಹೋತ್ಸಾಹೌ ಗದಾಯುದ್ಧವಿಶಾರದೌ ॥ ೧೭ ॥

ಕೋಪದಿಂದ ಕೆಂಪಾದ ಕಣ್ಣುಳ್ಳ, ವೀರರಾದ, ಶತ್ರುಸಮೂಹ, ನಾಶಕರಾದ, ಪ್ರಧಾನರಾದ, ಮಹಾ ಉತ್ಸಾಹವನ್ನು ಹೊಂದಿದ, ಗದಾಯುದ್ಧ ವಿಶಾರದರಾದ ಅವರಿಬ್ಬರೂ (ಮಂಡಲಗಳಲ್ಲಿ ಸಂಚರಿಸಿದರು).

ಮಂಡಲಾವರ್ತವೇಗೇಷು ಗದಾಪ್ರಹರಣೇಷು ಚ ।
ನಿರ್ವಿಶೇಷಮಭೂದ್ ಯುದ್ಧಂ ತಯೋಃ ಪುರುಷಸಿಂಹಯೋಃ ॥

ಮಂಡಲಗಳಲ್ಲಿ ತಿರುಗುವುದರಲ್ಲಿ, ವೇಗದಲ್ಲಿ ಮತ್ತು ಗದೆಯ ಅಭಿಘಾತದಲ್ಲಿ ಆ ಇಬ್ಬರು ಪುರುಷಸಿಂಹರಿಗೆ ಯುದ್ಧದಲ್ಲಿ ಯಾವ ವ್ಯತ್ಯಾಸವೂ ಇರಲಿಲ್ಲ.

ತಾಡಿತಾ ಭೀಮಸೇನೇನ ಶಲ್ಯಸ್ಯ ಮಹತೀ ಗದಾ ।
ಸಾಗ್ನಿಜ್ವಾಲಾ ಮಹಾರೌದ್ರಾ ತದಾ ತೂರ್ಣಮಶೀರ್ಯತ ॥ ೧೯ ॥

ಭೀಮಸೇನನಿಂದ ತಾಡಿತವಾದ ಶಲ್ಯನ ಮಹಾಭಯಂಕರವಾದ ದೊಡ್ಡ ಗದೆಯು ಅಗ್ನಿಜ್ವಾಲೆಗಳಿಂದ ಸಹಿತವಾಗಿ ಶೀಘ್ರವಾಗಿ ಒಡೆದು ಹೋಯಿತು.

ತಥೈವ ಭೀಮಸೇನಸ್ಯ ದ್ವಿಷತಾऽಭಿಹತಾ ಗದಾ ।
ವರ್ಷಾಪ್ರದೋಷೇ ಖದ್ಯೋತೈಃ ವೃತೋ ವೃಕ್ಷ ಇವಾಬಭೌ ॥ ೨೦ ॥

ಹಾಗೆಯೇ ಶತ್ರುವಾದ ಶಲ್ಯನಿಂದ ಹೊಡೆಯಲ್ಪಟ್ಟ ಭೀಮಸೇನನ ಗದೆಯು ಮಳೆಗಾಲದಲ್ಲಿ ರಾತ್ರಿಯ ಕಾಲದಲ್ಲಿ ಮಿಣುಕು ಹುಳುಗಳಿಂದ ತುಂಬಿದ ವೃಕ್ಷದಂತೆ (ಅಗ್ನಿ ಕಿಡಿಗಳನ್ನು ಸೂಸುತ್ತಾ ಪ್ರಕಾಶಿಸಿತು).

ಗದಾ ಕ್ಷಿಪ್ತಾ ತು ಸಮರೇ ಮದ್ರರಾಜೇನ ಧೀಮತಾ ।
ಆಕಾಶಂ ದೀಪಯಂತೀ ಸಾ ಪಾವಕಂ ಚಾಸೃಜದ್ ಬಹು ॥ ೨೧ ॥

ಮೇಧಾವಿಯಾದ ಮದ್ರರಾಜನಿಂದ ಯುದ್ಧದಲ್ಲಿ ಎಸೆಯಲ್ಪಟ್ಟ ಗದೆಯು ಆಕಾಶವನ್ನು ಪ್ರಕಾಶಿಸುತ್ತಾ ದೊಡ್ಡ ಅಗ್ನಿಯನ್ನು ಉತ್ಪಾದಿಸಿತು.

ತಥೈವ ಭೀಮಸೇನೇನ ಪ್ರೇಷಿತಾ ಶತ್ರುಘಾತಿನಾ ।
ಭೀಮರೂಪಾ ಮಹಾವೇಗಾ ಗದಾ ಶಲ್ಯಂ ರಣೇऽತುದತ್ ॥ ೨೨ ॥

ಹಾಗೆಯೇ ಶತ್ರುಸಂಹಾರಕನಾದ ಭೀಮಸೇನನು ಎಸೆದ ಮಹಾವೇಗವುಳ್ಳ ಭಯಂಕರವಾದ ಗದೆಯು ರಣರಂಗದಲ್ಲಿ ಶಲ್ಯನನ್ನು ಪೀಡಿಸಿತು.

ತ್ರಾಸಯಾಮಾಸ ತತ್ ಸೈನ್ಯಂ ಮಹಾವೇಗೋಗ್ರದರ್ಶನಾ ॥ ೨೩ ॥

ಮಹಾವೇಗವುಳ್ಳ, ನೋಡಲು ಭಯಂಕರವಾದ ಆ ಗದೆಯು ಆ ಶತ್ರುಸೈನ್ಯಕ್ಕೆ ಭಯವನ್ನುಂಟು ಮಾಡಿತು.

ತೇ ಚೈವೋಭೇ ಗದೇ ಶ್ರೇಷ್ಠೇ ಸಮಾಸಾದ್ಯ ಪರಸ್ಪರಮ್ ।
ತಥಾ ವಿಸೃಜತಾಂ ವಹ್ನಿಂ ನಾಗಕನ್ಯೇ ಇವೋಜ್ಜ್ವಲೇ ॥ ೨೪ ॥

ಅವೆರಡು ಶ್ರೇಷ್ಠವಾದ ಗದೆಗಳು ಪರಸ್ಪರವಾಗಿ ಘಟ್ಟಿಸಿ, ಉಜ್ವಲರಾದ ನಾಗಕನ್ಯೆಯರಂತೆ ಅಗ್ನಿಯನ್ನು ಸೃಷ್ಟಿಸಿದವು.

ಪುನಃ ಶಲ್ಯೇನ ಭೀಮಸ್ಯ ಗದಾಗ್ರಾದ್ ಗದಯಾ ಹತಾತ್ ।
ಸಂಘರ್ಷಣಾದುತ್ಥಿತೋऽಗ್ನಿಃ ದೀಪಯಾಮಾಸ ಮೇದಿನೀಮ್ ॥೨೫॥

ಪುನಃ ಭೀಮನ ಶ್ರೇಷ್ಠ ಗದೆಯಿಂದ ಹೊಡೆಯಲ್ಪಟ್ಟ ಶಲ್ಯನ ಗದೆಯ ಸಂಘರ್ಷದಿಂದ ಉಂಟಾದ ಅಗ್ನಿಯು ಭೂಮಿಯನ್ನು ಪ್ರಕಾಶಿಸಿತು.

ಪುನಶ್ಚ ಭೀಮಸೇನೇನ ಶಲ್ಯಸ್ಯ ಮಹತೀ ಗದಾ ।
ತಾಡಿತಾ ಸಹಸಾ ರಾಜನ್ ವಿಸಸರ್ಜಾಥ ಪಾವಕಮ್ ॥ ೨೬ ॥

ಎಲೈ ರಾಜನೇ, ಪುನಃ ಭೀಮಸೇನನಿಂದ ಹೊಡೆಯಲ್ಪಟ್ಟ ಶಲ್ಯನ ದೊಡ್ಡ ಗದೆಯು ಅಗ್ನಿಯನ್ನು ಉಂಟುಮಾಡಿತು.

ನಖೈರಿವ ಮಹಾವ್ಯಾಘ್ರೌ ದಂತೈರಿವ ಮಹಾಗಜೌ ।
ತೌ ವಿಚೇರತುರಾಸಾದ್ಯ ಗದಾಗ್ರಾಭ್ಯಾಂ ಪರಸ್ಪರಮ್ ॥ ೨೭ ॥

ಮಹಾವ್ಯಾಘ್ರಗಳು ನಖಗಳಿಂದ ಯುದ್ಧಮಾಡಿದಂತೆ, ಮಹಾಗಜಗಳು ದಂತದಿಂದ ಯುದ್ಧಮಾಡಿದಂತೆ, ಅವರಿಬ್ಬರೂ ಪರಸ್ಪರವಾಗಿ ಶ್ರೇಷ್ಠ ಗದೆಗಳಿಂದ ಒಬ್ಬರನ್ನೊಬ್ಬರು ಸಮೀಪಿಸಿ ಸಂಚರಿಸಿದರು.

ತೌ ಗದಾಗ್ರಾಹತೈರ್ಗಾತ್ರೈಃ ಕ್ಷಣೇನ ರುಧಿರೋಕ್ಷಿತೌ ।
ದದೃಶಾತೇ ಮಹಾತ್ಮಾನೌ ಕಿಂಶುಕಾವಿವ ಪುಷ್ಪಿತೌ ॥ ೨೮ ॥

ಮಹಾತ್ಮರಾದ ಅವರು ಶ್ರೇಷ್ಠವಾದ ಗದೆಯ ಹೊಡೆತದಿಂದ ಒಂದುಕ್ಷಣದಲ್ಲಿ ಶರೀರದಿಂದ ರಕ್ತವನ್ನು ಸುರಿಸುತ್ತಾ, ಹೂವರಳಿದ ಮುತ್ತುಗದ ಮರದಂತೆ ಕಂಡುಬಂದರು.

ಶುಶ್ರುವುರ್ದಿಕ್ಷು ಸರ್ವಾಸು ತಯೋಃ ಪುರುಷಸಿಂಹಯೋಃ ।
ಗದಾಸಂಘಾತಸಂಹ್ರಾದಾಃ ಶಕ್ರಾಶನಿರವಾ ಇವ ॥ ೨೯ ॥

ಆ ಇಬ್ಬರು ಪುರುಷಸಿಂಹರ ಗದೆಗಳ ಸಂಘರ್ಷದಿಂದ ಉಂಟಾದ ದೊಡ್ಡ ನಾದವು ಇಂದ್ರನ ವಜ್ರಾಯುಧದ ನಾದಗಳಂತೆ ಎಲ್ಲ ದಿಕ್ಕುಗಳಲ್ಲಿಯೂ ಕೇಳಿಬಂದವು.

ಗದಯಾ ಮದ್ರರಾಜೇನ ಸವ್ಯದಕ್ಷಿಣಮಾಹತಃ ।
ನ ಸ ಸ್ಮ ವಿವ್ಯಥೇ ಭೀಮೋ ಭಿದ್ಯಮಾನ ಇವಾಚಲಃ ॥ ೩೦ ॥

ಮದ್ರರಾಜನಿಂದ, ಅವನ ಗದೆಯಿಂದ ಎಡ-ಬಲ ಭಾಗಗಳಲ್ಲಿ ಹೊಡೆಯಲ್ಪಟ್ಟ ಭೀಮನು ಭೇದಿಸಲ್ಪಡುವ ಪರ್ವತದಂತೆ ವ್ಯಥೆಯನ್ನು ಹೊಂದಲಿಲ್ಲ.

ತಥಾ ಭೀಮಗದಾವೇಗೈಃ ತಾಡ್ಯಮಾನೋ ಮಹಾಬಲಃ ।
ಧೈರ್ಯಾನ್ಮದ್ರಾಧಿಪಸ್ತಸ್ಥೌ ವಜ್ರೈರ್ಗಿರಿರಿವಾಹತಃ ॥ ೩೧ ॥

ಹಾಗೆಯೇ ಭೀಮನ ಗದೆಯ ವೇಗಗಳಿಂದ ಹೊಡೆಯಲ್ಪಟ್ಟ ಮಹಾಬಲನಾದ ಮದ್ರರಾಜನು ವಜ್ರಾಯುಧದಿಂದ ಹೊಡೆಯಲ್ಪಟ್ಟ ಪರ್ವತದಂತೆ ಧೈರ್ಯದಿಂದ ನಿಂತನು.

ಅಪೇತತುರ್ಮಹಾಮಾರ್ಗಾತ್ ಸಮುಚ್ಛ್ರಿತಮಹಾಗದೌ ।
ಪುನರಾವೃತ್ತಮಾರ್ಗಸ್ಥೌ ಮಂಡಲಾನಿ ವಿಚೇರತುಃ ॥ ೩೨ ॥

ಮಹಾಗದೆಗಳನ್ನು ಎತ್ತಿದ ಅವರಿಬ್ಬರೂ ಮಹಾಮಾರ್ಗಗಳಲ್ಲಿ ಒಬ್ಬರ ಮೇಲೆ ಒಬ್ಬರು ಎರಗಿದರು. ಪುನಃ ಆ ಮಾರ್ಗಗಳಿಂದ ಹಿಂದಿರುಗಿದ ಅವರು ಮಂಡಲಗಳಲ್ಲಿ ಸಂಚರಿಸಿದರು.

ಅಥಾಪ್ಲುತ್ಯ ಪದಾನ್ಯಷ್ಟೌ ಸನ್ನಿಪತ್ಯ ಗಜಾವಿವ ।
ಸಹಸಾ ಲೋಹದಂಡಾಭ್ಯಾಮನ್ಯೋನ್ಯಮಭಿಜಘ್ನತುಃ ॥ ೩೩ ॥

ಅನಂತರ ಎಂಟು ಹೆಜ್ಜೆಯಷ್ಟು ದೂರವನ್ನು ಹಾರಿ, ಗಜಗಳಂತೆ ಒಬ್ಬರ ಮೇಲೆ ಒಬ್ಬರು ಎರಗಿ, ಲೋಹದಂಡಗಳನ್ನು ಹೊಂದಿದ ಗದೆಗಳಿಂದ ಪರಸ್ಪರವಾಗಿ ಹೊಡೆದಾಡಿದರು.

ತೌ ಪರಸ್ಪರವೇಗಾಚ್ಚ ಗದಾಭ್ಯಾಂ ಚ ದೃಢಾಹತೌ ।
ಯುಗಪತ್ ಪೇತತುರ್ವೀರೌ ಕ್ಷಿತಾವಿಂದ್ರಧ್ವಜಾವಿವ ॥ ೩೪ ॥

ಪರಸ್ಪರ ವೇಗದಿಂದಲೂ ಮತ್ತು ಗದೆಗಳ ದೃಢವಾದ ಪ್ರಹಾರದಿಂದಲೂ ಆ ವೀರರು ಇಂದ್ರಧ್ವಜಗಳಂತೆ ಒಂದೇ ಕಾಲದಲ್ಲಿ ಭೂಮಿಯ ಮೇಲೆ ಬಿದ್ದರು.

ತಥಾ ವಿಹ್ವಲಗಾತ್ರಂ ತಂ ನಿಃಶ್ವಸಂತಂ ಪುನಃಪುನಃ ।
ಶಲ್ಯಮಭ್ಯಪತತ್ ತೂರ್ಣಂ ಕೃತವರ್ಮಾ ಮಹಾರಥಃ ॥ ೩೫ ॥

ತನ್ನ ಶರೀರವು ಪೀಡಿತವಾಗಿ ಪುನಃ ಪುನಃ ನಿಃಶ್ವಾಸವನ್ನು ಬಿಡುತ್ತಿದ್ದ ಶಲ್ಯನ ಬಳಿಗೆ ಮಹಾರಥನಾದ ಕೃತವರ್ಮನು ಶೀಘ್ರವಾಗಿ ಬಂದನು.

ದೃಷ್ಟ್ವಾ ಚೈನಂ ಮದ್ರರಾಜಂ ಗದಯಾಽಭಿನಿಪೀಡಿತಮ್ ।
ವೇಪಮಾನಂ ಮಹಾರಾಜ ಮೂರ್ಚ್ಛಯಾಽಭಿಪರಿಪ್ಲುತಮ್ ॥ ೩೬ ॥

ತತಃ ಸ ನಿಜಮಾರೋಪ್ಯ ಮದ್ರಾಣಾಮಧಿಪಂ ರಥಮ್ ।
ಅಪೋವಾಹ ರಣಾದ್ ರಾಜನ್ ತೂರ್ಣಮಾಯೋಧನಾದ್ ಬಹಿಃ ॥

ಎಲೈ ಮಹಾರಾಜನೇ, ಮದ್ರರಾಜನು ಗದೆಯಿಂದ ಬಹಳವಾಗಿ ಪೀಡಿಸಲ್ಪಟ್ಟು ಭೂಮಿಯ ಮೇಲೆ ಮೂರ್ಛೆಯಿಂದ ಮುದುರಿಕೊಂಡು ಬಿದ್ದಿರುವುದನ್ನು ನೋಡಿ, ಕೃತವರ್ಮನು ಮಹಾರಥನಾದ ಮದ್ರಾಧಿಪತಿಯಾದ ಶಲ್ಯನನ್ನು ತನ್ನ ರಥಕ್ಕೆ ಏರಿಸಿ ಶೀಘ್ರವಾಗಿ ರಣರಂಗದಿಂದ ಹೊರಗೆ ಕರೆದುಕೊಂಡು ಹೋದನು.

ಭೂಮೌ ನಿಪತಿತೋ ವೀರೋ ನಿಮೇಷಾತ್ ಪುನರುತ್ಥಿತಃ ।
ಭೀಮಸೇನೋ ಮಹಾಬಾಹುರ್ಗದಾಪಾಣಿರದೃಶ್ಯತ ॥ ೩೮ ॥

ಭೂಮಿಯಲ್ಲಿ ಬಿದ್ದ ವೀರನಾದ, ಮಹಾಬಾಹುವಾದ ಭೀಮಸೇನನು ಒಂದು ನಿಮಿಷದಲ್ಲಿ ಪುನಃ ಎದ್ದು ಕೈಯಲ್ಲಿ ಗದೆಯನ್ನು ಹಿಡಿದು ಎಲ್ಲರಿಗೂ ಕಾಣಿಸಿದನು.

ತತೋ ಮದ್ರಾಧಿಪಂ ದೃಷ್ಟ್ವಾ ಧಾರ್ತರಾಷ್ಟ್ರಾಃ ಪರಾಙ್ಮುಖಮ್ ।
ಸನಾಗರಥಪತ್ತಯ ಸಮಕಂಪಂತ ಮಾರಿಷ ॥ ೩೯ ॥

ಎಲೈ ಪೂಜ್ಯನೇ, ಆಗ ಮದ್ರಾಧಿಪನಾದ ಶಲ್ಯನು ಯುದ್ಧವಿಮುಖನಾದುದನ್ನು ನೋಡಿ ಧೃತರಾಷ್ಟ್ರಪುತ್ರರು ತಮ್ಮ ಗಜಾಶ್ವ-ರಥ-ಪದಾತಿಗಳಿಂದ ಸಹಿತರಾಗಿ ನಡುಗಿ ಹೋದರು.

ತೇ ಪಾಂಡವೈರರ್ದ್ಯಮಾನಾಃ ತಾವಕಾ ಜೀತಕಾಶಿಭಿಃ ।
ಭೀತಾ ದಿಶೋ ವ್ಯಕೀರ್ಯಂತ ವಾಯುನುನ್ನಾ ಯಥಾ ಘನಾಃ ॥ ೪೦॥

ಜಯಾಕಾಂಕ್ಷಿಗಳಾದ ಪಾಂಡವರಿಂದ ಹಿಂಸಿಸಲ್ಪಡುವ ಆ ನಿನ್ನ ಯೋಧರು ಭಯಗೊಂಡು, ಗಾಳಿಗೆ ಸಿಕ್ಕಿದ ಮೋಡಗಳಂತೆ ದಿಕ್ಕು-ದಿಕ್ಕುಗಳಲ್ಲಿ ಚದುರಿ ಹೋದರು.

ನಿರ್ಜಿತ್ಯ ಧಾರ್ತರಾಷ್ಟ್ರಾಂಸ್ತೇ ಪಾಂಡವೇಯಾ ಮಹಾರಥಾಃ ।
ವ್ಯರೋಚಂತ ರಣೇ ರಾಜನ್ ದೀಪ್ಯಮಾನಾ ಇವಾಗ್ನಯಃ ॥ ೪೧ ॥

ಎಲೈ ರಾಜನೇ, ಪಾಂಡವರ ಆ ಮಹಾರಥರು ದುರ್ಯೋಧನಾದಿಗಳನ್ನು ಜಯಿಸಿ ರಣರಂಗದಲ್ಲಿ ಜ್ವಲಿಸುವ ಅಗ್ನಿಗಳಂತೆ ಶೋಭಿಸಿದರು.

ಅಥ ಮಡ್ಡುಕಭೇರಿಮಹಾಮುರಜಾಃ
ಪಣವಾನಕದುಂದುಭಿಝುರ್ಝುರಿಭಿಃ ।

ಏನದಂತಿ ಭೃಶಂ ಸಹ ಶಂಖಿರವೈಃ
ವಿವಿಧೈಶ್ಚ ನರೋತ್ತಮ ಸಿಂಹರವೈಃ ॥ ೪೨ ॥

ಎಲೈ ನರಶ್ರೇಷ್ಠನೇ, ಆಗ ಪಾಂಡವರ ಪಾಳಯದಲ್ಲಿ ಮಡ್ಡುಕ, ಭೇರಿ, ಮಹಾಮುರಜಗಳು, ಪಣವ, ಆನಕ, ದುಂದುಭಿ, ಝರ್ಝರಗಳು, ಶಂಖಧ್ವನಿಗಳಿಂದಲೂ, ವಿವಿಧವಾದ ಸಿಂಹನಾದಗಳಿಂದಲೂ ಕೂಡಿ ಬಹಳವಾಗಿ ನಾದವನ್ನುಂಟು ಮಾಡಿದವು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಚತುರ್ದಶೋऽಧ್ಯಾಯಃ ॥

॥ ದ್ರೋಣಾಭಿಷೇಕಪರ್ವಣಿ ಚತುರ್ದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಹದಿನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹದಿನೈದನೆಯ ಅಧ್ಯಾಯ

ದ್ರೋಣರಿಂದ ಯುಧಿಷ್ಠಿರನ ಗ್ರಹಣೋದ್ಯಮದಲ್ಲಿ ಅರ್ಜುನನಿಂದ ಪ್ರತಿಬಂಧ. ಮೊದಲನೆಯ ದಿನದ ಯುದ್ಧದಲ್ಲಿ ದ್ರೋಣರಿಂದ ಸೈನ್ಯಾವಹಾರ.

ಸಂಜಯಃ

ತದ್ ಬಲಂ ಸುಮಹದ್ ದೀರ್ಣಂ ತ್ವದೀಯಂ ಪ್ರೇಕ್ಷ್ಯ ವೀರ್ಯವಾನ್ ।
ದಧಾರೈಕೋ ರಣೇ ಪಾಂಡೂನ್ ವೃಷಸೇನೋऽಸ್ತ್ರಮಾಯಯಾ ॥ ೧ ॥

ಸಂಜಯ– ನಿನ್ನ ದೊಡ್ಡ ಸೈನ್ಯವು ಬಹಳವಾಗಿ ಭಗ್ನವಾದುದನ್ನು ನೋಡಿ ಶೂರನಾದ, ಕರ್ಣಪುತ್ರನಾದ ವೃಷಸೇನನೊಬ್ಬನೇ ತನ್ನ ಅಸ್ತ್ರಸಾಮರ್ಥ್ಯದಿಂದ ರಣರಂಗದಲ್ಲಿ ಪಾಂಡವರನ್ನು ತಡೆದನು.

ಶರಾ ದಶ ದಿಶೋ ಮುಕ್ತಾ ವೃಷಸೇನೇನ ತೇಜಸಾ ।
ಪ್ರವಿಚೇರುರ್ವಿನಿರ್ಭಿದ್ಯ ನರವಾಜಿರಥದ್ವಿಪಾನ್ ॥ ೨ ॥

ವೃಷಸೇನನಿಂದ ತೇಜೋಯುಕ್ತವಾಗಿ ಪ್ರಯೋಗಿಸಲ್ಪಟ್ಟ ಬಾಣಗಳು ಪದಾತಿ-ಅಶ್ವ-ರಥ-ಗಜಗಳನ್ನು ಭೇದಿಸಿ ಹತ್ತು ದಿಕ್ಕುಗಳಲ್ಲಿಯೂ ಸಂಚರಿಸಿದವು.

ತಸ್ಯ ದೀಪ್ತಾ ಮಹಾಬಾಣಾ ವಿನಿಶ್ಚೇರುಃ ಸಹಸ್ರಶಃ ।
ಭಾನೋರಿವ ಮಹಾರಾಜ ದೀಪ್ಯಮಾನಾ ಗಭಸ್ತಯಃ ॥ ೩ ॥

ಮಹಾರಾಜನೇ, ಸೂರ್ಯನಿಂದ ಪ್ರಕಾಶಿಸುವ ಕಿರಣಗಳು ಹೊರಟಂತೆ ಜ್ವಲಿಸುವ ಅವನ ಮಹಾಬಾಣಗಳು ಅವನ ಧನುಸ್ಸಿನಿಂದ ಸಹಸ್ರಸಂಖ್ಯೆಯಲ್ಲಿ ಹೊರಟವು.

ತೇನಾರ್ದಿತಾ ಮಹಾರಾಜ ರಥಿನಃ ಸಾದಿನಸ್ತಥಾ ।
ನಿಪೇತುರುರ್ವ್ಯಾಂ ಸಹಸಾ ವಾತನುನ್ನಾ ಇವ ದ್ರುಮಾಃ ॥ ೪ ॥

ಮಹಾರಾಜನೇ, ಆ ಬಾಣಗಳಿಂದ ಪೀಡಿತರಾದ ರಥಿಕರು ಮತ್ತು ಅಶ್ವಾರೋಹಿಗಳು ವಾಯುವಿನ ಹೊಡೆತಕ್ಕೆ ಸಿಲುಕಿದ ವೃಕ್ಷಗಳಂತೆ ತಕ್ಷಣ ಭೂಮಿಯ ಮೇಲೆ ಬಿದ್ದರು.

ಹಯೌಘಾಂಶ್ಚ ಗಜೌಘಾಂಶ್ಚ ರಥೌಘಾಂಶ್ಚ ಸಮಂತತಃ ।
ಅಪಾತಯದ್ ರಣೇ ರಾಜನ್ ಶತಶೋಽಥ ಸಹಸ್ರಶಃ ॥ ೫ ॥

ರಾಜನೇ, ಅವನು ಗಜಸಮೂಹಗಳನ್ನೂ, ಅಶ್ವಸಮೂಹಗಳನ್ನೂ ಮತ್ತು ರಥಸಮೂಹಗಳನ್ನೂ ನೂರರ ಸಂಖ್ಯೆಯಲ್ಲಿ, ಸಾವಿರದ ಸಂಖ್ಯೆಯಲ್ಲಿ ಎಲ್ಲ ಕಡೆಗಳಲ್ಲಿಯೂ ಕೆಡವಿದನು.

ಕರ್ಣಾತ್ಮಜಂ ರಣೇ ದೃಷ್ಟ್ವಾ ವಿಚರಂತಮಭೀತವತ್ ।
ರಾಜಾನಃ ಸಹಿತಾಃ ಸರ್ವೇ ಪರಿವವ್ರುಃ ಸಮಂತತಃ ॥ ೬ ॥

ಕರ್ಣಪುತ್ರನಾದ ವೃಷಸೇನನು ನಿರ್ಭಯವಾಗಿ ರಣರಂಗದಲ್ಲಿ ಸಂಚರಿಸುವುದನ್ನು ನೋಡಿ ಎಲ್ಲ ರಾಜರೂ ಸಹಿತರಾಗಿ ಅವನನ್ನು ಸುತ್ತುವರಿದರು.

ನಾಕುಲಸ್ತು ಶತಾನೀಕೋ ವೃಷಸೇನಂ ಸಮಭ್ಯಯಾತ್ ।
ವಿವ್ಯಾಧ ಚೈನಂ ದಶಭಿರ್ನಾರಾಚೈರ್ಮರ್ಮಭೇದಿಭಿಃ ।
ತಸ್ಯ ಕರ್ಣಸುತಶ್ಚಾಪಂ ಛಿತ್ತ್ವಾ ಕೇತುಮಪಾತಯತ್ ॥ ೭ ॥

ನಕುಲಪುತ್ರನಾದ ಶತಾನೀಕನು ವೃಷಸೇನನನ್ನು ಸಮೀಪಿಸಿ, ಮರ್ಮಭೇದಿಗಳಾದ ಹತ್ತು ನಾರಾಚಗಳಿಂದ ಅವನನ್ನು ಹೊಡೆದನು. ಕರ್ಣಪುತ್ರನು ಅವನ ಧನುಸ್ಸನ್ನು ಕತ್ತರಿಸಿ ಧ್ವಜವನ್ನು ಉರುಳಿಸಿದನು.

ತಂ ಭ್ರಾತರಮಭೀಪ್ಸಂತೋ ದ್ರೌಪದೇಯಾಃ ಸಮಭ್ಯಯುಃ ।
ಕರ್ಣಾತ್ಮಜಂ ಶರವ್ರಾತೈಃ ಚಕ್ರುಶ್ಚಾದೃಶ್ಯಮಂಜಸಾ ॥ ೮ ॥

ತಮ್ಮ ಸಹೋದರರನ್ನು ರಕ್ಷಿಸುವ ಸಲುವಾಗಿ ದ್ರೌಪದಿಯ ಪುತ್ರರು ತಮ್ಮ ಬಾಣ ಸಮೂಹಗಳಿಂದ ಕರ್ಣಪುತ್ರನಾದ ವೃಷಸೇನನನ್ನು ಅದೃಶ್ಯನನ್ನಾಗಿ ಮಾಡಿದರು.

ತಾನ್ ನದಂತೋಽಭ್ಯಧಾವಂತ ದ್ರೋಣಪುತ್ರಮುಖಾ ರಥಾಃ ।
ಛಾದಯಂತೋ ಮಹಾರಾಜ ದ್ರೌಪದೇಯಾನ್ ಮಹಾರಥಾನ್ ।
ಶರೈರ್ನಾನಾವಿಧೈಸ್ತೂರ್ಣಂ ಪರ್ವತಾನ್ ಜಲದಾ ಇವ ॥ ೯ ॥

ಎಲೈ ಮಹಾರಾಜನೇ, ಅಶ್ವತ್ಥಾಮ ಮೊದಲಾದಮಹಾರಥರು ಗರ್ಜಿಸುತ್ತಾ, ಮೋಡಗಳು ಪರ್ವತದ ಮೇಲೆ ಮಳೆಯನ್ನು ಸುರಿಸಿದಂತೆ, ನಾನಾ ವಿಧವಾದ ಶಸ್ತ್ರಗಳನ್ನು ಶೀಘ್ರವಾಗಿ ಪ್ರಯೋಗಿಸುತ್ತಾ, ಓಡಿ ಬಂದು ಮಹಾರಥರಾದ ದ್ರೌಪದಿಯ ಪುತ್ರರನ್ನು ಶಸ್ತ್ರಗಳಿಂದ ಮುಚ್ಚಿಹಾಕಿದರು.

ತಾನ್ ಪಾಂಡವಾಃ ಪ್ರತ್ಯಗೃಹ್ಣನ್ ತ್ವರಿತಾಃ ಪುತ್ರಗೃದ್ಧಿನಃ ।
ಪಾಂಚಾಲಾಃ ಸೃಂಜಯಾ ಮಾತ್ಸ್ಯಾಃ ಕೇಕಯಾಶ್ಚೋದ್ಯತಾಯುಧಾಃ ॥

ಮತ್ತು ತಮ್ಮ ಮಕ್ಕಳ ಕ್ಷೇಮವನ್ನು ಬಯಸುವ ಪಾಂಡವರು ಶೀಘ್ರವಾಗಿ ಆಯುಧಧಾರಿಗಳಾದ ಪಾಂಚಾಲರ, ಸೃಂಜಯರ, ಮತ್ಸ್ಯರ ಜೊತೆಯಲ್ಲಿ ಸೇರಿ ಅವರನ್ನು ಎದುರಿಸಿದರು.

ತದ್ ಯುದ್ಧಮಭವದ್ ಘೋರಂ ತುಮುಲಂ ಲೋಮಹರ್ಷಣಮ್ ।
ತ್ವದೀಯೈಃ ಪಾಂಡುಪುತ್ರಾಣಾಂ ದೇವಾನಾಮಿವ ದಾನವೈಃ ॥ ೧೧ ॥

ನಿನ್ನವರಿಗೂ ಮತ್ತು ಪಾಂಡವರಿಗೂ ದೇವ-ದಾನವರಿಗೆ ನಡೆದಂತೆ ತೀವ್ರವೂ, ಘೋರವೂ ಮತ್ತು ರೋಮಾಂಚಕರವೂ ಆದ ಯುದ್ಧವು ನಡೆಯಿತು.

ಏವಮುತ್ತಮಸಂರಂಭಾ ಯುಯುಧುಃ ಕುರುಪಾಂಡವಾಃ ।
ಪರಸ್ಪರಮುದೀಕ್ಷಂತಃ ಪರಸ್ಪರಕೃತಾಗಸಃ ॥ ೧೨ ॥

ಹೀಗೆ ಕುರು-ಪಾಂಡವರು ಬಹಳ ಕ್ರೋಧವನ್ನು ಹೊಂದಿ, ಒಬ್ಬರನ್ನೊಬ್ಬರು ನೋಡುತ್ತಾ, ಒಬ್ಬರನ್ನೊಬ್ಬರು ಪೀಡಿಸುತ್ತಾ ಯುದ್ಧವನ್ನು ಮಾಡಿದರು.

ತೇಷಾಂ ದದೃಶಿರೇ ಕೋಪಾದ್ ವಪೂಂಷ್ಯಮಿತತೇಜಸಾಮ್ ।
ಯುಯುತ್ಸೂನಾಮಿವಾಕಾಶೇ ಪತತ್ರಿವರಭೋಗಿನಾಮ್ ॥ ೧೩ ॥

ಅಮಿತ ತೇಜಸ್ವಿಗಳಾದ, ಕೋಪದಿಂದ ಕೂಡಿದ ಅವರ ದೇಹಗಳು ಆಕಾಶದಲ್ಲಿ ಹೋರಾಡುವ ಗರುಡ ಮತ್ತು ಸರ್ಪಗಳ ದೇಹಗಳಂತೆ ತೋರಿದವು.

ಭೀಮಕರ್ಣಕೃಪದ್ರೋಣದ್ರೌಣಿಪಾರ್ಷತಸಾತ್ಯಕೈಃ ।
ಬಭಾಸೇ ಸ ರಣೋದ್ದೇಶಃ ಕಾಲಸೂರ್ಯೈರಿವೋದಿತೈಃ ॥ ೧೪ ॥

ಭೀಮ, ಕರ್ಣ, ಕೃಪ, ದ್ರೋಣ, ಅಶ್ವತ್ಥಾಮ, ಧೃಷ್ಟದ್ಯುಮ್ನ ಮತ್ತು ಸಾತ್ಯಕಿಗಳಿಂದ ಕೂಡಿದ ಆ ಯುದ್ಧಭೂಮಿಯು ಅನೇಕ ಲಯಕಾಲಸೂರ್ಯರು ಒಟ್ಟಿಗೆ ಉದಯಿಸಿದಂತೆ ತೋರುತ್ತಿದ್ದಿತು.

ಪ್ರಜಾನಾಂ ಸಂಕ್ಷಯೇ ಘೋರೇ ಯಥಾ ಸೂರ್ಯೋದಯೋ ಭವೇತ್।
ಶೂರಾಣಾಮುದಯಸ್ತದ್ವತ್ ಸ ಆಸೀತ್ ಪುರುಷರ್ಷಭ ॥ ೧೫ ॥

ಎಲೈ ಪುರುಷಶ್ರೇಷ್ಠನೇ, ಪ್ರಜೆಗಳ ಘೋರವಾದ ಸಂಕ್ಷಯದ ಕಾಲದಲ್ಲಿ ಹೇಗೆ ಸೂರ್ಯೋದಯವಾಗುವುದೋ ಹಾಗೆ ಆ ಶೂರರ ಉದಯವು ಉಂಟಾಯಿತು.

ತದಾऽऽಸೀತ್ ತುಮುಲಂ ಯುದ್ಧಂ ನಿಘ್ನತಾಮಿತರೇತರಮ್ ।
ಮಹಾಬಲಾನಾಂ ಬಿಲಭಿಃ ದಾನವಾನಾಂ ಯಥಾ ಸುರೈಃ ॥ ೧೬ ॥

ಪರಸ್ಪರವಾಗಿ ಸಂಹರಿಸುವ ಬಲಶಾಲಿಗಳಾದ ಅವರಿಗೆ ಬಲಶಾಲಿಗಳಾದ ಶತ್ರುಗಳ ಜೊತೆಯಲ್ಲಿ ನಡೆದ ಯುದ್ಧವು ದೇವಾಸುರರ ಯುದ್ಧದಂತೆ ಇದ್ದಿತು.

ತತೋ ಯುಧಿಷ್ಠಿರಾನೀಕಮುದೀರ್ಣಾರ್ಣವನಿಸ್ವನಮ್ ।
ತ್ವದೀಯಮವಧೀತ್ ಸೈನ್ಯಂ ಸಂಪ್ರದ್ರುತಮಹಾರಥಮ್ ॥ ೧೭ ॥

ಆಗ ಉಕ್ಕಿದ ಸಾಗರದ ಘೋಷವನ್ನು ಹೊಂದಿದ ಯುಧಿಷ್ಠಿರನ ಸೈನ್ಯವು ಮಹಾರಥರು ಓಡಿಹೋಗುತ್ತಿದ್ದ ನಿನ್ನ ಸೈನ್ಯವನ್ನು ಪೀಡಿಸಿತು.

ತತ್ ಪ್ರಭಗ್ನಂ ಬಲಂ ದೃಷ್ಟ್ವಾ ಶತ್ರುಭಿರ್ಭೃಶಮರ್ದಿತಮ್ ।
ಅಲಂ ದ್ರುತೇನ ವಃ ಶೂರಾ ಇತಿ ದ್ರೋಣೋಽಭ್ಯಭಾಷತ ।
ಭಾರದ್ವಾಜಮಮರ್ಷಶ್ಚ ವಿಕ್ರಮಶ್ಚ ಸಮಾವಿಶತ್ ॥ ೧೮ ॥

ಶತ್ರುಗಳಿಂದ ಬಹಳ ಪೀಡೆಗೆ ಒಳಗಾಗಿ ಭಗ್ನಗೊಂಡ ಸೈನ್ಯವನ್ನು ನೋಡಿ ದ್ರೋಣರು– ಎಲೈ ಶೂರರೇ, ಓಡಬೇಡಿ ಎಂದು ಹೇಳಿದರು. ಕೋಪ ಮತ್ತು ಪರಾಕ್ರಮಗಳು ದ್ರೋಣರನ್ನು ಪ್ರವೇಶಿಸಿದವು.

ಸಮುದ್ಧೃತ್ಯ ನಿಷಂಗಾಚ್ಚ ಧನುರ್ಜ್ಯಾಮವಮೃಜ್ಯ ಚ ।
ಮಹಾಶರಧನುಷ್ಪಾಣಿಃ ಯಂತಾರಮಿದಮಬ್ರವೀತ್ ॥ ೧೯ ॥

ಬತ್ತಳಿಕೆಯಿಂದ ಬಾಣಗಳನ್ನು ಎತ್ತಿ, ಧನುಸ್ಸಿನ ಹೆದೆಯನ್ನು ಸವರಿ, ಕೈಯಲ್ಲಿ ಮಹಾಧನುಸ್ಸು ಮತ್ತು ಬಾಣಗಳನ್ನು ಹಿಡಿದು ಅವರು ಸಾರಥಿಯನ್ನು ಕುರಿತು ಇದನ್ನು ಹೇಳಿದರು.

ಸಾರಥೇ ಯಾಹಿ ಯತ್ರೈಷ ಪಾಂಡರೇಣ ವಿರಾಜತಾ ।
ಧ್ರಿಯಮಾಣೇನ ಛತ್ರೇಣ ರಾಜಾ ತಿಷ್ಠತಿ ಧರ್ಮರಾಟ್ ॥ ೨೦ ॥

ಎಲೈ ಸಾರಥಿಯೇ, ಎಲ್ಲಿ ಪ್ರಕಾಶಮಾನವಾದ ಶ್ವೇತಚ್ಛತ್ರದಿಂದ ಸಹಿತನಾದ, ರಾಜನಾದ ಯುಧಿಷ್ಠಿರನು ಇದ್ದಾನೆಯೋ ಅಲ್ಲಿಗೆ ಹೋಗು.

ತದೇತದ್ ದೀರ್ಯತೇ ಸೈನ್ಯಂ ಧಾರ್ತರಾಷ್ಟ್ರಮನೇಕಧಾ ।
ಏತತ್ ಸಂಸ್ತಂಭಯಿಷ್ಯಾಮಿ ಪ್ರತಿವಾರ್ಯ ಯುಧಿಷ್ಠಿರಮ್ ॥ ೨೧ ॥

ಈ ಧೃತರಾಷ್ಟ್ರನ ಸೈನ್ಯವು ಬಹಳವಾಗಿ ಭಗ್ನಗೊಳ್ಳುತ್ತಿದೆ. ಯುಧಿಷ್ಠಿರನನ್ನು ತಡೆದು ಈ ಭಂಗವನ್ನು ತಡೆಯುವೆನು.

ನ ಹಿ ಮಾಮತಿವರ್ತಂತಿ ಸಂಯುಗೇ ತಾತ ಪಾಂಡವಾಃ ।
ಮಾತ್ಸ್ಯಪಾಂಚಾಲರಾಜಾನಃ ಸರ್ವೇ ಚ ಸಹಸೋಮಕಾಃ ॥ ೨೨ ॥

ಎಲೈ ಪ್ರೀತಿಪಾತ್ರನೇ, ಸೋಮಕರಿಂದ ಸಹಿತರಾದ ಮತ್ಸ್ಯ-ಪಾಂಚಾಲ ರಾಜರೆಲ್ಲರೂ ಮತ್ತು ಪಾಂಡವರೂ ಯುದ್ಧದಲ್ಲಿ ನನ್ನನ್ನು ಮೀರಿ ಹೋಗುವುದಿಲ್ಲ.

ಅರ್ಜುನೋ ಮತ್ಪ್ರಸಾದಾದ್ಧಿ ಮಹಾಸ್ತ್ರಾಣಿ ಸಮಾಪ್ತವಾನ್ ।
ನ ಮಾಮುತ್ಸಹತೇ ತಾತ ನ ಭೀಮೋ ನ ಚ ಸಾತ್ಯಕಿಃ ॥ ೨೩ ॥

ಅರ್ಜುನನು ನನ್ನ ಅನುಗ್ರಹದಿಂದ ಮಹಾಸ್ತ್ರಗಳನ್ನು ಪಡೆದಿರುವನಷ್ಟೆ! ಎಲೈ ಪ್ರೀತಿಪಾತ್ರನೇ, ಅವನಾಗಲೀ, ಭೀಮನಾಗಲೀ, ಸಾತ್ಯಕಿಯಾಗಲೀ ನನ್ನ ಮೇಲೆ ಪ್ರಹಾರ ಮಾಡುವುದಿಲ್ಲ.

ಮತ್ಪ್ರಸಾದಾದ್ಧಿ ಬೀಭತ್ಸುಃ ಪರಮೇಷ್ವಾಸತಾಂ ಗತಃ ।
ಮಮೈವಾಸ್ತ್ರಂ ವಿಜಾನಾತಿ ಧೃಷ್ಟದ್ಯುಮ್ನೋಽಪಿ ಪಾರ್ಷತಃ ॥ ೨೪ ॥

ನನ್ನ ಅನುಗ್ರಹದಿಂದಲೇ ಅರ್ಜುನನು ಶ್ರೇಷ್ಠ ಧನುರ್ಧಾರಿ ಎಂಬ ಪದವಿಯನ್ನು ಹೊಂದಿದ್ದಾನೆ. ಪಾರ್ಷತನಾದ ಧೃಷ್ಟದ್ಯುಮ್ನನೂ ಸಹ (ಶಿಷ್ಯನಾಗಿ) ನನ್ನಿಂದಲೇ ಅಸ್ತ್ರವನ್ನು ತಿಳಿದಿದ್ದಾನೆ.

ನಾಯಂ ಸಂರಕ್ಷಿತುಂ ಕಾಲಃ ಪ್ರಾಣಾಂಸ್ತಾತ ಜಯೈಷಿಣಾ ।
ಸಾಹಸಾಗ್ರ್ಯಂ ಪುರಸ್ಕೃತ್ಯ ಯಶಸೇ ಚ ಜಯಾಯ ಚ ॥ ೨೫ ॥

ಎಲೈ ಪ್ರೀತಿಪಾತ್ರನೇ, ಜಯವನ್ನು ಬಯಸುವವರಿಗೆ ಇದು ಪ್ರಾಣವನ್ನು ರಕ್ಷಿಸಿಕೊಳ್ಳುವ ಕಾಲವಲ್ಲ. ಶ್ರೇಷ್ಠವಾದ ಸಾಹಸವನ್ನು ಮುಂದೆ ಮಾಡಿ ಕೀರ್ತಿ ಮತ್ತು ಜಯವನ್ನು ಪಡೆಯಬೇಕು.

ಏವಂ ಸಂಚೋದಿತೋ ಯಂತಾ ದ್ರೋಣಮಭ್ಯವಹತ್ ತತಃ ।
ತದಾ ಸ್ವಹೃದಯಾನಾಶ್ವಾನಭಿಮಂತ್ರ್ಯಾಶು ಹರ್ಷಯನ್ ।
ರಥೇನ ಸವರೂಥೇನ ಭಾಸ್ವರೇಣ ವಿರಾಜತಾ ॥ ೨೬ ॥

ಹೀಗೆ ದ್ರೋಣರಿಂದ ಪ್ರೇರಿಸಲ್ಪಟ್ಟ ಸುರಥಿನಾಮಕನಾದ ಸಾರಥಿಯು ತನ್ನ ಮನಸ್ಸಿನ ಅಭಿಪ್ರಾಯದಂತೆ ನಡೆಯುವ ಅಶ್ವಗಳಿಗೆ ಶೀಘ್ರವಾಗಿ ಸಂತೋಷವನ್ನುಂಟು ಮಾಡುತ್ತಾ, ರಥದ ಸಲಕರಣೆಗಳಿಂದ ಕೂಡಿದ, ಪ್ರಕಾಶಮಾನವಾದ ಶೋಭಿಸುವ ರಥದಿಂದ ದ್ರೋಣರನ್ನು ಕರೆದುಕೊಂಡು ಹೋದನು.

ತಂ ಕರೂಷಾಶ್ಚ ಮತ್ಸ್ಯಾಶ್ಚ ಚೇದಯಶ್ಚ ಸಸಾತ್ವತಾಃ ।
ಪಾಂಡವಾಶ್ಚ ಸಪಾಂಚಾಲಾಃ ಸಹಿತಾಃ ಪರ್ಯವಾರಯನ್ ॥ ೨೭ ॥

ಅವರನ್ನು ಕರೂಷರೂ, ಮತ್ಸ್ಯರೂ, ಚೇದಿಗಳೂ, ಸಾತ್ವತರೂ, ಪಾಂಚಾಲ ಸಹಿತರಾದ ಪಾಂಡವರೂ ಎಲ್ಲರೂ ಒಟ್ಟಿಗೆ ಸೇರಿ ಸುತ್ತುವರಿದರು.

ತತಃ ಶ್ರೋಣಹಯಃ ಕ್ರುದ್ಧಃ ಚತುರ್ದಂತ ಇವ ದ್ವಿಪಃ ।
ಪ್ರವಿಶ್ಯ ಪಾಂಡವಾನೀಕಂ ಯುಧಿಷ್ಠಿರಮಭಿದ್ರವತ್ ॥ ೨೮ ॥

ಆಗ ಶ್ರೋಣಾಶ್ವರಾದ (ಕುಟುಂಬ ಕುದುರೆ ಸಹಿತ) ದ್ರೋಣರು ಕ್ರುದ್ಧರಾಗಿ ನಾಲ್ಕು ದಂತಗಳುಳ್ಳ ಗಜದಂತೆ ಪಾಂಡವರ ಸೈನ್ಯವನ್ನು ಪ್ರವೇಶಿಸಿ ಯುಧಿಷ್ಠಿರನ ಕಡೆಗೆ ಧಾವಿಸಿದರು.

ತಮವಿಧ್ಯಚ್ಛಿತೈರ್ಬಾಣೈಃ ಕಂಕಪತ್ರೈರ್ಯುಧಿಷ್ಠಿರಃ ।
ತಸ್ಯ ದ್ರೋಣೋ ಧನುಶ್ಚಿತ್ವಾ ತಂ ದ್ರುತಂ ಸಮುಪಾದ್ರವತ್ ॥ ೨೯ ॥

ಯುಧಿಷ್ಠಿರನು ಕಂಕಪತ್ರವನ್ನು ಹೊಂದಿದ್ದ ಹರಿತವಾದ ಬಾಣಗಳಿಂದ ದ್ರೋಣರನ್ನು ಹೊಡೆದನು. ದ್ರೋಣರು ಅವನ ಧನುಸ್ಸನ್ನು ಕತ್ತರಿಸಿ ಶೀಘ್ರವಾಗಿ ಅವನೆಡೆಗೆ ಧಾವಿಸಿದರು.

ಚಕ್ರರಕ್ಷಃ ಕುಮಾರಸ್ತು ಪಾಂಚಾಲಾನಾಂ ಯಶಸ್ಕರಃ ।
ದಧಾರ ದ್ರೋಣಮಾಯಾಂತಂ ವೇಲೇವೋದ್ಧೂತಮರ್ಣವಮ್ ॥೩೦॥

ಯುಧಿಷ್ಠಿರನ ಚಕ್ರರಕ್ಷಕನಾದ, ಪಾಂಚಾಲ ರಾಜಕುಮಾರನಾದ ಸುಕುಮಾರನು ಯುಧಿಷ್ಠಿರನ ಕಡೆಗೆ ಬರುತ್ತಿದ್ದ ದ್ರೋಣರನ್ನು ಉಕ್ಕುವ ಸಮುದ್ರವನ್ನು ತೀರವು ತಡೆದಂತೆ ತಡೆಹಿಡಿದನು.

ಸ ಶೂರಮಾರ್ಯವ್ರತಿನಂ ಶಸ್ತ್ರಾಸ್ತ್ರಕೃತನಿಶ್ರಮಮ್ ।
ವಾರಯದ್ ದ್ರೋಣಮಾಯಾಂತಂ ವೇಲೇವ ಮಕರಾಲಯಮ್ ॥

ಅವನು ಶೂರರೂ, ಉದಾತ್ತವಾದ ವ್ರತವುಳ್ಳವರೂ, ಶಸ್ತ್ರಾಸ್ತ್ರಗಳಲ್ಲಿ ಪಾರಂಗತರಾದವರೂ ಆದ ದ್ರೋಣರನ್ನು ಸಮುದ್ರವನ್ನು ದಡವು ತಡೆದಂತೆ ತಡೆದನು.

ದ್ರೋಣೇ ನಿವಾರಿತೇ ತೇನ ಸುಕುಮಾರೇಣ ಮಾರಿಷ ।
ಸಿಂಹನಾದರವಶ್ಚಾಸೀತ್ ಸಾಧು ಸಾಧ್ವಿತಿ ಚ ಸ್ವನಃ ॥ ೩೨ ॥

ಎಲೈ ಪೂಜ್ಯನೇ, ಸುಕುಮಾರನಿಂದ ದ್ರೋಣರು ತಡೆಯಲ್ಪಡುತ್ತಿರಲು 'ಸಾಧು-ಸಾಧು' ಎಂಬ ಮಾತುಗಳು ಮತ್ತು ಸಿಂಹನಾದದ ಶಬ್ದಗಳು ಕೇಳಿಬಂದವು.

ಸುಕುಮಾರಸ್ತತೋ ದ್ರೋಣಂ ಸಾಯಕೇನ ಮಹಾಹವೇ ।
ವಿವ್ಯಾಧೋರಸಿ ಸಂಕ್ರುದ್ಧಃ ಸಿಂಹನಾದಮಥಾಕರೋತ್ ॥ ೩೩ ॥

ಸಂವಾರ್ಯ ತು ರಣೇ ದ್ರೋಣಂ ಸುಕುಮಾರೋ ಮಹಾರಥಃ ।
ಶರೈರನೇಕಸಾಹಸ್ರೈಃ ಕೃತಹಸ್ತೋ ಜಿತಕ್ಲಮಃ ॥ ೩೪ ॥

ಮಹಾರಥನಾದ ಸುಕುಮಾರನು ಪಳಗಿದ ಹಸ್ತವುಳ್ಳವನಾಗಿ, ಶ್ರಮವನ್ನು ಜಯಿಸಿದವನಾಗಿ, ಅನೇಕ ಸಹಸ್ರ ಬಾಣಗಳಿಂದ ಯುದ್ಧದಲ್ಲಿ ದ್ರೋಣರನ್ನು ತಡೆದು, ಒಂದು ಬಾಣದಿಂದ ಕೋಪದಿಂದ ಅವರ ಎದೆಗೆ ಹೊಡೆದು ಸಿಂಹನಾದವನ್ನು ಮಾಡಿದನು.

ತಂ ಶೂರಮಾರ್ಯವ್ರತಿನಂ ಮಂತ್ರಾಸ್ತ್ರಕೃತನಿಶ್ಚಯಮ್ ।
ಚಕ್ರರಕ್ಷಮವಾಮೃದ್ನಾತ್ ಸುಕುಮಾರಂ ದ್ವಿಜಪುಂಗವಃ ॥ ೩೫ ॥

ದ್ವಿಜಶ್ರೇಷ್ಠರಾದ ದ್ರೋಣರು ಶೂರನೂ, ಶ್ರೇಷ್ಠವ್ರತಧಾರಿಯೂ, ಮಂತ್ರಾಸ್ತ್ರಗಳಲ್ಲಿ ನಿಪುಣನೂ ಮತ್ತು ಯುಧಿಷ್ಠಿರನ ಚಕ್ರರಕ್ಷಕನೂ ಆದ ಸುಕುಮಾರನನ್ನು ಮರ್ದಿಸಿದರು.

ಸ ಮಧ್ಯಂ ಪ್ರಾಪ್ಯ ಸೇನಾಯಾಂ ಸರ್ವಾಃ ಸಮಚರದ್ ದಿಶಃ ।
ತವ ಸೈನ್ಯಸ್ಯ ಗೋಪ್ತಾऽऽಸೀದ್ ಭಾರದ್ವಾಜೋ ಮಹಾರಥಃ ॥ ೩೬ ॥

ಅವರು ಪಾಂಡವರ ಸೈನ್ಯದ ಮಧ್ಯಭಾಗವನ್ನು ಪ್ರವೇಶಿಸಿ, ಎಲ್ಲ ದಿಕ್ಕುಗಳಲ್ಲಿಯೂ ಸಂಚರಿಸಿದರು. ಮಹಾರಥರಾದ ದ್ರೋಣರು ನಿನ್ನ ಸೈನ್ಯಕ್ಕೆ ರಕ್ಷಕರಾಗಿದ್ದರು.

ಶಿಖಂಡಿನಂ ದ್ವಾದಶಭಿಃ ವಿಂಶತ್ಯಾ ಚೋತ್ತಮೌಜಸಮ್ ।
ನಕುಲಂ ಪಂಚಭಿರ್ವಿದ್ಧ್ವಾ ಸಹದೇವಂ ಚ ಸಪ್ತಭಿಃ ॥ ೩೭ ॥

ಯುಧಿಷ್ಠಿರಂ ದ್ವಾದಶಭಿಃ ದ್ರೌಪದೇಯಾಂಸ್ತ್ರಿಭಿಸ್ತ್ರಿಭಿಃ ।
ಸಾತ್ಯಕಿಂ ಪಂಚಭಿರ್ವಿದ್ಧ್ವಾ ಮತ್ಸ್ಯಂ ಚ ದಶಭಿಃ ಶರೈಃ ।
ವ್ಯಕ್ಷೋಭಯದ್ ರಣೇ ಮುಖ್ಯಾನಥ ಯೋಧಾನಭಿದ್ರವತ್ ॥ ೩೮ ॥

ಶಿಖಂಡಿಯನ್ನು ಹನ್ನೆರಡು ಬಾಣಗಳಿಂದಲೂ, ಉತ್ತಮೌಜನನ್ನು ಇಪ್ಪತ್ತು ಬಾಣಗಳಿಂದಲೂ, ನಕುಲನನ್ನು ಐದು ಬಾಣಗಳಿಂದಲೂ, ಸಹದೇವನನ್ನು ಏಳು ಬಾಣಗಳಿಂದಲೂ, ಯುಧಿಷ್ಠಿರನನ್ನು ಹನ್ನೆರಡು ಬಾಣಗಳಿಂದಲೂ, ದ್ರೌಪದಿಯ ಪುತ್ರರನ್ನು ಮೂರು-ಮೂರು ಬಾಣಗಳಿಂದಲೂ, ಸಾತ್ಯಕಿಯನ್ನು ಐದು ಬಾಣಗಳಿಂದಲೂ, ವಿರಾಟನನ್ನು ಹತ್ತು ಬಾಣಗಳಿಂದಲೂ ರಣರಂಗದಲ್ಲಿ ಹೊಡೆದು ಕ್ಷೋಭೆಗೊಳಿಸಿ ಅನಂತರ ಮುಖ್ಯವಾದ ಯೋಧರ ಕಡೆಗೆ ಮುನ್ನುಗ್ಗಿದರು.

ಯುಗಂಧರಸ್ತತೋ ರಾಜನ್ ಭಾರದ್ವಾಜಂ ಮಹಾರಥಮ್ ।
ವಾರಯಾಮಾಸ ಸಂಕ್ರುದ್ಧೋ ವೇಲೇವೋದ್ಭೂತಮರ್ಣವಮ್ ॥ ೩೯ ॥

ಎಲೈ ರಾಜನೇ, ಆಗ ದ್ರೋಣರ ಸಾರಥಿಯು ಕೋಪಗೊಂಡವನಾಗಿ ತೀರವು ಉಕ್ಕಿದ ಸಮುದ್ರವನ್ನು ತಡೆದಂತೆ ಮಹಾರಥರಾದ ದ್ರೋಣರನ್ನು ಪಾಂಡುಸೈನ್ಯದ ಬಾಣದ ಹೊಡೆತದಿಂದ ನಿವಾರಿಸಿದನು.

ಯುಧಿಷ್ಠಿರಂ ಸ ವಿದ್ಧ್ವಾಽಥ ಶರೈಃ ಸನ್ನತಪರ್ವಭಿಃ ।
ಯುಗಂಧರಂ ತು ಭಲ್ಲೇನ ರಥನೀಡಾದಪಾತಯತ್ ॥ ೪೦ ॥

ದ್ರೋಣರು ಯುಧಿಷ್ಠಿರನನ್ನು ಬಾಗಿದ ತುದಿಯುಳ್ಳ ಬಾಣಗಳಿಂದ ಹೊಡೆದು, ಅವನ ಸಾರಥಿಯನ್ನು ಭಲ್ಲದಿಂದ ರಥದಿಂದ ಕೆಳಕ್ಕೆ ಕೆಡವಿದರು.

ತಂ ವಿಜಿತ್ಯ ಮಹಾತೇಜಾ ಭಾರದ್ವಾಜೋ ಮಹಾಮನಾಃ ।
ಅಭ್ಯವರ್ತತ ಸಂಪ್ರೇಪ್ಸುಃ ಕುಂತೀಪುತ್ರಂ ಯುಧಿಷ್ಠಿರಮ್ ॥ ೪೧ ॥

ಮಹಾತೇಜಸ್ವಿಗಳೂ, ಧೈರ್ಯಶಾಲಿಗಳೂ ಆದ ದ್ರೋಣರು ಸಾರಥಿಯನ್ನು ಗೆದ್ದು ಕುಂತೀಪುತ್ರನಾದ ಯುಧಿಷ್ಠಿರನನ್ನು ಹಿಡಿಯಲು ಮುಂದೆ ಬಂದರು.

ತತೋ ವಿರಾಟದ್ರುಪದೌ ಕೇಕಯಾಃ ಸಾತ್ಯಕಿಃ ಶಲಃ ।
ವ್ಯಾಘ್ರದತ್ತಶ್ಚ ಪಾಂಚಾಲ್ಯಃ ಸಿಂಹಸೇನಶ್ಚ ವೀರ್ಯವಾನ್ ॥ ೪೨ ॥

ಏತೇ ಚಾನ್ಯೇ ಚ ಬಹವಃ ಪರೀಪ್ಸಂತೋ ಯುಧಿಷ್ಠಿರಮ್ ।
ಆವವ್ರುಸ್ತಸ್ಯ ಪಂಥಾನಂ ಕಿರಂತಃ ಸಾಯಕಾನ್ ಬಹೂನ್ ॥ ೪೩ ॥

ಆಗ ವಿರಾಟ-ದ್ರುಪದರು, ಕೇಕಯರು, ಸಾತ್ಯಕಿ, ಶಲ, ಪಾಂಚಾಲ ದೇಶದ ವ್ಯಾಘ್ರದತ್ತ, ಪರಾಕ್ರಮಶಾಲಿಯಾದ ಸಿಂಹಸೇನ - ಇವರು ಮತ್ತು ಇನ್ನೂ ಅನೇಕರು ಯುಧಿಷ್ಠಿರನನ್ನು ರಕ್ಷಿಸಲು ಬಯಸುತ್ತಾ, ಅನೇಕ ಬಾಣಗಳನ್ನು ಪ್ರಯೋಗಿಸುತ್ತಾ ದ್ರೋಣರ ಮಾರ್ಗವನ್ನು ತಡೆದರು.

ತ್ವರಿತಃ ಸಿಂಹಸೇನಸ್ತು ದ್ರೋಣಂ ವಿದ್ಧ್ವಾ ಮಹಾರಥಮ್ ।
ಪ್ರಾಣದತ್ ಸಹಸಾ ನಾದಂ ರೋಷಯಂಶ್ಚ ಮಹಾರಥಾನ್ ॥ ೪೪ ॥

ಮಹಾರಥನಾದ ಸಿಂಹಸೇನನು ಶೀಘ್ರವಾಗಿ ದ್ರೋಣರನ್ನು ಬಾಣದಿಂದ ಹೊಡೆದು, ಶತ್ರುಗಳ ಮಹಾರಥರಿಗೆ ರೋಷವನ್ನುಂಟು ಮಾಡುತ್ತಾ, ತಕ್ಷಣದಲ್ಲಿ ದೊಡ್ಡ ನಾದವನ್ನು ಮಾಡಿದನು.

ವ್ಯಾಘ್ರದತ್ತಶ್ಚ ಪಾಂಚಾಲ್ಯೋ ದ್ರೋಣಂ ವಿವ್ಯಾಧ ಮಾರ್ಗಣೈಃ ।
ಪಂಚಾಶದ್ಭಿಸ್ತತೋ ರಾಜನ್ ತತಸ್ತೇ ಚುಕ್ರುಶುರ್ಜನಾಃ ॥ ೪೬ ॥

ಎಲೈ ರಾಜನೇ, ಪಾಂಚಾಲದೇಶದ ವ್ಯಾಘ್ರದತ್ತನೂ ಸಹ ಐವತ್ತು ಬಾಣಗಳಿಂದ ದ್ರೋಣರನ್ನು ಹೊಡೆದನು. ಆಗ ಜನರು (ಪಾಂಡವ ಯೋಧರು) ಸಂತೋಷದ ನಾದವನ್ನು ಮಾಡಿದರು.

ತತೋ ವಿಷ್ಫಾರ್ಯ ನಯನೇ ಧನುರ್ಜ್ಯಾಮವಮೃಜ್ಯ ಚ ।
ತಳಶಬ್ದಂ ಮಹತ್ ಕೃತ್ವಾ ಕ್ರುದ್ಧಸ್ತಾನ್ ಸಮಭಿದ್ರವತ್ ॥ ೪೫ ॥

ದ್ರೋಣರು ಆಗ ಕಣ್ಣುಗಳನ್ನು ಅಗಲವಾಗಿ ತೆರೆದು, ಧನುಸ್ಸಿನ ಹೆದೆಯನ್ನು ಸವರಿ, ದೊಡ್ಡ ಹಸ್ತತಳಶಬ್ದವನ್ನು ಮಾಡಿ, ಕೋಪಗೊಂಡು ಅವರ ಕಡೆಗೆ ಧಾವಿಸಿದರು.

ತತಸ್ತತ್ ಸಿಂಹಸೇನಸ್ಯ ಶಿರಃ ಕಾಯಾತ್ ಸಕುಂಡಲಮ್ ।
ವ್ಯಾಘ್ರದತ್ತಸ್ಯ ಚಾಕ್ರಮ್ಯ ಭಲ್ಲಾಭ್ಯಾಮಾಹರದ್ ಬಲೀ ॥ ೪೬ ॥

ಅನಂತರ ಬಲಿಷ್ಠರಾದ ಅವರು ಎರಡು ಭಲ್ಲಗಳಿಂದ ಕುಂಡಲಸಹಿತವಾದ ಸಿಂಹಸೇನ ಮತ್ತು ವ್ಯಾಘ್ರದತ್ತನ ಶಿರಸ್ಸುಗಳನ್ನು ಅವರ ಶರೀರದಿಂದ ಬೇರ್ಪಡಿಸಿದರು.

ತಾನ್ ಪ್ರಮೃಜ್ಯ ಶರವ್ರಾತೈಃ ಪಾಂಡವಾನಾಂ ಮಹಾರಥಾನ್ ।
ಯುಧಿಷ್ಠಿರಸಮಭ್ಯಾಶೇ ತಸ್ಥೌ ಮೃತ್ಯುರಿವಾಂತಕಃ ॥ ೪೭ ॥

ಪಾಂಡವರ ಆ ಮಹಾರಥರನ್ನು ತಮ್ಮ ಬಾಣಗಳ ಸಮೂಹದಿಂದ ಒರೆಸಿ, ಪ್ರಾಣಗಳನ್ನು ತೆಗೆಯುವ ಮೃತ್ಯುವಿನಂತೆ ಯುಧಿಷ್ಠಿರನ ಸಮೀಪದಲ್ಲಿ ನಿಂತರು.

ತತ ಆಸೀನ್ಮಹಾನ್ ಶಬ್ದೋ ರಾಜನ್ ಯೌಧಿಷ್ಠಿರೇ ಬಲೇ ।
ಹೃತೋ ರಾಜೇತಿ ಯೋಧಾನಾಂ ಸಮೀಪಸ್ಥೇ ಯತವ್ರತೇ ।
ಜಜಲ್ಪುಃ ಸೈನಿಕಾಸ್ತತ್ರ ದೃಷ್ಟ್ವಾ ದ್ರೋಣಸ್ಯ ವಿಕ್ರಮಮ್ ॥ ೪೮ ॥

ಎಲೈ ರಾಜನೇ, ನಿಯತವ್ರತವುಳ್ಳ ದ್ರೋಣರು ಯುಧಿಷ್ಠಿರನ ಸಮೀಪದಲ್ಲಿರಲು ಯುಧಿಷ್ಠಿರ ಸೈನ್ಯದಲ್ಲಿ ರಾಜನು ಅಪಹರಿಸಲ್ಪಟ್ಟನು ಎಂಬ ಯೋಧರ ದೊಡ್ಡ ಶಬ್ದವು ಉಂಟಾಯಿತು. ದ್ರೋಣರ ಪರಾಕ್ರಮವನ್ನು ನೋಡಿ ಕೌರವರ ಸೈನಿಕರು ಪರಸ್ಪರವಾಗಿ ಮಾತನಾಡಿಕೊಂಡರು.

ಸೈನಿಕಾಃ

ಅದ್ಯ ರಾಜಾ ಧಾರ್ತರಾಷ್ಟ್ರಃ ಪಾಂಡವಂ ಸನ್ನಿಗೃಹ್ಯ ಚ ।
ಆಹರಿಷ್ಯತಿ ನೋ ಮೂಲಂ ಧೃತರಾಷ್ಟ್ರಂ ಪ್ರಹರ್ಷಯನ್ ॥ ೪೯ ॥

ಸೈನಿಕರು– ಈ ದಿನ ರಾಜನಾದ ದುರ್ಯೋಧನನು ಯುಧಿಷ್ಠಿರನನ್ನು ಸೆರೆಹಿಡಿದು ಧೃತರಾಷ್ಟ್ರನನ್ನು ಸಂತೋಷಪಡಿಸಿ ನಮಗೆ ಬಹಳ ಧನವನ್ನು ಕೊಡುವನು.

ಅದ್ಯ ರಾಜಾ ಧಾರ್ತರಾಷ್ಟ್ರಃ ಕೃತಾರ್ಥೋ ವೈ ಭವಿಷ್ಯತಿ ।
ಆನಯಿಷ್ಯತಿ ಭ್ರಾತೄಣಾಂ ನೂನಂ ಹೃಷ್ಟಸ್ತು ಸಂಯುಗೇ ॥ ೫೦ ॥

ಈ ದಿನ ರಾಜನಾದ ದುರ್ಯೋಧನನು ಕೃತಾರ್ಥನಾಗುವನು. ರಣರಂಗದಲ್ಲಿ ಸಂತೋಷಗೊಂಡು ಖಂಡಿತವಾಗಿ ತನ್ನ ಸಹೋದರರಿಗೆ ಅಪಾರವಾದ ಸಂಪತ್ತನ್ನು ತಂದುಕೊಡುವನು.

ಸಂಜಯಃ

ಏವಂ ಸಂಜಲ್ಪತಾಂ ತೇಷಾಂ ತಾವಕಾನಾಂ ಮಹಾರಥಃ ।
ಪ್ರಾಯಾಜ್ಜವೇನ ಕೌಂತೇಯೋ ರಥಘೋಷೇಣ ನಾದಯನ್ ॥ ೫೧ ॥

ಸಂಜಯ– ಹೀಗೆ ನಿನ್ನ ಮಹಾರಥರು ಮಾತನಾಡುತ್ತಿರುವಾಗ, ಕುಂತೀಪುತ್ರನಾದ ಅರ್ಜುನನು ತನ್ನ ರಥಘೋಷದಿಂದ ಎಲ್ಲ ಕಡೆಯಲ್ಲಿಯೂ ಶಬ್ದವನ್ನುಂಟು ಮಾಡುತ್ತಾ ಶೀಘ್ರವಾಗಿ ದ್ರೋಣರ ಕಡೆಗೆ ಸಾಗಿದನು.

ಶೋಣಿತೋದಾಂ ರಥಾವರ್ತಾಂ ಕೃತ್ವಾ ವಿಶಸನೇ ನದೀಮ್ ।
ಶೂರಾಸ್ಥಿಚಯಸಂಕೀರ್ಣಾಂ ಪ್ರೇತಕೂಲಾಪಹಾರಿಣೀಮ್ ॥ ೫೨ ॥

ತಾಂ ಶರೌಘಮಹಾಫೇನಾಂ ಪ್ರಾಸಮತ್ಸ್ಯಸಮಾಕುಲಾಮ್ ।
ನದೀಮುತ್ತೀರ್ಯ ವೇಗೇನ ಕುರೂನ್ ವಿದ್ರಾವ್ಯ ಪಾಂಡವಃ ॥ ೫೩ ॥

ತತಃ ಕಿರೀಟೀ ಸಹಸಾ ದ್ರೋಣಾನೀಕಮಭಿದ್ರವತ್ ।
ಛಾದಯನ್ನಿಷುಜಾಲೇನ ಮಹತಾ ಮೋಹಯನ್ನಿವ ॥ ೫೪ ॥

ರಕ್ತೋದಕವುಳ್ಳ, ರಥಗಳೆಂಬ ಸುಳಿಗಳುಳ್ಳ, ಶೂರರ ಅಸ್ಥಿ ಸಮೂಹಗಳೆಂಬ ನಡುಗಡ್ಡೆಗಳುಳ್ಳ, ಮೃತರ ಶರೀರವೆಂಬ ತೀರವನ್ನು ಕೊಚ್ಚಿಕೊಂಡು ಹೋಗುವ, ಬಾಣಗಳ ಸಮೂಹವೆಂಬ ದೊಡ್ಡ ನೊರೆಗಳಿಂದ ಕೂಡಿದ, ಪ್ರಾಸಗಳೆಂಬ ಮತ್ಸ್ಯಗಳಿಂದ ನಿಬಿಡವಾದ, ನದಿಯನ್ನು ಉಂಟುಮಾಡಿ ಶೀಘ್ರವಾಗಿ ಆ ನದಿಯನ್ನು ದಾಟಿ ಅರ್ಜುನನು ಕುರುಗಳನ್ನು ಓಡಿಸಿ, ದೊಡ್ಡ ಬಾಣಸಮೂಹಗಳನ್ನು ಪ್ರಯೋಗಿಸಿ, ಕೌರವ ಸೈನಿಕರಿಗೆ ಮೋಹವನ್ನುಂಟು ಮಾಡುವಂತೆ ಬಾಣಗಳ ದೊಡ್ಡ ಜಾಲವನ್ನು ನಿರ್ಮಿಸಿ ಅವರನ್ನು ಮುಚ್ಚಿ, ಇದ್ದಕ್ಕಿದ್ದಂತೆಯೇ ದ್ರೋಣರ ಸೈನ್ಯದ ಕಡೆಗೆ ಧಾವಿಸಿ ಬಂದನು.

ಶೀಘ್ರಮಭ್ಯಸ್ಯತೋ ಬಾಣಾನ್ ಸಂದಧಾನಸ್ಯ ಚಾನಿಶಮ್ ।
ನಾಂತರಂ ದದೃಶೇ ಕಶ್ಚಿತ್ ಕೌಂತೇಯಸ್ಯ ಯಶಸ್ವಿನಃ ॥ ೫೫ ॥

ಕೀರ್ತಿವಂತನಾದ ಅರ್ಜುನನು ಧನುಸ್ಸಿನಲ್ಲಿ ಬಾಣಗಳನ್ನು ಹೂಡುವುದಕ್ಕೂ ಮತ್ತು ಶೀಘ್ರವಾಗಿ ಅವುಗಳನ್ನು ಪ್ರಯೋಗಿಸುವುದಕ್ಕೂ ಮಧ್ಯೆ ಸ್ವಲ್ಪವೂ ಕಾಲಾವಕಾಶವು ಕಾಣುತ್ತಿರಲಿಲ್ಲ.

ನ ದಿಶೋ ನಾಂತರಿಕ್ಷಂ ಚ ನ ದ್ಯೌರ್ನೈವ ಚ ಮೇದಿನೀ ।
ಅದೃಶ್ಯತ ಮಹಾರಾಜ ಬಾಣಭೂತಮಿವಾಭವತ್ ॥ ೫೬ ॥

ಎಲೈ ಮಹಾರಾಜನೇ, ದಿಕ್ಕುಗಳಾಗಲೀ, ಅಂತರಿಕ್ಷವಾಗಲೀ, ಆಕಾಶವಾಗಲೀ, ಭೂಮಿಯಾಗಲೀ ಕಾಣುತ್ತಿರಲಿಲ್ಲ. ಎಲ್ಲ ಜಗತ್ತೂ ಬಾಣಮಯವಾದಂತೆ ಆಯಿತು.

ನಾದೃಶ್ಯತ ತದಾ ರಾಜನ್ ತತ್ರ ಕಿಂಚನ ಸಂಯುಗೇ ।
ಬಾಣಾಂಧಕಾರೇ ಮಹತಿ ಕೃತೇ ಗಾಂಡೀವಧನ್ವನಾ ॥ ೫೭ ॥

ಎಲೈ ರಾಜನೇ, ಗಾಂಡೀವ ಧನುರ್ಧಾರಿಯಾದ ಅರ್ಜುನನು ಬಾಣಗಳಿಂದ ದೊಡ್ಡ ಅಂಧಕಾರವನ್ನು ಸೃಷ್ಟಿಸುತ್ತಿರಲು ರಣರಂಗದಲ್ಲಿ ಯಾವುದೂ ಕಾಣಿಸುತ್ತಿರಲಿಲ್ಲ.

ಸೂರ್ಯೇ ಚಾಸ್ತಮನುಪ್ರಾಪ್ತೇ ರಜಸಾ ಚಾಭಿಸಂವೃತೇ ।
ನಾಜ್ಞಾಯತ ತದಾ ಶತ್ರುರ್ನ ಸುಹೃನ್ನ ಚ ಕಶ್ಚನ ।
ತತೋಽವಹಾರಂ ಚಕ್ರುಸ್ತೇ ದ್ರೋಣದುರ್ಯೋಧನಾದಯಃ ॥ ೫೮ ॥

ಸೂರ್ಯನು ಅಸ್ತಂಗತವಾಗುತ್ತಿರಲು ಸೈನ್ಯದ ಧೂಳಿನಿಂದ ಎಲ್ಲವೂ ಮುಚ್ಚಿಹೋಗಿರಲು ಅಲ್ಲಿ ಶತ್ರುವನ್ನಾಗಲೀ, ಮಿತ್ರರನ್ನಾಗಲೀ ಯಾವನೂ ತಿಳಿಯಲಿಲ್ಲ. ಆಗ ದ್ರೋಣ-ದುರ್ಯೋಧನಾದಿಗಳು ಸೈನ್ಯದ ಅವಹಾರವನ್ನು ಮಾಡಿದರು.

ತಾನ್ ವಿದಿತ್ವಾ ಭೃಶಂ ತ್ರಸ್ತಾನಯುದ್ಧಮನಸಃ ಪರಾನ್ ।
ಸ್ವಾನ್ಯನೀಕಾನಿ ಬೀಭತ್ಸುಃ ಶನಕೈರವಹಾರಯತ್ ॥ ೫೯ ॥

ಶತ್ರುಗಳು ಬಹಳ ಹೆದರಿರುವುದನ್ನು ಮತ್ತು ಯುದ್ಧ ವಿಮುಖರಾಗಿರುವುದನ್ನು ಗಮನಿಸಿದ ಅರ್ಜುನನು ನಿಧಾನವಾಗಿ ತನ್ನ ಸೈನ್ಯಗಳನ್ನು ಹಿಂದಕ್ಕೆ ತೆಗೆದುಕೊಂಡನು.

ತತೋಽಭ್ಯತುಷ್ಟುವುಃ ಪಾರ್ಥಂ ಪ್ರಹೃಷ್ಟಾಃ ಪಾಂಡುಸೃಂಜಯಾಃ ।
ಪಾಂಚಾಲಾಶ್ಚ ಮನೋಜ್ಞಾಭಿಃ ವಾಗ್ಭಿಃ ಸೂರ್ಯಮಿವರ್ಷಯಃ ॥

ಆಗ ಸಂತೋಷಗೊಂಡ ಪಾಂಡವರೂ, ಸೃಂಜಯರೂ ಮತ್ತು ಪಾಂಚಾಲರೂ ಋಷಿಗಳು ಸೂರ್ಯನನ್ನು ಪ್ರಶಂಸಿಸುವಂತೆ ಮನೋಜ್ಞವಾದ ವಚನಗಳಿಂದ ಅರ್ಜುನನನ್ನು ಪ್ರಶಂಸಿಸಿದರು.

ಏವಂ ಸ್ವಶಿಬಿರಂ ಪ್ರಾಯಾದ್ ಜಿತಶತ್ರುರ್ಧನಂಜಯಃ ।
ಪೃಷ್ಠತಃ ಸರ್ವಸೈನ್ಯಾನಾಂ ಮುದಿತಃ ಸಹಕೇಶವಃ ॥ ೬೧ ॥

ಹೀಗೆ ಶತ್ರುಗಳನ್ನು ಜಯಿಸಿ ಧನಂಜಯನು ಕೃಷ್ಣನ ಜೊತೆಯಲ್ಲಿ ಎಲ್ಲ ಸೈನ್ಯಗಳ ಹಿಂಭಾಗದಲ್ಲಿ ತನ್ನ ಶಿಬಿರಕ್ಕೆ ಹಿಂದಿರುಗಿದನು.

ಮಸಾರಗಲ್ವರ್ಕಸುವರ್ಣರೂಪ್ಯೈಃ
ವಜ್ರಪ್ರವಾಲೈಃ ಸ್ಫಟಿಕೈಶ್ಚ ಮುಖ್ಯೈಃ ।
ಚಿತ್ರೇ ರಥೇ ಪಾಂಡುಸುತೋ ರರಾಜ
ನಕ್ಷತ್ರಚಿತ್ರೇ ವಿಯತೀವ ಚಂದ್ರಃ ॥ ೬೨ ॥

ಶ್ರೇಷ್ಠವಾದ ಮರಕತ, ಪುಷ್ಯರಾಗ, ಸುವರ್ಣ, ರಜತ, ವಜ್ರ, ಹವಳ ಮತ್ತು ಸ್ಫಟಿಕಗಳಿಂದ ವಿಚಿತ್ರವಾಗಿ ಕಾಣುತ್ತಿದ್ದ ರಥದಲ್ಲಿ, ನಕ್ಷತ್ರದಿಂದ ವಿಚಿತ್ರವಾಗಿ ಕಾಣುವ ಆಕಾಶದಲ್ಲಿ ಚಂದ್ರನಂತೆ, ಪಾಂಡುಸುತನಾದ ಅರ್ಜುನನು ಶೋಭಿಸಿದನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಪಂಚದಶೋऽಧ್ಯಾಯಃ ॥

॥ ದ್ರೋಣಾಭಿಷೇಕಪರ್ವಣಿ ಪಂಚದಶೋऽಧ್ಯಾಯಃ ॥

॥ ದ್ರೋಣಯುದ್ಧೇ ಪ್ರಥಮಾವಹಾರಃ ಸಮಾಪ್ತಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಹದಿನೈದನೆಯ ಅಧ್ಯಾಯ ಮುಗಿಯಿತು.

॥ ದ್ರೋಣಾಭಿಷೇಕಪರ್ವ ಸಮಾಪ್ತಮ್ ॥

★ ★ ★ ★ ★

೨. ಸಂಶಪ್ತಕವಧಪರ್ವ

ಮಹಾಭಾರತ ತಾತ್ಪರ್ಯನಿರ್ಣಯ - ಅಧ್ಯಾಯ ೨೬

ಸ ವಾಸುದೇವಪ್ರಯತೇ ರಥೇ ಸ್ಥಿತಃ
ಶರೈಃ ಶರೀರಾಂತರಕರೈಃ ಸಮಂತತಃ ।
ನಿಹತ್ಯ ನಾಗಾಶ್ವರಥಾನ್ ಪ್ರವರ್ತಯ-
ನ್ನದೃಶ್ಯತಾऽಶ್ವೇವ ಚ ಶೋಣಿತಾಪಗಾಃ ॥

ಕೃಷ್ಣನಡೆಸುವ ರಥದಲ್ಲಿನಿಂತು ಅರ್ಜುನ ಶರೀರನಾಶಕರವಾದ ಬಾಣಗಳಿಂದ ಸುತ್ತಲೂ ಗಜ-ಅಶ್ವ-ರಥಗಳನ್ನು ನಾಶಪಡಿಸಿ ರಕ್ತದ ಹೊಳೆ ಹರಿಸುತ್ತ ಲೋಕಕ್ಕೆ ದೃಷ್ಟಿಗೋಚರನಾದ.

ನಿಹನ್ಯಮಾನಾಸು ಕಿರೀಟಿನಾ ಚಮೂ
ಷ್ವಾರಕ್ಷಿತೇ ಧರ್ಮಸುತೇ ತಥಾऽऽಪದಃ ।
ಚಮೂಂ ಚ ಭೀಮಾರ್ಜುನಬಾಣಭಗ್ನಾಂ
ದ್ರೋಣೋऽಪಹೃತ್ಯಾಪಯಯೌ ನಿಶಾಗಮೇ ॥

ಸೇನೆಗಳು ಅರ್ಜುನನಿಂದ ಹತವಾಗುತ್ತಿದ್ದಾಗ, ಯುಧಿಷ್ಠಿರನೂ ಆಪತ್ತಿನಿಂದ ರಕ್ಷಿತನಾದಾಗ, ಭೀಮಾರ್ಜುನರ ಬಾಣಗಳಿಂದ ಜರ್ಜರಿತವಾದ ಸೈನ್ಯವನ್ನು, ರಾತ್ರಿಕಾಲ ಬರುತ್ತಿದ್ದಂತೆ ದ್ರೋಣರು ಹಿಂದೆ ಕರೆಸಿಕೊಂಡು ಹೊರಟುಹೋದರು.

ಸ ಧಾರ್ತರಾಷ್ಟ್ರೇಣ ಯುಧಿಷ್ಠಿರಾಗ್ರಹಾತ್
ಸಂಶ್ರಾವಿತಃ ಕ್ರೂರವಚೋ ನಿಶಾಯಾಮ್ ।
ಜಗದಾ ದೂರಂ ಸಮರಾದ್ ವಿನೀಯತಾಂ
ಪಾರ್ಥಸ್ತತೋ ಧರ್ಮಸುತಂ ಗ್ರಹೀಷ್ಯೇ ॥

ರಾತ್ರಿಯಲ್ಲಿ ದುರ್ಯೋಧನ ದ್ರೋಣನನ್ನು ಅವನು ಯುಧಿಷ್ಠಿರನನ್ನು ಸೆರೆಹಿಡಿಯದಿದ್ದುದಕ್ಕೆ ಕಟುವಾಗಿ ಆಕ್ಷೇಪಿಸಿದನು. ಆಗ ದ್ರೋಣರಿಂದ ಅರ್ಜುನನನ್ನು ಯುದ್ಧದಿಂದ ದೂರಕ್ಕೆ ಕರೆದುಕೊಂಡು ಹೋಗಿರಿ. ಆಗ ನಾನು ಯುಧಿಷ್ಠಿರನನ್ನು ಸೆರೆ ಹಿಡಿಯುವೆನು ಎಂದರು.

ತತಃ ಸುಶರ್ಮಾ ಸಹಿತೋ ಮಹಾರಥೈಃ
ಸಂಶಪ್ತಕೈರ್ದೂತರಂ ಪ್ರಣೇತುಮ್ ।
ಯುದ್ಧಾಯ ಭೀಮಾನುಜಮಾಶು ಕ್ಲಪ್ತೋ
ದುರ್ಯೋಧನೇನೋಮಿತಿ ಸೋಽಪ್ಯವಾದೀತ್ ॥

ಆಗ ದುರ್ಯೋಧನನು ಅರ್ಜುನನನ್ನು ಯುದ್ಧಕ್ಕೆ ದೂರ ಕರೆದೊಯ್ಯಲು ಮಹಾರಥರಾದ ಸಂಶಪ್ತಕರೊಂದಿಗೆ ಸುಶರ್ಮನನ್ನು ಆಜ್ಞಾಪಿಸಿದನು. ಅವನೂ ಆಗಲಿ ಎಂದು ಒಪ್ಪಿಕೊಂಡನು.

ಸಮಾಹ್ವಯಾಮಾಸುರಥಾರ್ಜುನಂ ತೇ
ಪ್ರಾತುರ್ಹುತಾಶಸ್ಯ ದಿನಂ ರಣಾಯ ।
ಅಯೋಧಯತ್ ತಾನ್ ಸ ಚ ತತ್ರ ಗತ್ವಾ
ಭೀಮೋ ಗಜಾನೀಕಮಥಾತ್ರ ಚಾವಧೀತ್ ॥

ಬಳಿಕ ಬೆಳಿಗ್ಗೆ ಸಂಶಪ್ತಕರು ಅರ್ಜುನನನ್ನು ಆಗ್ನೇಯ ದಿಕ್ಕಿನಲ್ಲಿ ಯುದ್ಧಕ್ಕೆ ಕರೆದರು. ಅರ್ಜುನನು ಅಲ್ಲಿಗೆ ಹೋಗಿ ಅವರೊಡನೆ ಯುದ್ಧ ಮಾಡಿದನು. ಇತ್ತ ಭೀಮ ಗಜಸೇನೆಯನ್ನು ಸಂಹರಿಸಿದನು.

ನಿಹನ್ಯಮಾನೇಷು ಗಜೇಷು ಸರ್ವತೋ
ವಿದ್ರಾವ್ಯಮಾಣೇಷ್ವಖಿಲೇಷು ರಾಜಸು ।

ಪ್ರಾಗ್ಜ್ಯೋತಿಷೋ ಧಾರ್ತರಾಷ್ಟ್ರಾರ್ಥಿತಸ್ತಂ
ಸಮಾಸದತ್ ಸುಪ್ರತೀಕೇನ ಧನ್ವೀ ॥

ಭೀಮನು ಎಲ್ಲೆಡೆ ಆನೆಗಳನ್ನು ಸಂಹರಿಸಿ ಎಲ್ಲ ರಾಜರನ್ನೂ ಓಡಿಸುತ್ತಿದ್ದಾಗ ದುರ್ಯೋಧನನ ಕೋರಿಕೆಯಂತೆ ಧನುರ್ಧಾರಿಯಾದ ಭಗದತ್ತನು ಸುಪ್ರತೀಕ ಆನೆಯ ಮೇಲೇರಿ ಬಂದನು.

ವಿಭೀಷಿತಾಃ ಸುಪ್ರತೀಕೇನ ಭೀಮ
ಹಯಾ ನ ತಸ್ಥುಸ್ತದನು ಸ್ಮ ಸಾತ್ಯಕಿಃ ।
ಸೌಭದ್ರಮುಖ್ಯಾಶ್ಚ ಗಜಂ ತಮಭ್ಯಯ
ಶ್ಚಿಕ್ಷೇಪ ತೇಷಾಂ ಸ ರಥಾನಥಾಂಬರೇ ॥

ಸುಪ್ರತೀಕ ಆನೆಗೆ ಬೆದರಿದ ಭೀಮನ ಕುದುರೆಗಳು ವಶದಲ್ಲಿ ನಿಲ್ಲಲಿಲ್ಲ. ಬಳಿಕ ಸಾತ್ಯಕಿ ಮತ್ತು ಅಭಿಮನ್ಯು ಮುಂತಾದವರು ಆ ಆನೆಯನ್ನು ಎದುರಿಸಿದರು. ಆನೆ ಅವರ ರಥಗಳನ್ನು ಆಕಾಶಕ್ಕೆ ಹಾರಿಸಿತು.

ಶೈನೇಯಪೂರ್ವೇಷು ರಥೋಜ್ಝಿತೇಷು
ಭೂಮಾವವಪ್ಲುತ್ಯ ಕಥಂಚಿದೇವ ।
ಸ್ಥಿತೇಷು ಭೀಮೇ ಚ ವಿಭೀಷಿತಾಶ್ವಾನ್
ಸಂಯಮ್ಯ ಯುದ್ಧ್ಯತ್ಯಪಿ ಕೃಷ್ಣ ಐಕ್ಷತ್ ॥

ಸಾತ್ಯಕಿ ಮುಂತಾದವರು ರಥಗಳನ್ನು ಕಳೆದುಕೊಂಡು ಹಾರಿ ನೆಲದಲ್ಲಿ ಕಷ್ಟದಿಂದ ನಿಂತಿರಲು, ಭೀಮನೂ ಹೆದರಿದ ಕುದುರೆಗಳನ್ನು ಹತೋಟಿಗೆ ತಂದು ಯುದ್ಧ ಮಾಡುತ್ತಿರಲು ಕೃಷ್ಣನು ಹೀಗೆ ಆಲೋಚಿಸಿದನು.

ಸಂಕ್ಲೇಶಿತೋ ವೈಷ್ಣವಾಸ್ತ್ರಂ ಪ್ರಮುಂಚೇತ್
ಪ್ರಾಗ್ಜ್ಯೋತಿಷೋ ಭೀಮಸೇನೋ ತತೋಽಹಮ್ ।
ಯಾಮ್ಯರ್ಜುನೇನೈವ ತದಸ್ತ್ರಮಾತ್ಮನಃ
ಸ್ವೀಕರ್ತುಮನ್ಯೇನ ವರಾದಧಾರ್ಯಮ್ ॥

ಭೀಮನಿಂದ ಬಹಳ ಪೀಡಿತನಾದ ಭಗದತ್ತ ಅವನ ಮೇಲೆ ವೈಷ್ಣವಾಸ್ತ್ರವನ್ನು ಎಸೆಯಬಹುದು. ಅದರಿಂದ ನನ್ನ ವರದಿಂದ ಬೇರೆಯವರಿಗೆ ಧರಿಸಲಾಗದ ಆ ಅಸ್ತ್ರವನ್ನು ಸ್ವೀಕರಿಸಲು ಅರ್ಜುನನೊಂದಿಗೆ ನಾನೇ ಹೋಗುತ್ತೇನೆ.

ಇತಿ ಸ್ಮ ಸಂಚಿಂತ್ಯ ಸಹಾರ್ಜುನೇನ
ತತ್ರಾऽಯಯಾವಥ ಪಾರ್ಥಂತ್ರಿಗರ್ತಾಃ ।
ನ್ಯವಾರಯಂಸ್ತಾ ವ್ಷ್ಣವಮಸ್ತ್ರಂ ಸ ತೇಷು
ವ್ಯವಾಸೃಜನ್ಮೋಹನಾಯಾऽಶು ವೀರಃ ॥

ಹೀಗೆ ಆಲೋಚಿಸಿ ಕೃಷ್ಣ ಅರ್ಜುನನೊಂದಿಗೆ ಭಗದತ್ತನಲ್ಲಿಗೆ ಹೊರಟ. ಆಗ ಅರ್ಜುನನನ್ನು ಸಂಶಪ್ತಕರು ತಡೆದರು. ವೀರ ಅರ್ಜುನನು ಬೇಗನೆ ಅವರನ್ನು ಮೋಹಗೊಳಿಸುವುದಕ್ಕಾಗಿ ಅವರ ಮೇಲೆ ತ್ವಾಷ್ಟಾಸ್ತ್ರವನ್ನು ಪ್ರಯೋಗಿಸಿದನು.

ತದಸ್ತ್ರವೀರ್ಯೇಣ ವಿಮೋಹಿತಾಸ್ತೇ
ಪರಸ್ಪರಂ ಕೃಷ್ಣಪಾರ್ಥಾವಿತಿ ಸ್ಮ ।
ಜಘ್ನುಸ್ತದಾ ವಾಸವಿಸ್ತಾನ್ ವಿಸೃಜ್ಯ
ಪ್ರಾಗ್ಜ್ಯೋತಿಷಂ ಹಂತುಮಿಹಾಭ್ಯಗಾದ್ ದ್ರುತಮ್ ॥

ಆ ಅಸ್ತ್ರದ ಪ್ರಭಾವದಿಂದ ಸಂಶಪ್ತಕರು ಪರಸ್ಪರ ತಾವೇ ಕೃಷ್ಣಾರ್ಜುನರೆಂಬ ಭ್ರಮೆಗೊಳಗಾಗಿ ಒಬ್ಬರಿಗೊಬ್ಬರು ಹೊಡೆದುಕೊಂಡರು. ಆಗ ಅರ್ಜುನ ಅವರನ್ನು ಬಿಟ್ಟು ಭಗದತ್ತನನ್ನು ಕೊಲ್ಲುವುದಕ್ಕಾಗಿ ಬೇಗನೆ ಅಲ್ಲಿಗೆ ಎದುರಾಗಿ ಬಂದನು.

ವಿಸೃಜ್ಯ ಭೀಮಂ ಸ ಚ ಪಾರ್ಥಮೇವ
ಯಯೌ ಗಜಸ್ಕಂಧಗತೋ ಗಜಂ ತಮ್ ।
ಸಂಚೋದಯಾಮಾಸ ರಥಾಯ ತಸ್ಯ
ಚಕ್ರೇऽಪಸವ್ಯಂ ಹರಿರೇನಮಾಶು .।

ಭಗದತ್ತನು ಭೀಮನನ್ನು ಬಿಟ್ಟು ಅರ್ಜುನನನ್ನೇ ಸಮೀಪಿಸಿದನು. ಆನೆಯ ಹೆಗಲ ಮೇಲೆ ಕುಳಿತಿದ್ದ ಆತ ಆನೆಯನ್ನು ಅರ್ಜುನನ ರಥದ ಕಡೆಗೆ ನಡೆಸಿದನು. ಕೃಷ್ಣನು ರಥವನ್ನು ಆನೆಯ ಸುತ್ತಲೂ ವೇಗವಾಗಿ ಚಲಿಸಿದನು.

ಮನೋಜವೇನೈವ ರಥೇ ಪರೇಣ
ಸಂಭ್ರಾಮ್ಯಮಾಣೇ ನ ತು ತಂ ಗಜಃ ಸಃ ।
ಪ್ರಾಪ್ತುಂ ಶಶಾಕಾಥ ಶರೈಃ ಸುತೀಕ್ಷ್ಣೈ
ರಭ್ಯರ್ದಯಾಮಾಸ ನೃಪಂ ಸ ವಾಸವಿಃ ॥

ಶ್ರೀಕೃಷ್ಣನು ರಥವನ್ನು ಮನೋವೇಗದಿಂದ ಸುತ್ತಲೂ ತಿರುಗಿಸುತ್ತಿದ್ದುದರಿಂದ ಆನೆಯು ರಥವನ್ನು ಹಿಡಿಯಲು ಶಕ್ತವಾಗಲಿಲ್ಲ. ಅರ್ಜುನನು ಅತಿ ತೀಕ್ಷ್ಣವಾದ ಬಾಣಗಳಿಂದ ಭಗದತ್ತನನ್ನು ಪೀಡಿಸಿದನು.

ಅಸ್ತ್ರೈಶ್ಚ ಶಸ್ತ್ರೈ ಸುಚಿರಂ ನೃವೀರಾ
ವಯುದ್ಧ್ಯತಾಂ ತೌ ಬಲಿನಾಂ ಪ್ರಬರ್ಹೌ ।
ಅಥೋ ಚಕರ್ತಾಸ್ಯ ಧನುಃ ಸ ಪಾರ್ಥಃ
ಸ ವೈಷ್ಣವಾಸ್ತ್ರಂ ಚ ತದಾಂಕುಶೇಽಕರೋತ್ ॥

ಬಲಿಷ್ಠರಲ್ಲಿ ಮೊದಲಿಗರಾದ ಆ ಅರ್ಜುನ-ಭಗದತ್ತರು ದೀರ್ಘಕಾಲ ಅಸ್ತ್ರಗಳಿಂದಲೂ ಶಸ್ತ್ರಗಳಿಂದಲೂ ಯುದ್ಧಮಾಡಿದರು. ಬಳಿಕ ಅರ್ಜುನನು ಭಗದತ್ತನ ಬಿಲ್ಲನ್ನು ತುಂಡರಿಸಿದನು. ಭಗದತ್ತನು ಅಂಕುಶದಲ್ಲಿ ವೈಷ್ಣವಾಸ್ತ್ರವನ್ನು ಅಭಿಮಂತ್ರಿಸಿದನು.

ತಸ್ಮಿನ್ನಸ್ತ್ರೇ ತೇನ ತದಾ ಪ್ರಮುಕ್ತೇ
ದಧಾರ ತದ್ ವಾಸುದೇವೋಽಮಿತೌಜಾಃ ।
ತದಂಸದೇಶೇಽಸ್ಯ ತು ವೈಜಯಂತೀ
ಬಭೂವ ಮಾಲಾಽಖಿಲಲೋಕಭರ್ತುಃ ॥

ಭಗದತ್ತನು ವೈಷ್ಣವಾಸ್ತ್ರವನ್ನು ಪ್ರಯೋಗಿಸಿದಾಗ ಅಮಿತ ಶಕ್ತಿ ಉಳ್ಳ ಶ್ರೀಕೃಷ್ಣನು ಅದನ್ನು ಧರಿಸಿದನು. ಅದು ಸಕಲ ಲೋಕದೊಡೆಯನಾದ ಕೃಷ್ಣನ ಹೆಗಲಲ್ಲಿ ವೈಜಯಂತೀ ಮಾಲೆಯಾಯಿತು.

ದೃಷ್ಟ್ವೈವ ತದ್ ಧಾರಿತಮಚ್ಯುತೇನ
ಪಾರ್ಥಃ ಕಿಮರ್ಥಂ ವಿಧೃತಂ ತ್ವಯೇತಿ ।

ಊಚೇ ತಮಾಹಾऽಶು ಜಗನ್ನಿವಾಸೋ
ಮಯಾऽಖಿಲಂ ಧಾರ್ಯತೇ ಸರ್ವದೈವ ॥

ವೈಷ್ಣವಾಸ್ತ್ರವನ್ನು ಶ್ರೀಕೃಷ್ಣ ಧರಿಸಿದುದನ್ನು ನೋಡಿ ಅರ್ಜುನ 'ನೀನೇಕೆ ಅದನ್ನು ಧರಿಸಿದೆ?' ಎಂದನು. ಆಗ ಜಗದಾಶ್ರಯನಾದ ಕೃಷ್ಣನು 'ಯಾವಾಗಲೂ ಎಲ್ಲವನ್ನೂ ನಾನೇ ಧರಿಸುತ್ತೇನೆ' ಎಂದು ಹೇಳಿದನು.

ನ ಮಾದೃಶೋऽನ್ಯೋऽಸ್ತಿ ಕುತಃ ಪರೋ ಮತ್
ಸೋऽಹಂ ಚತುರ್ಧಾ ಜಗತೋ ಹಿತಾಯ ।
ಸ್ಥಿತೋऽಸ್ಮಿ ಮೋಕ್ಷಪ್ರಲಯಂ ಸ್ಥಿತೀನಾಂ
ಸೃಷ್ಟೇಶ್ಚ ಕರ್ತಾ ಕ್ರಮಶಃ ಸ್ವಮೂರ್ತಿಭಿಃ ।
ಸ ವಾಸುದೇವಾದಿಚತುಃ ಸ್ವರೂಪಃ
ಸ್ಥಿತೋऽನಿರುದ್ಧೋ ಹೃದಿ ಚಾಖಿಲಸ್ಯ ॥

ನನಗೆ ಸಮಾನ ಇನ್ನೊಬ್ಬನಿಲ್ಲ. ನನಗಿಂತ ಮಿಗಿಲು ಇನ್ನೆಲ್ಲಿ? ಜಗತ್ತಿನ ಹಿತಕ್ಕಾಗಿ ನಾಲ್ಕು ರೂಪದವನಾಗಿದ್ದೇನೆ. ನನ್ನ ರೂಪಗಳಿಂದ ಕ್ರಮವಾಗಿ ಮೋಕ್ಷ, ಪ್ರಲಯ, ಸ್ಥಿತಿ, ಸೃಷ್ಟಿಗಳಿಗೆ ಕರ್ತನಾಗಿದ್ದೇನೆ. ವಾಸುದೇವ ಮುಂತಾದ ನಾಲ್ಕು ರೂಪದವನಾದ ನಾನೇ ಅನಿರುದ್ಧನಾಗಿ ಎಲ್ಲರ ಹೃದಯದಲ್ಲಿರುತ್ತೇನೆ.

ಸ ಏವ ಚ ಕ್ರೋಡತನುಃ ಪುರಾऽಹಂ
ಭೂಮಿ ಪ್ರಿಯಾರ್ಥಂ ನರಕಾಯ ಚಾದಾಮ್ ।
ಅಸ್ತ್ರಂ ಮದೀಯಂ ವರಮಸ್ಯ ಚಾದಾ-
ಮವಧ್ಯತಾಂ ಯಾವದಸ್ತ್ರಂ ಸಸೂನೋಃ ॥

ಚತುರ್ಮೂರ್ತಿ ಸ್ವರೂಪನಾದ ನಾನೇ ವರಾಹರೂಪನಾಗಿ ಹಿಂದೆ ಭೂದೇವಿಗೆ ಪ್ರಿಯ ಉಂಟುಮಾಡುವುದಕ್ಕಾಗಿ ನರಕಾಸುರನಿಗೆ ನನ್ನ ಅಸ್ತ್ರವನ್ನಿತ್ತೆ. ಅವನಿಗೂ ಅವನ ಮಗನಿಗೂ ಅಸ್ತ್ರವಿರುವಷ್ಟು ಕಾಲ ಅವಧ್ಯತ್ವವನ್ನೂ ವರವಾಗಿ ನೀಡಿದೆ.

ಅಸ್ತ್ರಸ್ಯ ಚಾನ್ಯೋ ನ ತು ಕಶ್ಚಿದಸ್ತಿ
ಯೋऽವಧ್ಯ ಏತಸ್ಯ ಕುತಶ್ಚ ಮತ್ತಃ ।

ಇತಿ ಸ್ಮ ತೇ ನೈವ ಮಯಾ ಧೃತಂ ತ-
ದಸ್ತ್ರಂ ತದೇನಂ ಜಹಿ ಚಾಸ್ತ್ರಹೀನಮ್ ॥

ಈ ಅಸ್ತ್ರಕ್ಕೆ ಅವಧ್ಯನು ನಾನೇ ಹೊರತು ಇನ್ನಾರೂ ಯಾವ ಕಾರಣದಿಂದಲೂ ಅಲ್ಲ. ಅದರಿಂದಲೇ ನಾನು ಆ ಅಸ್ತ್ರವನ್ನು ಧರಿಸಿದೆ. ಅದರಿಂದ ಈಗ ಅಸ್ತ್ರಹೀನನಾಗಿರುವ ಈ ಭಗದತ್ತನನ್ನು ನೀನು ಕೊಲ್ಲು.

ಇತ್ಯುಕ್ತಮಾಕರ್ಣ್ಯ ಸ ಕೇಶವೇನ
ಸಮ್ಮಂತ್ರ್ಯ ಬಾಣಂ ಹೃದಯೇಮುಮೋಚ ।
ಪ್ರಾಗ್ಜ್ಯೋತಿಷಸ್ಯಾಪರಮುತ್ತಮಂ ಶರಂ
ಗಜೇಂದ್ರಕುಂಭಸ್ಥಲ ಆಶ್ವಮಜ್ಞಯತ್ ॥

ಶ್ರೀಕೃಷ್ಣನು ಹೀಗೆ ಹೇಳಿದ್ದನ್ನು ಕೇಳಿ ಅರ್ಜುನ ಅವನೊಡನೆ ವಿಚಾರಮಾಡಿ ಭಗದತ್ತನ ಎದೆಯ ಮೇಲೆ ಬೇಗನೆ ಒಂದು ಬಾಣವನ್ನೆಸೆದನು. ಗಜೇಂದ್ರನ ಕುಂಭಸ್ಥಲದಲ್ಲಿಯೂ ಇನ್ನೊಂದು ಉತ್ತಮವಾದ ಬಾಣವನ್ನು ನೆಟ್ಟ.

ಉಭೌ ಚ ತೌ ಪೇತತುರದ್ರಿಸನ್ನಿಭೌ
ಮಹೇಂದ್ರ ವಜ್ರಾಭಿಹತಾವಿವಾऽಶು ।
ನಿಹತ್ಯ ತೌ ವಾಸವಿರುಗ್ರಪೌರುಷೋ
ಮುಮೋದ ಸಾಧು ಸ್ವಜನಾಭಿಪೂಜಿತಃ ॥

ಭಗದತ್ತ ಮತ್ತು ಸುಪ್ರತೀಕ ಆನೆ ಇಬ್ಬರೂ ಮಹೇಂದ್ರನ ವಜ್ರಾಯುಧದಿಂದ ಹೊಡೆಯಲ್ಪಟ್ಟ ಬೆಟ್ಟಗಳಂತೆ ಬೇಗನೆ ನೆಲಕ್ಕೆ ಉರುಳಿಸಿದರು. ಉಗ್ರಪ್ರತಾಪಿಯಾದ ಅರ್ಜುನನು ಅವರಿಬ್ಬರನ್ನು ಕೊಂದು ಚೆನ್ನಾಗಿ ತನ್ನವರ ಪ್ರಶಂಸೆಗೆ ಪಾತ್ರನಾಗಿ ಆನಂದಪಟ್ಟನು.

ಅಥಾಚಲಂ ವೃಷಕಂ ಚೈವ ಹತ್ವಾ
ಕನೀಯಸೌ ಶಕುನೇಸ್ತಂ ಚ ಬಾಣೈಃ ।
ವಿವ್ಯಾಧಮಾಯಾಮಸೃಜತ್ ಸ ತಾಂ ಚ
ವಿಜ್ಞಾನಾಸ್ತ್ರೇಣಾऽಶು ನಾಶಾಯ ಚಕ್ರೇ॥

ಬಳಿಕ ಅರ್ಜುನ ಶಕುನಿಯ ತಮ್ಮಂದಿರಾದ ಅಚಲನನ್ನೂ ವೃಷಕನನ್ನೂ ಕೊಂದು ಶಕುನಿಯನ್ನೂ ಬಾಣಗಳಿಂದ ಹೊಡೆದನು. ಶಕುನಿ ಮಾಯೆಯನ್ನು ಸೃಷ್ಟಿಸಿದನು. ಅದನ್ನೂ ಅರ್ಜುನನು ವಿಜ್ಞಾನಾಸ್ತ್ರದಿಂದ ನಾಶಪಡಿಸಿದನು.

ಸ ನಷ್ಟಮಾಯಃ ಪ್ರಾದ್ರವತ್ ಪಾಪಕರ್ಮಾ
ತತಃ ಪಾರ್ಥಃ ಶರಪೂಗೈಶ್ಚಮೂಂ ತಾಮ್ ।
ವಿದ್ರಾವಯಾಮಾಸ ತದಾ ಗುರೋಃ ಸುತೋ
ಮಾಹಿಷ್ಮತೀಪತಿಮಾಜೌ ಜಘಾನ ॥

ಪಾಪಕರ್ಮಿಯಾದ ಶಕುನಿ ತನ್ನ ಮಾಯೆ ನಾಶವಾದೊಡನೆ ಪಲಾಯನ ಮಾಡಿದನು. ಬಳಿಕ ಅರ್ಜುನನು ಬಾಣ ಸಮೂಹಗಳಿಂದ ಕೌರವ ಸೇನೆಯನ್ನು ಅಟ್ಟಿದನು. ಆಗ ಅಶ್ವತ್ಥಾಮರು ಮಾಹಿಷ್ಮತಿಯ ಅರಸನಾದ ನೀಲನನ್ನು ಕೊಂದನು.

ತದಾ ಭೀಮಸ್ತಸ್ಯ ನಿಹತ್ಯ ವಾಹಾನ್
ವ್ಯದ್ರಾವಯದ್ ಧಾರ್ತರಾಷ್ಟ್ರೀಂ ಚಮೂಂ ಚ ।
ಭೀಮಾರ್ಜುನಾಭ್ಯಾಂ ಹನ್ಯಮಾನಾಂ ಚಮೂಂ ತಾಂ
ದೃಷ್ಟ್ವಾ ದ್ರೋಣಃ ಕ್ಷಿಪ್ರಮಪಾಜಹಾರ ॥

ಆಗ ಭೀಮನು ಅಶ್ವತ್ಥಾಮನ ಕುದುರೆಗಳನ್ನು ಕೊಂದು ಕೌರವ ಸೇನೆಯನ್ನು ಓಡಿಸಿದನು. ಭೀಮಾರ್ಜುನರಿಂದ ಆ ಸೈನ್ಯ ಹತವಾಗುತ್ತಿದ್ದುದನ್ನು ಕಂಡು ದ್ರೋಣ ಬೇಗನೆ ಅದನ್ನು ಹಿಂದೆ ಕರೆಸಿಕೊಂಡನು.

ಪ್ರಾಗ್ಜ್ಯೋತಿಷೇ ನಿಹತೇऽಥಾಗ್ರಹಾಚ್ಚ
ಯುಧಿಷ್ಠಿರಸ್ಯಾತಿವಿಷಣ್ಣರೂಪಃ ।
ದುರ್ಯೋಧನೋऽಶ್ರಾವಯದ್ ದೀನವಾಕ್ಯಾ-
ನ್ಯತ್ರ ದ್ರೋಣಂ ಸೋऽಪಿ ನೃಪಂ ಜಗಾದ ॥

ಭಗದತ್ತ ಹತನಾದಾಗ ಯುಧಿಷ್ಠಿರನನ್ನೂ ಸೆರೆ ಹಿಡಿಯಲಾಗದಿದ್ದುದರಿಂದ ದುರ್ಯೋಧನನು ಬಹಳ ವಿಷಣ್ಣನಾಗಿ ಶಿಬಿರದಲ್ಲಿ ದ್ರೋಣರಿಗೆ ಬಹಳ ಕಪಟವಾದ ಮಾತುಗಳನ್ನಾಡಿದನು. ಆಗ ದ್ರೋಣರು ಅವನಿಗೆ ಹೀಗೆ ಹೇಳಿದರು.

★ ★ ★ ★ ★

ಹದಿನಾರನೆಯ ಅಧ್ಯಾಯ

ಸಂಶಪ್ತಕರಿಂದ ಅರ್ಜುನನಿಗೆ ಯುದ್ಧಾಹ್ವಾನ. ಸತ್ಯಜಿತನನ್ನು ಯುಧಿಷ್ಠಿರನ ರಕ್ಷಣೆಗೆ ನಿಲ್ಲಿಸಿ, ಅರ್ಜುನನಿಂದ ಯುದ್ಧಕ್ಕೆ ಪ್ರಯಾಣ.

ಸಂಜಯಃ

ತೇ ಸೇನೇ ಶಿಬಿರಂ ಗತ್ವಾ ನ್ಯವಿಶೇತಾಂ ವಿಶಾಂಪತೇ ।
ಯಥಾನ್ಯಾಯಂ ಯಥಾಗುಲ್ಮಂ ಯಥಾಭಾಗಂ ಚ ಸರ್ವಶಃ ॥ ೧ ॥

ಸಂಜಯ– ಎಲೈ ರಾಜನೇ, ಆ ಎರಡು ಸೈನ್ಯಗಳು ಶಿಬಿರಕ್ಕೆ ಹೋಗಿ, ತಮ್ಮ ಸೇನಾಖಂಡಗಳಿಗೆ ಅನುಗುಣವಾಗಿ, ತಮ್ಮ ಭಾಗಗಳಿಗೆ ಅನುಗುಣವಾಗಿ ನ್ಯಾಯವಾದ ರೀತಿಯಲ್ಲಿ ವಿಶ್ರಾಂತಿಯನ್ನು ಪಡೆದವು.

ಕೃತ್ವಾವಹಾರಂ ಸೈನ್ಯಾನಾಂ ದ್ರೋಣಃ ಪರಮದುರ್ಮನಾಃ ।
ದುರ್ಯೋಧನಮಭಿಪ್ರೇಕ್ಷ್ಯ ಸವ್ರೀಡಮಿದಮಬ್ರವೀತ್ ॥ ೨ ॥

ಸೈನ್ಯಗಳನ್ನು ಹಿಂತೆಗೆದುಕೊಂಡು ಬಹಳ ಬೇಸರದಿಂದ ಕೂಡಿದ ದ್ರೋಣರು ದುರ್ಯೋಧನನನ್ನು ನೋಡಿ ನಾಚಿಕೆಯಿಂದ ಈ ಮಾತನ್ನು ಆಡಿದರು.

ದ್ರೋಣಃ

ಉಕ್ತಮೇತನ್ಮಯಾ ಪೂರ್ವಂ ನ ತಿಷ್ಠತಿ ಧನಂಜಯೇ ।
ಶಕ್ಯೋ ಗ್ರಹೀತುಂ ಸಮರೇ ದೇವೈರಪಿ ಯುಧಿಷ್ಠಿರಃ ॥ ೩ ॥

ದ್ರೋಣ– ಅರ್ಜುನನು ಯುದ್ಧದಲ್ಲಿ ಇರುವಾಗ ಯುಧಿಷ್ಠಿರನನ್ನು ದೇವತೆಗಳೂ ಹಿಡಿಯಲು ಸಾಧ್ಯವಿಲ್ಲ ಎಂದು ನಾನು ಮೊದಲೇ ಹೇಳಿದ್ದೇನೆ.

ಇತಿ ತದ್ವಚನಂ ಸತ್ಯಂ ಜಾನೀಧ್ವಂ ಸಾಧು ಸಂಯುಗೇ ।
ಮಾಽತಿಶಂಕೀ ವಚೋ ಮಹ್ಯಮಜಯ್ಯೌ ಕೃಷ್ಣಪಾಂಡವೌ ॥ ೪ ॥

ಯುದ್ಧದಲ್ಲಿ ಈ ಮಾತು ಸತ್ಯವೆಂದು ನೀವೆಲ್ಲರೂ ಚೆನ್ನಾಗಿ ತಿಳಿಯಿರಿ. ನನ್ನ ಮಾತನ್ನು ಶಂಕಿಸಬೇಡ. ಕೃಷ್ಣಾರ್ಜುನರು ಅಜೇಯರಾದವರು.

ಅಪನೀತೇ ತು ಯೋಗೇನ ಕೇನಚಿಚ್ಛ್ವೇತವಾಹನೇ ।
ತತ ಏಷ್ಯತಿ ತೇ ರಾಜನ್ ವಶಮದ್ಯ ಯುಧಿಷ್ಠಿರಃ ॥ ೫ ॥

ರಾಜನೇ, ಶ್ವೇತವಾಹನನಾದ ಅರ್ಜುನನು ಯಾವುದಾದರೂ ಉಪಾಯದಿಂದ ದೂರಕ್ಕೆ ಎಳೆಯಲ್ಪಟ್ಟರೆ ಈ ದಿನ ಯುಧಿಷ್ಠಿರನು ನಿನ್ನ ವಶನಾಗುವನು.

ಕಶ್ಚಿದಾಹ್ವಯತಾಂ ಸಂಖೇ ದೇಶಮನ್ಯಮಿತೋऽರ್ಜುನಮ್ ।
ತಮಜಿತ್ವಾ ತು ಕೌಂತೇಯೋ ನಿವರ್ತೇನ್ನ ಕಥಂಚನ ॥ ೬ ॥

ಯಾವನಾದರೂ ಒಬ್ಬನು ಈ ಪ್ರದೇಶದಿಂದ ಬೇರೆ ಪ್ರದೇಶಕ್ಕೆ ಬಂದು ಯುದ್ಧ ಮಾಡುವಂತೆ ಅರ್ಜುನನನ್ನು ಆಹ್ವಾನಿಸಲಿ. ಕೌಂತೇಯನಾದರೂ ಅವನನ್ನು ಗೆಲ್ಲದೆ ಯಾವ ರೀತಿಯಿಂದಲೂ ಹಿಂದಿರುಗುವುದಿಲ್ಲ.

ಏತಸ್ಮಿನ್ನಂತರೇ ಶೂನ್ಯೇ ಧರ್ಮರಾಜಮಹಂ ನೃಪಮ್ ।
ಗ್ರಹೀಷ್ಯಾಮಿ ಚಮೂಂ ಭಿತ್ತ್ವಾ ಧೃಷ್ಟದ್ಯುಮ್ನಸ್ಯ ಪಶ್ಯತಃ ॥ ೭ ॥

ಈ ಮಧ್ಯದಲ್ಲಿ ಧರ್ಮರಾಜನು ಸಹಾಯರಹಿತನಾಗಿರುವಾಗ ನಾನು ಪಾಂಡವರ ಸೈನ್ಯವನ್ನು ಭೇದಿಸಿ, ಧೃಷ್ಟದ್ಯುಮ್ನನೆದುರಿಗೆ ರಾಜನಾದ ಯುಧಿಷ್ಠಿರನನ್ನು ಹಿಡಿಯುವೆನು.

ಅರ್ಜುನೇನ ಪರಿತ್ಯಕ್ತೋ ನ ಚೇತ್ ತ್ರಾಸಾತ್ ಪಲಾಯತೇ ।
ಮಾಮುಪಾಯಾಂತಮಾಲೋಕ್ಯ ಗೃಹೀತಮಿತಿ ವಿದ್ಧಿ ತಮ್ ॥ ೮ ॥

ಅರ್ಜುನನಿಂದ ಪರಿತ್ಯಕ್ತನಾಗಿ ಯುದ್ಧಕ್ಕೆ ಬರುತ್ತಿರುವ ನನ್ನನ್ನು ನೋಡಿ ಭಯದಿಂದ ಓಡಿಹೋಗದಿದ್ದರೆ ಈ ದಿನ ಅವನನ್ನು ಹಿಡಿದಿದ್ದೇನೆಂದು ತಿಳಿ.

ಕ್ಷೋಭಯಿತ್ವಾ ಬಲಂ ತೇಷಾಂ ಪಾಂಡವಾನಾಂ ಮಹಾತ್ಮನಾಮ್ ।
ತಮಾನೇಷ್ಯಾಮಿ ಸಗಣಂ ವಶಂ ತವ ನ ಸಂಶಯಃ ॥ ೯ ॥

ಮಹಾತ್ಮರಾದ ಆ ಪಾಂಡವರ ಸೈನ್ಯವನ್ನು ಕ್ಷೋಭೆಗೊಳಿಸಿ, ಪರಿವಾರ ಸಹಿತನಾಗಿ ಅವನನ್ನು ನಿನ್ನ ವಶಕ್ಕೆ ತರುವೆನು. ಇದರಲ್ಲಿ ಸಂಶಯವಿಲ್ಲ.

ಯದಿ ಸ್ಥಾಸ್ಯತಿ ಸಂಗ್ರಾಮೇ ಮುಹೂರ್ತಮಪಿ ಪಾಂಡವಃ ।
ಯದ್ಯಪ್ಯೇಷ್ಯತಿ ಸಂಗ್ರಾಮಾದ್ ಗ್ರಹಣಾತ್ ತದ್ ವಿಶಿಷ್ಯತೇ ॥ ೧೦ ॥

ಯುಧಿಷ್ಠಿರನು ಒಂದು ಮುಹೂರ್ತವಾದರೂ ಯುದ್ಧದಲ್ಲಿ ನಿಲ್ಲುವವನಾದರೆ (ಅವನನ್ನು ಹಿಡಿಯುವೆನು). ಅವನು ಒಂದು ಪಕ್ಷ ರಣರಂಗದಿಂದಲೇ ಹೊರಗೆ ಹೋಗುವವನಾದರೆ ಅದು ಅವನನ್ನು ಹಿಡಿಯುವುದಕ್ಕಿಂತಲೂ ಶ್ರೇಷ್ಠವಾದುದು.

ಸಂಜಯಃ

ದ್ರೋಣಸ್ಯ ತದ್ ವಚಃ ಶ್ರುತ್ವಾ ತ್ರಿಗರ್ತಾಧಿಪತಿಸ್ತತಃ ।
ಭ್ರಾತೃಭಿಃ ಸಹಿತೋ ರಾಜನ್ನಿದಂ ವಚನಮಬ್ರವೀತ್ ॥ ೧೧ ॥

ಸಂಜಯ– ರಾಜನೇ, ದ್ರೋಣರ ಆ ಮಾತುಗಳನ್ನು ಕೇಳಿ, ಆಗ ತ್ರಿಗರ್ತಾಧಿಪತಿಯು ತನ್ನ ಸಹೋದರರಿಂದ ಸಹಿತನಾಗಿ ಈ ಮಾತನ್ನು ಆಡಿದನು.

ವಯಂ ವಿನಿಕೃತಾ ರಾಜನ್ ಸದಾ ಗಾಂಡೀವಧನ್ವನಾ ।
ಅನಾಗಸೋಽಪಿ ಚಾಕಸ್ಮಾತ್ ಪ್ರೇಷ್ಯಾಃ ಪ್ರಭವತಾ ಯಥಾ ॥ ೧೨ ॥

ರಾಜನೇ, ನಾವು ನಿರಪರಾಧಿಗಳಾದರೂ ನಿಷ್ಕಾರಣವಾಗಿ ಸ್ವಾಮಿಯು ಭೃತ್ಯರಿಗೆ ಅವಮಾನ ಮಾಡಿದಂತೆ ನಾವು ಅರ್ಜುನನಿಂದ ಅಪಚಾರಕ್ಕೆ ಒಳಗಾಗಿದ್ದೇವೆ.

ತೇ ವಯಂ ಸ್ಮರಮಾಣಾಸ್ತಾನ್ ವಿಪ್ರಕಾರಾನ್ ಪೃಥಗ್ವಿಧಾನ್ ।
ಕ್ರೋಧಾಗ್ನಿನಾ ದಹ್ಯಮಾನಾ ನಾಶೀಮಹಿ ದಿವಾನಿಶಮ್ ॥ ೧೩ ॥

ಅಂತಹ ನಾವು ಅವನು ಮಾಡಿದ ಅನೇಕ ವಿಧವಾದ ಅಪಚಾರಗಳನ್ನು ಸ್ಮರಿಸುತ್ತಾ, ಹಗಲೂ-ರಾತ್ರಿಯೂ ಕ್ರೋಧಾಗ್ನಿಯಿಂದ ಜ್ವಲಿಸುತ್ತಾ ಭೋಜನವನ್ನು ಮಾಡುತ್ತಿಲ್ಲ.

ಸ ನೋ ದಿವ್ಯಾಸ್ತ್ರಸಂಪನ್ನಃ ಚಕ್ಷುರ್ವಿಷಯಮಾಗತಃ ।
ಯದಿ ಕುಯಾಮ ತತ್ ಕರ್ಮ ಯಚ್ಚಿಕೀರ್ಷಾಮ ಹೃದ್ಗತಮ್ ।
ಭವತಶ್ಚ ಪ್ರಿಯಂ ತತ್ ಸ್ಯಾದ್ ಅಸ್ಮಾಕಂ ಚ ಯಶಸ್ಕರಮ್ ॥೧೪॥

ದೈವಾನುಗ್ರಹದಿಂದ ವ್ರತಸಂಪನ್ನನಾದ ಅವನು ಈಗ ನಮ್ಮ ಕಣ್ಣಿಗೆ ಗೋಚರನಾಗಿದ್ದಾನೆ. ನಾವು ಯಾವಾಗಲೂ ಬಯಸಿದ, ನಮಗೆ ಅಭಿಪ್ರೇತವಾದ, ಕರ್ಮವನ್ನು ನಾವು ಮಾಡುವುದಾದರೆ ಅದು ನಿಮಗೂ ಪ್ರಿಯವಾದೀತು ಮತ್ತು ನಮಗೂ ಕೀರ್ತಿಕರವಾದೀತು.

ಅದ್ಯಾಸ್ತ್ವನರ್ಜುನಾ ಭೂಮಿರತ್ರಿಗರ್ತಾऽಥವಾ ಪುನಃ ।
ವಯಮೇನಂ ಹನಿಷ್ಯಾಮೋ ನಿಕೃಷ್ಯಾಯೋಧನಾದ್ ಬಹಿಃ ।
ಸತ್ಯಂ ತೇ ಪ್ರತಿಜಾನೀಮೋ ನೈತನ್ಮಿಥ್ಯಾ ಭವಿಷ್ಯತಿ ॥ ೧೫ ॥

ಈ ದಿನ ಭೂಮಿಯು ನಿರರ್ಜುನವಾಗಲಿ ಅಥವಾ ತ್ರಿಗರ್ತಶೂನ್ಯವಾಗಲಿ. ನಾವು ಅವನನ್ನು ರಣರಂಗದ ಹೊರಗೆ ಎಳೆದು ಕೊಲ್ಲುವೆವು. ನಿನಗೆ ಸತ್ಯವಾಗಿ ಪ್ರತಿಜ್ಞೆಯನ್ನು ಮಾಡುತ್ತಿದ್ದೇವೆ, ಇದು ಸುಳ್ಳಾಗುವುದಿಲ್ಲ.

ಸಂಜಯಃ

ಏವಂ ಸತ್ಯರಥಶ್ಚೋಕ್ತ್ವಾ ಸತ್ಯವರ್ಮಾ ಚ ಭಾರತ ।
ಸತ್ಯಧರ್ಮಾऽಪಿ ಸತ್ಯೇಷುಃ ಸತ್ಯಕರ್ಮಾ ಚ ಭಾರತ ॥ ೧೬ ॥

ಸಹಿತಾ ಭ್ರಾತರಃ ಪಂಚ ರಥಾನಾಮಯುತೇನ ಚ ।
ನ್ಯವರ್ತಂತ ಮಹಾರಾಜ ಕರ್ತುಂ ಸಮಯಬಂಧನಮ್ ॥ ೧೭ ॥

ಸಂಜಯ– ಎಲೈ ಭಾರತನೇ, ಹೀಗೆ ಸಹೋದರರಾದ ಸತ್ಯರಥ, ಸತ್ಯವರ್ಮ, ಸತ್ಯಧರ್ಮ, ಸತ್ಯೇಷು ಮತ್ತು ಸತ್ಯಕರ್ಮರು ಐವರೂ ಒಟ್ಟಾಗಿ ಅರ್ಜುನನ ಜೊತೆಯಲ್ಲಿ ಸಮಯ ಬಂಧನವನ್ನು ಮಾಡಿಕೊಳ್ಳಲು ಹತ್ತುಸಾವಿರ ರಥಗಳ ಜೊತೆಯಲ್ಲಿ ಹಿಂದಿರುಗಿದರು.

ಮಾಲವಾಸ್ತುಂಡಿಕೇರಾಶ್ಚ ರಥಾನಾಮಯುತೈಸ್ತ್ರಿಭಿಃ ।
ಸುಶರ್ಮಾ ಚ ನರವ್ಯಾಘ್ರಃ ತ್ರಿಗರ್ತಃ ಪ್ರಸ್ಥಲಾಧಿಪಃ ॥ ೧೮ ॥

ಮಚ್ಚಿಲ್ಲಕೈರ್ಲಿಲಿಂದ್ಧೈಶ್ಚ ಸಹಿತೋ ಮದ್ರಕೈರಪಿ ।
ರಥಾನಾಮಯುತೇನೈವಮಗಮದ್ ಭ್ರಾತೃಭಿಃ ಸಹ ॥ ೧೯ ॥

ಮಾಲವರು ಮತ್ತು ದುಂಡಿಕೇರರು ಮೂವತ್ತು ಸಾವಿರ ರಥಗಳಿಂದಲೂ, ಹಾಗೆಯೇ ನರಶ್ರೇಷ್ಠನೂ, ಪ್ರಸ್ಥಲಾಧಿಪನೂ, ತ್ರಿಗರ್ತರಲ್ಲಿ ಪ್ರಧಾನನೂ ಆದ ಸುಶರ್ಮನು ಮಚ್ಚಿಲ್ಲಕರಿಂದ, ಲಿಲಿಂಧ್ರರಿಂದ ಮತ್ತು ಮದ್ರಕರಿಂದ ಸಹಿತನಾಗಿ ಹತ್ತು ಸಾವಿರ ರಥಗಳನ್ನು ತೆಗೆದುಕೊಂಡು ಹೀಗೆಯೇ ತನ್ನ ಸಹೋದರರ ಜೊತೆಯಲ್ಲಿ ಹೊರಟರು.

ಮಲದಾಶ್ಚ ಕರೂಷಾಶ್ಚ ದರದಾಶ್ಚ ಮಹಾರಥಾಃ ।
ತಂಕಣಾಶ್ಚ ಪರಾದಾಶ್ಚ ಯುಗಪತ್ ತೇ ಸಮಾಗತಾಃ ॥ ೨೦ ॥

ಮಹಾರಥರಾದ ಮಲದರೂ, ಕರೂಷರೂ, ದರದರೂ, ತಂಕಣರೂ ಮತ್ತು ಪರಾದರೂ ಒಟ್ಟಿಗೆ (ಪ್ರತಿಜ್ಞೆಯನ್ನು ಮಾಡಲು) ಬಂದರು.

ನಾನಾಜನಪದೇಭ್ಯಶ್ಚ ರಥಾನಾಮಯುತಂ ಪುನಃ ।
ಸಮುಚ್ಛ್ರಿತಂ ವಿಶಿಷ್ಟಾನಾಂ ಶಪಥಾರ್ಥಮುಪಾಗಮತ್ ॥ ೨೧ ॥

ನಾನಾ ರಾಜ್ಯಗಳಿಂದ ಉನ್ನತರಾದ, ವಿಶಿಷ್ಟರಾದ ಹತ್ತುಸಾವಿರ ಮಹಾರಥರು ಪ್ರತಿಜ್ಞೆಯನ್ನು ಮಾಡಲು ಬಂದರು.

ತತೋ ಜ್ವಲನಮಾಧಾಯ ಹುತ್ವಾ ಸರ್ವೇ ಪೃಥಕ್ ಪೃಥಕ್ ।
ಜಗೃಹುಃ ಕುಶಚೀರಾಣಿ ಚಿತ್ರಾಣಿ ಕವಚಾನಿ ಚ ॥ ೨೨ ॥

ಆಗ ಅಗ್ನಿಯನ್ನು ಆಧಾನ ಮಾಡಿ, ಎಲ್ಲರೂ ಬೇರೆ ಬೇರೆಯಾಗಿ ಹೋಮವನ್ನು ಮಾಡಿ, ಇದು ರಣಯಜ್ಞದಲ್ಲಿ ದೀಕ್ಷೆ ಎಂದು ಭಾವಿಸಿ, ಕುಶಚೀರಗಳನ್ನು ಹಿಡಿದು ವಿಚಿತ್ರವಾದ ಕವಚಗಳನ್ನು ಧರಿಸಿದರು.

ತೇ ಚ ಬದ್ಧತನುತ್ರಾಣಾ ಘೃತಾಕ್ತಾಃ ಕುಶಚೀರಿಣಃ ।
ಮೌರ್ವೀಮೇಖಲಿನೋ ವೀರಾಃ ಸಹಸ್ರಶತದಕ್ಷಿಣಾಃ ॥ ೨೩ ॥

ಯಜ್ವಾನಃ ಪುತ್ರಿಣಃ ಸರ್ವೇ ಕೃತಕೃತ್ಯಾಸ್ತನುತ್ಯಜಃ ।
ಯೋಕ್ತುಕಾಮಾಸ್ತದಾऽऽತ್ಮಾನಂ ಯಶಸಾ ವಿಜಯೇನ ಚ ॥ ೨೪ ॥

ಬ್ರಹ್ಮಚರ್ಯಶ್ರುತಿಮುಖಾಃ ಕ್ರತುಭಿಶ್ಚಾಪ್ತದಕ್ಷಿಣೈಃ ।
ಪ್ರಾಪ್ಯ ಲೋಕಾನ್ ಸುಯುದ್ಧೇನ ಕ್ಷಿಪ್ರಮೇವ ಯಿಯಾಸವಃ ॥ ೨೫ ॥

ಆ ವೀರರು ಕವಚಗಳನ್ನು ಧರಿಸಿ, ಘೃತದಿಂದ ಲೇಪಿತರಾಗಿ, ಕುಶಚೀರಗಳನ್ನು ಹಿಡಿದು, ಹೆದೆಯಮೇಖಲವನ್ನು ಧರಿಸಿ, ಶತಸಹಸ್ರ ದಕ್ಷಿಣೆಯನ್ನು ನೀಡಿ (ಪ್ರತಿಜ್ಞೆಯನ್ನು ಮಾಡಲು ಅಣಿಯಾದರು). ಎಲ್ಲರೂ ಯಜ್ಞವನ್ನು ಮಾಡಿದವರು, ಪುತ್ರರನ್ನು ಹೊಂದಿದವರು, ಜೀವನದಲ್ಲಿ ಕೃತಕೃತ್ಯರಾದವರು, ದೇಹವನ್ನು ಬಿಡಲು

ಸಿದ್ಧರಾದವರು, ತಮ್ಮನ್ನು ಕೀರ್ತಿಯಿಂದಲೂ, ದಿವ್ಯದಿಂದಲೂ ಸಂಯೋಜಿಸಲು ಬಯಸುವವರು, ಬ್ರಹ್ಮಚರ್ಯ ಮತ್ತು ವೇದಗಳನ್ನು ಮೂಲವಾಗಿ ಹೊಂದಿದವರು, ಬಹಳ ದಕ್ಷಿಣೆಗಳನ್ನು ನೀಡಿ ಮಾಡಿದ ಯಜ್ಞಗಳಿಂದ ಹೊಂದಲು ಯೋಗ್ಯವಾದ ಲೋಕಗಳನ್ನು ಯುದ್ಧವನ್ನು ಮಾಡಿ ಕ್ಷಿಪ್ರವಾಗಿಯೇ ಹೊಂದಲು ಬಯಸುವವರು.

ಬ್ರಾಹ್ಮಣಾಂಸ್ತರ್ಪಯಿತ್ವಾ ಚ ನಿಷ್ಕಂ ದತ್ವಾ ಪೃಥಕ್ ಪೃಥಕ್ ।
ಗಾಶ್ಚ ವಾಸಾಂಸಿ ಚ ಪುನಃ ಸಮಾಭಾಷ್ಯ ಪರಸ್ಪರಮ್ ॥ ೨೬ ॥

ದ್ವಿಜಮುಖ್ಯೈಃ ಸಮುದಿತೈಃ ಕೃತಸ್ವಸ್ತ್ಯಯನಾಶಿಷಃ ।
ಮುದಿತಾಶ್ಚ ಪ್ರಹೃಷ್ಟಾಶ್ಚ ಜಲಂ ಸಂಸ್ಪೃಶ್ಯ ನಿರ್ಮಲಮ್ ॥ ೨೭ ॥

ಅವರು ಒಬ್ಬೊಬ್ಬರೂ ಬ್ರಾಹ್ಮಣರಿಗೆ ಬೇರೆ ಬೇರೆಯಾಗಿ ಒಂದು ನಿಷ್ಕವನ್ನು ನೀಡಿ ತೃಪ್ತಿಪಡಿಸಿ, ಗೋವುಗಳನ್ನೂ, ವಸ್ತ್ರಗಳನ್ನೂ ದಾನ ಮಾಡಿ, ಪರಸ್ಪರವಾಗಿ ಪುನಃ ಮಾತನಾಡಿ, ಅಲ್ಲಿ ಬಂದು ಸೇರಿದ ಶ್ರೇಷ್ಠ ಬ್ರಾಹ್ಮಣರಿಂದ ಸ್ವಸ್ತಿವಾಚನವನ್ನೂ, ಆಶೀರ್ವಚನವನ್ನೂ ಪಡೆದು, ಸಂತೋಷಗೊಂಡು ನಿರ್ಮಲವಾದ ಜಲವನ್ನು ಸ್ಪರ್ಶಮಾಡಿ;

ತೇ ಜ್ವಾಲಯಿತ್ವಾ ಜ್ವಲನಮ್ ಉಪಾಗಮ್ಯ ರಣವ್ರತಮ್ ।
ತಸ್ಮಿನ್ನಗ್ನೌ ತತಶ್ಚಕ್ರುಃ ಪ್ರತಿಜ್ಞಾಂ ದೃಢನಿಶ್ಚಯಾಮ್ ॥ ೨೮ ॥

ಶೃಣ್ವತಾಂ ಸರ್ವಭೂತಾನಾಮಪ್ಯುಚ್ಚೈರ್ವಾಕ್ಯಮೀರಯನ್ ।
ಧೃತ್ಯಾऽರ್ಜುನವಧೇ ಶೂರಾಃ ಪ್ರತಿಜ್ಞಾಮಥ ಚಕ್ರಿರೇ ॥ ೨೯ ॥

ಅಗ್ನಿಯನ್ನು ಪ್ರಜ್ವಲಿಸಿ, ರಣವ್ರತದಲ್ಲಿ ದೀಕ್ಷಿತರಾಗಿ, ಆ ಅಗ್ನಿಯ ಎದುರಿಗೆ ಎಲ್ಲರೂ ಕೇಳುವಂತೆ ಗಟ್ಟಿಯಾದ ಸ್ವರದಲ್ಲಿ ಶೂರರಾದ ಅವರು ಅರ್ಜುನನ ವಧೆಯ ವಿಷಯದಲ್ಲಿ ಧೈರ್ಯದಿಂದ ದೃಢವಾದ ಪ್ರತಿಜ್ಞೆಯನ್ನು ಮಾಡಿದರು.

ಸಂಶಪ್ತಕಾಃ

ಅನೃತಸ್ಯ ಚ ಯೇ ಲೋಕಾ ಯೇ ಲೋಕಾ ಬ್ರಹ್ಮಘಾತಿನಾಮ್ ।
ಪಾನಪಸ್ಯ ಚ ಯೇ ಲೋಕಾ ಗುರುದಾರರತಸ್ಯ ಚ ॥ ೩೦ ॥

ಬ್ರಹ್ಮಸ್ವಹಾರಿಣಾಂ ಚೈವ ರಾಜಪಿಂಡಾಪಹಾರಿಣಾಮ್ ।
ಶರಣಾಗತಂ ಚ ತ್ಯಜತಾಂ ಯಾಚಮಾನಾಭಿಘಾತಿನಾಮ್ ॥ ೩೧ ॥

ಸಂಶಪ್ತಕರು– ಸುಳ್ಳು ಮಾತನಾಡುವವರಿಗೆ ಯಾವ ಲೋಕಗಳಿವೆಯೋ, ಬ್ರಹ್ಮಹತ್ಯೆ ಮಾಡುವವರಿಗೆ ಯಾವ ಲೋಕಗಳೋ, ಮದ್ಯಪಾನ ಮಾಡುವವರಿಗೆ ಯಾವ ಲೋಕಗಳೋ, ಗುರುಪತ್ನೀ ಗಮನವನ್ನು ಮಾಡುವವರಿಗೆ ಯಾವ ಲೋಕಗಳೋ, ಬ್ರಹ್ಮಸ್ವವನ್ನು ಅಪಹಾರ ಮಾಡುವವರಿಗೆ, ರಾಜಸ್ವವನ್ನು ಅಪಹಾರ ಮಾಡುವವರಿಗೆ, ಶರಣಾಗತರನ್ನು ಪರಿತ್ಯಾಗ ಮಾಡುವವರಿಗೆ, ಬೇಡಲು ಬಂದವನನ್ನು ಹೊಡೆಯುವವರಿಗೆ;

ಅಗಾರದಾಹಿನಾಂ ಚಾಪಿ ಯೇ ಚ ಗಾಂ ನಿಘ್ನತಾಮಪಿ ।
ಅಭಿಚಾರಿಣಾಂ ಚ ಯೇ ಲೋಕಾ ಯೇ ಚ ಬ್ರಹ್ಮದ್ವಿಷಾಮಪಿ ॥ ೩೨ ॥

ಭಾರ್ಯಾಂ ಚಾಪ್ಯೃತುಕಾಲೇಷು ಯೇ ಲೋಕಾ ನಾಭಿಗಚ್ಛತಾಮ್ ।
ಶ್ರಾದ್ಧಸಂಗತಿಕಾನಾಂ ಚ ಯೇ ಚಾಪ್ಯಾತ್ಮಾಪಹಾರಿಣಾಮ್ ॥ ೩೩ ॥

ಮನೆಗೆ ಬೆಂಕಿಯನ್ನು ಕೊಡುವವರಿಗೆ, ಗೋಹತ್ಯೆಯನ್ನು ಮಾಡುವವರಿಗೆ, ಮಾಟಗಳನ್ನು ಮಾಡುವವರಿಗೆ, ಬ್ರಹ್ಮದ್ವೇಷಿಗಳಿಗೆ, ಋತುಕಾಲದಲ್ಲಿ ಪತ್ನಿಯ ಸಮಾಗಮವನ್ನು ಮಾಡದವರಿಗೆ, ಶ್ರಾದ್ಧದಲ್ಲಿ ಮಾತ್ರ ಭೋಜನ ಮಾಡುವವರಿಗೆ, ಆತ್ಮಹತ್ಯೆಯನ್ನು ಮಾಡಿಕೊಳ್ಳುವವರಿಗೆ;

ಕ್ಲೀಬೇನ ಸಾಂತ್ವ್ಯಮಾನಾನಾಂ ಯೇ ದೀನಾನುಸಾರಿಣಾಮ್ ।
ನ್ಯಾಸಾಪಹಾರಿಣಾಂ ಯೇ ಚ ಶ್ರುತಂ ನಾಶಯತಾಂ ಚ ಯೇ ॥ ೩೪ ॥

ನಾಸ್ತಿಕಾನಾಂ ಚ ಯೇ ಲೋಕಾ ಯೇಽಗ್ನಿಮಾತೃಪಿತೃತ್ಯಜಾಮ್ ।
ಸಸ್ಯಮಾಕ್ರಮತಾಂ ಯೇ ಚ ಪ್ರತ್ಯಾದಿತ್ಯಂ ಪ್ರಮೇಹತಾಮ್ ।
ತಾನಾಪ್ನುಯಾಮಹೇ ಲೋಕಾನ್ ಯೇ ಚ ಪಾಪಕೃತಾಮಪಿ ॥ ೩೫ ॥

ನಪುಂಸಕನಿಂದ ಸಮಾಧಾನ ಪಡಿಸಿಕೊಳ್ಳುವವರಿಗೆ, ಧನವಿದ್ದರೂ ದಾರಿದ್ರ್ಯವನ್ನು ತೋರಿಸುವವರಿಗೆ, ತಮ್ಮಲ್ಲಿ ನ್ಯಾಸವಾಗಿಟ್ಟ ವಸ್ತುಗಳನ್ನು ಅಪಹಾರ ಮಾಡುವವರಿಗೆ, ಕಲಿತವಿದ್ಯೆಯನ್ನು ನಾಶಮಾಡುವವರಿಗೆ, ನಾಸ್ತಿಕರಿಗೆ, ಅಗ್ನಿ, ಮಾತೃ-ಪಿತರನ್ನು

ಪರಿತ್ಯಾಗ ಮಾಡುವವರಿಗೆ, ಸಸ್ಯಗಳನ್ನು ತುಳಿಯುವವರಿಗೆ, ಸೂರ್ಯನ ಎದುರಾಗಿ ಮೂತ್ರವಿಸರ್ಜನೆಯನ್ನು ಮಾಡುವವರಿಗೆ ಮತ್ತು ಪಾಪ ಕರ್ಮಗಳನ್ನು ಮಾಡುವವರಿಗೆ ಯಾವ ಲೋಕಗಳು ಉಂಟಾಗುತ್ತವೆಯೋ ಅವುಗಳನ್ನು ನಾವು ಹೊಂದುವಂತಾಗಲಿ.

ಯದ್ಯಹತ್ವಾ ನಿವರ್ತೇಮ ವಯಂ ಸಂಖೇ ಧನಂಜಯಮ್ ।
ತೇನ ಚಾಭ್ಯರ್ದಿತಾಸ್ತ್ರಾಸಾದ್ ಯದ್ಯಾಸ್ಯಾಮ ಪರಾಙ್ಮುಖಾಃ ॥ ೩೬ ॥

ನಾವು ಯುದ್ಧದಲ್ಲಿ ಅರ್ಜುನನನ್ನು ಕೊಲ್ಲದೆ ಹಿಂದಿರುಗಿದರೆ ಅಥವಾ ಅವನಿಂದ ಪೀಡಿತರಾಗಿ ಭಯದಿಂದ ಹಿಂದಿರುಗಿದರೆ (ಹಿಂದೆ ಹೇಳಿದ ಲೋಕಗಳನ್ನು ಹೊಂದೋಣ).

ಯದ್ಯಪ್ಯಸುಕರಂ ಕರ್ಮ ಲೋಕೇ ಕುರ್ಯಾಮ ಸಂಯುಗೇ ।
ಇಷ್ಟಾನ್ ಪುಣ್ಯಕೃತಾನ್ ಲೋಕಾನ್ ಪ್ರಾಪ್ನುಯಾಮ ಸುವರ್ಚಸಃ ॥೩೭॥

ಒಂದು ಪಕ್ಷ ಯುದ್ಧದಲ್ಲಿ ನಾವು ದುಷ್ಕರವಾದ ಕಾರ್ಯವನ್ನು ಮಾಡಿದರೆ ನಮಗೆ ಇಷ್ಟವಾದ ಪುಣ್ಯವನ್ನು ಮಾಡಿದವರು ಹೊಂದುವ ಲೋಕಗಳನ್ನು ಕಾಂತಿಯುಕ್ತರಾಗಿ ಹೊಂದೋಣ.

ಸಂಜಯಃ

ಏವಮುಕ್ತ್ವಾ ತತೋ ರಾಜನ್ ತೇऽಭ್ಯವರ್ತಂತ ಸಂಯುಗಮ್ ।
ಆಹ್ವಯಂತೋऽರ್ಜುನಂ ವೀರಾಃ ಪಿತೃಜುಷ್ಟಾಂ ದಿಶಂ ಪ್ರತಿ ॥ ೩೮ ॥

ಸಂಜಯ– ರಾಜನೇ, ಹೀಗೆ ಹೇಳಿ ಆ ವೀರರು ಅರ್ಜುನನನ್ನು ಪಿತೃಸೇವಿತವಾದ ದಕ್ಷಿಣ ದಿಕ್ಕಿಗೆ ಆಹ್ವಾನ ಮಾಡುತ್ತಾ ಯುದ್ಧಕ್ಕೆ ಹೊರಟರು.

ಆಹೂತಸ್ಯೈನರವ್ಯಾಘ್ರಃ ಪಾರ್ಥಃ ಪರಪುರಂಜಯಃ ।
ಧರ್ಮರಾಜಮಿದಂ ವಾಕ್ಯಮಪದಾಂತರಮಬ್ರವೀತ್ ॥ ೩೯ ॥

ನರಶ್ರೇಷ್ಠನಾದ, ಪರಪುರಂಜಯನಾದ ಅರ್ಜುನನು ಅವರಿಂದ ಆಹ್ವಾನಿಸಲ್ಪಟ್ಟು ಧರ್ಮರಾಜನನ್ನು ಕುರಿತು, ಅವನ ಪ್ರತ್ಯುತ್ತರಕ್ಕೆ ಅವಕಾಶವನ್ನು ನೀಡದಂತೆ ಈ ಮಾತನ್ನು ಆಡಿದನು.

ಏಷ ವೈ ಭ್ರಾತೃಭಿಃ ಸಾರ್ಧಂ ಸುಶರ್ಮಾऽऽಹ್ವಯತೇ ರಣೇ ।
ವಧಾಯ ಸಗಣಸ್ಯಾಸ್ಯ ಮಾಮನುಜ್ಞಾತುಮರ್ಹಸಿ ॥ ೪೦ ॥

ಈ ಸುಶರ್ಮನು ತನ್ನ ಸಹೋದರರ ಜೊತೆಯಲ್ಲಿ ಪರಿವಾರ ಸಹಿತನಾದ ಅವನ ವಧೆಗಾಗಿ ನನ್ನನ್ನು ಆಹ್ವಾನಿಸುತ್ತಿದ್ದಾನೆ. ನನಗೆ ಅನುಮತಿಯನ್ನು ನೀಡು.

ಆಹೂತೋ ನ ನಿವರ್ತೇಯಮಿತಿ ಮೇ ವ್ರತಮಾಹಿತಮ್ ।
ಸಂಶಪ್ತಕಾಶ್ಚ ತೇ ರಾಜನ್ನಾಹ್ವಯಂತೇ ಮಹಾಮೃಧೇ ॥ ೪೧ ॥

ಆಹ್ವಾನ ಮಾಡಿದರೆ ನಾನು ಹಿಂದಿರುಗುವುದಿಲ್ಲವೆಂಬುದು ನಾನು ಧರಿಸಿದ ವ್ರತ. ರಾಜನೇ, ದೊಡ್ಡ ಯುದ್ಧದಲ್ಲಿ ಸಂಶಪ್ತಕರು ನನ್ನನ್ನು ಆಹ್ವಾನಿಸುತ್ತಿದ್ದಾರೆ.

ನ ಶಕ್ನೋಮಿ ಚ ಸಂಸೋಢುಮಾಹ್ವಾನಂ ಭರತರ್ಷಭ ।
ಸತ್ಯಂ ತೇ ಪ್ರತಿಜಾನೇऽಹಂ ಹತಾನ್ ವಿದ್ಧಿ ಪರಾನ್ ಯುಧಿ ॥ ೪೨ ॥

ಎಲೈ ಭರತಶ್ರೇಷ್ಠನೇ, ಸುಮ್ಮನಿದ್ದು ಆಹ್ವಾನವನ್ನು ಸಹಿಸಲು ನನಗೆ ಸಾಧ್ಯವಿಲ್ಲ. ನಿನಗೆ ಸತ್ಯಪ್ರತಿಜ್ಞೆಯನ್ನು ಮಾಡುತ್ತಿದ್ದೇನೆ. ಈ ದಿನ ಯುದ್ಧದಲ್ಲಿ ಶತ್ರುಗಳಾದ ಅವರು ಹತರಾದರೆಂದು ತಿಳಿ.

ನ ಹ್ಯರ್ಜುನೋ ರಣೇ ರಾಜನ್ ಮಿಥ್ಯಾ ಕಿಂಚಿತ್ ಪ್ರವಕ್ಷ್ಯತಿ ।
ಹತಾಂಸ್ತ್ರಿಗರ್ತಕಾನ್ ಪಶ್ಯ ಮಾ ಸ್ಮ ತೇ ಕಶ್ಮಲಂ ಭವೇತ್ ॥ ೪೩ ॥

ರಾಜನೇ, ಅರ್ಜುನನು ಯುದ್ಧದ ವಿಷಯದಲ್ಲಿ ಎಂದೂ ಸುಳ್ಳು ಮಾತನಾಡುವುದಿಲ್ಲ. ನೀನು ಹತರಾದ ತ್ರಿಗರ್ತರನ್ನು ನೋಡುವಿ. ಬೇಸರವನ್ನು ಮಾಡಿಕೊಳ್ಳಬೇಡ (ಎಂದು ಹೇಳಿದನು).

ಯುಧಿಷ್ಠಿರಃ

ಅಶ್ರೌಷೀಸ್ತಾತ ತತ್ ಪ್ರೋಕ್ತಂ ಯದ್ ದ್ರೋಣಸ್ಯ ಚಿಕೀರ್ಷಿತಮ್ ।
ಯಥಾऽನೃತಂ ತಸ್ಯ ಭವೇತ್ ತಥಾ ನೀತಿರ್ವಿಧೀಯತಾಮ್ ॥ ೪೪ ॥

ಯುಧಿಷ್ಠಿರ– ಎಲೈ ಪ್ರೀತಿಪಾತ್ರನೇ, ದ್ರೋಣರು ಏನು ಮಾಡಲು ಬಯಸುತ್ತಾರೆಂಬುದನ್ನು ನೀನು ಕೇಳಿದ್ದೀಯೆ. ಅವರ ಆಸೆಯು ಸುಳ್ಳಾಗುವಂತೆ ನೀತಿಯನ್ನು ನಿರೂಪಿಸು.

ದ್ರೋಣೋ ಹಿ ಬಲವಾನ್ ಶೂರಃ ಕೃತಾಸ್ತ್ರಶ್ಚ ಜಿತಶ್ರಮಃ ।
ಪ್ರತಿಜ್ಞಾತಂ ಚ ತಸ್ಯೈತದ್ ಗ್ರಹಣಂ ಮೇ ಮಹಾರಥ ॥ ೪೫ ॥

ಎಲೈ ಮಹಾರಥನೇ, ದ್ರೋಣರು ಶೂರರು, ಬಲಿಷ್ಠರು, ಅಸ್ತ್ರಪಾರಂಗತರು ಮತ್ತು ಶ್ರಮವನ್ನು ಮೀರಿದವರು. ಅವರು ನನ್ನ ಗ್ರಹಣವನ್ನು ಪ್ರತಿಜ್ಞೆ ಮಾಡಿದ್ದಾರೆ.

ಅರ್ಜುನಃ

ಸರ್ವಥಾ ನ ನಿವರ್ತೇಯಮಾಹೂತೋಽಹಂ ಪರಂತಪ ।
ತ್ರಿಗರ್ತೋ ಭ್ರಾತೃಭಿಃ ಸಾರ್ಧಂ ಸ ಮಾಮಾಹ್ವಯತೇ ಭೃಶಮ್ ॥೪೬॥

ಅರ್ಜುನ– ಎಲೈ ಪರಂತಪನೇ, ಆಹ್ವಾನ ಮಾಡಲ್ಪಟ್ಟ ನಾನು ಯಾವ ಕಾರಣದಿಂದಲೂ ಹಿಂದಿರುಗುವುದಿಲ್ಲ. ಆ ತ್ರಿಗರ್ತನು ತನ್ನ ಸಹೋದರರ ಜೊತೆಯಲ್ಲಿ ನನ್ನನ್ನು ಬಹಳವಾಗಿ ಆಹ್ವಾನಿಸುತ್ತಿದ್ದಾನೆ.

ತವಾಪಿ ತು ರಣೇ ರಕ್ಷಾ ವಿಹಿತಾ ಮೇ ಜನಾಧಿಪ ।
ನಿರಪೇಕ್ಷೋ ಗಮಿಷ್ಯಾಮಿ ವಧಾಯೈಷಾಂ ದುರಾತ್ಮನಾಮ್ ॥ ೪೭ ॥

ಜನಾಧಿಪನೇ, ನಿನಗೂ ನಾನು ರಕ್ಷಣೆಯ ವ್ಯವಸ್ಥೆಯನ್ನು ಮಾಡಿದ್ದೇನೆ. ಯಾವ ಆತಂಕವೂ ಇಲ್ಲದೆ ಈ ದುರಾತ್ಮರ ವಧೆಗಾಗಿ ನಾನು ಯುದ್ಧಕ್ಕೆ ಹೋಗುವೆನು.

ಏಷ ವೈ ಸತ್ಯಜಿದ್ ರಾಜನ್ನದ್ಯ ತ್ವಾಂ ರಕ್ಷಿತಾ ಯುಧಿ ।
ಧೃಯಮಾಣೇ ಚ ಪಾಂಚಾಲ್ಯೇ ನಾಚಾರ್ಯಃ ಕಾಮಮಾಪ್ಸ್ಯತಿ ॥೪೮॥

ರಾಜನೇ, ಈ ಸತ್ಯಜಿತ್ ರಾಜನು ಈ ದಿನ ನಿನ್ನನ್ನು ಯುದ್ಧದಲ್ಲಿ ರಕ್ಷಿಸುವನು. ಧೃಷ್ಟದ್ಯುಮ್ನನು ಬದುಕಿರುವವರೆಗೆ ಆಚಾರ್ಯರು ತಮ್ಮ ಆಸೆಯನ್ನು ಈಡೇರಿಸಿಕೊಳ್ಳುವುದಿಲ್ಲ.

ಹತೇ ತು ಪುರುಷವ್ಯಾಘ್ರೇ ಸತ್ಯಜಿತ್ಯನಿವರ್ತಿನಿ ।
ಸರ್ವೈರಪಿ ಸಮೇತೈರ್ವಾ ನ ಸ್ಥಾತವ್ಯಂ ಕಥಂಚನ ॥ ೪೯ ॥

ಪುರುಷವ್ಯಾಘ್ರನಾದ, ಯುದ್ಧದಿಂದ ಹಿಮ್ಮೆಟ್ಟದಿರುವ ಸತ್ಯಜಿತ್‌ರಾಜನು ಏನಾದರೂ ಹತನಾದರೆ ನಾವು ಯಾರೂ ರಣರಂಗದಲ್ಲಿ ನಿಂತಿರಬಾರದು.

ಸಂಜಯಃ

ಅನುಜ್ಞಾತಸ್ತತೋ ರಾಜ್ಞಾ ಪರಿಷ್ವಕ್ತಶ್ಚ ಫಲ್ಗುನಃ ।
ಪ್ರೇಮ್ಣಾ ದೃಷ್ಟಶ್ಚ ಬಹುಧಾ ಆಶಿಷಾ ಚೈವ ಯೋಜಿತಃ ॥ ೫೦ ॥

ವಧಾಯೈವ ತತಃ ಪಾರ್ಥಸ್ತ್ರಿಗರ್ತಾನಾಂ ಬಲಂ ಯಯೌ ।
ಕ್ಷುಧಿತಃ ಕ್ಷುದ್ವಿಘಾತಾರ್ಥಂ ಸಿಂಹೋ ಮೃಗಗಣಾನಿವ ॥ ೫೧ ॥

ಸಂಜಯ– ಆಗ ರಾಜನಿಂದ ಅನುಮತಿಯನ್ನು ಸ್ವೀಕರಿಸಿದವನಾಗಿ, ಪುನಃ ಪುನಃ ಆಲಿಂಗಿಸಲ್ಪಟ್ಟು, ಪ್ರೀತಿಯಿಂದ ಅನೇಕ ಬಾರಿ ನೋಡಲ್ಪಟ್ಟು, ಅನೇಕ ರೀತಿ ಆಶೀರ್ವಾದದಿಂದ ಸಂಯೋಜಿಸಲ್ಪಟ್ಟು ಅರ್ಜುನನು ಹಸಿದ ಸಿಂಹವು ಹಸಿವೆಯ ನಿವಾರಣೆಗಾಗಿ ಜಿಂಕೆಗಳ ಸಮೂಹವನ್ನು ಪ್ರವೇಶಿಸಿದಂತೆ ತ್ರಿಗರ್ತರ ವಧೆಗಾಗಿಯೇ ತ್ರಿಗರ್ತರ ಸೈನ್ಯವನ್ನು ಕುರಿತು ಹೊರಟನು.

ತತೋ ದೌರ್ಯೋಧನಂ ಸೈನ್ಯಂ ಮುದಾ ಪರಮಯಾ ಯುತಮ್ ।
ಗ್ರಹಣೇ ಧರ್ಮರಾಜಸ್ಯ ಕೃತೋತ್ಸಾಹಂ ಮಹಾಮೃಧೇ ॥ ೫೨ ॥

ಆಗ ದುರ್ಯೋಧನನ ಸೈನ್ಯವು ದೊಡ್ಡ ಯುದ್ಧದಲ್ಲಿ ಯುಧಿಷ್ಠಿರನ ಗ್ರಹಣದ ವಿಷಯದಲ್ಲಿ ಉತ್ಸಾಹವನ್ನು ಹೊಂದಿ ಬಹಳ ಹರ್ಷದಿಂದ ಕೂಡಿತು.

ತತೋಽನ್ಯೋನ್ಯಂ ತು ತೇ ಸೇನೇ ಸಮಾಜಗ್ಮತುರಂಜಸಾ ।
ವೇಗೇನ ಶಂಖಾನಾಪೂರ್ಯ ಹರ್ಷಯುಕ್ತೇ ಮಹಾಸ್ವನೇ ।
ಗಂಗಾಸರಯ್ವೌ ವೇಗೇನ ಪ್ರಾವೃಷೀವೋಲ್ಬಣೋದಕೇ ॥ ೫೩ ॥

ಅನಂತರ ಆ ಎರಡು ಸೈನ್ಯಗಳು ಶೀಘ್ರವಾಗಿ ಶಂಖಗಳನ್ನು ಊದಿ, ಸಂತೋಷಯುಕ್ತಗಳಾಗಿ ಮಹಾನಾದವನ್ನು ಮಾಡುತ್ತಾ, ಮಳೆಗಾಲದಲ್ಲಿ ಉಲ್ಬಣವಾದ ಉದಕವನ್ನು ಹೊಂದಿದ ಗಂಗಾ-ಸರಯೂ ನದಿಗಳ ವೇಗದಂತೆ ವೇಗವನ್ನು ಹೊಂದಿ ಪರಸ್ಪರವಾಗಿ ಸಂಧಿಸಿದವು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಷೋಡಶೋಽಧ್ಯಾಯಃ ॥
॥ ಸಂಶಪ್ತಕವಧಪರ್ವಣಿ ಪ್ರಥಮೋಽಧ್ಯಾಯಃ ॥
ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಹದಿನಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹದಿನೇಳನೆಯ ಅಧ್ಯಾಯ

ಸಂಶಪ್ತಕರ ಜೊತೆಯಲ್ಲಿ ಅರ್ಜುನನ ಯುದ್ಧ.

ಸಂಜಯಃ

ತತಃ ಸಂಶಪ್ತಕಾ ರಾಜನ್ ಸಮೇ ದೇಶೇ ವ್ಯವಸ್ಥಿತಾಃ ।
ವ್ಯೂಢಾನೀಕೈ ರಥೈರೇವ ಚಂದ್ರಾರ್ಧಾಖ್ಯೈರ್ಮುದಾ ಯುತಾಃ ॥ ೧ ॥

ಸಂಜಯ– ಎಲೈ ರಾಜನೇ, ಅನಂತರ ಸಂಶಪ್ತಕರು ಸಮತಟ್ಟಾದ ಪ್ರದೇಶದಲ್ಲಿ ಅರ್ಧಚಂದ್ರಾಕಾರದಲ್ಲಿ ರಥಗಳ ಸಮೂಹವನ್ನು ವ್ಯೂಹಗೊಳಿಸಿ, ಸಂತೋಷದಿಂದ ಕೂಡಿದವರಾಗಿ ನಿಂತರು.

ತೇ ಕಿರೀಟಿನಮಾಯಾಂತಂ ದೃಷ್ಟ್ವಾ ಹರ್ಷೇಣ ಮಾರಿಷ ।
ಅತೀವ ಸಂಪ್ರಹೃಷ್ಟಾಸ್ತೇ ಹ್ಯುಪಲಕ್ಷ್ಯ ಧನಂಜಯಮ್ ।
ಉದಕ್ರೋಶನ್ ನರವ್ಯಾಘ್ರಾಃ ಶಬ್ದೇನಾಪೂರಯನ್ ದಿಶಃ ॥ ೨ ॥

ಎಲೈ ಪೂಜ್ಯನೇ, ನರವ್ಯಾಘ್ರರಾದ ಅವರು ಅರ್ಜುನನು ಸಂತೋಷದಿಂದ ಬರುತ್ತಿರುವುದನ್ನು ನೋಡಿ, ಬಹಳ ಸಂತೋಷದಿಂದ ಕೂಡಿದವರಾಗಿ, ಸಿಂಹನಾದವನ್ನು ಮಾಡಿ ತಮ್ಮ ಶಬ್ದಗಳಿಂದ ದಿಕ್ಕುಗಳನ್ನು ತುಂಬಿದರು.

ಸ ದಿಶಃ ಪ್ರದಿಶಃ ಸರ್ವಾ ನಭಶ್ಚೈವ ಸಮಾವೃಣೋತ್ ।
ಆವೃತತ್ವಾಚ್ಚ ಲೋಕಸ್ಯ ಮಹಾನಾಸೀತ್ ಪ್ರತಿಸ್ವನಃ ॥ ೩ ॥

ಆ ಶಬ್ದವು ಎಲ್ಲ ದಿಕ್ಕು-ವಿದಿಕ್ಕುಗಳನ್ನು ಮತ್ತು ಆಕಾಶವನ್ನು ತುಂಬಿತು. ಆವೃತವಾದ ಕಾರಣದಿಂದ ಲೋಕದಲ್ಲಿ ದೊಡ್ಡ ಪ್ರತಿಧ್ವನಿಯುಂಟಾಯಿತು.

ಅತೀವ ಸಂಪ್ರಹೃಷ್ಟಾಂಸ್ತಾನ್ ಜ್ಞಾತ್ವಾ ತತ್ರ ಧನಂಜಯಃ ।
ಕಿಂಚಿದಭ್ಯುತ್ಸ್ಮಯನ್ ಕೃಷ್ಣಮಿದಂ ವಚನಮಬ್ರವೀತ್ ॥ ೪ ॥

ಅವರು ಬಹಳ ಸಂತೋಷದಿಂದಿರುವುದನ್ನು ತಿಳಿದು ಅಲ್ಲಿ ಅರ್ಜುನನು ಸ್ವಲ್ಪ ನಗುತ್ತಾ ಕೃಷ್ಣನನ್ನು ಕುರಿತು ಈ ಮಾತನ್ನು ಆಡಿದನು.

ದೇವಕೀಪುತ್ರ ಪಶ್ಯೇಮಾನ್ ಮುಮೂರ್ಷೂನದ್ಯ ಸಂಯುಗೇ ।
ಭ್ರಾತೄಂಸ್ತ್ರಿಗರ್ತಕಾನೇತಾನ್ ರೋದಿತವ್ಯೇ ಪ್ರಹೃಷ್ಯತಃ ॥ ೫ ॥

ದೇವಕೀಪುತ್ರನೇ, ಈ ದಿನ ಯುದ್ಧದಲ್ಲಿ ಮರಣ ಹೊಂದಲಿರುವ, ಅಳಬೇಕಾದ ಸಂದರ್ಭದಲ್ಲಿ ಸಂತೋಷಪಡುತ್ತಿರುವ ಈ ತ್ರಿಗರ್ತದೇಶದ ಸಹೋದರರನ್ನು ನೋಡು.

ಅಥವಾ ಹರ್ಷಕಾಲೋಽಯಂ ತ್ರೈಗರ್ತಾನಾಂ ನ ಸಂಶಯಃ ।
ಕುನರೈರ್ದುರವಾಪಾನ್ ಹಿ ಲೋಕಾನ್ ಪ್ರಾಪ್ಸ್ಯಂತಿ ಸಂಯುಗೇ ।
ಮಯಾ ಹತಾ ಹಿ ಸಂಗ್ರಾಮೇ ಲೋಕಾನ್ ಪ್ರಾಪ್ಸ್ಯಂತಿ ಪುಷ್ಕಳಾನ್ ॥

ಅಥವಾ ಇದು ತ್ರಿಗರ್ತರಿಗೆ ಸಂತೋಷದ ಕಾಲ ಎಂಬುದರಲ್ಲಿ ಸಂಶಯವಿಲ್ಲ. ಯುದ್ಧದಲ್ಲಿ ಕುಜನರು ಹೊಂದಲಾರದ ಲೋಕವನ್ನು ಹೊಂದುವರು. ಯುದ್ಧದಲ್ಲಿ ನನ್ನಿಂದ ಹತರಾಗಿ ಪುಷ್ಕಳವಾದ ಲೋಕವನ್ನು ಹೊಂದುವರು.

ಏವಮುಕ್ತ್ವಾ ಹೃಷೀಕೇಶಂ ಮಹಾಬಾಹುಸ್ತತೋಽರ್ಜುನಃ ।
ಆಸಸಾದ ರಣೇ ವ್ಯೂಢಾಂ ತ್ರೈಗರ್ತಾನಾಮನೀಕಿನೀಮ್ ॥ ೭ ॥

ಮಹಾಬಾಹುವಾದ ಅರ್ಜುನನು ಹೃಷೀಕೇಶನನ್ನು ಕುರಿತು ಹೀಗೆ ಹೇಳಿ, ರಣರಂಗದಲ್ಲಿ ವ್ಯೂಹಗೊಂಡ ತ್ರಿಗರ್ತರ ಸೈನ್ಯವನ್ನು ಸಮೀಪಿಸಿದರು.

ಸ ದೇವದತ್ತಮಾದಾಯ ಶಂಖಂ ಹೇಮಪರಿಷ್ಕೃತಮ್ ।
ದಧ್ಮೌ ವೇಗೇನ ಮಹತಾ ಘೋಷೇಣಾಪೂರಯನ್ ದಿಶಃ ॥ ೮ ॥

ಅವನು ಸುವರ್ಣ ಪರಿಷ್ಕೃತವಾದ ದೇವದತ್ತ ಶಂಖವನ್ನು ತೆಗೆದುಕೊಂಡು, ಬಹಳ ವೇಗದಿಂದ ಊದಿ, ಆ ನಾದದಿಂದ ದಿಕ್ಕುಗಳನ್ನು ತುಂಬಿದನು.

ತೇನ ಶಬ್ದೇನ ವಿತ್ರಸ್ತಾ ಸಂಶಪ್ತಕವರೂಥಿನೀ ।
ನಿಶ್ಚೇಷ್ಟಾವಸ್ಥಿತಾ ಸಂಖೇ ಅಶ್ಮಸಾರಮಯೀ ಯಥಾ ॥ ೯ ॥

ಆ ಶಬ್ದದಿಂದ ಹೆದರಿದ ಸಂಶಪ್ತಕ ಸೇನೆಯು ರಣರಂಗದಲ್ಲಿ ಕಲ್ಲಿನಿಂದ ಮಾಡಿದ ಪ್ರತಿಮೆಗಳಂತೆ ನಿಶ್ಚೇಷ್ಟವಾಗಿ ನಿಂತಿತು.

ಸಾ ಸೇನಾ ಭರತಶ್ರೇಷ್ಠ ನಿಶ್ಚೇಷ್ಟಾ ಶುಶುಭೇ ತದಾ ।
ಚಿತ್ರೇ ಪಟೇ ಯಥಾ ನ್ಯಸ್ತಾ ಕುಶಲೈಃ ಶಿಲ್ಪಿಭಿರ್ನರೈಃ ॥ ೧೦ ॥

ಭರತಶ್ರೇಷ್ಠನೇ, ನಿಶ್ಚೇಷ್ಟವಾದ ಆ ಸೈನ್ಯವು ಆಗ ಚಿತ್ರಪಟದಲ್ಲಿ ಕುಶಲರಾದ ಶಿಲ್ಪಿಗಳಾದ ನರರು ಬಿಡಿಸಿದ ಚಿತ್ರದಂತೆ ಶೋಭಿಸುತ್ತಿದ್ದಿತು.

ಸ್ವನೇನ ತೇನ ಸೈನ್ಯಾನಾಂ ದಿವಮಾವೃಣ್ವತಾ ತದಾ ।
ಸಸ್ವನಾ ಪೃಥಿವೀ ಸರ್ವಾ ತಥೈವ ಚ ಮಹೋದಧಿಃ ॥ ೧೧ ॥

ಆಕಾಶವನ್ನು ಆವರಿಸುವ ಸೈನ್ಯದ ಆ ನಾದದಿಂದ ಸಮಗ್ರವಾದ ಭೂಮಿಯೂ ಮತ್ತು ಸಮುದ್ರವೂ ಹಾಗೆಯೇ ಶಬ್ದವುಳ್ಳದ್ದಾಯಿತು.

ವ್ಯೂಢಾನೀಕಾಶ್ಚ ಯೇ ಸರ್ವೇ ಪೃಥಿವ್ಯಾಂ ಸಮರಾರ್ಣವೇ ।
ಸ್ವನೇನ ಸರ್ವಸೈನ್ಯಾನಾಂ ಕರ್ಣಾಸ್ತು ಬಧಿರೀಕೃತಾಃ ॥ ೧೨ ॥

ಆ ರಣರಂಗದಲ್ಲಿ ಸೈನ್ಯವನ್ನು ವ್ಯೂಹ ಮಾಡಿ ನಿಂತಿದ್ದ ಸರ್ವಸೈನಿಕರ ಕಿವಿಗಳು ಆ ನಾದದಿಂದ ಕಿವುಡಾದವು.

ವಾಹಾಸ್ತೇಷಾಂ ವಿವೃತ್ತಾಕ್ಷಾಃ ಸ್ತಬ್ಧಕರ್ಣಶಿರೋಧರಾಃ ।
ವಿಷ್ಟಬ್ಧಚರಣಾ ಮೂತ್ರಂ ರುಧಿರಂ ಚ ಪ್ರಸುಸ್ರುವುಃ ।
ತತೋ ವ್ಯುಪಾರಮಚ್ಛಬ್ದಃ ಪ್ರಹೃಷ್ಟಾಸ್ತೇ ತತೋಽಭವನ್ ॥ ೧೩ ॥

ಅವರ ವಾಹನಗಳು ಕಣ್ಣುಗಳನ್ನರಳಿಸಿ ಕತ್ತು ಮತ್ತು ಕಿವಿಗಳನ್ನು ಅಲ್ಲಾಡಿಸದೆ, ಪಾದಗಳು ಸ್ತಂಭಿತವಾಗಿ ರಕ್ತ-ಮೂತ್ರಗಳನ್ನು ಸುರಿಸಿದವು. ಅನಂತರ ಆ ಶಬ್ದವು ಶಾಂತವಾಯಿತು. ತ್ರಿಗರ್ತಯೋಧರು ಸಂತೋಷಗೊಂಡರು.

ಉಪಲಭ್ಯ ತತಃ ಸಂಜ್ಞಾಂ ಪರ್ಯವಸ್ಥಾಪ್ಯ ವಾಹಿನೀಮ್ ।
ಯುಗಪತ್ ಪಾಂಡುಪುತ್ರಾಯ ಚಿಕ್ಷಿಪುಃ ಕಂಕಪತ್ರಿಣಃ ॥ ೧೪ ॥

ಪುನಃ ತಮ್ಮ ಚಟುವಟಿಕೆಗಳನ್ನು ಹೊಂದಿ, ತಮ್ಮ ಸೈನ್ಯವನ್ನು ಸರಿಯಾಗಿ ನಿಲ್ಲಿಸಿ, ಪಾಂಡುಪುತ್ರನಾದ ಅರ್ಜುನನ ಮೇಲೆ ಎಲ್ಲರೂ ಒಟ್ಟಿಗೆ ಕಂಕಪತ್ರಗಳನ್ನು ಹೊಂದಿದ್ದ ಬಾಣಗಳನ್ನು ಪ್ರಯೋಗಿಸಿದರು.

ತತೋಽರ್ಜುನಃ ಸಹಸ್ರಾಣಿ ದಶ ಪಂಚೈವ ಚಾಶುಗಾನ್ ।
ಅನಾಗತಾನೇವ ಶರೈಃ ಚಿಚ್ಛೇದಾಶುಪರಾಕ್ರಮಃ ॥ ೧೫ ॥

ಆಗ ಶೀಘ್ರ ಪರಾಕ್ರಮವುಳ್ಳ ಅರ್ಜುನನು ತನ್ನ ಹತ್ತಿರಕ್ಕೆ ಬರುವುದಕ್ಕಿಂತ ಮುಂಚೆಯೇ ಆ ಬಾಣಗಳನ್ನು ಸಹಸ್ರ ಚೂರುಗಳಾಗಿ, ಹತ್ತು ಚೂರುಗಳಾಗಿ ಮತ್ತು ಐದು ಚೂರುಗಳಾಗಿಯೇ ಕತ್ತರಿಸಿದನು (ಯಾವುದನ್ನೂ ಎರಡು, ಮೂರು ಅಥವಾ ನಾಲ್ಕು ಭಾಗಗಳಾಗಿ ಕತ್ತರಿಸಲಿಲ್ಲ ಎಂದು ಅಭಿಪ್ರಾಯ).

ತತೋಽರ್ಜುನಂ ಶಿತೈರ್ಬಾಣೈಃ ದಶಭಿರ್ದಶಭಿಃ ಪುನಃ ।
ಪ್ರತ್ಯವಿಧ್ಯತ ಪಾರ್ಥಸ್ತಾನವಿಧ್ಯತ ತ್ರಿಭಿಸ್ತ್ರಿಭಿಃ ॥ ೧೬ ॥

ಅನಂತರ ಅರ್ಜುನನು ಹರಿತವಾದ ಹತ್ತು-ಹತ್ತು ಬಾಣಗಳಿಂದ ಅವರನ್ನು ಹೊಡೆದು, ಪುನಃ ಮೂರು-ಮೂರು ಬಾಣಗಳನ್ನು ಅವರ ಮೇಲೆ ಪ್ರಯೋಗಿಸಿದನು.

ಏಕೈಕಸ್ತು ತತಃ ಪಾರ್ಥಂ ರಾಜನ್ ವಿವ್ಯಾಧ ಪಂಚಭಿಃ ।
ಸ ಚ ತಾನಪಿ ವಿವ್ಯಾಧ ದ್ವಾಭ್ಯಾಂ ದ್ವಾಭ್ಯಾಂ ಪರಾಕ್ರಮೀ ॥೧೭॥

ರಾಜನೇ, ಅವರಲ್ಲಿ ಪ್ರತಿಯೊಬ್ಬರೂ ಅರ್ಜುನನನ್ನು ಐದೈದು ಬಾಣಗಳಿಂದ ಹೊಡೆದರು. ಪರಾಕ್ರಮಶಾಲಿಯಾದ ಅರ್ಜುನನು ಅವರ ಮೇಲೆ ಎರಡೆರಡು ಬಾಣಗಳನ್ನು ಪ್ರಯೋಗಿಸಿದನು.

ಭೂಯ ಏವ ತು ಸಂರಬ್ಧಾಃ ತೇಽರ್ಜುನಂ ಸಹಕೇಶವಮ್ ।
ಆಪೂರಯನ್ ಶರೈಸ್ತೀಕ್ಷ್ಣೈಸ್ತಟಾಕಮಿವ ವೃಷ್ಟಿಭಿಃ ॥ ೧೮ ॥

ಅವರು ಇನ್ನೂ ಕ್ರೋಧಯುಕ್ತರಾಗಿ ಕೃಷ್ಣನಿಂದ ಕೂಡಿದ ಅರ್ಜುನನನ್ನು ಮಳೆಯಿಂದ ಕೆರೆಯನ್ನು ತುಂಬುವಂತೆ ತೀಕ್ಷ್ಣವಾದ ಬಾಣಗಳಿಂದ ತುಂಬಿದರು.

ತತಃ ಶರಸಹಸ್ರಾಣಿ ಪ್ರಪತಂತ್ಯರ್ಜುನಂ ಪ್ರತಿ ।
ಭ್ರಮರಾಣಾಮಿವ ವ್ರಾತಾಃ ಪುಲ್ಲದ್ರುಮಗಣಾನ್ ವನೇ ॥ ೧೯ ॥

ಆಗ ಕಾಡಿನಲ್ಲಿ ಹೂವರಳಿದ ವೃಕ್ಷಕ್ಕೆ ಭ್ರಮರಗಳ ಸಮೂಹವೇ ಬಂದಂತೆ ಅರ್ಜುನನ ಮೇಲೆ ಸಹಸ್ರಾರು ಬಾಣಗಳು ಬಿದ್ದವು.

ತತಃ ಸುಬಾಹುಸ್ತ್ರಿಂಶದ್ಭಿಃ ಅದ್ರಿಸಾರಮಯೈರ್ದೃಢೈಃ ।
ಅವಿಧ್ಯದಿಷುಭಿರ್ಗಾಢಂ ಕಿರೀಟೇ ಸವ್ಯಸಾಚಿನಃ ॥ ೨೦ ॥

ಅನಂತರ ಸುಬಾಹುವು ಅಗ್ನಿಸಾರಮಯವಾದ ದೃಢವಾದ ಮೂವತ್ತು ಬಾಣಗಳಿಂದ ಅರ್ಜುನನ ಕಿರೀಟವನ್ನು ಗಾಢವಾಗಿ ಹೊಡೆದನು.

ತೈಃ ಕಿರೀಟೇ ಕಿರೀಟಸ್ಥೈ ರುಗ್ಮಪುಂಖೈರಜಿಹ್ಮಗೈಃ ।
ಶಾತಕುಂಭಮಯಾಪೀಡೋ ಬಭೌ ಯೂಪ ಇವೋಚ್ಛ್ರಿತಃ ॥ ೨೧ ॥

ತನ್ನ ಕಿರೀಟದಲ್ಲಿ ನಾಟಿದ ಆ ಬಾಣಗಳಿಂದ ಅರ್ಜುನನು ಸುವರ್ಣಮಯವಾದ ಶಿರೋಭೂಷಣವನ್ನು ಹೊಂದಿ ಎತ್ತರವಾದ ಯೂಪದಂತೆ ಶೋಭಿಸಿದನು.

ಹಸ್ತಾವಾಪಂ ಸುಬಾಹೋಸ್ತು ಸ ತು ಭಲ್ಲೇನ ಪಾಂಡವಃ ।
ಚಿಚ್ಛೇದ ತಂ ಚೈವ ಪುನಃ ಶರವರ್ಷೈರವಾಕಿರತ್ ॥ ೨೨ ॥

ಪಾಂಡವನಾದ ಅರ್ಜುನನು ಭಲ್ಲದಿಂದ ಸುಬಾಹುವಿನ ಬತ್ತಳಿಕೆಯನ್ನು ಕತ್ತರಿಸಿ, ಪುನಃ ಅವನ ಮೇಲೆ ಬಾಣಗಳ ಮಳೆಯನ್ನು ಕರೆದನು.

ತತಃ ಸುಶರ್ಮಾ ದಶಭಿಃ ಸುರಥಶ್ಚ ಕಿರೀಟಿನಮ್ ।
ಸುಧರ್ಮಾ ಚ ಸುಧನುಶ್ಚ ಸುಬಾಹುಶ್ಚ ಸಮರ್ಪಯನ್ ॥ ೨೩ ॥

ಅನಂತರ ಸುಶರ್ಮನು, ಸುರಥ, ಸುಧರ್ಮ, ಸುಧನು, ಸುಬಾಹು ಇವರು ಅರ್ಜುನನನ್ನು ಹತ್ತು ಬಾಣಗಳಿಂದ ಹೊಡೆದರು.

ತಾಂಶ್ಚ ಸರ್ವಾನ್ ಪೃಥಗ್ ಬಾಣೈಃ ವಾನರಪ್ರವರಧ್ವಜಃ ।
ಪ್ರತ್ಯವಿಧ್ಯದ್ ಧ್ವಜಾಂಸ್ತೇಷಾಂ ಭಲ್ಲೈಶ್ಚಿಚ್ಛೇದ ಕಾಂಚನಾನ್ ॥ ೨೪ ॥

ಕಪಿಧ್ವಜನಾದ ಅರ್ಜುನನು ಅವರೆಲ್ಲರನ್ನೂ ಬೇರೆ ಬೇರೆ ಬಾಣಗಳಿಂದ ಹೊಡೆದು, ಅವರ ಸುವರ್ಣಮಯವಾದ ಧ್ವಜಗಳನ್ನು ಭಲ್ಲಗಳಿಂದ ಕತ್ತರಿಸಿದನು.

ಸುಧನ್ವನೋ ಧನುಶ್ಛಿತ್ತ್ವಾ ಹಯಾಂಶ್ಚ ಜವನಾನ್ ಶರೈಃ ।
ಅಥಾಸ್ಯ ಸಶಿರಸ್ತ್ರಾಣಂ ಶಿರಃ ಕಾಯಾದಪಾಹರತ್ ॥ ೨೫ ॥

ಸುಧರ್ಮನ ಧನುಸ್ಸನ್ನು ಕತ್ತರಿಸಿ, ವೇಗಶಾಲಿಯಾದ ಅವನ ಅಶ್ವಗಳನ್ನು ಬಾಣಗಳಿಂದ ಸಂಹರಿಸಿ, ಶಿರಸ್ತ್ರಾಣದಿಂದ ಕೂಡಿದ ಅವನ ಶಿರಸ್ಸನ್ನು ದೇಹದಿಂದ ಬೇರ್ಪಡಿಸಿದನು.

ಜಘಾನ ಪಾರ್ಥಃ ಸೈನ್ಯೇಷು ಸಹಸ್ರೇ ದ್ವೇ ಚ ಯೋಧಿನಾಮ್ ।
ತಸ್ಮಿನ್ ನಿಪತಿತೇ ವೀರೇ ತ್ರಸ್ತಾಸ್ತಸ್ಯ ಪದಾನುಗಾಃ ॥ ೨೬ ॥

ಅರ್ಜುನನು ಅವರ ಸೈನ್ಯದಲ್ಲಿ ಎರಡು ಸಹಸ್ರ ಯೋಧರನ್ನು ಕೊಂದನು. ವೀರನಾದ ಸುಬಾಹುವು ಹತನಾಗುತ್ತಿರಲು ಅವನ ಅನುಯಾಯಿಗಳು ಹೆದರಿದರು.

ಭೂಯಿಷ್ಠಂ ಪ್ರತಿರುದ್ಧಾ ಯೇಽಹತೈರ್ಯೋದ್ಧೃಯಶಸ್ವಿನಃ ।
ವಿದುದ್ರುವುಸ್ತದಾ ಯೋಧಾ ಯತ್ರ ದೌರ್ಯೋಧನಂ ಬಲಮ್ ॥

ಶರಘಾತಕ್ಕೆ ಒಳಗಾಗದೆ ಭಲ್ಲದಿಂದ ಬಹಳವಾಗಿ ತಡೆಯಲ್ಪಟ್ಟ, ಯಶಸ್ವಿಗಳಾದ ತ್ರಿಗರ್ತಯೋಧ ದುರ್ಯೋಧನನ ಸೈನ್ಯಕ್ಕೆ ಓಡಿಹೋದರು.

ತತೋ ಜಘಾನ ಸಂಕ್ರುದ್ಧೋ ವಾಸವಿಸ್ತಾಂ ಮಹಾಚಮೂಮ್ ।
ಶರಜಾಲೈರವಿಚ್ಛಿನ್ನೈಃ ತಮಃ ಸೂರ್ಯ ಇವಾಂಶುಭಿಃ ॥ ೨೮ ॥

ಆಗ ಇಂದ್ರಪುತ್ರನಾದ ಅರ್ಜುನನು ಸೂರ್ಯನು ತನ್ನ ಕಿರಣಗಳಿಂದ ತಮಸ್ಸನ್ನು ನಾಶಗೊಳಿಸಿದಂತೆ, ಬಹಳ ಕೋಪಗೊಂಡು ಸತತವಾದ ತನ್ನ ಬಾಣದ ಜಾಲಗಳಿಂದ ಆ ದೊಡ್ಡ ಸೈನ್ಯವನ್ನು ಹೊಡೆದನು.

ತತೋ ಬಾಣೈರ್ಬಲೇ ತಸ್ಮಿನ್ ಪ್ರವಿಲೀನೇ ಸಮಂತತಃ ।
ಸವ್ಯಸಾಚಿನಿ ಸಂಕ್ರುದ್ಧೇ ತ್ರೈಗರ್ತಾನ್ ಮೃತ್ಯುರಾವಿಶತ್ ॥ ೨೯ ॥

ಅರ್ಜುನನ ಬಾಣಗಳಿಂದ ಆ ಸೈನ್ಯವು ಎಲ್ಲ ಕಡೆಯಲ್ಲಿಯೂ ಲಯವನ್ನು ಹೊಂದುತ್ತಿರಲು ಅರ್ಜುನನು ಕೋಪಗೊಂಡಿರಲು ತ್ರಿಗರ್ತರನ್ನು ಮೃತ್ಯುವು ಆವರಿಸಿತು.

ತೇ ಹನ್ಯಮಾನಾಃ ಪಾರ್ಥೇನ ಶರೈಃ ಸನ್ನತಪರ್ವಭಿಃ ।
ಅಮುಹ್ಯಂಸ್ತತ್ರ ತತ್ರೈವ ತ್ರಸ್ತಾ ಮೃಗಗಣಾ ಇವ ॥ ೩೦ ॥

ಬಾಗಿದ ತುದಿಯುಳ್ಳ ಬಾಣಗಳಿಂದ ಅರ್ಜುನನಿಂದ ಹೊಡೆಯಲ್ಪಡುತ್ತಿದ್ದ ಅವರು ಹೆದರಿದ ಜಿಂಕೆಗಳ ಸಮೂಹದಂತೆ ಅಲ್ಲಲ್ಲಿಯೇ ಮೋಹಕ್ಕೆ ಒಳಗಾದರು.

ತತಸ್ತ್ರಿಗರ್ತರಾಟ್ ಕ್ರುದ್ಧಃ ತಾನುವಾಚ ಮಹಾರಥಾನ್ ॥ ೩೧ ॥

ಆಗ ಕೋಪಗೊಂಡ ತ್ರಿಗರ್ತರಾಜನು ಆ ಮಹಾರಥರನ್ನು ಕುರಿತು ಮಾತನಾಡಿದನು.

ಅಲಂ ದ್ರುತೇನ ವಃ ಶೂರಾ ನ ಭಯಂ ಕರ್ತುಮರ್ಹಥ ॥ ೩೧ ॥

ಶೂರರೇ, ಪಲಾಯನ ಮಾಡಬೇಡಿ. ನೀವು ಭಯಪಡುವುದು ಉಚಿತವಲ್ಲ.

ಶಪ್ತ್ವಾ ಚ ಶಪಥಾನ್ ಘೋರಾನ್ ಸರ್ವಸೈನ್ಯಸ್ಯ ಪಶ್ಯತಃ ।
ಗತ್ವಾ ದೌರ್ಯೋಧನಂ ಸೈನ್ಯಂ ಕಿಂ ನು ವಕ್ಷ್ಯಥ ಸಂಗತಾಃ ॥ ೩೨ ॥

ಎಲ್ಲ ಸೈನ್ಯದ ಎದುರಿಗೆ ಅನೇಕ ಘೋರವಾದ ಶಪಥಗಳನ್ನು ಮಾಡಿ, ಈಗ ದುರ್ಯೋಧನನ ಸೈನ್ಯವನ್ನು ಹೋಗಿ ಸೇರಿ ಏನು ಹೇಳುವಿರಿ?

ನಾಪಹಾಸ್ಯಾಃ ಕಥಂ ಲೋಕೇ ಕರ್ಮಣಾಽನೇನ ಸಂಯುಗೇ ।
ಭವೇಮ ಸಹಿತಾಃ ಸರ್ವೇ ನಿವರ್ತಧ್ವಂ ಮಹಾರಥಾಃ ॥ ೩೩ ॥

ನಿಮ್ಮ ಈ ಕರ್ಮದಿಂದ ನಾವು ರಣರಂಗದಲ್ಲಿ ಲೋಕದಲ್ಲಿ ಅಪಹಾಸಕ್ಕೆ ಈಡಾಗುವುದು ಬೇಡ. ಎಲೈ ಮಹಾರಥರೇ, ಹಿಂದಿರುಗಿ (ಎಂದು ಹೇಳಿದನು).

ಏವಮುಕ್ತಾಸ್ತತೋ ರಾಜನ್ ವಿಕ್ರೋಶಂತೋ ಮುಹುರ್ಮುಹುಃ ।
ಶಂಖಾನ್ ಪ್ರದಧ್ಮಿರೇ ವೀರಾ ಹರ್ಷಯಂತಃ ಪರಸ್ಪರಮ್ ॥ ೩೪ ॥

ಎಲೈ ರಾಜನೇ, ಹೀಗೆ ಹೇಳಲ್ಪಟ್ಟ ವೀರರಾದ ಅವರು ಪುನಃ ಪುನಃ ನಾದವನ್ನು ಮಾಡುತ್ತಾ, ಪರಸ್ಪರವಾಗಿ ಸಂತೋಷಪಡಿಸುತ್ತಾ ತಮ್ಮ ಶಂಖಗಳನ್ನು ಊದಿದರು.

ತತಸ್ತೇ ಸನ್ನ್ಯವರ್ತಂತ ಸಂಶಪ್ತಕಗಣಾಃ ಪುನಃ ।
ನಾರಾಯಣಾಶ್ಚ ಗೋಪಾಲಾ ಕೃತ್ವಾ ಮೃತ್ಯುಂ ನಿವರ್ತನಮ್ ॥ ೩೫ ॥

ಅನಂತರ ಸಂಶಪ್ತಕ ಗಣಗಳು ಮತ್ತು ಗೋಪಾಲಕರ ನಾರಾಯಣ ಸೇನೆಯು ಮೃತ್ಯುವನ್ನು ಹಿಂದೆ ಹಾಕಿ ಪುನಃ ರಣರಂಗಕ್ಕೆ ಬಂದರು.

ಗೋಪಾಲರೆಂದರೆ ಗೋಪಸ್ತ್ರೀಯರಲ್ಲಿ ಕೃಷ್ಣನಿಂದ ಜನಿಸಿದ ಕುಮಾರರು. ಅವರೆಲ್ಲರಿಗೂ ನಾರಾಯಣರೆಂದೇ ಹೆಸರು. ಅವರ ಸೈನ್ಯಕ್ಕೆ ನಾರಾಯಣ ಸೇನೆ ಎಂದು ಹೆಸರು - **ಲಕ್ಷಾಲಂಕಾರ.**

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಸಪ್ತದಶೋऽಧ್ಯಾಯಃ ॥

॥ ಸಂಶಪ್ತಕವಧಪರ್ವಣಿ ದ್ವಿತೀಯೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಹದಿನೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹದಿನೆಂಟನೆಯ ಅಧ್ಯಾಯ

ಸಂಶಪ್ತಕರ ಜೊತೆಯಲ್ಲಿ ಮುಂದುವರಿದ ಅರ್ಜುನನ ಯುದ್ಧ.

ಸಂಜಯಃ

ದೃಷ್ಟ್ವಾ ಚ ಸನ್ನಿವೃತ್ತಾಂಸ್ತಾನ್ ಸಂಶಪ್ತಕಗಣಾನ್ ಪುನಃ ।
ವಾಸುದೇವಂ ಮಹಾತ್ಮಾನಮರ್ಜುನಃ ಪ್ರತ್ಯಭಾಷತ ॥ ೧ ॥

ಸಂಜಯ– ಸಂಶಪ್ತಕರ ಗಣಗಳು ಹಿಂದಿರುಗಿದುದನ್ನು ನೋಡಿ, ಮಹಾತ್ಮನಾದ ಕೃಷ್ಣನನ್ನು ಕುರಿತು ಅರ್ಜುನನು ಹೇಳಿದನು.

ಚೋದಯಾಶ್ವಾನ್ ಹೃಷೀಕೇಶ ಸಂಶಪ್ತಕಗಣಾನ್ ಪ್ರತಿ ।
ನೈತೇ ಹಾಸ್ಯಂತಿ ಸಂಗ್ರಾಮಂ ಜೀವಂತ ಇತಿ ಮೇ ಮತಿಃ ॥ ೨ ॥

ಹೃಷೀಕೇಶನೇ, ಸಂಶಪ್ತಕರ ಗಣಗಳ ಕಡೆಗೆ ಅಶ್ವಗಳನ್ನು ಚೋದಿಸು. ಅವರು ಬದುಕಿರುವವರೆಗೆ ಯುದ್ಧವನ್ನು ತೊರೆಯುವುದಿಲ್ಲವೆಂದು ನನ್ನ ಅಭಿಪ್ರಾಯ.

ಪಶ್ಯ ಮೇऽಸ್ತ್ರಬಲಂ ಘೋರಂ ಬಾಹ್ವೋರಿಷ್ವಸನಸ್ಯ ಚ ।
ಅದ್ಯ ಹ್ಯೇಕೋ ಗಣಾನೇತಾನ್ ಹನ್ಯಾಂ ರುದ್ರಃ ಪಶೂನಿವ ॥ ೩ ॥

ಘೋರವಾದ ನನ್ನ ಅಸ್ತ್ರಬಲವನ್ನೂ, ಬಾಹುಬಲವನ್ನೂ ಮತ್ತು ಧನುಸ್ಸಿನ ಬಲವನ್ನೂ ನೋಡು. ರುದ್ರನು ಪಶುಗಳನ್ನು ಕೊಂದಂತೆ ಈ ದಿನ ನಾನೊಬ್ಬನೇ ಈ ಗಣಗಳನ್ನು ಕೊಲ್ಲುವೆನು.

ತತಃ ಕೃಷ್ಣಃ ಸ್ಮಿತಂ ಕೃತ್ವಾ ಪ್ರತಿನಂದ್ಯ ಶಿವೇನ ತಮ್ ।
ಏವಂ ಬ್ರುವಾಣಂ ಬೀಭತ್ಸುಂ ಕೇಶವಃ ಶತ್ರುವಾಹಿನೀಮ್ ।
ಪ್ರಾವೇಶಯತ ದುರ್ಧರ್ಷೋ ಯತ್ರ ಯತ್ಕೈಚ್ಛದರ್ಜುನಃ ॥ ೪ ॥

ಆಗ ಕೃಷ್ಣನು ಮಂದಹಾಸವನ್ನು ಬೀರಿ ಅವನಿಗೆ ಮಂಗಳವನ್ನು ಅಭಿನಂದಿಸಿ, ಹೀಗೆ ಮಾತನಾಡಿದ ಅವನನ್ನು ದುರ್ಧರ್ಷನಾದ ಅವನು ಬಯಸಿದ ಕಡೆಗೆ ಕರೆದುಕೊಂಡು ಹೋದನು.

ಸ ರಥೋ ಭ್ರಾಜತೇऽತ್ಯರ್ಥಮುಹ್ಯಮಾನೋ ಮಹಾಹಯೈಃ ।
ಉಹ್ಯಮಾನಮಿವಾಕಾಶೇ ವಿಮಾನಂ ಪಾಂಡರೈರ್ಹಯೈಃ ॥ ೫ ॥

ಶ್ರೇಷ್ಠವಾದ ಅಶ್ವಗಳಿಂದ ಎಳೆಯಲ್ಪಡುವ ಆ ರಥವು ಆಕಾಶದಲ್ಲಿ ಬಿಳಿಯ ಮೋಡಗಳಿಂದ ಎಳೆಯಲ್ಪಡುವ ವಿಮಾನದಂತೆ ಬಹಳವಾಗಿ ಶೋಭಿಸಿತು.

ಮಂಡಲಾನಿ ತತಶ್ಚಕ್ರೇ ಗತಪ್ರತ್ಯಾಗತಾನಿ ಚ ।
ಯಥಾ ಶಕ್ರರಥೋ ರಾಜನ್ ಯುದ್ಧೇ ದೇವಾಸುರೇ ಪುರಾ ॥ ೬ ॥

ರಾಜನೇ, ಹಿಂದೆ ದೇವಾಸುರರ ಯುದ್ಧದಲ್ಲಿ ಇಂದ್ರನ ರಥವು ಸಂಚರಿಸಿದಂತೆ ಮುಂಭಾಗದಲ್ಲಿ ಮತ್ತು ಹಿಂಭಾಗದಲ್ಲಿ, ಮಂಡಲಗಳಲ್ಲಿ ರಥವನ್ನು ತಿರುಗಿಸಿದನು.

ಅಥ ನಾರಾಯಣಾಃ ಕ್ರುದ್ಧಾ ವಿವಿಧಾಯುಧಪಾಣಯಃ ।
ಛಾದಯಂತಃ ಶರವ್ರಾತೈಃ ಪರಿವವ್ರುರ್ಧನಂಜಯಮ್ ॥ ೭ ॥

ಆಗ ನಾರಾಯಣರು ಕೈಯಲ್ಲಿ ವಿವಿಧ ಆಯುಧಗಳನ್ನು ಹಿಡಿದು, ಕ್ರುದ್ಧರಾಗಿ ತಮ್ಮ ಬಾಣಸಮೂಹಗಳಿಂದ ಅರ್ಜುನನನ್ನು ಮುಚ್ಚುತ್ತಾ ಅವನನ್ನು ಸುತ್ತುವರಿದರು.

ಅದೃಶ್ಯಂ ತಂ ಮುಹೂರ್ತೇನ ಚಕ್ರುಸ್ತೇ ಭರತರ್ಷಭ ।
ಕೃಷ್ಣೇನ ಸಹಿತಂ ಯುದ್ಧೇ ಕುಂತೀಪುತ್ರಂ ಧನಂಜಯಮ್ ॥ ೮ ॥

ಎಲೈ ಭರತಶ್ರೇಷ್ಠನೇ, ಅವರು ರಣರಂಗದಲ್ಲಿ ಕೃಷ್ಣನಿಂದ ಸಹಿತನಾದ, ಕುಂತೀಪುತ್ರನಾದ ಅರ್ಜುನನನ್ನು ಒಂದು ಮುಹೂರ್ತದಲ್ಲಿ ಅದೃಶ್ಯನನ್ನಾಗಿ ಮಾಡಿದರು.

ಕ್ರುದ್ಧಸ್ತು ಫಲ್ಗುನಃ ಸಂಖೇ ದ್ವಿಗುಣೇಕೃತವಿಕ್ರಮಃ ।
ಗಾಂಡೀವಮನುಸಮ್ಮೃಜ್ಯ ತೂಣೇ ಸಂಸ್ಪೃಶ್ಯ ಚಾಹವೇ ॥ ೯ ॥

ಸ ಬದ್ಧ್ವಾ ಭ್ರುಕುಟಿಂ ವಕ್ತ್ರೇ ಕ್ರೋಧಸ್ಯ ಪ್ರತಿಲಕ್ಷಣಮ್ ।
ದೇವದತ್ತಂ ಮಹಾಶಂಖಂ ಪೂರಯಾಮಾಸ ಪಾಂಡವಃ ॥ ೧೦ ॥

ಅರ್ಜುನನು ಕೋಪಗೊಂಡು ಇಮ್ಮಡಿಯಾದ ಪರಾಕ್ರಮವನ್ನು ಹೊಂದಿ, ಗಾಂಡೀವವನ್ನು ನೇವರಿಸಿ, ಬತ್ತಳಿಕೆಗಳನ್ನು ಸ್ಪರ್ಶಿಸಿ, ಕ್ರೋಧದ ಲಕ್ಷಣವಾದ ಹುಬ್ಬುಗಳನ್ನು ಗಂಟಿಕ್ಕಿ, ದೇವದತ್ತ ಮಹಾಶಂಖವನ್ನು ಊದಿದನು.

ತತೋಽಸ್ತ್ರಮರಿಸಂಘಘ್ನಂ ತ್ವಾಷ್ಟ್ರಮಭ್ಯಸ್ಯದರ್ಜುನಃ ।
ತತೋ ರೂಪಸಹಸ್ರಾಣಿ ಪ್ರಾದುರಾಸನ್ ಪೃಥಕ್ ಪೃಥಕ್ ॥ ೧೧ ॥

ಅನಂತರ ಶತ್ರುಗಳ ಸಮೂಹವನ್ನು ನಾಶಮಾಡುವ ತ್ವಾಷ್ಟ್ರಾಸ್ತ್ರವನ್ನು ಅರ್ಜುನನು ಪ್ರಯೋಗಿಸಿದನು. ಆಗ ಅರ್ಜುನನ ಸಹಸ್ರಾರು ರೂಪಗಳು ಬೇರೆ ಬೇರೆಯಾಗಿ ಪ್ರಾದುರ್ಭವಿಸಿದವು.

ಅರ್ಜುನಪ್ರತಿರೂಪೈಸ್ತೈಃ ನಾನಾರೂಪೈರ್ವಿಮೋಹಿತಾಃ ।
ಅನ್ಯೋನ್ಯಮರ್ಜುನಂ ಮತ್ವಾ ಸ್ವಮಾತ್ಮಾನಂ ಚ ಜಘ್ನಿರೇ ॥ ೧೨ ॥

ಅರ್ಜುನನ ಪ್ರತಿಬಿಂಬಗಳಾದ ಆ ಅನೇಕ ರೂಪಗಳಿಂದ ವಿಮೋಹಿತರಾದ ಸಂಶಪ್ತಕ ಯೋಧರು ಪರಸ್ಪರವಾಗಿ ಅರ್ಜುನನೆಂದು ತಿಳಿದುಕೊಂಡು ತಮ್ಮನ್ನು ಮತ್ತು ತಮ್ಮವರನ್ನು ಕೊಂದುಕೊಂಡರು.

ಅಯಮರ್ಜುನೋಽಯಂ ಗೋವಿಂದ ಇಮೌ ಯಾದವಪಾಂಡವೌ ।
ಇತಿ ಬ್ರುವಾಣಾಃ ಸಮ್ಮೂಢಾ ಜಘ್ನುರನ್ಯೋನ್ಯಮಂಜಸಾ ॥ ೧೩ ॥

ಇವನು ಅರ್ಜುನ, ಇವನು ಗೋವಿಂದ, ಇವರು ಕೃಷ್ಣಾರ್ಜುನರು ಎಂದು ಹೇಳುತ್ತಾ ಸಮ್ಮೂಢರಾಗಿ ಒಬ್ಬರನ್ನೊಬ್ಬರು ಕೊಂದರು.

ಅನ್ಯೋನ್ಯಂ ಸಮರೇ ಜಘ್ನುಃ ತಾವಕಾ ಭರತರ್ಷಭ ।
ಮೋಹಿತಾಃ ಪರಮಾಸ್ತ್ರೇಣ ಪಾಂಡವೇನ ಮಹಾತ್ಮನಾ ॥ ೧೪ ॥

ಅಶೋಭಂತ ರಣೇ ಯೋಧಾಃ ಪುಷ್ಪಿತಾ ಇವ ಕಿಂಶುಕಾಃ ॥ ೧೫ ॥

ಎಲೈ ಭರತಶ್ರೇಷ್ಠನೇ, ನಿನ್ನವರಾದ ಅವರು ಮಹಾತ್ಮನಾದ ಪಾಂಡವನ ಶ್ರೇಷ್ಠವಾದ ಅಸ್ತ್ರದಿಂದ ಮೋಹಿತರಾಗಿ ರಣರಂಗದಲ್ಲಿ ಪರಸ್ಪರವಾಗಿ ಹೊಡೆದರು. ಯೋಧರು ರಣರಂಗದಲ್ಲಿ ಪುಷ್ಪಿತವಾದ ಮುತ್ತುಕದ ಮರಗಳಂತೆ ಶೋಭಿಸಿದರು.

ರುಧಿರೋತ್ಪೀಡನಾಸ್ತೇ ತು ರುಧಿರೇಣ ಸಮುಕ್ಷಿತಾಃ ।
ಚಂದನಸ್ಯ ರಸೇನೇವ ವ್ಯಭ್ರಾಜಂತ ರಣಾಜಿರೇ ॥ ೧೬ ॥

ರಕ್ತದ ಶಿರೋಭೂಷಣವನ್ನು ಹೊಂದಿ, ಚಂದನದ ರಸದಿಂದ ಲೇಪಿತವಾದಂತೆ, ರಕ್ತದಿಂದ ಶರೀರವು ತೊಯ್ದು ಅವರು ರಣರಂಗದಲ್ಲಿ ಶೋಭಿಸಿದರು.

ತತಃ ಪ್ರಹಸ್ಯ ಬೀಭತ್ಸುಃ ವ್ಯಾಕ್ಷಿಪದ್ ಗಾಂಡಿವಂ ಭೃಶಮ್ ।
ನ್ಯಹನತ್ ತಾನ್ ಶರೈಸ್ತೀಕ್ಷ್ಣೈಃ ತಮಃ ಸೂರ್ಯ ಇವಾಂಶುಭಿಃ ॥೧೭॥

ಆಗ ಅರ್ಜುನನು ನಕ್ಕು ಗಾಂಡೀವ ಧನುಸ್ಸನ್ನು ಬಹಳವಾಗಿ ಎಳೆದು ತೀಕ್ಷ್ಣವಾದ ಬಾಣಗಳಿಂದ ಸೂರ್ಯನು ತನ್ನ ಕಿರಣಗಳಿಂದ ಕತ್ತಲೆಯನ್ನು ನಾಶಮಾಡುವಂತೆ ಅವರನ್ನು ಕೊಂದನು.

ಹತಾವಶಿಷ್ಟಾಸ್ತೇ ಭೂಯಃ ಪರಿವಾರ್ಯ ಧನಂಜಯಮ್ ।
ಸಾಶ್ವಧ್ವಜರಥಂ ಚಕ್ರುರದೃಶ್ಯಂ ಶರವೃಷ್ಟಿಭಿಃ ॥ ೧೮ ॥

ಹತರಾಗಿ ಉಳಿದ ಅವರು ಪುನಃ ಅರ್ಜುನನನ್ನು ಸುತ್ತುವರಿದು, ಅಶ್ವ-ಧ್ವಜ-ರಥಗಳಿಂದ ಕೂಡಿದ ಅವನನ್ನು ತಮ್ಮ ಬಾಣಗಳ ಮಳೆಯಿಂದ ಅದೃಶ್ಯನನ್ನಾಗಿ ಮಾಡಿದರು.

ತತಃ ಶರಸಹಸ್ರಾಣಿ ತೈರ್ವಿಮುಕ್ತಾನಿ ಭಸ್ಮಸಾತ್ ।
ಕೃತ್ವಾ ತತಸ್ತು ತಾನ್ ವೀರಾನನಯದ್ ಯಮಸಾದನಮ್ ॥ ೧೯ ॥

ಆಗ ಅರ್ಜುನನು ಅವರು ಪ್ರಯೋಗಿಸಿದ ಸಹಸ್ರಾರು ಬಾಣಗಳನ್ನು ಭಸ್ಮ ಮಾಡಿ ಆ ವೀರರನ್ನು ಯಮಲೋಕಕ್ಕೆ ಕಳುಹಿಸಿದನು.

ತತಃ ಪ್ರಹಸ್ಯ ಬೀಭತ್ಸುರ್ಲಿಲಿಂಧ್ರಾನ್ ಮಾಲವಾನಪಿ ।
ಮಚ್ಚಿಲ್ಲಕಾಂಸ್ತ್ರಿಗರ್ತಾಂಶ್ಚ ಯೌಧೇಯಾಂಶ್ಚಾರ್ದಯಚ್ಛರೈಃ ॥ ೨೦ ॥

ಆನಂತರ ಅರ್ಜುನನು ನಕ್ಕು ಲಿಲಿಂಧ್ರರನ್ನೂ, ಮಾಲವರನ್ನೂ, ಮಚ್ಚಿಲಕರನ್ನೂ, ತ್ರಿಗರ್ತರನ್ನೂ ಮತ್ತು ಯೋಧೇಯರನ್ನು ತನ್ನ ಬಾಣಗಳಿಂದ ಪೀಡಿಸಿದನು.

ತೇ ಹನ್ಯಮಾನಾ ವೀರೇಣ ಕ್ಷತ್ರಿಯಾಃ ಕಾಲಚೋದಿತಾಃ ।
ವ್ಯಸೃಜನ್ ಶರವರ್ಷಾಣಿ ಪಾರ್ಥೇ ನಾನಾವಿಧಾನಿ ಚ ॥ ೨೧ ॥

ವೀರನಾದ ಅರ್ಜುನನಿಂದ ಹೊಡೆಯಲ್ಪಟ್ಟ ಕಾಲಚೋದಿತರಾದ ಆ ಕ್ಷತ್ರಿಯರು ಅರ್ಜುನನ ಮೇಲೆ ನಾನಾವಿಧವಾದ ಬಾಣಗಳ ಮಳೆಯನ್ನು ಸುರಿಸಿದರು.

ತತೋ ನೈವಾರ್ಜುನಸ್ತತ್ರ ನ ರಥೋ ನಾಪಿ ಕೇಶವಃ ।
ಪ್ರತ್ಯದೃಶ್ಯಂತ ಘೋರೇಣ ಶರವರ್ಷೇಣ ಸಂವೃತಾಃ ॥ ೨೨ ॥

ಆಗ ಘೋರವಾದ ಬಾಣಗಳ ಮಳೆಯಿಂದ ಮುಚ್ಚಲ್ಪಟ್ಟು, ಅಲ್ಲಿ ಅರ್ಜುನನಾಗಲೀ, ಅವನ ರಥವಾಗಲೀ ಅಥವಾ ಕೃಷ್ಣನಾಗಲೀ ಕಾಣಲಿಲ್ಲ.

ತತಸ್ತೇ ಲಬ್ಧಲಕ್ಷತ್ವಾದನ್ಯೋನ್ಯಮಭಿಚುಕ್ರುಶುಃ ।
ಹತೌ ಕೃಷ್ಣಾವಿತಿ ಪ್ರೀತಾಃ ವಾಸಾಂಸ್ಯಾದುಧುವುಸ್ತದಾ ॥ ೨೩ ॥

ಆಗ ಅವರು ಗುರಿಯನ್ನು ತಪ್ಪದ ಕಾರಣದಿಂದ ಪರಸ್ಪರವಾಗಿ ಕಿರುಚುತ್ತಾ ಕೃಷ್ಣಾರ್ಜುನರು ಹತರಾದರು ಎಂದು ಸಂತೋಷದಿಂದ ತಮ್ಮ ಉತ್ತರೀಯಗಳನ್ನು ಬೀಸಿದರು.

ಭೇರೀಮೃದಂಗಶಂಖಾಂಶ್ಚ ದಧ್ಮುರ್ವೀರಾಃ ಸಹಸ್ರಶಃ ।
ಸಿಂಹನಾದರವಾಂಶ್ಚೋಗ್ರಾನ್ ಪ್ರಚಕ್ರುಸ್ತತ್ರ ಮಾರಿಷ ॥ ೨೪ ॥

ಸಹಸ್ರಸಂಖ್ಯೆಯಲ್ಲಿ ಭೇರಿ, ಮೃದಂಗಗಳನ್ನು ಬಾರಿಸಿ, ವೀರರಾದ ಅವರು ಶಂಖಗಳನ್ನು ಊದಿದರು. ಪೂಜ್ಯನೇ, ಅಲ್ಲಿ ಅವರು ಉಗ್ರವಾದ ಸಿಂಹನಾದಗಳನ್ನೂ ಮಾಡಿದರು.

ತತಃ ಪ್ರಸಿಷ್ವಿದೇ ಕೃಷ್ಣಃ ವಿನ್ನಶ್ಚಾರ್ಜುನಮಬ್ರವೀತ್ ।
ಕ್ವಾಸಿ ಪಾರ್ಥ ನ ಪಶ್ಯಾಮಿ ಕಚ್ಚಿಜ್ಜೀವಸಿ ಶತ್ರುಹನ್ ॥ ೨೫ ॥

ಆಗ ಕೃಷ್ಣನು ಬೆವರಿ ಅರ್ಜುನನನ್ನು ಕುರಿತು– 'ಅರ್ಜುನನೇ, ನಿನ್ನನ್ನು ಕಾಣುತ್ತಿಲ್ಲ, ಎಲ್ಲಿದ್ದೀಯೆ? ಶತ್ರುಸೂದನನೇ, ಬದುಕಿದ್ದೀಯಷ್ಟೆ?' ಎಂದು ಕೇಳಿದನು.

ತಸ್ಯ ತನ್ಮಾನುಷಂ ಭಾವಂ ಭಾವಜ್ಞೋಽಜ್ಞಾಯ ಪಾಂಡವಃ ।
ವಾಯವ್ಯಾಸ್ತ್ರೇಣ ತೈರಸ್ತಾಂ ಶರವೃಷ್ಟಿಮಪಾವಹತ್ ॥ ೨೬ ॥

ಅರ್ಜುನನು ಮನುಷ್ಯರಂತೆ ವಿಡಂಬನೆಯನ್ನು ಮಾಡುವ ಕೃಷ್ಣ ಅಭಿಪ್ರಾಯವನ್ನು ತಿಳಿದು, ವಾಯವ್ಯಾಸ್ತ್ರದಿಂದ ಶತ್ರುಗಳು ಪ್ರಯೋಗಿಸಿದ ಬಾಣಗಳ ಮಳೆಯನ್ನು ಹಾರಿಸಿದನು.

ಸಂಶಪ್ತಕರಥವ್ರಾತಾನ್ ಸಾಶ್ವದ್ವಿಪರಥಾಯುತಾನ್ ।
ಉವಾಹ ಭಗವಾನ್ ವಾಯುಃ ಶುಷ್ಕಪರ್ಣಚಯಾನಿವ ॥ ೨೭ ॥

ಪೂಜ್ಯನಾದ ವಾಯುವು ಅಶ್ವ-ಗಜ-ರಥಗಳಿಂದ ಕೂಡಿದ ಸಂಶಪ್ತಕರ ರಥಗಳ ಸಮೂಹಗಳನ್ನು ಒಣಗಿದ ಎಲೆಗಳ ಸಮೂಹದಂತೆ ಹಾರಿಸಿದನು.

ಉಹ್ಯಮಾನಾಸ್ತು ತೇ ರಾಜನ್ ಬಹ್ವಶೋಭಂತ ವಾಯುನಾ ।
ಪ್ರಡೀನಾಃ ಪಕ್ಷಿಣಃ ಕಾಲೇ ವೃಕ್ಷೇಭ್ಯ ಇವ ಮಾರಿಷ ॥ ೨೮ ॥

ರಾಜನೇ, ವಾಯುವಿನಿಂದ ಹಾರಿಸಲ್ಪಡುವ ಅವರು ಎಲೈ ಪೂಜ್ಯನೇ, ಆ ಕಾಲದಲ್ಲಿ ಮರಗಳಿಂದ ಹಾರುವ ಪಕ್ಷಿಗಳಂತೆ ಕಂಡುಬಂದರು.

ತಾಂಸ್ತಥಾ ವ್ಯಾಕುಲೀಕೃತ್ಯ ತ್ವರಮಾಣೋ ಧನಂಜಯಃ ।
ಜಘಾನ ನಿಶಿತೈರ್ಬಾಣೈಃ ಸಹಸ್ರಾಣಿ ಶತಾನಿ ಚ ॥ ೨೯ ॥

ಅವರನ್ನು ಆ ರೀತಿಯಲ್ಲಿ ವ್ಯಾಕುಲಗೊಳಿಸಿ ಅರ್ಜುನನು ತ್ವರೆಮಾಡುತ್ತಾ ತನ್ನ ನಿಶಿತವಾದ ಬಾಣಗಳಿಂದ ಅವರನ್ನು ನೂರರ ಸಂಖೆಯಲ್ಲಿ, ಸಾವಿರದ ಸಂಖ್ಯೆಯಲ್ಲಿ ಕೊಂದನು.

ಶಿರಾಂಸಿ ಭಲ್ಲೈರಹರದ್ ಬಾಹೂನಪಿ ಚ ಸಾಯುಧಾನ್ ।
ಹಸ್ತಿಹಸ್ತೋಪಮಾಂಶ್ಚೋರೂಃ ಶರೈರುರ್ವ್ಯಾಮಪಾತಯತ್ ॥ ೩೦ ॥

ಅವನು ಭಲ್ಲಗಳಿಂದ ಅವರ ಶಿರಸ್ಸುಗಳನ್ನು ಮತ್ತು ಆಯುಧಸಹಿತವಾದ ಬಾಹುಗಳನ್ನು ಕತ್ತರಿಸಿದನು. ಆನೆಯ ಸೊಂಡಿಲುಗಳಂತಿದ್ದ ಅವರ ತೊಡೆಗಳನ್ನು ಬಾಣಗಳಿಂದ ಕತ್ತರಿಸಿ ಭೂಮಿಯ ಮೇಲೆ ಕೆಡವಿದನು.

ಪೃಷ್ಠಚ್ಛಿನ್ನಾನ್ ವಿಚರಣಾನ್ ವಿಮಸ್ತಿಷ್ಕೇಕ್ಷಣಾಂಗುಲೀನ್ ।
ನಾನಾಂಗಾವಯವೈರ್ಹೀನಾಂಶ್ಚಕಾರಾರೀನ್ ಧನಂಜಯಃ ॥ ೩೧ ॥

ಅರ್ಜುನನು ತನ್ನ ಶತ್ರುಗಳನ್ನು ಬೆನ್ನಿನಲ್ಲಿ ಕತ್ತರಿಸಲ್ಪಟ್ಟವರನ್ನಾಗಿ, ಪಾದಹೀನರನ್ನಾಗಿ, ಶಿರೋಹೀನರನ್ನಾಗಿ, ಕಣ್ಣು ಮತ್ತು ಬೆರಳುಗಳಿಂದ ಹೀನರನ್ನಾಗಿ- ಹೀಗೆ ಅನೇಕ ಅಂಗ-ಪ್ರತ್ಯಂಗಗಳಿಂದ ಹೀನರನ್ನಾಗಿ ಮಾಡಿದನು.

ಗಂಧರ್ವನಗರಾಕಾರಾನ್ ವಿಧಿವತ್ ಕಲ್ಪಿತಾನ್ ರಥಾನ್ ।
ಶರೈರ್ವಿಶಕಲೀಕುರ್ವಂಶ್ಚಕ್ರೇ ವ್ಯಶ್ವರಥಧ್ವಜಾನ್ ॥ ೩೨ ॥

ಗಂಧರ್ವನಗರದಂತೆ ಶಾಸ್ತ್ರೋಕ್ತವಾಗಿ ಸಿದ್ಧಪಡಿಸಿದ ಅವರ ರಥಗಳನ್ನು ತನ್ನ ಬಾಣಗಳಿಂದ ಪುಡಿಮಾಡುತ್ತಾ, ಆ ಯೋಧರನ್ನು ಅಶ್ವ-ರಥ-ಧ್ವಜಹೀನರನ್ನಾಗಿ ಮಾಡಿದನು.

ಮುಂಡತಾಳವನಾನೀವ ತತ್ರ ತತ್ರ ಚಕಾಶಿರೇ ।
ಛಿನ್ನಧ್ವಜರಥವ್ರಾತಾಃ ಕೇಚಿದ್ ಯೋಧಾಃ ಕ್ವಚಿತ್ ಕ್ವಚಿತ್ ॥೩೩॥

ಮೇಲ್ಭಾಗವನ್ನು ಕತ್ತರಿಸಿದ ತಾಳವೃಕ್ಷಗಳಂತೆ ಸಂಶಪ್ತಕ ಯೋಧರು ಅಲ್ಲಲ್ಲಿ ತೋರಿಬಂದರು. ಅಲ್ಲಲ್ಲಿ ಯೋಧರ ಛಿನ್ನವಾದ ಧ್ವಜ-ರಥ ಸಮೂಹಗಳು ಕಂಡುಬಂದವು.

ಸೋತ್ತರಾಯುಧಿನೋ ನಾಗಾಃ ಸಪತಾಕಾಂಕುಶಾಯುಧಾಃ ।
ಪೇತುಃ ಶಕ್ರಾಶನಿಹತಾ ದ್ರುಮವಂತ ಇವಾಚಲಾಃ ॥ ೩೪ ॥

ಗಜಾರೋಹಿಗಳಿಂದಲೂ, ಪತಾಕಾಂಕುಶಾಯುಧಗಳಿಂದಲೂ ಸಹಿತವಾದ ಗಜಗಳು ಇಂದ್ರನ ವಜ್ರಾಯುಧದ ಪ್ರಹಾರಕ್ಕೆ ಸಿಲುಕಿದ ವೃಕ್ಷ ಸಹಿತವಾದ ಪರ್ವತಗಳಂತೆ ಬಿದ್ದವು.

ಚಾಮರಾಪೀಡಕವಚಾಃ ಸ್ರಸ್ತಾಂತ್ರನಯನಾಸವಃ ।
ಸಾರೋಹಾಸ್ತುರಗಾಃ ಪೇತುಃ ಪಾರ್ಥಬಾಣಹತಾಃ ಕ್ಷಿತೌ ॥ ೩೫ ॥

ಅರ್ಜುನನ ಬಾಣಗಳಿಂದ ಹತವಾದ ಅಶ್ವಗಳು ತಮ್ಮ ಕರುಳು, ಕಣ್ಣು ಮತ್ತು ಪ್ರಾಣಗಳನ್ನು ಕಳೆದುಕೊಂಡು ಚಾಮರ, ಶಿರೋಭೂಷಣ ಮತ್ತು ಕವಚದಿಂದ ಕೂಡಿದ ಅಶ್ವಾರೋಹಿಗಳ ಜೊತೆಯಲ್ಲಿ ಭೂಮಿಯಲ್ಲಿ ಬಿದ್ದವು.

ವಿಪ್ರವಿದ್ಧಾಸಿನಾರಾಚಾಃ ಛಿನ್ನವರ್ಮರ್ಷ್ಟಿಶಕ್ತಯಃ ।
ಪತ್ತಯಶ್ಛಿನ್ನವರ್ಮಾಣಃ ಕೃಪಣಂ ಶೇರತೇ ಹತಾಃ ॥ ೩೬ ॥

ತಮ್ಮ ಖಡ್ಗ, ನಾರಾಚಗಳನ್ನು ಎಸೆದು, ಕವಚಗಳು, ಋಷ್ಟಿಗಳು ಮತ್ತು ಶಕ್ತಿಗಳು, ಛಿನ್ನವಾದ ಪದಾತಿಗಳು ಹತರಾಗಿ, ಕರುಣಾಜನಕವಾಗಿ ಭೂಮಿಯ ಮೇಲೆ ಮಲಗಿದರು.

ತೈರ್ಹತೈರ್ಹನ್ಯಮಾನೈಶ್ಚ ಪತದ್ಭಿಃ ಪತಿತೈರಪಿ ।
ಕೂಜದ್ಭಿರ್ನಿಷ್ಪನದ್ಭಿಶ್ಚ ಕ್ರೂರಮಾಯೋಧನಂ ಬಭೌ ॥ ೩೭ ॥

ಹತರಾದ ಮತ್ತು ಹತರಾಗುತ್ತಿರುವ, ಬಿದ್ದ ಮತ್ತು ಬೀಳುತ್ತಿರುವ, ಪದಾತಿಗಳ ನೋವಿನ ನಾದದಿಂದ ಮತ್ತು ಗರ್ಜನೆಯಿಂದ ರಣರಂಗವು ಕ್ರೂರವಾಗಿ ಶೋಭಿಸಿತು.

ರಜಶ್ಚ ಸುಮಹದ್ ಭೂತಂ ಶಾಂತಂ ಶೋಣಿತವೃಷ್ಟಿಭಿಃ ।
ಮಹೀ ಚಾಪ್ಯಭವದ್ ದುರ್ಗಾ ಕಬಂಧಾಯುತಸಂಕುಲಾ ॥ ೩೮ ॥

ಬಹಳವಾಗಿ ಎದ್ದ ಭೂಮಿಯ ಧೂಳು ರಕ್ತಪ್ರವಾಹದಿಂದ ಅಡಗಿತು. ಮೃತ ದೇಹಗಳಿಂದ ನಿಬಿಡವಾದ ರಣಭೂಮಿಯು ತಿರುಗಾಡಲು ಅಸಾಧ್ಯವಾಯಿತು.

ತದ್ ಬಭೌ ರೌದ್ರಬೀಭತ್ಸಂ ಬೀಭತ್ಸೋರ್ಯಾನಮಾಹವೇ ।
ಆಕ್ರೀಡ ಇವ ರುದ್ರಸ್ಯ ಘ್ನತಃ ಕಾಲಾತ್ಯಯೇ ಪಶೂನ್ ॥ ೩೯ ॥

ರಣರಂಗದಲ್ಲಿ ಅರ್ಜುನನ ರಥವು ಪ್ರಳಯ ಕಾಲದಲ್ಲಿ ಪಶುಗಳನ್ನು ಸಂಹರಿಸುವ ರುದ್ರನ ವಿಹಾರ ಭೂಮಿಯಂತೆ ರುದ್ರಬೀಭತ್ಸವಾಗಿ ತೋರಿತು.

ತೇ ವಧ್ಯಮಾನಾಃ ಪಾರ್ಥೇನ ವ್ಯಾಕುಲಾಶ್ವರಥಾ ದ್ವಿಪಾಃ ।
ತಮೇವಾಭಿಮುಖಾಃ ಕ್ಷೀಣಾಃ ಶಕ್ರಸ್ಯಾತಿಥಿತಾಂ ಗತಾಃ ॥ ೪೦ ॥

ಅರ್ಜುನನ ಬಾಣಗಳಿಂದ ಹೊಡೆಯಲ್ಪಟ್ಟ ಅಶ್ವ-ರಥ-ಗಜಗಳು ಭ್ರಾಂತಗಳಾಗಿ, ಅವನ ಎದುರಾಗಿಯೇ ಸಾರಿ ಮರಣವನ್ನು ಹೊಂದಿ ಇಂದ್ರನ ಅತಿಥಿಗಳಾದವು.

ಸಾ ಭೂಮಿರ್ಭರತಶ್ರೇಷ್ಠ ನಿಹತೈಸ್ತೈರ್ಮಹಾರಥೈಃ ।
ಆಸ್ತೀರ್ಣಾ ಸಂಬಭೌ ಸರ್ವಾ ಪ್ರೇತೈರಿವ ಸಚೇತನೈಃ ॥ ೪೧ ॥

ಎಲೈ ಭರತಶ್ರೇಷ್ಠನೇ, ಹತರಾದ ಮಹಾರಥರಿಂದ ಹರಡಲ್ಪಟ್ಟ ಆ ರಣಭೂಮಿಯೆಲ್ಲವೂ ಜೀವಿಸಿರುವ ಪ್ರೇತಗಳಿಂದ ತುಂಬಿದಂತೆ ಕಂಡುಬಂದಿತು.

ಏತಸ್ಮಿನ್ನಂತರೇ ಚೈವ ಪ್ರಮತ್ತೇ ಸವ್ಯಸಾಚಿನಿ ।
ವ್ಯೂಢಾನೀಕಸ್ತತೋ ದ್ರೋಣೋ ಯುಧಿಷ್ಠಿರಮಭಿದ್ರವತ್ ॥ ೪೨ ॥

ಈ ಮಧ್ಯದಲ್ಲಿ ಅರ್ಜುನನು ಸಂಶಪ್ತಕರ ಜೊತೆಯಲ್ಲಿ ಯುದ್ಧವನ್ನು ಮಾಡುತ್ತಾ ಪ್ರಮತ್ತನಾಗಿರಲು ದ್ರೋಣರು ತಮ್ಮ ಸೈನ್ಯವನ್ನು ವ್ಯೂಹ ಮಾಡಿ ಯುಧಿಷ್ಠಿರನ ಕಡೆಗೆ ಮುನ್ನುಗ್ಗಿದರು.

ಪ್ರತ್ಯಗೃಹ್ಣಂಸ್ತ್ವರಿಗಣಾನ್ ವ್ಯೂಢಾನೀಕಾಂಶ್ಚ ಪಾಂಡವಾಃ ।
ತಂ ಪ್ರತ್ಯಗೃಹ್ಣಂಸ್ತ್ವರಿತಾ ವ್ಯೂಢಾನೀಕಾಃ ಪ್ರಹಾರಿಣಃ ।
ಯುಧಿಷ್ಠಿರಂ ಪರೀಪ್ಸಂತಸ್ತದಾऽऽಸೀತ್ ತುಮುಲಂ ಮಹತ್ ॥ ೪೩ ॥

ಆಗ ಪ್ರಹಾರಿಗಳಾದ ಪಾಂಡವರು ತಮ್ಮ ಸೈನ್ಯವನ್ನು ವ್ಯೂಹವನ್ನು ಮಾಡಿ ಯುಧಿಷ್ಠಿರನನ್ನು ರಕ್ಷಿಸಲು ಬಯಸಿ, ಶತ್ರುಸಮೂಹವನ್ನು ಎದುರಿಸಿ ಸ್ವೀಕರಿಸಿದರು. ಆಗ ತೀವ್ರವಾದ ಯುದ್ಧವು ನಡೆಯಿತು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಅಷ್ಟಾದಶೋऽಧ್ಯಾಯಃ ॥

॥ ಸಂಶಪ್ತಕವಧಪರ್ವಣಿ ತೃತೀಯೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಹದಿನೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹತ್ತೊಂಬತ್ತನೆಯ ಅಧ್ಯಾಯ

ಸಂಕುಲಯುದ್ಧ

ಸಂಜಯಃ

ಪರಿಣಾಮ್ಯ ನಿಶಾಂ ತಾಂ ತು ಭಾರದ್ವಾಜೋ ಮಹಾರಥಃ ।
ಬಹುಧೋಕ್ತ್ವಾ ತತೋ ರಾಜನ್ ವಚನಂ ವೈ ಸುಯೋಧನಮ್॥ ೧ ॥

ವಿಧಾಯ ಯೋಗಂ ಪಾರ್ಥೇನ ಸಂಶಪ್ತಕಗಣೈಃ ಸಹ ।
ನಿಷ್ಕ್ರಾಂತೇ ಚ ರಣಂ ಪಾರ್ಥೇ ಸಂಶಪ್ತಕವಧಂ ಪ್ರತಿ ॥ ೨ ॥

ವ್ಯೂಢಾನೀಕಸ್ತತೋ ದ್ರೋಣಃ ಪಾಂಡವಾನಾಂ ಮಹಾಚಮೂಮ್ ।
ಅಭ್ಯಯಾದ್ ಭರತಶ್ರೇಷ್ಠ ಧರ್ಮರಾಜಜಿಘೃಕ್ಷಯಾ ॥ ೩ ॥

ಸಂಜಯ– ಮಹಾರಥರಾದ ದ್ರೋಣರು ಆ ರಾತ್ರಿಯನ್ನು ಕಳೆದು ದುರ್ಯೋಧನನ ಜೊತೆಯಲ್ಲಿ ಬಹಳವಾಗಿ ಮಾತನಾಡಿ, ಅರ್ಜುನನ ಜೊತೆಯಲ್ಲಿ ಸಂಶಪ್ತಕರ ಸಮೂಹಗಳು ಯುದ್ಧದಲ್ಲಿ ಸಂಯೋಗವನ್ನು ಹೊಂದುವಂತೆ ಮಾಡಿ, ಸಂಶಪ್ತಕ ವಧೆಗಾಗಿ ಅರ್ಜುನನು ಹೊರಟ ಮೇಲೆ, ತಮ್ಮ ದೊಡ್ಡ ಸೈನ್ಯವನ್ನು ವ್ಯೂಹಗೊಳಿಸಿ, ಎಲೈ ಭರತಶ್ರೇಷ್ಠನೇ, ಧರ್ಮರಾಜನನ್ನು ಹಿಡಿಯಲು ಬಯಸಿ ರಣರಂಗಕ್ಕೆ ಹೊರಟರು.

ವ್ಯೂಢಾಂ ದೃಷ್ಟ್ವಾ ಸುಪರ್ಣೇನ ಭಾರದ್ವಾಜಸ್ಯ ತಾಂ ಚಮೂಮ್ ।
ಮಂಡಲಾರ್ಧೇನ ತಂ ವ್ಯೂಹಂ ಪ್ರತ್ಯವ್ಯೂಹದ್ ಯುಧಿಷ್ಠಿರಃ ॥ ೪ ॥

ಭರದ್ವಾಜರು ತಮ್ಮ ಸೈನ್ಯವನ್ನು ಅರ್ಧಮಂಡಲದ ಗರುಡವ್ಯೂಹದಂತೆ ರಚಿಸಿರುವುದನ್ನು ನೋಡಿ, ಯುಧಿಷ್ಠಿರನು ಅದಕ್ಕೆ ಪ್ರತಿಯಾಗಿ ತನ್ನ ಸೈನ್ಯವನ್ನು ವ್ಯೂಹಗೊಳಿಸಿದನು.

ಮುಖಂ ಚಾಸೀತ್ ಸುಪರ್ಣಸ್ಯ ಭಾರದ್ವಾಜೋ ಮಹಾರಥಃ ।
ಶಿರೋ ದುರ್ಯೋಧನೋ ರಾಜಾ ಸೋದರ್ಯೈಃ ಸಾನುಗೈರ್ವೃತಃ ॥

ಮಹಾರಥರಾದ ಭಾರದ್ವಾಜರು ಆ ಗರುಡನ ಮುಖವಾಗಿದ್ದರು. ತನ್ನ ತಮ್ಮಂದಿರಿಂದ ಪರಿವೃತನಾದ, ರಾಜನಾದ ದುರ್ಯೋಧನನು ಶಿರಸ್ಸಾಗಿದ್ದನು.

ತೇ ವಧ್ಯಮಾನಾಃ ಪಾರ್ಥೇನ ವ್ಯಾಕುಲಾಶ್ವರಥಾ ದ್ವಿಪಾಃ ।
ತಮೇವಾಭಿಮುಖಾಃ ಕ್ಷೀಣಾಃ ಶಕ್ರಸ್ಯಾತಿಥಿತಾಂ ಗತಾಃ ॥ ೪೦ ॥

ಅರ್ಜುನನ ಬಾಣಗಳಿಂದ ಹೊಡೆಯಲ್ಪಟ್ಟ ಅಶ್ವ-ರಥ-ಗಜಗಳು ಭ್ರಾಂತಗಳಾಗಿ, ಅವನ ಎದುರಾಗಿಯೇ ಸಾರಿ ಮರಣವನ್ನು ಹೊಂದಿ ಇಂದ್ರನ ಅತಿಥಿಗಳಾದವು.

ಸಾ ಭೂಮಿರ್ಭರತಶ್ರೇಷ್ಠ ನಿಹತೈಸ್ತೈರ್ಮಹಾರಥೈಃ ।
ಆಸ್ತೀರ್ಣಾ ಸಂಬಭೌ ಸರ್ವಾ ಪ್ರೇತೈರಿವ ಸಚೇತನೈಃ ॥ ೪೧ ॥

ಎಲೈ ಭರತಶ್ರೇಷ್ಠನೇ, ಹತರಾದ ಮಹಾರಥರಿಂದ ಹರಡಲ್ಪಟ್ಟ ಆ ರಣಭೂಮಿಯೆಲ್ಲವೂ ಜೀವಿಸಿರುವ ಪ್ರೇತಗಳಿಂದ ತುಂಬಿದಂತೆ ಕಂಡುಬಂದಿತು.

ಏತಸ್ಮಿನ್ನಂತರೇ ಚೈವ ಪ್ರಮತ್ತೇ ಸವ್ಯಸಾಚಿನಿ ।
ವ್ಯೂಢಾನೀಕಸ್ತತೋ ದ್ರೋಣೋ ಯುಧಿಷ್ಠಿರಮಭಿದ್ರವತ್ ॥ ೪೨ ॥

ಈ ಮಧ್ಯದಲ್ಲಿ ಅರ್ಜುನನು ಸಂಶಪ್ತಕರ ಜೊತೆಯಲ್ಲಿ ಯುದ್ಧವನ್ನು ಮಾಡುತ್ತಾ ಪ್ರಮತ್ತನಾಗಿರಲು ದ್ರೋಣರು ತಮ್ಮ ಸೈನ್ಯವನ್ನು ವ್ಯೂಹ ಮಾಡಿ ಯುಧಿಷ್ಠಿರನ ಕಡೆಗೆ ಮುನ್ನುಗ್ಗಿದರು.

ಪ್ರತ್ಯಗೃಹ್ಣಂಸ್ತ್ವರಿಗಣಾನ್ ವ್ಯೂಢಾನೀಕಾಂಶ್ಚ ಪಾಂಡವಾಃ ।
ತಂ ಪ್ರತ್ಯಗೃಹ್ಣಂಸ್ತ್ವರಿತಾ ವ್ಯೂಢಾನೀಕಾಃ ಪ್ರಹಾರಿಣಃ ।
ಯುಧಿಷ್ಠಿರಂ ಪರೀಪ್ಸಂತಸ್ತದಾऽऽಸೀತ್ ತುಮುಲಂ ಮಹತ್ ॥ ೪೩ ॥

ಆಗ ಪ್ರಹಾರಿಗಳಾದ ಪಾಂಡವರು ತಮ್ಮ ಸೈನ್ಯವನ್ನು ವ್ಯೂಹವನ್ನು ಮಾಡಿ ಯುಧಿಷ್ಠಿರನನ್ನು ರಕ್ಷಿಸಲು ಬಯಸಿ, ಶತ್ರುಸಮೂಹವನ್ನು ಎದುರಿಸಿ ಸ್ವೀಕರಿಸಿದರು. ಆಗ ತೀವ್ರವಾದ ಯುದ್ಧವು ನಡೆಯಿತು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಅಷ್ಟಾದಶೋऽಧ್ಯಾಯಃ ॥

॥ ಸಂಶಪ್ತಕವಧಪರ್ವಣಿ ತೃತೀಯೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಹದಿನೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹತ್ತೊಂಬತ್ತನೆಯ ಅಧ್ಯಾಯ

ಸಂಕುಲಯುದ್ಧ

ಸಂಜಯಃ

ಪರಿಣಾಮ್ಯ ನಿಶಾಂ ತಾಂ ತು ಭಾರದ್ವಾಜೋ ಮಹಾರಥಃ ।
ಬಹುಧೋಕ್ತ್ವಾ ತತೋ ರಾಜನ್ ವಚನಂ ವೈ ಸುಯೋಧನಮ್॥ ೧ ॥

ವಿಧಾಯ ಯೋಗಂ ಪಾರ್ಥೇನ ಸಂಶಪ್ತಕಗಣೈಃ ಸಹ ।
ನಿಷ್ಕ್ರಾಂತೇ ಚ ರಣಂ ಪಾರ್ಥೇ ಸಂಶಪ್ತಕವಧಂ ಪ್ರತಿ ॥ ೨ ॥

ವ್ಯೂಢಾನೀಕಸ್ತತೋ ದ್ರೋಣಃ ಪಾಂಡವಾನಾಂ ಮಹಾಚಮೂಮ್ ।
ಅಭ್ಯಯಾದ್ ಭರತಶ್ರೇಷ್ಠ ಧರ್ಮರಾಜಜಿಘೃಕ್ಷಯಾ ॥ ೩ ॥

ಸಂಜಯ– ಮಹಾರಥರಾದ ದ್ರೋಣರು ಆ ರಾತ್ರಿಯನ್ನು ಕಳೆದು ದುರ್ಯೋಧನನ ಜೊತೆಯಲ್ಲಿ ಬಹಳವಾಗಿ ಮಾತನಾಡಿ, ಅರ್ಜುನನ ಜೊತೆಯಲ್ಲಿ ಸಂಶಪ್ತಕರ ಸಮೂಹಗಳು ಯುದ್ಧದಲ್ಲಿ ಸಂಯೋಗವನ್ನು ಹೊಂದುವಂತೆ ಮಾಡಿ, ಸಂಶಪ್ತಕ ವಧೆಗಾಗಿ ಅರ್ಜುನನು ಹೊರಟ ಮೇಲೆ, ತಮ್ಮ ದೊಡ್ಡ ಸೈನ್ಯವನ್ನು ವ್ಯೂಹಗೊಳಿಸಿ, ಎಲೈ ಭರತಶ್ರೇಷ್ಠನೇ, ಧರ್ಮರಾಜನನ್ನು ಹಿಡಿಯಲು ಬಯಸಿ ರಣರಂಗಕ್ಕೆ ಹೊರಟರು.

ವ್ಯೂಢಾಂ ದೃಷ್ಟ್ವಾ ಸುಪರ್ಣೇನ ಭಾರದ್ವಾಜಸ್ಯ ತಾಂ ಚಮೂಮ್ ।
ಮಂಡಲಾರ್ಧೇನ ತಂ ವ್ಯೂಹಂ ಪ್ರತ್ಯವ್ಯೂಹದ್ ಯುಧಿಷ್ಠಿರಃ ॥ ೪ ॥

ಭರದ್ವಾಜರು ತಮ್ಮ ಸೈನ್ಯವನ್ನು ಅರ್ಧಮಂಡಲದ ಗರುಡವ್ಯೂಹದಂತೆ ರಚಿಸಿರುವುದನ್ನು ನೋಡಿ, ಯುಧಿಷ್ಠಿರನು ಅದಕ್ಕೆ ಪ್ರತಿಯಾಗಿ ತನ್ನ ಸೈನ್ಯವನ್ನು ವ್ಯೂಹಗೊಳಿಸಿದನು.

ಮುಖಂ ಚಾಸೀತ್ ಸುಪರ್ಣಸ್ಯ ಭಾರದ್ವಾಜೋ ಮಹಾರಥಃ ।
ಶಿರೋ ದುರ್ಯೋಧನೋ ರಾಜಾ ಸೋದರ್ಯೈಃ ಸಾನುಗೈರ್ವೃತಃ ॥

ಮಹಾರಥರಾದ ಭಾರದ್ವಾಜರು ಆ ಗರುಡನ ಮುಖವಾಗಿದ್ದರು. ತನ್ನ ತಮ್ಮಂದಿರಿಂದ ಪರಿವೃತನಾದ, ರಾಜನಾದ ದುರ್ಯೋಧನನು ಶಿರಸ್ಸಾಗಿದ್ದನು.

ತೇ ವಧ್ಯಮಾನಾಃ ಪಾರ್ಥೇನ ವ್ಯಾಕುಲಾಶ್ವರಥಾ ದ್ವಿಪಾಃ ।
ತಮೇವಾಭಿಮುಖಾಃ ಕ್ಷೀಣಾಃ ಶಕ್ರಸ್ಯಾತಿಥಿತಾಂ ಗತಾಃ ॥ ೪೦ ॥

ಅರ್ಜುನನ ಬಾಣಗಳಿಂದ ಹೊಡೆಯಲ್ಪಟ್ಟ ಅಶ್ವ-ರಥ-ಗಜಗಳು ಭ್ರಾಂತಗಳಾಗಿ, ಅವನ ಎದುರಾಗಿಯೇ ಸಾರಿ ಮರಣವನ್ನು ಹೊಂದಿ ಇಂದ್ರನ ಅತಿಥಿಗಳಾದವು.

ಸಾ ಭೂಮಿರ್ಭರತಶ್ರೇಷ್ಠ ನಿಹತೈಸ್ತೈರ್ಮಹಾರಥೈಃ ।
ಆಸ್ತೀರ್ಣಾ ಸಂಬಭೌ ಸರ್ವಾ ಪ್ರೇತೈರಿವ ಸಚೇತನೈಃ ॥ ೪೧ ॥

ಎಲೈ ಭರತಶ್ರೇಷ್ಠನೇ, ಹತರಾದ ಮಹಾರಥರಿಂದ ಹರಡಲ್ಪಟ್ಟ ಆ ರಣಭೂಮಿಯೆಲ್ಲವೂ ಜೀವಿಸಿರುವ ಪ್ರೇತಗಳಿಂದ ತುಂಬಿದಂತೆ ಕಂಡುಬಂದಿತು.

ಏತಸ್ಮಿನ್ನಂತರೇ ಚೈವ ಪ್ರಮತ್ತೇ ಸವ್ಯಸಾಚಿನಿ ।
ವ್ಯೂಢಾನೀಕಸ್ತತೋ ದ್ರೋಣೋ ಯುಧಿಷ್ಠಿರಮಭಿದ್ರವತ್ ॥ ೪೨ ॥

ಈ ಮಧ್ಯದಲ್ಲಿ ಅರ್ಜುನನು ಸಂಶಪ್ತಕರ ಜೊತೆಯಲ್ಲಿ ಯುದ್ಧವನ್ನು ಮಾಡುತ್ತಾ ಪ್ರಮತ್ತನಾಗಿರಲು ದ್ರೋಣರು ತಮ್ಮ ಸೈನ್ಯವನ್ನು ವ್ಯೂಹ ಮಾಡಿ ಯುಧಿಷ್ಠಿರನ ಕಡೆಗೆ ಮುನ್ನುಗ್ಗಿದರು.

ಪ್ರತ್ಯಗೃಹ್ಣಂಸ್ತ್ವರಿಗಣಾನ್ ವ್ಯೂಢಾನೀಕಾಂಶ್ಚ ಪಾಂಡವಾಃ ।
ತಂ ಪ್ರತ್ಯಗೃಹ್ಣಂಸ್ತ್ವರಿತಾ ವ್ಯೂಢಾನೀಕಾಃ ಪ್ರಹಾರಿಣಃ ।
ಯುಧಿಷ್ಠಿರಂ ಪರೀಪ್ಸಂತಸ್ತದಾऽऽಸೀತ್ ತುಮುಲಂ ಮಹತ್ ॥ ೪೩ ॥

ಆಗ ಪ್ರಹಾರಿಗಳಾದ ಪಾಂಡವರು ತಮ್ಮ ಸೈನ್ಯವನ್ನು ವ್ಯೂಹವನ್ನು ಮಾಡಿ ಯುಧಿಷ್ಠಿರನನ್ನು ರಕ್ಷಿಸಲು ಬಯಸಿ, ಶತ್ರುಸಮೂಹವನ್ನು ಎದುರಿಸಿ ಸ್ವೀಕರಿಸಿದರು. ಆಗ ತೀವ್ರವಾದ ಯುದ್ಧವು ನಡೆಯಿತು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಅಷ್ಟಾದಶೋऽಧ್ಯಾಯಃ ॥

॥ ಸಂಶಪ್ತಕವಧಪರ್ವಣಿ ತೃತೀಯೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಹದಿನೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹತ್ತೊಂಬತ್ತನೆಯ ಅಧ್ಯಾಯ

ಸಂಕುಲಯುದ್ಧ

ಸಂಜಯಃ

ಪರಿಣಾಮ್ಯ ನಿಶಾಂ ತಾಂ ತು ಭಾರದ್ವಾಜೋ ಮಹಾರಥಃ ।
ಬಹುಧೋಕ್ತ್ವಾ ತತೋ ರಾಜನ್ ವಚನಂ ವೈ ಸುಯೋಧನಮ್॥ ೧ ॥

ವಿಧಾಯ ಯೋಗಂ ಪಾರ್ಥೇನ ಸಂಶಪ್ತಕಗಣೈಃ ಸಹ ।
ನಿಷ್ಕ್ರಾಂತೇ ಚ ರಣಂ ಪಾರ್ಥೇ ಸಂಶಪ್ತಕವಧಂ ಪ್ರತಿ ॥ ೨ ॥

ವ್ಯೂಢಾನೀಕಸ್ತತೋ ದ್ರೋಣಃ ಪಾಂಡವಾನಾಂ ಮಹಾಚಮೂಮ್ ।
ಅಭ್ಯಯಾದ್ ಭರತಶ್ರೇಷ್ಠ ಧರ್ಮರಾಜಜಿಘೃಕ್ಷಯಾ ॥ ೩ ॥

ಸಂಜಯ– ಮಹಾರಥರಾದ ದ್ರೋಣರು ಆ ರಾತ್ರಿಯನ್ನು ಕಳೆದು ದುರ್ಯೋಧನನ ಜೊತೆಯಲ್ಲಿ ಬಹಳವಾಗಿ ಮಾತನಾಡಿ, ಅರ್ಜುನನ ಜೊತೆಯಲ್ಲಿ ಸಂಶಪ್ತಕರ ಸಮೂಹಗಳು ಯುದ್ಧದಲ್ಲಿ ಸಂಯೋಗವನ್ನು ಹೊಂದುವಂತೆ ಮಾಡಿ, ಸಂಶಪ್ತಕ ವಧೆಗಾಗಿ ಅರ್ಜುನನು ಹೊರಟ ಮೇಲೆ, ತಮ್ಮ ದೊಡ್ಡ ಸೈನ್ಯವನ್ನು ವ್ಯೂಹಗೊಳಿಸಿ, ಎಲೈ ಭರತಶ್ರೇಷ್ಠನೇ, ಧರ್ಮರಾಜನನ್ನು ಹಿಡಿಯಲು ಬಯಸಿ ರಣರಂಗಕ್ಕೆ ಹೊರಟರು.

ವ್ಯೂಢಾಂ ದೃಷ್ಟ್ವಾ ಸುಪರ್ಣೇನ ಭಾರದ್ವಾಜಸ್ಯ ತಾಂ ಚಮೂಮ್ ।
ಮಂಡಲಾರ್ಧೇನ ತಂ ವ್ಯೂಹಂ ಪ್ರತ್ಯವ್ಯೂಹದ್ ಯುಧಿಷ್ಠಿರಃ ॥ ೪ ॥

ಭರದ್ವಾಜರು ತಮ್ಮ ಸೈನ್ಯವನ್ನು ಅರ್ಧಮಂಡಲದ ಗರುಡವ್ಯೂಹದಂತೆ ರಚಿಸಿರುವುದನ್ನು ನೋಡಿ, ಯುಧಿಷ್ಠಿರನು ಅದಕ್ಕೆ ಪ್ರತಿಯಾಗಿ ತನ್ನ ಸೈನ್ಯವನ್ನು ವ್ಯೂಹಗೊಳಿಸಿದನು.

ಮುಖಂ ಚಾಸೀತ್ ಸುಪರ್ಣಸ್ಯ ಭಾರದ್ವಾಜೋ ಮಹಾರಥಃ ।
ಶಿರೋ ದುರ್ಯೋಧನೋ ರಾಜಾ ಸೋದರ್ಯೈಃ ಸಾನುಗೈರ್ವೃತಃ ॥

ಮಹಾರಥರಾದ ಭಾರದ್ವಾಜರು ಆ ಗರುಡನ ಮುಖವಾಗಿದ್ದರು. ತನ್ನ ತಮ್ಮಂದಿರಿಂದ ಪರಿವೃತನಾದ, ರಾಜನಾದ ದುರ್ಯೋಧನನು ಶಿರಸ್ಸಾಗಿದ್ದನು.

ಚಕ್ಷುಷೀ ಕೃತವರ್ಮಾ ಚ ಗೌತಮಶ್ಚಾಸ್ಯತಾಂ ವರಃ ।
ಭೂತವರ್ಮಾ ಕ್ಷೇಮಶರ್ಮಾ ಕರಮರ್ಷಶ್ಚ ವೀರ್ಯವಾನ್ ॥ ೬ ॥

ಕಳಿಂಗಾಃ ಸಿಂಹಳಾಃ ಪ್ರಾಚ್ಯಾಃ ಶೂರಾ ಭೀರಾಃ ಕಶೇರುಕಾಃ ।
ಶಕಾ ಯವನಕಾಂಬೋಜಾಸ್ತಥಾ ಹಂಸಪದಾಶ್ಚ ಯೇ ॥ ೭ ॥

ಗ್ರೀವಾಯಾಂ ಶೂರಸೇನಾಶ್ಚ ದರದಾ ಮದ್ರಕೇಕಯಾಃ ।
ರಥಾಶ್ವಗಜಪತ್ತಯಃ ತಸ್ಥುಃ ಪರಮದಂಸಿತಾಃ ॥ ೮ ॥

ಧನುರ್ಧಾರಿಗಳಲ್ಲಿ ಶ್ರೇಷ್ಠರಾದ ಕೃತವರ್ಮ ಮತ್ತು ಕೃಪರು ಎರಡು ಕಣ್ಣುಗಳಾಗಿದ್ದರು. ಭೂತವರ್ಮ, ಕ್ಷೇಮಶರ್ಮ, ಪರಾಕ್ರಮಶಾಲಿಯಾದ ಕರಮರ್ಷ, ಕಳಿಂಗರು, ಸಿಂಹಳರು, ಪ್ರಾಚ್ಯರು, ಶೂರರು, ವೀರರು, ಕಶೇರುಕರು, ಶಕರು, ಯವನರು, ಕಾಂಬೋಜರು, ಹಂಸಪದರು, ಶೂರಸೇನರು, ದರದರು, ಮದ್ರರು, ಕೇಕಯರು, ರಥಾಶ್ವ-ಗಜ-ಪದಾತಿ ಸಮೂಹಗಳು- ಎಲ್ಲರೂ ಕವಚಗಳನ್ನು ಮತ್ತು ಆಯುಧಗಳನ್ನು ಧರಿಸಿ ಕತ್ತಿನ ಪ್ರದೇಶದಲ್ಲಿ ನಿಂತರು.

ಭೂರಿಶ್ರವಾಃ ಶಲಃ ಶಲ್ಯಃ ಸೋಮದತ್ತೋಽಥ ಬಾಹ್ಲಿಕಃ ।
ಅಕ್ಷೋಹಿಣ್ಯಾ ವೃತಾಃ ಶೂರಾ ದಕ್ಷಿಣಂ ಪಕ್ಷಮಾಶ್ರಿತಾಃ ॥ ೯ ॥

ಶೂರರಾದ ಭೂರಿಶ್ರವ, ಶಲ, ಶಲ್ಯ, ಸೋಮದತ್ತ ಮತ್ತು ಬಾಹ್ಲಿಕರು ಒಂದು ಅಕ್ಷೋಹಿಣಿ ಸೈನ್ಯದಿಂದ ಕೂಡಿ ಸುಪರ್ಣದ ಬಲಭಾಗದ ರಕ್ಕೆಯ ಸ್ಥಾನದಲ್ಲಿದ್ದರು.

ವಿಂದಾನುವಿಂದಾವಾವಂತ್ಯೌ ಕಾಂಬೋಜಶ್ಚ ಸುದಕ್ಷಿಣಃ ।
ವಾಮಂ ಪಕ್ಷಂ ಸಮಾಶ್ರಿತ್ಯ ಸ್ಥಿತಾ ದ್ರೋಣಸುತಾಗ್ರಗಾಃ ॥ ೧೦ ॥

ಅವಂತಿದೇಶದ ವಿಂದಾನುವಿಂದರು ಮತ್ತು ಕಾಂಬೋಜದೇಶದ ಸುದಕ್ಷಿಣ ಇವರು ಅಶ್ವತ್ಥಾಮರ ಮುಂಭಾಗದಲ್ಲಿ ಸುಪರ್ಣದ ಎಡರೆಕ್ಕೆಯನ್ನು ಆಶ್ರಯಿಸಿ ನಿಂತರು.

ಪೃಷ್ಠೇ ಕಳಿಂಗಾಃ ಸಾಂಬಷ್ಠಾ ಮಾಗಧಾಃ ಪೌಂಡ್ರಮದ್ರಕಾಃ ।
ಗಾಂಧಾರಾಃ ಶಾಕುನಾಃ ಪ್ರಾಚ್ಯಾಃ ಪಾರ್ವತೀಯಾ ವಸಾತಯಃ ॥೧೧॥

ಹಿಂಭಾಗದಲ್ಲಿ ಕಳಿಂಗರು, ಅಂಬಷ್ಠರು, ಮಗಧರು, ಪೌಂಡ್ರರು, ಮದ್ರಕರು, ಗಾಂಧಾರರು, ಶಾಕುನರು, ಪ್ರಾಚ್ಯರು, ಪರ್ವತೀಯರು ಮತ್ತು ವಸಾತಿಗಳು ನಿಂತರು.

ಪುಚ್ಛೇ ವೈಕರ್ತನಃ ಕರ್ಣಃ ಸಪುತ್ರಜ್ಞಾತಿಬಾಂಧವಃ ।
ಮಹತ್ಯಾ ಸೇನಯಾ ತಸ್ಥೌ ನಾನಾಧ್ವಜಸಮುತ್ಥಯಾ ॥ ೧೨ ॥

ಗರುಡನ ಹಿಂದಿನ ಗರಿಗಳ ಸ್ಥಾನದಲ್ಲಿ (ಬಾಲದ ಸ್ಥಾನದಲ್ಲಿ) ವೈಕರ್ತನನಾದ ಕರ್ಣನು ಪುತ್ರ-ದಾಯಾದಿ-ಬಾಂಧವರಿಂದ ಒಡಗೂಡಿ, ನಾನಾ ಧ್ವಜಗಳಿಂದ ಕೂಡಿದ ದೊಡ್ಡ ಸೈನ್ಯದ ಜೊತೆಯಲ್ಲಿ ನಿಂತನು.

ಜಯದ್ರಥೋ ಭೀಮರಥಃ ಸಂಯಾತಿಃ ಸಂಜಯೋ ಜಯಃ ।
ಭೂಮಿಂಜಯಶ್ಚ ವೃಷಕೋ ನೈಷಧಶ್ಚ ಮಹಾಬಲಃ ॥ ೧೩ ॥

ವೃತಾ ಬಲೇನ ಮಹತಾ ಬ್ರಹ್ಮಲೋಕಪುರಸ್ಕೃತಾಃ ।
ವ್ಯೂಹಸ್ಯ ಪರಿತೋ ರಾಜನ್ ಸ್ಥಿತಾ ಯುದ್ಧವಿಶಾರದಾಃ ॥ ೧೪ ॥

ಎಲೈ ರಾಜನೇ, ಯುದ್ಧವಿಶಾರದರಾದ ಜಯದ್ರಥ, ಭೀಮರಥ, ಸಂಯಾತಿ, ಸಂಜಯ, ಜಯ, ಭೂಮಿಂಜಯ, ವೃಷಕ, ಮಹಾಬಲನಾದ ನೈಷಧ ಇವರು ಬ್ರಾಹ್ಮಣರ ಆಶೀರ್ವಾದಗಳಿಂದ ಸತ್ಕೃತರಾಗಿ ದೊಡ್ಡ ಸೈನ್ಯದ ಜೊತೆಯಲ್ಲಿ ವ್ಯೂಹದ ಸುತ್ತಲೂ ನಿಂತರು.

ದ್ರೋಣೇನ ವಿಹಿತೋ ವ್ಯೂಹಃ ಪದಾತ್ಯಶ್ವರಥದ್ವಿಪೈಃ ।
ವಾತೋದ್ಧೂತಾರ್ಣವಾಕಾರಃ ಪ್ರವೃತ್ತ ಇವ ಲಕ್ಷ್ಯತೇ ॥ ೧೫ ॥

ದ್ರೋಣರಿಂದ ವ್ಯೂಹಿತವಾದ ಪದಾತಿ-ಅಶ್ವ-ರಥ-ಗಜಗಳಿಂದ ಕೂಡಿದ ವ್ಯೂಹವು ಚಲಿಸುವ ವಾಯುವಿನಿಂದ ಕ್ಷೋಭೆಗೊಂಡ ಸಮುದ್ರದ ಆಕಾರವನ್ನು ಹೊಂದಿದಂತೆ ಕಾಣುತ್ತಿದ್ದಿತು.

ತಸ್ಯ ಪಕ್ಷಪ್ರಪಕ್ಷೇಭ್ಯೋ ನಿಷ್ಕ್ರಾಮಂತಿ ಯುಯುತ್ಸವಃ ।
ಸವಿದ್ಯುತ್ಸ್ತನಿತಾ ಮೇಘಾ ದಿವಿ ದಿಗ್ಭ್ಯ ಇವೋಷ್ಣಗೇ ॥ ೧೬ ॥

ಉಷ್ಣಕಾಲವು ಕಳೆದು ಮಳೆಗಾಲವು ಬಂದಾಗ ದಿಕ್ಕು-ದಿಕ್ಕುಗಳಿಂದ ಗುಡುಗು, ಮಿಂಚುಗಳಿಂದ ಸಹಿತವಾದ ಮೋಡಗಳು ಬಂದಂತೆ ಯೋಧರು ಆ ವ್ಯೂಹದ ಪಕ್ಷ-ಪ್ರಪಕ್ಷಗಳಿಂದ ಹೊರಗೆ ಬರುತ್ತಿದ್ದರು.

ತಸ್ಯ ಪ್ರಾಗ್ಜ್ಯೋತಿಷೋ ಮಧ್ಯೇ ವಿಧಿವತ್ ಕಲ್ಪಿತಂ ಗಜಮ್ ।
ಆಸ್ಥಿತೋಽಭೂತ್ ಸ ಭಗವಾನ್ ಅಂಶುಮಾನುದಯಂ ಯಥಾ ॥೧೭॥

ಆ ವ್ಯೂಹದ ಮಧ್ಯದಲ್ಲಿ ಪ್ರಾಗ್ಜ್ಯೋತಿಷನು ಪೂಜ್ಯನಾದ ಸೂರ್ಯನು ಉದಯ ಪರ್ವತವನ್ನು ಏರಿದಂತೆ ಶಾಸ್ತ್ರೋಕ್ತ ರೀತಿಯಲ್ಲಿ ಸಿದ್ಧಪಡಿಸಿದ ಸುಪ್ರತೀಕ ಗಜವನ್ನು ಏರಿ ಸಿದ್ಧನಾದನು.

ಮಾಲ್ಯದಾಮವತಾ ರಾಜನ್ ಶ್ವೇತಚ್ಛತ್ರೇಣ ಧಾರ್ಯತಾ ।
ಕೃತ್ತಿಕಾಯೋಗಯುಕ್ತೇನ ಪೌರ್ಣಮಾಸ್ಯಾಮಿವೇಂದುನಾ ॥ ೧೮ ॥

ಎಲೈ ರಾಜನೇ, ಹೂವಿನ ಮಾಲೆಗಳಿಂದ ಅಲಂಕರಿಸಿದ ಶ್ವೇತಚ್ಛತ್ರವನ್ನು ಧರಿಸಿಕೊಂಡಿದ್ದ ಅವನು ಹುಣ್ಣಿಮೆಯ ರಾತ್ರಿಯಲ್ಲಿ ಕೃತ್ತಿಕಾ ನಕ್ಷತ್ರಯೋಗವುಳ್ಳ ಚಂದ್ರನಂತೆ ಶೋಭಿಸಿದನು.

ನೀಲಾಂಜನಚಯಪ್ರಖ್ಯೋ ಮದಾಂಧೋ ದ್ವಿರದೋ ಬಭೌ ।
ಅಭಿವೃಷ್ಟ್ಯಾ ಮಹಾಮೇಘೈಃ ಯಥಾ ಸ್ಯಾತ್ ಪರ್ವತೋ ಮಹಾನ್ ॥

ಕಪ್ಪುಕಾಡಿಗೆಯ ರಾಶಿಯಂತೆ ಇದ್ದ ಅವನ ಮದಾಂಧವಾದ ಗಜವು ಮಹಾಮೇಘಗಳಿಂದ ಮಳೆಯು ಸುರಿಸಲ್ಪಟ್ಟ ದೊಡ್ಡ ಪರ್ವತದಂತೆ ಶೋಭಿಸಿತು.

ನಾನಾನೃಪತಿಭಿರ್ವೀರ್ಯೈಃ ವಿವಿಧಾಯುಧಭೂಷಣೈಃ ।
ಸಮನ್ವಿತಃ ಪಾರ್ವತೀಯೈಃ ಶಕ್ರೋ ದೇವಗಣೈರಿವ ॥ ೨೦ ॥

ವಿವಿಧವಾದ ಆಯುಧಗಳನ್ನು ಹಿಡಿದ, ವಿವಿಧ ಭೂಷಣಗಳಿಂದ ಅಲಂಕೃತರಾದ, ವೀರರಾದ ನಾನಾ ರಾಜರಿಂದಲೂ ಮತ್ತು ಪರ್ವತ ಪ್ರದೇಶದ ವೀರರಿಂದಲೂ ದೇವಗಣಗಳಿಂದ ಕೂಡಿದ ಇಂದ್ರನಂತೆ ಸಮನ್ವಿತವಾದ ಆ ವ್ಯೂಹವು ಬಹಳವಾಗಿ ಶೋಭಿಸಿತು.

ತತೋ ಯುಧಿಷ್ಠಿರಃ ಪ್ರೇಕ್ಷ್ಯ ವ್ಯೂಹಂ ತಮತಿಮಾನುಷಮ್ ।
ಅಜಯ್ಯಮರಿಭಿಃ ಸಂಖೇ ಪಾರ್ಷತಂ ವಾಕ್ಯಮಬ್ರವೀತ್ ॥ ೨೧ ॥

ಆಗ ಯುಧಿಷ್ಠಿರನು ಅತಿಮಾನುಷವಾದ, ಶತ್ರುಗಳಿಂದ ಜಯಿಸಲು ಅಸಾಧ್ಯವಾದ ಆ ವ್ಯೂಹವನ್ನು ನೋಡಿ, ರಣರಂಗದಲ್ಲಿ ಧೃಷ್ಟದ್ಯುಮ್ನನನ್ನು ಕುರಿತು ಹೇಳಿದನು.

ಬ್ರಾಹ್ಮಣಸ್ಯ ವಶಂ ನಾದ್ಯ ಗಚ್ಛೇಯಂ ಪುರುಷರ್ಷಭ ।
ಪಾರಾವತಸವರ್ಣಾಶ್ವ ತಥಾ ನೀತಿರ್ವಿಧೀಯತಾಮ್ ॥ ೨೨ ॥

ಪುರುಷಶ್ರೇಷ್ಠನೇ, ಪಾರಿವಾಳದ ಬಣ್ಣದ ಅಶ್ವವನ್ನು ಹೊಂದಿದವನೇ, ಈ ದಿನ ನಾನು ಬ್ರಾಹ್ಮಣರಾದ ದ್ರೋಣರ ವಶಕ್ಕೆ ಸಿಲುಕದಂತೆ ಯುದ್ಧನೀತಿಯನ್ನು ನಿರೂಪಿಸು (ಎಂದು ಹೇಳಿದನು).

ಧೃಷ್ಟದ್ಯುಮ್ನಃ

ದ್ರೋಣಸ್ಯ ಯುದ್ಧ್ಯಮಾನಸ್ಯ ವಶಂ ನೈಷ್ಯಸಿ ಸುವ್ರತ ।
ಅಹಮಾವಾರಯಿಷ್ಯಾಮಿ ದ್ರೋಣಮದ್ಯ ಸಹಾನುಗಃ ॥ ೨೩ ॥

ಧೃಷ್ಟದ್ಯುಮ್ನ– ಎಲೈ ಸುವ್ರತನೇ, ನೀನು ಯುದ್ಧಮಾಡುವ ದ್ರೋಣರಿಗೆ ವಶನಾಗುವುದಿಲ್ಲ. ಈ ದಿನ ನಾನು ನನ್ನ ಅನುಯಾಯಿಗಳೊಂದಿಗೆ ದ್ರೋಣರನ್ನು ತಡೆಯುವೆನು.

ಮಯಿ ಜೀವತಿ ಕೌಂತೇಯ ನೋದ್ವೇಗಂ ಕರ್ತುಮರ್ಹಸಿ ।
ನ ಹಿ ದ್ರೋಣೋ ರಣೇ ಶಕ್ತೋ ವಿಜೇತುಂ ಮಾಂ ಕಥಂಚನ ॥ ೨೪ ॥

ಎಲೈ ಕೌಂತೇಯನೇ, ನಾನು ಬದುಕಿರುವಾಗ ನೀನು ಉದ್ವೇಗವನ್ನು ಹೊಂದುವ ಕಾರಣವಿಲ್ಲ. ದ್ರೋಣರು ಯಾವ ರೀತಿಯಿಂದಲೂ ಯುದ್ಧದಲ್ಲಿ ನನ್ನನ್ನು ಗೆಲ್ಲಲು ಶಕ್ತರಲ್ಲ.

ಸಂಜಯಃ

ಏವಮುಕ್ತ್ವಾ ಕಿರನ್ ಬಾಣಾನ್ ದ್ರುಪದಸ್ಯ ಸುತೋ ಬಲೀ ।
ಪಾರಾವತಸವರ್ಣಾಶ್ವಃ ಸ್ವಯಂ ದ್ರೋಣಮಭಿದ್ರವತ್ ॥ ೨೫ ॥

ಸಂಜಯ– ಹೀಗೆ ಹೇಳಿ ದ್ರುಪದನ ಪುತ್ರನೂ, ಬಲಿಷ್ಠನೂ, ಪಾರಾವತವರ್ಣದ ಅಶ್ವವನ್ನು ಹೊಂದಿದವನೂ ಆದ ಧೃಷ್ಟದ್ಯುಮ್ನನು ಬಾಣಗಳನ್ನು ಪ್ರಯೋಗಿಸುತ್ತಾ ಸ್ವತಃ ದ್ರೋಣರ ಕಡೆಗೆ ಮುನ್ನುಗ್ಗಿದನು.

ಅನಿಷ್ಟದರ್ಶನಂ ದೃಷ್ಟ್ವಾ ಧೃಷ್ಟದ್ಯುಮ್ನಮುಪಸ್ಥಿತಮ್ ।
ಕ್ಷಣೇನೈವಾಭವದ್ ದ್ರೋಣೋ ನಾತಿಹೃಷ್ಟಮನಾ ಇವ ॥ ೨೬ ॥

ಧೃಷ್ಟದ್ಯುಮ್ನನನ್ನು ನೋಡಿ ತಮಗೆ ಅನಿಷ್ಟದರ್ಶನವೆಂದು ತಿಳಿದು ಒಂದು ಕ್ಷಣದಲ್ಲಿ ದ್ರೋಣರು ವಿಷಾದಗೊಂಡವರಂತೆ ಆದರು.

ಸ ಹಿ ಜಾತೋ ಮಹಾರಾಜ ದ್ರೋಣಸ್ಯ ನಿಧನಂ ಪ್ರತಿ ।
ಮರ್ತ್ಯಧರ್ಮತಯಾ ತಸ್ಮಾದ್ ಭಾರದ್ವಾಜೋ ವ್ಯಮುಹ್ಯತ ।
ನಾಶಕತ್ ತತ್ರ ತಂ ಕಿಂಚಿದನೀಕಂ ಪ್ರತಿವೀಕ್ಷಿತುಮ್ ॥ ೨೭ ॥

ಎಲೈ ಮಹಾರಾಜನೇ, ಧೃಷ್ಟದ್ಯುಮ್ನನು ದ್ರೋಣರ ಮರಣಕ್ಕಾಗಿ ಜನಿಸಿದವನಷ್ಟೆ? ಆದ್ದರಿಂದ ದ್ರೋಣರು ಮೃತ್ಯುಧರ್ಮವನ್ನು ಹೊಂದಿದವರಾದ್ದರಿಂದ ಮೋಹಕ್ಕೆ ಒಳಗಾದರು. ಅವರಿಗೆ ಆ ಸೈನ್ಯವನ್ನು ನೋಡಲು ಸಾಧ್ಯವಾಗಲಿಲ್ಲ.

ತತಃ ಕಿರನ್ನಿಷೂಂಸ್ತೀಕ್ಷ್ಣಾನ್ ದ್ರುಪದಸ್ಯ ವರೂಥಿನೀಮ್ ।
ಭಾರದ್ವಾಜೋ ಯಯೌ ತೂರ್ಣಂ ಪಾರ್ಷತಂ ವರ್ಜಯನ್ ಯುಧಿ ॥

ಆಗ ದ್ರೋಣರು ಧೃಷ್ಟದ್ಯುಮ್ನನನ್ನು ಬಿಟ್ಟು ಯುದ್ಧದಲ್ಲಿ ದ್ರುಪದನ ಸೈನ್ಯದ ಮೇಲೆ ತೀಕ್ಷ್ಣವಾದ ಬಾಣಗಳನ್ನು ಪ್ರಯೋಗಿಸುತ್ತಾ ಶೀಘ್ರವಾಗಿ ಮುಂದೆ ಸಾಗಿದರು.

ದ್ರುಪದಸ್ಯ ಮಹತ್ ಸೈನ್ಯಂ ವಾರಯಾಮಾಸ ಬ್ರಾಹ್ಮಣಃ ॥ ೨೯ ॥ ।

ತಂ ತು ಸಂಪ್ರೇಕ್ಷ್ಯ ತೇ ಪುತ್ರೋ ದುರ್ಮುಖಃ ಶತ್ರುಕರ್ಶನಃ ।
ಪ್ರಿಯಂ ಚಿಕೀರ್ಷುರ್ದ್ರೋಣಸ್ಯ ಧೃಷ್ಟದ್ಯುಮ್ನಮವಾರಯತ್ ॥ ೩೦ ॥

ಬ್ರಾಹ್ಮಣರಾದ ಅವರು ದ್ರುಪದನ ದೊಡ್ಡ ಸೈನ್ಯವನ್ನು ನಿವಾರಿಸಿದರು. ಅದನ್ನು ನೋಡಿ ನಿನ್ನ ಪುತ್ರನಾದ, ಶತ್ರುಕರ್ಶನನಾದ ದುರ್ಮುಖನು ದ್ರೋಣರಿಗೆ ಪ್ರಿಯವನ್ನುಂಟು ಮಾಡಲು ಬಯಸಿ ಧೃಷ್ಟದ್ಯುಮ್ನನನ್ನು ತಡೆದನು.

ಸ ಸಂಪ್ರಹಾರಸ್ತುಮುಲಃ ಸುಘೋರಃ ಸಮಪದ್ಯತ ।
ಪಾರ್ಷತಸ್ಯ ಚ ಶೂರಸ್ಯ ದುರ್ಮುಖಸ್ಯ ಚ ಸಂಯುಗೇ ॥ ೩೧ ॥

ಧೃಷ್ಟದ್ಯುಮ್ನನಿಗೂ ಮತ್ತು ಶೂರನಾದ ದುರ್ಮುಖನಿಗೂ ನಡೆದ ಯುದ್ಧವು ತೀವ್ರವೂ ಮತ್ತು ಅತ್ಯಂತ ಘೋರವೂ ಆಗಿದ್ದಿತು.

ಪಾರ್ಷತಃ ಶರಜಾಲೇನ ಕ್ಷಿಪ್ರಂ ಪ್ರಚ್ಛಾದ್ಯ ದುರ್ಮುಖಮ್ ।
ಭಾರದ್ವಾಜಂ ಶರೌಘೇಣ ಮಹತಾ ಸಮವಾರಯತ್ ॥ ೩೨ ॥

ಧೃಷ್ಟದ್ಯುಮ್ನನು ತನ್ನ ಬಾಣಸಮೂಹದಿಂದ ಶೀಘ್ರವಾಗಿ ದುರ್ಮುಖನನ್ನು ಆಚ್ಛಾದಿಸಿ, ದೊಡ್ಡ ಬಾಣಗಳ ಸಮೂಹದಿಂದ ದ್ರೋಣರನ್ನು ತಡೆದನು.

ದ್ರೋಣಮಾವಾರಿತಂ ದೃಷ್ಟ್ವಾ ಭೃಶಂ ಯತ್ತಸ್ತವಾತ್ಮಜಃ ।
ನಾನಾಲಿಂಗೈಃ ಶರವ್ರಾತೈಃ ಪಾರ್ಷತಂ ಸಮಮೋಹಯತ್ ॥ ೩೩ ॥

ದ್ರೋಣರು ತಡೆಯಲ್ಪಟ್ಟುದನ್ನು ನೋಡಿ ನಿನ್ನ ಪುತ್ರನು ಬಹಳ ಪ್ರಯತ್ನಪಟ್ಟು ಅನೇಕ ಆಕಾರಗಳನ್ನು ಹೊಂದಿದ ಬಾಣಗಳ ಸಮೂಹದಿಂದ ಧೃಷ್ಟದ್ಯುಮ್ನನಿಗೆ ಮೋಹವನ್ನುಂಟು ಮಾಡಿದನು.

ತಯೋರ್ವಿಷಕ್ತಯೋಃ ಸಂಖೇ ಪಾಂಚಾಲಕುರುಮುಖ್ಯಯೋಃ ॥ ೩೪ ॥

ದ್ರೋಣೋ ಯೌಧಿಷ್ಠಿರಂ ಸೈನ್ಯಂ ವ್ಯಧಮದ್ ಬಹುಧಾ ಶರೈಃ ।
ಅನಿಲೇನ ಯಥಾಽಭ್ರಾಣಿ ವಿಚ್ಛಿನ್ನಾನಿ ಸಮಂತತಃ ।
ತಥಾ ಸೈನ್ಯಾನಿ ಪಾಂಡೂನಾಂ ದೃಶ್ಯಂತೇ ಸ್ಮ ಕ್ವಚಿತ್ ಕ್ವಚಿತ್ ॥ ೩೫ ॥

ಪಾಂಚಾಲ-ಕುರುಮುಖ್ಯರಾದ ಅವರಿಬ್ಬರೂ ಯುದ್ಧದಲ್ಲಿ ಪರಸ್ಪರವಾಗಿ ಸಂಸಕ್ತರಾಗಿರಲು, ದ್ರೋಣರು ಯುಧಿಷ್ಠಿರನ ಸೈನ್ಯವನ್ನು ತಮ್ಮ ಬಾಣಗಳಿಂದ ಬಹುರೀತಿಯಲ್ಲಿ ಚದುರಿಸಿದರು. ವಾಯುವಿನಿಂದ ಮೋಡಗಳು ಚದುರಿಹೋದಂತೆ ಪಾಂಡವರ ಸೈನ್ಯಗಳು ಅಲ್ಲಲ್ಲಿ ಕಂಡುಬಂದವು.

ಮುಹೂರ್ತಮಿವ ತದ್ ಯುದ್ಧಮಾಸೀನ್ಮಧುರದರ್ಶನಮ್ ।
ತತ ಉನ್ಮತ್ತವದ್ ರಾಜನ್ ನಿರ್ಮರ್ಯಾದಮವರ್ತತ ॥ ೩೬ ॥

ರಾಜನೇ, ಒಂದುಮುಹೂರ್ತದ ಕಾಲ ಆ ಯುದ್ಧವು ನೋಡಲು ಮಧುರವಾಗಿದ್ದಿತು. ಅನಂತರ ಹುಚ್ಚರಂತೆ ಎಲ್ಲೆಯನ್ನು ಮೀರಿದ ಯುದ್ಧವು ನಡೆಯಿತು.

ನೈವ ಖಂ ನ ದಿಶೋ ಭೂಮಿರ್ಬಭಾಸೇ ನ ಚ ಭಾಸ್ಕರಃ ।
ನೈವ ಸ್ವೇ ನ ಪರೇ ರಾಜನ್ ವ್ಯಜ್ಞಾಯಂತ ಪರಸ್ಪರಮ್ ॥ ೩೭ ॥

ಅನುಮಾನೇನ ಸಂಜ್ಞಾಭಿರ್ಯುದ್ಧಂ ತತ್ ಸಮವರ್ತತ ॥ ೩೮ ॥

ಭೂಮಿಯಾಗಲೀ, ಆಕಾಶವಾಗಲೀ, ದಿಕ್ಕುಗಳಾಗಲೀ, ಸೂರ್ಯನಾಗಲೀ ಕಾಣಿಸುತ್ತಿರಲಿಲ್ಲ. ತಮ್ಮವರಾಗಲೀ, ಶತ್ರುಗಳಾಗಲೀ ಪರಸ್ಪರವಾಗಿ ತಿಳಿದು ಬರುತ್ತಿರಲಿಲ್ಲ. ಊಹೆಗಳಿಂದ ಮತ್ತು ಸಂಜ್ಞೆಗಳಿಂದ ಯುದ್ಧವು ನಡೆಯಿತು.

ಚೂಡಾಮಣಿಷು ನಿಷ್ಕೇಷು ಭೂಷಣೇಷ್ವಪಿಚರ್ಮಸು ।
ತೇಷಾಮಾದಿತ್ಯವರ್ಣಾಭಾ ಮರೀಚ್ಯಃ ಪ್ರಚಕಾಶಿರೇ ॥ ೩೯ ॥

ಶಿರೋಭೂಷಣಗಳಲ್ಲಿ, ನಿಷ್ಕಗಳಲ್ಲಿ, ಉಳಿದ ಭೂಷಣಗಳಲ್ಲಿ, ಖಡ್ಗ ಚರ್ಮಗಳಲ್ಲಿ ಸೂರ್ಯವರ್ಣದ ಕಿರಣಗಳು ಮಾತ್ರ ಪ್ರಕಾಶಿಸಿದವು.

ತತ್ ಪ್ರಕೀರ್ಣಪತಾಕಾನಾಂ ರಥವಾಜಿನೃಹಸ್ತಿನಾಮ್ ।
ಬಲಾಕಾಸದೃಶಾಭ್ರಂ ತದ್ ದದೃಶೇ ರೂಪಮಾಹವೇ ॥ ೪೦ ॥

ಚೆಲ್ಲಾಡಿದ ಪತಾಕೆಗಳ ಮತ್ತು ರಥ-ಅಶ್ವ-ಪದಾತಿ-ಗಜಗಳ ಶರೀರಗಳಿಂದ ಕೂಡಿದ ರಣರಂಗದ ರೂಪವು ಬಲಾಕಪಕ್ಷಿಗಳಿಂದ ಕೂಡಿದ ಮೋಡಗಳಂತೆ ಕಂಡುಬಂದಿತು.

ನರಾನೇವ ನರಾ ಜಘ್ನುಃ ಜಘ್ನುರುಗ್ರಾ ಹಯಾ ಹಯಾನ್ ।
ರಥಿನೋ ರಥಿನೋ ಜಘ್ನುರ್ವಾರಣಾ ವರವಾರಣಾನ್ ॥ ೪೧ ॥

ಪದಾತಿಗಳನ್ನೇ ಪದಾತಿಗಳು ಕೊಂದರು. ಉಗ್ರವಾದ ಹಯಗಳು ಹಯಗಳನ್ನು ಕೊಂದವು. ರಥಿಕರು ರಥಿಕರನ್ನು, ಗಜಗಳು ಶ್ರೇಷ್ಠ ಗಜಗಳನ್ನು ಕೊಂದವು.

ಸಮುಚ್ಛ್ರಿತಪತಾಕಾನಾಂ ದ್ವಿಪಾನಾಂ ಪರಮದ್ವಿಪೈಃ ।
ಕ್ಷಣೇನ ತುಮುಲೋ ಘೋರಃ ಸಂಗ್ರಾಮಃ ಸಮಜಾಯತ ॥ ೪೨ ॥

ಪತಾಕೆಗಳನ್ನು ಎತ್ತಿಹಿಡಿದ ಗಜಗಳಿಗೆ ಪ್ರತಿಗಜಗಳ ಜೊತೆಯಲ್ಲಿ ಒಂದು ಕ್ಷಣದಲ್ಲಿ ತೀವ್ರವೂ, ಘೋರವೂ ಆದ ಯುದ್ಧವು ಉಂಟಾಯಿತು.

ತೇಷಾಂ ಸಂಸಕ್ತಗಾತ್ರಾಣಾಂ ಕರ್ಷತಾಮಿತರೇತರಮ್ ।
ದಂತಸಂಘಾತಸಂಘರ್ಷಾತ್ ಸಧೂಮೋಽಗ್ನಿರಜಾಯತ ॥ ೪೩ ॥

ಅವು ತಮ್ಮ ಶರೀರಗಳನ್ನು ಪರಸ್ಪರವಾಗಿ ಉಜ್ಜಿ, ಪರಸ್ಪರವಾಗಿ ಎಳೆಯುವಾಗ ಅವುಗಳ ದಂತಗಳ ಸಂಘರ್ಷದಿಂದ ಧೂಮಸಹಿತವಾದ ಅಗ್ನಿಯು ಉಂಟಾಯಿತು.

ವಿಪ್ರಕೀರ್ಣಪತಾಕಾಸ್ತೇ ವಿಷಾಣಜನಿತಾಗ್ನಯಃ ।
ಬಭುರಾಕಾಶಮಾವಾರ್ಯ ಸವಿದ್ಯುತ ಇವಾಂಬುದಾಃ ॥ ೪೪ ॥

ಪತಾಕೆಗಳು ಅಸ್ತವ್ಯಸ್ತವಾಗಿ ದಂತಗಳಿಂದ ಅಗ್ನಿಯನ್ನು ಸೃಷ್ಟಿಸುತ್ತಿದ್ದ ಆ ಗಜಗಳು ಆಕಾಶವನ್ನು ಆವರಿಸಿ ಮಿಂಚಿನಿಂದ ಕೂಡಿದ ಮೋಡಗಳಂತೆ ಶೋಭಿಸಿದವು.

ವಿಕ್ಷರದ್ಭಿರ್ನದದ್ಭಿಶ್ಚ ನಿಪತದ್ಭಿಶ್ಚ ವಾರಣೈಃ ।
ಸಂಬಭೂವ ಮಹೀ ಕೀರ್ಣಾ ಮೇಘೈರ್ದ್ಯೌರಿವ ವಾರ್ಷಿಕೀ ॥ ೪೫ ॥

ರಕ್ತವನ್ನು ಸುರಿಸುತ್ತಾ, ಗರ್ಜಿಸುತ್ತಾ ಬಿದ್ದ ಗಜಗಳಿಂದ ತುಂಬಿ ಹೋದ ಭೂಮಿಯು ಮಳೆಗಾಲದಲ್ಲಿ ಮೇಘಗಳಿಂದ ಆವೃತವಾದ ಆಕಾಶದಂತಾಯಿತು.

ತೇಷಾಮಾಹನ್ಯಮಾನಾನಾಂ ಬಾಣತೋಮರವೃಷ್ಟಿಭಿಃ ।
ವಾರಣಾನಾಂ ರವೋ ಜಜ್ಞೇ ಮೇಘಾನಾಮಿವ ಸಂಪ್ಲವಃ ॥ ೪೬ ॥

ಬಾಣ, ತೋಮರಗಳ ಮಳೆಯಿಂದ ಹೊಡೆಯಲ್ಪಡುವ ಆ ಗಜಗಳ ನಾದವು ಮೇಘಗಳ ಸಮೂಹದ ನಾದದಂತೆ ಇದ್ದಿತು.

ತೋಮರಾಭಿಹತಾಃ ಕೇಚಿದ್ ಬಾಣೈಶ್ಚ ಪರಮದ್ವಿಪಾಃ ।
ವಿತ್ರಸ್ತಾಃ ಸರ್ವಶಬ್ದಾನಾಂ ಶಬ್ದಮೇವಾಪರೇಽಸೃಜನ್ ॥ ೪೭ ॥

ತೋಮರಗಳಿಂದ ಹೊಡೆಯಲ್ಪಟ್ಟ ಕೆಲವು ಗಜಗಳು, ಬಾಣಗಳಿಂದ ಹೊಡೆಯಲ್ಪಟ್ಟ ಶ್ರೇಷ್ಠ ಗಜಗಳು ಮತ್ತು ಹೆದರಿದ ಕೆಲವು ಗಜಗಳು ಎಲ್ಲ ಶಬ್ದಗಳಿಂದಲೂ ಮಿಗಿಲಾದ ಗರ್ಜನೆಗಳನ್ನೇ ಮಾಡಿದವು.

ವಿಷಾಣಾಭಿಹತಾಃ ಕೇಚಿತ್ ಕೇಚಿತ್ ತತ್ರ ಗಜಾ ಗಜೈಃ ।
ಚಕ್ರುರಾರ್ತಸ್ವರಂ ಘೋರಮುತ್ಪಾತಜಲದಾ ಇವ ॥ ೪೮ ॥

ಪ್ರತಿಗಜಗಳ ದಂತದಿಂದ ಹೊಡೆಯಲ್ಪಟ್ಟ ಕೆಲವು ಗಜಗಳು ಉತ್ಪಾತಕಾಲದ ಮೋಡಗಳಂತೆ ಘೋರವಾದ ಆರ್ತಸ್ವರವನ್ನು ಮಾಡಿದವು.

ಪ್ರತೀಪಂ ಹ್ರಿಯಮಾಣಾಶ್ಚ ವಾರಣಾ ವರವಾರಣೈಃ ।
ಉನ್ಮಥ್ಯ ಪುನರಾಜಹ್ರುಃ ಪ್ರೇಷಿತಾಃ ಪರಮಾಂಕುಶೈಃ ॥ ೪೯ ॥

ಶ್ರೇಷ್ಠವಾದ ಗಜಗಳಿಂದ ಶತ್ರುಗಳ ಸಮೀಪಕ್ಕೆ ಎಳೆದೊಯ್ಯಲ್ಪಡುತ್ತಿದ್ದ ಗಜಗಳು ಶ್ರೇಷ್ಠವಾದ ಅಂಕುಶಗಳಿಂದ ಪ್ರೇರಿತವಾಗಿ ಪ್ರತಿಗಜಗಳನ್ನು ಮರ್ದಿಸಿ ಅವುಗಳನ್ನು ಹಿಂದಕ್ಕೆ ಎಳೆತಂದವು.

ಮಹಾಮಾತ್ರಾ ಮಹಾಮಾತ್ರೈಃ ತಾಡಿತಾಃ ಶರತೋಮರೈಃ ।
ಗಜೇಭ್ಯಃ ಪೃಥಿವೀಂ ಜಗ್ಮುಃ ಮುಕ್ತಪ್ರಹರಣಾಂಕುಶಾಃ ॥ ೫೦ ॥

ಗಜಾರೋಹಿಗಳು ಗಜಾರೋಹಿಗಳಿಂದ, ಶರ-ತೋಮರಗಳಿಂದ ಹೊಡೆಯಲ್ಪಟ್ಟು ಆಯುಧ ಮತ್ತು ಅಂಕುಶಗಳನ್ನು ತ್ಯಜಿಸಿ, ಗಜಗಳಿಂದ ಭೂಮಿಯ ಮೇಲೆ ಬಿದ್ದರು.

ನಿರ್ಮನುಷ್ಯಾಶ್ಚ ಮಾತಂಗಾ ವಿನದಂತಸ್ತತಸ್ತತಃ ।
ಛಿನ್ನಾಭ್ರಾಣೀವ ಸಂಪೇತುಃ ಸಂಪ್ರಮಥ್ಯ ಪರಸ್ಪರಮ್ ॥ ೫೧ ॥

ಗಜಾರೋಹಿಗಳಿಂದ ರಹಿತವಾದ ಗಜಗಳು ಅಲ್ಲಲ್ಲಿ ನಾದವನ್ನು ಮಾಡುತ್ತಾ, ಪರಸ್ಪರವಾಗಿ ಮರ್ದಿಸಿ, ಕತ್ತರಿಸಲ್ಪಟ್ಟ ಮೋಡಗಳಂತೆ ಬಿದ್ದವು.

ಹತಾಃ ಪರಿಪತಂತಿ ಸ್ಮ ಯಂತ್ರಿತಾಃ ಪತಿತಾ ಭುವಿ ।
ದಿಶೋ ಜಗ್ಮುರ್ಮಹಾನಾಗಾ ವಾಯುನಾ ಖಚರಾ ಇವ ॥ ೫೨ ॥

ಮೃತವಾಗಿ ಕೆಲವು ಗಜಗಳು ಬಿದ್ದವು. ಯಂತ್ರವನ್ನು ಹೊಂದಿದ ಕೆಲವು ಗಜಗಳು ಬಿದ್ದವು. ವಾಯುವೇಗಕ್ಕೆ ಮೋಡಗಳು ಹೋದಂತೆ ಕೆಲವು ದೊಡ್ಡ ಗಜಗಳು ದಿಕ್ಕು-ದಿಕ್ಕುಗಳಿಗೆ ಓಡಿದವು.

ತಾಡಿತಾಸ್ತಾಡ್ಯಮಾನಾಶ್ಚ ತೋಮರರ್ಷ್ಟಿಪರಶ್ವಧೈಃ ।
ಪೇತುರಾರ್ತಸ್ವನಂ ಕೃತ್ವಾ ತದಾ ವಿಶಸನೇ ಗಜಾಃ ॥ ೫೩ ॥

ಆಗ ರಣರಂಗದಲ್ಲಿ ತೋಮರ-ಋಷ್ಟಿ-ಪರಶ್ವಧಗಳಿಂದ ಹೊಡೆಯಲ್ಪಟ್ಟ ಮತ್ತು ಹೊಡೆಯಲ್ಪಡುತ್ತಿರುವ ಗಜಗಳು ಆರ್ತಧ್ವನಿಯನ್ನು ಮಾಡಿ ಬಿದ್ದವು.

ತೇಷಾಂ ಶೈಲೋಪಮೈಃ ಕಾಯೈರ್ನಿಪತದ್ಭಿಃ ಸಮಂತತಃ ।
ಆಹತಾ ಸಹಸಾ ಭೂಮಿಃ ಚಕಂಪೇ ಚ ನನಾದ ಚ ॥ ೫೪ ॥

ಕೆಳಗೆ ಬೀಳುವ ಪರ್ವತಪ್ರಾಯವಾದ ಅವುಗಳ ಶರೀರಗಳಿಂದ ಎಲ್ಲ ಕಡೆಯಲ್ಲಿಯೂ ಹೊಡೆಯಲ್ಪಟ್ಟ ಭೂಮಿಯು ತಕ್ಷಣ ನಡುಗಿ ಗುಡುಗಿತು.

ಸಾದಿತೈಃ ಸಗಜಾರೋಹೈಃ ಸಪತಾಕೈಃ ಸತೋಮರೈಃ ।
ತೈರ್ಗಜೈಃ ಶುಶುಭೇ ಭೂಮಿರ್ವಿಕೀರ್ಣೈರಿವ ಪರ್ವತೈಃ ॥ ೫೫ ॥

ಗಜಾರೋಹಿಗಳಿಂದ ಕೂಡಿ, ಪತಾಕೆ ಮತ್ತು ತೋಮರಗಳಿಂದ ಕೂಡಿ ಮೃತವಾಗಿ ಬಿದ್ದ ಆ ಗಜಗಳಿಂದ ಭೂಮಿಯು ಚೆಲ್ಲಾಡಿದ ಪರ್ವತಗಳಿಂದ ಕೂಡಿದ ಭೂಮಿಯಂತೆ ಕಂಗೊಳಿಸಿತು.

ಗಜೈರ್ಗಾತ್ರವರೈಃ ಕ್ಷುಣ್ಣಾ ವಿಷಾಣೈಶ್ಚ ನಿಪಾತಿತಾಃ ।
ಗಜಾ ನಿಪತಿತಾರೋಹಾ ವಿಕೀರ್ಣಾಂಕುಶತೋಮರಾಃ ॥ ೫೬ ॥

ಗಜಗಳ ಶ್ರೇಷ್ಠ ಶರೀರಗಳಿಂದ ಪುಡಿಮಾಡಲ್ಪಟ್ಟ, ದಂತಗಳಿಂದ ಕೆಡವಲ್ಪಟ್ಟ ಪ್ರತಿಗಜಗಳು ಗಜಾರೋಹಿಗಳು ಕೆಳಗೆ ಬಿದ್ದು, ಅಂಕುಶ, ಧ್ವಜ ತೋಮರಗಳೂ ಚೆಲ್ಲಾಡಿ ಅವೂ ಭೂಮಿಯ ಮೇಲೆ ಬಿದ್ದವು.

ಗಜಸ್ಥಾಶ್ಚ ಮಹಾಮಾತ್ರಾ ನಿರ್ಭಿನ್ನಹೃದಯಾರ್ರಣೇ ।
ರಥಿಭಿಃ ಪತಿತಾ ಭಲ್ಲೈಃ ವಿಕೀರ್ಣಾಂಕುಶತೋಮರೈಃ ॥ ೫೭ ॥

ಗಜಗಳನ್ನು ಏರಿದ ಮಹಾಮಾತ್ರರು ರಥಿಕರಿಂದ ಭಲ್ಲಗಳಿಂದ ಹೊಡೆಯಲ್ಪಟ್ಟು ರಣರಂಗದಲ್ಲಿ ನಿರ್ಭಿನ್ನ ಹೃದಯರಾಗಿ ಅಂಕುಶ, ತೋಮರಗಳನ್ನು ತ್ಯಜಿಸಿ ನೆಲದ ಮೇಲೆ ಬಿದ್ದರು.

ಕ್ರೌಂಚವನ್ನಿನದಂತೋಽನ್ಯೇ ನಾರಾಚಾಭಿಹತಾ ಗಜಾಃ ।
ಪರಾನ್ ಸ್ವಾಂಶ್ಚಾಪಿ ಮೃದ್ನಂತಃ ಪರಿಪೇತುರ್ದಿಶೋ ದಶ ॥ ೫೮ ॥

ನಾರಾಚಗಳಿಂದ ಹೊಡೆಯಲ್ಪಟ್ಟ ಕೆಲವು ಗಜಗಳು ಕ್ರೌಂಚಪಕ್ಷಿಯಂತೆ ನಾದವನ್ನು ಮಾಡುತ್ತಾ, ತಮ್ಮವರನ್ನೂ ಮತ್ತು ಶತ್ರುಗಳನ್ನೂ ಮರ್ದಿಸುತ್ತಾ, ಹತ್ತು ದಿಕ್ಕುಗಳಲ್ಲಿಯೂ ಓಡಿಹೋದವು.

ಗಜಾಶ್ವರಥಸಂಘಾನಾಂ ಶರೀರೌಘೈಃ ಸಮಾವೃತಾ ।
ಬಭೂವ ಪೃಥಿವೀ ರಾಜನ್ ಮಾಂಸಶೋಣಿತಕರ್ದಮಾ ॥ ೫೯ ॥

ರಾಜನೇ, ಗಜಾಶ್ವ-ರಥ ಸಮೂಹಗಳ ಶರೀರಗಳಿಂದ ಆವೃತವಾದ ಭೂಮಿಯು ಮಾಂಸ-ರಕ್ತಗಳ ಕೆಸರುಳ್ಳದ್ದಾಯಿತು.

ಪ್ರಮಥ್ಯ ಚ ವಿಷಾಣಾಗ್ರೈಃ ಸಮುತ್ಕ್ಷಿಪ್ಯ ಚ ವಾರಣೈಃ ।
ಸಚಕ್ರಾಶ್ಚ ವಿಚಕ್ರಾಶ್ಚ ರಥೈರೇವ ರಥಾ ಹತಾಃ ॥ ೬೦ ॥

ಗಜಗಳು ತಮ್ಮ ದಂತದ ತುದಿಗಳಿಂದ ಮರ್ದಿಸಿ, ಚಕ್ರಸಹಿತವಾದ ಮತ್ತು ಚಕ್ರರಹಿತವಾದ ರಥಗಳನ್ನು ಎತ್ತಿ ಅವುಗಳಿಂದ ರಥಗಳನ್ನೇ ಹೊಡೆದವು.

ರಥಾಶ್ಚ ರಥಿಭಿರ್ಹೀನಾ ನಿರ್ಮನುಷ್ಯಾಶ್ಚ ವಾಜಿನಃ ।
ಹತಾರೋಹಾಶ್ಚ ಮಾತಂಗಾ ದಿಶೋ ಜಗ್ಮುಃ ಶರಾತುರಾಃ ॥ ೬೧ ॥

ರಥಿಕರಿಂದ ಹೀನವಾದ ರಥಗಳೂ, ಅಶ್ವಾರೋಹಿಗಳಿಂದ ರಹಿತವಾದ ಅಶ್ವಗಳೂ, ಗಜಾರೋಹಿಗಳಿಂದ ರಹಿತವಾದ ಗಜಗಳೂ ಬಾಣದ ವೇದನೆಯಿಂದ ದಿಕ್ಕು-ದಿಕ್ಕುಗಳಿಗೆ ಓಡಿಹೋದವು.

ಜಘಾನ ಪಿತರಂ ಪುತ್ರಃ ಪಿತಾ ಪುತ್ರಮತಾಡಯತ್ ।
ಇತ್ಯಾಸೀತ್ ತುಮುಲಂ ಯುದ್ಧಂ ನ ಪ್ರಾಜ್ಞಾಯತ ಕಿಂಚನ ॥ ೬೨ ॥

ಪುತ್ರನು ತಂದೆಯನ್ನು ಹೊಡೆದನು, ತಂದೆಯು ಪುತ್ರನನ್ನು ಹೊಡೆದನು. ಹೀಗೆ ತೀವ್ರವಾದ ಯುದ್ಧವು ನಡೆಯಿತು. ಯಾವುದೂ ತಿಳಿಯಲಿಲ್ಲ.

ಆಗುಲ್ಫೇಭ್ಯಶ್ಚ ಸೀದಂತಿ ನರಾ ಲೋಹಿತಕರ್ದಮೇ ।
ದೀಪ್ಯಮಾನೈಃ ಪರಿಕ್ಷಿಪ್ತಾ ದಾವೈರಿವ ಮಹಾದ್ರುಮಾಃ ॥ ೬೩ ॥

ಮಾಂಸದ ಕೆಸರುಳ್ಳ ರಣಭೂಮಿಯಲ್ಲಿ ಯೋಧರು ಪಾದದ ಮಣಿಗಂಟಿನವರೆಗೂ ಒದ್ದೆಯಾಗುತ್ತಿದ್ದರು. ರಣರಂಗವು ದಾವಾಗ್ನಿಯಿಂದ ಸುಟ್ಟು ಬೆಲ್ಲಾಡಲ್ಪಟ್ಟ ಮಹಾವೃಕ್ಷಗಳಂತೆ ಇದ್ದಿತು.

ಶೋಣಿತೈಃ ಸಿಚ್ಯಮಾನಾನಿ ಶಸ್ತ್ರಾಣಿ ಕವಚಾನಿ ಚ ।
ಛತ್ರಾಣಿ ಚ ಪತಾಕಾಶ್ಚ ಸರ್ವಂ ರಕ್ತಮದೃಶ್ಯತ ॥ ೬೪ ॥

ರಕ್ತದಿಂದ ಚುಮುಕಿಸಲ್ಪಟ್ಟ ಶಸ್ತ್ರಗಳು, ಕವಚಗಳು, ಛತ್ರಗಳು ಮತ್ತು ಪತಾಕೆಗಳೆಲ್ಲವೂ ಕೆಂಪುಬಣ್ಣದಿಂದ ಕೂಡಿದುದಾಗಿದ್ದವು.

ಹಯೌಘಾಶ್ಚ ರಥೌಘಾಶ್ಚ ಗಜೌಘಾಶ್ಚ ನಿಪಾತಿತಾಃ ।
ನಿಕೃತ್ತಾಃ ಪುನರುತ್ಪತ್ಯ ತುರಗಾ ರಥನೇಮಿಭಿಃ ॥ ೬೫ ॥

ಅಶ್ವಸಮೂಹಗಳು, ರಥಸಮೂಹಗಳು, ಗಜಸಮೂಹಗಳು ಶರ-ತೋಮರಗಳ ಏಟನ್ನು ತಿಂದು ಕತ್ತರಿಸಲ್ಪಟ್ಟವು. ಅಂತಹ ಅಶ್ವಗಳು ಎದ್ದು ಪುನಃ ರಥಚಕ್ರಗಳಿಂದ ಕತ್ತರಿಸಲ್ಪಟ್ಟವು.

ಸ ಗಜೌಘಮಹಾವೇಗಃ ಪರಾಸುನರಶೈವಲಃ ।
ರಥೌಘತುರಗಾವರ್ತಃ ಪ್ರಬಭೌ ಸೈನ್ಯಸಾಗರಃ ॥ ೬೬ ॥

ಗಜಸಮೂಹಗಳ ಮಹಾವೇಗವುಳ್ಳ, ಮೃತರಾದ ಯೋಧರೆಂಬ ಶೈವಲ (ಹಾವಸೆಪಾಚಿ) ಉಳ್ಳ, ರಥಸಮೂಹ ಮತ್ತು ಅಶ್ವಗಳೆಂಬ ಸುಳಿಗಳನ್ನುಳ್ಳ ಸೈನ್ಯಸಾಗರವು ಶೋಭಿಸಿತು.

ಶರವರ್ಷಾಭಿವೃಷ್ಟೇಷು ಯೋಧೇಷ್ವಾಹವಲಕ್ಷ್ಮಸು ।
ನ ತೇಷ್ವಾಚಿತತಾಂ ಲೇಭೇ ಕಶ್ಚಿದಾಹವಲಕ್ಷಣಃ ॥ ೬೭ ॥

ಯುದ್ಧೋಚಿತಗಳಾದ ಚಿಹ್ನೆಗಳನ್ನು ಧರಿಸಿರುವ ರಣರಂಗದಲ್ಲಿ ಬಾಣಗಳ ಮಳೆಯಿಂದ ಯೋಧರು ತಾಡಿತರಾಗುತ್ತಿರಲು ಎಲ್ಲವನ್ನೂ ಗಮನಿಸುವ ವಿವೇಕಿಯಾದ ಒಬ್ಬ ಯೋಧನು (ದ್ರೋಣನು) ಬಾಣಗಳ ಸ್ಪರ್ಶಕ್ಕೆ ಗುರಿಯಾಗಲಿಲ್ಲ.

ವರ್ತಮಾನೇ ಮಹಾಯುದ್ಧೇ ಘೋರರೂಪೇ ಭಯಾನಕೇ ।
ಮೋಹಯಿತ್ವಾ ಪರಾನ್ ದ್ರೋಣೋ ಯುಧಿಷ್ಠಿರಮಭಿದ್ರವತ್ ॥೬೮॥

ಅಂತಹ ಘೋರವೂ ಮತ್ತು ಭಯಂಕರವೂ ಆದ ಮಹಾಯುದ್ಧವು ನಡೆಯುತ್ತಿರಲು ದ್ರೋಣರು ಶತ್ರುಗಳನ್ನು ಮೋಹಗೊಳಿಸಿ ಯುಧಿಷ್ಠಿರನ ಕಡೆಗೆ ಮುನ್ನುಗ್ಗಿದರು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಏಕೋನವಿಂಶೋಽಧ್ಯಾಯಃ ॥

॥ ಸಂಶಪ್ತಕವಧಪರ್ವಣಿ ಚತುರ್ಥೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಹತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ತನೆಯ ಅಧ್ಯಾಯ

ಯುಧಿಷ್ಠಿರನನ್ನು ಹಿಡಿಯಲು ಬಯಸಿದ ದ್ರೋಣರಿಗೆ
ಸತ್ಯಜಿತನಿಂದ ವಿರೋಧ. ಯುಧಿಷ್ಠಿರನ ಅಪಯಾನ.
ದ್ರೋಣರಿಂದ ಪಾಂಚಾಲಯೋಧರ ವಧೆ.

ಸಂಜಯಃ

ತತೋ ಯುಧಿಷ್ಠಿರೋ ದ್ರೋಣಂ ದೃಷ್ಟ್ವಾಽಂತಿಕಮುಪಾಗತಮ್ ।
ಮಹತಾ ಶರವರ್ಷೇಣ ಪ್ರತ್ಯಗೃಹ್ಣಾದಭೀತವತ್ ॥ ೧ ॥

ಸಂಜಯ– ಆಗ ಯುಧಿಷ್ಠಿರನು ಸಮೀಪಕ್ಕೆ ಬಂದ ದ್ರೋಣರನ್ನು ನೋಡಿ ನಿರ್ಭೀತನಾಗಿ ದೊಡ್ಡ ಬಾಣಗಳ ಮಳೆಯಿಂದ ಅವರನ್ನು ಸ್ವೀಕರಿಸಿದನು.

ತತೋ ಹಲಹಲಾಶಬ್ದ ಆಸೀದ್ ಯೌಧಿಷ್ಠಿರೇ ಬಲೇ ।
ಜಿಘೃಕ್ಷತಿ ಮಹಾಸಿಂಹೇ ಗಜಾನಾಮಿವ ಯೂಥಪಮ್ ॥ ೨ ॥

ಆನೆಗಳ ಸಲಗದಂತಿದ್ದ ಯುಧಿಷ್ಠಿರನನ್ನು ಮಹಾಸಿಂಹದಂತಹ ದ್ರೋಣರು ಹಿಡಿಯಲು ಬಯಸಿದಾಗ ಯುಧಿಷ್ಠಿರನ ಸೈನ್ಯದಲ್ಲಿ ದೊಡ್ಡ ಕೋಲಾಹಲ ಶಬ್ದವುಂಟಾಯಿತು.

ದೃಷ್ಟ್ವಾ ದ್ರೋಣಂ ತಥಾ ವೀರಃ ಸತ್ಯಜಿತ್ ಸತ್ಯವಿಕ್ರಮಃ ।
ಯುಧಿಷ್ಠಿರಂ ಪರಿಪ್ರೇಪ್ಸುರಾಚಾರ್ಯಂ ಸಮುಪಾದ್ರವತ್ ॥ ೩ ॥

ತತ ಆಚಾರ್ಯಪಾಂಚಾಲೌ ಯುಯುಧಾತೇ ಪರಸ್ಪರಮ್ ।
ವಿಕ್ಷೋಭಯಂತೌ ತೌ ಸೇನೇ ಇಂದ್ರವೈರೋಚನಾವಿವ ॥ ೪ ॥

ವೀರನೂ, ಸತ್ಯವಿಕ್ರಮನೂ ಆದ ಸತ್ಯಜಿತನು ದ್ರೋಣರನ್ನು ಆ ರೀತಿಯಲ್ಲಿ ನೋಡಿ, ಯುಧಿಷ್ಠಿರನನ್ನು ರಕ್ಷಿಸಲು ಬಯಸಿ ದ್ರೋಣರ ಮೇಲೆ ಎರಗಿದನು. ಆಗ ಪಾಂಚಾಲನಾದ ಸತ್ಯಜಿತನು ಮತ್ತು ದ್ರೋಣಾಚಾರ್ಯರು ಇಂದ್ರ-ಬಲಿಗಳಂತೆ ಶತ್ರುಸೈನ್ಯವನ್ನು ಕ್ಷೋಭೆಗೊಳಿಸುತ್ತಾ ಯುದ್ಧವನ್ನು ಮಾಡಿದರು.

ತತಃ ಸ ಸತ್ಯಜಿತ್ ತೀಕ್ಷ್ಣೈಃ ದಶಭಿರ್ಮರ್ಮಭೇದಿಭಿಃ ।
ಅವಿಧ್ಯಚ್ಛೀಘ್ರಮಾಚಾರ್ಯಂ ಛಿತ್ತ್ವಾ ಽಸ್ಯ ಸಶರಂ ಧನುಃ ॥ ೫ ॥

ತತೋ ದ್ರೋಣಂ ಮಹೇಷ್ವಾಸೋ ಪರಮಾಸ್ತ್ರಂ ವಿದರ್ಶಯನ್ ।
ತಥಾಸ್ಯ ಸಾರಥೇಃ ಪಂಚಶರಾನ್ ಸರ್ಪವಿಷೋಪಮಾನ್ ।
ಅಮುಂಚದಂತಕಪ್ರಖ್ಯಾನ್ ಸಮ್ಮುಮೋಹಾಸ್ಯ ಸಾರಥಿಃ ॥ ೬ ॥

ಆಗ ಸತ್ಯಜಿತನು ಮರ್ಮಭೇದಿಗಳಾದ ತೀಕ್ಷ್ಣವಾದ ಹತ್ತುಬಾಣಗಳಿಂದ ದ್ರೋಣರನ್ನು ಹೊಡೆದು, ಶೀಘ್ರವಾಗಿ ಅವರ ಧನುಸ್ಸು ಮತ್ತು ಬಾಣಗಳನ್ನು ಕತ್ತರಿಸಿದನು. ಅನಂತರ ತನ್ನ ಮಹಾಸ್ತ್ರಗಳನ್ನು ದ್ರೋಣರಿಗೆ ತೋರಿಸುವವನಾಗಿ ಅವನು ದ್ರೋಣರ ಸಾರಥಿಯ ಮೇಲೆ ಸರ್ಪವಿಷದಂತಿದ್ದ, ಯಮನಂತಿದ್ದ ಐದು ಬಾಣಗಳನ್ನು ಪ್ರಯೋಗಿಸಿದನು. ಆಗ ಸಾರಥಿಯು ಮೂರ್ಛೆ ಹೋದನು.

ಅಥಾಸ್ಯ ತರಸಾ ಽವಿದ್ಧ್ಯತ್ ದ್ವಯಾನ್ ದಶಭಿರಾಶುಗೈಃ ।
ದಶಭಿಃ ದಶಭಿಃ ಕ್ರುದ್ಧ ಉಭೌ ತೌ ಪಾರ್ಷ್ಣಿಸಾರಥೀ ॥ ೭ ॥

ಅನಂತರ ಕೋಪಗೊಂಡ ಅವನು ದ್ರೋಣರ ಇಬ್ಬರು ಪಕ್ಷಸಾರಥಿಗಳನ್ನು ವೇಗಶಾಲಿಗಳಾದ ಹತ್ತು-ಹತ್ತು ಬಾಣಗಳಿಂದ ಹೊಡೆದನು.

ಮಂಡಲಂ ತು ಸಮಾವೃತ್ಯ ವಿಚರನ್ ಪೃತನಾಮುಖೇ ।
ಧ್ವಜಂ ಚಚ್ಛೇದ ಸಂಕ್ರುದ್ಧೋ ದ್ರೋಣಸ್ಯಾಮಿತ್ರಕರ್ಶನಃ ॥ ೮ ॥

ಸೈನ್ಯಮುಖದಲ್ಲಿ ಮಂಡಲಮಾರ್ಗಗಳಲ್ಲಿ ತಿರುಗುತ್ತಾ, ಶತ್ರುಕರ್ಶನನಾದ ಅವನು ಕ್ರುದ್ಧನಾಗಿ ದ್ರೋಣರ ಧ್ವಜವನ್ನು ಕತ್ತರಿಸಿದನು.

ದ್ರೋಣಶ್ಚ ತತ್ ಸಮಾಲೋಕ್ಯ ಚರಿತಂ ತಸ್ಯ ಸಂಯುಗೇ ।
ಮನಸಾ ಚಿಂತಯಾಮಾಸ ಪ್ರಾಪ್ತಕಾಲಮರಿಂದಮಃ ॥ ೯ ॥

ದ್ರೋಣರು ಯುದ್ಧದಲ್ಲಿ ಅವನ ಚರಿತೆಯನ್ನು ನೋಡಿ, ಅರಿಂದಮರಾದ ಅವರು ಆ ಕಾಲದಲ್ಲಿ ಮಾಡಬೇಕಾದ ಯೋಗ್ಯವಾದ ಕಾರ್ಯವನ್ನು ಮನಸ್ಸಿನಲ್ಲಿ ಚಿಂತಿಸಿದರು.

ಆಚಾರ್ಯಸ್ತಸ್ಯ ವೈ ಚಾಪಂ ಚಿಚ್ಛೇದ ತ್ರಿಭಿರಾಶುಗೈಃ ॥ ೧೦ ॥

ಸ ಶೀಘ್ರತರಮಾದಾಯ ಧನುರನ್ಯತ್ ಪ್ರತಾಪವಾನ್ ।
ದ್ರೋಣಮಭ್ಯಹನದ್ ಭಲ್ಲೈಃ ತ್ರಿಂಶದ್ಭಿರ್ಕಂಕಪತ್ರಿಭಿಃ ॥ ೧೧ ॥

ಆಚಾರ್ಯರು ಅವನ ಧನುಸ್ಸನ್ನು ವೇಗಶಾಲಿಗಳಾದ ಮೂರು ಬಾಣಗಳಿಂದ ಕತ್ತರಿಸಿದರು. ಪ್ರತಾಪಶಾಲಿಯಾದ ಅವನು ಬಹಳ ಶೀಘ್ರವಾಗಿ ಇನ್ನೊಂದು ಧನುಸ್ಸನ್ನು ತೆಗೆದುಕೊಂಡು, ಕಂಕಪತ್ರಗಳನ್ನು ಹೊಂದಿದ್ದ ಮೂವತ್ತು ಭಲ್ಲಗಳಿಂದ ದ್ರೋಣರನ್ನು ಹೊಡೆದನು.

ಜ್ಞಾತ್ವಾ ಸತ್ಯಜಿತಂ ದ್ರೋಣಂ ಗ್ರಸಮಾನಮಿವಾಹವೇ ।
ವೃಕಃ ಶರಶತೈಸ್ತೀಕ್ಷ್ಣೈಃ ಪಾಂಚಾಲ್ಯೋ ದ್ರೋಣಮಾರ್ದಯತ್ ॥ ೧೨ ॥

ದ್ರೋಣರು ಯುದ್ಧದಲ್ಲಿ ಸತ್ಯಜಿತನನ್ನು ನುಂಗುತ್ತಿರುವಂತೆ ಇರುವುದನ್ನು ನೋಡಿ ಪಾಂಚಾಲ ದೇಶದ ವೃಕನು ತೀಕ್ಷ್ಣವಾದ ನೂರು ಬಾಣಗಳಿಂದ ದ್ರೋಣರನ್ನು ಪೀಡಿಸಿದನು.

ಸಂಧ್ಯಮಾನಂ ಸಮರೇ ದ್ರೋಣಂ ದೃಷ್ಟ್ವಾ ಮಹಾರಥಮ್ ।
ಚುಕ್ರುಶುಃ ಪಾಂಡವಾ ರಾಜನ್ ವಸ್ತ್ರಾಣಿ ದುಧುವುಶ್ಚ ಹ ॥ ೧೩ ॥

ಮಹಾರಥರಾದ ದ್ರೋಣರು ಯುದ್ಧದಲ್ಲಿ ಬಾಣಗಳಿಂದ ಮುಚ್ಚಲ್ಪಡುವುದನ್ನು ನೋಡಿ ಪಾಂಡವರು ಪರಸ್ಪರ ಆಹ್ವಾನವನ್ನು ಮಾಡಿ ತಮ್ಮ ಉತ್ತರೀಯವನ್ನು ಹಾರಿಸಿದರು.

ವೃಕಸ್ತು ಪರಮಕ್ರುದ್ಧೋ ದ್ರೋಣಂ ಷಷ್ಟ್ಯಾ ಸ್ತನಾಂತರೇ ।
ವಿವ್ಯಾಧ ಬಲವದ್ ರಾಜಂಸ್ತದದ್ಭುತಮಿವಾಭವತ್ ॥ ೧೪ ॥

ರಾಜನೇ, ಬಹಳ ಕೋಪಗೊಂಡ ವೃಕನಾದರೋ ದ್ರೋಣರನ್ನು ಅರವತ್ತು ಬಾಣಗಳಿಂದ ಅವರ ಸ್ತನಗಳ ಮಧ್ಯದಲ್ಲಿ ಬಲವಾಗಿ ಹೊಡೆದನು. ಅದು ಅದ್ಭುತವಾಗಿದ್ದಿತು.

ದ್ರೋಣಸ್ತು ಶರವರ್ಷೇಣ ಚ್ಛಾದ್ಯಮಾನೋ ಮಹಾರಥಃ ।
ವೇಗಂ ಚಕ್ರೇ ಮಹಾವೇಗಃ ಕ್ರೋಧಾದುದ್ಧೃತ್ಯ ಚಕ್ಷುಷೀ ॥ ೧೫ ॥

ಮಹಾವೇಗವುಳ್ಳ, ಮಹಾರಥರಾದ ದ್ರೋಣರು ಬಾಣಗಳ ಮಳೆಯಿಂದ ಮುಚ್ಚಲ್ಪಡುತ್ತಾ, ಕೋಪದಿಂದ ತಮ್ಮ ಕಣ್ಣುಗಳನ್ನು ಅರಳಿಸಿ ತಮ್ಮ ವೇಗವನ್ನು ಹೆಚ್ಚಿಸಿದರು.

ತತಃ ಸತ್ಯಜಿತಶ್ಚಾಪಂ ಛಿತ್ತ್ವಾ ದ್ರೋಣೋ ವೃಕಸ್ಯ ಚ ।
ಷಡ್ಭಿಃ ಸಸೂತಂ ಸಹಯಂ ಶರೈರ್ದ್ರೋಣೋಽವಧೀದ್ ವೃಕಮ್ ॥೧೬॥

ಆಗ ದ್ರೋಣರು ಸತ್ಯಜಿತ ಮತ್ತು ವೃಕನ ಧನುಸ್ಸುಗಳನ್ನು ಕತ್ತರಿಸಿ, ಆರು ಬಾಣಗಳಿಂದ ಸತ್ಯಜಿತನ ಅಶ್ವಗಳನ್ನು ಮತ್ತು ಸೂತನನ್ನು ಕೊಂದು, ವೃಕನನ್ನು ಕೊಂದರು.

ಅಥಾನ್ಯದ್ ಧನುರಾದಾಯ ಸತ್ಯಜಿದ್ ವೇಗವತ್ತರಮ್ ।
ಸಾಶ್ವಂ ಸಸೂತಂ ವಿಶಿಖೈರ್ದ್ರೋಣಂ ವಿವ್ಯಾಧ ಸಧ್ವಜಮ್ ॥ ೧೭ ॥

ಅನಂತರ ಸತ್ಯಜಿತನು ಬಹಳ ವೇಗವುಳ್ಳ ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ಅಶ್ವ-ಸೂತ-ಧ್ವಜಗಳಿಂದ ಸಹಿತರಾದ ದ್ರೋಣರನ್ನು ಬಾಣಗಳಿಂದ ಹೊಡೆದನು.

ಸ ತನ್ನ ಮಮೃಷೇ ದ್ರೋಣಃ ಪಾಂಚಾಲ್ಯೇನಾರ್ದನಂ ರಣೇ ।
ತತಸ್ತಸ್ಯ ವಿನಾಶಾಯ ಸತ್ವರಂ ವ್ಯಸೃಜಚ್ಛರಾನ್ ॥ ೧೮ ॥

ದ್ರೋಣರು ಪಾಂಚಾಲರಿಂದ ತಾವು ಹೀಗೆ ಅರ್ದಿಸಲ್ಪಡುವುದನ್ನು ರಣರಂಗದಲ್ಲಿ ಸಹಿಸಲಿಲ್ಲ. ಆದ್ದರಿಂದ ಅವರು ಅವನ ವಿನಾಶಕ್ಕಾಗಿ ತ್ವರೆಯಿಂದ ಬಾಣಗಳನ್ನು ಪ್ರಯೋಗಿಸಿದರು.

ಹಯಾನ್ ಧ್ವಜಂ ಧನುರ್ಮುಷ್ಟಿಮುಭೌ ಚ ಪಾರ್ಷ್ಣಿಸಾರಥೀ ।
ಅವಾಕಿರತ್ ತತೋ ದ್ರೋಣಃ ಶರೈಃ ಶತಸಹಸ್ರಶಃ ॥ ೧೯ ॥

ದ್ರೋಣರು ಸಹಸ್ರಾರು ಬಾಣಗಳನ್ನು ಅವನ ಅಶ್ವಗಳ ಮೇಲೆಯೂ, ಧ್ವಜ-ಧನುಸ್ಸಿನ ಹಿಡಿಯ ಮೇಲೆಯೂ ಮತ್ತು ಪಕ್ಷ-ಸಾರಥಿಗಳ ಮೇಲೆಯೂ ಸುರಿಸಿದರು.

ತಥಾ ಸಂಛಿದ್ಯಮಾನೇಷು ಕಾರ್ಮುಕೇಷು ಪುನಃಪುನಃ ।
ಪಾಂಚಾಲ್ಯಃ ಪರಮಾಸ್ತ್ರಜ್ಞಃ ಶೋಣಾಶ್ವಂ ಸಮಯೋಧಯತ್ ॥ ೨೦ ॥

ತನ್ನ ಧನುಸ್ಸುಗಳು ಪುನಃ ಪುನಃ ಕತ್ತರಿಸಲ್ಪಡುತ್ತಿರಲು ಪರಮಾಸ್ತ್ರಜ್ಞನಾದ, ಪಾಂಚಾಲ್ಯನಾದ ಸತ್ಯಜಿತನು ಶೋಣಾಶ್ವರಾದ ದ್ರೋಣರ ಜೊತೆಯಲ್ಲಿ ಯುದ್ಧವನ್ನು ಮಾಡಿದನು.

ಸ ಸತ್ಯಜಿತಮಾಲೋಕ್ಯ ತತೋऽದೀರ್ಣಂ ಮಹಾಹವೇ ।
ಅರ್ಧಚಂದ್ರೇಣ ಚಿಚ್ಛೇದ ಶಿರಸ್ತಸ್ಯ ಮಹಾತ್ಮನಃ ॥ ೨೧ ॥

ದ್ರೋಣರು ಸತ್ಯಜಿತನು ದೊಡ್ಡ ರಣದಲ್ಲಿ ಗಾಯಗೊಳ್ಳದೆ ಇರುವುದನ್ನು ನೋಡಿ ಅರ್ಧಚಂದ್ರದಿಂದ ಆ ಮಹಾತ್ಮನ ಶಿರಸ್ಸನ್ನು ಕತ್ತರಿಸಿದರು.

ತಸ್ಮಿನ್ ಹತೇ ಮಹಾಮಾತ್ರೇ ಪಾಂಚಾಲಾನಾಂ ರಥರ್ಷಭೇ ।
ಅಪಾಯಾಜ್ಜವನೈರಶ್ವೈರ್ದ್ರೋಣಾದ್ ಭೀತೋ ಯುಧಿಷ್ಠಿರಃ ॥ ೨೨ ॥

ಪಾಂಚಾಲರಲ್ಲಿ ಪ್ರಧಾನನೂ, ರಥಶ್ರೇಷ್ಠನೂ ಆದ ಅವನು ವಧೆ ಮಾಡಲ್ಪಡುತ್ತಿರಲು ದ್ರೋಣರಿಗೆ ಹೆದರಿದ ಯುಧಿಷ್ಠಿರನು ವೇಗಶಾಲಿಗಳಾದ ಅಶ್ವಗಳಿಂದ ಅವರಿಂದ ದೂರ ಹೋದನು.

ಪಾಂಚಾಲಾಃ ಕೇಕಯಾ ಮತ್ಸ್ಯಾಃ ಚೇದಿಕಾರೂಷಕೋಸಲಾಃ ।
ಯುಧಿಷ್ಠಿರಮಭೀಪ್ಸಂತೋ ದೃಷ್ಟ್ವಾ ದ್ರೋಣಮುಪಾದ್ರವನ್ ॥ ೨೩ ॥

ಪಾಂಚಾಲರೂ, ಕೇಕಯರೂ, ಮತ್ಸ್ಯರೂ, ಚೇದಿಗಳೂ, ಕಾರೂಷರೂ ಮತ್ತು ಕೋಸಲರೂ ಯುಧಿಷ್ಠಿರನನ್ನು ರಕ್ಷಿಸಲು ಬಯಸುತ್ತಾ, ದ್ರೋಣರನ್ನು ನೋಡಿ ಅವರ ಕಡೆಗೆ ನುಗ್ಗಿದರು.

ತತೋ ಯುಧಿಷ್ಠಿರಂ ಪ್ರೇಪ್ಸುರಾಚಾರ್ಯಃ ಶತ್ರುಪೂಗಹಾ ।
ವ್ಯಧಮತ್ ತಾನ್ಯನೀಕಾನಿ ತೂಲರಾಶಿಮಿವಾನಲಃ ॥ ೨೪ ॥

ಆಗ ಯುಧಿಷ್ಠಿರನನ್ನು ಹಿಡಿಯಲು ಬಯಸಿದ, ಶತ್ರುಸಮೂಹಘಾತಕರಾದ ಆಚಾರ್ಯ ದ್ರೋಣರು ಆ ಸೈನ್ಯಗಳನ್ನು ಅಗ್ನಿಯು ಹತ್ತಿಯ ರಾಶಿಯನ್ನು ಭಸ್ಮ ಮಾಡುವಂತೆ ಭಸ್ಮ ಮಾಡಿದರು.

ನಿರ್ದಹಂತಮನೀಕಾನಿ ತಾನಿ ತಾನಿ ಪುನಃಪುನಃ ।
ದ್ರೋಣಂ ಮಾತ್ಸ್ಯೋದವರಜಃ ಶತಾನೀಕೋಽಭ್ಯವರ್ತತ ॥ ೨೫ ॥

ದ್ರೋಣರು ಆಯಾ ಸೈನ್ಯಗಳನ್ನು ಪುನಃ ಪುನಃ ದಹಿಸುತ್ತಿರುವುದನ್ನು ನೋಡಿ ಮತ್ಸ್ಯರಾಜನ ತಮ್ಮನಾದ ಶತಾನೀಕನು ದ್ರೋಣರ ಮೇಲೆ ನುಗ್ಗಿದನು.

ಸೂರ್ಯರಶ್ಮಿಪ್ರತೀಕಾಶೈಃ ಕರ್ಮಾರಪರಿಮಾರ್ಜಿತೈಃ ।
ಷಡ್ಭಿಃ ಸಸೂತಂ ಸಹಯಂ ದ್ರೋಣಂ ವಿದ್ಧ್ವಾ ನನಾದ ಚ ॥ ೨೬ ॥

ಸೂರ್ಯರಶ್ಮಿಗಳಂತೆ ಹೊಳೆಯುವ, ಕಮ್ಮಾರರಿಂದ ಚೆನ್ನಾಗಿ ಸಿದ್ಧಪಡಿಸಲ್ಪಟ್ಟ ಆರುಬಾಣಗಳಿಂದ ಅಶ್ವ-ಸೂತರಿಂದ ಸಹಿತರಾದ ದ್ರೋಣರನ್ನು ಹೊಡೆದು ಸಿಂಹನಾದವನ್ನು ಮಾಡಿದನು.

ಕ್ರೂರಾಯ ಕರ್ಮಣೇ ಯುಕ್ತಶ್ಚಿಕೀರ್ಷುಃ ಕರ್ಮ ದುಷ್ಕರಮ್ ।
ಅವಾಕಿರಚ್ಛರವ್ರಾತೈಃ ಭಾರದ್ವಾಜಂ ಮಹಾರಥಮ್ ॥ ೨೭ ॥

ಕ್ರೂರಕರ್ಮವನ್ನು ಮಾಡುವುದಕ್ಕಾಗಿಯೇ ಜನಿಸಿದ ಅವನು, ದುಷ್ಕರವಾದ ಕರ್ಮವನ್ನು ಮಾಡಲು ಬಯಸಿ, ತನ್ನ ಬಾಣಸಮೂಹಗಳಿಂದ ಮಹಾರಥರಾದ ದ್ರೋಣರನ್ನು ಹೊಡೆದನು.

ತಸ್ಯ ನಾನದತೋ ದ್ರೋಣಃ ಶಿರಃ ಕಾಯಾತ್ ಸಕುಂಡಲಮ್ ।
ಕ್ಷುರೇಣೈವಾಹರದ್ ದ್ರೋಣಸ್ತತೋ ಮತ್ಸ್ಯಾಃ ಪ್ರದುದ್ರುವುಃ ॥ ೨೮ ॥

ದ್ರೋಣರು ಪುನಃ ಪುನಃ ನಾದವನ್ನು ಮಾಡುತ್ತಿದ್ದ ಅವನ ಕುಂಡಲಸಹಿತವಾದ ಶಿರಸ್ಸನ್ನು ಕ್ಷುರದಿಂದ ಕತ್ತರಿಸಿದರು. ಆಗ ಮತ್ಸ್ಯರು ಓಡಿಹೋದರು.

ಮತ್ಸ್ಯಾನ್ ಜಿತ್ವಾಽಜಯಚ್ಚೇದೀನ್ ಕಾರೂಷಾನ್ ಕೇಕಯಾನಪಿ ।
ಪಾಂಚಾಲಾನ್ ಸೃಂಜಯಾನ್ ಪಾಂಡೂನ್ ಭಾರದ್ವಾಜಃ ಪುನಃಪುನಃ ॥

ಮತ್ಸ್ಯರನ್ನು ಗೆದ್ದು ದ್ರೋಣರು ಚೇದಿಗಳನ್ನೂ, ಕಾರೂಷರನ್ನೂ ಮತ್ತು ಕೇಕಯರನ್ನೂ ಗೆದ್ದರು. ಅವರು ಪುನಃ ಪುನಃ ಪಾಂಚಾಲರನ್ನೂ, ಸೃಂಜಯರನ್ನೂ, ಪಾಂಡುಗಳನ್ನೂ ಗೆದ್ದರು.

ತಂ ದಹಂತಮನೀಕಾನಿ ಕ್ರುದ್ಧಮಗ್ನಿಂ ಯಥಾ ವನಮ್ ।
ದೃಷ್ಟ್ವಾ ರುಗ್ಮರಥಂ ವೀರಂ ಸಮಕಂಪಂತ ಸೃಂಜಯಾಃ ॥ ೩೦ ॥

ಅಗ್ನಿಯು ವನವನ್ನು ಸುಡುವಂತೆ ಕ್ರುದ್ಧರಾದ ಅವರು ತಮ್ಮ ಸೈನ್ಯವನ್ನು ಸುಡುತ್ತಿರುವ, ರುಗ್ಮರಥರಾದ ದ್ರೋಣರನ್ನು ನೋಡಿ ಸೃಂಜಯರು ನಡುಗಿದರು.

ಉಭಾಭ್ಯಾಂ ಸಂದಧಾನಸ್ಯ ಧನುಷೋಽಸ್ಯಾಶುಕಾರಿಣಃ ।
ಜ್ಯಾಘೋಷೋ ನಿಘ್ನತೋಽಮಿತ್ರಾನ್ ದಿಕ್ಷು ಸರ್ವಾಸು ಶುಶ್ರುವೇ ॥

ಎರಡು ಕೈಗಳಿಂದಲೂ ಬಾಣಗಳನ್ನು ಪ್ರಯೋಗಿಸುವ, ಶೀಘ್ರಕಾರಿಗಳಾದ, ಶತ್ರುಗಳನ್ನು ಸಂಹರಿಸುವ, ಅವರ ಧನುಸ್ಸಿನ ಹೆದೆಯ ಘೋಷವು ಎಲ್ಲ ದಿಕ್ಕುಗಳಲ್ಲಿಯೂ ಕೇಳಿ ಬರುತ್ತಿದ್ದಿತು.

ನಾಗಾನಶ್ವಾನ್ ಪದಾತೀಂಶ್ಚ ರಥಿನೋ ಗಜಸಾದಿನಃ ।
ರೌದ್ರಾ ಹಸ್ತವತಾ ಮುಕ್ತಾಃ ಪ್ರಮಥ್ನಂತಿ ಸ್ಮ ಸಾಯಕಾಃ ॥ ೩೨ ॥

ಪಳಗಿದ ಕೈಯುಳ್ಳ ಅವರಿಂದ ಪ್ರಯೋಗಿಸಲ್ಪಟ್ಟ ಭಯಂಕರವಾದ ಬಾಣಗಳು ಗಜಗಳನ್ನೂ, ಅಶ್ವಗಳನ್ನೂ, ಪದಾತಿಗಳನ್ನೂ, ರಥಿಗಳನ್ನೂ ಮತ್ತು ಗಜಾರೋಹಿಗಳನ್ನೂ ಮರ್ದಿಸಿದವು.

ನಾನದ್ಯಮಾನಃ ಪರ್ಜನ್ಯೋ ವಿಶ್ವಗ್ವಾತೋ ಹಿಮಾತ್ಯಯೇ ।
ಅಶ್ಮವರ್ಷಮಿವಾವರ್ಷತ್ ಪರೇಷಾಂ ಭಯಮಾದಧತ್ ॥ ೩೩ ॥

ಪರ್ಜನ್ಯನು ಹಿಮಗಾಲವು ಕಳೆದ ಮೇಲೆ ಸುಂಟರಗಾಳಿಗಳನ್ನು ಸೃಷ್ಟಿಸಿ, ಪುನಃ ಪುನಃ ನಾದವನ್ನು ಮಾಡುತ್ತಾ ಕಲ್ಲಿನ ಮಳೆಯನ್ನು ಸುರಿಸುವಂತೆ ದ್ರೋಣರು ಬಾಣಗಳ ಮಳೆಯನ್ನು ಸುರಿಸಿ ಶತ್ರುಗಳಿಗೆ ಭಯವನ್ನುಂಟು ಮಾಡಿದರು.

ಸರ್ವಾ ದಿಶಃ ಸಮಚರತ್ ಸೇನಾಂ ವಿಕ್ಷೋಭಯನ್ನಿವ ।
ಬಲೀ ಶೂರೋ ಮಹೇಷ್ವಾಸೋ ಮಿತ್ರಾಣಾಮಭಯಂಕರಃ ॥ ೩೪ ॥

ತಸ್ಯ ವಿದ್ಯುದಿವಾಭ್ರೇಷು ಚಾಪಂ ಹೇಮಪರಿಷ್ಕೃತಮ್ ।
ದಿಕ್ಷು ಸರ್ವಾಸ್ವಪಶ್ಯಾಮ ದ್ರೋಣಸ್ಯಾಮಿತ್ರಘಾತಿನಃ ॥ ೩೫ ॥

ಮಿತ್ರರಿಗೆ ಭಯಗ್ರಸ್ತರಿಗೆ ಅಭಯವನ್ನು ಕೊಡುವ ಮಹಾಧನುರ್ಧಾರಿಗಳೂ, ಬಲಿಷ್ಠರೂ, ಶೂರರೂ ಆದ ಅವರು ಶತ್ರುಸೇನೆಯನ್ನು, ವಿಕ್ಷೋಭೆಗೊಳಿಸುತ್ತಾ ಎಲ್ಲ ದಿಕ್ಕುಗಳಲ್ಲಿಯೂ ಸಂಚರಿಸಿದರು. ಶತ್ರುಘಾತಿಗಳಾದ ದ್ರೋಣರ ಸುವರ್ಣಾಲಂಕೃತವಾದ ಧನುಸ್ಸನ್ನು ಮೋಡಗಳಲ್ಲಿ ಮಿಂಚುಗಳಂತೆ ನಾವು ಎಲ್ಲ ದಿಕ್ಕುಗಳಲ್ಲಿಯೂ ನೋಡಿದೆವು.

ಶೋಭಮಾನಾಂ ಧ್ವಜೇ ಚಾಸ್ಯ ವೇದಿಮದ್ರಾಕ್ಷ್ಮ ಭಾರತ ।
ಹಿಮವಚ್ಛಿಖಿರಾಕಾರಂ ಚರತಃ ಸಂಯುಗೇ ಭೃಶಮ್ ॥ ೩೬ ॥

ಎಲೈ ಭಾರತನೇ, ಯುದ್ಧದಲ್ಲಿ ಬಹಳವಾಗಿ ಸಂಚರಿಸುವ ಅವರ ಹಿಮಾಲಯದ ಶಿಖರದ ಆಕಾರವನ್ನು ಹೊಂದಿದ ವೇದಿಧ್ವಜವನ್ನು ನೋಡಿದೆವು (ಧ್ವಜದಲ್ಲಿ ವೇದಿಯನ್ನು ನೋಡಿದೆವು).

ದ್ರೋಣಸ್ತು ಪಾಂಡವಾನೀಕೇ ಚಕಾರ ಕದನಂ ಮಹತ್ ।
ಯಥಾ ದೈತ್ಯಗಣೈಃ ವಿಷ್ಣುಃ ಸುರಾಸುರನಮಸ್ಕೃತಃ ॥ ೩೭ ॥

ಸುರಾಸುರ ನಮಸ್ಕೃತನಾದ ವಿಷ್ಣುವು ದೈತ್ಯಗಣಗಳ ಜೊತೆಯಲ್ಲಿ ಯುದ್ಧ ಮಾಡಿದಂತೆ ದ್ರೋಣರು ಪಾಂಡವರ ಸೈನ್ಯದಲ್ಲಿ ದೊಡ್ಡ ಯುದ್ಧವನ್ನು ಮಾಡಿದರು.

ಸ ಶೂರಃ ಸತ್ವವಾನ್ ಪ್ರಾಜ್ಞೋ ಬಲವಾನ್ ಸತ್ಯವಿಕ್ರಮಃ ।
ಮಹಾನುಭಾವಃ ಕಾಲಾಂತೇ ರೌದ್ರೀಂ ಪ್ರಾವರ್ತಯನ್ನದೀಮ್ ॥ ೩೮ ॥

ಶೂರರೂ, ಧೈರ್ಯಶಾಲಿಗಳೂ, ಪ್ರಾಜ್ಞರೂ, ಬಲಿಷ್ಠರೂ, ಸತ್ಯಪರಾಕ್ರಮರೂ, ಮಹಾನುಭಾವರೂ ಆದ ಅವರು ಕಾಲಾಂತದಲ್ಲಿಯೋ ಎಂಬಂತೆ ಭಯಂಕರವಾದ ನದಿಯನ್ನು ಹರಿಸಿದರು.

ಕವಚೋರ್ಮಿರಥಾವರ್ತಾಂ ಮರ್ತ್ಯಕೂಲಾಪಹಾರಿಣೀಮ್ ।
ಗಜಾಶ್ವಮಕರಾಕೀರ್ಣಾಮ್ ಅಸಿಮೀನಾಂ ದುರಾಸದಾಮ್ ॥ ೫೯ ॥

ವೀರಾಸ್ಥಿಶರ್ಕರಾಂ ರೌದ್ರಾಂ ಭೇರೀಮುರಜಕಚ್ಛಪಾಮ್ ।
ಚರ್ಮವರ್ಮಪ್ಲವಾಂ ಘೋರಾಂ ಕೇಶಶೈವಲಶಾದ್ವಲಾಮ್ ॥ ೪೦ ॥

ಕವಚಗಳೆಂಬ ತರಂಗಗಳುಳ್ಳ, ರಥಗಳೆಂಬ ಸುಳಿಗಳುಳ್ಳ, ಮೃತ ಶರೀರಗಳೆಂಬ ತೀರವನ್ನು ಕೊಚ್ಚಿಕೊಂಡು ಹೋಗುವ, ಗಜಾಶ್ವಗಳೆಂಬ ಮೊಸಳೆಗಳಿಂದ ನಿಬಿಡವಾದ, ಖಡ್ಗಗಳೆಂಬ ಮೀನುಗಳಿಂದ ಕೂಡಿದ, ಸಮೀಪಿಸಲು ಅಸಾಧ್ಯವಾದ, ವೀರರ ಅಸ್ಥಿಗಳೆಂಬ ಮರಳುಗಳಿಂದ ಕೂಡಿದ, ಭಯಂಕರವಾದ, ಭೇರಿ- ಮೃದಂಗಗಳೆಂಬ ಆಮೆಗಳಿಂದ ಕೂಡಿದ, ಗುರಾಣಿ ಮತ್ತು ಕವಚಗಳೆಂಬ ದೋಣಿಗಳಿಂದ ಕೂಡಿದ, ಕೇಶಗಳೆಂಬ ಮೃದು ಪ್ರದೇಶಗಳಿಂದ ಕೂಡಿದ ಘೋರವಾದ ನದಿಯನ್ನು ಹರಿಸಿದರು.

ಶರೌಘಿಣೀಂ ಧನುಃಸ್ರೋತಾಂ ಬಾಹುಪನ್ನಗಸಂಕುಲಾಮ್ ।
ಮನುಷ್ಯಶೀರ್ಷಪಾಷಾಣಾಂ ಶಕ್ತಿಮೀನಾಂ ಗದೋಡುಪಾಮ್ ।
ರಣಭೂಮಿವಹಾಂ ತೀವ್ರಾಂ ಕುರುಸೃಂಜಯವಾಹಿನೀಮ್ ॥ ೪೧ ॥

ಉಷ್ಣೀಷಫೇನವಿತತಾಂ ನಿಷ್ಕೀರ್ಣಾಂತ್ರಸರೀಸೃಪಾಮ್ ।
ವೀರಾಪಹಾರಿಣೀಂ ರೌದ್ರಾಂ ಮಾಂಸಶೋಣಿತಕರ್ದಮಾಮ್ ॥ ೪೨ ॥

ಬಾಣಗಳ ಪ್ರವಾಹವುಳ್ಳ, ಧನುಸ್ಸುಗಳ ಮೂಲಸ್ಥಾನವನ್ನು ಹೊಂದಿದ, ಬಾಹುಗಳೆಂಬ ಸರ್ಪಗಳಿಂದ ನಿಬಿಡವಾದ, ಮನುಷ್ಯರ ತಲೆಗಳೆಂಬ ಪಾಷಾಣದಿಂದ ಕೂಡಿದ, ಶಕ್ತಿಗಳೆಂಬ ಮೀನುಗಳಿಂದಲೂ ಮತ್ತು ಗದೆಗಳೆಂಬ ದೋಣಿಗಳಿಂದಲೂ ಕೂಡಿದ ರಣರಂಗದಲ್ಲಿ ಹರಿಯುವ, ಕುರು-ಸೃಂಜಯರನ್ನು ಕೊಚ್ಚಿಕೊಂಡು ಹೋಗುವ, ತೀವ್ರವಾದ ಉಷ್ಣೀಷಗಳೆಂಬ ವಿಸ್ತಾರವಾದ ನೊರೆಯನ್ನು ಹೊಂದಿದ, ಹೊರಗೆ ಬಂದ ಕರುಳುಗಳೆಂಬ ಸರ್ಪಗಳನ್ನು ಹೊಂದಿದ, ಮಾಂಸ-ರಕ್ತಗಳೆಂಬ ಕೆಸರನ್ನು ಹೊಂದಿದ, ವೀರರನ್ನು ಕೊಚ್ಚಿಕೊಂಡು ಹೋಗುವ ಭಯಂಕರವಾದ (ನದಿಯನ್ನು ಹರಿಸಿದರು).

ಹಸ್ತಿಗ್ರಾಹಾಂ ಕೇತುವೃಕ್ಷಾಂ ಕ್ಷತ್ರಿಯಾಣಾಂ ನಿಮಜ್ಜನೀಮ್ ।
ಕ್ರೂರಾಂ ಶರೀರಸಂಘಾತಾಂ ಸಾದಿನಕ್ರಾಂ ದುರತ್ಯಯಾಮ್ ॥ ೪೩ ॥

ದ್ರೋಣಃ ಪ್ರಾವರ್ತಯತ್ ತತ್ರ ನದೀಮಂತಕಗಾಮಿನೀಮ್ ।
ತೇ ದ್ರೋಣಂ ಸಹಿತಾಃ ಶೂರಾಃ ಸರ್ವತಃ ಪ್ರತ್ಯವಾರಯನ್ ।
ಗಭಸ್ತಿಭಿರಿವಾದಿತ್ಯಂ ತಪಂತಂ ಭುವನೇ ಜನಾನ್ ॥ ೪೪ ॥

ಅಲ್ಲಿ ದ್ರೋಣರು ಗಜಗಳೆಂಬ ಮೊಸಳೆಗಳುಳ್ಳ, ಧ್ವಜಗಳೆಂಬ ವೃಕ್ಷಗಳನ್ನು ಹೊಂದಿದ, ಕ್ಷತ್ರಿಯರನ್ನು ಮುಳುಗಿಸುವ, ಮೃತಶರೀರಗಳೆಂಬ ಕಲ್ಲುಗಳಿಂದ ಕೂಡಿದ, ಅಶ್ವಾರೋಹಿಗಳೆಂಬ ನಕ್ರಗಳಿಂದ ಕೂಡಿದ, ದಾಟಲು ಅಸಾಧ್ಯವಾದ, ಕ್ರೂರವಾದ, ಯಮನ ಬಳಿಗೆ ಹೋಗುವ ನದಿಯನ್ನು ಪ್ರವರ್ತಿಸಿದರು. ಪಾಂಡವರ ಆ ಶೂರರೆಲ್ಲರೂ ಒಟ್ಟುಗೂಡಿ ಎಲ್ಲ ಕಡೆಗಳಿಂದಲೂ ಮುತ್ತಿದರೂ ತನ್ನ ಕಿರಣಗಳಿಂದ ಭೂಮಿಯ ಜನರನ್ನು ತಾಪಗೊಳಿಸುವ ಸೂರ್ಯನಂತಿದ್ದ ಅವರನ್ನು ತಡೆದರು.

ತಂ ದಹಂತಮನೀಕಾನಿ ರಥೋದಾರಾಃ ಪ್ರಗಲ್ಭವತ್ ।
ಸರ್ವತೋಽಭ್ಯದ್ರವನ್ ದ್ರೋಣಂ ಕುಂತೀಪುತ್ರಪುರೋಗಮಾಃ ॥ ೪೫ ॥

ಬಹಳ ಕೌಶಲದಿಂದ ಪಾಂಡವರ ಸೈನ್ಯಗಳನ್ನು ದಹಿಸುತ್ತಿದ್ದ ದ್ರೋಣರನ್ನು ರಥಶ್ರೇಷ್ಠರಾದ ಕುಂತೀಪುತ್ರ ಮೊದಲಾದವರು ಎಲ್ಲ ಕಡೆಗಳಿಂದಲೂ ವೇಗವಾಗಿ ಸಮೀಪಿಸಿದರು.

ತಾಂಸ್ತು ಶೂರಾನ್ ಮಹೇಷ್ವಾಸಾನ್ ತಾವಕಾಽಭ್ಯುದ್ಯತಾಯುಧಾಃ ।
ರಾಜಾನೋ ರಾಜಪುತ್ರಾಶ್ಚ ಸಮಂತಾತ್ ಪರ್ಯವಾರಯನ್ ॥ ೪೬ ॥

ಶೂರರೂ ಮತ್ತು ಮಹಾಧನುರ್ಧಾರಿಗಳೂ ಆದ ಅವರನ್ನು ನಿನ್ನವರಾದ ರಾಜರು ಮತ್ತು ರಾಜಪುತ್ರರು ತಮ್ಮ ಆಯುಧಗಳನ್ನು ಎತ್ತಿಹಿಡಿದು ಎಲ್ಲ ಕಡೆಗಳಲ್ಲಿಯೂ ತಡೆದರು.

ಶಿಖಂಡೀ ತು ತತೋ ದ್ರೋಣಂ ಪಂಚಭಿರ್ನತಪರ್ವಭಿಃ ।
ಕ್ಷೇಮಧನ್ವಾ ಚ ವಿಂಶತ್ಯಾ ವಸುದಾನಶ್ಚ ಪಂಚಭಿಃ ॥ ೪೭ ॥

ಉತ್ತಮೌಜಾಸ್ತ್ರಿಭಿಃ ಬಾಣೈಃ ಕ್ಷತ್ರದೇವಶ್ಚ ಸಪ್ತಭಿಃ ।
ಸಾತ್ಯಕಿಶ್ಚ ಶತೈರಾರ್ಯೈಃ ಯುಧಾಮನ್ಯುಸ್ತಥಾಷ್ಟಭಿಃ ॥ ೪೮ ॥

ಯುಧಿಷ್ಠಿರೋ ದ್ವಾದಶಭಿಃ ದ್ರೋಣಂ ವಿವ್ಯಾಧ ಸಾಯಕೈಃ ।
ಧೃಷ್ಟದ್ಯುಮ್ನಶ್ಚ ದಶಭಿಶ್ಚೇಕಿತಾನಸ್ತ್ರಿಭಿಃ ಶರೈಃ ॥ ೪೯ ॥

ಆಗ ಶಿಖಂಡಿಯು ಬಾಗಿದ ತುದಿಯುಳ್ಳ ಐದು ಬಾಣಗಳಿಂದಲೂ, ಕ್ಷೇಮಧನ್ವನು ಇಪ್ಪತ್ತು ಬಾಣಗಳಿಂದಲೂ, ವಸುದಾನನು ಐದು ಬಾಣಗಳಿಂದಲೂ, ಉತ್ತಮೌಜನು ಮೂರು ಬಾಣಗಳಿಂದಲೂ, ಕ್ಷತ್ರದೇವನು ಏಳು ಬಾಣಗಳಿಂದಲೂ, ಸಾತ್ಯಕಿಯು ಶ್ರೇಷ್ಠವಾದ ನೂರು ಬಾಣಗಳಿಂದಲೂ, ಹಾಗೆಯೇ ಯುಧಾಮನ್ಯುವು ಎಂಟು ಬಾಣಗಳಿಂದಲೂ, ಯುಧಿಷ್ಠಿರನು ಹನ್ನೆರಡು ಬಾಣಗಳಿಂದಲೂ, ಧೃಷ್ಟದ್ಯುಮ್ನನು ಹತ್ತು ಬಾಣಗಳಿಂದಲೂ, ಚೇಕಿತಾನನು ಮೂರು ಬಾಣಗಳಿಂದಲೂ ದ್ರೋಣರನ್ನು ಹೊಡೆದರು.

ಸ ಸತ್ಯಸಂಧಃ ಶೋಣಾಶ್ವಃ ಪ್ರಭಿನ್ನ ಇವ ಕುಂಜರಃ ।
ಅಭ್ಯತೀತ್ಯ ರಥಾನೀಕಂ ವೃಷಸೇನಂ ಸಮಭ್ಯಯಾತ್ ॥ ೫೦ ॥

ಸತ್ಯಸಂಧರಾದ ಆ ದ್ರೋಣರು ಮದಿಸಿದ ಆನೆಯಂತೆ ಆ ರಥಸಮೂಹವನ್ನು ದಾಟಿ ವೃಷಸೇನನ ಮೇಲೆ ಎರಗಿದರು.

ತತೋ ರಾಜಾನಮಾಸಾದ್ಯ ಪ್ರಹರಂತಮಭೀತವತ್ ।
ಅವಿಧ್ಯನ್ನವಭಿಃ ಕ್ಷೇಮಂ ಸ ಹತಃ ಪ್ರಾಪತದ್ ರಥಾತ್ ॥ ೫೧ ॥

ಅನಂತರ ನಿರ್ಭಯನಾಗಿ ಪ್ರಹಾರವನ್ನು ಮಾಡುತ್ತಿದ್ದ ಕ್ಷೇಮಧನ್ವ ರಾಜನನ್ನು ಸಮೀಪಿಸಿ, ಒಂಬತ್ತು ಬಾಣಗಳಿಂದ ಅವನನ್ನು ಹೊಡೆದರು. ಅವನು ಮೃತನಾಗಿ ರಥದಿಂದ ಬಿದ್ದನು.

ಸ ಮಧ್ಯಂ ಪ್ರಾಪ್ಯ ಸೈನ್ಯಾನಾಂ ಸರ್ವಾಃಸುವ್ಯಚರದ್ ದಿಶಃ ।
ತ್ರಾತಾ ಹ್ಯಭವದನ್ಯೇಷಾಂ ನ ತ್ರಾತವ್ಯಃ ಪರಂತಪಃ ॥ ೫೨ ॥

ಅವರು ಪಾಂಡವರ ಸೈನ್ಯದ ಮಧ್ಯದಲ್ಲಿ ತಲುಪಿ ಎಲ್ಲ ದಿಕ್ಕುಗಳಲ್ಲಿಯೂ ಚೆನ್ನಾಗಿ ಸಂಚರಿಸಿದರು. ಅವರು ಬೇರೆಯವರಿಗೆ ರಕ್ಷಕರಾದರು. ಪರಂತಪರಾದ ಅವರು ಯಾರಿಂದಲೂ ರಕ್ಷಿಸಲ್ಪಡಬೇಕಾದ ಪ್ರಸಂಗವಿರಲಿಲ್ಲ.

ಶಿಖಂಡಿನಂ ದ್ವಾದಶಭಿರ್ವಿಂಶತ್ಯಾ ಚೋತ್ತಮೌಜಸಮ್ ।
ವಸುದಾನಂ ತು ಭಲ್ಲೇನ ರಥನೀಡಾದಪಾಹರತ್ ॥ ೫೩ ॥

ಅವರು ಶಿಖಂಡಿಯನ್ನು ಹನ್ನೆರಡು ಬಾಣಗಳಿಂದಲೂ, ಉತ್ತಮೌಜನನ್ನು ಇಪ್ಪತ್ತು ಬಾಣಗಳಿಂದಲೂ ಹೊಡೆದು, ವಸುದಾನನನ್ನು ಭಲ್ಲದಿಂದ ಹೊಡೆದು ರಥದ ನೀಡದಿಂದ (ರಥವೀರರಿಂದ) ಉರುಳಿಸಿದರು.

ಅಶೀತ್ಯಾ ಕ್ಷತ್ರವರ್ಮಾಣಂ ಷಡ್ವಿಂಶತ್ಯಾ ಸುದಕ್ಷಿಣಮ್ ।
ಜಲಸಂಧಂ ತು ಭಲ್ಲೇನ ರಥನೀಡಾದಪಾತಯತ್ ॥ ೫೪ ॥

ಕ್ಷತ್ರವರ್ಮನನ್ನು ಎಂಬತ್ತು ಬಾಣಗಳಿಂದಲೂ, ಸುದಕ್ಷಿಣನನ್ನು ಇಪ್ಪತ್ತಾರು ಬಾಣಗಳಿಂದಲೂ, ಜಲಸಂಧನನ್ನು ಭಲ್ಲದಿಂದಲೂ ರಥದಿಂದ ಉರುಳಿಸಿದರು.

ಯುಧಾಮನ್ಯುಂ ಚತುಃಷಷ್ಟ್ಯಾ ಸಾತ್ಯಕಿಂ ತ್ರಿಂಶತಾ ಶರೈಃ ।
ವಿದ್ಧ್ವಾ ರುಗ್ಮರಥಂ ತೂರ್ಣಂ ಕುಂತೀಪುತ್ರಂ ಯುಧಿಷ್ಠಿರಮ್ ॥ ೫೫ ॥

ಯುಧಾಮನ್ಯುವನ್ನು ಅರವತ್ನಾಲ್ಕು ಬಾಣಗಳಿಂದಲೂ, ಸಾತ್ಯಕಿಯನ್ನು ಮೂವತ್ತು ಬಾಣಗಳಿಂದಲೂ ಹೊಡೆದು, ಅನಂತರ ಸುವರ್ಣಮಯವಾದ ರಥದಲ್ಲಿದ್ದ ಕುಂತೀಪುತ್ರನಾದ ಯುಧಿಷ್ಠಿರನ ಬಳಿಗೆ ಶೀಘ್ರವಾಗಿ ಸಾಗಿದರು.

ತತೋ ಯುಧಿಷ್ಠಿರಃ ಕ್ಷಿಪ್ರಂ ಗುರುತೋ ರಾಜಸತ್ತಮಃ ।
ಅಪಾಯಾಜ್ಜವನೈರಶ್ವೈಃ ಪಾಂಚಾಲ್ಯೋ ದ್ರೋಣಮಭ್ಯಯಾತ್ ॥ ೫೬ ॥

ಎಲೈ ರಾಜಶ್ರೇಷ್ಠನೇ, ಆಗ ಯುಧಿಷ್ಠಿರನು ವೇಗವಾದ ಅಶ್ವಗಳಿಂದ ಆಚಾರ್ಯರಿಂದ ಅಪಯಾನವನ್ನು ಮಾಡಿದನು.ಪಾಂಚಾಲದೇಶದ ವೀರನು ದ್ರೋಣರನ್ನು ಎದುರಿಸಿದನು.

ತಂ ದ್ರೋಣಃ ಸಧನುಷ್ಕಂ ತು ಸಾಶ್ವಯಂತಾರಮಕ್ಷಿಣೋತ್ ।
ಸ ಹತಃ ಪ್ರಾಪತದ್ ಭೂಮೌ ರಥಾಜ್ಜ್ಯೋತಿರಿವಾಂಬರಾತ್ ॥ ೫೭ ॥

ದ್ರೋಣರು ಧನುಸ್ಸಿನಿಂದಲೂ, ಅಶ್ವ-ಸಾರಥಿಗಳಿಂದಲೂ ಸಹಿತನಾದ ಅವನನ್ನು ನಾಶಗೊಳಿಸಿದರು. ಅವನು ಮೃತನಾಗಿ ಆಕಾಶದಿಂದ ಜ್ಯೋತಿಯು ಬಿದ್ದಂತೆ ರಥದಿಂದ ಭೂಮಿಯ ಮೇಲೆ ಬಿದ್ದನು.

ತಾವಕಾಸ್ತು ಮಹಾರಾಜ ಜಯಂ ಲಬ್ಧ್ವಾ ಮಹಾರಣೇ ।
ಪಾಂಡವೇಯಾನ್ ರಣೇ ಜಘ್ನುರ್ದ್ರವತಸ್ತಾನ್ ಸಮಂತತಃ ॥ ೫೮ ॥

ವಾರ್ಧಕ್ಷೇಮಿಸ್ತು ವಾರ್ಷ್ಣೇಯೋ ದ್ರೋಣಂ ವಿದ್ಧ್ವಾ ಶರೋತ್ತಮೈಃ ।
ನವಭಿಶ್ಚಾವನೀಪಾಲಃ ಪುನರ್ವಿವ್ಯಾಧ ಪಂಚಭಿಃ ॥ ೫೯ ॥

ಎಲೈ ಮಹಾರಾಜನೇ, ನಿನ್ನವರು ಯುದ್ಧದಲ್ಲಿ ಜಯವನ್ನು ಹೊಂದಿ, ಎಲ್ಲ ಕಡೆಗಳಲ್ಲಿಯೂ ಓಡುತ್ತಿದ್ದ ಪಾಂಡವಯೋಧರನ್ನು ಬಾಣಗಳಿಂದ ಹೊಡೆದರು. ವಾರ್ಷ್ಣೇಯನಾದ ವಾರ್ಧಕ್ಷೇಮಿ ರಾಜನು ದ್ರೋಣರನ್ನು ಶ್ರೇಷ್ಠವಾದ ಒಂಬತ್ತು ಬಾಣಗಳಿಂದ ಹೊಡೆದು, ಪುನಃ ಐದು ಬಾಣಗಳಿಂದ ಹೊಡೆದನು.

ಚಿತ್ರಸೇನಸ್ತತೋ ದ್ರೋಣಂ ಪಾಂಚಾಲಸ್ತ್ವರ್ದಯಚ್ಛರೈಃ ।
ಪುನರ್ವಿವ್ಯಾಧ ಸಂಕ್ರುದ್ಧಃ ಸೇನಾಬಿಂದುಶ್ಚ ಪಂಚಭಿಃ ॥ ೬೦ ॥

ಅನಂತರ ಪಾಂಚಾಲದೇಶದ ಚಿತ್ರಸೇನನು ದ್ರೋಣರನ್ನು ತನ್ನ ಬಾಣದಿಂದ ಪೀಡಿಸಿದನು. ಪುನಃ ಬಹಳ ಕೋಪಗೊಂಡ ಸೇನಾಬಿಂದುವು ಐದು ಬಾಣಗಳಿಂದ ದ್ರೋಣರನ್ನು ಹೊಡೆದನು.

ಸುವರ್ಮಾ ಪಂಚಭಿಶ್ಚೈವ ಧೃಷ್ಟದ್ಯುಮ್ನಶ್ಚ ಪಂಚಭಿಃ ।
ಶಿಖಂಡೀ ನವಭಿರ್ಬಾಣೈಃ ಚೇಕಿತಾನಶ್ಚ ಪಂಚಭಿಃ ॥ ೬೧ ॥

ಸಾತ್ಯಕಿಶ್ಚ ಚತುಃಷಷ್ಟ್ಯಾ ರಾಜನ್ ವಿವ್ಯಾಧ ಸಾಯಕೈಃ ।
ಸುಚಿತ್ರೋ ದಶಭಿರ್ಬಾಣೈಃ ದ್ರೋಣಂ ವಿದ್ಧ್ವಾ ನನಾದ ಬಲೀ ॥೬೨॥

ಸುವರ್ಮನು ಐದು ಬಾಣಗಳಿಂದಲೂ, ಧೃಷ್ಟದ್ಯುಮ್ನನು ಐದು ಬಾಣಗಳಿಂದಲೂ, ಶಿಖಂಡಿಯು ಒಂಬತ್ತು ಬಾಣಗಳಿಂದಲೂ, ಚೇಕಿತಾನನು ಐದು ಬಾಣಗಳಿಂದಲೂ, ಸಾತ್ಯಕಿಯು ಅರವತ್ನಾಲ್ಕು ಬಾಣಗಳಿಂದಲೂ ದ್ರೋಣರನ್ನು ಹೊಡೆದರು. ಎಲೈ ರಾಜನೇ, ಬಲಿಷ್ಠನಾದ ಸುಚಿತ್ರನು ಹತ್ತು ಬಾಣಗಳಿಂದ ದ್ರೋಣರನ್ನು ಹೊಡೆದು ಸಿಂಹನಾದವನ್ನು ಮಾಡಿದನು.

ತಂ ದ್ರೋಣಃ ಸಮರೇ ರಾಜನ್ ಶರವರ್ಷೈರವಾಕಿರತ್ ।
ಅಪಾತಯತ್ ತತೋ ದ್ರೋಣಃ ಸುಚಿತ್ರಂ ಸಹಸಾರಥಿಮ್ ॥ ೬೩ ॥

ರಾಜನೇ, ದ್ರೋಣರು ರಣರಂಗದಲ್ಲಿ ಸುಚಿತ್ರನ ಮೇಲೆ ಬಾಣಗಳ ಮಳೆಯನ್ನು ಸುರಿಸಿ, ಸಾರಥಿಯಿಂದ ಸಹಿತನಾದ ಸುಚಿತ್ರನನ್ನು ರಥದಿಂದ ಉರುಳಿಸಿದರು.

ಸಾಶ್ವಶ್ಚ ಸಮರೇ ರಾಜನ್ ಹತೋ ವೈ ಪ್ರಾಪತತ್ ಕ್ಷಿತೌ ।
ಪಾತ್ಯಮಾನೋ ಮಹಾರಾಜ ಬಭೌ ಜ್ಯೋತಿರಿವಾಂಬರಾತ್ ॥ ೬೪ ॥

ರಾಜನೇ, ಮೃತನಾದ ಅವನು ರಣರಂಗದಲ್ಲಿ ತನ್ನ ಅಶ್ವಗಳ ಜೊತೆಯಲ್ಲಿ ಭೂಮಿಯ ಮೇಲೆ ಬಿದ್ದನು. ಮಹಾರಾಜನೇ, ಬೀಳುತ್ತಾ ಅವನು ಆಕಾಶದಿಂದ ಬೀಳುವ ಜ್ಯೋತಿಯಂತೆ ಶೋಭಿಸಿದನು.

ತಸ್ಮಿನ್ ಹತೇ ರಾಜಪುತ್ರೇ ಪಾಂಚಾಲಾನಾಂ ರಥರ್ಷಭೇ ।
ಘ್ನತ ದ್ರೋಣಂ ಘ್ನತ ದ್ರೋಣಮಿತ್ಯಾಸೀನ್ನಿಸ್ವನೋ ಮಹಾನ್ ॥ ೬೫ ॥

ಪಾಂಚಾಲದೇಶದ ರಾಜಕುಮಾರನು ಮತ್ತು ರಥಶ್ರೇಷ್ಠನೂ ಆದ ಸುಚಿತ್ರನು ದ್ರೋಣರಿಂದ ಹತನಾಗುತ್ತಿರಲು ದ್ರೋಣರನ್ನು ಕೊಲ್ಲಿ, ದ್ರೋಣರನ್ನು ಕೊಲ್ಲಿ ಎಂಬ ದೊಡ್ಡ ಶಬ್ದವು ಆ ಸೈನ್ಯದಲ್ಲಿ ಕೇಳಿಬಂದಿತು.

ತಾಂಸ್ತಥಾ ಭೃಶಸಂವಿಗ್ನಾನ್ ಪಾಂಚಾಲಾನ್ ಮತ್ಸ್ಯಕೇಕಯಾನ್ ।
ಸೃಂಜಯಾನ್ ಪಾಂಡವೇಯಾಂಶ್ಚ ದ್ರೋಣೋ ವ್ಯಕ್ಷೋಭಯದ್ ಬಲಾತ್ ॥

ಆ ರೀತಿಯಲ್ಲಿ ಬಹಳ ವೇದನೆಗೊಳಗಾದ ಪಾಂಚಾಲರನ್ನೂ, ಮತ್ಸ್ಯರನ್ನೂ, ಕೇಕಯರನ್ನೂ, ಸೃಂಜಯರನ್ನೂ, ಪಾಂಡವೇಯರನ್ನೂ ದ್ರೋಣರು ತಮ್ಮ ಬಲದಿಂದ ಕ್ಷೋಭೆಗೊಳಿಸಿದರು.

ಸಾತ್ಯಕಿಂ ಚೇಕಿತಾನಂ ಚ ಧೃಷ್ಟದ್ಯುಮ್ನಶಿಖಂಡಿನೌ ।
ವಾರ್ಧಕ್ಷೇಮಿಂ ಚಿತ್ರಸೇನಂ ಸೇನಾಬಿಂದುಂ ಸುವರ್ಚಸಮ್ ॥ ೬೭ ॥

ಏತಾಂಶ್ಚಾನ್ಯಾಂಶ್ಚ ಸುಬಹೂನ್ ನಾನಾಜನಪದೇಶ್ವರಾನ್ ।
ಸರ್ವಾನ್ ದ್ರೋಣೋऽಜಯದ್ ಯುದ್ಧೇ ಕುರುಭಿಃ ಪರಿವಾರಿತಃ ॥

ಕುರುಗಳಿಂದ ಪರಿವಾರಿತರಾದ ದ್ರೋಣರು ಸಾತ್ಯಕಿ, ಚೇಕಿತಾನ, ಧೃಷ್ಟದ್ಯುಮ್ನ, ಶಿಖಂಡಿ, ವಾರ್ಧಕ್ಷೇಮಿ, ಚಿತ್ರಸೇನ, ಸೇನಾಬಿಂದು, ಸುವರ್ಚಸ ಇವರೆಲ್ಲರನ್ನೂ ಮತ್ತು ಇನ್ನೂ ನಾನಾ ದೇಶದ ಅನೇಕ ರಾಜರನ್ನೂ ಯುದ್ಧದಲ್ಲಿ ಗೆದ್ದರು.

ತೇ ದಾನವಾ ಇವೇಂದ್ರೇಣ ವಧ್ಯಮಾನಾ ಮಹಾತ್ಮನಾ ।
ಪಾಂಚಾಲಾಃ ಕೇಕಯಾ ಮಾತ್ಸ್ಯಾಃ ಸಮಕಂಪಂತ ಭಾರತ ॥ ೬೯ ॥

ಎಲೈ ಭಾರತನೇ, ಮಹಾತ್ಮನಾದ ಇಂದ್ರನಿಂದ ಕೊಲ್ಲಲ್ಪಡುವ ದಾನವರಂತೆ ಆ ಪಾಂಚಾಲರೂ, ಕೇಕಯರೂ, ಮಾತ್ಸ್ಯರು ನಡುಗಿದರು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ದ್ರೋಣಪರ್ವಣಿ ವಿಂಶೋಽಧ್ಯಾಯಃ ॥

॥ ಸಂಶಪ್ತಕವಧಪರ್ವಣಿ ಪಂಚಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಇಪ್ಪತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ತೊಂದನೆಯ ಅಧ್ಯಾಯ

ದ್ರೋಣರ ಪರಾಕ್ರಮವನ್ನು ನೋಡಿ ದುರ್ಯೋಧನನಿಂದ ಕರ್ಣನನ್ನು ಕುರಿತು ಭೀಮಾದಿಗಳ ಅವಹೇಳನ. ಭೀಮಾದಿಗಳನ್ನು ಪ್ರಶಂಸಿಸಿ ಕರ್ಣನಿಂದ ಅದರ ನಿಷೇಧ.

ಧೃತರಾಷ್ಟ್ರಃ

ಭಾರದ್ವಾಜೇನ ಭಗ್ನೇಷು ಪಾಂಡವೇಷು ಮಹಾತ್ಮಸು ।
ಪಾಂಚಾಲೇಷು ಚ ಸರ್ವೇಷು ಕಚ್ಚಿನ್ನಾನ್ಯೋ ನ್ಯವರ್ತತ ॥ ೧ ॥

ಅಸೇವಿತಾಂ ಕಾಪುರುಷೈಃ ಸೇವಿತಾಂ ಪುರುಷರ್ಷಭೈಃ ।
ಯೋದ್ಧುಂ ಯುದ್ಧೇ ಮತಿಂ ಕೃತ್ವಾ ಕ್ಷತ್ರಿಯಾಣಾಂ ಯಶಸ್ಕರೀಮ್ ॥೨॥

ಧೃತರಾಷ್ಟ್ರ- ಮಹಾತ್ಮರಾದ ಪಾಂಡವರೂ, ಪಾಂಚಾಲರೂ ಮತ್ತು ಎಲ್ಲರೂ ದ್ರೋಣರಿಂದ ಭಗ್ನರಾಗಿ, ಕಾಪುರುಷರಿಂದ ಅಸೇವಿತವಾದ, ಪುರುಷಶ್ರೇಷ್ಠರಿಂದ ಸೇವಿತವಾದ ಕ್ಷತ್ರಿಯರಿಗೆ ಯಶಸ್ಕರವಾದ ಶ್ರೇಷ್ಠ ಅಭಿಪ್ರಾಯವನ್ನು ಹೊಂದಿ ಯುದ್ಧವನ್ನು ಮಾಡಲು (ಯಾರೂ ಹಿಂದಿರುಗಲಿಲ್ಲವೇ?)

ಸ ಏಷ ಪುರುಷವ್ಯಾಘ್ರೋ ಯೋ ಭಗ್ನೇಷು ನಿವರ್ತತೇ ।
ಅಹೋ ನಾಸೀತ್ ಪುಮಾನ್ ಕಶ್ಚಿದ್ ದ್ರೋಣಂ ದೃಷ್ಟ್ವಾ ವ್ಯವಸ್ಥಿತಮ್ ॥

ಸೈನ್ಯವು ಭಗ್ನವಾದಾಗ ಯಾವನು ಹಿಂದಿರುಗುವನೋ ಅವನೇ ಪುರುಷವ್ಯಾಘ್ರ. ದ್ರೋಣರು ರಣರಂಗದಲ್ಲಿ ವ್ಯವಸ್ಥಿತವಾಗಿರುವುದನ್ನು ನೋಡಿ ಅಂತಹ ಪುರುಷನು ಯಾವನೂ ಇರಲಿಲ್ಲವೇ?

ಜೃಂಭಮಾಣಮಿವ ವ್ಯಾಘ್ರಂ ಪ್ರಭಿನ್ನಮಿವ ಕುಂಜರಮ್ ।
ತ್ಯಜಂತಮಾಹವೇ ಪ್ರಾಣಾನ್ ಸನ್ನದ್ಧಂ ಚಿತ್ರಯೋಧಿನಮ್ ॥ ೪ ॥

ಮಹೇಷ್ವಾಸಂ ನರವ್ಯಾಘ್ರಂ ದ್ವಿಷತಾಂ ಭಯವರ್ಧನಮ್ ।
ಕೃತಜ್ಞಂ ಸತ್ಯನಿರತಂ ದುರ್ಯೋಧನಹಿತೈಷಿಣಮ್ ॥ ೫ ॥

ಭಾರದ್ವಾಜಂ ರಥಾನೀಕೇ ಶೂರಂ ದೃಷ್ಟ್ವಾ ವ್ಯವಸ್ಥಿತಮ್ ।
ಕೇ ವೀರಾಃ ಸನ್ನ್ಯವರ್ತಂತ ತನ್ಮಮಾಚಕ್ಷ್ವ ಸಂಜಯ ॥ ೬ ॥

ಆಕಳಿಸುವ ವ್ಯಾಘ್ರದಂತೆ, ಮದಿಸಿದ ಗಜದಂತೆ, ಯುದ್ಧದಲ್ಲಿ ಪ್ರಾಣವನ್ನು ಬಿಡಲು ಸಿದ್ಧರಾದ, ಶಸ್ತ್ರ-ಕವಚಗಳಿಂದ ಸನ್ನದ್ಧರಾದ, ವಿಚಿತ್ರವಾಗಿ ಯುದ್ಧವನ್ನು ಮಾಡುವ, ಮಹಾಧನುರ್ಧಾರಿಗಳಾದ, ಶತ್ರುಗಳಿಗೆ ಭಯವನ್ನು ಹೆಚ್ಚಿಸುವ ಕೃತಜ್ಞರೂ, ಸತ್ಯನಿರತರೂ, ದುರ್ಯೋಧನನ ಹಿತೈಷಿಗಳೂ ಆದ, ಶೂರರಾದ, ನರವ್ಯಾಘ್ರರಾದ ದ್ರೋಣರು ರಥಸಮೂಹದಲ್ಲಿ ನಿಂತಿರುವುದನ್ನು ನೋಡಿ, ಎಲೈ ಸಂಜಯನೇ, ಯಾವ ವೀರರು ಹಿಂದಿರುಗಿದರು ಎಂಬುದನ್ನು ನನಗೆ ಹೇಳು.

ಸಂಜಯಃ

ತಾನ್ ದೃಷ್ಟ್ವಾ ಚಲಿತಾನ್ ಸಂಖೇ ಪ್ರಣುನ್ನಾನ್ ದ್ರೋಣಸಾಯಕೈಃ ।
ಪಾಂಚಾಲಾನ್ ಪಾಂಡವಾನ್ ಮಾತ್ಸ್ಯಾನ್ ಸೃಂಜಯಾಂಶ್ಚ ಸಕೇಕಯಾನ್ ॥

ದ್ರೋಣಚಾಪಪ್ರಮುಕ್ತೇನ ಶರೌಘೇಣಾಸುಹಾರಿಣಾ ।
ಸಿಂಧೋರಿವ ಮಹೌಘೇನ ಹ್ರಿಯಮಾಣಾನ್ ಯಥಾ ಪ್ಲವಾನ್ ॥ ೮ ॥

ಕೌರವಾಃ ಸಿಂಹನಾದೇನ ನಾನಾವಾದ್ಯರವೇಣ ಚ ।
ರಥದ್ವಿಪನರಾಶ್ವೈವ ಸರ್ವತಃ ಪರ್ಯವಾರಯನ್ ॥ ೯ ॥

ಸಂಜಯ– ದ್ರೋಣರ ಧನುಸ್ಸಿನಿಂದ ಹೊರಹೊಮ್ಮಿದ ಪ್ರಾಣಾಂತಕವಾದ ರಣಸಮೂಹದ ಯುದ್ಧದಲ್ಲಿ ಪೀಡಿಸಲ್ಪಟ್ಟು ಸಿಂಧುನದಿಯ ಮಹಾಪ್ರವಾಹದಿಂದ

ಕೊಚ್ಚಿಕೊಂಡು ಹೋಗುವ ದೋಣಿಗಳಂತೆ ರಣರಂಗದಿಂದ ಹೋಗುತ್ತಿದ್ದ ಪಾಂಚಾಲರನ್ನೂ, ಪಾಂಡವರನ್ನೂ, ಮತ್ಸ್ಯರನ್ನೂ, ಸೃಂಜಯರನ್ನೂ ಮತ್ತು ಕೇಕಯರನ್ನೂ ಕೌರವರು ನಾನಾ ವಾದ್ಯ ಘೋಷಗಳಿಂದಲೂ, ಸಿಂಹನಾದಗಳಿಂದಲೂ, ರಥ-ಗಜ-ಪದಾತಿಗಳಿಂದಲೂ ಎಲ್ಲ ಕಡೆಗಳಿಂದಲೂ ಸುತ್ತುವರಿದರು.

ತಾನ್ ಪಶ್ಯನ್ ಸೈನ್ಯಮಧ್ಯಸ್ಥೋ ರಾಜಾ ಸ್ವಜನನಿರ್ಜಿತಾನ್ ।
ದುರ್ಯೋಧನೋಽಬ್ರವೀತ್ ಕರ್ಣಂ ಪ್ರಹೃಷ್ಟಃ ಪ್ರಹಸನ್ನಿವ ॥ ೧೦ ॥

ತನ್ನವರಿಂದ ನಿರ್ಜಿತರಾದ ಅವರನ್ನು ನೋಡಿ ಸೈನ್ಯದ ಮಧ್ಯದಲ್ಲಿದ್ದ ರಾಜನಾದ ದುರ್ಯೋಧನನು ಸಂತೋಷಗೊಂಡು ನಗುತ್ತಾ ಕರ್ಣನನ್ನು ಕುರಿತು ಹೇಳಿದನು.

ಪಶ್ಯ ರಾಧೇಯ ಪಾಂಚಾಲಾನ್ ಪ್ರಣುನ್ನಾನ್ ದ್ರೋಣಸಾಯಕೈಃ ।
ಸಿಂಹೇನೇವ ಮೃಗಾನಸ್ತ್ರೈಃ ತ್ರಾಸಿತಾನ್ ದೃಢಧನ್ವನಾ ॥ ೧೧ ॥

ಎಲೈ ರಾಧೇಯನೇ, ಸಿಂಹದಿಂದ ಮೃಗಗಳು ಹೆದರಿದಂತೆ ದೃಢ ಧನುಸ್ಸುಳ್ಳ ದ್ರೋಣರ ಬಾಣಗಳಿಂದ ಮತ್ತು ಅಸ್ತ್ರಗಳಿಂದ ಪೀಡಿಸಲ್ಪಟ್ಟು ಭಯಪಡುತ್ತಿರುವ ಪಾಂಚಾಲರನ್ನು ನೋಡು.

ನೈತೇ ಜಾತು ಪುನರ್ಯೋದ್ಧುಮೀಹಿಷ್ಯಂತೀತಿ ಮೇ ಮತಿಃ ।
ತಥಾ ಹಿ ಭಗ್ನಾ ದ್ರೋಣೇನ ವಾತೇನೇವ ಮಹಾದ್ರುಮಾಃ ॥ ೧೨ ॥

ಇವರು ಇನ್ನೊಂದು ಬಾರಿ ಪುನಃ ಯುದ್ಧವನ್ನು ಮಾಡಲು ಪ್ರಯತ್ನ ಪಡುವುದಿಲ್ಲವೆಂದು ನನ್ನ ಅಭಿಪ್ರಾಯ. ವಾಯುವಿನಿಂದ ಭಗ್ನವಾದ ಮಹಾವೃಕ್ಷಗಳಂತೆ ದ್ರೋಣರಿಂದ ಆ ರೀತಿಯಲ್ಲಿ ಭಗ್ನರಾಗಿದ್ದಾರೆ.

ಅರ್ದ್ಯಮಾನಾಃ ಶರೈರೇತೇ ರುಗ್ಣಪುಂಖೈರ್ಮಹಾತ್ಮನಾ ।
ಪಥಾ ನೈಕೇನ ಗಚ್ಛಂತಿ ಘೂರ್ಣಮಾನಾ ಇತಸ್ತತಃ ॥ ೧೩ ॥

ಮಹಾತ್ಮರಾದ ದ್ರೋಣರ ರುಗ್ಣಪುಂಖಗಳನ್ನು ಹೊಂದಿದ ಬಾಣಗಳಿಂದ ಪೀಡಿಸಲ್ಪಡುವ ಇವರು ವೇದನೆಯಿಂದ ನಾದವನ್ನು ಮಾಡುತ್ತಾ ಇಲ್ಲಿಂದಲ್ಲಿಗೆ ಅನೇಕ ಮಾರ್ಗಗಳಿಂದ ಹೋಗುತ್ತಿದ್ದಾರೆ.

ಸನ್ನಿರುದ್ಧಾಶ್ಚ ಕೌರವ್ಯೈಃ ದ್ರೋಣೇನ ಚ ಮಹಾತ್ಮನಾ ।
ಏತೇಽನ್ಯೇ ಮಂಡಲೀಭೂತಾಃ ಪಾವಕೇನೇವ ಕುಂಜರಾಃ ॥ ೧೪ ॥

ಇವರು ಮಹಾತ್ಮರಾದ ದ್ರೋಣರಿಂದಲೂ ಮತ್ತು ಕೌರವ ಸೈನ್ಯದಿಂದಲೂ ತಡೆಯಲ್ಪಟ್ಟಿದ್ದಾರೆ. ಉಳಿದವರು ಅಗ್ನಿಯಿಂದ ಸುತ್ತುವರಿಯಲ್ಪಟ್ಟ ಗಜಗಳಂತೆ ಸುತ್ತುವರಿಯಲ್ಪಟ್ಟಿದ್ದಾರೆ.

ಭ್ರಮರೈರಿವ ಚಾವಿಷ್ಟಾ ದ್ರೋಣಸ್ಯ ನಿಶಿತೈಃ ಶರೈಃ ।
ಅನ್ಯೋನ್ಯಮವಲೀಯಂತೇ ಪಲಾಯನಪರಾಯಣಾಃ ॥ ೧೫ ॥

ಭ್ರಮರಗಳನ್ನು ಹೋಲುವ ದ್ರೋಣರ ನಿಶಿತವಾದ ಬಾಣಗಳಿಂದ (ಶರೀರದಲ್ಲಿ) ತುಂಬಿಹೋಗಿದ್ದಾರೆ. ಪಲಾಯನಪರಾಯಣರಾದ ಇವರು ಒಬ್ಬರಲ್ಲೊಬ್ಬರು ಅಡಗಿಕೊಳ್ಳುತ್ತಿದ್ದಾರೆ.

ಏಷ ಭೀಮೋ ದೃಢಕ್ರೋಧೋಽಹೀನಃ ಪಾಂಡವಸೃಂಜಯೈಃ ॥ ೧೬ ॥

ದೃಢಕ್ರೋಧವುಳ್ಳ ಈ ಭೀಮನಾದರೋ ಪಾಂಡವರಿಂದಲೂ ಮತ್ತು ಸೃಂಜಯರಿಂದಲೂ ಸಹಿತನಾಗಿದ್ದಾನೆ.

ಸಂಜಯಃ

ತತ್ರ ನಾದೋ ಮಹಾನಾಸೀದ್ ಏಕಂ ದ್ರೋಣಂ ಜಿಘಾಂಸತಾಮ್ ।
ಪಾಂಡವಾನಾಂ ನಿವೃತ್ತಾನಾಂ ನಾನಾವರ್ಣೈರ್ಹಯೋತ್ತಮೈಃ ॥ ೧೭ ॥

ಸಂಜಯ– ಆಗ ಒಬ್ಬ ದ್ರೋಣರನ್ನು ಕೊಲ್ಲಲು ಬಯಸಿ ನಾನಾ ವರ್ಣಗಳುಳ್ಳ ಶ್ರೇಷ್ಠ ಹಯಗಳನ್ನು ಏರಿ ನಿವೃತ್ತರಾದ ಪಾಂಡವರಿಂದ ದೊಡ್ಡ ನಾದವುಂಟಾಯಿತು.

ಕರ್ಣಃ

ನೈಷ ಜಾತು ಮಹಾಬಾಹುಃ ಜೀವನ್ನಾಹವಮುತ್ಸೃಜೇತ್ ।
ನ ಚೇಮಾನ್ ಪುರುಷವ್ಯಾಘ್ರಃ ಸಿಂಹನಾದಾನ್ ಸಹಿಷ್ಯತೇ ॥ ೧೮ ॥

ಕರ್ಣ– ಮಹಾಬಾಹುವಾದ ಈ ಭೀಮಸೇನನು ಬದುಕಿರುವವರೆಗೆ ಎಂದೂ ರಣರಂಗವನ್ನು ಬಿಡುವುದಿಲ್ಲ. ಪುರುಷವ್ಯಾಘ್ರನಾದ ಅವನು ಈ ಸಿಂಹನಾದಗಳನ್ನು ಸಹಿಸುವುದಿಲ್ಲ.

ನ ಚಾಪಿ ಪಾಂಡವಾ ಯುದ್ಧೇ ಭಜ್ಯೇರನ್ನಿತಿ ಮೇ ಮತಿಃ ।
ಶೂರಾಶ್ಚ ಬಲವಂತಶ್ಚ ಕೃತಾಸ್ತ್ರಾ ಯುದ್ಧದುರ್ಮದಾಃ ॥ ೧೯ ॥

ಪಾಂಡವರಾದರೂ ಯುದ್ಧದಲ್ಲಿ ಭಗ್ನಗೊಳ್ಳಲಾರರೆಂದು ನನ್ನ ಅಭಿಪ್ರಾಯ. ಅವರು ಶೂರರೂ, ಬಲಿಷ್ಠರೂ, ಅಸ್ತ್ರಪಾರಂಗತರೂ ಮತ್ತು ಯುದ್ಧ ದುರ್ಮದರಾದವರು.

ವಿಷಾಗ್ನಿದ್ಯೂತಸಂಕ್ಲೇಶಾನ್ ವನವಾಸಂ ಚ ಪಾಂಡವಾಃ ।
ಸ್ಮರಮಾಣಾ ನ ಹಾಸ್ಯಂತಿ ಸಂಗ್ರಾಮಮಿತಿ ಮೇ ಮತಿಃ ॥ ೨೦ ॥

ವಿಷಾಗ್ನಿ, ದ್ಯೂತಗಳಿಂದ ಉಂಟಾದ ಕಷ್ಟಗಳನ್ನೂ, ವನವಾಸವನ್ನೂ ಸ್ಮರಿಸುತ್ತಾ ಪಾಂಡವರು ರಣರಂಗವನ್ನು ಬಿಡುವುದಿಲ್ಲವೆಂದು ನನ್ನ ಅಭಿಪ್ರಾಯ.

ಅವೃತೋಽಪಿ ಮಹಾಬಾಹುರಮಿತೌಜಾ ವೃಕೋದರಃ ।
ವರಾನ್ ವರಾನ್ ಹಿ ಕೌಂತೇಯೋ ರಥೋದಾರಾನ್ ವಧಿಷ್ಯತಿ ॥೨೧॥

ಮಹಾಬಾಹುವೂ, ಅಮಿತಸಾಮರ್ಥ್ಯವುಳ್ಳವನೂ ಆದ ವೃಕೋದರನು ಕೌರವ ಸೇನೆಯಿಂದ ಸುತ್ತುವರಿಯಲ್ಪಟ್ಟಿದ್ದರೂ ಕೌರವ ಸೇನೆಯಲ್ಲಿ ಶ್ರೇಷ್ಠರಾದ ರಥರನ್ನು ಆರಿಸಿ, ಆರಿಸಿ ಕೊಲ್ಲುವನು.

ಅಸಿನಾ ಧನುಷಾ ಶಕ್ತ್ಯಾ ರಥೈರ್ನಾಗೈರ್ಹಯೈರ್ನರೈಃ ।
ಆಯಸೇನ ಚ ದಂಡೇನ ಪ್ರಾಪ್ತಾನ್ ಪ್ರಾಪ್ತಾನ್ ಹನಿಷ್ಯತಿ ॥ ೨೨ ॥

ಅವನು ಖಡ್ಗದಿಂದಲೂ, ಧನುಸ್ಸಿನಿಂದಲೂ, ಶಕ್ತಿಯಿಂದಲೂ, ರಥಗಳಿಂದಲೂ, ಗಜಗಳಿಂದಲೂ, ಅಶ್ವಗಳಿಂದಲೂ, ಪದಾತಿಗಳಿಂದಲೂ, ಕಬ್ಬಿಣದ ದಂಡದಿಂದಲೂ ಸಮೀಪಕ್ಕೆ ಬಂದಬಂದವರನ್ನು ಕೊಲ್ಲುವನು.

ತ ಇಮೇ ವಿನಿವರ್ತಂತೇ ಸಾತ್ಯಕಿಪ್ರಮುಖಾ ರಥಾಃ ।
ಪಾಂಚಾಲಾಃ ಕೇಕಯಾ ಮತ್ಸ್ಯಾಃ ಪಾಂಡವಾಶ್ಚ ವಿಶೇಷತಃ ॥೨೩॥

ಇಗೋ ಈ ಸಾತ್ಯಕಿ ಮೊದಲಾದ ಪಾಂಡವರ ಮಹಾರಥರು ಹಿಂದಿರುಗುತ್ತಿದ್ದಾರೆ. ಪಾಂಚಾಲರೂ, ಕೇಕಯರೂ, ಮತ್ಸ್ಯರೂ ಮತ್ತು ವಿಶೇಷವಾಗಿ ಪಾಂಡವರೂ ಹಿಂದಿರುಗುತ್ತಿದ್ದಾರೆ.

ಶೂರಾಶ್ಚ ಬಲವಂತಶ್ಚ ವಿಕ್ರಾಂತಾಶ್ಚ ಮಹಾರಥಾಃ ।
ವಿಶೇಷತಶ್ಚ ಭೀಮೇನ ಸಂರಬ್ಧೇನಾಭಚೋದಿತಾಃ ॥ ೨೪ ॥

ಶೂರರೂ, ಬಲಿಷ್ಠರೂ, ಪರಾಕ್ರಮಶಾಲಿಗಳೂ ಆದ ಮಹಾರಥರು ಕೋಪಗೊಂಡ ಭೀಮನಿಂದ ವಿಶೇಷವಾಗಿ ಪ್ರಚೋದಿಸಲ್ಪಡುತ್ತಿದ್ದಾರೆ.

ತಂ ದ್ರೋಣಮಭಿವರ್ತಂತೇ ಸಿಂಹಂ ಮೋಹಾನ್ಮೃಗಾ ಇವ ।
ವೃಕೋದರಂ ಪರೀಪ್ಸಂತಃ ಸೂರ್ಯಂ ಕೃಷ್ಣಘನಾ ಇವ ॥ ೨೫ ॥

ವೃಕೋದರನನ್ನು ರಕ್ಷಿಸುವ ಆಸೆಯನ್ನು ಹೊಂದಿ, ಮೋಹದಿಂದ ಜಿಂಕೆಗಳು ಸಿಂಹದ ಮೇಲೆ ಬಿದ್ದಂತೆ, ಕಪ್ಪುಮೋಡಗಳು ಸೂರ್ಯನನ್ನು ಆವರಿಸಿದಂತೆ ದ್ರೋಣರ ಮೇಲೆ ಸಾಗುತ್ತಿದ್ದಾರೆ.

ಸಮರೇಷು ತು ನಿರ್ದಿಷ್ಟಾಃ ಪಾಂಡವಾಃ ಕೃಷ್ಣಬಾಂಧವಾಃ ।
ಪಾಂಚಾಲಾಃ ಕೇಕಯಾ ಮತ್ಸ್ಯಾಃ ಪಾಂಡವೇಯಾಶ್ಚ ಸರ್ವಶಃ ॥ ೨೬ ॥

ಶೂರಾಶ್ಚ ಬಲವಂತಶ್ಚ ವಿಕ್ರಾಂತಾಶ್ಚ ಮಹಾರಥಾಃ ।
ಹ್ರೀಮಂತಃ ಶತ್ರುಮರಣೇ ನಿಪುಣಾಃ ಪುಣ್ಯಲಕ್ಷಣಾಃ ॥ ೨೭ ॥

ಕೃಷ್ಣಬಾಂಧವರಾದ ಪಾಂಡವರೂ, ಪಾಂಚಾಲರೂ, ಕೇಕಯರೂ, ಮತ್ಸ್ಯರೂ, ಪಾಂಡುಪುತ್ರರೂ ಎಲ್ಲರೂ ಶೂರರೂ, ಬಲಿಷ್ಠರೂ, ಪರಾಕ್ರಮಶಾಲಿಗಳೂ, ಮಹಾರಥರೂ, ನಾಚಿಕೆಯುಳ್ಳವರೂ, ಶತ್ರುವಧೆಯಲ್ಲಿ ನಿಪುಣರಾದವರೂ, ಪುಣ್ಯಲಕ್ಷಣವುಳ್ಳವರೂ ಆಗಿ ಯುದ್ಧಗಳಲ್ಲಿ ನಿರ್ದೇಶಿಸಲ್ಪಟ್ಟಿದ್ದಾರೆ.

ಬಹವಃ ಪಾರ್ಥಿವಾ ರಾಜನ್ ತೇಷಾಂ ವಶಗತಾ ರಣೇ ।
ಮಾಽವಮಂಸ್ಥಾಃ ಪಾಂಡವಾಂಸ್ತ್ವಂ ನಾರಾಯಣಪುರೋಗಮಾನ್ ॥

ಎಲೈ ರಾಜನೇ, ಅನೇಕ ರಾಜರು ಯುದ್ಧದಲ್ಲಿ ಅವರಿಗೆ ವಶರಾಗಿದ್ದಾರೆ. ನಾರಾಯಣನನ್ನು ನಾಯಕನಾಗಿ ಉಳ್ಳ ಪಾಂಡವರನ್ನು ನೀನು ಅವಮಾನಗೊಳಿಸಬೇಡ.

ಏಕಾಯನಗತಾಸ್ತ್ವೇತೇ ಪೀಡಯೇಯುರ್ಯತವ್ರತಮ್ ।
ಅರಕ್ಷ್ಯಮಾಣಂ ಶಲಭಾ ಯಥಾ ದೀಪಂ ಮುಮೂರ್ಷವಃ ॥ ೨೯ ॥

ಇವರು ಒಂದೇ ವಾಹನದಲ್ಲಿ ಕುಳಿತು, ರಕ್ಷಣೆಯಿಲ್ಲದ, ನಿಯತವ್ರತನಾದ ದ್ರೋಣರನ್ನು ಮರಣವನ್ನು ಹೊಂದಲಿರುವ ಪತಂಗಗಳು ದೀಪದ ಮೇಲೆ ಬಿದ್ದಂತೆ ಪೀಡಿಸಬಹುದು.

ಅಸಂಶಯಂ ಕೃತಾಸ್ತ್ರಶ್ಚ ಪರ್ಯಾಪ್ತಶ್ಚಾರಿನಿಗ್ರಹೇ ।
ಅತಿಭಾರಂ ತ್ವಿಮಂ ಮನ್ಯೇ ಭಾರದ್ವಾಜೇ ಸಮಾಹಿತಮ್ ॥ ೩೦ ॥

ನಿಸ್ಸಂಶಯವಾಗಿ ಅವರು ಅಸ್ತ್ರಪಾರಂಗತರಾದವರು ಮತ್ತು ಶತ್ರುಗಳನ್ನು ನಿಗ್ರಹ ಮಾಡಲು ಸಮರ್ಥರಾದವರು. ಆದರೂ ದ್ರೋಣರ ಮೇಲೆ ಬಿದ್ದಿರುವ ಈ ಭಾರವು ಬಹಳ ದೊಡ್ಡದೆಂದು ನಾನು ಭಾವಿಸುತ್ತೇನೆ.

ತೇ ಶೀಘ್ರಮನುಗಚ್ಛಾಮೋ ಯತ್ರ ದ್ರೋಣೋ ವ್ಯವಸ್ಥಿತಃ ।
ಕಾಕಾ ಇವ ಮಹಾನಾಗಂ ಮಾ ಚ ಹನ್ಯುರ್ಮಹಾರಥಮ್ ॥ ೩೧ ॥

ಅಂತಹ ನಾವು ಶೀಘ್ರವಾಗಿ ದ್ರೋಣರು ಇರುವ ಕಡೆಗೆ ಹೋಗೋಣ. ಕಾಗೆಗಳು ಮಹಾಸರ್ಪವನ್ನು ಕೊಂದಂತೆ ಮಹಾರಥರಾದ ಅವರು ಮರಣಕ್ಕೆ ಈಡಾಗುವುದು ಬೇಡ.

ಸಂಜಯಃ

ಕರ್ಣಸ್ಯ ತು ವಚಃ ಶ್ರುತ್ವಾ ರಾಜಾ ದುರ್ಯೋಧನಸ್ತಥಾ ।
ಭ್ರಾತೃಭಿಃ ಸಹಿತೋ ವೀರೈಃ ಪ್ರಾಯಾದ್ ದ್ರೋಣರಥಂ ಪ್ರತಿ ॥ ೩೨ ॥

ಸಂಜಯ– ಕರ್ಣನ ಮಾತುಗಳನ್ನು ಕೇಳಿ ರಾಜನಾದ ದುರ್ಯೋಧನನು ವೀರರಾದ ಸಹೋದರರಿಂದ ಸಹಿತನಾಗಿ ದ್ರೋಣರ ರಥದ ಕಡೆಗೆ ಹೊರಟನು.

ತತ್ರ ನಾದೋ ಮಹಾನಾಸೀದೇಕಂ ದ್ರೋಣಂ ಜಿಘಾಂಸತಾಮ್ ।
ಪಾಂಡವಾನಾಂ ನಿವೃತ್ತಾನಾಂ ನಾನಾವರ್ಣೈರ್ಹಯೋತ್ತಮೈಃ ॥ ೩೩ ॥

ಅಲ್ಲಿ ಒಬ್ಬ ದ್ರೋಣರನ್ನು ಕೊಲ್ಲಲು ಬಯಸಿ ನಾನಾ ಬಣ್ಣದ ಶ್ರೇಷ್ಠ ಅಶ್ವಗಳನ್ನು ಏರಿ ಹಿಂದಿರುಗಿದ ಪಾಂಡವರಿಂದ ದೊಡ್ಡ ನಾದವು ಉಂಟಾಯಿತು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಏಕವಿಂಶೋऽಧ್ಯಾಯಃ ॥
॥ ಸಂಶಪ್ತಕವಧಪರ್ವಣಿ ಷಷ್ಠೋऽಧ್ಯಾಯಃ ॥
ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಇಪ್ಪತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ತೆರಡನೆಯ ಅಧ್ಯಾಯ

ಸಂಜಯನಿಂದ ರಥಗಳ, ಅಶ್ವಗಳ ಮತ್ತು ಧ್ವಜಗಳ ವರ್ಣನೆ

ಧೃತರಾಷ್ಟ್ರಃ

ಸರ್ವೇಷಾಮೇವ ಮೇ ಬ್ರೂಹಿ ರಥಚಿಹ್ನಾನಿ ಸಂಜಯ ।
ತಾನಹಂ ಶ್ರೋತುಮಿಚ್ಛಾಮಿ ವಿಸ್ತರೇಣ ಪೃಥಕ್ ಪೃಥಕ್ ।
ಯೇ ದ್ರೋಣಮಭಿವರ್ತಂತ ಕ್ರುದ್ಧಾ ಭೀಮಪರಾಕ್ರಮಾಃ ॥ ೧ ॥

ಧೃತರಾಷ್ಟ್ರ– ಎಲೈ ಸಂಜಯನೇ, ಎಲ್ಲರ ರಥಗಳ ಲಕ್ಷಣಗಳನ್ನು ಹೇಳು. ನಾನು ಅವುಗಳನ್ನು ವಿಸ್ತಾರವಾಗಿ ಬೇರೆ ಬೇರೆಯಾಗಿ ಕೇಳಲು ಬಯಸುತ್ತೇನೆ. ಭಯಂಕರ ಪರಾಕ್ರಮವುಳ್ಳ ವೃದ್ಧರಾದ ಯಾರು-ಯಾರು ದ್ರೋಣರನ್ನು ಎದುರಿಸಿದರೋ ಅವರ ರಥಗಳ ಚಿಹ್ನೆಗಳನ್ನು ಹೇಳು.

ದೂಯತೇ ಮೇ ಮನಸ್ತಾತ ದ್ರೋಣಂ ಪ್ರತಿ ಪರಂತಪ ।
ಶ್ರುತ್ವಾ ಭೀಷ್ಮಸ್ಯ ನಿಧನಂ ತದ್ವದೇತದ್ ಭವಿಷ್ಯತಿ ॥ ೨ ॥

ಎಲೈ ಪರಂತಪನೇ, ಪ್ರೀತಿಪಾತ್ರನೇ, ಭೀಷ್ಮರ ನಿಧನವನ್ನು ಕೇಳಿ ಅದರಂತೆಯೇ ದ್ರೋಣರಿಗೂ ಆಗುವುದು ಎಂದು ಭಾವಿಸಿ ನನ್ನ ಮನಸ್ಸು ದ್ರೋಣರ ವಿಷಯದಲ್ಲಿ ದುಃಖವನ್ನು ಹೊಂದುತ್ತಿದೆ.

ಸಂಜಯಃ

ಋಶ್ಯವರ್ಣಾನ್ ಹಯಾನ್ ದೃಷ್ಟ್ವಾ ವ್ಯಾಯಚ್ಛಂತಂ ವೃಕೋದರಮ್ ।
ರಜತಾಶ್ವಸ್ತತಃ ಶೂರಃ ಶೈನೇಯಃ ಸನ್ನ್ಯವರ್ತತ ॥ ೩ ॥

ಸಂಜಯ– ಜಿಂಕೆಯ ವರ್ಣದ ಅಶ್ವಗಳನ್ನು ನಿಯಂತ್ರಿಸುತ್ತಿರುವ ವೃಕೋದರನನ್ನು ನೋಡಿ, ರಜತವರ್ಣದ ಅಶ್ವವನ್ನು ಹೊಂದಿದ್ದ ಶೂರನಾದ ಸಾತ್ಯಕಿಯು ಹಿಂದಿರುಗಿದನು.

ದರ್ಶನೀಯಾಸ್ತು ಕಾಂಬೋಜಾಃ ಶುಕಪತ್ರತನುಚ್ಛದಾಃ ।
ವಹಂತೋ ನಕುಲಂ ಯುದ್ಧೇ ತಾವಕಾನ್ ಶೀಘ್ರಮಭ್ಯಯುಃ ॥ ೪ ॥

ಸುಂದರವಾದ, ಗಿಣಿಯ ರೆಕ್ಕೆಯ ಬಣ್ಣವನ್ನು ಹೊಂದಿದ ಕಾಂಬೋಜ ದೇಶದ ಕುದುರೆಗಳು ರಣರಂಗದಲ್ಲಿ ನಕುಲನನ್ನು ಎಳೆಯುತ್ತಾ ನಿನ್ನವರ ಕಡೆಗೆ ಶೀಘ್ರವಾಗಿ ಬಂದವು.

ಕೃಷ್ಣಾಸ್ತು ಮೇಘಸಂಕಾಶಾಃ ಸಹದೇವಂ ಹಯೋತ್ತಮಾಃ ।
ಭೀಮವೇಗಾ ನರವ್ಯಾಘ್ರಮವಹನ್ ಪಾಂಡವಂ ಹಯಾಃ ॥ ೫ ॥

ಮೇಘಗಳಂತೆ ಕಪ್ಪು ಬಣ್ಣವನ್ನು ಹೊಂದಿದ್ದ, ಭಯಂಕರ ವೇಗವುಳ್ಳ ಶ್ರೇಷ್ಠವಾದ ಅಶ್ವಗಳು ನರವ್ಯಾಘ್ರನಾದ, ಪಾಂಡುಪುತ್ರನಾದ ಸಹದೇವನನ್ನು ಎಳೆದವು.

ಹೇಮೋತ್ತಮಪ್ರತಿಚ್ಛನ್ನೈರ್ಹಯೈರ್ವಾತಸಮೈರ್ಜವೇ ।
ಅಭ್ಯವರ್ತಂತ ಸೈನ್ಯಾನಿ ಸರ್ವಾಣ್ಯೇವ ಯುಧಿಷ್ಠಿರಮ್ ॥ ೬ ॥

ಉತ್ತಮವಾದ ಸುವರ್ಣಾಭರಣಗಳಿಂದ ಕೂಡಿದ, ವೇಗದಲ್ಲಿ ವಾಯುವಿಗೆ ಸಮವಾದ ಅಶ್ವಗಳಿಂದ ಎಲ್ಲ ಸೈನ್ಯಗಳೂ ಯುಧಿಷ್ಠಿರನ ಬಳಿಗೆ ಬಂದವು.

ರಾಜ್ಞಸ್ತ್ವನಂತರಂ ರಾಜಾ ಪಾಂಚಾಲೋ ದ್ರುಪದೋಽಭವತ್ ।
ಜಾತರೂಪಮಯಚ್ಛತ್ ಸ ಸರ್ವೈಸ್ತೈರಭಿರಕ್ಷಿತಃ ॥ ೭ ॥

ರಾಜನ ಅನಂತರದಲ್ಲಿ ಪಾಂಚಾಲರಾಜನಾದ ದ್ರುಪದನಿದ್ದನು. ಅವನು ಆ ಎಲ್ಲರಿಂದಲೂ ರಕ್ಷಿತನಾಗಿ ಸುವರ್ಣವರ್ಣದ ಅಶ್ವಗಳನ್ನು ನಿಯಂತ್ರಿಸುತ್ತಿದ್ದನು.

ಲಲಾಮ್ಯೈರ್ಹರಿಭಿರ್ಯುಕ್ತಃ ಸರ್ವಶಬ್ದಕ್ಷಮೈರ್ಯುಧಿ ।
ರಾಜಮಧ್ಯೇ ಮಹೇಷ್ವಾಸಃ ಶಾಂತಭೀರಭ್ಯವರ್ತತ ॥ ೮ ॥

ತಂ ವಿರಾಟೋಽನ್ವಯಾತ್ ಪಶ್ಚಾತ್ ಸಹ ಶೂರೈರ್ಮಹಾರಥೈಃ ॥ ೯ ॥

ಯುದ್ಧದಲ್ಲಿ ಎಲ್ಲ ಶಬ್ದಗಳನ್ನು ಸಹಿಸುವ ಶ್ರೇಷ್ಠವಾದ ಅಶ್ವಗಳಿಂದ ಕೂಡಿದವನಾಗಿ ಮಹಾಧನುರ್ಧಾರಿಯಾದ ಅವನು ನಿರ್ಭಯವಾಗಿ ರಾಜರ ಮಧ್ಯದಲ್ಲಿ ಬಂದು ನಿಂತನು. ಅವನನ್ನು ಶೂರರಾದ ಮಹಾರಥರಿಂದ ಕೂಡಿದ ವಿರಾಟನು ಹಿಂಬಾಲಿಸಿ ಅವನ ಹಿಂದೆ ನಿಂತನು.

ಕೇಕಯಾಶ್ಚ ಶಿಖಂಡೀ ಚ ಧೃಷ್ಟಕೇತುಸ್ತಥೈವ ಚ ।
ಸ್ವೈಃ ಸ್ವೈಃ ಸೈನ್ಯೈಃ ಪರಿವೃತಾ ಮತ್ಸ್ಯರಾಜಾನಮನ್ವಯುಃ ॥ ೧೦ ॥

ಕೇಕಯರೂ, ಶಿಖಂಡಿ ಮತ್ತು ಧೃಷ್ಟಕೇತು ಇವರೂ ತಮ್ಮ ತಮ್ಮ ಸೇನೆಗಳಿಂದ ಪರಿವೃತರಾಗಿ ಮತ್ಸ್ಯರಾಜನಾದ ವಿರಾಟನನ್ನು ಹಿಂಬಾಲಿಸಿದರು.

ತಸ್ಯ ಪಾಟಲಪುಷ್ಪಾಣಾಂ ತುಲ್ಯವರ್ಣಾ ಹಯೋತ್ತಮಾಃ ।
ವಹಂತಃ ಸಮಶೋಭಂತ ಮಾತ್ಸ್ಯಸ್ಯಾಮಿತ್ರಘಾತಿನಃ ॥ ೧೧ ॥

ಶತ್ರುಘಾತಿಯಾದ ವಿರಾಟನ ಪಾಟಲ (ಗುಲಾಬಿ) ಪುಷ್ಪಗಳಿಗೆ ಸಮಾನವಾದ ವರ್ಣವುಳ್ಳ ಶ್ರೇಷ್ಠವಾದ ಅಶ್ವಗಳು ಅವನ ರಥವನ್ನು ಎಳೆಯುತ್ತಾ ಶೋಭಿಸಿದವು.

ಇಂದ್ರಗೋಪಕವರ್ಣಾಶ್ವಾ ಭ್ರಾತರಃ ಪಂಚ ಕೇಕಯಾಃ ।
ಜಾತರೂಪಾ ಇವಾಭಾಂತಿ ತೇ ಸರ್ವೇ ಲೋಹಿತಧ್ವಜಾಃ ॥ ೧೨ ॥

ಸಹೋದರರಾದ ಐವರು ಕೇಕಯರು ಇಂದ್ರಗೋಪದಂತೆ ಕೆಂಪುವರ್ಣದ ಅಶ್ವಗಳಿಂದ ಕೂಡಿದವರು. ಆ ಅಶ್ವಗಳು ಸುವರ್ಣದಂತೆ ಹೊಳೆಯುತ್ತಿದ್ದವು. ಕೇಕಯರೆಲ್ಲರೂ ಕೆಂಪು ಧ್ವಜವುಳ್ಳವರು.

ತೇ ಹೇಮಮಾಲಿನಃ ಶೂರಾಃ ಸರ್ವೇ ಯುದ್ಧವಿಶಾರದಾಃ ।
ವರ್ಷಂತ ಇವ ಜೀಮೂತಾಃ ಪ್ರತ್ಯದೃಶ್ಯಂತ ದಂಶಿತಾಃ ॥ ೧೩ ॥

ಹೇಮಮಾಲೆಯನ್ನು ಧರಿಸಿದವರೂ, ಶೂರರೂ, ಯುದ್ಧವಿಶಾರದರೂ, ಮೋಡಗಳಂತೆ ಬಾಣಗಳನ್ನು ಸುರಿಸುವವರೂ ಆದ ಅವರು ಕವಚಾದಿಗಳಿಂದ ಸನ್ನದ್ಧರಾಗಿ ಕಂಡುಬಂದರು.

ಆಮ್ರಪಲ್ಲವವರ್ಣಾಸ್ತು ಸುಧನ್ವಾನಂ ಮಹೌಜಸಮ್ ।
ದಾಂತಾಸ್ತಾಮ್ರಾರುಣಾ ಯುಕ್ತಾಃ ಶಿಖಂಡಿನಮುದಾವಹನ್ ॥ ೧೪ ॥

ಮಹಾಸಾಮರ್ಥ್ಯವುಳ್ಳ ಸುಧನ್ವನನ್ನು ಮಾವಿನ ಚಿಗುರಿನ ಬಣ್ಣದ ಅಶ್ವಗಳೂ, ಶಿಖಂಡಿಯನ್ನು ತಾಮ್ರದಂತೆ ಕೆಂಪಾದ ಚೆನ್ನಾಗಿ ಪಳಗಿಸಲ್ಪಟ್ಟ ಅಶ್ವಗಳೂ ಎಳೆದವು.

ತಥಾ ದ್ವಾದಶಸಾಹಸ್ರಾಃ ಪಾಂಚಾಲಾನಾಂ ಮಹಾರಥಾಃ ।
ತೇಷಾಂ ತು ಷಟ್ಸಹಸ್ರಾಣಿ ಯೇ ಶಿಖಂಡಿನಮನ್ವಯುಃ ॥ ೧೫ ॥

ಹಾಗೆಯೇ ಪಾಂಚಾಲಮಹಾರಥರು ಹನ್ನೆರಡು ಸಾವಿರ ಮಂದಿ. ಅವರಲ್ಲಿ ಶಿಖಂಡಿಯನ್ನು ಹಿಂಬಾಲಿಸಿದವರು ಆರು ಸಾವಿರ.

ಪುತ್ರಂ ತು ಶಿಶುಪಾಲಸ್ಯ ನರಸಿಂಹಸ್ಯ ಮಾರಿಷ ।
ಆಕ್ರೀಡಂತೋ ವಹಂತಿ ಸ್ಮ ಸಾರಂಗಶಬಲಾ ಹಯಾಃ ॥ ೧೬ ॥

ಎಲೈ ಪೂಜ್ಯನೇ, ನರಶ್ರೇಷ್ಠನಾದ ಶಿಶುಪಾಲನ ಪುತ್ರನನ್ನು ಸಾರಂಗದಂತೆ (ಜಿಂಕೆಯಂತೆ) ಅನೇಕ ವರ್ಣಗಳಿಂದ ಕೂಡಿದ ಅಶ್ವಗಳು ಆಟವಾಡುತ್ತಾ ಎಳೆದವು.

ಧೃಷ್ಟಕೇತುಸ್ತು ಚೇದೀನಾಮೃಷಭೋಽತಿಬಲಾನ್ವಿತಃ ।
ಕಾಂಬೋಜೈಃ ಶಬಲೈರಶ್ವೈರಭ್ಯವರ್ತತ ದುರ್ಜಯಃ ॥ ೧೭ ॥

ಬಹಳ ಬಲಿಷ್ಠನಾದ, ಚೇದಿಗಳಲ್ಲಿ ಶ್ರೇಷ್ಠನಾದ, ದುರ್ಜಯನಾದ ಧೃಷ್ಟಕೇತುವು ಶಬಲವರ್ಣದಿಂದ ಕೂಡಿದ ಕಾಂಬೋಜದೇಶದ ಅಶ್ವಗಳಿಂದ ಮುಂದೆ ಬಂದನು.

ಬೃಹತ್ಕ್ಷತ್ರಂ ತು ಕೈಕೇಯಂ ಸುಕುಮಾರಂ ಹಯೋತ್ತಮಾಃ ।
ಪಲಾಲಧೂಮಸಂಕಾಶಾಃ ಸೈಂಧವಾಸ್ತಮುದಾವಹನ್ ॥ ೧೮ ॥

ಕೇಕಯ ದೇಶದ ಸುಕುಮಾರನಾದ ಬೃಹತ್‌ಕ್ಷತ್ರನನ್ನು ತೃಣಗಳಿಂದ ಉಂಟಾದ ಧೂಮವರ್ಣದ ಸಿಂಧುದೇಶದ ಕುದುರೆಗಳು ಎಳೆದು ತಂದವು.

ಮಲ್ಲಿಕಾಕ್ಷಾಃ ಪದ್ಮವರ್ಣಾ ಬಾಹ್ಲಿಜಾತಾಃ ಸ್ವಲಂಕೃತಾಃ ।
ಶೂರಂ ಶಿಖಂಡಿನಃ ಪುತ್ರಂ ಕ್ಷತ್ರದೇವಮುದಾವಹನ್ ॥ ೧೯ ॥

ಮಲ್ಲಿಗೆಯಂತೆ ಕಣ್ಣುಗಳನ್ನು ಹೊಂದಿದ, ಪದ್ಮವರ್ಣದ, ಬಾಹ್ಲಿಕ ದೇಶದಲ್ಲಿ ಜನಿಸಿದ, ಚೆನ್ನಾಗಿ ಅಲಂಕರಿಸಲ್ಪಟ್ಟ ಕುದುರೆಗಳು ಶಿಖಂಡಿಯ ಪುತ್ರನಾದ, ಶೂರನಾದ ಕ್ಷತ್ರದೇವನನ್ನು ಎಳೆದವು.

ರುಗ್ಮಭಾಂಡ್ಯೈಃ ಪ್ರತಿಚ್ಛನ್ನಾಃ ಕೌಶೇಯಸದೃಶಾ ಹಯಾಃ ।
ಕ್ಷಮಾವಂತೋಽವಹನ್ ಯುದ್ಧೇ ಸೇನಾಬಿಂದುಂ ಮಹಾಧ್ವಜಮ್ ॥

ಸುವರ್ಣಾಭರಣಗಳಿಂದ ಮುಚ್ಚಲ್ಪಟ್ಟ, ರೇಷ್ಮೆಯ ಬಣ್ಣವನ್ನು ಹೊಂದಿದ, ಶಾಂತವಾದ ಅಶ್ವಗಳು ಯುದ್ಧದಲ್ಲಿ ಮಹಾಧ್ವಜವನ್ನು ಹೊಂದಿದ ಸೇನಾಬಂದುವನ್ನು ಎಳೆದವು.

ಯುವಾನಮವಹನ್ ಯುದ್ಧೇ ಕ್ರೌಂಚವರ್ಣಾ ಹಯೋತ್ತಮಾಃ ।
ಕಾಶ್ಯಸ್ಯಾಭಿಭುವಃ ಪುತ್ರಂ ಸುಕುಮಾರಂ ಯಶಸ್ವಿನಮ್ ॥ ೨೧ ॥

ಶತ್ರುಗಳನ್ನು ಪರಾಭವಗೊಳಿಸುವ ಕಾಶಿರಾಜನ ಪುತ್ರನಾದ, ಕೀರ್ತಿವಂತನಾದ, ಯುವಕನಾದ ಸುಕುಮಾರನನ್ನು ಯುದ್ಧದಲ್ಲಿ ಕ್ರೌಂಚವರ್ಣದ ಶ್ರೇಷ್ಠವಾದ ಅಶ್ವಗಳು ಎಳೆದವು.

ಶ್ವೇತಾಸ್ತು ಪ್ರತಿವಿಂಧ್ಯಂ ತಂ ಕೃಷ್ಣಗ್ರೀವಾ ಹಯೋತ್ತಮಾಃ ।
ಯುವಾನಮವಹನ್ ಯುದ್ಧೇ ಯಂತುಃ ಪ್ರೇಷ್ಯಕರಾ ಹಯಾಃ ॥೨೨॥

ಶ್ವೇತವರ್ಣದ, ಕತ್ತಿನಲ್ಲಿ ಮಾತ್ರ ಕಪ್ಪು ಬಣ್ಣವುಳ್ಳ, ಸಾರಥಿಯ ಆಜ್ಞೆಯನ್ನು ಪಾಲಿಸುವ, ಶ್ರೇಷ್ಠವಾದ ಅಶ್ವಗಳು ಯುದ್ಧದಲ್ಲಿ ಯುವಕನಾದ ಪ್ರತಿವಿಂಧ್ಯನನ್ನು ಎಳೆದವು.

ಸುತಸೋಮಂ ತು ಯೋಧಾಗ್ರ್ಯಂ ಭೀಮಪುತ್ರಂ ಮಹಾಬಲಮ್ ।
ಸುತಸೋಮಂ ತು ದ್ರೌಪದ್ಯಾಂ ಪಾರ್ಥಃ ಪುತ್ರಮಜೀಜನತ್ ।
ಮಾಷಪುಷ್ಪಸವರ್ಣಾಸ್ತಮವಹನ್ ವಾಜಿನೋ ರಣೇ ॥ ೨೩ ॥

ಭೀಮಸೇನನು ದ್ರೌಪದಿಯಲ್ಲಿ ಸುತಸೋಮ ಎಂಬ ಪುತ್ರನನ್ನು ಪಡೆದನು. ಮಹಾಬಲನಾದ ಭೀಮಪುತ್ರನಾದ, ಶ್ರೇಷ್ಠ ಯೋಧನಾದ ಸುತಸೋಮನನ್ನು ಮಾಷಪುಷ್ಪಗಳ (ಉದ್ದಿನ ಗಿಡದ ಹೂವುಗಳು) ವರ್ಣಕ್ಕೆ ಸಮವಾದ ಬಣ್ಣವನ್ನು ಹೊಂದಿದ ಅಶ್ವಗಳು ರಣರಂಗದಲ್ಲಿ ಎಳೆದವು.

ಸಹಸ್ರಸೋಮಪ್ರತಿಮೋ ಬಭೂವ
ಪುರೇ ಕುರೂಣಾಮುದಯೇಂದುನಾಮ್ನಿ ।
ತಸ್ಮಿನ್ ಜಾತಃ ಸೋಮಸಂಕ್ರಂದಮಧ್ಯೇ
ಯಸ್ಮಾತ್ತಸ್ಮಾತ್ಸುತಸೋಮೋಽಭವತ್ ಸಃ ॥ ೨೪ ॥

ಕುರುಗಳ ಪಟ್ಟಣದಲ್ಲಿ ಸೋಮನಾಮಕವಾದ ಸಹಸ್ರ ಸೋಮಯಾಗಗಳನ್ನು ಮಾಡಿದಾಗ ಸೋಮಾಭಿಷವದ ಮಧ್ಯದಲ್ಲಿ ಸಹಸ್ರ ಚಂದ್ರನ ಕಾಂತಿಯನ್ನು ಹೊಂದಿದವನಾಗಿ ಜನಿಸಿದ ಕಾರಣದಿಂದ ಅವನಿಗೆ ಸುತಸೋಮ ಎಂಬ ಹೆಸರು ಬಂದಿತು.

ಸಹಸ್ರಸೋಮಪ್ರತಿಮಾ ಹಯಾಃ ಕನಕಭೂಷಣಾಃ ।
ವೀರಂ ತಮವಹನ್ ಯುದ್ಧೇ ಹೇಷಮಾಣಾಃ ಸಮಂತತಃ ॥ ೨೫ ॥

ಸಹಸ್ರಚಂದ್ರರ ಕಾಂತಿಯನ್ನು ಹೊಂದಿದ, ಕನಕಭೂಷಣವನ್ನು ಹೊಂದಿದ ಅಶ್ವಗಳು ಕೆನೆಯುತ್ತಾ ಯುದ್ಧದಲ್ಲಿ ಎಲ್ಲ ಕಡೆಗಳಲ್ಲಿ ಆ ವೀರನನ್ನು ಎಳೆದವು.

ನಾಕುಲಂ ತು ಶತಾನೀಕಂ ಸಾಲಪುಷ್ಪಸಮಾ ಹಯಾಃ ।
ಆದಿತ್ಯತರುಣಪ್ರಖ್ಯಾ ಶ್ಲಾಘನೀಯಮುದಾವಹನ್ ॥ ೨೬ ॥

ನಕುಲನ ಪುತ್ರನಾದ, ಶ್ಲಾಘನೀಯನಾದ ಶತಾನೀಕನನ್ನು ಸಾಲವೃಕ್ಷದ ಪುಷ್ಪಗಳಿಗೆ ಸಮಾನವಾದ ಬಣ್ಣವನ್ನು ಹೊಂದಿದ, ಉದಯಿಸಿದ ಸೂರ್ಯನಂತಿರುವ ಅಶ್ವಗಳು ಎಳೆದವು.

ಕಾಂಚನಾಪೀಡನೈರ್ಗಾತ್ರೈಃ ಮಾಯೂರಗ್ರೀವಸನ್ನಿಭಾಃ ।
ದ್ರೌಪದೇಯಂ ನರವ್ಯಾಘ್ರಂ ಶ್ರುತಕರ್ಮಾಣಮಾವಹನ್ ॥ ೨೭ ॥

ಸುವರ್ಣಮಯವಾದ ಶಿರಸ್ಸಿನ ಆಭರಣವನ್ನು ಹೊಂದಿದ ಶರೀರದಿಂದ ಕೂಡಿದವುಗಳಾಗಿ, ನವಿಲಿನ ಕತ್ತಿನ ಬಣ್ಣವುಳ್ಳ ಅಶ್ವಗಳು ದ್ರೌಪದಿಯ ಪುತ್ರನೂ, ನರವ್ಯಾಘ್ರನೂ ಆದ ಶ್ರುತಕರ್ಮನನ್ನು ಎಳೆದವು.

ಶ್ರುತಕೀರ್ತಿಂ ಶ್ರುತನಿಧಿಂ ದ್ರೌಪದೇಯಂ ಹಯೋತ್ತಮಾಃ ।
ಊಹುಃ ಪಾರ್ಥಸಮಂ ಯುದ್ಧೇ ಚಾಷಪತ್ರನಿಭಾ ಹಯಾಃ ॥ ೨೮ ॥

ವಿದ್ಯಾನಿಧಿಯಾದ, ದ್ರೌಪದಿಯ ಪುತ್ರನಾದ, ಅರ್ಜುನನಿಗೆ ಸಮನಾದ, ಶ್ರುತಕೀರ್ತಿಯನ್ನು ಚಾಷಪಕ್ಷಿಯ (ಕರಿ ಹಕ್ಕಿ) ಸಮನಾದ ಬಣ್ಣವುಳ್ಳ ಅಶ್ವಗಳು ಎಳೆದವು.

ಯಮಾಹುರಧ್ಯರ್ಧಗುಣಂ ಪಾರ್ಥಾತ್ ಕೃಷ್ಣಾಚ್ಚ ಸಂಯುಗೇ ।
ಸೋಽಭಿಮನ್ಯುಃ ಪಿಶಂಗೈಸ್ತು ಭೃಶಮಶ್ವೈರ್ನ್ಯವರ್ತತ ॥ ೨೯ ॥

ಯಾವನನ್ನು ಕೃಷ್ಣನಿಗಿಂತಲೂ ಮತ್ತು ಅರ್ಜುನನಿಗಿಂತಲೂ ಒಂದೂವರೆಯಷ್ಟು ಹೆಚ್ಚು ಗುಣವುಳ್ಳವನು ಎಂದು ಹೇಳುತ್ತಾರೆಯೋ ಅಂತಹ ಅಭಿಮನ್ಯುವು ಪಿಶಂಗ (ಕಂದು) ಬಣ್ಣದ ಅಶ್ವಗಳಿಂದ ರಣರಂಗಕ್ಕೆ ಶೀಘ್ರವಾಗಿ ಹಿಂದಿರುಗಿದನು.

ಪಲಾಲಕಾಂಡವರ್ಣಾಸ್ತು ವಾರ್ಧಕ್ಷೇಮಿಂ ತರಸ್ವಿನಮ್ ।
ಊಹುಃ ಸುತುಮುಲೇ ಯುದ್ಧೇ ಹಯಾ ಹೃಷ್ಟಾಃ ಸ್ವಲಂಕೃತಾಃ ॥ ೩೦ ॥

ವೇಗಶಾಲಿಯಾದ ವಾರ್ಧಕ್ಷೇಮಿಯನ್ನು ಪಲಾಲ ಸಸ್ಯದ ಕಾಂಡಕ್ಕೆ ಸಮಾನವಾದ ವರ್ಣವುಳ್ಳ ಅಶ್ವಗಳು ಚೆನ್ನಾಗಿ ಅಲಂಕೃತವಾಗಿ ಸಂತೋಷದಿಂದ ತೀವ್ರವಾದ ಯುದ್ಧದಲ್ಲಿ ಎಳೆದವು.

ಕುಮಾರಂ ಶಿತಿಪಾದಾಸ್ತು ರುಗ್ಮಚಿತ್ರೈರುರಶ್ಛದೈಃ ।
ಸೌಚಿತ್ತಿಮವಹನ್ ಯುದ್ಧೇ ಯಂತುಃ ಪ್ರೇಷ್ಯಕರಾ ಹಯಾಃ ॥ ೩೧ ॥

ಬಿಳಿಯ ಪಾದಗಳಿಂದ ಕೂಡಿದ, ಸುವರ್ಣಗಳಿಂದ ವಿಚಿತ್ರವಾಗಿ ಕಾಣುವ ಎದೆಯ ಕವಚದಿಂದ ಕೂಡಿದ, ಸಾರಥಿಗೆ ವಶವಾದ ಅಶ್ವಗಳು ಕುಮಾರನಾದ ಸೌಚಿತ್ತಿಯನ್ನು ರಣರಂಗದಲ್ಲಿ ಎಳೆದವು.

ರುಗ್ಮಪುಷ್ಪಾವಕೀರ್ಣಾಸ್ತು ಕೌಶೇಯಸದೃಶಾ ಹಯಾಃ ।
ಸುವರ್ಣಮಾಲಿನಃ ಕ್ಷಾಂತಾಃ ಶ್ರೇಣಿಮಂತಮುದಾವಹನ್ ॥ ೩೨ ॥

ಸುವರ್ಣಮಯವಾದ ಪುಷ್ಪಗಳಿಂದ ತುಂಬಿದ, ರೇಷ್ಮೆಯ ಬಣ್ಣಕ್ಕೆ ಸದೃಶವಾದ, ಸುವರ್ಣಮಾಲೆಗಳನ್ನು ಧರಿಸಿದ ಪಳಗಿದ ಅಶ್ವಗಳು ಶ್ರೇಣಿಮಂತನನ್ನು ಎಳೆದವು.

ರುಗ್ಮಮಾಲಾಧರಾಃ ಶುಭ್ರಾ ಹೇಮವರ್ಣಾಃ ಸ್ವಲಂಕೃತಾಃ ।
ಕಾಶಿರಾಜಂ ಹಯಶ್ರೇಷ್ಠಾಃ ಶ್ಲಾಘನೀಯಮುದಾವಹನ್ ॥ ೩೩ ॥

ಸುವರ್ಣಮಾಲೆಗಳನ್ನು ಧರಿಸಿದ, ಚೆನ್ನಾಗಿ ಅಲಂಕರಿಸಲ್ಪಟ್ಟ, ಶುಭ್ರವಾದ, ಸುವರ್ಣವರ್ಣದ ಶ್ರೇಷ್ಠ ಅಶ್ವಗಳು ಶ್ಲಾಘನೀಯನಾದ ಕಾಶಿರಾಜನನ್ನು ಎಳೆದವು.

ಯೋಽಶ್ರೌಯತ ಧನುರ್ವೇದೇ ಬ್ರಾಹ್ಮೇ ವೇದೇ ಚ ಪಾರಗಃ ।
ಹ್ರೀಮಾನ್ ಸತ್ಯಧೃತಿಃ ಶೂರೋ ದ್ರೋಣಂ ಪ್ರೇಪ್ಸುಃ ಪರಂತಪಃ ॥೩೪॥

ಯಃ ಸ ಪಾಂಚಾಲಸೈನ್ಯಾನಾಂ ದ್ರೋಣಮಂಶಮಕಲ್ಪಯತ್ ।
ಪಾರಾವತಸವರ್ಣಾಶ್ವಾ ಧೃಷ್ಟದ್ಯುಮ್ನಮುದಾವಹನ್ ॥ ೩೫ ॥

ಯಾವನು ಪರಂತಪನಾಗಿ ಧನುರ್ವೇದದಲ್ಲಿಯೂ, ಬ್ರಾಹ್ಮವೇದದಲ್ಲಿಯೂ ಪಾರಂಗತನಾಗಿ, ನಾಚಿಕೆಯುಳ್ಳವನೂ, ಸತ್ಯವಾದ ಧೈರ್ಯವುಳ್ಳವನೂ, ಶೂರನೂ ಆಗಿ ದ್ರೋಣರನ್ನು ಕೊಲ್ಲಲು ಬಯಸಿದನೋ, ಪಾಂಚಾಲ ಸೈನ್ಯದಲ್ಲಿ ಯಾವನು ದ್ರೋಣರನ್ನು ತನ್ನಿಂದ ವಧಿಸಲ್ಪಡಬೇಕಾದ ಭಾಗವೆಂದು ಕಲ್ಪಿಸಿದನೋ ಅಂತಹ ಧೃಷ್ಟದ್ಯುಮ್ನನನ್ನು ಪಾರಿವಾಳದ ಬಣ್ಣದ ಅಶ್ವಗಳು ಎಳೆದವು.

ತಮನ್ವಯಾತ್ ಸತ್ಯಧೃತಿಃ ಸೌವಿಂದೋ ಯುದ್ಧದುರ್ಮದಃ ।
ಶ್ರೇಣಿಮಾನ್ ವಸುದಾನಶ್ಚ ಪುತ್ರಃ ಕಾಶ್ಯಸ್ಯ ಚಾಭಿಭೂಃ ॥ ೩೬ ॥

ಅವನನ್ನು ಸತ್ಯಧೃತಿ, ಯುದ್ಧದುರ್ಮದನಾದ ಸೌವಿಂದ, ಶ್ರೇಣಿಮಾನ್, ವಸುದಾನ ಮತ್ತು ಶತ್ರುಸಂಹಾರಕನಾದ ಕಾಶಿರಾಜನ ಪುತ್ರ ಎಲ್ಲರೂ ಹಿಂಬಾಲಿಸಿದರು.

ಯಯುಃ ಪರಮಕಾಂಬೋಜೈರ್ಜವನೈರ್ಹೇಮಮಾಲಿಭಿಃ ।
ಭೀಷಯಂತೋ ದ್ವಿಷತ್ಸೈನ್ಯಂ ಯಮವೈಶ್ರವಣೋಪಮಾಃ ॥ ೩೭ ॥

ಯಮನಿಗೂ ಮತ್ತು ಕುಬೇರನಿಗೂ ಸದೃಶರಾದ ಅವರು ಹೇಮಮಾಲೆಗಳನ್ನು ಧರಿಸಿದ, ವೇಗಶಾಲಿಗಳಾದ ಕಾಂಬೋಜ ದೇಶದ ಅಶ್ವಗಳಿಂದ ಶತ್ರುಸೈನ್ಯವನ್ನು ಭಯಪಡಿಸುತ್ತಾ ಹೊರಟರು.

ಯೇ ತು ಪುಷ್ಕರಸಾರಸ್ಯ ತುಲ್ಯವರ್ಣಾ ಹಯೋತ್ತಮಾಃ ।
ಜವೇ ಶ್ಯೇನಸಮಾಶ್ಚಿತ್ರಾಃ ಸುದಾಮಾನಮುದಾವಹನ್ ॥ ೩೮ ॥

ಕಮಲ ಕೇಸರ ಬಣ್ಣಕ್ಕೆ ಸಮವಾದ ಬಣ್ಣವುಳ್ಳ, ವೇಗದಲ್ಲಿ ಶ್ಯೇನಕ್ಕೆ ಸಮವಾದ ವೇಗವುಳ್ಳ, ವಿಚಿತ್ರವಾದ ಮತ್ತು ಶ್ರೇಷ್ಠವಾದ ಅಶ್ವಗಳು ಸುದಾಮನನ್ನು ಎಳೆದವು.

ಶಶಲೋಹಿತವರ್ಣಾಸ್ತು ಪಾಂಡರೋದ್ಗತರಾಜಯಃ ।
ಪಾಂಚಾಲ್ಯಂ ಗೋಪತೇಃ ಪುತ್ರಂ ಸಿಂಹಸೇನಮುದಾವಹನ್ ॥ ೩೯ ॥

ಮೊಲದ ರಕ್ತದ ವರ್ಣಕ್ಕೆ ಸಮವಾದ ವರ್ಣವುಳ್ಳ, ಕತ್ತಿನ ಮೇಲೆ ಬಿಳಿಯ ರೋಮರಾಜಿಗಳನ್ನುಳ್ಳ ಅಶ್ವಗಳು ಪಾಂಚಾಲ ರಾಜಕುಮಾರನಾದ ಸಿಂಹಸೇನನನ್ನು ಎಳೆದವು.

ಇಂದ್ರಾಯುಧಸವರ್ಣಾಸ್ತು ಕುಂತಿಭೋಜಮುದಾವಹನ್ ।
ಆಪತ್ಸು ನ ವಿಷೀದಂತೋ ಮಾತುಲಂ ಸವ್ಯಸಾಚಿನಃ ॥ ೪೦ ॥

ಅರ್ಜುನನ ಸೋದರಮಾವನಾದ ಕುಂತಿಭೋಜನನ್ನು ಸಂಕಟದಲ್ಲಿ ವಿಷಾದವನ್ನು ಹೊಂದದ ಕಾಮನಬಿಲ್ಲಿಗೆ ಸಮವಾದ ಬಣ್ಣವುಳ್ಳ ಅಶ್ವಗಳು ಎಳೆದವು.

ಅಂತರಿಕ್ಷಸವರ್ಣಾಸ್ತು ತಾರಕಾಭಿಶ್ಚಿತಾ ಇವ ।
ರಾಜಾನಂ ರೋಚಮಾನಂ ತೇ ಹಯಾಃ ಶಂಖಮುದಾವಹನ್ ॥೪೧॥

ಅಂತರಿಕ್ಷಕ್ಕೆ ಸಮಾನವಾದ ವರ್ಣವುಳ್ಳ, ನಕ್ಷತ್ರದಿಂದ ತುಂಬಿದಂತೆ ಕಾಣುವ ಅಶ್ವಗಳು ರೋಚಮಾನನಾದ ಶಂಖರಾಜನನ್ನು ಎಳೆದವು.

ಕರ್ಬುರಾಃ ಶಿತಿಪಾದಾಸ್ತು ಹೇಮಜಾಲಪರಿಚ್ಛದಾಃ ।
ಜಾರಾಸಂಧಿಂ ಹಯಶ್ರೇಷ್ಠಾಃ ಸಹದೇವಮುಪಾವಹನ್ ॥ ೪೨ ॥

ದೇಹವೆಲ್ಲವೂ ಮಿಶ್ರವರ್ಣದಿಂದ ಕೂಡಿ, ಬಿಳಿಯ ಪಾದವನ್ನು ಹೊಂದಿ, ಸುವರ್ಣಜಾಲಗಳಿಂದ ಅಲಂಕೃತವಾದ ಶ್ರೇಷ್ಠವಾದ ಅಶ್ವಗಳು ಜರಾಸಂಧನ ಪುತ್ರನಾದ ಸಹದೇವನನ್ನು ಎಳೆದವು.

ಪ್ರಭದ್ರಕಾಸ್ತು ಪಾಂಚಾಲಾಃ ಷಟ್ಸಹಸ್ರಾ ಉದಾಯುಧಾಃ ।
ನಾನಾವರ್ಣೈರ್ಹಯೈಃ ಶ್ರೇಷ್ಠೈರ್ಹೇಮರೂಪ್ಯಮಣಿಧ್ವಜೈಃ ॥ ೪೩ ॥

ಶರವ್ರಾತೈರ್ನಿರುಂಧಂತಃ ಶತ್ರೂನ್ ವಿತತಕಾರ್ಮುಕಾಃ ।
ಸಮಾನಮೃತ್ಯವೋ ಭೂತ್ವಾ ಧೃಷ್ಟದ್ಯುಮ್ನಂ ಸಮನ್ವಯುಃ ॥ ೪೪ ॥

ಪಾಂಚಾಲ ದೇಶದ ಪ್ರಭದ್ರಕರು ಆರು ಸಹಸ್ರ ಯೋಧರು ಆಯುಧಗಳನ್ನು ಎತ್ತಿಹಿಡಿದು ನಾನಾಬಣ್ಣಗಳಿಂದ ಕೂಡಿದ ಅಶ್ವಗಳಿಂದಲೂ ಮತ್ತು ಸುವರ್ಣ-ರಜತ-ಮರಕತಾದಿಗಳಿಂದ ಶೋಭಿಸುವ ಧ್ವಜಗಳಿಂದಲೂ ಕೂಡಿದವರಾಗಿ

ಬಿಲ್ಲನ್ನು ಎಳೆದು ಬಾಣಗಳ ಸಮೂಹದಿಂದ ಶತ್ರುಗಳನ್ನು ತಡೆಯುತ್ತಾ ಸಮಾನ ಮೃತ್ಯುವನ್ನು ಹೊಂದುವವರಾಗಿ ಧೃಷ್ಟದ್ಯುಮ್ನನನ್ನು ಹಿಂಬಾಲಿಸಿದರು.

ಬಭ್ರುಕೌಶೇಯವರ್ಣಾಸ್ತು ಸುವರ್ಣವರಮಾಲಿನಃ ।
ಊಹುರಗ್ಲಾನಮನಸಃ ಚೇಕಿತಾನಂ ಹಯೋತ್ತಮಾಃ ॥ ೪೫ ॥

ಬಭ್ರುಕೌಶೇಯ ವರ್ಣವನ್ನು ಹೊಂದಿದ (ಕಂದು ಮತ್ತು ಬಿಳಿಯ ಬಣ್ಣದಿಂದ ಕೂಡಿದ) ಶ್ರೇಷ್ಠವಾದ ಸುವರ್ಣಮಾಲೆಗಳನ್ನು ಧರಿಸಿದ ಕುಗ್ಗದ ಮನಸ್ಸುಳ್ಳ ಶ್ರೇಷ್ಠವಾದ ಅಶ್ವಗಳು ಚೇಕಿತಾನನ ರಥವನ್ನು ಎಳೆದವು.

ಪಾಂಚಾಲಾನಾಂ ರಥಶ್ರೇಷ್ಠೋ ನಿವೃತ್ತೋ ಜನಮೇಜಯಃ ।
ತಸ್ಯ ಸರ್ಷಪಪುಷ್ಪಾಣಾಂ ತುಲ್ಯವರ್ಣಾ ಹಯೋತ್ತಮಾಃ ॥ ೪೬ ॥

ಮಾಷವರ್ಣಾಸ್ತು ಜವನಾ ಬೃಹಂತೋ ಹೇಮಮಾಲಿನಃ ।
ದಧಿಪೃಷ್ಠಾಶ್ಚಂದ್ರಮುಖಾಃ ಪಾಂಚಾಲಮವಹನ್ ಹಯಾಃ ॥ ೪೭ ॥

ಪಾಂಚಾಲರ ಶ್ರೇಷ್ಠ ರಥನಾದ ಜನಮೇಜಯನು ಹಿಂದಿರುಗಿದನು. ಅವನ ಶ್ರೇಷ್ಠವಾದ ಅಶ್ವಗಳು ಸಾಸಿವೆಯ ಹೂವಿನ ಬಣ್ಣಕ್ಕೆ ಸಮಾನವಾದ ಬಣ್ಣವುಳ್ಳವು. ಉದ್ದಿನ ಬಣ್ಣದ (ಮಾಸಲು ಕಪ್ಪು ಬಣ್ಣದ), ವೇಗಶಾಲಿಗಳಾದ, ಹೇಮಮಾಲೆಯನ್ನು ಧರಿಸಿದ, ಮೊಸರಿನ ಬಣ್ಣದ ಹಿಂಭಾಗವನ್ನೂ, ಚಂದ್ರವರ್ಣದ ಮುಖವನ್ನೂ ಧರಿಸಿದ ದೊಡ್ಡ ಅಶ್ವಗಳು ಪಾಂಚಾಲನ ರಥವನ್ನು ಎಳೆದವು. ಗೋಧ, ಮದ್ರಕ ದೇಶದ, ಬಾಣದ ದಂಡದಂತೆ ನೇರವಾದ ಅಶ್ವಗಳು ದಂಡಧಾರನ ರಥವನ್ನು ಎಳೆದವು.

ಹೇಮಮಾಲಾಸ್ತು ಬಿಭ್ರಾಣಾಃ ಚಕ್ರವಾಕೋದರೋಪಮಾಃ ।
ಕೋಸಲಾಧಿಪತೇಃ ಪುತ್ರಂ ಸುಕ್ಷತ್ರಂ ವಾಜಿನೋऽವಹನ್ ॥ ೪೮ ॥

ಕೋಸಲಾಧಿಪತಿಯ ಪುತ್ರನಾದ ಸುಕ್ಷತ್ರನನ್ನು ಚಿನ್ನದ ಮಾಲೆಗಳನ್ನು ಧರಿಸಿದ, ಚಕ್ರವಾಕ ಪಕ್ಷಿಯ ಉದರದಂತೆ ಸ್ವಲ್ಪ ಬಿಳಿಯ ಬಣ್ಣದಿಂದ ಕೂಡಿದ ಅಶ್ವಗಳು ಎಳೆದವು.

ಶಬಲಾಸ್ತೇ ಬೃಹಂತೋऽಶ್ವಾ ದಾಂತಾ ಜಾಂಬೂನದಸ್ರಜಃ ।
ಯುದ್ಧೇ ಸತ್ಯಧೃತಿಂ ಕ್ಷೇಮಿಮವಹನ್ನತಿಶೋಭನಾಃ ॥ ೪೯ ॥

ಕ್ಷೇಮರಾಜನ ಪುತ್ರನಾದ ಸತ್ಯಧೃತಿಯನ್ನು ಬಹಳ ಸುಂದರವಾದ, ಅನೇಕ ವರ್ಣಗಳಿಂದ ಕೂಡಿದ, ಚೆನ್ನಾಗಿ ಪಳಗಿದ, ಚಿನ್ನದ ಮಾಲೆಯನ್ನು ಧರಿಸಿದ ದೊಡ್ಡ ಅಶ್ವಗಳು ಎಳೆದವು.

ಏಕವರ್ಣೇನ ಸರ್ವೇಣ ಧ್ವಜೇನ ಕವಚೇನ ಚ ।
ಅಶ್ವೈಶ್ಚ ಧನುಷಾ ಚೈವ ಶುಕ್ಲೈಃ ಶುಕ್ಲೋ ನ್ಯವರ್ತತ ॥ ೫೦ ॥

ಧ್ವಜ-ಕವಚ-ಅಶ್ವಗಳು-ಧನುಸ್ಸು ಎಲ್ಲವೂ ಒಂದೇ ಶುಕ್ಲ ವರ್ಣದಿಂದ ಕೂಡಿದವುಗಳಾಗಿ ಶುಕ್ಲರಾಜನನ್ನು ರಣರಂಗಕ್ಕೆ ಹಿಂದಕ್ಕೆ ಕರೆತಂದವು.

ಸಮುದ್ರಸೇನಪುತ್ರಂ ತು ಸಮುದ್ರಾರುಣಸಪ್ರಭಮ್ ।
ಅಶ್ವಾಃ ಶಶಾಂಕಸದೃಶಾಃ ಚಂದ್ರದೇವಮುದಾವಹನ್ ॥ ೫೧ ॥

ಸಮುದ್ರಸೇನನೆ ಪುತ್ರನಾದ, ಸಮುದ್ರದಂತೆ ಅರುಣವರ್ಣೋಪೇತನಾದ ಚಂದ್ರದೇವನನ್ನು ಚಂದ್ರವರ್ಣದ ಅಶ್ವಗಳು ಎಳೆದವು.

ನೀಲೋತ್ಪಲಸವರ್ಣಾಶ್ಚ ತಪನೀಯವಿಭೂಷಿತಾಃ ।
ಶೈಬ್ಯಂ ಚಿತ್ರರಥಂ ಯುದ್ಧೇ ಚಿತ್ರಮಾಲಾऽವಹನ್ ಹಯಾಃ ॥ ೫೨ ॥

ಸುವರ್ಣಾಲಂಕೃತಗಳಾದ, ನೀಲೋತ್ಪಲ ವರ್ಣವನ್ನು ಹೊಂದಿದ, ವಿಚಿತ್ರ ಮಾಲೆಗಳನ್ನು ಧರಿಸಿದ ಅಶ್ವಗಳು ಶಿಬಿಯ ವಂಶದಲ್ಲಿ ಬಂದ ಚಿತ್ರರಥರನ್ನು ಯುದ್ಧದಲ್ಲಿ ಎಳೆದವು.

ಕಲಾಯಪುಷ್ಪವರ್ಣಾಸ್ತು ಶ್ವೇತಲೋಹಿತರಾಜಯಃ ।
ರಥಸೇನಂ ಹಯಶ್ರೇಷ್ಠಾಃ ಸಮೂಹುರ್ಯುದ್ಧದುರ್ಮದಮ್ ॥ ೫೩ ॥

ಕಲಾಯ ಪುಷ್ಪದಂತೆ ಮಿಶ್ರವಾದ ಕಪ್ಪುಬಣ್ಣದಿಂದ ಕೂಡಿ, ಕತ್ತಿನ ಮೇಲೆ ಮುತ್ತು ಮತ್ತು ಹವಳಗಳನ್ನು ಹೋಲುವ ರಾಜಿಗಳಿಂದ ಕೂಡಿದ ಶ್ರೇಷ್ಠವಾದ ಅಶ್ವಗಳು ಯುದ್ಧ ದುರ್ಮದನಾದ ರಥಸೇನನನ್ನು ಎಳೆದವು.

ಯಂ ತು ಸರ್ವಮನುಷ್ಯೇಷು ಪ್ರಾಹುಃ ಶೂರತರಂ ಬುಧಾಃ ।
ತಂ ಪಟಚ್ಚರಹಂತಾರಂ ಶುಕವರ್ಣಾऽವಹನ್ ಹಯಾಃ ॥ ೫೪ ॥

ಯಾವನನ್ನು ಜ್ಞಾನಿಗಳು ಎಲ್ಲ ಮನುಷ್ಯರಲ್ಲಿಯೂ ಅತ್ಯಂತ ಶೂರನಾದವನೆಂದು ಹೇಳುತ್ತಾರೆಯೋ, ಅಂತಹ ಪಟಚ್ಚರ ದೈತ್ಯರನ್ನು ಸಂಹರಿಸಿದ ಸಮುದ್ರರಾಜನನ್ನು ಗಿಣಿಯ ಬಣ್ಣದ ಅಶ್ವಗಳು ಎಳೆದವು.

ಚಿತ್ರಾಯುಧಂ ಚಿತ್ರಮಾಲ್ಯಂ ಚಿತ್ರವರ್ಮರಥಧ್ವಜಮ್ ।
ಊಹುಃ ಕಿಂಶುಕಪುಷ್ಪಾಣಾಂ ತುಲ್ಯವರ್ಣಾ ಹಯೋತ್ತಮಾಃ ॥ ೫೫ ॥

ವಿಚಿತ್ರವಾದ ಕವಚ-ರಥ-ಧ್ವಜಗಳನ್ನು ಹೊಂದಿದ, ವಿಚಿತ್ರವಾದ ಮಾಲೆಯನ್ನು ಧರಿಸಿದ, ಚಿತ್ರಾಯುಧನನ್ನು ಮುತ್ತುಗದ ಹೂವಿನ ಬಣ್ಣದ ಶ್ರೇಷ್ಠವಾದ ಅಶ್ವಗಳು ಎಳೆದವು.

ಏಕವರ್ಣೇನ ಸರ್ವೇಣ ಧ್ವಜೇನ ಕವಚೇನ ಚ ।
ಧನುಷಾ ರಥವಾಹೈಶ್ಚ ನೀಲೈರ್ನೀಲೋಽಭ್ಯವರ್ತತ ॥ ೫೬ ॥

ತನ್ನ ಧ್ವಜ, ಕವಚ, ಧನುಸ್ಸು, ಅಶ್ವಗಳು ಎಲ್ಲವೂ ಒಂದೇ ಕಪ್ಪು ಬಣ್ಣದಿಂದ ಕೂಡಿದ ನೀಲನು ರಣರಂಗಕ್ಕೆ ಹಿಂದಿರುಗಿದನು.

ಯೇ ತು ಪುಷ್ಕರಪರ್ಣಸ್ಯ ತುಲ್ಯವರ್ಣಾ ಹಯೋತ್ತಮಾಃ ।
ತೇ ರೋಚಮಾನಸ್ಯ ಸುತಂ ಹೇಮರೂಪಮುದಾವಹನ್ ॥ ೫೭ ॥

ಕಮಲದ ಪತ್ರಕ್ಕೆ ಸಮಾನವಾದ ವರ್ಣವುಳ್ಳ ಶ್ರೇಷ್ಠವಾದ ಅಶ್ವಗಳು ರೋಚಮಾನನ ಪುತ್ರನಾದ ಹೇಮರೂಪನನ್ನು ಎಳೆದವು.

ನಾನಾರೂಪೈ ರತ್ನಚಿತ್ರೈರ್ವರೂಥಧ್ವಜಕಾರ್ಮುಕೈಃ ।
ವಾಜಿಭಿಶ್ಚ ಪತಾಕಾಭಿಃ ಚಿತ್ರೈಶ್ಚಿತ್ರೋ ನ್ಯವರ್ತತ ॥ ೫೮ ॥

ನಾನಾರೂಪಗಳನ್ನು ಹೊಂದಿದ ರತ್ನಗಳು, ರಕ್ಷಣೆಯ ವಸ್ತುಗಳು ಧ್ವಜ-ಧನುಸ್ಸುಗಳು, ಅಶ್ವಗಳು ಮತ್ತು ಪತಾಕೆಗಳು ಇವುಗಳಿಂದ ಸಹಿತನಾಗಿ ಚಿತ್ರನು ಹಿಂದಿರುಗಿದನು.

ಗೋಧಾಶ್ಚ ಮದ್ರಕಾಶ್ಚೈವ ಶರಕಾಂಡನಿಭಾ ಹಯಾಃ ।
ನಿಶ್ಚುತಾಂಗಾಃ ಕುಟುಂಗಾಶ್ಚ ದಂಡಧಾರಮುದಾವಹನ್ ॥ ೫೯ ॥

ಗೋಧ, ಮದ್ರಕ, ನಿಷ್ತ್ರಿಂಶ, ಕುಟಂಗ ಈ ದೇಶದ ಬಾಣದ ಕಾಂಡದಂತಹ ಎದೆಯುಳ್ಳ (ಬಿಳಿಯ ಬಣ್ಣದ ಬೆನ್ನನ್ನು ಹೊಂದಿದ) ಅಶ್ವಗಳು ದಂಡಧಾರನನ್ನು ಎಳೆದವು.

ಆರಕೂಟಕವರ್ಣಾಭಾ ರಾಂಕವಾಸ್ತರಣಾಃ ಪೃಥಕ್ ।
ಅವಹನ್ ಯೋಧಮುಖ್ಯಾನಾಮಯುತಾನಿ ಚತುರ್ದಶ ॥ ೬೦ ॥

ಕಂಚಿನ ಬಣ್ಣದಿಂದ ಕೂಡಿದ, ರಾಂಕವಚರ್ಮಗಿಗಳನ್ನು ಹೊಂದಿದ ಅಶ್ವಗಳು ಹದಿನಾಲ್ಕು ಅಯುತ (ಹತ್ತು ಸಹಸ್ರ) ಯೋಧರನ್ನು ಎಳೆದವು.

ನಾನಾರೂಪೇಣ ರೂಪೇಣ ನಾನಾಮುಖಮುಖಾ ಹಯಾಃ ।
ರಥಚಿತ್ರಧ್ವಜಂ ವೀರಂ ಘಟೋತ್ಕಚಮುದಾವಹನ್ ॥ ೬೧ ॥

ಅನೇಕ ವರ್ಣಗಳನ್ನು ಹೊಂದಿದ, ಅನೇಕ ವಿಧವಾದ ಮುಖಗಳನ್ನು ಹೊಂದಿದ ಅಶ್ವಗಳು, ರಥ-ಛತ್ರ-ಧ್ವಜಗಳಿಂದ ಕೂಡಿದ ವೀರನಾದ ಘಟೋತ್ಕಚನನ್ನು ಎಳೆದವು.

ಭಾರತಾನಾಂ ಸಮೇತಾನಾಮುತ್ಸೃಜ್ಯೈಕೋ ಬಲಾನಿ ಯಃ ।
ಗತೋ ಯುಧಿಷ್ಠಿರಂ ಭಕ್ತ್ಯಾ ತ್ಯಕ್ತ್ವಾ ಸರ್ವಸ್ವಮೀಪ್ಸಿತಮ್ ॥೬೨॥

ಲೋಹಿತಾಕ್ಷಂ ಮಹಾಬಾಹುಂ ಯುಯುತ್ಸುಂ ಮಕರಧ್ವಜಮ್ ।
ಮಹಾಸತ್ತ್ವಾ ವಹಂತ್ಯಶ್ವಾ ಸೌವರ್ಣೇ ಸ್ಯಂದನೇ ಸ್ಥಿತಮ್ ॥೬೩॥

ಯಾವನು ಒಂದುಗೂಡಿದ ಕೌರವ ಸೇನೆಯನ್ನು ಬಿಟ್ಟು ಒಬ್ಬನೇ ತನ್ನ ಸರ್ವಸ್ವವನ್ನು ತ್ಯಾಗ ಮಾಡಿ, ಭಕ್ತಿಯಿಂದ ಯುಧಿಷ್ಠಿರನ ಬಳಿಗೆ ಹೋದನೋ, ಅಂತಹ ಮಕರಧ್ವಜನಾದ, ಲೋಹಿತಾಕ್ಷನಾದ, ಮಹಾಬಾಹುವಾದ, ಸುವರ್ಣಮಯವಾದ ರಥದಲ್ಲಿ ಕುಳಿತ ಯುಯುತ್ಸುವನ್ನು ಮಹಾಬಲಶಾಲಿಗಳಾದ ಅಶ್ವಗಳು ಎಳೆದವು.

ಸರ್ವವರ್ಣಾಸ್ತು ಧರ್ಮಜ್ಞಮನೀಕಸ್ಥಂ ಯುಧಿಷ್ಠಿರಮ್ ।
ರಾಜಶ್ರೇಷ್ಠಂ ಹಯಶ್ರೇಷ್ಠಾ ಹೃಷ್ಯಂತಃ ಪೃಷ್ಠತೋ ಯಯುಃ ॥ ೬೪ ॥

ಧರ್ಮಜ್ಞನೂ, ಯುದ್ಧದಲ್ಲಿ ಸ್ಥಿರನಾದವನೂ ಆದ ಲೋಹಿತಾಕ್ಷನನ್ನು ಶ್ರೇಷ್ಠವಾದ ಅಶ್ವಗಳು ಸಂತೋಷದಿಂದ ಹಿಂಭಾಗದಲ್ಲಿ ಎಳೆದವು.

ಯಾವನನ್ನು ಜ್ಞಾನಿಗಳು ಎಲ್ಲ ಮನುಷ್ಯರಲ್ಲಿಯೂ ಅತ್ಯಂತ ಶೂರನಾದವನೆಂದು ಹೇಳುತ್ತಾರೆಯೋ, ಅಂತಹ ಪಟಚ್ಚರ ದೈತ್ಯರನ್ನು ಸಂಹರಿಸಿದ ಸಮುದ್ರರಾಜನನ್ನು ಗಿಣಿಯ ಬಣ್ಣದ ಅಶ್ವಗಳು ಎಳೆದವು.

ಚಿತ್ರಾಯುಧಂ ಚಿತ್ರಮಾಲ್ಯಂ ಚಿತ್ರವರ್ಮರಥಧ್ವಜಮ್ ।
ಊಹುಃ ಕಿಂಶುಕಪುಷ್ಪಾಣಾಂ ತುಲ್ಯವರ್ಣಾ ಹಯೋತ್ತಮಾಃ ॥ ೫೫ ॥

ವಿಚಿತ್ರವಾದ ಕವಚ-ರಥ-ಧ್ವಜಗಳನ್ನು ಹೊಂದಿದ, ವಿಚಿತ್ರವಾದ ಮಾಲೆಯನ್ನು ಧರಿಸಿದ, ಚಿತ್ರಾಯುಧನನ್ನು ಮುತ್ತುಗದ ಹೂವಿನ ಬಣ್ಣದ ಶ್ರೇಷ್ಠವಾದ ಅಶ್ವಗಳು ಎಳೆದವು.

ಏಕವರ್ಣೇನ ಸರ್ವೇಣ ಧ್ವಜೇನ ಕವಚೇನ ಚ ।
ಧನುಷಾ ರಥವಾಹೈಶ್ಚ ನೀಲೈರ್ನೀಲೋಽಭ್ಯವರ್ತತ ॥ ೫೬ ॥

ತನ್ನ ಧ್ವಜ, ಕವಚ, ಧನುಸ್ಸು, ಅಶ್ವಗಳು ಎಲ್ಲವೂ ಒಂದೇ ಕಪ್ಪು ಬಣ್ಣದಿಂದ ಕೂಡಿದ ನೀಲನು ರಣರಂಗಕ್ಕೆ ಹಿಂದಿರುಗಿದನು.

ಯೇ ತು ಪುಷ್ಕರಪರ್ಣಸ್ಯ ತುಲ್ಯವರ್ಣಾ ಹಯೋತ್ತಮಾಃ ।
ತೇ ರೋಚಮಾನಸ್ಯ ಸುತಂ ಹೇಮರೂಪಮುದಾವಹನ್ ॥ ೫೭ ॥

ಕಮಲದ ಪತ್ರಕ್ಕೆ ಸಮಾನವಾದ ವರ್ಣವುಳ್ಳ ಶ್ರೇಷ್ಠವಾದ ಅಶ್ವಗಳು ರೋಚಮಾನನ ಪುತ್ರನಾದ ಹೇಮರೂಪನನ್ನು ಎಳೆದವು.

ನಾನಾರೂಪೈ ರತ್ನಚಿತ್ರೈರ್ವರೂಥಧ್ವಜಕಾರ್ಮುಕೈಃ ।
ವಾಜಿಭಿಶ್ಚ ಪತಾಕಾಭಿಃ ಚಿತ್ರೈಶ್ಚಿತ್ರೋ ನ್ಯವರ್ತತ ॥ ೫೮ ॥

ನಾನಾರೂಪಗಳನ್ನು ಹೊಂದಿದ ರತ್ನಗಳು, ರಕ್ಷಣೆಯ ವಸ್ತುಗಳು ಧ್ವಜ-ಧನುಸ್ಸುಗಳು, ಅಶ್ವಗಳು ಮತ್ತು ಪತಾಕೆಗಳು ಇವುಗಳಿಂದ ಸಹಿತನಾಗಿ ಚಿತ್ರನು ಹಿಂದಿರುಗಿದನು.

ಗೋಧಾಶ್ಚ ಮದ್ರಕಾಶ್ಚೈವ ಶರಕಾಂಡನಿಭಾ ಹಯಾಃ ।
ನಿಶ್ರುತಾಂಗಾಃ ಕುಟಂಗಾಶ್ಚ ದಂಡಧಾರಮುದಾವಹನ್ ॥ ೫೯ ॥

ಗೋಧ, ಮದ್ರಕ, ನಿಶ್ರುತಾಂಗ, ಕುಟಂಗ ಈ ದೇಶದ ಬಾಣದ ಕಾಂಡದಂತಹ ಎದೆಯುಳ್ಳ (ಬಿಳಿಯ ಬಣ್ಣದ ಬೆನ್ನನ್ನು ಹೊಂದಿದ) ಅಶ್ವಗಳು ದಂಡಧಾರನನ್ನು ಎಳೆದವು.

ಆರಕೂಟಕವರ್ಣಾಭಾ ರಾಂಕವಾಸ್ತರಣಾಃ ಪೃಥಕ್ ।
ಅವಹನ್ ಯೋಧಮುಖ್ಯಾನಾಮಯುತಾನಿ ಚತುರ್ದಶ ॥ ೬೦ ॥

ಕಂಚಿನ ಬಣ್ಣದಿಂದ ಕೂಡಿದ, ರಾಂಕವಚರ್ಮಗಿಗಳನ್ನು ಹೊಂದಿದ ಅಶ್ವಗಳು ಹದಿನಾಲ್ಕು ಅಯುತ (ಹತ್ತು ಸಹಸ್ರ) ಯೋಧರನ್ನು ಎಳೆದವು.

ನಾನಾರೂಪೇಣ ರೂಪೇಣ ನಾನಾಮುಖಮುಖಾ ಹಯಾಃ ।
ರಥಚ್ಛತ್ರಧ್ವಜಂ ವೀರಂ ಘಟೋತ್ಕಚಮುದಾವಹನ್ ॥ ೬೧ ॥

ಅನೇಕ ವರ್ಣಗಳನ್ನು ಹೊಂದಿದ, ಅನೇಕ ವಿಧವಾದ ಮುಖಗಳನ್ನು ಹೊಂದಿದ ಅಶ್ವಗಳು, ರಥ-ಛತ್ರ-ಧ್ವಜಗಳಿಂದ ಕೂಡಿದ ವೀರನಾದ ಘಟೋತ್ಕಚನನ್ನು ಎಳೆದವು.

ಭಾರತಾನಾಂ ಸಮೇತಾನಾಮುತ್ಸೃಜ್ಯೈಕೋ ಬಲಾನಿ ಯಃ ।
ಗತೋ ಯುಧಿಷ್ಠಿರಂ ಭಕ್ತ್ಯಾ ತ್ಯಕ್ತ್ವಾ ಸರ್ವಸ್ವಮೀಪ್ಸಿತಮ್ ॥೬೨॥

ಲೋಹಿತಾಕ್ಷಂ ಮಹಾಬಾಹುಂ ಯುಯುತ್ಸುಂ ಮಕರಧ್ವಜಮ್ ।
ಮಹಾಸತ್ತ್ವಾ ವಹಂತ್ಯಶ್ವಾ ಸೌವರ್ಣೇ ಸ್ಯಂದನೇ ಸ್ಥಿತಮ್ ॥೬೩॥

ಯಾವನು ಒಂದುಗೂಡಿದ ಕೌರವ ಸೇನೆಯನ್ನು ಬಿಟ್ಟು ಒಬ್ಬನೇ ತನ್ನ ಸರ್ವಸ್ವವನ್ನು ತ್ಯಾಗ ಮಾಡಿ, ಭಕ್ತಿಯಿಂದ ಯುಧಿಷ್ಠಿರನ ಬಳಿಗೆ ಹೋದನೋ. ಅಂತಹ ಮಕರಧ್ವಜನಾದ, ಲೋಹಿತಾಕ್ಷನಾದ, ಮಹಾಬಾಹುವಾದ, ಸುವರ್ಣಮಯವಾದ ರಥದಲ್ಲಿ ಕುಳಿತ ಯುಯುತ್ಸುವನ್ನು ಮಹಾಬಲಶಾಲಿಗಳಾದ ಅಶ್ವಗಳು ಎಳೆದವು.

ಸರ್ವವರ್ಣಾಸ್ತು ಧರ್ಮಜ್ಞಮನೀಕಸ್ಥಂ ಯುಧಿಷ್ಠಿರಮ್ ।
ರಾಜಶ್ರೇಷ್ಠಂ ಹಯಶ್ರೇಷ್ಠಾ ಹೃಷ್ಯಂತಃ ಪೃಷ್ಠತೋ ಯಯುಃ ॥ ೬೪ ॥

ಧರ್ಮಜ್ಞನೂ, ಯುದ್ಧದಲ್ಲಿ ಸ್ಥಿರನಾದವನೂ ಆದ ಲೋಹಿತಾಕ್ಷನನ್ನು ಶ್ರೇಷ್ಠವಾದ ಅಶ್ವಗಳು ಸಂತೋಷದಿಂದ ಹಿಂಭಾಗದಲ್ಲಿ ಎಳೆದವು.

ವರ್ಣೈಶ್ಚೋಚ್ಚಾವಚಪ್ರಖ್ಯೈಃ ಸದಶ್ವಾನಾಂ ಪ್ರಭದ್ರಕಾಃ ।
ಸನ್ನ್ಯವರ್ತಂತ ಯುದ್ಧಾಯ ಬಹವೋ ದೇವರೂಪಿಣಃ ॥ ೬೫ ॥

ದೇವತೆಗಳ ರೂಪವನ್ನು ಹೊಂದಿದ, ಅನೇಕ ಪ್ರಭದ್ರಕರು (ಪಾಂಚಾಲ ದೇಶದ ಯೋಧರು) ಬೇರೆ ಬೇರೆ ಬಣ್ಣಗಳನ್ನು ಹೊಂದಿದ ಒಳ್ಳೆಯ ಅಶ್ವಗಳನ್ನು ಏರಿ ಯುದ್ಧಕ್ಕೆ ಹಿಂದಿರುಗಿದರು.

ತೇ ಯತ್ತಾ ಭೀಮಸೇನೇನ ಸಹಿತಾಃ ಕಾಂಚನಪ್ರಭಾಃ ।
ಪ್ರತ್ಯದೃಶ್ಯಂತ ರಾಜೇಂದ್ರ ಸೇಂದ್ರಾ ಇವ ದಿವೌಕಸಃ ॥ ೬೬ ॥

ಎಲೈ ರಾಜೇಂದ್ರನೇ, ಪ್ರಭದ್ರಕರ ಅಧಿಪತಿಯಿಂದ ನಿಯಂತ್ರಿಸಲ್ಪಟ್ಟ, ಸುವರ್ಣಕಾಂತಿಯುಳ್ಳವರು ಇಂದ್ರನಿಂದ ಕೂಡಿದ ದೇವತೆಗಳಂತೆ ಕಂಡುಬಂದರು.

ಅತ್ಯರೋಚತ ತಾನ್ ಸರ್ವಾನ್ ಧೃಷ್ಟದ್ಯುಮ್ನಃ ಸಮಾಗತಾನ್ ।
ಅತಿಸರ್ವಾಣಿ ಸೈನ್ಯಾನಿ ಭಾರದ್ವಾಜೋ ವ್ಯರೋಚತ ॥ ೬೭ ॥

ಹಿಂದಿರುಗಿದ ಎಲ್ಲರಿಗಿಂತಲೂ ಧೃಷ್ಟದ್ಯುಮ್ನನು ಬಹಳವಾಗಿ ಶೋಭಿಸಿದನು. ಎರಡು ಸೈನ್ಯಗಳಲ್ಲಿಯೂ ದ್ರೋಣರು ಬಹಳವಾಗಿ ಶೋಭಿಸಿದರು.

ಅತೀವ ಶುಶುಭೇ ಯಸ್ಯ ಧ್ವಜಃ ಕೃಷ್ಣಾಜಿನೋತ್ತರಃ ।
ಕಮಂಡಲುರ್ಮಹಾರಾಜ ಜಾತರೂಪಮಯಃ ಶುಭಃ ॥ ೬೮ ॥

ಎಲೈ ಮಹಾರಾಜನೇ, ಸುವರ್ಣಮಯವಾದ, ಪವಿತ್ರವಾದ ಕೃಷ್ಣಾಜಿನ ಮತ್ತು ಕಮಂಡಲವನ್ನು ಹೊಂದಿದ ದ್ರೋಣರ ಧ್ವಜವು ಬಹಳವಾಗಿ ಶೋಭಿಸಿತು.

ಧ್ವಜಂ ತು ಭೀಮಸೇನಸ್ಯ ವೈಡೂರ್ಯಮಣಿರೋಚನಮ್ ।
ಭ್ರಾಜಮಾನಂ ಮಹಾಸಿಂಹಂ ರಾಜತಂ ದೃಷ್ಟವಾನಹಮ್ ॥ ೬೯ ॥

ವೈಡೂರ್ಯಮಣಗಳಿಂದ ಅಲಂಕೃತವಾದ, ರಜತಮಯವಾದ, ಶೋಭಿಸುವ, ಮಹಾಸಿಂಹದಿಂದ ಕೂಡಿದ ಭೀಮಸೇನನ ಧ್ವಜವನ್ನು ನಾನು ನೋಡಿದೆನು.

ಧ್ವಜಂ ತು ಕುರುರಾಜಸ್ಯ ಪಾಂಡವಸ್ಯ ಮಹಾತ್ಮನಃ ।
ದೃಷ್ಟವಾನಸ್ಮಿ ಸೌವರ್ಣಂ ಸೋಮಂ ಗ್ರಹಗಣಾನ್ವಿತಮ್ ॥ ೭೦ ॥

ಕುರುರಾಜನೂ, ಮಹಾತ್ಮನೂ, ಪಾಂಡವನೂ ಆದ ಧರ್ಮರಾಜನ ಸುವರ್ಣಮಯವಾದ, ಗ್ರಹಗಳಿಂದ ಅನ್ವಿತನಾದ ಚಂದ್ರನಿಂದ ಕೂಡಿದ ಧ್ವಜವನ್ನು ನೋಡಿದೆನು.

ವಿಷ್ವಗ್ ಲೋಹಿತಚರ್ಮಾಣೌ ದಿವ್ಯೌ ನಂದೋಪನಂದಕೌ ।
ಯಂತ್ರೈಣಾಹನ್ಯಮಾನೌ ಚ ಸುಸ್ವನೌ ಹರ್ಷವರ್ಧನೌ ॥ ೭೧ ॥

ಆ ರಥದಲ್ಲಿಯೇ ಕೆಂಪುಬಣ್ಣದ ಚರ್ಮದಿಂದ ಬಿಗಿಯಲ್ಪಟ್ಟ, ಯಂತ್ರದಿಂದ ಬಾರಿಸಲ್ಪಟ್ಟ, ಸಂತೋಷದಾಯಕವಾದ, ಒಳ್ಳೆಯ ಸ್ವರದಿಂದ ಕೂಡಿದ, ನಂದ ಮತ್ತು ಉಪನಂದ ಎಂಬ ಭೇರಿಗಳನ್ನು ನೋಡಿದೆನು.

ಶರಭಂ ಮೃಷ್ಟಸೌವರ್ಣಂ ನಕುಲಸ್ಯ ಮಹಾಧ್ವಜಮ್ ।
ಅಪಶ್ಯಾಮ ರಣೇ ವ್ಯಾಘ್ರಂ ಭೀಷಯಾನಮವಸ್ಥಿತಮ್ ॥ ೭೨ ॥

ನಕುಲನ ಮಹಾಧ್ವಜದಲ್ಲಿ ಪುಟವಿಟ್ಟ ಚಿನ್ನದಿಂದ ಮಾಡಿದ ಶರಭವನ್ನು ನಾವು ನೋಡಿದೆವು. ಭಯಂಕರವಾದ ರಥವನ್ನು ಏರಿದ ಅವನ ರಥದಲ್ಲಿ ವ್ಯಾಘ್ರವನ್ನು ಭಯಗೊಳಿಸುವ ಶರಭ ಧ್ವಜವನ್ನು ನೋಡಿದೆವು.

ಹಂಸಸ್ತು ರಾಜತಃ ಶ್ರೀಮಾನ್ ಧ್ವಜೇ ಘಂಟಾಪತಾಕವಾನ್ ।
ಸಹದೇವಸ್ಯ ದುರ್ಧರ್ಷೋ ದ್ವಿಷತಾಂ ಶೋಕವರ್ಧನಃ ॥ ೭೩ ॥

ಸಹದೇವನ ರಥದ ಧ್ವಜದಲ್ಲಿ ಘಂಟೆ ಪತಾಕೆಗಳಿಂದ ಕೂಡಿದ, ಕಾಂತಿಯುಕ್ತವಾದ, ರಜತಮಯವಾದ, ಶತ್ರುಗಳಿಗೆ ಶೋಕವನ್ನುಂಟು ಮಾಡುವ, ಸೋಲಿಸಲು ಅಸಾಧ್ಯವಾದ ಹಂಸವಿದೆ.

ಪಂಚಾನಾಂ ದ್ರೌಪದೇಯಾನಾಂ ಪ್ರತಿಮಾ ರಥಭೂಷಣಾಃ ।
ಧರ್ಮಮಾರುತಶಕ್ರಾಣಾಮಶ್ವಿನೋಶ್ಚ ಮಹಾತ್ಮನೋಃ ॥ ೭೪ ॥

ಮಹಾತ್ಮರಾದ ದ್ರೌಪದಿಯ ಐವರು ಪುತ್ರರ ರಥದಲ್ಲಿ ಕ್ರಮವಾಗಿ ಯಮ, ವಾಯು, ಇಂದ್ರ ಮತ್ತು ಅಶ್ವಿನಿಗಳ ಪ್ರತಿಮೆಗಳು ಧ್ವಜವಾಗಿವೆ.

ಅಭಿಮನ್ಯೋಃ ಕುಮಾರಸ್ಯ ಶಾರ್ಙ್ಗಪಕ್ಷೀ ಹಿರಣ್ಮಯಃ ।
ರಥೋದ್ಧತರಜೋಲೋಲಶ್ಚೈತ್ರಚಾಮೀಕರೋಲ್ಬಣಃ ॥ ೭೫ ॥

ಕುಮಾರನಾದ ಅಭಿಮನ್ಯುವಿನ ರಥದ ಧ್ವಜದಲ್ಲಿ, ಸುವರ್ಣಮಯವಾದ ರಥದ ಸಂಚಾರದಿಂದ ಎದ್ದ ಧೂಳಿನ ಜೊತೆಯಲ್ಲಿ, ಓಲಾಡುವ ದೀಪ್ತವಾದ ಚಿನ್ನದಂತೆ ಉಲ್ಬಣವಾದ ಶಾರ್ಙ್ಗ ಪಕ್ಷಿಯು ಇದೆ.

ಘಟೋತ್ಕಚಸ್ಯ ರಾಜೇಂದ್ರ ರಥೇ ಗೃಧ್ರೋ ವ್ಯರೋಚತ ।
ಅಶ್ವಾಶ್ಚ ರೋಮಶಾಸ್ತಸ್ಯ ರಾವಣಸ್ಯ ಪುರಾ ಯಥಾ ॥ ೭೬ ॥

ಎಲೈ ರಾಜೇಂದ್ರನೇ, ಘಟೋತ್ಕಚನ ರಥದಲ್ಲಿ ಹದ್ದು ಧ್ವಜವಾಗಿ ಶೋಭಿಸುತ್ತಿದೆ. ಅವನ ಅಶ್ವಗಳೂ ಸಹ ಹಿಂದೆ ರಾವಣನ ಅಶ್ವಗಳಂತೆ ಬಹಳ ರೋಮದಿಂದ ಕೂಡಿವೆ.

ಮಾಹೇಂದ್ರಂ ತು ಧನುರ್ದಿವ್ಯಂ ಧರ್ಮರಾಜೇ ಯುಧಿಷ್ಠಿರೇ ।
ವಾಯವ್ಯಂ ಭೀಮಸೇನಸ್ಯ ಧನುರ್ದಿವ್ಯಮಭೂನ್ಮಹತ್ ॥ ೭೭ ॥

ಧರ್ಮರಾಜನಾದ ಯುಧಿಷ್ಠಿರನಲ್ಲಿ ದಿವ್ಯವಾದ ಮಹೇಂದ್ರನ ಧನುಸ್ಸು ಇದೆ. ಭೀಮಸೇನನ ಬಳಿ ದಿವ್ಯವೂ, ದೊಡ್ಡದೂ ಆದ ವಾಯುದೇವರ ಧನುಸ್ಸಿದೆ.

ತ್ರೈಲೋಕ್ಯರಕ್ಷಣಾರ್ಥಾಯ ಬ್ರಹ್ಮಣಾ ಸೃಷ್ಟಮದ್ಭುತಮ್ ।
ಯದ್ ದಿವ್ಯಮಕ್ಷಯಂ ಚೈವ ಗಾಂಡೀವಂ ಫಲ್ಗುನಸ್ಯ ಚ ॥ ೭೮ ॥

ಮೂರುಲೋಕಗಳ ರಕ್ಷಣೆಗಾಗಿ ಬ್ರಹ್ಮದೇವರು ಸೃಷ್ಟಿಸಿದ ಅದ್ಭುತವೂ, ದಿವ್ಯವೂ, ಅಕ್ಷಯವೂ ಆದ ಗಾಂಡೀವ ಧನುಸ್ಸು ಅರ್ಜುನನ ಬಳಿ ಇದೆ.

ವೈಷ್ಣವಂ ನಕುಲಸ್ಯಾಥ ಸಹದೇವಸ್ಯ ಚಾಶ್ವಿನಮ್ ।
ಘಟೋತ್ಕಚಸ್ಯ ಪೌಲಸ್ತ್ಯಂ ಧನುರ್ದಿವ್ಯಂ ಭಯಾನಕಮ್ ॥ ೭೯ ॥

ನಕುಲನ ಬಳಿ ವೈಷ್ಣವ ಧನುಸ್ಸು, ಸಹದೇವನ ಬಳಿ ಅಶ್ವಿನಿದೇವತೆಗಳ ಧನುಸ್ಸು ಇದೆ. ಘಟೋತ್ಕಚನ ಬಳಿ ಭಯಂಕರವೂ, ದಿವ್ಯವೂ ಆದ ಪುಲಸ್ತ್ಯರ ಧನುಸ್ಸಿದೆ.

ರೌದ್ರಂ ಕೌಬೇರಮಾಗ್ನೇಯಂ ಯಾಮ್ಯಂ ಗಿರಿಶಮೇವ ಚ ।
ಪಂಚಾನಾಂ ದ್ರೌಪದೇಯಾನಾಂ ಧನೂರತ್ನಂ ಮಹತ್ತರಮ್ ॥ ೮೦ ॥

ದ್ರೌಪದಿಯ ಐವರು ಪುತ್ರರ ಬಳಿ ರುದ್ರ, ಕುಬೇರ, ಅಗ್ನಿ, ಯಮ ಮತ್ತು ಶಂಕರರ ಶ್ರೇಷ್ಠವಾದ ಧನುಸ್ಸುಗಳಿವೆ.

ರೌದ್ರಂ ಧನುರ್ವರಶ್ರೇಷ್ಠಂ ಯಲ್ಲೇಭೇ ರೋಹಿಣೀಸುತಃ ।
ತತ್ತುಷ್ಟಃ ಪ್ರದದೌ ರಾಮಃ ಸೌಭದ್ರಾಯ ಮಹಾತ್ಮನೇ ॥ ೮೧ ॥

ರೋಹಿಣಿ ಸುತನಾದ ಬಲರಾಮನು ಯಾವ ಶ್ರೇಷ್ಠವಾದ ರುದ್ರಧನುಸ್ಸನ್ನು ಪಡೆದನೋ ಅದನ್ನು ಅವನು ಸಂತೋಷದಿಂದ ಮಹಾತ್ಮನಾದ ಅಭಿಮನ್ಯುವಿಗೆ ಕೊಟ್ಟನು.

ಏತಾಂಶ್ಚಾನ್ಯಾಂಶ್ಚ ಸುಬಹೂನ್ ಧ್ವಜಾಂಶ್ಚಾಪಾಂಶ್ಚ ತೋಷಿತಾಃ ।
ದದೃಶುಸ್ತತ್ರ ಶೂರಾಣಾಂ ದ್ವಿಷತಾಂ ಶೋಕವರ್ಧನಾನ್ ॥ ೮೨ ॥

ಅಲ್ಲಿ ಸಂತೋಷಗೊಂಡ ಜನರು ಶತ್ರುಗಳ ಶೋಕವನ್ನು ಹೆಚ್ಚಿಸುವ ಇವುಗಳನ್ನು ಮತ್ತು ಇನ್ನೂ ಅನೇಕ ಶೂರರ ಧ್ವಜಗಳನ್ನೂ ಮತ್ತು ಧನುಸ್ಸುಗಳನ್ನೂ ಅಲ್ಲಿ ನೋಡಿದರು.

ತದಭೂತ್ ಧ್ವಜಸಂಬಾಧಂ ಮಹಾಪುರುಷಸೇವಿತಮ್ ।
ದ್ರೋಣಾನೀಕಂ ಮಹಾರಾಜ ಪಟೇ ಚಿತ್ರಮಿವಾರ್ಪಿತಮ್ ॥ ೮೩ ॥

ಎಲೈ ಮಹಾರಾಜನೇ, ಮಹಾಪುರುಷರಿಂದ ಕೂಡಿದ, ಧ್ವಜಗಳಿಂದ ನಿಬಿಡವಾದ, ದ್ರೋಣರ ಆ ಸೇನೆಯು ಬಟ್ಟೆಯ ಮೇಲೆ ಬಿಡಿಸಿದ ಚಿತ್ರದಂತೆ ಇದ್ದಿತು.

ಶ್ರೂಯಂತೇ ನಾಮಗೋತ್ರಾಣಿ ಶೂರಾಣಾಂ ಸಂಯುಗೇ ತದಾ ।
ದ್ರೋಣಮಾದ್ರವತಾಂ ರಾಜನ್ ಸ್ವಯಂವರ ಇವಾಹವೇ ॥ ೮೪ ॥

ಯುದ್ಧದಲ್ಲಿ ದ್ರೋಣರ ಮೇಲೆ ಎರಗುವ ಶೂರರ ನಾಮ- ಗೋತ್ರಗಳು ಸ್ವಯಂವರದಲ್ಲಿ ಕೇಳಿ ಬರುವಂತೆ ಆಗ ಕೇಳಿಬರುತ್ತಿದ್ದವು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ದ್ವಾವಿಂಶೋಧ್ಯಾಯಃ ॥

॥ ದ್ರೋಣಾಭಿಷೇಕಪರ್ವಣಿ ಸಪ್ತಮೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಇಪ್ಪತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ಮೂರನೆಯಅಧ್ಯಾಯ

ಪುತ್ರನನ್ನು ಕುರಿತು ಶೋಕಪಡುತ್ತಾ ಯುದ್ಧವನ್ನು ವರ್ಣಿಸುವಂತೆ ಸಂಜಯನಿಗೆ ಧೃತರಾಷ್ಟ್ರನ ಪ್ರಾರ್ಥನೆ.

ಧೃತರಾಷ್ಟ್ರಃ

ವ್ಯಥಯೇಯುರಿಮೇ ಸೇನಾಂ ದೇವಾನಾಮಪಿ ಸಂಜಯ ।
ಆಹವೇ ಯೇ ನ್ಯವರ್ತಂತ ವೃಕೋದರಪುರೋಗಮಾಃ ॥ ೧ ॥

ಧೃತರಾಷ್ಟ್ರ- ಎಲೈ ಸಂಜಯನೇ, ರಣರಂಗದಲ್ಲಿ ಹಿಂದಿರುಗಿದ ಭೀಮಸೇನ ಮೊದಲಾದವರು ದೇವತೆಗಳ ಸೈನ್ಯವನ್ನೂ ವ್ಯಥೆಗೊಳಿಸಿಯಾರು!

ಸಂಪ್ರಯುಕ್ತಃ ಕಿಲೈವಾಯಂ ದಿಷ್ಟೇ ಭವತಿ ಪೂರುಷಃ ।
ತಸ್ಮಿನ್ನೇವ ಚ ಸರ್ವಾರ್ಥಾ ದೃಶ್ಯಂತೇऽರ್ಥಾಃ ಪೃಥಗ್ವಿಧಾಃ ॥ ೨ ॥

ಮನುಷ್ಯನು ವಿಧಿನೀತಿಯಂತೆ ನಡೆಯುತ್ತಾನಷ್ಟೆ? ವಿಧವಿಧವಾದ ಎಲ್ಲ ಅರ್ಥಗಳೂ ಆ ವಿಧಿಯನ್ನೇ ಅವಲಂಬಿಸಿವೆ.

ದೀರ್ಘಂ ವಿಪ್ರೋಷಿತಃ ಕಾಲಮರಣ್ಯೇಷು ಜಟಾಜಿನೀ ।
ಅಜ್ಞಾತಶ್ಚೈವ ಲೋಕಸ್ಯ ವಿಜಹಾರ ಯುಧಿಷ್ಠಿರಃ ॥ ೩ ॥

ದೀರ್ಘಕಾಲದವರೆಗೆ ಜಟಾಜಿನವನ್ನು ಧರಿಸಿ, ಅರಣ್ಯದಲ್ಲಿ ವಾಸಮಾಡಿ, ಅನಂತರ ಲೋಕಕ್ಕೆ ತಿಳಿಯದಂತೆ ವಾಸವನ್ನು ಮಾಡಿ (ಅಜ್ಞಾತವಾಸ) ಯುಧಿಷ್ಠಿರನು ಕಾಲವನ್ನು ಕಳೆದಿದ್ದಾನೆ.

ಸ ಏವ ಮಹತೀಂ ಸೇನಾಂ ಸಮಾವರ್ತಯದಾಹವೇ ।
ಕಿಮನ್ಯದ್ ದೈವಸಂಯೋಗಾನ್ಮಮ ಪುತ್ರಾಭವಾಯ ಚ ॥ ೪ ॥

ಅನಂತರ ಅವನೇ ದೊಡ್ಡ ಸೈನ್ಯವನ್ನು ಸೇರಿಸಿ ಈಗ ನನ್ನ ಪುತ್ರರ ನಾಶಕ್ಕಾಗಿ ಯುದ್ಧಕ್ಕೆ ತಂದಿದ್ದಾನೆ. ಇದು ವಿಧಿಯ ಸಂಯೋಗವಲ್ಲದೆ ಮತ್ತೇನು?

ಯುಕ್ತ ಏವ ಹಿ ಭಾಗ್ಯೇನ ಧ್ರುವಮುತ್ಪದ್ಯತೇ ನರಃ ।
ಸ ತಥಾऽऽಕೃಷ್ಯತೇ ತೇನ ನ ಯಥಾ ಸ್ವಯಮಿಚ್ಛತಿ ॥ ೫ ॥

ಭಾಗ್ಯದಿಂದ ಯುಕ್ತನಾಗಿಯೇ ಮನುಷ್ಯನು ಖಂಡಿತವಾಗಿ ಜನಿಸುತ್ತಾನೆ. ತಾನು ಸ್ವತಃ ಬಯಸದಿದ್ದರೂ ವಿಧಿಯಿಂದ ಆ ಭಾಗ್ಯದಿಂದ ರಹಿತನಾಗುತ್ತಾನೆ.

ದ್ಯೂತವ್ಯಸನಮಾಸಾದ್ಯ ಕ್ಲೇಶಿತೋ ಹಿ ಯುಧಿಷ್ಠಿರಃ ।
ಸ ಪುನರ್ಭಾಗಧೇಯೇನ ಸಹಾಯಾನುಪಲಬ್ಧವಾನ್ ॥ ೬ ॥

ಯುಧಿಷ್ಠಿರನು ದ್ಯೂತವ್ಯಸನಕ್ಕೆ ಸಿಲುಕಿ ಕ್ಲೇಶಗಳನ್ನು ಅನುಭವಿಸಿದನಷ್ಟೆ? ಅವನೇ ಪುನಃ ದೈವಯೋಗದಿಂದ ಸಹಾಯರನ್ನು ಪಡೆದಿದ್ದಾನೆ.

ಅರ್ಧಂ ಮೇ ಕೇಕಯಾ ಲಬ್ಧಾಃ ಕಾಶಯಃ ಕೋಸಲಾಸ್ತಥಾ ॥।
ಚೇದಯಶ್ಚಾಪರೇ ವಂಗಾ ಮಾಮೇವ ಸಮುಪಾಶ್ರಿತಾಃ ॥ ೭ ॥

ಕೇಕಯರಲ್ಲಿ ಅರ್ಧಭಾಗವೂ, ಕಾಶಿಗಳೂ, ಕೋಸಲರೂ, ಚೇದಿಗಳೂ, ವಂಗರೂ ನನ್ನನ್ನೇ ಬಂದು ಸೇರಿದ್ದಾರೆ.

ಪೃಥಿವೀ ಭೂಯಸೀ ತಾತ ಮಮ ಪಾರ್ಥಸ್ಯ ನೋ ತಥಾ ।
ಇತಿ ಮಾಮಬ್ರವೀತ್ ಸೂತ ಮಂದೋ ದುರ್ಯೋಧನಸ್ತಥಾ ॥ ೮ ॥

ಎಲೈ ಸೂತನೇ, ನನ್ನ ಪುತ್ರನಾದ, ಮಂದನಾದ ದುರ್ಯೋಧನನು, ತಂದೆಯೇ, ನನ್ನ ಭೂಮಿಯು ಶ್ರೇಷ್ಠವಾಗಿದೆ, ಯುಧಿಷ್ಠಿರನದು ಅಲ್ಲ ಎಂದು ನನಗೆ ಹೇಳಿದನು.

ತಸ್ಯ ಸೇನಾಸಮೂಹಸ್ಯ ಮಧ್ಯೇ ದ್ರೋಣಃ ಸುರಕ್ಷಿತಃ ।
ನಿಹತಃ ಪಾರ್ಷತೇನಾಜೌ ಕಿಮನ್ಯದ್ ಭಾಗಧೇಯತಃ ॥ ೯ ॥

ಅಂತಹ ಸೈನ್ಯ ಸಮೂಹದ ಮಧ್ಯದಲ್ಲಿ ಸುರಕ್ಷಿತರಾದ ದ್ರೋಣರು ರಣರಂಗದಲ್ಲಿ ಧೃಷ್ಟದ್ಯುಮ್ನನಿಂದ ಹತರಾದರು. ಇದು ವಿಧಿಯಲ್ಲದೆ ಮತ್ತೇನು?

ಮಧ್ಯೇ ರಾಜ್ಞಾಂ ಮಹಾಬಾಹುಂ ಸದಾ ಯುದ್ಧಾಭಿನಂದಿನಮ್ ।
ಬ್ರಹ್ಮಾಸ್ತ್ರವಿದುಷಂ ದ್ರೋಣಂ ಕಥಂ ಮೃತ್ಯುರುಪೇಯಿವಾನ್ ॥ ೧೦ ॥

ರಾಜರ ಮಧ್ಯದಲ್ಲಿ ಮಹಾಬಾಹುಗಳೂ, ಯುದ್ಧವನ್ನು ಅಭಿನಂದಿಸುವವರೂ, ಬ್ರಹ್ಮಾಸ್ತ್ರವನ್ನು ತಿಳಿದವರೂ ಆದ ದ್ರೋಣರನ್ನು ಮೃತ್ಯುವು ಹೇಗೆ ಸಮೀಪಿಸಿತು?

ಸಮನುಪ್ರಾಪ್ತಕೃಚ್ಛ್ರೋಽಹಂ ಸಮ್ಮೋಹಂ ಪರಮಂ ಗತಃ ।
ಭೀಷ್ಮದ್ರೋಣೌ ಹತೌ ಶ್ರುತ್ವಾ ನಾಹಂ ಜೀವಿತುಮುತ್ಸಹೇ ॥ ೧೧ ॥

ನಾನು ಸಂಕಟಕ್ಕೂ, ತೀವ್ರವಾದ ಸಮ್ಮೋಹಕ್ಕೂ ಸಿಲುಕಿದ್ದೇನೆ. ಭೀಷ್ಮ-ದ್ರೋಣರು ಹತರಾದುದನ್ನು ಕೇಳಿ ನಾನು ಬದುಕಲು ಬಯಸುವುದಿಲ್ಲ.

ಯನ್ಮಾಂ ಕ್ಷತ್ತಾಽಬ್ರವೀತ್ ತಾತ ಪ್ರಪಶ್ಯನ್ ಪುತ್ರಗೃದ್ಧಿನಮ್ ।
ದುರ್ಯೋಧನೇನ ತತ್ ಪ್ರಾಪ್ತಂ ಸರ್ವಂ ಸೂತ ಮಯಾ ಸಹ ॥೧೨॥

ಎಲೈ ಪ್ರೀತಿಪಾತ್ರನೇ, ಸೂತನೇ, ನನ್ನನ್ನು ಪುತ್ರರಲ್ಲಿ ಪಕ್ಷಪಾತವನ್ನು ಹೊಂದಿದವನು ಎಂದು ತಿಳಿದು, ವಿದುರನು ಏನು ಹೇಳಿದನೋ ಅದೆಲ್ಲವನ್ನೂ ದುರ್ಯೋಧನನು ಮತ್ತು ನಾನು ಪಡೆದು, ಈಗ ಅನುಭವಿಸುತ್ತಿದ್ದೇವೆ.

ನೃಶಂಸಂ ತು ಪರಂ ತಾತ ತ್ಯಕ್ತ್ವಾ ದುರ್ಯೋಧನಂ ಯದಿ ।
ಪುತ್ರಶೇಷಸ್ತು ರಕ್ಷ್ಯಃ ಸ್ಯಾನ್ನ ಸರ್ವಮರಣಂ ಭವೇತ್ ॥ ೧೩ ॥

ಪ್ರೀತಿಪಾತ್ರನೇ, ಕ್ರೂರಿಯಾದ ದುರ್ಯೋಧನನನ್ನು ಪರಿತ್ಯಜಿಸಿ, ನಾನು ಉಳಿದ ಪುತ್ರರನ್ನು ರಕ್ಷಿಸಿದ್ದರೆ ಈ ಸರ್ವಮರಣವು ಉಂಟಾಗುತ್ತಿರಲಿಲ್ಲ.

ಯೋ ಹಿ ಧರ್ಮಂ ಪರಿತ್ಯಜ್ಯ ಭವತ್ಯರ್ಥಪರೋ ನರಃ ।
ಅಸ್ಮಾಚ್ಚ ಹೀಯತೇ ಲೋಕಾತ್ ಕ್ಷುದ್ರಭಾವಂ ಚ ಗಚ್ಛತಿ ॥ ೧೪ ॥

ಯಾವ ಮನುಷ್ಯನು ಧರ್ಮವನ್ನು ಪರಿತ್ಯಜಿಸಿ, ಅರ್ಥದಲ್ಲಿ ದೃಷ್ಟಿಯುಳ್ಳವನಾಗುತ್ತಾನೆಯೋ ಅವನು ಈ ಲೋಕವನ್ನೂ ಕಳೆದುಕೊಳ್ಳುತ್ತಾನೆ ಮತ್ತು ಕ್ಷುದ್ರತೆಯನ್ನೂ ಹೊಂದುತ್ತಾನೆ.

ಅದ್ಯ ಚಾಪ್ಯಸ್ಯ ರಾಷ್ಟ್ರಸ್ಯ ಕೃತೋತ್ಸೇಧಸ್ಯ ಸಂಜಯ ।
ಅವಶೇಷಂ ನ ಪಶ್ಯಾಮಿ ಕುರೂಣಾಮೀದೃಶೇ ಸತಿ ॥ ೧೫ ॥

ಇಂದಿನ ಈ ಪರಿಸ್ಥಿತಿಯಲ್ಲಿ ನಾನು ಎಲೈ ಸಂಜಯನೇ, ಒಂದು ಕಾಲದಲ್ಲಿ ಉನ್ನತ ಸ್ಥಿತಿಯಲ್ಲಿದ್ದ ಈ ನಮ್ಮ ಕುರುರಾಷ್ಟ್ರಕ್ಕೆ ಯಾವ ಅವಶೇಷವನ್ನೂ ಕಾಣುವುದಿಲ್ಲ.

ಕಥಂ ಸ್ಯಾದವಶೇಷೋ ಹಿ ಧುರ್ಯಯೋರಪ್ಯತೀತಯೋಃ ।
ಯೌ ನಿತ್ಯಮುಪಜೀವಾಮಃ ಕ್ಷಮಿಣೌ ಪುರುಷರ್ಷಭೌ ॥ ೧೬ ॥

ಮಹಾನಾಯಕರೂ, ಸಹನಶೀಲರೂ, ಕುರುಶ್ರೇಷ್ಠರೂ ಆದ ಯಾವ ಭೀಷ್ಮ-ದ್ರೋಣರನ್ನು ನಾವು ಯಾವಾಗಲೂ ಉಪಜೀವಿಸಿದ್ದೇವೆಯೋ ಅಂತಹ ಅವರು ಹೋದಮೇಲೆ ಅವಶೇಷವು ಹೇಗೆ ಉಂಟಾಗುತ್ತದೆ? (ಏನು ಉಳಿಯುತ್ತದೆ?)

ವ್ಯಕ್ತಮೇತದ್ಧಿ ಮೇ ಶಂಸ ಯಥಾ ಯುದ್ಧಮವರ್ತತ ।
ಕೇಽಯುಧ್ಯನ್ ಕೇ ಹ್ಯಪಾಕರ್ಷನ್ ಕೇ ಕ್ಷುದ್ರಾಃ ಪ್ರಾದ್ರವನ್ ಭಯಾತ್ ॥

ಹೇಗೆ ಯುದ್ಧವು ನಡೆಯಿತೆಂದು ನನಗೆ ಸ್ಪಷ್ಟವಾಗಿ ಹೇಳು. ಯಾರು ಯುದ್ಧವನ್ನು ಮಾಡಿದರು? ಯಾರು ಹಿಂದೆ ಸರಿದರು? ಯಾವ ಕ್ಷುದ್ರರು ಭಯದಿಂದ ಓಡಿದರು?

ಧನಂಜಯಂ ಚ ಮೇ ಶಂಸ ಯದ್ಯಚ್ಚಕ್ರೇ ರಥರ್ಷಭಃ ।
ತಸ್ಮಾದ್ ಭಯಂ ನೋ ಭೂಯಿಷ್ಠಂ ಭ್ರಾತೃವ್ಯಾಣಾಂ ಭಯಂಕರಾತ್ ॥

ರಥಶ್ರೇಷ್ಠನಾದ ಅರ್ಜುನನು ಏನೇನು ಮಾಡಿದನೆಂದು ನನಗೆ ಹೇಳು. ಭಯಂಕರನಾದ ಅವನಿಂದ ಅವನ ಶತ್ರುಗಳಾದ ನಮಗೆ ದೊಡ್ಡ ಭಯವಿದೆ.

ಯದಾಸೀತ್ ಸನ್ನಿವೃತ್ತೇಷು ಪಾಂಡವೇಷು ಚ ಸಂಜಯ ।
ಮಮ ಸೇನಾವಶೇಷಸ್ಯ ಸನ್ನಿಪಾತಃ ಸುದಾರುಣಃ ।
ಮಾಮಕಾನಾಂ ಚ ಯೇ ಶೂರಾಃ ತತ್ರ ತಾನ್ ಸಮವಾರಯನ್ ॥

ಎಲೈ ಸಂಜಯನೇ, ಪಾಂಡವರು ಹಿಂದಿರುಗಿದ ಮೇಲೆ ಏನು ನಡೆಯಿತು? ನನ್ನ ಉಳಿದ ಸೈನ್ಯದ ತೀವ್ರವಾದ ಸಂಘರ್ಷವು ಹೇಗೆ ಉಂಟಾಯಿತು? ನನ್ನ ಸೈನ್ಯದ ಯಾವ ಶೂರರು ಅಲ್ಲಿ ಅವರನ್ನು ತಡೆದರು?

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ತ್ರಯೋವಿಂಶೋಽಧ್ಯಾಯಃ ॥

॥ ಸಂಶಪ್ತಕವಧಪರ್ವಣಿ ಅಷ್ಟಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಇಪ್ಪತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ನಾಲ್ಕನೆಯ ಅಧ್ಯಾಯ

ದ್ವಂದ್ವಯುದ್ಧಗಳು

ಸಂಜಯಃ

ಮಹದ್ ಭೈರವಮಾಸೀನ್ನಃ ಸನ್ನಿವೃತ್ತೇಷು ಪಾಂಡುಷು ।
ದೃಷ್ಟ್ವಾ ದ್ರೋಣಂ ಧಾಧ್ಯಮಾನಂ ತೈರ್ಭಾಸ್ಕರಮಿವಾಂಬುದೈಃ ॥ ೧ ॥

ಪಾಂಡವರು ಹಿಂದಿರುಗಿದ ಮೇಲೆ ಸೂರ್ಯನನ್ನು ಮೋಡಗಳು ಮುಚ್ಚುವಂತೆ ದ್ರೋಣರು ಮುಚ್ಚಲ್ಪಟ್ಟುದನ್ನು ನೋಡಿ ದೊಡ್ಡ ಭೈರವ ನಾದವು ಉಂಟಾಯಿತು.

ತೈಶ್ಚೋದ್ಧೂತಂ ರಜಸ್ತೀವ್ರಮವಚಕ್ಷೇ ಚಮೂಂ ತವ ।
ತತೋ ಹತಮಮನ್ಯಾಮ ದ್ರೋಣಂ ದೃಷ್ಟಿಪಥೇ ಹತೇ ॥ ೨ ॥

ಹಿಂದಿರುಗಿದ ಪಾಂಡವರ ಸೈನ್ಯದಿಂದ ಮೇಲೆದ್ದ ತೀವ್ರವಾದ ಧೂಳು ನಿನ್ನ ಸೈನ್ಯವನ್ನು ಆವರಿಸಿತು.ದ್ರೋಣರು ಕಣ್ಣಿಗೆ ಕಾಣದಾಗುತ್ತಿರಲು ಆಗ ಅವರು ಹತರಾದರೆಂದು ತಿಳಿದೆವು.

ತಾಂಸ್ತು ಶೂರಾನ್ ಮಹೇಷ್ವಾಸಾನ್ ಕ್ರೂರಂ ಕರ್ಮ ಚಿಕೀರ್ಷತಃ ।
ದೃಷ್ಟ್ವಾ ದುರ್ಯೋಧನಸ್ತೂರ್ಣಂ ಸ್ವಸೈನ್ಯಂ ಸಮಚೋಚುದತ್ ॥ ೩ ॥

ಕ್ರೂರವಾದ ಕರ್ಮವನ್ನು ಮಾಡಲು ಬಯಸಿ ಹಿಂದಿರುಗಿದ ಮಹಾಧನುರ್ಧಾರಿಗಳಾದ ಆ ಶೂರರನ್ನು ನೋಡಿ ದುರ್ಯೋಧನನು ಶೀಘ್ರವಾಗಿ ತನ್ನ ಸೈನ್ಯವನ್ನು ಪ್ರಚೋದಿಸಿದನು.

ದುರ್ಯೋಧನಃ

ಯಥಾಶಕ್ತಿ ಯಥೋತ್ಸಾಹಂ ಯಥಾಸತ್ತ್ವಂ ನರಾಧಿಪಾಃ ।
ವಾರಯಧ್ವಂ ಯಥಾಯೋಗಂ ಪಾಂಡವಾನಾಮನೀಕಿನೀಮ್ ॥ ೪ ॥

ದುರ್ಯೋಧನ– ಎಲೈ ರಾಜರೇ, ನಿಮ್ಮ ಶಕ್ತಿಗೆ, ಉತ್ಸಾಹಕ್ಕೆ ಮತ್ತು ಬಲಕ್ಕೆ ಅನುಗುಣವಾಗಿ ಮತ್ತು ನಿಮ್ಮ ಯುದ್ಧೋಪಾಯಕ್ಕನುಗುಣವಾಗಿ ಪಾಂಡವರ ಸೈನ್ಯವನ್ನು ತಡೆಯಿರಿ.

ಸಂಜಯಃ

ತತೋ ದುರ್ಮರ್ಷಣೋ ಭೀಮಮಭ್ಯಯಾತ್ ತನಯಸ್ತವ ।
ಆರಾದ್ ದೃಷ್ಟ್ವಾ ಕಿರನ್ ಬಾಣೈರಿಚ್ಛನ್ ದ್ರೋಣಸ್ಯ ಜೀವಿತಮ್ ॥೫॥

ಸಂಜಯ– ಆಗ ನಿನ್ನ ಪುತ್ರನಾದ ದುರ್ಮರ್ಷಣನು ದೂರದಿಂದಲೇ ಭೀಮಸೇನನನ್ನು ನೋಡಿ, ದ್ರೋಣರ ಜೀವಿತವನ್ನು ಬಯಸಿ, ಭೀಮಸೇನನ ಮೇಲೆ ಬಾಣಗಳನ್ನು ಪ್ರಯೋಗಿಸುತ್ತಾ ಅವನ ಕಡೆಗೆ ಸಾಗಿದನು.

ತಂ ಬಾಣೈರವತಸ್ತಾರ ಕ್ರುದ್ಧೋ ಮೃತ್ಯುರಿವಾಹವೇ ।
ತಂ ಚ ಭೀಮೋಽರ್ದಯದ್ ಬಾಣೈಃ ತದಾಽऽಸೀತ್ ತುಮುಲಂ ಮಹತ್

ಅವನು ಮೃತ್ಯುವಿನಂತೆ ರಣರಂಗದಲ್ಲಿ ಕ್ರುದ್ಧನಾಗಿ ಬಾಣಗಳಿಂದ ಭೀಮನ ಶರೀರವನ್ನು ಹರಡಿದನು. ಭೀಮನೂ ಸಹ ಬಾಣಗಳಿಂದ ಅವನನ್ನು ಪೀಡಿಸಿದನು. ಆಗ ದೊಡ್ಡ, ತೀವ್ರವಾದ ಯುದ್ಧವು ನಡೆಯಿತು.

ತ ಈಶ್ವರಸಮಾದಿಷ್ಟಾಃ ಪ್ರಾಜ್ಞಾಃ ಶೂರಾಃ ಪ್ರಹಾರಿಣಃ ।
ಬಾಹ್ಯಂ ಕೃತ್ವಾ ಮೃತ್ಯುಭಯಂ ಯುಯುಧುಃ ಪಾಂಡವೈಃ ಸಹ ॥ ೭ ॥

ಪ್ರಭುವಾದ ದುರ್ಯೋಧನನಿಂದ ಆಜ್ಞಪ್ತರಾದ ಪ್ರಾಜ್ಞರೂ, ಪ್ರಹಾರಶೀಲರೂ, ಶೂರರೂ ಆದ ಆ ರಾಜರು ಮೃತ್ಯುಭಯವನ್ನು ದೂರಮಾಡಿ ಪಾಂಡವರ ಜೊತೆಯಲ್ಲಿ ಯುದ್ಧವನ್ನು ಮಾಡಿದರು.

ಕೃತವರ್ಮಾ ಶಿನೇಃ ಪುತ್ರಂ ದ್ರೋಣಂ ಪ್ರೇಪ್ಸುಂ ವಿಶಾಂಪತೇ ।
ಪರ್ಯವಾರಯದಾಯಾಂತಂ ಶೂರಂ ಸಮರಶೋಭಿನಮ್ ॥ ೮ ॥

ಎಲೈ ರಾಜನೇ, ದ್ರೋಣರನ್ನು ಸಮೀಪಿಸಲು ಬಯಸಿ ಬರುತ್ತಿರುವ ಸಮರಶೋಭಿಯಾದ, ಶೂರನಾದ ಸಾತ್ಯಕಿಯನ್ನು ಕೃತವರ್ಮನು ತಡೆದನು.

ತಂ ಶೈನೇಯಃ ಶರವ್ರಾತೈಃ ಕ್ರುದ್ಧಃ ಕ್ರುದ್ಧಂ ತದಾಽಕಿರತ್ ।
ಕೃತವರ್ಮಾ ಚ ಶೈನೇಯಂ ಮತ್ತೋ ಮತ್ತಮಿವ ದ್ವಿಪಮ್ ॥ ೯ ॥

ಕ್ರುದ್ಧನಾದ ಸಾತ್ಯಕಿಯು ಕ್ರುದ್ಧನಾದ ಕೃತವರ್ಮನನ್ನು ಬಾಣಗಳ ಸಮೂಹದಿಂದ ಹೊಡೆದನು. ಕೃತವರ್ಮನೂ ಸಹ ಸಾತ್ಯಕಿಯನ್ನು ಒಂದು ಮದಗಜವು ಇನ್ನೊಂದು ಮದಗಜವನ್ನು ಪೀಡಿಸುವಂತೆ ಪೀಡಿಸಿದನು.

ಸೈಂಧವಃ ಕ್ಷತ್ರಧರ್ಮಾಣಮಾಪತಂತಂ ಶರೌಘಿಣಮ್ ।
ಉಗ್ರಧನ್ವಾ ಮಹೇಷ್ವಾಸಂ ಯತ್ತೋ ದ್ರೋಣಾದವಾರಯತ್ ॥ ೧೦ ॥

ದೊಡ್ಡ ಧನುಸ್ಸನ್ನು ಹೊಂದಿದ ಸೈಂಧವನು ಶರಸಮೂಹವನ್ನು ಸುರಿಸುತ್ತಿದ್ದ ಮಹಾಧನುರ್ಧಾರಿಯಾದ, ಮುಂದೆ ಬರುತ್ತಿದ್ದ ಕ್ಷತ್ರಧರ್ಮನನ್ನು ಪ್ರಯತ್ನಪಟ್ಟು ದ್ರೋಣರಿಂದ ನಿವಾರಿಸಿದನು.

ಕ್ಷತ್ರಧರ್ಮಾ ಸಿಂಧುಪತೇಃ ಛಿತ್ತ್ವಾ ಕೇತನಕಾರ್ಮುಕೇ ।
ನಾರಾಚೈರ್ದಶಭಿಃ ಕ್ರುದ್ಧಃ ಸರ್ವಮರ್ಮಸ್ವತಾಡಯತ್ ॥ ೧೧ ॥

ಕ್ಷತ್ರಧರ್ಮನು ಕೋಪಗೊಂಡು ಸೈಂಧವನ ಧ್ವಜ-ಧನುಸ್ಸುಗಳನ್ನು ಕತ್ತರಿಸಿ, ಕತ್ತಿ, ನಾರಾಚಗಳಿಂದ ಅವನನ್ನು ಎಲ್ಲ ಮರ್ಮಸ್ಥಳಗಳಲ್ಲಿಯೂ ಹೊಡೆದನು.

ಅಥಾನ್ಯದ್ಧನುರಾದಾಯ ಸೈಂಧವಃ ಕೃತಹಸ್ತವತ್ ।
ವಿವ್ಯಾಧ ಕ್ಷತ್ರಧರ್ಮಾಣಂ ಮನೋಗತಿಭಿರಾಶುಗೈಃ ॥ ೧೨ ॥

ಆಗ ಸುಶಿಕ್ಷಿತನಾದ ಸೈಂಧವನು ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ಮನೋವೇಗದಂತೆ ಶೀಘ್ರಗತಿಯನ್ನು ಹೊಂದಿದ್ದ ಬಾಣಗಳಿಂದ ಕ್ಷತ್ರಧರ್ಮನ ಜೊತೆಯಲ್ಲಿ ಯುದ್ಧವನ್ನು ಮಾಡಿದನು.

ಯುಯುತ್ಸುಂ ಪಾಂಡವಾರ್ಥಾಯ ಯತಮಾನಂ ಮಹಾರಥಮ್ ।
ಸುಬಾಹುರ್ಭ್ರಾತರಂ ಶೂರಂ ಯಾಂತಂ ದ್ರೋಣಾದವಾರಯತ್ ॥

ಪಾಂಡವರ ಸಲುವಾಗಿ ಪ್ರಯತ್ನಪಡುತ್ತಿದ್ದ ಮಹಾರಥನಾದ, ಶೂರನಾದ, ದ್ರೋಣರ ಬಳಿಗೆ ಬರುತ್ತಿದ್ದ ತನ್ನ ಸಹೋದರನಾದ ಯುಯುತ್ಸುವನ್ನು ಸುಬಾಹುವು ದ್ರೋಣರಿಂದ ತಡೆದನು.

ಸುಬಾಹೋಃ ಸಧನುರ್ಬಾಣಾವಸ್ಯತಃ ಪರಿಘೋಪಮೌ ।
ಯುಯುತ್ಸುಃ ಶಿತಪೀತಾಭ್ಯಾಂ ಕ್ಷುರಾಭ್ಯಾಮಚ್ಛಿನದ್ ಭುಜೌ ॥ ೧೪ ॥

ಯುಯುತ್ಸುವು ಹರಿತವೂ, ನೀರನ್ನು ಕುಡಿಸಿ ಹದಮಾಡಿದವೂ ಆದ ಎರಡು ಕ್ಷುರಗಳಿಂದ ಬಾಣವನ್ನು ಪ್ರಯೋಗಿಸಲು ಹೊರಟಿದ್ದ, ಒನಕೆಯಂತಿದ್ದ, ಧನುರ್ಬಾಣ ಸಹಿತವಾದ ಸುಬಾಹುವಿನ ಎರಡು ಭುಜಗಳನ್ನು ಕತ್ತರಿಸಿದನು.

ರಾಜಾನಂ ಪಾಂಡವಶ್ರೇಷ್ಠಂ ಧರ್ಮಾತ್ಮಾನಂ ಯುಧಿಷ್ಠಿರಮ್ ।
ವೇಲೇವ ಸಾಗರಂ ಕ್ಷುಬ್ಧಂ ಮದ್ರರಾಟ್ ಸಮವಾರಯತ್ ॥ ೧೫ ॥

ತಂ ಧರ್ಮರಾಜೋ ಬಹುಭಿರ್ಮರ್ಮಭಿದ್ಭಿರವಾಕಿರತ್ ।
ಮದ್ರೇಶಸ್ತಂ ಚತುಃಷಷ್ಟ್ಯಾ ಶರೈರ್ವಿದ್ಧ್ವಾ ನನಾದ ಭೃಶಮ್ ॥ ೧೬ ॥

ಧರ್ಮಾತ್ಮನೂ, ಪಾಂಡವಶ್ರೇಷ್ಠನೂ ಆದ ಯುಧಿಷ್ಠಿರರಾಜನನ್ನು ಮದ್ರರಾಜನಾದ ಶಲ್ಯನು ಕ್ಷುಬ್ಧ ಸಾಗರವನ್ನು ತೀರವು ತಡೆದಂತೆ ತಡೆದನು. ಯುಧಿಷ್ಠಿರನು ಅವನನ್ನು ಮರ್ಮಭೇದಕವಾದ ಅನೇಕ ಬಾಣಗಳಿಂದ ಹೊಡೆದನು. ಶಲ್ಯನು ಯುಧಿಷ್ಠಿರನನ್ನು ಅರವತ್ನಾಲ್ಕು ಬಾಣಗಳಿಂದ ಹೊಡೆದು ತೀವ್ರವಾದ ನಾದವನ್ನು ಮಾಡಿದನು.

ತಸ್ಯ ನಾನದತಃ ಕೇತುಮುಚ್ಚಕರ್ತ ಸಕಾರ್ಮುಕಮ್ ।
ಕ್ಷುರಾಭ್ಯಾಂ ಪಾಂಡವಶ್ರೇಷ್ಠಃ ತತ ಉಚ್ಚುಕ್ರುಶುರ್ಜನಾಃ ॥ ೧೭ ॥

ಪಾಂಡವಶ್ರೇಷ್ಠನಾದ ಯುಧಿಷ್ಠಿರನು ಹಾಗೆ ನಾದವನ್ನು ಮಾಡುತ್ತಿದ್ದ ಶಲ್ಯನ ಧ್ವಜ ಮತ್ತು ಧನುಸ್ಸುಗಳನ್ನು ಎರಡು ಕ್ಷುರಗಳಿಂದ ಕತ್ತರಿಸಿದನು. ಆಗ ಪಾಂಡವ ಸೇನೆಯ ಯೋಧರು ಹರ್ಷನಾದವನ್ನು ಮಾಡಿದರು.

ತಥೈವ ರಾಜಾ ರಾಜಾನಂ ಬಾಹ್ಲಿಕೋ ದ್ರುಪದಂ ಶರೈಃ ।
ಆದ್ರವಂತಂ ಸಹಾನೀಕಂ ಸಹಾನೀಕೋ ನ್ಯವಾರಯತ್ ॥ ೧೮ ॥

ಹಾಗೆಯೇ, ತನ್ನ ಸೈನ್ಯದಿಂದ ಕೂಡಿದ ಬಾಹ್ಲಿಕರಾಜನು ತನ್ನ ಸೈನ್ಯದ ಜೊತೆಯಲ್ಲಿ ಧಾವಿಸಿ ಬರುತ್ತಿದ್ದ ದ್ರುಪದರಾಜನನ್ನು ಬಾಣಗಳಿಂದ ತಡೆದನು.

ತದ್ ಯುದ್ಧಮಭವದ್ ಘೋರಂ ಕ್ರುದ್ಧಯೋಃ ಸಹಸೇನಯೋಃ ।
ಯಥಾ ಮಹಾಯೂಥಪಯೋರ್ದ್ವಿಪಯೋಃ ಸಂಪ್ರಭಿನ್ನಯೋಃ ॥ ೧೯ ॥

ಮದೋದಕವನ್ನು ಸ್ರವಿಸುವ ಎರಡು ಮಹಾಗಜಗಳಿಗೆ (ಸಲಗಗಳಿಗೆ) ನಡೆಯುವಂತ ಸೈನ್ಯದಿಂದ ಕೂಡಿ ಕ್ರುದ್ಧರಾದ ಅವರಿಬ್ಬರಿಗೆ ಘೋರವಾದ ಯುದ್ಧವು ನಡೆಯಿತು.

ವಿಂದಾನುವಿಂದಾವಾವಂತ್ಯೌ ವಿರಾಟಂ ಮಾತ್ಸ್ಯಮಾರ್ಚ್ಛತಾಮ್ ।
ಸಹಸೇನಂ ಯಥೇಂದ್ರಾಗ್ನೀ ಪುರಾ ಬಲಿಮಿವಾಧ್ವರೇ ॥ ೨೦ ॥

ಅವಂತಿದೇಶದ ವಿಂದಾನುವಿಂದರು ಹಿಂದೆ ಇಂದ್ರಾಗ್ನಿಗಳು ಯಜ್ಞದಲ್ಲಿ ಬಲಿಯನ್ನು ಸಮೀಪಿಸಿದಂತೆ ಸೈನ್ಯದಿಂದ ಕೂಡಿದ ಮತ್ಸ್ಯರಾಜನಾದ ವಿರಾಟನನ್ನು ಸಮೀಪಿಸಿದರು.

ತದುತ್ಪಿಂಜಲಕಂ ಯುದ್ಧಮಾಸೀದ್ ದೇವಾಸುರೋಪಮಮ್ ।
ಮತ್ಸ್ಯಾನಾಂ ಕೇಕಯೈಃ ಸಾರ್ಧಮಭೀತಾಶ್ವರಥದ್ವಿಪಮ್ ॥ ೨೧ ॥

ಮತ್ಸ್ಯರಿಗೂ ಮತ್ತು ಕೇಕಯರಿಗೂ ನಿರ್ಭಯವಾದ ಅಶ್ವ-ರಥ-ಗಜಗಳಿಂದ ಕೂಡಿದ, ದೇವಾಸುರರ ಯುದ್ಧದಂತಿದ್ದ, ಕೋಲಾಹಲಕಾರಿಯಾದ ಯುದ್ಧವು ನಡೆಯಿತು.

ನಾಕುಲಂ ತು ಶತಾನೀಕಂ ಭೂತಕರ್ಮಾ ಸಭಾಪತಿಃ ।
ಅಸ್ಯಂತಮಿಷುಸಂಘಾನಿ ಯಾಂತಂ ದ್ರೋಣಾದವಾರಯತ್ ॥ ೨೨ ॥

ಸಭಾಪತಿಯಾದ ಭೂತಕರ್ಮನು ಬಾಣಸಮೂಹಗಳನ್ನು ಪ್ರಯೋಗಿಸುತ್ತಾ ಬರುತ್ತಿದ್ದ ನಕುಲ ಪುತ್ರನಾದ ಶತಾನೀಕನನ್ನು ದ್ರೋಣರ ಆಜ್ಞೆಯಿಂದ ತಡೆದನು.

ತತೋ ನಕುಲದಾಯಾದಃ ತ್ರಿಭಿರ್ಭಲ್ಲೈಃ ಸಮಾಹಿತೈಃ ।
ಚಕ್ರೇ ವಿಬಾಹುಶಿರಸಂ ಭೂತಕರ್ಮಾಣಮಾಹವೇ ॥ ೨೩ ॥

ಆಗ ನಕುಲಪುತ್ರನಾದ ಶತಾನೀಕನು ಚೆನ್ನಾಗಿ ಪ್ರಯೋಗಿಸಲ್ಪಟ್ಟ ಮೂರು ಭಲ್ಲಗಳಿಂದ ರಣರಂಗದಲ್ಲಿ ಭೂತಕರ್ಮನ ಬಾಹುಗಳನ್ನು ಮತ್ತು ಶಿರಸ್ಸನ್ನು ಕತ್ತರಿಸಿದನು.

ಸುತಸೋಮಂ ತು ಭೈಮೇಯಮಾಪತಂತಂ ಶರೌಘಿಣಮ್ ।
ದ್ರೋಣಾಯಾಭಿಮುಖಂ ಯಾಂತಂ ವಿವಿಂಶತಿರವಾರಯತ್ ॥ ೨೪ ॥

ಬಾಣಗಳ ಸಮೂಹವನ್ನು ಪ್ರಯೋಗಿಸುತ್ತಾ ದ್ರೋಣರಿಗೆ ಅಭಿಮುಖವಾಗಿ ಬರುತ್ತಿದ್ದ ಭೀಮಪುತ್ರನಾದ ಶ್ರುತಸೋಮನನ್ನು ವಿವಿಂಶತಿಯು ತಡೆದನು.

ಸುತಸೋಮಸ್ತು ಸಂಕ್ರುದ್ಧಃ ಸ್ವಪಿತೃವ್ಯಮಜಿಹ್ಮಗೈಃ ।
ವಿವಿಂಶತಿಂ ಶರೈರ್ವಿದ್ಧ್ವಾ ನ ನ್ಯವರ್ತತ ದಂಸಿತಃ ॥ ೨೫ ॥

ಯುದ್ಧಸನ್ನದ್ಧನಾದ ಸುತಸೋಮನು ಬಹಳ ಕೋಪಗೊಂಡು ನೇರವಾಗಿ ಸಾಗುವ ಬಾಣಗಳಿಂದ ತನ್ನ ಚಿಕ್ಕಪ್ಪನಾದ ವಿವಿಂಶತಿಯನ್ನು ಹೊಡೆದು ರಣರಂಗದಿಂದ ಹಿಂದೆ ಸರಿಯಲಿಲ್ಲ.

ಸಾಲ್ವೋ ಭೀಮರಥಃ ಶೂರಂ ಶ್ರುತಸೇನಂ ಮಹಾಹವೇ ।
ದ್ರೋಣಾಯಾಭಿಮುಖಂ ಯಾಂತಂ ಶರೌಘೇಣ ನ್ಯವಾರಯತ್ ॥೨೬॥

ಸಾಲ್ವದೇಶದ ಭೀಮರಥನು ದೊಡ್ಡ ಯುದ್ಧದಲ್ಲಿ ದ್ರೋಣರಿಗೆ ಎದುರಾಗಿ ಬರುತ್ತಿದ್ದ ಶೂರನಾದ ಸುತಸೇನನನ್ನು ಬಾಣಗಳ ಸಮೂಹದಿಂದ ತಡೆದನು.

ಸ ತು ಭೀಮರಥಂ ಸಾಲ್ವಂ ಮನೋಗತಿಭಿರಾಯಸೈಃ ।
ಷಡ್ಭಿಃ ಸಾಶ್ವನಿಯಂತಾರಮನಯದ್ ಯಮಸಾದನಮ್ ॥ ೨೭ ॥

ಶ್ರುತಸೇನನು ಸಾಲ್ವದೇಶದ ಭೀಮರಥನನ್ನು ಮನೋವೇಗವುಳ್ಳ, ಅಯಸ್ಮಯವಾದ (ಕಬ್ಬಿಣದ) ಆರು ಬಾಣಗಳಿಂದ ಅವನ ಅಶ್ವ-ಸಾರಥಿಗಳ ಜೊತೆಯಲ್ಲಿ ಯಮಲೋಕಕ್ಕೆ ಕಳುಹಿಸಿದನು.

ತಂ ಶತಾನೀಕಮಾಯಾಂತಂ ಮಯೂರಸದೃಶೈರ್ಹಯೈಃ ।
ಚಿತ್ರಸೇನೋ ಮಹಾರಾಜ ತವ ಪುತ್ರೋ ನ್ಯವಾರಯತ್ ॥ ೨೮ ॥

ಎಲೈ ಮಹಾರಾಜನೇ, ಮಯೂರದ ಬಣ್ಣಕ್ಕೆ ಸದೃಶವಾದ ಅಶ್ವಗಳಿಂದ ಮುಂದೆ ಬರುತ್ತಿದ್ದ ಶತಾನೀಕನನ್ನು ನಿನ್ನ ಪುತ್ರನಾದ ಚಿತ್ರಸೇನನು ತಡೆದನು.

ತಮಾರ್ಜುನಿಃ ಶರೈಶ್ಚಕ್ರೇ ಪಿತೃವ್ಯಂ ಜರ್ಝರಚ್ಛವಿಮ್ ।
ಶರೈಶ್ಚ ದ್ರೌಪದೀಪುತ್ರಃ ಚಿತ್ರಸೇನಂ ಸಮಾವೃಣೋತ್ ॥ ೨೯ ॥

ಅರ್ಜುನ ಮತ್ತು ದ್ರೌಪದಿಯರ ಪುತ್ರನಾದ ಶ್ರುತಕರ್ಮನು ತನ್ನ ಬಾಣಗಳಿಂದ ಚಿಕ್ಕಪ್ಪನಾದ ಚಿತ್ರಸೇನನನ್ನು ಜರ್ಝರೀತ ಶರೀರವುಳ್ಳವನನ್ನಾಗಿ ಮಾಡಿ ಅವನ ಶರೀರವನ್ನು ಬಾಣಗಳಿಂದ ತುಂಬಿದನು.

ಕಿರಂತಂ ಶರಜಾಲಾನಿ ಪ್ರಭಿನ್ನಮಿವ ಕುಂಜರಮ್ ।
ಶ್ರುತಕರ್ಮಾಣಮಾಯಾಂತಂ ದೌಃಶಾಸನಿರವಾರಯತ್ ॥ ೩೦ ॥

ಬಾಣ ಸಮೂಹಗಳನ್ನು ಪ್ರಯೋಗಿಸುತ್ತಾ ಮದಗಜದಂತೆ ಮುಂದೆ ಬರುತ್ತಿದ್ದ ಶ್ರುತಕರ್ಮನನ್ನು ದುಶ್ಶಾಸನನ ಪುತ್ರನು ತಡೆದನು.

ತೌ ಪೇತತುಶ್ಚ ದುರ್ಧರ್ಷೌ ಪರಸ್ಪರವಧೈಷಿಣೌ ।
ಪಿತೄಣಾಮರ್ಥಸಿದ್ಧ್ಯರ್ಥಂ ಚಕ್ರಾತೇ ಯುದ್ಧಮುತ್ತಮಮ್ ॥ ೩೧ ॥

ಪರಸ್ಪರ ವಧೆಯನ್ನು ಬಯಸಿದ ದುರ್ಧರ್ಷರಾದ ಅವರಿಬ್ಬರೂ ಬಿದ್ದರು. ಅನಂತರ ತಮ್ಮ ತಂದೆಗಳ ಅರ್ಥಸಿದ್ಧಿಗಾಗಿ ಶ್ರೇಷ್ಠವಾದ ಯುದ್ಧವನ್ನು ಮಾಡಿದರು.

ತಿಷ್ಠಂತಂ ತು ಪಿತುಃ ಶಾಸ್ತ್ರೇ ಪ್ರತಿವಿಂಧ್ಯಂ ತಮಾಯಸೈಃ ।
ದ್ರೌಣಿರ್ಮಾನಂ ಪಿತುಃ ಕುರ್ವನ್ ಮಾರ್ಗಣೈಃ ಸಮವಾರಯತ್ ॥

ತಂದೆಯ ಆದೇಶದಂತೆ ನಡೆದುಕೊಳ್ಳುವ ಪ್ರತಿವಿಂಧ್ಯನನ್ನು ಅಶ್ವತ್ಥಾಮರು ಯುಧಿಷ್ಠಿರನಿಗೆ ಮರ್ಯಾದೆಯನ್ನು ಕೊಡುತ್ತಾ ಕಬ್ಬಿಣದ ಬಾಣಗಳಿಂದ ಅವನನ್ನು ತಡೆದರು.

ತಂ ಕ್ರುದ್ಧಂ ಪ್ರತಿವಿವ್ಯಾಧ ಪ್ರತಿವಿಂಧ್ಯಃ ಶಿತೈಃ ಶರೈಃ ।
ಸಿಂಹಲಾಂಗೂಲಲಕ್ಷ್ಮಾಣಂ ಪಿತುರರ್ಥೇ ವ್ಯವಸ್ಥಿತಮ್ ॥ ೩೩ ॥

ಕ್ರುದ್ಧನಾದ ಪ್ರತಿವಿಂಧ್ಯನು ನಿಶಿತವಾದ ಬಾಣಗಳಿಂದ ಸಿಂಹಲಾಂಗೂಲ ಧ್ವಜವುಳ್ಳ ತಮ್ಮ ತಂದೆಯ ಸಲುವಾಗಿ ಯುದ್ಧವನ್ನು ಮಾಡುತ್ತಿದ್ದ ಅಶ್ವತ್ಥಾಮರನ್ನು ಹೊಡೆದನು.

ಪ್ರವಪನ್ನಿವ ಬೀಜಾನಿ ಬೀಜಕಾಲೇ ಕೃಷೀವಲಃ ।
ದ್ರೌಣಾಯನಿರ್ದ್ರೌಪದೇಯಂ ಶರಜಾಲೈರವಾಕಿರತ್ ॥ ೩೪ ॥

ಕೃಷೀವಲನು ಬೀಜವನ್ನು ಬಿತ್ತುವ ಕಾಲದಲ್ಲಿ ಬೀಜಗಳನ್ನು ಸುರಿಸಿದಂತೆ ದ್ರೋಣ ಪುತ್ರರಾದ ಅಶ್ವತ್ಥಾಮರು ದ್ರೌಪದಿಯ ಪುತ್ರನ ಮೇಲೆ ಬಾಣಗಳ ಸಮೂಹವನ್ನು ಸುರಿಸಿದರು.

ಸಾರ್ಜುನಿಂ ಶ್ರುತಕೀರ್ತಿಂ ತು ದ್ರೌಪದೇಯಂ ಮಹಾರಥಮ್ ।
ದ್ರೋಣಾಯಾಭಿಮುಖಂ ಯಾಂತಂ ದೌಶ್ಶಾಸನಿರವಾರಯತ್ ॥ ೩೫ ॥

ಅರ್ಜುನನ ಪುತ್ರನಾದ ಅಭಿಮನ್ಯುವಿನ ಜೊತೆಯಲ್ಲಿ ಬರುತ್ತಿದ್ದ ಮಹಾರಥನಾದ, ದ್ರೌಪದಿಯ ಪುತ್ರನಾದ, ದ್ರೋಣರಿಗೆ ಅಭಿಮುಖವಾಗಿ ಬರುತ್ತಿದ್ದ ಶ್ರುತಕೀರ್ತಿಯನ್ನು ದುಶ್ಶಾಸನನ ಪುತ್ರನು ತಡೆದನು.

ತಸ್ಯ ಕೃಷ್ಣಸಮಃ ಕಾರ್ಷ್ಣಿಃ ತ್ರಿಭಿರ್ಭಲ್ಲೈಃ ಸುಸಂಧಿತೈಃ
ಧನುರ್ಧ್ವಜಂ ಚ ಸೂತಂ ಚ ಛಿತ್ತ್ವಾ ದ್ರೋಣಾಂತಿಕಂ ಯಯೌ ॥೩೬॥

ಅರ್ಜುನನಿಗೆ ಸಮನಾದ ಅಭಿಮನ್ಯುವು ಚೆನ್ನಾಗಿ ಹೂಡಿದ ಮೂರು ಭಲ್ಲಗಳಿಂದ ಅವನ ಧನುಸ್ಸನ್ನೂ, ಧ್ವಜವನ್ನೂ ಮತ್ತು ಸೂತನನ್ನೂ ಕತ್ತರಿಸಿ ದ್ರೋಣರ ಸಮೀಪಕ್ಕೆ ಹೋದನು.

ಯಸ್ತು ಶೂರತಮೋ ರಾಜನ್ನುಭಯೋಃ ಸೇನಯೋಃ ಸ್ಮೃತಃ ।
ತಂ ಪಟಚ್ಚರಹಂತಾರಂ ಲಕ್ಷಣಃ ಸಮವಾರಯತ್ ॥ ೩೭ ॥

ಎಲೈ ರಾಜನೇ, ಯಾವನನ್ನು ಎರಡು ಸೇನೆಗಳಲ್ಲಿಯೂ ಅತ್ಯಂತ ಶೂರನೆಂದು ಹೇಳುತ್ತಾರೆಯೋ ಅಂತಹ ಪಟಚ್ಚರ ರಾಜನನ್ನು (ಸಮೂಹವನ್ನು)ಕೊಂದ ಅಭಿಮನ್ಯುವನ್ನು ದುರ್ಯೋಧನನ ಪುತ್ರನಾದ ಲಕ್ಷಣನು ತಡೆದನು.

ಲಕ್ಷಣೇಷ್ವಸನಂ ಛಿತ್ತ್ವಾ ಲಕ್ಷಣಂ ಚಾಪಿ ಮಾರಿಷ ।
ಲಕ್ಷಣೇ ಶರಜಾಲಾನಿ ವಿಸೃಜನ್ ಬಹ್ವಶೋಭತ ॥ ೩೮ ॥

ಎಲೈ ಪೂಜ್ಯನೇ, ಅಭಿಮನ್ಯುವು ಲಕ್ಷಣನ ಧನುಸ್ಸನ್ನು ಕತ್ತರಿಸಿ, ಅವನ ಮೇಲೆ ಬಾಣಗಳ ಸಮೂಹವನ್ನು ಪ್ರಯೋಗಿಸುತ್ತಾ ಬಹಳವಾಗಿ ಶೋಭಿಸಿದನು.

ತತೋಽಭಿಮನ್ಯುಃ ಕರ್ಮಾಣಿ ಕುರ್ವಂತಂ ಚಿತ್ರಯೋಧಿನಮ್ ।
ಆರ್ಜುನಿಃ ಕೃತಿನಂ ಶೂರಂ ಲಕ್ಷಣಂ ಸಮಯೋಧಯತ್ ॥ ೩೯ ॥

ಅನಂತರ ಅರ್ಜುನನ ಪುತ್ರನಾದ ಅಭಿಮನ್ಯುವು ಶೂರನೂ, ಕುಶಲನೂ, ವಿಚಿತ್ರವಾಗಿ ಯುದ್ಧವನ್ನು ಮಾಡುವವನೂ, ರಣರಂಗದಲ್ಲಿ ಅನೇಕ ಕರ್ಮಗಳನ್ನು ಮಾಡುವವನೂ ಆದ ಲಕ್ಷಣನ ಜೊತೆಯಲ್ಲಿ ಯುದ್ಧವನ್ನು ಮಾಡಿದನು.

ಸ ಸಂಪ್ರಹಾರಸ್ತುಮುಲಃ ತಯೋರಾಸೀನ್ಮಹಾತ್ಮನೋಃ ।
ಶ್ರೋತೃಣಾಮೀಕ್ಷಿತೃಣಾಂ ಚ ಭೃಶಂ ಪ್ರೀತಿವಿವರ್ಧನಃ ॥ ೪೦ ॥

ಕೇಳುವವರಿಗೂ ಮತ್ತು ನೋಡುವವರಿಗೂ ಬಹಳ ಸಂತೋಷವನ್ನುಂಟು ಮಾಡುವಂತೆ ಮಹಾತ್ಮರಾದ ಅವರಿಬ್ಬರಿಗೆ ತೀವ್ರವಾದ ಯುದ್ಧವು ನಡೆಯಿತು.

ತವ ಪೌತ್ರೌ ಚ ದುರ್ಧರ್ಷೌ ಪರಸ್ಪರವಧೈಷಿಣೌ ।
ಪಿತೃಣಾಮರ್ಥಸಿದ್ಧ್ಯರ್ಥಂ ಚಕ್ರಾತೇ ಯುದ್ಧಮದ್ಭುತಮ್ ॥ ೪೧ ॥

ಪರಸ್ಪರ ವಧೆಯನ್ನು ಬಯಸಿದ ದುರ್ಧರ್ಷರಾದ ನಿನ್ನ ಮೊಮ್ಮಕ್ಕಳಿಬ್ಬರೂ ತಂದೆಗಳ ಕಾರ್ಯಸಿದ್ಧಿಗಾಗಿ ಅದ್ಭುತವಾದ ಯುದ್ಧವನ್ನು ಮಾಡಿದರು.

ವಿಕರ್ಣಸ್ತು ಮಹಾಪ್ರಾಜ್ಞೋ ಯಾಜ್ಞಸೇನಿಂ ಶಿಖಂಡಿನಮ್ ।
ಪರ್ಯವಾರಯದಾಯಾಂತಂ ಯುವಾನಂ ಸಮರೇ ಯುವಾ ॥ ೪೨ ॥

ಯುವಕನೂ, ಮಹಾಪ್ರಾಜ್ಞನೂ ಆದ ವಿಕರ್ಣನು ಯುವಕನಾದ, ದ್ರುಪದ ಪುತ್ರನಾದ, ದ್ರೋಣರ ಬಳಿಗೆ ಬರುತ್ತಿದ್ದ ಶಿಖಂಡಿಯನ್ನು ರಣರಂಗದಲ್ಲಿ ತಡೆದನು.

ತತಸ್ತಮಿಷುಜಾಲೇನ ಯಾಜ್ಞಸೇನಿಃ ಸಮಾವೃಣೋತ್ ।
ವಿಧೂಯ ತದ್ ಬಾಣಜಾಲಂ ಬಭೌ ತವ ಸುತೋ ಬಲೀ ॥ ೪೩ ॥

ಆಗ ಶಿಖಂಡಿಯು ಅವನನ್ನು ಬಾಣಗಳ ಸಮೂಹದಿಂದ ಮುಚ್ಚಿದನು. ಬಲಿಷ್ಠನಾದ ನಿನ್ನ ಸುತನು ಬಾಣಗಳ ಸಮೂಹವನ್ನು ವಿನಾಶ ಮಾಡಿ ಶೋಭಿಸಿದನು.

ಅಂಗದೋಽಭಿಮುಖಃ ಶೂರಮುತ್ತಮೌಜಸಮಾಹವೇ ।
ದ್ರೋಣಾಯಾಭಿಮುಖಂ ಯಾಂತಂ ವತ್ಸದಂತೈರವಾಕಿರತ್ ।
ಅಂಗದೋ ನಿಶಿತೈರ್ಬಾಣೈಃ ಪುನರೇನಮವಾಕಿರತ್ ॥ ೪೪ ॥

ಅಂಗದನು ದ್ರೋಣರ ಎದುರಿಗೆ ಸಾಗುತ್ತಿದ್ದ ಶೂರನಾದ ಉತ್ತಮೌಜನನ್ನು ಅವನಿಗೆ ಎದುರಾಗಿ ನಿಂತು ಅವನ ಮೇಲೆ ವತ್ಸದಂತಗಳನ್ನು ಪ್ರಯೋಗಿಸಿದನು. ಪುನಃ ಅಂಗದನು ಅವನ ಮೇಲೆ ಹರಿತವಾದ ಬಾಣಗಳನ್ನು ಪ್ರಯೋಗಿಸಿದನು.

ಸ ಸಂಪ್ರಹಾರಸ್ತುಮುಲಸ್ತಯೋರಾಸೀನ್ಮಹಾತ್ಮನೋಃ ।
ಶ್ರೋತ್ಫ್ರಾಣಾಮೀಕ್ಷ್ಫ್ರಾಣಾಂ ಚ ತಯೋಶ್ಚ ಪ್ರೀತಿವರ್ಧನಃ ॥ ೪೫ ॥

ಮಹಾತ್ಮರಾದ ಅವರಿಬ್ಬರಿಗೆ ತೀವ್ರವಾದ ಮತ್ತು ನೋಡುವವರಿಗೂ, ಕೇಳುವವರಿಗೂ ಮತ್ತು ಅವರಿಗೂ ಸಂತೋಷದಾಯಕವಾದ ಯುದ್ಧವು ನಡೆಯಿತು.

ಅಂಗದಂ ಪಂಚಭಿರ್ಬಾಣೈರವಿಧ್ಯತ್ ಸ ಪರಂತಪಃ ।
ತತಃ ಸಮಭವದ್ ಯುದ್ಧಮನ್ಯೋನ್ಯಮಿತರೇತರಮ್ ।
ವೀರಾಣಾಂ ಜಯಕಾಂಕ್ಷಾಣಾಮತೀವ ಬಲಪೌರುಷಾತ್ ॥ ೪೬ ॥

ಪರಂತಪನಾದ ಉತ್ತಮೌಜನು ಅಂಗದನನ್ನು ಐದು ಬಾಣಗಳಿಂದ ಹೊಡೆದನು. ಅನಂತರ ಜಯವನ್ನು ಬಯಸುವ ವೀರರಿಗೆ ಬಲ ಮತ್ತು ಪೌರುಷಗಳಿಂದ ಕೂಡಿದ ಪರಸ್ಪರವಾದ ಅನ್ಯೋನ್ಯ ಯುದ್ಧವು ಉಂಟಾಯಿತು.

ದುರ್ಮುಖಸ್ತು ಮಹೇಷ್ವಾಸೋ ವೀರಂ ಪುರುಜಿತಂ ಬಲೀ ।
ದ್ರೋಣಾಯಾಭಿಮುಖಂ ಯಾಂತಂ ಕುಂತಿಭೋಜಮವಾರಯತ್ ॥

ಮಹಾಧನುರ್ಧಾರಿಯೂ, ಬಲಿಷ್ಠನೂ ಆದ ದುರ್ಮುಖನು ದ್ರೋಣರ ಎದುರಾಗಿ ಹೋಗುವ ಕುಂತಿಭೋಜನಾದ ಪುರುಜಿತ್ ರಾಜನನ್ನು ತಡೆದನು.

ಸ ದುರ್ಮುಖಂ ಭ್ರುವೋರ್ಮಧ್ಯೇ ನಾರಾಚೇನಾಹನದ್ ಭೃಶಮ್ ।
ತಸ್ಯ ತದ್ ವಿಬಭೌ ವಕ್ತ್ರಂ ಸನಾಳಮಿವ ಪಂಕಜಮ್ ॥ ೪೮ ॥

ಪುರುಜಿತನು ದುರ್ಮುಖನನ್ನು ನಾರಾಚದಿಂದ ಅವನ ಭ್ರೂ ಮಧ್ಯದಲ್ಲಿ ಬಲವಾಗಿ ಹೊಡೆದನು. ದುರ್ಮುಖನ ಮುಖವು ಆಗ ನಾಳದಿಂದ ಕೂಡಿದ ಪದ್ಮದಂತೆ ಶೋಭಿಸಿತು.

ಕರ್ಣಸ್ತು ಕೇಕಯಾನ್ ಭ್ರಾತೄನ್ ಪಂಚ ಲೋಹಿತಕಧ್ವಜಾನ್ ।
ದ್ರೋಣಾಯಾಭಿಮುಖಂ ಯಾತಃ ಶರೌಘೇಣ ನ್ಯವಾರಯತ್ ॥ ೪೯ ॥

ಕರ್ಣನು ಲೋಹಿತ ಧ್ವಜವುಳ್ಳ, ದ್ರೋಣರಿಗೆ ಅಭಿಮುಖವಾಗಿ ಹೋಗುವ, ಐವರು ಕೇಕಯ ಸಹೋದರರನ್ನು ಬಾಣಗಳ ಸಮೂಹದಿಂದ ತಡೆದನು.

ತ ಏತಂ ಭೃಶಸಂಕ್ರುದ್ಧಾಃ ಶರವ್ರಾತೈರವಾಕಿರನ್ ।
ಸ ಏತಾಂಶ್ಛಾದಯಾಮಾಸ ಶರಜಾಲೈಃ ಪುನಃಪುನಃ ॥ ೫೦ ॥

ಅವರು ಬಹಳ ಕೋಪಗೊಂಡು ಕರ್ಣನ ಮೇಲೆ ಬಾಣಗಳ ಸಮೂಹವನ್ನು ಸುರಿಸಿದರು. ಕರ್ಣನಾದರೂ ಅವರನ್ನು ಪುನಃ ಪುನಃ ತನ್ನ ಬಾಣಗಳ ಸಮೂಹದಿಂದ ಮುಚ್ಚಿಹಾಕಿದನು.

ನ ವೈ ಕರ್ಣೋ ನ ತೇ ಪಂಚ ದದೃಶುಃ ಶರಸಂವೃತಾಃ ।
ಸಾಶ್ವಸೂತಧ್ವಜರಥಾಃ ಪರಸ್ಪರಶರಾಚಿತಾಃ ॥ ೫೧ ॥

ಕರ್ಣನಾಗಲೀ, ಪಂಚ ಕೇಕಯರಾಗಲೀ, ಶರಸಂವೃತರಾದ್ದರಿಂದ ಯಾರೂ ಕಾಣಲಿಲ್ಲ. ಇಬ್ಬರ ಅಶ್ವ-ಸೂತ-ಧ್ವಜ-ರಥಗಳು ಪರಸ್ಪರ ಬಾಣಗಳಿಂದ ತುಂಬಿ ಹೋದವು.

ಪುತ್ರಾಸ್ತೇ ದುರ್ಜಯಶ್ಚೈವ ಜಯಶ್ಚ ವಿಜಯಶ್ಚ ಹ ।
ನೀಲಕಾಶ್ಯಜಯಾನ್ ಶೂರಾನ್ ತ್ರಯಸ್ತ್ರೀನ್ ಸಮವಾರಯನ್ ॥೫೨॥

ನಿನ್ನ ಪುತ್ರರಾದ ದುರ್ಜಯ, ಜಯ ಮತ್ತು ವಿಜಯರು ಶೂರರಾದ ನೀಲ, ಕಾಶ್ಯ ಮತ್ತು ಜಯ ಈ ಮೂವರನ್ನು ಕ್ರಮವಾಗಿ ತಡೆದರು.

ತದ್ ಯುದ್ಧಮಭವದ್ ಘೋರಂ ವೀಕ್ಷಿತೃಪ್ರೀತಿವರ್ಧನಮ್ ।
ಸಿಂಹವ್ಯಾಘ್ರತರಕ್ಷೂಣಾಂ ಯಥೇಭಮಹಿಷರ್ಷಭೈಃ ॥ ೫೩ ॥

ಸಿಂಹ-ವ್ಯಾಘ್ರ-ತರಕ್ಷು (ಚಿರತೆ)ಗಳಿಗೆ ಗಜ-ಮಹಿಷ (ಕೋಣ) ಮತ್ತು ವೃಷಭಗಳ ಜೊತೆಯಲ್ಲಿ ನಡೆದಂತೆ, ನೋಡುವವರಿಗೆ ಸಂತೋಷದಾಯಕವಾದ ಘೋರವಾದ ಯುದ್ಧವು ನಡೆಯಿತು.

ಕ್ಷೇಮಧೂರ್ತಿಬೃಹಂತೌ ತು ಭ್ರಾತರೌ ಸಾತ್ವತಂ ಯುಧಿ ।
ದ್ರೋಣಾಯಾಭಿಮುಖಂ ಯಾಂತಂ ಶರೈಸ್ತೀಕ್ಷ್ಣೈರ್ವ್ಯತತಕ್ಷತುಃ ॥ ೫೪ ॥

ಸಹೋದರರಾದ ಕ್ಷೇಮಧೂರ್ತಿ ಮತ್ತು ಬೃಹಂತರು ದ್ರೋಣರಿಗೆ ಅಭಿಮುಖವಾಗಿ ಹೋಗುವ ಸಾತ್ಯಕಿಯನ್ನು ರಣರಂಗದಲ್ಲಿ ತೀಕ್ಷ್ಣವಾದ ಬಾಣಗಳಿಂದ ಗಾಯಗೊಳಿಸಿದರು.

ತಯೋಃ ಸಮೇತಯೋರ್ಯುದ್ಧಮತ್ಯದ್ಭುತಮಿವಾಭವತ್ ।
ಸಿಂಹಸ್ಯ ದ್ವಿಪಮುಖ್ಯಾಭ್ಯಾಂ ಪ್ರಭಿನ್ನಾಭ್ಯಾಂ ಯಥಾ ವನೇ ॥ ೫೫ ॥

ಕಾಡಿನಲ್ಲಿ ಸಿಂಹಕ್ಕೂ ಮತ್ತು ಎರಡು ಶ್ರೇಷ್ಠ ಮದಗಜಗಳಿಗೂ ನಡೆದಂತೆ ಅವರಿಬ್ಬರಿಗೆ ಅದ್ಭುತವಾದ ಯುದ್ಧವು ನಡೆಯಿತು.

ರಾಜಾನಂ ತು ತಥಾಽಂಬಷ್ಠಮೇಕಂ ಯುದ್ಧಾಭಿನಂದಿನಮ್ ।
ಚೇದಿರಾಜಃ ಸ್ವಯಾ ಶಕ್ತ್ಯಾ ಕ್ರುದ್ಧೋ ದ್ರೋಣಾದವಾರಯತ್ ॥ ೫೬ ॥

ಯುದ್ಧವನ್ನು ಆಶಿಸುವ ಅಂಬಷ್ಠರಾಜನನ್ನು ಕೋಪಗೊಂಡ ಚೇದಿರಾಜನು ತನ್ನ ಶಕ್ತಿಯಿಂದ ದ್ರೋಣರ ಕಡೆಗೆ ಹೋಗದಂತೆ ತಡೆದನು.

ತಮಂಬಷ್ಠೋಽಸ್ಥಿಭೇದಿನ್ಯಾ ನಿರವಿಧ್ಯಚ್ಛಲಾಕಯಾ ।
ಸ ತ್ಯಕ್ತ್ವಾ ಸಶರಂ ಚಾಪಂ ರಥಾದ್ ಭೂಮೌ ಪಪಾತ ಹ ॥ ೫೭ ॥

ಅಂಬಷ್ಠನು ಅವನನ್ನು ಮೂಳೆಯನ್ನು ಮುರಿಯುವ ಸಲಾಕೆಯಿಂದ ಹೊಡೆದನು. ಚೇದಿರಾಜನು ಧನುರ್ಬಾಣಗಳನ್ನು ಬಿಟ್ಟು ರಥದಿಂದ ಭೂಮಿಯ ಮೇಲೆ ಬಿದ್ದನು.

ವಾರ್ಧಕ್ಷೇಮಿಂ ತು ವಾಷ್ಣೇಯಂ ಕೃಪಃ ಶಾರದ್ವತಃ ಶರೈಃ ।
ಅಕ್ಷುದ್ರಃ ಕ್ಷುದ್ರಕೈರ್ಬಾಣೈಃ ಕ್ರುದ್ಧರೂಪಮವಾರಯತ್ ॥ ೫೮ ॥

ಅಕ್ಷುದ್ರರಾದ ಶಾರದ್ವತರಾದ ಕೃಪರು ವೃದ್ಧಕ್ಷೇಮನ ಪುತ್ರನಾದ ವಾರ್ಷ್ಣೇಯನಾದ ಕೋಪಗೊಂಡ ಸಾತ್ಯಕಿಯನ್ನು ಕ್ಷುದ್ರಕಗಳೆಂಬ ಸಣ್ಣಬಾಣಗಳಿಂದ ದ್ರೋಣರಿಂದ ತಡೆದರು.

ಯುದ್ಧ್ಯಂತೌ ಕೃಪವಾರ್ಷ್ಣೇಯೌ ಯೇಽಪಶ್ಯಂಶ್ಚಿತ್ರಯೋಧಿನೌ ।
ತೇ ಯುದ್ಧಸಕ್ತಮನಸೋ ನಾನ್ಯಾ ಬುಬುಧಿರೇ ಕ್ರಿಯಾಃ ॥ ೫೯ ॥

ವಿಚಿತ್ರವಾಗಿ ಯುದ್ಧವನ್ನು ಮಾಡುವ ಕೃಪ-ವಾರ್ಷ್ಣೇಯರನ್ನು ಯಾರು ನೋಡಿದರೋ ಅವರು ಆ ಯುದ್ಧದಲ್ಲಿಯೇ ನೆಟ್ಟ ಮನಸ್ಸುಳ್ಳವರಾಗಿ ಬೇರೆ ಯಾವ ಕ್ರಿಯೆಯನ್ನೂ ನೋಡಲಿಲ್ಲ.

ಸೌಮದತ್ತಿಸ್ತು ರಾಜಾನಂ ಮಣಿಮಂತಮತಂದ್ರಿತಮ್ ।
ಪರ್ಯವಾರಯದಾಯಾಂತಂ ಯಶೋ ದ್ರೋಣಸ್ಯ ವರ್ಧಯನ್ ॥

ಸೋಮದತ್ತನ ಪುತ್ರನಾದ ಯೂಪಕೇತುವು (ಭೂರಿಶ್ರವನು) ದ್ರೋಣರ ಕೀರ್ತಿಯನ್ನು ಹೆಚ್ಚಿಸುತ್ತಾ ಆಲಸ್ಯವಿಲ್ಲದೆ ದ್ರೋಣರ ಕಡೆಗೆ ಹೋಗುತ್ತಿದ್ದ ಮಣಿಮಂತ ರಾಜನನ್ನು ತಡೆದನು.

ಸ ಸೌಮದತ್ತೇಸ್ತ್ವರಿತಂ ಛಿತ್ತ್ವಾ ಕೇತನಕಾರ್ಮುಕೇ ।
ಪುನಃ ಪತಾಕಾಂ ಸೂತಂ ಚ ಛತ್ರಂ ಚಾಪಾತಯದ್ ರಥಾತ್ ॥ ೬೧ ॥

ಅವನು ಸೋಮದತ್ತ ಪುತ್ರನ ಧ್ವಜ-ಧನುಸ್ಸುಗಳನ್ನು ಕತ್ತರಿಸಿ ಪುನಃ ಪತಾಕೆಯನ್ನೂ, ಸೂತನನ್ನೂ ಮತ್ತು ಛತ್ರವನ್ನೂ ರಥದಿಂದ ಕೆಡವಿದನು.

ಅವಪ್ಲುತ್ಯ ರಥಾತ್ ತೂರ್ಣಂ ಯೂಪಕೇತುರರಿಂದಮಃ ।
ಸಾಶ್ವಸೂತಧ್ವಜಂ ಚೈವ ನಿಚಕರ್ತ ವರಾಸಿನಾ ॥ ೬೨ ॥

ಅರಿಂದಮನಾದ ಯೂಪಕೇತುವು ಶೀಘ್ರವಾಗಿ ರಥದಿಂದ ಕೆಳಗೆ ಹಾರಿ, ಅಶ್ವ-ಸೂತ-ಧ್ವಜಗಳ ಜೊತೆಯಲ್ಲಿ ಮಣಿಮಂತನನ್ನು ತನ್ನ ಶ್ರೇಷ್ಠವಾದ ಖಡ್ಗದಿಂದ ಕತ್ತರಿಸಿದನು.

ಅಥ ಸ್ವರಥಮಾಸ್ಥಾಯ ಧನುರಾದಾಯ ಚಾಪರಮ್ ।
ಸ್ವಯಂ ಯಚ್ಛನ್ ಹಯಾನ್ ರಾಜನ್ ವ್ಯಧಮತ್ ಪಾಂಡುವಾಹಿನೀಮ್ ॥

ಎಲೈ ರಾಜನೇ, ಪುನಃ ತನ್ನ ರಥಕ್ಕೆ ಬಂದು ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ತನ್ನ ಅಶ್ವಗಳನ್ನು ತಾನೇ ನಿಯಂತ್ರಿಸುತ್ತಾ ಪಾಂಡವರ ಸೇನೆಯನ್ನು ವಿನಾಶಗೊಳಿಸಿದನು.

ತತೋ ವೃಕೋದರಃ ಪಾರ್ಥೋ ಬಾಹುವೀರ್ಯೇಣ ಚಾನ್ವಿತಃ ।
ಅಭಿನತ್ತಂ ಶರಾನೀಕಮಚಿರೇಣೈವ ಮಾರಿಷ ॥ ೬೪ ॥

ಎಲೈ ಪೂಜ್ಯನೇ, ಆಗ ಬಾಹುಬಲದಿಂದ ಕೂಡಿದ, ಕುಂತೀಪುತ್ರನಾದ ವೃಕೋದರನು ಆ ಶರಸಮೂಹವನ್ನು ಶೀಘ್ರವಾಗಿ ವಿನಾಶಗೊಳಿಸಿದನು.

ತೇ ಗಜಾ ಗಿರಿಸಂಘಾಭಾಃ ಕ್ಷರಂತಃ ಸರ್ವತೋ ಮದಮ್ ।
ಭೀಮಸೇನಸ್ಯ ನಾರಾಚೈರ್ವಿಮುಖಾ ವಿದಲೀಕೃತಾಃ ॥ ೬೫ ॥

ಪರ್ವತವನ್ನು ಹೋಲುತ್ತಿದ್ದ, ಎಲ್ಲ ಕಡೆಗಳಲ್ಲಿಯೂ ಮದಧಾರೆಯನ್ನು ಸುರಿಸುತ್ತಿದ್ದ ಗಜಗಳು ಭೀಮಸೇನನ ನಾರಾಚಗಳಿಂದ ಕತ್ತರಿಸಲ್ಪಟ್ಟು ಯುದ್ಧ ವಿಮುಖವಾದವು.

ವಿಚಲೇದಭ್ರಜಾಲಾನಿ ಯಥಾ ವಾಯುಃ ಸಮುದ್ಧತಃ ।
ವ್ಯಧಮತ್ತಾನ್ಯನೀಕಾನಿ ತಥೈವ ಪವನಾತ್ಮಜಃ ॥ ೬೬ ॥

ತೀವ್ರವಾಗಿ ಎದ್ದ ವಾಯುವು ಮೋಡ ಸಮೂಹಗಳನ್ನು ಚದುರಿಸಿದಂತೆ ಪವನಾತ್ಮಜನಾದ ಭೀಮಸೇನನು ಆ ಸೈನ್ಯಗಳನ್ನು ನಾಶಗೊಳಿಸಿದನು.

ಸ ತೇಷು ವಿಸೃಜನ್ ಬಾಣಾನ್ ಭೀಮೋ ನಾಗೇಷ್ವಶೋಭತ ।
ಭುವನೇಷ್ವಿವ ಸರ್ವೇಷು ಗಭಸ್ತಿಚಯಮಂಶುಮಾನ್ ॥ ೬೭ ॥

ಆ ಗಜಗಳ ಮೇಲೆ ಬಾಣಗಳನ್ನು ಪ್ರಯೋಗಿಸುತ್ತಿದ್ದ ಭೀಮನು ಎಲ್ಲ ಲೋಕಗಳಲ್ಲಿಯೂ ತನ್ನ ಕಿರಣಸಮೂಹವನ್ನು ಚೆಲ್ಲುವ ಸೂರ್ಯನಂತೆ ಶೋಭಿಸಿದನು.

ಮುಸಲೈರ್ಮುದ್ಗರೈಶ್ಚಕ್ರೈರ್ಭಿಂಡಿಪಾಲೈಃ ಪರಶ್ವಧೈಃ ।
ಪಾಂಸುವಾತಾಗ್ನಿಸಲಿಲೈರ್ಭಸ್ಮಲೋಷ್ಟತೃಣದ್ರುಮೈಃ ॥ ೬೮ ॥

ಆರುಜನ್ ಪ್ರರುಜನ್ ಭಂಜನ್ ನಿಘ್ನನ್ ವಿದ್ರಾವಯನ್ ಕ್ಷಿಪನ್ ।
ಸೇನಾಂ ವಿಭೀಷಣೋಽಭ್ಯೇತಿ ದ್ರೋಣಪ್ರೇಪ್ಸುರ್ಘಟೋತ್ಕಚಃ ॥ ೬೯ ॥

ಕೌರವ ಸೈನ್ಯವನ್ನು ಮುಸಲಗಳಿಂದಲೂ, ಮುದ್ಗರಗಳಿಂದಲೂ, ಚಕ್ರಗಳಿಂದಲೂ, ಭಿಂಡಿಪಾಲಗಳಿಂದಲೂ, ಪರಶ್ವಧಗಳಿಂದಲೂ, ಕಲ್ಲುಗಳಿಂದಲೂ, ಅಗ್ನಿ-ಜಲಗಳಿಂದಲೂ, ಧೂಳಿನ ಮಳೆಯಿಂದಲೂ, ಮಣ್ಣು-ಹೆಂಟೆಗಳಿಂದಲೂ, ತೃಣ-ದ್ರುಮಗಳಿಂದಲೂ ಎಲ್ಲ ಕಡೆಗಳಲ್ಲಿಯೂ ಚೆನ್ನಾಗಿ ಹಿಂಸಿಸುತ್ತಾ, ಭಗ್ನಗೊಳಿಸುತ್ತಾ, ಸಂಹರಿಸುತ್ತಾ, ಓಡಿಸುತ್ತಾ, ಎಸೆಯುತ್ತಾ ಭಯಂಕರನಾದ ಘಟೋತ್ಕಚನು ದ್ರೋಣರನ್ನು ಹಿಡಿಯುವ ಸಲುವಾಗಿ ಮುಂದೆ ಬಂದನು.

ತಂ ತು ನಾನಾಪ್ರಹರಣೈರ್ನಾನಾಯುದ್ಧವಿಶೇಷಣೈಃ ।
ರಾಕ್ಷಸೋ ರಾಕ್ಷಸಂ ಕ್ರುದ್ಧಂ ಕ್ರುದ್ಧೋऽಭ್ಯಘ್ನದಲಂಬುಸಃ ॥ ೭೦ ॥

ತಯೋಸ್ತದಭವದ್ ಯುದ್ಧಂ ರಕ್ಷೋಗ್ರಾಮಣಿಮುಖ್ಯಯೋಃ ।
ತಾದೃಗ್ ಯಾದೃಕ್ ಪುರಾವೃತ್ತಂ ಶಂಬರಾಮರರಾಜಯೋಃ ॥ ೭೧ ॥

ರಾಕ್ಷಸನೂ, ಕ್ರುದ್ಧನೂ ಆದ ಅವನನ್ನು, ಸ್ವತಃ ರಾಕ್ಷಸನಾದ, ಕ್ರುದ್ಧನಾದ ಯುದ್ಧದಲ್ಲಿ ಅತಿಶಯವನ್ನು ಕೊಡುವ ಅನೇಕ ಆಯುಧಗಳಿಂದ ಕೂಡಿದ ಅಲಂಬುಸನು ಚೆನ್ನಾಗಿ ಹೊಡೆದನು. ಆಗ ಹಿಂದೆ ಶಂಬರ ಮತ್ತು ದೇವೇಂದ್ರರಿಗೆ ನಡೆದಂತೆ ರಾಕ್ಷಸಮುಖ್ಯನಿಗೂ, ಗ್ರಾಮಣಿಮುಖ್ಯನಿಗೂ ತೀವ್ರವಾದ ಯುದ್ಧವು ನಡೆಯಿತು.

ಭಾರದ್ವಾಜಸ್ತು ಸೇನಾನ್ಯಂ ಧೃಷ್ಟದ್ಯುಮ್ನಂ ಮಹಾರಥಮ್ ।
ತಮೇವ ರಾಜನ್ನಾಯಾಂತಮತಿಕ್ರಮ್ಯ ಪರಾನ್ ರಿಪೂನ್ ॥ ೭೨ ॥

ಮಹತಾ ಶರಜಾಲೇನ ಕಿರಂತಂ ಶತ್ರುವಾಹಿನೀಮ್ ।
ಅವಾರಯನ್ ಮಹಾರಾಜ ಸಾಮಾತ್ಯಂ ಸಪದಾನುಗಮ್ ॥ ೭೩ ॥

ಎಲೈ ಮಹಾರಾಜನೇ, ಭರದ್ವಾಜರಾದರೋ ಸೇನಾನಿಯೂ, ಮಹಾರಥನೂ ಉಳಿದ ಶತ್ರುಗಳನ್ನು ದಾಟಿ, ಅಮಾತ್ಯರ ಮತ್ತು ಪದಾತಿಗಳ ಜೊತೆಯಲ್ಲಿ ತಮ್ಮ ಕಡೆಗೆ ಬರುತ್ತಿದ್ದವನೂ, ಶತ್ರುಗಳ ಮೇಲೆ ಬಾಣದ ಮಳೆಯನ್ನು ಸುರಿಸುತ್ತಿದ್ದವನೂ, ಆದ ಧೃಷ್ಟದ್ಯುಮ್ನನನ್ನು ಬಾಣಗಳ ದೊಡ್ಡ ಸಮೂಹದಿಂದ ತಡೆದರು.

ಅಥಾನ್ಯೇ ಪಾರ್ಥಿವಾ ರಾಜನ್ ಬಹುತ್ವಾನ್ನಾತಿಕೀರ್ತಿತಾಃ ।
ಸಮಸಜ್ಜಂತ ಸರ್ವೇ ತೇ ಯಥಾಯೋಗಂ ಯಥಾಬಲಮ್ ॥ ೭೪ ॥

ಎಲೈ ರಾಜನೇ, ಉಳಿದ ರಾಜರು ಬಹುಸಂಖ್ಯಾತರಾದ್ದರಿಂದ ಅವರನ್ನು ನಾನು ಹೇಳಲಿಲ್ಲ. ಅವರು ತಮ್ಮ ವಿದ್ಯೆಗೆ ಮತ್ತು ತಮ್ಮ ಬಲಕ್ಕೆ ಅನುಗುಣವಾಗಿ ಶತ್ರುಗಳ ಜೊತೆಯಲ್ಲಿ ಸಂಸಕ್ತರಾದರು.

ಹಯೈರ್ಹಯಾಸ್ತಥಾ ಜಗ್ಮುಃ ಕುಂಜರೈರೇವ ಕುಂಜರಾಃ ।
ಪದಾತಯಃ ಪದಾತೀಭೀ ರಥೈರೇವ ಮಹಾರಥಾಃ ॥ ೭೫ ॥

ಅಶ್ವಗಳ ಜೊತೆಯಲ್ಲಿ ಅಶ್ವಗಳೂ, ಗಜಗಳ ಜೊತೆಯಲ್ಲಿ ಗಜಗಳೂ, ಪದಾತಿಗಳ ಜೊತೆಯಲ್ಲಿ ಪದಾತಿಗಳೂ, ರಥಗಳ ಜೊತೆಯಲ್ಲಿ ಮಹಾರಥರೂ ಯುದ್ಧದಲ್ಲಿ ತೊಡಗಿದವು.

ಅಕುರ್ವನ್ನಾರ್ಯಕರ್ಮಾಣಿ ತತ್ರೈವ ಪುರುಷರ್ಷಭಾಃ ।
ಕುಲವೀರ್ಯಾನುರೂಪಾಣಿ ಸಂಸೃಷ್ಟಾಶ್ಚ ಪರಸ್ಪರಮ್ ॥ ೭೬ ॥

ಹೀಗೆ ಪರಸ್ಪರ ಸಂಸಕ್ತರಾದ ಆ ಪುರುಷಶ್ರೇಷ್ಠರು ತಮ್ಮ ಕುಲ, ವೀರ್ಯಗಳಿಗೆ ಅನುಗುಣವಾದ ಉದಾತ್ತವಾದ ಕರ್ಮಗಳನ್ನು ಮಾಡಿದರು.

ಏವಂ ದ್ವಂದ್ವಶತಾನ್ಯಾಸನ್ ರಥವಾರಣವಾಜಿನಾಮ್ ।
ಪದಾತೀನಾಂ ಚ ಭದ್ರಂ ತೇ ತವ ತೇಷಾಂ ಚ ಸಂಕುಲೇ ॥ ೭೭ ॥

ನಿನಗೆ ಮಂಗಳವಾಗಲಿ. ಹೀಗೆ ನಿನ್ನವರಿಗೆ ಮತ್ತು ಅವರಿಗೆ ಸಂಕುಲಯುದ್ಧವು ನಡೆದಾಗ ರಥಗಳ, ಗಜಗಳ, ಅಶ್ವಗಳ, ಪದಾತಿಗಳ ನೂರಾರು ದ್ವಂದ್ವ ಯುದ್ಧಗಳು ನಡೆದವು.

ನೈತಾದೃಶೋ ದೃಷ್ಟಪೂರ್ವಃ ಸಂಗ್ರಾಮೋ ನೈವ ಚ ಶ್ರುತಃ ।
ದ್ರೋಣಸ್ಯಾಭಾವಭಾವೇ ತು ಪ್ರಸಕ್ತಾನಾಂ ಪರಸ್ಪರಮ್ ॥ ೭೮ ॥

ದ್ರೋಣರ ಅಭಾವದಲ್ಲಿ ಪ್ರಸಕ್ತರಾದ ಪಾಂಡವರಿಗೂ, ದ್ರೋಣರನ್ನು ಉಳಿಸಿಕೊಳ್ಳಲು ಪ್ರಸಕ್ತರಾದ ಕೌರವರಿಗೂ ಪರಸ್ಪರವಾಗಿ ಎಂತಹ ಯುದ್ಧವು ನಡೆಯಿತೋ ಅಂತಹ ಯುದ್ಧವನ್ನು ಹಿಂದೆ ಯಾರೂ ನೋಡಿರಲಿಲ್ಲ ಅಥವಾ ಕೇಳಿರಲಿಲ್ಲ.

ಇದಂ ಘೋರಮಿದಂ ಚಿತ್ರಮಿದಂ ರೌದ್ರಮಿತಿ ಪ್ರಭೋ ।
ತತ್ರ ಯುದ್ಧಾನ್ನ್ಯವರ್ತಂತ ಪೃತನಾನಾಂ ಬಹೂನಿ ಚ ॥ ೭೯ ॥

ಎಲೈ ಪ್ರಭುವೇ, ಇದು ಘೋರವಾಗಿದೆ, ಇದು ವಿಚಿತ್ರವಾಗಿದೆ, ಇದು ಭಯಂಕರವಾಗಿದೆ ಎಂದು ಹೇಳುತ್ತಾ ಅನೇಕ ಸೈನ್ಯಗಳು ಆ ಯುದ್ಧದಿಂದ ಹಿಂದೆ ಸರಿದವು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ದ್ರೋಣಪರ್ವಣಿ ಚತುರ್ವಿಂಶೋಽಧ್ಯಾಯಃ ॥

॥ ಸಂಶಪ್ತಕಪರ್ವಣಿ ನವಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಇಪ್ಪತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ತೈದನೆಯ ಅಧ್ಯಾಯ

ಭಗದತ್ತನ ಪರಾಕ್ರಮ.

ಧೃತರಾಷ್ಟ್ರಃ

ತೇಷ್ವೇವಂ ಸನ್ನಿವೃತ್ತೇಷು ಪ್ರತ್ಯುದ್ಯಾತೇಷು ಭಾಗಶಃ ।
ಕಥಂ ಯುಯುಧಿರೇ ಪಾರ್ಥಾ ಮಾಮಕಾಶ್ಚ ತರಸ್ವಿನಃ ॥ ೧ ॥

ಧೃತರಾಷ್ಟ್ರ– ಪಾಂಡವರಲ್ಲಿ ಕೆಲವರು ಹಿಂದೆ ಹೋಗಿ, ಇನ್ನು ಕೆಲವರು ಹಿಂದಿರುಗಿದ ಮೇಲೆ ಪಾಂಡವರೂ ಮತ್ತು ವೇಗಶಾಲಿಗಳಾದ ನನ್ನವರೂ ಹೇಗೆ ಯುದ್ಧವನ್ನು ಮಾಡಿದರು?

ಕಿಮರ್ಜುನಶ್ಚಾಪ್ಯಕರೋತ್ ತತ್ರ ತಾತ ಪ್ರತಾಪವಾನ್ ।
ಸಂಶಪ್ತಕಾ ವಾ ಪಾರ್ಥಸ್ಯ ಕಿಮಕುರ್ವತ ಸಂಜಯ ॥ ೨ ॥

ಎಲೈ ಪ್ರೀತಿಪಾತ್ರನೇ, ಪ್ರತಾಪಶಾಲಿಯಾದ ಅರ್ಜುನನಾದರೂ ಅಲ್ಲಿ ಏನು ಮಾಡಿದನು? ಅಥವಾ ಸಂಶಪ್ತಕರು ಅರ್ಜುನನಿಗೆ ಏನು ಮಾಡಿದರು?

ಸಂಜಯಃ

ತಥಾ ತೇಷು ನಿವೃತ್ತೇಷು ಪ್ರತ್ಯುದ್ಯಾತೇಷು ಭಾಗಶಃ ।
ಸ್ವಯಮಭ್ಯದ್ರವದ್ ಭೀಮಂ ನಾಗಾನೀಕೇನ ತೇ ಸುತಃ ॥ ೩ ॥

ಸಂಜಯ– ಹೊರಗೆ ಹೋದವರು ಪುನಃ ಹಿಂದಿರುಗಿ ಬಂದ ಮೇಲೆ ನಿನ್ನ ಪುತ್ರನಾದ ಸುಯೋಧನನು ಗಜಸೇನೆಯಿಂದ ಸಹಿತನಾಗಿ ಸ್ವತಃ ಭೀಮನ ಮೇಲೆ ಧಾವಿಸಿದನು.

ಸ ನಾಗ ಇವ ನಾಗೇನ ಗೋವೃಷೇಣೇವ ಗೋವೃಷಃ ।
ಸಮಾಹೂತಃ ಸ್ವಯಂ ರಾಜನ್ ನಾಗಾನೀಕಮುಪಾದ್ರವತ್ ॥ ೪ ॥

ಎಲೈ ರಾಜನೇ, ಆಹ್ವಾನ ಮಾಡಲ್ಪಟ್ಟ ಭೀಮನು ಗಜದ ಜೊತೆಯಲ್ಲಿ ಗಜದಂತೆ, ಗೋವೃಷದ ಜೊತೆಯಲ್ಲಿ ಗೋವೃಷದಂತೆ ಸ್ವತಃ ಗಜಸೇನೆಯ ಕಡೆಗೆ ಧಾವಿಸಿ ಬಂದನು.

ಸ ಯುದ್ಧಕುಶಲಃ ಪಾರ್ಥೋ ಬಾಹುವೀರ್ಯೇಣ ಚಾತ್ಮನಃ ।
ಅಭಿನತ್ ಕುಂಜರಾನೀಕಮಚಿರೇಣೈವ ಪಾಂಡವಃ ॥ ೫ ॥

ಪಾಂಡುಪುತ್ರನೂ, ಕುಂತೀಪುತ್ರನೂ ಆದ ಯುದ್ಧಕುಶಲನಾದ ಭೀಮಸೇನನು ತನ್ನ ಬಾಹುಬಲದಿಂದ ಗಜಸೇನೆಯನ್ನು ಅಲ್ಪಕಾಲದಲ್ಲಿಯೇ ಭಗ್ನಗೊಳಿಸಿದನು.

ತೇ ಗಜಾ ಗಿರಿಸಂಕಾಶಾಃ ಕ್ಷರಂತಃ ಸರ್ವತೋ ಮದಮ್ ।
ಭೀಮಸೇನಸ್ಯ ನಾರಾಚೈರ್ವಿಮದಾ ವಿಮುಖೀಕೃತಾಃ ॥ ೬ ॥

ಪರ್ವತವನ್ನು ಹೋಲುತ್ತಿದ್ದ ಎಲ್ಲ ಕಡೆಯಲ್ಲಿಯೂ ಮದೋದಕವನ್ನು ಸುರಿಸುತ್ತಿದ್ದ ಆ ಗಜಗಳು ಭೀಮಸೇನನ ನಾರಾಚಗಳಿಂದ ಮದವನ್ನು ಕಳೆದುಕೊಂಡು ಯುದ್ಧ ವಿಮುಖವಾದವು.

ವಿಧಮೇದಭ್ರಜಾಲಾನಿ ಯಥಾ ವಾಯುಃ ಸಮುದ್ಧತಃ ।
ವ್ಯಧಮತ್ ತಾನ್ಯನೀಕಾನಿ ನಾಗಾನಾಂ ಮಾರುತಿಃ ಶರೈಃ ॥ ೭ ॥

ಮೇಘಮಾಲೆಗಳನ್ನು ಸಮುದ್ಧತವಾದ ವಾಯುವು ಹೇಗೆ ನಾಶಪಡಿಸುತ್ತದೆಯೋ ಅದರಂತೆ ಮರುತ್ಪುತ್ರನಾದ ಭೀಮಸೇನನು ತನ್ನ ಬಾಣಗಳಿಂದ ಆ ಗಜಸೇನೆಗಳನ್ನು ನಾಶಪಡಿಸಿದನು.

ಸ ತೇಷು ವಿಸೃಜನ್ ಬಾಣಾನ್ ಭೀಮೋ ನಾಗೇಷ್ವಶೋಭತ ।
ಭುವನೇಷ್ವಿವ ಸರ್ವೇಷು ಗಭಸ್ತೀನುದಿತೋ ರವಿಃ ॥ ೮ ॥

ಆ ಗಜಗಳ ಮೇಲೆ ಬಾಣಗಳನ್ನು ಪ್ರಯೋಗಿಸುವ ಭೀಮನು ಎಲ್ಲ ಭೂಮಿಯ ಮೇಲೆ ತನ್ನ ಕಿರಣಗಳನ್ನು ಸೂಸುವ ರವಿಯಂತೆ ಕಂಗೊಳಿಸಿದನು.

ತೇ ಭೀಮಬಾಣೈಃ ಶತಶಃ ಸಂಸ್ಯೂತಾ ವಿಬಭುರ್ಗಜಾಃ ।
ಗಭಸ್ತಿಭಿರಿವಾರ್ಕಸ್ಯ ವ್ಯೋಮ್ನಿ ನಾನಾಬಲಾಹಕಾಃ ॥ ೯ ॥

ಭೀಮನ ನೂರಾರು ಬಾಣಗಳು ತಮ್ಮ ಶರೀರದಲ್ಲಿ ನಾಟಿದ ಆ ಗಜಗಳು ಆಕಾಶದಲ್ಲಿ ಸೂರ್ಯಕಿರಣಗಳಿಂದ ಕೂಡಿದ ಅನೇಕ ಮೇಘಗಳಂತೆ ಕಂಡುಬಂದವು.

ತದಾ ಗಜಾನಾಂ ಕದನಂ ಕುರ್ವಾಣಮನಿಲಾತ್ಮಜಮ್ ।
ಕ್ರುದ್ಧೋ ದುರ್ಯೋಧನೋಽಭ್ಯೇತ್ಯ ಪ್ರತ್ಯವಿಧ್ಯಚ್ಛಿತೈಃ ಶರೈಃ ॥ ೧೦ ॥

ಆಗ ಗಜಗಳ ಜೊತೆಯಲ್ಲಿ ಕದನವನ್ನು ಮಾಡುತ್ತಿದ್ದ ಅನಿಲಪುತ್ರನಾದ ಭೀಮಸೇನನನ್ನು ಕ್ರುದ್ಧನಾದ ದುರ್ಯೋಧನನು ಸಮೀಪಿಸಿ ಹರಿತವಾದ ಬಾಣಗಳಿಂದ ಅವನಿಗೆ ಹೊಡೆದನು.

ತತಃ ಕ್ಷಣೇನ ಕ್ಷಿತಿಪಂ ಕ್ಷತಜಪ್ರತಿಮೇಕ್ಷಣಮ್ ।
ಕ್ಷಯಂ ನಿನೀಷುರ್ನಿಶಿತೈರ್ಭೀಮೋ ವಿವ್ಯಾಧ ಪತ್ರಿಭಿಃ ॥ ೧೧ ॥

ಆಗ ಕೋಪದಿಂದ ರಕ್ತದಂತಿದ್ದ ಕಣ್ಣುಳ್ಳ ರಾಜನಾದ ದುರ್ಯೋಧನನನ್ನು ಒಂದು ಕ್ಷಣದಲ್ಲಿ ವಿನಾಶ ಮಾಡಲು ಬಯಸಿ ಭೀಮಸೇನನು ಪತ್ರಗಳನ್ನು ಹೊಂದಿದ್ದ ನಿಶಿತವಾದ ಬಾಣಗಳಿಂದ ಅವನನ್ನು ಹೊಡೆದನು.

ಸ ಶರಾಚಿತಸರ್ವಾಂಗಃ ಕ್ರುದ್ಧೋ ವಿವ್ಯಾಧ ಪಾಂಡವಮ್ ।
ನಾರಾಚೈರರ್ಕರಶ್ಮ್ಯಭೈರ್ಭೀಮಸೇನಂ ಸ್ಮಯನ್ನಿವ ॥ ೧೨ ॥

ದುರ್ಯೋಧನನು ತನ್ನ ಮೈಯಲ್ಲೆಲ್ಲಾ ಭೀಮನ ಬಾಣಗಳು ನೆಟ್ಟರೂ ಕ್ರುದ್ಧನಾಗಿ ನಗುತ್ತಲೇ ಪಾಂಡುಪುತ್ರನಾದ ಭೀಮಸೇನನನ್ನು ಸೂರ್ಯನ ಕಿರಣಗಳನ್ನು ಹೋಲುವ ನಾರಾಚಗಳಿಂದ ಹೊಡೆದನು.

ತಸ್ಯ ನಾಗಂ ಮಣಿಮಯಂ ರತ್ನಚಿತ್ರಧ್ವಜೇ ಸ್ಥಿತಮ್ ।
ಭಲ್ಲಾಭ್ಯಾಂ ಕಾರ್ಮುಕಂ ಚೈವ ಕ್ಷಿಪ್ರಂ ಚಚ್ಛೇದ ಪಾಂಡವಃ ॥ ೧೩ ॥

ಪಾಂಡುಪುತ್ರನಾದ ಭೀಮಸೇನನು ರತ್ನಗಳಿಂದ ವಿಚಿತ್ರವಾದ ಅವನ ಧ್ವಜದಲ್ಲಿದ್ದ ಮಣಿಮಯವಾದ ಸರ್ಪವನ್ನು ಮತ್ತು ಧನುಸ್ಸನ್ನು ಎರಡು ಭಲ್ಲಗಳಿಂದ ಶೀಘ್ರವಾಗಿ ಕತ್ತರಿಸಿದನು.

ದುರ್ಯೋಧನಂ ಪೀಡ್ಯಮಾನಂ ದೃಷ್ಟ್ವಾ ಭೀಮೇನ ಮಾರಿಷ ।
ಚುಕ್ಷೋಭಯಿಷುರಭ್ಯಾಗಾದಂಗೋ ಮಾತಂಗಮಾಸ್ಥಿತಃ ॥ ೧೪ ॥

ಎಲೈ ಪೂಜ್ಯನೇ, ದುರ್ಯೋಧನನು ಭೀಮನಿಂದ ಪೀಡಿಸಲ್ಪಡುತ್ತಿರುವುದನ್ನು ನೋಡಿ ಅವನನ್ನು ಕ್ಷೋಭೆಗೊಳಿಸಲು ಬಯಸಿ ಅಂಗನು ಗಜವನ್ನೇರಿ ಭೀಮನ ಬಳಿಗೆ ಬಂದನು.

ತಮಾಪತಂತಂ ಮಾತಂಗಮಂಬುದಪ್ರತಿಮಸ್ವನಮ್ ।
ಕುಂಭಾಂತರೇ ಭೀಮಸೇನೋ ನಾರಾಚೇನಾರ್ದಯದ್ ಭೃಶಮ್ ॥

ತಸ್ಯ ಕಾಯಂ ವಿನಿರ್ಭಿದ್ಯ ನ್ಯಮಜ್ಜದ್ ಧರಣೀತಳೇ ।
ತತಃ ಪಪಾತ ದ್ವಿರದೋ ವಜ್ರಾಹತ ಇವಾಚಲಃ ॥ ೧೬ ॥

ಮೇಘಗರ್ಜನೆಯಂತೆ ಗರ್ಜನೆಯುಳ್ಳ, ಎರಗಿ ಬರುತ್ತಿದ್ದ ಆ ಗಜವನ್ನು ಭೀಮಸೇನನು ನಾರಾಚದಿಂದ ಕುಂಭಸ್ಥಳದ ಮಧ್ಯದಲ್ಲಿ ಬಲವಾಗಿ ಪೀಡಿಸಿದನು. ನಾರಾಚವು ಆನೆಯ ಶರೀರವನ್ನು ಭೇದಿಸಿ ಭೂಮಿಯಲ್ಲಿ ಇಳಿಯಿತು. ಆಗ ವಜ್ರದಿಂದ ತಾಡಿತವಾದ ಪರ್ವತದಂತೆ ಗಜವು ಬಿದ್ದಿತು.

ತಸ್ಯಾವರ್ಜಿತನಾಗಸ್ಯ ಮ್ಲೇಚ್ಛಸ್ಯಾತಿಪತಿಷ್ಯತಃ ।
ಶರಶ್ಚಿಚ್ಛೇದ ಭಲ್ಲೇನ ಕ್ಷಿಪ್ರಕಾರೀ ವೃಕೋದರಃ ॥ ೧೭ ॥

ತನ್ನ ಗಜವನ್ನು ಕಳೆದುಕೊಂಡು ತನ್ನೆಡೆಗೆ ಬರುತ್ತಿದ್ದ ಆ ಮ್ಲೇಚ್ಛನ ಶಿರಸ್ಸನ್ನು ಕ್ಷಿಪ್ರಕಾರಿಯಾದ ವೃಕೋದರನು ಭಲ್ಲದಿಂದ ಕತ್ತರಿಸಿದನು.

ತಸ್ಮಿನ್ ನಿಪತಿತೇ ವೀರೇ ಸಂಪ್ರಾದ್ರವತ ಸಾ ಚಮೂಃ ।
ಸಂಭ್ರಾಂತಾಶ್ವದ್ವಿಪರಥಾ ಪದಾತೀನವಮೃದ್ನತೀ ॥ ೧೮ ॥

ವೀರನಾದ ಅವನು ಹತನಾಗುತ್ತಿರಲು ಸಂಭ್ರಾಂತವಾದ ಅಶ್ವ-ಗಜ-ರಥಗಳಿಂದ ಕೂಡಿದ ಆ ಸೈನ್ಯವು ತಮ್ಮ ಪದಾತಿಗಳನ್ನೇ ತುಳಿಯುತ್ತಾ ಓಡಿಹೋಯಿತು.

ತೇಷ್ವನೀಕೇಷು ಸರ್ವೇಷು ವಿದ್ರವತ್ಸು ಸಮಂತತಃ ।
ಪ್ರಾಗ್ಜ್ಯೋತಿಷಸ್ತತೋ ಭೀಮಂ ಕುಂಜರೇಣ ಸಮಾದ್ರವತ್ ॥ ೧೯ ॥

ಆ ಸೈನ್ಯಗಳೆಲ್ಲವೂ ಎಲ್ಲ ಕಡೆಗಳಲ್ಲಿಯೂ ಓಡಿಹೋದ ಮೇಲೆ ಪ್ರಾಗ್ಜ್ಯೋತಿಷಾಧಿಪತಿಯಾದ ಭಗದತ್ತನು ತನ್ನ ಸುಪ್ರತೀಕ ಗಜದಿಂದ ಭೀಮಸೇನನ ಕಡೆಗೆ ಧಾವಿಸಿದನು.

ಯೇನ ನಾಗೇನ ಮಘವಾ ವಿಜಿಗ್ಯೇ ದೈತ್ಯದಾನವಾನ್ ।
ತದನ್ವಯೇನ ನಾಗೇನ ಭೀಮಸೇನಮುಪಾದ್ರವತ್ ॥ ೨೦ ॥

ಯಾವ ಐರಾವತ ಗಜದಿಂದ ಇಂದ್ರನು ದೈತ್ಯ-ದಾನವರನ್ನು ಗೆದ್ದನೋ, ಆ ವಂಶಕ್ಕೆ ಸೇರಿದ ಗಜದಿಂದ ಭೀಮಸೇನನ ಕಡೆಗೆ ಧಾವಿಸಿದನು.

ಶ್ರವಣಾಭ್ಯಾಮಥೋಭಾಭ್ಯಾಮಾಯತೇನ ಕರೇಣ ಚ ।
ವ್ಯಾವೃತ್ತನಯನಃ ಕ್ರುದ್ಧಃ ಸಮ್ಯಗ್ ಯಂತ್ರಾ ವಿಚೋದಿತಃ ॥ ೨೧ ॥

ವೃಕೋದರರಥಂ ಸಾಶ್ವಮವಿಶೇಷಮಚೂರ್ಣಯತ್ ।
ಪದ್ಭ್ಯಾಂ ಭೀಮಸ್ತಮಾಪೋಥ್ಯ ತಸ್ಯ ಗಾತ್ರೇಷು ಲೀಯತ ॥ ೨೨ ॥

ಕಣ್ಣುಗಳನ್ನು ಅರಳಿಸಿ ಕ್ರೋಧಗೊಂಡ ಆ ಗಜವು ಸಾರಥಿಯಿಂದ ಚೆನ್ನಾಗಿ ಪ್ರೇರಿಸಲ್ಪಟ್ಟು ತನ್ನ ಎರಡು ಪಾದಗಳಿಂದಲೂ, ವಿಸ್ತಾರವಾದ ಸೊಂಡಿಲಿನಿಂದಲೂ ಅಶ್ವಸಹಿತವಾದ ಭೀಮಸೇನನ ರಥವನ್ನು ಪುಡಿಪುಡಿ ಮಾಡಿತು. ಭೀಮನು ಆ ಗಜವನ್ನು ಕಾಲಿನಿಂದ ಒದ್ದು ಅದರ ಶರೀರದಲ್ಲಿ ಅಡಗಿಕೊಂಡನು.

ಜಾನಂಸ್ತಸ್ಯ ಮಹಾವೇಗಂ ನಾಪಕ್ರಾಮತ ಪಾಂಡವಃ ।
ಗಾತ್ರಾಭ್ಯಂತರಗೋ ಭೂತ್ವಾ ಕರೇಣಾತಾಡಯನ್ಮುಹುಃ ॥ ೨೩ ॥

ಆ ಗಜದ ದೊಡ್ಡ ವೇಗವನ್ನು ತಿಳಿದ ಭೀಮಸೇನನು ಅಲ್ಲಿಂದ ಹೊರಬರಲಿಲ್ಲ. ದೇಹದ ಒಳಗೆ (ನಾಲ್ಕು ಪಾದಗಳ ಮಧ್ಯದೊಳಗೆ) ನಿಂತು ತನ್ನ ಹಸ್ತದಿಂದ ಪುನಃ ಪುನಃ ಅದನ್ನು ಹೊಡೆದನು.

ಕಾಲಯಾಮಾಸ ತಂ ನಾಗಂ ವಧಾಕಾಂಕ್ಷಿಣಮವ್ಯಯಮ್ ।
ಕುಲಾಲಚಕ್ರವನ್ನಾಗಸ್ತದಾ ತೂರ್ಣಮಥಾಭ್ರಮತ್ ॥ ೨೪ ॥

ತನ್ನನ್ನು ವಧೆ ಮಾಡಲು ಬಯಸಿದ ಆ ಅವ್ಯಯವಾದ ಗಜವನ್ನು ಭೀಮಸೇನನು ಬಹಳ ಸಂಕಟಕ್ಕೆ ಗುರಿ ಮಾಡಿದನು. ಆಗ ಆ ಗಜವು ಕುಂಬಾರನ ಚಕ್ರದಂತೆ ಶೀಘ್ರವಾಗಿ ತಿರುಗಿತು.

ನಾಗಾಯುತಬಲೀ ಶ್ರೀಮಾನ್ ಕಾಲಯಾನೋ ವೃಕೋದರಮ್ ।
ಭೀಮೋಽಥ ನಿಷ್ಪತ್ಯ ತತಃ ಸುಪ್ರತೀಕಾಗ್ರತೋಽಭವತ್ ॥ ೨೫ ॥

ಹತ್ತು ಸಾವಿರ ಆನೆಗಳ ಬಲವನ್ನು ಹೊಂದಿದ, ಕಾಂತಿಯುಕ್ತವಾದ ಆ ಗಜವು ಭೀಮಸೇನನ್ನು ಘಾಸಿಗೊಳಿಸಲು ಪ್ರಯತ್ನಿಸಿತು. ಭೀಮಸೇನನು ಸುಪ್ರತೀಕವನ್ನು ಸಂಕಟಪಡಿಸುತ್ತಾ ಅದರ ದೇಹದಿಂದ ಹೊರಗೆ ಬಂದು ಅದರ ಮುಂದೆ ನಿಂತನು.

ಭೀಮಃ ಕರೇಣಾವನಮ್ಯ ಜಾನುಭ್ಯಾಮಭ್ಯಪಾತಯತ್ ।
ಗ್ರೀವಾಯಾಂ ವೈ ಗೃಹೀತ್ವೈನಂ ಸಗಜೋ ಹಂತುಮೈಚ್ಛತ ॥ ೨೬ ॥

ಭೀಮನು ಆ ಗಜವನ್ನು ತನ್ನ ಕೈಯಿಂದ ಬಗ್ಗಿಸಿ ಅದನ್ನು ಒದ್ದು ಮಂಡಿಗಳ ಮೇಲೆ ಕೆಡವಿದನು. ಆ ಗಜವು ಭೀಮಸೇನನನ್ನು ಕತ್ತಿನಲ್ಲಿ ಹಿಡಿದು ಅವನನ್ನು ಕೊಲ್ಲಲು ಬಯಸಿತು.

ಕಂಠೇ ವಿಷ್ಟಂಭಿತಸ್ತೇನ ಭ್ರಮಂ ಕೃತ್ವಾಽಥ ಮೋಚಯತ್ ।
ಪುನರ್ಗಾತ್ರಾಣಿ ನಾಗಸ್ಯ ಪ್ರವಿವೇಶ ವೃಕೋದರಃ ॥ ೨೭ ॥

ಕಂಠದಲ್ಲಿ ಹಿಡಿಯಲ್ಪಟ್ಟ ಭೀಮನು ತಿರುಗಿ ಅದರಿಂದ ಬಿಡಿಸಿಕೊಂಡು ಪುನಃ ಅದರ ಶರೀರದಲ್ಲಿ ಪ್ರವೇಶಿಸಿದನು.

ಯಥಾ ತಂ ಪ್ರತಿಗೃಹ್ಣೀಯಾತ್ ತಥಾ ತಂ ಸಮವೈಕ್ಷತ ।
ಭೀಮೋಽಥ ನಾಗಗಾತ್ರೇಭ್ಯೋ ವಿನಿಃಸೃತ್ಯಾಪಯಾಜ್ಜವಾತ್ ॥ ೨೮ ॥

ಸುಪ್ರತೀಕವು ಆ ವೇಳೆಗೆ ಬಂದ ಪ್ರತಿಗಜವನ್ನು ಹಿಡಿಯುವಂತೆ ಅದನ್ನು ನೋಡಿತು. ಅಷ್ಟರಲ್ಲಿ ಭೀಮಸೇನನು ಗಜದ ಶರೀರದಿಂದ ಹೊರಬಂದು ವೇಗದಿಂದ ಬೇರೆ ಕಡೆಗೆ ಹೋದನು.

ತತಃ ಸರ್ವಸ್ಯ ಸೈನ್ಯಸ್ಯ ನಾದಃ ಸಮಭವನ್ಮಹಾನ್ ।
ಹಾ ಹಾ ವಿನಿಹತೋ ಭೀಮಃ ಕುಂಜರೇಣೇತಿ ಮಾರಿಷ ॥ ೨೯ ॥

ಎಲೈ ಪೂಜ್ಯನೇ, ಆಗ ಆಹಾ ಭೀಮನು ಸುಪ್ರತೀಕದಿಂದ ಹತನಾದನು ಎಂದು ಸರ್ವಸೈನ್ಯದಲ್ಲಿ ದೊಡ್ಡ ನಾದವು ಉಂಟಾಯಿತು.

ತೇನ ನಾದೇನ ವಿತ್ರಸ್ತಾ ಪಾಂಡವಾನಾಮನೀಕಿನೀ ।
ಸಹಸಾಽಭ್ಯದ್ರವದ್ ರಾಜನ್ ತತ್ರ ಯತ್ರ ವೃಕೋದರಃ ॥ ೩೦ ॥

ಆ ನಾದವನ್ನು ಕೇಳಿ ಹೆದರಿದ ಪಾಂಡವರ ಸೈನ್ಯವು ಎಲೈ ರಾಜನೇ, ವೃಕೋದರನಿದ್ದಲ್ಲಿಗೆ ಶೀಘ್ರವಾಗಿ ಓಡಿ ಬಂದಿತು.

ತತೋ ಯುಧಿಷ್ಠಿರೋ ರಾಜಾ ಹತಂ ಮತ್ವಾ ವೃಕೋದರಮ್ ।
ಭಗದತ್ತಂ ಸಪಾಂಚಾಲಃ ಸರ್ವತಃ ಸಮವಾರಯತ್ ॥ ೩೧ ॥

ಆಗ ರಾಜನಾದ ಯುಧಿಷ್ಠಿರನು ಭೀಮಸೇನನು ಹತನಾದನೆಂದು ತಿಳಿದು ಪಾಂಚಾಲಸಹಿತನಾಗಿ ಭಗದತ್ತನನ್ನು ಎಲ್ಲ ಕಡೆಗಳಿಂದಲೂ ಸುತ್ತುವರಿದನು.

ತಂ ರಥೈ ರಥಿನಾಂ ಶ್ರೇಷ್ಠಾ ಪರಿವಾರ್ಯ ಸಮಂತತಃ ।
ಅವಾಕಿರನ್ ಶರೈಸ್ತೀಕ್ಷ್ಣೈಃ ಶತಶೋಽಥ ಸಹಸ್ರಶಃ ॥ ೩೨ ॥

ರಥಿಶ್ರೇಷ್ಠರಾದ ಅವರು ಭಗದತ್ತನನ್ನು ತಮ್ಮ ರಥಗಳಿಂದ ಎಲ್ಲ ಕಡೆಗಳಲ್ಲಿಯೂ ಸುತ್ತುವರಿದು ಶತಸಂಖ್ಯೆಯಲ್ಲಿ ಮತ್ತು ಸಹಸ್ರಸಂಖ್ಯೆಯಲ್ಲಿ ತೀಕ್ಷ್ಣವಾದ ಬಾಣಗಳನ್ನು ಅವನ ಮೇಲೆ ಪ್ರಯೋಗಿಸಿದರು.

ಸ ವಿಘಾತಂ ಪೃಷತ್ಕಾನಾಮಂಕುಶೇನ ಸಮಾಚರನ್ ।
ಗಜೇನ ಪಾಂಡುಪಾಂಚಾಲಾನ್ ವ್ಯಧಮತ್ ಪರ್ವತೇಶ್ವರಃ ॥ ೩೩ ॥

ಪರ್ವತೇಶ್ವರನಾದ ಭಗದತ್ತನು ಅಂಕುಶದಿಂದ ಆ ಬಾಣಗಳನ್ನು ವಿನಾಶಗೊಳಿಸುತ್ತಾ ತನ್ನ ಗಜದಿಂದ ಪಾಂಡು-ಪಾಂಚಾಲರನ್ನು ಚದುರಿಸಿದನು.

ತದದ್ಭುತಮಪಶ್ಯಾಮ ಭಗದತ್ತಸ್ಯ ಸಂಯುಗೇ ।
ತಥಾ ವಿದಗ್ಧಚರಿತಂ ಕುಂಜರೇಣ ವಿಶಾಂಪತೇ ॥ ೩೪ ॥

ಎಲೈ ರಾಜನೇ, ಆನೆಯಿಂದ ರಣರಂಗದಲ್ಲಿ ಅಂತಹ ಜಾಣತನದ ಕಾರ್ಯವನ್ನು ಮಾಡುವ ಭಗದತ್ತನ ಅದ್ಭುತವಾದ ಚರ್ಯೆಯನ್ನು ನಾವು ನೋಡಿದೆವು.

ತತೋ ರಾಜಾ ದಶಾರ್ಣಾನಾಂ ಪ್ರಾಗ್ಜ್ಯೋತಿಷಮುಪಾದ್ರವತ್ ।
ಗಿರಿಪ್ರಖ್ಯೇನ ನಾಗೇನ ಸಮದೇನಾಶುಗಾಮಿನಾ ॥ ೩೫ ॥

ಆಗ ದಶಾರ್ಣಾಧಿಪತಿಯು ಪರ್ವತದಂತಿದ್ದ, ಮದಿಸಿದ, ಶೀಘ್ರಗಾಮಿಯಾದ ತನ್ನ ಗಜದಿಂದ ಸಹಿತನಾಗಿ ಭಗದತ್ತನ ಕಡೆಗೆ ಧಾವಿಸಿದನು.

ತಯೋರ್ಯುದ್ಧಂ ಸಮಭವನ್ನಾಗಯೋರ್ಭೀಮರೂಪಯೋಃ ।
ಸಪಕ್ಷಯೋಃ ಸುದ್ರುಮಯೋರ್ಯಥಾ ಪರ್ವತಯೋರಿವ ॥ ೩೬ ॥

ಭಯಂಕರವಾದ ಆಕಾರವನ್ನು ಹೊಂದಿದ ಆ ಎರಡು ಗಜಗಳಿಗೆ ಒಳ್ಳೆಯ ಮರಗಳನ್ನು ಹೊಂದಿದ, ರೆಕ್ಕೆಗಳಿಂದ ಸಹಿತವಾದ ಎರಡು ಪರ್ವತಗಳಿಗೋ ಎಂಬಂತೆ ಯುದ್ಧವು ನಡೆಯಿತು.

ಪ್ರಾಗ್ಜ್ಯೋತಿಷಪತೇರ್ನಾಗಃ ಸನ್ನಿಪತ್ಯಾವಮೃದ್ಯ ಚ ।
ಪಾರ್ಶ್ವೇ ದಶಾರ್ಣಾಧಿಪತೇರ್ಭಿತ್ತ್ವಾ ನಾಗಮಪಾತಯತ್ ॥ ೩೭ ॥

ಪ್ರಾಗ್ಜ್ಯೋತಿಷಾಧಿಪತಿಯಾದ ಭಗದತ್ತನ ಸುಪ್ರತೀಕಗಜವು ದಶಾರ್ಣಾಧಿಪತಿಯ ಗಜದ ಮೇಲೆ ಬಿದ್ದು, ಅದನ್ನು ತುಳಿದು, ಅದರ ಪಾರ್ಶ್ವವನ್ನು ಭೇದಿಸಿ ಅದನ್ನು ಕೆಡವಿತು.

ತೋಮರೈಃ ಸೂರ್ಯರಶ್ಮ್ಯಭೈರ್ಭಗದತ್ತೋ ಹಿ ಸಪ್ತಭಿಃ ।
ಜಘಾನ ದ್ವಿರದಭ್ರಷ್ಟಂ ಶತ್ರುಂ ಪ್ರಚಲಿತಾಸನಮ್ ॥ ೩೮ ॥

ಗಜದಿಂದ ಜಾರಿ ತನ್ನ ಆಸನವನ್ನೂ ಕಳೆದುಕೊಂಡ ಶತ್ರುವಾದ ದಶಾರ್ಣಾಧಿಪತಿಯನ್ನು ಭಗದತ್ತನು ಸೂರ್ಯರಶ್ಮಿಯ ಕಾಂತಿಯನ್ನು ಹೊಂದಿದ್ದ ಏಳು ತೋಮರಗಳಿಂದ ಹೊಡೆದನು.

ವ್ಯವಚ್ಛಿದ್ಯ ತು ರಾಜಾನಂ ಭಗದತ್ತಂ ಯುಧಿಷ್ಠಿರಃ ।
ರಥಾನೀಕೇನ ಮಹತಾ ಸರ್ವತಃ ಸಮವಾರಯತ್ ॥ ೩೯ ॥

ಯುಧಿಷ್ಠಿರನು ದಶಾರ್ಣಾಧಿಪತಿಯನ್ನು ಭಗದತ್ತನಿಂದ ಬಿಡಿಸಿ, ದೊಡ್ಡ ರಥ ಸಮೂಹದಿಂದ ಭಗದತ್ತನನ್ನು ಎಲ್ಲ ಕಡೆಗಳಲ್ಲಿಯೂ ಸುತ್ತುವರಿದನು.

ಸ ಕುಂಜರಸ್ಥೋ ರಥಿಭಿಃ ಶುಶುಭೇ ಸರ್ವತೋ ವೃತಃ ।
ಕಿರನ್ನಿಷುಸಹಸ್ರಾಣಿ ರಶ್ಮೀನಿವ ದಿವಾಕರಃ ॥ ೪೦ ॥

ಎಲ್ಲ ಕಡೆಗಳಲ್ಲಿಯೂ ಮಹಾರಥರಿಂದ ಸುತ್ತುವರಿಯಲ್ಪಟ್ಟು ಗಜಾರೂಢನಾಗಿದ್ದ ಅವನು ಸಹಸ್ರಾರು ಬಾಣಗಳನ್ನು ಪ್ರಯೋಗಿಸುತ್ತಾ ಎಲ್ಲ ಕಡೆಗಳಲ್ಲಿಯೂ ತನ್ನ ರಶ್ಮಿಗಳನ್ನು ಚೆಲ್ಲುವ ದಿವಾಕರನಂತೆ ಶೋಭಿಸಿದನು.

ಮಂಡಲಂ ಸರ್ವತಃ ಶ್ಲಿಷ್ಟಂ ರಥಿನಾಮುಗ್ರಧನ್ವಿನಾಮ್ ।
ಕಿರತಾಂ ಶರವರ್ಷಾಣಿ ಸ ನಾಗಃ ಪರ್ಯವರ್ತತ ॥ ೪೧ ॥

ಉಗ್ರಧನುರ್ಧಾರಿಗಳಾದ ರಥಿಕರು ಎಲ್ಲ ಕಡೆಗಳಲ್ಲಿಯೂ ಸೇರಿ ಬಾಣಗಳ ಮಳೆಯನ್ನು ಕರೆಯುತ್ತಿರಲು ಆ ಗಜವು ವೃತ್ತಾಕಾರವಾಗಿ ತಿರುಗಿತು.

ತತಃ ಪ್ರಾಗ್ಜ್ಯೋತಿಷೋ ರಾಜಾ ಪರಿಗೃಹ್ಯ ಗಜೋತ್ತಮಮ್ ।
ಪ್ರೇಷಯಾಮಾಸ ಸಹಸಾ ಯುಯುಧಾನರಥಂ ಪ್ರತಿ ॥ ೪೨ ॥

ಆಗ ಪ್ರಾಗ್ಜ್ಯೋತಿಷ ರಾಜನು ತನ್ನ ಶ್ರೇಷ್ಠ ಗಜವನ್ನು ಹಿಡಿದು ಅದನ್ನು ಶೀಘ್ರವಾಗಿ ಯುಯುಧಾನನ ರಥದ ಮೇಲೆ ಹಾಯಿಸಿದನು.

ಆಪತಂತಂ ತು ಸಂಪ್ರೇಕ್ಷ್ಯ ನಾಗಂ ಸಾತ್ವತಪುಂಗವಃ ।
ಅವಿಧ್ಯತ್ ಪಂಚಭಿರ್ಬಾಣೈಃ ಶಿತೈರಾಶೀವಿಷೋಪಮೈಃ ॥ ೪೩ ॥

ಸಾತ್ವತ ಪುಂಗವನಾದ ಸಾತ್ಯಕಿಯು ತನ್ನ ಮೇಲೆ ಎರಗುತ್ತಿದ್ದ ಆ ಗಜವನ್ನು ನೋಡಿ, ಸರ್ಪವಿಷದಂತಿದ್ದ ನಿಶಿತವಾದ ಐದು ಬಾಣಗಳಿಂದ ಅದನ್ನು ಹೊಡೆದನು.

ಶಿನೇಃ ಪುತ್ರಸ್ಯ ತು ರಥಂ ಪರಿಗೃಹ್ಯ ಮಹಾದ್ವಿಪಃ ।
ಸಮಾಚಿಕ್ಷೇಪ ವೇಗೇನ ಯುಯುಧಾನಸ್ತು ಪುಪ್ಲುವೇ ॥ ೪೪ ॥

ಆ ಮಹಾಗಜವು ಸಾತ್ಯಕಿಯ ರಥವನ್ನು ಹಿಡಿದು ವೇಗದಿಂದ ಎಸೆಯಿತು. ಯುಯುಧಾನನು ಅದರಿಂದ ಹಾರಿದನು.

ಬೃಹತಃ ಸೈಂಧವಾನ್ ದಾಂತಾನ್ ಸಮುತ್ಥಾಪ್ಯ ತು ಸಾರಥಿಃ ।
ತಸ್ಥೌ ಸಾತ್ಯಕಿಮಾಸಾದ್ಯ ಸೋಽಧ್ಯತಿಷ್ಠದ್ ರಥಂ ಪುನಃ ॥ ೪೫ ॥

ಸಾತ್ಯಕಿಯ ಸಾರಥಿಯು ಸಿಂಧುದೇಶದ ಪಳಗಿದ ಆ ದೊಡ್ಡ ಕುದುರೆಗಳನ್ನು ಎಬ್ಬಿಸಿ, ಸಾತ್ಯಕಿಯ ಬಳಿಗೆ ಬಂದು ನಿಂತನು. ಸಾತ್ಯಕಿಯು ಪುನಃ ರಥವನ್ನು ಏರಿದನು.

ಸ ತು ಲಬ್ಧ್ವಾಽಂತರಂ ನಾಗಃ ತ್ವರಿತೋ ರಥಮಂಡಲಾತ್ ।
ನಿಷ್ಪತನ್ ಸತತಂ ಸರ್ವಾನ್ ಪರಿಚಿಕ್ಷೇಪ ಪಾರ್ಥಿವಾನ್ ॥ ೪೬ ॥

ಸ್ವಲ್ಪ ಅವಕಾಶವನ್ನು ಪಡೆದ ಆ ಗಜವು ಶೀಘ್ರವಾಗಿ ಆ ರಥಮಂಡಲದಿಂದ ಹೊರಗೆ ಹೋಗುತ್ತಾ ಆ ಎಲ್ಲ ರಾಜರನ್ನೂ ಹಿಡಿದು ಎಸೆಯಿತು.

ತೇ ತ್ವಾಶುಗತಿನಾ ತೇನ ಪ್ರಾಸ್ಯಮಾನಾ ರಥರ್ಷಭಾಃ ।
ತಮೇಕಂ ದ್ವಿರದಂ ಸಂಖ್ಯೇ ಮೇನಿರೇ ಶತಶೋ ಗಜಾನ್ ॥ ೪೭ ॥

ಶೀಘ್ರಗಾಮಿಯಾದ ಆ ಗಜದಿಂದ ಎಸೆಯಲ್ಪಟ್ಟ ಆ ರಥಶ್ರೇಷ್ಠರು ರಣರಂಗದಲ್ಲಿ ಅದೊಂದೇ ಗಜವನ್ನು ನೂರಾರು ಗಜಗಳೆಂದು ತಿಳಿದರು.

ತೇ ಗಜಸ್ಥೇನ ಕಾಲ್ಯಂತೇ ಭಗದತ್ತೇನ ಪಾಂಡವಾಃ ।
ಐರಾವತಸ್ಥೇನ ಯಥಾ ದೇವರಾಜೇನ ದಾನವಾಃ ॥ ೪೮ ॥

ಐರಾವತವನ್ನು ಏರಿದ ಇಂದ್ರನಿಂದ ದಾನವರು ಚದುರಿಸಲ್ಪಟ್ಟಂತೆ ಗಜವನ್ನೇರಿದ ಭಗದತ್ತನಿಂದ ಪಾಂಡವರು ಚದುರಿಸಲ್ಪಟ್ಟರು.

ತೇಷಾಂ ಪ್ರದ್ರವತಾಂ ಸಂಖೇ ಪಾಂಚಾಲಾನಾಮಿತಸ್ತತಃ ।
ಗಜವಾಜಿಕೃತಃ ಶಬ್ದಃ ಸುಮಹಾನ್ ಸಮಜಾಯತ ॥ ೪೯ ॥

ರಣರಂಗದಲ್ಲಿ ಅಲ್ಲಿಂದಿಲ್ಲಿಗೆ ಓಡುವ ಪಾಂಚಾಲರ ಅಶ್ವ-ಗಜಗಳಿಂದ ಬಹಳ ದೊಡ್ಡ ಶಬ್ದವು ಉಂಟಾಯಿತು.

ಭಗದತ್ತೇನ ಸಮರೇ ಕಾಲ್ಯಮಾನೇಷು ಪಾಂಡುಷು ।
ಪ್ರಾಗ್ಜ್ಯೋತಿಷಮಭಿಕ್ರುದ್ಧಃ ಪುನರ್ಭೀಮಃ ಸಮಭ್ಯಯಾತ್ ॥ ೫೦ ॥

ಪಾಂಡವರ ಸೇನೆಯು ರಣರಂಗದಲ್ಲಿ ಭಗದತ್ತನಿಂದ ಚದುರಿಸಲ್ಪಡುತ್ತಿರಲು ಕೋಪಗೊಂಡ ಭೀಮನು ಪುನಃ ಪ್ರಾಗ್ಜ್ಯೋತಿಷನ ಮೇಲೆ ಎರಗಿದನು.

ತಸ್ಯಾಭಿದ್ರವತೋ ವಾಹಾನ್ ಹಸ್ತಮುಕ್ತೇನ ವಾರಿಣಾ ।
ಸಿಕ್ತ್ವಾ ವ್ಯತ್ರಾಸಯನ್ನಾಗಃ ತೇ ಪಾರ್ಥಮವಹನ್ ಹಯಾಃ ॥ ೫೧ ॥

ಹೀಗೆ ತನ್ನ ಕಡೆಗೆ ಧಾವಿಸುತ್ತಿದ್ದ ಭೀಮನ ರಥದ ಅಶ್ವಗಳನ್ನು ಸುಪ್ರತೀಕವು ತನ್ನ ಸೊಂಡಿಲಿನಿಂದ ಮುಕ್ತವಾದ ಜಲದಿಂದ ಅವುಗಳನ್ನು ತೋಯಿಸಿ ಹೆದರಿಸಿತು. ಆ ಅಶ್ವಗಳು ಭೀಮಸೇನನನ್ನು ಬೇರೆ ಕಡೆಗೆ ಕೊಂಡೊಯ್ದವು.

ತತಃ ಸಮಭ್ಯಯಾತ್ ತೂರ್ಣಂ ಸುಪರ್ವಾ ಪಾರ್ವತೀಸುತಃ ।
ಸ ಮುಂಚನ್ ಶರವರ್ಷಾಣಿ ರಥಸ್ಥೋಽಂತಕಸನ್ನಿಭಃ ॥ ೫೨ ॥

ಆಗ ಪಾರ್ವತೀ ಸುತನಾದ ಸುಪರ್ವನು ಯಮನ ಕಾಂತಿಯನ್ನು ಹೊಂದಿ ರಥದಲ್ಲಿ ಕುಳಿತು ಬಾಣಗಳ ಮಳೆಯನ್ನು ಸುರಿಸುತ್ತಾ ಶೀಘ್ರವಾಗಿ ಬಂದನು.

ಸಶಸ್ತ್ರಂ ತಂ ಸುಪರ್ವಾಣಂ ಶರೇಣಾನತಪರ್ವಣಾ ।
ಜಘಾನ ಪರ್ವತಪತಿಃ ಪ್ರೇಷಯನ್ ವೈ ಯಮಕ್ಷಯಮ್ ॥ ೫೩ ॥

ಪರ್ವತಪತಿಯಾದ ಭಗದತ್ತನು ಬಾಗಿದ ತುದಿಯುಳ್ಳ ಬಾಣದಿಂದ ಶಸ್ತ್ರ ಸಹಿತನಾದ ಸುಪರ್ವನನ್ನು ಹೊಡೆದು ಅವನನ್ನು ಯಮಲೋಕಕ್ಕೆ ಕಳುಹಿಸಿದನು.

ತಸ್ಮಿನ್ ನಿಪತಿತೇ ವೀರೇ ಸೌಭದ್ರೋ ದ್ರೌಪದೀಸುತಃ ।
ಚೇಕಿತಾನೋ ಧೃಷ್ಟಕೇತುರ್ಯುಯುತ್ಸುಶ್ಚಾರ್ದಯನ್ ಶರೈಃ ॥ ೫೪ ॥

ವೀರನಾದ ಸುಪರ್ವನು ಹತನಾಗುತ್ತಿರಲು ಅಭಿಮನ್ಯುವೂ ದ್ರೌಪದಿಯ ಪುತ್ರನೂ, ಚೇಕಿತಾನನೂ, ಧೃಷ್ಟಕೇತುವೂ ಮತ್ತು ಯುಯುತ್ಸುವೂ ಭಗದತ್ತನನ್ನು ತಮ್ಮ ಬಾಣಗಳಿಂದ ಪೀಡಿಸಿದರು.

ತ ಏನಂ ಶರಧಾರಾಭಿರ್ಧಾರಾಭಿರಿವ ತೋಯದಾಃ ।
ವವರ್ಷುರ್ಭೈರವಂ ನಾದಂ ಏನದಂತೋ ಜಿಘಾಂಸವಃ ॥ ೫೫ ॥

ಜಲಧಾರೆಗಳಿಂದ ಮೋಡಗಳು ತೋಯಿಸಿದಂತೆ ಅವರು ಈ ಭಗದತ್ತನನ್ನು ಕೊಲ್ಲಲು ಬಯಸಿ ಭೈರವ ನಾದಗಳನ್ನು ಮಾಡುತ್ತಾ ಅವನ ಮೇಲೆ ತಮ್ಮ ಬಾಣಗಳ ಮಳೆಯನ್ನು ಸುರಿಸಿದರು.

ತತಃ ಪಾಷ್ಣ್ಯಂಕುಶಾಂಗುಷ್ಠೈಃ ಕೃತಿನಾ ಚೋದಿತೋ ದ್ವಿಪಃ ।
ಪ್ರಸಾರಿತಕರಃ ಪ್ರಾಯಾತ್ ಸ್ತಬ್ಧಕರ್ಣೇಕ್ಷಣೋ ದ್ರುತಮ್ ॥ ೫೬ ॥

ಸೋಽಧಿಷ್ಠಾಯ ಪದಾ ವಾಹಾನ್ ಯುಯುತ್ಸೋಃ ಸೂತಮಾರುಜತ್ ।
ಯುಯುತ್ಸುಸ್ತು ರಥಾದ್ ರಾಜನ್ನಪಾಕ್ರಾಮತ್ ತ್ವರಾನ್ವಿತಃ ॥ ೫೭ ॥

ಆಗ ಕುಶಲನಾದ ಭಗದತ್ತನಿಂದ ಅಂಕುಶ, ಅಂಗುಷ್ಠ ಹಿಮ್ಮಡಿಗಳಿಂದ ಪ್ರಚೋದಿಸಲ್ಪಟ್ಟ ಆ ಗಜವು ತನ್ನ ಸೊಂಡಿಲನ್ನು ಚಾಚಿ ಅಲುಗಾಡದ ಕಿವಿಗಳು ಮತ್ತು ಕಣ್ಣುಗಳೊಂದಿಗೆ ಶೀಘ್ರವಾಗಿ ಮುಂದೆ ಸಾಗಿತು.

ತತಃ ಪಾಂಡವಯೋಧಾಸ್ತಂ ನಾಗರಾಜಂ ಶರೈರ್ದ್ರುತಮ್ ॥ ೫೮ ॥

ಅದು ಯುಯುತ್ಸುವಿನ ಅಶ್ವಗಳನ್ನು ತುಳಿದು ಸಾರಥಿಯನ್ನು ಕೊಂದಿತು. ಎಲೈ ರಾಜನೇ, ಯುಯುತ್ಸುವಾದರೋ ರಥದಿಂದ ಶೀಘ್ರವಾಗಿ ಕೆಳಗೆ ಇಳಿದನು.

ಸಿಷಿಚುರ್ಭೈರವಾನ್ನಾದಾನ್ ವಿನದಂತೋ ಜಿಘಾಂಸವಃ ।
ಪುತ್ರಸ್ತು ತವ ಸಂಭ್ರಾಂತಃ ಸೌಭದ್ರಸ್ಯಾಪ್ಲುತೋ ರಥಮ್ ॥ ೫೮ ॥

ಆಗ ಪಾಂಡವಯೋಧರು ಆ ಗಜವನ್ನು ಕೊಲ್ಲಲು ಬಯಸಿ, ಭೈರವನಾದಗಳನ್ನು ಮಾಡುತ್ತಾ ಶೀಘ್ರವಾಗಿ ಆ ಗಜರಾಜನ ಮೇಲೆ ಬಾಣಗಳ ಮಳೆಯನ್ನು ಸುರಿಸಿದರು. ನಿನ್ನ ಪುತ್ರನಾದ ಯುಯುತ್ಸುವು ಗಾಬರಿಗೊಂಡವನಾಗಿ ಅಭಿಮನ್ಯುವಿನ ರಥಕ್ಕೆ ಹಾರಿದನು.

ಸ ಕುಂಜರಸ್ಥೋ ವಿಸೃಜನ್ ಶರಾನರಿಷು ಪಾರ್ಥಿವಃ ।
ಬಭೌ ರಶ್ಮೀನಿವಾದಿತ್ಯೋ ಭುವನೇಷು ಸಮುತ್ಸೃಜನ್ ॥ ೫೯ ॥

ಆನೆಯ ಮೇಲೆ ಕುಳಿತು ಶತ್ರುಗಳ ಮೇಲೆ ಬಾಣಗಳನ್ನು ಪ್ರಯೋಗಿಸುವ ಆ ರಾಜನು ಭೂಮಿಯಲ್ಲಿ ತನ್ನ ರಶ್ಮಿಯನ್ನು ಚೆಲ್ಲುವ ಸೂರ್ಯನಂತೆ ಕಂಗೊಳಿಸಿದನು.

ತಮಾರ್ಜುನಿರ್ದ್ವಾದಶಭಿರ್ಯುಯುತ್ಸುರ್ದಶಭಿಃ ಶರೈಃ ।
ತ್ರಿಭಿಸ್ತ್ರಿಭಿರ್ದ್ರೌಪದೇಯಾ ಧೃಷ್ಟಕೇತುಶ್ಚ ವಿವ್ಯಧುಃ ॥ ೬೦ ॥

ಅವನನ್ನು ಅಭಿಮನ್ಯುವು ಹನ್ನೆರಡು ಬಾಣಗಳಿಂದಲೂ, ಯುಯುತ್ಸುವು ಹತ್ತು ಬಾಣಗಳಿಂದಲೂ, ದ್ರೌಪದಿಯ ಪುತ್ರರು ಮೂರು-ಮೂರು ಬಾಣಗಳಿಂದಲೂ, ಧೃಷ್ಟಕೇತುವು ಮೂರು ಬಾಣಗಳಿಂದಲೂ ಹೊಡೆದರು.

ಚೇಕಿತಾನಶ್ಚತುಃಷಷ್ಟ್ಯಾ ಸೋಽಂತರಾ ಯುಧಿ ತಂ ಪುನಃ ।
ಪ್ರತ್ಯವಿಧ್ಯಚ್ಚರೈಃ ಸರ್ವಾನ್ ಭಗದತ್ತಸ್ತ್ರಿಭಿಸ್ತ್ರಿಭಿಃ ॥ ೬೧ ॥

ಈ ಮಧ್ಯದಲ್ಲಿ ಚೇಕಿತಾನನು ಪುನಃ ರಣರಂಗದಲ್ಲಿ ಅವನನ್ನು ಅರವತ್ನಾಲ್ಕು ಬಾಣಗಳಿಂದ ಹೊಡೆದನು. ಭಗದತ್ತನು ಅದಕ್ಕೆ ಪ್ರತಿಯಾಗಿ ಅವರೆಲ್ಲರನ್ನೂ ಮೂರು-ಮೂರು ಬಾಣಗಳಿಂದ ಹೊಡೆದನು.

ಸೋಽಪಿ ವೀರಾರ್ಪಿತೈರ್ಬಾಣೈರಾಚಿತೋ ದ್ವಿರದೋ ಬಭೌ ।
ಸಂಸ್ಯೂತ ಇವ ಸೂರ್ಯಸ್ಯ ರಶ್ಮಿಭಿರ್ಜಲದೋ ಮಹಾನ್ ॥ ೬೨ ॥

ವೀರರು ಪ್ರಯೋಗಿಸಿದ ಬಾಣಗಳು ನಾಟಿದ ಆ ಗಜವು ಸೂರ್ಯನ ರಶ್ಮಿಗಳಿಂದ ಚೆನ್ನಾಗಿ ಸಂಸಕ್ತವಾದ ಮಹಾಮೋಡದಂತೆ ಕಂಗೊಳಿಸಿತು.

ನಿಯಂತುಃ ಶಿಲ್ಪಯತ್ನಾಭ್ಯಾಂ ಪ್ರೇಷಿತೋಽರಿಶರಾಹತಃ ।
ಪರಿಚಿಕ್ಷೇಪ ತಾನ್ ನಾಗಃ ಸರಿಪೂನ್ ಸವ್ಯದಕ್ಷಿಣಮ್ ॥ ೬೩ ॥

ತನ್ನನ್ನು ನಿಯಂತ್ರಿಸುವ ಭಗದತ್ತನ ಪೌರುಷ ಮತ್ತು ಪ್ರಯತ್ನಗಳಿಂದ ಮುಂದೆ ಸಾಗಿದ ಆ ಗಜವು ಶತ್ರುಗಳ ಬಾಣಗಳಿಂದ ಪೀಡಿತವಾದರೂ, ಶತ್ರುಗಳಿಂದ ಸಹಿತವಾದ ಅವರ ರಥಗಳನ್ನು ಅದು ಎಡ-ಬಲ ಭಾಗಳಲ್ಲಿ ತೆಗೆದು ಎಸೆಯಿತು.

ಗೋಪಾಲ ಇವ ದಂಡೇನ ಯಥಾ ಪಶುಗಣಾನ್ ವನೇ ।
ಸಂಕಾಲಯತಿ ತಾಂ ಸೇನಾಂ ಭಗದತ್ತಸ್ತಥಾ ಮುಹುಃ ॥ ೬೪ ॥

ಗೋಪಾಲಕನು ಅರಣ್ಯದಲ್ಲಿ ದಂಡವನ್ನು ಹಿಡಿದು ಪಶುಸಮೂಹಗಳನ್ನು ಚದುರಿಸುವಂತೆ ಭಗದತ್ತನು ಪಾಂಡವರ ಆ ಸೈನ್ಯವನ್ನು ಪುನಃ ಚದುರಿಸಿದನು.

ಕ್ಷಿಪ್ರಂ ಶ್ಯೇನಾಭಪನ್ನಾನಾಂ ವಾಯಸಾನಾಮಿವ ಸ್ವನಃ ।
ಬಭೂವ ಪಾಂಡವೇಯಾನಾಂ ತಥಾ ವಿದ್ರವತಾಂ ಸ್ವನಃ ॥ ೬೫ ॥

ಗಿಡುಗವು ಎರಗಿದ ವಾಯಸಗಳ (ಕಾಗೆಗಳ) ಧ್ವನಿಯಂತೆ ರಣರಂಗದಿಂದ ಓಡುವ ಪಾಂಡವ ಸೈನ್ಯದ ನಾದವು ಉಂಟಾಯಿತು.

ರಜಶ್ಚ ಸುಮಹದ್ ರಾಜನ್ನಂತರಿಕ್ಷಂ ಸಮಾಚಿನೋತ್ ।
ಅಭಿಧಾವೇತಿ ಕೌಂತೇಯಂ ಸಂಚೋದಯದಿವಾರ್ಜುನಮ್ ॥ ೬೬ ॥

'ಓಡಿ ಬಾ' ಎಂದು ಕೌಂತೇಯನಾದ ಅರ್ಜುನನನ್ನು ಪ್ರಚೋದಿಸುವಂತೆ ಎಲೈ ರಾಜನೇ, ಸೈನ್ಯದಿಂದ ಎದ್ದ ಧೂಳು ಅಂತರಿಕ್ಷವನ್ನು ಆವರಿಸಿತು.

ಸ ನಾಗರಾಟ್ ಪ್ರಬಲಬಲೋದ್ಧತೋ ದ್ರುತಂ
ಪುರಾ ಸಪಕ್ಷಾದ್ರಿವರೋ ಯಥಾಽದ್ರವತ್ ।
ಭಯಂ ಮಹದ್ ರಿಪುಷು ಸಮಾದಧದ್ ಭೃಶಂ
ವನೇಗ್ಗಣಾನಾಂ ಕ್ಷುಭಿತೋ ಯಥಾರ್ಣವಃ ॥ ೬೭ ॥

ಪ್ರಬಲವಾದ ಬಲದಿಂದ ಕೂಡಿ ಅಹಂಕಾರವನ್ನು ಹೊಂದಿದ ಆ ಶ್ರೇಷ್ಠವಾದ ಗಜವು ಹಿಂದೆ ಪಕ್ಷಗಳನ್ನು ಹೊಂದಿದ್ದ ಶ್ರೇಷ್ಠ ಪರ್ವತದಂತೆ, ವರ್ತಕಸಮೂಹಕ್ಕೆ ಕ್ಷೋಭೆಗೊಂಡ ಸಮುದ್ರವು ಭಯ ಉಂಟುಮಾಡುವಂತೆ, ಶತ್ರುಗಳಿಗೆ ದೊಡ್ಡ ಭಯವನ್ನುಂಟು ಮಾಡುತ್ತಾ ಶೀಘ್ರವಾಗಿ ಓಡಿತು.

ತಥಾ ಧ್ವನಿರ್ದ್ವಿರದರಥಾಶ್ವಮಾನವೈಃ
ಭಯಾದ್ ದ್ರವದ್ಭಿರ್ಜನಿತೋಽತಿಭೈರವಃ ।
ಕ್ಷಿತಿಂ ವಿಯದ್ ದ್ಯಾಂ ಪ್ರದಿಶೋ ದಿಶಸ್ತಥಾ
ಸಮಾವೃಣೋತ್ ಪಾರ್ಥಿವ ಸಂಯುಗೇ ತದಾ ॥ ೬೮ ॥

ಎಲೈ ರಾಜನೇ, ಆಗ ಸುಪ್ರತೀಕದ ಭಯದಿಂದ ಓಡುವ ಗಜಗಳಿಂದ, ರಥಗಳಿಂದ, ಅಶ್ವಗಳಿಂದ ಮತ್ತು ಪದಾತಿಗಳಿಂದ ಉಂಟಾದ ಅತಿಭಯಂಕರವಾದ ಧ್ವನಿಯು ಭೂಮಿಯನ್ನೂ, ಆಕಾಶವನ್ನೂ, ದಿಕ್ಕು-ವಿದಿಕ್ಕುಗಳನ್ನೂ, ಅಂತರಿಕ್ಷವನ್ನೂ ಆವರಿಸಿತು.

ಸ ತೇನ ನಾಗಪ್ರವರೇಣ ಪಾರ್ಥಿವೋ
ಭೃಶಂ ಜಗಾಹೇ ದ್ವಿಷತಾಂ ವರೂಥಿನೀಮ್ ।
ಪುರಾಽಭಿಗುಪ್ತಾಂ ವಿಬುಧೈರ್ಮಹಾಹವೇ
ವಿರೋಚನೋ ದೇವವರೂಥಿನೀಮಿವ ॥ ೬೯ ॥

ಆ ಭಗದತ್ತರಾಜನು ಶ್ರೇಷ್ಠವಾದ ಸುಪ್ರತೀಕ ಗಜದ ಜೊತೆಯಲ್ಲಿ ಹಿಂದೆ ಮಹಾಯುದ್ಧದಲ್ಲಿ ದೇವತೆಗಳಿಂದ ರಕ್ಷಿತವಾದ ದೇವಸೇನೆಯನ್ನು ವಿರೋಚನನು ಪ್ರವೇಶಿಸಿದಂತೆ ಶತ್ರುಸೈನ್ಯವನ್ನು ಪ್ರವೇಶಿಸಿದನು.

ಭೃಶಂ ವವೌ ಜ್ವಲನಸಖೋ ವಿಯದ್ರಜಃ
ಸಮಾವೃಣೋನ್ಮುಹುರಭಿತಶ್ಚ ಸೈನಿಕಾನ್ ।
ತಮೇಕನಾಗಂ ಶತಶೋ ಯಥಾ ಗಜಾನ್
ಸಮಂತತೋ ದ್ರುತಮಥ ಮೇನಿರೇ ಜನಾಃ ॥ ೭೦ ॥

ಅಗ್ನಿಸಖನಾದ ವಾಯುವು ಕಟುವಾಗಿ ಬೀಸಿತು. ಧೂಳು ಆಕಾಶವನ್ನು ಮತ್ತು ಸೈನಿಕರನ್ನು ಪುನಃ ಮುಚ್ಚಿತ್ತು. ಜನರು ಅದೊಂದೇ ಗಜವನ್ನು ಎಲ್ಲ ಕಡೆಯಲ್ಲಿಯೂ ಓಡಾಡುವ ನೂರಾರು ಗಜಗಳೆಂದು ತಿಳಿದರು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ದ್ರೋಣಪರ್ವಣಿ ಪಂಚವಿಂಶೋಽಧ್ಯಾಯಃ ॥

॥ ಸಂಶಪ್ತಕವಧಪರ್ವಣಿ ದಶಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಇಪ್ಪತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ತಾರನೆಯ ಅಧ್ಯಾಯ

ಅರ್ಜುನನಿಂದ ಸಂಶಪ್ತಕರ ವಧೆ

ಸಂಜಯಃ

ಯನ್ಮಾಂ ಪಾರ್ಥಸ್ಯ ಕರ್ಮಾಣಿ ಸಂಗ್ರಾಮೇ ಪರಿಪೃಚ್ಛಸಿ ।
ಶೃಣು ರಾಜನ್ ಯಥಾ ಪಾರ್ಥಶ್ಚಕಾರ ಕದನಂ ಮಹತ್ ॥ ೧ ॥

ಸಂಜಯ– ಎಲೈ ರಾಜನೇ, ನೀನು ಯುದ್ಧದಲ್ಲಿ ಅರ್ಜುನನು ಮಾಡಿದ ಕಾರ್ಯಗಳನ್ನು ಕೇಳುತ್ತಿರುವಿಯಷ್ಟೆ? ಅರ್ಜುನನು ಹೇಗೆ ದೊಡ್ಡ ಯುದ್ಧವನ್ನು ಮಾಡಿದನೆಂದು ಕೇಳು.

ರಜೋ ದೃಷ್ಟ್ವಾ ಸಮುದ್ಭೂತಂ ಶ್ರುತ್ವಾ ಚ ಜನನಿಸ್ವನಮ್ ।
ಭಗದತ್ತೇ ವಿಕುರ್ವಾಣೇ ಕೌಂತೇಯಃ ಕೃಷ್ಣಮಬ್ರವೀತ್ ॥ ೨ ॥

ಮೇಲೆದ್ದ ಧೂಳನ್ನು ನೋಡಿ, ಯೋಧರ ಮಹಾನಾದವನ್ನು ಕೇಳಿ ಭಗದತ್ತನು ಪಾಂಡವರ ಸೇನೆಗೆ ಅಪಕಾರವನ್ನು ಮಾಡುತ್ತಿರುವಾಗ ಅರ್ಜುನನು ಕೃಷ್ಣನನ್ನು ಕುರಿತು ಹೇಳಿದನು.

ಯಥಾ ಪ್ರಾಗ್ಜ್ಯೋತಿಷೋ ರಾಜಾ ಗಜೇನ ಮಧುಸೂದನ ।
ತ್ವರಮಾಣೋ ಹ್ಯತಿಕ್ರಾಂತೋ ಧ್ರುವಂ ತಸ್ಯೈಷ ನಿಸ್ವನಃ ॥ ೩ ॥

ಪ್ರಬಲವಾದ ಬಲದಿಂದ ಕೂಡಿ ಅಹಂಕಾರವನ್ನು ಹೊಂದಿದ ಆ ಶ್ರೇಷ್ಠವಾದ ಗಜವು ಹಿಂದೆ ಪಕ್ಷಗಳನ್ನು ಹೊಂದಿದ್ದ ಶ್ರೇಷ್ಠ ಪರ್ವತದಂತೆ, ವರ್ತಕಸಮೂಹಕ್ಕೆ ಕ್ಷೋಭೆಗೊಂಡ ಸಮುದ್ರವು ಭಯ ಉಂಟುಮಾಡುವಂತೆ, ಶತ್ರುಗಳಿಗೆ ದೊಡ್ಡ ಭಯವನ್ನುಂಟು ಮಾಡುತ್ತಾ ಶೀಘ್ರವಾಗಿ ಓಡಿತು.

ತಥಾ ಧ್ವನಿರ್ದ್ವಿರದರಥಾಶ್ವಮಾನವೈಃ
ಭಯಾದ್ ದ್ರವದ್ಭಿರ್ಜನಿತೋऽತಿಭೈರವಃ ।
ಕ್ಷಿತಿಂ ವಿಯದ್ ದ್ಯಾಂ ಪ್ರದಿಶೋ ದಿಶಸ್ತಥಾ
ಸಮಾವೃಣೋತ್ ಪಾರ್ಥಿವ ಸಂಯುಗೇ ತದಾ ॥ ೬೮ ॥

ಎಲೈ ರಾಜನೇ, ಆಗ ಸುಪ್ರತೀಕದ ಭಯದಿಂದ ಓಡುವ ಗಜಗಳಿಂದ, ರಥಗಳಿಂದ, ಅಶ್ವಗಳಿಂದ ಮತ್ತು ಪದಾತಿಗಳಿಂದ ಉಂಟಾದ ಅತಿಭಯಂಕರವಾದ ಧ್ವನಿಯು ಭೂಮಿಯನ್ನೂ, ಆಕಾಶವನ್ನೂ, ದಿಕ್ಕು-ವಿದಿಕ್ಕುಗಳನ್ನೂ, ಅಂತರಿಕ್ಷವನ್ನೂ ಆವರಿಸಿತು.

ಸ ತೇನ ನಾಗಪ್ರವರೇಣ ಪಾರ್ಥಿವೋ
ಭೃಶಂ ಜಗಾಹೇ ದ್ವಿಷತಾಂ ವರೂಥಿನೀಮ್ ।
ಪುರಾऽಭಿಗುಪ್ತಾಂ ವಿಬುಧೈರ್ಮಹಾಹವೇ
ವಿರೋಚನೋ ದೇವವರೂಥಿನೀಮಿವ ॥ ೬೯ ॥

ಆ ಭಗದತ್ತರಾಜನು ಶ್ರೇಷ್ಠವಾದ ಸುಪ್ರತೀಕ ಗಜದ ಜೊತೆಯಲ್ಲಿ ಹಿಂದೆ ಮಹಾಯುದ್ಧದಲ್ಲಿ ದೇವತೆಗಳಿಂದ ರಕ್ಷಿತವಾದ ದೇವಸೇನೆಯನ್ನು ವಿರೋಚನನು ಪ್ರವೇಶಿಸಿದಂತೆ ಶತ್ರುಸೈನ್ಯವನ್ನು ಪ್ರವೇಶಿಸಿದನು.

ಭೃಶಂ ವವೌ ಜ್ವಲನಸಖೋ ವಿಯದ್ರಜಃ
ಸಮಾವೃಣೋನ್ಮುಹುರಭಿತಶ್ಚ ಸೈನಿಕಾನ್ ।
ತಮೇಕನಾಗಂ ಶತಶೋ ಯಥಾ ಗಜಾನ್
ಸಮಂತತೋ ದ್ರುತಮಥ ಮೇನಿರೇ ಜನಾಃ ॥ ೭೦ ॥

ಅಗ್ನಿಸಖನಾದ ವಾಯುವು ಕಟುವಾಗಿ ಬೀಸಿತು. ಧೂಳು ಆಕಾಶವನ್ನು ಮತ್ತು ಸೈನಿಕರನ್ನು ಪುನಃ ಮುಚ್ಚಿತು. ಜನರು ಅದೊಂದೇ ಗಜವನ್ನು ಎಲ್ಲ ಕಡೆಯಲ್ಲಿಯೂ ಓಡಾಡುವ ನೂರಾರು ಗಜಗಳೆಂದು ತಿಳಿದರು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ದ್ರೋಣಪರ್ವಣಿ ಪಂಚವಿಂಶೋಽಧ್ಯಾಯಃ ॥

॥ ಸಂಶಪ್ತಕವಧಪರ್ವಣಿ ದಶಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಇಪ್ಪತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ತಾರನೆಯ ಅಧ್ಯಾಯ

ಅರ್ಜುನನಿಂದ ಸಂಶಪ್ತಕರ ವಧೆ

ಸಂಜಯಃ

ಯನ್ಮಾಂ ಪಾರ್ಥಸ್ಯ ಕರ್ಮಾಣಿ ಸಂಗ್ರಾಮೇ ಪರಿಪೃಚ್ಛಸಿ ।
ಶೃಣು ರಾಜನ್ ಯಥಾ ಪಾರ್ಥಶ್ಚಕಾರ ಕದನಂ ಮಹತ್ ॥ ೧ ॥

ಸಂಜಯ– ಎಲೈ ರಾಜನೇ, ನೀನು ಯುದ್ಧದಲ್ಲಿ ಅರ್ಜುನನು ಮಾಡಿದ ಕಾರ್ಯಗಳನ್ನು ಕೇಳುತ್ತಿರುವಿಯಷ್ಟೆ? ಅರ್ಜುನನು ಹೇಗೆ ದೊಡ್ಡ ಯುದ್ಧವನ್ನು ಮಾಡಿದನೆಂದು ಕೇಳು.

ರಜೋ ದೃಷ್ಟ್ವಾ ಸಮುದ್ಭೂತಂ ಶ್ರುತ್ವಾ ಚ ಜನನಿಸ್ವನಮ್ ।
ಭಗದತ್ತೇ ವಿಕುರ್ವಾಣೇ ಕೌಂತೇಯಃ ಕೃಷ್ಣಮಬ್ರವೀತ್ ॥ ೨ ॥

ಮೇಲೆದ್ದ ಧೂಳನ್ನು ನೋಡಿ, ಯೋಧರ ಮಹಾನಾದವನ್ನು ಕೇಳಿ ಭಗದತ್ತನು ಪಾಂಡವರ ಸೇನೆಗೆ ಅಪಕಾರವನ್ನು ಮಾಡುತ್ತಿರುವಾಗ ಅರ್ಜುನನು ಕೃಷ್ಣನನ್ನು ಕುರಿತು ಹೇಳಿದನು.

ಯಥಾ ಪ್ರಾಗ್ಜ್ಯೋತಿಷೋ ರಾಜಾ ಗಜೇನ ಮಧುಸೂದನ ।
ತ್ವರಮಾಣೋ ಹ್ಯತಿಕ್ರಾಂತೋ ಧ್ರುವಂ ತಸ್ಯೈಷ ನಿಸ್ವನಃ ॥ ೩ ॥

ಎಲೈ ಮಧುಸೂದನನೇ, ಪ್ರಾಗ್ಜ್ಯೋತಿಷರಾಜನು ತ್ವರೆಯಿಂದ ನನ್ನನ್ನು ದಾಟಿ ಹೋದುದನ್ನು ಗಮನಿಸಿದರೆ ಈ ದೊಡ್ಡ ಶಬ್ದವು ಖಂಡಿತವಾಗಿ ಅವನದೇ ಆಗಿದೆ.

ಇಂದ್ರಾದನವಮಃ ಸಂಖೇ ಗಜಯಾನವಿಶಾರದಃ ।
ಪ್ರಥಮೋ ವಾ ದ್ವಿತೀಯೋ ವಾ ಪೃಥಿವ್ಯಾಮಿತಿ ಮೇ ಮತಿಃ ॥ ೪ ॥

ಯುದ್ಧದಲ್ಲಿ ಇಂದ್ರನಿಗಿಂತ ಕಡಿಮೆಯಿಲ್ಲದೆ ಗಜಯಾನ ವಿಶಾರದನಾದ ಅವನು ಗಜಯಾನದಲ್ಲಿ ಭೂಮಿಯಲ್ಲಿ ಮೊದಲನೆಯವನು ಅಥವಾ ಎರಡನೆಯನವನು ಎಂದು ನನ್ನ ಅಭಿಪ್ರಾಯ.

ಸ ಚಾಪಿ ದ್ವಿರದಶ್ರೇಷ್ಠಃ ಸದಾऽಪ್ರತಿಗಜೋ ಯುಧಿ ।
ಸರ್ವಶಸ್ತ್ರಾತಿಗಃ ಸಂಖೇ ಕೃತವರ್ಮಾ ಜಿತಕ್ಲಮಃ ॥ ೫ ॥

ಆ ಶ್ರೇಷ್ಠ ಗಜವಾದರೂ ಕೂಡ ಯುದ್ಧದಲ್ಲಿ ಪ್ರತಿಸ್ಪರ್ಧಿಯಾದ ಗಜರಹಿತವಾಗಿದೆ. ಕವಚವನ್ನು ಧರಿಸಿ ಶ್ರಮರಹಿತವಾದ ಆ ಗಜವು ಯುದ್ಧದಲ್ಲಿ ಎಲ್ಲ ಶಸ್ತ್ರಗಳನ್ನೂ ಮೀರಿದುದು.

ಸೋಢಾ ಶಸ್ತ್ರನಿಪಾತಾನಾಮಗ್ನಿಸ್ಪರ್ಶಸ್ಯ ಚಾನಘ ।
ಸ ಪಾಂಡವಬಲಂ ವ್ಯಕ್ತಮದ್ಯೈಕೋ ನಾಶಯಿಷ್ಯತಿ ॥ ೬ ॥

ಎಲೈ ಅನಘನೇ, ಅದು ಶಸ್ತ್ರಘಾತವನ್ನು ಮತ್ತು ಅಗ್ನಿಸ್ಪರ್ಶವನ್ನು ಸಹಿಸುವಂತಹದು. ಅದೊಂದೇ ಈ ದಿನ ಪಾಂಡವ ಸೈನ್ಯವನ್ನು ಸ್ಪಷ್ಟವಾಗಿ ನಾಶಮಾಡುವುದು.

ಸಿಂಹನಾದಂ ಮಹತ್ ಕೃತ್ವಾ ಧನುರ್ಬಾಣರವೈಃ ಸಹ ।
ವಿದ್ರಾವ್ಯಮಾಣಂ ಸಂಪಶ್ಯ ಹತಭೂಯಿಷ್ಠನಾಯಕಮ್ ।
ದೃಷ್ಟ್ವಾ ಏನದ್ಯ ಸಹಸಾ ಮಮ ಸೇನಾಂ ಪ್ರಮೃದ್ನತಿ ॥ ೭ ॥

ಭಗದತ್ತನು ಧನುಸ್ಸು-ಬಾಣಗಳ ಶಬ್ದದ ಜೊತೆಯಲ್ಲಿ ಸಿಂಹನಾದವನ್ನು ಮಾಡಿ, ನನ್ನ ಸೈನ್ಯದಲ್ಲಿ ಪ್ರಧಾನರಾದವರನ್ನು ಕೊಂದು, ಉಳಿದವರನ್ನು ಓಡಿಸುತ್ತಿರುವುದನ್ನು ನೋಡು. ಆ ಗಜವು ನನ್ನ ಸೇನೆಯನ್ನು ನೋಡಿ ಗರ್ಜಿಸಿ ತಕ್ಷಣ ನಾಶಮಾಡುತ್ತಿದೆ.

ನ ಚಾವಾಭ್ಯಾಂ ಪುಮಾನನ್ಯಃ ಶಕ್ತಃ ಸಂಪ್ರತಿಬಾಧಿತುಮ್ ।
ತ್ವರಮಾಣಸ್ತತೋ ಯಾಹಿ ಯತ್ರ ಪ್ರಾಗ್ಜ್ಯೋತಿಷೋ ನೃಪಃ ॥ ೮ ॥

ನಮ್ಮಿಬ್ಬರನ್ನು ಬಿಟ್ಟು ಬೇರೆ ಯಾವ ಪುರುಷನೂ ಅದನ್ನು ಮತ್ತು ಅವನನ್ನು ಬಾಧಿಸಲು ಶಕ್ತನಲ್ಲ. ಆದ್ದರಿಂದ ತ್ವರೆಯಿಂದ ಪ್ರಾಗ್ಜ್ಯೋತಿಷ ರಾಜನು ಇರುವಲ್ಲಿಗೆ ಹೋಗು.

ಶಕ್ರಸಖ್ಯಾದ್ ದ್ವಿಪಬಲಾದ್ ವಯಸಾ ಚಾಪಿ ವಿಸ್ಮಿತಮ್ ।
ಅದ್ಯೈವ ಪ್ರೇಷಯಿಷ್ಯಾಮಿ ಬಲಹಂತುಃ ಪ್ರಿಯಾತಿಥಿಮ್ ॥ ೯ ॥

ಇಂದ್ರನ ಸ್ನೇಹದಿಂದಲೂ, ಸುಪ್ರತೀಕನ ಬಲದಿಂದಲೂ ಮತ್ತು ತನ್ನ ವಯಸ್ಸಿನಿಂದಲೂ ಅಹಂಕಾರಿಯಾಗಿರುವ ಅವನನ್ನು ಈ ದಿನವೇ ಇಂದ್ರನ ಪ್ರಿಯಾತಿಥಿಯನ್ನಾಗಿ ಕಳುಹಿಸುವೆನು.

ಸಂಜಯಃ

ಕೃಷ್ಣಸ್ತು ವಚನಾತ್ ತಸ್ಯ ಪ್ರಯಯೌ ಯತ್ರ ತದ್ಬಲಮ್ ।
ಕಾಲ್ಯಂತೇ ಭಗದತ್ತೇನ ಪಾಂಚಾಲಾಃ ಸಹ ಪಾಂಡವೈಃ ॥ ೧೦ ॥

ಸಂಜಯ– ಕೃಷ್ಣನಾದರೋ ಅರ್ಜುನನ ವಚನದಂತೆ ಭಗದತ್ತನು ಪಾಂಚಾಲರನ್ನು ಮತ್ತು ಪಾಂಡವರನ್ನು ಚದುರಿಸುತ್ತಿದ್ದ ಸೈನ್ಯದ ಕಡೆಗೆ ಹೊರಟನು.

ತಂ ಪ್ರಯಾಂತಂ ತತಃ ಪಶ್ಚಾದಾಹ್ವಯಂತೋ ಮಹಾರಥಾಃ ।
ಸಂಶಪ್ತಕಾಃ ಸಮಾರೋಹನ್ ಸಹಸ್ರಾಣಿ ಚತುರ್ದಶ ॥ ೧೧ ॥

ಆಗ ಅಲ್ಲಿಂದ ಹೊರಟ ಅರ್ಜುನನನ್ನು ಮಹಾರಥರಾದ ಹದಿನಾಲ್ಕು ಸಾವಿರ ಸಂಶಪ್ತಕರು ಹಿಂಭಾಗದಿಂದ ಅವನನ್ನು ಯುದ್ಧಕ್ಕೆ ಆಹ್ವಾನಿಸಿದರು.

ದಶೈವ ತು ಸಹಸ್ರಾಣಿ ತ್ರಿಗರ್ತಾನಾಂ ನರಾಧಿಪ ।
ಚತ್ವಾರಿಂಶತ್ ಸಹಸ್ರಾಣಿ ವಾಸುದೇವಸ್ಯ ಧೇನುಪಾಃ ॥ ೧೨ ॥

ಎಲೈ ರಾಜನೇ, ತ್ರಿಗರ್ತರ ಹತ್ತುಸಾವಿರ ಸೈನಿಕರು ಮತ್ತು ಕೃಷ್ಣನ ಪುತ್ರರಾದ ನಾರಾಯಣ ಸೇನೆಯ ನಲವತ್ತು ಸಾವಿರ ಗೋಪಾಲರು (ಅರ್ಜುನನನ್ನು ಆಹ್ವಾನಿಸಿದರು).

ದೀರ್ಯಮಾಣಾಂ ಚಮೂಂ ದೃಷ್ಟ್ವಾ ಭಗದತ್ತೇನ ಮಾರಿಷ ।
ಆಹೂಯಮಾನಸ್ಯ ಚ ತೈರಭವದ್ ವೈ ಮನೋ ದ್ವಿಧಾ ॥ ೧೩ ॥

ಎಲೈ ಪೂಜ್ಯನೇ, ಒಂದು ಕಡೆ ಭಗದತ್ತನಿಂದ ಭಗ್ನಗೊಳಿಸಲ್ಪಡುತ್ತಿದ್ದ ತನ್ನ ಸೈನ್ಯವನ್ನು ನೋಡಿ, ಇನ್ನೊಂದೆಡೆ ಸಂಶಪ್ತಕರಿಂದ ತ್ರಿಗರ್ತರಿಂದ ಮತ್ತು ಗೋಪಾಲರಿಂದ ಆಹ್ವಾನಿಸಲ್ಪಟ್ಟು ಅರ್ಜುನನ ಮನಸ್ಸು ಎರಡು ರೀತಿಯಾಯಿತು.

ಕಿನ್ನು ಶ್ರೇಯಸ್ಕರಂ ಕೃತ್ಯಂ ಭವೇದತ್ರೇತ್ಯಚಿಂತಯತ್ ।
ನ ಚೈವ ವಿನಿವರ್ತೇಯಂ ಪಾಲಯೇಯಂ ಚ ಪಾಂಡವಾನ್ ॥ ೧೪ ॥

ಈಗ ಏನು ಮಾಡಿದರೆ ಶ್ರೇಯಸ್ಸುಂಟಾಗುತ್ತದೆ ಎಂದು ಅವನು ಚಿಂತಿಸಿದನು. ಹಿಂದಿರುಗಿ ಬಂದು ಪಾಂಡವರನ್ನು ರಕ್ಷಿಸಲಾರೆ (ಎಂದು ಚಿಂತಿಸಿದನು).

ತಥಾ ಬುದ್ಧ್ಯಾ ವಿಚಾರ್ಯೈತದಸಕೃತ್ ಕುರುನಂದನಃ ।
ಅಕರೋತ್ ಪರಮಾಂ ಬುದ್ಧಿಂ ಸಂಶಪ್ತಕವಧೇ ಸ್ಥಿರಾಮ್ ॥ ೧೫ ॥

ಕುರುನಂದನನಾದ ಅರ್ಜುನನು ಹೀಗೆ ಅನೇಕ ಬಾರಿ ತನ್ನ ಬುದ್ಧಿಯಿಂದ ವಿಚಾರ ಮಾಡಿ ಸಂಶಪ್ತಕರ ವಧೆಯನ್ನೇ ಮಾಡುವುದೆಂದು ಸ್ಥಿರವಾದ ಮತ್ತು ಶ್ರೇಷ್ಠವಾದ ಬುದ್ಧಿಯನ್ನು ಹೊಂದಿದನು.

ಸ ಸನ್ನಿವೃತ್ತಃ ಸಹಸಾ ಕಪಿಪ್ರವರಕೇತನಃ ।
ಏಕೋ ರಥಸಹಸ್ರಾಣಾಂ ನಿಹಂತುಂ ವಾಸವೀ ರಣೇ ॥ ೧೬ ॥

ಕಪಿಪ್ರವರಧ್ವಜನಾದ ಅರ್ಜುನನೊಬ್ಬನೇ ಸಹಸ್ರರಥರನ್ನು ಕೊಲ್ಲಲು ರಣರಂಗದಲ್ಲಿ ಸಂಶಪ್ತಕರ ಕಡೆಗೆ ಬಂದನು.

ಸಾ ಹಿ ದುರ್ಯೋಧನಸ್ಯಾಸೀನ್ಮತಿಃ ಕರ್ಣಸ್ಯ ಚೋಭಯೋಃ ।
ಅರ್ಜುನಸ್ಯ ವಧೋಪಾಯೇ ತೇನ ದ್ವೈಧಮಕಲ್ಪಯತ್ ॥ ೧೭ ॥

ದುರ್ಯೋಧನ ಮತ್ತು ಕರ್ಣರ ಚಿಂತನೆಯು ಅರ್ಜುನನನ್ನು ಕೊಲ್ಲುವ ವಿಷಯದಲ್ಲಿ ಅರ್ಜುನನಿಗೆ ಇಂತಹ ಇಬ್ಬಗೆಯನ್ನು ಕಲ್ಪಿಸಬೇಕೆಂಬುದಾಗಿ ಇದ್ದಿತು. ಆದ್ದರಿಂದ ಧರ್ಮರಾಜನಿಗೆ ತನ್ನ ಸಂಕಟ ಕಾಲದಲ್ಲಿಯೂ ಅರ್ಜುನನು ತನ್ನ ಬಳಿಗೆ

ಬರಲಿಲ್ಲವೆಂಬ ಭಾವನೆಯನ್ನು ಉಂಟುಮಾಡುವುದಕ್ಕಾಗಿ ಅರ್ಜುನನಿಗೆ ಇಂತಹ ಪರಿಸ್ಥಿತಿಯನ್ನು ಉಂಟುಮಾಡಿದರು.

ಸ ತು ಸಂವರ್ತಯಾಮಾಸ ದ್ವೈಧೀಭಾವೇನ ಪಾಂಡವಃ ।
ವಧೇ ಸಂಶಪ್ತಕಾಖ್ಯಾನಾಮಕರೋತ್ ತಾಂ ಮೃಷಾ ತದಾ ॥ ೧೮ ॥

ಪಾಂಡವನಾದ ಅರ್ಜುನನು ಆ ದ್ವೈಧೀಭಾವದಿಂದ ಹೊರಗೆ ಬಂದು, ಸಂಶಪ್ತಕರ ವಧೆಯನ್ನು ಮಾಡುವುದಾಗಿಯೇ ನಿಶ್ಚಯಿಸಿ, ಕರ್ಣ-ದುರ್ಯೋಧನರ ಆ ಆಸೆಯನ್ನು ವ್ಯರ್ಥವನ್ನಾಗಿ ಮಾಡಿದನು.

ತತಃ ಶರಸಹಸ್ರಾಣಿ ಪ್ರಯುತಾನ್ಯರ್ಬುದಾನಿ ಚ ।
ವ್ಯಸೃಜನ್ನರ್ಜುನೇ ಕ್ರುದ್ಧಾಃ ಸಂಶಪ್ತಕರಥರ್ಷಭಾಃ ॥ ೧೯ ॥

ಅನಂತರ ಸಂಶಪ್ತಕರ ಶ್ರೇಷ್ಠ ರಥರು ಕ್ರುದ್ಧರಾಗಿ ಅರ್ಜುನನ ಮೇಲೆ ಹತ್ತಾರು ಸಾವಿರ ಬಾಣಗಳನ್ನು ಪ್ರಯೋಗಿಸಿದರು.

ತತೋ ನೈವಾರ್ಜುನೋಪೇಂದ್ರೌ ನ ರಥಃ ಸಾಶ್ವಕೇತನಃ ।
ದೃಶ್ಯತೇ ಶರವರ್ಷೇಣ ಪ್ರಬಲೇನ ಸಮಾವೃತಃ ॥ ೨೦ ॥

ಆಗ ಪ್ರಬಲವಾದ ಬಾಣಗಳ ಮಳೆಯಿಂದ ಮುಚ್ಚಲ್ಪಟ್ಟು ಅರ್ಜುನನಾಗಲೀ, ಕೃಷ್ಣನಾಗಲೀ, ಅಶ್ವ-ಧ್ವಜಗಳಿಂದ ಕೂಡಿದ ಅರ್ಜುನನ ರಥವಾಗಲೀ ಕಾಣಲಿಲ್ಲ.

ತತಸ್ತೇನ ಶರೌಘೇಣ ಮಹತಾ ಚ ಸಮಾವೃತಃ ।
ನಾಶಕನ್ನಾಮ ಬೀಭತ್ಸುರಮಿತ್ರಾನ್ ಪ್ರತಿಬಾಧಿತುಮ್ ॥ ೨೧ ॥

ಆಗ ಆ ದೊಡ್ಡ ಬಾಣಗಳ ಮಳೆಯಿಂದ ಮುಚ್ಚಲ್ಪಟ್ಟ ಅರ್ಜುನನು ಶತ್ರುಗಳನ್ನು ಬಾಧಿಸಲು ಸಮರ್ಥನಾಗಲಿಲ್ಲ.

ಯದಾ ಮೋಹಮಿವ ಪ್ರಾಪ್ತಃ ಪ್ರಸ್ವಿನ್ನಶ್ಚಾಚ್ಯುತೋಽಭವತ್ ।
ತತೋ ಜನಾರ್ದನಃ ಪಾರ್ಥಂ ಪ್ರತ್ಯುವಾಚ ಹಸನ್ನಿವ ॥ ೨೨ ॥

ವಜ್ರಮಸ್ತ್ರಂ ತು ಸಂಧಾಯ ಜಹಿ ಸಂಶಪ್ತಕಾನಿಹ ।
ತತಸ್ತಾನಹಿತಾನ್ ಪಾರ್ಥೋ ವಜ್ರೇಣಾಸ್ತ್ರೇಣ ಜಘ್ನಿವಾನ್ ॥ ೨೩ ॥

ಮೋಹಾವಸ್ಥೆಯನ್ನು ಹೊಂದಿದವನಂತೆ ಅವಸ್ಥೆಯನ್ನು ಹೊಂದಿ, ಅವನು ಬೆವರುತ್ತಿದ್ದಾಗ ಜನಾರ್ದನನಾದ ಕೃಷ್ಣನು ಅವನನ್ನು ಕುರಿತು ನಗುತ್ತಾ, ವಜ್ರಾಸ್ತ್ರವನ್ನು ಪ್ರಯೋಗಿಸಿ, ಈಗ ಈ ಸಂಶಪ್ತಕರನ್ನು ನಾಶಮಾಡು ಎಂದು ಹೇಳಿದನು. ಆಗ ಅರ್ಜುನನು ಆ ಶತ್ರುಗಳನ್ನು ವಜ್ರಾಸ್ತ್ರದಿಂದ ಸಂಹರಿಸಿದನು.

ಶತಶಃ ಪಾಣಯಃ ಛಿನ್ನಾಃ ಸೇಷುಜ್ಯಾತಳಕಾರ್ಮುಕಾಃ ।
ಕೇತನಾನಿ ಹಯಾಃ ಸೂತಾ ರಥಿನಶ್ಚಾಪತನ್ ಕ್ಷಿತೌ ॥ ೨೪ ॥

ಧನುಸ್ಸು, ಹೆದೆಗಳನ್ನು ಮತ್ತು ಬಾಣಗಳನ್ನು ಹಿಡಿದ ನೂರಾರು ಹಸ್ತಗಳು ಕತ್ತರಿಸಲ್ಪಟ್ಟವು. ಧ್ವಜಗಳು, ಅಶ್ವಗಳು, ಸಾರಥಿಗಳು ಮತ್ತು ರಥಿಕರು ಭೂಮಿಯ ಮೇಲೆ ಬಿದ್ದರು.

ದ್ರುಮಾಚಲಾಗ್ರಾಂಬುಧರೈಃ ಸಮರೂಪಾಃ ಸುಕಲ್ಪಿತಾಃ ।
ಹತಾರೋಹಾಃ ಕ್ಷಿತೌ ಪೇತುರ್ದ್ವಿಪಾಃ ಪಾರ್ಥಶರಾಹತಾಃ ॥ ೨೫ ॥

ವೃಕ್ಷಗಳಿಗೆ, ಪರ್ವತಗಳಿಗೆ, ಮೋಡಗಳಿಗೆ ಸಮಾನವಾದ ರೂಪವನ್ನು ಹೊಂದಿದ್ದ, ಚೆನ್ನಾಗಿ ಅಣಿಗೊಳಿಸಿದ ಗಜಗಳು ಅರ್ಜುನನ ಬಾಣಗಳಿಂದ ಹೊಡೆಯಲ್ಪಟ್ಟು ಗಜಾರೋಹಿಗಳ ಸಹಿತವಾಗಿ ಬಿದ್ದವು.

ವಿಪ್ರವಿದ್ಧಕಶಾವಲ್ಗಾಃ ಛಿನ್ನಭಾಂಡಪ್ರಕೀರ್ಣಕಾಃ ।
ಸಾರೋಹಾಸ್ತುರಗಾಃ ಪೇತುರ್ಮಥಿತಾಃ ಪಾರ್ಥಮಾರ್ಗಣೈಃ ॥ ೨೬ ॥

ಅರ್ಜುನನ ಬಾಣಗಳಿಂದ ಮರ್ದಿಸಲ್ಪಟ್ಟ ಅಶ್ವಗಳು ಚಾವಟಿಗಳನ್ನು ಮತ್ತು ಕೋಲುಗಳನ್ನು ಎಸೆದ, ಕತ್ತರಿಸಲ್ಪಟ್ಟ ಆಭರಣಗಳನ್ನು ಮತ್ತು ಜೀನುಗಳನ್ನುಳ್ಳ ಅಶ್ವಾರೋಹಿಗಳ ಸಹಿತವಾಗಿ ನೆಲದ ಮೇಲೆ ಬಿದ್ದವು.

ಸರ್ಷ್ಟಿಚರ್ಮಾಸಿನಖರಾಃ ಸಮುದ್ಗರಪರಶ್ವಥಾಃ ।
ಸಂಛಿನ್ನಾ ಬಾಹವಃ ಪೇತುರ್ಯೋಧಾನಾಂ ಭಲ್ಲೈಃ ಕಿರೀಟಿನಾ ॥ ೨೭ ॥

ಅರ್ಜುನನಿಂದ ಭಲ್ಲಗಳಿಂದ ಕತ್ತರಿಸಲ್ಪಟ್ಟು ಋಷ್ಟಿ-ಚರ್ಮ-ಖಡ್ಗ-ನಖರಗಳನ್ನು ಹಿಡಿದು, ಮುದ್ಗರ-ಪಥಶ್ವರಗಳನ್ನು ಹಿಡಿದ ಯೋಧರ ಬಾಹುಗಳು ಭೂಮಿಯ ಮೇಲೆ ಬಿದ್ದವು.

ಬಾಲಾದಿತ್ಯಾಂಬುಜೇಂದೂನಾಂ ತುಲ್ಯರೂಪಾಣಿ ಮಾರಿಷ ।
ಸಂಛಿನ್ನಾನ್ಯರ್ಜುನಶರೈಃ ಶಿರಾಂಸ್ಯುರ್ವ್ಯಾಂ ಪ್ರಪೇದಿರೇ ॥ ೨೮ ॥

ಎಲೈ ಪೂಜ್ಯನೇ, ಎಳೆಯ ಸೂರ್ಯನಿಗೆ, ಪದ್ಮಗಳಿಗೆ, ಚಂದ್ರನಿಗೆ ಸಮಾನವಾದ ರೂಪವನ್ನು ಹೊಂದಿದ ಶಿರಸ್ಸುಗಳು ಅರ್ಜುನನ ಬಾಣಗಳಿಂದ ಕತ್ತರಿಸಲ್ಪಟ್ಟು ಭೂಮಿಯ ಮೇಲೆ ಬಿದ್ದವು.

ಜಜ್ವಾಲಾಲಂಕೃತೈಃ ಸೈನ್ಯೈಃ ಪತ್ರಿಭಿಃ ಪ್ರಾಣಭೋಜನೈಃ ।
ನಾನಾಲಿಂಗೈಃ ಸದಾऽಮಿತ್ರಾನ್ ಕ್ರುದ್ಧೋ ನಿಘ್ನತಿ ಫಲ್ಗುನೇ ।
ಶಿರಾಂಸಿ ವಿಚಕರ್ತಾऽಥ ಯೋಧಾನಾಂ ಹಿ ಸಹಸ್ರಶಃ ॥ ೨೯ ॥

ಕ್ರೋಧಗೊಂಡ ಅರ್ಜುನನು ಅನೇಕ ವಿಧವಾದ ಪ್ರಾಣಗಳನ್ನು ಹೀರುವ ಬಾಣಗಳಿಂದ ಶತ್ರುಗಳನ್ನು ಕೊಲ್ಲುತ್ತಿರಲು ಅಲಂಕೃತವಾದ ಶತ್ರುಸೈನ್ಯವು ಹೊತ್ತಿ ಉರಿಯಿತು. ಅನಂತರ ಸಹಸ್ರ ಸಂಖ್ಯೆಯಲ್ಲಿ ಅರ್ಜುನನು ಯೋಧರ ಶಿರಸ್ಸುಗಳನ್ನು ಕತ್ತರಿಸಿದನು.

ಕ್ಷೋಭಯಂತಂ ತದಾ ಸೇನಾಂ ದ್ವಿರದಂ ನಳಿನೀಮಿವ ।
ಧನಂಜಯಂ ಭೂತಗಣಾಃ ಸಾಧು ಸಾಧ್ವಿತ್ಯಪೂಜಯನ್ ॥ ೩೦ ॥

ಆನೆಯು ಪದ್ಮಸರೋವರವನ್ನು ಕಲಕಿದಂತೆ ಕೌರವಸೇನೆಯನ್ನು ಕ್ಷೋಭೆಗೊಳಿಸುತ್ತಿದ್ದ ಅರ್ಜುನನನ್ನು ಕುರಿತು ಭೂತಗಣಗಳು 'ಸಾಧು-ಸಾಧು' ಎಂದು ಹೇಳಿ ಅವನನ್ನು ಪೂಜಿಸಿದವು.

ದೃಷ್ಟ್ವಾ ತು ಕರ್ಮ ಪಾರ್ಥಸ್ಯ ವಾಸವಸ್ಯೇವ ಮಾಧವಃ ।
ವಿಸ್ಮಯಂ ಪರಮಂ ಗತ್ವಾ ತಳಮಾಹತ್ಯ ಪೂಜಯತ್ ॥ ೩೧ ॥

ಕೃಷ್ಣನು ಇಂದ್ರನ ಕರ್ಮದಂತಿರುವ ಅರ್ಜುನನ ಕರ್ಮವನ್ನು ನೋಡಿ ಬಹಳ ವಿಸ್ಮಯಗೊಂಡು ಚಪ್ಪಾಳೆಯನ್ನು ತಟ್ಟಿ ಅರ್ಜುನನನ್ನು ಪೂಜಿಸಿದನು.

ಕರ್ಮೈತತ್ ಪಾರ್ಥ ಶಕ್ರೇಣ ಯಮೇನ ಧನದೇನ ಚ ।
ದುಷ್ಕರಂ ಸಮರೇ ಯತ್ತೇ ಕೃತಮದ್ಯೇತಿ ಮೇ ಮತಿಃ ॥ ೩೨ ॥

ಎಲೈ ಅರ್ಜುನನೇ, ಈ ದಿನ ಯುದ್ಧದಲ್ಲಿ ನೀನು ಮಾಡಿದ ಕರ್ಮವನ್ನು ಇಂದ್ರನಾಗಲೀ, ಯಮನಾಗಲೀ, ಕುಬೇರನಾಗಲೀ, ವರುಣನಾಗಲೀ ಮಾಡಲು ಸಾಧ್ಯವಿಲ್ಲ ಎಂದು ನನ್ನ ಅಭಿಪ್ರಾಯ.

ಯುಗಪಚ್ಚೈವ ಸಂಗ್ರಾಮೇ ಶತಶೋಽಥ ಸಹಸ್ರಶಃ ।
ಪತಿತಾ ಏವ ಮೇ ದೃಷ್ಟಾಃ ಸಂಶಪ್ತಕಮಹಾರಥಾಃ ॥ ೩೩ ॥

ಸಂಶಪ್ತಕರ ಮಹಾರಥರು ನೂರರ ಸಂಖ್ಯೆಯಲ್ಲಿ, ಸಾವಿರದ ಸಂಖ್ಯೆಯಲ್ಲಿ ಯುದ್ಧದಲ್ಲಿ ಒಂದೇ ಬಾರಿಗೆ ಕತ್ತರಿಸಲ್ಪಟ್ಟು ಬೀಳುವುದನ್ನು ನಾನು ನೋಡಿದೆನು (ಎಂದು ಹೇಳಿದನು).

ತತಃ ಸಂಶಪ್ತಕಾನ್ ಹತ್ವಾ ಭೂಯಿಷ್ಠಂ ಯೇ ವ್ಯವಸ್ಥಿತಾಃ ।
ಭಗದತ್ತಾಯ ಯಾಹೀತಿ ವಾಸುದೇವಮಚೋದಯತ್ ॥ ೩೪ ॥

ಅನಂತರ ರಣರಂಗದಲ್ಲಿ ನಿಂತಿದ್ದ ಸಂಶಪ್ತಕರ ಬಹುಭಾಗವನ್ನು ಕೊಂದು ಅರ್ಜುನನು ಭಗದತ್ತನ ಕಡೆಗೆ ಹೋಗು ಎಂದು ಕೃಷ್ಣನನ್ನು ಪ್ರೇರಿಸಿದನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಷಡ್ವಿಂಶೋಽಧ್ಯಾಯಃ ॥

॥ ಸಂಶಪ್ತಕವಧಪರ್ವಣಿ ಏಕಾದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಇಪ್ಪತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ತೇಳನೆಯ ಅಧ್ಯಾಯ

ಭಗದತ್ತ ಮತ್ತು ಅರ್ಜುನರ ಸಂಘರ್ಷ

ಸಂಜಯಃ

ಯಿಯಾಸತಃ ತತಃ ಕೃಷ್ಣಃ ಪಾರ್ಥಸ್ಯಾಶ್ವಾನ್ ಮನೋಜವಾನ್ ।
ಅಪ್ಯೈಷೀದ್ದೇಮಸಂಛನ್ನಾನ್ ದ್ರೋಣಾನೀಕಾಯ ಪಾಂಡರಾನ್ ॥ ೧ ॥

ಸಂಜಯ– ಅಲ್ಲಿಂದ ಹೊರಡಲು ಬಯಸಿದ ಅರ್ಜುನನ ಮನೋವೇಗವುಳ್ಳ, ಸುವರ್ಣಾಭರಣಭೂಷಿತವಾದ ಶ್ವೇತಾಶ್ವಗಳನ್ನು ಕೃಷ್ಣನು ದ್ರೋಣರ ಸೈನ್ಯದ ಕಡೆಗೆ ಪ್ರಚೋದಿಸಿದನು.

ತಂ ಪ್ರಯಾಂತಂ ಕುರುಶ್ರೇಷ್ಠ ಸ್ತ್ರಾಂಸ್ತ್ರಾತುಂ ದ್ರೋಣತಾಪಿತಾನ್ ।
ಸುಶರ್ಮಾ ಭ್ರಾತೃಭಿಃ ಸಾರ್ಧಂ ಯುದ್ಧಾರ್ಥೀ ಪೃಷ್ಠತೋಽನ್ವಯಾತ್ ।
ತತಃ ಶ್ವೇತಹಯಃ ಕೃಷ್ಣಮಬ್ರವೀತ್ ಸಮಿತಿಂಜಯಃ ॥ ೨ ॥

ಎಲೈ ಕುರುಶ್ರೇಷ್ಠನೇ, ದ್ರೋಣರಿಂದ ಪೀಡಿಸಲ್ಪಟ್ಟ ತನ್ನವರನ್ನು ರಕ್ಷಿಸಲು ಅರ್ಜುನನು ಹೋಗುತ್ತಿದ್ದಾಗ, ಸುಶರ್ಮನು ತನ್ನ ಸಹೋದರರ ಜೊತೆಯಲ್ಲಿ ಯುದ್ಧಾರ್ಥಿಯಾಗಿ ಅವನನ್ನು ಹಿಂಬಾಲಿಸಿದನು. ಆಗ ಶ್ವೇತಾಶ್ವನೂ ಯುದ್ಧದಲ್ಲಿ ಜಯಶೀಲನೂ ಆದ ಅರ್ಜುನನು ಕೃಷ್ಣನನ್ನು ಕುರಿತು ಮಾತನಾಡಿದನು.

ಏಷ ಮಾಂ ಭ್ರಾತೃಭಿಃ ಸಾರ್ಧಂ ಸುಶರ್ಮಾऽऽಹ್ವಯತೇऽಚ್ಯುತ ।
ದೀರ್ಯತೇ ಚೋತ್ತರೇಣೈವ ಸೈನ್ಯಂ ನಃ ಶತ್ರುಸೂದನ ॥ ೩ ॥

ಎಲೈ ಅಚ್ಯುತನೇ, ಈ ಸುಶರ್ಮನು ಸಹೋದರರ ಜೊತೆಯಲ್ಲಿ ನನ್ನನ್ನು ಯುದ್ಧಕ್ಕೆ ಆಹ್ವಾನಿಸುತ್ತಿದ್ದಾನೆ. ಎಲೈ ಶತ್ರುಸೂದನನೇ, ಉತ್ತರ ದಿಕ್ಕಿನಲ್ಲಿ ನನ್ನ ಸೈನ್ಯವು ಭಗ್ನವಾಗುತ್ತಿದೆ.

ದ್ವೈಧೀಭೂತಂ ಮನೋ ಮೇऽದ್ಯ ಕೃತಂ ಸಂಶಪ್ತಕೈರಿದಮ್ ॥ ೪ ॥

ಕಿನ್ನು ಸಂಶಪ್ತಕಾನ್ ಹನ್ಮಿ ಸ್ವಾನ್ ವಾ ರಕ್ಷಾಮಿ ಚಾರ್ದಿತಾನ್ ।
ಇತಿ ವೇತ್ಥ ಹೃದಿ ದ್ವೈಧಂ ತತ್ರ ಕಿಂ ಸುಕೃತಂ ಭವೇತ್ ॥ ೫ ॥

ನನ್ನ ಮನಸ್ಸನ್ನು ಈ ದಿನ ಸಂಶಪ್ತಕರು ಹೀಗೆ ಎರಡು ಭಾಗವನ್ನಾಗಿ ಮಾಡಿದ್ದಾರೆ. ಸಂಶಪ್ತಕರನ್ನು ಕೊಲ್ಲಲೇ ಅಥವಾ ಪೀಡಿತರಾದ ನನ್ನವರನ್ನು ರಕ್ಷಿಸಲೇ ಎಂಬ ನನ್ನ ಮನಸ್ಸಿನಲ್ಲಿರುವ ತೊಳಲಾಟವನ್ನು ನೀನು ತಿಳಿದಿದ್ದೀಯೆ. ಏನು ಮಾಡಿದರೆ ಒಳ್ಳೆಯದಾದೀತು?

ಸಂಜಯಃ

ಏವಮುಕ್ತಸ್ತು ದಾಶಾರ್ಹಃ ಸ್ಯಂದನಂ ಪರ್ಯವರ್ತಯತ್ ।
ಯೇನ ತ್ರಿಗರ್ತಾಧಿಪತಿಃ ಪಾಂಡವಂ ಪ್ರತಿ ಚಾಹ್ವಯತ್ ॥ ೬ ॥

ತತೋಽರ್ಜುನಃ ಸುಶರ್ಮಾಣಂ ವಿದ್ಧ್ವಾ ಸಪ್ತಭಿರಾಶುಗೈಃ ।
ತಸ್ಯ ಧ್ವಜಂ ಧನುಶ್ಚೈವ ಕ್ಷುರಾಭ್ಯಾಂ ಸಮಕೃಂತತ ॥ ೭ ॥

ಸಂಜಯ– ಹೀಗೆ ಹೇಳಲ್ಪಟ್ಟ ಕೃಷ್ಣನು ತ್ರಿಗರ್ತಾಧಿಪತಿಯಾದ ಸುಶರ್ಮನು ಅರ್ಜುನನನ್ನು ಆಹ್ವಾನಿಸಿದ ಕಡೆಗೆ ರಥವನ್ನು ತಿರುಗಿಸಿದನು. ಅನಂತರ ಅರ್ಜುನನು ಸುಶರ್ಮನನ್ನು ವೇಗಶಾಲಿಗಳಾದ ಏಳು ಬಾಣಗಳಿಂದ ಹೊಡೆದು, ಅವನ ಧ್ವಜವನ್ನು ಮತ್ತು ಧನುಸ್ಸನ್ನು ಎರಡು ಕ್ಷುರಗಳಿಂದ ಕತ್ತರಿಸಿದನು.

ತತಃ ತ್ರಿಗರ್ತಾಧಿಪತೇಃ ಭ್ರಾತರಂ ಷಡ್ಭಿರಾಯಸೈಃ ।
ಸಾಶ್ವಂ ಸಸೂತಂ ತ್ವರಿತಃ ಪ್ರೈಷಯದ್ವೈ ಯಮಕ್ಷಯಮ್ ॥ ೮ ॥

ಅನಂತರ ತ್ರಿಗರ್ತಾಧಿಪತಿಯಾದ ಸುಶರ್ಮನ ಸಹೋದರನನ್ನು ಆರು ಕಬ್ಬಿಣದ ಬಾಣಗಳಿಂದ ಹೊಡೆದು, ಅಶ್ವ-ಸಾರಥಿ-ಧ್ವಜಸಹಿತನಾದ ಅವನನ್ನು ಶೀಘ್ರವಾಗಿ ಯಮಲೋಕಕ್ಕೆ ಕಳುಹಿಸಿದನು.

ನಿರ್ಮುಕ್ತೋರಗಸಂಕಾಶಾಂ ಸುಶರ್ಮಾ ಶಕ್ತಿಮಾಯಸೀಮ್ ।
ಚಿಕ್ಷೇಪಾರ್ಜುನಮುದ್ದಿಶ್ಯ ವಾಸುದೇವಂ ಚ ತೋಮರಮ್ ॥ ೯ ॥

ಸುಶರ್ಮನು ಪೊರೆಯನ್ನು ಕಳಚಿದ ಸರ್ಪದಂತಿರುವ ಕಬ್ಬಿಣದ ಒಂದು ಶಕ್ತ್ಯಾಯುಧವನ್ನು ಅರ್ಜುನನ ಮೇಲೆ ಎಸೆದು ಕೃಷ್ಣನನ್ನು ಉದ್ದೇಶಿಸಿ ತೋಮರವನ್ನು ಎಸೆದನು.

ಶಕ್ತಿಂ ತ್ರಿಭಿಃ ಶರೈಶ್ಛಿತ್ತ್ವಾ ತೋಮರಂ ತ್ರಿಭರರ್ಜುನಃ ।
ಸುಶರ್ಮಾಣಂ ಶರವ್ರಾತೈರ್ಮೋಹಯಿತ್ವಾ ನ್ಯವರ್ತತ ॥ ೧೦ ॥

ಅರ್ಜುನನು ಶಕ್ತಿಯನ್ನು ಮೂರು ಬಾಣಗಳಿಂದಲೂ, ತೋಮರವನ್ನೂ ಮೂರು ಬಾಣಗಳಿಂದಲೂ ಕತ್ತರಿಸಿ, ಬಾಣಗಳ ಸಮೂಹದಿಂದ ಸುಶರ್ಮನನ್ನು ಮೋಹಗೊಳಿಸಿ ಹಿಂದಿರುಗಿದನು.

ತಂ ವಾಸವಮಿವಾಯಾಂತಂ ವಾಸವಿಂ ಭೂರಿವರ್ಷಿಣಮ್ ।
ರಾಜಂಸ್ತಾವಕಸೈನ್ಯಾನಾಂ ನೋಗ್ರಂ ಕಶ್ಚಿನ್ನ್ಯವಾರಯತ್ ॥ ೧೧ ॥

ಎಲೈ ರಾಜನೇ, ಇಂದ್ರನಂತೆ ಬಾಣದ ಮಳೆಯನ್ನು ಸುರಿಸುತ್ತಾ ಬರುತ್ತಿರುವ ಉಗ್ರನಾದ ಅರ್ಜುನನನ್ನು ನಿನ್ನ ಸೈನ್ಯದಲ್ಲಿ ಯಾವನೂ ತಡೆಯಲಿಲ್ಲ.

ತತೋ ಧನಂಜಯೋ ಬಾಣೈಃ ತ್ವದೀಯಾನ್ ರಥಸತ್ತಮಾನ್ ।
ಪ್ರಾಯಾದ್ ವಿನಿಘ್ನನ್ ಕೌರವ್ಯಾನ್ ದಹನ್ ಕಕ್ಷಮಿವಾನಲಃ ॥೧೨॥

ಆಗ ಅರ್ಜುನನು ತನ್ನ ಬಾಣಗಳಿಂದ ನಿನ್ನವರಾದ ರಥಶ್ರೇಷ್ಠರನ್ನು ಕೊಲ್ಲುತ್ತಾ, ಹುಲ್ಲುಗಾವಲನ್ನು ಅಗ್ನಿಯು ಸುಡುವಂತೆ ಕೌರವಸೈನ್ಯವನ್ನು ಸುಡುತ್ತಾ ಮುಂದೆ ಸಾಗಿದನು.

ತಸ್ಯ ವೇಗಮಸಹ್ಯಂ ತು ಕುಂತೀಪುತ್ರಸ್ಯ ಧೀಮತಃ ।
ನಾಶಕ್ನುವಂಸ್ತೇ ಸಂಸೋಢುಂ ಸ್ಪರ್ಶಮಗ್ನೇರಿವ ಪ್ರಜಾಃ ॥ ೧೩ ॥

ಮೇಧಾವಿಯಾದ ಕುಂತೀಪುತ್ರನ ಅಗ್ನಿಸ್ಪರ್ಶದಂತಿದ್ದ ವೇಗವನ್ನು ಸಹಿಸಲು ಯಾವ ಯೋಧರಿಗೂ ಸಾಧ್ಯವಾಗಲಿಲ್ಲ.

ಸಂವೇಷ್ಟಯನ್ನನೀಕಾನಿ ಶರವರ್ಷೇಣ ಪಾಂಡವಃ ।
ಸುಪರ್ಣ ಇವ ನಾಗೇಂದ್ರಮಾಯಾತ್ ಪ್ರಾಗ್ಜ್ಯೋತಿಷಂ ಪ್ರತಿ॥ ೧೪ ॥

ಅರ್ಜುನನು ತನ್ನ ಬಾಣಗಳ ಮಳೆಯಿಂದ ನಿನ್ನ ಸೈನ್ಯಗಳನ್ನು ಗರುಡನು ಸರ್ಪಗಳನ್ನು ಮುದುರುವಂತೆ ಚಾಪೆಯಂತೆ ಸುತ್ತುತ್ತಾ ಪ್ರಾಗ್ಜ್ಯೋತಿಷನ ಕಡೆಗೆ ಬಂದನು.

ನಾಸೀತ್ ತಥಾಗತೇ ಜಿಷ್ಣೌ ಭಾರತಾನಾಮನಾಮಯಮ್ ।
ಸ್ವೇಷಾಂ ಕ್ಷೇಮಕರೇ ಸಂಖ್ಯೇ ದ್ವಿಷತಾಮಪವರ್ಧನೇ ॥ ೧೫ ॥

ತಥೈವ ತವ ಪುತ್ರಸ್ಯ ರಾಜನ್ ದುರ್ಯೋತದೇವಿನಃ ।
ಕೃತೇ ಕ್ಷತ್ರಿಯನಾಶಾಯ ಧನುರಾದಾಯ ಚಾರ್ಜುನಃ ॥ ೧೬ ॥

ಎಲೈ ರಾಜನೇ, ಕೆಟ್ಟ ದ್ಯೂತವನ್ನು ಆಡಿದ ನಿನ್ನ ಪುತ್ರನ ನಿಮಿತ್ತದಿಂದಾಗಿ ಧನುಸ್ಸನ್ನು ತೆಗೆದುಕೊಂಡು ಕ್ಷತ್ರಿಯ ನಾಶವನ್ನು ಮಾಡಲು ತನ್ನವರಿಗೆ ಕ್ಷೇಮವನ್ನೂ, ಶತ್ರುಗಳಿಗೆ ಅಪಚಾರವನ್ನೂ ಮಾಡಲು ಅರ್ಜುನನು ಹಾಗೆ ಮುಂದೆ ಬರುತ್ತಿರಲು (ನಿನ್ನ) ಭಾರತ ಸೈನ್ಯದಲ್ಲಿ ಯಾರಿಗೂ ಕ್ಷೇಮವಿರಲಿಲ್ಲ.

ತತೋ ವಿಕ್ಷೋಭ್ಯಮಾಣಾ ಸಾ ಪುತ್ರಸ್ಯ ತವ ವಾಹಿನೀ ।
ವ್ಯದೀರ್ಯತ ತದಾ ರಾಜನ್ ನೌರಿವಾಸಾದ್ಯ ಪರ್ವತಮ್ ॥ ೧೭ ॥

ಆಗ ಅರ್ಜುನನಿಂದ ಕ್ಷೋಭೆಗೆ ಒಳಗಾದ ನಿನ್ನ ಪುತ್ರನ ಸೈನ್ಯವು ನೌಕೆಯು ಪರ್ವತಕ್ಕೆ ಹೊಡೆದು ಭಗ್ನವಾದಂತೆ ಭಗ್ನವಾಯಿತು.

ತತೋ ರಥಸಹಸ್ರಾಣಿ ನ್ಯವರ್ತಂತ ಧನುಷ್ಮತಾಮ್ ।
ಮರಣಾಯ ಮತಿಂ ಕೃತ್ವಾ ಆತ್ಮನೋ ವಾऽರ್ಜುನಸ್ಯ ವಾ ॥ ೧೮ ॥

ಆಗ ಧನುರ್ಧಾರಿಗಳಾದ ಯೋಧರ ಹತ್ತು ಸಹಸ್ರ ರಥಗಳು ತಮ್ಮ ಅಥವಾ ಅರ್ಜುನನ ಮರಣವನ್ನು ನಿಶ್ಚಯಿಸಿ ಹಿಂದೆ ಬಂದವು.

ವ್ಯಪೇತಹೃದಯತ್ರಾಸಮ್ ಆಪದ್ಧರ್ಮಾರ್ಥಕೋವಿದಃ ।
ಆರ್ಚ್ಛತ್ ಪಾರ್ಥೋ ಗುರುಂ ಭಾರಂ ಸರ್ವಭಾರಸಹೋ ಯುಧಿ ॥

ಆಪದ್ಧರ್ಮಾರ್ಥ ಕೋವಿದನಾದ, ಯುದ್ಧದಲ್ಲಿ ಎಲ್ಲ ಭಾರವನ್ನು ಸಹಿಸುವ ಅರ್ಜುನನು ಅಂತಹ ಗುರುತರವಾದ ಭಾರವನ್ನು ನಿರ್ಭಯನಾಗಿ ಹೊತ್ತನು.

ಯಥಾ ನಲವನಂ ನಾಗಃ ಪ್ರಭಿನ್ನಃ ಷಷ್ಟಿಹಾಯನಃ ।
ಮೃದ್ನೀಯಾತ್ ತದ್ವದಾಯತ್ತಃ ಪಾರ್ಥೋऽಮೃದ್ನಾಚ್ಚಮೂಂ ತವ ॥೨೦॥

ಅರವತ್ತು ವರ್ಷ ಪ್ರಾಯದ ಮದಿಸಿದ ಆನೆಯು ಕಮಲವನವನ್ನು ತುಳಿದು ನಾಶ ಮಾಡುವಂತೆ ಅರ್ಜುನನು ಎಚ್ಚರಿಕೆಯಿಂದ (ಪ್ರಯತ್ನಪೂರ್ವಕವಾಗಿ) ನಿನ್ನ ಸೈನ್ಯವನ್ನು ಮರ್ದಿಸಿದನು.

ತಸ್ಮಿನ್ ಪ್ರಮಥಿತೇ ಸೈನ್ಯೇ ಭಗದತ್ತೋ ನರಾಧಿಪಃ ।
ತೇನ ನಾಗೇನ ಸಹಸಾ ಧನಂಜಯಮುಪಾದ್ರವತ್ ॥ ೨೧ ॥

ನಿನ್ನ ಸೈನ್ಯವು ಹಾಗೆ ಮರ್ದಿಸಲ್ಪಡುತ್ತಿರಲು ರಾಜನಾದ ಭಗದತ್ತನು ಆ ಸುಪ್ರತೀಕ ಗಜದ ಜೊತೆಯಲ್ಲಿ ತಕ್ಷಣ ಅರ್ಜುನನ ಕಡೆಗೆ ಧಾವಿಸಿದನು.

ತಂ ರಥೇನ ನರವ್ಯಾಘ್ರಃ ಪ್ರತ್ಯಗೃಹ್ಣಾದಥಾರ್ಜುನಃ ।
ಸ ಸನ್ನಿಪಾತಸ್ತುಮುಲೋ ಬಭೂವ ರಥನಾಗಯೋಃ ॥ ೨೨ ॥

ನರವ್ಯಾಘ್ರನಾದ ಅರ್ಜುನನು ಅವನನ್ನು ತನ್ನ ರಥದಲ್ಲಿ ನಿಂತು ಸ್ವೀಕರಿಸಿದನು. ರಥ ಮತ್ತು ಗಜಗಳ ನಡುವೆ ನಡೆದ ಆ ಸಂಘರ್ಷವು ಬಹಳ ತೀವ್ರವಾಗಿದ್ದಿತು.

ಕಲ್ಪಿತಾಭ್ಯಾಂ ಯಥಾಶಾಸ್ತ್ರಂ ರಥೇನ ಚ ಗಜೇನ ಚ ।
ಸಂಗ್ರಾಮೇ ಚೇರತುರ್ವೀರೌ ಭಗದತ್ತಧನಂಜಯೌ ॥ ೨೩ ॥

ಶಾಸ್ತ್ರೋಕ್ತ ರೀತಿಯಲ್ಲಿ ಸಿದ್ಧಪಡಿಸಿದ ಗಜ ಮತ್ತು ರಥಗಳಿಂದ ವೀರರಾದ ಭಗದತ್ತ ಮತ್ತು ಧನಂಜಯರು ರಣರಂಗದಲ್ಲಿ ಸಂಚರಿಸಿದರು.

ತತೋ ಜೀಮೂತಸಂಕಾಶಾನ್ನಾಗಾದಿಂದ್ರ ಇವಾಭಿಭೂಃ ।
ಅಭ್ಯವರ್ಷಚ್ಛರೌಘೇಣ ಭಗದತ್ತೋ ಧನಂಜಯಮ್ ॥ ೨೪ ॥

ಆಗ ಶತ್ರುಪರಿಭಾವಕನಾದ ಇಂದ್ರನಂತೆ ಭಗದತ್ತನು ಮೋಡದ ರಾಶಿಯಂತಿದ್ದ ಆ ಆನೆಯ ಮೇಲಿನಿಂದ ಧನಂಜಯನ ಮೇಲೆ ಬಾಣಗಳ ಸಮೂಹದ ಮಳೆಯನ್ನು ಕರೆದನು.

ತತಸ್ತು ಶರವರ್ಷಂ ತಂ ಶರವರ್ಷೇಣ ವಾಸವಿಃ ।
ಅಪ್ರಾಪ್ತಮೇವ ಚಿಚ್ಛೇದ ಭಗದತ್ತಸ್ಯ ವೀರ್ಯವಾನ್ ॥ ೨೫ ॥

ಆಗ ಪರಾಕ್ರಮಶಾಲಿಯಾದ ಅರ್ಜುನನು ಭಗದತ್ತನ ಶರವರ್ಷವನ್ನು ತನ್ನ ಬಳಿಗೆ ಬರುವುದಕ್ಕಿಂತ ಮುಂಚೆಯೇ ತನ್ನ ಶರವರ್ಷದಿಂದ ಕತ್ತರಿಸಿದನು.

ತತಃ ಪ್ರಾಗ್ಜ್ಯೋತಿಷೋ ರಾಜಾ ಶರವರ್ಷೇ ನಿವಾರಿತೇ ।
ಸಂರಕ್ತನಯನೋ ರೋಷಾತ್ ಪಾರ್ಥಂ ಪುನರವಾಕಿರತ್ ।
ಶರೈರ್ಜಘ್ನೇ ಮಹಾಬಾಹುಂ ಪಾರ್ಥಂ ಕೃಷ್ಣಂ ಚ ಮಾರಿಷ ॥ ೨೬ ॥

ಎಲೈ ಪೂಜ್ಯನೇ, ಪ್ರಾಗ್ಜ್ಯೋತಿಷರಾಜನು ತನ್ನ ಶರವರ್ಷವು ನಿವಾರಿಸಲ್ಪಡುತ್ತಿರಲು ಕೋಪದಿಂದ ಕೆಂಪಾದ ಕಣ್ಣುಳ್ಳವನಾಗಿ ಪುನಃ ತನ್ನ ಬಾಣಗಳನ್ನು ಸುರಿಸಿ ಮಹಾಬಾಹುವಾದ ಅರ್ಜುನನನ್ನು ಮತ್ತು ಕೃಷ್ಣನನ್ನು ಹೊಡೆದನು.

ಸ ತಥಾ ಶರವರ್ಷೇಣ ಪಾರ್ಥಂ ಸಮಭಿಹತ್ಯ ವೈ ।
ಚೋದಯಾಮಾಸ ತಂ ನಾಗಂ ವಧಾಯಾಚ್ಯುತಪಾರ್ಥಯೋಃ ॥೨೭॥

ಅವನು ಆ ರೀತಿಯಲ್ಲಿ ಶರವರ್ಷದಿಂದ ಅರ್ಜುನನನ್ನು ಹೊಡೆದು ಕೃಷ್ಣಾರ್ಜುನರ ವಧೆಗಾಗಿ ಆ ಗಜವನ್ನು ಪ್ರಚೋದಿಸಿದನು.

ತಮಾಪತಂತಂ ದ್ವಿರದಂ ದೃಷ್ಟ್ವಾ ಕ್ರುದ್ಧಮಿವಾಂತಕಮ್ ।
ಚಕ್ರೇಽಪಸವ್ಯಂ ತ್ವರಿತಂ ಸ್ಯಂದನೇನ ಜನಾರ್ದನಃ ॥ ೨೮ ॥

ಕೋಪಗೊಂಡ ಯಮನಂತೆ ತಮ್ಮ ಕಡೆಗೆ ಬರುತ್ತಿದ್ದ ಆ ಗಜವನ್ನು ನೋಡಿ ಜನಾರ್ದನನು ತನ್ನ ರಥವನ್ನು ತ್ವರಿತವಾಗಿ ಎಡಗಡೆಗೆ ತಿರುಗಿಸಿದನು.

ಸಂಪ್ರಾಪ್ತಮಪಿ ನೇಯೀಷ ಪರಾವೃತ್ತಂ ಮಹಾದ್ವಿಪಮ್ ।
ಸಾರೋಹಂ ಮೃತ್ಯುಸಾತ್ಕರ್ತುಂ ಸ್ಮರನ್ ಧರ್ಮಂ ಧನಂಜಯಃ ॥೨೯॥

ಹಿಂದಿರುಗಿ ತನ್ನ ಕಡೆಗೆ ಬರುತ್ತಿದ್ದರೂ ಅರ್ಜುನನು ಧರ್ಮವನ್ನು ಸ್ಮರಿಸಿ ಗಜಾರೋಹಿ ಸಹಿತವಾದ ಆ ಗಜವನ್ನು ವಧೆ ಮಾಡಲು ಬಯಸಲಿಲ್ಲ.

ಸ ತು ನಾಗೋ ದ್ವಿಪರಥಾನ್ ಹಯಾಂಶ್ಚಾರುಜ್ಯ ಮಾರಿಷ ।
ಪ್ರಾಹಿಣೋನ್ಮೃತ್ಯುಲೋಕಾಯ ತತಶ್ಚುಕ್ರೋಧ ಫಲ್ಗುನಃ ॥ ೩೦ ॥

ಎಲೈ ಪೂಜ್ಯನೇ, ಆ ಗಜವು ಗಜಗಳನ್ನೂ, ರಥಗಳನ್ನೂ ಮತ್ತು ಅಶ್ವಗಳನ್ನೂ ಮರ್ದಿಸಿ ಮೃತ್ಯುಲೋಕಕ್ಕೆ ಕಳುಹಿಸಿತು. ಆಗ ಅರ್ಜುನನು ಕೋಪಗೊಂಡನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಸಪ್ತವಿಂಶೋಽಧ್ಯಾಯಃ ॥

॥ ಸಂಶಪ್ತಕವಧಪರ್ವಣಿ ದ್ವಾದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಇಪ್ಪತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ತೆಂಟನೆಯ ಅಧ್ಯಾಯ

ಅರ್ಜುನನಿಂದ ಭಗದತ್ತನ ಮತ್ತು ಸುಪ್ರತೀಕದ ವಧೆ.

ಧೃತರಾಷ್ಟ್ರಃ

ತಥಾ ಕ್ರುದ್ಧಃ ಕಿಮಕರೋದ್ ಭಗದತ್ತಸ್ಯ ಪಾಂಡವಃ ।
ಪ್ರಾಗ್ಜ್ಯೋತಿಷೋ ವಾ ಪಾರ್ಥಸ್ಯ ತನ್ಮೇ ಶಂಸ ಯಥಾತಥಮ್ ॥ ೧ ॥

ಧೃತರಾಷ್ಟ್ರ– ಹಾಗೆ ಕೋಪಗೊಂಡ ಅರ್ಜುನನು ಭಗದತ್ತನಿಗೆ ಏನು ಮಾಡಿದನು? ಭಗದತ್ತನಾದರೂ ಅರ್ಜುನನಿಗೆ ಏನು ಮಾಡಿದನು? ಎಂಬುದನ್ನು ನನಗೆ ಸರಿಯಾಗಿ ಹೇಳು.

ಸಂಜಯಃ

ಪ್ರಾಗ್ಜ್ಯೋತಿಷೇಣ ಸಂಸಕ್ತಾವುಭೌ ದಾಶಾರ್ಹಪಾಂಡವೌ ।
ಮೃತ್ಯೋರಿವಾಂತಿಕಂ ಪ್ರಾಪ್ತೌ ಸರ್ವಭೂತಾನಿ ಮೇನಿರೇ ॥ ೨ ॥

ಸಂಜಯ– ಪ್ರಾಗ್ಜ್ಯೋತಿಷಾಧಿಪತಿಯಾದ ಭಗದತ್ತನಿಂದ ಕೃಷ್ಣಾರ್ಜುನರಿಬ್ಬರೂ ಸಂಸಕ್ತರಾದಾಗ ಕೃಷ್ಣಾರ್ಜುನರು ಮೃತ್ಯುವಿನ ಸಮೀಪಕ್ಕೆ ಪ್ರಾಪ್ತರಾದರು ಎಂದು ಎಲ್ಲ ಭೂತಗಳೂ ತಿಳಿದವು.

ಮಹತಾ ಶರವರ್ಷೇಣ ವವರ್ಷ ಬಲವಾನ್ ರಣೇ ।
ಭಗದತ್ತೋ ದ್ವಿಪಸ್ಕಂಧಾತ್ ಕೃಷ್ಣಯೋಃ ಸ್ಯಂದನಸ್ಥಯೋಃ ॥ ೩ ॥

ಬಲಿಷ್ಠನಾದ ಭಗದತ್ತನು ಆನೆಯ ಭುಜದಲ್ಲಿ ಕುಳಿತು, ರಥದಲ್ಲಿದ್ದ ಕೃಷ್ಣಾರ್ಜುನರ ಮೇಲೆ ಬಾಣಗಳ ದೊಡ್ಡ ಮಳೆಯನ್ನು ಸುರಿಸಿದನು.

ಅಥ ಕಾರ್ಷ್ಣಾಯಸೈರ್ಬಾಣೈಃ ಪೂರ್ಣಕಾರ್ಮುಕನಿಸೃತೈಃ ।
ಅವಿದ್ಧ್ಯದ್ ದೇವಕೀಪುತ್ರಂ ಹೇಮಪುಂಖೈಃ ಶಿಲಾಶಿತೈಃ ॥ ೪ ॥

ಅನಂತರ ಬಿಲ್ಲನ್ನು ಪೂರ್ಣವಾಗಿ ಎಳೆದು ಪ್ರಯೋಗಿಸಿದ, ಹೇಮಪುಂಖವನ್ನು ಹೊಂದಿದ, ಕಲ್ಲಿನಲ್ಲಿ ಸಾಣೆಯನ್ನು ಹಿಡಿದ ಕಬ್ಬಿಣದ ಬಾಣಗಳಿಂದ ದೇವಕೀಪುತ್ರನನ್ನು ಹೊಡೆದನು.

ಅಗ್ನಿಸ್ಪರ್ಶಸಮಾಸ್ತೀಕ್ಷ್ಣಾ ಭಗದತ್ತೇನ ಚೋದಿತಾಃ ।
ನಿರ್ಭಿದ್ಯ ದೇವಕೀಪುತ್ರಂ ತೇ ಸುಪುಂಖಾ ಯಯುಃ ಕ್ಷಿತಿಮ್ ॥ ೫ ॥

ಭಗದತ್ತನಿಂದ ಪ್ರೇರಿತವಾದ, ಅಗ್ನಿಸ್ಪರ್ಶಕ್ಕೆ ಸಮಾನವಾದ ತೀಕ್ಷ್ಣತೆಯುಳ್ಳ, ಭವ್ಯ ಪುಂಖವನ್ನು ಧರಿಸಿದ ಬಾಣಗಳು ದೇವಕೀಪುತ್ರನನ್ನು ಭೇದಿಸಿ ಭೂಮಿಯನ್ನು ಹೊಕ್ಕವು.

ತಸ್ಯ ಪಾರ್ಥೋ ಧನುಶ್ಚಿತ್ತ್ವಾ ಪರಿವಾಪಂ ನಿಹತ್ಯ ಚ ।
ಲಾಲಯನ್ನಿವ ರಾಜಾನಂ ಭಗದತ್ತಮಯೋಧಯತ್ ॥ ೬ ॥

ಅರ್ಜುನನು ಅವನ ಧನುಸ್ಸನ್ನು ಮತ್ತು ಬತ್ತಳಿಕೆಯನ್ನು ಕತ್ತರಿಸಿ, ಅವನನ್ನು ಲಾಲಿಸುವವನಂತೆ ಭಗದತ್ತನ ಜೊತೆಯಲ್ಲಿ ಯುದ್ಧವನ್ನು ಮಾಡಿದನು.

ಸೋಽರ್ಕರಶ್ಮಿನಿಭಾಂಸ್ತೀಕ್ಷ್ಣಾಂಸ್ತೋಮರಾಣಿ ಚತುರ್ದಶ ।
ಪ್ರೇಷಿತಾನಿ ಚ ಬೀಭತ್ಸುಃ ತ್ರಿಧೈಕೈಕಮಶಾತಯತ್ ॥ ೭ ॥

ಅರ್ಜುನನು ತನ್ನ ಮೇಲೆ ಪ್ರಯೋಗಿಸಿದ ಸೂರ್ಯನ ರಶ್ಮಿಯ ಕಾಂತಿಯನ್ನು ಹೊಂದಿದ ತೀಕ್ಷ್ಣವಾದ ಹದಿನಾಲ್ಕು ತೋಮರಗಳನ್ನು ಒಂದೊಂದನ್ನೂ ಮೂರು ಭಾಗವಾಗಿ ಕತ್ತರಿಸಿದನು.

ತತೋ ನಾಗಸ್ಯ ತದ್ ವರ್ಮ ವ್ಯಧಮತ್ ಪಾಕಶಾಸನಿಃ।
ಶರಜಾಲೇನ ಮಹತಾ ತದ್ ವ್ಯಶೀರ್ಯತ ಭೂತಲೇ ॥ ೮ ॥

ಅನಂತರ ಅರ್ಜುನನು ಬಾಣಗಳ ದೊಡ್ಡ ಸಮೂಹದಿಂದ ಸುಪ್ರತೀಕ ಗಜದ ಕವಚವನ್ನು ಹಾರಿಸಿದನು. ಕವಚವು ಭೂತಳದಲ್ಲಿ ಪುಡಿಪುಡಿಯಾಗಿ ಬಿದ್ದಿತು.

ವಿಶೀರ್ಣವರ್ಮಾ ಸ ಗಜಃ ತದಾ ಸುಭೃಶತಾಡಿತಾಃ ।
ಶರಜಾಲೇನ ಸ ಬಭೌ ವ್ಯಭ್ರಃ ಪರ್ವತರಾಡಿವ ॥ ೯ ॥

ಆಗ ಶರಸಮೂಹಗಳಿಂದ ಚೆನ್ನಾಗಿ ಹೊಡೆಯಲ್ಪಟ್ಟ ಕವಚ ರಹಿತವಾದ ಆ ಗಜವು ಮೋಡವು ಚದುರಿದ ಶ್ರೇಷ್ಠ ಪರ್ವತದಂತೆ ಶೋಭಿಸಿತು.

ತತಃ ಪ್ರಾಗ್ಜ್ಯೋತಿಷಃ ಶಕ್ತಿಂ ಹೇಮದಂಡಾಮಯಸ್ಕಯೀಮ್ ।
ವ್ಯಸೃಜದ್ ವಾಸುದೇವಾಯ ತ್ರಿಧಾ ತಾಮರ್ಜುನೋಽಚ್ಛಿನತ್ ॥ ೧೦ ॥

ಅನಂತರ ಪ್ರಾಗ್ಜ್ಯೋತಿಷನು ಹೇಮದಂಡವನ್ನು ಹೊಂದಿದ್ದ, ಅಯಸ್ಮಯವಾದ (ಕಬ್ಬಿಣದ) ಶಕ್ತಿಯನ್ನು ಕೃಷ್ಣನ ಮೇಲೆ ಎಸೆದನು. ಅರ್ಜುನನು ಅದನ್ನು ಮೂರು ಭಾಗವಾಗಿ ಕತ್ತರಿಸಿದನು.

ತತಶ್ಛತ್ರಂ ಧ್ವಜಂ ಚೈವ ಚಿತ್ತ್ವಾ ರಾಜ್ಞೋऽರ್ಜುನಃ ಶರೈಃ ।
ವಿವ್ಯಾಧ ದಶಭಿಸ್ತೂರ್ಣಮುತ್ಸ್ಮಯನ್ ಪರ್ವತಾಧಿಪಮ್ ॥ ೧೧ ॥

ಅರ್ಜುನನು ಪರ್ವತರಾಜನಾದ ಭಗದತ್ತನ ಛತ್ರ-ಧ್ವಜಗಳನ್ನು ಬಾಣದಿಂದ ಕತ್ತರಿಸಿ, ನಗುತ್ತಾ ಶೀಘ್ರವಾಗಿ ಅವನ ಮೇಲೆ ಹತ್ತು ಬಾಣಗಳನ್ನು ಪ್ರಯೋಗಿಸಿದನು.

ಸೋऽತಿವಿದ್ಧೋऽರ್ಜುನಶರೈಃ ಸುಪುಂಖೈಃ ಕಂಕಪತ್ರಿಭಃ ।
ಭಗದತ್ತಸ್ತು ಸಂಕ್ರುದ್ಧಃ ಪಾಂಡವಸ್ಯ ನರಾಧಿಪಃ ॥ ೧೨ ॥

ವ್ಯಸೃಜತ್ ತೋಮರಂ ಮೂರ್ಧ್ನಿ ಶ್ವೇತಾಶ್ವಸ್ಯೋನ್ನನಾದ ಚ ।
ತೇನಾರ್ಜುನಸ್ಯ ಸಮರೇ ಕಿರೀಟಂ ಪರಿವರ್ತಿತಮ್ ॥ ೧೩ ॥

ಕಂಕಪತ್ರವನ್ನೂ, ಸುಪುಂಖವನ್ನೂ ಹೊಂದಿದ್ದ ಅರ್ಜುನನ ಆ ಬಾಣಗಳಿಂದ ಬಹಳವಾಗಿ ಪೀಡಿಸಲ್ಪಟ್ಟ ರಾಜನಾದ ಭಗದತ್ತನು ಅರ್ಜುನನ ತಲೆಯ ಮೇಲೆ ತೋಮರವನ್ನು ಎಸೆದು ಸಿಂಹನಾದವನ್ನು ಮಾಡಿದನು. ಅದರಿಂದ ಅರ್ಜುನನ ಶಿರಸ್ಸಿನ ಮೇಲಿದ್ದ ಕಿರೀಟವು ತಿರುಗಿತು.

ಪರಿವೃತ್ತಂ ಕಿರೀಟಂ ತಂ ವ್ಯಥಯನ್ನೈವ ಫಲ್ಗುನಮ್ ।
ಸುದೃಷ್ಟಃ ಕ್ರಿಯತಾಂ ಲೋಕ ಇತಿ ರಾಜಾನಮಬ್ರವೀತ್ ॥ ೧೪ ॥

ಕಿರೀಟವು ತಿರುಗಿದಾಗ ಅದು ಅರ್ಜುನನಿಗೆ ಯಾವ ವ್ಯಥೆಯನ್ನೂ ಉಂಟು ಮಾಡಲಿಲ್ಲ. ಜನರು ಚೆನ್ನಾಗಿ ನೋಡಲಿ ಎಂದು ಅವನು ಭಗದತ್ತನಿಗೆ ಹೇಳಿದನು.

ಏವಮುಕ್ತಸ್ತು ಸಂಕ್ರುದ್ಧಃ ಶರವರ್ಷೇಣ ಪಾರ್ಥಿವಃ ।
ಅಭ್ಯವರ್ಷತ್ ಸ ಗೋವಿಂದಂ ಧನುರಾದಾಯ ಭಾಸ್ವರಮ್ ॥ ೧೫ ॥

ಹೀಗೆ ಹೇಳಲ್ಪಟ್ಟ ಭಗದತ್ತ ರಾಜನು ಕೋಪಗೊಂಡು ಪ್ರಕಾಶಮಾನವಾದ ಧನುಸ್ಸನ್ನು ತೆಗೆದುಕೊಂಡು ಗೋವಿಂದನ ಮೇಲೆ ಶರವರ್ಷವನ್ನು ಸುರಿಸಿದನು.

ತಸ್ಯ ಪಾರ್ಥೋ ಧನುಶ್ಚಿತ್ತ್ವಾ ತೂಣೀರಾನ್ ಸನ್ನಿಕೃತ್ಯ ಚ ।
ತ್ವರಮಾಣೋ ದ್ವಿಸಪ್ತತ್ಯಾ ಸರ್ವಮರ್ಮಸ್ವತಾಡಯತ್ ॥ ೧೬ ॥

ಅರ್ಜುನನು ಅವನ ಧನುಸ್ಸನ್ನು ಮತ್ತು ಬತ್ತಳಿಕೆಗಳನ್ನು ಕತ್ತರಿಸಿ, ಶೀಘ್ರವಾಗಿ ಎಪ್ಪತ್ತೆರಡು ಬಾಣಗಳಿಂದ ಅವನನ್ನು ಎಲ್ಲ ಮರ್ಮಗಳಲ್ಲಿಯೂ ಹೊಡೆದನು.

ವಿದ್ಧಸ್ತತೋಽತಿವ್ಯಥಿತೋ ವೈಷ್ಣವಾಸ್ತ್ರಮುದೀರಯನ್ ।
ಅಭಿಮಂತ್ರ್ಯಾಂಕುಶಂ ಕ್ರುದ್ಧೋ ವ್ಯಸೃಜತ್ ಪಾಂಡವೋರಸಿ ॥ ೧೭ ॥

ಹೀಗೆ ಹೊಡೆಯಲ್ಪಟ್ಟ ಭಗದತ್ತನು ಬಹಳ ವ್ಯಥೆಯಿಂದ ಕೂಡಿ ವೈಷ್ಣವಾಸ್ತ್ರವನ್ನು ಪ್ರಯೋಗಿಸಲು ಬಯಸಿ, ಕೋಪಗೊಂಡು ತನ್ನ ಅಂಕುಶದಲ್ಲಿ ಅಭಿಮಂತ್ರಿಸಿ ಅದನ್ನು ಅರ್ಜುನನ ಎದೆಯಲ್ಲಿ ಪ್ರಯೋಗಿಸಿದನು.

ವಿಸೃಷ್ಟಂ ಭಗದತ್ತೇನ ತದಸ್ತ್ರಂ ಸರ್ವಘಾತಕಮ್ ।
ಉರಸಾ ಪ್ರತಿಜಗ್ರಾಹ ಪಾರ್ಥಂ ಸಂಘಾದ್ಯ ಕೇಶವಃ ॥ ೧೮ ॥

ಭಗದತ್ತನು ಪ್ರಯೋಗಿಸಿದ ಸರ್ವಘಾತಕವಾದ ಆ ಅಸ್ತ್ರವನ್ನು ಕೇಶವನು ಪಾರ್ಥನನ್ನು ಮರೆಮಾಡಿ ತನ್ನ ಎದೆಯ ಮೇಲೆ ಸ್ವೀಕರಿಸಿದನು.

ವೈಜಯಂತ್ಯಭವನ್ಮಾಲಾ ತದಸ್ತ್ರಂ ಕೇಶವೋರಸಿ ।
ಪದ್ಮಕೋಶವಿಚಿತ್ರಾ ಚ ಸರ್ವರ್ತುಕುಸುಮಾಕುಲಾ ॥ ೧೯ ॥

ಆ ಅಸ್ತ್ರವು ಕೇಶವನ ವಕ್ಷಸ್ಥಲದಲ್ಲಿ ಪದ್ಮಕೋಶಗಳಿಂದ ರಚಿತವಾಗಿ ವಿಚಿತ್ರವಾದ, ಸರ್ವ ಕುಸುಮದಿಂದ ನಿಬಿಡವಾದ ವೈಜಯಂತಿ ಮಾಲೆಯಾಯಿತು.

ತಯಾ ಪದ್ಮಾಭಶೋಭಿನ್ಯಾ ವಾಸಕಂಪಿತಲೋಲಯಾ ।
ಶೋಭತೇಽಭ್ಯಧಿಕಂ ಶೌರಿರತಸೀಪುಷ್ಪಸನ್ನಿಭಃ ॥ ೨೦ ॥

ಪದ್ಮಗಳಿಂದ ಬಹಳವಾಗಿ ಶೋಭಿಸುವ, ಸುವಾಸನೆಯಿಂದ ಕಂಪಿಸುತ್ತಾ ಓಲಾಡುವ ಆ ಮಾಲೆಯಿಂದ ಅತಸಿಪುಷ್ಪದ ಕಾಂತಿಯುಳ್ಳ ಕೃಷ್ಣನು ಬಹಳ ಹೆಚ್ಚಾಗಿ ಶೋಭಿಸಿದನು.

ಕೇಶವಃ ಕೇಶಿಮಥನಃ ಶಾರ್ಙ್ಗಧನ್ವಾऽರಿಮರ್ದನಃ ।
ಸಂಧ್ಯಾಭ್ರೈರಿವ ಸಂಛನ್ನಃ ಪ್ರಾವೃಟ್ಕಾಲೇ ನಗೋತ್ತಮಃ ॥ ೨೧ ॥

ಕೇಶಿಮರ್ದನನೂ, ಶಾರ್ಙ್ಗಧನುರ್ಧಾರಿಯೂ, ಶತ್ರುಮರ್ದನನೂ ಆದ ಕೇಶವನು ಮಳೆಗಾಲದಲ್ಲಿ ಸಂಧ್ಯಾಕಾಲದ ಮೋಡಗಳಿಂದ ಆವರಿಸಲ್ಪಟ್ಟ ಶ್ರೇಷ್ಠ ಪರ್ವತದಂತೆ ತೋರಿದನು.

ತಮರ್ಜುನಃ ಕ್ಲಾಂತಮನಾಃ ಕೇಶವಂ ಪ್ರತ್ಯಭಾಷತ ।
ಅಯುದ್ಧ್ಯಮಾನಸ್ತುರಗಾನ್ ಸಂಯಂತಾಸ್ಮಿ ಜನಾರ್ದನ ।
ಇತ್ಯುಕ್ತಃ ಪುಂಡರೀಕಾಕ್ಷ ಪ್ರತಿಜ್ಞಾಂ ತ್ವಂ ನ ರಕ್ಷಸಿ ॥ ೨೨ ॥

ಆಗ ಅರ್ಜುನನು ಮನಸ್ಸಿನಲ್ಲಿ ಬೇಸರಗೊಂಡು ಕೇಶವನನ್ನು ಕುರಿತು ಜನಾರ್ದನನೇ, ಯುದ್ಧವನ್ನು ಮಾಡದೆ ಅಶ್ವಗಳನ್ನು ನಿಯಂತ್ರಿಸುತ್ತೇನೆ ಎಂದು ಹೇಳಿದ್ದೀಯೆ. ಪುಂಡರೀಕಾಕ್ಷನೇ, ನೀನು ನಿನ್ನ ಪ್ರತಿಜ್ಞೆಯನ್ನು ಪಾಲಿಸುತ್ತಿಲ್ಲ ಎಂದು ಹೇಳಿದನು.

ಯದ್ಯಹಂ ವ್ಯಸನೀ ಹಿ ಸ್ಯಾಮಶಕ್ತಃ ಪ್ರತಿವಾರಣೇ ।
ತತಸ್ತ್ವಯೈವ ಕಾರ್ಯಂ ಸ್ಯಾನ್ನ ತು ಕಾರ್ಯಂ ಮಯಿ ಸ್ಥಿತೇ ॥ ೨೩ ॥

ನಾನು ಒಂದು ಪಕ್ಷ ಸಂಕಟಕ್ಕೆ ಸಿಲುಕಿದರೆ ಅಥವಾ ಆ ಅಸ್ತ್ರವನ್ನು ನಿವಾರಿಸಿಕೊಳ್ಳಲು ಅಶಕ್ತನಾದರೆ ನೀನು ಹಾಗೆ ಮಾಡಬೇಕಾಗಿದ್ದಿತು. ನಾನು ಬದುಕಿರುವಾಗ ನೀನು ಹಾಗೆ ಮಾಡಬಾರದಾಗಿದ್ದಿತು.

ಸಬಾಣಃ ಸಧನುಶ್ಚಾಹಂ ಸಸುರಾಸುರಮಾನವಾನ್ ।
ಶಕ್ತೋ ಲೋಕಾನಿಮಾನ್ ಜೇತುಂ ತವೈವ ವಿದಿತಂ ಹಿ ತತ್ ॥ ೨೪ ॥

ಧನುರ್ಬಾಣಗಳಿಂದ ಸಹಿತನಾದ ನಾನು ಸುರಾಸುರ ಮನುಷ್ಯರಿಂದ ಸಹಿತವಾದ ಈ ಲೋಕವನ್ನೆಲ್ಲಾ ಗೆಲ್ಲಲು ಸಮರ್ಥನಾಗಿದ್ದೇನೆ. ಅದು ನಿನಗೇ ತಿಳಿದಿದೆ (ಎಂದು ಹೇಳಿದನು).

ಸಂಜಯಃ

ತತೋಽರ್ಜುನಂ ವಾಸುದೇವಃ ಪ್ರತ್ಯುವಾಚಾರ್ಥವದ್ ವಚಃ ।
ಶೃಣು ಗುಹ್ಯಮಿದಂ ಪಾರ್ಥ ಯಥಾವೃತ್ತಂ ಪುರಾನಘ ॥ ೨೫ ॥

ಸಂಜಯ– ಆಗ ಕೃಷ್ಣನು ಅರ್ಜುನನನ್ನು ಕುರಿತು ಅರ್ಥಪೂರ್ಣವಾದ ಈ ಮಾತುಗಳನ್ನು ಆಡಿದನು. ಎಲೈ ಅರ್ಜುನನೇ, ಅನಘನೇ, ಹಿಂದೆ ನಡೆದ ರಹಸ್ಯವಾದ ಈ ವಿಷಯವನ್ನು ಕೇಳು.

ಯೇಯಂ ಲೋಕಧರಾ ದೇವೀ ಸರ್ವಭೂತಧರಾ ಧರಾ ।
ಸಕಾಮಾ ಲೋಕಕರ್ತಾರಂ ನಾರಾಯಣಮುಪಸ್ಥಿತಾ ॥ ೨೬ ॥

ಲೋಕಧಾರಕಳಾದ, ಸರ್ವಪ್ರಾಣಿಗಳನ್ನೂ ಧರಿಸುವ ಈ ಭೂದೇವಿಯು ಒಂದು ಆಸೆಯಿಂದ ಕೂಡಿದವಳಾಗಿ ಲೋಕಪತಿಯಾದ ನಾರಾಯಣನ ಬಳಿಗೆ ಹೋದಳು.

ಸ ಸಂಗಮ್ಯ ತಯಾ ಸಾರ್ಧಂ ಪ್ರೀತಸ್ತಸ್ಯೈ ವರಂ ದದೌ ।
ಸಾ ವವ್ರೇ ವಿಷ್ಣುಸದೃಶಂ ಪುತ್ರಮಸ್ತ್ರಂ ಚ ವೈಷ್ಣವಮ್ ॥ ೨೭ ॥

ನಾರಾಯಣನು ಅವಳ ಜೊತೆಯಲ್ಲಿ ಸಮಾಗಮವನ್ನು ಹೊಂದಿ ಸಂತುಷ್ಟನಾಗಿ ಅವನಿಗೆ ವರವನ್ನು ನೀಡಿದನು. ಅವಳು ವಿಷ್ಣುಸದೃಶನಾದ ಪುತ್ರನನ್ನೂ ಮತ್ತು ವೈಷ್ಣವಾಸ್ತ್ರವನ್ನೂ ಬೇಡಿದಳು.

ಬಭೂವ ಚ ಸುತಸ್ತಸ್ಯಾಂ ನರಕೋ ನಾಮ ವಿಶ್ರುತಃ ।
ಅಸ್ತ್ರಂ ಚ ವೈಷ್ಣವಂ ತಸ್ಮೈ ದದೌ ನಾರಾಯಣಃ ಸ್ವಯಮ್ ॥ ೨೮ ॥

ಅವಳಿಗೆ ನರಕನೆಂಬ ಪ್ರಖ್ಯಾತನಾದ ಪುತ್ರನು ಜನಿಸಿದನು. ನಾರಾಯಣನು ಅವಳಿಗೆ ಸ್ವತಃ ವೈಷ್ಣವಾಸ್ತ್ರವನ್ನು ನೀಡಿದನು.

ತದೇತನ್ನರಕಸ್ಯಾಸೀದಸ್ತ್ರಂ ಸರ್ವಾಹಿತಾಂತಕಮ್ ।
ಅಸ್ಮಾತ್ ಪ್ರಾಗ್ಜ್ಯೋತಿಷಂ ಪ್ರಾಪ್ತಂ ಸರ್ವಶಸ್ತ್ರವಿಘಾತನಮ್ ॥ ೨೯ ॥

ಸರ್ವಶತ್ರುಗಳನ್ನೂ ಸಂಹರಿಸುವ ಈ ಅಸ್ತ್ರವು ನರಕನ ಬಳಿ ಇದ್ದಿತು. ಸರ್ವಶಸ್ತ್ರ ವಿನಾಶಕವಾದ ಈ ಅಸ್ತ್ರವು ನರಕನಿಂದ ಪ್ರಾಗ್ಜ್ಯೋತಿಷನಿಗೆ ಬಂದಿತು.

ನಾನ್ಯಾವಧ್ಯೋಽಸ್ತಿ ಲೋಕೇಽಸ್ಮಿನ್ ಮದನ್ಯಃ ಕಶ್ಚಿದರ್ಜುನ ।
ತಸ್ಮಾನ್ಮಯಾ ಕೃತಂ ಹ್ಯೇತನ್ಮಾ ತೇಽಭೂದ್ ಬುದ್ಧಿರನ್ಯಥಾ ॥ ೩೦ ॥

ಎಲೈ ಅರ್ಜುನನೇ, ಈ ಅಸ್ತ್ರಕ್ಕೆ ನನ್ನನ್ನು ಬಿಟ್ಟು ಈ ಲೋಕದಲ್ಲಿ ಬೇರೆ ಯಾರೂ ಅವಧ್ಯರಲ್ಲ. ಆದ್ದರಿಂದ ನಾನು ಈ ಕಾರ್ಯವನ್ನು ಮಾಡಿದೆನು. ನೀನು ತಪ್ಪಾಗಿ ತಿಳಿಯುವುದು ಬೇಡ (ಎಂದು ಹೇಳಿದನು).

ಅನುನೀಯ ತು ದಾಶಾರ್ಹಃ ಪಾಂಡವಂ ತ್ವರಿತೋಽಬ್ರವೀತ್ ।
ಜಹಿ ಪ್ರಾಗ್ಜ್ಯೋತಿಷಂ ಕ್ಷಿಪ್ರಂ ವಾಕ್ಯಶೇಷಂ ಚ ಮೇ ಶೃಣು ॥ ೩೧ ॥

ಕೃಷ್ಣನು ಹೀಗೆ ಅರ್ಜುನನನ್ನು ಸಮಾಧಾನಪಡಿಸಿ ಪುನಃ ಭಗದತ್ತನನ್ನು ಶೀಘ್ರವಾಗಿ ಸಂಹರಿಸು. ನನ್ನ ವಾಕ್ಯದ ಉಳಿದ ಭಾಗವನ್ನು ಕೇಳು ಎಂದು ಹೇಳಿದನು.

ಚತುರ್ಮೂರ್ತಿರಹಂ ಪಾರ್ಥ ಲೋಕತ್ರಾಣಾರ್ಥಮುದ್ಯತಃ ।
ಆತ್ಮಾನಂ ಪ್ರವಿಭಜ್ಯೇಹ ವಿಧಾನಮಿದಮಾದಧೇ ॥ ೩೨ ॥

ಎಲೈ ಅರ್ಜುನನೇ, ನಾನು ನಾಲ್ಕು ರೂಪಗಳಿಂದ ಲೋಕವನ್ನು ರಕ್ಷಿಸುವುದಕ್ಕೆ ಉದ್ಯುಕ್ತನಾಗಿದ್ದೇನೆ. ನನ್ನನ್ನು ನಾನೇ ಚತುರ್ಭಾಗವನ್ನಾಗಿ ಮಾಡಿಕೊಂಡು ಈ ವಿಧಾನವನ್ನು ಅನುಸರಿಸಿದ್ದೇನೆ.

ಏಕಾ ಮೂರ್ತಿಸ್ತಪಶ್ಚರ್ಯಾಂ ಕುರುತೇ ಮೇ ಭುವಿ ಸ್ಥಿತಾ ।
ಅಪರಾ ಪಶ್ಯತಿ ಜಗತ್ ಕುರ್ವಾಣಂ ಸಾಧ್ವಸಾಧು ಚ ॥ ೩೩ ॥

ನನ್ನ ಒಂದು ಮೂರ್ತಿಯು ಭೂಮಿಯಲ್ಲಿದ್ದು ತಪಶ್ಚರ್ಯೆಯನ್ನು ಮಾಡುತ್ತದೆ. ಇನ್ನೊಂದು ಮೂರ್ತಿಯು ಜಗತ್ತು ಮಾಡುವ ಶುಭಾಶುಭ ಕರ್ಮವನ್ನು ನೋಡುತ್ತದೆ.

ಅಪರಾ ಕರ್ಮ ಕುರುತೇ ಮಾನುಷಂ ಲೋಕಮಾಶ್ರಿತಾ ।
ಶೇತೇ ಚತುರ್ಥಮೂರ್ತಿಸ್ತು ನಿದ್ರಾಂ ವರ್ಷಸಹಸ್ರಿಕಾಮ್ ॥ ೩೪ ॥

ಇನ್ನೊಂದು ಮೂರ್ತಿಯು ಲೋಕದಲ್ಲಿದ್ದು ಮನುಷ್ಯರು ಮಾಡುವ ಕರ್ಮವನ್ನು ಮಾಡುತ್ತದೆ. ನಾಲ್ಕನೆಯ ಮೂರ್ತಿಯು ವರ್ಷಸಹಸ್ರದವರೆಗೆ ನಿದ್ದೆಯನ್ನು ಮಾಡುತ್ತದೆ.

ಯಾऽಸೌ ವರ್ಷಸಹಸ್ರಾಂತೇ ಮೂರ್ತಿರುತ್ತಿಷ್ಠತೇ ಮಮ ।
ವರಾರ್ಹಾಯ ವರಾನ್ ಶ್ರೇಷ್ಠಾನ್ ತಸ್ಮಿನ್ ಕಾಲೇ ದದಾತಿ ಸಾ ॥೩೫॥

ವರ್ಷಸಹಸ್ರಾನಂತರದಲ್ಲಿ ಯಾವ ನನ್ನ ರೂಪವು ಎಚ್ಚರಗೊಳ್ಳುವುದೋ ಅದು ಎದ್ದು ಆ ಕಾಲದಲ್ಲಿ ವರವನ್ನು ಸ್ವೀಕರಿಸಲು ಯೋಗ್ಯರಾದವರಿಗೆ ಶ್ರೇಷ್ಠವಾದ ವರಗಳನ್ನು ಕೊಡುತ್ತದೆ.

ತಂ ತು ಕಾಲಮನುಪ್ರಾಪ್ತಂ ವಿದಿತ್ವಾ ಪೃಥಿವೀ ಪುರಾ ।
ಪ್ರಾಯಾಚತ ವರಂ ಪಾರ್ಥ ನರಕಾರ್ಥಾಯ ತಚ್ಛೃಣು ॥ ೩೬ ॥

ಭೂದೇವಿಯು ಅಂತಹ ಕಾಲವು ಒದಗಿದೆ ಎಂದು ತಿಳಿದು, ಎಲೈ ಅರ್ಜುನನೇ, ನರಕನ ಸಲುವಾಗಿ ನನ್ನನ್ನು ವರವನ್ನು ಬೇಡಿದಳು. ಅದನ್ನು ಕೇಳು.

ದೇವಾನಾಮಸುರಾಣಾಂ ಚಾಪ್ಯವಧ್ಯಸ್ತನಯೋऽಸ್ತು ಮೇ ।
ಏವಂ ವರಂ ವೃಣೇ ದೇವ ತವ ನಾಥ ಮಮಾಸ್ತ್ವಿತಿ ॥ ೩೭ ॥

ನನ್ನ ಪುತ್ರನು ದೇವತೆಗಳಿಗೂ ಮತ್ತು ಅಸುರರಿಗೂ ಅವಧ್ಯನಾಗಿರಬೇಕು. ಎಲೈ ದೇವನೇ, ನಾಥನೇ, ಅಂತಹ ಪುತ್ರನು ನನಗಿರಲಿ ಎಂದು ನಿನ್ನನ್ನು ವರವನ್ನು ಬೇಡುತ್ತಿದ್ದೇನೆ.

ಏವಂ ವರಮಹಂ ಶ್ರುತ್ವಾ ಜಗತ್ಯಾ ಭರತರ್ಷಭ ।
ಅಮೋಘಮಸ್ತ್ರಂ ಪ್ರಾಯಚ್ಛಂ ಪರಮಂ ವೈಷ್ಣವಂ ಪುರಾ ॥ ೩೮ ॥

ಎಲೈ ಭರತಶ್ರೇಷ್ಠನೇ, ಭೂದೇವಿಯ ಈ ವರವನ್ನು ಕೇಳಿ ನಾನು ಹಿಂದೆ ಅಮೋಘವಾದ ಮತ್ತು ಶ್ರೇಷ್ಠವಾದ ವೈಷ್ಣವಾಸ್ತ್ರವನ್ನು ಅವಳಿಗೆ ನೀಡಿದೆನು.

ಏತದಸ್ತ್ರಮಮೋಘಂ ಮೇ ಭವಿಷ್ಯತಿ ವಸುಂಧರೇ ।
ನರಕಸ್ಯಾಭಿರಕ್ಷಾರ್ಥಂ ನೈನಂ ಕಶ್ಚಿದ್ ವಧಿಷ್ಯತಿ ॥ ೩೯ ॥

ಎಲೌ ವಸುಂಧರೆಯೇ, ನರಕನನ್ನು ರಕ್ಷಿಸುವ ವಿಷಯದಲ್ಲಿ ಈ ಅಸ್ತ್ರವು ಅಮೋಘವಾಗುವುದು. ಅವನನ್ನು ಯಾರೂ ಕೊಲ್ಲುವುದಿಲ್ಲ.

ಅನೇನಾಸ್ತ್ರೇಣ ತೇ ಗುಪ್ತಃ ಸುತಃ ಪರಬಲಾರ್ದನಃ ।
ಭವಿಷ್ಯತಿ ದುರಾಧರ್ಷಃ ಸರ್ವಲೋಕೇಷು ಸರ್ವದಾ ॥ ೪೦ ॥

ಈ ಅಸ್ತ್ರದಿಂದ ರಕ್ಷಿತನಾದ ನಿನ್ನ ಪುತ್ರನು ಶತ್ರುಸೈನ್ಯಘಾತಕನೂ, ಲೋಕದಲ್ಲಿ ಸರ್ವಥಾ ಸರ್ವವೀರರು ಸೋಲಿಸಲ್ಪಡದವನೂ ಆಗುತ್ತಾನೆ ಎಂದು ಹೇಳಿದನು.

ತಥೇತ್ಯುಕ್ತ್ವಾ ತು ಸಾ ದೇವೀ ಕೃತಕಾರ್ಯಾ ವಸುಂಧರಾ ।
ಸ ಚಾಪ್ಯಾಸೀದ್ ದುರಾಧರ್ಷೋ ನರಕಃ ಶತ್ರುತಾಪನಃ ॥ ೪೧ ॥

ಹಾಗೆಯೇ ಆಗಲಿ ಎಂದು ಹೇಳಿ ಭೂದೇವಿಯು ಕೃತಜ್ಞಳಾದಳು. ಆ ನರಕನೂ ಕೂಡ ಶತ್ರುತಾಪಕನೂ ಮತ್ತು ದುರಾಧರ್ಷನೂ ಆದನು.

ತಸ್ಮಾತ್ ಪ್ರಾಗ್ಜ್ಯೋತಿಷಂ ಪ್ರಾಪ್ತಂ ತದಸ್ತ್ರಂ ವೇತ್ಥ ಮಾಮಕಮ್ ।
ನಾಸ್ಯಾವಧ್ಯೋಽಸ್ತಿ ಲೋಕೇಽಸ್ಮಿನ್ ಮದನ್ಯಃ ಕಶ್ಚಿದರ್ಜುನ ॥೪೨॥

ಆ ನನ್ನ ಅಸ್ತ್ರವು ಆ ನರಕನಿಂದ ಪ್ರಾಗ್ಜ್ಯೋತಿಷನಿಗೆ ಬಂದಿತು ಎಂದು ತಿಳಿ. ಅರ್ಜುನನೇ, ಈ ಅಸ್ತ್ರಕ್ಕೆ ನನ್ನನ್ನು ಬಿಟ್ಟು ಬೇರೆ ಯಾರೂ ಅವಧ್ಯರಲ್ಲ.

ತನ್ಮಯಾ ತ್ವತ್ಕೃತೇ ಹ್ಯೇತದನ್ಯಥೈವೋಪನಿರ್ಮಿತಮ್ ।
ವಿಯುಕ್ತಂ ಪರಮಾಸ್ತ್ರೇಣ ಜಹಿ ಪಾರ್ಥ ಮಹಾಸುರಮ್ ॥ ೪೩ ॥

ನಿನ್ನ ಸಲುವಾಗಿ ನಾನು ಈ ಅಸ್ತ್ರವನ್ನು ಬೇರೆ ರೀತಿಯಾಗಿಯೇ ನಿರ್ವಹಿಸಿದೆನು. ಪಾರ್ಥನೇ, ಪರಮಾಸ್ತ್ರದಿಂದ ವಿಯುಕ್ತನಾದ ಮಹಾಸುರನನ್ನು ಈಗ ಕೊಲ್ಲು.

ಅವಧ್ಯೋಽಯಂ ಮಹಾಸ್ತ್ರೇಣ ಭಗದತ್ತಃ ಸುರಾಸುರೈಃ ।
ಯಥಾಽಹಂ ನರಕಂ ಲೋಕಹಿತಾರ್ಥಮಹನಂ ಪುರಾ ॥ ೪೪ ॥

ಈ ಮಹಾಸ್ತ್ರದ ಬಲದಿಂದ ಭಗದತ್ತನು ಸುರಾಸುರರಿಂದ ಅವಧ್ಯನಾಗಿದ್ದಾನೆ. ನಾನು ಹಿಂದೆ ಲೋಕಹಿತಕ್ಕಾಗಿ ನರಕನನ್ನು ಕೊಂದಂತೆ (ಈಗ ನೀನು ಭಗದತ್ತನನ್ನು ಕೊಲ್ಲು).

ಸಂಜಯಃ

ಏವಮುಕ್ತಸ್ತತಃ ಪಾರ್ಥಃ ಕೇಶವೇನ ಮಹಾತ್ಮನಾ ।
ಭಗದತ್ತಂ ಶಿತೈರ್ಬಾಣೈಃ ಸಹಸಾ ಸಮವಾಕಿರತ್ ॥ ೪೫ ॥

ಸಂಜಯ– ಮಹಾತ್ಮನಾದ ಕೇಶವನಿಂದ ಹೀಗೆ ಹೇಳಲ್ಪಟ್ಟ ಅರ್ಜುನನು ತಕ್ಷಣ ಹರಿತವಾದ ಬಾಣಗಳಿಂದ ಭಗದತ್ತನನ್ನು ಪೀಡಿಸಿದನು.

ತತಃ ಸಂಧಾಯ ವಿಶಿಖಿಂ ದೀಪ್ಯಮಾನಮಿವಾನಲಮ್ ।
ಅವಿಧ್ಯದರ್ಜುನೋ ನಾಗಂ ತಂ ಕುಂಭಯೋರಂತರೇ ಭೃಶಮ್ ॥೪೬॥

ಅನಂತರ ಅಗ್ನಿಯಂತೆ ಜ್ವಲಿಸುವ ಬಾಣವನ್ನು ಧನುಸ್ಸಿನಲ್ಲಿ ಹೂಡಿ, ಅರ್ಜುನನು ಆ ಗಜವನ್ನು ಕುಂಭಗಳ ಮಧ್ಯದಲ್ಲಿ ತೀವ್ರವಾಗಿ ಹೊಡೆದನು.

ಸ ಸಮಾಸಾದ್ಯ ನಾಗಂ ಬಾಣೋ ವಜ್ರ ಇವಾಚಲಮ್ ।
ಅಭ್ಯಗಾತ್ ಸ ಶರೋಽತ್ಯುಗ್ರೋ ವಲ್ಮೀಕಮಿವ ಪನ್ನಗಃ ॥ ೪೭ ॥

ವಜ್ರಾಯುಧವು ಪರ್ವತವನ್ನು ಸೇರಿದಂತೆ ಆ ಬಾಣವು ಆ ಗಜವನ್ನು ಸಮೀಪಿಸಿ, ಸರ್ಪವು ಹುತ್ತದೊಳಗೆ ಇಳಿಯುವಂತೆ ಅದರ ಶರೀರದಲ್ಲಿ ಇಳಿಯಿತು.

ಸ ಕರೀ ಭಗದತ್ತೇನ ಪ್ರೇರ್ಯಮಾಣೋ ಮುಹುರ್ಮುಹುಃ ।
ನ ಕರೋತಿ ವಚಸ್ತಸ್ಯ ದರಿದ್ರಸ್ಯೇವ ಯೋಷಿತಃ ॥ ೪೮ ॥

ಆ ಗಜವು ಭಗದತ್ತನಿಂದ ಪುನಃ ಪುನಃ ಪ್ರಚೋದಿಸಲ್ಪಟ್ಟರೂ ದರಿದ್ರನ ಮಾತುಗಳನ್ನು ಸ್ತ್ರೀಯರು ಕೇಳದಿರುವಂತೆ ಅದು ಅವನ ಆದೇಶಗಳನ್ನು ಅನುಸರಿಸಲಿಲ್ಲ.

ಸ ತು ವಿಷ್ಟಭ್ಯ ಗಾತ್ರಾಣಿ ದಂತಾಭ್ಯಾಮವನೀಂ ಗತಃ ।
ನದನ್ನಾರ್ತಸ್ವನಂ ಪ್ರಾಣಾನುತ್ಸಸರ್ಜ ಮಹಾದ್ವಿಪಃ ॥ ೪೯ ॥

ಆ ಮಹಾಗಜವು ತನ್ನ ಶರೀರವನ್ನು ಸ್ಥಿರವಾಗಿ ನಿಲ್ಲಿಸಿ, ದಂತಗಳಿಂದ ಭೂಮಿಯ ಮೇಲೆ ಬಿದ್ದು, ಆರ್ತಸ್ವರವನ್ನು ಮಾಡುತ್ತಾ ಪ್ರಾಣಗಳನ್ನು ತ್ಯಜಿಸಿತು.

ತತಶ್ಚಂದ್ರಾರ್ಧತುಲ್ಯೇನ ಶರೇಣಾಮಿತ್ರಕರ್ಶನಃ ।
ಬಿಭೇದ ಹೃದಯಂ ರಾಜ್ಞೋ ಭಗದತ್ತಸ್ಯ ಪಾಂಡವಃ ॥ ೫೦ ॥

ಅನಂತರ ಶತ್ರುಕರ್ಶನನಾದ ಅರ್ಜುನನು ಅರ್ಧಚಂದ್ರಾಕಾರವುಳ್ಳ ಬಾಣದಿಂದ ಭಗದತ್ತನ ಹೃದಯವನ್ನು ದೃಢವಾಗಿ ಭೇದಿಸಿದನು.

ಸ ಭಿನ್ನಹೃದಯೋ ರಾಜಾ ಭಗದತ್ತಃ ಕಿರೀಟಿನಾ ।
ಮುಕ್ತ್ವಾ ಶರಾಸನಂ ಬಾಹೂ ಪ್ರಸಾರ್ಯಾನ್ವಪತದ್ ಗಜಾತ್ ॥ ೫೧ ॥

ಅರ್ಜುನನಿಂದ ಗಾಢವಾಗಿ ಹೊಡೆಯಲ್ಪಟ್ಟು ಭಿನ್ನಹೃದಯನಾದ ಭಗದತ್ತ ರಾಜನು ಕೈಯಲ್ಲಿದ್ದ ಧನುಸ್ಸನ್ನು ತ್ಯಜಿಸಿ, ಬಾಹುಗಳನ್ನು ಚಾಚಿ ಗಜದಿಂದ ಕೆಳಗೆ ಬಿದ್ದನು.

ಪಪಾತ ಪತತಸ್ತಸ್ಯ ಶಿರಸಃ ಪೂರ್ವಮಂಶುಕಮ್ ।
ನಾಲತಾಡನವಿಭ್ರಷ್ಟಂ ಪಲಾಶಂ ನಿಲನಾದಿವ ॥ ೫೨ ॥

ಅವನು ಕೆಳಗೆ ಬೀಳುವಾಗ ನಾಳವನ್ನು ಕಳೆದುಕೊಂಡು ಬಿದ್ದ ಪಲಾಶವು ಮೇಲಿನಿಂದ ಬೀಳುವಂತೆ ಅಂಶುಕವು (ಶಿರಸ್ತ್ರಾಣವು) ಬಿದ್ದಿತು.

ಸ ಹೇಮಮಾಲೀ ತಪನೀಯಭಾಂಡಾತ್
ಪಪಾತ ನಾಗಾದ್ ಗಿರಿಸನ್ನಿಕಾಶಾತ್ ।
ಸುಪುಷ್ಪಿತೋ ಮಾರುತವೇಗಭಗ್ನೋ
ಮಹೀಧರಾಗ್ರಾದಿವ ಕರ್ಣಿಕಾರಃ ॥ ೫೩ ॥

ಹೇಮಮಾಲೆಯನ್ನು ಧರಿಸಿದ ಅವನು ಪರ್ವತಪ್ರಾಯವಾಗಿದ್ದ ಸ್ವರ್ಣಾಲಂಕಾರದಿಂದ ಭೂಷಿತವಾದ ಆ ಗಜದಿಂದ ವಾಯುವೇಗದಿಂದ ಭಗ್ನವಾದ ಪುಷ್ಪಿತವಾದ ಕರ್ಣಿಕಾರ ವೃಕ್ಷವು ಪರ್ವತದ ತುದಿಯಿಂದ ಬಿದ್ದಂತೆ ಬಿದ್ದನು.

ನಿಹತ್ಯ ತಂ ನರಪತಿಮಿಂದ್ರವಿಕ್ರಮಂ
ಸಹಾಯಮಿಂದ್ರಸ್ಯ ಸ ಇಂದ್ರಸಂಭವಃ ।
ತತೋಽಪರಾಂಸ್ತವ ಜಯಕಾಂಕ್ಷಿಣೋ ರಣೇ
ಬಭಂಜ ವಾಯುರ್ಬಲವಾನಿವ ದ್ರುಮಾನ್ ॥ ೫೪ ॥

ಇಂದ್ರಪುತ್ರನಾದ ಅರ್ಜುನನು ಇಂದ್ರನಂತೆ ಪರಾಕ್ರಮವನ್ನು ಹೊಂದಿದ, ಇಂದ್ರನ ಸಖನಾದ ಆ ರಾಜನನ್ನು ಕೊಂದು ರಣರಂಗದಲ್ಲಿ ನಿನ್ನ ಜಯವನ್ನು ಬಯಸುವ ಉಳಿದವರನ್ನೂ ಬಲಿಷ್ಠವಾದ ವಾಯುವು ವೃಕ್ಷವು ಭಗ್ನಗೊಳಿಸುವಂತೆ ಭಗ್ನಗೊಳಿಸಿದನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ದ್ರೋಣಪರ್ವಣಿ ಅಷ್ಟಾವಿಂಶೋಽಧ್ಯಾಯಃ ॥

॥ ಸಂಶಪ್ತಕವಧಪರ್ವಣಿ ತ್ರಯೋದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಇಪ್ಪತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ತೊಂಬತ್ತನೆಯ ಅಧ್ಯಾಯ

ಅರ್ಜುನನ ಯುದ್ಧದ ವರ್ಣನೆ

ಸಂಜಯಃ

ಪ್ರಿಯಮಿಂದ್ರಸ್ಯ ಸತತಂ ಸಖಾಯಮಮಿತೌಜಸಮ್ ।
ಹತ್ವಾ ಪ್ರಾಗ್ಜ್ಯೋತಿಷಂ ಪಾರ್ಥಃ ಪ್ರದಕ್ಷಿಣಮವರ್ತತ ॥ ೧ ॥

ಸಂಜಯ– ಇಂದ್ರನಿಗೆ ಪ್ರಿಯನಾದವನೂ, ಸತತವಾಗಿ ಅವನಿಗೆ ಸ್ನೇಹಿತನಾದವನೂ ಮತ್ತು ಅಮಿತಪರಾಕ್ರಮಿಯೂ ಆದ ಭಗದತ್ತನನ್ನು ಕೊಂದು ಅರ್ಜುನನು ದಕ್ಷಿಣ ಭಾಗಕ್ಕೆ ಬಂದನು.

ತತೋ ಗಾಂಧಾರರಾಜಸ್ಯ ಪುತ್ರೌ ಪರಪುರಂಜಯೌ ।
ಅಭ್ಯೇತಾಮರ್ಜುನಂ ಸಂಖ್ಯೇ ಭ್ರಾತರೌ ವೃಷಕಾಚಲೌ ॥ ೨ ॥

ಆಗ ಗಾಂಧಾರರಾಜನ ಪುತ್ರರಾದ, ಪರಪುರಂಜಯರಾದ, ಸಹೋದರರಾದ ವೃಷಕ ಮತ್ತು ಅಚಲರು ರಣರಂಗದಲ್ಲಿ ಅರ್ಜುನನ ಕಡೆಗೆ ಧಾವಿಸಿದರು.

ತೌ ಸಮೇತ್ಯಾರ್ಜುನಂ ವೀರೌ ಪೂರ್ವಂ ಪಶ್ಚಾಚ್ಚ ಧನ್ವಿನೌ ।
ಅವಿದ್ಧ್ಯೇತಾಂ ಮಹಾವೇಗೈರ್ನಿಶಿತೈರಾಶುಗೈರ್ಭೃಶಮ್ ॥ ೩ ॥

ಧನುರ್ಧಾರಿಗಳೂ ಮತ್ತು ವೀರರೂ ಆದ ಅವರು ಅರ್ಜುನನನ್ನು ಹಿಂಭಾಗದಿಂದ ಮತ್ತು ಮುಂಭಾಗದಿಂದ ಸಂಧಿಸಿ, ಮಹಾವೇಗಶಾಲಿಗಳಾದ ನಿಶಿತಗಳಾದ, ಶೀಘ್ರಗಾಮಿಗಳಾದ ಬಾಣಗಳಿಂದ ಅವನನ್ನು ತೀವ್ರವಾಗಿ ಹೊಡೆದರು.

ವೃಷಕಸ್ಯ ಹಯಾನ್ ಸೂತಂ ಧನುಶ್ಛತ್ರಂ ರಥಂ ಧ್ವಜಮ್ ।
ತಿಲಶೋ ವ್ಯಧಮತ್ ಪಾರ್ಥಃ ಸೌಬಲಸ್ಯ ಶಿತೈಃ ಶರೈಃ ॥ ೪ ॥

ಅರ್ಜುನನು ನಿಶಿತವಾದ ಶರಗಳಿಂದ ಶಕುನಿಯ ಪುತ್ರನಾದ ವೃಷಕನ ಅಶ್ವಗಳನ್ನೂ, ಸೂತನನ್ನೂ, ಧನುಸ್ಸನ್ನೂ, ಛತ್ರವನ್ನೂ ಕತ್ತರಿಸಿದನು.

ತತೋಽರ್ಜುನಃ ಶರವ್ರಾತೈರ್ನಾನಾಪ್ರಹರಣಾನ್ ಯುಧಿ ।
ಗಾಂಧಾರಾನಾಕುಲೀಕುರ್ವನ್ ಸೌಬಲಪ್ರಮುಖಾನ್ ಪುನಃ ॥ ೫ ॥

ಅನಂತರ ಅರ್ಜುನನು ತನ್ನ ಬಾಣಸಮೂಹದಿಂದ ರಣರಂಗದಲ್ಲಿ ನಾನಾ ಆಯುಧಗಳನ್ನು ಧರಿಸಿದ ಶಕುನಿಯೇ ಮೊದಲಾದ ಗಾಂಧಾರರನ್ನು ಪುನಃ ಆಕುಲಗೊಳಿಸಿದನು.

ತತಃ ಪಂಚಶತಾನ್ ವೀರಾನ್ ಗಾಂಧಾರಾನುದ್ಯತಾಯುಧಾನ್ ।
ಪ್ರಾಹಿಣೋನ್ಮೃತ್ಯುಲೋಕಾಯ ಕ್ರುದ್ಧೋ ಬಾಣೈರ್ಧನಂಜಯಃ ॥ ೬ ॥

ಅನಂತರ ಕ್ರುದ್ಧನಾದ ಧನಂಜಯನು ತನ್ನ ಬಾಣಗಳಿಂದ ಎತ್ತಿದ ಆಯುಧಗಳನ್ನು ಧರಿಸಿದ ಗಾಂಧಾರರ ಐದುನೂರು ವೀರರನ್ನು ಮೃತ್ಯುಲೋಕಕ್ಕೆ ಕಳುಹಿಸಿದನು.

ಹತಾಶ್ವಾತ್ ತು ರಥಾತ್ ತೂರ್ಣಮವತೀರ್ಯ ಮಹಾಮತಿಃ ।
ಆರುರೋಹ ರಥಂ ಭ್ರಾತುಃ ಚಾನ್ಯದಾದಾಯ ಕಾರ್ಮುಕಮ್ ॥ ೭ ॥

ಮೇಧಾವಿಯಾದ ವೃಷಕನು ಅಶ್ವಗಳು ಮೃತವಾದ ತನ್ನ ರಥದಿಂದ ಶೀಘ್ರವಾಗಿ ಇಳಿದು, ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ತನ್ನ ಸಹೋದರನ ರಥವನ್ನು ಏರಿದನು.

ತಾವೇಕರಥಮಾರೂಢೌ ಭ್ರಾತರೌ ವೃಷಕಾಚಲೌ ।
ಶರವರ್ಷೇಣ ಬೀಭತ್ಸುಮವಿಧ್ಯೇತಾಂ ಪುನಃಪುನಃ ॥ ೮ ॥

ಒಂದು ರಥವನ್ನು ಏರಿದ ಸಹೋದರರಾದ ವೃಷಕ ಮತ್ತು ಅಚಲರು ಅರ್ಜುನನನ್ನು ಶರವರ್ಷದಿಂದ ಪುನಃ ಪುನಃ ಹೊಡೆದರು.

ಸ್ಯಾಲೌ ತವ ಮಹಾತ್ಮಾನೌ ರಾಜಾನೌ ವೃಷಕಾಚಲೌ ।
ಭೃಶಂ ವಿಜಘ್ನತುಃ ಪಾರ್ಥಮಿಂದ್ರಂ ವೃತ್ರಬಲಾವಿವ ॥ ೯ ॥

ನಿನ್ನ ಭಾವಮೈದುನರೂ, ರಾಜರೂ, ಮಹಾತ್ಮರೂ ಆದ ವೃಷಕಾಚಲರು ಇಂದ್ರನನ್ನು ವೃತ್ರ ಮತ್ತು ಬಲಾಸುರರು ಹೊಡೆದಂತೆ ಅರ್ಜುನನನ್ನು ತೀವ್ರವಾಗಿ ಹೊಡೆದರು.

ಲಬ್ಧಲಕ್ಷೌ ತು ಗಾಂಧಾರೌ ಜಘ್ನತುಃ ಪಾಂಡವಂ ಪುನಃ ।
ನೈದಾಘವಾರ್ಷಿಕೌ ಮಾಸೌ ಲೋಕಂ ಘರ್ಮಾಂಬುಭಿರ್ಯಥಾ ॥೧೦॥

ಲಕ್ಷ್ಯವನ್ನು ಭೇದಿಸುವ ಆ ಇಬ್ಬರು ಗಾಂಧಾರರು ಬೇಸಿಗೆ ಮತ್ತು ಮಳೆಗಾಲಗಳ ಮಾಸಗಳು ಲೋಕಗಳನ್ನು ಬಿಸಿಲು ಮತ್ತು ಮಳೆಗಳಿಂದ ಹೊಡೆದಂತೆ ಪುನಃ ಅರ್ಜುನನನ್ನು ಹೊಡೆದರು.

ತೌ ಶ್ಯಾಲೌ ತವ ದುರ್ಧರ್ಷೌ ಸಮಾನೇ ಸ್ಯಂದನೇ ಸ್ಥಿತೌ ।
ಸಂಸ್ಪೃಶಂತೌ ತದಾಽನ್ಯೋನ್ಯಂ ಜಘಾನೈಕೇಷುಣಾಽರ್ಜುನಃ ॥ ೧೧ ॥

ಆಗ ಅರ್ಜುನನು ನಿನ್ನ ಭಾವಮೈದುನರಾದ, ದುರ್ಧರ್ಷರಾದ, ಒಂದೇ ರಥದಲ್ಲಿದ್ದ, ಒಬ್ಬರನ್ನೊಬ್ಬರು ಸ್ಪರ್ಶಿಸುತ್ತಿದ್ದ ವೃಷಕಾಚಲರನ್ನು ಒಂದು ಬಾಣದಿಂದ ಹೊಡೆದನು.

ತೌ ರಥಾತ್ ಸಹಸಾ ವೀರೌ ಲೋಹಿತಾಕ್ಷೌ ಮಹಾಭುಜೌ ।
ನಿಹತೌ ಪೇತತುರ್ಭೂಮೌ ಸೋದರ್ಯಾವೇಕಲಕ್ಷಣೌ ॥ ೧೨ ॥

ಸಹೋದರರೂ, ಒಂದೇ ಲಕ್ಷಣವುಳ್ಳವರೂ, ಮಹಾಭುಜರೂ, ಲೋಹಿತಾಕ್ಷರೂ, ವೀರರೂ ಆದ ಅವರು ಅರ್ಜುನನಿಂದ ನಿಹತರಾಗಿ ತಕ್ಷಣ ಭೂಮಿಯಲ್ಲಿ ಬಿದ್ದರು.

ತಯೋರ್ದೇಹೌ ರಥಾದ್ ಭೂಮಿಂ ಗತೌ ಬಂಧುಜನವ್ಯಥೌ ।
ಯಶೋ ದಶ ದಿಶಃ ಪುಣ್ಯಂ ವಿಕಿರಂತೌ ಖಮುತ್ತಮಮ್ ॥ ೧೩ ॥

ಅವರ ದೇಹಗಳು ರಥದಿಂದ ಭೂಮಿಗೆ ಬೀಳುತ್ತಾ ಬಂಧುಜನರಿಗೆ ವ್ಯಥೆಯನ್ನುಂಟು ಮಾಡುವವುಗಳಾಗಿ ಹತ್ತು ದಿಕ್ಕುಗಳಲ್ಲಿಯೂ ಆಕಾಶದಲ್ಲಿ ಅರ್ಜುನನ ಕೀರ್ತಿಯನ್ನು ಹರಡುವವುಗಳಾಗಿ (ಬಿದ್ದವು).

ದೃಷ್ಟ್ವಾ ವಿನಿಹತೌ ಸಂಖ್ಯೇ ಮಾತುಲಾವಪಲಾಯಿನೌ ।
ಸರ್ವೇ ಮುಮುಚುರಶ್ರೂಣಿ ಪುತ್ರಾಸ್ತವ ವಿಶಾಂಪತೇ ॥ ೧೪ ॥

ಎಲೈ ರಾಜನೇ, ಯುದ್ಧದಿಂದ ಹಿಮ್ಮೆಟ್ಟದಿರುವ ತಮ್ಮ ಇಬ್ಬರು ಸೋದರ-ಮಾವಂದಿರು ಯುದ್ಧದಲ್ಲಿ ಹತರಾದುದನ್ನು ನೋಡಿ ನಿನ್ನ ಪುತ್ರರೆಲ್ಲರೂ ಕಣ್ಣೀರನ್ನು ಸುರಿಸಿದರು.

ತೌ ಹತೌ ಭ್ರಾತರೌ ದೃಷ್ಟ್ವಾ ಮಾಯಾಶತವಿಶಾರದಃ ।
ಕೃಷ್ಣೌ ಸಮ್ಮೋಹಯನ್ ಮಾಯಾಂ ವಿದಧೇ ಶಕುನಿಸ್ತತಃ ॥ ೧೫ ॥

ಹತರಾದ ಆ ಸಹೋದರರನ್ನು ನೋಡಿ, ಮಾಯೆಗಳಲ್ಲಿ ನಿಪುಣನಾದ ಶಕುನಿಯು ಆಗ ಕೃಷ್ಣಾರ್ಜುನರನ್ನು ಮೋಹಗೊಳಿಸುವವನಾಗಿ ಮಾಯೆಯನ್ನು ಸೃಷ್ಟಿಸಿದನು.

ಅಸಂಖ್ಯೇಯಾ ಘನಾಶ್ಚಾನಃ ಶತಘ್ನೀಶ್ಚ ಸಕಿಂಕಿಣೀಃ ।
ಗದಾಪರಿಘನಿಸ್ತ್ರಿಂಶಶೂಲಮುದ್ಗರಪಟ್ಟಸಾಃ ॥ ೧೬ ॥

ಶಕ್ತ್ಯೃಷ್ಟಿಪ್ರಾಸನಖರಾ ಮುಸಲಾನಿ ಪರಶ್ವಧಾಃ ।
ಕ್ಷುರಾಃ ಕ್ಷುರಪ್ರನಾಲೀಕಾ ವತ್ಸದಂತಾಸ್ತ್ರಿಸಂಧಯಃ ॥ ೧೭ ॥

ಕುಂತಪ್ರಾಸಮಹಾಶಕ್ತಯ ಏವಿಧಾನ್ಯಾಯುಧಾನಿ ಚ ।
ಆಪೇತುಃ ಸರ್ವತೋ ದಿಗ್ಭ್ಯಃ ಪ್ರದಿಗ್ಭ್ಯಶ್ಚಾರ್ಜುನಂ ಪ್ರತಿ ॥ ೧೮ ॥

ಅಸಂಖ್ಯಾತವಾದ ಗಟ್ಟಿ ಬಂಡೆಗಳೂ, ಕಿಂಕಿಣಿಗಳಿಂದ ಸಹಿತವಾದ ಶತಘ್ನಿಗಳು, ಗದಾ-ಪರಿಘ-ಖಡ್ಗಗಳೂ, ಶೂಲ-ಮುದ್ಗರ-ಪಟ್ಟಸಗಳೂ, ಶಕ್ತಿ-ಋಷ್ಟಿ-ಪ್ರಾಸ-ನಖರ-ಮುಸಲ-ಪರಿಶ್ವಧಗಳೂ, ಕ್ಷುರಗಳೂ, ಕ್ಷುರಪ್ರನಾಳಿಗಳೂ, ವತ್ಸದಂತಗಳೂ, ತ್ರಿಸಂಧಿಗಳೂ, ಕುಂತಗಳೂ, ಪ್ರಾಸಗಳೂ, ಮಹಾಶಕ್ತಿಗಳೂ ಮತ್ತು ವಿವಿಧವಾದ ಆಯುಧಗಳೂ ಎಲ್ಲ ದಿಕ್ಕುಗಳಿಂದ ಅರ್ಜುನನ ಮೇಲೆ ಬಿದ್ದವು.

ಖರೋಷ್ಟ್ರಮಹಿಷಾಃ ಸಿಂಹಾ ವ್ಯಾಘ್ರಾಃ ಸೃಮರಭಲ್ಲುಕಾಃ ।
ಋಕ್ಷಾಃ ಸಾಲಾವೃಕಾ ಗೃಧ್ರಾಃ ಕಪಿಶ್ವಾನಸರೀಸೃಪಾಃ ॥ ೧೯ ॥

ವಿವಿಧಾನಿ ಚ ರಕ್ಷಾಂಸಿ ವಿಕ್ಷಿಪ್ತಾನ್ಯರ್ಜುನಂ ಪ್ರತಿ ।
ಸಂಕ್ರುದ್ಧಾನ್ಯಭಿಧಾವಂತಿ ವಿವಿಧಾನಿ ವಯಾಂಸಿ ಚ ॥ ೨೦ ॥

ಕತ್ತೆಗಳೂ, ಒಂಟೆಗಳೂ ಮತ್ತು ಕೋಣಗಳೂ, ಸಿಂಹಗಳೂ, ವ್ಯಾಘ್ರಗಳೂ, ಕಸ್ತೂರಿ ಮೃಗಗಳೂ, ಕರಡಿಗಳೂ, ಋಕ್ಷಗಳೂ, ಸಾಲಾವೃಕಗಳೂ, ಹದ್ದುಗಳೂ, ಕಪಿ-ನಾಯಿ ಮತ್ತು ಸರ್ಪಗಳೂ ಮತ್ತು ವಿವಿಧವಾದ ರಾಕ್ಷಸರೂ ಇವು ಅರ್ಜುನನ ಮೇಲೆ ಎಸೆಯಲ್ಪಟ್ಟವು. ವಿಧ-ವಿಧವಾದ ಪಕ್ಷಿಗಳು ಕೋಪಗೊಂಡು ಅರ್ಜುನನ ಕಡೆಗೆ ಹಾರಿಬಂದವು.

ತತೋ ದಿವ್ಯಾಸ್ತ್ರವಿಚ್ಛೂರಃ ಕುಂತೀಪುತ್ರೋ ಧನಂಜಯಃ ।
ವಿಸೃಜನ್ನಿಷುಜಾಲಾನಿ ಪ್ರಹಸಂಸ್ತಾನ್ಯತಾಡಯತ್ ॥ ೨೧ ॥

ಆಗ ದಿವ್ಯಾಸ್ತ್ರಜ್ಞಾನಿಯೂ, ಶೂರನೂ ಆದ ಕುಂತೀಪುತ್ರನಾದ ಧನಂಜಯನು ನಗುತ್ತಾ, ಬಾಣಸಮೂಹಗಳನ್ನು ಪ್ರಯೋಗಿಸುತ್ತಾ ಅವುಗಳನ್ನು ಹೊಡೆದನು.

ತೇ ಹನ್ಯಮಾನಾಃ ಶೂರೇಣ ಪ್ರವರೈಃ ಸಾಯಕೈರ್ದೃಢೈಃ ।
ವಿರುವಂತೋ ಮಹಾರಾವಾನ್ ವಿನೇಶುಃ ಸರ್ವತೋ ಹತಾಃ ॥ ೨೨ ॥

ಶೂರನಾದ ಅರ್ಜುನನಿಂದ ಶ್ರೇಷ್ಠವಾದ ಮತ್ತು ದೃಢವಾದ ಬಾಣಗಳಿಂದ ಹೊಡೆಯಲ್ಪಟ್ಟ ಅವು ಮಹಾನಾದಗಳನ್ನು ಮಾಡುತ್ತಾ ಎಲ್ಲ ಕಡೆಗಳಲ್ಲಿಯೂ ವಿನಾಶವನ್ನು ಹೊಂದಿದವು.

ತತಸ್ತಮಃ ಪ್ರಾದುರಭೂದ್ ಅರ್ಜುನಸ್ಯಾಭಿತೋ ರಥಮ್ ।
ತಸ್ಮಾಚ್ಚ ತಮಸೋ ವಾಚಃ ಕ್ರೂರಾಃ ಪಾರ್ಥಮಭರ್ತ್ಸಯನ್ ॥ ೨೩ ॥

ಅನಂತರ ಅರ್ಜುನನ ರಥದ ಸುತ್ತಲೂ ಅಂಧಕಾರವು ಪ್ರಾದುರ್ಭವಿಸಿತು. ಆ ಅಂಧಕಾರದಿಂದ ಅರ್ಜುನನನ್ನು ಹೆದರಿಸುವ ಕ್ರೂರವಾದ ಮಾತುಗಳು ಕೇಳಿಬಂದವು.

ತತ್ತಮೋಽಸ್ತ್ರೇಣ ಮಹತಾ ಜ್ಯೋತಿಷೇಣಾರ್ಜುನೋಽವಧೀತ್ ।
ಹತೇ ತಸ್ಮಿನ್ ಜಲೌಘಾಸ್ತು ಪ್ರಾದುರಾಸನ್ ಭಯಾನಕಾಃ ॥ ೨೪ ॥

ಅಂಭಸಸ್ತಸ್ಯ ನಾಶಾರ್ಥಮಾದಿತ್ಯಾಸ್ತ್ರಮಥಾರ್ಜುನಃ ।
ಪ್ರಾಯುಂಕ್ತಾಂಭಸ್ತಥಾಸ್ತ್ರೇಣ ಪ್ರಾಶುಷ್ಯತ್ ತೇನ ಶೋಷಿತಮ್ ॥ ೨೫ ॥

ಅರ್ಜುನನು ದೊಡ್ಡದಾದ ಜ್ಯೋತಿಷಾಸ್ತ್ರದಿಂದ ಆ ತಮಸ್ಸನ್ನು ನಾಶಗೊಳಿಸಿದನು. ತಮಸ್ಸು ನಾಶವನ್ನು ಹೊಂದುತ್ತಿರಲು, ಭಯಂಕರವಾದ ಜಲಪ್ರವಾಹಗಳು ಪ್ರಾದುರ್ಭವಿಸಿದವು. ಆ ಜಲವನ್ನು ನಾಶಮಾಡಲು ಅರ್ಜುನನು ಆದಿತ್ಯಾಸ್ತ್ರವನ್ನು ಪ್ರಯೋಗಿಸಿದನು. ಆ ಆದಿತ್ಯಾಸ್ತ್ರದಿಂದ ಆ ಜಲವು ಒಣಗಿತು.

ಏವಂ ಬಹುವಿಧಾ ಮಾಯಾಃ ಸೌಬಲಸ್ಯ ಕೃತಾಃ ಕೃತಾಃ ।
ಜಘಾನಾಸ್ತ್ರಬಲೇನಾಶು ಪ್ರಹಸನ್ನರ್ಜುನೋಽಬ್ರವೀತ್ ॥ ೨೬ ॥

ಹೀಗೆ ಶಕುನಿಯು ಸೃಷ್ಟಿಸಿದ, ಸೃಷ್ಟಿಸಿದ ಬಹುವಿಧವಾದ ಮಾಯೆಗಳನ್ನು ಅರ್ಜುನನು ನಗುತ್ತಾ ತನ್ನ ಅಸ್ತ್ರಬಲದಿಂದ ಶೀಘ್ರವಾಗಿ ವಿನಾಶಗೊಳಿಸಿ ಶಕುನಿಯನ್ನು ಕುರಿತು ಹೇಳಿದನು.

ದುರ್ದ್ಯೂತದೇವಿನ್ ಗಾಂಧಾರೇ ನಾಕ್ಷಾನ್ ಕ್ಷಿಪತಿ ಗಾಂಡಿವಮ್ ।
ಜ್ವಲಿತಾನ್ನಿಶಿತಾಂಸ್ತೀಕ್ಷ್ಣಾನ್ ಶರಾನ್ ಕ್ಷಿಪತಿ ಗಾಂಡಿವಮ್ ॥ ೨೭ ॥

ದುರ್ದ್ಯೂತವನ್ನು ಆಡುವ ಗಾಂಧಾರನೇ, ಗಾಂಡೀವ ಧನುಸ್ಸು ದಾಳಗಳನ್ನು ಉರುಳಿಸುವುದಿಲ್ಲ. ಅದು ಜ್ವಲಿಸುವ, ತೀಕ್ಷ್ಣವಾದ, ನಿಶಿತವಾದ ಬಾಣಗಳನ್ನು ಎಸೆಯುತ್ತದೆ (ಎಂದು ಹೇಳಿದನು).

ಸಂಜಯಃ

ತಥಾ ಹತಾಸು ಮಾಯಾಸು ತ್ರಸ್ತೋಽರ್ಜುನಶರಾಹತಃ ।
ಅಪಾಯಾಜ್ಜವನೈರಶ್ವೈಃ ಶಕುನಿಃ ಪ್ರಾಕೃತೋ ಯಥಾ ॥ ೨೮ ॥

ಸಂಜಯ– ಆ ರೀತಿಯಲ್ಲಿ ತನ್ನ ಮಾಯೆಗಳು ಅರ್ಜುನನ ಬಾಣಗಳಿಂದ ವಿನಾಶಗೊಳಿಸಲ್ಪಡುತ್ತಿರಲು ಹೆದರಿದ ಶಕುನಿಯು ಪ್ರಾಕೃತ ಮನುಷ್ಯನಂತೆ ವೇಗಶಾಲಿಗಳಾದ ಅಶ್ವಗಳಿಂದ ರಣರಂಗವನ್ನು ಬಿಟ್ಟು ಹೊರಟನು.

ತತೋಽರ್ಜುನೋಽಸ್ತ್ರವಿಚ್ಛೌರ್ಯಂ ದರ್ಶಯನ್ನಾತ್ಮನೋಽರಿಷು ।
ಅಭ್ಯವರ್ಷಚ್ಛರೌಘೇಣ ಕೌರವಾಣಾಮನೀಕಿನೀಮ್ ॥ ೨೯ ॥

ಅನಂತರ ಅರ್ಜುನನು ಶತ್ರುಗಳ ಮೇಲೆ ತನ್ನ ಶೌರ್ಯವನ್ನು ಪ್ರದರ್ಶಿಸುತ್ತಾ, ಕೌರವರ ಸೈನ್ಯದ ಮೇಲೆ ತನ್ನ ಶರಸಮೂಹಗಳಿಂದ ಬಾಣಗಳ ಮಳೆಯನ್ನು ಸುರಿಸಿದನು.

ಸಾ ವಧ್ಯಮಾನಾ ಪಾರ್ಥೇನ ಪುತ್ರಸ್ಯ ತವ ವಾಹಿನೀ ।
ದ್ವೈಧೀಭೂತಾ ಮಹಾರಾಜ ಗಂಗೇವಾಸಾದ್ಯ ಪರ್ವತಮ್ ॥ ೩೦ ॥

ಎಲೈ ಮಹಾರಾಜನೇ, ಪಾರ್ಥನಿಂದ ಹೊಡೆಯಲ್ಪಟ್ಟ ನಿನ್ನ ಸೈನ್ಯವು ಗಂಗೆಯು ಪರ್ವತವನ್ನು ಸೇರಿ ಎರಡು ಕವಲಾದಂತೆ ಎರಡು ಭಾಗವಾಯಿತು.

ದ್ರೋಣಮೇವಾನ್ವಪದ್ಯಂತ ಕೇಚಿತ್ ತತ್ರ ನರರ್ಷಭಾಃ ।
ಕೇಚಿದ್ ದುರ್ಯೋಧನಂ ರಾಜನ್ ತಾಡ್ಯಮಾನಾಃ ಕಿರೀಟಿನಾ ॥೩೧॥

ಅದರಲ್ಲಿ ಕೆಲವು ನರಶ್ರೇಷ್ಠರು ದ್ರೋಣರ ಬಳಿಗೆ ಹೋದರು. ಎಲೈ ರಾಜನೇ, ಇನ್ನು ಕೆಲವರು ಅರ್ಜುನನಿಂದ ಹೊಡೆಯಲ್ಪಟ್ಟು ದುರ್ಯೋಧನನ ಬಳಿಗೆ ಹೋದರು.

ತತ ಏನಂ ನ ಪಶ್ಯಾಮಿ ತೀವ್ರೇಣ ರಜಸಾ ವೃತೇ ।
ಗಾಂಡೀವಸ್ಯ ಚ ನಿರ್ಘೋಷಃ ಶ್ರುತೋ ದಕ್ಷಿಣತೋ ಮಯಾ ॥ ೩೨ ॥

ಅನಂತರ ತೀವ್ರವಾದ ಧೂಳಿನಿಂದ ಆವೃತವಾದ ರಣರಂಗದಲ್ಲಿ ನಾನು ಅರ್ಜುನನನ್ನು ಕಾಣಲಿಲ್ಲ. ದಕ್ಷಿಣ ಭಾಗದಲ್ಲಿ ಗಾಂಡೀವ ನಿರ್ಘೋಷವನ್ನು ನಾನು ಕೇಳಿದೆನು.

ಶಂಖದುಂದುಭಿನಿರ್ಘೋಷಂ ವಾದಿತ್ರಾಣಾಂ ಚ ನಿಸ್ವನಮ್ ।
ಗಾಂಡೀವಸ್ಯ ತು ನಿರ್ಘೋಷೋ ವ್ಯತಿಕ್ರಮ್ಯಾಸ್ಪೃಶದ್ ದಿವಮ್ ॥೩೩॥

ಗಾಂಡೀವದ ನಿರ್ಘೋಷವು ಶಂಖ-ದುಂದುಭಿಗಳ ಘೋಷವನ್ನೂ, ವಾದಿತ್ರಗಳ ಘೋಷವನ್ನೂ ಮೀರಿ ಆಕಾಶವನ್ನು ಮುಟ್ಟಿತು.

ತತಃ ಪುನರ್ದಕ್ಷಿಣತಃ ಸಂಗ್ರಾಮೇ ಚಿತ್ರಯೋಧಿನಃ ।
ಸುಯುದ್ಧಮರ್ಜುನಸ್ಯಾಸೀದ್ ಅಹಂ ಚ ದ್ರೋಣಮನ್ವಗಾಮ್ ।
ಯೌಧಿಷ್ಠಿರಾಣ್ಯನೀಕಾನಿ ಪ್ರಹರಂತಿ ತತಸ್ತತಃ ॥ ೩೪ ॥

ಅನಂತರ ದಕ್ಷಿಣ ದಿಕ್ಕಿನಲ್ಲಿ ರಣರಂಗದಲ್ಲಿ ವಿಚಿತ್ರವಾಗಿ ಯುದ್ಧವನ್ನು ಮಾಡುವ ಅರ್ಜುನನ ಶ್ರೇಷ್ಠವಾದ ಯುದ್ಧವು ಮುಂದುವರಿಯಿತು. ನಾನು ದ್ರೋಣರನ್ನು ಹಿಂಬಾಲಿಸಿದೆನು. ಯುಧಿಷ್ಠಿರನ ಸೈನ್ಯಗಳು ನಮ್ಮನ್ನು ಛಲ್ಲದಿಂದ ಹೊಡೆದವು.

ನಾನಾವಿಧಾನ್ಯನೀಕಾನಿ ತ್ವದೀಯಾನಿ ವಿಶಾಂಪತೇ ।
ಅರ್ಜುನೋ ವ್ಯಧಮತ್ ಕಾಲೇ ದಿವ್ಯಾಭ್ರಾಣೀವ ಮಾರುತಃ ॥ ೩೫ ॥

ಎಲೈ ರಾಜನೇ, ನಿನ್ನ ನಾನಾ ವಿಧವಾದ ಸೈನ್ಯಗಳನ್ನು ಅರ್ಜುನನು ಮಳೆಗಾಲದಲ್ಲಿ ಮಾರುತನು ಆಕಾಶದಲ್ಲಿ ಮೋಡಗಳನ್ನು ನಾಶಪಡಿಸುವಂತೆ ನಾಶಪಡಿಸಿದನು.

ತಂ ವಾಸವಮಿವಾಯಾಂತಂ ಭೂರಿವರ್ಷಂ ಶರೌಘಿಣಮ್ ।
ಮಹೇಷ್ವಾಸಂ ನರವ್ಯಾಘ್ರಂ ನೋಗ್ರಂ ಕಶ್ಚಿದವಾರಯತ್ ॥ ೩೬ ॥

ಇಂದ್ರನಂತೆ ಬಾಣಗಳ ದೊಡ್ಡ ಮಳೆಯನ್ನು ಸುರಿಸುತ್ತಾ ಬರುತ್ತಿದ್ದ ಮಹಾಧನುರ್ಧಾರಿಯೂ, ನರಶ್ರೇಷ್ಠನೂ, ಉಗ್ರನೂ ಆದ ಅವನನ್ನು ನಿನ್ನ ಸೈನ್ಯದಲ್ಲಿ ಯಾವನೂ ತಡೆಯಲಿಲ್ಲ.

ತೇ ಹನ್ಯಮಾನಾಃ ಪಾರ್ಥೇನ ತ್ವದೀಯಾ ವ್ಯಥಿತಾ ಭೃಶಮ್ ।
ಸ್ವಾನೇವ ಬಹವೋ ಜಘ್ನುರ್ವಿದ್ರವಂತಸ್ತತಸ್ತತಃ ॥ ೩೭ ॥

ಪಾರ್ಥನಿಂದ ಹೊಡೆಯಲ್ಪಟ್ಟು ಬಹಳ ವ್ಯಥಿತರಾದ ನಿನ್ನ ಅನೇಕ ಯೋಧರು ಅಲ್ಲಲ್ಲಿಂದ ಓಡುತ್ತಾ ತಮ್ಮವರನ್ನೇ ಕೊಂದರು.

ಅರ್ಜುನೇನೇಷವೋ ಮುಕ್ತಾಃ ಕಂಕಪತ್ರಾಸ್ತನುಚ್ಛಿದಃ ।
ಶಲಭಾ ಇವ ಸಂಪೇತುಃ ಸಂವೃಣ್ವಾನಾ ದಿಶೋ ದಶ ॥ ೩೮ ॥

ಅರ್ಜುನನು ಪ್ರಯೋಗಿಸಿದ ಕಂಕಪತ್ರಗಳನ್ನು ಧರಿಸಿದ, ಶರೀರ ಛೇದಕವಾದ ಬಾಣಗಳು ಹತ್ತು ದಿಕ್ಕುಗಳನ್ನೂ ಆವರಿಸಿ ಪತಂಗಗಳಂತೆ ಎಲ್ಲ ಕಡೆಯಲ್ಲಿಯೂ ಹಾರಿದವು.

ತುರಗಂ ರಥಿನಂ ನಾಗಂ ಪದಾತಿಮಪಿ ಮಾರಿಷ ।
ವಿನಿರ್ಭಿದ್ಯ ಕ್ಷಿತಿಂ ಜಗ್ಮುಃ ಸುಪುಂಖಾಃ ಕರ್ದಮಂ ಯಥಾ ॥ ೩೯ ॥

ಎಲೈ ಪೂಜ್ಯನೇ, ಒಳ್ಳೆಯ ಪುಂಖಗಳನ್ನು ಹೊಂದಿದ ಆ ಬಾಣಗಳು ಅಶ್ವವನ್ನೂ, ರಥಿಕನನ್ನೂ, ಗಜವನ್ನೂ, ಪದಾತಿಯನ್ನೂ ಭೇದಿಸಿ ಕೆಸರಿನೊಳಗೆ ಇಳಿದಂತೆ ಭೂಮಿಯಲ್ಲಿ ಇಳಿದವು.

ನ ಚ ದ್ವಿತೀಯಂ ವ್ಯಸೃಜತ್ ಕುಂಜರಾಶ್ವನರೇಷು ಸಃ ।
ವ್ಯಕ್ತಮೇಕಶರಾರುಗ್ಣಾ ನಿಪೇತುಸ್ತೇ ಗತಾಸವಃ ॥ ೪೦ ॥

ಅರ್ಜುನನು ಗಜಾಶ್ವ-ಪದಾತಿಗಳಲ್ಲಿ ಎರಡನೆಯ ಬಾಣಗಳನ್ನು ಪ್ರಯೋಗಿಸಲಿಲ್ಲ. ಸ್ಪಷ್ಟವಾಗಿ ಒಂದು ಬಾಣದಿಂದಲೇ ಅವರು ಪೀಡಿತರಾಗಿ ಪ್ರಾಣಗಳನ್ನು ಕಳೆದುಕೊಂಡು ಭೂಮಿಯ ಮೇಲೆ ಬಿದ್ದರು.

ಹತೈರ್ಮನುಷ್ಯೈಃ ಸ್ತುರಗೈಶ್ಚ ಸರ್ವತಃ
ಶರಾಭಿಮೃಷ್ಟೈಶ್ಚ ಗಜೈರ್ನಿಪಾತಿತೈಃ ।
ಸೃಗಾಲಗೋಮಾಯುಬಲಾಭಿನಾದಿತಂ
ವಿಚಿತ್ರಮಾಯೋಧಶಿರೋ ಬಭೂವ ಹ ॥ ೪೧ ॥

ಹತರಾದ ಮನುಷ್ಯರಿಂದಲೂ, ಮೃಗಗಳಿಂದಲೂ, ಎಲ್ಲ ಕಡೆಯಲ್ಲಿಯೂ ಬಿದ್ದ ಬಾಣಗಳಿಂದ ಹೊಡೆಯಲ್ಪಟ್ಟ ಗಜಗಳಿಂದಲೂ ಮತ್ತು ನರಿ, ಬಲ ಮೊದಲಾದ ಮಾಂಸಾಹಾರಿ ಪ್ರಾಣಿಗಳನಾದದಿಂದಲೂ ಕೂಡಿದ ಆ ರಣಭೂಮಿಯು ವಿಚಿತ್ರವಾಗಿದ್ದಿತು.

ಪಿತಾ ಸುತಂ ತ್ಯಜತಿ ಸಖಾ ಸಖಾಯಂ ।
ತಥೈವ ಪುತ್ರಃ ಪಿತರಂ ಶರಾತುರಮ್ ।
ಸ್ವರಕ್ಷಣೇ ಕೃತಮನಸಸ್ತದಾ ನರಾಃ
ತ್ಯಜಂತಿ ವಾಹಾನಪಿ ಪಾರ್ಥಪೀಡಿತಾಃ ॥ ೪೨ ॥

ತಂದೆಯು ಮಗನನ್ನು ತ್ಯಜಿಸಿದನು, ಮಿತ್ರನು ಮಿತ್ರನನ್ನು ತ್ಯಜಿಸಿದನು. ಹಾಗೆಯೇ, ಶರಾತುರನಾದ ತಂದೆಯನ್ನು ಮಗನು ತ್ಯಜಿಸಿದನು. ಆಗ ಪಾರ್ಥ ಪೀಡಿತರಾದ ಯೋಧರು ತಮ್ಮ ರಕ್ಷಣೆಯಲ್ಲಿ ಆಸಕ್ತರಾಗಿ ತಮ್ಮ ವಾಹನಗಳನ್ನೂ ತೊರೆದರು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಏಕೋನತ್ರಿಂಶೋಽಧ್ಯಾಯಃ ॥

॥ ಸಂಶಪ್ತಕವಧಪರ್ವಣಿ ಚತುರ್ದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಇಪ್ಪತ್ತೊಂಬತ್ತನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ಮೂವತ್ತನೆಯ ಅಧ್ಯಾಯ

ಅಶ್ವತ್ಥಾಮರಿಂದ ನೀಲನ ವಧೆ.

ಧೃತರಾಷ್ಟ್ರಃ

ತೇಷ್ವನೀಕೇಷು ಭಗ್ನೇಷು ಪಾಂಡುಪುತ್ರೇಣ ಸಂಜಯ ।
ಚಲಿತಾನಾಂ ದ್ರುತಾನಾಂ ಚ ಕಥಮಾಸೀನ್ಮನಾಂಸಿ ವಃ ॥ ೧ ॥

ಧೃತರಾಷ್ಟ್ರ– ಎಲೈ ಸಂಜಯನೇ, ಪಾಂಡುಪುತ್ರನಾದ ಅರ್ಜುನನಿಂದ ಆ ಸೈನ್ಯಗಳು ಭಗ್ನವಾಗುತ್ತಿರಲು ಅಲ್ಲಿಂದ ಓಡಿಹೋದ ನಿಮ್ಮ ಮನಸ್ಸುಗಳು ಹೇಗಿದ್ದವು?

ಅನೀಕಾನಾಂ ಪ್ರಭಗ್ನಾನಾಮಧಿಷ್ಠಾನಮಪಶ್ಯತಾಮ್ ।
ದುಷ್ಕರಂ ಪ್ರತಿಸಂಧಾನಂ ತನ್ಮಾಚಕ್ಷ್ವ ಸಂಜಯ ॥ ೨ ॥

ಒಂದು ಆಶ್ರಯವನ್ನು ಕಾಣದೆ ಭಗ್ನಗೊಂಡ ಸೈನ್ಯಗಳನ್ನು ಪುನಃ ಒಂದುಗೂಡಿಸುವುದು ಕಷ್ಟಕರವಾದ ಕೆಲಸ. ಸಂಜಯನೇ, ಅದನ್ನು ನನಗೆ ಹೇಳು.

ಸಂಜಯಃ

ತೇ ತಥಾ ಹತಭೂಯಿಷ್ಠಾಸ್ತವ ಪ್ರಿಯಹಿತೈಷಿಣಃ ।
ಯಶಃ ಪ್ರವೀರಾ ಲೋಕೇಷು ರಕ್ಷಂತೋ ದ್ರೋಣಮನ್ವಯುಃ ॥ ೩ ॥

ಸಂಜಯ– ಆ ರೀತಿಯಲ್ಲಿ ಹೆಚ್ಚಾಗಿ ಹತರಾಗಿ ಉಳಿದ ನಿನ್ನ ಪ್ರಿಯ ಹಿತೈಷಿಗಳಾದ, ಶ್ರೇಷ್ಠರಾದ ವೀರರು ಲೋಕದಲ್ಲಿ ತಮ್ಮ ಕೀರ್ತಿಯನ್ನು ರಕ್ಷಿಸಿಕೊಳ್ಳುತ್ತಾ ದ್ರೋಣರನ್ನು ಹಿಂಬಾಲಿಸಿದರು.

ಸಮುದ್ಯತೇಷು ಶಸ್ತ್ರೇಷು ಸಂಪ್ರಾಪ್ತೇ ಚ ಯುಧಿಷ್ಠಿರೇ ।
ಅಕುರ್ವನ್ನಾರ್ಯಕರ್ಮಾಣಿ ಭೈರವೇ ಸತ್ಯವಿಕ್ರಮಾಃ ॥ ೪ ॥

ಯುಧಿಷ್ಠಿರನು ಯುದ್ಧವನ್ನು ಮಾಡಲು ಸಂಪ್ರಾಪ್ತನಾಗಿ ಅವನಿಂದ ಶಸ್ತ್ರಗಳು ಎತ್ತಿ ಹಿಡಿಯಲ್ಪಡುತ್ತಿರಲು ಸತ್ಯಪರಾಕ್ರಮವುಳ್ಳ ಆ ವೀರರು ಭೀಕರವಾದ ರಣರಂಗದಲ್ಲಿ ಉದಾತ್ತವಾದ ಕರ್ಮಗಳನ್ನು ಮಾಡಿದರು.

ಅಂತರಂ ಭೀಮಸೇನಸ್ಯ ಪ್ರಾಪತನ್ನಮಿತೌಜಸಃ ।
ಸಾತ್ಯಕಸ್ಯ ಚ ವೀರಸ್ಯ ಧೃಷ್ಟದ್ಯುಮ್ನಸ್ಯ ಪಾರ್ಥಿವಾಃ ॥ ೫ ॥

ಅಮಿತ ಪರಾಕ್ರಮಿಗಳಾದ ರಾಜರು ಭೀಮಸೇನನ, ಸಾತ್ಯಕಿಯ ಮತ್ತು ಧೃಷ್ಟದ್ಯುಮ್ನನ ನಡುವಿನ ಅಂತರದಲ್ಲಿ ಮುಂದೆ ಸಾಗಿದರು.

ದ್ರೋಣಂ ದ್ರೋಣಮಿತಿ ಕ್ರುದ್ಧಾಃ ಪಾಂಚಾಲಾಃ ಸಮಚೋದಯನ್ ।
ಮಾ ದ್ರೋಣಮಿತಿ ತೇ ಪುತ್ರಾಃ ಸ್ವಸೈನ್ಯಂ ಸಮಚೋದಯನ್ ॥ ೬ ॥

ಕೋಪಗೊಂಡ ಪಾಂಚಾಲರು ದ್ರೋಣರನ್ನು ಹೊಡೆಯಿರಿ, ದ್ರೋಣರನ್ನು ಹೊಡೆಯಿರಿ ಎಂದು ತಮ್ಮ ಯೋಧರನ್ನು ಪ್ರಚೋದಿಸಿದರು.

ನಿನ್ನ ಪುತ್ರರು ದ್ರೋಣರನ್ನು ಹೊಡೆಯುವುದು ಬೇಡ (ಅವರನ್ನು ರಕ್ಷಿಸಿರಿ) ಎಂದು ತಮ್ಮ ಸೈನ್ಯವನ್ನು ಪ್ರಚೋದಿಸಿದರು.

ಪಾಂಡವಾ ದ್ರೋಣಮಿತ್ಯೇವಂ ಮಾ ದ್ರೋಣಮಿತಿ ಚಾಪರೇ ।
ಪಾಂಡವಾನಾಂ ಕುರೂಣಾಂ ಚ ದ್ರೋಣದ್ಯೂತಮವರ್ತತ ॥ ೭ ॥

ಪಾಂಡವರು ದ್ರೋಣರನ್ನು ಎಂದೂ, ಉಳಿದವರು ದ್ರೋಣರಲ್ಲವೆಂದೂ ಹೇಳುತ್ತಾ ಪಾಂಡವರಿಗೆ ಮತ್ತು ಕೌರವರಿಗೆ ದ್ರೋಣರನ್ನು ಪಣವಾಗಿಟ್ಟ ದ್ಯೂತವು ಜರುಗಿತು.

ಯಂ ಯಂ ಪ್ರಮಥತೇ ದ್ರೋಣಃ ಪಾಂಡವಾನಾಂ ರಥವ್ರಜಮ್ ।
ತತ್ರ ತತ್ರ ಸ ಪಾಂಚಾಲೋ ಧೃಷ್ಟದ್ಯುಮ್ನೋ ವಿಧೀಯತೇ ॥ ೮ ॥

ದ್ರೋಣರು ಪಾಂಡವರ ರಥಸಮೂಹದಲ್ಲಿ ಯಾವ ಯಾವನನ್ನು ಮರ್ದಿಸುತ್ತಾರೆಯೋ ಅಲ್ಲಲ್ಲಿ ಪಾಂಚಾಲನಾದ ಧೃಷ್ಟದ್ಯುಮ್ನನು ಕಳುಹಿಸಲ್ಪಟ್ಟನು.

ತೇಷಾಂ ಭಾಗ್ಯವಿಪರ್ಯಾಸೇ ಸಂಗ್ರಾಮೇ ಭೈರವೇ ಸತಿ ।
ವೀರಾಃ ಸಮಾಸದನ್ ವೀರಾನ್ ನಾಗಚ್ಛನ್ ಭೀರವಃ ಪರಾನ್ ॥ ೯ ॥

ಅವರ ಭಾಗ್ಯಗಳು ವ್ಯತ್ಯಾಸಗೊಂಡು ಭಯಂಕರವಾದ ಯುದ್ಧವು ನಡೆಯುತ್ತಿರುವಾಗ ವೀರರು ವೀರರನ್ನು ಸಮೀಪಿಸಿ ಎದುರಿಸಿದರು. ಹೇಡಿಗಳು ಶತ್ರುಗಳ ಬಳಿಗೆ ಹೋಗಲೇ ಇಲ್ಲ.

ಅಕಂಪನೀಯಾಃ ಶತ್ರೂಣಾಮಭವಂಸ್ತತ್ರ ಪಾಂಡವಾಃ ।
ಅಕಂಪಯನ್ನನೀಕಾನಿ ಸ್ಮರಂತಃ ಕ್ಲೇಶಮಾತ್ಮನಃ ॥ ೧೦ ॥

ಶತ್ರುಗಳಿಂದ ಅಲುಗಾಡಿಸಲ್ಪಡಲು ಸಾಧ್ಯವಿಲ್ಲದ ಪಾಂಡವರು ಅಲ್ಲಿ ತಮ್ಮ ಹಿಂದಿನ ಕ್ಲೇಶಗಳನ್ನು ಸ್ಮರಿಸುತ್ತಾ ನಿನ್ನ ಸೈನ್ಯಗಳನ್ನು ನಡುಗಿಸಿದರು.

ತೇ ಹ್ಯಮರ್ಷವಶಂ ಪ್ರಾಪ್ತಾ ಹ್ರೀಮಂತಃ ಸತ್ತ್ವಚೋದಿತಾಃ ।
ತ್ಯಕ್ತ್ವಾ ಪ್ರಾಣಾನವರ್ತಂತ ನಿಘ್ನಂತೋ ದ್ರೋಣಮಾಹವೇ ॥ ೧೧ ॥

ನಾಚಿಕೆಯುಳ್ಳವರೂ, ತಮ್ಮ ಧೈರ್ಯದಿಂದ ಪ್ರೇರಿತರಾದವರೂ ಆದ ಅವರು ರೋಷಕ್ಕೆ ವಶರಾಗಿ ತಮ್ಮ ಪ್ರಾಣಗಳನ್ನು ಲೆಕ್ಕಿಸದೆ ರಣರಂಗದಲ್ಲಿ ದ್ರೋಣರನ್ನು ಹೊಡೆದರು.

ಅಯಸಾಮಿವ ಸಂಘಾತಃ ಶಿಲಾನಾಮಿವ ಚಾಭವತ್ ।
ದೀವ್ಯತಾಂ ತುಮುಲೇ ಯುದ್ಧೇ ಪ್ರಾಣೈರಮಿತತೇಜಸಾಮ್ ॥ ೧೨ ॥

ತೀವ್ರವಾದ ಯುದ್ಧದಲ್ಲಿ ಪ್ರಾಣಗಳಿಂದ ದ್ಯೂತವನ್ನಾಡುವ, ಅಮಿತ ತೇಜಸ್ವಿಗಳಾದ ಅವರ ಸಂಘರ್ಷವು ಶಿಲೆಗಳ ಸಂಘರ್ಷದಂತೆ, ಕಬ್ಬಿಣದ ಸಂಘಾತಗಳಂತೆ ಇದ್ದಿತು.

ನಾನುಸ್ಮರಂತಿ ಸಂಗ್ರಾಮಂ ವೃದ್ಧಾಶ್ಚಾಪಿ ತಥಾವಿಧಮ್ ।
ಯೇ ಪೂರ್ವದೇವೈರ್ದೇವಾನಾಮಪಶ್ಯನ್ ಪೂರ್ವಮದ್ಭುತಮ್ ।
ದೃಷ್ಟಪೂರ್ವಂ ನ ವೈ ರಾಜನ್ ಶ್ರುತಪೂರ್ವಮಥಾಪಿ ವಾ ॥ ೧೩ ॥

ಯಾವ ವೃದ್ಧರು ಅಸುರರಿಗೂ ಮತ್ತು ದೇವತೆಗಳಿಗೂ ಹಿಂದೆ ನಡೆದ ಅದ್ಭುತವಾದ ಯುದ್ಧವನ್ನು ನೋಡಿದ್ದರೋ ಅವರೂ ಸಹ ಕುರು-ಪಾಂಡವರಿಗೆ ನಡೆಯುತ್ತಿರುವ ಸಂಗ್ರಾಮದಂತಹ ಸಂಗ್ರಾಮವನ್ನು ಸ್ಮರಿಸಲಿಲ್ಲ.

ಎಲೈ ರಾಜನೇ, ಇಂತಹ ಯುದ್ಧವನ್ನು ಹಿಂದೆ ನೋಡಿಯೂ ಇರಲಿಲ್ಲ ಅಥವಾ ಕೇಳಿಯೂ ಇರಲಿಲ್ಲ.

ಪ್ರಕಂಪತೇ ಚ ಪೃಥಿವೀ ತತ್ರ ವೀರಾವಸಾದನೇ ।
ವಿವರ್ತತಾ ಜನೌಘೇನ ಮಹತಾ ಭಾರಪೀಡಿತಾ ॥ ೧೪ ॥

ಎಲ್ಲ ವೀರರೂ ಒಂದುಗೂಡಿದ ಕಡೆಯಲ್ಲಿ ಭೂಮಿಯು ಯೋಧರ ಸಮೂಹದ ಮಹಾಭಾರದಿಂದ ಪೀಡಿತವಾಗಿ ನಡುಗಿತು.

ಬಲೌಘಸ್ಯ ಚ ಭೀಮಸ್ಯ ದಿವಂ ಸ್ತಬ್ಧ್ವೇವ ನಿಸ್ವನಃ ।
ಅಜಾತಶತ್ರೋಃ ಕ್ರುದ್ಧಸ್ಯ ಪುತ್ರಸ್ಯ ತವ ಚಾಭವತ್ ॥ ೧೫ ॥

ಕ್ರುದ್ಧನಾದ ಅಜಾತಶತ್ರುವಿನ ಮತ್ತು ನಿನ್ನ ಪುತ್ರನ ಭಯಂಕರವಾದ ಸೈನ್ಯ ಸಮೂಹದಿಂದ ಉಂಟಾದ ದೊಡ್ಡ ನಾದವು ಆಕಾಶವನ್ನು ಸ್ತಬ್ಧಗೊಳಿಸುವವಂತೆ ಇದ್ದಿತು.

ಸಮಾಸಾದ್ಯ ಚ ಪಾಂಡೂನಾಮನೀಕಾನಿ ಸಹಸ್ರಶಃ ।
ದ್ರೋಣೇನ ಚರತಾ ಸಂಖ್ಯೇ ಪ್ರಭಗ್ನಾನಿ ಶಿತೈಃ ಶರೈಃ ॥ ೧೬ ॥

ದ್ರೋಣರು ಯುದ್ಧದಲ್ಲಿ ಸಂಚರಿಸುತ್ತಾ ಪಾಂಡವರ ಸೈನ್ಯಗಳನ್ನು ಸಮೀಪಿಸಿ ತಮ್ಮ ಬಾಣಗಳಿಂದ ಸಹಸ್ರ ಸಂಖ್ಯೆಯಲ್ಲಿ ಅವುಗಳನ್ನು ಭಗ್ನಗೊಳಿಸಿದರು.

ತೇಷು ಪ್ರಮಥ್ಯಮಾನೇಷು ದ್ರೋಣೇನಾದ್ಭುತಕರ್ಮಣಾ ।
ಪರ್ಯವಾರಯದಾಸಾದ್ಯ ದ್ರೋಣಂ ಸೇನಾಪತಿಃ ಸ್ವಯಮ್ ॥ ೧೭ ॥

ಅದ್ಭುತ ಕಾರ್ಯವನ್ನು ಮಾಡುವ ದ್ರೋಣರಿಂದ ಸೈನ್ಯವು ಮರ್ದಿಸಲ್ಪಡುತ್ತಿರಲು ಸೇನಾಪತಿಯಾದ ಧೃಷ್ಟದ್ಯುಮ್ನನು ಸ್ವತಃ ಬಂದು ದ್ರೋಣರನ್ನು ಎಲ್ಲ ಕಡೆಗಳಿಂದ ತಡೆದನು.

ತದ್ ಯುದ್ಧಮಭವದ್ ಘೋರಂ ದ್ರೋಣಪಾಂಚಾಲ್ಯಯೋಸ್ತದಾ ।
ನೈವ ತಸ್ಯೋಪಮಾ ಕಾಚಿದಿತಿ ಮೇ ನಿಶ್ಚಿತಾ ಮತಿಃ ॥ ೧೮ ॥

ದ್ರೋಣ-ಪಾಂಚಾಲರಿಗೆ ಆಗ ಘೋರವಾದ ಯುದ್ಧವು ಉಂಟಾಯಿತು. ಆ ಯುದ್ಧಕ್ಕೆ ಯಾವ ದೃಷ್ಟಾಂತವೂ ಇಲ್ಲವೆಂದು ನನ್ನ ನಿಶ್ಚಿತವಾದ ಅಭಿಪ್ರಾಯ.

ತತೋ ನೀಲೋಽನಲಪ್ರಖ್ಯಃ ದದಾಹ ಕುರುವಾಹಿನೀಮ್ ।
ಶರಸ್ಫುಲಿಂಗಶ್ಚಾಪಾರ್ಚಿಃ ಶುಷ್ಕಕಕ್ಷಮಿವಾನಲಃ ॥ ೧೯ ॥

ಆಗ ನೀಲನು (ಇವನು ಒಬ್ಬ ಪಾಂಚಾಲ ರಾಜ) ಶರಗಳೆಂಬ ಕಿಡಿಗಳಿಂದಲೂ, ಚಾಪವೆಂಬ ಜ್ವಾಲೆಯಿಂದಲೂ ಕೂಡಿದವನಾಗಿ ಅಗ್ನಿಯನ್ನು ಹೋಲುತ್ತಾ, ಅಗ್ನಿಯು ಒಣಗಿದ ಹುಲ್ಲುಗಾವಲನ್ನು ಸುಡುವಂತೆ ಕೌರವರ ಸೈನ್ಯವನ್ನು ದಹಿಸಿದನು.

ತಂ ದಹಂತಮನೀಕಾನಿ ದ್ರೋಣಪುತ್ರಃ ಪ್ರತಾಪವಾನ್ ।
ಪೂರ್ವಾಭಿಭಾಷೀ ಸುಶ್ಲಕ್ಷ್ಣಂ ಸ್ಮಯಮಾನೋಽಭ್ಯಭಾಷತ ॥ ೨೦ ॥

ಸೈನ್ಯವನ್ನು ಸುಡುತ್ತಿದ್ದ ಅವನನ್ನು ಕುರಿತು ಪ್ರತಾಪಶಾಲಿಯಾದ, ದ್ರೋಣ ಪುತ್ರರಾದ ಅಶ್ವತ್ಥಾಮರು ನಗುತ್ತಾ ಮೊದಲೇ ಮಾತನಾಡಿಸುವ ಅವರು ಮಧುರವಾಗಿ ಮಾತನಾಡಿದರು.

ನೀಲ ಕಿಂ ಬಹುಭಿರ್ದಗ್ಧೈಸ್ತವ ಯೋಧೈಃ ಶರಾರ್ಚಿಷಾ ।
ಮಯೈಕೇನೈವ ಯುದ್ಧ್ಯಸ್ವ ಕ್ರುದ್ಧಃ ಪ್ರಹರ ಚಾಶುಗೈಃ ॥ ೨೧ ॥

ಎಲೈ ನೀಲನೇ, ನಿನ್ನ ಬಾಣದ ಜ್ವಾಲೆಗಳಿಂದ ಬಹಳ ಯೋಧರನ್ನು ದಹಿಸುವುದರಿಂದ ಏನು ಪ್ರಯೋಜನ? ನನ್ನೊಬ್ಬನ ಜೊತೆಯಲ್ಲಿಯೇ ಯುದ್ಧವನ್ನು ಮಾಡು. ಕೋಪಗೊಂಡು ಶೀಘ್ರಗಾಮಿಗಳಾದ ಬಾಣಗಳಿಂದ ನನ್ನನ್ನು ಹೊಡೆ (ಎಂದು ಹೇಳಿದರು).

ಸಂಜಯಃ

ತಂ ಪದ್ಮನಿಕರಾಕಾರಂ ಪದ್ಮಪತ್ರನಿಭೇಕ್ಷಣಮ್ ।
ವ್ಯಾಕೋಶಪದ್ಮಾಭಮುಖಂ ನೀಲೋ ವಿವ್ಯಾಧ ಪತ್ರಿಭಿಃ ॥ ೨೨ ॥

ಸಂಜಯ– ನೀಲನು ಪದ್ಮಸಮೂಹದ ಆಕಾರವನ್ನು ಹೊಂದಿದ್ದ, ಪದ್ಮದಳದಂತಹ ಕಣ್ಣುಗಳನ್ನು ಹೊಂದಿದ, ಅರಳಿದ ಪದ್ಮದಂತಹ ಮುಖವನ್ನು ಹೊಂದಿದ ಅಶ್ವತ್ಥಾಮರನ್ನು ಬಾಣಗಳಿಂದ ಹೊಡೆದರು.

ತೇನಾತಿವಿದ್ಧಃ ಸಹಸಾ ದ್ರೌಣಿರ್ಭಲ್ಲೈಸ್ತ್ರಿಭಿಃ ಶಿತೈಃ ।
ಧನುರ್ಧ್ವಜಂ ಚ ಛತ್ರಂ ಚ ದ್ವಿಷತಃ ಸನ್ನ್ಯಕೃಂತತ ॥ ೨೩ ॥

ಅವನಿಂದ ಬಹಳವಾಗಿ ಹೊಡೆಯಲ್ಪಟ್ಟ ಅಶ್ವತ್ಥಾಮರು ತಕ್ಷಣ ಮೂರು ಹರಿತವಾದ ಭಲ್ಲಗಳಿಂದ ಶತ್ರುವಾದ ಅವನ ಧನುಸ್ಸನ್ನೂ, ಧ್ವಜವನ್ನೂ ಮತ್ತು ಛತ್ರವನ್ನೂ ಚೆನ್ನಾಗಿ ಕತ್ತರಿಸಿದರು.

ಸೋತ್ಪ್ಲುತ್ಯ ಸ್ಯಂದನಾತ್ ತಸ್ಮಾನ್ನೀಲಶ್ಚರ್ಮವರಾಸಿಧೃಕ್ ।
ದ್ರೌಣಾಯನೇಃ ಶಿರಃ ಕಾಯಾದ್ಧರ್ತುಮೈಚ್ಛತ್ ಪತತ್ರಿವತ್ ॥ ೨೪ ॥

ನೀಲನು ಖಡ್ಗ-ಚರ್ಮಗಳನ್ನು ಹಿಡಿದು ಪಕ್ಷಿಯಂತೆ ತನ್ನ ರಥದಿಂದ ಮೇಲಕ್ಕೆ ಹಾರಿ, ಅಶ್ವತ್ಥಾಮರ ಶಿರಸ್ಸನ್ನು ಅವರ ದೇಹದಿಂದ ಕತ್ತರಿಸಲು ಬಯಸಿದನು.

ತಸ್ಯೋದ್ಯತಾಸೇಶ್ಚರತಃ ಶಿರಃ ಕಾಯಾತ್ ಸಕುಂಡಲಮ್ ।
ಭಲ್ಲೇನಾಪಾಹರದ್ ದ್ರೌಣಿಃ ಸ್ಮಯಮಾನ ಇವಾನಘ ॥ ೨೫ ॥

ಎಲೈ ಅನಘನೇ, ಅಶ್ವತ್ಥಾಮರು ಕತ್ತಿಯನ್ನು ಎತ್ತಿ ತಿರುಗುವ ಅವನ ಕುಂಡಲ ಸಹಿತವಾದ ಶಿರಸ್ಸನ್ನು ಭಲ್ಲದಿಂದ ನಗುತ್ತಲೇ ಅವನ ಶರೀರದಿಂದ ಕತ್ತರಿಸಿದರು.

ಸಂಪೂರ್ಣಚಂದ್ರಾಭಮುಖಃ ಪದ್ಮಪತ್ರನಿಭೇಕ್ಷಣಃ ।
ಪ್ರಾಂಶುರುತ್ಪಲಪತ್ರಾಭೋ ನಿಹತೋ ನ್ಯಪತದ್ ಭುವಿ ॥ ೨೬ ॥

ಪೂರ್ಣಚಂದ್ರನಂತಹ ಮುಖವುಳ್ಳವನೂ, ಪದ್ಮದಳದಂತಹ ಕಣ್ಣುಳ್ಳವನೂ, ಉನ್ನತನಾದವನೂ, ಉತ್ಪಲ ಪತ್ರದ ಕಾಂತಿಯುಳ್ಳವನೂ ಆದ ನೀಲನು ಹತನಾಗಿ ಭೂಮಿಯ ಮೇಲೆ ಬಿದ್ದನು.

ತತಃ ಪ್ರವಿವ್ಯಥೇ ಸೇನಾ ಪಾಂಡವೀ ಭೃಶಮಾಕುಲಾ ।
ಆಚಾರ್ಯಪುತ್ರೇಣ ಹತೇ ನೀಲೇ ಜ್ವಲಿತತೇಜಸಿ ॥ ೨೭ ॥

ಆಚಾರ್ಯಪುತ್ರರಾದ ಅಶ್ವತ್ಥಾಮರಿಂದ ಜ್ವಲಿಸುವ ತೇಜಸ್ಸುಳ್ಳ ನೀಲನು ಹತನಾಗುತ್ತಿರಲು ಪಾಂಡವರ ಸೇನೆಯು ಆಕುಲಗೊಂಡು ಬಹಳವಾಗಿ ವ್ಯಥೆಯನ್ನು ಹೊಂದಿತು.

ಅಚಿಂತಯಂಶ್ಚ ತೇ ಸರ್ವೇ ಪಾಂಡವಾನಾಂ ಮಹಾರಥಾಃ ।
ಕಥಂ ನೋ ವಾಽಸ್ತಿ ನಾಯಾತ್ ಶತ್ರುಭ್ಯ ಇತಿ ಮಾರಿಷ ॥೨೮॥

ಎಲೈ ಪೂಜ್ಯನೇ, ಮಹಾರಥರಾದ ಎಲ್ಲ ಪಾಂಡವರು ಶತ್ರುಗಳಿಂದ ನಮಗೆ ಹೇಗೆ ಅನಿಷ್ಟವು ಉಂಟಾಗಲಾರದು ಎಂದು ಚಿಂತಿಸಿದರು.

ದಕ್ಷಿಣೇನ ತು ಸೇನಾಯಾಃ ಕುರುತೇ ಕದನಂ ಬಲೀ ।
ಸಂಶಪ್ತಕಾವಶೇಷಸ್ಯ ನಾರಾಯಣಬಲಸ್ಯ ಚ ॥ ೨೯ ॥

ಸೈನ್ಯದ ದಕ್ಷಿಣ ಭಾಗದಲ್ಲಿ ಬಲಿಷ್ಠನಾದ ಅರ್ಜುನನು ಉಳಿದ ಸಂಶಪ್ತಕರ ಮತ್ತು ನಾರಾಯಣಸೇನೆಯ ಜೊತೆಯಲ್ಲಿ ಯುದ್ಧವನ್ನು ಮಾಡುತ್ತಿದ್ದಾನೆ (ಎಂದು ಚಿಂತಿಸಿದರು).

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ತ್ರಿಂಶೋಽಧ್ಯಾಯಃ ॥

॥ ಸಂಶಪ್ತಕವಧಪರ್ವಣಿ ಪಂಚದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಮೂವತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮೂವತ್ತೊಂದನೆಯ ಅಧ್ಯಾಯ

ಸಂಕುಲ ಯುದ್ಧ ವರ್ಣನೆ. ದ್ರೋಣರ ಸೇನಾಪತ್ಯದಲ್ಲಿ
ಎರಡನೆಯ ದಿವಸದ ಸೇನಾವಹಾರ.

ಸಂಜಯಃ

ಪ್ರತಿಘಾತಂ ತು ಸೈನ್ಯಾನಾಂ ನಾಮೃಷ್ಯತ ವೃಕೋದರಃ ।
ಅಭಿನದ್ ಬಾಹ್ಲಿಕಂ ಷಷ್ಟ್ಯಾ ಕರ್ಣಂ ಚ ದಶಭಿಃ ಶರೈಃ ॥ ೧ ॥

ಸಂಜಯ– ತನ್ನ ಸೈನ್ಯದ ಪ್ರತಿಘಾತವನ್ನು ವೃಕೋದರನು ಸಹಿಸಲಿಲ್ಲ. ಅವನು ಬಾಹ್ಲಿಕನನ್ನು ಅರವತ್ತು ಬಾಣಗಳಿಂದಲೂ, ಕರ್ಣನನ್ನು ಹತ್ತು ಬಾಣಗಳಿಂದಲೂ ಭೇದಿಸಿದನು.

ತಸ್ಯ ದ್ರೋಣಃ ಶಿತೈರ್ಬಾಣೈಸ್ತೀಕ್ಷ್ಣಧಾರೈಃ ಸುತೇಜನೈಃ ।
ಜೀವಿತಾಂತಮಭಿಪ್ರೇಪ್ಸುರ್ಮರ್ಮಣ್ಯಭ್ಯಹನದ್ ಬಲೀ ॥ ೨ ॥

ಬಲಿಷ್ಠರಾದ ದ್ರೋಣರು ವೃಕೋದರನನ್ನು ವಧೆ ಮಾಡಲು ಬಯಸಿ ತೀಕ್ಷ್ಣವಾದ ಅಲುಗುಗಳುಳ್ಳ ವೇಗಶಾಲಿಗಳಾದ ನಿಶಿತವಾದ ಬಾಣಗಳಿಂದ ಭೀಮಸೇನನ ಮರ್ಮಗಳಲ್ಲಿ ಹೊಡೆದರು.

ಕರ್ಣೋ ದ್ವಾದಶಭಿರ್ಬಾಣೈರಶ್ವತ್ಥಾಮಾ ಚ ಸಪ್ತಭಿಃ ।
ಷಷ್ಟ್ಯಾ ದುರ್ಯೋಧನೋ ರಾಜಾ ತ ಏನಂ ಸಮವಾರಯನ್ ॥ ೩ ॥

ಕರ್ಣನು ಹನ್ನೆರಡು ಬಾಣಗಳಿಂದಲೂ, ಅಶ್ವತ್ಥಾಮರು ಏಳು ಬಾಣಗಳಿಂದಲೂ, ರಾಜನಾದ ದುರ್ಯೋಧನನು ಅರವತ್ತು ಬಾಣಗಳಿಂದಲೂ ಭೀಮಸೇನನನ್ನು ತಡೆದರು.

ಭೀಮಸೇನೋಽಪಿ ತಾನ್ ಸರ್ವಾನ್ ಪ್ರತ್ಯವಿಧ್ಯನ್ಮಹಾಬಲಃ ।
ದ್ರೋಣಂ ಪಂಚಾಶತಾ ಭಲ್ಲೈಃ ಕರ್ಣಂ ಚ ದಶಭಿಃ ಶರೈಃ ॥ ೪ ॥

ದುರ್ಯೋಧನಂ ದ್ವಾದಶಭಿರ್ದ್ರೌಣಿಮಷ್ಟಭಿರಾಶುಗೈಃ ।
ಆರಾವಂ ತುಮುಲಂ ಕುರ್ವನ್ನಭ್ಯವರ್ತತ ತಾನ್ ರಣೇ ॥ ೫ ॥

ಮಹಾಬಲನಾದ ಭೀಮಸೇನನು ಅವರೆಲ್ಲರನ್ನೂ ಬಾಣಗಳಿಂದ ಹೊಡೆದನು. ದ್ರೋಣರನ್ನು ಐವತ್ತು ಭಲ್ಲಗಳಿಂದಲೂ, ಕರ್ಣನನ್ನು ಹತ್ತು ಬಾಣಗಳಿಂದಲೂ, ದುರ್ಯೋಧನನನ್ನು ಹನ್ನೆರಡು ಬಾಣಗಳಿಂದಲೂ, ಅಶ್ವತ್ಥಾಮರನ್ನು ವೇಗಶಾಲಿಗಳಾದ ಎಂಟು ಬಾಣಗಳಿಂದಲೂ ಹೊಡೆದು ತೀವ್ರವಾದ ನಾದವನ್ನು ಮಾಡುತ್ತಾ ಅವರ ಕಡೆಗೆ ನುಗ್ಗಿದನು.

ತಸ್ಮಿನ್ ಸಂತ್ಯಜತಿ ಪ್ರಾಣಾನ್ ಮೃತ್ಯುಸಾಧಾರಣಂ ಗತೇ ।
ಅಜಾತಶತ್ರುಃ ಸ್ವಾನ್ ಯೋಧಾನ್ ಭೀಮಂ ತ್ರಾತೇತ್ಯಚೋದಯತ್ ॥

ಭೀಮಸೇನನು ಅವರ ಪ್ರಹಾರಗಳಿಂದ ಮರಣದಂತಹ ಅವಸ್ಥೆಯನ್ನು ಹೊಂದುತ್ತಿರಲು ಯುಧಿಷ್ಠಿರನು ತನ್ನ ಯೋಧರನ್ನು ಕುರಿತು ಭೀಮನನ್ನು ರಕ್ಷಿಸಿ ಎಂದು ಪ್ರಚೋದಿಸಿದನು.

ತೇ ಯಯುರ್ಭೀಮಸೇನಸ್ಯ ಸಮೀಪಮಮಿತೌಜಸಃ ।
ಸೌಭದ್ರೋ ಯುಯುಧಾನಶ್ಚ ಮಾದ್ರೀಪುತ್ರೌ ಚ ಪಾಂಡವೌ ॥ ೭ ॥

ಅಮಿತಪರಾಕ್ರಮಿಗಳಾದ ಅಭಿಮನ್ಯು, ಸಾತ್ಯಕಿ ಮತ್ತು ಪಾಂಡುಪುತ್ರರಾದ ನಕುಲ-ಸಹದೇವರು ಭೀಮಸೇನನ ಬಳಿಗೆ ಹೋದರು.

ತೇ ಸಮೇತ್ಯ ತು ಸಂರಬ್ಧಾಃ ಸಹಿತಾಃ ಪುರುಷರ್ಷಭಾಃ ।
ಮಹೇಷ್ವಾಸವರೈರ್ಗುಪ್ತಂ ದ್ರೋಣಾನೀಕಂ ಬಿಭತ್ಸವಃ ॥ ೮ ॥

ಸಮಾಪೇತುರ್ಮಹಾವೀರ್ಯಾ ಭೀಮಪ್ರಭೃತಯೋ ರಥಾಃ ।
ತಾನ್ ಪ್ರತ್ಯಗೃಹ್ಣಾದವ್ಯಗ್ರೋ ದ್ರೋಣೋಽಪಿ ರಥಿನಾಂ ವರಃ ॥ ೯ ॥

ಕೋಪಗೊಂಡ ಆ ಪುರುಷಶ್ರೇಷ್ಠರಾದ, ಮಹಾಪರಾಕ್ರಮಶಾಲಿಗಳಾದ ಭೀಮ ಮೊದಲಾದ ಮಹಾರಥರು ಒಟ್ಟಾಗಿ ಮಹಾಧನುರ್ಧಾರಿಗಳಿಂದ ರಕ್ಷಿತವಾದ ದ್ರೋಣರ ಸೈನ್ಯವನ್ನು ಭಗ್ನಗೊಳಿಸಲು ಬಯಸಿ ಅದರ ಮೇಲೆ ಎರಗಿದರು. ರಥಿಶ್ರೇಷ್ಠರಾದ ದ್ರೋಣರೂ ಸಹ ಯಾವ ಗಡಿಬಿಡಿಯಿಲ್ಲದೆ ಅವರನ್ನು ಸ್ವೀಕರಿಸಿದರು.

ಪ್ರತ್ಯದೃಶ್ಯಂತ ಪಾರ್ಥಾನಾಂ ಸ್ವೇಷಾಮಪಿ ಮಹಾರಥಾಃ ।
ತೇ ವೈ ಹ್ಯತಿಬಲಾ ವೀರಾ ಶೂರಾಃ ಸಮರಯೋಧಿನಃ ।
ಬಾಹ್ಯಂ ಮೃತ್ಯುಭಯಂ ಕೃತ್ವಾ ತಾವಕಾನ್ ಪಾಂಡವಾ ಯಯುಃ ॥೧೦॥

ಪಾಂಡವರ ಮತ್ತು ಕೌರವರ ಮಹಾರಥರು ಮುಂದೆ ಬಂದರು. ಅವರು ಅತಿಬಲಿಷ್ಠರು, ವೀರರು, ಶೂರರು ಮತ್ತು ಒಳ್ಳೆಯ ಯುದ್ಧವನ್ನು ಮಾಡುವವರು. ಪಾಂಡವರು ಮೃತ್ಯುಭಯರಹಿತರಾಗಿ ನಿನ್ನವರನ್ನು ಸಮೀಪಿಸಿದರು.

ಸಾದಿನಃ ಸಾದಿನೋಽಭ್ಯಘ್ನನ್ನಭ್ಯಘ್ನನ್ ರಥಿನೋ ರಥಾನ್ ।
ಅಸಿಶಕ್ಯೃಷ್ಟಿ ಸಂಘಾತೈರ್ಯುದ್ಧಮಾಸೀತ್ ಪರಶ್ವಧೈಃ ।
ಪ್ರವೃದ್ಧಮಾಸೀತ್ ತದ್ ಯುದ್ಧಂ ಪ್ರತತಂ ರೋಮಹರ್ಷಣಮ್ ॥

ಅಶ್ವಾರೋಹಿಗಳು ಅಶ್ವಾರೋಹಿಗಳನ್ನು ಕೊಂದರು. ರಥಿಕರು ರಥರನ್ನು ಕೊಂದರು. ಖಡ್ಗಗಳಿಂದ, ಶಕ್ತಿ-ಋಷ್ಟಿಸಮೂಹಗಳಿಂದ ಮತ್ತು ಪರಶ್ವಧಗಳಿಂದ ಯುದ್ಧವು ನಡೆಯಿತು. ರೋಮಾಂಚಕಾರಿಯಾದ ಆ ಯುದ್ಧವು ವಿಸ್ತಾರವಾಗಿ ಬೆಳೆಯಿತು.

ಕುಂಜರಾಣಾಂ ತು ಸಂಪಾತೇ ಯುದ್ಧಮಾಸೀತ್ ಸುದಾರುಣಮ್ ।
ಪ್ರಹೃಷ್ಟಮಸಿಯುದ್ಧಂ ಚ ಬಭೂವ ಕಟುಕೋದಯಮ್ ॥ ೧೨ ॥

ಗಜಗಳಿಗೂ ಸಂಘರ್ಷವುಂಟಾಗಿ ದಾರುಣವಾದ ಯುದ್ಧವು ನಡೆಯಿತು. ಭೀಕರವಾದ ಫಲವನ್ನು ಹೊಂದಿದ, ಸಂತೋಷದಿಂದ ಕೂಡಿದ ಖಡ್ಗಯುದ್ಧವೂ ನಡೆಯಿತು.

ಅಪತನ್ ಕುಂಜರಾದನ್ಯೇ ಹಯಾದನ್ಯೇ ಪ್ರದುದ್ರುವುಃ ।
ನರಾ ಬಾಣೇನ ಸಂವಿದ್ಧಾ ರಥಾದನ್ಯೇಽಪತನ್ ಕ್ಷಿತೌ ॥ ೧೩ ॥

ಬಾಣದಿಂದ ಹೊಡೆಯಲ್ಪಟ್ಟ ಮನುಷ್ಯರಲ್ಲಿ ಕೆಲವರು ಗಜಗಳಿಂದ ಬಿದ್ದರು. ಕೆಲವರು ಕುದುರೆಯಿಂದ ಇಳಿದು ಓಡಿ ಹೋದರು. ಇನ್ನು ಕೆಲವರು ರಥಗಳಿಂದ ಭೂಮಿಯ ಮೇಲೆ ಬಿದ್ದರು.

ಸಮ್ಮಮರ್ದ ರಥಾಚ್ಚಾಪಿ ಪತಿತಸ್ಯಾಪಿ ವರ್ತ್ಮನಿ ।
ಶಿರಃ ಪ್ರಧ್ವಂಸಯಾಮಾಸ ವಕ್ಷಸ್ಯಾಕ್ರಮ್ಯ ಕುಂಜರಃ ॥ ೧೪ ॥

ರಥಗಳಿಂದ ಭೂಮಿಯ ಮೇಲೆ ಬಿದ್ದು ತಮ್ಮ ಮಾರ್ಗದಲ್ಲಿ ಸಿಲುಕಿದ ಯೋಧರನ್ನು ಆನೆಗಳು ಅವರ ಎದೆಯನ್ನು ತುಳಿದು ಶಿರಸ್ಸನ್ನು ಪುಡಿ ಮಾಡಿದವು.

ಅಪರೇಽಪ್ಯಪರಾನ್ ಮೃದ್ನನ್ ವಾರಣಾಃ ಪತಿತಾನ್ ನರಾನ್ ।
ವಿಷಾಣೈರ್ಧರಣೀಂ ಗತ್ವಾ ವ್ಯಭಿಂದನ್ ರಥಿನೋ ಬಹೂನ್ ॥ ೧೫ ॥

ಇನ್ನು ಕೆಲವು ಗಜಗಳು ಭೂಮಿಯ ಮೇಲೆ ಬಿದ್ದ ಯೋಧರನ್ನು ತುಳಿದು ಮರ್ದಿಸಿದವು. ತಮ್ಮ ದಂತಗಳಿಂದ ಭೂಮಿಯನ್ನು ತಿವಿದು ಅನೇಕ ರಥಿಕರನ್ನು ಭಗ್ನಗೊಳಿಸಿದವು.

ನರಾನನ್ಯೇ ವಿಷಾಣಾಗ್ರೈರ್ಲಗ್ನಾಸೃಗ್ಭಿಃ ಕ್ಷತೈಃ ಪರೈಃ ।
ಬಭ್ರಮೂ ರುಷಿತಾ ನಾಗಾ ಮೃದ್ನಂತಃ ಶತಶೋ ನರಾನ್ ॥ ೧೬ ॥

ಇನ್ನೊಬ್ಬರನ್ನು ತಿವಿಯುವುದರಿಂದ ಉಂಟಾದ ಗಾಯಗಳಿಂದ ರಕ್ತಸಿಕ್ತವಾದ ವಿಷಾಣಾಗ್ರಗಳಿಂದ ಗಜಗಳು ಯೋಧರನ್ನು ಮರ್ದಿಸಿದವು. ಕೋಪಗೊಂಡ ಗಜಗಳು ಯೋಧರನ್ನು ನೂರರ ಸಂಖ್ಯೆಯಲ್ಲಿ ಮರ್ದಿಸುತ್ತಾ ರಣರಂಗದಲ್ಲಿ ತಿರುಗಾಡಿದವು.

ಕಾಂಸ್ಯಾಯಸತನುತ್ರಾಣಾನ್ ನರಾಶ್ವರಥಕುಂಜರಾನ್ ।
ಪತಿತಾನ್ ಪೋಥಯಾಂಚಕ್ರುಃ ದ್ವಿಪಾಶ್ಚ ನಳಿನೀಮಿವ ॥ ೧೭ ।

ಆನೆಗಳು ಪದ್ಮಸರೋವರವನ್ನು ನಾಶಗೊಳಿಸಿದಂತೆ ಕಂಚಿನ ಮತ್ತು ಕಬ್ಬಿಣದ ಕವಚಗಳನ್ನು ಧರಿಸಿದ ನೆಲದ ಮೇಲೆ ಬಿದ್ದಯೋಧರನ್ನೂ, ಅಶ್ವ-ರಥ-ಗಜಗಳನ್ನೂ ಆನೆಗಳು ಮರ್ದಿಸಿದವು.

ಗೃಧ್ರಪತ್ರಾಧಿವಾಸಾಂಸಿ ಶಯನಾನ್ಯತ್ರ ಪಾರ್ಥಿವಾಃ ।
ಹ್ರೀಮಂತಃ ಕಾಲಸಂಪ್ರಾಪ್ತಾಃ ಸುದುಃಖಮಧಿಶೇರತೇ ॥ ೧೮ ॥

ನಾಚಿಕೆಯುಳ್ಳ ರಾಜರು ಮರಣಕ್ಕೆ ಸಮೀಪರಾಗಿ ಬಾಣಗಳ ಗೃಧ್ರಪತ್ರಗಳ ಶಯನದಲ್ಲಿ ದುಃಖದಿಂದ ಮಲಗಿದರು.

ಹಂತಿ ಸ್ಮಾಥ ಪಿತಾ ಪುತ್ರಂ ರಥೇನ ಹ್ಯತಿವರ್ತಿನಾ ।
ಪುತ್ರಸ್ತು ಪಿತರಂ ಮೋಹಾನ್ನಿರ್ಮರ್ಯಾದಮವರ್ತತ ॥ ೧೯ ॥

ಅಕ್ಷೋ ಭಗ್ನೋ ಧ್ವಜಶ್ಚಿನ್ನಃ ಛತ್ರಮುರ್ವ್ಯಾಂ ನಿಪಾತಿತಮ್ ।
ಯುಗಾರ್ಧಂ ಛಿನ್ನಮಾದಾಯ ಪ್ರಾದ್ರವಂತ ಹಯಾಃ ಕ್ವಚಿತ್ ॥ ೨೦ ॥

ವೇಗವಾಗಿ ದಾಟಿಹೋಗುವ ರಥದಿಂದ ತಂದೆಯು ಮಗನನ್ನು ಕೊಂದನು. ಮೌಢ್ಯದಿಂದ ಪುತ್ರನು ತಂದೆಯನ್ನು ಕೊಂದನು. ಯುದ್ಧವು ಎಲ್ಲೆಯನ್ನು ಮೀರಿ ನಡೆಯಿತು. ರಥಗಳ ಅಕ್ಷವು ಭಗ್ನವಾಯಿತು. ಧ್ವಜವು ಕತ್ತರಿಸಲ್ಪಟ್ಟಿತು. ಛತ್ರವು ಭೂಮಿಯಲ್ಲಿ ಬಿದ್ದಿತು. ಕತ್ತರಿಸಲ್ಪಟ್ಟ ಅರ್ಧನೊಗವನ್ನು ಹೊತ್ತು ಅಶ್ವಗಳು ಓಡಿಹೋದವು.

ಸಾಸಿರ್ನಿಪತಿತೋ ಬಾಹುಃ ಶಿರಶ್ಚಿನ್ನಂ ಸಕುಂಡಲಮ್ ।
ಗಜೇನಾಕ್ಷಿಪ್ಯ ಬಲಿನಾ ರಥಃ ಸಂಚೂರ್ಣಿತಃ ಕ್ಷಿತೌ ॥ ೨೧ ॥

ಖಡ್ಗ ಸಹಿತವಾದ ಬಾಹುಗಳು ಕತ್ತರಿಸಲ್ಪಟ್ಟವು. ಕುಂಡಲ ಸಹಿತವಾದ ಶಿರಸ್ಸು ಕತ್ತರಿಸಲ್ಪಟ್ಟಿತು. ಬಲಿಷ್ಠವಾದ ಗಜವು ರಥವನ್ನು ಎಸೆದು, ತುಳಿದು ಭೂಮಿಯಲ್ಲಿ ಅದನ್ನು ಪುಡಿಮಾಡಿತು.

ರಥಿನಾ ತಾಡಿತೋ ನಾಗೋ ನಾರಾಚೇನಾಪತತ್ ಕ್ಷಿತೌ ।
ಸಾರೋಹಃ ಪತಿತೋ ವಾಜೀ ಗಜೇನಾಪೀಡಿತೋ ಭೃಶಮ್ ।
ನಿರ್ಮರ್ಯಾದಂ ಮಹದ್ ಯುದ್ಧಂ ಪ್ರಾವರ್ತತ ಸುದಾರುಣಮ್ ॥

ರಥಿಕನಿಂದ ನಾರಾಚದಿಂದ ಹೊಡೆಯಲ್ಪಟ್ಟ ಗಜವು ಭೂಮಿಯ ಮೇಲೆ ಬಿದ್ದಿತು. ಗಜದಿಂದ ಬಹಳವಾಗಿ ಪೀಡಿತವಾದ ಅಶ್ವವು ಅಶ್ವಾರೋಹಿಯ ಜೊತೆಯಲ್ಲಿ ನೆಲಕ್ಕೆ ಬಿದ್ದಿತು. ಎಲ್ಲೆಯನ್ನು ಮೀರಿದ, ಬಹಳ ದಾರುಣವಾದ ದೊಡ್ಡ ಯುದ್ಧವು ನಡೆಯಿತು.

ಹಾ ತಾತ ಹಾ ಪುತ್ರ ಸಖೇ ಕ್ವಾಸಿ ತಿಷ್ಠ ಕ್ವ ಧಾವಸಿ ।
ಪ್ರಹರಾಹರ ಹಂತಾಸ್ಮಿ ನದಕ್ಷ್ವೇಳಿತಗರ್ಜಿತೈಃ ॥ ೨೩ ॥

ಇತ್ಯೇವಮುಚ್ಚೈರತ್ಯರ್ಥಂ ಶ್ರೂಯಂತೇ ವಿವಿಧಾ ಗಿರಃ ॥ ೨೪ ॥

ಸಿಂಹನಾದಗಳಿಂದಲೂ, ಗರ್ಜನೆಗಳಿಂದಲೂ, ಯುದ್ಧನಾದಗಳಿಂದಲೂ ಮಿಶ್ರಿತವಾದ 'ಅಯ್ಯೋ ತಂದೆಯೇ! ಅಯ್ಯೋ ಪುತ್ರನೇ! ಸ್ನೇಹಿತನೇ! ಎಲ್ಲಿದ್ದೀಯೆ?

ನಿಲ್ಲು, ಎಲ್ಲಿಗೆ ಹೋಗುತ್ತಿದ್ದೀಯೆ? ಹೊಡೆ, ಎಳೆದು ತಾ, ಕೊಲ್ಲುವೆನು' ಮೊದಲಾದ ವಿಧವಿಧವಾದ ಗಟ್ಟಿಯಾದ ಮಾತುಗಳು ಕೇಳಿಬಂದವು.

ನರಸ್ಯಾಶ್ವಸ್ಯ ನಾಗಸ್ಯ ಸಮಸಜ್ಜತ ಶೋಣಿತಮ್ ।
ಉಪಾಶಾಮ್ಯದ್ ರಜೋ ಭೌಮಂ ಭೀರೂನ್ ಕಶ್ಮಲಮಾವಿಶತ್ ॥೨೫॥

ಪದಾತಿಗಳ, ಅಶ್ವಗಳ ಮತ್ತು ಗಜಗಳ ರಕ್ತಗಳು ಮಿಶ್ರಿತವಾದವು. ಭೂಮಿಯ ಧೂಳು ಅಡಗಿತು. ಹೇಡಿಗಳನ್ನು ಭಯವು ಆವರಿಸಿತು.

ಆಸೀತ್ ಕೇಶಪರಾಮರ್ಶೋ ಮುಷ್ಟಿಯುದ್ಧಂ ಚ ದಾರುಣಮ್ ।
ನಖೈರ್ದಂತೈಶ್ಚ ಶೂರಾಣಾಮದ್ವಿಪೈರ್ದ್ವಿಪಮಿಚ್ಛತಾಮ್ ॥ ೨೬ ॥

ಕೇಶಪರಾಮರ್ಶವೂ ದಾರುಣವಾದ ಮುಷ್ಟಿ ಯುದ್ಧವೂ ಉಂಟಾಯಿತು. ಶೂರರ ನಖ-ದಂತಗಳಿಂದಲೂ ಯುದ್ಧವು ಜರುಗಿತು. ತಮ್ಮ ಗಜಗಳನ್ನು ಕಳೆದುಕೊಂಡ ಗಜಾರೋಹಿಗಳು ಪದಾತಿಗಳಾಗಿ ಶತ್ರುಗಜವನ್ನು ಕೊಲ್ಲಲು ಬಯಸಿದರು.

ತತ್ರಾಚ್ಛಿದ್ಯತ ಶೂರಸ್ಯ ಸಖಡ್ಗೋ ಬಾಹುರುದ್ಯತಃ ।
ಸಧನುಶ್ಚಾಪರಸ್ಯಾಪಿ ಸಶರಃ ಸಾಂಕುಶಸ್ತಥಾ ॥ ೨೭ ॥

ಶೂರನ ಖಡ್ಗಸಹಿತವಾಗಿ ಎತ್ತಿದ ಬಾಹುವು ಕತ್ತರಿಸಲ್ಪಟ್ಟಿತು. ಧನುಸ್ಸನ್ನು ಹಿಡಿದ, ಬಾಣವನ್ನು ಹಿಡಿದ, ಅಂಕುಶವನ್ನು ಹಿಡಿದ ಬೇರೆ ಯೋಧರ ಬಾಹುಗಳೂ ಕತ್ತರಿಸಲ್ಪಟ್ಟವು.

ಪ್ರಾಕ್ರೋಶದನ್ಯಮನ್ಯತ್ರ ತಥಾನ್ಯೋಽಭಿಮುಖೋಽದ್ರವತ್ ।
ತತಃ ಪ್ರಾಪ್ತಃ ಸ ಚಾಪ್ಯನ್ಯಃ ಶಿರಃ ಕಾಯಾದಪಾಹರತ್ ॥ ೨೮ ॥

ಒಬ್ಬ ವೀರನು ಇನ್ನೊಬ್ಬನನ್ನು ನೋಡಿ ಕಿರುಚಿದನು. ಮೂರನೆಯವನು ಮೊದಲನೆಯವನಿಗೆ ಅಭಿಮುಖವಾಗಿ ಬಂದನು. ಆಗ ಅಲ್ಲಿಗೆ ಬಂದ ಇನ್ನೊಬ್ಬ ನಾಲ್ಕನೆಯವನು ಮೊದಲನೆಯವನ ಶಿರಸ್ಸನ್ನು ಕತ್ತರಿಸಿದನು.

ಭೀತಶ್ಚಾನ್ಯ ಉದಕ್ರೋಶದ್ ಅನ್ಯೋ ಭೀತ ಉಪಾದ್ರವತ್ ।
ಅಸಂಪ್ರಾಪ್ತಸ್ಯ ತಂ ದೇಶಮನ್ಯೋ ಜೀವಿತಮಾದದೇ ॥ ೨೯ ॥

ಒಬ್ಬನು ಭಯದಿಂದ ಕಿರುಚಿದನು. ಭೀತನಾದ ಇನ್ನೊಬ್ಬನು ಅಲ್ಲಿಗೆ ಓಡಿ ಬಂದನು. ಅವನು ಆ ಪ್ರದೇಶವನ್ನು ತಲುವುದಕ್ಕಿಂತ ಮೊದಲೇ ಇನ್ನೊಬ್ಬನು ಅವನನ್ನು ಕೊಂದನು.

ಸ ಶಬ್ದಮಕರೋಚ್ಚಾನ್ಯಃ ಶಬ್ದಾದನ್ಯೋಽತ್ರಸದ್ ಭೃಶಮ್ ।
ತಾನನ್ಯೋಽಥ ಪರಾನನ್ಯೋ ಜಘಾನ ನಿಶಿತೈಃ ಶರೈಃ ॥ ೩೦ ॥

ಒಬ್ಬನು ದೊಡ್ಡ ಶಬ್ದವನ್ನು ಮಾಡಿದನು. ಅದರಿಂದ ಇನ್ನೊಬ್ಬನು ಬಹಳವಾಗಿ ಹೆದರಿದನು. ಅವರನ್ನು ಇನ್ನೊಬ್ಬನು, ಶತ್ರುಗಳನ್ನು ಮತ್ತೊಬ್ಬನು ಹರಿತವಾದ ಬಾಣಗಳಿಂದ ಕೊಂದನು.

ಗಿರಿಶೃಂಗೋಪಮಶ್ಚಿತ್ರೋ ಬಾಣೈಶ್ಚಿತ್ರೈರ್ನಿಪಾತಿತಃ ।
ಮಾತಂಗೋ ನ್ಯಪತದ್ ಭೂಮೌ ನದೀರೋಧ ಇವೋಷ್ಣಗೇ ॥ ೩೧ ॥

ಪರ್ವತಶಿಖರದಂತಿದ್ದ ವಿಚಿತ್ರವಾದ ಗಜವು ವಿಚಿತ್ರವಾದ ಬಾಣಗಳಿಂದ ಭೂಮಿಯ ಮೇಲೆ ಮಳೆಗಾಲದಲ್ಲಿ ನದಿಯ ತೀರದಂತೆ ಬಿದ್ದಿತು.

ತಥೈವ ರಥಿನಂ ನಾಗಃ ಕ್ಷರನ್ ಗಿರಿರಿವಾರುಜತ್ ।
ಅವಾತಿಷ್ಠತ್ ಪದಾ ಭೂಮೌ ಸಹಾಶ್ವಂ ಸಹಸಾರಥಿಮ್ ॥ ೩೨ ॥

ಹಾಗೆಯೇ, ರಥಿಕರನ್ನು ಧಾತುವನ್ನು ಸುರಿಸುವ ಪರ್ವತದಂತಿದ್ದ ಗಜವು ಹಿಂಸಿಸಿತು. ಅಶ್ವ ಸಹಿತನಾದ ಸಾರಥಿಯನ್ನು ಭೂಮಿಯಲ್ಲಿ ತನ್ನ ಪಾದದಿಂದ ತುಳಿಯಿತು.

ಶೂರಾನ್ ಪ್ರಹರತೋ ದೃಷ್ಟ್ವಾ ಕೃತಾಸ್ತ್ರಾನ್ ರುಧಿರೋಕ್ಷಿತಾನ್ ।
ಬಹೂನತ್ಯಾವಿಶನ್ಮೋಹೋ ಭೀರೂನ್ ಹೃದಯದುರ್ಬಲಾನ್ ॥ ೩೩ ॥

ಅಸ್ತ್ರಸಂಪನ್ನರೂ, ರಕ್ತಸಿಕ್ತರೂ ಆದ ಶೂರರು ಪ್ರಹಾರ ಮಾಡುವುದನ್ನು ನೋಡಿ ಹೃದಯ ದುರ್ಬಲರಾದ ಅನೇಕ ಭೀರುಗಳಿಗೆ ಮೂರ್ಛೆಯುಂಟಾಯಿತು.

ಸರ್ವಮಾವಿಗ್ನಮಭವನ್ನ ಪ್ರಾಜ್ಞಾಯತ ಕಿಂಚನ ।
ಸೈನ್ಯೇನ ರಜಸಾ ಗ್ರಸ್ತೇ ನಿರ್ಮರ್ಯಾದಮವರ್ತತ ॥ ೩೪ ॥

ಸೈನ್ಯದಿಂದ ಎದ್ದ ಧೂಳಿನಿಂದ (ರಣರಂಗವು) ಆವೃತವಾಗಿರಲು ಎಲ್ಲವೂ ಬಹಳ ಮಿಶ್ರಿತವಾಯಿತು. ಯಾವುದೂ ಸರಿಯಾಗಿ ತಿಳಿದುಬರಲಿಲ್ಲ. ಎಲ್ಲೆಯನ್ನು ಮೀರಿದ ಯುದ್ಧವು ನಡೆಯಿತು.

ತತಃ ಸೇನಾಪತಿಃ ಶೀಘ್ರಮಯಂ ಕಾಲ ಇತಿ ಬ್ರುವನ್ ।
ನಿತ್ಯಾಭಿತ್ವರಿತಾನೇವ ತ್ವರಯಾಮಾಸ ಪಾಂಡವಾನ್ ॥ ೩೫ ॥

ಸೇನಾಪತಿಯಾದ ಧೃಷ್ಟದ್ಯುಮ್ನನು ಶೀಘ್ರವಾಗಿ ಇದು ಸರಿಯಾದ ಕಾಲವೆಂದು ಹೇಳುತ್ತಾ, ಯಾವಾಗಲೂ ತ್ವರೆಯಿಂದ ಕೂಡಿದ ಪಾಂಡವರನ್ನು ಇನ್ನೂ ತ್ವರೆಗೊಳಿಸಿದನು.

ಕುರ್ವಂತಃ ಶಾಸನಂ ತಸ್ಯ ಪಾಂಡವಾ ಬಾಹುಶಾಲಿನಃ ।
ಸರೋ ಹಂಸಾ ಇವಾಪೇತುರ್ಹ್ವಂತೋ ದ್ರೋಣರಥಂ ಪ್ರತಿ ॥೩೬॥

ಸೇನಾಪತಿಯ ಶಾಸನವನ್ನು ಪಾಲಿಸುತ್ತಾ, ಬಾಹುಶಾಲಿಗಳಾದ ಪಾಂಡವರು ಹಂಸಗಳು ಸರೋವರಕ್ಕೆ ಇಳಿದಂತೆ ಬಾಣಪ್ರಯೋಗವನ್ನು ಮಾಡುತ್ತಾ ದ್ರೋಣರ ರಥದ ಮೇಲೆ ಎರಗಿದರು.

ಪ್ರತಿಗೃಹ್ಣೀತ ಜಹಿ ತಚ್ಛಿಂಧಿ ಭಿಂಧಿ ಹತಾಹತ ।
ಇತಿ ಶಬ್ದೋ ಮಹಾನಾಸೀದಾಚಾರ್ಯಸ್ಯ ರಥಂ ಪ್ರತಿ ॥ ೩೭ ॥

ಹಿಡಿ, ಕೊಲ್ಲು, ಅದನ್ನು ಕತ್ತರಿಸು, ಭಗ್ನಗೊಳಿಸು, ಹೊಡೆ- ಮೊದಲಾದ ದೊಡ್ಡ ಶಬ್ದಗಳು ದ್ರೋಣರ ರಥದ ಬಳಿ ಕೇಳಿಬಂದವು.

ತತೋ ದ್ರೋಣಃ ಕೃಪಃ ಕರ್ಣಃ ಸ ಚ ರಾಜಾ ಜಯದ್ರಥಃ ।
ವಿಂದಾನುವಿಂದಾವಾವಂತ್ಯೌ ಶಲ್ಯಶ್ಚೈತಾನವಾರಯನ್ ॥ ೩೮ ॥

ಆಗ ದ್ರೋಣರು, ಕೃಪರು, ಕರ್ಣ, ರಾಜನಾದ ಜಯದ್ರಥ, ಅವಂತಿ ದೇಶದ ವಿಂದಾನುವಿಂದರು ಮತ್ತು ಶಲ್ಯ ಇವರು ಪಾಂಡವರನ್ನು ತಡೆದರು.

ಅವಾರ್ಯಕರ್ಮಸಂರಬ್ಧಾ ದುರ್ನಿವಾರ್ಯಾ ನಿವಾರಿತಾಃ ।
ಶೂರತ್ವಾನ್ನ ಜಹುರ್ದ್ರೋಣಂ ಪಾಂಚಾಲಾಃ ಸಹ ಪಾಂಡವೈಃ ॥ ೩೯ ॥

ನಿವಾರಿಸಲಾರದ ಕರ್ಮದಲ್ಲಿ ಪ್ರವೃತ್ತರಾದವರೂ, ಬಹಳ ಕೋಪಗೊಂಡವರೂ, ನಿವಾರಿಸಲು ಕಷ್ಟಸಾಧ್ಯರೂ ಆದ ಪಾಂಡವರು ಮತ್ತು ಪಾಂಚಾಲರು ಹೀಗೆ ತಡೆಯಲ್ಪಟ್ಟರೂ ಶೂರರಾದ ಕಾರಣದಿಂದ ದ್ರೋಣರನ್ನು ಬಿಡಲಿಲ್ಲ.

ತತೋ ದ್ರೋಣಃ ಭೃಶಂ ಕ್ರುದ್ಧೋ ವ್ಯಸೃಜಚ್ಛತಶಃ ಶರಾನ್ ।
ಚೇದಿಪಾಂಚಾಲಪಾಂಡೂನಾಂ ಕುರ್ವನ್ ವಿಶಸನಂ ಮಹತ್ ॥ ೪೦ ॥

ಆಗ ದ್ರೋಣರು ಬಹಳ ಕ್ರುದ್ಧರಾಗಿ ಚೇದಿ-ಪಾಂಚಾಲ-ಪಾಂಡುಗಳನ್ನು ಬಹಳವಾಗಿ ಹಿಂಸಿಸುತ್ತಾ ನೂರಾರು ಸಂಖ್ಯೆಯಲ್ಲಿ ಬಾಣಗಳನ್ನು ಪ್ರಯೋಗಿಸಿದರು.

ತಸ್ಯ ಜ್ಯಾತಳನಿರ್ಘೋಷಃ ಶುಶ್ರುವೇ ದಿಕ್ಷು ಮಾರಿಷ ।
ವಜ್ರಸಂಕಾಶನಿರ್ಹ್ರಾದಃ ತ್ರಾಸಯನ್ ಸೃಂಜಯಾನ್ ಬಹೂನ್ ॥೪೧॥

ಎಲೈ ಪೂಜ್ಯನೇ, ಅವರ ಜ್ಯಾತಳದ ನಿರ್ಘೋಷವು ವಜ್ರಸಂಘರ್ಷದ ನಾದದಂತೆ ಅನೇಕ ಸೃಂಜಯರನ್ನು ಭಯಗೊಳಿಸುತ್ತಾ ಎಲ್ಲ ದಿಕ್ಕುಗಳಲ್ಲಿಯೂ ಕೇಳಿ ಬಂದಿತು.

ಏತಸ್ಮಿನ್ನಂತರೇ ಜಿಷ್ಣುರ್ಹತ್ವಾ ಸಂಶಪ್ತಕಾನ್ ಪುನಃ ।
ಅಭ್ಯಯಾತ್ ತತ್ರ ಯತ್ರ ಸ್ಮ ದ್ರೋಣಃ ಪಾಂಡೂನ್ ಪ್ರಮರ್ದತಿ ॥

ಈ ಮಧ್ಯದಲ್ಲಿ ಅರ್ಜುನನು ಸಂಶಪ್ತಕರನ್ನು ಕೊಂದು ದ್ರೋಣರು ಪಾಂಡವರನ್ನು ಮರ್ದಿಸುವ ಸ್ಥಳಕ್ಕೆ ಬಂದನು.

ತಾಂ ಶರೌಘಮಹಾವರ್ತಾಂ ಶೋಣಿತೌಘವಹಾಂ ನದೀಮ್ ।
ತೀರ್ಣಃ ಸಂಶಪ್ತಕಾನ್ ಹತ್ವಾ ಪ್ರತ್ಯದೃಶ್ಯತ ಫಲ್ಗುನಃ ॥ ೪೩ ॥

ಬಾಣಗಳ ಸಮೂಹಗಳೆಂಬ ಮಹಾಸುಳಿಯನ್ನುಳ್ಳ, ರಕ್ತ ಜಲಪ್ರವಾಹವುಳ್ಳ ಆ ನದಿಯನ್ನು ದಾಟಿ ಸಂಶಪ್ತಕರನ್ನು ಕೊಂದ ಅರ್ಜುನನು ಕಂಡುಬಂದನು.

ತಸ್ಯ ಕೀರ್ತಿಮತೋ ಲಕ್ಷ್ಮ ಸೂರ್ಯಪ್ರತಿಮತೇಜಸಃ ।
ದೀಪ್ಯಮಾನಮಪಶ್ಯಾಮ ತೇಜಸಾ ವಾನರಧ್ವಜಮ್ ॥ ೪೪ ॥

ಸೂರ್ಯನಿಗೆ ಸಮಾನವಾದ ತೇಜಸ್ಸುಳ್ಳ, ಕೀರ್ತಿವಂತನಾದ ಅವನ ಚಿಹ್ನೆಯಾದ ಅವನ ರಥದ ತೇಜಸ್ಸಿನಿಂದ ಬೆಳಗುವ ವಾನರ ಧ್ವಜವನ್ನು ನೋಡಿದವು.

ಸಂಶಪ್ತಕಸಮುದ್ರಂ ತಮುಚ್ಶೋಷ್ಯಾಸ್ತ್ರಗಭಸ್ತಿಭಿಃ ।
ಸ ಪಾಂಡವಯುಗಾಂತಾರ್ಕಃ ಕುರೂನಭ್ಯಾಗಮಜ್ಜವಾತ್ ॥ ೪೫ ॥

ಸಂಶಪ್ತಕರೆಂಬ ಸಮುದ್ರವನ್ನು ತನ್ನ ಅಸ್ತ್ರಗಳೆಂಬ ಕಿರಣಗಳಿಂದ ಒಣಗಿಸಿ ಅರ್ಜುನನೆಂಬ ಆ ಯುಗಾಂತ ಸೂರ್ಯನು ಕುರುಗಳ ಬಳಿಗೆ ಶೀಘ್ರವಾಗಿ ಬಂದನು.

ಸ ದದಾಹ ಕುರೂನ್ ಸರ್ವಾನರ್ಜುನಃ ಶಸ್ತ್ರತೇಜಸಾ ।
ಯುಗಾಂತೇ ಸರ್ವಭೂತಾನಿ ಧೂಮಕೇತುರಿವೋತ್ಥಿತಃ ॥ ೪೬ ॥

ಯುಗಾಂತಕಾಲದಲ್ಲಿ ಸಮ್ಯದ್ಧವಾದ ಅಗ್ನಿಯು ಎಲ್ಲ ಪ್ರಾಣಿಗಳನ್ನೂ ದಹಿಸುವಂತೆ ಅರ್ಜುನನು ತನ್ನ ಶಸ್ತ್ರತೇಜಸ್ಸಿನಿಂದ ಎಲ್ಲ ಕುರುಗಳನ್ನೂ ದಹಿಸಿದನು.

ತೇನ ಬಾಣಸಹಸ್ರೌಘೈರ್ಗಜಾಶ್ವರಥಯೋಧಿನಃ ।
ತಾಡ್ಯಮಾನಾಃ ಕ್ಷಿತಿಂ ಜಗ್ಮುರ್ಮುಕ್ತಶಸ್ತ್ರಶರಾಸನಾಃ ॥ ೪೭ ॥

ಅವನಿಂದ ಸಹಸ್ರಾರು ಬಾಣಗಳ ಸಮೂಹದಿಂದ ಹೊಡೆಯಲ್ಪಟ್ಟ ಗಜಾಶ್ವ-ರಥ ಯೋಧರು ತಮ್ಮ ಶಸ್ತ್ರಗಳನ್ನೂ, ಧನುಸ್ಸುಗಳನ್ನೂ ಬಿಟ್ಟು ಭೂಮಿಯ ಮೇಲೆ ಬಿದ್ದರು.

ಕೇಚಿದಾರ್ತಸ್ವರಂ ಚಕ್ರುರ್ವಿನೇದುರಪರೇ ಪುನಃ ।
ಪಾರ್ಥಬಾಣಹತಾಃ ಕೇಚಿನ್ನಿಪೇತುಶ್ಚ ಗತಾಸವಃ ॥ ೪೮ ॥

ಅರ್ಜುನನ ಬಾಣದಿಂದ ಹತರಾದ ಕೆಲವರು ಆರ್ತಸ್ವರವನ್ನು ಮಾಡಿದರು, ಕೆಲವರು ವೀರನಾದವನ್ನು ಮಾಡಿದರು, ಇನ್ನು ಕೆಲವರು ಮೃತರಾಗಿ ಭೂಮಿಯ ಮೇಲೆ ಬಿದ್ದರು.

ತೇಷಾಮುತ್ಪತಿತಾನ್ ಕಾಂಶ್ಚಿತ್ ಪತಿತಾಂಶ್ಚ ಪರಾಙ್ಮುಖಾನ್ ।
ನ ಜಘಾನಾರ್ಜುನೋ ಯೋಧಾನ್ ಯೋಧವ್ರತಮನುಸ್ಮರನ್ ॥೪೯॥

ಅವರಲ್ಲಿ ಪಲಾಯಿತರಾದ ಕೆಲವರನ್ನು, ಭೂಮಿಯ ಮೇಲೆ ಬಿದ್ದ ಕೆಲವರನ್ನು ಮತ್ತು ಯುದ್ಧ ವಿಮುಖರಾದ ಕೆಲವರನ್ನು ಯೋಧವ್ರತವನ್ನು ಸ್ಮರಿಸಿದ ಅರ್ಜುನನು ಕೊಲ್ಲಲಿಲ್ಲ.

ತೇ ಚ ಜೀರ್ಣರಥಾಶ್ವೇಭಾಃ ಪ್ರಾಯಶಶ್ಚ ಪರಾಙ್ಮುಖಾಃ ।
ಕುರವಃ ಕರ್ಣ ಕರ್ಣೇತಿ ಹಾ ಹಾ ಚೇತಿ ವಿಚುಕ್ರುಶುಃ ॥ ೫೦ ॥

ಆ ಕುರುಗಳು ರಥಾಶ್ವ-ಗಜಗಳನ್ನು ಕಳೆದುಕೊಂಡು ಪ್ರಾಯಶಃ ಯುದ್ಧ ಪರಾಙ್ಮುಖರಾಗಿ 'ಕರ್ಣನೇ-ಕರ್ಣನೇ, ಅಯ್ಯೋ-ಅಯ್ಯೋ!' ಎಂದು ಕಿರುಚಿದರು.

ತಮಾಧಿರಥಿರಾಕ್ರಂದಂ ವಿಜ್ಞಾಯ ಶರಣೈಷಿಣಾಮ್ ।
ಮಾ ಭೈಷ್ಟೇತಿ ಪ್ರತಿಶ್ರುತ್ಯ ಯಯಾವಭಿಮುಖೋಽರ್ಜುನಮ್ ॥೫೧॥

ತನ್ನಿಂದ ರಕ್ಷಣೆಯನ್ನು ಬಯಸುವ ಅವರ ಆಕ್ರಂದನವನ್ನು ಕೇಳಿ ಕರ್ಣನು ಹೆದರಬೇಡಿ ಎಂದು ಗಟ್ಟಿಯಾಗಿ ಹೇಳಿ ಅರ್ಜುನನಿಗೆ ಅಭಿಮುಖವಾಗಿ ಹೋದನು.

ಸ ಭಾರತರಥಶ್ರೇಷ್ಠಃ ಸರ್ವಭಾರತಹರ್ಷಣಃ ।
ಪ್ರಾದುಶ್ಚಕ್ರೇ ತದಾಽಽಗ್ನೇಯಮಸ್ತ್ರಮಸ್ತ್ರವಿದಾಂ ವರಃ ॥ ೫೨ ॥

ಭಾರತ ಸೈನ್ಯದಲ್ಲಿ ಶ್ರೇಷ್ಠನಾದ ರಥನಾದ, ಸರ್ವಸೈನ್ಯವನ್ನು ಹರ್ಷಗೊಳಿಸುವ, ಅಸ್ತ್ರಜ್ಞಾನಿಗಳಲ್ಲಿ ಶ್ರೇಷ್ಠನಾದ, ಅವನು ಆಗ್ನೇಯಾಸ್ತ್ರವನ್ನು ಪ್ರಯೋಗಿಸಿದನು.

ತಸ್ಯ ದೀಪ್ತಶರೌಘಸ್ಯ ದೀಪ್ತಚಾಪರಥಸ್ಯ ಚ ।
ವಾರುಣೇನ ತದಸ್ತ್ರೇಣ ವಿದುಧಾವ ಧನಂಜಯಃ ।
ಅಸ್ತ್ರಮಸ್ತ್ರೇಣ ಸಂವಾರ್ಯ ಪ್ರಾಣದದ್ ವಿಸೃಜನ್ ಶರಾನ್ ॥ ೫೩ ॥

ಪ್ರಕಾಶಮಾನವಾದ ಬಾಣಸಮೂಹಗಳನ್ನು, ಧನುಸ್ಸು ಮತ್ತು ರಥಗಳನ್ನು ಹೊಂದಿದ ಅವನ ಅಸ್ತ್ರವನ್ನು ಅರ್ಜುನನು ವಾರುಣಾಸ್ತ್ರದಿಂದ ನಿವಾರಿಸಿ ಬಾಣಗಳನ್ನು ಪ್ರಯೋಗಿಸುತ್ತಾ ಸಿಂಹನಾದವನ್ನು ಮಾಡಿದನು.

ಧೃಷ್ಟದ್ಯುಮ್ನಶ್ಚ ಭೀಮಶ್ಚ ಸಾತ್ಯಕಿಶ್ಚ ಮಹಾರಥಃ ।
ವಿವ್ಯಧುಃ ಕರ್ಣಮಾಸಾದ್ಯ ತ್ರಿಭಿಸ್ತ್ರಿಭಿರಜಿಹ್ಮಗೈಃ ॥ ೫೪ ॥

ಧೃಷ್ಟದ್ಯುಮ್ನ, ಭೀಮ ಮತ್ತು ಮಹಾರಥನಾದ ಸಾತ್ಯಕಿ ಇವರು ಕರ್ಣನ ಸಮೀಪಕ್ಕೆ ಬಂದು, ನೇರವಾಗಿ ಸಾಗುವ ಮೂರು-ಮೂರು ಬಾಣಗಳಿಂದ ಅವನನ್ನು ಹೊಡೆದರು.

ಅರ್ಜುನಾಸ್ತ್ರಂ ತು ರಾಧೇಯಃ ಸಂವಾರ್ಯ ಶರವೃಷ್ಟಿಭಿಃ ।
ತೇಷಾಂ ತ್ರಯಾಣಾಂ ಚಾಪಾನಿ ಚಿಚ್ಛೇದ ವಿಶಿಖೈಸ್ತ್ರಿಭಿಃ ॥ ೫೫ ॥

ಕರ್ಣನು ಅರ್ಜುನನ ಅಸ್ತ್ರವನ್ನು ಬಾಣಗಳ ಮಳೆಯಿಂದ ನಿವಾರಿಸಿ, ಆ ಮೂವರ ಧನುಸ್ಸುಗಳನ್ನು ಮೂರು ಬಾಣಗಳಿಂದ ಕತ್ತರಿಸಿದನು.

ತೇ ನಿಕೃತ್ತಾಯುಧಾಃ ಶೂರಾ ನಿರ್ವಿಷಾ ಇವ ಪನ್ನಗಾಃ ।
ಅಥ ಶಕ್ತೀಃ ಸಮುತ್ಕ್ಷಿಪ್ಯ ಭುಜೈಃ ಸಿಂಹಾ ಇವಾನದನ್ ॥ ೫೬ ॥

ಆ ಶೂರರು ತಮ್ಮ ಆಯುಧಗಳು ಕತ್ತರಿಸಲ್ಪಡುತ್ತಿರಲು ವಿಷರಹಿತವಾದ ಸರ್ಪಗಳಂತೆ ತಮ್ಮ ಭುಜಗಳಿಂದ ಶಕ್ತಿಗಳನ್ನು ಎತ್ತಿ ಹಿಡಿದು ಸಿಂಹಗಳಂತೆ ನಾದವನ್ನು ಮಾಡಿದರು.

ತಾ ಭುಜಾಗ್ರೈರ್ವಿನಿರ್ಮುಕ್ತಾ ನಿರ್ಮುಕ್ತಭುಜಗೋಪಮಾಃ ।
ದೀಪ್ಯಮಾನಾ ಮಹಾಶಕ್ತ್ಯ ಜಗ್ಮುರಾಧಿರಥಿಂ ಪ್ರತಿ ॥ ೫೭ ॥

ಅವರ ಶ್ರೇಷ್ಠವಾದ ಭುಜಗಳಿಂದ ಪ್ರಯೋಗಿಸಲ್ಪಟ್ಟ, ಪೊರೆಯನ್ನು ಕಳಚಿದ ಸರ್ಪದಂತಿದ್ದ, ಪ್ರಕಾಶಮಾನವಾದ ಆ ಮಹಾಶಕ್ತಿಗಳು ಕರ್ಣನ ಕಡೆಗೆ ಬಂದವು.

ತಾ ನಿಕೃತ್ಯ ಶರೈಸ್ತೀಕ್ಷ್ಣೈಃ ಸಿಂಹನಾದಂ ಚಕಾರ ಹ ।
ನನಾದ ಬಲವಾನ್ ಕರ್ಣಃ ಪಾರ್ಥಾಯ ವಿಸೃಜನ್ ಶರಾನ್ ॥ ೫೮ ॥

ಬಲಿಷ್ಠನಾದ ಕರ್ಣನು ಅವುಗಳನ್ನು ತೀಕ್ಷ್ಣವಾದ ಬಾಣಗಳಿಂದ ಕತ್ತರಿಸಿ, ಅರ್ಜುನನ ಮೇಲೆ ಬಾಣಗಳನ್ನು ಪ್ರಯೋಗಿಸುತ್ತಾ ಸಿಂಹನಾದವನ್ನು ಮಾಡಿದನು.

ಅರ್ಜುನಶ್ಚಾಪಿ ರಾಧೇಯಂ ವಿದ್ವಾ ಸಪ್ತಭಿರಾಶುಗೈಃ ।
ಕರ್ಣಾದವರಜಂ ಬಾಣೈರ್ಜಘಾನ ನಿಶಿತೈಸ್ತ್ರಿಭಿಃ ॥ ೫೯ ॥

ಅರ್ಜುನನೂ ಸಹ ಶೀಘ್ರಗಾಮಿಗಳಾದ ಏಳು ಬಾಣಗಳಿಂದ ಕರ್ಣನನ್ನು ಹೊಡೆದು, ಕರ್ಣನ ತಮ್ಮನನ್ನು ಹರಿತವಾದ ಮೂರು ಬಾಣಗಳಿಂದ ಕೊಂದನು.

ತತಃ ಶತ್ರುಂಜಯಂ ಹತ್ವಾ ಪಾರ್ಥಃ ಷಡ್ಭಿರಜಿಹ್ಮಗೈಃ ।
ಜಹಾರ ಸದ್ಯೋ ಭಲ್ಲೇನ ದ್ವಿಧಾ ತಸ್ಯ ಶಿರೋ ರಥಾತ್ ॥ ೬೦ ॥

ಅನಂತರ ಅರ್ಜುನನು ನೇರವಾಗಿ ಸಾಗುವ ಆರು ಬಾಣಗಳಿಂದ ಶತ್ರುಂಜಯನನ್ನು ಹೊಡೆದು, ಭಲ್ಲದಿಂದ ಅವನ ಶಿರಸ್ಸನ್ನು ಎರಡು ಭಾಗವಾಗಿ ಕಡಿದು ರಥದಿಂದ ಉರುಳಿಸಿದನು.

ಪಶ್ಯತಾಂ ಧಾರ್ತರಾಷ್ಟ್ರಾಣಾಮೇವಮೇತೇ ಕಿರೀಟಿನಾ ।
ಪ್ರಮುಖೇ ಸೂತಪುತ್ರಸ್ಯ ಸೋದರ್ಯಾ ನಿಹತಾಸ್ತ್ರಯಃ ॥ ೬೧ ॥

ದುರ್ಯೋಧನಾದಿಗಳು ನೋಡುತ್ತಿರುವಂತೆಯೇ ಮತ್ತು ಕರ್ಣನ ಎದುರಿನಲ್ಲಿಯೇ ಅರ್ಜುನನಿಂದ ಅವನ ಈ ಮೂರು ಸಹೋದರರು ಕೊಲ್ಲಲ್ಪಟ್ಟರು.

ತತೋ ಭೀಮಃ ಸಮುತ್ಪತ್ಯ ಸ್ವರಥಾದ್ ವೈನತೇಯವತ್ ।
ಜಘಾನ ಸೂತಪುತ್ರಸ್ಯ ಬಾಂಧವಾನ್ ದಶ ಪಂಚ ಚ ॥ ೬೨ ॥

ಆಗ ಭೀಮನು ತನ್ನ ರಥದಿಂದ ಗರುಡನಂತೆ ಹಾರಿ ಕರ್ಣನ ಹದಿನೈದು ಬಂಧುಗಳನ್ನು ಕೊಂದನು.

ಪುನಃ ಸ್ವರಥಮಾಸ್ಥಾಯ ಧನುರಾದಾಯ ವೀರ್ಯವಾನ್ ।
ವಿವ್ಯಾಧ ದಶಭಿಃ ಕರ್ಣಂ ಸೂತಮಶ್ವಾಂಶ್ಚ ಪಂಚಭಿಃ ॥ ೬೩ ॥

ಪುನಃ ಅಲ್ಲಿಂದ ತನ್ನ ರಥಕ್ಕೆ ಹಾರಿ ಧನುಸ್ಸನ್ನು ತೆಗೆದುಕೊಂಡು ಪರಾಕ್ರಮಶಾಲಿಯಾದ ಅವನು ಹತ್ತು ಬಾಣಗಳಿಂದ ಕರ್ಣನನ್ನೂ, ಅವನ ಸಾರಥಿ ಮತ್ತು ಅಶ್ವಗಳನ್ನು ಐದು ಬಾಣಗಳಿಂದಲೂ ಹೊಡೆದನು.

ಧೃಷ್ಟದ್ಯುಮ್ನೋಽಪ್ಯಸಿವರಂ ಚರ್ಮ ಚಾದಾಯ ಭಾಸ್ವರಮ್ ।
ಜಘಾನ ಚಂದ್ರವರ್ಮಾಣಂ ಬೃಹತ್‌ಕ್ಷತ್ರಂ ಚ ನೈಷಧಮ್ ॥ ೬೪ ॥

ಧೃಷ್ಟದ್ಯುಮ್ನನೂ ಸಹ ಶ್ರೇಷ್ಠವಾದ, ಪ್ರಕಾಶಮಾನವಾದ, ಖಡ್ಗ-ಚರ್ಮಗಳನ್ನು ತೆಗೆದುಕೊಂಡು ನಿಷಧದೇಶದ ಚಂದ್ರವರ್ಮ ಮತ್ತು ಬೃಹತ್‌ಕ್ಷತ್ರನನ್ನು ಸಂಹರಿಸಿದನು.

ತತಃ ಸ್ವರಥಮಾಸ್ಥಾಯ ಪಾಂಚಾಲ್ಯೋಽನ್ಯಚ್ಛರಾಸನಮ್ ।
ಆದಾಯ ಕರ್ಣಂ ವಿವ್ಯಾಧ ತ್ರಿಸಪ್ತತ್ಯಾ ನದನ್ ಶರೈಃ ॥ ೬೫ ॥

ಅನಂತರ ಪಾಂಚಾಲ್ಯನಾದ ಧೃಷ್ಟದ್ಯುಮ್ನನು ತನ್ನ ರಥಕ್ಕೆ ಬಂದು ಇನ್ನೊಂದು ಧನುಸ್ಸನ್ನು ತೆಗೆದುಕೊಂಡು, ಎಪ್ಪತ್ತೂರು ಬಾಣಗಳಿಂದ ಕರ್ಣನನ್ನು ಹೊಡೆದು ಸಿಂಹನಾದವನ್ನು ಮಾಡಿದನು.

ಶೈನೇಯೋಽಪ್ಯನ್ಯದಾದಾಯ ಧನುರಿಂದ್ರಸಮದ್ಯುತಿಃ ।
ಸೂತಪುತ್ರಂ ಚತುಃಷಷ್ಟ್ಯಾ ವಿದ್ಧ್ವಾ ಸಿಂಹ ಇವೋನ್ನದತ್ ॥ ೬೬ ॥

ಇಂದ್ರನಿಗೆ ಸಮಾನವಾದ ತೇಜಸ್ಸುಳ್ಳ ಸಾತ್ಯಕಿಯೂ ಸಹ ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ಅರವತ್ನಾಲ್ಕು ಬಾಣಗಳಿಂದ ಕರ್ಣನನ್ನು ಹೊಡೆದು ಸಿಂಹದಂತೆ ನಾದವನ್ನು ಮಾಡಿದನು.

ಭಲ್ಲಾಭ್ಯಾಂ ಸಾಧು ಮುಕ್ತಾಭ್ಯಾಂ ಛಿತ್ತ್ವಾ ಕರ್ಣಸ್ಯ ಕಾರ್ಮುಕಮ್ ।
ಪುನಃ ಕರ್ಣಂ ತ್ರಿಭಿರ್ಬಾಣೈರ್ಬಾಹ್ವೋರುರಸಿ ಚಾರ್ಪಯತ್ ॥ ೬೭ ॥

ಚೆನ್ನಾಗಿ ಪ್ರಯೋಗಿಸಿದ ಎರಡು ಭಲ್ಲಗಳಿಂದ ಕರ್ಣನ ಧನುಸ್ಸನ್ನು ಕತ್ತರಿಸಿ, ಪುನಃ ಕರ್ಣನ ಬಾಹುಗಳಲ್ಲಿ ಮತ್ತು ಎದೆಯಲ್ಲಿ ಮೂರು ಬಾಣಗಳನ್ನು ಅರ್ಪಿಸಿದನು.

ತತೋ ದುರ್ಯೋಧನೋ ರಾಜಾ ದ್ರೋಣಶ್ಚೈವ ಜಯದ್ರಥಃ ।
ನಿಮಜ್ಜಮಾನಂ ರಾಧೇಯಮುಜ್ಜಹ್ರುಃ ಸಮರಾರ್ಣವಾತ್ ॥ ೬೮ ॥

ಆಗ ರಾಜನಾದ ದುರ್ಯೋಧನನೂ, ದ್ರೋಣ ಮತ್ತು ಜಯದ್ರಥರೂ ಸಮರಾರ್ಣವದಲ್ಲಿ ಮುಳುಗುತ್ತಿದ್ದ ಕರ್ಣನನ್ನು ಮೇಲಕ್ಕೆತ್ತಿದರು.

ಧೃಷ್ಟದ್ಯುಮ್ನಶ್ಚ ಭೀಮಶ್ಚ ಸೌಭದ್ರೋಽರ್ಜುನ ಏವ ಚ ।
ನಕುಲಃ ಸಹದೇವಶ್ಚ ಸಾತ್ಯಕಿಂ ಜುಗುಪೂ ರಣೇ ॥ ೬೯ ॥

ಧೃಷ್ಟದ್ಯುಮ್ನ, ಭೀಮ, ಅಭಿಮನ್ಯು, ಅರ್ಜುನ, ನಕುಲ ಮತ್ತು ಸಹದೇವರು ಯುದ್ಧದಲ್ಲಿ ಸಾತ್ಯಕಿಯನ್ನು ರಕ್ಷಿಸಿದರು.

ಪತ್ತ್ಯಶ್ವರಥಮಾತಂಗಾಸ್ತ್ವದೀಯಾಃ ಶತಶೋಽಪರೇ ।
ಕರ್ಣಮೇವಾಭ್ಯಧಾವಂತ ತ್ರಾಸ್ಯಮಾನಾ ಪ್ರಹಾರಿಣಃ ॥ ೭೦ ॥

ನಿನ್ನ ಸೈನ್ಯದ ಪದಾತಿ-ಅಶ್ವ-ರಥ-ಗಜಗಳು ನೂರಾರು ಸಂಖ್ಯೆಯಲ್ಲಿ ಪ್ರಹಾರಶೀಲರಾದ ಶತ್ರುಗಳಿಂದ ತ್ರಾಸಕ್ಕೆ ಒಳಗಾದರೂ ಕರ್ಣನ ಕಡೆಗೇ ಧಾವಿಸಿದವು.

ಏವಮೇಷ ಮಹಾರೌದ್ರಃ ಕ್ಷಯಾರ್ಥಂ ಸರ್ವಧನ್ವಿನಾಮ್ ।
ತಾವಕಾನಾಂ ಪರೇಷಾಂ ಚ ತ್ಯಕ್ತ್ವಾ ಪ್ರಾಣಾನಭೂದ್ ರಣಃ ॥ ೭೧ ॥

ಹೀಗೆ ಸರ್ವಧನುರ್ಧಾರಿಗಳ ಕ್ಷಯಕ್ಕಾಗಿ ಪ್ರಾಣವನ್ನು ತ್ಯಜಿಸಿ ಹೋರಾಡುವ ನಿನ್ನವರಿಗೂ ಮತ್ತು ಶತ್ರುಗಳಿಗೂ ಮಹಾಭಯಂಕರವಾದ ಯುದ್ಧವು ನಡೆಯಿತು.

ಪದಾತಿರಥನಾಗಾಶ್ವೈರ್ಗಜಾಶ್ವರಥಪತ್ತಯಃ ।
ರಥಿನೋ ನಾಗಪತ್ತ್ಯಶ್ವೈರ್ಗಜಾ ಪತ್ತಿರಥದ್ವಿಪೈಃ ॥ ೭೨ ॥

ಅಶ್ವೈರಶ್ವಾ ಗಜೈರ್ನಾಗಾ ರಥಿನೋ ರಥಿಭಃ ಸಹ ।
ಸಂಪನ್ನಾಃ ಸಮದೃಶ್ಯಂತ ಪತ್ತಯಶ್ಚಾಪಿ ಪತ್ತಿಭಿಃ ॥ ೭೩ ॥

ಪದಾತಿ-ರಥ-ಗಜ-ಅಶ್ವಗಳಿಂದ ಗಜಾಶ್ವ-ರಥ-ಪದಾತಿಗಳೂ, ಗಜ-ಪದಾತಿ-ಅಶ್ವಗಳಿಂದ ರಥಿಕರೂ, ಪದಾತಿ-ರಥ-ಗಜಗಳಿಂದ ಗಜಗಳೂ, ಅಶ್ವಗಳಿಂದ ಅಶ್ವಗಳೂ, ಗಜಗಳಿಂದ ಗಜಗಳೂ, ರಥಿಕರಿಂದ ರಥಿಕರೂ, ಪದಾತಿಗಳಿಂದ ಪದಾತಿಗಳೂ ಯುದ್ಧದಲ್ಲಿ ಸಂಸಕ್ತರಾಗಿರುವುದು ಕಂಡುಬಂದಿತು.

ಏವಂ ಸುಕಲಿಲಂ ಯುದ್ಧಮಾಸೀತ್ ಕ್ರವ್ಯಾದಹರ್ಷಣಮ್ ।
ಸಹ ಭೀತೈರಭೀತಾನಾಂ ಯಮರಾಷ್ಟ್ರವಿವರ್ಧನಮ್ ॥ ೭೪ ॥

ಸಂರಂಭೇಣಾಭಿಸಂಸೃಜ್ಯ ನಿಘ್ನತಾಮಿತರೇತರಮ್ ।
ಕುರೂಣಾಂ ಪಾಂಡವಾನಾಂ ಚ ದ್ರೋಣಾರ್ಜುನಸಮಾಗಮೇ ॥೭೫॥

ಹೀಗೆ ನಿರ್ಭಯರಾದವರ ಮತ್ತು ನಿರ್ಭಯರಾದವರಿಗೆ ಭಯಗೊಂಡವರ ಜೊತೆಯಲ್ಲಿ ಯಮರಾಷ್ಟ್ರವಿವರ್ಧನವಾದ, ಮಾಂಸಾಹಾರಿ ಪ್ರಾಣಿಗಳಿಗೆ ಹರ್ಷದಾಯಕವಾದ, ಬಹಳ ಘೋರವಾದ ಯುದ್ಧವು ನಡೆಯಿತು. ದ್ರೋಣಾರ್ಜುನರ ಸಮಾಗಮ ಕಾಲದಲ್ಲಿ ಕೋಪದಿಂದ ಒಬ್ಬರನ್ನೊಬ್ಬರು ಎದುರಿಸಿ,

ಪರಸ್ಪರವಾಗಿ ಕೊಲ್ಲುವ ಕೌರವರಿಗೆ ಮತ್ತು ಪಾಂಡವರಿಗೆ (ಇಂತಹ ಘೋರವಾದ ಯುದ್ಧವು ನಡೆಯಿತು).

ತತೋ ಹತಾ ನರರಥವಾಜಿಕುಂಜರೈ-
ರನೇಕಶೋ ದ್ವಿಪರಥಪತ್ತಿವಾಜಿನಃ ।
ಗಜೈರ್ಗಜಾ ರಥಿಭಿರುದಾಯುಧಾ ರಥಾಃ
ಹಯೈರ್ಹಯಾಃ ಪತ್ತಿಗತಾಶ್ಚ ಪತ್ತಿಭಿಃ ॥ ೭೬ ॥

ಆಗ ಪದಾತಿ-ರಥ-ಅಶ್ವ-ಗಜಗಳಿಂದ ಅನೇಕ ಗಜ-ರಥಾಶ್ವ-ಪದಾತಿಗಳು ಕೊಲ್ಲಲ್ಪಟ್ಟವು. ಗಜಗಳಿಂದ ಗಜಗಳೂ, ರಥಿಕರಿಂದ ಆಯುಧಧಾರಿಗಳಾದ ರಥಿಕರೂ, ಅಶ್ವಗಳಿಂದ ಅಶ್ವಗಳೂ, ಪದಾತಿಗಳಿಂದ ಪದಾತಿಗಳೂ ಕೊಲ್ಲಲ್ಪಟ್ಟವು.

ರಥೈರ್ದ್ವಿಪಾ ದ್ವಿರದವರೈರ್ಮಹಾರಥಾಃ
ಹಯೈರ್ನರಾ ವರರಥಿಭಿಶ್ಚ ವಾಜಿನಃ ।
ನಿಪೂದಿತಾ ಗಜಹಯಪಾದತಾಡನೈಃ
ಭೃಶಾಕುಲಾ ರಥಮುಖನೇಮಿಭಿರ್ಹಯಾಃ ॥ ೭೭ ॥

ರಥರಿಂದ ಗಜಗಳೂ, ಶ್ರೇಷ್ಠಗಜಗಳಿಂದ ಮಹಾರಥರೂ, ಅಶ್ವಗಳಿಂದ ಯೋಧರೂ, ಶ್ರೇಷ್ಠ ರಥಿಕರಿಂದ ಅಶ್ವಗಳೂ ಕೊಲ್ಲಲ್ಪಟ್ಟರು. ಗಜಗಳ ಮತ್ತು ಅಶ್ವಗಳ ಪಾದತಾಡನದಿಂದ, ರಥದ ಮುಂಭಾಗ ಮತ್ತು ಚಕ್ರದ ತುದಿಗಳಿಂದ ಹೊಡೆಯಲ್ಪಟ್ಟ ಅಶ್ವಗಳು ಬಹಳವಾಗಿ ಆಕುಲಗೊಂಡವು.

ತಥಾ ವರೈರ್ಬಹುಕರಣೈರ್ವರಾಯುಧೈಃ
ಹತಾ ಗಜಾಃ ಪ್ರತಿಭಯದರ್ಶನಾಃ ಕ್ಷಿತಿಮ್ ।
ನಿರಸ್ತಜಿಹ್ವಾದಶನೇಕ್ಷಣಾಃ ಕ್ಷಿತೌ
ಕ್ಷಯಂ ಗತಾಃ ಖಂಡಿತವರ್ಮಭೂಷಣಾಃ ॥ ೭೮ ॥

ಹಾಗೆಯೇ, ಶ್ರೇಷ್ಠವಾದ ಅನೇಕ ಉಪಕರಣಗಳಿಂದ ಮತ್ತು ಆಯುಧಗಳಿಂದ ಹೊಡೆಯಲ್ಪಟ್ಟ, ನೋಡಲು ಭಯಂಕರವಾಗಿದ್ದ ಗಜಗಳು ನಾಲಿಗೆ, ದಂತಗಳು ಮತ್ತು

ಕಣ್ಣುಗಳನ್ನು ಕಳೆದುಕೊಂಡು, ತಮ್ಮ ಕವಚಗಳನ್ನೂ ಮತ್ತು ಭೂಷಣಗಳನ್ನೂ ಕಳೆದುಕೊಂಡು ಭೂಮಿಯ ಮೇಲೆ ಬಿದ್ದು, ಭೂಮಿಯಲ್ಲಿ ನಾಶವನ್ನು ಹೊಂದಿದವು.

ಪ್ರಮೋದನೇ ಶ್ವಾಪದಪಕ್ಷಿರಕ್ಷಸಾಂ
ಜನಕ್ಷಯೇ ವರ್ತತಿ ತತ್ರ ದಾರುಣೇ ।
ಮಹಾಬಲಾಸ್ತೇ ಕುಪಿತಾಃ ಪರಸ್ಪರಂ
ನಿಘೂದಯಂತಃ ಪ್ರಚರಂತ್ಯುದಾಯುಧಾಃ ॥ ೭೯ ॥

ಮಾಂಸಾಹಾರಿ ಪ್ರಾಣಿಗಳಿಗೂ, ಪಕ್ಷಿಗಳಿಗೂ ಮತ್ತು ರಾಕ್ಷಸರಿಗೂ ಪ್ರಮೋದ ಜನಕವಾದ, ದಾರುಣವಾದ ಜನಕ್ಷಯವು ಅಲ್ಲಿ ಉಂಟಾಗುತ್ತಿರಲು ಮಹಾಬಲರಾದ ಅವರು ಕುಪಿತರಾಗಿ ಕೈಯಲ್ಲಿ ಆಯುಧಗಳನ್ನು ಹಿಡಿದು, ಪರಸ್ಪರವಾಗಿ ಕೊಲ್ಲುತ್ತಾ ರಣರಂಗದಲ್ಲಿ ಸಂಚರಿಸಿದರು.

ಮಹಾಬಲೇ ಕ್ಷುಬ್ಧಮಹಾರ್ಣವೋಪಮೇ
ಮಹೇಂದ್ರಸದ್ಮಾತಿಥಿತಾಂ ಯಿಯಾಸವಃ ।
ತಥಾ ಬಲೇ ಭೃಶಲುಲಿತೇ ಪರಸ್ಪರಂ
ನಿರೀಕ್ಷಮಾಣೇ ರುಧಿರೌಘಸಂಪ್ಲುತೇ ॥ ೮೦ ॥

ಕ್ಷೋಭೆಗೊಂಡ ದೊಡ್ಡ ಸಾಗರಕ್ಕೆ ಸದೃಶವಾದ ಮಹಾಸೈನ್ಯದಲ್ಲಿ ಮಹೇಂದ್ರ ಭವನದಲ್ಲಿ ಅತಿಥಿಗಳಾಗಿ ಹೋಗಲು ಬಯಸಿದ ವೀರರು, ಹಾಗೆಯೇ ಸೈನ್ಯಗಳು ಪರಸ್ಪರ ವಿನಾಶವನ್ನು ಹೊಂದುತ್ತಾ ರಕ್ತಸಮೂಹದಿಂದ ತೊಯ್ದು ಒಬ್ಬರನ್ನೊಬ್ಬರು ಪರಸ್ಪರವಾಗಿ ನೋಡುತ್ತಿರುವಾಗ (ವೀರರು ಆಯುಧಗಳನ್ನು ಎತ್ತಿಹಿಡಿದು ರಣರಂಗದಲ್ಲಿ ಸಂಚರಿಸಿದರು).

ದಿವಾಕರೇಽಸ್ತಂ ಗಿರಿಮಾಸ್ಥಿತೇ ಶನೈಃ ।
ಉಭೇ ಪ್ರಯಾತೇ ಶಿಬಿರಾಯ ಭಾರತ ॥ ೮೧ ॥

ಎಲೈ ಭಾರತನೇ, ದಿವಾಕರನು ಅಸ್ತಪರ್ವತವನ್ನು ಸೇರುತ್ತಿರಲು ಎರಡು ಸೈನ್ಯಗಳೂ ನಿಧಾನವಾಗಿ ಶಿಬಿರಕ್ಕೆ ಹಿಂದಿರುಗಿದವು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ದ್ರೋಣಪರ್ವಣಿ ಏಕತ್ರಿಂಶೋಽಧ್ಯಾಯಃ ॥

॥ ಸಂಶಪ್ತಕವಧಪರ್ವಣಿ ಷೋಡಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಮೂವತ್ತೊಂದನೆಯ ಅಧ್ಯಾಯ ಮುಗಿಯಿತು.

ದ್ರೋಣಯುದ್ಧದಲ್ಲಿ ಎರಡನೆಯ ದಿನದ ಅವಹಾರವು ಮುಗಿಯಿತು.

॥ ಸಂಶಪ್ತಕವಧಪರ್ವ ಮುಗಿಯಿತು ॥

★ ★ ★ ★ ★

೩. ಅಭಿಮನ್ಯು ವಧ ಪರ್ವ

ಮಹಾಭಾರತತಾತ್ಪರ್ಯನಿರ್ಣಯ (ಅಧ್ಯಾಯ-೨೬)

ಪಾರ್ಥೇ ಗತೇ ಶ್ವೋ ನೃಪತಿಂ ಗ್ರಹೀಷ್ಯೇ
ನಿಹನ್ಮಿ ವಾ ತತ್ಸದೃಶಂ ತದೀಯಮ್ ।
ಇತಿ ಪ್ರತಿಜ್ಞಾಂ ಸ ವಿಧಾಯ ಭೂಯಃ
ಪ್ರಾತರ್ಯಯೌ ಯುದ್ಧಮಾಕಾಂಕ್ಷಮಾಣಃ ॥

ನಾಳೆ ಅರ್ಜುನನು ದೂರ ಹೋದಾಗ ನಾನು ಧರ್ಮರಾಜನನ್ನು ಸೆರೆ ಹಿಡಿಯುವೆನು. ಅಥವಾ ಸಮಾನನಾದ ಅವನ ಕಡೆಯ ಒಬ್ಬನನ್ನು ಕೊಲ್ಲುವೆನು. ಹೀಗೆ ದ್ರೋಣರು ಪುನಃ ಪ್ರತಿಜ್ಞೆ ಮಾಡಿ ಬೆಳಿಗ್ಗೆ ಯುದ್ಧವನ್ನು ಮಾಡಲು ಇಚ್ಛಿಸಿ ಹೊರಟರು.

ಪದ್ಮವ್ಯೂಹಂ ವ್ಯೂಹ್ಯ ಪರೈರಭೇದ್ಯಂ
ವರಾದ್ ವಿಷ್ಣೋಸ್ತಸ್ಯ ಮಂತ್ರಂ ಹ್ಯಜಪ್ತ್ವಾ ।
ಪಾರ್ಥಾಶ್ಚ ತಂ ಪ್ರಾಪುರ್ ಋತೇऽರ್ಜುನೇನ
ಸಂಶಪ್ತಕೈರ್ಯಯುಧೇ ಸೋऽಪಿ ವೀರಃ ॥

ವಿಷ್ಣುವಿನ ವರದಿಂದ, ವಿಷ್ಣುಮಂತ್ರ ಜಪಿಸದೆ ಅನ್ಯರಿಂದ ಭೇದಿಸಲಾಗದ ಪದ್ಮವ್ಯೂಹವನ್ನು ದ್ರೋಣರು ರಚಿಸಿ ಯುದ್ಧಕ್ಕೆ ನಿಂತರು. ಅರ್ಜುನನ ಹೊರತು ಎಲ್ಲ

ಪಾಂಡವರೂ ವ್ಯೂಹವನ್ನು ಸಮೀಪಿಸಿದರು. ವೀರ ಅರ್ಜುನನು ಸಂಶಪ್ತಕರೊಡನೆ ಹೋರಾಡಿದನು.

ಪಾರ್ಥಾ ವ್ಯೂಹಂ ತು ತಂ ಪ್ರಾಪ್ಯ ನಾಶಕನ್ ಭೇತ್ತುಮುದ್ಯತಾಃ ।
ಜಾನಂಶ್ಚ ಪ್ರತಿಭಾಯೋಗಾತ್ ಕಾಮ್ಯಂ ನೈವಾಜಪನ್ನನುಮ್ ॥

ಭೀಮೋ ಯುಧಿಷ್ಠಿರಸ್ತತ್ರ ತಜ್ಞಂ ಸೌಭದ್ರಮಬ್ರವೀತ್ ।
ಭಿಂದಿ ವ್ಯೂಹಮಿಮಂ ತಾತ ವಯಂ ತ್ವಾಮನುಯಾಮಹೇ ॥

ಪಾಂಡವರು ವ್ಯೂಹದ ಬಳಿಗೆ ಹೋಗಿ ಅದನ್ನು ಭೇದಿಸಲು ಯತ್ನಿಸಿದರೂ ಶಕ್ತರಾಗಲಿಲ್ಲ. ಭೀಮ ಪ್ರತಿಭಾ ಬಲದಿಂದ ತಿಳಿದಿದ್ದರೂ ಕಾಮ್ಯವಾದ್ದರಿಂದ ಮಂತ್ರವನ್ನು ಜಪಿಸಲೇ ಇಲ್ಲ. ಅದನ್ನು ತಿಳಿದಿದ್ದ ಅಭಿಮನ್ಯುವಿಗೆ ಯುಧಿಷ್ಠಿರ ಹೇಳಿದನು, 'ಮಗು, ನೀನು ಈ ವ್ಯೂಹವನ್ನು ಭೇದಿಸು. ನಾವು ನಿನ್ನ ಬೆನ್ನ ಹಿಂದೆ ಬರುತ್ತೇವೆ' ಎಂದು.

ಸ ಏವಮುಕ್ತೋ ರಥಿನಾಂ ಪ್ರಬರ್ಹೋ
ವಿವೇಶ ಭಿತ್ತ್ವಾ ದ್ವಿಷತಾಂ ಚಮೂಂ ತಾಮ್ ।
ಅನ್ವೇವ ತಂ ವಾಯುಸುತಾದಯಶ್ಚ
ವಿವಿಕ್ಷವಃ ಸೈಂಧವೇನೈವ ರುದ್ಧಾಃ ॥

ವರೇಣ ರುದ್ರಸ್ಯ ನಿರುದ್ಧ್ಯಮಾನೋ
ಜಯದ್ರಥೇನಾತ್ರ ವೃಕೋದರಸ್ತು ।
ವಿಷ್ಣೋರಭೀಷ್ಟಂ ವಧಮಾರ್ಜುನೇಸ್ತದಾ
ವಿಜ್ಞಾಯ ಶಕ್ತೋಽನಪಿ ನ ಚಾತ್ಯವರ್ತತ ॥

ಧರ್ಮರಾಜ ಹೀಗೆ ಹೇಳಿದಾಗ ರಥಿಕರಲ್ಲಿ ಶ್ರೇಷ್ಠನಾದ ಅಭಿಮನ್ಯು ಶತ್ರುಸೈನ್ಯವನ್ನು ಭೇದಿಸಿ ಹೊಕ್ಕನು. ಅವನ ಹಿಂದಿನಿಂದಲೇ ಪ್ರವೇಶಿಸಲು ಬಯಸಿದ್ದ ಭೀಮ ಮುಂತಾದವರನ್ನು ರುದ್ರನ ವರದಿಂದ ಸೈಂಧವನು ತಡೆದ. ಜಯದ್ರಥನು ತಡೆದಾಗ ಭೀಮ ಅಭಿಮನ್ಯುವಿನ ವಧೆಯಾಗುವುದು ಶ್ರೀಕೃಷ್ಣನ ಸಂಕಲ್ಪವೆಂದು ಅರಿತು, ಶಕ್ತನಾಗಿದ್ದರೂ ಜಯದ್ರಥನನ್ನು ಅತಿಕ್ರಮಿಸಿ ಒಳಗೆ ಹೋಗಲಿಲ್ಲ.

ಜಯದ್ರಥಸ್ಥೇನ ವೃಷಧ್ವಜೇನ
ಪ್ರಯುದ್ಧ್ಯ ಮಾನೇಷು ವೃಕೋದರಾದಿಷು ।
ಪ್ರವಿಶ್ಯ ವೀರಃ ಸ ಧನಂಜಯಾತ್ಮಜೋ
ವಿಲೋಡಯಾಮಾಸ ಪರೋರುಸೇನಾಮ್ ॥

ಜಯದ್ರಥನಲ್ಲಿ ಆವಿಷ್ಟನಾದ ರುದ್ರ ಭೀಮ ಮುಂತಾದವರನ್ನು ಯುದ್ಧದಲ್ಲಿ ತೊಡಗಿಸಿದಾಗ ವೀರ ಅಭಿಮನ್ಯು ವ್ಯೂಹದ ಒಳಗೆ ಪ್ರವೇಶಿಸಿ ಶತ್ರುಗಳ ಮಹಾಸೈನ್ಯವನ್ನು ಕದಡಿದನು.

ಸ ದ್ರೋಣದುರ್ಯೋಧನಕರ್ಣಶಲ್ಯ
ದ್ರೌಣ್ಯಗ್ರಣೀಭಿಃ ಕೃತವರ್ಮಯುಕ್ತೈಃ ।
ರುದ್ಧಶ್ಚರಾರಾರಿಬಲೇಷ್ವಭೀತಃ
ಶಿರಾಂಸಿ ಕೃಂತಂಸ್ತದನುವ್ರತಾನಾಮ್ ॥

ದ್ರೋಣ, ದುರ್ಯೋಧನ, ಕರ್ಣ, ಶಲ್ಯ, ಅಶ್ವತ್ಥಾಮ, ಕೃತವರ್ಮ ಮುಂತಾದವರು ತಡೆದರೂ ಅಭಿಮನ್ಯು ನಿರ್ಭಯವಾಗಿ ಶತ್ರುಸೈನ್ಯಗಳಲ್ಲಿ ಅವರ ಕಡೆಯವರ ರುಂಡಗಳನ್ನು ಕತ್ತರಿಸುತ್ತಾ ಸಂಚರಿಸಿದನು.

ಸ ಲಕ್ಷಣಂ ರಾಜಸುತಂ ಪ್ರಸಹ್ಯ
ಪಿತುಃ ಸಮೀಪೇऽನಯದಾಶು ಮೃತ್ಯವೇ ।
ಬೃಹದ್ಬಲಂ ಚೋತ್ತಮವೀರ್ಯಕರ್ಮಾ
ವರಂ ರಥಾನಾಮಯುತಂ ಚ ಪತ್ತಿಭಿಃ ॥

ಉತ್ತಮ ವೀರ್ಯಕರ್ಮಗಳುಳ್ಳ ಅಭಿಮನ್ಯು ದುರ್ಯೋಧನನ ಮಗನಾದ ಲಕ್ಷಣನನ್ನು ದುರ್ಯೋಧನನ ಸಮಕ್ಷಮದಲ್ಲಿ ಬಲಾತ್ಕಾರವಾಗಿ ಯಮನಿಗೆ ಕಳಿಸಿಕೊಟ್ಟನು. ಹಾಗೇ ಬೃಹದ್ಬಲನನ್ನೂ ಮಹಾಬಲಿಷ್ಠರಾದ ಹತ್ತು ಸಾವಿರ ಶ್ರೇಷ್ಠ ರಥಿಕರನ್ನೂ ಬಾಣಗಳಿಂದ ಯಮನಿಗೆ ಕಳಿಸಿಕೊಟ್ಟನು.

ದ್ರೋಣಾದಯಸ್ತಂ ಹರಿಕೋಪಭೀತಾಃ
ಪ್ರತ್ಯಕ್ಷತೋ ಹಂತುಮಶಕ್ನುವಂತಃ ।

ಸಮ್ಮಂತ್ರ್ಯ ಕರ್ಣಂ ಪುರತೋ ನಿಧಾಯ
ಚಕ್ರುರ್ವಿಚಾಪಾಶ್ವರಥಂ ಕ್ಷಣೇನ ॥

ದ್ರೋಣರು ಮುಂತಾದವರು ಕೃಷ್ಣನ ಕೋಪಕ್ಕೆ ಹೆದರಿ ಅಭಿಮನ್ಯುವನ್ನು ಪ್ರತ್ಯಕ್ಷ ಕೊಲ್ಲಲು ಶಕ್ತರಾಗದೆ ಕರ್ಣನನ್ನು ಮುಂದೆ ಮಾಡಿಕೊಂಡು ವಿಚಾರ ಮಾಡಿ ಕ್ಷಣದಲ್ಲಿ ಅವನನ್ನು ಧನುಸ್ಸು ಕುದುರೆ ರಥಗಳಿಂದ ರಹಿತನನ್ನಾಗಿ ಮಾಡಿದರು.

ಕರ್ಣೋ ಧನುಸ್ತಸ್ಯ ಕೃಪಶ್ಚ ಸಾರಥಿಂ
ದ್ರೋಣೋ ಹಯಾನಾಶು ವಿಧೂಯ ಸಾಯಕೈಃ ।
ಸಚರ್ಮಖಡ್ಗಂ ರಥಚಕ್ರಮಸ್ಯ
ಪ್ರಣುದ್ಯ ಹಸ್ತಸ್ಥಿತಮೇವ ಚಕ್ರುಃ ॥

ಅಭಿಮನ್ಯುವಿನ ಧನುಸ್ಸನ್ನು ಕರ್ಣನೂ ಸಾರಥಿಯನ್ನು ಕೃಪರೂ ಕುದುರೆಗಳನ್ನು ದ್ರೋಣರೂ ಬೇಗನೆ ನಾಶಮಾಡಿ ಅವನ ಕತ್ತಿ ಗುರಾಣಿಗಳನ್ನೂ ಚಕ್ರವನ್ನೂಛೇದಿಸಿ ಅವನನ್ನು ಬರಿ ಗೈಯಲ್ಲಿ ನಿಲ್ಲುವಂತೆ ಮಾಡಿದರು.

ಭೀತೇಷು ಕೃಷ್ಣಾದಥ ತದ್ವಧಾಯ
ತೇಷ್ವಾಸಸಾದಾಽಶು ಗದಾಯುಧಂ ಗದೀ ।
ದೌಃಶಾಸನಿಸ್ತೌ ಯುಗಪಚ್ಚ ಮಮ್ರತು
ರ್ಗದಾಭಿಘಾತೇನ ಮಿಥೋಽತಿಪೌರುಷೌ ॥

ದ್ರೋಣ ಮುಂತಾದವರು ಅಭಿಮನ್ಯುವನ್ನು ಕೊಲ್ಲಲು ಕೃಪರಿಗೆ ಹೆದರಿದಾಗ ಗದಾಧಾರಿಯಾದ ದುಶ್ಶಾಸನನ ಪುತ್ರ ಗದಾಧಾರಿ ಅಭಿಮನ್ಯುವನ್ನು ಎದುರಿಸಿದನು. ಅತ್ಯಂತ ಪೌರುಷಶಾಲಿಗಳಾದ ಅವರಿಬ್ಬರೂ ಪರಸ್ಪರರ ಗದೆ ಏಟಿನಿಂದ ಜೊತೆಗೇ ಮಡಿದರು.

ತಸ್ಮಿನ್ ಹತೇ ಶತ್ರುರವಂ ನಿಶಮ್ಯ
ಹರ್ಷೋದ್ಭವಂ ಮಾರುತಿರುಗ್ರವಿಕ್ರಮಃ ।
ವಿಚಿತ್ಯ ಸರ್ವಾನಪಿ ಸೈಂಧವಾದೀನ್
ಯುಧಿಷ್ಠಿರಸ್ಯಾನುಮತೇ ನ್ಯಷೀದತ್ ॥

ಅಭಿಮನ್ಯು ಹತನಾದಾಗ ಶತ್ರುಗಳ ಹರ್ಷಧ್ವನಿಯನ್ನು ಕೇಳಿ ಭಯಂಕರ ಪರಾಕ್ರಮಿಯಾದ ಭೀಮ ಸೈಂಧವಾದಿಗಳೆಲ್ಲರನ್ನೂ ಪರಾಭವಗೊಳಿಸಿ ಧರ್ಮರಾಜನ ಬಳಿಯಲ್ಲಿ ಕುಳಿತ.

ವ್ಯಾಸಸ್ತದಾ ತಾನಮಿತಾತ್ಮವೈಭವೋ
ಯುಧಿಷ್ಠಿರಾದೀನ್ ಗ್ಲಪಿತಾನಬೋಧಯತ್ ।
ವಿಜಿತ್ಯ ಸಂಶಪ್ತಕಪೂಗಮುಗ್ರೋ
ನಿಶಾಗಮೇ ವಾಸವಿರಾಪ ಸಾಚ್ಯುತಃ ॥

ಅಮಿತ ಸ್ವರೂಪಭೂತ ಜ್ಞಾನಾನಂದಾದಿ ಸಂಪತ್ತುಳ್ಳ ವೇದವ್ಯಾಸರು ಆಗ ದುಃಖಿತರಾಗಿದ್ದ ಧರ್ಮರಾಜ ಮುಂತಾದವರನ್ನು ಸಂತೈಸಿದರು. ಉಗ್ರಪ್ರತಾಪಿ ಅರ್ಜುನ ಸಂಶಪ್ತಕರ ಸಮೂಹವನ್ನು ಗೆದ್ದು ರಾತ್ರಿ ಸಮಯ ಬಂದಾಗ ಕೃಷ್ಣನೊಂದಿಗೆ ಹಿಂತಿರುಗಿ ಬಂದ.

ನಿಶಮ್ಯ ಪುತ್ರಸ್ಯ ವಧಂ ಭೃಶಾರ್ತಃ ಪ್ರತಿಶ್ರವಂ
ಸೋಽಥ ಚಕಾರ ವೀರಃ ।
ಜಯದ್ರಥಸ್ಯೈವ ವಧೇ ನಿಶಾಯಾಂ
ಸ್ವಪ್ನೇಽನಯತ್ ತಂ ಗಿರಿಶಾಂತಿಕಂ ಹರಿಃ ॥

ಮಗನ ಹತ್ಯೆಯನ್ನು ಕೇಳಿ ಬಹಳ ದುಃಖಿತನಾದ ವೀರ ಅರ್ಜುನ ಜಯದ್ರಥನ ಸಂಹಾರದ ಪ್ರತಿಜ್ಞೆ ಮಾಡಿದ. ರಾತ್ರಿಯಲ್ಲಿ ಸ್ವಪ್ನದಲ್ಲಿ ಶ್ರೀಕೃಷ್ಣ ಅರ್ಜುನನನ್ನು ರುದ್ರನ ಬಳಿಗೆ ಒಯ್ದನು.

★ ★ ★ ★ ★

ಮೂವತ್ತೆರಡನೆಯ ಅಧ್ಯಾಯ

ಯುಧಿಷ್ಠಿರನನ್ನು ಹಿಡಿಯದಿದ್ದುಕ್ಕಾಗಿ ದುರ್ಯೋಧನನಿಂದ ದ್ರೋಣರ ನಿಂದನೆ. ಪಾಂಡವರ ಯಾರಾದರೂ ಒಬ್ಬ ಮಹಾರಥರನ್ನು ಕೊಲ್ಲುವುದಾಗಿ ದ್ರೋಣರ ಪ್ರತಿಜ್ಞೆ. ಸಂಕ್ಷೇಪವಾಗಿ ಅಭಿಮನ್ಯುವಿನ ವಧೆಯ ಕಥನ.

ಸಂಜಯಃ

ಪೂರ್ವಮಸ್ಮಾಸು ಭಗ್ನೇಷು ಫಲ್ಗುನೇನಾಮಿತೌಜಸಾ ।
ದ್ರೋಣೇ ಚ ಮೋಘಸಂಕಲ್ಪೇ ರಕ್ಷಿತೇ ಚ ಯುಧಿಷ್ಠಿರೇ ॥ ೧ ॥

ಸರ್ವೇ ವಿಶಸ್ತ್ರಕವಚಾಸ್ತಾವಕಾ ಯುಧಿ ನಿರ್ಜಿತಾಃ ।
ರಜಸ್ವಲಾ ಭೃಶೋದ್ವಿಗ್ನಾ ವೀಕ್ಷಮಾಣಾ ದಿಶೋ ದಶ ॥ ೨ ॥

ಅಪಹಾರಂ ಶನೈಃ ಕೃತ್ವಾ ಭಾರದ್ವಾಜಸ್ಯ ಸಮ್ಮತೇ ।
ಲಬ್ಧಲಕ್ಷೈಃ ಪರೈರ್ಭಿನ್ನಾ ಭೃಶಾವಹಿತಾ ರಣೇ ॥ ೩ ॥

ಸಂಜಯ– ಅಮಿತಪರಾಕ್ರಮಿಯಾದ ಅರ್ಜುನನಿಂದ ಮೊದಲು ನಾವು ಭಗ್ನವಾಗುತ್ತಿರಲು ದ್ರೋಣರು ಭಗ್ನಸಂಕಲ್ಪರಾಗಿ ಯುಧಿಷ್ಠಿರನು ರಕ್ಷಿಸಲ್ಪಡುತ್ತಿರಲು ಯುದ್ಧದಲ್ಲಿ ಪರಾಜಿತರಾದ ನಿನ್ನ ಯೋಧರೆಲ್ಲರೂ ಶಸ್ತ್ರ-ಕವಚಗಳನ್ನು ತೆಗೆದು, ಧೂಳಿನಿಂದ ಕೂಡಿ, ಬಹಳ ಉದ್ವಿಗ್ನರಾಗಿ, ಹತ್ತುದಿಕ್ಕುಗಳನ್ನೂ ನೋಡುತ್ತಾ ಭರದ್ವಾಜರ ಸಮ್ಮತಿಯಿಂದ ಸೈನ್ಯಾವಹಾರವನ್ನು ಮಾಡಿ ಲಕ್ಷ್ಯವನ್ನು ತಪ್ಪದ ಶತ್ರುಗಳಿಂದ ಬಹಳವಾಗಿ ಪೀಡಿಸಲ್ಪಟ್ಟು, ಯುದ್ಧದಲ್ಲಿ ಅಪಹಾಸ್ಯಕ್ಕೆ ಈಡಾದರು.

ಶ್ಲಾಘಮಾನೇಷು ಭೂತೇಷು ಫಲ್ಗುನಸ್ಯಾಮಿತಾನ್ ಗುಣಾನ್ ।
ಕೇಶವಸ್ಯ ತು ಸೌಹಾರ್ದೇ ಕೀರ್ತ್ಯಮಾನೇऽರ್ಜುನಂ ಪ್ರತಿ ।
ಅಭಿಶಸ್ತಾ ಇವಾಭಾಂತಿ ಧ್ಯಾನಮೂಕತ್ವಮಾಗತಾಃ ॥ ೪ ॥

ಎಲ್ಲ ಪ್ರಾಣಿಗಳೂ ಅರ್ಜುನನ ಅಮಿತಗುಣಗಳನ್ನು ಹೊಗಳುತ್ತಿರಲು, ಅರ್ಜುನನ ಮೇಲೆ ಕೃಷ್ಣನಿಗಿರುವ ಪ್ರೀತಿಯನ್ನೂ ಹೇಳುತ್ತಿರಲು ಮೃತರಾದಂತೆ ನಿನ್ನ ಯೋಧರು ಧ್ಯಾನ ಮೌನವನ್ನು ವಹಿಸಿದರು.

ತತೋ ಪ್ರಭಾತಸಮಯೇ ದ್ರೋಣಂ ದುರ್ಯೋಧನೋಽಬ್ರವೀತ್ ॥

ಅನಂತರ ಪ್ರಭಾತ ಸಮಯದಲ್ಲಿ ದುರ್ಯೋಧನನು ದ್ರೋಣರನ್ನು ಕುರಿತು ಮಾತನಾಡಿದನು.

ಪ್ರಣಯಾದಭಿಮಾನಾಚ್ಚ ದ್ವಿಷದ್ವೃದ್ಧ್ಯಾ ಚ ದುರ್ಮನಾಃ ।
ಶೃಣ್ವತಾಂ ಸರ್ವಸೈನ್ಯಾನಾಂ ಸಂರಬ್ಧೋ ದ್ರೋಣಮಬ್ರವೀತ್ ॥ ೬ ॥

ಶತ್ರುಗಳ ಅಭಿವೃದ್ಧಿಯಿಂದ ವ್ಯಥೆಗೊಂಡ ಅವನು ದ್ರೋಣರ ಮೇಲಿನ ಸ್ನೇಹ, ಗೌರವಗಳಿಂದ, ಕೋಪದಿಂದ ದ್ರೋಣರನ್ನು ಕುರಿತು ಹೇಳಿದನು.

ನೂನಂ ವಯಂ ವಧ್ಯಪಕ್ಷೇ ಭವತೋ ಬ್ರಹ್ಮವಿತ್ತಮ ।
ತಥಾ ಹಿ ನಾಗ್ರಹೀಃ ಪ್ರಾಪ್ತಂ ಸಮೀಪೇಽದ್ಯ ಯುಧಿಷ್ಠಿರಮ್ ॥ ೭ ॥

ಬ್ರಹ್ಮಜ್ಞಾನಿಶ್ರೇಷ್ಠರೇ, ನಾವು ಖಂಡಿತವಾಗಿ ನಿಮ್ಮ ಶತ್ರುಪಕ್ಷದಲ್ಲಿದ್ದೇವೆ. ಏಕೆಂದರೆ ನೀವು ಯುಧಿಷ್ಠಿರನು ಸಮೀಪಕ್ಕೆ ಬಂದರೂ ಅವನನ್ನು ಹಿಡಿಯಲಿಲ್ಲ.

ಇಚ್ಛತೋ ನಹಿ ಮುಚ್ಯೇತ ಚಕ್ಷುರ್ವಿಷಯಗೋ ರಿಪುಃ ।
ಜಿಘೃಕ್ಷತೋ ರಕ್ಷ್ಯಮಾಣಃ ಸಸುರೈರಪಿ ಪಾಂಡವೈಃ ॥ ೮ ॥

ನೀವು ಬಯಸಿದರೆ ನಿಮ್ಮ ದೃಷ್ಟಿಗೆ ಗೋಚರನಾದ ಶತ್ರುವು ದೇವತೆಗಳಿಂದ ಸಹಿತರಾದ ಪಾಂಡವರಿಂದ ರಕ್ಷಿಸಲ್ಪಟ್ಟರೂ ಅವನನ್ನು ಹಿಡಿಯಲು ಇಚ್ಛಿಸುವ ನಿಮ್ಮಿಂದ ತಪ್ಪಿಸಿಕೊಳ್ಳಲಾರ.

ವರಂ ದತ್ತ್ವಾ ಮಮ ಪ್ರೀತಃ ಪಶ್ಚಾದ್ ವ್ಯಕೃತವಾನಸಿ ।
ಆಶಾಭಂಗಂ ನ ಕುರ್ವಂತಿ ಭಕ್ತಸ್ಯಾರ್ಯಾಃ ಕಥಂಚನ ॥

ನೀವು ಪ್ರೀತಿಯಿಂದ ವರವನ್ನು ಕೊಟ್ಟು ಅನಂತರ ಅದನ್ನು ವ್ಯರ್ಥಗೊಳಿಸಿದ್ದೀರಿ. ಆರ್ಯರಾದವರು ಶರಣಾಗತರಾದವರ ಆಶಾಭಂಗವನ್ನು ಎಂದೂ ಮಾಡುವುದಿಲ್ಲ (ಎಂದು ಹೇಳಿದನು).

ಸಂಜಯಃ

ತತೋಽಪ್ರೀತಸ್ತಥೋಕ್ತಸ್ತು ಭಾರದ್ವಾಜೋಽಬ್ರವೀದ್ ನೃಪಮ್ ।
ನಾರ್ಹಸೇ ಮಾಽನ್ಯಥಾ ಜ್ಞಾತುಂ ಘಟಮಾನಂ ತವ ಪ್ರಿಯೇ ॥ ೧೦ ॥

ಸಂಜಯ– ಅವನ ಮಾತುಗಳಿಂದ ಅಸಮಾಧಾನಗೊಂಡ ದ್ರೋಣರು ಅವನನ್ನು ಕುರಿತು ಹೇಳಿದರು- ನಿನ್ನ ಹಿತಕ್ಕಾಗಿ ಶ್ರಮಪಡುತ್ತಿರುವ ನನ್ನನ್ನು ನೀನು ಅನ್ಯಥಾ ಭಾವಿಸಬಾರದು.

ಸಸುರಾಸುರಗಂಧರ್ವಾಃ ಸಯಕ್ಷೋರಗರಾಕ್ಷಸಾಃ ।
ನಾಲಂ ಲೋಕಾ ರಣೇ ಜೇತುಂ ಪಾಲ್ಯಮಾನಂ ಕಿರೀಟಿನಾ ॥ ೧೧ ॥

ಸುರಾಸುರ-ಗಂಧರ್ವರೆಲ್ಲರಿಂದಲೂ, ಯಕ್ಷ-ರಾಕ್ಷಸ ವರ್ಗಗಳಿಂದಲೂ ಕೂಡಿದ ಲೋಕಗಳು ಅರ್ಜುನನಿಂದ ರಕ್ಷಿಸಲ್ಪಡುವವನನ್ನು ಯುದ್ಧದಲ್ಲಿ ಗೆಲ್ಲಲು ಶಕ್ತವಾಗುವುದಿಲ್ಲ.

ವಿಶ್ವಸ್ಯಗ್ ಯತ್ರ ಗೋವಿಂದಃ ಪೃತನಾಯಾಂ ತಥಾಽರ್ಜುನಃ ।
ತತ್ರ ಕಸ್ತದ್ಬಲಂ ಕ್ರಾಮೇದ್ ಅನ್ಯತ್ರ ತ್ರ್ಯಂಬಕಾತ್ ಪ್ರಭೋಃ ॥ ೧೨ ॥

ಯಾವ ಸೈನ್ಯದಲ್ಲಿ ವಿಶ್ವಕರ್ತನಾದ ಗೋವಿಂದನೂ ಮತ್ತು ಅರ್ಜುನನೂ ಇರುತ್ತಾರೆಯೋ ಅದನ್ನು ಪ್ರಭುವಾದ ಈಶ್ವರನೊಬ್ಬನನ್ನು ಬಿಟ್ಟು ಬೇರೆ ಯಾವನು ಸೋಲಿಸಬಹುದು?

ಸತ್ಯಂ ತು ತೇ ಬ್ರವೀಮ್ಯದ್ಯ ನ ತೇ ಜಾತ್ವನ್ಯಥಾ ಭವೇತ್ ।
ಅದ್ಯೈಷಾಂ ಪ್ರವರಂ ವೀರಂ ಪಾತಯಿಷ್ಯೇ ಮಹಾರಥಮ್ ॥ ೧೩ ॥

ನಿನಗೆ ಈ ದಿನ ಸತ್ಯವನ್ನು ಹೇಳುತ್ತಿದ್ದೇನೆ. ಅದು ಎಂದೂ ಬೇರೆ ರೀತಿಯಾಗುವುದಿಲ್ಲ. ನಾನು ಈ ದಿನ ಪಾಂಡವರಲ್ಲಿ ಶ್ರೇಷ್ಠನಾದ, ವೀರನಾದ ಮಹಾರಥನೊಬ್ಬನನ್ನು ಉರುಳಿಸುವೆನು.

ತಂ ಚ ವ್ಯೂಹಂ ವಿಧಾಸ್ಯಾಮಿ ಅಭೇದ್ಯಂ ತ್ರಿದಶೈರಪಿ ।
ಯೋಗೇನ ಕೇನಚಿತ್ ರಾಜನ್ ಸೋಽರ್ಜುನಸ್ತ್ವಪನೀಯತಾಮ್ ॥

ನಾನು ದೇವತೆಗಳಿಂದಲೂ ಅಭೇದ್ಯವಾದ ವ್ಯೂಹವನ್ನು ರಚಿಸುವೆನು. ಎಲೈ ರಾಜನೇ, ಯಾವುದಾದರೂ ಉಪಾಯದಿಂದ ಆ ಅರ್ಜುನನನ್ನು ದೂರಕ್ಕೆ ಕರೆದುಕೊಂಡು ಹೋಗುವವನಾಗು.

ಅಜಿತಂ ನ ಚ ನಾಸಹ್ಯಂ ತಸ್ಯ ಯುದ್ಧೇಽಸ್ತಿ ಕಿಂಚನ ।
ತೇನ ಹ್ಯವಾಪ್ತಂ ಸಕಲಮಸ್ತ್ರಗ್ರಾಮಂ ಸಮಂತತಃ ॥ ೧೫ ॥

ಅವನಿಂದ ಪರಾಜಿತವಾಗದುದು ಅಥವಾ ಯುದ್ಧದಲ್ಲಿ ಅವನಿಗೆ ಸಾಧ್ಯವಾಗದುದು ಯಾವುದೂ ಇಲ್ಲ. ಅವನು ಎಲ್ಲ ಅಸ್ತ್ರಜ್ಞಾನವನ್ನೂ ಸಂಪೂರ್ಣವಾಗಿ ಪಡೆದಿದ್ದಾನೆ (ಎಂದು ಹೇಳಿದರು).

ದ್ರೋಣೇನ ವ್ಯಾಹೃತೇ ತ್ವೇವಂ ಸಂಶಪ್ತಕಗಣಾಃ ಪುನಃ ।
ಆಹ್ವಯನ್ನರ್ಜುನಂ ಸಂಖೇ ದಕ್ಷಿಣಾಮಭಿತೋ ದಿಶಮ್ ॥ ೧೬ ॥

ದ್ರೋಣರು ಹೀಗೆ ಹೇಳುತ್ತಿರಲು ಸಂಶಪ್ತಕ ಗಣಗಳು ಪುನಃ ದಕ್ಷಿಣದಿಕ್ಕಿನಲ್ಲಿ ಯುದ್ಧಕ್ಕಾಗಿ ಅರ್ಜುನನನ್ನು ಆಹ್ವಾನಿಸಿದವು.

ತತ್ರಾರ್ಜುನಸ್ಯಾಥ ಪರೈಃ ಸಾರ್ಧಂ ಸಮಭವದ್ ರಣಃ ।
ತಾದೃಶೋ ಯಾದೃಶೋ ನಾನ್ಯಃ ಶ್ರುತೋ ದೃಷ್ಟೋಽಪಿ ವಾ ಪುನಃ ॥

ಅಲ್ಲಿ ಅರ್ಜುನನಿಗೂ ಮತ್ತು ಅವರಿಗೂ ಹಿಂದೆ ಎಂದೂ ನೋಡದಿದ್ದಂತಹ ಅಥವಾ ಕೇಳದಿದ್ದಂತಹ ಯುದ್ಧವು ನಡೆಯಿತು.

ತತ್ರ ದ್ರೋಣೇನ ವಿಹಿತೋ ವ್ಯೂಹೋ ರಾಜನ್ ವ್ಯರೋಚತ ।
ಚರನ್ ಮಧ್ಯಂದಿನೇ ಸೂರ್ಯೋ ನಿರ್ದಹನ್ನಿವ ದೃಗ್ವಿಶಃ ॥ ೧೮ ॥

ಇತ್ತ ಕಡೆ ಎಲೈ ರಾಜನೇ, ದ್ರೋಣರಿಂದ ವಿಹಿತವಾದ ವ್ಯೂಹವು ಮಧ್ಯಂದಿನ ಗತನಾದ ಸೂರ್ಯನು ನೋಡುವವರ ಕಣ್ಣನ್ನು ದಹಿಸುವಂತೆ ಶೋಭಿಸಿತು.

ತಂ ಚಾಭಿಮನ್ಯುರ್ವಚನಾತ್ ಪಿತುರ್ಜ್ಯೇಷ್ಠಸ್ಯ ಧರ್ಮವಿತ್ ।
ಬಿಭೇದ ದುರ್ಭಿದಂ ಸಂಖೇ ಚಕ್ರವ್ಯೂಹಮಭೀತವತ್ ॥ ೧೯ ॥

ಧರ್ಮಜ್ಞನಾದ ಅಭಿಮನ್ಯುವು ತನ್ನ ದೊಡ್ಡಪ್ಪನ ಆದೇಶದಿಂದ ದುರ್ಭೇದ್ಯವಾದ ಆ ಚಕ್ರವ್ಯೂಹವನ್ನು ನಿರ್ಭಯವಾಗಿ ರಣರಂಗದಲ್ಲಿ ಭೇದಿಸಿದನು.

ಸ ಕೃತ್ವಾ ದುಷ್ಕರಂ ಕರ್ಮ ಹತ್ವಾ ವೀರಾನ್ ಸಹಸ್ರಶಃ ।
ರಾಜಪುತ್ರಶತಂ ಹತ್ವಾ ಕೌಸಲ್ಯಂ ಚ ಬೃಹದ್ಬಲಮ್ ॥ ೨೦ ॥

ಮಹಾರಥಂ ಶಲ್ಯಪುತ್ರಂ ಲಕ್ಷಣಂ ಚ ತವ ಪ್ರಿಯಮ್ ।
ಷಡ್ಭಿರ್ವೀರೈಃ ಸುಸಂಯುಕ್ತೋ ದೌಃಶಾಸನಿವಶಂ ಗತಃ ॥ ೨೧ ॥

ಅವನು ಯುದ್ಧದಲ್ಲಿ ದುಷ್ಕರವಾದ ಕರ್ಮವನ್ನು ಮಾಡಿ ವೀರರನ್ನು ಸಹಸ್ರಸಂಖ್ಯೆಯಲ್ಲಿ ಕೊಂದು, ನೂರು ರಾಜಪುತ್ರರನ್ನು ಕೊಂದು ಕೋಸಲಾಧಿಪತಿಯಾದ ಬೃಹದ್ಬಲನನ್ನೂ, ಮಹಾರಥನಾದ ಶಲ್ಯಪುತ್ರನನ್ನೂ ಮತ್ತು ನಿನಗೆ ಪ್ರಿಯನಾದ ಲಕ್ಷಣನನ್ನೂ ಕೊಂದು, ಆರು ವೀರರಿಂದ ಸುತ್ತುವರಿಯಲ್ಪಟ್ಟು ದುಶ್ಶಾಸನನ ಪುತ್ರನ ವಶನಾದನು.

ನಿಹತಃ ಪುರುಷವ್ಯಾಘ್ರಃ ಸುತೋ ಗಾಂಡೀವಧನ್ವನಃ ।
ಸೌಭದ್ರಃ ಪೃಥಿವೀಪಾಲ ಜಹೌ ಪ್ರಾಣಾನ್ ಪರಂತಪ ॥ ೨೨ ॥

ಎಲೌ ಪೃಥಿವೀಪಾಲನೇ, ಪರಂತಪನೇ, ಗಾಂಡೀವ,ಧನುರ್ಧಾರಿಯಾದ, ಅರ್ಜುನನ ಪುತ್ರನಾದ, ಪುರುಷವ್ಯಾಘ್ರನಾದ ಅಭಿಮನ್ಯುವು ಅವನಿಂದ ಹೊಡೆಯಲ್ಪಟ್ಟು ಪ್ರಾಣಗಳನ್ನು ತ್ಯಜಿಸಿದನು.

ವಯಂ ಪರಮಸಂಹೃಷ್ಟಾಃ ಪಾಂಡವಾಃ ಶೋಕಕರ್ಶಿತಾಃ ।
ಸೌಭದ್ರೇ ನಿಹತೇ ರಾಜನ್ನವಹಾರಮಕುರ್ವತ ॥ ೨೩ ॥

ಎಲ್ಲೈ ರಾಜನೇ, ಅಭಿಮನ್ಯುವು ಹತನಾಗುತ್ತಿರಲು ನಾವು ಬಹಳ ಸಂತೋಷಗೊಂಡೆವು. ಪಾಂಡವರು ಶೋಕಕರ್ಶಿತರಾಗಿ ಸೈನ್ಯಾವಹಾರವನ್ನು ಮಾಡಿದರು.

ಧೃತರಾಷ್ಟ್ರಃ

ಪುತ್ರಂ ಪುರುಷಸಿಂಹಸ್ಯ ಸಂಜಯಾಪ್ರಾಪ್ತಯೌವನಮ್ ।
ರಣೇ ನಿಹತಂ ಶ್ರುತ್ವಾ ಭೃಶಂ ವೈ ದೀರ್ಯತೇ ಮನಃ ॥ ೨೪ ॥

ಧೃತರಾಷ್ಟ್ರ– ಪುರುಷಸಿಂಹನಾದ ಅರ್ಜುನನ ಪುತ್ರನಾದ, ಇನ್ನೂ ಯೌವನವನ್ನು ಹೊಂದದ ಅಭಿಮನ್ಯುವು ರಣರಂಗದಲ್ಲಿ ಹತನಾದುದನ್ನು ಕೇಳಿ ಎಲೈ ಸಂಜಯನೇ, ನನ್ನ ಹೃದಯವು ಬಿರಿದು ಹೋಗುತ್ತಿದೆ.

ದಾರುಣಃ ಕ್ಷತ್ರಧರ್ಮೋಽಯಂ ವಿಹಿತೋ ಧರ್ಮಕರ್ತೃಭಿಃ ।
ಯತ್ರ ರಾಜ್ಯೇಪ್ಸವಃ ಶೂರಾ ಬಾಲೇ ಶಸ್ತ್ರಮಪಾತಯನ್ ॥ ೨೫ ॥

ಧರ್ಮಕರ್ತೃಗಳಾದವರು ಕ್ಷತ್ರಿಯರಿಗೆ ಈ ಭಯಂಕರವಾದ ಧರ್ಮವನ್ನು ವಿಧಿಸಿದ್ದಾರೆ. ಆದ್ದರಿಂದ ರಾಜ್ಯವನ್ನು ಬಯಸುವ ಶೂರರು ಬಾಲಕನಲ್ಲಿ ಶಸ್ತ್ರಪಾತವನ್ನು ಮಾಡಿದರು.

ಬಾಲಮತ್ಯಂತಸುಖಿನಂ ವಿಚರಂತಮಭೀತವತ್ ।
ಕೃತಾಸ್ತ್ರಾ ಬಹವೋ ಜಘ್ನುಃ ಬ್ರೂಹಿ ಗಾವಲ್ಗಣೇ ಕಥಮ್ ॥ ೨೬ ॥

ಎಲೈ ಗಾವಲ್ಗಣಿಯೇ, ಬಾಲನೂ, ಅತ್ಯಂತ ಸುಖಿಯೂ, ನಿರ್ಭಯವಾಗಿ ಸಂಚರಿಸುವವನೂ ಆದ ಅವನನ್ನು ಅಸ್ತ್ರಪ್ರಾರಂಗತರಾದ ಅನೇಕರು ಹೇಗೆ ಕೊಂದರೆಂದು ಹೇಳು.

ಬಿಭಿತ್ಸತಾ ರಥಾನೀಕಂ ಸೌಭದ್ರೇಣಾಮಿತೌಜಸಾ ।
ವಿಕ್ರೀಡಿತಂ ಯಥಾ ಸಂಖೇ ತನ್ಮಮಾಚಕ್ಷ್ವ ಸಂಜಯ ॥ ೨೭ ॥

ಅಮಿತಸಾಮರ್ಥ್ಯವುಳ್ಳ ಅಭಿಮನ್ಯುವು ರಥಸಮೂಹವನ್ನು ಭಗ್ನಗೊಳಿಸಲು ಬಯಸಿ, ರಣರಂಗದಲ್ಲಿ ಹೇಗೆ ಆಟವನ್ನು ಆಡಿದನು ಎಂಬುದನ್ನು ಸಂಜಯನೇ ನನಗೆ ಹೇಳು.

ಸಂಜಯಃ

ಯನ್ಮಾಂ ಪೃಚ್ಛಸಿ ರಾಜೇಂದ್ರ ಸೌಭದ್ರಸ್ಯ ನಿಪಾತನಮ್ ।
ತತ್ತೇ ಕಾರ್ತ್ಸ್ನ್ಯೇನ ವಕ್ಷ್ಯಾಮಿ ಶೃಣು ರಾಜನ್ ಸಮಾಹಿತಃ ॥ ೨೮ ॥

ಸಂಜಯ– ರಾಜೇಂದ್ರನೇ, ಅಭಿಮನ್ಯುವಿನ ಯಾವ ನಿಪಾತವನ್ನು ನೀನು ಕೇಳುತ್ತಿದ್ದೀಯೋ ಅದನ್ನು ಸಮಗ್ರವಾಗಿ ಹೇಳುವೆನು. ರಾಜನೇ, ಸಮಾಧಾನದಿಂದ ಅದನ್ನು ಕೇಳು.

ವಿಕ್ರೀಡಿತಂ ಕುಮಾರೇಣ ಯಥಾನೀಕಂ ಬಿಭತ್ಸತಾ ।
ಆರುಗ್ಣಶ್ಚ ಭಯಾದ್ ವೀರಾಃ ದುಃಖಾವಾಸಾನ್ ಸಹಿಷ್ಣವಃ ॥೨೯॥

ಶತ್ರುಸೈನ್ಯವನ್ನು ಭೇದಿಸಲು ಇಚ್ಛಿಸಿದ ಕುಮಾರನಿಂದ ಹೇಗೆ ಆಟವಾಡಲ್ಪಟ್ಟಿತು? ದುಃಖವನ್ನು ಸಹಿಸುವ ವೀರರು ಹೇಗೆ ಭಯದಿಂದ ನಾಶವನ್ನು ಹೊಂದಿದರು?

ದಾವಾಗ್ನ್ಯಭಿಪರೀತಾನಾಂ ಭೂರಿ ಗುಲ್ಮತೃಣದ್ರುಮೇ ।
ವನೌಕಸಾಮಿವಾರಣ್ಯೇ ತ್ವದೀಯಾನಾಮಭೂತ್ ಕ್ಷಯಃ ॥ ೩೦ ॥

ದಾವಾಗ್ನಿಯಿಂದ ಸುತ್ತುವರಿಯಲ್ಪಟ್ಟ ಬಹಳ ಲತಾ-ವೃಕ್ಷಗಳು ಇರುವ ಅರಣ್ಯದಲ್ಲಿ ವಾಸಿಸುವವರಿಗೆ ಉಂಟಾದಂತೆ ನಿನ್ನವರಿಗೆ ಹೇಗೆ ವಿನಾಶವುಂಟಾಯಿತು (ಎಂಬುದನ್ನು ಹೇಳುತ್ತೇನೆ, ಸಮಾಧಾನದಿಂದ ಕೇಳು).

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ದ್ವಾತ್ರಿಂಶೋಽಧ್ಯಾಯಃ ॥
॥ ಅಭಿಮನ್ಯುವಧಪರ್ವಣಿ ಪ್ರಥಮೋಽಧ್ಯಾಯಃ ॥
ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಮೂವತ್ತೆರಡನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ಮೂವತ್ತೊರನೆಯ ಅಧ್ಯಾಯ

ಸಂಜಯನಿಂದ ಪಾಂಡವರ ಮತ್ತು ಅಭಿಮನ್ಯುವಿನ ಪ್ರಶಂಸೆ. ಧೃತರಾಷ್ಟ್ರನಿಂದ ಅಭಿಮನ್ಯುವಿನ ವಧೆಯನ್ನು ವಿಸ್ತಾರವಾಗಿ ಹೇಳುವಂತೆ ಸಂಜಯನಿಗೆ ಪ್ರಶ್ನೆ.

ಜನಮೇಜಯಃ

ಸಮರೇ ತೂಗ್ರಕರ್ಮಾಣಃ ಕರ್ಮಭಿರ್ವ್ಯಂಜಿತಶ್ರಮಾಃ ।
ಸಕೃಷ್ಣಾಃ ಪಾಂಡವಾಃ ಪಂಚ ದೇವೈರಪಿ ದುರಾಸದಾಃ ॥ ೧ ॥

ಸಂಜಯ– ಯುದ್ಧದಲ್ಲಿ ಉಗ್ರಕರ್ಮವನ್ನು ಮಾಡಿ ಅದರಿಂದ ಅಭಿವ್ಯಕ್ತವಾದ ಶ್ರಮವುಳ್ಳ (ಜಿತೇಂದ್ರಿಯರಾದ) ಕೃಷ್ಣಸಹಿತರಾದ ಪಂಚಪಾಂಡವರು ದೇವತೆಗಳಿಗೂ ಸೋಲುವವರಲ್ಲ.

ಶಶ್ವತ್ ಕರ್ಮಾನ್ವಯೈರ್ಬುದ್ಧ್ಯಾ ಪ್ರಕೃತ್ಯಾ ಯಶಸಾ ಶ್ರಿಯಾ ।
ನ ಭೂತೋ ಭವಿತಾ ವಾಽಪಿ ಕೃಷ್ಣಸ್ಯ ಸದೃಶಃ ಪುಮಾನ್ ॥ ೨ ॥

ಸತತವಾಗಿ ಅವನು ಮಾಡುವ ಕರ್ಮಗಳು, ಅವನ ಬುದ್ಧಿ, ಸ್ವಭಾವ, ಕೀರ್ತಿ ಮತ್ತು ಕಾಂತಿಗಳಿಂದ ಕೃಷ್ಣನಿಗೆ ಸದೃಶನಾದ ಪುರುಷನು ಹಿಂದೆ ಇರಲಿಲ್ಲ ಮತ್ತು ಮುಂದೆ ಇರುವುದಿಲ್ಲ.

ಸತ್ಯಧರ್ಮತಪೋದಾನೈರ್ವಿಪ್ರಪೂಜಾದಿಭಿರ್ಗುಣೈಃ ।
ಸದೇಹಸ್ತ್ರಿದಿವಂ ಪ್ರಾಪ್ತೋ ರಾಜಾ ಕಿಲ ಯುಧಿಷ್ಠಿರಃ ॥ ೩ ॥

ಸತ್ಯ-ಧರ್ಮ-ತಪೋ-ದಾನಗಳಿಂದಲೂ, ಬ್ರಾಹ್ಮಣರ ಪೂಜೆ ಮೊದಲಾದ ಗುಣಗಳಿಂದಲೂ ರಾಜನಾದ ಯುಧಿಷ್ಠಿರನು ಸಶರೀರನಾಗಿ ಸ್ವರ್ಗಕ್ಕೆ ಹೋದನಷ್ಟೆ?

ಯುಗಾಂತೇ ಚಾಂತಕೋ ರಾಜನ್ ಜಾಮದಗ್ನ್ಯಶ್ಚ ಕೀರ್ತಿಮಾನ್ ।
ರಣಸ್ಥೋ ಭೀಮಸೇನಶ್ಚ ಕಥ್ಯಂತೇ ಸದೃಶಾಸ್ತ್ರಯಃ ॥ ೪ ॥

ಎಲೈ ರಾಜನೇ, ಯುಗಾಂತಕಾಲದ ಯಮ, ಕೀರ್ತಿಶಾಲಿಯಾದ ಪರಶುರಾಮ ಮತ್ತು ರಣರಂಗದಲ್ಲಿ ಇರುವ ಭೀಮಸೇನ, ಈ ಮೂರು ಜನರು ಸದೃಶರೆಂದು (ಸಮಾನರೆಂದು) ಹೇಳಲ್ಪಡುತ್ತಾರೆ.

ಪ್ರತಿಜ್ಞಾಕರ್ಮದಕ್ಷಸ್ಯ ರಣೇ ಗಾಂಡೀವಧನ್ವನಃ ।
ಉಪಮಾಂ ನಾಧಿಗಚ್ಛಾಮಿ ಪಾರ್ಥಸ್ಯ ಸದೃಶೀಂ ಕ್ಷಿತೌ ॥ ೫ ॥

ಗಾಂಡೀವ ಧನುರ್ಧಾರಿಯಾದ ಅರ್ಜುನನಿಗೆ ಅವನ ಪ್ರತಿಜ್ಞೆಯನ್ನು ಪೂರೈಸುವ ದಕ್ಷತೆಯ ವಿಷಯದಲ್ಲಿ ಭೂಮಿಯಲ್ಲಿ ಸದೃಶವಾದ ಯಾವ ಉಪಮಾನವನ್ನೂ ನಾನು ಕಾಣುವುದಿಲ್ಲ.

ಗುರುವಾತ್ಸಲ್ಯಮತ್ಯಂತಂ ನೈಭೃತ್ಯಂ ವಿನಯೋ ದಮಃ ।
ನಕುಲೇ ಪ್ರಾತಿರೂಪ್ಯಂ ಚ ಶೌರ್ಯಂ ಚ ನಿಯತಾನಿ ಷಟ್ ॥ ೬ ॥

ನಕುಲನಲ್ಲಿ ಗುರುಭಕ್ತಿ, ಅಪ್ರಮಾದ, ವಿನಯ, ಇಂದ್ರಿಯನಿಗ್ರಹ, ಸೌಂದರ್ಯ ಮತ್ತು ಶೌರ್ಯ- ಈ ಆರು ಗುಣಗಳು ನಿಯತವಾಗಿವೆ.

ಶ್ರುತಗಾಂಭೀರ್ಯಮಾಧುರ್ಯಸತ್ತ್ವರೂಪಪರಾಕ್ರಮೈಃ ।
ಸದೃಶೋ ದೇವಯೋರ್ವೀರಃ ಸಹದೇವಃ ಕಿಲಾಶ್ವಿನೋಃ ॥ ೭ ॥

ವಿದ್ಯೆ, ಗಾಂಭೀರ್ಯ, ಮಾಧುರ್ಯ, ಧೈರ್ಯ, ರೂಪ, ಪರಾಕ್ರಮಗಳು - ಇವುಗಳಿಂದ ವೀರನಾದ ಸಹದೇವನು ಅಶ್ವಿನೀದೇವತೆಗಳಿಗೆ ಸದೃಶನಾಗಿದ್ದಾನೆ.

ಯೇ ಚ ಕೃಷ್ಣೇ ಗುಣಾಃ ಸ್ಫೀತಾಃ ಪಾಂಡವೇಯೇಷು ಯೇ ಗುಣಾಃ ।
ಅಭಿಮನ್ಯೌ ಕಿಲೈಕಸ್ಥಾ ದೃಶ್ಯಂತೇ ತೇ ಗುಣಾಃ ಶುಭಾಃ ॥ ೮ ॥

ಕೃಷ್ಣನಲ್ಲಿ ಪರಿಶುದ್ಧವಾದ ಯಾವ ಗುಣಗಳಿವೆಯೋ ಮತ್ತು ಪಾಂಡವರಲ್ಲಿ ಯಾವ ಗುಣಗಳಿವೆಯೋ ಆ ಎಲ್ಲ ಶುಭಗುಣಗಳೂ ಅಭಿಮನ್ಯುವಿನಲ್ಲಿ ಒಬ್ಬನಲ್ಲಿಯೇ ನೆಲೆಸಿರುವುದು ಕಂಡುಬರುತ್ತವೆ.

ಯುಧಿಷ್ಠಿರಸ್ಯ ಧೈರ್ಯೇಣ ಕೃಷ್ಣಸ್ಯ ಚರಿತೇನ ಚ ।
ಕರ್ಮಣಾ ಭೀಮಸೇನಸ್ಯ ಸದೃಶಂ ಭೀಮಕರ್ಮಣಃ ॥ ೯ ॥

ಧೈರ್ಯದಿಂದ ಯುಧಿಷ್ಠಿರನಿಗೂ, ತನ್ನ ಕಾರ್ಯದಿಂದ ಕೃಷ್ಣನಿಗೂ, ತನ್ನ ಕರ್ಮಗಳಿಂದ ಭಯಂಕರ ಕರ್ಮವನ್ನು ಮಾಡುವ ಭೀಮಸೇನನಿಗೂ ಅವನು ಸದೃಶನಾದವನು.

ಧನಂಜಯಸ್ಯ ರೂಪೇಣ ವಿಕ್ರಮೇಣ ಶ್ರುತೇನ ಚ ।
ವಿನಯೇ ಸಹದೇವಸ್ಯ ಸದೃಶಂ ನಕುಲಸ್ಯ ಚ ॥ ೧೦ ॥

ರೂಪ, ಪರಾಕ್ರಮ ಮತ್ತು ವಿದ್ಯೆಗಳಲ್ಲಿ ಧನಂಜಯನಿಗೂ, ವಿನಯದಲ್ಲಿ ನಕುಲ-ಸಹದೇವರಿಗೂ ಸದೃಶನಾದವನು.

ಅಭಿಮನ್ಯುಂ ದ್ವಿಜಶ್ರೇಷ್ಠ ಸೌಭದ್ರಮಪರಾಜಿತಮ್ ।
ಶ್ರೋತುಮಿಚ್ಛಾಮಿ ಕಾರ್ತ್ಸ್ನ್ಯೇನ ಕಥಮಾಯೋಧನೇ ಹತಃ ॥ ೧೧ ॥

ಜನಮೇಜಯ– ಎಲೈ ಬ್ರಾಹ್ಮಣಶ್ರೇಷ್ಠರೇ, ಅಪರಾಜಿತನಾದ, ಸುಭದ್ರಾಪುತ್ರನಾದ ಅಭಿಮನ್ಯುವು ರಣರಂಗದಲ್ಲಿ ಹೇಗೆ ಹತನಾದನೆಂದು ಪೂರ್ಣವಾಗಿ ಕೇಳಲು ಬಯಸುತ್ತೇನೆ.

ವೈಶಂಪಾಯನಃ

ಅಭಿಮನ್ಯುಂ ಹತಂ ಶ್ರುತ್ವಾ ಧೃತರಾಷ್ಟ್ರೋ ಜನೇಶ್ವರಃ ।
ವಿಸ್ತರೇಣ ಮಹಾರಾಜ ಪರ್ಯಪೃಚ್ಛತ್ ಸ ಸಂಜಯಮ್ ॥ ೧೨ ॥

ವೈಶಂಪಾಯನ– ಎಲೈ ಮಹಾರಾಜನೇ, ಅಭಿಮನ್ಯುವು ಹತನಾದುದನ್ನು ಕೇಳಿ ಜನೇಶ್ವರನಾದ ಧೃತರಾಷ್ಟ್ರನು ಸಂಜಯನನ್ನು ವಿಸ್ತಾರವಾಗಿ ಹೇಳುವಂತೆ ಕೇಳಿದನು.

ಧೃತರಾಷ್ಟ್ರ

ಅಭಿಮನ್ಯುಂ ಹತಂ ಸೂತ ಸೌಭದ್ರಮಪರಾಜಿತಮ್ ।
ಶ್ರೋತುಮಿಚ್ಛಾಮಿ ಕಾರ್ತ್ಸ್ನ್ಯೇನ ಕಥಮಾಯೋಧನೈಃ ಹತಃ ॥ ೧೩ ॥

ಧೃತರಾಷ್ಟ್ರ– ಎಲೈ ಸೂತನೇ, ಅಪರಾಜಿತನಾದ ಅಭಿಮನ್ಯುವು ಹತನಾದನೆಂದು ಹೇಳುತ್ತಿದ್ದೀಯೆ. ಅವನು ರಣರಂಗದಲ್ಲಿ ಹೇಗೆ ಹತನಾದನೆಂದು ವಿಸ್ತಾರವಾಗಿ ಕೇಳಲು ಬಯಸುತ್ತೇನೆ (ಎಂದು ಹೇಳಿದನು).

ಸಂಜಯಃ

ಸ್ಥಿರೋ ಭವ ಮಹಾರಾಜ ಶೋಕಂ ಧಾರಯ ದುರ್ಧರಮ್ ।
ಮಹಾಂತಂ ಬಂಧುನಾಶಂ ತೇ ಕಥಯಿಷ್ಯಾಮಿ ತಚ್ಛೃಣು ॥ ೧೪ ॥

ಸಂಜಯ– ಮಹಾರಾಜನೇ, ಸ್ಥಿರವಾಗಿರು. ಸಹಿಸಲು ಅಸಾಧ್ಯವಾದ ಶೋಕವನ್ನು ತಡೆದುಕೊ. ದೊಡ್ಡ ಬಂಧುನಾಶವನ್ನು ಏನು ಹೇಳುವೆನೋ ಅದನ್ನು ಕೇಳು.

ಪುತ್ರಂ ಪುರುಷಸಿಂಹಸ್ಯ ಸಂಜಯಾಪ್ರಾಪ್ತಯೌವನಮ್ ।
ರಣೇ ನಿಪತಿತಂ ಶ್ರುತ್ವಾ ದೃಢಂ ಮೇ ದೂಯತೇ ಮನಃ ॥ ೧೫ ॥

ದಾರುಣಃ ಕ್ಷತ್ರಧರ್ಮೋಽಯಂ ವಿಹಿತೋ ಧರ್ಮಕರ್ತೃಭಿಃ ।
ಯತ್ರ ರಾಜ್ಯೇಪ್ಸವಃ ಶೂರಾ ಬಾಲೇ ಶಸ್ತ್ರಮಪಾತಯನ್ ॥ ೧೬ ॥

ಧರ್ಮಕರ್ತೃಗಳಾದವರು ಕ್ಷತ್ರಿಯರಿಗೆ ಈ ಭಯಂಕರವಾದ ಧರ್ಮವನ್ನು ವಿಧಿಸಿದ್ದಾರೆ. ಆದ್ದರಿಂದ ರಾಜ್ಯವನ್ನು ಬಯಸುವ ಶೂರರು ಬಾಲಕನಲ್ಲಿ ಶಸ್ತ್ರಪಾತವನ್ನು ಮಾಡಿದ್ದಾರೆ.

ಬಾಲಮತ್ಯಂತಸುಖಿನಂ ಪ್ರಹರಂತಮಭೀತವತ್ ।
ಕೃತಾಸ್ತ್ರಾ ಬಹವೋ ಜಘ್ನುರ್ಭೂಹಿ ಗಾವಲ್ಗಣೇ ಕಥಮ್ ॥ ೧೭ ॥

ಎಲೈ ಗಾವಲ್ಗಣಿಯೇ, ಬಾಲನೂ, ಅತ್ಯಂತ ಸುಖಿಯೂ, ನಿರ್ಭಯವಾಗಿ ಸಂಚರಿಸುವವನೂ ಆದ ಅವನನ್ನು ಅಸ್ತ್ರಪಾರಂಗತರಾದ ಅನೇಕರು ಹೇಗೆ ಕೊಂದರೆಂದು ಹೇಳು.

ಬಿಭಿತ್ಸತಾ ತದಾಽನೀಕಂ ಸೌಭದ್ರೇಣಾಮಿತೌಜಸಾ ।
ಚಿಕ್ರೀಡಿತಂ ಯಥಾ ಸಂಖೇ ತನ್ಮಾಚಕ್ಷ್ವ ಸಂಜಯ ॥ ೧೮ ॥

ಅಮಿತಸಾಮರ್ಥ್ಯವುಳ್ಳ ಅಭಿಮನ್ಯುವು ರಥಸಮೂಹವನ್ನು ಭಗ್ನಗೊಳಿಸಲು ಬಯಸಿ, ರಣರಂಗದಲ್ಲಿ ಹೇಗೆ ಆಟವನ್ನು ಆಡಿದನು ಎಂಬುದನ್ನು ಸಂಜಯನೇ, ನನಗೆ ಹೇಳು.

ಸಂಜಯಃ

ಯನ್ಮಾಂ ಪೃಚ್ಛಸಿ ಸಂಗ್ರಾಮೇ ಸೌಭದ್ರಂ ವಿನಿಪಾತಿತಮ್ ।
ತತ್ ತೇಽಹಂ ಸಂಪ್ರವಕ್ಷ್ಯಾಮಿ ಶೃಣು ರಾಜನ್ ಸಮಾಹಿತಃ ।
ವಿಕ್ರೀಡಿತಂ ಕುಮಾರಸ್ಯ ಯಥಾಽನೀಕಂ ಬಿಭಿತ್ಸತಃ ॥ ೧೯ ॥

ಸಂಜಯ– ರಾಜೇಂದ್ರನೇ, ಅಭಿಮನ್ಯುವಿನ ಯಾವ ನಿಪಾತವನ್ನು ನೀನು ನನ್ನನ್ನು ಕೇಳುತ್ತಿದ್ದೀಯೋ ಅದನ್ನು ಸಮಗ್ರವಾಗಿ ಹೇಳುವೆನು. ರಾಜನೇ, ಸಮಾಧಾನದಿಂದ ಅದನ್ನು ಕೇಳು.

ಶತ್ರುಸೈನ್ಯವನ್ನು ಭೇದಿಸಲು ಇಚ್ಛಿಸಿದ ಕುಮಾರನಿಂದ ಹೇಗೆ ಆಟವಾಡಲ್ಪಟ್ಟಿತು? ದುಃಖವನ್ನು ಸಹಿಸುವ ವೀರರು ಹೇಗೆ ಭಯದಿಂದ ನಾಶವನ್ನು ಹೊಂದಿದರು?

ದಾವಾಗ್ನ್ಯಭಿಪರೀತಾನಾಂ ಭೂರಿಗುಲ್ಮತೃಣದ್ರುಮೇ ।
ವನೌಕಸಾಮಿವಾರಣ್ಯೇ ತ್ವದೀಯಾನಾಮಭೂದ್ ಭಯಮ್ ॥ ೨೦ ॥

ದಾವಾಗ್ನಿಯಿಂದ ಸುತ್ತುವರಿಯಲ್ಪಟ್ಟ ಬಹಳ ಲತಾ-ವೃಕ್ಷಗಳು ಇರುವ ಅರಣ್ಯದಲ್ಲಿ ವಾಸಿಸುವವರಿಗೆ ಉಂಟಾದಂತೆ ನಿನ್ನವರಿಗೆ ಹೇಗೆ ವಿನಾಶವುಂಟಾಯಿತು (ಎಂಬುದನ್ನು ಹೇಳುತ್ತೇನೆ, ಸಮಾಧಾನದಿಂದ ಕೇಳು).

॥ ಇತೀ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಂ ದ್ರೋಣಪರ್ವಣಿ ತ್ರಯಸ್ತ್ರಿಂಶೋಽಧ್ಯಾಯಃ ॥
॥ ಅಭಿಮನ್ಯುವಧಪರ್ವಣಿ ದ್ವಿತೀಯೋಽಧ್ಯಾಯಃ ॥
ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಮೂವತ್ಮೂರನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ಮೂವತ್ನಾಲ್ಕನೆಯ ಅಧ್ಯಾಯ

ದ್ರೋಣರಿಂದ ಪದ್ಮವ್ಯೂಹ ರಚನೆ. ಆ ವ್ಯೂಹವನ್ನು ಭೇದಿಸುವಂತೆ ಯುಧಿಷ್ಠಿರನಿಂದ ಅಭಿಮನ್ಯುವಿಗೆ ಪ್ರಚೋದನೆ.

ಸಂಜಯಃ

ಪದ್ಮವ್ಯೂಹೋ ಮಹಾರಾಜ ಆಚಾರ್ಯೇಣ ರಣೇ ಕೃತಃ ।
ತತ್ರ ಪದ್ಮೋಪಮಾಃ ಸರ್ವೇ ರಾಜಾನಃ ಸ್ಮ ನಿವೇಶಿತಾಃ ॥ ೧ ॥

ಸಂಜಯ– ಎಲೈ ಮಹಾರಾಜನೇ, ರಣರಂಗದಲ್ಲಿ ದ್ರೋಣಾಚಾರ್ಯರು ಪದ್ಮವ್ಯೂಹವನ್ನು ರಚಿಸಿದರು. ಅಲ್ಲಿ ದಳಗಳ ಸ್ಥಾನದಲ್ಲಿ ಎಲ್ಲ ರಾಜರೂ ನಿಲ್ಲಿಸಲ್ಪಟ್ಟರು.

ಕೇಸರಾಣಿ ಚ ಪದ್ಮಸ್ಯ ಸುಕುಮಾರಾಣಿ ಭಾರತ ।
ಕುಮಾರಾ ರಾಜಲೋಕಸ್ಯ ನಿಕ್ಷಿಪ್ತಾಃ ಕೇಸರೋಪಮಾಃ ॥ ೨ ॥

ಕರ್ಣಿಕಾಸ್ಥೋ ಮಹಾರಾಜ ತಸ್ಯ ದುರ್ಯೋಧನೋಽಭವತ್ ।
ಕರ್ಣದುಃಶಾಸನಕೃಪೈರ್ವೃತೋ ರಾಜಾ ಮಹಾರಥೈಃ ॥ ೩ ॥

ಎಲೈ ಭಾರತನೇ, ಕೇಸರಸದೃಶರಾದ ರಾಜಕುಮಾರರು ಪದ್ಮದ ಸುಕುಮಾರ ಕೇಸರಸ್ಥಾನಗಳಲ್ಲಿ ನಿಲ್ಲಿಸಲ್ಪಟ್ಟರು. ಮಹಾರಾಜನೇ, ಮಹಾರಥರಾದ ಕರ್ಣ-ದುಶ್ಶಾಸನ-ಕೃಪರಿಂದ ಸಹಿತನಾದ ದುರ್ಯೋಧನನು ಕರ್ಣಿಕಾ ಸ್ಥಾನದಲ್ಲಿದ್ದನು.

ದೇವರಾಜೋಪಮಃ ಶ್ರೀಮಾನ್ ಶ್ವೇತಚ್ಛತ್ರಾಭಿಸಂವೃತಃ।
ಚಾಮರವ್ಯಜನೋತ್ಕ್ಷೇಪೈಃ ಸಮುದ್ಯನ್ನಿವ ಭಾಸ್ಕರಃ ॥ ೪ ॥

ಪ್ರಮುಖೇ ತಸ್ಯ ಶೂರಸ್ಯ ದ್ರೋಣೋಽವಸ್ಥಿತಸಾಯಕಃ।
ಸಿಂಧುರಾಜಸ್ತಥಾऽತಿಷ್ಠದ್ ಗಿರಿರ್ಮೇರುರಿವಾಚಲಃ ॥ ೫ ॥

ದೇವರಾಜನಂತೆ ಕಾಂತಿಯುಕ್ತನಾಗಿ ಶ್ವೇತಚ್ಛತ್ರದಿಂದ ಸಂವೃತನಾಗಿ, ಚಾಮರ-ವ್ಯಜನಗಳ ಬೀಸುವಿಕೆಯಿಂದ ಕೂಡಿದವನಾಗಿ ಜ್ವಲಿಸುವ ಸೂರ್ಯನಂತೆ (ಕರ್ಣಿಕಾ ಸ್ಥಾನದಲ್ಲಿ ಇದ್ದನು). ಆ ಶೂರನ ಮುಂಭಾಗದಲ್ಲಿ ದ್ರೋಣರು ಬಾಣವನ್ನು ಹಿಡಿದು ನಿಂತರು. ಸಿಂಧುರಾಜನು ಅಚಲವಾದ ಮೇರುಪರ್ವತದಂತೆ ನಿಂತನು.

ಸಿಂಧುರಾಜಸ್ಯ ಪಾರ್ಶ್ವಸ್ಥಾ ಅಶ್ವತ್ಥಾಮಪುರೋಗಮಾಃ ।
ಸುತಾಸ್ತವ ಮಹಾರಾಜ ತ್ರಿಂಶತ್ ತ್ರಿದಶವಿಕ್ರಮಾಃ ॥ ೬ ॥

ಎಲೈ ಮಹಾರಾಜನೇ, ಸಿಂಧುರಾಜನ ಪಾರ್ಶ್ವಗಳಲ್ಲಿ ಅಶ್ವತ್ಥಾಮರೇ ಮೊದಲಾದ ದೇವತೆಗಳ ವಿಕ್ರಮವನ್ನು ಹೊಂದಿದ ನಿನ್ನ ಮೂವತ್ತು ಪುತ್ರರು ಇದ್ದರು.

ಶಕುನಿಃ ಕೃತವರ್ಮಾ ಚ ಶಲ್ಯೋ ಭೂರಿಶ್ರವಾಃ ಶಲಃ ।
ಪಾರ್ಶ್ವತಃ ಸಿಂಧುರಾಜಸ್ಯ ವ್ಯರಾಜಂತ ಮಹಾರಥಾಃ ॥ ೭ ॥

ಮಹಾರಥರಾದ ಶಕುನಿ, ಕೃತವರ್ಮ, ಶಲ್ಯ, ಭೂರಿಶ್ರವ, ಶಲ ಇವರು ಸಿಂಧುರಾಜನ ಇನ್ನೊಂದು ಪಾರ್ಶ್ವದಲ್ಲಿದ್ದರು.

ಸಂಘಾತಾ ರಾಜಪುತ್ರಾಣಾಂ ಸರ್ವೇಷಾಮಭವಂಸ್ತದಾ ।
ಕೃತಾಭಿಸಮಯಾಶ್ಚಾಸನ್ ಸುವರ್ಣಕವಚಧ್ವಜಾಃ ॥ ೮ ॥

ಆಗ ಎಲ್ಲ ರಾಜಪುತ್ರರ ಸಮುದಾಯವು ಉಂಟಾಯಿತು. ಅವರು ಸುವರ್ಣ-ಕವಚ-ಧ್ವಜಗಳನ್ನು ಧರಿಸಿ ಪ್ರತಿಜ್ಞೆಗಳನ್ನು ಮಾಡಿ ನಿಂತರು.

ರಕ್ತಾಂಬರಧರಾಃ ಸರ್ವೇ ಸರ್ವೇ ಕನಕಭೂಷಣಾಃ ।
ಸರ್ವೇ ರಕ್ತಪತಾಕಾಶ್ಚ ಸರ್ವೇ ಕನಕಮಾಲಿನಃ ॥ ೯ ॥

ಚಂದನಾಗರುದಿಗ್ಧಾಂಗಾಃ ಸ್ರಗ್ವಿಣಃ ಸೂಕ್ಷ್ಮವಾಸಸಃ ।
ಸಹಿತಾಃ ಪರ್ಯಧಾವಂತ ಕಾರ್ಷ್ಣಿಂ ಪ್ರತಿ ಯುಯುತ್ಸವಃ ॥ ೧೦ ॥

ರಕ್ತವಸ್ತ್ರವನ್ನು ಧರಿಸಿ, ಎಲ್ಲರೂ ಸುವರ್ಣಭೂಷಿತರಾಗಿ, ರಕ್ತಪತಾಕೆಗಳನ್ನು ಹೊಂದಿ, ಕನಕಮಾಲೆಗಳನ್ನು ಧರಿಸಿ, ಚಂದನಾಗರು ಲೇಪಿತವಾದ ಶರೀರವುಳ್ಳವರಾಗಿ, ಹೂಮಾಲೆಗಳನ್ನು ಧರಿಸಿ, ತೆಳುವಾದ ವಸ್ತ್ರಗಳನ್ನು ಧರಿಸಿ, ಯುದ್ಧಮಾಡಲು ಬಯಸಿ ಎಲ್ಲರೂ ಒಟ್ಟಾಗಿ ಅಭಿಮನ್ಯುವಿನ ಕಡೆಗೆ ಧಾವಿಸಿದರು.

ತೇಷಾಂ ದಶಸಹಸ್ರಾಣಿ ಬಭೂವೂ ರಥಧನ್ವಿನಾಮ್ ।
ಪೌತ್ರಂ ತವ ಪುರಸೃತ್ಯ ಲಕ್ಷಣಂ ಪ್ರಿಯದರ್ಶನಮ್ ॥ ೧೧ ॥

ನಿನ್ನ ಪೌತ್ರನಾದ, ಸುಂದರನಾದ ಲಕ್ಷಣನನ್ನು ಮುಂದೆಮಾಡಿಕೊಂಡ, ರಥ-ಧನುಸ್ಸುಗಳನ್ನು ಹೊಂದಿದ ಆ ರಾಜಕುಮಾರರು ಹತ್ತುಸಾವಿರ ಮಂದಿ ಇದ್ದರು.

ಅನ್ಯೋನ್ಯಸಮದುಃಖಾಸ್ತೇ ಅನ್ಯೋನ್ಯಸಮಸಾಹಸಾಃ ।
ಅನ್ಯೋನ್ಯಮನ್ವವರ್ತಂತ ಅನ್ಯೋನ್ಯಕೃತನಿಶ್ರಮಾಃ ॥ ೧೨ ॥

ಅವರೆಲ್ಲರೂ ಪರಸ್ಪರವಾಗಿ ಸಮಾನ ದುಃಖವುಳ್ಳವರೂ, ಸಮಾನವಾದ ಸಾಹಸದಲ್ಲಿ ತೊಡಗುವವರೂ, ಪರಸ್ಪರ ಹಿತದಲ್ಲಿ ರತರಾದವರೂ ಮತ್ತು ಪರಸ್ಪರವಾಗಿ ಹಿಂಬಾಲಿಸುವವರೂ ಆಗಿದ್ದರು.

ತದನೀಕಮನಾಧೃಷ್ಯಂ ಭಾರದ್ವಾಜೇನ ರಕ್ಷಿತಮ್ ।
ಪಾರ್ಥಾಃ ಸಮಭ್ಯಧಾವಂತ ಭೀಮಸೇನಪುರೋಗಮಾಃ ॥ ೧೩ ॥

ಸೋಲಿಸಲು ಅಸಾಧ್ಯವಾದ, ದ್ರೋಣರಿಂದ ರಕ್ಷಿತವಾದ ಆ ಸೈನ್ಯದ ಕಡೆಗೆ ಭೀಮಸೇನ ಮೊದಲಾದ ಪಾಂಡವರು ಮುನ್ನುಗ್ಗಿದರು.

ಸಾತ್ಯಕಿಃ ಸಾತ್ವತಶ್ಚೈವ ಧೃಷ್ಟದ್ಯುಮ್ನಶ್ಚ ಪಾರ್ಷತಃ ।
ಕುಂತಿಭೋಜಶ್ಚ ವಿಕ್ರಾಂತೋ ದ್ರುಪದಶ್ಚ ಮಹಾರಥಃ ॥ ೧೪ ॥

ದುರ್ಜಯಃ ಕ್ಷತ್ರಧರ್ಮಾ ಚ ಬೃಹತ್ಕ್ಷತ್ರಶ್ಚ ವೀರ್ಯವಾನ್ ।
ಚೇದಿಪೋ ಧೃಷ್ಟಕೇತುಶ್ಚ ಮಾದ್ರೀಪುತ್ರೌ ಘಟೋತ್ಕಚಃ ॥ ೧೫ ॥

ಯುಧಾಮನ್ಯುಶ್ಚ ಪಾಂಚಾಲ್ಯಃ ಶಿಖಂಡೀ ಚಾಪರಾಜಿತಃ ।
ಉತ್ತಮೌಜಾಶ್ಚ ದುರ್ಧರ್ಷೋ ವಿರಾಟಶ್ಚ ಮಹಾರಥಃ ॥ ೧೬ ॥

ದ್ರೌಪದೇಯಾಶ್ಚ ದುರ್ಧರ್ಷಾಃ ಶೈಶುಪಾಲಿಶ್ಚ ವೀರ್ಯವಾನ್ ।
ಕೇಕಯಾಶ್ಚ ಮಹಾವೀರ್ಯಾಃ ಸೃಂಜಯಾಶ್ಚ ಸಹಸ್ರಶಃ ॥ ೧೭ ॥

ಏತೇ ಚಾನ್ಯೇ ಚ ಬಹವಃ ಸಗಣಾಃ ಯುದ್ಧದುರ್ಮದಾಃ ।
ಸಹಸಾ ಸ್ಮಾಭ್ಯವರ್ತಂತ ಭಾರದ್ವಾಜಯುಯುತ್ಸವಃ ॥ ೧೮ ॥

ಸಾತ್ವತನಾದ ಸಾತ್ಯಕಿ, ಪಾರ್ಷ್ವತನಾದ ಧೃಷ್ಟದ್ಯುಮ್ನ, ವಿಕ್ರಮಶಾಲಿಯಾದ ಕುಂತಿಭೋಜ, ಮಹಾರಥನಾದ ದ್ರುಪದ, ಜಯಿಸಲು ಕಷ್ಟಸಾಧ್ಯನಾದ ಕ್ಷತ್ರಧರ್ಮ, ಪರಾಕ್ರಮಶಾಲಿಯಾದ ಬೃಹತ್ಕ್ಷತ್ರ, ಚೇದಿರಾಜನಾದ ಧೃಷ್ಟಕೇತು, ಮಾದ್ರೀಪುತ್ರರಾದ ನಕುಲ-ಸಹದೇವರು, ಘಟೋತ್ಕಚ, ಪಾಂಚಾಲ ದೇಶದ ಯುಧಾಮನ್ಯು, ಅಪರಾಜಿತನಾದ ಶಿಖಂಡಿ ಮತ್ತು ಸೋಲಿಸಲು ಕಷ್ಟಸಾಧ್ಯನಾದ ಉತ್ತಮೌಜ, ಮಹಾರಥನಾದ ವಿರಾಟ, ದುರ್ಧರ್ಷರಾದ ದ್ರೌಪದಿಯ ಪುತ್ರರು, ವೀರ್ಯಶಾಲಿಯಾದ ಶೈಶುಪಾಲಿಯು, ಮಹಾಪರಾಕ್ರಮಿಗಳಾದ ಕೇಕಯರು ಮತ್ತು ಸಹಸ್ರ ಸಂಖ್ಯೆಯಲ್ಲಿದ್ದ ಸೃಂಜಯರು- ಇವರೂ, ಇನ್ನೂ ತಮ್ಮ ಗಣಗಳಿಂದ ಸಹಿತರಾದ ಅನೇಕ ಯುದ್ಧದುರ್ಮದರೂ ದ್ರೋಣರ ಜೊತೆಯಲ್ಲಿ ಯುದ್ಧವನ್ನು ಮಾಡಲು ಬಯಸಿ ಶೀಘ್ರವಾಗಿ ಅವರ ಕಡೆಗೆ ಸಾಗಿದರು.

ಸಮೀಪೇ ವರ್ತಮಾನಾಂಸ್ತಾನ್ ಭಾರದ್ವಾಜೋऽಪಿ ವೀರ್ಯವಾನ್ ।
ಅಸಂಭ್ರಾಂತಃ ಶರೌಘೇಣ ಮಹತಾ ಪ್ರತ್ಯವಾರಯತ್ ॥ ೧೯ ॥

ಸಮೀಪದಲ್ಲಿ ಬಂದ ಅವರನ್ನು ಪರಾಕ್ರಮಶಾಲಿಯಾದ ದ್ರೋಣರು ಯಾವ ಗಾಬರಿಯೂ ಇಲ್ಲದೆ ತಮ್ಮ ಮಹತ್ತಾದ ಶರವರ್ಷದಿಂದ ತಡೆದರು.

ಮಹೌಘಃ ಸಲಿಲಸ್ಯೇವ ಗಿರಿಮಾಸಾದ್ಯ ದುರ್ಭಿದಮ್ ।
ತಂ ತು ತೇ ನಾಭ್ಯವರ್ತಂತ ವೇಲಾಮಿವ ಜಲಾಶಯಾಃ ॥ ೨೦ ॥

ವೀರರ ಮಹಾಪ್ರವಾಹವು ನಿರ್ಭೇದ್ಯವಾದ ಪರ್ವತತಳವನ್ನು ತಲುಪಿ ನಿಂತಂತೆ, ಜಲಾಶಯಗಳು ದಡವನ್ನು ತಲುಪಿ ನಿಂತಂತೆ ಅವರು ದ್ರೋಣರನ್ನು ದಾಟಲು ಸಾಧ್ಯವಾಗಲಿಲ್ಲ.

ಪೀಡ್ಯಮಾನಾಃ ಶರೈಸ್ತೀಕ್ಷ್ಣೈರ್ದ್ರೋಣಚಾಪವಿನಿಃಸೃತೈಃ ।
ನಾಶಕ್ನುವನ್ ಮುಖೇ ಸ್ಥಾತುಂ ಭಾರದ್ವಾಜಸ್ಯ ಪಾಂಡವಾಃ ॥ ೨೧ ॥

ದ್ರೋಣರ ಧನುಸ್ಸಿನಿಂದ ಹೊರಟ ತೀಕ್ಷ್ಣವಾದ ಬಾಣಗಳಿಂದ ಪೀಡಿಸಲ್ಪಟ್ಟ ಪಾಂಡವರು ಅವರ ಎದುರಿನಲ್ಲಿ ನಿಲ್ಲಲು ಸಮರ್ಥರಾಗಲಿಲ್ಲ.

ತದದ್ಭುತಮಪಶ್ಯಾಮ ದ್ರೋಣಸ್ಯ ಭುಜಯೋರ್ಬಲಮ್ ।
ಯದೇನಂ ನಾಭ್ಯವರ್ತಂತ ಪಾಂಚಾಲಾಃ ಪಾಂಡವೈಃ ಸಹ ॥ ೨೨ ॥

ಪಾಂಚಾಲರು ಮತ್ತು ಪಾಂಡವರು, ಅವರನ್ನು ಮೀರಲು ಸಾಧ್ಯವಾಗದಿದ್ದಂತಹ ದ್ರೋಣರ ಅದ್ಭುತ ಭುಜಬಲವನ್ನು ನಾವು ನೋಡಿದೆವು.

ತಮಾಯಾಂತಮಭಿಕ್ರುದ್ಧೋ ದ್ರೋಣಂ ದೃಷ್ಟ್ವಾ ಯುಧಿಷ್ಠಿರಃ ।
ಬಹುಧಾ ಚಿಂತಯಾಮಾಸ ದ್ರೋಣಸ್ಯ ಪ್ರತಿವಾರಣಮ್ ॥ ೨೩ ॥

ಮುಂದೆ ಬರುತ್ತಿದ್ದ ದ್ರೋಣರನ್ನು ನೋಡಿ ಕ್ರೋಧಗೊಂಡ ಯುಧಿಷ್ಠಿರನು ದ್ರೋಣರನ್ನು ತಡೆಯುವ ಬಗೆಯನ್ನು ಬಹುಪ್ರಕಾರದಲ್ಲಿ ಚಿಂತಿಸಿದನು.

ಅಶಕ್ಯಂ ತು ತದಾಽನ್ಯೇನ ಭೇತ್ತುಂ ಮತ್ವಾ ಯುಧಿಷ್ಠಿರಃ ।
ಅವಿಷಹ್ಯಂ ಗುರುಂ ಭಾರಂ ಸೌಭದ್ರೇ ಸಮವಾಸೃಜತ್ ॥ ೨೪ ॥

ಆಗ ಇನ್ನೊಬ್ಬನು ಆ ವ್ಯೂಹವನ್ನು ಭೇದಿಸಲು ಸಮರ್ಥನಾಗುವುದಿಲ್ಲ ಎಂದು ತಿಳಿದ ಯುಧಿಷ್ಠಿರನು ಸಹಿಸಲು ಅಸಾಧ್ಯವಾದ ಆ ದೊಡ್ಡ ಭಾರವನ್ನು ಅಭಿಮನ್ಯುವಿನ ಮೇಲೆ ಹೊರಿಸಿದನು.

ವಾಸುದೇವಾದನವಮಂ ಫಲ್ಗುನಾಚ್ಚಾಮಿತೌಜಸಮ್ ।
ಅಬ್ರವೀತ್ ಪರವೀರಘ್ನಮಭಿಮನ್ಯುಮಿದಂ ವಚಃ ॥ ೨೫ ॥

ವಾಸುದೇವನಿಗಿಂತ ಕಡಿಮೆಯಲ್ಲದವನೂ, ಅರ್ಜುನನಿಗಿಂತ ಹೆಚ್ಚು ಪರಾಕ್ರಮವುಳ್ಳವನೂ, ಪರವೀರಹರನೂ ಆದ ಅಭಿಮನ್ಯುವನ್ನು ಕುರಿತು ಈ ಮಾತನ್ನು ಆಡಿದನು.

ಏತ್ಯ ನೋ ನಾರ್ಜುನೋ ಗರ್ಹೇದ್ ಯಥಾ ತಾತ ತಥಾ ಕುರು ।
ದ್ರೋಣಾನೀಕಸ್ಯ ನ ವಯಂ ವಿದ್ಮೋ ಭೇದಂ ಕಥಂಚನ ॥ ೨೬ ॥

ಪ್ರೀತಿಪಾತ್ರನೇ, ಅರ್ಜುನನು ಹಿಂದಿರುಗಿ ಬಂದು ನಮ್ಮನ್ನು ನಿಂದಿಸದಂತೆ ಮಾಡು. ನಾವು ಯಾರೂ ದ್ರೋಣರು ರಚಿಸಿರುವ ವ್ಯೂಹವನ್ನು ಭೇದಿಸುವುದನ್ನು ತಿಳಿದಿಲ್ಲ.

ತ್ವಂ ವಾಽರ್ಜುನೋ ವಾ ಕೃಷ್ಣೋ ವಾ ಭಿಂದ್ಯಾತ್ ಪ್ರದ್ಯುಮ್ನ ಏವ ವಾ ।
ದ್ರೋಣಾನೀಕಂ ಮಹಾಬಾಹೋ ಪಂಚಮೋಽನ್ಯೋ ನ ವಿದ್ಯತೇ ॥ ೨೭ ॥

ನೀನಾಗಲೀ, ಅರ್ಜುನನಾಗಲೀ, ಕೃಷ್ಣನಾಗಲೀ ಅಥವಾ ಪ್ರದ್ಯುಮ್ನನಾಗಲೀ ದ್ರೋಣಾನೀಕವನ್ನು ಭೇದಿಸಬಹುದು. ಎಲೈ ಮಹಾಬಾಹುವೇ, ಐದನೆಯವನು ಇನ್ನೊಬ್ಬನು ಇಲ್ಲ.

ಅಭಿಮನ್ಯೋ ವರಂ ತಾತ ಯಾಚೇ ತ್ವಾಂ ದಾತುಮರ್ಹಸಿ ।
ಪಿತೃಭ್ಯೋ ಮಾತುಲೇಭ್ಯಶ್ಚ ಸೈನ್ಯೇಭ್ಯಶ್ಚೈವ ಭಾರತ ॥ ೨೮ ॥

ಪ್ರೀತಿಪಾತ್ರನಾದ ಅಭಿಮನ್ಯುವೇ, ನಾನು ನಿನ್ನನ್ನು ಒಂದು ವರವನ್ನು ಕೇಳುತ್ತಿದ್ದೇನೆ. ಎಲೈ ಭಾರತನೇ, ನಿನ್ನ ತಂದೆಯರಿಗೂ, ಸೋದರಮಾವಂದಿರಿಗೂ ಮತ್ತು ಸೈನ್ಯಗಳಿಗೂ ಆ ವರವನ್ನು ಕೊಡಬೇಕು.

ಧನಂಜಯೋ ಹಿ ನಸ್ತಾತ ಗರ್ಹಯೇದೇತ್ಯ ಸಂಯುಗಾತ್ ।
ಕ್ಷಿಪ್ರಮಸ್ತ್ರಂ ಸಮಾದಾಯ ದ್ರೋಣಾನೀಕಂ ವಿಶಾತಯ ॥ ೨೯ ॥

ಎಲೈ ಪ್ರೀತಿಪಾತ್ರನೇ, ಧನಂಜಯನು ಯುದ್ಧದಿಂದ ಹಿಂದಿರುಗಿ ಬಂದು ನಮ್ಮನ್ನು ನಿಂದಿಸಿಯಾನು. ಶೀಘ್ರವಾಗಿ ರಥವನ್ನು ತೆಗೆದುಕೊಂಡು ದ್ರೋಣರ ಸೈನ್ಯವನ್ನು ಭೇದಿಸುವವನಾಗು.

ಅಭಿಮನ್ಯುಃ

ದ್ರೋಣಸ್ಯ ದೃಢಮವ್ಯಗ್ರಮನೀಕಪ್ರವರಂ ಮಹತ್ ।
ಪಿತೃಣಾಂ ಸಿದ್ಧಿಮನ್ವಿಚ್ಛನ್ನವಗಾಹೇ ಧನಂಜ್ಞಿ ಚ ॥ ೩೦ ॥

ಅಭಿಮನ್ಯು– ದೃಢವೂ, ಏಕಾಗ್ರವೂ, ದೊಡ್ಡದೂ ಆದ ದ್ರೋಣರ ಶ್ರೇಷ್ಠವಾದ ಸೈನ್ಯವನ್ನು ಪಿತೃಗಳ ಕಾರ್ಯಸಿದ್ಧಿಯನ್ನು ಬಯಸುತ್ತಾ ನಾನು ಪ್ರವೇಶಿಸಿ ಭೇದಿಸುತ್ತೇನೆ.

ಉಪದಿಷ್ಟೋ ಹಿ ಮೇ ಪಿತ್ರಾ ಯೋಗೋಽನೀಕಸ್ಯ ಭೇದನೇ ।
ನೋತ್ಸಹೇ ಪ್ರತಿನಿರ್ಗಂತುಮಹಂ ಕಸ್ಯಾಂಚಿದಾಪದಿ ॥ ೩೧ ॥

ಈ ವ್ಯೂಹವನ್ನು ಭೇದಿಸುವ ಉಪಾಯವು ತಂದೆಯಿಂದ ನನಗೆ ಉಪದೇಶಿಸಲ್ಪಟ್ಟಿದೆ. ಒಳಗೆ ಏನಾದರೂ ವಿಪತ್ತು ಸಂಭವಿಸಿದರೆ ನನಗೆ ಹೊರಗೆ ಬರಲು ಸಾಧ್ಯವಿಲ್ಲ.

ಯುಧಿಷ್ಠಿರಃ

ಭಿಂಧಿ ವ್ಯೂಹಂ ಯುಧಿಶ್ರೇಷ್ಠ ದ್ವಾರಂ ಸಂಜನಯಸ್ವ ನಃ ।
ವಯಂ ತ್ವಾಽನುಗಮಿಷ್ಯಾಮೋ ಯೇನ ತ್ವಂ ಪುತ್ರ ಯಾಸ್ಯಸಿ ॥ ೩೨ ॥

ಯುಧಿಷ್ಠಿರ– ಯುದ್ಧದಲ್ಲಿ ಶ್ರೇಷ್ಠನಾದವನೇ, ವ್ಯೂಹವನ್ನು ಭೇದಿಸಿ ನಮಗೆ ಒಂದು ದ್ವಾರವನ್ನು ಉಂಟುಮಾಡಿ ಕೊಡು. ಎಲೈ ಪುತ್ರನೇ, ನೀನು ಹೋಗುವ ಮಾರ್ಗದಲ್ಲಿ ನಾವು ನಿನ್ನನ್ನು ಹಿಂಬಾಲಿಸುವೆವು.

ಧನಂಜಯಸ್ಯ ಪ್ರತಿಮಂ ತ್ವಾ ಯಾಂತಂ ತಾತ ಸಂಯುಗೇ ।
ಪ್ರಣಿಧಾಯಾಗ್ರತಃ ಸರ್ವೇ ಅನುಯಾಸ್ಯಾಮ ಪೃಷ್ಠತಃ ॥ ೩೩ ॥

ಪ್ರೀತಿಪಾತ್ರನೇ, ಅರ್ಜುನನಿಗೆ ಸದೃಶನಾದ, ಯುದ್ಧದಲ್ಲಿ ಸಾಗುವ ನಿನ್ನನ್ನು ಮುಂದೆ ಮಾಡಿಕೊಂಡು ನಾವೆಲ್ಲರೂ ಹಿಂದಿನಿಂದ ನಿನ್ನನ್ನು ಹಿಂಬಾಲಿಸುವೆವು.

ಧನಂಜಯಸಮ ದ್ವಂದ್ವಯುದ್ಧೇ ಯಾಂತಂ ಹಿ ಸಂಯುಗೇ ।
ಪ್ರಣಿಧಾಯಾನುಯಾಸ್ಯಾಮೋ ರಕ್ಷಂತಃ ಸರ್ವತೋಮುಖಾಃ ॥ ೩೪ ॥

ದ್ವಂದ್ವ ಯುದ್ಧದಲ್ಲಿ ಅರ್ಜುನನಿಗೆ ಸಮನಾದ ಎಲೈ ಅಭಿಮನ್ಯುವೇ, ನೀನು ರಣರಂಗದಲ್ಲಿ ಹೋದಂತೆ ನಿನ್ನನ್ನು ಮುಂದೆ ಮಾಡಿಕೊಂಡು ಎಲ್ಲ ಕಡೆಗಳಿಂದಲೂ ನಿನ್ನನ್ನು ರಕ್ಷಿಸುತ್ತಾ ನಾವು ಹಿಂಬಾಲಿಸುವೆವು.

ಭೀಮಃ

ಅಹಂ ತ್ವಾಮನುಯಾಸ್ಯಾಮಿ ಧೃಷ್ಟದ್ಯುಮ್ನಶ್ಚ ಸಾತ್ಯಕಿಃ ।
ಪಾಂಚಾಲಾಃ ಕೇಕಯಾ ಮತ್ಸ್ಯಾಃ ತಥಾ ಸರ್ವೇ ಪ್ರಭದ್ರಕಾಃ ॥ ೩೫ ॥

ಭೀಮ– ನಾನು ನಿನ್ನನ್ನು ಹಿಂಬಾಲಿಸುವೆನು. ಧೃಷ್ಟದ್ಯುಮ್ನನೂ, ಸಾತ್ಯಕಿಯೂ, ಪಾಂಚಾಲರೂ, ಕೇಕಯರೂ, ಮತ್ಸ್ಯರೂ ಮತ್ತು ಎಲ್ಲ ಪ್ರಭದ್ರಕರೂ ನಿನ್ನನ್ನು ಹಿಂಬಾಲಿಸುವರು.

ಸಕೃದ್ಭಿನ್ನಂ ತ್ವಯಾ ವ್ಯೂಹಂ ತತ್ರ ತತ್ರ ತ್ವಯಾ ಸಹ ।
ವಯಂ ಪ್ರಧ್ವಂಸಯಿಷ್ಯಾಮೋ ನಿಘ್ನಮಾನಾಃ ಪರಾನ್ ವರಾನ್ ॥೩೬॥

ಒಂದು ಬಾರಿ ನಿನ್ನಿಂದ ಭಿನ್ನವಾದ ವ್ಯೂಹವನ್ನು ನಾವು ನಿನ್ನ ಜೊತೆಯಲ್ಲಿ ಪ್ರವೇಶಿಸಿ ಅಲ್ಲಲ್ಲಿ ಶತ್ರುಗಳಲ್ಲಿ ಶ್ರೇಷ್ಠರಾದವರನ್ನು ಹೊಡೆಯುತ್ತಾ ಸೈನ್ಯವನ್ನು ನಾಶಪಡಿಸುವೆವು.

ಅಭಿಮನ್ಯುಃ

ಅಹಮೇಕಃ ಪ್ರವೇಕ್ಷ್ಯಾಮಿ ದ್ರೋಣಾನೀಕಂ ಸುದುರ್ಭಿದಮ್ ।
ಪತಂಗ ಇವ ಸಂಕ್ರುದ್ಧೋ ಜ್ವಲಂತಂ ಜಾತವೇದಸಮ್ ॥ ೩೭ ॥

ಅಭಿಮನ್ಯು– ಅತ್ಯಂತ ದುರ್ಭೇದ್ಯವಾದ ದ್ರೋಣರ ಸೈನ್ಯವನ್ನು, ಕ್ರೋಧಗೊಂಡ ಪತಂಗವು ಜ್ವಲಿಸುವ ಅಗ್ನಿಯನ್ನು ಪ್ರವೇಶಿಸುವಂತೆ ನಾನೊಬ್ಬನೇ ಪ್ರವೇಶಿಸುವೆನು.

ತತ್ ಕರ್ಮಾದ್ಯ ಕರಿಷ್ಯಾಮಿ ಹಿತಂ ಯದ್ ವಂಶಯೋರ್ದ್ವಯೋಃ ।
ಮಾತುಲಸ್ಯ ಚ ಯಾ ಪ್ರೀತಿಃ ಭವಿಷ್ಯತಿ ಪಿತುಶ್ಚ ಮೇ ॥ ೩೮ ॥

ಈ ದಿನ ನಾನು ತಂದೆ-ತಾಯಿಗಳ ವಂಶಕ್ಕೆ ಹಿತವುಂಟಾಗುವಂತೆ, ಸೋದರ ಮಾವನಾದ ಕೃಷ್ಣನಿಗೂ ಮತ್ತು ತಂದೆಯಾದ ಅರ್ಜುನನಿಗೂ ಸಂತೋಷ ಉಂಟಾಗುವಂತೆ ಅಂತಹ ಕರ್ಮವನ್ನು ಮಾಡುವೆನು.

ಶಶುನೈಕೇನ ಸಂಗ್ರಾಮೇ ದ್ವಿಷತ್ಸೈನ್ಯಾನಿ ವೈ ಮಯಾ ।
ಅದ್ಯ ದ್ರಕ್ಷ್ಯಂತಿ ರಾಜಾನಃ ಕಾಲ್ಯಮಾನಾನಿ ಸಂಘಶಃ ॥ ೩೯ ॥

ಈ ದಿನ ಒಬ್ಬ ಶಿಶುವಾದ ನನ್ನಿಂದ ಶತ್ರುಸೈನ್ಯಗಳು ರಣರಂಗದಲ್ಲಿ ಸಮೂಹಗಳಲ್ಲಿ ಕಲಕಾಡಲ್ಪಡುವುದನ್ನು ರಾಜರು ನೋಡುವರು.

ಯುಧಿಷ್ಠಿರಃ

ಏವಂ ತೇ ಭಾಷಮಾಣಸ್ಯ ಬಲಂ ಸೌಭದ್ರ ವರ್ಧತಾಮ್ ।
ಯಸ್ತ್ವಮುತ್ಸಹಸೇ ಭೇತ್ತುಂ ದ್ರೋಣಾನೀಕಂ ಸುದುರ್ಭಿದಮ್ ॥೪೦॥

ರಕ್ಷಿತಂ ಪುರುಷವ್ಯಾಘ್ರೈರ್ಮಹೇಷ್ವಾಸೈರ್ಮಹಾರಥೈಃ ।
ಸಾಧ್ಯರುದ್ರಮರುತ್ಕಲ್ಪೈರ್ವಸ್ವಗ್ನ್ಯಾದಿತ್ಯವಿಕ್ರಮೈಃ ॥ ೪೧ ॥

ಯುಧಿಷ್ಠಿರ– ಅಭಿಮನ್ಯುವೇ, ಹೀಗೆ ಮಾತನಾಡುವ ನಿನ್ನ ಬಲವು ಅಭಿವೃದ್ಧಿಯನ್ನು ಹೊಂದಲಿ. ಏಕೆಂದರೆ ಅತ್ಯಂತ ಸುದುರ್ಭೇದ್ಯವಾದ, ಸಾಧ್ಯ-ರುದ್ರ-ಮರುತ್ತುಗಳಿಗೆ ಸದೃಶರಾದ, ವಸು-ಅಗ್ನಿ ಮತ್ತು ಸೂರ್ಯರ ಪರಾಕ್ರಮವನ್ನು ಹೊಂದಿದ, ಮಹಾಧನುರ್ಧಾರಿಗಳಾದ, ಮಹಾರಥರಾದ, ಪುರುಷವ್ಯಾಘ್ರರಿಂದ ರಕ್ಷಿಸಲ್ಪಡುತ್ತಿರುವ ದ್ರೋಣರ ಸೈನ್ಯವನ್ನು ಭೇದಿಸಲು ನೀನು ಉತ್ಸುಕನಾಗಿದ್ದೀಯೆ.

ಸಂಜಯಃ

ತಸ್ಯ ತದ್ ವಚನಂ ಶ್ರುತ್ವಾ ಸ ಯಂತಾರಮಚೋದಯತ್ ।
ಸುಮಿತ್ರಾಶ್ವಾನ್ ರಣೇ ಕ್ಷಿಪ್ರಂ ದ್ರೋಣಾನೀಕಾಯ ಚೋದಯ॥ ೪೨ ॥

ಸಂಜಯ– ಯುಧಿಷ್ಠಿರನ ಆ ಮಾತುಗಳನ್ನು ಕೇಳಿ ಅಭಿಮನ್ಯುವು ತನ್ನ ಸಾರಥಿಯಾದ ಸುಮಿತ್ರನನ್ನು ಕುರಿತು- 'ಸುಮಿತ್ರನೇ, ನನ್ನ ರಥದ ಅಶ್ವಗಳನ್ನು ಶೀಘ್ರವಾಗಿ ರಣರಂಗದಲ್ಲಿ ದ್ರೋಣರ ಸೈನ್ಯದ ಕಡೆಗೆ ಪ್ರಚೋದಿಸು' ಎಂದು ಹೇಳಿದನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಂ ದ್ರೋಣಪರ್ವಣಿ ಚತುಸ್ತ್ರಿಂಶೋऽಧ್ಯಾಯಃ ॥

॥ ಅಭಿಮನ್ಯುವಧಪರ್ವಣಿ ತೃತೀಯೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಮೂವತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮೂವತ್ತೈದನೆಯ ಅಧ್ಯಾಯ

ಅಭಿಮನ್ಯುವಿನ ಯುದ್ಧದ ವರ್ಣನೆ.

ಸಂಜಯಃ

ಸೌಭದ್ರಸ್ತು ವಚಃ ಶ್ರುತ್ವಾ ಧರ್ಮರಾಜಸ್ಯ ಧೀಮತಃ ।
ಅಚೋದಯಚ್ಚ ಯಂತಾರಂ ದ್ರೋಣಾನೀಕಾಯ ಮಾರಿಷ ॥ ೧ ॥

ಸಂಜಯ– ಎಲೈ ಪೂಜ್ಯನೇ, ಮೇಧಾವಿಯಾದ ಧರ್ಮರಾಜನ ಮಾತುಗಳನ್ನು ಕೇಳಿ ಅಭಿಮನ್ಯುವು ದ್ರೋಣರ ಸೈನ್ಯದ ಕಡೆಗೆ ಅಶ್ವಗಳನ್ನು ಪ್ರಚೋದಿಸುವಂತೆ ಸಾರಥಿಗೆ ಹೇಳಿದನು.

ತೇನ ಸಂಚೋದ್ಯಮಾನಸ್ತು ಯಾಹಿ ಯಾಹೀತಿ ಸಾರಥಿಃ ।
ಪ್ರತ್ಯುವಾಚ ತತೋ ರಾಜನ್ನಭಿಮನ್ಯುಮಿದಂ ವಚಃ ॥ ೨ ॥

'ಹೋಗು-ಹೋಗು' ಎಂದು ಅವನಿಂದ ಪ್ರಚೋದಿಸಲ್ಪಟ್ಟ ಸಾರಥಿಯು, ಎಲೈ ರಾಜನೇ, ಅಭಿಮನ್ಯುವನ್ನು ಕುರಿತು ಈ ಮಾತನ್ನು ಆಡಿದನು.

ಅತಿಭಾರೋಽಯಮಾಯುಷ್ಮನ್ನಾಹಿತಸ್ತ್ವಯಿ ಪಾಂಡವೈಃ ।
ಸಂಪ್ರಧಾರ್ಯಾಸಕೃದ್ ಬುದ್ಧ್ಯಾ ತತಸ್ತ್ವಂ ಯೋದ್ಧುಮರ್ಹಸಿ ॥ ೩ ॥

ಚಿರಂಜೀವಿಯೇ, ಪಾಂಡವರು ನಿನ್ನ ಮೇಲೆ ದೊಡ್ಡ ಭಾರವನ್ನು ಹೇರಿದ್ದಾರೆ. ಬುದ್ಧಿಯಿಂದ ಚೆನ್ನಾಗಿ ನಿರ್ಧಾರ ಮಾಡಿ ಅನಂತರ ನೀನು ಯುದ್ಧವನ್ನು ಮಾಡಬೇಕು.

ದ್ರೋಣೋ ಹಿ ಕೃತವಾನ್ ಯತ್ನಂ ಶಸ್ತ್ರಾಸ್ತ್ರೇಷ್ವತನಿಶ್ರಮಃ ।
ತ್ವಂ ತು ಬಾಲಃ ಸ ಬಲವಾನ್ ಸಂಗ್ರಾಮಾಣಾಮಕೋವಿದಃ ॥

ಶಸ್ತ್ರಾಸ್ತ್ರದಲ್ಲಿ ಬಹಳ ಪರಿಣತಿಯನ್ನು ಪಡೆದಿರುವ ದ್ರೋಣರು ದೊಡ್ಡ ಪ್ರಯತ್ನವನ್ನು ಮಾಡಿದ್ದಾರೆ. ನೀನು ಯುದ್ಧದ ಪರಿಶ್ರಮವಿಲ್ಲದ ಬಾಲಕ, ದ್ರೋಣರು ಬಲಿಷ್ಠರಾದವರು.

ಸಂಜಯಃ

ತತೋಽಭಿಮನ್ಯುಃ ಪ್ರಹಸನ್ ತಂ ಸಾರಥಿಮಥಾಬ್ರವೀತ್ ॥ ೪ ॥

ಸಂಜಯ– ಆಗ ಅಭಿಮನ್ಯುವು ನಗುತ್ತಾ ಆ ಸಾರಥಿಯನ್ನು ಕುರಿತು ಹೇಳಿದನು.

ವಿಸ್ಮಯಃ ಕೋ ಹಿ ಮೇ ದ್ರೋಣೇ ಸಮಗ್ರೇ ಕ್ಷತ್ರ ಏವ ವಾ ।
ವ್ಯವಸಾಯೋ ಹಿ ಮೇ ಯೋದ್ಧುಂ ರಣೋತ್ಸವಸಮುದ್ಯತಃ ॥ ೫ ॥

ದ್ರೋಣರ ಎದುರಿಗೆ ಅಥವಾ ಸಮಗ್ರವಾಗಿ ಇರುವ ಕ್ಷತ್ರಿಯರ ಎದುರಿಗೆ ನನಗೆ ಯಾವ ಗಾಬರಿಯು? ರಣೋತ್ಸವದಲ್ಲಿ ಪಾಲ್ಗೊಂಡು ದೊಡ್ಡ ಯುದ್ಧವನ್ನು ಮಾಡುವುದಕ್ಕೆ ನಾನು ನಿರ್ಧರಿಸಿದ್ದೇನೆ.

ಐರಾವತಗತಂ ಶಕ್ರಂ ಸಹಾಮರಗಣಂ ರಣೇ ।
ಅಥವಾ ರುದ್ರಮೀಶಾನಂ ಸರ್ವಭೂತಗಣೈರಹಮ್ ॥ ೬ ॥

ಯುದ್ಧ್ಯೇಯಮದ್ಯ ಸಮರೇ ನ ಮೇ ಕ್ಷತ್ರೇಽಸ್ತಿ ವಿಸ್ಮಯಃ ॥ ೭ ॥

ಅಮರಗಣಗಳಿಂದ ಸಹಿತವಾದ ಐರಾವತಗತನಾದ ಇಂದ್ರನ ಜೊತೆಯಾಗಲೀ, ಸರ್ವಭೂತಗಣಗಳಿಂದ ಸಹಿತನಾದ ಈಶಾನನಾದ ರುದ್ರನ ಜೊತೆಯಾಗಲೀ ನಾನು ಈ ದಿನ ಯುದ್ಧವನ್ನು ಮಾಡಿಯೇನು. ಯುದ್ಧದಲ್ಲಿ ಕ್ಷತ್ರಿಯರ ಎದುರಿಗೆ ನನಗೆ ಯಾವ ಚಿಂತೆಯೂ ಇಲ್ಲ.

ಯಚ್ಚೈತತ್ ಪಶ್ಯಸೇ ಸೂತ ಸಯೋಧಾಶ್ವರಥದ್ವಿಪಮ್ ।
ತನ್ಮಮಾದ್ಯ ದ್ವಿಷತ್ಸೈನ್ಯಂ ಕಲಾಂ ನಾರ್ಹತಿ ಷೋಡಶೀಮ್ ॥ ೮ ॥

ಎಲೈ ಸೂತನೇ, ನೀನು ಯೋಧಾಶ್ವ-ರಥ-ಗಜಗಳಿಂದ ಸಹಿತವಾದ ಯಾವ ಶತ್ರುಸೈನ್ಯವನ್ನು ನೋಡುತ್ತಿದ್ದೀಯೋ ಅದು ನನ್ನ ಸಾಮರ್ಥ್ಯದ ಹದಿನಾರನೆಯ ಒಂದಂಶಕ್ಕೂ ಅರ್ಹವಾದುದಲ್ಲ.

ಅಪಿ ವಿಶ್ವಜಿತಂ ವಿಷ್ಣುಂ ಮಾತುಲಂ ಪ್ರಾಪ್ಯ ಸೂತಜ ।
ಪಿತರಂ ಚಾರ್ಜುನಂ ಯುದ್ಧೇ ನ ಭೀರ್ಮಾಮುಪಸರ್ಪತಿ ॥ ೯ ॥

ಎಲೈ ಸೂತಜನೇ, ಮತ್ತು ವಿಶ್ವಜಯಶೀಲನಾದ ವಿಷ್ಣುವನ್ನು ಸೋದರಮಾವನನ್ನಾಗಿ ಹೊಂದಿರುವ, ಅರ್ಜುನನನ್ನು ತಂದೆಯನ್ನಾಗಿ ಹೊಂದಿರುವ ನನಗೆ ಯುದ್ಧದಲ್ಲಿ ಯಾವ ಭಯವೂ ಸಮೀಪಕ್ಕೂ ಬರುವುದಿಲ್ಲ.

ನಾಹಂ ಪಾರ್ಥೇನ ಜಾತಸ್ತು ನ ಚ ಜಾತಃ ಸುಭದ್ರಯಾ ।
ಯದಿ ಮೇ ಸಂಯುಗೇ ಕಶ್ಚಿತ್ ಜೀವಮಾನಸ್ಯ ಜೀವತಿ ॥ ೧೦ ॥

ನಾನು ಬದುಕಿರುವಾಗ ಈ ದಿನ ಶತ್ರುಸೈನ್ಯದಲ್ಲಿ ಯಾರಾದರೂ ಯುದ್ಧದಲ್ಲಿ ಜೀವಸಹಿತವಾಗಿ ಉಳಿದರೆ ನಾನು ಅರ್ಜುನನಿಂದ ಜನಿಸಿದವನೂ ಅಲ್ಲ, ಸುಭದ್ರೆಯಿಂದ ಜನಿಸಿದವನೂ ಅಲ್ಲ.

ಯದಿ ಚೈಕರಥೇನಾಹಂ ಸಮಗ್ರಂ ಕ್ಷತ್ರಮಂಡಲಮ್ ।
ನ ಕುರ್ಮಿ ಶತಧಾ ಯುದ್ಧೇ ನ ಭವಾಮ್ಯರ್ಜುನಾತ್ಮಜಃ ॥ ೧೧ ॥

ಒಂದು ರಥದಿಂದ ನಾನು ಈ ದಿನ ಸಮಗ್ರವಾದ ಕ್ಷತ್ರಿಯಸಮೂಹವನ್ನು ಯುದ್ಧದಲ್ಲಿ ನೂರು ಭಾಗವಾಗಿ ಭೇದಿಸದಿದ್ದರೆ ನಾನು ಅರ್ಜುನ ಪುತ್ರನಲ್ಲ.

ಸಂಜಯಃ

ಏವಮಪ್ಯುಚ್ಯಮಾನಃ ಸ ಸಾರಥಿಸ್ತಂ ಪುನಃಪುನಃ ।
ವೀರ ತೇ ತೇನ ಮಾ ಯುದ್ಧಮಿತಿ ಸೌಭದ್ರಮಬ್ರವೀತ್ ॥ ೧೨ ॥

ಸಂಜಯ– ಸಾರಥಿಯನ್ನು ಕುರಿತು ಹೀಗೆ ಹೇಳುತ್ತಿದ್ದರೂ ಸಾರಥಿಯು ಪುನಃ ಪುನಃ ಅಭಿಮನ್ಯುವನ್ನು ಕುರಿತು- 'ಅಭಿಮನ್ಯುವೇ, ಶತ್ರುಸೈನ್ಯದ ಜೊತೆಯಲ್ಲಿ ನಿನಗೆ ಯುದ್ಧವು ಬೇಡ' ಎಂದು ಹೇಳಿದನು.

ಅಭಿಮನ್ಯುಸ್ತು ತಾಂ ವಾಚಂ ಕದರ್ಥೀಕೃತ್ಯ ಸಾರಥೇಃ ।
ಯಾಹೀತ್ಯೇವಾಬ್ರವೀದೇನಂ ದ್ರೋಣಾನೀಕಾಯ ಮಾಚಿರಮ್ ॥ ೧೩ ॥

ಅಭಿಮನ್ಯುವಾದರೋ ಸಾರಥಿಯ ಆ ಮಾತುಗಳನ್ನು ತಿರಸ್ಕರಿಸಿ, ದ್ರೋಣರ ಸೇನೆಯ ಕಡೆಗೆ ಶೀಘ್ರವಾಗಿ ಹೋಗು ಎಂದೇ ಅವನನ್ನು ಕುರಿತು ಹೇಳಿದನು.

ತತಃ ಸಂಚೋದಯಾಮಾಸ ಹಯಾನಾಶು ತ್ರಿಹಾಯನಾನ್ ।
ನಾತಿಹೃಷ್ಟಮನಾಃ ಸೂತೋ ಹೇಮಭಾಂಡಪರಿಚ್ಛದಾನ್ ॥ ೧೪ ॥

ಆಗ ಸೂತನು ಬಹಳ ಸಂತೋಷಗೊಳ್ಳದ ಮನಸ್ಸಿನಿಂದ, ಸುವರ್ಣಾಭರಣ ಭೂಷಿತವಾದ, ಮೂರು ವರ್ಷ ವಯಸ್ಸಿನ ಆ ಅಶ್ವಗಳನ್ನು ಶೀಘ್ರವಾಗಿ ಪ್ರಚೋದಿಸಿದನು.

ತೇ ಪ್ರೇಷಿತಾಃ ಸುಮಿತ್ರೇಣ ದ್ರೋಣಾನೀಕಾಯ ವಾಜಿನಃ ।
ದ್ರೋಣಮಭ್ಯದ್ರವನ್ ರಾಜನ್ ಮಹಾವೇಗಾ ಮಹಾಬಲಾಃ ॥ ೧೫ ॥

ಎಲೈ ರಾಜನೇ, ಸುಮಿತ್ರನಿಂದ ಪ್ರಚೋದಿಸಲ್ಪಟ್ಟ ಮಹಾವೇಗವನ್ನೂ ಮತ್ತು ಮಹಾಬಲವನ್ನೂ ಹೊಂದಿದ ಆ ಅಶ್ವಗಳು ದ್ರೋಣರ ಸೇನೆಯ ಕಡೆಗೆ ಮತ್ತು ದ್ರೋಣರ ಕಡೆಗೆ ವೇಗದಿಂದ ಸಾಗಿದವು.

ತಂ ತು ದೃಷ್ಟ್ವಾ ಪ್ರಯಾಂತಂ ತು ಸರ್ವೇ ದ್ರೋಣಮುಖಾ ರಥಾಃ ।
ಅಭ್ಯವರ್ತಂತ ಕೌರವ್ಯಾಃ ಪಾಂಡವಾಶ್ಚ ತಮನ್ವಯುಃ ॥ ೧೬ ॥

ಅವನು ಬರುತ್ತಿರುವುದನ್ನು ನೋಡಿ ದ್ರೋಣರೇ ಮೊದಲಾದ ಎಲ್ಲ ಮಹಾರಥರು ಮತ್ತು ಕೌರವರು ಅವನ ಕಡೆಗೆ ಬಂದರು. ಪಾಂಡವರೂ ಅವನನ್ನು ಹಿಂಬಾಲಿಸಿದರು.

ಸಕರ್ಣಿಕಾರಪ್ರವರೋಚ್ಛ್ರಿತಧ್ವಜಃ
ಸುವರ್ಣವರ್ಮಾऽऽರ್ಜುನಿರರ್ಜುನಾದ್ ವರಃ ।
ಯುಯುತ್ಸಯಾ ದ್ರೋಣಮುಖಾನ್ ಮಹಾರಥಾನ್
ಸಮಾಸದತ್ ಸಿಂಹಶಿಶುರ್ಯಥಾ ದ್ವಿಪಾನ್ ॥ ೧೭ ॥

ಕರ್ಣಿಕಾರ ವೃಕ್ಷದ ಶ್ರೇಷ್ಠವಾದ ಮತ್ತು ಉನ್ನತವಾದ ಧ್ವಜವನ್ನು ಹೊಂದಿದ, ಸುವರ್ಣಕವಚದಿಂದ ಸಹಿತನಾದ, ಅರ್ಜುನನಿಗಿಂತಲೂ ಶ್ರೇಷ್ಠನಾದ ಅಭಿಮನ್ಯುವು ದ್ರೋಣರೇ ಮೊದಲಾದ ಮಹಾರಥರ ಜೊತೆಯಲ್ಲಿ ಯುದ್ಧವನ್ನು ಮಾಡಲು ಬಯಸಿ ಸಿಂಹದ ಮರಿಯು ಗಜಗಳ ಮೇಲೆ ಎರಗಿದಂತೆ ಅವರನ್ನು ಸಮೀಪಿಸಿದನು.

ತೇ ವಿಂಶತಿಪದೇ ಯತ್ತಾಃ ಸಂಪ್ರಹಾರಮಕುರ್ವತ ।
ಆಸೀದ್ ಗಾಂಗ ಇವಾವರ್ತೋ ಮುಹೂರ್ತಮುದಧೇರಿವ ॥ ೧೮ ॥

ಅವರು ಇಪ್ಪತ್ತು ಹೆಜ್ಜೆಗಳಷ್ಟು ದೂರದಲ್ಲಿದ್ದಾಗ ಅವರೆಲ್ಲರೂ ಪ್ರಯತ್ನ-ಪೂರ್ವಕವಾಗಿ ಅವನ ಮೇಲೆ ಸಂಪ್ರಹಾರವನ್ನು ಮಾಡಿದರು. ಒಂದು ಮುಹೂರ್ತದ ಕಾಲ ಗಂಗೆಯ ಸುಳಿಯಂತೆ ಮತ್ತು ಸಮುದ್ರದ ಸುಳಿಯಂತೆ ಯುದ್ಧವು ನಡೆಯಿತು.

ಶೂರಾಣಾಂ ಯುದ್ಧ್ಯಮಾನಾನಾಂ ನಿಘ್ನತಾಮಿತರೇತರಮ್ ।
ಸಂಗ್ರಾಮಸ್ತುಮುಲೋ ರಾಜನ್ ಪ್ರಾವರ್ತತ ಸುದಾರುಣಃ ॥ ೧೯ ॥

ರಾಜನೇ, ಪರಸ್ಪರವಾಗಿ ಕೊಲ್ಲುತ್ತಾ ಯುದ್ಧವನ್ನು ಮಾಡುವ ಶೂರರಿಗೆ ಬಹಳ ದಾರುಣವಾದ, ತೀವ್ರವಾದ ಯುದ್ಧವು ನಡೆಯಿತು.

ಪ್ರವರ್ತಮಾನೇ ಸಂಗ್ರಾಮೇ ತಸ್ಮಿನ್ನತಿಭಯಂಕರೇ ।
ದ್ರೋಣಸ್ಯ ಮಿಷತೋ ವ್ಯೂಹಂ ಭಿತ್ತ್ವಾ ಪ್ರಾವಿಶದಾರ್ಜುನಿಃ ॥ ೨೦ ॥

ಅಂತಹ ಭಯಂಕರವಾದ ಯುದ್ಧವು ನಡೆಯುತ್ತಿರುವಾಗ ದ್ರೋಣರು ನೋಡುತ್ತಿರುವಂತೆಯೇ ಅಭಿಮನ್ಯುವು ಅವರ ವ್ಯೂಹವನ್ನು ಭೇದಿಸಿ ಒಳಗೆ ಪ್ರವೇಶಿಸಿದನು.

ತದಭೇದ್ಯಮನಾಧೃಷ್ಯಂ ದ್ರೋಣಾನೀಕಂ ಸುದುರ್ಜಯಮ್ ।
ಭಿತ್ತ್ವಾ ತ್ವಽರ್ಜುನಿರಸಂಭ್ರಾಂತೋ ವಿವೇಶಾಚಿಂತ್ಯವಿಕ್ರಮಃ ॥ ೨೧ ॥

ಅಚಿಂತ್ಯ ಪರಾಕ್ರಮವನ್ನು ಹೊಂದಿದ್ದ ಅಭಿಮನ್ಯುವು ಸೋಲಿಸಲು ಅಸಾಧ್ಯವಾದ, ಜಯಿಸಲು ಅಸಾಧ್ಯವಾದ ದ್ರೋಣರ ಆ ಸೈನ್ಯವನ್ನು ಭೇದಿಸಿ ಯಾವ ಗಾಬರಿಯೂ ಇಲ್ಲದೆ ಒಳಗೆ ಪ್ರವೇಶಿಸಿದನು.

ತಂ ಪ್ರವಿಷ್ಟಮರಾತಿಘ್ನಂ ಜಿಘಾಂಸಂತಃ ಸಹಸ್ರಶಃ ।
ಹಸ್ತ್ಯಶ್ವರಥ ಪತ್ತ್ಯೃಷಾಃ ಪರಿವವ್ರುರುದಾಯುಧಾಃ ॥ ೨೨ ॥

ಪ್ರವೇಶಿಸಿದ ಶತ್ರುಘಾತಕನಾದ ಅವನನ್ನು ಕೊಲ್ಲಲು ಬಯಸಿ ಆಯುಧಗಳನ್ನು ಧರಿಸಿದ ಹಸ್ತ್ಯಶ್ವ-ರಥ-ಪದಾತಿಗಳು ಸಹಸ್ರ ಸಂಖ್ಯೆಯಲ್ಲಿ ಅವನನ್ನು ಸುತ್ತುವರಿದರು.

ತತೋ ವಾದಿತ್ರನಿನದೈಃ ಕ್ಷ್ವೇಡಿತೋತ್ಕೃಷ್ಟಗರ್ಜಿತೈಃ ।
ಘೋಟ್ಕಾರೈಃ ಸಿಂಹನಾದೈಶ್ಚ ತಿಷ್ಠ ತಿಷ್ಠೇತಿ ನಿಸ್ವನೈಃ ॥ ೨೩ ॥

ಘೋರೈರ್ಹಲಹಲಾಶಬ್ದೈರ್ಮಾ ಗಾಸ್ತಿಷ್ಠೈಹಿ ಮಾಮಿತಿ ।
ಅಸಾವಹಮಮುಷ್ಯೇತಿ ಪ್ರವದಂತೋ ಮಹೀಕ್ಷಿತಃ ॥ ೨೪ ॥

ಬೃಂಹಿತೈಃ ಶಿಂಜಿತೈರ್ಹಾಸ್ಯೈಃ ಖುರನೇಮಿಸ್ವನೈರಪಿ ।
ತೇ ನಾದಯಂತೋ ವಸುಧಾಂ ಹ್ಯಭಿದುದ್ರುವುರಾರ್ಜುನಿಮ್ ॥ ೨೫ ॥

ಆಗ ವಾದಿತ್ರ ನಾದಗಳಿಂದಲೂ, ಸಿಂಹನಾದ ಮತ್ತು ಯುದ್ಧಗರ್ಜನೆಗಳಿಂದಲೂ, ಹಸ್ತತಳ ಮತ್ತು ಭುಜದ ಆಸ್ಫೋಟಗಳಿಂದಲೂ, ಸಿಂಹನಾದಗಳಿಂದಲೂ, ದೊಡ್ಡ ಶಬ್ದಗಳಿಂದಲೂ 'ಹೋಗಬೇಡ, ಇಲ್ಲಿಯೇ ಇರು, ನನ್ನ ಬಳಿಗೆ ಬಾ' ಮುಂತಾದ ಘೋರವಾದ ಹಲಹಲಾ ಶಬ್ದಗಳಿಂದಲೂ, 'ನಾನು ಇಂತಹವನು, ನಾನು ಇಂತಹವನ ಪುತ್ರನು' ಮೊದಲಾದ ಮಾತುಗಳನ್ನು ಆಡುತ್ತಾ ಗಜಗಳ ಬೃಂಹಣದಿಂದಲೂ, ಆಭರಣಗಳ ಝೇಂಕಾರದಿಂದಲೂ, ನಗುವಿನ ಶಬ್ದಗಳಿಂದಲೂ, ಅಶ್ವಖುರಪುಟಗಳ ಶಬ್ದಗಳಿಂದಲೂ ಸಹಿತರಾದ ಆ ರಾಜರು ಭೂಮಿಯನ್ನು ಪ್ರತಿಧ್ವನಿಸುತ್ತಾ ಅಭಿಮನ್ಯುವಿನ ಕಡೆಗೆ ಓಡಿದರು.

ತೇಷಾಮಾಪತತಾಂ ವೀರಃ ಶೀಘ್ರಂ ಶೀಘ್ರಮಥೋ ದೃಢಮ್ ।
ಕ್ಷಿಪ್ರಂ ತಾನಹನದ್ ಯಾತಾನ್ ಮರ್ಮಜ್ಞೋ ಮರ್ಮಭೇದಿಭಿಃ ॥

ತನ್ನ ಕಡೆಯೇ ಶೀಘ್ರವಾಗಿ ಬರುತ್ತಿದ್ದ ಅವರನ್ನು ವೀರನಾದ, ಮರ್ಮಜ್ಞನಾದ ಅಭಿಮನ್ಯುವು ಶೀಘ್ರವಾಗಿ ಮತ್ತು ದೃಢವಾಗಿ ಮರ್ಮಭೇದಿಗಳಾದ ಬಾಣಗಳಿಂದ ಹೊಡೆದನು.

ತೇ ಹನ್ಯಮಾನಾ ಹಿ ತಥಾ ನಾನಾಲಿಂಗೈಃ ಶಿತೈಃ ಶರೈಃ ।
ಅಭಿಪೇತುಸ್ತಮೇವಾಜೌ ಶಲಭಾ ಇವ ಪಾವಕಮ್ ॥ ೨೭ ॥

ಅವರು ಅಭಿಮನ್ಯುವಿನ ನಾನಾಕಾರವೂ, ಹರಿತವೂ ಆದ ಬಾಣಗಳಿಂದ ಹೊಡೆಯಲ್ಪಡುತ್ತಿದ್ದರೂ ಪತಂಗಗಳು ಅಗ್ನಿಯ ಮೇಲೆ ಎರಗಿದಂತೆ ರಣರಂಗದಲ್ಲಿ ಅವನ ಮೇಲೆಯೇ ಎರಗಿದರು.

ತತಸ್ತೇಷಾಂ ಶರೀರೈಶ್ಚ ಶರೀರಾವಯವೈಶ್ಚ ಸಃ ।
ಸಂತಸ್ತಾರ ಕ್ಷಿತಿಂ ಕ್ಷಿಪ್ರಂ ಕುಶೈರ್ವೇದಿಮಿವಾಧ್ವರೇ ॥ ೨೮ ॥

ಆಗ ಅವನು ಅವರ ಶರೀರಗಳಿಂದಲೂ, ಶರೀರಾವಯವಗಳಿಂದಲೂ, ಯಜ್ಞವೇದಿಯನ್ನು ಕುಶಗಳಿಂದ ಹರಡಿದಂತೆ ಭೂಮಿಯನ್ನು ಶೀಘ್ರವಾಗಿ ಹರಡಿದನು.

ಬದ್ಧಗೋಧಾಂಗುಲತ್ರಾಣಾನ್ ಸಶರಾಸನಸಾಯಕಾನ್ ।
ಸಾಸಿಚರ್ಮಾಂಕುಶಾಭೀಶೂನ್ ಸತೋಮರಪರಶ್ವಧಾನ್ ॥ ೨೯ ॥

ಗದಾಖಡ್ಗಹುಲಪ್ರಾಸಾನ್ ಸರ್ಷ್ಟಿತೋಮರಪಟ್ಟಸಾನ್ ।
ಸಭಿಂಡಿಪಾಲಪರಿಘಾನ್ ಸಶಕ್ತಿನಖರಾನ್ ಪರಾನ್ ॥ ೩೦ ॥

ಸಪ್ರತೋದಮಹಾಶಂಖಾನ್ ಸಕುಂತಾನ್ ಸಕಚಗ್ರಹಾನ್ ।
ಸಮುದ್ಗರಕ್ಷೇಪಣೀಯಾನ್ ಸಪಾಶಾನ್ ಪರಿಘೋಪಮಾನ್ ॥ ೩೧ ॥

ಸಕೇಯೂರಾಂಗದಾನ್ ಬಾಹೂನ್ ಪುಣ್ಯಗಂಧಾನುಲೇಪನಾನ್ ।
ಸಂಚಿಚ್ಛೇದಾऽऽರ್ಜುನಿರ್ವೃತ್ತಾನ್ ತ್ವದೀಯಾನಾಂ ಸಹಸ್ರಶಃ ॥ ೩೨ ॥

ಗೋಧಾಂಗುಲಿತ್ರಾಣಗಳನ್ನು ಹೊಂದಿದ, ಧನುರ್ಬಾಣಗಳನ್ನು ಹಿಡಿದ, ಖಡ್ಗ-ಚರ್ಮ-ಅಂಕುಶಗಳನ್ನು ಹಿಡಿದ, ತೋಮರ-ಪರಶ್ವಧಗಳಿಂದ ಸಹಿತವಾದ, ಹುಲ-ಖಡ್ಗ-ಗದಾ-ಪ್ರಾಸಗಳನ್ನು ಧರಿಸಿದ, ಋಷ್ಟಿ-ತೋಮರ-ಪಟ್ಟಸಗಳನ್ನು ಧರಿಸಿದ, ಭಿಂಡಿಪಾಲ-ಪರಿಘಗಳನ್ನು ಹಿಡಿದ, ಶಕ್ತಿ-ನಖಿಗಳನ್ನು ಹಿಡಿದ, ಚಾವಟಿ ಮತ್ತು ಶಂಖಿಗಳನ್ನು ಹಿಡಿದ, ಕುಂತಗಳನ್ನು ಮತ್ತು ಕಚಗ್ರಹಗಳನ್ನು ಹಿಡಿದ, ಮುದ್ಗರಕ್ಷೇಪಣಗಳನ್ನೂ, ಪರಿಘಗಳಂತಿರುವ ಪಾಶಗಳನ್ನೂ ಹಿಡಿದ, ಕೇಯೂರಾಂಗ ಭೂಷಿತವಾದ, ಪುಣ್ಯಗಂಧಗಳಿಂದ ಲಿಪ್ತವಾದ ನಿನ್ನವರ ಬಾಹುಗಳನ್ನು ಅಭಿಮನ್ಯುವು ಸಹಸ್ರ ಸಂಖ್ಯೆಯಲ್ಲಿ ಕತ್ತರಿಸಿದನು.

ತೈಃ ಸ್ಫುರದ್ಭಿರ್ಮಹೀ ಭಾತಿ ಬೃಹದ್ಭಿರ್ಭೋಹಿತೋಕ್ಷಿತೈಃ ।
ಪಂಚಾಸ್ಯೈಃ ಪನ್ನಗೈಶ್ಚಿನ್ನೈರ್ಗರುಡೇನೇವ ಮಾರಿಷ ॥ ೩೩ ॥

ಎಲೈ ಪೂಜ್ಯನೇ, ರಕ್ತಸಿಕ್ತವಾದ ದೊಡ್ಡದಾದ ಅವುಗಳು ಭೂಮಿಯ ಮೇಲೆ ಬಿದ್ದು, ಅವುಗಳಿಂದ ಭೂಮಿಯು ಸಿಂಹದಿಂದ ಛಿನ್ನವಾದ ಪ್ರಾಣಿಗಳಿಂದ, ಗರುಡನಿಂದ ಛಿನ್ನವಾದ ಸರ್ಪಗಳಿಂದ ಹರಡಿರುವಂತೆ ತೋರಿತು.

ಸುನಾಸಾನನಕೇಶಾಂತೈರವ್ರಣೈಶ್ಚಾರುಕುಂಡಲೈಃ ।
ಸಂದಷ್ಟೌಷ್ಠಪುಟೈಃ ಕ್ರೋಧಾದ್ ಅಸೃಗಾಕ್ತೈಃ ಸಮಂತತಃ ॥ ೩೪ ॥

ಚಾರುಸ್ರಜ್ಮುಕುಟೋಷ್ಣೀಷೈರ್ಮಣಿರತ್ನವಿರಾಜಿತೈಃ ।
ವಿನಾಳನಳಿನಾಕಾರೈರ್ದಿವಾಕರಶಶಿಪ್ರಭೈಃ ॥ ೩೫ ॥

ಹಿತಪ್ರಿಯಂವದ್ಯೈಃ ಕಾಲೇ ಬಹುಭಿಃ ಪುಣ್ಯಗಂಧಿಭಿಃ ।
ದ್ವಿಷಚ್ಛಿರೋಭಿರ್ಜಗತೀಮವತಸ್ತಾರ ಫಾಲ್ಗುನಿಃ ॥ ೩೬ ॥

ಅಭಿಮನ್ಯುವು ಒಳ್ಳೆಯ ನಾಸಾಮುಖ ಮತ್ತು ಕೇಶಾಂತವವನ್ನು ಹೊಂದಿದ, ಗಾಯಗೊಳ್ಳದ, ಸುಂದರವಾದ ಕುಂಡಲಗಳನ್ನು ಧರಿಸಿದ, ಕೋಪದಿಂದ ಹಲ್ಲುಮುಡಿಗಳನ್ನು ಕಚ್ಚಿದ, ಎಲ್ಲ ಕಡೆಯಲ್ಲಿಯೂ ರಕ್ತದಿಂದ ತೋಯ್ದ ಒಳ್ಳೆಯ ಹೂಮಾಲೆಗಳನ್ನು, ಕಿರೀಟಗಳನ್ನು ಮತ್ತು ಉಷ್ಣೀಷಗಳನ್ನು ಧರಿಸಿದ, ಮಣಿರತ್ನಗಳಿಂದ ವಿರಾಜಿತವಾದ, ನಾಳವಿಲ್ಲದ ಪದ್ಮಗಳನ್ನು ಹೋಲುವ, ಸೂರ್ಯ-ಚಂದ್ರರ ಕಾಂತಿಯಿಂದ ಕೂಡಿದ, ಯೋಗ್ಯವಾದ ಕಾಲದಲ್ಲಿ ಹಿತವಾದ ಮತ್ತು ಪ್ರಿಯವಾದ ವಚನಗಳಿಂದ ಕೂಡಿದ, ಅನೇಕ ಸುಗಂಧದಿಂದ ಯುಕ್ತವಾದ, ಶತ್ರುಗಳ ಶಿರಸ್ಸಿನಿಂದ ಭೂಮಿಯನ್ನು ಹರಡಿದನು.

ಗಂಧರ್ವನಗರಾಕಾರಾನ್ ವಿಧಿವತ್ ಕಲ್ಪಿತಾನ್ ರಥಾನ್ ।
ಸಮಾಸ್ಥಿತಾನ್ ಯೋಧವರೈರ್ದಾಂತಾಶ್ವಾನ್ ಸಾಧುಸಾರಥೀನ್ ॥೩೭॥

ವಿಪತಾಕಾಧ್ವಜಚ್ಛತ್ರಾನ್ ವಿತೂಣೀರಾಯುಧಾನಪಿ ।
ವಿಸೂತಾಶ್ವರಥಾಭೀಶೂನ್ ವಿಶಮ್ಯಾಯೋಕ್ತದಂಡಕಾನ್ ॥ ೩೮ ॥

ವೀಷಾಮುಖಾನ್ ವಿತ್ರಿದಂಡಾನ್ ಧ್ವಸ್ತಾವಸ್ಕರಬಂಧುರಾನ್ ।
ವಿಜಂಘಕೂಬರಾಕ್ಷಾಂಶ್ಚ ವಿನೇಮೀಂಶ್ಚ ವ್ಯರಾನಪಿ ॥ ೩೯ ॥

ವಿಚಕ್ರೋಪಸ್ಕರೋಪಸ್ಥಾನ್ ಭಗ್ನೋಪಕರಣಾನಪಿ ।
ಪ್ರಶಾತಿತೋಪಕರಣಾನ್ ಹತಯೋಧಾನ್ ಸಹಸ್ರಶಃ ।
ಶರೈರ್ವಿಶಕಲೀಕುರ್ವನ್ ದಿಕ್ಷು ಸರ್ವಾಸ್ವದೃಶ್ಯತ ॥ ೪೦ ॥

ಗಂಧರ್ವನಗರದಂತಿರುವ, ಶಾಸ್ತ್ರೋಕ್ತ ರೀತಿಯಲ್ಲಿ ಸಿದ್ಧಪಡಿಸಿದ, ಯೋಧಶ್ರೇಷ್ಠರಿಂದ ಅಧಿಷ್ಠಿತವಾದ, ಪಳಗಿದ ಅಶ್ವಗಳನ್ನು ಹೊಂದಿದ, ಪರಿಣತರಾದ ಸಾರಥಿಗಳನ್ನು ಹೊಂದಿದ ರಥಗಳನ್ನು ಪತಾಕ-ಧ್ವಜ-ಛತ್ರ ಹೀನಗಳನ್ನಾಗಿ, ಬತ್ತಳಿಕೆ-ಆಯುಧಗಳಿಂದ ರಹಿತಗಳನ್ನಾಗಿ, ಸೂತಾಶ್ವ-ರಥ-ಗಜಗಳಿಂದ ಹೀನಗಳನ್ನಾಗಿ, ಕಡಾಣಿ-ಯೋಕ್ತ್ರ ಮತ್ತು ದಂಡಗಳಿಂದ ರಹಿತರನ್ನಾಗಿ, ಮೂಕಿಗಳಿಂದ ಮತ್ತು ತ್ರಿದಂಡಗಳಿಂದ ರಹಿತಗಳನ್ನಾಗಿ, ಮುರಿಯಲ್ಪಟ್ಟ ಅವಸ್ಥರ ಮತ್ತು ಬಂಧುಗಳಿಂದ ಕೂಡಿದುವುಗಳನ್ನಾಗಿ, ಜಂಘ-ಕೂಬರ-ತೂಬುಗಳಿಂದ ರಹಿತಗಳನ್ನಾಗಿ, ಚಕ್ರಗಳ ಪರಿಧಿಯಿಂದಲೂ ಮತ್ತು ಅರಗಳಿಂದಲೂ ರಹಿತಗಳನ್ನಾಗಿ, ಚಕ್ರಗಳ ಸಮೀಪದ ಉಪಕರಣಗಳಿಂದ ರಹಿತಗಳನ್ನಾಗಿ, ಭಗ್ನವಾದ ಇತರ ಉಪಕರಣಗಳನ್ನು ಹೊಂದಿದವುಗಳನ್ನಾಗಿ, ಹತರಾದ ಯೋಧರನ್ನು ಉಳ್ಳವುಗಳನ್ನಾಗಿ ಮಾಡಿ, ಅಭಿಮನ್ಯುವು ತನ್ನ ಬಾಣಗಳಿಂದ ಸಹಸ್ರ ಸಂಖ್ಯೆಯಲ್ಲಿ ಅವುಗಳನ್ನು ಪುಡಿ ಮಾಡುವವನಾಗಿ ಎಲ್ಲ ದಿಕ್ಕುಗಳಲ್ಲಿಯೂ ಕಂಡುಬಂದನು.

ಪುನರ್ದ್ವಿಪಾನ್ ದ್ವಿಪಾರೋಹಾನ್ ವೈಜಯಂತ್ಯಂಕುಶಧ್ವಜಾನ್ ।
ತೂಣೀನ್ ವರ್ಮಾಣ್ಯಥೋ ಕಕ್ಷ್ಯಾ ಗ್ರೈವೇಯಾನ್ ರಕ್ತಕಂಬಲಾನ್ ॥

ಘಂಟಾಕರ್ಣಾನ್ ವಿಷಾಣಾಗ್ರಾನ್ ಕ್ಷುರಮಾಲಾಃ ಪದಾನುಗಾನ್ ।
ಶರೈರ್ನಿಕೃತ್ಯ ಸೌಭದ್ರಃ ಶಾತ್ರವಾಣಾಮಶಾತಯತ್ ॥ ೪೨ ॥

ಪುನಃ ಗಜಗಳನ್ನೂ, ಗಜಾರೋಹಿಗಳನ್ನೂ, ಗಜಗಳ ವೈಜಯಂತಿ ಮಾಲೆ, ಅಂಕುಶ ಮತ್ತು ಧ್ವಜಗಳನ್ನೂ, ಬತ್ತಳಿಕೆಗಳನ್ನೂ, ಕವಚಗಳನ್ನೂ, ಸರಪಣಿಗಳನ್ನೂ, ಕಂಠಹಾರಗಳನ್ನೂ, ರಕ್ತಕಂಬಳಿಗಳನ್ನೂ, ಕರ್ಣಘಂಟೆಗಳನ್ನೂ, ದಂತದ ತುದಿಗಳನ್ನೂ, ಕ್ಷುರಮಾಲೆಗಳನ್ನೂ ಮತ್ತು ಗಜಾನುಯಾಯಿಗಳನ್ನೂ ಅಭಿಮನ್ಯುವು ತನ್ನ ಬಾಣಗಳಿಂದ ಕತ್ತರಿಸಿ ಶತ್ರುಗಳನ್ನು ವಿನಾಶಗೊಳಿಸಿದನು.

ವನಾಯುಜಾನ್ ಪಾರ್ವತೀಯಾನ್ ಕಾಂಬೋಜಾರಟ್ಟಬಾಹ್ಲಿಕಾನ್ ।
ಸ್ಥಿರಾಲಧಿಕರ್ಣಾಕ್ಷಾನ್ ಜವನಾನ್ ಸಾಧುವಾಹಿನಃ ॥ ೪೩ ॥

ಸ್ವಾರೂಢಾನ್ ಶಿಕ್ಷಿತೈರ್ಯೋಧೈಃ ಶಕ್ತ್ಯೃಷ್ಟಿ ಪ್ರಾಸಯೋಧಿಭಃ ।
ವಿಧ್ವಸ್ತಚಾಮರಕುಥಾನ್ ವಿಪ್ರವಿದ್ಧಪ್ರಕೀರ್ಣಕಾನ್ ॥ ೪೪ ॥

ನಿರಸ್ತಜಿಹ್ವಾದಶನಾನ್ ನಿಷ್ಕೀರ್ಣಾಂತ್ರಯಕೃದ್ಭಟಾನ್ ।
ಹತಾರೋಹಾನ್ ಭಿನ್ನಭಾಂಡಾನ್ ಕ್ರವ್ಯಾದಗಣಮೋದನಾನ್ ॥೪೫॥

ನಿಕೃತ್ತವರ್ಮಕವಚಾನ್ ಶಕೃನ್ಮೂತ್ರಾಸೃಗಾಪ್ಲುತಾನ್ ।
ನಿಪಾತಯನ್ನಶ್ವವರಾನ್ ತಾವಕಾನ್ ಸೋಽತ್ಯರೋಚತ ॥ ೪೬ ॥

ವನಾಯುದೇಶದಲ್ಲಿ ಜನಿಸಿದ, ಪರ್ವತದೇಶದಲ್ಲಿ ಜನಿಸಿದ, ಕಾಂಬೋಜ-ಅರಟ್ಟ-ಬಾಹ್ಲಿಕ ದೇಶದಲ್ಲಿ ಜನಿಸಿದ, ಸ್ಥಿರವಾದ-ವಾಲಧಿ-ಕರ್ಣ ಮತ್ತು ಕಣ್ಣುಗಳನ್ನು ಹೊಂದಿದ, ವೇಗಶಾಲಿಗಳಾದ ಚೆನ್ನಾಗಿ ರಥವನ್ನು ಎಳೆಯುವ, ಶಕ್ತಿ-ಋಷ್ಟಿ-ಪ್ರಾಸಗಳಿಂದ ಯುದ್ಧವನ್ನು ಮಾಡುವ ಶಿಕ್ಷಿತರಾದ ಒಳ್ಳೆಯ ಯೋಧರಿಂದ ಚೆನ್ನಾಗಿ ಆರೂಢಗಳಾದ ಅಶ್ವಗಳನ್ನು, ಅವುಗಳ ಚಾಮರ ಮತ್ತು ಕಂಬಳಿಗಳನ್ನು ವಿಧ್ವಂಸ ಮಾಡಿ, ಅವುಗಳ ಇತರ ಸಲಕರಣೆಗಳನ್ನೂ ಭಗ್ನಗೊಳಿಸಿ, ಅವುಗಳನ್ನು ಜಿಹ್ವಾ-ದಂತಗಳಿಂದ ಹೀನಗಳನ್ನಾಗಿ ಮಾಡಿ, ಅವುಗಳ ಕರುಳು ಮೊದಲಾದವುಗಳು ಹೊರಗೆ ಬರುವಂತೆ ಮಾಡಿ, ಆರೋಹಿಗಳನ್ನು ಕೊಂದು, ಸುವರ್ಣಾಭರಣಗಳನ್ನು ಭೇದಿಸಿ, ಅವುಗಳ ಕವಚಗಳನ್ನು ಭೇದಿಸಿ, ಮಲ-ಮೂತ್ರ-ರಕ್ತ ಆವೃತವಾದ, ಮಾಂಸಾಹಾರಿ ಪ್ರಾಣಿಗಣಕ್ಕೆ ಸಂತೋಷವನ್ನು ಕೊಡುವ ನಿನ್ನ ಸೈನ್ಯದ ಶ್ರೇಷ್ಠವಾದ ಅಶ್ವಗಳನ್ನು ಹೊಡೆದುರುಳಿಸುತ್ತಾ ಅಭಿಮನ್ಯುವು ಬಹಳವಾಗಿ ಶೋಭಿಸಿದನು.

ಏಕೋ ವಿಷ್ಣುರಿವಾಚಿಂತ್ಯಃ ಕೃತವಾನ್ ಕರ್ಮ ದುಷ್ಕರಮ್ ॥೪೭॥

ತಥಾ ವಿಮಥಿತಂ ತೇನ ಚತುರಂಗಬಲಂ ಮಹತ್ ।
ನ್ಯಹನತ್ ತಾನ್ ಪದಾತ್ಯೋಘಾನ್ ತ್ವದೀಯಾನೇವ ಭಾರತ ॥೪೮॥

ಸರ್ವೋತ್ತಮನಾದ ವಿಷ್ಣುವಿನಂತೆ ಅಚಿಂತ್ಯನಾದ ಅವನು ದುಷ್ಕರವಾದ ಕರ್ಮವನ್ನು ಮಾಡಿದನು. ಅವನಿಂದ ಆ ರೀತಿಯಲ್ಲಿ ಮರ್ದಿಸಲ್ಪಟ್ಟ ದೊಡ್ಡ ಚದುರಂಗ ಬಲವು ಓಡುತ್ತಾ ನಿನ್ನ ಪದಾತಿ ಸಮೂಹಗಳನ್ನೇ ಕೊಂದಿತು.

ಯಥಾಽಸುರಬಲಂ ಘೋರಂ ತ್ರ್ಯಂಬಕೇಣಾಮಿತೌಜಸಾ ।
ಕೃತ್ವಾ ಕರ್ಮ ರಣೇಽಸಹ್ಯಂ ಪರೈರಾರ್ಜುನಿರಾಹವೇ ॥ ೪೯ ॥

ಘೋರವಾದ ಅಸುರಸೇನೆಯನ್ನು ಅಮಿತಪರಾಕ್ರಮಿಯಾದ ಈಶ್ವರನು ಮರ್ದಿಸಿದಂತೆ ಅಭಿಮನ್ಯುವು ಯುದ್ಧದಲ್ಲಿ ಶತ್ರುಗಳು ಸಹಿಸಲು ಸಾಧ್ಯವಾಗದಂತಹ ಕರ್ಮವನ್ನು ಮಾಡಿದನು.

ಏವಮೇಕೇನ ತೇ ಸೇನಾಂ ಸೌಭದ್ರೇಣ ಶಿತೈಃ ಶರೈಃ ।
ಭೃಶಂ ವಿಪ್ರಹತಾಂ ದೃಷ್ಟ್ವಾ ಸ್ಕಂದೇನೇವಾಸುರೀಂ ಚಮೂಮ್ ॥ ೫೦ ॥

ತ್ವದೀಯಾಸ್ತವ ಪುತ್ರಾಶ್ಚ ವೀಕ್ಷಮಾಣಾ ದಿಶೋ ದಶ ।
ಸಂಶುಷ್ಕಾಸ್ಯಾಶ್ಚಲನ್ನೇತ್ರಾಃ ಪ್ರಸ್ವಿನ್ನಾ ಲೋಮಹರ್ಷಣಾಃ ॥ ೫೧ ॥

ಪಲಾಯನಕೃತೋತ್ಸಾಹಾ ನಿರುತ್ಸಾಹಾ ದ್ವಿಷಜ್ಜಯೇ ।
ಗೋತ್ರನಾಮಭಿರನ್ಯೋನ್ಯಂ ಕ್ರಂದಂತೋ ಜೀವಿತೈಷಿಣಃ ॥ ೫೨ ॥

ಹತಾನ್ ಭ್ರಾತೄನ್ ಪಿತೄನ್ ಪುತ್ರಾನ್ ಪ್ರಿಯಾನ್ ಸಂಬಂಧಿಬಾಂಧವಾನ್।
ಉತ್ಸೃಜ್ಯೋತ್ಸೃಜ್ಯ ಗಚ್ಛಂತಿ ಸೌಭದ್ರಶರಪೀಡಿತಾಃ ।
ಪ್ರಾತಿಷ್ಠಂತ ಸಮುತ್ಸೃಜ್ಯ ತ್ವರಯಂತೋ ರಥದ್ವಿಪಾನ್ ॥ ೫೩ ॥

ಸ್ಕಂಧನು ಅಸುರ ಸೇನೆಯನ್ನು ನಾಶಪಡಿಸಿದಂತೆ ಒಬ್ಬ ಅಭಿಮನ್ಯುವಿನಿಂದ ಹರಿತವಾದ ಬಾಣಗಳಿಂದ ಚೆನ್ನಾಗಿ ಹತವಾದ ನಿನ್ನ ಸೈನ್ಯವನ್ನು ನೋಡಿ ನಿನ್ನ ಯೋಧರು ಮತ್ತು ನಿನ್ನ ಪುತ್ರರು ಹತ್ತುದಿಕ್ಕುಗಳನ್ನು ನೋಡುತ್ತಾ, ಒಣಗಿದ ಮುಖವುಳ್ಳವರಾಗಿ, ಚಂಚಲ ದೃಷ್ಟಿಯುಳ್ಳವರಾಗಿ, ಬೆವರಿ, ರೋಮಾಂಚನಗೊಂಡು, ಶತ್ರುಗಳನ್ನು ಜಯಿಸುವುದರಲ್ಲಿ ಉತ್ಸಾಹವನ್ನು ಕಳೆದುಕೊಂಡು, ಪಲಾಯನ ಮಾಡುವುದರಲ್ಲಿ ಉತ್ಸಾಹಭರಿತರಾಗಿ, ಬದುಕಲು ಬಯಸಿ, ಗೋತ್ರ-ನಾಮಗಳಿಂದ ಪರಸ್ಪರವಾಗಿ ಕರೆಯುತ್ತಾ ಹೊಡೆಯಲ್ಪಟ್ಟ (ಹತರಾದ) ಸಹೋದರರನ್ನು, ಪಿತೃಗಳನ್ನು, ಪುತ್ರರನ್ನು, ಪ್ರಿಯರನ್ನು, ಸಂಬಂಧಿಬಾಂಧವರನ್ನು ಬಿಟ್ಟು-ಬಿಟ್ಟು ಅಭಿಮನ್ಯುವಿನ ಶರಪೀಡಿತರಾಗಿ ತಮ್ಮ ರಥ-ಗಜಗಳನ್ನು ತೊರೆಯುತ್ತಾ ರಣರಂಗದಿಂದ ಪಲಾಯನ ಮಾಡಿದರು.

ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಂ ದ್ರೋಣಪರ್ವಣಿ ಪಂಚತ್ರಿಂಶೋಽಧ್ಯಾಯಃ ॥
॥ ಅಭಿಮನ್ಯುವಧಪರ್ವಣಿ ಚತುರ್ಥೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಮೂವತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮೂವತ್ತಾರನೆಯ ಅಧ್ಯಾಯ

ಅಭಿಮನ್ಯುವಿನ ಪರಾಕ್ರಮದ ವರ್ಣನೆ.

ಸಂಜಯಃ

ತಾಂ ಪ್ರಭಗ್ನಾಂ ಚಮೂಂ ದೃಷ್ಟ್ವಾ ಸೌಭದ್ರೇಣಾಮಿತೌಜಸಾ ।
ದುರ್ಯೋಧನೋ ಭೃಶಂ ಕ್ರುದ್ಧಃ ಸ್ವಯಂ ಸೌಭದ್ರಮಭ್ಯಯಾತ್ ॥ ೧ ॥

ಸಂಜಯ– ಅಮಿತ ಸಾಮರ್ಥ್ಯವುಳ್ಳ ಅಭಿಮನ್ಯುವಿನಿಂದ ಭಗ್ನಗೊಳಿಸಲ್ಪಟ್ಟ ತನ್ನ ಸೈನ್ಯವನ್ನು ನೋಡಿ ದುರ್ಯೋಧನನು ಬಹಳ ಕೋಪಗೊಂಡು ತಾನೇ ಅಭಿಮನ್ಯುವಿನ ಮೇಲೆ ಎರಗಿದನು.

ತತೋ ರಾಜಾನಮಾವೃತ್ತಂ ಸೌಭದ್ರೇಣ ಯುಯುತ್ಸಯಾ ।
ದ್ರೋಣೋ ದೃಷ್ಟ್ವಾऽಬ್ರವೀದ್ ವೀರಾನ್ ಪರ್ಯಾಪ್ತ ನರಾಧಿಪಮ್ ॥

ಆಗ ಅಭಿಮನ್ಯುವಿನ ಜೊತೆಯಲ್ಲಿ ಯುದ್ಧಮಾಡಲು ಇಚ್ಛಿಸಿ, ಅವನ ಕಡೆಗೆ ಹೊರಟ ರಾಜನನ್ನು ನೋಡಿ ದ್ರೋಣರು ವೀರರನ್ನು ಕುರಿತು ರಾಜನನ್ನು ಸುತ್ತುವರಿಯಿರಿ ಎಂದು ಹೇಳಿದರು.

ಪುರಾऽಭಿಮನ್ಯುರ್ಲಕ್ಷಂ ನಃ ಪಶ್ಯತಾಂ ಹಂತಿ ವೀರ್ಯವಾನ್ ।
ತಮಾದ್ರವತ ಮಾ ಭೈಷ್ಟ ಕ್ಷಿಪ್ರಂ ರಕ್ಷತ ಕೌರವಮ್ ॥ ೩ ॥

ಪರಾಕ್ರಮಶಾಲಿಯಾದ ಅಭಿಮನ್ಯುವು ನಮ್ಮಲ್ಲಿ ಲಕ್ಷ ಯೋಧರನ್ನು ಕೊಲ್ಲುವುದಕ್ಕಿಂತ ಮುಂಚೆಯೇ ಅವನ ಮೇಲೆ ಧಾವಿಸಿ. ಹೆದರಬೇಡಿ, ಶೀಘ್ರವಾಗಿ ದುರ್ಯೋಧನನನ್ನು ರಕ್ಷಿಸಿ (ಎಂದು ಹೇಳಿದರು).

ತತಃ ಕೃತಜ್ಞಾ ಬಲಿನಃ ಸುಹೃದೋ ಜಿತಕಾಶಿನಃ ।
ತ್ರಾಯಮಾಣಾ ಭಯಾದ್ ವೀರಾಃ ಪರಿವವ್ರುಸ್ತವಾತ್ಮಜಮ್ ॥ ೪ ॥

ಆಗ ಕೃತಜ್ಞರೂ, ಬಲಿಷ್ಠರೂ, ಸುಹೃದರೂ, ಜಯಾಕಾಂಕ್ಷಿಗಳೂ ಆದ ವೀರರು ಭಯದಿಂದ ನಿನ್ನ ಪುತ್ರನನ್ನು ರಕ್ಷಿಸುತ್ತಾ ಅವನನ್ನು ಸುತ್ತುವರಿದರು.

ದ್ರೋಣೋ ದ್ರೌಣಿಃ ಕೃಪಃ ಕರ್ಣಃ ಕೃತವರ್ಮಾ ಚ ಸೌಬಲಃ ।
ಬೃಹದ್ಬಲೋ ಮದ್ರರಾಜೋ ಭೂರಿರ್ಭೂರಿಶ್ರವಾಃ ಶಲಃ ॥ ೫ ॥

ಪೌರವೋ ವೃಷಸೇನಶ್ಚ ವಿಸೃಜಂತಃ ಶರಾನ್ ಶಿತಾನ್ ।
ಸೌಭದ್ರಂ ಶರವರ್ಷೇಣ ಮಹತಾ ಸಮವಾರಯನ್ ॥ ೬ ॥

ದ್ರೋಣರು, ಅಶ್ವತ್ಥಾಮರು, ಕೃಪರು, ಕರ್ಣ, ಕೃತವರ್ಮ, ಶಕುನಿ, ಬೃಹದ್ಬಲ, ಶಲ್ಯ, ಭೂರಿ, ಭೂರಿಶ್ರವ, ಶಲ, ಪೌರವ, ವೃಷಸೇನ ಇವರು ಹರಿತವಾದ ಬಾಣಗಳನ್ನು ಪ್ರಯೋಗಿಸುತ್ತಾ, ತಮ್ಮ ಬಾಣಗಳ ದೊಡ್ಡ ಮಳೆಯಿಂದ ಅಭಿಮನ್ಯುವನ್ನು ತಡೆದರು.

ಸಮ್ಮೋಹಯಿತ್ವಾ ತಮಥ ದುರ್ಯೋಧನಮಮೋಚಯನ್ ।
ಆಸ್ಯಾದ್ ಗ್ರಾಸಮಿವಾಕ್ಷಿಪ್ತಂ ಮಮೃಷೇ ನಾರ್ದುನಾತ್ಮಜಃ ॥ ೭ ॥

ಅವರು ಅಭಿಮನ್ಯುವನ್ನು ಮರುಳುಗೊಳಿಸಿ ಬಾಣದ ಮಳೆಯಿಂದ ಬಾಯಲ್ಲಿ ಹಾಕಿದ ತುತ್ತಿನಂತೆ ಸಿಕ್ಕಿಬಿದ್ದಿದ್ದ ದುರ್ಯೋಧನನನ್ನು ಬಿಡಿಸಿದರು. ಅದನ್ನು ಅಭಿಮನ್ಯುವು ಸಹಿಸಲಿಲ್ಲ.

ತಾನ್ ಶರೌಘೇಣ ಮಹತಾ ಸಾಶ್ವಸೂತಾನ್ ಮಹಾರಥಾನ್ ।
ವಿಮುಖೀಕೃತ್ಯ ಸೌಭದ್ರಃ ಸಿಂಹನಾದಮಥಾನದತ್ ॥ ೮ ॥

ಅಶ್ವ-ಸೂತರಿಂದ ಸಹಿತರಾದ ಆ ಮಹಾರಥರನ್ನು ತನ್ನ ಬಾಣದ ದೊಡ್ಡ ಸಮೂಹದಿಂದ ವಿಮುಖರನ್ನಾಗಿ ಮಾಡಿ ಅಭಿಮನ್ಯುವು ಸಿಂಹನಾದವನ್ನು ಮಾಡಿದನು.

ತದೈನಂ ಕೋಷ್ಠಕೀಕೃತ್ಯ ರಥವಂಶೇನ ಮಾರಿಷ ।
ವ್ಯಸೃಜನ್ನಿಷುಜಾಲಾನಿ ನಾನಾಲಿಂಗಾನಿ ಸಂಘಶಃ ॥ ೯ ॥

ಆಗ ಅವರು ಅಭಿಮನ್ಯುವನ್ನು ಕೋಣೆಯಲ್ಲಿ ಕೂಡಿಹಾಕಿದಂತೆ ರಥಮೂಹದಿಂದ ಅವನನ್ನು ಸುತ್ತುವರಿದು ನಾನಾ ವಿಧವಾದ ಬಾಣ ಸಮೂಹಗಳನ್ನು ಅವನ ಮೇಲೆ ಗುಂಪು ಗುಂಪಾಗಿ ಪ್ರಯೋಗಿಸಿದರು.

ತಾನ್ಯಂತರಿಕ್ಷೇ ಚಿಚ್ಛೇದ ಪೌತ್ರಸ್ತವ ಶಿತೈಃ ಶರೈಃ ।
ತಾಂಶ್ಚೈವ ಪ್ರತಿವಿವ್ಯಾಧ ತದದ್ಭುತಮಿವಾಭವತ್ ॥ ೧೦ ॥

ನಿನ್ನ ಪೌತ್ರನಾದ ಅಭಿಮನ್ಯುವು ಹರಿತವಾದ ಬಾಣಗಳಿಂದ ಅವುಗಳನ್ನು ಅಂತರಿಕ್ಷದಲ್ಲಿಯೇ ಕತ್ತರಿಸಿದನು. ಮತ್ತು ಪ್ರತಿಯಾಗಿ ಆ ಮಹಾರಥರನ್ನು ಹೊಡೆದನು. ಅದು ಅದ್ಭುತವಾಗಿದ್ದಿತು.

ತತೋ ರಥಾಃ ಪದಾತ್ಯೋಘಾಃ ಕುಂಜರಾಃ ಸಾದಿನಶ್ಚ ಹ ।
ಕೋಪಿತಾಸ್ತೇನ ಶೂರೇಣ ಶರೈರಾಶೀವಿಷೋಪಮೈಃ ॥ ೧೧ ॥

ಪರಿವವ್ರುರ್ಜಿಘಾಂಸಂತಃ ಸೌಭದ್ರಮಪಲಾಯಿನಮ್ ॥ ೧೨ ॥

ಆಗ ರಥರೂ, ಪದಾತಿ ಸಮೂಹಗಳೂ, ಗಜಗಳೂ, ಅಶ್ವಾರೋಹಿಗಳೂ, ದೃಷ್ಟಿ ವಿಷವುಳ್ಳ ಸರ್ಪಗಳಿಗೆ ಸಮವಾದ ಬಾಣಗಳಿಂದ ಆ ಶೂರನಿಂದ ಹೊಡೆಯಲ್ಪಟ್ಟು, ಕೋಪಗೊಂಡವರಾಗಿ ಯುದ್ಧದಲ್ಲಿ ಹಿಮ್ಮೆಟ್ಟದ ಅಭಿಮನ್ಯುವನ್ನು ಕೊಲ್ಲಲು ಬಯಸಿ ಅವನನ್ನು ಸುತ್ತುವರಿದರು.

ಸಮುದ್ರವದಪರ್ಯಂತಂ ತ್ವದೀಯಂ ತದ್ ಬಲಾರ್ಣವಮ್ ।
ದಧಾರೈಕೋऽರ್ಜುನಿರ್ಬಾಣೈರ್ವೇಲೇವ ಮಕರಾಲಯಮ್ ॥ ೧೩ ॥

ಸಮುದ್ರದಂತೆ ಪಾರವೇ ಇಲ್ಲದಿದ್ದ ನಿನ್ನ ಸೈನ್ಯ ಸಾಗರವನ್ನು ಅರ್ಜುನ ಪುತ್ರನೊಬ್ಬನೇ ತನ್ನ ಬಾಣಗಳಿಂದ ತೀರವು ಸಮುದ್ರವನ್ನು ತಡೆದಂತೆ ತಡೆದನು.

ಧೀರಾಣಾಂ ಯುದ್ಧ್ಯಮಾನಾನಾಂ ನಿಘ್ನತಾಮಿತರೇತರಮ್ ।
ಅಭಿಮನ್ಯೋಃ ಪರೇಷಾಂ ಚ ನಾಸೀತ್ ಕಶ್ಚಿತ್ ಪರಾಙ್ಮುಖಃ ॥೧೪॥

ಅಭಿಮನ್ಯುವೂ ಮತ್ತು ಅವನ ಶತ್ರುಗಳಾದ ಧೀರರೂ, ಪರಸ್ಪರವಾಗಿ ಬಾಣವನ್ನು ಪ್ರಯೋಗ ಮಾಡುವವರೂ ಆದ ನಿನ್ನವರೂ ಯುದ್ಧವನ್ನು ಮಾಡುವಾಗ ಯಾರೂ ಹಿಮ್ಮೆಟ್ಟಲಿಲ್ಲ.

ತಸ್ಮಿನ್ ಸುಘೋರೇ ಸಂಗ್ರಾಮೇ ವರ್ತಮಾನೇ ಭಯಂಕರೇ ।
ದುಸ್ಸಹೋ ನವಭಿರ್ಬಾಣೈರಭಿಮನ್ಯುಮವಿದ್ಧ್ಯತ ॥ ೧೫ ॥

ಆ ಘೋರವಾದ ಮತ್ತು ಭಯಂಕರವಾದ ಯುದ್ಧವು ನಡೆಯುತ್ತಿರುವಾಗ ನಿನ್ನ ಪುತ್ರನಾದ ದುಸ್ಸಹನು ಒಂಬತ್ತು ಬಾಣಗಳಿಂದ ಅಭಿಮನ್ಯುವನ್ನು ಹೊಡೆದನು.

ದುಃಶಾಸನೋ ದ್ವಾದಶಭಿಃ ಕೃಪಃ ಶಾರದ್ವತಸ್ತ್ರಿಭಿಃ ।
ದ್ರೋಣಸ್ತು ಸಪ್ತದಶಭಿಃ ಶರೈರಾಶೀವಿಷೋಪಮೈಃ ॥ ೧೬ ॥

ವಿವಿಂಶತಿಸ್ತು ವಿಂಶತ್ಯಾ ಕೃತವರ್ಮಾ ಚ ಸಪ್ತಭಿಃ ।
ಬೃಹದ್ಬಲಸ್ತಥಾऽಷ್ಟಭಿರಶ್ವತ್ಥಾಮಾ ಚ ಪಂಚಭಿಃ ॥ ೧೭ ॥

ಭೂರಿಶ್ರವಾಸ್ತ್ರಿಭಿರ್ಬಾಣೈರ್ಮದ್ರೇಶಃ ಷಡ್ಭಿರಾಶುಗೈಃ ।
ದ್ವಾಭ್ಯಾಂ ಶರಾಭ್ಯಾಂ ಶಕುನಿಃ ತ್ರಿಭಿರ್ದುರ್ಯೋಧನೋ ನೃಪಃ ॥ ೧೮ ॥

ದುಶ್ಶಾಸನನು ಹನ್ನೆರಡು ಬಾಣಗಳಿಂದಲೂ, ಶಾರದ್ವತರಾದ ಕೃಪರು ಮೂರು ಬಾಣಗಳಿಂದಲೂ, ದ್ರೋಣರು ಆಶೀವಿಷ ಸರ್ಪಗಳಿಗೆ ಸದೃಶವಾದ ಹದಿನೇಳು ಬಾಣಗಳಿಂದಲೂ, ವಿವಿಂಶತಿಯು ಇಪ್ಪತ್ತು ಬಾಣಗಳಿಂದಲೂ, ಕೃತವರ್ಮನು ಏಳು ಬಾಣಗಳಿಂದಲೂ, ಬೃಹದ್ಬಲನು ಎಂಟು ಬಾಣಗಳಿಂದಲೂ, ಅಶ್ವತ್ಥಾಮರು ಐದು ಬಾಣಗಳಿಂದಲೂ, ಭೂರಿಶ್ರವನು ಮೂರು ಬಾಣಗಳಿಂದಲೂ, ಶಲ್ಯನು ಶೀಘ್ರಗಾಮಿಯಾದ ಆರು ಬಾಣಗಳಿಂದಲೂ, ಶಕುನಿಯು ಎರಡು ಬಾಣಗಳಿಂದಲೂ, ದುರ್ಯೋಧನನು ಮೂರು ಬಾಣಗಳಿಂದಲೂ ಅವನನ್ನು ಹೊಡೆದರು.

ಸ ತು ತಾನ್ ಪ್ರತಿವಿವ್ಯಾಧ ತ್ರಿಭಿಸ್ತ್ರಿಭಿರಜಿಹ್ಮಗೈಃ ।
ನೃತ್ಯನ್ನಿವ ಮಹಾರಾಜ ಚಾಪಹಸ್ತೋ ಪ್ರತಾಪವಾನ್ ॥ ೧೯ ॥

ಎಲೈ ಮಹಾರಾಜನೇ, ಪರಾಕ್ರಮಶಾಲಿಯಾದ ಅವನು ಕೈಯಲ್ಲಿ ಧನುಸ್ಸನ್ನು ಹಿಡಿದು ನರ್ತನವನ್ನು ಮಾಡುವವನಂತೆ ಅವರಲ್ಲಿ ಪ್ರತಿಯೊಬ್ಬರನ್ನೂ ನೇರವಾಗಿ ಸಾಗುವ ಮೂರು-ಮೂರು ಬಾಣಗಳಿಂದ ಹೊಡೆದನು.

ತತೋऽಭಿಮನ್ಯುಃ ಸಂಕ್ರುದ್ಧಃ ತಾಸ್ಯಮಾನಸ್ತವಾತ್ಮಜೈಃ ।
ಏದರ್ಶಯಿಷ್ಯನ್ ಸುಮಹಚ್ಛಿಕ್ಷಾಬಲಕೃತಂ ಬಲಮ್ ॥ ೨೦ ॥

ಗರುಡಾನಿಲರಂಹೋಭಿರ್ಯಂತುಃ ಪ್ರೇಷ್ಯಕರೈರ್ಹಯೈಃ ।
ಅಭ್ಯದ್ರವತ ತಂ ಕಾರ್ಷ್ಣಿರಶ್ಮಕೇಂದ್ರಂ ಕೃತತ್ವರಃ ॥ ೨೧ ॥

ಆಗ ಅಭಿಮನ್ಯುವು ನಿನ್ನ ಪುತ್ರರಿಂದ ಪೀಡಿಸಲ್ಪಟ್ಟವನಾಗಿ, ಕೋಪಗೊಂಡು, ತನ್ನ ದೊಡ್ಡ ಶಿಕ್ಷಾಬಲವನ್ನು ಮತ್ತು ದೇಹಬಲವನ್ನು ತೋರಿಸುವವನಾಗಿ, ಗರುಡವೇಗ ಮತ್ತು ವಾಯುವೇಗವುಳ್ಳ ಸಾರಥಿಗೆ ಸರ್ವಥಾ ವಶವರ್ತಿಗಳಾದ ಕುದುರೆಗಳಿಂದ ಕೂಡಿದ ರಥದಲ್ಲಿ ತ್ವರೆಯಿಂದ ಅಶ್ಮಕರಾಜನನ್ನು ಕುರಿತು ಧಾವಿಸಿದನು.

ಅಶ್ವಾಂಶ್ಚಾಶ್ಮಕದಾಯಾದಸ್ತ್ವರಮಾಣೋऽಭ್ಯವಾರಯತ್ ।
ವಿವ್ಯಾಧ ಚೈನಂ ದಶಭಿರ್ಬಾಣೈಸ್ತಿಷ್ಠೇತಿ ಚಾಬ್ರವೀತ್ ॥ ೨೨ ॥

ತಸ್ಯಾಭಿಮನ್ಯುರ್ದಶಭಿರ್ಬಾಣೈಃ ಸೂತಂ ಹಯಾನ್ ಧ್ವಜಮ್ ।
ಬಾಹೂ ಧನುಃ ಶಿರಶ್ಚೋರ್ವ್ಯಾಂ ಸ್ಮಯಮಾನೋऽಭ್ಯಪಾತಯತ್ ॥

ಅಶ್ಮಕಪುತ್ರನು ತ್ವರೆಮಾಡಿ ಅವನ ಅಶ್ವಗಳನ್ನು ತಡೆದು, ಅವನ ಮೇಲೆ ಹತ್ತು ಬಾಣಗಳನ್ನು ಪ್ರಯೋಗಿಸಿ 'ನಿಲ್ಲು-ನಿಲ್ಲು' ಎಂದು ಹೇಳಿದನು. ಅಭಿಮನ್ಯುವು ಹತ್ತು ಬಾಣಗಳನ್ನು ಪ್ರಯೋಗಿಸಿ, ಅವನ ಸೂತನನ್ನೂ, ಅಶ್ವಗಳನ್ನೂ, ಧ್ವಜವನ್ನೂ, ಬಾಹುಗಳನ್ನೂ, ಧನುಸ್ಸನ್ನೂ, ಶಿರಸ್ಸನ್ನೂ ನಗುತ್ತಲೇ ಭೂಮಿಯ ಮೇಲೆ ಕೆಡವಿದನು.

ತತಸ್ತಸ್ಮಿನ್ ಹತೇ ವೀರೇ ಸೌಭದ್ರೇಣಾಶ್ಮಕೇಶ್ವರೇ ।
ಸಂಚಚಾಲ ಬಲಂ ಸರ್ವಂ ಪಲಾಯನಪರಾಯಣಮ್ ॥ ೨೪ ॥

ವೀರನಾದ ಆ ಅಶ್ಮಕರಾಜನು ಅಭಿಮನ್ಯುವಿನಿಂದ ಹತನಾಗುತ್ತಿರಲು ಸೈನ್ಯವೆಲ್ಲವೂ ಕ್ಷೋಭೆಗೊಂಡು ಪಲಾಯನ ಮಾಡುವ ಬುದ್ಧಿಯನ್ನು ಹೊಂದಿತು.

ತತಃ ಕರ್ಣಃ ಕೃಪೋ ದ್ರೋಣೋ ದ್ರೌಣಿರ್ಗಾಂಧಾರರಾಟ್ ಶಲಃ ।
ಶಲ್ಯೋ ಭೂರಿಶ್ರವಾಃ ಕ್ರಾಥಃ ಸೋಮದತ್ತೋ ವಿವಿಂಶತಿಃ ॥ ೨೫ ॥

ವೃಷಸೇನಃ ಸುಷೇಣಶ್ಚ ಕುಂಡಭೇದೀ ಪ್ರತರ್ದನಃ ।
ವೃಂದಾರಕೋ ಸಲಿಲೀಂಧ್ರಶ್ಚ ಪ್ರಬಾಹುರ್ದೀರ್ಘಲೋಚನಃ ॥ ೨೬ ॥

ದುರ್ಯೋಧನಶ್ಚ ಸಂಕ್ರುದ್ಧಃ ಶರವರ್ಷೈರವಾಕಿರನ್ ॥ ೨೭ ॥

ಆಗ ಕರ್ಣ, ಕೃಪರು, ದ್ರೋಣರು, ಅಶ್ವತ್ಥಾಮರು, ಶಕುನಿ, ಶಲ, ಶಲ್ಯ, ಭೂರಿಶ್ರವ, ಕ್ರಾಥ, ಸೋಮದತ್ತ, ವಿವಿಂಶತಿ, ವೃಷಸೇನ, ಸುಷೇಣ, ಕುಂಡಭೇದಿ,

ಪ್ರತರ್ದನ, ವ್ಯಂದಾರಕ, ಲಿಲೀಂದ್ರ, ಪ್ರಬಾಹು, ದೀರ್ಘಲೋಚನ, ದುರ್ಯೋಧನ- ಇವರೆಲ್ಲರೂ ಕೋಪಗೊಂಡು ಅಭಿಮನ್ಯುವಿನ ಮೇಲೆ ಬಾಣಗಳ ಮಳೆಯನ್ನು ಸುರಿಸಿದರು.

ಸೋಽತಿವಿದ್ಧೋ ಮಹೇಷ್ವಾಸೈರಭಿಮನ್ಯುರಜಿಹ್ಮಗೈಃ ।
ಶರಮಾದತ್ತ ಕರ್ಣಾಯ ಪರಕಾಯಾವಭೇದನಮ್ ॥ ೨೮ ॥

ಮಹಾಧನುರ್ಧಾರಿಗಳಿಂದ ನೇರವಾಗಿ ಸಾಗುವ ಬಾಣಗಳಿಂದ ಅತಿಯಾಗಿ ಪೀಡಿಸಲ್ಪಟ್ಟ ಅಭಿಮನ್ಯುವು ಕರ್ಣನನ್ನು ಉದ್ದೇಶಿಸಿ ಶರೀರಭೇದಕವಾದ ಒಂದು ಬಾಣವನ್ನು ತೆಗೆದುಕೊಂಡನು.

ತಸ್ಯ ಭಿತ್ತ್ವಾ ತನುತ್ರಾಣಂ ಕರ್ಣಂ ನಿರ್ಭಿದ್ಯ ಚಾಶುಗಃ ।
ಪ್ರಾವಿಶದ್ ಧರಣೀಂ ರಾಜನ್ ವಲ್ಮೀಕಮಿವ ಪನ್ನಗಃ ॥ ೨೯ ॥

ಶೀಘ್ರಗಾಮಿಯಾದ ಆ ಬಾಣವು ಕರ್ಣನ ಕವಚವನ್ನು ಭೇದಿಸಿ, ಕರ್ಣನನ್ನೂ ಭೇದಿಸಿ ಎಲೈ ರಾಜನೇ, ಸರ್ಪವು ಹುತ್ತದೊಳಗೆ ಹೋಗುವಂತೆ ಭೂಮಿಯನ್ನು ಪ್ರವೇಶಿಸಿತು.

ಸ ತೇನಾತಿಪ್ರಹಾರೇಣ ವ್ಯಥಿತೋ ವಿಹ್ವಲನ್ನಿವ ।
ಸಂಚಚಾಲ ತಥಾ ಕರ್ಣಃ ಕ್ಷಿತಿಕಂಪೇ ಯಥಾಽಚಲಃ ॥ ೩೦ ॥

ಆ ಗಾಢವಾದ ಪ್ರಹಾರದಿಂದ ವ್ಯಥೆಯನ್ನು ಹೊಂದಿ ವಿಹ್ವಲನಾದ ಕರ್ಣನು ಭೂಕಂಪದ ಸಮಯದಲ್ಲಿ ಪರ್ವತವು ಅಲ್ಲಾಡುವಂತೆ ತನ್ನ ರಥದಲ್ಲಿ ಅಲ್ಲಾಡಿದನು.

ಅಥಾನ್ಯೈರ್ನಿಶಿತೈರ್ಬಾಣೈಃ ಸುಷೇಣಂ ದೀರ್ಘಲೋಚನಮ್ ।
ಕುಂಡಭೇದಿಂ ಚ ಸಂಕ್ರುದ್ಧಃ ತ್ರಿಭಿಸ್ತ್ರೀನವಧೀದ್ ಬಲೀ ॥ ೩೧ ॥

ಅನಂತರ ನಿಶಿತವಾದ ಬೇರೆಯ ಮೂರು ಬಾಣಗಳನ್ನು ತೆಗೆದುಕೊಂಡು ಕೋಪಗೊಂಡ ಬಲಿಷ್ಠನಾದ ಅಭಿಮನ್ಯುವು ಸುಷೇಣ, ದೀರ್ಘಲೋಚನ, ಕುಂಡಭೇದಿ ಇವರನ್ನು ಕೊಂದನು.

ಕರ್ಣಸ್ತು ಪಂಚವಿಂಶತ್ಯಾ ನಾರಾಚಾನಾಂ ಸಮರ್ಪಯತ್ ।
ಅಶ್ವತ್ಥಾಮಾ ಚ ಸಪ್ತತ್ಯಾ ಕೃತವರ್ಮಾ ಚ ಸಪ್ತಭಿಃ ॥ ೩೨ ॥

ಸ ಶರಾಚಿತಸರ್ವಾಂಗಃ ಕ್ರುದ್ಧಃ ಶಕ್ರಾತ್ಮಜಾತ್ಮಜಃ ।
ವಿಚರನ್ ದೃಶ್ಯತೇ ಸೈನ್ಯೇ ಪಾಶಹಸ್ತ ಇವಾಂತಕಃ ॥ ೩೩ ॥

ಕರ್ಣನು ಅಭಿಮನ್ಯುವಿನ ಮೇಲೆ ಇಪ್ಪತ್ತೈದು ನಾರಾಚಗಳನ್ನೂ, ಅಶ್ವತ್ಥಾಮರು ಎಪ್ಪತ್ತು ಬಾಣಗಳನ್ನೂ, ಕೃತವರ್ಮನು ಏಳು ಬಾಣಗಳನ್ನೂ ಪ್ರಯೋಗಿಸಿದರು. ದೇಹದಲ್ಲೆಲ್ಲಾ ಬಾಣಗಳು ನಾಟಿ ಕೋಪಗೊಂಡಇಂದ್ರಪುತ್ರನ ಪುತ್ರನಾದ ಅಭಿಮನ್ಯುವು ರಣರಂಗದಲ್ಲಿಸಂಚರಿಸುತ್ತಾ ಹಸ್ತದಲ್ಲಿ ಪಾಶವನ್ನು ಹಿಡಿದ ಯಮನಂತೆ ಕಂಡನು.

ಸ ಶಲ್ಯಂ ಶರವರ್ಷೇಣ ಸಮೀಪಸ್ಥಮುವಾಕಿರತ್ ।
ಉದಕ್ರೋಶನ್ಮಹಾಬಾಹುಃ ತವ ಸೈನ್ಯಾನಿ ಭೀಷಯನ್ ॥ ೩೪ ॥

ಅವನು ಸಮೀಪದಲ್ಲಿದ್ದ ಶಲ್ಯನ ಮೇಲೆ ಬಾಣಗಳ ಮಳೆಯನ್ನು ಸುರಿಸಿದನು. ಮಹಾಬಾಹುವಾದ ಅವನು ನಿನ್ನ ಸೈನ್ಯಗಳಿಗೆ ಭಯವನ್ನುಂಟು ಮಾಡುತ್ತಾ ಸಿಂಹನಾದವನ್ನು ಮಾಡಿದನು.

ತತಃ ಸ ವಿದ್ಧೋऽಸ್ತ್ರವಿದಾ ಮರ್ಮಭೇದಿಭಿರಾಶುಗೈಃ ।
ಶಲ್ಯೋ ರಾಜನ್ ರಥೋಪಸ್ಥೇ ನಿಷಸಾದ ಮುಮೋಹ ಚ ॥ ೩೫ ॥

ಎಲೈ ರಾಜನೇ, ಆಗ ಅಸ್ತ್ರಜ್ಞನಾದ ಅಭಿಮನ್ಯುವಿನಿಂದ ಮರ್ಮಭೇದಿಗಳಾದ, ಶೀಘ್ರಗಾಮಿಗಳಾದ ಬಾಣಗಳಿಂದ ಹೊಡೆಯಲ್ಪಟ್ಟ ಶಲ್ಯನು ರಥದ ಮಧ್ಯಭಾಗದಲ್ಲಿ ಕುಸಿದು ಮೂರ್ಛೆಯನ್ನು ಹೊಂದಿದನು.

ತಂ ಹಿ ದೃಷ್ಟ್ವಾ ತಥಾ ವಿದ್ಧಂ ಸೌಭದ್ರೇಣ ಯಶಸ್ವಿನಾ ।
ಸಂಪ್ರಾದ್ರವಚ್ಚಮೂಃ ಸರ್ವಾ ಭಾರದ್ವಾಜಸ್ಯ ಪಶ್ಯತಃ ॥ ೩೬ ॥

ಕೀರ್ತಿವಂತನಾದ ಅಭಿಮನ್ಯುವಿನಿಂದ ಹಾಗೆ ಹೊಡೆಯಲ್ಪಟ್ಟು ಮೂರ್ಛೆ ಹೊಂದಿದ ಶಲ್ಯನನ್ನು ನೋಡಿ, ದ್ರೋಣರು ನೋಡುತ್ತಿರುವಂತೆಯೇ ಸೈನ್ಯವೆಲ್ಲವೂ ಓಡಿಹೋಯಿತು.

ಪ್ರೇಕ್ಷಂತಸ್ತಂ ಮಹಾಬಾಹುಂ ರುಗ್ಮಪುಂಖೈಃ ಸಮಾವೃತಮ್ ।
ತ್ವದೀಯಾ ಪ್ರಪಲಾಯಂತ ಮೃಗಾಃ ಸಿಂಹಾರ್ದಿತಾ ಇವ ॥ ೩೭ ॥

ಸೌಭದ್ರಶರನಿರ್ಭಿನ್ನಾಃ ಸಮರೇऽಮರವಿಕ್ರಮಾಃ ।
ಏವಂ ಶಲ್ಯೋ ವಿಮೃದಿತಃ ತವ ಪೌತ್ರೇಣ ಭಾರತ ॥ ೩೮ ॥

ರುಗ್ಮಪುಂಖಗಳುಳ್ಳ ಬಾಣಗಳಿಂದ ಸಮಾವೃತನಾದ ಶಲ್ಯನನ್ನು ನೋಡುತ್ತಾ, ಯುದ್ಧದಲ್ಲಿ ದೇವತೆಗಳ ವಿಕ್ರಮವನ್ನು ಹೊಂದಿದ್ದರೂ ಅಭಿಮನ್ಯುವಿನ ಬಾಣಗಳಿಂದ ಭೇದಿಸಲ್ಪಟ್ಟ ನಿನ್ನವರು ಸಿಂಹದಿಂದ ಪೀಡಿತವಾದ ಜಿಂಕೆಗಳಂತೆ ಓಡಿಹೋದರು. ಎಲೈ ಭಾರತನೇ, ನಿನ್ನ ಪೌತ್ರನಿಂದ ಶಲ್ಯನು ಹೀಗೆ ಮರ್ದಿಸಲ್ಪಟ್ಟನು.

ವಿಪುಲಬಲಯಶಾಃ ಸುಪೂಜ್ಯಮಾನಃ
ಸುರಮುನಿಚಾರಣಸಿದ್ಧಸಾಧ್ಯಸಂಘೈಃ ।
ಅವನಿತಳಗತೈಶ್ಚ ಭೂತಸಂಘೈಃ
ಅತಿವಿಬಭೌ ಹುತಭುಗ್ ಯಥಾऽऽಜ್ಯಸಿಕ್ತಃ ॥ ೩೯ ॥

ವಿಪುಲವಾದ ಬಲ ಮತ್ತು ಕೀರ್ತಿಯನ್ನು ಹೊಂದಿ, ಸುರ-ಋಷಿ-ಚಾರಣ-ಸಿದ್ಧಸಮೂಹಗಳಿಂದ ಪೂಜಿಸಲ್ಪಟ್ಟು, ಭೂತಳದಲ್ಲಿ ಇರುವ ಭೂತಸಂಘಗಳಿಂದಲೂ ಪೂಜಿಸಲ್ಪಟ್ಟು ಅಭಿಮನ್ಯುವು ಆಜ್ಯಸಿಕ್ತವಾದ ಅಗ್ನಿಯಂತೆ ಬಹಳವಾಗಿ ಶೋಭಿಸಿದನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಂ ದ್ರೋಣಪರ್ವಣಿ ಷಟ್ತ್ರಿಂಶೋऽಧ್ಯಾಯಃ ॥

॥ ಅಭಿಮನ್ಯುವಧಪರ್ವಣಿ ಪಂಚಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಮೂವತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮೂವತ್ತೇಳನೆಯ ಅಧ್ಯಾಯ

ಅಭಿಮನ್ಯುವಿನ ಪರಾಕ್ರಮದ ವರ್ಣನೆ.

ಧೃತರಾಷ್ಟ್ರಃ

ತಥಾ ಪ್ರಮಥಮಾನಂ ತಂ ಮಹೇಷ್ವಾಸಮಜಿಹ್ಮಗೈಃ ।
ಆರ್ಜುನಿಂ ಮಾಮಕಾಃ ಸಂಖ್ಯೇ ಕೇ ತತ್ರ ಸಮವಾರಯನ್ ॥ ೧ ॥

ಧೃತರಾಷ್ಟ್ರ– ಆ ರೀತಿಯಲ್ಲಿ ನೇರವಾಗಿ ಸಾಗುವ ಬಾಣಗಳಿಂದ ನನ್ನ ಸೈನ್ಯವನ್ನು ಮರ್ದಿಸುತ್ತಿದ್ದ ಮಹಾಧನುರ್ಧಾರಿಯಾದ ಅಭಿಮನ್ಯುವನ್ನು ನನ್ನವರು ಯಾರು ಯುದ್ಧದಲ್ಲಿ ತಡೆದರು?

ಸಂಜಯಃ

ಶೃಣು ರಾಜನ್ ಕುಮಾರಸ್ಯ ರಣೇ ವಿಕ್ರೀಡಿತಂ ಮಹತ್ ।
ಬಿಭತ್ಸತೋ ರಥಾನೀಕಂ ಭಾರದ್ವಾಜೇನ ರಕ್ಷಿತಮ್ ॥ ೨ ॥

ಸಂಜಯ– ರಾಜನೇ, ದ್ರೋಣರಿಂದ ರಕ್ಷಿತವಾದ ರಥಸಮೂಹವನ್ನು ಭೇದಿಸಲು ಬಯಸಿದ ಕುಮಾರನಾದ ಅಭಿಮನ್ಯುವು ರಣರಂಗದಲ್ಲಿ ಮಾಡಿದ ದೊಡ್ಡ ಲೀಲೆಯನ್ನು ಕೇಳು.

ಮದ್ರೇಶಂ ಸಾದಿತಂ ದೃಷ್ಟ್ವಾ ಸೌಭದ್ರೇಣಾಶುಗೈಃ ಶರೈಃ ।
ಶಲ್ಯಾದವರಜಃ ಕ್ರುದ್ಧಃ ಕಿರನ್ ಬಾಣಾನ್ ಸಮಭ್ಯಯಾತ್ ॥ ೩ ॥

ಶಲ್ಯನು ಶೀಘ್ರಗಾಮಿಗಳಾದ ಬಾಣಗಳಿಂದ ಪೀಡಿಸಲ್ಪಟ್ಟುದನ್ನು ನೋಡಿ ಕ್ರುದ್ಧನಾದ ಅವನ ತಮ್ಮನು ಬಾಣಗಳನ್ನು ಪ್ರಯೋಗಿಸುತ್ತಾ ಅಭಿಮನ್ಯುವನ್ನು ಸಮೀಪಿಸಿದನು.

ಆರ್ಜುನಿಂ ದಶಭಿರ್ವಿದ್ಧ್ವಾ ಸಾಶ್ವಯಂತಾರಮಾಶುಗೈಃ ।
ಉದಕ್ರೋಶನ್ಮಹಾಶಬ್ದಂ ತಿಷ್ಠ ತಿಷ್ಠೇತಿ ಚಾಬ್ರವೀತ್ ॥ ೪ ॥

ಅವನು ಅಶ್ವ-ಸಾರಥಿ ಸಹಿತನಾದ ಅಭಿಮನ್ಯುವನ್ನು ಶೀಘ್ರಗಾಮಿಗಳಾದ ಹತ್ತು ಬಾಣಗಳಿಂದ ಹೊಡೆದು ಮಹಾನಾದವನ್ನು ಮಾಡಿ 'ನಿಲ್ಲು-ನಿಲ್ಲು' ಎಂದು ಹೇಳಿದನು.

ತಸ್ಯಾರ್ಜುನಿಃ ಶಿರೋಗ್ರೀವಂ ಪಾಣಿಪಾದಂ ಧನುರ್ಹಯಾನ್ ।
ಛತ್ರಂ ಧ್ವಜಂ ನಿಯಂತಾರಂ ತ್ರಿವೇಣುಂ ಶಮ್ಯುಪಸ್ಕರಮ್ ॥ ೫ ॥

ಚಕ್ರೇ ಯುಗೇಷಾಂ ತೂಣೀರಾನ್ ಅನುಕರ್ಷಂ ಚ ಸಾಯಕೈಃ ।
ಪತಾಕಾಂ ಚಕ್ರಗೋಪ್ತಾರೌ ಸರ್ವೋಪಕರಣಾನಿ ಚ ।
ವ್ಯಧಮಲ್ಲಾಘವಾತ್ ತಸ್ಯ ದದೃಶೇ ನಾತ್ರ ಕಶ್ಚನ ॥ ೬ ॥

ಅಭಿಮನ್ಯುವು ಅವನ ಶಿರಸ್ಸು, ಕತ್ತು, ಪಾಣಿ-ಪಾದಗಳು, ಧನುಸ್ಸು, ಅಶ್ವಗಳು, ಛತ್ರ, ಧ್ವಜ, ಸಾರಥಿ, ರಥದ ತ್ರಿವೇಣು, ಕಡಗೂಟ ಮೊದಲಾದ ಉಪಕರಣಗಳು, ಚಕ್ರಗಳು, ನೊಗ, ಮೂಕಿ, ಬತ್ತಳಿಕೆಗಳು, ಸಣ್ಣನೊಗಗಳು, ಪತಾಕೆ, ಚಕ್ರರಕ್ಷಕರು, ಉಳಿದ ಉಪಕರಣಗಳು ಎಲ್ಲವನ್ನೂ ತನ್ನ ಬಾಣಗಳಿಂದ ನಾಶಗೊಳಿಸಿದನು. ಅವನ ಕ್ಷಿಪ್ರತನದಿಂದ ಅವನಲ್ಲಿ ಯಾರೂ ಕಾಣಲಿಲ್ಲ.

ಸ ಪಪಾತ ಕ್ಷಿತೌ ಕ್ಷೀಣಃ ಪ್ರವಿದ್ಧಾಭರಣಾಂಬರಃ ।
ವಾಯುನೇವ ಮಹಾಚೈತ್ಯಃ ಸಮೂಲಶ್ಚೋರುವೇದಿಕಃ ॥ ೭ ॥

ಶಲ್ಯನ ತಮ್ಮನು ತನ್ನ ವಸ್ತ್ರಾಭರಣಗಳು ಅಸ್ತವ್ಯಸ್ತವಾಗಿ ಮೃತನಾಗಿ, ದೊಡ್ಡ ವೇದಿಕೆಯ ಮೇಲೆ ನಿಂತ ಮಹಾಪೂಜ್ಯ ವೃಕ್ಷವು ವಾಯುವಿನಿಂದ ಉರುಳುವಂತೆ ಭೂಮಿಯ ಮೇಲೆ ಬಿದ್ದನು.

ಅನುಗಾಶ್ಚಾಸ್ಯ ವಿತ್ರಸ್ತಾ ವಿದ್ರುತಾಃ ಸರ್ವತೋದಿಶಮ್ ॥ ೮ ॥

ಅವನ ಅನುಯಾಯಿಗಳಾದರೋ ಹೆದರಿ ಎಲ್ಲ ದಿಕ್ಕುಗಳಲ್ಲಿಯೂ ಓಡಿ ಹೋದರು.

ತತ್ ತು ಕರ್ಮಾರ್ಜುನೇರ್ದೃಷ್ಟ್ವಾ ಪ್ರಣೇದುಃ ಸರ್ವತೋದಿಶಮ್ ।
ನಾದೇನ ಸರ್ವಭೂತಾನಿ ಸಾಧು ಸಾಧ್ವಿತಿ ಭಾರತ ॥ ೯ ॥

ಎಲೈ ಭಾರತನೇ, ಅಭಿಮನ್ಯುವಿನ ಆ ಕರ್ಮವನ್ನು ನೋಡಿ ಎಲ್ಲ ದಿಕ್ಕುಗಳಲ್ಲಿಯೂ ಎಲ್ಲ ಭೂತಗಳು 'ಸಾಧು-ಸಾಧು' ಎಂದು ಹೇಳುತ್ತಾ ದೊಡ್ಡ ನಾದವನ್ನು ಮಾಡಿದವು.

ಶಲ್ಯಭ್ರಾತರ್ಯಥಾರುಗ್ಣೇ ಹತಾಶ್ವಾಸ್ತವ ಸೈನಿಕಾಃ ।
ಕುಲಾಧಿವಾಸನಾಮಾನಿ ಶ್ರಾವಯಂತೋऽರ್ಜುನಾತ್ಮಜಮ್ ॥ ೧೦ ॥

ಅಭ್ಯದ್ರವನ್ ಸುಸಂಕ್ರುದ್ಧಾ ವಿವಿಧಾಯುಧಪಾಣಯಃ ।
ರಥೈರಶ್ವೈರ್ಗಜೈರನ್ಯೈಃ ಪಾದಾತಾಶ್ಚ ಮದೋತ್ಕಟಾಃ ॥ ೧೧ ॥

ಶಲ್ಯನ ತಮ್ಮನು ಹಾಗೆ ಹಿಂಸಿಸಲ್ಪಡಲು ಅಶ್ವಗಳನ್ನು ಕಳೆದುಕೊಂಡ ನಿನ್ನ ಸೈನಿಕರು ತಮ್ಮ ಕುಲಗಳ ಮತ್ತು ಕುಲ ವಾಸಸ್ಥಾನದ ಹೆಸರನ್ನು ಹೇಳುತ್ತಾ ವಿವಿಧ ಆಯುಧಗಳನ್ನು ಹಸ್ತದಲ್ಲಿ ಹಿಡಿದು, ಬಹಳ ಕೋಪಗೊಂಡವರಾಗಿ, ರಥಗಳಿಂದಲೂ, ಅಶ್ವಗಳಿಂದಲೂ, ಗಜಗಳಿಂದಲೂ, ಬೇರೆ ವಾಹನಗಳಿಂದಲೂ ಅಭಿಮನ್ಯುವಿನ ಕಡೆಗೆ ಓಡಿದರು. ಮದೋತ್ಕಟರಾದ ಪದಾತಿಗಳೂ ಅಭಿಮನ್ಯುವಿನ ಕಡೆಗೆ ನುಗ್ಗಿದರು.

ಬಾಣಶಬ್ದೇನ ಮಹತಾ ಖುರನೇಮಿಸ್ವನೇನ ಚ ।
ಹುಂಕಾರೈಃ ಕ್ಷ್ವೇಡಿತೋತ್ಕೃಷ್ಟೈಃ ಸಿಂಹನಾದ್ಯೈಃ ಸಗರ್ಜಿತೈಃ ॥ ೧೨ ॥

ಜ್ಯಾತಳತ್ರಸ್ವನೈಶ್ಚೈವ ಗರ್ಜಂತೋಽರ್ಜುನನಂದನಮ್ ।
ಬ್ರುವಾಣಾಶ್ಚ ನ ನೋ ಜೀವನ್ ಮೋಕ್ಷ್ಯಸೇ ಜೀವತಾಮಿತಿ ॥ ೧೩ ॥

ದೊಡ್ಡ ಬಾಣಶಬ್ದಗಳಿಂದಲೂ, ಅಶ್ವಗಳ ಮತ್ತು ರಥಗಳ ಖುರ-ನೇಮಿ ಶಬ್ದಗಳಿಂದಲೂ, ಹುಂಕಾರಗಳಿಂದಲೂ, ಸಿಂಹನಾದಗಳಿಂದಲೂ, ಗರ್ಜನೆಗಳಿಂದಲೂ, ಉಚ್ಚಸ್ವರದ ಮಾತುಗಳಿಂದಲೂ, ಹೆದೆ ಮತ್ತು ಹಸ್ತರಕ್ಷಣೆಯ ಶಬ್ದಗಳಿಂದಲೂ ಕೂಡಿ ಅಭಿಮನ್ಯುವನ್ನು ಕುರಿತು ನಾವು ಜೀವಿಸಿರುವಾಗ ನೀನು ನಮ್ಮಿಂದ ಬಿಡುಗಡೆಯನ್ನು ಹೊಂದುವುದಿಲ್ಲ ಎಂದು ಹೇಳುತ್ತಾ (ಅವನ ಮೇಲೆ ನುಗ್ಗಿದರು).

ತಾಂಸ್ತಥಾ ಬ್ರುವತೋ ದೃಷ್ಟ್ವಾ ಸೌಭದ್ರಃ ಪ್ರಹಸನ್ನಿವ ।
ಯೋ ಯೋಽಸೌ ಪ್ರಹರತ್ ಪೂರ್ವಂ ತಂ ತಂ ವಿವ್ಯಾಧ ಪತ್ರಿಭಿಃ ॥

ಹಾಗೆ ಹೇಳುವವರನ್ನು ನೋಡಿ ನಗುತ್ತಾ, ಅಭಿಮನ್ಯುವು ಯಾರು ಯಾರು ಮೊದಲು ಬಾಣಗಳನ್ನು ಪ್ರಯೋಗಿಸಿದರೋ ಅವರವರನ್ನು ತನ್ನ ಬಾಣಗಳಿಂದ ಹೊಡೆದನು.

ಸಂದರ್ಶಯಿಷ್ಯನ್ಸ್ತ್ರಾಣಿ ಚಿತ್ರಾಣಿ ಚ ಲಘೂನಿ ಚ ।
ಆರ್ಜುನಿಃ ಸಮರೇ ಶೂರೋ ಮೃದುಪೂರ್ವಮಯುದ್ಧ್ಯತ ॥ ೧೫ ॥

ತನ್ನ ಕ್ಷಿಪ್ರವಾದ ಮತ್ತು ವಿಚಿತ್ರವಾದ ಅಸ್ತ್ರಗಳನ್ನು ಪ್ರದರ್ಶಿಸುತ್ತಾ, ಶೂರನಾದ ಅಭಿಮನ್ಯುವು ಯುದ್ಧದಲ್ಲಿ ಮೊದಲು ಮೃದುವಾಗಿಯೇ ಯುದ್ಧವನ್ನು ಮಾಡಿದನು.

ವಾಸುದೇವಾದುಪಾದತ್ತಂ ಯದಸ್ತ್ರಂ ಯದ್ ಧನಂಜಯಾತ್ ।
ಸರ್ವಂ ಸಂದರ್ಶಯತ್ ಕಾರ್ಷ್ಣಿಃ ಕೃಷ್ಣಾಭ್ಯಾಮವಿಶೇಷತಃ ॥ ೧೬ ॥

ಕೃಷ್ಣನಿಂದ ಪಡೆದ ಮತ್ತು ಅರ್ಜುನನಿಂದ ಪಡೆದ ಎಲ್ಲ ಅಸ್ತ್ರಗಳನ್ನೂ ಅಭಿಮನ್ಯುವು ಕೃಷ್ಣಾರ್ಜುನರಿಗಿಂತ ಯಾವ ವ್ಯತ್ಯಾಸವೂ ಇಲ್ಲದಂತೆ ಪ್ರದರ್ಶಿಸಿದನು.

ದೂರಮಸ್ಯ ಗುರುಂ ಭಾರಂ ಸಾಧ್ವಸಂ ಚ ಪುನಃಪುನಃ ।
ಸಂದಧದ್ ವಿಸೃಜಂಶ್ಚೇಷೂನ್ ನಿರ್ವಿಶೇಷಮದೃಶ್ಯತ ॥ ೧೭ ॥

ಅವನ ದೊಡ್ಡ ಭಾರವನ್ನು ಮತ್ತು ಭಯವನ್ನು ದೂರ ಸರಿಸಿ, ಧನುಸ್ಸಿನಲ್ಲಿ ಬಾಣವನ್ನು ಹೂಡಿ ಪ್ರಯೋಗಿಸುತ್ತಾ, ಕೃಷ್ಣಾರ್ಜುನರಿಗೆ ಸಮಾನನಾಗಿ ಕಂಡುಬಂದನು.

ಚಾಪಮಂಡಲಮೇವಾಸ್ಯ ಸ್ಫುರದೇವ ಪ್ರಕಾಶತೇ ।
ತಮೋ ಘ್ನತಃ ಸುದೀಪ್ತಸ್ಯ ಸವಿತುರ್ಮಂಡಲಂ ಯಥಾ ॥ ೧೮ ॥

ಅವನ ಧನುಸ್ಸು ಯಾವಾಗಲೂ ಮಂಡಲಾಕಾರವಾಗಿ ಅಂಧಕಾರವನ್ನು ನಾಶಮಾಡುವ ಸುದೀಪ್ತವಾದ ಸವಿತೃಮಂಡಲದಂತೆ ಮಂಡಲಾಕಾರವಾಗಿ ಪ್ರಕಾಶಿಸುತ್ತಿದ್ದಿತು.

ಜ್ಯಾಶಬ್ದಃ ಶುಶ್ರುವೇ ತಸ್ಯ ತಳಶಬ್ದಶ್ಚ ಭಾರತ ।
ಮಹಾಶನಿಮುಚಃ ಕಾಲೇ ಪಯೋದಸ್ಯೇವ ನಿಸ್ವನಃ ॥ ೧೯ ॥

ಎಲೈ ಭಾರತನೇ, ಅವನ ಜ್ಯಾ ಶಬ್ದವೂ ಮತ್ತು ಹಸ್ತತಳ ಶಬ್ದವೂ ದೊಡ್ಡ ಸಿಡಿಲುಗಳನ್ನು ಉಂಟುಮಾಡುವ ಮೋಡಗಳ ಶಬ್ದದಂತೆ ಕೇಳಿಬರುತ್ತಿದ್ದಿತು.

ಹ್ರೀಮಾನಮರ್ಷೀ ಸೌಭದ್ರೋ ಮಾನಕೃತ್ ಪ್ರಿಯದರ್ಶನಃ ।
ಸಮ್ಮಿಮಾನಯಿಷುರ್ವೀರಾನ್ ಇಷ್ವಾಸಾಂಶ್ಚಾಪ್ಯಯುದ್ಧ್ಯತ ॥ ೨೦ ॥

ನಾಚಿಕೆಯುಳ್ಳವನೂ, ಕೋಪಶೀಲನೂ, ಪ್ರಿಯದರ್ಶನನೂ, ಇನ್ನೊಬ್ಬರಿಗೆ ಮರ್ಯಾದೆಯನ್ನು ಕೊಡುವವನೂ ಆದ ಅಭಿಮನ್ಯುವು ವೀರರಿಗೂ ಮತ್ತು ಅವರ ಧನುಸ್ಸುಗಳಿಗೂ ಮರ್ಯಾದೆಯನ್ನು ಕೊಡುತ್ತಾ ಯುದ್ಧವನ್ನು ಮಾಡಿದನು.

ಮೃದುರ್ಭೂತ್ವಾ ಮಹಾರಾಜ ದಾರುಣಃ ಸಮಪದ್ಯತ ।
ವರ್ಷಾವ್ಯತೀತೋ ಭಗವಾನ್ ಶರದೀವ ದಿವಾಕರಃ ॥ ೨೧ ॥

ಮಹಾರಾಜನೇ, ಅವನು ಮೊದಲು ಮೃದುವಾಗಿ ಆರಂಭಿಸಿ, ಕ್ರಮವಾಗಿ ಮಳೆಗಾಲವನ್ನು ದಾಟಿದ ಪೂಜ್ಯನಾದ ಸೂರ್ಯನು ಶರತ್ಕಾಲದಲ್ಲಿ ದಾರುಣನಾಗುವಂತೆ ದಾರುಣನಾದನು.

ಶರಾನ್ ವಿಪಾಠಾನ್ ವಿಶಿಖಾನ್ ಸ್ವರ್ಣಪುಂಖಾನ್ ಶಿಲಾಶಿತಾನ್ ।
ಸಹಸ್ರಶೋಽಮುಚತ್ ಕ್ರುದ್ಧೋ ಗಭಸ್ತೀನಿವ ಭಾಸ್ಕರಃ ॥ ೨೨ ॥

ಅವನು ಕ್ರುದ್ಧನಾಗಿ ಸೂರ್ಯನು ಕಿರಣಗಳನ್ನು ಚೆಲ್ಲುವಂತೆ ಬಾಣಗಳನ್ನೂ, ಸ್ವರ್ಣಪುಂಖಗಳನ್ನು ಹೊಂದಿದ, ಕಲ್ಲಿನಲ್ಲಿ ಸಾಣೆಯನ್ನು ಹಿಡಿದ ವಿಶಿಖಗಳನ್ನೂ ಸಹಸ್ರ ಸಂಖ್ಯೆಯಲ್ಲಿ ಪ್ರಯೋಗಿಸಿದನು.

ಕ್ಷುರಪ್ರೈರ್ವತ್ಸದಂತೈಶ್ಚ ವಿಪಾಠೈಶ್ಚ ಮಹಾಯಶಾಃ ।
ನಾರಾಚೈರರ್ಧನಾರಾಚೈರ್ಭಲ್ಲೈರಂಜಲಿಕೈರಪಿ ।
ಅವಾಕಿರದ್ ರಥಾನೀಕಂ ಭಾರದ್ವಾಜಸ್ಯ ಪಶ್ಯತಃ ॥ ೨೩ ॥

ಮಹಾಕೀರ್ತಿವಂತನಾದ ಅವನು ದ್ರೋಣರು ನೋಡುತ್ತಿರುವಂತೆಯೇ ಅವರ ರಥಸಮೂಹಗಳ ಮೇಲೆ ಕ್ಷುರಪ್ರಗಳ, ವತ್ಸದಂತಗಳ, ವಿಪಾಠಗಳ, ನಾರಾಚಗಳ, ಅರ್ಧನಾರಾಚಗಳ, ಭಲ್ಲಗಳ, ಅಂಜಲಿಗಳ ಮಳೆಯನ್ನು ಸುರಿಸಿದನು.

ತತ್ ಸೈನ್ಯಮಭವತ್ ಸರ್ವಂ ವಿಮುಖಂ ಶರಪೀಡಿತಮ್ ॥ ೨೪ ॥

ಬಾಣ ಪೀಡಿತವಾದ ಆ ಸೈನ್ಯವೆಲ್ಲವೂ ಯುದ್ಧವಿಮುಖವಾಯಿತು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಂ ದ್ರೋಣಪರ್ವಣಿ ಸಪ್ತತ್ರಿಂಶೋಽಧ್ಯಾಯಃ ॥

॥ ಅಭಿಮನ್ಯುವಧಪರ್ವಣಿ ಷಷ್ಠೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಮೂವತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮೂವತ್ತೆಂಟನೆಯ ಅಧ್ಯಾಯ

ಅಭಿಮನ್ಯು-ದುಶ್ಶಾಸನರ ಸಮಾಗಮ.

ಧೃತರಾಷ್ಟ್ರಃ

ದ್ವೈಧೀಭವತಿ ಮೇ ಚಿತ್ತಂ ಹ್ರಿಯಾ ತುಷ್ಟ್ಯಾ ಚ ಸಂಜಯ ।
ಯತ್ ಸೈನ್ಯಂ ಮಮ ಪುತ್ರಸ್ಯ ಸೌಭದ್ರಃ ಪ್ರತ್ಯವಾರಯತ್ ॥ ೧ ॥

ಧೃತರಾಷ್ಟ್ರ- ಎಲೈ ಸಂಜಯನೇ, ನನ್ನ ಪುತ್ರನ ಸೈನ್ಯವು ಅಭಿಮನ್ಯುವಿನಿಂದ ನಿವಾರಿಸಲ್ಪಟ್ಟುದನ್ನು ಕೇಳಿ ನನ್ನ ಮನಸ್ಸು ನಾಚಿಕೆಯಿಂದಲೂ ಮತ್ತು ಸಂತೋಷದಿಂದಲೂ ಎರಡು ಭಾಗವಾಗುತ್ತಿದೆ.

ವಿಸ್ತರೇಣೈವ ಮೇ ಶಂಸ ಸರ್ವಂ ಗಾವಲ್ಗಣೇ ಕಥಮ್ ।
ವಿಕ್ರೀಡಿತಂ ಕುಮಾರಸ್ಯ ಸ್ಕಂದಸ್ಯೇವಾಸುರೈಃ ಸಹ ॥ ೨ ॥

ಎಲೈ ಗಾವಲ್ಗಣಿಯೇ, ಷಣ್ಮುಖನು ಅಸುರರ ಜೊತೆಯಲ್ಲಿ ಕ್ರೀಡಿಸಿದಂತೆ ಕುಮಾರನಾದ ಅಭಿಮನ್ಯುವು ಯುದ್ಧದಲ್ಲಿ ಹೀಗೆ ಕ್ರೀಡಿಸಿದನೆಂದು ಎಲ್ಲವನ್ನೂ ನನಗೆ ವಿಸ್ತಾರವಾಗಿ ಹೇಳು.

ಸಂಜಯಃ

ಹಂತ ತೇ ಸಂಪ್ರವಕ್ಷ್ಯಾಮಿ ವಿಮರ್ದಮತಿದಾರುಣಮ್ ।
ಏಕಸ್ಯ ಚ ಬಹೂನಾಂ ಚ ರಣೇ ಚಿಕ್ರೀಡಿತಂ ಮಹತ್ ॥ ೩ ॥

ಸಂಜಯ- ಸಂತೋಷ. ಒಬ್ಬನಿಗೂ ಮತ್ತು ಅನೇಕರಿಗೂ ನಡೆದ ಅತಿ ದಾರುಣವಾದ ಮತ್ತು ದೊಡ್ಡದಾದ ಯುದ್ಧದಲ್ಲಿ ಅಭಿಮನ್ಯುವು ಹೇಗೆ ಕ್ರೀಡಿಸಿದನೆಂದು ನಿನಗೆ ಹೇಳುವೆನು.

ಅಭಿಮನ್ಯುಃ ಕೃತೋತ್ಸಾಹಃ ಕೃತೋತ್ಸಾಹಾನರಿಂದಮಾನ್ ।
ರಥಸ್ಥೋ ರಥಿನಃ ಸರ್ವಾಂಸ್ತಾವಕಾನಭ್ಯಧಾವತ ॥ ೪ ॥

ಉತ್ಸಾಹಯುಕ್ತನಾದ, ರಥಸ್ಥನಾದ ಅಭಿಮನ್ಯುವು ಉತ್ಸಾಹಯುಕ್ತರಾದ, ಶತ್ರುಗಳಾದ ನಿನ್ನವರಾದ ಎಲ್ಲಾ ರಥಿಕರನ್ನು ಉದ್ದೇಶಿಸಿ ಧಾವಿಸಿದನು.

ದ್ರೋಣಂ ಕರ್ಣಂ ಕೃಪಂ ಶಲ್ಯಂ ದ್ರೌಣಿಂ ಭೋಜಂ ಬೃಹದ್ಬಲಮ್ ।
ದುರ್ಯೋಧನಂ ಸೌಮದತ್ತಿಂ ಶಕುನಿಂ ಸುಬಲಾತ್ಮಜಮ್ ॥ ೫ ॥

ನಾನಾನೃಪಾನ್ ನೃಪಸುತಾನ್ ಸೈನ್ಯಾನಿ ವಿವಿಧಾನಿ ಚ ।
ಅಲಾತಚಕ್ರವತ್ ಸರ್ವಾಂಶ್ಚರನ್ ಬಾಣೈರವಾಕಿರತ್ ॥ ೬ ॥

ದ್ರೋಣರು, ಕರ್ಣ, ಕೃಪರು, ಶಲ್ಯ, ಅಶ್ವತ್ಥಾಮರು, ಕೃತವರ್ಮ, ಬೃಹದ್ಬಲ, ದುರ್ಯೋಧನ, ಭೂರಿಶ್ರವ, ಸುಬಲಪುತ್ರನಾದ ಶಕುನಿ, ನಾನಾ ರಾಜರು, ರಾಜಕುಮಾರರು, ವಿವಿಧ ಸೈನ್ಯಗಳು ಎಲ್ಲರನ್ನೂ ಅಲಾತಚಕ್ರದಂತೆ ತಿರುಗುತ್ತಾ ಬಾಣಗಳಿಂದ ಹೊಡೆದನು.

ನಿಘ್ನನ್ನಮಿತ್ರಾನ್ ಸೌಭದ್ರಃ ಪರಮಾಸ್ತ್ರಃ ಪ್ರತಾಪವಾನ್ ।
ಪ್ರತ್ಯದೃಶ್ಯತ ತೇಜಸ್ವೀ ದಿಕ್ಷು ಸರ್ವಾಸು ಭಾರತ ॥ ೭ ॥

ಪ್ರತಾಪಶಾಲಿಯೂ, ಪರಮಾಸ್ತ್ರಗಳನ್ನು ಹೊಂದಿದವನೂ, ತೇಜಸ್ವಿಯೂ ಆದ ಅಭಿಮನ್ಯುವು ಎಲೈ ಭಾರತನೇ, ಶತ್ರುಗಳನ್ನು ಕೊಲ್ಲುತ್ತಾ ಸರ್ವದಿಕ್ಕುಗಳಲ್ಲಿಯೂ ಕಾಣಿಸಿದನು.

ತದ್ ದೃಷ್ಟ್ವಾ ಚರಿತಂ ತಸ್ಯ ಸೌಭದ್ರಸ್ಯಾಮಿತೌಜಸಃ ।
ಸಮಕಂಪಂತ ಸೈನ್ಯಾನಿ ತ್ವದೀಯಾನಾಂ ಪುನಃಪುನಃ ॥ ೮ ॥

ಅಮಿತಪರಾಕ್ರಮಿಯಾದ ಅಭಿಮನ್ಯುವಿನ ಆ ಕರ್ಮವನ್ನು ನೋಡಿ ನಿನ್ನವರ ಸೈನ್ಯಗಳೆಲ್ಲವೂ ಪುನಃ ಪುನಃ ನಡುಗಿದವು.

ಅಥಾಬ್ರವೀನ್ಮಹಾಪ್ರಾಜ್ಞೋ ಭಾರದ್ವಾಜೋ ಪ್ರತಾಪವಾನ್ ।
ಹರ್ಷೇಣೋತ್ಫುಲ್ಲನಯನಃ ಕೃಪಮಾಭಾಷ್ಯ ಸಸ್ಮಿತಮ್ ॥ ೯ ॥

ಘಟ್ಟಯನ್ನಿವ ಮರ್ಮಾಣಿ ಪುತ್ರಸ್ಯ ತವ ಭಾರತ ।
ಅಭಿಮನ್ಯುಂ ತದಾ ದೃಷ್ಟ್ವಾ ರಣೇ ವೀರಂ ಕೃತವ್ರತಮ್ ॥ ೧೦ ॥

ಆಗ ಮಹಾಪ್ರಾಜ್ಞರೂ, ಪ್ರತಾಪಶಾಲಿಗಳೂ ಆದ ದ್ರೋಣರು ಸಂತೋಷದಿಂದ ಅರಳಿದ ಕಣ್ಣುಳ್ಳವರಾಗಿ ಎಲೈ ಭಾರತನೇ, ನಿನ್ನ ಪುತ್ರನ ಮರ್ಮಸ್ಥಾನಗಳನ್ನು

ಕುಟ್ಟುವವರಂತೆ ವೀರನೂ, ದೃಢವ್ರತನೂ ಆದ ಅಭಿಮನ್ಯುವನ್ನು ನೋಡಿ ಕೃಪರನ್ನು ಕುರಿತು ಮಂದಹಾಸ ಪೂರ್ವಕವಾಗಿ ಮಾತನಾಡಿದರು.

ಏಷ ಗಚ್ಛತಿ ಸೌಭದ್ರಃ ಪಾರ್ಥಾನಾಮಗ್ರತೋ ಯುವಾ ।
ನಂದಯನ್ ಸುಹೃದಃ ಸರ್ವಾನ್ ರಾಜಾನಂ ಚ ಯುಧಿಷ್ಠಿರಮ್ ॥

ನಕುಲಂ ಸಹದೇವಂ ಚ ಭೀಮಸೇನಂ ಚ ಪಾಂಡವಮ್ ।
ಸಂಬಂಧಿಬಾಂಧವಾಂಶ್ಚಾನ್ಯಾನ್ ಮಧ್ಯಸ್ಥಾನ್ ಸುಹೃದಸ್ತಥಾ ॥೧೨॥

ಈ ಯುವಕನಾದ ಅಭಿಮನ್ಯುವು ಪಾರ್ಥರ ಮುಂಭಾಗದಲ್ಲಿ ಎಲ್ಲ ಸುಹೃದರನ್ನೂ, ರಾಜನಾದ ಯುಧಿಷ್ಠಿರನನ್ನೂ, ನಕುಲ-ಸಹದೇವರನ್ನೂ, ಪಾಂಡುಪುತ್ರನಾದ ಭೀಮಸೇನನನ್ನೂ, ಉಳಿದ ಸಂಬಂಧಿ ಬಾಂಧವರನ್ನೂ, ಮಧ್ಯಸ್ಥರನ್ನೂ ಸಂತೋಷಪಡಿಸುತ್ತಾ ಹೋಗುತ್ತಿದ್ದಾನೆ.

ನಾಸ್ಯ ಯುದ್ಧೇ ಸಮಂ ಮನ್ಯೇ ಕಂಚಿದನ್ಯಂ ಧನುರ್ಧರಮ್ ।
ಇಚ್ಛನ್ ಹನ್ಯಾದಿಮಾಂ ಸೇನಾಂ ಕಿಮರ್ಥಮಿಹ ನೇಚ್ಛತಿ ॥ ೧೩ ॥

ಇವನಿಗೆ ಯುದ್ಧದಲ್ಲಿ ಸಮಾನನಾದ ಇನ್ನೊಬ್ಬ ಧನುರ್ಧರನು ಇಲ್ಲವೆಂದು ಭಾವಿಸುತ್ತೇನೆ. ಇವನು ಬಯಸಿದರೆ ಈ ಸೈನ್ಯವನ್ನೇ ಕೊಂದಾನು. ಆದರೆ ಏಕೆ ಹಾಗೆ ಬಯಸುತ್ತಿಲ್ಲ?

ಸಂಜಯಃ

ದ್ರೋಣಸ್ಯಾಪ್ರಿಯಸಂಯುಕ್ತಂ ಶ್ರುತ್ವಾ ವಾಕ್ಯಂ ತವಾತ್ಮಜಃ ।
ಅರ್ಜುನಿಂ ಪ್ರತಿ ಸಂಕ್ರುದ್ಧೋ ದ್ರೋಣಂ ದೃಷ್ಟ್ವಾ ಸ್ಥಯನ್ನಿವ ॥ ೧೪ ॥

ತತೋ ದುರ್ಯೋಧನಃ ಕರ್ಣಮಬ್ರವೀದ್ ಬಾಹ್ಲಿಕಂ ನೃಪಮ್ ।
ದುಃಶಾಸನಂ ಮದ್ರರಾಜಂ ತಾಂಸ್ತಾಂಶ್ಚಾನ್ಯಾನ್ ಮಹಾರಥಾನ್ ॥

ಸಂಜಯ– ನಿನ್ನ ಪುತ್ರನಾದ ದುರ್ಯೋಧನನು ತನಗೆ ಅಪ್ರಿಯವಾದ ದ್ರೋಣರ ಮಾತುಗಳನ್ನು ಕೇಳಿ ಬಹಳ ಕೋಪಗೊಂಡು ದ್ರೋಣರನ್ನು ನೋಡುತ್ತಾ ನಗುಮನನಂತೆ ಕರ್ಣ, ಬಾಹ್ಲಿಕರಾಜ, ದುಶ್ಶಾಸನ, ಶಲ್ಯ ಮತ್ತು ಉಳಿದ ಮಹಾರಥರನ್ನು ಕುರಿತು ಮಾತನಾಡಿದನು.

ದುರ್ಯೋಧನಃ

ಸರ್ವಮೂರ್ಧಾವಸಿಕ್ತಾನಾಮಾಚಾರ್ಯೋ ಬ್ರಹ್ಮವಿತ್ತಮಃ ।
ಅರ್ಜುನಸ್ಯ ಸುತಂ ಮೂಢಂ ನ ಹಿನಸ್ತಿ ನ ಚೇಚ್ಛತಿ ॥ ೧೬ ॥

ದುರ್ಯೋಧನ– ಎಲ್ಲ ಪಟ್ಟಾಭಿಷಿಕ್ತ ರಾಜರುಗಳಿಗೂ ಆಚಾರ್ಯರಾದ, ಬ್ರಹ್ಮಜ್ಞಾನಿಗಳಲ್ಲಿ ಶ್ರೇಷ್ಠರಾದ ದ್ರೋಣರು ಮೂಢನಾದ ಅರ್ಜುನನ ಸುತನನ್ನು ಕೊಲ್ಲುವುದಿಲ್ಲ ಮತ್ತು ಕೊಲ್ಲಲು ಬಯಸುವುದಿಲ್ಲ.

ನ ಹ್ಯಸ್ಯ ಸಮರೇ ಮುಚ್ಯೇದಂತಕೋಽಪ್ಯಾತತಾಯಿನಃ ।
ಕಿಮಂಗ ಪುನರೇವಾನ್ಯೋ ಮರ್ತ್ಯಃ ಸತ್ಯಂ ಬ್ರವೀಮಿ ವಃ ॥ ೧೭ ॥

ಶಸ್ತ್ರಧಾರಿಗಳಾದ ದ್ರೋಣರ ಮುಂದೆ ಯಮನೂ ಕೂಡ ತಪ್ಪಿಸಿಕೊಳ್ಳಲಾರ. ಪ್ರೀತಿಪಾತ್ರನೇ, ಇನ್ನು ಮರಣಶೀಲನಾದ ಇನ್ನೊಬ್ಬನು ಹೇಗೆ ತಪ್ಪಿಸಿಕೊಂಡಾನು? ನಿಮಗೆ ನಾನು ಸತ್ಯವನ್ನು ಹೇಳುತ್ತಿದ್ದೇನೆ.

ಅರ್ಜುನಸ್ಯ ಸುತಂ ಚೈಷ ಶಿಷ್ಯತ್ವಾದಭಿರಕ್ಷತಿ ।
ಪುತ್ರಾಃ ಶಿಷ್ಯಾಶ್ಚ ದಯಿತಾಸ್ತದಪತ್ಯಂ ಚ ಧರ್ಮಿಣಾಮ್ ॥ ೧೮ ॥

ಅರ್ಜುನನು ಶಿಷ್ಯನಾದುದರಿಂದ ಆಚಾರ್ಯರು ಇವನನ್ನು ರಕ್ಷಿಸುತ್ತಿದ್ದಾರೆ. ಧರ್ಮಶೀಲರಾದವರಿಗೆ ಪುತ್ರರೂ, ಶಿಷ್ಯರೂ ಮತ್ತು ಶಿಷ್ಯರ ಪುತ್ರರೂ ಪ್ರೀತಿಪಾತ್ರರಾದವರು.

ಸಂರಕ್ಷ್ಯಮಾಣೋ ದ್ರೋಣೇನ ಮನ್ಯತೇ ವೀರ್ಯಮಾತ್ಮನಃ ।
ಆತ್ಮಸಂಭಾವಿತಂ ಮೂಢಂ ಸಂಪ್ರಮಥ್ನೀತ ಮಾಚಿರಮ್ ॥ ೧೯ ॥

ಇವನು ದ್ರೋಣರಿಂದ ಸಂರಕ್ಷಿತನಾಗಿ ತನ್ನನ್ನು ಪರಾಕ್ರಮಿ ಎಂದು ಭಾವಿಸಿದ್ದಾನೆ. ಆತ್ಮಸಂಭಾವಿತನಾದ ಈ ಮೂಢನನ್ನು ಶೀಘ್ರವಾಗಿ ಮರ್ದಿಸಿ (ಎಂದು ಹೇಳಿದನು).

ಸಂಜಯಃ

ಏವಮುಕ್ತಾಸ್ತು ರಾಜಾನಃ ಸಾತ್ವತೀಪುತ್ರಮಭ್ಯಯುಃ ।
ಸಂರಬ್ಧಾಸ್ತಂ ಜಿಘಾಂಸಂತೋ ಭಾರದ್ವಾಜಸ್ಯ ಪಶ್ಯತಃ ॥ ೨೦ ॥

ಸಂಜಯ– ಹೀಗೆ ಹೇಳಲ್ಪಟ್ಟ ರಾಜರು ಕೋಪಗೊಂಡು ಆ ಅಭಿಮನ್ಯುವನ್ನು ಕೊಲ್ಲಲು ಬಯಸಿ ದ್ರೋಣರು ನೋಡುತ್ತಿರುವಂತೆಯೇ ಅವನ ಕಡೆಗೆ ಧಾವಿಸಿದರು.

ದುಃಶಾಸನಸ್ತು ಸಂರಬ್ಧಂ ಜ್ಞಾತ್ವಾ ಭ್ರಾತರಮಗ್ರಜಮ್ ।
ತಾನ್ ನಿವರ್ತ್ಯ ರಥೋದಾರಾನಥ ಭ್ರಾತರಮಬ್ರವೀತ್ ॥ ೨೧ ॥

ಅಹಮೇನಂ ಹನಿಷ್ಯಾಮಿ ರಾಜನ್ ಸತ್ಯಂ ಬ್ರವೀಮಿ ತೇ ।
ಮಿಷತಾಂ ಪಾಂಡವೇಯಾನಾಂ ಪಾಂಚಾಲಾನಾಂ ಚ ಪಶ್ಯತಾಮ್ ।
ಗ್ರಸಿಷ್ಯಾಮ್ಯದ್ಯ ಸೌಭದ್ರಂ ಸ್ವರ್ಭಾನುರಿವ ಭಾಸ್ಕರಮ್ ॥ ೨೨ ॥

ದುಶ್ಶಾಸನನಾದರೋ ತನ್ನ ಅಣ್ಣನು ಕೋಪಗೊಂಡಿರುವುದನ್ನು ತಿಳಿದು ಆ ರಥಶ್ರೇಷ್ಠರಾದ ರಾಜರನ್ನು ನಿವಾರಿಸಿ, ಸಹೋದರನನ್ನು ಕುರಿತು- ರಾಜನೇ, ನಾನು ಇವನನ್ನು ಕೊಲ್ಲುವೆನು. ನಿನಗೆ ಸತ್ಯವನ್ನು ಹೇಳುತ್ತಿದ್ದೇನೆ. ಪಾಂಡವರು ಮತ್ತು ಪಾಂಚಾಲರು ನೋಡುತ್ತಿರುವಂತೆಯೇ ರಾಹುವು ಸೂರ್ಯನನ್ನು ನುಂಗಿದಂತೆ ಈ ದಿನ ನಾನು ಅಭಿಮನ್ಯುವನ್ನು ನುಂಗುವೆನು ಎಂದು ಹೇಳಿದನು.

ಸಂಜಯಃ

ಉತ್ಥಾಯ ಚಾಬ್ರವೀದ್ ರಾಜನ್ ಕುರುರಾಜಮಿದಂ ವಚಃ ॥ ೨೩ ॥

ಶ್ರುತ್ವಾ ಕೃಷ್ಣೌ ಮಯಾ ಗ್ರಸ್ತಂ ಸೌಭದ್ರಮತಿಮಾನಿನೌ ।
ಗಮಿಷ್ಯತಃ ಪ್ರೇತಲೋಕಂ ಜೀವಲೋಕಾನ್ನ ಸಂಶಯಃ ॥ ೨೪ ॥

ಸಂಜಯ– ಎಲೈ ರಾಜನೇ, ಗಟ್ಟಿಯಾದ ಸ್ವರದಲ್ಲಿ ಕುರುರಾಜನಾದ ದುರ್ಯೋಧನನನ್ನು ಕುರಿತು ಈ ಮಾತನ್ನು ಆಡಿದನು- ಅತಿಮಾನಿಗಳಾದ ಕೃಷ್ಣಾರ್ಜುನರು ನನ್ನಿಂದ ಅಭಿಮನ್ಯುವು ಹತನಾದುದನ್ನು ಕೇಳಿ ಜೀವಲೋಕವನ್ನು ತೊರೆದು ಪ್ರೇತಲೋಕಕ್ಕೆ ಹೋಗುವರು. ಇದರಲ್ಲಿ ಸಂಶಯವಿಲ್ಲ.

ತೌ ಶ್ರುತ್ವಾ ತು ಮೃತೌ ವ್ಯಕ್ತಂ ಪಾಂಡೋಃ ಕ್ಷೇತ್ರೋದ್ಭವಾಃ ಸುತಾಃ ।
ಸುಹೃದ್ಗಣಾಸ್ತದೇಕಾಗ್ರಾಃ ಕೈಬ್ಯಾತ್ ತ್ಯಕ್ಷ್ಯಂತಿ ಜೀವಿತಮ್ ॥೨೫॥

ಅವರು ಮೃತರಾದುದನ್ನು ಕೇಳಿ ಪಾಂಡುವಿನ ಪತ್ನಿಯಲ್ಲಿ ಜನಿಸಿದ ಪುತ್ರರೂ, ಸುಹೃದ್ಗಣಗಳೂ, ಅವರಲ್ಲೇ ನಿಶ್ಚಯವುಳ್ಳವರೂ ಹೆದರಿಕೆಯಿಂದ ಖಂಡಿತವಾಗಿ ಪ್ರಾಣಗಳನ್ನು ಬಿಡುವರು.

ತಸ್ಮಾದಸ್ಮಿನ್ ಹತೇ ಶತ್ರೌ ಹತಾಃ ಸರ್ವೇऽಹಿತಾಸ್ತವ ।
ಶಿವೇನ ಧ್ಯಾಹಿ ಮಾಂ ರಾಜನ್ನೇಷ ಹನ್ಮಿ ರಿಪುಂ ತವ ॥ ೨೬ ॥

ಆದ್ದರಿಂದ ಶತ್ರುವಾದ ಇವನು ಹತನಾದರೆ ನಿನ್ನ ಶತ್ರುಗಳೆಲ್ಲರೂ ಹತರಾದಂತೆಯೇ. ನನಗೆ ಶುಭವನ್ನು ಹಾರೈಸು. ರಾಜನೇ, ಈ ನಾನು ನಿನ್ನ ಶತ್ರುವನ್ನು ಕೊಲ್ಲುತ್ತೇನೆ (ಎಂದು ಹೇಳಿದನು).

ಸಂಜಯಃ

ಏವಮುಕ್ತ್ವಾ ತತೋ ರಾಜನ್ ಪುತ್ರೋ ದುಃಶಾಸನಸ್ತವ ।
ಸೌಭದ್ರಮಭ್ಯಯಾತ್ ಕ್ರುದ್ಧಃ ಶರವರ್ಷೈರವಾಕಿರತ್ ॥ ೨೭ ॥

ಸಂಜಯ– ಎಲೈ ರಾಜನೇ, ನಿನ್ನ ಪುತ್ರನಾದ ದುಶ್ಶಾಸನನು ಹೀಗೆ ಹೇಳಿ ಕೋಪಗೊಂಡು ಅಭಿಮನ್ಯುವನ್ನು ಕುರಿತು ಧಾವಿಸಿ ಅವನ ಮೇಲೆ ಬಾಣಗಳ ಮಳೆಯನ್ನು ಕರೆದನು.

ತಮಭಿಕ್ರುದ್ಧಮಾಯಾಂತಂ ತವ ಪುತ್ರಮರಿಂದಮಮ್ ।
ಅಭಿಮನ್ಯುಃ ಶರೈಸ್ತೀಕ್ಷ್ಣೈಃ ಷಡ್ವಿಂಶತ್ಯಾ ಸಮಪಾಯತ್ ॥ ೨೮ ॥

ಬಹಳ ಕೋಪಗೊಂಡು ತನ್ನ ಕಡೆಗೆ ಬರುತ್ತಿದ್ದ ಅರಿಂದಮನಾದ ನಿನ್ನ ಪುತ್ರನನ್ನು ನೋಡಿ ಅಭಿಮನ್ಯುವು ಇಪ್ಪತ್ತಾರು ತೀಕ್ಷ್ಣವಾದ ಬಾಣಗಳಿಂದ ಅವನನ್ನು ಹೊಡೆದನು.

ದುಃಶಾಸನಸ್ತು ಸಂಕ್ರುದ್ಧಃ ಪ್ರಭಿನ್ನ ಇವ ಕುಂಜರಃ ।
ಆಯೋಧಯತ ಚ ಸೌಭದ್ರಮಭಿಮನ್ಯುಶ್ಚ ತಂ ರಣೇ ॥ ೨೯ ॥

ಕೋಪಗೊಂಡ ದುಶ್ಶಾಸನನು ಮದಿಸಿದ ಗಜದಂತೆ ಅಭಿಮನ್ಯುವಿನ ಜೊತೆಯಲ್ಲಿ ಯುದ್ಧವನ್ನು ಮಾಡಿದನು. ಅಭಿಮನ್ಯುವೂ ಸಹ ರಣರಂಗದಲ್ಲಿ ಅವನ ಜೊತೆಯಲ್ಲಿ ಯುದ್ಧವನ್ನು ಮಾಡಿದನು.

ತೌ ಮಂಡಲಾನಿ ಚಿತ್ರಾಣಿ ರಥಾಭ್ಯಾಂ ಸವ್ಯದಕ್ಷಿಣಮ್ ।
ಚರಮಾಣಾವಯುದ್ಧ್ಯೇತಾಂ ರಥಶಿಕ್ಷಾವಿಶಾರದೌ ॥ ೩೦ ॥

ಅಥ ಪಣವಮೃದಂಗದುಂದುಭೀನಾಂ
ಕ್ರಕಚಮಹಾನಕಭೇರಿಝುರ್ಝುರೀಣಾಮ್ ।
ನಿನದಮತಿಭೃಶಂ ನರಾಃ ಪ್ರಚಕ್ರುಃ
ಲವಣಜಲೋದ್ಭವಸಿಂಹನಾದಮಿಶ್ರಮ್ ॥ ೩೧ ॥

ರಥಶಿಕ್ಷಾ ವಿಶಾರದರಾದ ಅವರಿಬ್ಬರೂ ತಮ್ಮ ರಥಗಳಿಂದ ವಿಚಿತ್ರವಾದ, ಸವ್ಯದಕ್ಷಿಣ ಮಾರ್ಗದಲ್ಲಿ ಸಂಚರಿಸುತ್ತಾ ಯುದ್ಧವನ್ನು ಮಾಡಿದರು. ಆಗ ಜನರು ಶಂಖಧ್ವನಿ ಮತ್ತು ಸಿಂಹನಾದಗಳಿಂದ ಮಿಶ್ರಿತವಾದ, ಪಣವ-ಮೃದಂಗ-ದುಂದುಭಿಗಳ, ಕ್ರಕಚ- ಮಹಾನಕ-ಭೇರಿ-ಝುರ್ಝುರಿಗಳ ಮಹಾನಾದವನ್ನು ತೀವ್ರವಾಗಿ ಮಾಡಿದರು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಅಷ್ಟತ್ರಿಂಶೋಽಧ್ಯಾಯಃ ॥

॥ ಅಭಿಮನ್ಯುವಧಪರ್ವಣಿ ಸಪ್ತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಮೂವತ್ತೆಂಟನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ಮುವತ್ತೊಂಬತ್ತನೆಯ ಅಧ್ಯಾಯ

ಅಭಿಮನ್ಯುವಿನಿಂದ ಕರ್ಣ-ದುಶ್ಶಾಸನರ ಪರಾಜಯ

ಸಂಜಯಃ

ತತಃ ಸಮಭವದ್ ಯುದ್ಧಂ ತಯೋಃ ಪುರುಷಸಿಂಹಯೋಃ ।
ತಸ್ಮಿನ್ ಕಾಲೇ ಮಹಾಬಾಹುಃ ಸೌಭದ್ರಃ ಪರವೀರಹಾ ॥ ೧ ॥

ಸಶರಂ ಕಾರ್ಮುಕಂ ಛಿತ್ತ್ವಾ ಲಾಘವೇನ ನ್ಯಪಾತಯತ್ ।
ದುಃಶಾಸನಂ ಶರೈಘೋರೈಃ ಸಂತತಕ್ಷ ಸಮಂತತಃ ॥ ೨ ॥

ಸಂಜಯ– ಅನಂತರ ಆ ಪುರುಷಸಿಂಹರಿಗೆ ಯುದ್ಧವು ನಡೆಯಿತು. ಆ ಕಾಲದಲ್ಲಿ ಪರವೀರಘಾತಕನಾದ, ಮಹಾಬಾಹುವಾದ ಅಭಿಮನ್ಯುವು ದುಶ್ಶಾಸನನ ಬಾಣ ಸಹಿತವಾದ ಧನುಸ್ಸನ್ನು ಕತ್ತರಿಸಿ ಕ್ಷಿಪ್ರವಾಗಿ ಕೆಳಗೆ ಉರುಳಿಸಿ ದುಶ್ಶಾಸನನನ್ನು ಘೋರವಾದ ಬಾಣಗಳಿಂದ ಎಲ್ಲ ಕಡೆಗಳಲ್ಲಿಯೂ ಹಿಂಸಿಸಿದನು.

ಶರವಿಕ್ಷತಗಾತ್ರಂ ತು ಪ್ರತ್ಯಮಿತ್ರಮವಸ್ಥಿತಮ್ ।
ಅಭಿಮನ್ಯುರ್ಮಹಾರಾಜ ದುಃಶಾಸನಮಥಾಬ್ರವೀತ್ ॥ ೩ ॥

ಬಾಣಗಳಿಂದ ಗಾಯಗೊಂಡ ಶರೀರವುಳ್ಳವನಾಗಿ ಎದುರಿಗೆ ನಿಂತಿದ್ದ ಶತ್ರುವಾದ ದುಶ್ಶಾಸನನನ್ನು ಕುರಿತು ಅಭಿಮನ್ಯುವು ಮಾತನಾಡಿದನು.

ದಿಷ್ಟ್ಯಾ ಪಶ್ಯಾಮಿ ಸಂಗ್ರಾಮೇ ಮಾನಿನಂ ಶತ್ರುಮಾಗತಮ್ ।
ನಿಷ್ಕುರಂ ತ್ಯಕ್ತಧರ್ಮಾಣಮಾಕ್ರೋಶನಪರಾಯಣಮ್ ॥ ೪ ॥

ಅಹಂಕಾರಿಯೂ, ನಿಷ್ಕುರಿಯೂ, ಧರ್ಮವನ್ನು ತ್ಯಜಿಸಿದವನೂ, ಆಕ್ರೋಶವನ್ನು ಮಾಡುವುದರಲ್ಲಿ ಶೂರನೂ ಆದ, ಶತ್ರುವಾದ ನಿನ್ನನ್ನು ದೇವರ ದಯೆಯಿಂದ ಯುದ್ಧದಲ್ಲಿ ನೋಡುತ್ತಿದ್ದೇನೆ.

ಯತ್ ಸಭಾಯಾಂ ತ್ವಯಾ ರಾಜ್ಞೋ ಧೃತರಾಷ್ಟ್ರಸ್ಯ ಶೃಣ್ವತಃ ।
ಕೋಪಿತಃ ಪರುಷೈರ್ವಾಕ್ಯೈರ್ಧರ್ಮರಾಜೋ ಯುಧಿಷ್ಠಿರಃ ॥ ೫ ॥

ಜಯೋನ್ಮಾದೇನ ಭೀಮಶ್ಚ ಬಹ್ವಬದ್ಧಂ ಪ್ರಭಾಷಿತಮ್ ।
ಅಕ್ಷಕೂಟಂ ಸಮಾಶ್ರಿತ್ಯ ಸೌಬಲೇನ ದುರಾತ್ಮನಾ ॥ ೬ ॥

ಪರವಿತ್ತಾಪಹಾರಸ್ಯ ಕ್ರೋಧಸ್ಯಾಪ್ರಶಮಸ್ಯ ಚ ॥ ೭ ॥

ಪಿತೄಣಾಂ ಮಮ ರಾಜ್ಯಸ್ಯ ದುರ್ಜಯಸ್ಯೋಗ್ರಧನ್ವಿನಾಮ್ ।
ತತ್ ತ್ವಾಮಿದಮನುಪ್ರಾಪ್ತಂ ತಸ್ಯ ಕೋಪಾನ್ಮಹಾತ್ಮನಃ ॥ ೮ ॥

ಧೃತರಾಷ್ಟ್ರನು ಕೇಳುವಂತೆ ಸಭೆಯಲ್ಲಿ ಉಗ್ರವಾಕ್ಯದಿಂದ ಧರ್ಮರಾಜನಾದ ಯುಧಿಷ್ಠಿರನನ್ನು ಏನು ಕೋಪಗೊಳಿಸಿದೆಯೋ, ಜಯದ ಉನ್ಮಾದದಿಂದ ಕೂಡಿ ಭೀಮನನ್ನು ಕುರಿತು ಎಷ್ಟು ಅಬದ್ಧವಾದ ಮಾತುಗಳನ್ನು ಆಡಿದ್ದೀಯೋ, ದುರಾತ್ಮನಾದ

ಶಕುನಿಯನ್ನು ಆಶ್ರಯಿಸಿ ಮೋಸದ ದ್ಯೂತವನ್ನು ಮಾಡಿ ಪರವಿತ್ತವನ್ನು ಏನು ಅಪಹರಿಸಿದ್ದೀಯೋ, ಉಗ್ರ ಧನುರ್ಧಾರಿಗಳಿಂದಲೂ ಜಯಿಸಲು ಅಸಾಧ್ಯರಾದ ನನ್ನ ಪಿತೃಗಳ ರಾಜ್ಯವನ್ನು ಏನು ಅಪಹರಿಸಿದ್ದಿಯೋ ಮತ್ತು ನಮ್ಮ ಮೇಲೆ ಯಾವ ಕ್ರೋಧವನ್ನು ಮತ್ತು ಅಸಮಾಧಾನವನ್ನು ಹೊಂದಿದ್ದೀಯೋ ಅವೆಲ್ಲದರ ಫಲವಾಗಿ ಮಹಾತ್ಮನಾದ ಯುಧಿಷ್ಠಿರ ಕೋಪದಿಂದ ಇದು ಈ ದಿನ ನಿನಗೆ ಪ್ರಾಪ್ತವಾಗಿದೆ.

ಸದ್ಯಃ ಕೃತಸ್ಯಾಧರ್ಮಸ್ಯ ಫಲಮಾಪ್ನ್ಯಸಿ ದುರ್ಮತೇ ।
ಪಾತಿತಾಸ್ಮ್ಯದ್ಯ ಪಾಪ ತ್ವಾಂ ಸರ್ವಸೈನ್ಯಸ್ಯ ಪಶ್ಯತಃ ।
ಅದ್ಯಾಹಮನೃಣಸ್ತಸ್ಯ ಕೋಪಸ್ಯ ಭವಿತಾ ರಣೇ ॥ ೯ ॥

ಎಲೈ ದುರ್ಮತಿಯೇ, ನೀನು ಮಾಡಿದ ಅಧರ್ಮಗಳ ಫಲವನ್ನು ಈಗಲೇ ಹೊಂದುವಿ. ಎಲೈ ಪಾಪಿಯೇ, ಎಲ್ಲ ಸೈನ್ಯಗಳೂ ನೋಡುವಂತೆ ಈ ದಿನ ನಾನು ನಿನ್ನನ್ನು ಹೊಡೆದು ಉರುಳಿಸುವೆನು. ಈ ದಿನ ರಣರಂಗದಲ್ಲಿ ನಾನು ಆ ಕೋಪದ ಋಣವನ್ನು ತೀರಿಸುವೆನು.

ಅಮರ್ಷಿತಾಯಾಃ ಕೃಷ್ಣಾಯಾಃ ಕಾಂಕ್ಷಿತಸ್ಯ ಚ ಮೇ ಪಿತುಃ ।
ಅದ್ಯ ತಾತಸ್ಯ ಭೀಮಸ್ಯ ಭವಿತಾಸ್ಮ್ಯನೃಣೋ ಭುವಿ ॥ ೧೦ ॥

ನಹಿ ಮೇ ಮೋಕ್ಷ್ಯಸೇ ಜೀವನ್ ಯದಿ ನೋತ್ಸೃಜಸೇ ರಣಮ್ ॥

ಕೋಪಗೊಂಡ ದ್ರೌಪದಿಯಿಂದ, ನನ್ನ ತಂದೆಯಿಂದ, ದೊಡ್ಡಪ್ಪನಾದ ಭೀಮನಿಂದ ಕಾಂಕ್ಷಿತವಾದ ಕಾರ್ಯವನ್ನು ಮಾಡಿ ಈ ದಿನ ಭೂಮಿಯಲ್ಲಿ ಋಣ ಮುಕ್ತನಾಗುವೆನು. ನೀನು ರಣರಂಗವನ್ನು ತೊರೆಯದಿದ್ದರೆ ಜೀವ ಸಹಿತವಾಗಿ ನಿನ್ನಿಂದ ಬಿಡುಗಡೆಯನ್ನು ಹೊಂದಲಾರೆ (ಎಂದು ಹೇಳಿದನು).

ಸಂಜಯಃ

ಏವಮುಕ್ತ್ವಾ ಮಹಾಬಾಹುರ್ಬಾಣಂ ದುಃಶಾಸನಾಂತಕಮ್ ।
ಸಂದಧೇ ಪರವೀರಘ್ನಃ ಕಾಲಾಗ್ನಿಸಮವರ್ಚಸಮ್ ॥ ೧೨ ॥

ಸಂಜಯ– ಹೀಗೆ ಹೇಳಿ ಮಹಾಬಾಹುವೂ, ಪರವೀರಘಾತಕನೂ ಆದ ಅಭಿಮನ್ಯುವು ಕಾಲಾಗ್ನಿಗೆ ಸಮಾನವಾದ ಕಾಂತಿಯುಳ್ಳ ಬಾಣವನ್ನು ಬಿಲ್ಲಿನಲ್ಲಿ ಹೂಡಿದನು.

ತೇನ ತಂ ಜತ್ರುದೇಶೇ ವೈ ವಿದ್ಧ್ವಾ ಪರಪುರಂಜಯಃ ।
ಅಥೈನಂ ಪಂಚವಿಂಶತ್ಯಾ ಪುನರನ್ಯೈಃ ಸಮರ್ಪಯತ್ ॥ ೧೩ ॥

ಪರಪುರಂಜಯನಾದ ಅವನು ಆ ಬಾಣದಿಂದ ದುಶ್ಶಾಸನನನ್ನು ಭುಜಸಂಧಿ ದೇಶದಲ್ಲಿ ಹೊಡೆದು ಪುನಃ ಅವನಿಗೆ ಇಪ್ಪತ್ತೈದು ಬಾಣಗಳನ್ನು ಅರ್ಪಿಸಿದನು.

ಶರೈರಗ್ನಿಸಮಸ್ಪರ್ಶೈರಾಕರ್ಣಸಮಚೋದಿತೈಃ ।
ಸ ಗಾಢವಿದ್ಧೋ ವ್ಯಥಿತಃ ಸ್ಯಂದನೋಪಸ್ಥ ಆವಿಶತ್ ।
ದುಃಶಾಸನೋ ಮಹಾರಾಜ ಕಶ್ಮಲೋಪಹತೋ ಭೃಶಮ್ ॥ ೧೪ ॥

ಎಲೈ ಮಹಾರಾಜನೇ, ಕಿವಿಯವರೆಗೂ ಎಳೆದು ಪ್ರಯೋಗಿಸಿದ ಅಗ್ನಿಗೆ ಸಮಾನವಾದ ಸ್ಪರ್ಶವುಳ್ಳ ಆ ಬಾಣಗಳಿಂದ ಗಾಢವಾಗಿ ಹೊಡೆಯಲ್ಪಟ್ಟು ವ್ಯಥೆಯಿಂದ ಕೂಡಿ, ರಥದ ಮಧ್ಯಭಾಗದಲ್ಲಿ ತೀವ್ರವಾದ ದುಃಖಕ್ಕೆ ಒಳಗಾಗಿ (ಮೂರ್ಛೆ ಹೊಂದಿದವನಾಗಿ) ದುಶ್ಶಾಸನನು ಕುಸಿದನು.

ಸಾರಥಿಸ್ತ್ವರಮಾಣಸ್ತು ದುಃಶಾಸನಮಚೇತನಮ್ ।
ರಣಮಧ್ಯಾದಪೋವಾಹ ಸೌಭದ್ರಶರಪೀಡಿತಮ್ ॥ ೧೫ ॥

ಅವನ ಸಾರಥಿಯು ಶೀಘ್ರವಾಗಿ ಅಭಿಮನ್ಯುವಿನ ಬಾಣಗಳಿಂದ ಪೀಡಿತನಾದ, ಪ್ರಜ್ಞಾಶೂನ್ಯನಾದ ದುಶ್ಶಾಸನನನ್ನು ರಣಮಧ್ಯದಿಂದ ಹೊರಗೆ ಕರೆದುಕೊಂಡು ಹೋದನು.

ಪಾಂಡವಾ ದ್ರೌಪದೇಯಾಶ್ಚ ವಿರಾಟಃ ಸಹ ಸೃಂಜಯೈಃ ।
ಪಾಂಚಾಲಾಃ ಕೇಕಯಾಶ್ಚೈವ ಸಿಂಹನಾದಮಥಾನದನ್ ॥ ೧೬ ॥

ಪಾಂಡವರು, ದ್ರೌಪದಿಯ ಪುತ್ರರು, ಸೃಂಜಯರಿಂದ ಸಹಿತನಾದ ವಿರಾಟ, ಪಾಂಚಾಲರು, ಕೇಕಯರು ಆಗ ಸಿಂಹನಾದವನ್ನು ಮಾಡಿದರು.

ವಾದಿತ್ರಾಣಿ ಚ ಸರ್ವಾಣಿ ನಾನಾಲಿಂಗಾನಿ ಸರ್ವಶಃ ।
ಪ್ರಾವಾದಯಂತ ಸಂಹೃಷ್ಟಾಃ ಪಾಂಡೂನಾಂ ತತ್ರ ಸೈನಿಕಾಃ ॥ ೧೭ ॥

ಸಂತೋಷಗೊಂಡ ಪಾಂಡವರ ಸೈನಿಕರು ಆಗ ನಾನಾವಿಧವಾದ ಎಲ್ಲ ವಾದ್ಯಗಳನ್ನು ಎಲ್ಲ ಕಡೆಗಳಲ್ಲಿಯೂ ಭಾರಿಸಿದರು.

ಸ್ಥಯಮಾನಾಃ ಸ್ಮ ಪಶ್ಯಂತಿ ಸೌಭದ್ರಸ್ಯ ವಿಚೇಷ್ಟಿತಮ್ ।
ಅತ್ಯಂತವೈರಿಣಂ ದೃಷ್ಟ್ವಾ ದೃಪ್ತಂ ಶತ್ರುಂ ಪರಾಜಿತಮ್ ॥ ೧೮ ॥

ಧರ್ಮಮಾರುತಶಕ್ರಾಣಾಂ ಪ್ರತಿಮಾಶ್ಚಾಶ್ವಿನೋಃ ಶುಭಾಃ ।
ಧಾರಯಂತೋ ಧ್ವಜಾಗ್ರೇಷು ದ್ರೌಪದೇಯಾ ಮಹಾರಥಾಃ ॥ ೧೯ ॥

ದ್ರೌಪದಿಯ ಪುತ್ರರಾದ ಮಹಾರಥರು ಅತ್ಯಂತ ವೈರಿಯಾದ, ದರ್ಪಿಷ್ಠನಾದ ಶತ್ರುವು ಪರಾಜಿತನಾದುದನ್ನು ನೋಡಿ ಧರ್ಮ, ವಾಯು, ಇಂದ್ರ ಮತ್ತು ಅಶ್ವಿನಿಗಳ ಶುಭಪ್ರತಿಮೆಗಳನ್ನು ಧ್ವಜಾಗ್ರಗಳಲ್ಲಿ ಧರಿಸಿ ಅಭಿಮನ್ಯುವಿನ ಕಾರ್ಯಗಳನ್ನು ನೋಡಿದರು.

ಸಾತ್ಯಕಿಶ್ಚೇಕಿತಾನಶ್ಚ ಧೃಷ್ಟದ್ಯುಮ್ನಶಿಖಂಡಿನೌ ।
ಕೇಕಯಾ ಧೃಷ್ಟಕೇತುಶ್ಚ ಪಾಂಚಾಲಾ ಮತ್ಸ್ಯಸೃಂಜಯಾಃ ॥ ೨೦ ॥

ಪಾಂಡವಾಶ್ಚ ಮುದಾ ಯುಕ್ತಾ ಯುಧಿಷ್ಠಿರಪುರೋಗಮಾಃ ।
ಅಭ್ಯದ್ರವಂತ ಸಂಹೃಷ್ಟಾ ದ್ರೋಣಾನೀಕಂ ಬಿಭಿತ್ಸವಃ ॥ ೨೧ ॥

ಸಾತ್ಯಕಿ, ಚೇಕಿತಾನ, ಧೃಷ್ಟದ್ಯುಮ್ನ, ಶಿಖಂಡಿ, ಕೇಕಯರು, ಧೃಷ್ಟಕೇತು, ಪಾಂಚಾಲರು, ಮತ್ಸ್ಯ-ಸೃಂಜಯರು, ಪಾಂಡವರು ಎಲ್ಲರೂ ಯುಧಿಷ್ಠಿರನನ್ನು ಮುಂದೆ ಮಾಡಿಕೊಂಡು, ಸಂತೋಷದಿಂದ ಕೂಡಿದವರಾಗಿ ದ್ರೋಣಾನೀಕವನ್ನು ಭೇದಿಸಲು ಬಯಸಿ ಮುನ್ನುಗ್ಗಿದರು.

ಅಥಾಭವನ್ಮಹದ್ ಯುದ್ಧಂ ತ್ವದೀಯಾನಾಂ ಪರೈಃ ಸಹ ।
ಜಯಮಾಕಾಂಕ್ಷಮಾಣಾನಾಂ ಶೂರಾಣಾಮನಿವರ್ತಿನಾಮ್ ॥ ೨೨ ॥

ಅನಂತರ ಶೂರರೂ, ಯುದ್ಧದಿಂದ ಹಿಮ್ಮೆಟ್ಟದವರೂ, ಜಯಾಭಿಲಾಷಿಗಳೂ ಆದ ನಿನ್ನವರಿಗೂ ಮತ್ತು ಶತ್ರುಗಳಿಗೂ ದೊಡ್ಡ ಯುದ್ಧವು ನಡೆಯಿತು.

ತಥಾ ವೈ ವರ್ತಮಾನೇ ತು ಸಂಗ್ರಾಮೇಽತಿಭಯಂಕರೇ।
ಅಥ ದುರ್ಯೋಧನೋ ರಾಜಾ ರಾಧೇಯಮಿದಮಬ್ರವೀತ್ ॥ ೨೩ ॥

ಸೌಭದ್ರಮಭಿತಸ್ತಾತ್ತುಮ್ ಅಭಿಧಾವಂತಿ ಪಾಂಡವಾಃ ॥ ೨೪ ॥

ಅತಿಭಯಂಕರವಾದ ಯುದ್ಧವು ಆಗ ನಡೆಯುತ್ತಿರಲು ರಾಜನಾದ ದುರ್ಯೋಧನನು ಕರ್ಣನನ್ನು ಕುರಿತು, ಅಭಿಮನ್ಯುವನ್ನು ಎಲ್ಲ ಕಡೆಯಿಂದಲೂ ರಕ್ಷಿಸಲು ಪಾಂಡವರು ಓಡಿ ಬರುತ್ತಿದ್ದಾರೆ ಎಂದು ಹೇಳಿದನು.

ಸಂಜಯಃ

ತತಃ ಕರ್ಣಃ ಶರೈಸ್ತೀಕ್ಷ್ಣೈರಭಿಮನ್ಯುಂ ದುರಾಸದಮ್ ।
ಅಭ್ಯವರ್ಷತ್ ಸುಸಂಕ್ರುದ್ಧಃ ಪುತ್ರಸ್ಯ ಪ್ರಿಯಕೃತ್ ತವ ॥ ೨೫ ॥

ಸಂಜಯ– ಅನಂತರ ಕರ್ಣನು ನಿನ್ನ ಪುತ್ರನಿಗೆ ಪ್ರಿಯವನ್ನು ಉಂಟುಮಾಡುವವನಾಗಿ, ಬಹಳ ಕೋಪಗೊಂಡು, ಸಮೀಪಿಸಲೂ ಅಸಾಧ್ಯನಾದ ಅಭಿಮನ್ಯುವಿನ ಮೇಲೆ ತೀಕ್ಷ್ಣವಾದ ಬಾಣಗಳ ಮಳೆಯನ್ನು ಸುರಿಸಿದನು.

ತಸ್ಯ ಚಾನುಚರಾಂಸ್ತೀಕ್ಷ್ಣೈರ್ವಿಷ್ಟಭ್ಯ ಪರಮೇಷುಭಿಃ ।
ಅವಜ್ಞಾಪೂರ್ವಕಂ ಕರ್ಣಃ ಸೌಭದ್ರಂ ಪ್ರತ್ಯವಿದ್ಧ್ಯತ ॥ ೨೬ ॥

ಕರ್ಣನು ಅವನ ಅನುಚರರನ್ನು ತೀಕ್ಷ್ಣವಾದ ಶ್ರೇಷ್ಠ ಬಾಣಗಳಿಂದ ತಡೆದು ತಿರಸ್ಕಾರ ಪೂರ್ವಕವಾಗಿ ಅಭಿಮನ್ಯುವನ್ನು ಹೊಡೆದನು.

ಅಭಿಮನ್ಯುಸ್ತು ರಾಧೇಯಂ ತ್ರಿಸಪ್ತತ್ಯಾ ಶಿಲೀಮುಖೈಃ ।
ಅವಿದ್ಧ್ಯತ್ ತ್ವರಿತೋ ರಾಜನ್ ದ್ರೋಣಂ ಪ್ರೇಪ್ಸುರ್ಮಹಾಮನಾಃ ॥

ಅಭಿಮನ್ಯುವಾದರೂ ದ್ರೋಣರ ಸಮೀಪಕ್ಕೆ ಹೋಗಲು ಬಯಸಿದವನಾಗಿ ಎಪ್ಪತ್ಮೂರು ಬಾಣಗಳಿಂದ ಶೀಘ್ರವಾಗಿ ಕರ್ಣನನ್ನು ಹೊಡೆದನು.

ತಂ ತದಾ ನಾಶಕತ್ ಕಶ್ಚಿದ್ ದ್ರೋಣಾದ್ ವಾರಯಿತುಂ ರಣೇ ।
ಆರುಜಂತಂ ರಥಶ್ರೇಷ್ಠಾನ್ ವಜ್ರಹಸ್ತಮಿವಾಸುರಾನ್ ॥ ೨೮ ॥

ಆಗ ವಜ್ರಹಸ್ತನಾದ ಇಂದ್ರನು ಅಸುರರನ್ನು ಪೀಡಿಸಿದಂತೆ, ರಥಶ್ರೇಷ್ಠರನ್ನು ಪೀಡಿಸುತ್ತಿದ್ದ ಅಭಿಮನ್ಯುವನ್ನು ರಣರಂಗದಲ್ಲಿ ಯಾವನೂ ದ್ರೋಣರ ಕಡೆಗೆ ಹೋಗದಂತೆ ತಡೆಯಲು ಶಕ್ತನಾಗಲಿಲ್ಲ.

ತತಃ ಕರ್ಣೋ ಜಯಪ್ರೇಪ್ಸುರ್ಮಾನೀ ಸರ್ವಧನುರ್ಭೃತಾಮ್ ।
ಸೌಭದ್ರಂ ಶತಶೋಽವಿದ್ಧ್ಯತ್ ಉತ್ತಮಾಸ್ತ್ರಾಣಿ ದರ್ಶಯನ್ ॥ ೨೯ ॥

ಆಗ ಜಯಾಭಿಲಾಷಿಯೂ, ಸರ್ವಧನುರ್ಧಾರಿಗಳಲ್ಲಿ ಅಹಂಕಾರಿಯೂ ಆದ ಕರ್ಣನು ಉತ್ತಮಾಸ್ತ್ರಗಳನ್ನು ಪ್ರದರ್ಶಿಸುತ್ತಾ ಅಭಿಮನ್ಯುವನ್ನು ನೂರಾರು ಬಾಣಗಳಿಂದ ಹೊಡೆದನು.

ಸೋಽಸ್ತ್ರೈರಸ್ತ್ರವಿದಾಂ ಶ್ರೇಷ್ಠೋ ರಾಮಶಿಷ್ಯಃ ಪ್ರತಾಪವಾನ್ ।
ಸಮೇತ್ಯ ಶತ್ರುಂ ದುರ್ಧರ್ಷಮಭಿಮನ್ಯುಮಪೀಡಯತ್ ॥ ೩೦ ॥

ಪ್ರತಾಪಶಾಲಿಯೂ, ಪರಶುರಾಮನ ಶಿಷ್ಯನೂ, ಅಸ್ತ್ರವೇತ್ತರಲ್ಲಿ ಶ್ರೇಷ್ಠನೂ ಆದ ಅವನು ಶತ್ರುವೂ, ದುರ್ಧರ್ಷನೂ ಆದ ಅಭಿಮನ್ಯುವನ್ನು ಎದುರಿಸಿ ಅಸ್ತ್ರಗಳಿಂದ ಅವನನ್ನು ಪೀಡಿಸಿದನು.

ಸ ತಥಾ ಪೀಡ್ಯಮಾನಸ್ತು ರಾಧೇಯೇನಾಸ್ತ್ರವೃಷ್ಟಿಭಿಃ ।
ಸಮರೇಽಮರಸಂಕಾಶಃ ಸೌಭದ್ರೋ ನ ವಿಷೀದತಿ ॥ ೩೧ ॥

ರಣರಂಗದಲ್ಲಿ ಕರ್ಣನ ಅಸ್ತ್ರವೃಷ್ಟಿಗಳಿಂದ ಆ ರೀತಿಯಲ್ಲಿ ಪೀಡಿಸಲ್ಪಟ್ಟ ದೇವತಾಕಾಂತಿಯುಳ್ಳ ಆ ಅಭಿಮನ್ಯುವು ವಿಷಾದವನ್ನು ಹೊಂದಲಿಲ್ಲ.

ತತಃ ಶಿಲಾಶಿತೈಸ್ತೀಕ್ಷ್ಣೈರ್ಭಲ್ಲೈಃ ಸನ್ನತಪರ್ವಭಿಃ ।
ಛಿತ್ತ್ವಾ ಧನೂಂಷಿ ವೀರಾಣಾಮಾರ್ಜುನಿಃ ಕರ್ಣಮರ್ದಯತ್ ॥೩೨॥

ಧನುರ್ಮಂಡಲನಿರ್ಮುಕ್ತೈಃ ಶರೈರಾಶೀವಿಷೋಪಮೈಃ ।
ಸಧ್ವಜಚ್ಛತ್ರಯಂತಾರಂ ಸಾಶ್ವಮಾಶು ಸ್ಮಯನ್ನಿವ ॥ ೩೩ ॥

ಅನಂತರ ಕಲ್ಲಿನಲ್ಲಿ ಸಾಣೆಯನ್ನು ಹಿಡಿದ, ಬಾಗಿದ ಅಲುಗುಗಳನ್ನು ಹೊಂದಿದ, ತೀಕ್ಷ್ಣವಾದ ಭಲ್ಲಗಳಿಂದ ವೀರರ ಧನುಸ್ಸುಗಳನ್ನು ಕತ್ತರಿಸಿ, ಅಭಿಮನ್ಯುವು ಧ್ವಜ-ಛತ್ರ-ಸಾರಥಿ ಮತ್ತು ಅಶ್ವ ಸಹಿತನಾದ ಕರ್ಣನನ್ನು ನಗುತ್ತಾ

ಧನುರ್ಮಂಡಲದಿಂದ ಹೊರಹೊಮ್ಮಿದ, ಸರ್ಪಗಳಂತೆ ತೀಕ್ಷ್ಣವಾದ ಬಾಣಗಳಿಂದ ಅರ್ದಿಸಿದನು (ಪೀಡಿಸಿದನು).

ಕರ್ಣಃ ಪಂಚಾಸ್ಯ ಚಿಕ್ಷೇಪ ಬಾಣಾನ್ ಸನ್ನತಪರ್ವಣಃ ।
ಅಸಂಭ್ರಾಂತಶ್ಚ ತಾನ್ ಸರ್ವಾನಗೃಹ್ಣಾತ್ ಫಲ್ಗುನಾತ್ಮಜಃ ॥ ೩೪ ॥

ಕರ್ಣನು ಅವನ ಮೇಲೆ ಬಾಗಿದ ತುದಿಗಳನ್ನುಳ್ಳ ಐದು ಬಾಣಗಳನ್ನು ಪ್ರಯೋಗಿಸಿದನು. ಅರ್ಜುನನ ಪುತ್ರನು ಯಾವ ಗಾಬರಿಯೂ ಇಲ್ಲದೆ ಅವೆಲ್ಲವನ್ನೂ ಸ್ವೀಕರಿಸಿದನು.

ತತೋ ಮುಹೂರ್ತಾತ್ ಕರ್ಣಸ್ಯ ಬಾಣೇನೈಕೇನ ವೀರ್ಯವಾನ್ ।
ಸ ಧ್ವಜಂ ಕಾರ್ಮುಕಂ ಚಾಸ್ಯ ಛಿತ್ತ್ವಾ ಭೂಮೌ ನ್ಯಪಾತಯತ್ ॥೩೫॥

ಅನಂತರ ಒಂದು ಮುಹೂರ್ತದಲ್ಲಿ ಪರಾಕ್ರಮಶಾಲಿಯಾದ ಅಭಿಮನ್ಯುವು ಒಂದು ಬಾಣದಿಂದ ಕರ್ಣನ ಧ್ವಜವನ್ನೂ, ಧನುಸ್ಸನ್ನೂ ಕತ್ತರಿಸಿ ಭೂಮಿಯಲ್ಲಿ ಕೆಡವಿದನು.

ತತಃ ಕೃಚ್ಛ್ರಗತಂ ದೃಷ್ಟ್ವಾ ಕರ್ಣಂ ಕರ್ಣಾದನಂತರಃ ।
ಸೌಭದ್ರಮಭ್ಯಯಾತ್ ತೂರ್ಣಂ ದೃಢಮಾಯಮ್ಯ ಕಾರ್ಮುಕಮ್ ॥

ಕರ್ಣನು ಸಂಕಟಕ್ಕೆ ಸಿಲುಕಿದುದನ್ನು ನೋಡಿ ಕರ್ಣನ ತಮ್ಮನು ತನ್ನ ಧನುಸ್ಸನ್ನು ದೃಢವಾಗಿ ಬಗ್ಗಿಸಿ ಶೀಘ್ರವಾಗಿ ಅಭಿಮನ್ಯುವಿನ ಕಡೆಗೆ ಧಾವಿಸಿದನು.

ತತ ಉಚ್ಚುಕ್ರುಶುಃ ಸರ್ವೇ ಪಾರ್ಥಾಃ ಸಾನುಚರಾಸ್ತಥಾ ।
ವಾದಿತ್ರಾಣ್ಯಥ ಸಂಜಘ್ನುಃ ಸೌಭದ್ರಂ ಚಾಪಿ ತುಷ್ಟುವುಃ ॥ ೩೭ ॥

ಆಗ ಎಲ್ಲ ಪಾರ್ಥರೂ ಮತ್ತು ಅವನ ಅನುಚರರೂ ಸಂತೋಷದ ನಾದವನ್ನು ಮಾಡಿದರು. ವಾದ್ಯಗಳನ್ನು ಬಾರಿಸಿದರು ಮತ್ತು ಅಭಿಮನ್ಯುವನ್ನು ಹೊಗಳಿದರು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಂ ದ್ರೋಣಪರ್ವಣಿ ಏಕೋನಚತ್ವಾರಿಂಶೋऽಧ್ಯಾಯಃ ॥
॥ ಅಭಿಮನ್ಯುವಧಪರ್ವಣಿ ಅಷ್ಟಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಮೂವತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನಲವತ್ತನೆಯ ಅಧ್ಯಾಯ

ಅಭಿಮನ್ಯುವಿನ ಪರಾಕ್ರಮದ ವರ್ಣನೆ.

ಸಂಜಯಃ

ಸೋಽತಿಗರ್ಜನ್ ಧನುಷ್ಪಾಣೇರ್ಜ್ಯಾಂ ವಿಕರ್ಷನ್ ಪುನಃಪುನಃ ।
ತಯೋರ್ಮಹಾತ್ಮನೋಸ್ತೂರ್ಣಂ ರಥೋಽಂತರಮವಾಪತತ್ ॥ ೧ ॥

ಅಭಿಮನ್ಯುವು ಧನುಸ್ಸನ್ನು ಹಿಡಿದು ಪುನಃ ಪುನಃ ಹೆದೆಯನ್ನು ಎಳೆಯುತ್ತಾ, ಬಹಳವಾಗಿ ಗರ್ಜಿಸುತ್ತಾ, ಮಹಾತ್ಮರಾದ ಕರ್ಣ ಮತ್ತು ಅವನ ತಮ್ಮನ ಮಧ್ಯದಲ್ಲಿ ಶೀಘ್ರವಾಗಿ ತನ್ನ ರಥವನ್ನು ಪ್ರವೇಶಿಸಿದನು.

ಸೋಽವಿದ್ಧ್ಯದ್ ದಶಭಿರ್ಬಾಣೈರಭಿಮನ್ಯುಂ ದುರಾಸದಮ್ ।
ಸಚ್ಛತ್ರಧ್ವಜಯಂತಾರಂ ಸಾಶ್ವಮಾಶು ಸ್ಮಯನ್ನಿವ ॥ ೨ ॥

ಕರ್ಣನ ಸಹೋದರನು ನಗುತ್ತಾ, ಹತ್ತು ಬಾಣಗಳಿಂದ ಛತ್ರ-ಧ್ವಜ-ಸಾರಥಿ-ಅಶ್ವ ಸಹಿತನಾದ ಸಮೀಪಿಸಲು ದುಸ್ಸಾಧ್ಯನಾದ ಅಭಿಮನ್ಯುವನ್ನು ಶೀಘ್ರವಾಗಿ ಹೊಡೆದನು.

ಪಿತೃಪೈತಾಮಹಂ ಕರ್ಮ ಕುರ್ವಾಣಮತಿಮಾನುಷಮ್ ।
ದೃಷ್ಟ್ವಾಽರ್ದಿತಂ ಶರೈಃ ಕಾರ್ಷ್ಣಿಂ ತ್ವದೀಯಾ ಹೃಷಿತಾಽಭವನ್ ॥ ೩ ॥

ಅತಿಮಾನುಷವಾದ ಪಿತೃಕರ್ಮವನ್ನು ಮಾಡುವ ಅಭಿಮನ್ಯುವು ಬಾಣಗಳಿಂದ ಪೀಡಿತನಾದುದನ್ನು ನೋಡಿ ನಿನ್ನವರು ಸಂತುಷ್ಟರಾದರು.

ತಸ್ಯಾಭಿಮನ್ಯುರಾಯಮ್ಯ ಸ್ಮಯನ್ನೇಕೇನ ಪತ್ರಿಣಾ ।
ಶಿರಃ ಪ್ರಚ್ಯಾವಯಾಮಾಸ ಸ ರಥಾತ್ ಪ್ರಾಪತದ್ ಭುವಿ ॥ ೪ ॥

ಅಭಿಮನ್ಯುವು ನಗುತ್ತಾ, ಒಂದು ಬಾಣದಿಂದ ಧನುಸ್ಸನ್ನು ಎಳೆದು ಅವನ ಶಿರಸ್ಸನ್ನು ಉರುಳಿಸಿದನು. ಕರ್ಣನ ಸಹೋದರನು ರಥದಿಂದ ಭೂಮಿಯ ಮೇಲೆ ಬಿದ್ದನು.

ಕರ್ಣಕಾರಮಿವೋದ್ಧೂತಂ ವಾತೇನ ಪಾತಿತಂ ನಗಾತ್ ।
ಕರ್ಣಾನುಜಂ ಚ ಸಂಪ್ರೇಕ್ಷ್ಯ ತಾವಕಾ ವ್ಯಥಿತಾಽಭವನ್ ।
ಭ್ರಾತರಂ ನಿಹತಂ ದೃಷ್ಟ್ವಾ ರಾಜನ್ ಕರ್ಣೋ ವ್ಯಥಾಂ ಯಯೌ ॥ ೫ ॥

ವಾಯುವೇಗದಿಂದ ಪರ್ವತದಿಂದ ಬೀಳಿಸಲ್ಪಟ್ಟ ಕರ್ಣಿಕಾರ ವೃಕ್ಷದಂತಿದ್ದ ಕರ್ಣನ ತಮ್ಮನನ್ನು ನೋಡಿ ನಿನ್ನವರು ವ್ಯಥೆಗೊಂಡರು. ರಾಜನೇ, ತಮ್ಮನು ಹತನಾದುದನ್ನು ನೋಡಿ ಕರ್ಣನೂ ವ್ಯಥೆಪಟ್ಟನು.

ವಿಮುಖೀಕೃತ್ಯ ಕರ್ಣಂ ತು ಸೌಭದ್ರಃ ಕಂಕಪತ್ರಿಭಿಃ ।
ಅನ್ಯಾಂಶ್ಚ ಪರಮೇಷ್ವಾಸಾನ್ ತೂರ್ಣಂ ಕರ್ಣಮುಪಾದ್ರವತ್ ॥ ೬ ॥

ಅಭಿಮನ್ಯುವು ಕಂಕಪತ್ರವುಳ್ಳ ಬಾಣಗಳಿಂದ ಕರ್ಣನನ್ನು ವಿಮುಖನನ್ನಾಗಿ ಮಾಡಿ, ಉಳಿದ ಧನುರ್ಧಾರಿಗಳನ್ನೂ ವಿಮುಖರನ್ನಾಗಿ ಮಾಡಿ, ಶೀಘ್ರವಾಗಿ ಕರ್ಣನ ಮೇಲೆ ಎರಗಿದನು.

ತತಸ್ತದ್ ವಿತತಂ ಜಾಲಂ ಹಸ್ತ್ಯಶ್ವರಥಪತ್ತಿಮತ್ ।
ರುಷಃ ಕ್ರುದ್ಧ ಇವಾಭಿನದಭಿಮನ್ಯುರ್ಮಹಾಯಶಾಃ ॥ ೭ ॥

ಅನಂತರ ಗಜಾಶ್ವ-ರಥ-ಪದಾತಿಗಳಿಂದ ಕೂಡಿದ ವಿಸ್ತಾರವಾದ ಕೌರವರ ಸೈನ್ಯ ಸಮೂಹವನ್ನು ಮೊಸಳೆಯಂತೆ ಕ್ರೋಧಗೊಂಡ, ಮಹಾಕೀರ್ತಿವಂತನಾದ ಅಭಿಮನ್ಯುವು ಭೇದಿಸಿದನು.

ಕರ್ಣಸ್ತು ಬಹುಭಿರ್ಬಾಣೈರರ್ದ್ಯಮಾನೋಽಭಿಮನ್ಯುನಾ ।
ಅಪಾಯಾಜ್ಜವನೈರಶ್ವೈಸ್ತತೋಽನೀಕಮಭಿದ್ಯತ ॥ ೮ ॥

ಕರ್ಣನಾದರೋ ಅಭಿಮನ್ಯುವಿನಿಂದ ಅನೇಕ ಬಾಣಗಳಿಂದ ಪೀಡಿತನಾಗಿ ವೇಗಶಾಲಿಗಳಾದ ಅಶ್ವಗಳಿಂದ ರಣರಂಗವನ್ನು ಬಿಟ್ಟು ಹೋದನು. ಅನಂತರ ಕೌರವ ಸೈನ್ಯವು ಭಗ್ನವಾಯಿತು.

ತಿಷ್ಠ ಕರ್ಣ ಮಹೇಷ್ವಾಸ ಕೃಪ ದುರ್ಯೋಧನೇತಿ ಚ ।
ದ್ರೋಣಸ್ಯ ಕ್ರೋಶತೋ ರಾಜನ್ ತದನೀಕಮಭಜ್ಯತ ॥ ೯ ॥

ರಾಜನೇ, ದ್ರೋಣರು 'ಮಹಾಧನುರ್ಧಾರಿಯಾದ ಕರ್ಣನೇ ನಿಲ್ಲು, ಕೃಪ-ದುರ್ಯೋಧನರೇ ನಿಲ್ಲಿ' ಎಂದು ಕಿರುಚುತ್ತಿದ್ದರೂ ಆ ಸೈನ್ಯವು ಭಗ್ನವಾಯಿತು.

ಶಲಭೈರಿವ ಚಾಕಾಶಂ ಧಾರಾಭಿರಿವ ಸಂವೃತಮ್ ।
ಅಭಿಮನ್ಯೋಃ ಶರೈಶ್ಚನ್ನಂ ನ ಪ್ರಾಜ್ಞಾಯತ ಕಿಂಚನ ॥ ೧೦ ॥

ಪತಂಗಗಳಿಂದ ಆಕಾಶವು ತುಂಬಿದಂತೆ ಅಭಿಮನ್ಯುವಿನ ಶರಧಾರೆಗಳಿಂದ ಎಲ್ಲವೂ ತುಂಬಿ ಆಚ್ಛಾದಿತವಾಯಿತು. ಯಾವುದೂ ತಿಳಿಯಲಿಲ್ಲ.

ತಾವಕಾನಾಂ ತು ಯೋಧಾನಾಂ ವಧ್ಯತಾಂ ನಿಶಿತೈಃ ಶರೈಃ ।
ನಾನ್ಯತ್ರ ಸೈಂಧವಾದ್ ರಾಜನ್ ಕಶ್ಚಿತ್ ತತ್ರಾವತಿಷ್ಠತಿ ॥ ೧೧ ॥

ರಾಜನೇ, ನಿನ್ನ ಸೈನಿಕರು ನಿಶಿತವಾದ ಬಾಣಗಳಿಂದ ವಧಿಸಲ್ಪಡುತ್ತಿದ್ದಾಗ ಸೈಂಧವನನ್ನು ಬಿಟ್ಟು ಬೇರೆ ಯಾರೂ ಅಲ್ಲಿ ನಿಲ್ಲಲಿಲ್ಲ.

ಸೌಭದ್ರಸ್ತು ತತಃ ಶಂಖಂ ಪ್ರಧ್ಮಾಯ ರಣಮೂರ್ದ್ಧನಿ ।
ಶೀಘ್ರಮಭ್ಯಪತತ್ ಸೇನಾಂ ಭಾರತೀಂ ಪಿತೃನಂದನಃ ॥ ೧೨ ॥

ಪಿತೃನಂದನನಾದ ಅಭಿಮನ್ಯುವು ಶ್ರೇಷ್ಠವಾದ ಆ ಯುದ್ಧದಲ್ಲಿ ಆಗ ಶಂಖವನ್ನು ಊದಿ ಶೀಘ್ರವಾಗಿ ಕೌರವ ಸೇನೆಯ ಮೇಲೆ ಎರಗಿದನು.

ಸ ಕಕ್ಷೇಽಗ್ನಿರಿವೋತ್ಸೃಷ್ಟೋ ನಿರ್ದಹಂಸ್ತರಸಾ ರಿಪೂನ್ ।
ಮಧ್ಯೇ ಭಾರತಸೈನ್ಯಾನಾಮಾರ್ಜುನಿಃ ಪರ್ಯವರ್ತತ ॥ ೧೩ ॥

ಅವನು ಹುಲ್ಲುಗಾವಲಿನಲ್ಲಿ ವಿಸರ್ಜನೆ ಮಾಡಿದ ಅಗ್ನಿಯಂತೆ ಶತ್ರುಗಳನ್ನು ಶೀಘ್ರವಾಗಿ ಸ್ವೀಕರಿಸುತ್ತಾ ಕೌರವ ಸೈನ್ಯದ ಮಧ್ಯದಲ್ಲಿ ಸಂಚರಿಸಿದನು.

ರಥಾಶ್ವನಾಗಮನುಜಾನ್ ನಿರ್ದಹನ್ ನಿಶಿತೈಃ ಶರೈಃ ।
ಸಂಪ್ರವಿಶ್ಯಾಕರೋದ್ ಭೂಮಿಂ ಕಬಂಧಗಣಸಂಕುಲಾಮ್ ॥ ೧೪ ॥

ಕೌರವ ಸೈನ್ಯವನ್ನು ಪ್ರವೇಶಿಸಿ, ತನ್ನ ಹರಿತವಾದ ಬಾಣಗಳಿಂದ ರಥಾಶ್ವ-ಗಜ-ಮನುಷ್ಯರನ್ನು ದಹಿಸುತ್ತಾ, ರಣಭೂಮಿಯನ್ನು ರುಂಡಗಳ ಸಮೂಹದಿಂದ ನಿಬಿಡವನ್ನಾಗಿ ಮಾಡಿದನು.

ಸೌಭದ್ರಚಾಪಪ್ರಭವೈರ್ನಿಕೃತ್ತಾಃ ಪರಮೇಷುಭಿಃ ।
ಸ್ವಾನೇವಾಭಿಮುಖಾನ್ ಘ್ನಂತಃ ಪ್ರಾದ್ರವನ್ ಜೀವಿತಾರ್ಥಿನಃ ॥ ೧೫ ॥

ಅಭಿಮನ್ಯುವಿನ ಬಿಲ್ಲಿನಿಂದ ಹೊರಹೊಮ್ಮಿದ ಶ್ರೇಷ್ಠ ಬಾಣಗಳಿಂದ ಕತ್ತರಿಸಲ್ಪಟ್ಟ ನಿನ್ನ ಯೋಧರು ಜೀವಿತವನ್ನು ಬಯಸಿ ತಮ್ಮ ಸೇನೆಗೆ ಅಭಿಮುಖವಾಗಿಯೇ ಅವರನ್ನೇ ಕೊಲ್ಲುತ್ತಾ ಓಡಿದರು.

ತೇ ಘೋರಾ ರೌದ್ರಕರ್ಮಾಣೋ ವಿಪಾಠಾ ಪೃಥವಃ ಶಿತಾಃ ।
ನಿಘ್ನಂತೋ ರಥನಾಗಾಶ್ವಾನ್ ಜಗ್ಮುರಾಶು ವಸುಂಧರಾಮ್ ॥ ೧೬ ॥

ಅಭಿಮನ್ಯುವು ಪ್ರಯೋಗಿಸಿದ ಘೋರವಾದ, ಭಯಂಕರ ಕರ್ಮವನ್ನು ಮಾಡುವ, ವಿಸ್ತಾರವಾದ ಮತ್ತು ನಿಶಿತವಾದ ವಿಪಾಠಗಳು ರಥ-ಗಜಾಶ್ವಗಳನ್ನು ಕೊಲ್ಲುತ್ತಾ ಶೀಘ್ರವಾಗಿ ಭೂಮಿಯನ್ನು ಸೇರಿದವು.

ಸಾಯುಧಾಃ ಸಾಂಗುಲತ್ರಾಣಾಃ ಸಖಡ್ಗಾಃ ಸಾಂಗದಾ ರಣೇ ।
ದೃಶ್ಯಂತೇ ಬಾಹವಶ್ಚಿನ್ನಾ ಹೇಮಾಭರಣಭೂಷಿತಾಃ ॥ ೧೭ ॥

ರಣರಂಗದಲ್ಲಿ ಆಯುಧಗಳನ್ನು ಹಿಡಿದ, ಅಂಗುಲಿತ್ರಾಣಗಳನ್ನು ಧರಿಸಿದ, ಖಡ್ಗವನ್ನು ಧರಿಸಿದ, ಅಂಗದ ಭೂಷಿತವಾದ, ಸುವರ್ಣಾಭರಣ ಭೂಷಿತವಾದ ಕತ್ತರಿಸಲ್ಪಟ್ಟ ಬಾಹುಗಳು ಕಂಡುಬಂದವು.

ಋಷ್ಟ್ಯಶ್ಚಾಪಾನಿ ಖಡ್ಗಾಶ್ಚ ಶರೀರಾಣಿ ಶಿರಾಂಸಿ ಚ ।
ಸಕುಂಡಲಾನಿ ಸ್ರಗ್ವೀಣಿ ಭೂಮಾವಾಸನ್ ಸಹಸ್ರಶಃ ॥ ೧೮ ॥

ಭೂಮಿಯ ಮೇಲೆ ಋಷ್ಟಿಗಳು, ಬಿಲ್ಲುಗಳು, ಖಡ್ಗಗಳು, ಶರೀರಗಳು, ಕುಂಡಲ ಮತ್ತು ಮಾಲೆಗಳನ್ನು ಧರಿಸಿದ ಶಿರಸ್ಸುಗಳು ಸಹಸ್ರ ಸಂಖ್ಯೆಯಲ್ಲಿ ಇದ್ದವು.

ಅವಸ್ಕರೈರಧಿಷ್ಠಾನೈರೀಷಾದಂಡಕಬಂಧುರೈಃ ।
ಅಕ್ಷೈರ್ವಿಮಥಿತೈಶ್ಚಕ್ರೈರ್ಭಗ್ನೈಶ್ಚ ಬಹುಧಾ ರಥೈಃ ॥ ೧೯ ॥

ಶಕ್ತಿಚಾಪಾಯುಧೈಶ್ಚಾನ್ಯೈ ಃ ಪತಿತೈಶ್ಚ ಮಹಾಧ್ವಜೈಃ ।
ವರ್ಮಚಾಪಶರೈಶ್ಚೈವ ವ್ಯವಕೀರ್ಣೈಃ ಸಮಂತತಃ ।
ನಿಹತೈಃ ಕ್ಷತ್ರಿಯೈರಶ್ವೈಃ ಕುಂಜರೈಶ್ಚ ವಿಶಾಂಪತೇ ॥ ೨೦ ॥

ಅಗಮ್ಯಕಲ್ಪಾ ಪೃಥಿವೀ ವೀಕ್ಷಿತಾऽऽಸೀತ್ ಸುದಾರುಣಾ ॥೨೧॥

ಎಲೈ ರಾಜನೇ, ಭಗ್ನಗೊಂಡ ರಥಗಳ ಅಮಸ್ಕರಗಳಿಂದಲೂ, ಅಧಿಷ್ಠಾನದಿಂದಲೂ, ಈಷಾ-ದಂಡದಿಂದಲೂ, ಅಶ್ವಯುಗಗಳಿಂದಲೂ, ಅಕ್ಷಗಳಿಂದಲೂ, ಚಕ್ರಗಳಿಂದಲೂ, ಬಹಳ ರೀತಿಯಲ್ಲಿ ಭಗ್ನವಾದ ರಥಗಳಿಂದಲೂ, ನೆಲದ ಮೇಲೆ ಬಿದ್ದ ಶಕ್ತಿ-ಚಾಪ ಮೊದಲಾದ ಆಯುಧಗಳಿಂದಲೂ, ಮಹಾಧ್ವಜಗಳಿಂದಲೂ, ಕವಚ-ಧನುಸ್ಸು ಮತ್ತು ಶರಗಳಿಂದಲೂ, ಹತರಾದ ಕ್ಷತ್ರಿಯರಿಂದಲೂ, ಅಶ್ವಗಳಿಂದಲೂ, ನಾಗಗಳಿಂದಲೂ ಎಲ್ಲಕಡೆಯಲ್ಲಿಯೂ ಹರಡಲ್ಪಟ್ಟ ರಣಭೂಮಿಯು ಮುಂದೆ ಹೋಗಲು ಅಸಾಧ್ಯವಾದುದಾಗಿ ನೋಡಲು ಬಹಳ ಭಯಂಕರವಾಗಿದ್ದಿತು.

ವಧ್ಯತಾಂ ರಾಜಪುತ್ರಾಣಾಂ ಕ್ರಂದತಾಮಿತರೇತರಮ್ ।
ಪ್ರಾದುರಾಸೀನ್ಮಹಾಶಬ್ದಃ ಭೀರೂಣಾಂ ಭಯವರ್ಧನಃ ॥ ೨೨ ॥

ವಧಿಸಲ್ಪಡುವ ಪರಸ್ಪರವಾಗಿ ಆಕ್ರಂದಿಸುವ ರಾಜಪುತ್ರರ, ಭೀರುಗಳಿಗೆ ಭಯಜನಕವಾದ ದೊಡ್ಡ ನಾದವು ಉಂಟಾಯಿತು.

ಸ ಶಬ್ದಃ ಖಂ ನರವ್ಯಾಘ್ರ ಸಹಸಾऽಭಿವ್ಯನಾದಯತ್ ।
ಕ್ಷಿಪ್ರಮಭ್ಯಪತತ್ ಸೈನ್ಯಂ ನಿಘ್ನನ್ನಶ್ವರಥದ್ವಿಪಾನ್ ॥ ೨೩ ॥

ಎಲೈ ನರವ್ಯಾಘ್ರನೇ, ಆ ಶಬ್ದವು ಆಕಾಶಾದಿ ಎಲ್ಲಕಡೆಯಲ್ಲಿಯೂ ಪ್ರತಿಧ್ವನಿಸಿ, ಅಶ್ವ-ರಥ- ಗಜಗಳನ್ನು ಕೊಲ್ಲುತ್ತಾ, ಕ್ಷಿಪ್ರವಾಗಿ ಸೈನ್ಯದಲ್ಲಿ ಹರಡಿತು.

ಕಕ್ಷಮಗ್ನಿರಿವೋತ್ಸೃಷ್ಟೋ ನಿರ್ದಹನ್ನರಿವಾಹಿನೀಮ್ ।
ಮಧ್ಯೇ ಭಾರತಸೈನ್ಯಾನಾಮಾರ್ಜುನಿಃ ಪ್ರತ್ಯದೃಶ್ಯತ ॥ ೨೪ ॥

ಹುಲ್ಲುಗಾವಲಿನಲ್ಲಿ ವಿಸರ್ಜಿತವಾದ ಅಗ್ನಿಯಂತೆ ಶತ್ರುಸೈನ್ಯವನ್ನು ಸುಡುತ್ತಾ ಅಭಿಮನ್ಯುವು ಕೌರವರ ಸೈನ್ಯದ ಮಧ್ಯದಲ್ಲಿ ಕಾಣಿಸಿದನು.

ಸ ದಿಶೋ ವಿಚರನ್ ಸರ್ವಾಃ ಪ್ರದಿಶಶ್ಚಾಹಿತಾನ್ ರುಜನ್ ।
ತಂ ತದಾ ನಾನುಪಶ್ಯಾಮಃ ಸ್ವಸೈನ್ಯೇ ರಜಸಾऽऽವೃತೇ ॥ ೨೫ ॥

ಅವನು ಎಲ್ಲ ದಿಕ್ಕುಗಳಲ್ಲಿಯೂ ಸಂಚರಿಸುತ್ತಾ, ಶತ್ರುಗಳನ್ನು ಮರ್ದಿಸುತ್ತಿರುವಾಗ ಅವನು ಸೈನ್ಯದಿಂದ ಉಂಟಾದ ಧೂಳಿನಿಂದ ಆವೃತನಾಗಿರಲು ಆಗ ಅವನನ್ನು ನಾವು ನೋಡಲಿಲ್ಲ.

ಆದದಾನಂ ಗಜಾಶ್ವಾನಾಂ ನೃಣಾಮಾಯೂಂಷಿ ಭಾರತ ।
ಕ್ಷಣೇನ ಚಾಭಿಪಶ್ಯಾಮಃ ಸೂರ್ಯಂ ಮಧ್ಯಂದಿನೇ ಯಥಾ ।
ಅಭಿಮನ್ಯುಂ ಮಹಾರಾಜ ಪ್ರತಪಂತಂ ದ್ವಿಷದ್ಗಣಾನ್ ॥ ೨೬ ॥

ಎಲೈ ಭಾರತನೇ, ಮಹಾರಾಜನೇ, ಒಂದು ಕ್ಷಣದಲ್ಲಿ ಮಧ್ಯಂದಿನದ ಸೂರ್ಯನಂತೆ ಗಜಾಶ್ವ-ಪದಾತಿಗಳ ಆಯುಸ್ಸನ್ನು ಅಪಹರಿಸುವ, ಶತ್ರುಸಮೂಹವನ್ನು ಸಂತಾಪಗೊಳಿಸುವ ಆ ಅಭಿಮನ್ಯುವನ್ನು ನೋಡಿದೆವು.

ಸ ವಾಸವಸಮಃ ಸಂಖ್ಯೇ ವಾಸವಸ್ಯಾತ್ಮಜಾತ್ಮಜಃ ।
ಅಭಿಮನ್ಯುರ್ಮಹಾರಾಜ ಸೇನಾಮಧ್ಯೇ ವ್ಯರೋಚತ ॥ ೨೭ ॥

ಯಥಾ ಪುರಾ ವಹ್ನಿಸುತಃ ಸುರಸೈನ್ಯೇಷು ವೀರ್ಯವಾನ್ ॥ ೨೮ ॥

ವಾಸವಪುತ್ರನ ಪುತ್ರನಾದ, ವಾಸವನಿಗೆ ಸಮಾನನಾದ ಅಭಿಮನ್ಯುವು ಮಹಾರಾಜನೇ, ಹಿಂದೆ ಅಗ್ನಿಪುತ್ರನಾದ, ಪರಾಕ್ರಮಶಾಲಿಯಾದ ಷಣ್ಮುಖನು ಸುರಸೇನೆಯಲ್ಲಿ ಶೋಭಿಸಿದಂತೆ ಶೋಭಿಸಿದನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಂ ದ್ರೋಣಪರ್ವಣಿ ಚತ್ವಾರಿಂಶೋಽಧ್ಯಾಯಃ ॥

॥ ಅಭಿಮನ್ಯುವಧಪರ್ವಣಿ ನವಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನಲವತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನಲವತ್ತೊಂದನೆಯ ಅಧ್ಯಾಯ

ಸಂಜಯನಿಂದ ರುದ್ರದೇವರ ವರಬಲದಿಂದ ಸೈಂಧವನಿಂದ
ಪಾಂಡವರ ನಿರೋಧದ ಕಥನ.

ಧೃತರಾಷ್ಟ್ರಃ

ಬಾಲಮತ್ಯಂತಸುಖಿನಂ ಸ್ವಬಾಹುಬಲದರ್ಪಿತಮ್ ।
ಯುದ್ಧೇಷ್ವಕುಶಲಂ ವೀರಂ ಕುಲಪುತ್ರಂ ತನುತ್ಯಜಮ್ ॥ ೧ ॥

ಗಾಹಮಾನಮನೀಕಾನಿ ಕಿಶೋರಾಶ್ವೈಃ ಸ್ಮಿತಾಯನೈಃ ।
ಅಪಿ ಯೌಧಿಷ್ಠಿರಾತ್ ಸೈನ್ಯಾದೇಕೋಽಪ್ಯನುಪತನ್ ರಥೀ ॥ ೨ ॥

ಧೃತರಾಷ್ಟ್ರ– ಬಾಲಕನೂ, ಅತ್ಯಂತ ಸುಖಿಯೂ, ತನ್ನ ಬಾಹುಬಲದಿಂದ ದರ್ಪಿತನಾದವನೂ, ಯುದ್ಧದಲ್ಲಿ ಕುಶಲನಲ್ಲದವನೂ, ವೀರನೂ, ಕುರುಪುತ್ರನೂ, ತನುತ್ಯಜನೂ, ಕಿಶೋರ ವಯಸ್ಸಿನ ಅಶ್ವಗಳಿಂದ ಶತ್ರುಗಳ ಸೈನ್ಯವನ್ನು ಪ್ರವೇಶಿಸುವವನೂ ಆದ ಅಭಿಮನ್ಯುವನ್ನು ಯುಧಿಷ್ಠಿರನ ಸೈನ್ಯದಿಂದ ಒಬ್ಬ ರಥಿಯೂ ಹಿಂಬಾಲಿಸಲಿಲ್ಲವೇ?

ಸಂಜಯಃ

ಯುಧಿಷ್ಠಿರೋ ಭೀಮಸೇನಃ ಶಿಖಂಡೀ ಸಾತ್ಯಕಿರ್ಯಮೌ ।
ಧೃಷ್ಟದ್ಯುಮ್ನೋ ವಿರಾಟಶ್ಚ ದ್ರುಪದಃ ಕೇಕಯಾಸ್ತಥಾ ॥ ೩ ॥

ಧೃಷ್ಟಕೇತುಶ್ಚ ಸಂರಬ್ಧಾ ಮತ್ಸ್ಯಾಶ್ಚಾನ್ವಪತನ್ ರಣೇ ।
ತೇನೈವ ತು ಪಥಾ ಯಾತಾಃ ಪಿತರೋ ಮಾತುಲೈಃ ಸಹ ॥ ೪ ॥

ಸಂಜಯ– ಯುಧಿಷ್ಠಿರ, ಭೀಮಸೇನ, ಶಿಖಂಡಿ, ಸಾತ್ಯಕಿ, ನಕುಲ- ಸಹದೇವರು, ಧೃಷ್ಟದ್ಯುಮ್ನ, ವಿರಾಟ, ದ್ರುಪದ, ಕೇಕಯರು, ಧೃಷ್ಟಕೇತು, ಮತ್ಸ್ಯರು ಎಲ್ಲರೂ ಕೋಪದಿಂದ ಕೂಡಿದವರಾಗಿ ಅಭಿಮನ್ಯುವು ಹೋದ ಮಾರ್ಗದಿಂದಲೇ ಅವನ ಪಿತೃಗಳೂ, ಸೋದರಮಾವಂದಿರ ಜೊತೆಯಲ್ಲಿ ಹೊರಟರು.

ಅನ್ವಧಾವನ್ ಪರೀಪ್ಸಂತೋ ವ್ಯೂಢಾನೀಕಾಃ ಪ್ರಹಾರಿಣಃ ।
ತಾನ್ ದೃಷ್ಟ್ವಾ ದ್ರವತಃ ಶೂರಾಂಸ್ತ್ವದೀಯಾ ವಿಮುಖಾಽಭವನ್ ॥೫॥

ತಮ್ಮ ಸೈನ್ಯವನ್ನು ವ್ಯೂಹಗೊಳಿಸಿ, ಪ್ರಹಾರವನ್ನು ಮಾಡುವವರಾಗಿ, ಅಭಿಮನ್ಯುವನ್ನು ರಕ್ಷಿಸಲು ಬಯಸಿ ಅವನ ಹಿಂದೆ ಧಾವಿಸಿದರು. ಓಡಿ ಬರುತ್ತಿರುವ ಆ ಶೂರರನ್ನು ನೋಡಿ ನಿನ್ನ ಯೋಧರು ವಿಮುಖರಾದರು.

ತತಸ್ತದ್ ವಿಮುಖಂ ದೃಷ್ಟ್ವಾ ತವ ಸೂನೋರ್ಮಹದ್ ಬಲಮ್ ।
ಜಾಮಾತಾ ತವ ತೇಜಸ್ವೀ ವಿಷ್ಟಂಭಯಿಷುರಾದ್ರವತ್ ॥ ೬ ॥

ಆಗ ನಿನ್ನ ಪುತ್ರನ ದೊಡ್ಡ ಸೈನ್ಯವು ವಿಮುಖವಾದುದನ್ನು ನೋಡಿ ಪರಾಕ್ರಮಶಾಲಿಯಾದ ನಿನ್ನ ಅಳಿಯನು ಧರ್ಮರಾಜಾದಿಗಳನ್ನು ತಡೆಯಲು ಓಡಿಬಂದನು.

ಸೈಂಧವಸ್ಯ ತು ಯೋ ರಾಜ್ಞಃ ಪುತ್ರೋ ರಾಜಾ ಜಯದ್ರಥಃ ।
ಸ ಪುತ್ರಗೃದ್ಧಿನಃ ಪಾರ್ಥಾನ್ ಸಹಸೈನ್ಯಾನವಾರಯತ್ ॥ ೭ ॥

ಸೈಂಧವರಾಜನಾದ ವೃದ್ಧಕ್ಷತ್ರನ ಪುತ್ರನಾದ ರಾಜನಾದ ಜಯದ್ರಥನು ತಮ್ಮ ಪುತ್ರನನ್ನು ರಕ್ಷಿಸಲು ಹೊರಟ ಪಾಂಡವರನ್ನು ಅವರ ಸೈನ್ಯದ ಜೊತೆಯಲ್ಲಿ ತಡೆದನು.

ಉಗ್ರಧನ್ವಾ ಮಹೇಷ್ವಾಸೋ ದಿವ್ಯಮಸ್ತ್ರಮುದೀರಯನ್ ।
ವಾರ್ಧಕ್ಷತ್ರಿರವಾಸೇಧತ್ ಪ್ರಭಿನ್ನಾನಿವ ಕುಂಜರಾನ್ ॥ ೮ ॥

ಉಗ್ರಧನ್ವನೂ, ಮಹಾಧನುರ್ಧಾರಿಯೂ ಆದ, ವೃದ್ಧಕ್ಷತ್ರಪುತ್ರನಾದ ಜಯದ್ರಥನು ದಿವ್ಯಾಸ್ತ್ರಗಳನ್ನು ಪ್ರಯೋಗಿಸುತ್ತಾ ಮದಿಸಿದ ಆನೆಗಳಂತಿದ್ದ (ಪಾಂಡವರನ್ನು) ತಡೆದನು.

ಧೃತರಾಷ್ಟ್ರಃ

ಅತಿಭಾರಮಹಂ ಮನ್ಯೇ ಸೈಂಧವೇ ಸಂಜಯಾಹಿತಮ್ ।
ಯದೇಕಃ ಪಾಂಡವಾನ್ ಕ್ರುದ್ಧಾನ್ ಪುತ್ರಗೃದ್ಧಿನವಾರಯತ್ ॥ ೯ ॥

ಧೃತರಾಷ್ಟ್ರ– ಸಂಜಯನೇ, ಪುತ್ರನನ್ನು ರಕ್ಷಿಸಲು ಬಯಸಿದ ಕ್ರುದ್ಧರಾದ ಪಾಂಡವರನ್ನು ಸೈಂಧವನು ತಡೆದನೆಂದರೆ, ಸೈಂಧವನ ಮೇಲೆ ಬಹಳ ಭಾರವು ಬಿದ್ದಿದೆ ಎಂದು ನಾನು ತಿಳಿಯುತ್ತೇನೆ.

ಅತ್ಯದ್ಭುತಮಹಂ ಮನ್ಯೇ ಬಲಂ ಶೌರ್ಯಂ ಚ ಸೈಂಧವೇ ।
ತಸ್ಯ ಪ್ರಬ್ರೂಹಿ ಮೇ ವೀರ್ಯಂ ಕರ್ಮ ಚೋಗ್ರಂ ಮಹಾತ್ಮನಃ ॥೧೦॥

ಸೈಂಧವನ ಬಲವೂ ಮತ್ತು ಪರಾಕ್ರಮವೂ ಅತ್ಯದ್ಭುತವೆಂದು ನಾನು ಭಾವಿಸುತ್ತೇನೆ. ಮಹಾತ್ಮನಾದ ಅವನ ಪರಾಕ್ರಮವನ್ನು ಮತ್ತು ಉಗ್ರಕರ್ಮವನ್ನು ನನಗೆ ಹೇಳು.

ಕಿಂ ದತ್ತಂ ಹುತಮಿಷ್ಟಂ ವಾ ಸ್ವಧೀತಮಥವಾ ತಪಃ ।
ದಮೋ ವಾ ಬ್ರಹ್ಮಚರ್ಯಂ ವಾ ಸೂತ ಯಚ್ಚಾಸ್ಯ ಸತ್ತಮ ॥ ೧೧ ॥

ಅವನು ಯಾವ ದಾನವನ್ನು ಅಥವಾ ಹೋಮವನ್ನು ಅಥವಾ ತಟಾಕಾದಿ ನಿರ್ಮಾಣವನ್ನು ಅಥವಾ ಅಧ್ಯಯನವನ್ನು ಅಥವಾ ತಪಸ್ಸನ್ನು ಮಾಡಿದ್ದಾನೊ ಅದನ್ನು ನನಗೆ ಹೇಳು. ಸಜ್ಜನರಲ್ಲಿ ಶ್ರೇಷ್ಠವಾದ ಸೂತನೇ, ಅವನ ಇಂದ್ರಿಯನಿಗ್ರಹವನ್ನು ಅಥವಾ ಬ್ರಹ್ಮಚರ್ಯವನ್ನು ನನಗೆ ಹೇಳು.

ದೇವಂ ಕತಮಮಾರಾಧ್ಯ ವಿಷ್ಣುಮೀಶಾನಮಗ್ನಿಜಮ್ ।
ಸಿಂಧುರಾಟ್ ತನಯೋ ಸಕ್ತಾನ್ ಕ್ರುದ್ಧಃ ಪಾರ್ಥಾನವಾರಯತ್ ॥೧೨॥

ವಿಷ್ಣು-ಶಿವ ಮತ್ತು ಷಣ್ಮುಖರಲ್ಲಿ ಯಾವ ದೇವತೆಯನ್ನು ಆರಾಧಿಸಿ ಸೈಂಧವನು ತನ್ನ ಪುತ್ರರಲ್ಲಿ ಆಸಕ್ತರಾಗಿದ್ದ ಪಾರ್ಥರನ್ನು ಕ್ರೋಧಗೊಂಡು ತಡೆದನು?

ನೈವಂ ಕೃತಂ ಮಹತ್ ಕರ್ಮ ಭೀಷ್ಮೇಣಾಜ್ಞಾಸಿಷಂ ತಥಾ ।
ಸಿಂಧುರಾಟ್ತನಯಸ್ತ್ವೇಕೋ ಯಥಾ ಪಾರ್ಥಾನವಾರಯತ್ ॥ ೧೩ ॥

ಸಿಂಧುರಾಜನ ಪುತ್ರನು ಒಬ್ಬನು ಹೇಗೆ ಪಾಂಡವರನ್ನು ತಡೆದನೋ ಅಂತಹ ದೊಡ್ಡ ಕಾರ್ಯವನ್ನು ಭೀಷ್ಮರು ಮಾಡಿದ ಕಾರ್ಯವನ್ನು ನಾನು ತಿಳಿಯಲಿಲ್ಲ (ಕೇಳಲಿಲ್ಲ).

ಸಂಜಯಃ

ದ್ರೌಪದೀಹರಣೇ ಯತ್ ತದ್ ಭೀಮಸೇನೇನ ನಿರ್ಜಿತಃ ।
ಮಾನಾತ್ ಸ ತಪ್ತವಾನ್ ರಾಜನ್ ವರಾರ್ಥೀ ಸುಮಹತ್ ತಪಃ ॥

ಸಂಜಯ– ವನವಾಸ ಕಾಲದಲ್ಲಿ ಅವನು ದ್ರೌಪದಿಯನ್ನು ಅಪಹರಿಸಿದಾಗ ಭೀಮಸೇನನಿಂದ ಅವಮಾನಿತನಾದ ಅವನು ಎಲೈ ರಾಜನೇ, ಆ ಅವಮಾನದಿಂದ ಬೆಂದು ಹೋಗುತ್ತಾ ವರವನ್ನು ಬಯಸಿ ದೊಡ್ಡ ತಪಸ್ಸನ್ನು ಮಾಡಿದನು.

ಇಂದ್ರಿಯಾಣೀಂದ್ರಿಯಾರ್ಥೇಭ್ಯಃ ಪ್ರಿಯೇಭ್ಯಃ ಸನ್ನಿವರ್ತ್ಯ ಸಃ ।
ಕ್ಷುತ್ಪಿಪಾಸಾತಪಸಹಃ ಕೃಶೋ ಧಮನಿಸಂತತಃ ॥ ೧೫ ॥

ದೇವಮಾರಾಧಯಚ್ಛರ್ವಂ ಗೃಣನ್ ಬ್ರಹ್ಮ ಸನಾತನಮ್ ।
ಭಕ್ತಾನುಕಂಪೀ ಭಗವಾಂಸ್ತಸ್ಮಿಂಶ್ಚಕ್ರೇ ತತೋ ದಯಾಮ್ ॥ ೧೬ ॥

ಇಂದ್ರಿಯಗಳನ್ನು ತಮ್ಮ ವಿಷಯಗಳಿಂದ ಹಿಂದೆ ತಿರುಗಿಸಿ, ಹಸಿವು-ನೀರಡಿಕೆ-ಬಿಸಿಲುಗಳನ್ನು ತಡೆದು ಕೃಶನಾಗಿ, ಧಮನಿ ಸಂತತನಾಗಿ, ಸನಾತನವಾದ ವೇದವನ್ನು ಪಠಿಸುತ್ತಾ, ದೇವನಾದ ಈಶ್ವರನನ್ನು ಆರಾಧಿಸಿದನು. ಭಕ್ತಾನುಕಂಪಿಯಾದ ಪೂಜ್ಯನಾದ ಈಶ್ವರನು ಅವನಲ್ಲಿ ದಯೆಯನ್ನು ಮಾಡಿದನು.

ತಸ್ಯ ಚಾಲ್ಪೇನ ಕಾಲೇನ ನಿಯಮೇನ ಸುತೋಷಿತಃ ।
ಪ್ರೀತೋ ಮಹೇಶ್ವರಸ್ತಸ್ಮೈ ವರಂ ಚೇಮಂ ದದೌ ತಥಾ ॥ ೧೭ ॥

ಅವನ ಅಲ್ಪಕಾಲದ ತಪಸ್ಸಿನಿಂದಲೇ ಸಂತುಷ್ಟನಾದ ಮಹೇಶ್ವರನು ಪ್ರೀತಿಯಿಂದ ಅವನಿಗೆ ಈ ವರವನ್ನು ನೀಡಿದನು.

ಸ್ವಪ್ನಾಂತೇಽಥ ಯಯಾವೇನಂ ಹರಃ ಸಿಂಧುಪತೇಃ ಸುತಮ್ ।
ವರಂ ವೃಣೀಷ್ವ ಪ್ರೀತೋಽಸ್ಮಿ ಜಯದ್ರಥ ಕಿಮಿಚ್ಛಸಿ ॥ ೧೮ ॥

ಜಯದ್ರಥನ ಸ್ವಪ್ನದಲ್ಲಿ ಈಶ್ವರನು ಅವನ ಬಳಿಗೆ ಹೋದನು. ಜಯದ್ರಥನೇ, ಸಂತುಷ್ಟನಾಗಿದ್ದೇನೆ, ವರವನ್ನು ಕೇಳು, ಏನು ಬಯಸುವಿ? (ಎಂದು ಕೇಳಿದನು).

ಏವಮುಕ್ತಸ್ತು ಶರ್ವೇಣ ಸಿಂಧುರಾಜೋ ಜಯದ್ರಥಃ ।
ಉವಾಚ ಪ್ರಣತೋ ರುದ್ರಃ ಪ್ರಾಂಜಲಿರ್ನಿಯತಾತ್ಮವಾನ್ ॥ ೧೯ ॥

ಈಶ್ವರನಿಂದ ಹೀಗೆ ಹೇಳಲ್ಪಟ್ಟ ಸಿಂಧುರಾಜನಾದ ಜಯದ್ರಥನು ಮನಸ್ಸನ್ನು ನಿಗ್ರಹಿಸಿ, ನಮಸ್ಕಾರವನ್ನು ಮಾಡಿ, ಕೈಗಳನ್ನು ಮುಗಿದು ರುದ್ರನನ್ನು ಕುರಿತು ಹೀಗೆ ಹೇಳಿದನು.

ಪಾಂಡವೇಯಾನಹಂ ಸಂಖ್ಯೇ ಭೀಮವೀರ್ಯಪರಾಕ್ರಮಾನ್ ।
ವಾರಯೇಯಂ ರಥೇನೈಕಃ ಸಮಸ್ತಾನಿತಿ ಭಾರತ ॥ ೨೦ ॥

ಏವಮುಕ್ತಸ್ತು ದೇವೇಶೋ ಜಯದ್ರಥಮಥಾಬ್ರವೀತ್ ॥ ೨೧ ॥

ಎಲೈ ಭಾರತನೇ, 'ಭಯಂಕರ ಸಾಮರ್ಥ್ಯ-ಪರಾಕ್ರಮವನ್ನು ಹೊಂದಿದ ಪಾಂಡವರೆಲ್ಲರನ್ನೂ ನಾನು ಯುದ್ಧದಲ್ಲಿ ಒಂದು ರಥದಿಂದ ನಿರೋಧಿಸಬೇಕು' ಎಂದು ಕೇಳಿದನು. ಹೀಗೆ ಕೇಳಲ್ಪಟ್ಟ ದೇವೇಶನಾದ ಶಂಭುವು ಜಯದ್ರಥನನ್ನು ಕುರಿತು ಹೀಗೆ ಹೇಳಿದನು.

ದದಾಮಿ ತೇ ವರಂ ಸೌಮ್ಯ ವಿನಾ ಪಾರ್ಥಂ ಜಯದ್ರಥ ।
ವಾರಯಿಷ್ಯಸಿ ಸಂಗ್ರಾಮೇ ಚತುರಃ ಪಾಂಡುನಂದನಾನ್ ॥ ೨೨ ॥

ಜಯದ್ರಥನೇ, 'ಸೌಮ್ಯನೇ, ನಾನು ನಿನಗೆ ವರವನ್ನು ಕೊಡುತ್ತೇನೆ. ನೀನು ಅರ್ಜುನನನ್ನು ಬಿಟ್ಟು ನಾಲ್ಕು ಜನ ಪಾಂಡುನಂದನರನ್ನು ಯುದ್ಧದಲ್ಲಿ ತಡೆಯುವಿ' (ಎಂದು ಹೇಳಿದನು).

ಸಂಜಯಃ

ಏವಮಸ್ತ್ವಿತಿ ದೇವೇಶಮುಕ್ತ್ವಾSSಗಾತ್ ಸ್ವಪುರಂ ತದಾ ।
ತೇನೋಕ್ತಸ್ತಮೃತೇ ಪಾರ್ಥಂ ಜಯಂ ತಸ್ಮೈ ವರಂ ದದೌ ।
ಏಕಾಹಮಿತಿ ರಾಜೇಂದ್ರ ತತ್ರೈವಾದರ್ಶನಂ ಯಯೌ ॥ ೨೩ ॥

ಸಂಜಯ– ಹಾಗೆಯೇ ಆಗಲಿ ಎಂದು ರುದ್ರನಿಗೆ ಹೇಳಿ ಜಯದ್ರಥನು ತನ್ನ ಪಟ್ಟಣಕ್ಕೆ ಹಿಂದಿರುಗಿದನು. ಅವನು ಕೇಳಿದುದಕ್ಕೆ ಪ್ರತಿಯಾಗಿ ಪಾರ್ಥನನ್ನು ಬಿಟ್ಟು ಉಳಿದವರ ಜಯರೂಪವಾದ ವರವನ್ನು ಅವನಿಗೆ ಕೊಟ್ಟನು. ರಾಜೇಂದ್ರನೇ, ಈ ಪಾಂಡವರ ನಿರೋಧವು ಒಂದು ದಿನ ಮಾತ್ರ ಎಂದು ಹೇಳಿ ರುದ್ರನು ಅದೃಶ್ಯನಾದನು.

ಸ ತೇನ ವರದಾನೇನ ಪರಮಾಸ್ತ್ರಬಲೇನ ಚ ।
ಏಕಃ ಸಂವಾರಯಾಮಾಸ ಪಾಂಡವಾನಾಮನೀಕಿನೀಮ್ ॥ ೨೪ ॥

ಜಯದ್ರಥನು ಆ ವರದಾನದ ಬಲದಿಂದಲೂ, ಪರಮಾಸ್ತ್ರದ ಬಲದಿಂದಲೂ ಒಬ್ಬನೇ ಪಾಂಡವರ ಸೈನ್ಯವನ್ನು ತಡೆದನು.

ತಸ್ಯ ಜ್ಯಾತಳಘೋಷೇಣ ಕ್ಷತ್ರಿಯಾನ್ ಭಯಮಾವಿಶತ್ ।
ಪರೇಷಾಂ ತವ ಸೈನ್ಯಸ್ಯ ಹರ್ಷಃ ಪರಮಕೋSಭವತ್ ॥ ೨೫ ॥

ಅವನ ಜ್ಯಾತಳ ಘೋಷದಿಂದ ಶತ್ರುಗಳ ಸೈನಿಕರಿಗೆ ಭಯವುಂಟಾಯಿತು. ನಿನ್ನ ಸೈನ್ಯಕ್ಕೆ ಪರಮ ಹರ್ಷವುಂಟಾಯಿತು.

ದೃಷ್ಟ್ವಾ ತಂ ಕ್ಷತ್ರಿಯಾ ಭಾರಂ ಸೈಂಧವೇ ಮಹದರ್ಪಿತಮ್ ।
ಉತ್ಕ್ರುಶ್ಯಾಭ್ಯದ್ರವನ್ ರಾಜನ್ ಯೇನ ಯೌಧಿಷ್ಠಿರಂ ಬಲಮ್ ॥ ೨೬ ॥

ರಾಜನೇ, ಕ್ಷತ್ರಿಯರು ಸೈಂಧವನ ಮೇಲೆ ಅರ್ಪಿತವಾದ ದೊಡ್ಡ ಭಾರವನ್ನು ನೋಡಿ ಸಿಂಹನಾದವನ್ನು ಮಾಡುತ್ತಾ ಯುಧಿಷ್ಠಿರನ ಸೈನ್ಯವಿದ್ದ ಕಡೆಗೆ ಓಡಿದರು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಂ ದ್ರೋಣಪರ್ವಣಿ ಏಕಚತ್ವಾರಿಂಶೋಽಧ್ಯಾಯಃ ॥

॥ ಅಭಿಮನ್ಯುವಧಪರ್ವಣಿ ದಶಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನಲವತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನಲವತ್ತೆರಡನೆಯ ಅಧ್ಯಾಯ

ರುದ್ರನ ವರಬಲದಿಂದ ಜಯದ್ರಥನಿಂದ ಪಾಂಡವರ ನಿರೋಧ.

ಸಂಜಯಃ

ಯನ್ಮಾಂ ಪೃಚ್ಛಸಿ ಸೌಹಾರ್ದಾತ್ ಸಿಂಧುರಾಜಸ್ಯ ವಿಕ್ರಮಮ್ ।
ಶೃಣು ತತ್ ಸ ಯಥಾ ರಾಜನ್ ಕ್ರುದ್ಧಾನ್ ಪಾರ್ಥಾನವಾರಯತ್ ॥

ಸಂಜಯ– ರಾಜನೇ, ಸೈಂಧವನ ಮೇಲಿನ ಸ್ನೇಹದಿಂದ ನೀನು ಅವನ ಪರಾಕ್ರಮವನ್ನು ಕೇಳುತ್ತಿದ್ದೀಯಷ್ಟೆ? ಅವನು ಹೇಗೆ ಕ್ರುದ್ಧರಾದ ಪಾಂಡವರನ್ನು ತಡೆದನೆಂದು ಕೇಳು.

ತಮೂಹುಃ ಸಾರಥೇರ್ವಶ್ಯಾಃ ಸೈಂಧವಂ ಸಾಧುವಾಹಿನಃ ।
ವಿಕುರ್ವಾಣಾ ಬೃಹಂತೋಽಶ್ವಾಃ ಶ್ವಸನೋಪಮರಂಹಸಃ ॥ ೨ ॥

ಅವನನ್ನು ಸಾರಥಿಗೆ ವಶವರ್ತಿಗಳಾದ, ವಿಧವಿಧವಾದ ಕಾರ್ಯಗಳನ್ನು ಮಾಡುವ, ವಾಯುವೇಗವನ್ನು ಹೊಂದಿದ, ಚೆನ್ನಾಗಿ ರಥವನ್ನು ಎಳೆಯುವ ಸೈಂಧವ ದೇಶದ ದೊಡ್ಡ ಅಶ್ವಗಳು ಎಳೆದುಕೊಂಡು ಹೋದವು.

ಗಂಧರ್ವನಗರಾಕಾರಂ ವಿಧಿವತ್ ಕಲ್ಪಿತಂ ರಥಮ್ ।
ತಸ್ಯ ತ್ವಶೋಭಯತ್ ಕೇತುರ್ವಾರಾಹೋ ರಾಜತೋ ಮಹಾನ್ ॥೩॥

ಗಂಧರ್ವನಗರದಂತೆ ಶಾಸ್ತ್ರೋಕ್ತವಾಗಿ ಸಿದ್ಧಪಡಿಸಿದ ಅವನ ರಥವನ್ನು ರಜತಮಯವಾದ ದೊಡ್ಡ ವರಾಹಧ್ವಜವು ಶೋಭೆಗೊಳಿಸಿತು.

ಶ್ವೇತಚ್ಛತ್ರಪತಾಕಾಭಿಃ ಚಾಮರವ್ಯಜನೇನ ಚ ।
ಸ ಬಭೌ ಯುದ್ಧಲಿಂಗೈಸ್ತೈಸ್ತಾರಾಪತಿರಿವಾಂಬರೇ ॥ ೪ ॥

ಯುದ್ಧ ಚಿಹ್ನೆಗಳಾದ ಶ್ವೇತಚ್ಛತ್ರ-ಪತಾಕೆಗಳಿಂದಲೂ, ಚಾಮರ ವ್ಯಜನಗಳಿಂದಲೂ ಸಹಿತನಾದ ಅವನು ಆಕಾಶದಲ್ಲಿ ನಕ್ಷತ್ರ-ಪತಿಯಾದ ಚಂದ್ರನಂತೆ ಶೋಭಿಸಿದನು.

ಮುಕ್ತಾವಜ್ರೈಃ ಸಮಣಿಭಿರ್ಭೂಷಿತಂ ತದಯಸ್ಮಯಮ್ ।
ವರೂಥಂ ವಿಬಭೌ ತಸ್ಯ ಜ್ಯೋತಿರ್ಭಿಃ ಖಮಿವಾಚಿತಮ್ ॥ ೫ ॥

ಮುತ್ತು-ವಜ್ರಗಳಿಂದಲೂ, ಶ್ರೇಷ್ಠ ಮಣಿಗಳಿಂದಲೂ ಭೂಷಿತವಾದ ಅವನ ಅಯಸ್ಮಯವಾದ ಕವಚವು ಜ್ಯೋತಿಗಳಿಂದ ಖಚಿತವಾದ ಆಕಾಶದಂತೆ ಶೋಭಿಸಿತು.

ಸ ವಿಷ್ಫಾರ್ಯ ಮಹಚ್ಚಾಪಂ ಕಿರನ್ನಿಷುಗಣಾನ್ ಬಹೂನ್ ।
ತತ್ಖಂಡಂ ಪೂರಯಾಮಾಸ ಯದಾರ್ಜುನಿರದಾರಯತ್ ॥ ೬ ॥

ಅವನು ತನ್ನ ದೊಡ್ಡ ಧನುಸ್ಸನ್ನು ಎಳೆದು ಬಾಣಸಮೂಹಗಳನ್ನು ಸೃಷ್ಟಿಸುತ್ತಾ ಅಭಿಮನ್ಯುವು ಉಂಟುಮಾಡಿದ್ದ ಭಗ್ನವಾದ ಪ್ರದೇಶವನ್ನು ತುಂಬಿದನು.

ಸ ಸಾತ್ಯಕಿಂ ತ್ರಿಭಿರ್ಬಾಣೈರಷ್ಟಭಿಶ್ಚ ವೃಕೋದರಮ್ ।
ಧೃಷ್ಟದ್ಯುಮ್ನಂ ಪುನಃ ಷಷ್ಟ್ಯಾ ವಿರಾಟಂ ದಶಭಿಃ ಶರೈಃ ॥ ೭ ॥

ದ್ರುಪದಂ ಪಂಚಭಿಸ್ತೀಕ್ಷ್ಣೈರ್ದಶಭಿಶ್ಚ ಶಿಖಂಡಿನಮ್ ।
ಕೇಕಯಾನ್ ಪಂಚವಿಂಶತ್ಯಾ ದ್ರೌಪದೇಯಾಂಸ್ತ್ರಿಭಿಸ್ತ್ರಿಭಿಃ ॥ ೮ ॥

ಯುಧಿಷ್ಠಿರಂ ತು ಸಪ್ತತ್ಯಾ ವಿದ್ಧ್ವಾ ಶಿಷ್ಟಾನಪಾನುದತ್ ।
ಇಷುಜಾಲೇನ ಮಹತಾ ತದದ್ಭುತಮಿವಾಭವತ್ ॥ ೯ ॥

ಅವನು ಸಾತ್ಯಕಿಯನ್ನು ಮೂರು ಬಾಣಗಳಿಂದಲೂ, ಭೀಮಸೇನನನ್ನು ಎಂಟು ಬಾಣಗಳಿಂದಲೂ, ಧೃಷ್ಟದ್ಯುಮ್ನನನ್ನು ಪುನಃ ಅರವತ್ತು ಬಾಣಗಳಿಂದಲೂ, ವಿರಾಟನನ್ನು ಹತ್ತು ಬಾಣಗಳಿಂದಲೂ, ದ್ರುಪದನನ್ನು ಐದು ತೀಕ್ಷ್ಣವಾದ ಬಾಣಗಳಿಂದಲೂ, ಶಿಖಂಡಿಯನ್ನು ಹತ್ತು ಬಾಣಗಳಿಂದಲೂ, ಕೇಕಯರನ್ನು ಇಪ್ಪತ್ತೈದು ಬಾಣಗಳಿಂದಲೂ, ದ್ರೌಪದಿಯ ಪುತ್ರರನ್ನು ಮೂರು-ಮೂರು ಬಾಣಗಳಿಂದಲೂ, ಯುಧಿಷ್ಠಿರನನ್ನು ಎಪ್ಪತ್ತು ಬಾಣಗಳಿಂದಲೂ ಹೊಡೆದು ಉಳಿದವರನ್ನು ತನ್ನ ಬಾಣಗಳ ದೊಡ್ಡ ಸಮೂಹದಿಂದ ದೂರ ಓಡಿಸಿದನು. ಅದು ಅದ್ಭುತವಾಗಿದ್ದಿತು.

ಅಥಾಸ್ಯ ಶಿತಪೀತೇನ ಭಲ್ಲೇನೋದ್ದಿಶ್ಯ ಕಾರ್ಮುಕಮ್ ।
ಚಿಚ್ಛೇದ ಪ್ರಹಸನ್ ರಾಜಾ ಧರ್ಮಪುತ್ರಃ ಪ್ರತಾಪವಾನ್ ॥ ೧೦ ॥

ಆಗ ಪ್ರತಾಪಶಾಲಿಯಾದ ಧರ್ಮರಾಜನು ನಗುತ್ತಾ, ಹರಿತವಾದ ಮತ್ತು ನೀರನ್ನು ಕುಡಿಸಿ ಹದ ಮಾಡಿದ ಅವನ ಭಲ್ಲದಿಂದ ಜಯದ್ರಥನ ಧನುಸ್ಸನ್ನು ಕತ್ತರಿಸಿದನು.

ಅಕ್ಷ್ಣೋರ್ನಿಮೇಷಮಾತ್ರಾತ್ ತು ಸೋಽನ್ಯದಾದಾಯ ಕಾರ್ಮುಕಮ್ ।
ವಿವ್ಯಾಧ ದಶಭಿಃ ಪಾರ್ಥಂ ತಾಂಶ್ಚೈವಾನ್ಯಾಂಸ್ತ್ರಿಭಿಸ್ತ್ರಿಭಿಃ ॥ ೧೧ ॥

ಕಣ್ಣುಗಳನ್ನು ಮುಚ್ಚಿ ಬಿಡುವಷ್ಟರಲ್ಲಿ ಜಯದ್ರಥನು ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ಯುಧಿಷ್ಠಿರನನ್ನು ಹತ್ತು ಬಾಣಗಳಿಂದಲೂ, ಉಳಿದವರನ್ನು ಮೂರು-ಮೂರು ಬಾಣಗಳಿಂದಲೂ ಹೊಡೆದನು.

ತಸ್ಯ ತಲ್ಲಾಘವಂ ಜ್ಞಾತ್ವಾ ಭೀಮೋ ಭಲ್ಲೈಸ್ತ್ರಿಭಿಸ್ತ್ರಿಭಿಃ ।
ಧನುರ್ಧ್ವಜಂ ಚ ಚತ್ರಂ ಚ ಕ್ಷಿತೌ ಕ್ಷಿಪ್ರಮಪಾತಯತ್ ॥ ೧೨ ॥

ಅವನ ಆ ಕ್ಷಿಪ್ರತೆಯನ್ನು ನೋಡಿ ಭೀಮನು ಮೂರು-ಮೂರು ಭಲ್ಲಗಳಿಂದ ಅವನ ಧನುಸ್ಸನ್ನೂ-ಧ್ವಜವನ್ನೂ ಮತ್ತು ಛತ್ರವನ್ನೂ ಭೂಮಿಯಲ್ಲಿ ಶೀಘ್ರವಾಗಿ ಕೆಡವಿದನು.

ಸೋಽನ್ಯದಾದಾಯ ಬಲವತ್ ಸಜ್ಯಂ ಕೃತ್ವಾ ತು ಕಾರ್ಮುಕಮ್ ।
ಭೀಮಸ್ಯೋನ್ಮಾಥಯತ್ ಕೇತುಂ ಧನುರಶ್ವಾಂಶ್ಚ ಮಾರಿಷ ॥ ೧೩ ॥

ಎಲೈ ಪೂಜ್ಯನೇ, ಅವನು ಇನ್ನೊಂದು ದೃಢವಾದ ಧನುಸ್ಸನ್ನು ತೆಗೆದುಕೊಂಡು ಹೆದೆಯೇರಿಸಿ ಭೀಮಸೇನನ ಅಶ್ವಗಳನ್ನೂ ಮತ್ತು ಧನುಸ್ಸನ್ನೂ ವಿನಾಶಗೊಳಿಸಿದನು.

ಸ ಹತಾಶ್ವಾದವಪ್ಲುತ್ಯ ಚ್ಛಿನ್ನಧನ್ವಾ ರಥೋತ್ತಮಾತ್ ।
ಸಾತ್ಯಕೇಸ್ತ್ವಪ್ಲುತೋ ಯಾನಂ ಗಿರ್ಯಗ್ರಮಿವ ಕೇಸರೀ ॥ ೧೪ ॥

ಧನುಸ್ಸು ಕತ್ತರಿಸಲ್ಪಟ್ಟ ಭೀಮಸೇನನು ಅಶ್ವಗಳು ಮೃತವಾದ ತನ್ನ ಶ್ರೇಷ್ಠ ರಥದಿಂದ ಸಾತ್ಯಕಿಯ ರಥಕ್ಕೆ ಸಿಂಹವು ಗಿರಿಶಿಖರಕ್ಕೆ ಹಾರುವಂತೆ ಹಾರಿದನು.

ತತಸ್ತ್ವದೀಯಾಃ ಸಂಹೃಷ್ಟಾಃ ಸಾಧು ಸಾಧ್ವಿತಿ ಚುಕ್ರುಶುಃ ।
ಸಿಂಧುರಾಜಸ್ಯ ತತ್ ಕರ್ಮ ಪ್ರೇಕ್ಷ್ಯ ಶ್ರದ್ಧೇಯಮುತ್ತಮಮ್ ॥ ೧೫ ॥

ಸೈಂಧವನ ನಂಬಲು ಅರ್ಹವಾದ ಶ್ರೇಷ್ಠವಾದ ಆ ಕರ್ಮವನ್ನು ನೋಡಿ ನಿನ್ನವರು 'ಸಾಧು-ಸಾಧು' ಎಂದು ಕಿರುಚಿದರು.

ಸಂಕ್ರುದ್ಧಾನ್ ಪಾಂಡವಾನೇಕೋ ಯದ್ ದಧಾರಾಸ್ತ್ರತೇಜಸಾ ।
ತತ್ ತಸ್ಯ ಕರ್ಮ ಭೂತಾನಿ ಸರ್ವಾಣ್ಯೇವಾಭ್ಯಪೂಜಯನ್ ॥ ೧೬ ॥

ಸಂಕ್ರುದ್ಧರಾದ ಪಾಂಡವರನ್ನು ಒಬ್ಬನೇ ತನ್ನ ಅಸ್ತ್ರತೇಜಸ್ಸಿನಿಂದ ಹಿಡಿದು ನಿವಾರಿಸಿದುದನ್ನು ನೋಡಿ ಅವನ ಆ ಕರ್ಮವನ್ನು ಎಲ್ಲ ಭೂತಗಳೂ ಪೂಜಿಸಿದವು.

ಸೌಭದ್ರೇಣ ಹತೈಃ ಪೂರ್ವಂ ಸೋತ್ತರಾಯುಧಿಭರ್ದ್ವಿಷೈಃ ।
ಪಾಂಡೂನಾಮಾವೃತಃ ಪಂಥಾಃ ಸೈಂಧವೇನ ಚ ವಾರಿತಃ ॥ ೧೭ ॥

ಮೊದಲು ಅಭಿಮನ್ಯುವಿನಿಂದ ಹತವಾದ ಆಯುಧಧಾರಿಗಳಾದ ಗಜಾರೋಹಿಗಳಿಂದ ಸಹಿತವಾದ ಗಜಗಳಿಂದ ಆವೃತವಾಗಿದ್ದ ಪಾಂಡವರ ಮಾರ್ಗವು ಸೈಂಧವನಿಂದಲೂ ತಡೆಯಲ್ಪಟ್ಟಿತು.

ಯತಮಾನಾಸ್ತು ತೇ ವೀರಾಃ ಪಾಂಚಾಲಾ ಮತ್ಸ್ಯಕೇಕಯಾಃ ।
ಪಾಂಡವಾಶ್ಚಾನ್ವಪದ್ಯಂತ ಪ್ರತಿಶೇಕುರ್ನ ಸೈಂಧವಮ್ ॥ ೧೮ ॥

ವೀರರಾದ ಪಾಂಚಾಲರೂ, ಮತ್ಸ್ಯರೂ, ಕೇಕಯರೂ ಮತ್ತು ಪಾಂಡವರು ಪ್ರಯತ್ನಪಟ್ಟು ಸೈಂಧವನ ಬಳಿಗೆ ಬಂದರು. ಆದರೆ ಯಾರೂ ಅವನನ್ನು ದಾಟಿ ಹೋಗಲು ಸಮರ್ಥರಾಗಲಿಲ್ಲ.

ಯೋ ಯೋ ಹಿ ಯತತೇ ಭೇತ್ತುಂ ದ್ರೋಣಾನೀಕಂ ತವಾಹಿತಃ ।
ತಂ ತಂ ದೇವಾದ್ ವರಂ ಪ್ರಾಪ್ಯ ಸೈಂಧವಃ ಪ್ರತ್ಯವಾರಯತ್ ॥ ೧೯ ॥

ಯಾವ ಯಾವ ನಿನ್ನ ಶತ್ರುವು ದ್ರೋಣರ ವ್ಯೂಹವನ್ನು ಭೇದಿಸಲು ಪ್ರಯತ್ನಪಡುತ್ತಾನೆಯೋ, ಆಯಾ ಯೋಧನನ್ನು ಈಶ್ವರನಿಂದ ಪಡೆದ ವರಬಲದಿಂದ ಸೈಂಧವನು ತಡೆದನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಂ ದ್ರೋಣಪರ್ವಣಿ ದ್ವಿಚತ್ವಾರಿಂಶೋಽಧ್ಯಾಯಃ ॥

॥ ಅಭಿಮನ್ಯುವಧಪರ್ವಣಿ ಏಕಾದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನಲವತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನಲವತ್ಮೂರನೆಯ ಅಧ್ಯಾಯ

ಅಭಿಮನ್ಯುವಿನ ಪರಾಕ್ರಮದ ವರ್ಣನ.

ಸಂಜಯಃ

ಸೈಂಧವೇನ ನಿರುದ್ವೇಷು ಜಯಗೃದ್ಧಿಷು ಪಾಂಡುಷು ।
ಸುಘೋರಮಭವದ್ ಯುದ್ಧಂ ತ್ವದೀಯಾನಾಂ ಪರೈಃ ಸಹ ॥ ೧ ॥

ಸಂಜಯ– ಜಯಾಕಾಂಕ್ಷಿಗಳಾದ ಪಾಂಡವರು ಸೈಂಧವನಿಂದ ತಡೆಯಲ್ಪಡುತ್ತಿರಲು ನಿನ್ನವರಿಗೂ ಮತ್ತು ಶತ್ರುಗಳಿಗೂ ಘೋರವಾದ ಯುದ್ಧವು ನಡೆಯಿತು.

ಪ್ರವಿಶ್ಯ ತ್ವಾರ್ಜುನಿಃ ಸೇನಾಂ ಸತ್ಯಸಂಧೋ ದುರಾಸದಾಮ್ ।
ವ್ಯಕ್ಷೋಭಯತ ತೇಜಸ್ವೀ ಸಾಗರಂ ಮಕರೋ ಯಥಾ ॥ ೨ ॥

ಸತ್ಯಸಂಧನೂ, ತೇಜಸ್ವಿಯೂ ಆದ ಅಭಿಮನ್ಯುವು ದುರಾಸದವಾದ ಕೌರವ ಸೈನ್ಯವನ್ನು ಪ್ರವೇಶಿಸಿ, ಮೊಸಳೆಯು ಸಾಗರವನ್ನು ಕ್ಷೋಭೆಗೊಳಿಸುವಂತೆ ಕ್ಷೋಭೆಗೊಳಿಸಿದನು.

ತಂ ತಥಾ ಶರಜಾಲೇನ ಚ್ಛಾದಯಂತಮರಿಂದಮಮ್ ।
ಯಥಾಪ್ರಧಾನಾಃ ಸೌಭದ್ರಮಭ್ಯಯುಃ ಕುರುಸತ್ತಮಾಃ ॥ ೩ ॥

ಆ ರೀತಿಯಲ್ಲಿ ಬಾಣಸಮೂಹಗಳಿಂದ ಎಲ್ಲವನ್ನೂ ಮುಚ್ಚುತ್ತಿರುವ ಅರಿಂದಮನಾದ ಅಭಿಮನ್ಯುವನ್ನು ಪ್ರಧಾನರಿಗೆ ಅನುಗುಣವಾಗಿ ಕುರುಶ್ರೇಷ್ಠರು ಸಮೀಪಿಸಿದರು.

ತೇಷಾಂ ತಸ್ಯ ಚ ಸಮ್ಮರ್ದೋ ದಾರುಣಃ ಸಮಪದ್ಯತ ।
ಸೃಜತಾಂ ಶರವರ್ಷಾಣಿ ಸಂಸಕ್ತಮಮಿತೌಜಸಾಮ್ ॥ ೪ ॥

ಅಮಿತಪರಾಕ್ರಮಿಗಳಾಗಿ, ಪರಸ್ಪರ ಸಂಸಕ್ತವಾಗಿ ಬಾಣವರ್ಷವನ್ನು ಸೃಷ್ಟಿಸುವ ಅವರಿಗೂ ಮತ್ತು ಅಭಿಮನ್ಯುವಿಗೂ ದಾರುಣವಾದ ಸಂಘರ್ಷವು ಉಂಟಾಯಿತು.

ರಥವ್ರಾತೇನ ಸಂಯುಕ್ತಃ ತೈರಮಿತ್ರೈರಥಾರ್ಜುನಿಃ ।
ವೃಷಸೇನಸ್ಯ ಯಂತಾರಂ ಹತ್ವಾ ಚಿಚ್ಛೇದ ಕಾರ್ಮುಕಮ್ ॥ ೫ ॥

ಶತ್ರುಗಳ ರಥಸಮೂಹದಿಂದ ಸಂಯುಕ್ತನಾದ ಅಭಿಮನ್ಯುವು ವೃಷಸೇನನ ಸಾರಥಿಯನ್ನು ಕೊಂದು ಅವನ ಧನುಸ್ಸನ್ನು ಕತ್ತರಿಸಿದನು.

ತಂ ಚ ವಿವ್ಯಾಧ ಬಲವಾಂಸ್ತಸ್ಯ ಚಾಶ್ವಾನಜಿಹ್ಮಗೈಃ ।
ವಾತಾಯಮಾನೈಸ್ತೈರಶ್ವೈರ್ನಿಸ್ಸಂಜ್ಞೋಽಪಹೃತೋ ರಣಾತ್ ॥ ೬ ॥

ಬಲಿಷ್ಠನಾದ ಅಭಿಮನ್ಯುವು ಅವನನ್ನೂ ಹೊಡೆದು ನೇರವಾಗಿ ಸಾಗುವ ಬಾಣಗಳಿಂದ ಅವನ ಅಶ್ವಗಳನ್ನೂ ಹೊಡೆದನು. ವಾಯುವೇಗವನ್ನು ಹೊಂದಿದ ಅವನ ಅಶ್ವಗಳು ಪ್ರಜ್ಞಾಹೀನನಾದ ಅವನನ್ನು ರಣರಂಗದಿಂದ ಹೊರಗೆ ಕರೆದುಕೊಂಡು ಹೋದವು.

ತೇನಾಂತರೇಣಾಭಿಮನ್ಯೋರ್ಯಂತಾ ನಿವಾರಯದ್ ರಥಮ್ ।
ರಥವ್ರಜಾಸ್ತತೋ ಹೃಷ್ಟಾಃ ಸಾಧು ಸಾಧ್ವಿತಿ ಚುಕ್ರುಶುಃ ॥ ೭ ॥

ಈ ಮಧ್ಯದಲ್ಲಿ ಅಭಿಮನ್ಯುವಿನ ಸಾರಥಿಯು ಅವನ ರಥವನ್ನು ಸ್ವಲ್ಪ ಹಿಂದೆ ಸರಿಸಿದನು. ಆಗ ರಥಸಮೂಹಗಳು ಸಂತೋಷಗೊಂಡು 'ಸಾಧು-ಸಾಧು' ಎಂದು ಕಿರುಚಿದವು.

ತಂ ತು ಸಿಂಹಮಿವ ಕ್ರುದ್ಧಂ ಪ್ರಮಥ್ನಂತಂ ಶರೈರರೀನ್ ।
ಆರಾದಾಯಾಂತಮಾಲೋಕ್ಯ ವಸಾತಿಃ ಸೋಽಭ್ಯಯಾದ್ ದ್ರುತಮ್ ॥

ಕೋಪಗೊಂಡ ಸಿಂಹದಂತೆ ಬಾಣಗಳಿಂದ ಶತ್ರುಗಳನ್ನು ಮರ್ದಿಸುತ್ತಿರುವ ಅಭಿಮನ್ಯುವು ದೂರದಿಂದ ಬರುತ್ತಿರುವುದನ್ನು ನೋಡಿ ವಸಾತಿ ರಾಜನು ಶೀಘ್ರವಾಗಿ ಬಂದನು.

ಸೋಽಭಿಮನ್ಯುಂ ಶರೈಃ ಷಷ್ಟ್ಯಾ ರುಗ್ಮಪುಂಖೈರವಾಕಿರತ್ ।
ಅಬ್ರವೀಚ್ಚ ನ ಮೇ ಜೀವನ್ ಜೀವತೋ ಯುಧಿ ಮೋಕ್ಷ್ಯಸೇ ॥ ೯ ॥

ಅವನು ಅಭಿಮನ್ಯುವನ್ನು ರುಗ್ಮಪುಂಖಗಳನ್ನು ಹೊಂದಿದ್ದ ಅರವತ್ತು ಬಾಣಗಳಿಂದ ಹೊಡೆದು, ನಾನು ಬದುಕಿರುವಾಗ ನೀನು ಜೀವಸಹಿತವಾಗಿ ನನ್ನಿಂದ ಹೋಗುವುದಿಲ್ಲ ಎಂದು ಹೇಳಿದನು.

ತಮಯಸ್ಮಯವರ್ಮಾಣಮಿಷುಣಾ ತ್ವಾಶುಪಾತಿನಾ ।
ಹೃದಿ ವಿವ್ಯಾಧ ಸೌಭದ್ರಃ ಸ ಪಪಾತ ವ್ಯಸುಃ ಕ್ಷಿತೌ ॥ ೧೦ ॥

ಅಭಿಮನ್ಯುವು ಕಬ್ಬಿಣದ ಕವಚವನ್ನು ಧರಿಸಿದ ಅವನನ್ನು ಶೀಘ್ರವಾದ ಬಾಣದಿಂದ ಹೃದಯದಲ್ಲಿ ಹೊಡೆದನು. ಅವನು ಮೃತನಾಗಿ ಭೂಮಿಯ ಮೇಲೆ ಬಿದ್ದನು.

ವಸಾತಿಂ ನಿಹತಂ ದೃಷ್ಟ್ವಾ ಕ್ರುದ್ಧಾಃ ಕ್ಷತ್ರಿಯಪುಂಗವಾಃ ।
ಪರಿವವ್ರುಸ್ತದಾ ರಾಜನ್ ತವ ಪೌತ್ರಂ ಜಿಘಾಂಸವಃ ॥ ೧೧ ॥

ವಿಷ್ಫಾರಯಂತಶ್ಚಾಪಾನಿ ನಾನಾರೂಪಾಣ್ಯನೇಕಶಃ ।
ತದ್ ಯುದ್ಧಮಭವದ್ ರೌದ್ರಂ ಸೌಭದ್ರಸ್ಯಾರಿಭಿಃ ಸಹ ॥ ೧೨ ॥

ವಸಾತಿಯು ನಿಹತನಾದುದನ್ನು ನೋಡಿ ಕೋಪಗೊಂಡ ಕ್ಷತ್ರಿಯ ಶ್ರೇಷ್ಠರು ತಮ್ಮ ನಾನಾ ವಿಧವಾದ ಧನುಸ್ಸುಗಳನ್ನು ಅನೇಕ ರೀತಿಯಲ್ಲಿ ಎಳೆಯುತ್ತಾ ನಿನ್ನ ಪೌತ್ರನನ್ನು

ಕೊಲ್ಲಲು ಬಯಸಿ ಅವನನ್ನು ಸುತ್ತುವರಿದರು. ಅಭಿಮನ್ಯುವಿಗೂ ಮತ್ತು ಅವನ ಶತ್ರುಗಳಿಗೂ ಘೋರವಾದ ಯುದ್ಧವು ನಡೆಯಿತು.

ತೇಷಾಂ ಶರಾನ್ ಸೇಷ್ವಸನಾನ್ ಶರೀರಾಣಿ ಶಿರಾಂಸಿ ಚ ।
ಸಕುಂಡಲಾನಿ ಸ್ರಗ್ವೀಣಿ ಕ್ರುದ್ಧಶ್ಚಿಚ್ಛೇದ ಫಾಲ್ಗುನಿಃ ॥ ೧೩ ॥

ಕೋಪಗೊಂಡ ಅಭಿಮನ್ಯುವು ಅವರ ಧನುರ್ಬಾಣಗಳನ್ನೂ, ಶರೀರಗಳನ್ನೂ, ಹೂಮಾಲೆಯನ್ನು ಧರಿಸಿದ ಅವರ ಕುಂಡಲ ಸಹಿತವಾದ ಶಿರಸ್ಸುಗಳನ್ನೂ ಕತ್ತರಿಸಿದನು.

ಸಖಿಡ್ಗಾಃ ಸಾಂಗುಲತ್ರಾಣಾಃ ಸಪಟ್ಟಸಪರಶ್ವಧಾಃ ।
ಅದೃಶ್ಯಂತ ಭುಜಾಶ್ಚಿನ್ನಾ ನಾನಾಭರಣಭೂಷಿತಾಃ ॥ ೧೪ ॥

ಖಡ್ಗಸಹಿತವಾದ, ಅಂಗುಲಿತ್ರಾಣ ಸಹಿತವಾದ, ಪಟ್ಟಸ-ಪರಶ್ವಧಗಳನ್ನು ಹಿಡಿದ, ನಾನಾಭರಣ ಭೂಷಿತವಾದ ಭುಜಗಳು ಕತ್ತರಿಸಲ್ಪಟ್ಟು ಭೂಮಿಯ ಮೇಲೆ ಬಿದ್ದಿರುವುದು ಕಂಡುಬಂದವು.

ಸ್ರಗ್ಭಿರಾಭರಣೈರ್ವಸ್ತ್ರೈಃ ಪತಿತೈರ್ವಿವಿಧೈರ್ಧ್ವಜೈಃ ।
ವರ್ಮಭಿಶ್ಚರ್ಮಭಿರ್ಹಾರೈರ್ಮುಕುಟೈಶ್ಚತ್ರಚಾಮರೈಃ ॥ ೧೫ ॥

ಅವಸ್ಕರೈರಧಿಷ್ಠಾನೈರೀಷಾದಂಡಕಬಂಧುರೈಃ ।
ಚಕ್ರೈರ್ವಿಮಥಿತೈರಕ್ಷೈರ್ಭಗ್ನೈಶ್ಚ ಬಹುಧಾ ರಥೈಃ ॥ ೧೬ ॥

ಪಾದಾತೈರನುಕರ್ಷೈಶ್ಚ ರಥಿಸಾರಥಿವಾಜಿಭಿಃ ।
ರಥೈಶ್ಚ ಭಗ್ನೈರ್ನಾಗೈಶ್ಚ ಪಾದಾತೈಶ್ಚಾಸ್ತತಾ ಮಹೀ ॥ ೧೭ ॥

ಭೂಮಿಯ ಮೇಲೆ ಬಿದ್ದ ಹೂಮಾಲೆಗಳು, ಆಭರಣಗಳು, ವಸ್ತ್ರಗಳು, ವಿಧವಿಧವಾದ ಧ್ವಜಗಳು, ಕವಚಗಳು, ಗುರಾಣಿಗಳು, ಮಾಲೆಗಳು, ಮುಕುಟಗಳು, ಛತ್ರ-ಚಾಮರಗಳು, ರಥದ ಅವಸ್ಕಾರಗಳು, ಅಧಿಷ್ಠಾನಗಳು, ಈಷಾದಂಡಗಳು, ಮುಖ್ಯ ಮರಗಳು, ನೊಗಗಳು, ಭಗ್ನವಾದ ಚಕ್ರಗಳು, ಭಗ್ನವಾದ ಅಕ್ಷಗಳು, ಇವುಗಳನ್ನು ಹೊಂದಿದ ಬಹುವಿಧವಾದ ರಥಗಳು, ಪದಾತಿಗಳು, ಅನುಕರ್ಷಗಳು, ರಥಿ-ಸಾರಥಿ-ಅಶ್ವಗಳು, ಭಗ್ನವಾದ ರಥಗಳು, ಭಗ್ನವಾದ ಗದೆಗಳು ಮತ್ತು ಪದಾತಿಗಳು ಇವುಗಳಿಂದ ರಣಭೂಮಿಯು ಹರಡಲ್ಪಟ್ಟಿತು.

ನಿಹತೈಃ ಕ್ಷತ್ರಿಯೈಃ ಶೂರೈರ್ನಾನಾಜನಪದೇಶ್ವರೈಃ ।
ಜಯಗೃದ್ಧ್ಯೈರ್ಹತೈರ್ಭೂಮಿರ್ದಾರುಣಾ ಸಮಪದ್ಯತ ॥ ೧೮ ॥

ಜಯವನ್ನು ಅಪೇಕ್ಷಿಸಿದ ಹತರಾದ ಕ್ಷತ್ರಿಯರಿಂದ ಮತ್ತು ನಾನಾ ದೇಶದ ಶೂರರಾದ ರಾಜರುಗಳಿಂದ ಆವೃತವಾದ ಭೂಮಿಯು ದಾರುಣವಾಗಿ ಪರಿಣತವಾಯಿತು.

ದಿಶೋ ವಿಚರತಸ್ತಸ್ಯ ಸರ್ವಾಶ್ಚ ಪ್ರದಿಶಸ್ತಥಾ ।
ರಣೇಽಭಿಮನ್ಯೋಃ ಕ್ರುದ್ಧಸ್ಯ ರೂಪಮಂತರಧೀಯತ ॥ ೧೯ ॥

ಎಲ್ಲ ದಿಕ್ಕು-ವಿದಿಕ್ಕುಗಳಲ್ಲಿಯೂ ಸಂಚರಿಸುವ ಕ್ರುದ್ಧನಾದ ಅಭಿಮನ್ಯುವಿನ ರೂಪವು (ಸ್ವಲ್ಪಕಾಲ) ಅಂತರ್ಧಾನವನ್ನು ಹೊಂದಿತು.

ಕಾಂಚನಂ ಯದ್ಧಿ ತಸ್ಯಾಸೀದ್ ವರ್ಮ ಚಾಭರಣಾನಿ ಚ ।
ಧನುಷಶ್ಚ ಶರಾಣಾಂ ಚ ತದಪಶ್ಯಾಮ ಕೇವಲಮ್ ॥ ೨೦ ॥

ಸುವರ್ಣಮಯವಾದ ಅವನ ಕವಚ, ಆಭರಣಗಳು, ಧನುಸ್ಸಿನ ಮತ್ತು ಬಾಣಗಳ ಆಭರಣಗಳು ಮಾತ್ರ ನಮಗೆ ಕಂಡವು.

ತಂ ತದಾ ನಾಶಕದ್ ದ್ರಷ್ಟುಂ ಚಕ್ಷುರ್ಭ್ಯಾಂ ಕಶ್ಚಿದಾಹವೇ ।
ಆದದಾನಂ ಶರೈರ್ಯೋಧಾನ್ ಮಧ್ಯೇ ಸೂರ್ಯಮಿವ ಸ್ಥಿತಮ್ ॥

ಆಕಾಶದ ಮಧ್ಯದಲ್ಲಿರುವ ಸೂರ್ಯನಂತಿದ್ದ ಬಾಣಗಳಿಂದ ಯೋಧರನ್ನು ಸಂಹರಿಸುತ್ತಿದ್ದ ಅವನನ್ನು ರಣರಂಗದಲ್ಲಿ ತಮ್ಮ ಕಣ್ಣುಗಳಿಂದ ನೋಡಲು ಯಾವನೂ ಸಮರ್ಥನಾಗಲಿಲ್ಲ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಂ ದ್ರೋಣಪರ್ವಣಿ ತ್ರಿಚತ್ವಾರಿಂಶೋಽಧ್ಯಾಯಃ ॥

॥ ಅಭಿಮನ್ಯುವಧಪರ್ವಣಿ ದ್ವಾದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನಲವತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನಲವತ್ನಾಲ್ಕನೆಯ ಅಧ್ಯಾಯ

ಅಭಿಮನ್ಯುವಿನಿಂದ ದುರ್ಯೋಧನನ ಪರಾಜಯ.

ಸಂಜಯಃ

ಆದದಾನಸ್ತು ಶೂರಾಣಾಮಾಯೂಂಷ್ಯಭವದಾರ್ಜುನಿಃ ।
ಅಂತಕಃ ಸರ್ವಭೂತಾನಾಂ ಪ್ರಾಣಾನ್ ಕಾಲ ಇವಾಗತಃ ॥ ೧ ॥

ಸಂಜಯ– ಅಭಿಮನ್ಯುವು ಶೂರರ ಆಯುಸ್ಸನ್ನು ಅಪಹರಿಸುತ್ತಾ, ಮೃತ್ಯುಕಾಲ ಒದಗಿದಾಗ ಸರ್ವಭೂತಗಳ ಪ್ರಾಣಗಳನ್ನು ಅಪಹರಿಸುವ ಯಮನಂತೆ ಮುಂದೆ ಬಂದನು.

ಸ ಶಕ್ರಸಮವಿಕ್ರಾಂತಃ ಶಕ್ರಸೂನೋಃ ಸುತೋ ಬಲೀ ।
ಅಭಿಮನ್ಯುಸ್ತದಾऽನೀಕಂ ಲೋಲಯನ್ ಬಹ್ವಶೋಭತ ॥ ೨ ॥

ಬಲಿಷ್ಠನೂ, ಇಂದ್ರ ಪುತ್ರನ ಮಗನೂ ಆದ ಅಭಿಮನ್ಯುವು ಇಂದ್ರನಿಗೆ ಸಮಾನವಾದ ಪರಾಕ್ರಮವುಳ್ಳವನಾಗಿ ಶತ್ರುಸೇನೆಯನ್ನು ಕಲಕುತ್ತಾ ಬಹಳವಾಗಿ ಶೋಭಿಸಿದನು.

ಪ್ರವಿಶ್ಯೈವ ತು ರಾಜೇಂದ್ರ ಕ್ಷತ್ರಿಯೇಂದ್ರಾಂತಕೋಪಮಃ ।
ಸತ್ಯಶ್ರವಸಮಾದತ್ತ ವ್ಯಾಘ್ರೋ ಮೃಗಮಿವೋಲ್ಬಣಮ್ ॥ ೩ ॥

ಕ್ಷತ್ರಿಯಶ್ರೇಷ್ಠರಿಗೆ ಯಮನಂತಿದ್ದ ಅವನು ಪ್ರವೇಶಿಸಿ, ಎಲೈ ರಾಜೇಂದ್ರನೇ, ವ್ಯಾಘ್ರವು ಉಲ್ಬಣವಾದ ಜಿಂಕೆಯನ್ನು ಸಂಹರಿಸುವಂತೆ ಸತ್ಯಶ್ರವನನ್ನು ಸಂಹರಿಸಿದನು.

ಸತ್ಯಶ್ರವಸಿ ಚಾಕ್ಷಿಪ್ತೇ ತ್ವರಮಾಣಾ ಮಹಾರಥಾಃ ।
ಪ್ರಗೃಹ್ಯ ವಿವಿಧಂ ಶಸ್ತ್ರಮಭಿಮನ್ಯುಮುಪಾದ್ರವನ್ ॥ ೪ ॥

ಸತ್ಯಶ್ರವನು ಹತನಾಗುತ್ತಿರಲು ಮಹಾರಥರು ತ್ವರೆಯನ್ನು ಮಾಡಿ ವಿವಿಧವಾದ ಶಸ್ತ್ರಗಳನ್ನು ಹಿಡಿದು ಅಭಿಮನ್ಯುವಿನ ಮೇಲೆ ಎರಗಿದರು.

ಅಹಂಪೂರ್ವಮಹಂಪೂರ್ವಮಿತಿ ಕ್ಷತ್ರಿಯಪುಂಗವಾಃ ।
ಸ್ಪರ್ಧಮಾನಾ ಇವಾಜಗ್ಮುಃ ಜಿಘಾಂಸಂತೋऽರ್ಜುನಾತ್ಮಜಮ್ ॥ ೫ ॥

ಕ್ಷತ್ರಿಯಶ್ರೇಷ್ಠರು ನಾನು ಮೊದಲು, ನಾನು ಮೊದಲು ಎಂದು ಸ್ಪರ್ಧೆಯನ್ನು ಮಾಡುವವರಂತೆ ಅರ್ಜುನಪುತ್ರನನ್ನು ಕೊಲ್ಲಲು ಬಯಸಿ ಬಂದರು.

ಕ್ಷತ್ರಿಯಾಣಾಮನೀಕಾನಿ ಪ್ರದ್ರುತಾನ್ಯಭಿಧಾವತಾಮ್ ।
ಅಗ್ರಸತ್ ತಿಮಿರಾಸಾದ್ಯ ಕ್ಷುದ್ರಮತ್ಸ್ಯಾನಿವಾರ್ಣವೇ ॥ ೬ ॥

ಅಭಿಮನ್ಯುವು ತನ್ನ ಕಡೆಗೆ ಓಡಿ ಬರುತ್ತಿದ್ದ ಕ್ಷತ್ರಿಯರ ಸೈನ್ಯಗಳನ್ನು ಸಮುದ್ರದಲ್ಲಿ ತಿಮಿಂಗಿಲಗಳು ಸಣ್ಣ ಮೀನುಗಳನ್ನು ನುಂಗುವಂತೆ ನುಂಗಿದನು.

ಯೇ ಯೇ ಸಮಾಗತಾಸ್ತಸ್ಯ ಸಮೀಪಮಪಲಾಯಿನಃ ।
ನ ತೇ ಪ್ರತಿನಿವರ್ತಂತೇ ಸಮುದ್ರಾದಿವ ಸಿಂಧವಃ ॥ ೭ ॥

ಯುದ್ಧದಲ್ಲಿ ಪಲಾಯನವನ್ನು ಮಾಡದ ಯಾರು ಯಾರು ಅವನ ಸಮೀಪಕ್ಕೆ ಬಂದರೋ ಅವರು ಸಮುದ್ರದಿಂದ ನದಿಗಳು ಹಿಂದಿರುಗದಂತೆ ಹಿಂದಿರುಗಲಿಲ್ಲ.

ಮಹಾಗ್ರಾಹಗೃಹೀತೇವ ವಾತವೇಗಭಯಾರ್ದಿತಾ ।
ಸಮಕಂಪತ ಸಾ ಸೇನಾ ನೌರಿವಾಸೀನ್ಮಹಾರ್ಣವೇ ॥ ೮ ॥

ದೊಡ್ಡ ಮೊಸಳೆಯ ಬಾಯಿಗೆ ಸಿಲುಕಿದಂತೆ, ವಾಯುವೇಗದ ಭಯದಿಂದ ಮಹಾರ್ಣವದಲ್ಲಿ ಪೀಡಿತವಾದ ನೌಕೆಯಂತೆ, ಕೌರವರ ಆ ಸೇನೆಯು ನಡುಗಿತು.

ಅಥ ರುಗ್ಮರಥೋ ನಾಮ ಮದ್ರೇಶ್ವರಸುತೋ ಬಲೀ ।
ತ್ರಸ್ತಾಮಾಶ್ವಾಸಯನ್ ಸೇನಾಮ್ ಅತ್ರಸ್ತೋ ವಾಕ್ಯಮಬ್ರವೀತ್ ॥ ೯ ॥

ಆಗ ಮದ್ರೇಶ್ವರನಾದ, ಶಲ್ಯನ ಪುತ್ರನಾದ, ಬಲಿಷ್ಠನಾದ ರುಗ್ಮರಥನೆಂಬುವನು ಹೆದರಿದ ಆ ಸೈನ್ಯವನ್ನು ಸಮಾಧಾನಪಡಿಸುತ್ತಾ, ನಿರ್ಭಯನಾಗಿ ಈ ಮಾತನ್ನು ಆಡಿದನು.

ಅಲಂ ತ್ರಾಸೇನ ವಃ ಶೂರಾಃ ಸ ಮಾಮೇಷೋऽಭಿವರ್ತತೇ ।
ಅಹಮೇನಂ ಗ್ರಹೀಷ್ಯಾಮಿ ಜೀವಗ್ರಾಹಂ ನ ಸಂಶಯಃ ॥ ೧೦ ॥

ಶೂರರೇ, ಹೆದರಬೇಡಿ. ಅವನು ನನ್ನ ಕಡೆಗೆ ಬರುತ್ತಿದ್ದಾನೆ. ನಾನು ಅವನನ್ನು ಜೀವ ಸಹಿತವಾಗಿ ಸೆರೆ ಹಿಡಿಯುವೆನು. ಇದರಲ್ಲಿ ಸಂಶಯವಿಲ್ಲ.

ಏವಮುಕ್ತ್ವಾ ಸ ಸೌಭದ್ರಮ್ ಅಭಿದುದ್ರಾವ ವೀರ್ಯವಾನ್ ।
ಸುಕಲ್ಪಿತೇನೋಹ್ಯಮಾನಃ ಸ್ಯಂದನೇನ ವಿರಾಜತಾ ॥ ೧೧ ॥

ಹೀಗೆ ಹೇಳಿ ಪರಾಕ್ರಮಶಾಲಿಯಾದ ಅವನು ಚೆನ್ನಾಗಿ ಅಣಿಮಾಡಿದ, ಶೋಭಿಸುವ ರಥದಿಂದ ಸಾಗುತ್ತಾ ಅಭಿಮನ್ಯುವಿನ ಕಡೆಗೆ ಓಡಿಬಂದನು.

ಸೋಽಭಿಮನ್ಯುಂ ತ್ರಿಭಿರ್ಬಾಣೈರ್ವಿದ್ವಾ ವಕ್ಷಸ್ಯಥಾನದತ್ ।
ತ್ರಿಭಿಶ್ಚ ದಕ್ಷಿಣೇ ಬಾಹೌ ಸವ್ಯೇ ಚ ನಿಶಿತೈಸ್ತ್ರಿಭಿಃ ॥ ೧೨ ॥

ಅವನು ಅಭಿಮನ್ಯುವನ್ನು ಎದೆಯಲ್ಲಿ ಮೂರು ಬಾಣಗಳಿಂದ ಹೊಡೆದು ಸಿಂಹನಾದವನ್ನು ಮಾಡಿದನು. ಪುನಃ ದಕ್ಷಿಣ ಬಾಹುಗಳಲ್ಲಿ ಮೂರು ಬಾಣಗಳನ್ನೂ, ಸವ್ಯಬಾಹುವಿನಲ್ಲಿ ನಿಶಿತವಾದ ಮೂರು ಬಾಣಗಳನ್ನೂ ಪ್ರಯೋಗಿಸಿದನು.

ಸೋಽಭಿಮನ್ಯುಸ್ತತಸ್ತಸ್ಯ ವಿದ್ಧೋ ಬಾಣೈರ್ಭೃಶಂ ಬಲೀ ।
ತಸ್ಯ ಸೇಷ್ವಸನಂ ಸವ್ಯಂ ದಕ್ಷಿಣಂ ಚ ಸಸಾಯಕಮ್ ।
ಭುಜೌ ಶಿರಶ್ಚ ಸ್ಫಕ್ಚಿಭ್ರು ಕ್ಷಿತೌ ಕ್ಷಿಪ್ರಮಪಾತಯತ್ ॥ ೧೩ ॥

ಆ ಬಲಿಷ್ಠನಾದ ಅಭಿಮನ್ಯುವು ಅವನ ಬಾಣಗಳಿಂದ ಹೊಡೆಯಲ್ಪಟ್ಟವನಾಗಿ, ಅವನ ಧನುಸ್ಸನ್ನು ಹಿಡಿದ ಎಡಭುಜವನ್ನೂ, ಬಾಣವನ್ನು ಹಿಡಿದ ಬಲಭುಜವನ್ನೂ ಒಳ್ಳೆಯ ಅಕ್ಷಿ ಮತ್ತು ಹುಬ್ಬುಗಳನ್ನು ಹೊಂದಿದ ಶಿರಸ್ಸನ್ನೂ ಶೀಘ್ರವಾಗಿ ಭೂಮಿಯಲ್ಲಿ ಕೆಡವಿದನು.

ದೃಷ್ಟ್ವಾ ರುಗ್ಣರಥಂ ರುಗ್ಣಂ ಪುತ್ರಂ ಶಲ್ಯಸ್ಯ ಮಾನಿನಮ್ ।
ಜೀವಗ್ರಾಹಂ ಜಿಘೃಕ್ಷಂತಂ ಸೌಭದ್ರೇಣ ಯಶಸ್ವಿನಾ ॥ ೧೪ ॥

ಸಂಗ್ರಾಮದುರ್ಮದಾ ರಾಜನ್ ರಾಜಪುತ್ರಾಃ ಪ್ರಹಾರಿಣಃ ।
ವಯಸ್ಯಾಃ ಶಲ್ಯಪುತ್ರಸ್ಯ ಸುವರ್ಣವಿಕೃತಧ್ವಜಾಃ ॥ ೧೫ ॥

ತಾಳಮಾತ್ರಾಣಿ ಚಾಪಾನಿ ವಿಕರ್ಷಂತೋ ಮಹಾರಥಾಃ ।
ಆರ್ಜುನಿಂ ಶರವರ್ಷೇಣ ಸಮಂತಾತ್ ಪರ್ಯವಾರಯನ್ ॥ ೧೬ ॥

ಅಭಿಮನ್ಯುವನ್ನು ಜೀವ ಸಹಿತವಾಗಿ ಸೆರೆಹಿಡಿಯಲು ಹೊರಟ ಅಹಂಕಾರಿಯಾದ ಶಲ್ಯಪುತ್ರನಾದ ರುಗ್ಣರಥನು ಕೀರ್ತಿವಂತನಾದ ಅಭಿಮನ್ಯುವಿನಿಂದ ಹತನಾದುದನ್ನು

ನೋಡಿ, ಎಲೈ ರಾಜನೇ, ಸಂಗ್ರಾಮದುರ್ಮದರೂ, ಪ್ರಹಾರಶೀಲರೂ, ಸುವರ್ಣಭೂಷಿತವಾದ ಧ್ವಜವನ್ನುಳ್ಳವರೂ, ರಾಜಕುಮಾರರೂ, ಆದ ಶಲ್ಯಪುತ್ರನ ಸ್ನೇಹಿತರು ತಾಳಪ್ರಮಾಣದ ಧನುಸ್ಸನ್ನು ಎಳೆಯುತ್ತಾ ಅಭಿಮನ್ಯುವನ್ನು ತಮ್ಮ ಬಾಣಗಳ ಮಳೆಯಿಂದ ಹೊಡೆಯುತ್ತಾ ಎಲ್ಲ ಕಡೆಗಳಿಂದಲೂ ಸುತ್ತುವರಿದರು.

ಶೂರೈಃ ಶಿಕ್ಷಾಬಲೋಪೇತೈಃ ತರುಣೈರತ್ಯಮರ್ಷಿಭಿಃ ।
ದೃಷ್ಟ್ವೈಕಂ ಸಮರೇ ಶೂರಂ ಸೌಭದ್ರಂ ಪರಿವಾರಿತಮ್ ॥ ೧೭ ॥

ಛಾದ್ಯಮಾನಂ ಶರವ್ರಾತೈರ್ಹರ್ಷಯೋ ದುರ್ಯೋಧನೋಽಭವತ್ ।
ವೈವಸ್ವತಸ್ಯ ಭವನಂ ಗತಮೇನಮಮನ್ಯತ ॥ ೧೮ ॥

ಶಿಕ್ಷಾ-ಬಲಗಳಿಂದ ಕೂಡಿದ, ಮಹಾರೋಷವನ್ನು ಹೊಂದಿದ ಶೂರರಿಂದ ರಣರಂಗದಲ್ಲಿ ಶೂರನಾದ, ಏಕಾಕಿಯಾದ ಅಭಿಮನ್ಯುವು ಸುತ್ತುವರಿಯಲ್ಪಟ್ಟುದನ್ನೂ ಮತ್ತು ಅವರ ಬಾಣಗಳ ಮಳೆಯಿಂದ ಆಚ್ಛಾದಿಸಲ್ಪಡುವುದನ್ನೂ ನೋಡಿ ದುರ್ಯೋಧನನು ಸಂತುಷ್ಟನಾದನು. ಅವನು ಯಮಲೋಕವನ್ನು ಹೊಂದಿದ್ದಾನೆ ಎಂದೇ ತಿಳಿದನು.

ಸುವರ್ಣಪುಂಖೈರಿಷುಭಿರ್ನಾನಾಲಿಂಗೈಸ್ತ್ರಿಭಿಸ್ತ್ರಿಭಿಃ ।
ಅದೃಶ್ಯಮಾರ್ಜುನಿಂ ಚಕ್ರುರ್ನಿಮೇಷಾತ್ ತೇ ನೃಪಾತ್ಮಜಾಃ ॥ ೧೯ ॥

ಆ ರಾಜಕುಮಾರರು ಒಂದು ನಿಮಿಷದಲ್ಲಿ ಸುವರ್ಣಪುಂಖವನ್ನು ಧರಿಸಿದ, ನಾನಾ ರೂಪವಾದ ಮೂರು-ಮೂರು ಬಾಣಗಳಿಂದ ಅಭಿಮನ್ಯುವನ್ನು ಅದೃಶ್ಯನನ್ನಾಗಿ ಮಾಡಿದರು.

ಸಸೂತಾಶ್ವಧ್ವಜಂ ತಸ್ಯ ಸ್ಯಂದನಂ ತಂ ಚ ಮಾರಿಷ ।
ಆಚಿತಂ ಪ್ರತ್ಯಪಶ್ಯಾಮ ಶ್ವಾವಿಡಂ ಶಲಲೈರಿವ ॥ ೨೦ ॥

ಅವನ ಸಾರಥಿ, ಅಶ್ವ-ಧ್ವಜಗಳಿಂದ ಕೂಡಿದ ಅವನ ರಥ ಮತ್ತು ಅವನು ಎಲ್ಲರೂ ನಾಟಿದ ಬಾಣಗಳನ್ನು ಉಳ್ಳವರಾಗಿ ಮುಳ್ಳುಗಳಿಂದ ಕೂಡಿದ ಮುಳ್ಳುಹಂದಿಯಂತೆ ಇರುವುದನ್ನು ಎಲೈ ಪೂಜ್ಯನೇ, ನಾವು ನೋಡಿದೆವು.

ಸ ಗಾಢಮಿಷುಭಿರ್ವಿದ್ಧಃ ತೋತ್ತ್ರೈರ್ಗಜ ಇವಾರ್ದಿತಃ ।
ಗಾಂಧರ್ವಮಸ್ತ್ರಮಾಯಾಂ ಚ ರಥಮಾಯಾಂ ಚ ಯೋಜಯನ್ ॥

ಅಂಕುಶದಿಂದ ಪೀಡಿಸಲ್ಪಟ್ಟ ಗಜದಂತೆ ಬಾಣಗಳಿಂದ ಗಾಢವಾಗಿ ಹೊಡೆಯಲ್ಪಟ್ಟ ಅವನು ಗಾಂಧರ್ವಸ್ತ್ರವನ್ನೂ ಮತ್ತು ರಥಾಸ್ತ್ರವನ್ನೂ ಪ್ರಯೋಗಿಸಿದನು.

ಯೇಽರ್ಜುನೇನ ತಪಸ್ತಪ್ತ್ವಾ ಗಂಧರ್ವೇಭ್ಯಃ ಸಮಾಹೃತೇ ।
ತುಂಬುರುಪ್ರಮುಖೈರ್ದತ್ತೇ ತಾಭ್ಯಾಂ ತಾನ್ ಮೋಹಯದ್ ರಿಪೂನ್॥

ಅರ್ಜುನನು ತಪಸ್ಸನ್ನು ಮಾಡಿ ಗಂಧರ್ವರಿಂದ ಪಡೆದ, ತುಂಬುರು ಮೊದಲಾದವರು ಕೊಟ್ಟ ಆ ಎರಡು ಅಸ್ತ್ರಗಳಿಂದ ಅವನು ಶತ್ರುಗಳನ್ನು ಮೋಹಗೊಳಿಸಿದನು.

ಏಕಸ್ತು ಶತಧಾ ರಾಜನ್ ದೃಶ್ಯತೇ ಸ್ಮ ಸಹಸ್ರಧಾ ।
ಅಲಾತಚಕ್ರವತ್ ಸಂಖೇ ಭ್ರಮನ್ನಸ್ತ್ರಾಣ್ಯದರ್ಶಯತ್ ॥ ೨೩ ॥

ಎಲೈ ರಾಜನೇ, ಒಬ್ಬನೇ ಆದ ಅವನು ನೂರರಂತೆ, ಸಾವಿರದಂತೆ ಕಂಡು ಅಲಾತಚಕ್ರದಂತೆ ತಿರುಗುತ್ತಾ ರಣರಂಗದಲ್ಲಿ ತನ್ನ ಅಸ್ತ್ರಗಳನ್ನು ಪ್ರದರ್ಶಿಸಿದನು.

ರಥಚರ್ಯಾಸ್ತ್ರಮಾಯಾಭ್ಯಾಂ ಮೋಹಯಿತ್ವಾ ಪರಂತಪಃ ।
ಬಿಭೇದ ಶತಧಾಽನೀಕಂ ಕ್ಷತ್ರಿಯಾಣಾಂ ಭಯಂ ದಧತ್ ॥ ೨೪ ॥

ತನ್ನ ರಥಚರ್ಯದಿಂದಲೂ, ಅಸ್ತ್ರಗಳ ಸಾಮರ್ಥ್ಯದಿಂದಲೂ ಪರಂತಪನಾದ ಅವನು ಶತ್ರುಗಳನ್ನು ಭ್ರಾಂತಿಗೊಳಿಸಿ, ಕ್ಷತ್ರಿಯರಿಗೆ ಭಯವನ್ನುಂಟು ಮಾಡುತ್ತಾ, ಶತ್ರುಸೈನ್ಯವನ್ನು ನೂರು ರೀತಿಯಲ್ಲಿ ಭಗ್ನಗೊಳಿಸಿದನು.

ಭಿನ್ನಾನೀಕಾಶ್ಚ ದಿಜ್ಮೂಢಾ ಭೂಯಃ ಸಂತ್ರಸ್ತಚೇತಸಃ ।
ಭಲ್ಲೈರುತ್ಕೃತ್ತಶಿರಸಃ ಪರಲೋಕಮಥಾವಿಶನ್ ॥ ೨೫ ॥

ಸೈನ್ಯಗಳು ಭಗ್ನವಾಗಿ ದಿಙ್ಮೂಢರಾಗಿ, ಹೆದರಿದ ಮನಸ್ಸುಳ್ಳ ಅವರ ಶಿರಸ್ಸುಗಳು ಭಲ್ಲಗಳಿಂದ ಕತ್ತರಿಸಲ್ಪಟ್ಟು ಅವರು ಪರಲೋಕವನ್ನು ಪ್ರವೇಶಿಸಿದರು.

ಪ್ರಾಣಾಃ ಪ್ರಾಣಭೃತಾಂ ಸಂಖೇ ಪ್ರೇಷಿತಾ ನಿಶಿತೈಃ ಶರೈಃ ।
ರಾಜನ್ ಪ್ರಯಾಂತ್ಯಮುಂ ಲೋಕಂ ಶರೀರಾಣ್ಯವನಿಂ ಯಯುಃ ॥

ಎಲೈ ರಾಜನೇ, ಅವನ ನಿಶಿತವಾದ ಬಾಣಗಳಿಂದ ರಣರಂಗದಿಂದ ಕಳುಹಿಸಿಕೊಡಲ್ಪಟ್ಟ ಜೀವರ ಪ್ರಾಣಗಳು ಪರಲೋಕಕ್ಕೆ ಹೋದವು. ಅವರ ಶರೀರಗಳು ಭೂಮಿಯ ಮೇಲೆ ಬಿದ್ದವು.

ಧನೂಂಷ್ಯಶ್ವಾನ್ ನಿಯಂತ್಄ಂಶ್ಚ ಧ್ವಜಾನ್ ಬಾಹೂಂಶ್ಚ ಸಾಂಗದಾನ್ ।
ಶಿರಾಂಸಿ ಚ ಶಿತೈರ್ಭಲ್ಲೈಃ ತೇಷಾಂ ಚಿಚ್ಛೇದ ಫಾಲ್ಗುನಿಃ ॥ ೨೭ ॥

ಅಭಿಮನ್ಯುವು ಅವರ ಧನುಸ್ಸುಗಳನ್ನೂ, ಅಶ್ವಗಳನ್ನೂ, ಸಾರಥಿಗಳನ್ನೂ, ಧ್ವಜಗಳನ್ನೂ, ಅಂಗದ ಸಹಿತವಾದ ಬಾಹುಗಳನ್ನೂ ಮತ್ತು ಶಿರಸ್ಸುಗಳನ್ನೂ ನಿಶಿತವಾದ ಭಲ್ಲಗಳಿಂದ ಕತ್ತರಿಸಿದನು.

ಚೂತಾರಾಮೋ ಯಥಾ ಭಗ್ನಃ ಪಂಚವರ್ಷಃ ಫಲೋಪಗಃ ।
ರಾಜಪುತ್ರಶತಂ ತದ್ವತ್ ಸೌಭದ್ರೇಣಾಪತದ್ ಹತಮ್ ॥ ೨೮ ॥

ಐದು ವರ್ಷದ ಫಲ ಸಮೀಪದಲ್ಲಿರುವ ಮಾವಿನ ತೋಟವು ಭಗ್ನವಾದಂತೆ ನೂರು ರಾಜಪುತ್ರರು ಅಭಿಮನ್ಯುವಿನಿಂದ ಹತರಾಗಿ ಭೂಮಿಯ ಮೇಲೆ ಬಿದ್ದರು.

ಕ್ರುದ್ಧಾಶೀವಿಷಸಂಕಾಶಾನ್ ಸುಕುಮಾರಾನ್ ಸುಖೋಚಿತಾನ್ ।
ಏಕೇನ ನಿಹತಾನ್ ದೃಷ್ಟ್ವಾ ಭೀತೋ ದುರ್ಯೋಧನೋಽಭವತ್ ॥

ಕೋಪಗೊಂಡ ಸರ್ಪದ ಹೋಲಿಕೆಯನ್ನು ಹೊಂದಿದ್ದ, ಸುಖೋಚಿತರಾದ, ಸುಕುಮಾರರಾದ ಅವರು ಒಬ್ಬನಿಂದಲೇ ಹತರಾದುದನ್ನು ನೋಡಿ ದುರ್ಯೋಧನನು ಭೀತನಾದನು.

ರಥಿನಃ ಕುಂಜರಾನಶ್ವಾನ್ ಪದಾತೀಂಶ್ಚಾವಮರ್ದಿತಾನ್ ।
ದೃಷ್ಟ್ವಾ ದುರ್ಯೋಧನಃ ಕ್ಷಿಪ್ರಮುಪಾಯಾತ್ ತಮಮರ್ಷಿತಃ ॥ ೩೦ ॥

ಅವನಿಂದ ಮರ್ದಿಸಲ್ಪಟ್ಟ ರಥಿಕರನ್ನೂ, ಗಜಗಳನ್ನೂ, ಅಶ್ವಗಳನ್ನೂ, ಪದಾತಿಗಳನ್ನೂ ನೋಡಿ ದುರ್ಯೋಧನನು ಕೋಪಗೊಂಡು ಶೀಘ್ರವಾಗಿ ಅವನ ಬಳಿಗೆ ಬಂದನು.

ತಯೋಃ ಕ್ಷಣಮಿವಾಪೂರ್ವಃ ಸಂಗ್ರಾಮಃ ಸಮಭೂನ್ನೃಪ ।
ಅಥಾಭವತ್ ತೇ ವಿಮುಖಃ ಪುತ್ರಃ ಶರಶತಾರ್ದಿತಃ ॥ ೩೧ ॥

ಎಲೈ ರಾಜನೇ, ಅವರಿಬ್ಬರಿಗೆ ಒಂದು ಕ್ಷಣ ಅಪೂರ್ವವಾದ ಯುದ್ಧವು ನಡೆಯಿತು. ಅನಂತರ ಅವನ ಬಾಣಗಳಿಂದ ಪೀಡಿತನಾದ ನಿನ್ನ ಪುತ್ರನು ಯುದ್ಧ ವಿಮುಖನಾದನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಂ ದ್ರೋಣಪರ್ವಣಿ ಚತುಶ್ಚತ್ವಾರಿಂಶೋಽಧ್ಯಾಯಃ ॥

॥ ಅಭಿಮನ್ಯುವಧಪರ್ವಣಿ ತ್ರಯೋದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನಲವತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನಲವತ್ತೈದನೆಯ ಅಧ್ಯಾಯ

ಅಭಿಮನ್ಯುವಿನಿಂದ ಲಕ್ಷಣನ ವಧೆ.

ಧೃತರಾಷ್ಟ್ರಃ

ಯಥಾ ವದಸಿ ಮೇ ಸೂತ ಏಕಸ್ಯ ಬಹುಭಿಃ ಸಹ ।
ಸಂಗ್ರಾಮಂ ತುಮುಲಂ ಘೋರಂ ಜಯಂ ಚೈವ ಮಹಾತ್ಮನಃ ॥ ೧ ॥

ಅಶ್ರದ್ದೇಯಮಿವಾಶ್ಚರ್ಯಂ ಸೌಭದ್ರಸ್ಯಾಥ ವಿಕ್ರಮಮ್ ।
ಕಿಂತು ನಾತ್ಯದ್ಭುತಂ ತೇಷಾಂ ಧರ್ಮೋ ಯೇಷಾಂ ವ್ಯಪಾಶ್ರಯಃ ॥೨॥

ಧೃತರಾಷ್ಟ್ರ– ಎಲೈ ಸೂತನೇ, ಒಬ್ಬನಿಗೆ ಅನೇಕರ ಜೊತೆಯಲ್ಲಿ ನಡೆದ ತೀವ್ರವೂ, ಘೋರವೂ ಆದ ಯುದ್ಧವನ್ನೂ ಮಹಾತ್ಮನಾದ ಆ ಅಭಿಮನ್ಯುವಿನ ಜಯವನ್ನೂ ನೀನು ಹೇಳುತ್ತಿರುವಂತೆ ಆಶ್ಚರ್ಯಕರವಾದ ಅವನ ಪರಾಕ್ರಮವು ನಂಬಲು ಸಾಧ್ಯವಿಲ್ಲದುದು ಎಂದು ತೋರುತ್ತದೆ. ಆದರೆ ಯಾರು ಧರ್ಮವನ್ನು ಆಶ್ರಯಿಸಿದ್ದಾರೆಯೋ ಅವರಿಗೆ ಇದು ಅದ್ಭುತವಲ್ಲ.

ದುರ್ಯೋಧನೇ ತು ವಿಮುಖೇ ರಾಜಪುತ್ರಶತೇ ಹತೇ ।
ಸೌಭದ್ರೇ ಪ್ರತಿಪತ್ತಿಂ ಕಾಂ ಪ್ರತ್ಯಪದ್ಯಂತ ಮಾಮಕಾಃ ॥ ೩ ॥

ದುರ್ಯೋಧನನು ವಿಮುಖನಾಗಿ ನೂರು ರಾಜಕುಮಾರರು ಹತರಾಗುತ್ತಿರಲು ನನ್ನವರು ಅಭಿಮನ್ಯುವಿನ ವಿಷಯದಲ್ಲಿ ಯಾವ ನಿಲುವನ್ನು ತಾಳಿದರು?

ಸಂಜಯಃ

ಸಂಶುಷ್ಕಾಸ್ಯಾಶ್ಚಲನ್ನೇತ್ರಾಃ ಪ್ರಸ್ವಿನ್ನಾ ರೋಮಹರ್ಷಿಣಃ ।
ಪಲಾಯನಕೃತೋತ್ಸಾಹಾ ನಿರುತ್ಸಾಹಾ ದ್ವಿಷಜ್ಜಯೇ ॥ ೪ ॥

ಸಂಜಯ– ಒಣಗಿದ ಮುಖವುಳ್ಳವರಾಗಿ, ಚಂಚಲದೃಷ್ಟಿಯುಳ್ಳವರಾಗಿ, ರೋಮಾಂಚಗೊಂಡು, ಬೆವರಿ, ಶತ್ರುಜಯದಲ್ಲಿ ಉತ್ಸಾಹವನ್ನು ಕಳೆದುಕೊಂಡು ಪಲಾಯನ ಮಾಡುವುದರಲ್ಲಿ ಉತ್ಸಾಹವನ್ನು ಹೊಂದಿದರು.

ಹತಾನ್ ಭ್ರಾತೄನ್ ಪಿತೄನ್ ಪುತ್ರಾನ್ ಸಂಬಂಧೀನ್ ಬಾಂಧವಾನಪಿ ।
ಉತ್ಸೃಜ್ಯೋತ್ಸೃಜ್ಯ ಗಚ್ಛಂತಿ ತ್ವರಯಂತೋ ಹಯದ್ವಿಪಾನ್ ॥ ೫ ॥

ಹತರಾದ ಸಹೋದರರನ್ನೂ, ಪಿತೃಗಳನ್ನೂ, ಪುತ್ರರನ್ನೂ, ಸಂಬಂಧಿ ಬಾಂಧವರನ್ನೂ ಬಿಟ್ಟು ಗಜಾಶ್ವಗಳನ್ನು ತ್ವರೆಗೊಳಿಸುತ್ತಾ ಹೊರಟರು.

ತಾಂ ಪ್ರಭಗ್ನಾಂ ಚಮೂಂ ದೃಷ್ಟ್ವಾ ದ್ರೋಣೋ ದ್ರೌಣಿರ್ಬೃಹದ್ಬಲಃ ।
ಕೃಪೋ ದುರ್ಯೋಧನಃ ಕರ್ಣಃ ಕೃತವರ್ಮಾಽಥ ಸೌಬಲಿಃ ।
ಅಭಿದ್ರುತಾಃ ಸುಸಂಕ್ರುದ್ಧಾಃ ಸೌಭದ್ರಮಪರಾಜಿತಮ್ ॥ ೬ ॥

ಚೆನ್ನಾಗಿ ಭಗ್ನವಾದ ಆ ಸೈನ್ಯವನ್ನು ನೋಡಿ ದ್ರೋಣರು, ಅಶ್ವತ್ಥಾಮರು, ಬೃಹದ್ಬಲ, ಕೃಪರು, ದುರ್ಯೋಧನ, ಕರ್ಣ, ಕೃತವರ್ಮ, ಶಕುನಿ- ಇವರು ಬಹಳ ಕೋಪಗೊಂಡು ಅಪರಾಜಿತನಾದ ಅಭಿಮನ್ಯುವಿನ ಕಡೆಗೆ ಓಡಿ ಬಂದರು.

ತೇಽಪಿ ಪೌತ್ರೇಣ ತೇ ರಾಜನ್ ಪ್ರಾಯಶೋ ವಿಮುಖೀಕೃತಾಃ ।
ಸೌಭದ್ರೇಣ ಮಹಾರಾಜ ಶಕ್ರಪ್ರತಿಮತೇಜಸಾ ॥ ೭ ॥

ಎಲೈ ಮಹಾರಾಜನೇ, ಇಂದ್ರನಿಗೆ ಸಮಾನವಾದ ಪರಾಕ್ರಮವುಳ್ಳ ನಿನ್ನ ಪೌತ್ರನಾದ ಅಭಿಮನ್ಯುವಿನಿಂದ ಅವರೂ ಪ್ರಾಯಶಃ ಯುದ್ಧವಿಮುಖರಾಗಿ ಮಾಡಲ್ಪಟ್ಟರು.

ಏಕಸ್ತು ಸುಖಸಂವೃದ್ಧೋ ಬಾಲ್ಯಾದ್ ದರ್ಪಾಚ್ಚ ನಿರ್ಭಯಃ ।
ಇಷ್ವಸ್ತ್ರಕುಶಲಃ ಶೂರೋ ಲಕ್ಷಣೋಽರ್ಜುನಿಮಭ್ಯಯಾತ್ ॥ ೮ ॥

ಆದರೆ ಸುಖವಾಗಿ ಬೆಳೆದ, ಬಾಲ್ಯದಿಂದಲೂ ಮತ್ತು ದರ್ಪದಿಂದಲೂ ನಿರ್ಭಯನಾದ, ಶಸ್ತ್ರಾಸ್ತ್ರ ಕುಶಲನಾದ, ಶೂರನಾದ ಲಕ್ಷಣನು (ದುರ್ಯೋಧನ ಪುತ್ರನು) ಅಭಿಮನ್ಯುವಿನ ಕಡೆಗೆ ಧಾವಿಸಿದನು.

ತಮನ್ವಗೇವಾಸ್ಯ ಪಿತಾ ಪುತ್ರಗರ್ಧ್ಯನ್ವವರ್ತತ ।
ಅನುದುರ್ಯೋಧನಂ ಚಾನ್ಯೇ ಸನ್ನಿವೃತ್ತಾ ಮಹಾರಥಾಃ ॥ ೯ ॥

ಅವನ ಹಿಂದೆಯೇ ಅವನ ಕ್ಷೇಮವನ್ನು ಬಯಸುವ ಅವನ ತಂದೆಯು ಬಂದನು. ದುರ್ಯೋಧನನು ಹೋದುದನ್ನು ನೋಡಿ ಉಳಿದ ಮಹಾರಥರೂ ಹಿಂದಿರುಗಿ ಬಂದರು.

ತಂ ತೇಽಭಿಷಿಷಿಚುರ್ಬಾಣೈಃ ಮೇಘಾ ಗಿರಿಮಿವಾಂಬುಭಿಃ ।
ಸ ಚ ತಾನ್ ಪ್ರಮಮಾಥೈಕೋ ಏಷ್ವಸ್ತ್ರಾತೋ ಯಥಾಽಂಬುದಾನ್ ॥

ಮೋಡಗಳು ಪರ್ವತವನ್ನು ಜಲಧಾರೆಗಳಿಂದ ಅಭಿಷೇಕ ಮಾಡುವಂತೆ ಅವರು ಅವನ ಮೇಲೆ ಬಾಣಗಳ ಮಳೆಯನ್ನು ಸುರಿಸಿದರು. ಆದರೆ ಸುಂಟರಗಾಳಿ ಮೇಘಗಳನ್ನು ಹಾರಿಸುವಂತೆ ಏಕಾಕಿಯಾದ ಅವನು ಅವರೆಲ್ಲರನ್ನೂ ಮರ್ದಿಸಿದನು.

ಪೌತ್ರಂ ತು ತವ ದುರ್ಧರ್ಷಂ ಲಕ್ಷಣಂ ಪ್ರಿಯದರ್ಶನಮ್ ।
ಪಿತುಃ ಸಮೀಪೇ ತಿಷ್ಠಂತಂ ಶೂರಮುದ್ಯತಕಾರ್ಮುಕಮ್ ॥ ೧೧ ॥

ಅತ್ಯಂತಸುಖಸಂವೃದ್ಧಂ ಧನೇಶ್ವರಸುತೋಪಮಮ್ ।
ಅಸಸಾದ ರಣೇ ಕಾರ್ಷ್ಣಿರ್ಮತ್ತೋ ಮತ್ತಮಿವ ದ್ವಿಪಮ್ ॥ ೧೨ ॥

ಅಭಿಮನ್ಯುವು ಒಂದು ಮದಗಜವು ಇನ್ನೊಂದು ಮದಗಜದೆಡೆಗೆ ಧಾವಿಸಿದಂತೆ, ನಿನ್ನ ಪೌತ್ರನೂ, ಸೋಲಿಸಲು ಕಷ್ಟಸಾಧ್ಯನಾದವನೂ, ಪ್ರಿಯದರ್ಶನನೂ, ತಂದೆಯ ಸಮೀಪದಲ್ಲಿರುವವನೂ, ಶೂರನೂ, ಧನುಸ್ಸನ್ನು ಎತ್ತಿಹಿಡಿದವನೂ, ಅತ್ಯಂತ ಸುಖದಿಂದ ಬೆಳೆದವನೂ, ಕುಬೇರನ ಪುತ್ರನಿಗೆ ಸದೃಶನಾದವನೂ ಆದ ಲಕ್ಷಣನನ್ನು ಸಮೀಪಿಸಿದನು.

ಸಿಂಹಶಾವೋ ವನೇ ಯದ್ವತ್ ಪಂಡರೀಕಶಿಶುಂ ಯಥಾ ॥ ೧೩ ॥

ಲಕ್ಷಣೇನ ತು ಸಂಗಮ್ಯ ಸೌಭದ್ರಃ ಪರವೀರಹಾ ।
ಶರೈಃ ಸ ನಿಶಿತೈಸ್ತೀಕ್ಷ್ಣೈಃ ಬಾಹ್ವೋರುರಸಿ ಚಾರ್ಪಯತ್ ॥ ೧೪ ॥

ಸಿಂಹದ ಮರಿಯು ಹುಲಿಯ ಮರಿಯ ಜೊತೆಯಲ್ಲಿ ಸೆಣೆಸಿದಂತೆ, ಶತ್ರುಘಾತಕನಾದ ಅಭಿಮನ್ಯುವು ಲಕ್ಷಣನ ಜೊತೆಯಲ್ಲಿ ಸಮಾಗಮವನ್ನು ಹೊಂದಿ, ಅವನ ಬಾಹುಗಳಲ್ಲಿಯೂ, ಎದೆಯಲ್ಲಿಯೂ ತೀಕ್ಷ್ಣವಾದ, ಹರಿತವಾದ ಬಾಣಗಳನ್ನು ಪ್ರಯೋಗಿಸಿದನು.

ಸಮಕ್ರುದ್ಧ್ಯನ್ಮಹಾಬಾಹುರ್ದಂಡಾಹತ ಇವೋರಗಃ ।
ಪೌತ್ರಸ್ತವ ಮಹಾಬಾಹುಸ್ತವ ಪೌತ್ರಮಭಾಷತ ॥ ೧೫ ॥

ಮಹಾಬಾಹುವಾದ ಲಕ್ಷಣನು ದಂಡದಿಂದ ಹೊಡೆದ ಸರ್ಪದಂತೆ ಬಹಳ ಕ್ರೋಧಗೊಂಡನು. ಮಹಾಬಾಹುವಾದ ನಿನ್ನ ಪೌತ್ರನಾದ ಅಭಿಮನ್ಯುವು ಪೌತ್ರನಾದ ಲಕ್ಷಣನನ್ನು ಕುರಿತು ಮಾತನಾಡಿದನು.

ಅಭಿಮನ್ಯುಃ

ಸುದೃಷ್ಟಃ ಕ್ರಿಯತಾಂ ಲೋಕೋ ಯಮಲೋಕಂ ಗಮಿಷ್ಯಸಿ ।
ಪಶ್ಯತಾಂ ಬಾಂಧವಾನಾಂ ತ್ವಾಂ ನಯಾಮಿ ಯಮಸಾದನಮ್ ॥೧೬॥

ಅಭಿಮನ್ಯು– ಈ ಲೋಕವನ್ನು ಚೆನ್ನಾಗಿ ನೋಡು. ನೀನು ಯಮಲೋಕಕ್ಕೆ ಹೋಗುವಿ. ನಿನ್ನ ಬಂಧುಗಳು ನೋಡುತ್ತಿರುವಂತೆಯೇ ನಿನ್ನನ್ನು ಯಮಲೋಕಕ್ಕೆ ಕಳುಹಿಸುತ್ತೇನೆ.

ಸಂಜಯಃ

ಏವಮುಕ್ತ್ವಾ ತತೋ ಭಲ್ಲಂ ಸೌಭದ್ರಃ ಪರವೀರಹಾ ।
ಉದ್ಬಬರ್ಹ ಮಹಾಬಾಹುರ್ನಿರ್ಮುಕ್ತೋರಗಸನ್ನಿಭಮ್ ॥ ೧೭ ॥

ಸಂಜಯ– ಹೀಗೆ ಮಾತನಾಡಿ ಶತ್ರುಘಾತಕನೂ, ಮಹಾಬಾಹುವೂ ಆದ ಅಭಿಮನ್ಯುವು ಪೊರೆಯನ್ನು ಬಿಟ್ಟ ಸರ್ಪದಂತಿದ್ದ ಒಂದು ಭಲ್ಲವನ್ನು ಕೋಶದಿಂದ ತೆಗೆದನು.

ಸ ತಸ್ಯ ಭುಜನಿರ್ಮುಕ್ತೋ ಲಕ್ಷಣಸ್ಯ ಸುದರ್ಶನಮ್ ।
ಸುನಾಸಂ ಸುಭ್ರು ಕೇಶಾಂತಂ ಶಿರೋಽಹಾರ್ಷೀತ್ ಸಕುಂಡಲಮ್ ॥

ಅವನ ಭುಜದಿಂದ ನಿರ್ಮುಕ್ತವಾದ ಆ ಭಲ್ಲವು ಸುಂದರವಾದ, ಒಳ್ಳೆಯ ನಾಸಿಕೆ, ಹುಬ್ಬುಗಳು, ಬೈತಲೆ, ಕುಂಡಲಗಳನ್ನು ಹೊಂದಿದ ಸುದರ್ಶನನ ಶಿರಸ್ಸನ್ನು ಕತ್ತರಿಸಿತು.

ಪೌತ್ರಸ್ತು ತವ ದುರ್ಧರ್ಷಂ ಲಕ್ಷಣಂ ಪ್ರಿಯದರ್ಶನಮ್ ।
ಪಿತುಃ ಸಮೀಪೇ ತಿಷ್ಠಂತಂ ಪ್ರಾಹಿಣೋದ್ ಯಮಸಾದನಮ್ ॥

ನಿನ್ನ ಪೌತ್ರನಾದ ಅಭಿಮನ್ಯುವು ದುರ್ಧರ್ಷನೂ, ಪ್ರಿಯದರ್ಶನನೂ ಮತ್ತು ತಂದೆಯ ಸಮೀಪದಲ್ಲಿಯೇ ಇದ್ದವನೂ ಆದ ಲಕ್ಷಣನನ್ನು ಯಮಲೋಕಕ್ಕೆ ಕಳುಹಿಸಿದನು.

ಅತ್ಯಂತಸುಖಸಂವೃದ್ಧಂ ಧನೇಶ್ವರಸುತೋಪಮಮ್ ।
ಲಕ್ಷಣಂ ನಿಹತಂ ದೃಷ್ಟ್ವಾ ಹಾಹೇತ್ಯುಚ್ಚುಕ್ರುಶುರ್ಜನಾಃ ॥ ೨೦ ॥

ಬಹಳ ಸುಖದಿಂದ ಬೆಳೆದ, ಕುಬೇರನ ಪುತ್ರನಂತಿದ್ದ ಲಕ್ಷಣನು ಹತನಾದುದನ್ನು ನೋಡಿ ಜನರು ಹಾಹಾಕಾರವನ್ನು ಮಾಡಿದರು.

ತತೋ ದುರ್ಯೋಧನಃ ಕ್ರುದ್ಧಃ ಪ್ರಿಯೇ ಪುತ್ರೇ ನಿಪಾತಿತೇ ।
ಘ್ನತೈನಮಿತಿ ಚುಕ್ರೋಶ ಕ್ಷತ್ರಿಯಾನ್ ಕ್ಷತ್ರಿಯರ್ಷಭಃ ॥ ೨೧ ॥

ಆಗ ತನ್ನ ಪ್ರಿಯಪುತ್ರನು ಹತನಾಗುತ್ತಿರಲು ಕೋಪಗೊಂಡ ಕ್ಷತ್ರಿಯ ಶ್ರೇಷ್ಠನಾದ ದುರ್ಯೋಧನನು ಕ್ಷತ್ರಿಯರನ್ನು ಕುರಿತು ಈ ಅಭಿಮನ್ಯುವನ್ನು ಕೊಲ್ಲಿ ಎಂದು ಕಿರುಚಿದನು.

ತತೋ ದ್ರೋಣಃ ಕೃಪಃ ಕರ್ಣೋ ದ್ರೋಣಪುತ್ರೋ ಬೃಹದ್ಬಲಃ ।
ಕೃತವರ್ಮಾ ಚ ಹಾರ್ದಿಕ್ಯಃ ಷಡ್ರಥಾಃ ಪರ್ಯವಾರಯನ್ ॥ ೨೨ ॥

ಆಗ ದ್ರೋಣರು, ಕೃಪರು, ಕರ್ಣ, ಅಶ್ವತ್ಥಾಮರು, ಬೃಹದ್ಬಲ, ಹಾರ್ದಿಕ್ಯನಾದ ಕೃತವರ್ಮ- ಈ ಆರು ಮಹಾರಥರು ಅಭಿಮನ್ಯುವನ್ನು ಸುತ್ತುವರಿದರು.

ಸ ತಾನ್ ವಿದ್ಧ್ವಾ ಶಿತೈರ್ಬಾಣೈರ್ವಿಮುಖೀಕೃತ್ಯ ಚಾರ್ಜುನಿಃ ।
ವೇಗೇನಾಭ್ಯದ್ರವತ್ ಕ್ರುದ್ಧಃ ಸೈಂಧವಂ ಚ ಮಹಾಬಲಮ್ ॥ ೨೩ ॥

ಅರ್ಜುನಪುತ್ರನಾದ ಅಭಿಮನ್ಯುವು ಅವರನ್ನು ಹರಿತವಾದ ಬಾಣಗಳಿಂದ ಹೊಡೆದು ಯುದ್ಧವಿಮುಖರನ್ನಾಗಿ ಮಾಡಿ ವೇಗದಿಂದ ಮಹಾಬಲನಾದ ಸೈಂಧವನ ಕಡೆಗೆ ಕೋಪದಿಂದ ಸಾಗಿದನು.

ಆವವ್ರುಸ್ತಸ್ಯ ಪಂಥಾನಂ ಗಜಾನೀಕೇನ ದಂಸಿತಾಃ ।
ಕಳಿಂಗಾಶ್ಚ ನಿಷಾದಾಶ್ಚ ಕ್ರಾಥಪುತ್ರಶ್ಚ ವೀರ್ಯವಾನ್ ॥ ೨೪ ॥

ಕವಚ ಸನ್ನದ್ಧರಾದ ಕಳಿಂಗರೂ, ನಿಷಾದರೂ ಮತ್ತು ಪರಾಕ್ರಮಶಾಲಿಯಾದ ಕ್ರಾಥ ಪುತ್ರನೂ ಅವನು ಹೋಗುವ ಮಾರ್ಗವನ್ನು ಗಜಸೇನೆಯಿಂದ ತಡೆದನು.

ತೈರ್ನದದ್ಭಿರ್ಯಥಾऽऽದಿತ್ಯೋ ಘನಾಚ್ಛನ್ನೋ ವಿಶಾಂಪತೇ ।
ತತ್ ಪ್ರತಪ್ತಮಿವಾತ್ಯರ್ಥಂ ಯುದ್ಧಮಾಸೀದ್ ವಿಶಾಂಪತೇ ॥ ೨೫ ॥

ಎಲೈ ರಾಜನೇ, ಮೋಡಗಳಿಂದ ಮುಚ್ಚಲ್ಪಡದಿರುವ ಸೂರ್ಯನು ಜಗತ್ತನ್ನು ತಾಪಗೊಳಿಸುವಂತೆ ಸಿಂಹನಾದಗಳನ್ನು ಮಾಡುವ ಅವರಿಗೂ ಮತ್ತು ಅಭಿಮನ್ಯುವಿಗೂ ಬಹಳ ತಾಪಕಾರಿಯಾದ ಯುದ್ಧವು ಉಂಟಾಯಿತು.

ತತಸ್ತತ್ ಕುಂಜರಾನೀಕಂ ವ್ಯಧಮದ್ ಧೃಷ್ಟಮಾರ್ಜುನಿಃ ।
ಯಥಾऽಖಿಲಾನ್ ನಿತ್ಯಗತಿರ್ಜಲದಾನ್ ಶತಶೋऽಂಬರೇ ॥ ೨೬ ॥

ಉದ್ಧತವಾದ ಆ ಗಜಸೇನೆಯನ್ನು ಅಭಿಮನ್ಯುವು ವಾಯುವು ಆಕಾಶದಲ್ಲಿ ನೂರಾರು ಸಂಖ್ಯೆಯಲ್ಲಿರುವ ಮೋಡಗಳನ್ನು ಹಾರಿಸುವಂತೆ ಹಾರಿಸಿದನು.

ತತಃ ಕ್ರಾಥಂ ಶರವ್ರಾತೈರಾರ್ಜುನಿಃ ಸಮವಾರಯತ್ ।
ಅಥೇತರೇ ಸನ್ನಿವೃತ್ತಾಃ ಪುನರ್ದ್ರೋಣಮುಖಾ ರಥಾಃ ॥ ೨೭ ॥

ಪರಮಾಸ್ತ್ರಾಣಿ ಧುನ್ವಾನಾಃ ಸೌಭದ್ರಮಭಿದುದ್ರುವುಃ ॥ ೨೮ ॥

ಅನಂತರ ಅಭಿಮನ್ಯುವು ಬಾಣಗಳ ಸಮೂಹದಿಂದ ಕ್ರಾಥ ಪುತ್ರನನ್ನು ತಡೆದನು. ಉಳಿದ ದ್ರೋಣ ಮೊದಲಾದ ಮಹಾರಥರು ರಣಭೂಮಿಗೆ ಹಿಂದಿರುಗಿ ಪರಮಾಸ್ತ್ರಗಳನ್ನು ಪ್ರಯೋಗಿಸುತ್ತಾ ಅಭಿಮನ್ಯುವಿನ ಮೇಲೆ ನುಗ್ಗಿದರು.

ತಾನ್ ನಿವಾರ್ಯಾರ್ಜುನಿರ್ಬಾಣೈಃ ಕ್ರಾಥಪುತ್ರಮಥಾರ್ದಯತ್ ।
ಶರೌಘೇಣಾಪ್ರಮೇಯೇಣ ತ್ವರಮಾಣೋ ಜಿಘಾಂಸಯಾ ॥ ೨೯ ॥

ಅಭಿಮನ್ಯುವು ಅವರನ್ನು ತನ್ನ ಬಾಣಗಳಿಂದ ನಿವಾರಿಸಿ ಕ್ರಾತ ಪುತ್ರನನ್ನು ಕೊಲ್ಲಲು ಬಯಸಿ ತ್ವರೆಯಿಂದ ಅಪ್ರಮೇಯವಾದ ಬಾಣಸಮೂಹಗಳಿಂದ ಅವನನ್ನು ಮರ್ದಿಸಿದನು.

ಸಧನುರ್ಬಾಣಕೇಯೂರೌ ಬಾಹೂ ಸಮಕುಟಂ ಶಿರಃ ।
ಛತ್ರಂ ಧ್ವಜಂ ನಿಯಂತಾರಮಶ್ವಾಂಶ್ಚಾಸ್ಯ ನ್ಯಪಾತಯತ್ ॥ ೩೦ ॥

ಅವನ ಧನುರ್ಬಾಣಕೇಯೂರಗಳಿಂದ ಸಹಿತವಾದ ಬಾಹುಗಳನ್ನೂ, ಕಿರೀಟ ಸಹಿತವಾದ ಶಿರಸ್ಸನ್ನೂ, ಛತ್ರ-ಧ್ವಜ-ಸಾರಥಿಗಳನ್ನೂ ಮತ್ತು ರಥದ ಅಶ್ವಗಳನ್ನೂ ಹೊಡೆದು ಉರುಳಿಸಿದನು.

ಕುಲಶೀಲಶ್ರುತಧನೈಃ ಕೀರ್ತ್ಯಾ ಚಾಸ್ತ್ರಬಲೇನ ಚ ।
ಯುಕ್ತೇ ತಸ್ಮಿನ್ ಹತೇ ವೀರಾಃ ಪ್ರಾಯಶೋ ವಿಮುಖಾಽಭವನ್ ॥

ಕುಲ-ಶೀಲಗಳಿಂದಲೂ, ವಿದ್ಯಾ-ಧನಗಳಿಂದಲೂ, ಕೀರ್ತಿ ಮತ್ತು ಅಸ್ತ್ರಬಲದಿಂದಲೂ ಸಹಿತನಾದ ಅವನು ಹತನಾಗುತ್ತಿರಲು ವೀರರು ಹೆಚ್ಚಾಗಿ ಯುದ್ಧ ವಿಮುಖರಾದರು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಂ ದ್ರೋಣಪರ್ವಣಿ ಪಂಚಚತ್ವಾರಿಂಶೋಽಧ್ಯಾಯಃ ॥

॥ ಅಭಿಮನ್ಯುವಧಪರ್ವಣಿ ಚತುರ್ದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನಲವತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಸ ತಾನ್ ವಿದ್ಧ್ವಾ ಶಿತೈರ್ಬಾಣೈರ್ವಿಮುಖೀಕೃತ್ಯ ಚಾರ್ಜುನಿಃ ।
ವೇಗೇನಾಭ್ಯದ್ರವತ್ ಕ್ರುದ್ಧಃ ಸೈಂಧವಂ ಚ ಮಹಾಬಲಮ್ ॥ ೨೩ ॥

ಅರ್ಜುನಪುತ್ರನಾದ ಅಭಿಮನ್ಯುವು ಅವರನ್ನು ಹರಿತವಾದ ಬಾಣಗಳಿಂದ ಹೊಡೆದು ಯುದ್ಧವಿಮುಖರನ್ನಾಗಿ ಮಾಡಿ ವೇಗದಿಂದ ಮಹಾಬಲನಾದ ಸೈಂಧವನ ಕಡೆಗೆ ಕೋಪದಿಂದ ಸಾಗಿದನು.

ಆವವ್ರುಸ್ತಸ್ಯ ಪಂಥಾನಂ ಗಜಾನೀಕೇನ ದಂಸಿತಾಃ ।
ಕಳಿಂಗಾಶ್ಚ ನಿಷಾದಾಶ್ಚ ಕ್ರಾಥಪುತ್ರಶ್ಚ ವೀರ್ಯವಾನ್ ॥ ೨೪ ॥

ಕವಚ ಸನ್ನದ್ಧರಾದ ಕಳಿಂಗರೂ, ನಿಷಾದರೂ ಮತ್ತು ಪರಾಕ್ರಮಶಾಲಿಯಾದ ಕ್ರಾಥ ಪುತ್ರನೂ ಅವನು ಹೋಗುವ ಮಾರ್ಗವನ್ನು ಗಜಸೇನೆಯಿಂದ ತಡೆದನು.

ತೈರ್ನದದ್ಭಿರ್ಯಥಾऽऽದಿತ್ಯೋ ಘನಾಚ್ಛನ್ನೋ ವಿಶಾಂಪತೇ ।
ತತ್ ಪ್ರತಪ್ತಮಿವಾತ್ಯರ್ಥಂ ಯುದ್ಧಮಾಸೀದ್ ವಿಶಾಂಪತೇ ॥ ೨೫ ॥

ಎಲೈ ರಾಜನೇ, ಮೋಡಗಳಿಂದ ಮುಚ್ಚಲ್ಪಡದಿರುವ ಸೂರ್ಯನು ಜಗತ್ತನ್ನು ತಾಪಗೊಳಿಸುವಂತೆ ಸಿಂಹನಾದಗಳನ್ನು ಮಾಡುವ ಅವರಿಗೂ ಮತ್ತು ಅಭಿಮನ್ಯುವಿಗೂ ಬಹಳ ತಾಪಕಾರಿಯಾದ ಯುದ್ಧವು ಉಂಟಾಯಿತು.

ತತಸ್ತತ್ ಕುಂಜರಾನೀಕಂ ವ್ಯಧಮದ್ ಧೃಷ್ಟಮಾರ್ಜುನಿಃ ।
ಯಥಾऽಖಿಲಾನ್ ನಿತ್ಯಗತಿರ್ಜಲದಾನ್ ಶತಶೋऽಂಬರೇ ॥ ೨೬ ॥

ಉದ್ಧತವಾದ ಆ ಗಜಸೇನೆಯನ್ನು ಅಭಿಮನ್ಯುವು ವಾಯುವು ಆಕಾಶದಲ್ಲಿ ನೂರಾರು ಸಂಖ್ಯೆಯಲ್ಲಿರುವ ಮೋಡಗಳನ್ನು ಹಾರಿಸುವಂತೆ ಹಾರಿಸಿದನು.

ತತಃ ಕ್ರಾಥಂ ಶರವ್ರಾತೈರಾರ್ಜುನಿಃ ಸಮವಾರಯತ್ ।
ಅಥೇತರೇ ಸನ್ನಿವೃತ್ತಾಃ ಪುನರ್ದ್ರೋಣಮುಖಾ ರಥಾಃ ॥ ೨೭ ॥

ಪರಮಾಸ್ತ್ರಾಣಿ ಧುನ್ವಾನಾಃ ಸೌಭದ್ರಮಭಿದುದ್ರುವುಃ ॥ ೨೮ ॥

ಅನಂತರ ಅಭಿಮನ್ಯುವು ಬಾಣಗಳ ಸಮೂಹದಿಂದ ಕ್ರಾಥ ಪುತ್ರನನ್ನು ತಡೆದನು. ಉಳಿದ ದ್ರೋಣ ಮೊದಲಾದ ಮಹಾರಥರು ರಣಭೂಮಿಗೆ ಹಿಂದಿರುಗಿ ಪರಮಾಸ್ತ್ರಗಳನ್ನು ಪ್ರಯೋಗಿಸುತ್ತಾ ಅಭಿಮನ್ಯುವಿನ ಮೇಲೆ ನುಗ್ಗಿದರು.

ತಾನ್ ನಿವಾರ್ಯಾರ್ಜುನಿರ್ಬಾಣೈಃ ಕ್ರಾಥಪುತ್ರಮಥಾರ್ದಯತ್ ।
ಶರೌಘೇಣಾಪ್ರಮೇಯೇಣ ತ್ವರಮಾಣೋ ಜಿಘಾಂಸಯಾ ॥ ೨೯ ॥

ಅಭಿಮನ್ಯುವು ಅವರನ್ನು ತನ್ನ ಬಾಣಗಳಿಂದ ನಿವಾರಿಸಿ ಕ್ರಾತ ಪುತ್ರನನ್ನು ಕೊಲ್ಲಲು ಬಯಸಿ ತ್ವರೆಯಿಂದ ಅಪ್ರಮೇಯವಾದ ಬಾಣಸಮೂಹಗಳಿಂದ ಅವನನ್ನು ಮರ್ದಿಸಿದನು.

ಸಧನುರ್ಬಾಣಕೇಯೂರೌ ಬಾಹೂ ಸಮಕುಟಂ ಶಿರಃ ।
ಛತ್ರಂ ಧ್ವಜಂ ನಿಯಂತಾರಮಶ್ವಾಂಶ್ಚಾಸ್ಯ ನ್ಯಪಾತಯತ್ ॥ ೩೦ ॥

ಅವನ ಧನುರ್ಬಾಣಕೇಯೂರಗಳಿಂದ ಸಹಿತವಾದ ಬಾಹುಗಳನ್ನೂ, ಕಿರೀಟ ಸಹಿತವಾದ ಶಿರಸ್ಸನ್ನೂ, ಛತ್ರ-ಧ್ವಜ-ಸಾರಥಿಗಳನ್ನೂ ಮತ್ತು ರಥದ ಅಶ್ವಗಳನ್ನೂ ಹೊಡೆದು ಉರುಳಿಸಿದನು.

ಕುಲಶೀಲಶ್ರುತಧನೈಃ ಕೀರ್ತ್ಯಾ ಚಾಸ್ತ್ರಬಲೇನ ಚ ।
ಯುಕ್ತೇ ತಸ್ಮಿನ್ ಹತೇ ವೀರಾಃ ಪ್ರಾಯಶೋ ವಿಮುಖಾಽಭವನ್ ॥

ಕುಲ-ಶೀಲಗಳಿಂದಲೂ, ವಿದ್ಯಾ-ಧನಗಳಿಂದಲೂ, ಕೀರ್ತಿ ಮತ್ತು ಅಸ್ತ್ರಬಲದಿಂದಲೂ ಸಹಿತನಾದ ಅವನು ಹತನಾಗುತ್ತಿರಲು ವೀರರು ಹೆಚ್ಚಾಗಿ ಯುದ್ಧ ವಿಮುಖರಾದರು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಂ ದ್ರೋಣಪರ್ವಣಿ ಪಂಚಚತ್ವಾರಿಂಶೋಽಧ್ಯಾಯಃ ॥

॥ ಅಭಿಮನ್ಯುವಧಪರ್ವಣಿ ಚತುರ್ದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನಲವತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನಲವತ್ತಾರನೆಯ ಅಧ್ಯಾಯ

ಅಭಿಮನ್ಯುವಿನ ಪರಾಕ್ರಮದ ವರ್ಣನೆ.

ಧೃತರಾಷ್ಟ್ರಃ

ತಥಾ ಪ್ರವಿಷ್ಟಂ ತರುಣಂ ಸೌಭದ್ರಂ ರಥಿನಾಂ ವರಮ್ ।
ಕುಲಾನುರೂಪಕರ್ಮಾಣಂ ಸಂಗ್ರಾಮೇಷ್ವಪಲಾಯಿನಮ್ ॥ ೧ ॥

ಆಜಾನೇಯೈಃ ಸುಬಹುಭಿರ್ಯಾಂತಮಶ್ವೈಸ್ತ್ರಿಹಾಯನೈಃ ।
ಪ್ಲವಮಾನಮಿವಾಕಾಶೇ ಕೇ ವೀರಾಃ ಪರ್ಯವಾರಯನ್ ॥ ೨ ॥

ಧೃತರಾಷ್ಟ್ರ– ಹಾಗೆ ಪ್ರವಿಷ್ಟನಾದ ಅಭಿಮನ್ಯುವು ಶ್ರೇಷ್ಠ ರಥನೂ, ಕುಲಕ್ಕೆ ಅನುಗುಣವಾದ ಕರ್ಮವನ್ನು ಮಾಡುವವನೂ, ಯುದ್ಧದಲ್ಲಿ ಹಿಮ್ಮೆಟ್ಟದವನೂ, ಮೂರು ವರ್ಷ ಪ್ರಾಯದ ಒಳ್ಳೆಯ ಅಶ್ವಗಳನ್ನು ಹೂಡಿದ ರಥದಲ್ಲಿ ಆಕಾಶದಲ್ಲಿ ತೇಲಿದಂತೆ ಹೋಗುವವನೂ ಆದ ಅಭಿಮನ್ಯುವನ್ನು ಯಾವ ವೀರರು ತಡೆದರು?

ಸಂಜಯಃ

ಅಭಿಮನ್ಯುಃ ಪ್ರವಿಶ್ಯೈವ ತಾವಕಾನ್ ನಿಶಿತೈಃ ಶರೈಃ ।
ಅಕರೋದ್ ವಿಮುಖಾನ್ ಸರ್ವಾನ್ ಬಲವಾನ್ ಪಾಂಡವಾತ್ಮಜಃ ॥

ಸಂಜಯ– ಬಲಿಷ್ಠನೂ, ಅರ್ಜುನ ಪುತ್ರನೂ ಆದ ಅಭಿಮನ್ಯುವು ನಿನ್ನ ಸೈನ್ಯವನ್ನು ಪ್ರವೇಶಿಸಿ ನಿಶಿತವಾದ ಬಾಣಗಳಿಂದ ಎಲ್ಲರನ್ನೂ ಯುದ್ಧವಿಮುಖರನ್ನಾಗಿ ಮಾಡಿದನು.

ತಂ ತು ದ್ರೋಣಃ ಕೃಪಃ ಕರ್ಣೋ ದ್ರೌಣಿಃ ಸಹಬೃಹದ್ಬಲಃ ।
ಕೃತವರ್ಮಾ ಚ ಹಾರ್ದಿಕ್ಯಃ ಷಡ್ರಥಾಃ ಪರ್ಯವಾರಯನ್ ॥ ೪ ॥

ಅವನನ್ನು ದ್ರೋಣರು, ಕೃಪರು, ಕರ್ಣ, ಅಶ್ವತ್ಥಾಮ, ಬೃಹದ್ಬಲ ಮತ್ತು ಹಾರ್ದಿಕ್ಯನಾದ ಕೃತವರ್ಮ- ಈ ಆರು ರಥರು ತಡೆದರು.

ದೃಷ್ಟ್ವಾ ತು ಸೈಂಧವೇ ಭಾರಮತಿಮಾತ್ರಂ ಸಮಾಹಿತಮ್ ।
ಸೈನ್ಯಂ ತವ ಮಹಾರಾಜ ಯುಧಿಷ್ಠಿರಮುಪಾದ್ರವತ್ ॥ ೫ ॥

ಸೈಂಧವನ ಮೇಲೆ ಬಹಳ ದೊಡ್ಡ ಭಾರವು ಬಿದ್ದುದನ್ನು ತಿಳಿದ ನಿನ್ನ ಸೈನ್ಯವು ಎಲೈ ಮಹಾರಾಜನೇ, ಯುಧಿಷ್ಠಿರನ ಕಡೆಗೆ ಧಾವಿಸಿತು.

ಸೌಭದ್ರಮಿತರೇ ವೀರಾ ರಥವ್ಯಾಘ್ರಾಸ್ತ್ವಯೋಧಯನ್ ।
ತಾಳಮಾತ್ರಾಣಿ ಚಾಪಾನಿ ವಿಕರ್ಷಂತೋ ವಧೈಷಿಣಃ ॥ ೬ ॥

ಉಳಿದ ವೀರರು ತಾಳದಷ್ಟು ಎತ್ತರವಾದ ತಮ್ಮ ಧನುಸ್ಸುಗಳನ್ನು ಎಳೆಯುತ್ತಾ, ಅಭಿಮನ್ಯುವನ್ನು ಕೊಲ್ಲಲು ಬಯಸಿ ಅವನ ಜೊತೆಯಲ್ಲಿ ಯುದ್ಧವನ್ನು ಮಾಡಿದರು.

ತಾಂಸ್ತು ಸರ್ವಾನ್ ಮಹೇಷ್ವಾಸಾನ್ ಸರ್ವವಿದ್ಯಾಸು ನಿಷ್ಠಿತಾನ್ ।
ವ್ಯಷ್ಟಂಭಯದ್ ರಣೇ ಬಾಣೈಃ ಸೌಭದ್ರಃ ಪರವೀರಹಾ ॥ ೭ ॥

ಶತ್ರುಘಾತಕನಾದ ಅಭಿಮನ್ಯುವು ಎಲ್ಲ ವಿದ್ಯೆಗಳಲ್ಲಿಯೂ ಪಾರಂಗತರಾದ, ಮಹಾಧನುರ್ಧಾರಿಗಳಾದ ಅವರನ್ನು ರಣರಂಗದಲ್ಲಿ ತನ್ನ ಬಾಣಗಳಿಂದ ತಡೆದು ನಿಲ್ಲಿಸಿದನು.

ದ್ರೋಣಂ ಪಂಚಾಶತಾ ವಿದ್ಧ್ವಾ ವಿಂಶತ್ಯಾ ಚ ಬೃಹದ್ಬಲಮ್ ।
ಅಶೀತ್ಯಾ ಕೃತವರ್ಮಾಣಂ ಕೃಪಂ ಷಷ್ಟ್ಯಾ ಶಿತೈಃ ಶರೈಃ ॥ ೮ ॥

ರುಗ್ಮಪುಂಖೈಃ ಪ್ರಸನ್ನಾಗ್ರೈರಾಕರ್ಣಮಭಿನಿಃಸೃತೈಃ ।
ಅವಿಧ್ಯದ್ ದಶಭಿರ್ಬಾಣೈರಶ್ವತ್ಥಾಮಾನಮಾರ್ಜುನಿಃ ॥ ೯ ॥

ಕರ್ಣಂ ಚ ಕರ್ಣಿನಾ ಕರ್ಣೇ ಪೀತೇನ ನಿಶಿತೇನ ಚ ।
ಫಾಲ್ಗುನಿರ್ವಿಷತಾಂ ಮಧ್ಯೇ ವಿವ್ಯಾಧ ಪರಮೇಷುಣಾ ॥ ೧೦ ॥

ದ್ರೋಣರನ್ನು ಐವತ್ತು ಬಾಣಗಳಿಂದ ಹೊಡೆದು, ಇಪ್ಪತ್ತು ಬಾಣಗಳಿಂದ ಬೃಹದ್ಬಲನನ್ನೂ, ಎಂಬತ್ತು ಬಾಣಗಳಿಂದ ಕೃತವರ್ಮನನ್ನೂ, ಅರವತ್ತು ಬಾಣಗಳಿಂದ ಕೃಪರನ್ನೂ, ಕಿವಿಯವರೆಗೂ ಎಳೆದು ವಿಸರ್ಜಿಸಿದ ಸುವರ್ಣಪುಂಖವುಳ್ಳ, ಹರಿತವಾದ ತುದಿಯುಳ್ಳ ಹತ್ತು ಬಾಣಗಳಿಂದ ಅಶ್ವತ್ಥಾಮರನ್ನೂ ಹೊಡೆದನು ಮತ್ತು ಶತ್ರುಗಳ ಮಧ್ಯದಲ್ಲಿ ಅಭಿಮನ್ಯುವು ಕರ್ಣನ ಕಿವಿಯನ್ನು ನೀರನ್ನು ಕುಡಿಸಿ ಹದಮಾಡಿದ, ಹರಿತವಾದ ಕರ್ಣಿ ಎಂಬ ಶ್ರೇಷ್ಠ ಬಾಣದಿಂದ ಹೊಡೆದನು.

ಪಾತಯಿತ್ವಾ ಕೃಪಸ್ಯಾಶ್ವಾಂಸ್ತಥೋಭೌ ಪಾರ್ಷ್ಣಿಸಾರಥೀ ।
ಅಥೈನಂ ದಶಭಿರ್ಬಾಣೈಃ ಪ್ರತ್ಯವಿದ್ಧ್ಯತ್ ಸ್ತನಾಂತರೇ ॥ ೧೧ ॥

ಕೃಪರ ಅಶ್ವಗಳನ್ನು ಕೆಡವಿ, ಹಾಗೆ ಅವರ ಇಬ್ಬರು ಪಕ್ಷ ಸಾರಥಿಯನ್ನೂ ಕೆಡವಿ ಅನಂತರ ಹತ್ತು ಬಾಣಗಳಿಂದ ಕೃಪರನ್ನು ಅವರ ಸ್ತನಗಳ ಮಧ್ಯದಲ್ಲಿ ಹೊಡೆದನು.

ತತೋ ವೃಂದಾರಕಂ ವೀರಂ ಕುರೂಣಾಂ ಕೀರ್ತಿವರ್ಧನಮ್ ।
ಪುತ್ರಾಣಾಂ ತವ ವೀರಾಣಾಂ ಪಶ್ಯತಾಮವಧೀತ್ ಬಲೀ ॥ ೧೨ ॥

ಅನಂತರ ಬಲಿಷ್ಠನಾದ ಅಭಿಮನ್ಯುವು ಕುರುಗಳ ಕೀರ್ತಿವರ್ಧನನಾದ, ವೀರನಾದ ವೃಂದಾರಕನನ್ನು, ವೀರರಾದ ನಿನ್ನ ಪುತ್ರರು ನೋಡುತ್ತಿರುವಂತೆಯೇ ಕೊಂದನು.

ತಂ ದ್ರೌಣಿಃ ಪಂಚವಿಂಶತ್ಯಾ ಕ್ಷುದ್ರಕಾಣಾಂ ಸಮರ್ಪಯತ್ ।
ವರಂ ವರಮಮಿತ್ರಾಣಾಮಾರುಜಂತಮಭೀತವತ್ ॥ ೧೩ ॥

ಶತ್ರುಗಳಲ್ಲಿ ಶ್ರೇಷ್ಠರನ್ನು ಆರಿಸಿ, ಆರಿಸಿ ನಿರ್ಭಯವಾಗಿ ಮರ್ದಿಸುತ್ತಿದ್ದ ಅವನ ಮೇಲೆ ಅಶ್ವತ್ಥಾಮರು ಇಪ್ಪತ್ತೈದು ಕ್ಷುದ್ರಕಗಳನ್ನು (ಸಣ್ಣ ಬಾಣಗಳನ್ನು) ಪ್ರಯೋಗಿಸಿದರು.

ಸ ತು ಬಾಣೈಃ ಶಿತೈಸ್ತೂರ್ಣಂ ಪ್ರತ್ಯವಿದ್ಧ್ಯತ ಮಾರಿಷ ।
ಪಶ್ಯತಾಂ ಧಾರ್ತರಾಷ್ಟ್ರಾಣಾಮಶ್ವತ್ಥಾಮಾನಮಾರ್ಜುನಿಃ ॥ ೧೪ ॥

ಎಲೈ ಪೂಜ್ಯನೇ, ಅಭಿಮನ್ಯುವು ದುರ್ಯೋಧನಾದಿಗಳು ನೋಡುತ್ತಿರುವಂತೆಯೇ ಅವರನ್ನು ತನ್ನ ಹರಿತವಾದ ಬಾಣಗಳಿಂದ ಪ್ರತಿಯಾಗಿ ಹೊಡೆದನು.

ಷಷ್ಟ್ಯಾ ಶರಾಣಾಂ ತಂ ದ್ರೌಣಿಸ್ತೀಕ್ಷ್ಣಧಾರೈಃ ಸುತೇಜನೈಃ ।
ಉಗ್ರೈರ್ನಾಕಂಪಯದ್ ವಿದ್ವಾ ಮೈನಾಕಮಿವ ಪರ್ವತಮ್ ॥ ೧೫ ॥

ಅಶ್ವತ್ಥಾಮರು ತೀಕ್ಷ್ಣಧಾರೆಗಳನ್ನುಳ್ಳ ತೇಜಸ್ವಿಗಳಾದ ಘೋರವಾದ ಅರವತ್ತು ಬಾಣಗಳಿಂದ ಅವನನ್ನು ಹೊಡೆದರೂ ಅವನು ಮೈನಾಕ ಪರ್ವತದಂತೆ ಅಲುಗಾಡಲಿಲ್ಲ.

ಸ ತು ದ್ರೌಣಂ ತ್ರಿಸಪ್ತತ್ಯಾ ತೀಕ್ಷ್ಣಧಾರೈರ್ಮಹಾಯಶಾಃ ।
ಪ್ರತ್ಯವಿಧ್ಯನ್ಮಹಾರಂಗೇ ಬಲವಾನಪಕಾರಿಣಾಮ್ ॥ ೧೬ ॥

ಮಹಾಕೀರ್ತಿವಂತನಾದ ಅವನು ತೀಕ್ಷ್ಣಧಾರೆಗಳನ್ನುಳ್ಳ ಎಪ್ಪತ್ಮೂರು ಬಾಣಗಳಿಂದ ಶತ್ರುಗಳ ಮಧ್ಯದಲ್ಲಿ ಬಲಿಷ್ಠರಾದ ಅಶ್ವತ್ಥಾಮರನ್ನು ಮಹಾರಣರಂಗದಲ್ಲಿ ಹೊಡೆದನು.

ತಸ್ಮಿನ್ ದ್ರೋಣೋ ಬಾಣಶತಂ ಪುತ್ರಗೃಧ್ನ್ಯರ್ಪಾತಯತ್ ।
ಅಶ್ವತ್ಥಾಮಾ ಪುನಃ ಷಷ್ಟಿಂ ಪರೀಪ್ಸನ್ ಪಿತರಂ ರಣೇ ॥ ೧೭ ॥

ಪುತ್ರನ ಕ್ಷೇಮವನ್ನು ಬಯಸಿದ ದ್ರೋಣರು ಅವನ ಮೇಲೆ ನೂರು ಬಾಣಗಳನ್ನು ಪ್ರಯೋಗಿಸಿದರು. ಅಶ್ವತ್ಥಾಮರೂ ಸಹ ತಂದೆಯನ್ನು ರಕ್ಷಿಸುವವರಾಗಿ ರಣರಂಗದಲ್ಲಿ ಅರವತ್ತು ಬಾಣಗಳನ್ನು ಅವನ ಮೇಲೆ ಹೊಡೆದರು.

ಕರ್ಣೋ ದ್ವಾತ್ರಿಂಶತಂ ಭಲ್ಲಾನ್ ಕೃತವರ್ಮಾ ಚತುರ್ದಶ ।
ಬೃಹದ್ಬಲಸ್ತು ಪಂಚಾಶತ್ ಕೃಪಃ ಶಾರದ್ವತೋ ದಶ ॥ ೧೮ ॥

ಕರ್ಣನು ಮೂವತ್ತೆರಡು ಭಲ್ಲಗಳನ್ನೂ, ಕೃತವರ್ಮನು ಹದಿನಾಲ್ಕು ಭಲ್ಲಗಳನ್ನೂ, ಬೃಹದ್ಬಲನು ಐವತ್ತು ಭಲ್ಲಗಳನ್ನೂ, ಶಾರದ್ವತರಾದ ಕೃಪರು ಹತ್ತು ಭಲ್ಲಗಳನ್ನು ಅವನ ಮೇಲೆ ಪ್ರಯೋಗಿಸಿದರು.

ತಾಂಸ್ತು ಪ್ರತ್ಯವಧೀತ್ ಸರ್ವಾನ್ ದಶಭಿರ್ದಶಭಿಃ ಶರೈಃ ।
ವಧ್ಯಮಾನಃ ಸ ಸೌಭದ್ರೋ ರುದ್ರಃ ಕ್ರುದ್ಧಃ ಪಶೂನಿವ ॥ ೧೯ ॥

ಅವರಿಂದ ಹೀಗೆ ಹಿಂಸಿಸಲ್ಪಡುತ್ತಿದ್ದ ಅಭಿಮನ್ಯುವು ಕ್ರುದ್ಧನಾದ ರುದ್ರನು ಪಶುಗಳನ್ನು ಕೊಂದಂತೆ ಅವರಲ್ಲಿ ಪ್ರತಿಯೊಬ್ಬರ ಮೇಲೆಯೂ ಹತ್ತು- ಹತ್ತು ಬಾಣಗಳನ್ನು ಪ್ರಯೋಗಿಸಿದನು.

ತಂ ಕೋಸಲಾನಾಮಧಿಪಂ ಕರ್ಣೋಽತಾಡಯತ್ ಹೃದಿ ।
ತಸ್ಯಾಶ್ವಾನಾರ್ಜುನಿಶ್ಚಾಪಂ ಸೂತಂ ಚಾಪಾತಯತ್ ಕ್ಷಿತೌ ॥ ೨೦ ॥

ಕೋಸಲ ರಾಜನನ್ನು ಅವನ ಎದೆಯಲ್ಲಿ ಒಂದು ಕರ್ಣಿಯಿಂದ ಹೊಡೆದು ಅವನ ಅಶ್ವಗಳನ್ನೂ, ಧನುಸ್ಸನ್ನೂ ಮತ್ತು ಸಾರಥಿಯನ್ನೂ ಭೂಮಿಯ ಮೇಲೆ ಕೆಡವಿದನು.

ಕೋಸಲಾನಾಮಧಿಪತಿರ್ವಿರಥಃ ಖಡ್ಗಚರ್ಮಧೃತ್ ।
ಇಯೇಷ ಫಾಲ್ಗುನೇಃ ಕಾಯಾಚ್ಛಿರೋ ಹರ್ತುಂ ಸಕುಂಡಲಮ್ ॥

ಕೋಸಲ ರಾಜನು ತನ್ನ ರಥವನ್ನು ಕಳೆದುಕೊಂಡು ಖಡ್ಗ-ಚರ್ಮಗಳನ್ನು ಹಿಡಿದು ಅಭಿಮನ್ಯುವಿನ ದೇಹದಿಂದ ಕುಂಡಲ ಸಹಿತವಾದ ಅವನ ಶಿರಸ್ಸನ್ನು ಕತ್ತರಿಸಲು ಬಯಸಿದನು.

ಕೋಸಲಾನಾಂ ತು ಭರ್ತಾರಂ ರಾಜಪುತ್ರಂ ಬೃಹದ್ಬಲಮ್ ।
ಹೃದ್ಯವಿಧ್ಯತ್ ಪೃಷತ್ಕೇನ ಸ ಭಿನ್ನಹೃದಯೋऽಪತತ್ ॥ ೨೨ ॥

ಆಗ ಅಭಿಮನ್ಯುವು ಕೋಸಲ ರಾಜಪುತ್ರನಾದ ಬೃಹದ್ಬಲನನ್ನು ಒಂದು ಬಾಣದಿಂದ ಅವನ ಎದೆಯಲ್ಲಿ ಹೊಡೆದನು. ಅವನು ಎದೆಯು ಬಿರಿದು ಭೂಮಿಯ ಮೇಲೆ ಬಿದ್ದನು.

ಬಭಂಜ ಚ ಸಹಸ್ರಾಣಿ ದಶ ರಾಜನ್ ಮಹಾತ್ಮನಾಮ್ ।
ಸೃಜತಾಮಶಿವಾ ವಾಚಃ ಖಡ್ಗಕಾರ್ಮುಕಧಾರಿಣಾಮ್ ॥ ೨೩ ॥

ರಾಜನೇ, ಅಭಿಮನ್ಯುವು ಧನುಸ್ಸು-ಖಡ್ಗಗಳನ್ನು ಹಿಡಿದು, ಕ್ರೂರವಾದ ಮಾತುಗಳನ್ನು ಆಡುವ ನಿನ್ನ ಹದಿನಾಲ್ಕು ಸಾವಿರ ಶ್ರೇಷ್ಠ ಸೈನಿಕರನ್ನು ಕೊಂದನು.

ತಥಾ ಬೃಹದ್ಬಲಂ ಹತ್ವಾ ಸೌಭದ್ರೋ ವ್ಯಚರದ್ ರಣೇ ।
ವ್ಯಪ್ಲವಯನ್ಮಹೇಷ್ವಾಸಾನ್ ಮೋಹಯನ್ನಿವ ಭಾರತ ॥ ೨೪ ॥

ಎಲೈ ಭಾರತನೇ, ಅಭಿಮನ್ಯುವು ಆ ರೀತಿಯಲ್ಲಿ ಬೃಹದ್ಬಲನನ್ನು ಕೊಂದು, ಮಹಾಧನುರ್ಧಾರಿಗಳನ್ನು ತಡೆದು ಮೋಹಗೊಳಿಸುವವನಂತೆ ರಣರಂಗದಲ್ಲಿ ಸಂಚರಿಸಿದನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಂ ದ್ರೋಣಪರ್ವಣಿ ಷಟ್ಚತ್ವಾರಿಂಶೋऽಧ್ಯಾಯಃ ॥

॥ ಅಭಿಮನ್ಯುವಧಪರ್ವಣಿ ಪಂಚದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನಲವತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನಲವತ್ತೇಳನೆಯ ಅಧ್ಯಾಯ

ದ್ರೋಣಾದಿ ಷಡ್ರಥರಿಂದ ಅಭಿಮನ್ಯುವಿನ ರಥದ ನಾಶ
ಮತ್ತು ಅಭಿಮನ್ಯುವಿನ ವಧೆ.

ಸಂಜಯಃ

ತತಃ ಕರ್ಣಂ ಸಮಾಸಾದ್ಯ ರಣೇ ವಿವ್ಯಾಧ ಫಾಲ್ಗುನಿಃ ।
ಶರೈಃ ಪಂಚಾಶತಾ ಚೈನಮವಿಧ್ಯತ್ ಕೋಪಯನ್ನಿವ ॥ ೧ ॥

ಸಂಜಯ– ಅನಂತರ ಅಭಿಮನ್ಯುವು ರಣರಂಗದಲ್ಲಿ ಕರ್ಣನನ್ನು ಸಮೀಪಿಸಿ, ಅವನನ್ನು ಕೋಪಗೊಳಿಸುವವನಂತೆ ಐವತ್ತು ಬಾಣಗಳಿಂದ ಹೊಡೆದನು.

ಪ್ರತಿವಿವ್ಯಾಧ ರಾಧೇಯಸ್ತಾವದ್ಭಿರಥ ತಂ ಪುನಃ ।
ಸ ತೈರಾಚಿತಸರ್ವಾಂಗೋ ಬಹ್ವಶೋಭತ ಭಾರತ ॥ ೨ ॥

ರಾಧಾ ಪುತ್ರನಾದ ಕರ್ಣನೂ ಸಹ ಅವನನ್ನು ಅಷ್ಟೇ ಬಾಣಗಳಿಂದ ಹೊಡೆದನು. ಎಲೈ ಭಾರತನೇ, ಆ ಬಾಣಗಳೆಲ್ಲವೂ ತನ್ನ ಶರೀರದಲ್ಲಿ ನಾಟಿದ ಅಭಿಮನ್ಯುವು ಬಹಳವಾಗಿ ಶೋಭಿಸಿದನು.

ಕರ್ಣಂ ಚಾಪ್ಯಕರೋದ್ ಯುದ್ಧೇ ರುಧಿರೌಘಪರಿಪ್ಲುತಮ್ ।
ಕರ್ಣಸ್ತು ವಿಬಭೌ ಶೂರಃ ಶರೈಶ್ಚಿತ್ರೈರಭಿಪ್ಲುತಃ ।
ಸಂಧ್ಯಾನುಗತಪರ್ಯಂತಃ ಶರದೀವ ದಿವಾಕರಃ ॥ ೩ ॥

ಅವನು ಕರ್ಣನನ್ನೂ ಸಹ ರಕ್ತ ಪ್ರವಾಹದಿಂದ ಲೇಪಿತನನ್ನಾಗಿ ಮಾಡಿದನು. ಶೂರನಾದ ಕರ್ಣನು ಶರತ್ಕಾಲದಲ್ಲಿ ಸಂಧ್ಯಾಕಾಲದ ಸೂರ್ಯನಂತೆ ಆ ವಿಚಿತ್ರಬಾಣಗಳಿಂದ ಶೋಭಿಸಿದನು.

ಅಥ ಕರ್ಣಸ್ಯ ಸಚಿವಾನ್ ಷಡ್ರಥಾಂಶ್ಚಿತ್ರಯೋಧಿನಃ ।
ಸಾಶ್ವಸೂತಧ್ವಜರಥಾನ್ ಸೌಭದ್ರೋ ಹ್ಯಹನದ್ ಬಲೀ ॥ ೪ ॥

ಅನಂತರ ಅಭಿಮನ್ಯುವು ಕರ್ಣನ ಸಚಿವರಾದ ಚಿತ್ರಯೋಧಿಗಳಾದ ಆರು ಮಹಾರಥರನ್ನು ಅವರ ಅಶ್ವ-ಸೂತ-ಗಜಗಳ ಸಹಿತವಾಗಿ ಕೊಂದನು.

ಅಥೇತರಾನ್ ಮಹೇಷ್ವಾಸಾನ್ ದಶಭಿರ್ದಶಭಿಃ ಶರೈಃ ।
ಪ್ರತ್ಯವಿಧ್ಯದವಿತ್ರಸ್ತಃ ತದದ್ಭುತಮಿವಾಭವತ್ ॥ ೫ ॥

ಇತರ ಮಹಾಧನುರ್ಧಾರಿಗಳನ್ನು ಅವನು ನಿರ್ಭಯವಾಗಿ ಹತ್ತು-ಹತ್ತು ಬಾಣಗಳಿಂದ ಹೊಡೆದನು. ಅದು ಅದ್ಭುತವಾಗಿದ್ದಿತು.

ಮಾಗಧಸ್ಯ ಪುನಃ ಪುತ್ರಂ ಹತ್ವಾ ಷಡ್ಭಿರಜಿಹ್ಮಗೈಃ ।
ಸಾಶ್ವಂ ಸಸೂತಂ ತರುಣಮ್ ಅಶ್ವಕೇತುಮಪಾತಯತ್ ॥ ೬ ॥

ಮಗಧರಾಜನ ಪುತ್ರನಾದ, ತರುಣನಾದ ಅಶ್ವಕೇತುವನ್ನು ನೇರವಾಗಿ ಸಾಗುವ ಆರು ಬಾಣಗಳಿಂದ ಅವನ ಅಶ್ವ-ಸಾರಥಿಗಳ ಜೊತೆಯಲ್ಲಿ ಕೊಂದನು.

ಮಾರ್ತಿಕಾವತಕಾಂಬೋಜಂ ತತಃ ಕುಂಜರಕೇತನಮ್ ।
ಕ್ಷುರಪ್ರೇಣ ಸಮುನ್ಮಥ್ಯ ನನಾದ ವಿಸೃಜನ್ ಶರಾನ್ ॥ ೭ ॥

ಏಕಚಕ್ರನಗರದ ಗಜಧ್ವಜವುಳ್ಳ ಕಾಂಬೋಜನನ್ನು ಕ್ಷುರಪ್ರದಿಂದ ಮರ್ದಿಸಿ, ಬಾಣಗಳನ್ನು ಪ್ರಯೋಗಿಸುತ್ತಾ ನಾದವನ್ನು ಮಾಡಿದನು.

ತಸ್ಯ ದೌಃಶಾಸನಿರ್ವಿದ್ವಾ ಚತುರ್ಭಿಶ್ಚತುರೋ ಹಯಾನ್ ।
ಸೂತಮೇಕೇನ ವಿವ್ಯಾಧ ದಶಭಿಶ್ಚಾರ್ಜುನಾತ್ಮಜಮ್ ॥ ೮ ॥

ದುಶ್ಶಾಸನ ಪುತ್ರನು ಅಭಿಮನ್ಯುವಿನ ನಾಲ್ಕು ಅಶ್ವಗಳನ್ನು ನಾಲ್ಕು ಬಾಣಗಳಿಂದ ಕೊಂದು, ಅವನ ಸಾರಥಿಯನ್ನು ಒಂದು ಬಾಣದಿಂದ ಕೊಂದು, ಹತ್ತು ಬಾಣಗಳಿಂದ ಅಭಿಮನ್ಯುವನ್ನು ಹೊಡೆದನು.

ತತೌ ದೌಃಶಾಸನಿಂ ಕಾರ್ಷ್ಣಿರ್ವಿದ್ವಾ ಸಪ್ತಭಿರಾಶುಗೈಃ ।
ಸಂರಂಭರಕ್ತನಯನೋ ವಾಕ್ಯಮುಚ್ಚೈರಥಾಬ್ರವೀತ್ ॥ ೯ ॥

ಪಿತಾ ತವಾಹವಂ ತ್ಯಕ್ತ್ವಾ ಗತಃ ಕಾಪುರುಷೋ ಯಥಾ ।
ದಿಷ್ಟ್ಯಾ ತ್ವಮಪಿ ಜಾನೀಷೇ ಯೋದ್ಧುಂ ನ ತ್ವದ್ಯ ಮೋಕ್ಷ್ಯಸೇ ॥೧೦॥

ಆಗ ಅಭಿಮನ್ಯುವು ದುಶ್ಶಾಸನಪುತ್ರನನ್ನು ಶೀಘ್ರಗಾಮಿಗಳಾದ ಏಳು ಬಾಣಗಳಿಂದ ಹೊಡೆದು, ಕೋಪದಿಂದ ಕೆಂಪಾದ ಕಣ್ಣುಳ್ಳವನಾಗಿ ಅವನನ್ನು ಕುರಿತು– 'ನಿನ್ನ ತಂದೆಯು

ಕೆಟ್ಟ ಪುರುಷನಂತೆ ರಣರಂಗವನ್ನು ತ್ಯಜಿಸಿ ಹೋಗಿದ್ದಾನೆ. ದೇವರ ದಯೆಯಿಂದ ನಿನಗೂ ಯುದ್ಧ ಮಾಡಲು ಬರುತ್ತದೆ, ಆದರೆ ನನ್ನಿಂದ ನೀನು ಬಿಡುಗಡೆಯನ್ನು ಹೊಂದುವುದಿಲ್ಲ' ಎಂದು ಹೇಳಿದನು.

ಸಂಜಯಃ

ಏತಾವದುಕ್ತ್ವಾ ವಚನಂ ಕರ್ಮಾರಪರಿಮಾರ್ಜಿತಮ್ ।
ನಾರಾಚಂ ವಿಸಸರ್ಜಾಸ್ಮೈ ತಂ ದ್ರೌಣಿಸ್ತ್ರಿಭಿರಚ್ಛಿನತ್ ॥ ೧೧ ॥

ಸಂಜಯ– ಇಷ್ಟು ಮಾತನ್ನು ಹೇಳಿ ಕರ್ಮಾರನಿಂದ ಚೆನ್ನಾಗಿ ಸಿದ್ಧಪಡಿಸಲ್ಪಟ್ಟ ನಾರಾಚವನ್ನು ದುಶ್ಶಾಸನನ ಪುತ್ರನ ಮೇಲೆ ಎಸೆದನು. ಅದನ್ನು ಅಶ್ವತ್ಥಾಮರು ಮೂರು ಬಾಣಗಳಿಂದ ಕತ್ತರಿಸಿದರು.

ತಸ್ಯಾರ್ಜುನಿರ್ಧನುಶ್ಚಿತ್ತ್ವಾ ಶಲ್ಯಂ ತ್ರಿಭಿರತಾಡಯತ್ ।
ತಂ ಶಲ್ಯೋ ನವಭಿರ್ಬಾಣೈರ್ಗೃಧ್ರಪತ್ರೈರತಾಡಯತ್ ।
ಹೃದ್ಯಸಂಭ್ರಾಂತವದ್ ರಾಜಂಸ್ತದದ್ಭುತಮಿವಾಭವತ್ ॥ ೧೨ ॥

ಅಭಿಮನ್ಯುವು ಅಶ್ವತ್ಥಾಮರ ಧನುಸ್ಸನ್ನು ಕತ್ತರಿಸಿ, ಶಲ್ಯನನ್ನು ಮೂರು ಬಾಣಗಳಿಂದ ಹೊಡೆದನು. ಶಲ್ಯನು ಗೃಧ್ರಪತ್ರಗಳನ್ನು ಹೊಂದಿದ್ದ ಒಂಬತ್ತು ಬಾಣಗಳಿಂದ ಅಭಿಮನ್ಯುವನ್ನು ಹೊಡೆದನು. ಎಲೈ ರಾಜನೇ, ಅಭಿಮನ್ಯುವು ಮನಸ್ಸಿನಲ್ಲಿ ಗಾಬರಿಗೊಳ್ಳದೆ ಶಲ್ಯನನ್ನು ಹೊಡೆದುದು ಅದ್ಭುತವಾಗಿದ್ದಿತು.

ತಸ್ಯಾರ್ಜುನಿರ್ಧನುಶ್ಚಿತ್ತ್ವಾ ಹತ್ವಾ ಚ ಪಾರ್ಷ್ಣಿಸಾರಥೀ ।
ತಂ ವಿವ್ಯಾಧಾಯಸೈಃ ಷಡ್ಭಿಃ ಸೋಪಕ್ರಾಮದ್ ರಥಾಂತರಮ್ ॥ ೧೩ ॥

ಅಭಿಮನ್ಯುವು ಅವನ ಧನುಸ್ಸನ್ನು ಕತ್ತರಿಸಿ, ಅವನ ಇಬ್ಬರು ಪಾರ್ಷ್ಣಿ-ಸಾರಥಿಗಳನ್ನು ಕೊಂದು, ಅವನ ಮೇಲೆ ಆರು ಕಬ್ಬಿಣದ ಬಾಣಗಳನ್ನು ಪ್ರಯೋಗಿಸಿದನು. ಶಲ್ಯನು ಇನ್ನೊಂದು ರಥಕ್ಕೆ ಹೋದನು.

ಶತ್ರುಂಜಯಂ ಚಂದ್ರಕೇತುಂ ಮೇಘವೇಗಂ ಸುವರ್ಚಸಮ್ ।
ಸೂರ್ಯಭಾಸಂ ಚ ಪಂಚೈತಾನ್ ಹತ್ವಾ ವಿವ್ಯಾಧ ಸೌಬಲಮ್ ॥೧೪॥

ಅಭಿಮನ್ಯುವು ಶತ್ರುಂಜಯ, ಚಂದ್ರಕೇತು, ಮೇಘವೇಗ, ಸುವರ್ಚಸ, ಸೂರ್ಯಭಾಸ- ಎಂಬ ಈ ಐದು ರಾಜರನ್ನು ಕೊಂದು ಶಕುನಿಯನ್ನು ಬಾಣಗಳಿಂದ ಹೊಡೆದನು.

ತಂ ಸೌಬಲಸ್ತ್ರಿಭಿರ್ವಿದ್ಧ್ವಾ ದುರ್ಯೋಧನಮಥಾಬ್ರವೀತ್ ।
ಸರ್ವ ಏನಂ ಪ್ರಮಥ್ನೀಮಃ ಪುರೈಕೈಕಂ ಹಿನಸ್ತಿ ನಃ ॥ ೧೫ ॥

ಶಕುನಿಯು ಅವನನ್ನು ಮೂರು ಬಾಣಗಳಿಂದ ಹೊಡೆದು ದುರ್ಯೋಧನನನ್ನು ಕುರಿತು– 'ಇವನು ನಮ್ಮಲ್ಲಿ ಒಬ್ಬೊಬ್ಬರನ್ನೂ ಹಿಡಿದು ಕೊಲ್ಲುತ್ತಿದ್ದಾನೆ. ಎಲ್ಲರೂ ಸೇರಿ ಇವನನ್ನು ನಾಶ ಮಾಡೋಣ' ಎಂದು ಹೇಳಿದನು.

ಅಥಾಬ್ರವೀತ್ ತತೋ ದ್ರೋಣಂ ಕರ್ಣೋ ವೈಕರ್ತನೋ ರಣೇ ।
ಪುರಃ ಸರ್ವಾನ್ ಪ್ರಮಥ್ನಾತಿ ಬ್ರೂಹ್ಯಸ್ಯ ವಧಮಾಶು ನಃ ॥ ೧೬ ॥

ಅನಂತರ ವೈಕರ್ತನನಾದ ಕರ್ಣನು ರಣರಂಗದಲ್ಲಿ ದ್ರೋಣರನ್ನೂ ಕುರಿತು– 'ಅವನು ಎದುರಿಗೇ ಎಲ್ಲರನ್ನೂ ಕೊಲ್ಲುತ್ತಿದ್ದಾನೆ. ನಮಗೆ ಅವನ ವಧೋಪಾಯವನ್ನು ಶೀಘ್ರವಾಗಿ ಹೇಳಿ' ಎಂದು ಹೇಳಿದನು.

ತತೋ ದ್ರೋಣೋ ಮಹೇಷ್ವಾಸಃ ಸರ್ವಾಂಸ್ತಾನ್ ಪ್ರತ್ಯಭಾಷತ ॥೧೭॥

ನಾಸ್ಯಾನ್ತರಂ ಕಶ್ಚಿತ್ ಕುಮಾರಸ್ಯ ಪ್ರಪಶ್ಯತಿ ।
ಅನ್ವಸ್ಯ ಪಿತರಂ ಪಶ್ಯ ಚರತಃ ಸರ್ವತೋದಿಶಮ್ ॥ ೧೮ ॥

ಆಗ ಮಹಾಧನುರ್ಧಾರಿಗಳಾದ ದ್ರೋಣರು ಅವರೆಲ್ಲರನ್ನೂ ಕುರಿತು– 'ಕುಮಾರನು ಸ್ವಲ್ಪವೂ ಅವಕಾಶವನ್ನು ಕೊಡುತ್ತಿಲ್ಲ. ಅವನು ತನ್ನ ತಂದೆಯನ್ನು ತ್ಯಜಿಸಿ ಎಲ್ಲ ದಿಕ್ಕುಗಳಲ್ಲಿಯೂ ಸಂಚರಿಸುತ್ತಿರುವುದನ್ನು ನೋಡು' ಎಂದು ಹೇಳಿದರು.

ಶೀಘ್ರತಾಂ ನರಸಿಂಹಸ್ಯ ಪಾಂಡವಸ್ಯೇವ ಪಶ್ಯತ ।
ಧನುರ್ಮಂಡಲಮೇವಾಸ್ಯ ರಥಮಾರ್ಗೇಷು ದೃಶ್ಯತೇ ॥ ೧೯ ॥

ನರಸಿಂಹನಾದ ಅರ್ಜುನನಿಗೆ ಇರುವಂತಹ ಅವನ ಶೀಘ್ರತೆಯನ್ನು ನೋಡಿ. ರಥಮಾರ್ಗಗಳಲ್ಲಿ ಅವನ ಧನುಸ್ಸು ಯಾವಾಗಲೂ ಮಂಡಲಾಕಾರವಾಗಿಯೇ ಕಾಣುತ್ತಿದೆ.

ಸಂದಧಾನಸ್ಯ ವಿಶಿಖಾನ್ ಶೀಘ್ರಂ ಚೈವ ವಿಮುಂಚತಃ ।
ಆರುಜನ್ನಿವ ಮೇ ಪ್ರಾಣಾನ್ ಮೋಹಯನ್ನಿವ ಸೈನಿಕಾನ್ ॥ ೨೦ ॥

ಪ್ರಹರ್ಷಯತಿ ಮಾಂ ವೀರಃ ಸೌಭದ್ರಃ ಪರವೀರಹಾ ।
ಅತಿಮಾನಂ ದಧಾತ್ಯೇಷ ಸೌಭದ್ರೋ ವಿಚರನ್ ರಣೇ ॥ ೨೧ ॥

ಧನುಸ್ಸಿನಲ್ಲಿ ಬಾಣಗಳನ್ನು ಹೂಡಿ, ಶೀಘ್ರವಾಗಿ ಪ್ರಯೋಗಿಸಿ, ನನ್ನ ಪ್ರಾಣಗಳನ್ನು ಹಿಂಸಿಸುವವನಂತೆ, ನನ್ನ ಸೈನಿಕರನ್ನು ಮೋಹಗೊಳಿಸುವವನಂತೆ ಇರುವ ಶತ್ರುಘಾತಕನೂ, ವೀರನೂ ಆದ ಅಭಿಮನ್ಯುವು ನನಗೆ ಹರ್ಷವನ್ನುಂಟು ಮಾಡುತ್ತಿದ್ದಾನೆ. ಅಭಿಮನ್ಯುವು ರಣರಂಗದಲ್ಲಿ ಸಂಚರಿಸುತ್ತಾ ಅತಿಶಯವನ್ನು ಹೊಂದಿದವನಾಗಿದ್ದಾನೆ.

ಅಂತರಂ ಯಸ್ಯ ಸಂರಬ್ಧಾ ನ ಪಶ್ಯಂತಿ ಮಹಾರಥಾಃ ।
ಅಸ್ಯತೋ ಲಘುಹಸ್ತಸ್ಯ ದಿಶಃ ಸರ್ವಾ ಮಹೇಷುಭಿಃ ।
ನ ವಿಶೇಷಂ ಪ್ರಪಶ್ಯಾಮಿ ರಣೇ ಗಾಂಡೀವಧನ್ವನಃ ॥ ೨೨ ॥

ಮಹಾರಥರು ಅವನ ಕರ್ಮದಲ್ಲಿ ಸ್ವಲ್ಪ ಅಂತರವನ್ನೂ ಕಾಣುತ್ತಿಲ್ಲ. ಅವನು ಕ್ಷಿಪ್ರಹಸ್ತದಿಂದ ದೊಡ್ಡ ಬಾಣಗಳನ್ನು ಎಲ್ಲ ದಿಕ್ಕುಗಳಲ್ಲಿಯೂ ಪ್ರಯೋಗಿಸುವುದನ್ನು ನೋಡಿದರೆ ಯುದ್ಧದಲ್ಲಿ ಅರ್ಜುನನಿಗೂ, ಅವನಿಗೂ ನಾನು ಯಾವ ವ್ಯತ್ಯಾಸವನ್ನೂ ಕಾಣುವುದಿಲ್ಲ (ಎಂದು ಹೇಳಿದರು).

ಸಂಜಯಃ

ಅಥ ಕರ್ಣಃ ಪುನರ್ದ್ರೋಣಮಾಹಾರ್ಜುನಿಶರಾರ್ದಿತಃ ।
ಸ್ಥಾತವ್ಯಮಿತಿ ತಿಷ್ಠಾಮಿ ಪೀಡ್ಯಮಾನೋಽಭಿಮನ್ಯುನಾ ॥ ೨೩ ॥

ಸಂಜಯ– ಆಗ ಅಭಿಮನ್ಯುವಿನ ಬಾಣಗಳಿಂದ ವ್ಯಥೆಗೊಂಡ ಕರ್ಣನು ಪುನಃ ದ್ರೋಣರನ್ನು ಕುರಿತು- ಅಭಿಮನ್ಯುವಿನಿಂದ ಪೀಡಿಸಲ್ಪಟ್ಟು ನಾನು ರಣರಂಗದಲ್ಲಿ ನಿಲ್ಲಬೇಕು ಎಂಬ ಕಾರಣದಿಂದ ಮಾತ್ರ ನಿಂತಿದ್ದೇನೆ.

ತೇಜಸ್ವಿನಃ ಕುಮಾರಸ್ಯ ಶರಾಃ ಪರಮದಾರುಣಾಃ ।
ಕ್ಷಿಣ್ವಂತಿ ಹೃದಯಂ ಮೇಽದ್ಯ ತೋತ್ರಾಸ್ತು ದ್ವಿರದಂ ಯಥಾ ॥ ೨೪ ॥

ತಮಾಚಾರ್ಯೋಽಬ್ರವೀತ್ ಕರ್ಣಂ ಶನಕೈಃ ಪ್ರಹಸನ್ನಿವ ।
ಅಭೇದ್ಯಂ ಕವಚಂ ಚಾಸ್ಯ ಯುವಾ ಚ ಲಘುವಿಕ್ರಮಃ ॥ ೨೫ ॥

ತೇಜಸ್ವಿಯಾದ, ಕುಮಾರನ ಪರಮದಾರುಣವಾದ ಬಾಣಗಳು ಅಂಕುಶಗಳು ಗಜವನ್ನು ಹಿಂಸಿಸಿದಂತೆ ಈ ದಿನ ನನ್ನ ಹೃದಯವನ್ನು ನಾಶಪಡಿಸುತ್ತಿವೆ ಎಂದು ಹೇಳಿದನು. ಆಚಾರ್ಯರು ಆ ಕರ್ಣನನ್ನು ಕುರಿತು ನಗುತ್ತಾ ನಿಧಾನವಾಗಿ ಅವನ ಕವಚವು ಅಭೇದ್ಯವಾದುದು. ಅವನು ಯುವಕನೂ ಮತ್ತು ಶೀಘ್ರವಾದ ಪರಾಕ್ರಮವುಳ್ಳವನೂ ಆಗಿದ್ದಾನೆ.

ಉಪದಿಷ್ಟಂ ಮಯಾಽಪ್ಯಸ್ಯ ಪಿತುಃ ಕವಚಧಾರಣಮ್ ।
ತದೇಷ ನಿಖಿಲಂ ವೇತ್ತಿ ಯುವಾ ಪರಪುರಂಜಯಃ ॥ ೨೬ ॥

ಶಕ್ಯಂ ನಾಸ್ಯ ಧನುಶ್ಛೇತ್ತುಂ ಜ್ಯಾಂ ವಾ ಬಾಣೈಃ ಸಮಾಹಿತೈಃ ।
ಅಸ್ಯತೋ ಲಘುಹಸ್ತಸ್ಯ ತಥೋಭೌ ಪಾರ್ಷ್ಣಿಸಾರಥೀ ॥ ೨೭ ॥

ನಾನು ಅಂತಹ ಕವಚಧಾರಣೆಯನ್ನು ಅವನ ತಂದೆಗೆ ಉಪದೇಶ ಮಾಡಿದ್ದೇನೆ. ಯುವಕನೂ, ಶತ್ರುಘಾತಕನೂ ಆದ ಇವನು ಅದೆಲ್ಲವನ್ನೂ ತಿಳಿದಿದ್ದಾನೆ. ಬಾಣಗಳಿಂದ ಎಷ್ಟುಹೊಡೆದರೂ ಕ್ಷಿಪ್ರವಾಗಿ ಬಾಣಗಳನ್ನು ಪ್ರಯೋಗಿಸುವ ಅವನ ಧನುಸ್ಸನ್ನಾಗಲೀ, ಹೆದೆಯನ್ನಾಗಲೀ ಅಥವಾ ಅವನ ಪಾರ್ಷ್ಣಿ-ಸಾರಥಿಗಳನ್ನಾಗಲೀ ಕತ್ತರಿಸಲು ಸಾಧ್ಯವಿಲ್ಲ.

ಏತತ್ ಕುರು ಮಹೇಷ್ವಾಸ ರಾಧೇಯ ಯದಿ ಶಕ್ಯತೇ ।
ಅಥೈನಂ ವಿಮುಖೀಕೃತ್ಯ ಪಶ್ಚಾತ್ ಪ್ರಹರಣಂ ಕುರು ॥ ೨೮ ॥

ಸಧನುಷ್ಕೋ ನ ಶಕ್ಯೋಽಯಮಪಿ ಜೇತುಂ ಸುರಾಸುರೈಃ ।
ವಿರಥಂ ವಿಧನುಷ್ಕಂ ಚ ಕುರುಷ್ವೈನಂ ಯದೀಚ್ಛಸಿ ॥ ೨೯ ॥

ಪುರಃ ಸ್ಥಿತೇನ ಕೇನಾಪಿ ದುಃಶಕೋ ಜೇತುಮಾರ್ಜುನಿಃ ॥ ೩೦ ॥

ಎಲೈ ಮಹಾಧನುರ್ಧಾರಿಯಾದ ಕರ್ಣನೇ, ಸಾಧ್ಯವಾದರೆ ಈ ಕಾರ್ಯವನ್ನು ಮಾಡು. ಇವನನ್ನು ವಿಮುಖನನ್ನಾಗಿ ಮಾಡಿ ಹಿಂದಿನಿಂದ ಪ್ರಹಾರವನ್ನು ಮಾಡು.

ಧನುಸ್ಸನ್ನು ಹಿಡಿದ ಇವನನ್ನು ಸುರಾಸುರರೂ ಗೆಲ್ಲಲು ಸಾಧ್ಯವಿಲ್ಲ. ನೀನು ಅವನನ್ನು ಕೊಲ್ಲಲು ಬಯಸಿದರೆ ಅವನನ್ನು ರಥಹೀನನನ್ನಾಗಿ, ಧನುರ್ಹೀನನನ್ನಾಗಿ ಮಾಡು. ಅವನ ಎದುರಿಗೆ ಬಂದ ಯಾವನಿಂದಲೂ ಅಭಿಮನ್ಯುವನ್ನು ಗೆಲ್ಲಲು ಸಾಧ್ಯವಿಲ್ಲ ಎಂದು ಹೇಳಿದರು.

ಸಂಜಯಃ

ತದಾಚಾರ್ಯವಚಃ ಶ್ರುತ್ವಾ ಕರ್ಣೋ ವೈಕರ್ತನಸ್ತ್ವರನ್ ।
ಅಸ್ಯತೋ ಲಘುಹಸ್ತಸ್ಯ ಪೃಷ್ಠತೋ ಧನುರಚ್ಛಿನತ್ ॥ ೩೧ ॥

ಆಚಾರ್ಯರ ಆ ಮಾತುಗಳನ್ನು ಕೇಳಿ ವೈಕರ್ತನನಾದ ಕರ್ಣನು ತ್ವರೆ ಮಾಡಿ, ಕ್ಷಿಪ್ರಹಸ್ತನಾದ ಅವನು ಬಾಣಗಳನ್ನು ಪ್ರಯೋಗಿಸುತ್ತಿರಲು ಹಿಂಭಾಗದಿಂದ ಅವನ ಧನುಸ್ಸನ್ನು ಕತ್ತರಿಸಿದನು.

ಅಶ್ವಾನಸ್ಯಾವಧೀದ್ ದ್ರೋಣೋ ಗೌತಮಃ ಪಾರ್ಷ್ಣಿಸಾರಥೀ ।
ಶೇಷಾಸ್ತಂ ಚ್ಛಿನ್ನಧನ್ವಾನಂ ಶರವರ್ಷೈರವಾಕಿರನ್ ॥ ೩೨ ॥

ದ್ರೋಣರು ಅವನ ಅಶ್ವಗಳನ್ನು ಕೊಂದರು. ಕೃಪರು ಅವನ ಪಾರ್ಷ್ಣಿ-ಸಾರಥಿಗಳನ್ನು ಕೊಂದರು. ಉಳಿದವರು ಧನುರ್ಹೀನನಾದ ಅವನ ಮೇಲೆ ಬಾಣಗಳ ಮಳೆಯನ್ನು ಕರೆದರು.

ತ್ವರಮಾಣಾಸ್ತದಾ ಕಾಲೇ ವಿರಥಂ ಷಣ್ಮಹಾರಥಾಃ ।
ಶರವರ್ಷೇಣ ಮಹತಾ ಬಾಲಮೇಕಮವಾಕಿರನ್ ॥ ೩೩ ॥

ಆ ಕಾಲದಲ್ಲಿ ಆರು ಮಹಾರಥರು ವಿರಥನಾದ ಆ ಬಾಲನೂ, ಏಕಾಕಿಯೂ ಆದ ಅವನ ಮೇಲೆ ತ್ವರೆ ಮಾಡಿ ಬಾಣಗಳ ದೊಡ್ಡ ಮಳೆಯನ್ನು ಸುರಿಸಿದರು.

ಸ ಚ್ಛಿನ್ನಧನ್ವಾ ವಿರಥೋ ಹತಾಶ್ವೋ ಹತಸಾರಥಿಃ ।
ಖಡ್ಗಚರ್ಮಧರಃ ಶ್ರೀಮಾನ್ ಉತ್ಪಪಾತ ವಿಹಾಯಸಮ್ ॥ ೩೪ ॥

ಬಲಲಾಘವಶಿಕ್ಷಾಭಿಃ ಕೈಶಿಕಾನಾಂ ಚ ಶಿಕ್ಷಯಾ ।
ಭೃಶಂ ಕ್ರುದ್ಧೋऽರ್ಜುನಿರ್ಯೋಧಾನ್ ವ್ಯಚರತ್ ಪಕ್ಷಿರಾಡಿವ ॥ ೩೫ ॥

ತನ್ನ ಧನುಸ್ಸು ಕತ್ತರಿಸಲ್ಪಟ್ಟು, ರಥಹೀನನಾಗಿ, ಅಶ್ವಗಳು ಮತ್ತು ಸಾರಥಿಯು ಮೃತವಾಗಿರಲು ಕಾಂತಿಯುಕ್ತನಾದ ಅಭಿಮನ್ಯುವು ಖಡ್ಗ-ಚರ್ಮವನ್ನು ಹಿಡಿದು ಬಲ, ಕ್ಷಿಪ್ರತನ, ಅಭ್ಯಾಸಬಲದಿಂದ ಮತ್ತು ಕೈಶಿಕರ ಶಿಕ್ಷಣದಿಂದಲೂ ಆಕಾಶಕ್ಕೆ ಹಾರಿದನು. ಅಭಿಮನ್ಯುವು ಕೋಪಗೊಂಡು ಪಕ್ಷಿರಾಜನಾದ ಗರುಡನಂತೆ ಆಕಾಶದಲ್ಲಿ ಸಂಚರಿಸಿದನು.

ಮಯ್ಯೇವ ನಿಪತೇದೇಷ ಸಾಸಿರಿತ್ಯೂರ್ಧ್ವದೃಷ್ಟಯಃ ।
ವಿವ್ಯಧುಸ್ತಂ ಮಹೇಷ್ವಾಸಂ ಸಮರೇ ಚ್ಛಿದ್ರದರ್ಶಿನಃ ॥ ೩೬ ॥

ಅವನ ಛಿದ್ರವನ್ನು ಹುಡುಕುತ್ತಿದ್ದ ವೀರರು ಅವನ ಕೈಯಲ್ಲಿರುವ ಈ ಕತ್ತಿಯು ನನ್ನ ಮೇಲೆಯೇ ಬೀಳುತ್ತದೆ ಎಂದು ಯೋಚಿಸುತ್ತಾ, ಮಹಾಧನುರ್ಧಾರಿಯಾದ ಅವನನ್ನು ಬಾಣಗಳಿಂದ ಹೊಡೆದರು.

ತಸ್ಯ ದ್ರೋಣೋಽಚ್ಛಿನನ್ಮುಷ್ಟೌ ಖಡ್ಗಂ ಮಣಿಮಯತ್ಸರುಮ್ ।
ರಾಧೇಯೋ ನಿಶಿತೈರ್ಬಾಣೈರ್ವ್ಯಧಮಚ್ಚರ್ಮ ಸುಪ್ರಭಮ್ ॥ ೩೭ ॥

ದ್ರೋಣರು ಮಣಿಮಯವಾದ ಹಿಡಿಯಿದ್ದ ಅವನ ಖಡ್ಗವನ್ನು ಮುಷ್ಟಿದೇಶದಲ್ಲಿ ಕತ್ತರಿಸಿದರು. ಕರ್ಣನು ಹರಿತವಾದ ಬಾಣಗಳಿಂದ ಪ್ರಕಾಶಮಾನವಾದ ಅವನ ಗುರಾಣಿಯನ್ನು ನಾಶ ಮಾಡಿದನು.

ವ್ಯಸಿಚರ್ಮೇಷುಪೂರ್ಣಾಂಗಃ ಸೋಽಂತರಿಕ್ಷಾತ್ ಪುನಃ ಕ್ಷಿತಿಮ್ ।
ಆಸ್ಥಿತಶ್ಚಕ್ರಮುದ್ಯಮ್ಯ ದ್ರೋಣಂ ಕ್ರುದ್ಧೋಽಭ್ಯಧಾವತ ॥ ೩೮ ॥

ತನ್ನ ಖಡ್ಗ-ಚರ್ಮಗಳನ್ನೂ, ಬಾಣಗಳನ್ನೂ ಕಳೆದುಕೊಂಡು, ಶರೀರದಲ್ಲೆಲ್ಲಾ ಬಾಣಗಳು ನೆಟ್ಟಿರಲು, ಅವನು ಅಂತರಿಕ್ಷದಿಂದ ಪುನಃ ಭೂಮಿಯಲ್ಲಿ ಇಳಿದು ಚಕ್ರವನ್ನು ಹಿಡಿದು ಎತ್ತಿ ಕ್ರುದ್ಧನಾಗಿ ದ್ರೋಣರ ಕಡೆಗೆ ಓಡಿದನು.

ಸ ಚಕ್ರಪಾಣಿರ್ಬಲದೀಪ್ತಗಾತ್ರೋ
ಬಭಾವತೀವೋನ್ನತಪತ್ರಿಣಾಂ ಸಹಃ ।
ರಣೇಽಭಿಮನ್ಯುರ್ಬಲವಾನ್ ಸುಭದ್ರಜಃ
ಸ ವಾಸುದೇವಾನುಕೃತಿಂ ಪ್ರಕುರ್ವನ್ ॥ ೩೯ ॥

ಶ್ರೇಷ್ಠವಾದ ಬಾಣಗಳ ಪ್ರಹಾರವನ್ನು ಸಹಿಸುವ ಸುಭದ್ರಾ ಪುತ್ರನಾದ, ಬಲಿಷ್ಠನಾದ ಆ ಅಭಿಮನ್ಯುವು ಕೈಯಲ್ಲಿ ರಥದ ಚಕ್ರವನ್ನು ಹಿಡಿದು ತನ್ನ ಬಲದಿಂದ ಶೋಭಿಸುವ ಶರೀರವುಳ್ಳವನಾಗಿ, ಕೃಷ್ಣನ ಅನುಕರಣೆಯನ್ನು ಮಾಡುವವನಾಗಿ ಅವನು ಬಹಳವಾಗಿ ಶೋಭಿಸಿದನು.

ಸ್ರುತರುಧಿರಕೃತಾಂಗರಾಗವಕ್ತ್ರಂ
ಭ್ರುಕುಟಿಪುಟಾಕುಟಿಲಾತಿಸಿಂಹನಾದಮ್ ।
ವಪುರಮಿತಬಲಂ ರಣೇऽಭಿಮನ್ಯೋಃ
ನೃಪವರಮಧ್ಯಗತಂ ವಿಜಯತೇ ಸ್ಮ ॥ ೪೦ ॥

ಸುರಿಯುವ ರಕ್ತರೂಪವಾದ ಅಂಗರಾಗದಿಂದ ಸಹಿತವಾದ ಮುಖವನ್ನುಳ್ಳ, ಹುಬ್ಬುಗಳನ್ನು ಗಂಟಿಕ್ಕಿ ಬಹಳ ಸಿಂಹನಾದವನ್ನು ಮಾಡುತ್ತಿದ್ದ, ಅಮಿತ ಬಲವುಳ್ಳ ಅಭಿಮನ್ಯುವಿನ ದೇಹವು ರಣರಂಗದಲ್ಲಿ ಶ್ರೇಷ್ಠ ರಾಜರ ಮಧ್ಯದಲ್ಲಿ ಉತ್ಕೃಷ್ಟವಾಗಿ ತೋರಿತು.

ವಿಷ್ಣೋಃ ಸ್ವಸಾನಂದಕರಃ ಸ ವಿಷ್ವಾಯುಧಭೂಷಿತಃ ।
ರರಾಜಾತಿರಥೋ ರಂಗೇ ಸ ವಿಷ್ಣುರಿವ ಫಾಲ್ಗುನಿಃ ॥ ೪೧ ॥

ವಿಷ್ಣುವಿನ (ಕೃಷ್ಣನ) ತಂಗಿಗೆ ಆನಂದವನ್ನು ಉಂಟು ಮಾಡುವವನೂ, ವಿಷ್ಣುವಿನ ಆಯುಧವಾದ ಚಕ್ರದಿಂದ ಭೂಷಿತನಾದವನೂ ಆದ ಅತಿರಥನಾದ ಆ ಅಭಿಮನ್ಯುವು ವಿಷ್ಣುವಿನಂತೆ ರಣರಂಗದಲ್ಲಿ ಶೋಭಿಸಿದನು.

ಮಾರುತೋದ್ಧೂತಕೇಶಾಂತಮ್ ಉದ್ಯತಾರಿವರಾಯುಧಮ್ ।
ಅಭಿಮನ್ಯೋರ್ವಪುರ್ಯುದ್ಧೇ ಸುರೈರಪಿ ನಿರೀಕ್ಷಿತಮ್ ॥ ೪೨ ॥

ವಾಯುವಿನಿಂದ ಚದುರಿದ ಕೇಶಗಳನ್ನುಳ್ಳ, ಚಕ್ರರೂಪವಾದ ಆಯುಧವನ್ನು ಎತ್ತಿಹಿಡಿದ ಅಭಿಮನ್ಯುವಿನ ದೇಹವನ್ನು ಯುದ್ಧದಲ್ಲಿ ದೇವತೆಗಳೂ ನೋಡಿದರು.

ಯದಿ ಪಾಣಿತಳಾದೇತಚ್ಚಕ್ರಂ ಮುಂಚೇತ ಫಾಲ್ಗುನಿಃ ।
ವರದಾನಾನ್ನಾತುಲಸ್ಯ ವಿಷ್ಣೋಶ್ಚಕ್ರಮಿವಾಪತೇತ್ ॥ ೪೩ ॥

ತಚ್ಚಕ್ರಂ ಭೃಶಮುದ್ವಿಗ್ನಾಃ ಸಂಚಿಚ್ಛಿದುರನೇಕಧಾ ।
ಸ್ವರಥಾತ್ ತುಮುಲಾತ್ ಕಾರ್ಷ್ಣಿಃ ಸಂಜಗ್ರಾಹ ಪುನರ್ಗದಾಮ್ ॥೪೪॥

ಅಭಿಮನ್ಯುವು ಒಂದು ಪಕ್ಷ ತನ್ನ ಹಸ್ತದಲ್ಲಿರುವ ಈ ಚಕ್ರವನ್ನು ಪ್ರಯೋಗಿಸುವುದಾದರೆ ಅದು ಅವನ ಸೋದರಮಾವನ ವರದಾನದಿಂದ ವಿಷ್ಣು ಚಕ್ರದಂತೆ ನಮ್ಮ ಮೇಲೆ ಎರಗೀತು ಎಂದು ಬಹಳವಾಗಿ ಉದ್ವಿಗ್ನರಾದ ಕೌರವವೀರರು ಆ ಚಕ್ರವನ್ನು ಬಹುವಾಗಿ ಕತ್ತರಿಸಿದರು. ಮಹಾರಥನಾದ ಅಭಿಮನ್ಯುವು ಆಗ ಪುನಃ ತನ್ನ ರಥದಿಂದ ಗದೆಯನ್ನು ತೆಗೆದುಕೊಂಡನು.

ವಿಧನುಃಸ್ಯಂದನಾಸಿಸ್ತೈರ್ವಿಚಕ್ರಶ್ಚಾರ್ತಿಭಿಃ ಕೃತಃ ।
ಅಭಿಮನ್ಯುರ್ಗದಾಪಾಣಿರಶ್ವತ್ಥಾಮಾನಮಭ್ಯಯಾತ್ ॥ ೪೫ ॥

ಶತ್ರುಗಳಿಂದ ಧನುಸ್ಸಿನಿಂದಲೂ, ರಥದಿಂದಲೂ, ಖಡ್ಗದಿಂದಲೂ, ಚಕ್ರದಿಂದಲೂ ಹೀನನಾಗಿ ಮಾಡಲ್ಪಟ್ಟ ಅಭಿಮನ್ಯುವು ಕೈಯಲ್ಲಿ ಗದೆಯನ್ನು ಹಿಡಿದು ಅಶ್ವತ್ಥಾಮರ ಕಡೆಗೆ ನುಗ್ಗಿದನು.

ಸ ಗದಾಮುದ್ಯತಾಂ ದೃಷ್ಟ್ವಾ ಜ್ವಲಂತೀಮಶನೀಮಿವ ।
ಅಪಾಕ್ರಾಮದ್ ರಥೋಪಸ್ಥಾದ್ ವಿಕ್ರಮಾಂಸ್ತ್ರೀನ್ ರಥರ್ಷಭಃ ॥ ೪೬ ॥

ರಥಶ್ರೇಷ್ಠರಾದ ಅಶ್ವತ್ಥಾಮರು ಜ್ವಲಿಸುವ ಸಿಡಿಲಿನಂತಿದ್ದ ಆ ಎತ್ತಿದ ಗದೆಯನ್ನು ನೋಡಿ, ರಥದ ಮಧ್ಯಭಾಗದಿಂದ ಮೂರು ಹೆಜ್ಜೆ ಹಿಂದೆ ಸರಿದರು.

ತಸ್ಯಾಶ್ವಾನ್ ಗದಯಾ ಹತ್ವಾ ತಥೋಭೌ ಪಾರ್ಷ್ಣಿಸಾರಥೀ ।
ಶರಾಚಿತಾಂಗಃ ಸೌಭದ್ರಃ ಶ್ವಾವಿದ್ವತ್ ಸಮದೃಶ್ಯತ ॥ ೪೭ ॥

ಅವರ ಅಶ್ವಗಳನ್ನು ಗದೆಯಿಂದ ಕೊಂದು, ಹಾಗೆಯೇ ಇಬ್ಬರು ಪಾರ್ಷ್ಣಿ-ಸಾರಥಿಗಳನ್ನು ಗದೆಯಿಂದ ಕೊಂದು, ತನ್ನ ಶರೀರದಲ್ಲೆ ಬಾಣಗಳು ನಾಟಿದ ಅಭಿಮನ್ಯುವು ಮುಳ್ಳುಹಂದಿಯಂತೆ ಕಂಡುಬಂದನು.

ತತಃ ಸುಬಲದಾಯಾದಂ ಕೋಪವೇಗಮಪೋಥಯತ್ ।
ಜಘಾನ ಚಾಸ್ಯಾನುಚರಾನ್ ಗಾಂಧಾರಾನ್ ಸಪ್ತವಿಂಶತಿಮ್ ॥ ೪೮ ॥

ಅನಂತರ ಕೋಪವನ್ನೇ ವೇಗವಾಗಿ ಹೊಂದಿದ ಸುಬಲಪುತ್ರನನ್ನು ಕೊಂದನು ಮತ್ತು ಅವನ ಅನುಚರರಾದ ಇಪ್ಪತ್ತೇಳು ಗಾಂಧಾರರನ್ನೂ ಕೊಂದನು.

ಪುನರ್ಬಹೂನ್ ವಸಾತೀಯಾನ್ ಜಘಾನಾತಿರಥಾನ್ ದಶ ।
ಕೇಕಯಾನಾಂ ರಥಾನ್ ಸಪ್ತ ಹತ್ವಾ ದಶ ಸ ಕುಂಜರಾನ್ ॥ ೪೯ ॥

ದೌಃಶಾಸನೇ ರಥಂ ಸಾಶ್ವಂ ಗದಯಾ ಸಮಪೋಥಯತ್ ॥ ೫೦ ॥

ಪುನಃ ಅನೇಕ ವಸಾತಿಗಳನ್ನೂ, ಹತ್ತು ಅತಿರಥರನ್ನೂ ಕೊಂದನು. ಕೇಕಯರ ಏಳು ರಥರನ್ನು ಕೊಂದು, ಹತ್ತು ಗಜಗಳನ್ನು ಕೊಂದು ಅವನು ಅಶ್ವದಿಂದ ಕೂಡಿದ ದುಶ್ಶಾಸನ ಪುತ್ರನ ರಥವನ್ನು ಗದೆಯಿಂದ ನಾಶಗೊಳಿಸಿದನು.

ತತೋ ದೌಃಶಾಸನಿಃ ಕ್ರುದ್ಧೋ ಗದಾಮುದ್ಯಮ್ಯ ಮಾರಿಷ ।
ಅಭಿದುದ್ರಾವ ಸೌಭದ್ರಂ ತಿಷ್ಠ ತಿಷ್ಠೇತಿ ಚಾಬ್ರವೀತ್ ॥ ೫೧ ॥

ಎಲೈ ಪೂಜ್ಯನೇ, ಆಗ ದುಶ್ಶಾಸನನ ಪುತ್ರನು ಕ್ರುದ್ಧನಾಗಿ ಗದೆಯನ್ನು ಎತ್ತಿ ಅಭಿಮನ್ಯುವಿನ ಕಡೆಗೆ ಓಡಿ ಬಂದು 'ನಿಲ್ಲು-ನಿಲ್ಲು' ಎಂದು ಹೇಳಿದನು.

ತಾವುದ್ಯತಗದೌ ವೀರಾವನ್ಯೋನ್ಯವಧಕಾಂಕ್ಷಿಣೌ ।
ಭ್ರಾತೃವ್ಯೌ ಸಂಪ್ರಜಹ್ರಾತೇ ಪುರೇವ ತ್ರ್ಯಂಬಕಾಂತಕೌ ॥ ೫೨ ॥

ಎತ್ತಿದ ಗದೆಯುಳ್ಳವರೂ, ಪರಸ್ಪರ ವಧೆಯನ್ನು ಬಯಸುವವರೂ, ವೀರರೂ ಆದ ಆ ಸಹೋದರರು ಹಿಂದೆ ರುದ್ರ ಮತ್ತು ಯಮನಂತೆ ಪರಸ್ಪರವಾಗಿ ಸಂಪ್ರಹಾರವನ್ನು ಮಾಡಿದರು.

ತಾವನ್ಯೋನ್ಯಂ ಗದಾಗ್ರಾಭ್ಯಾಂ ತಾಡಿತೌ ಪತಿತೌ ಕ್ಷಿತೌ ।
ಇಂದ್ರಧ್ವಜಾವಿವೋತ್ಸೃಷ್ಟೌ ಶತ್ರುಮಧ್ಯೇ ಪರಂತಪೌ ॥ ೫೩ ॥

ಪರಸ್ಪರವಾಗಿ ಶ್ರೇಷ್ಠ ಗದೆಗಳಿಂದ ಹೊಡೆಯಲ್ಪಟ್ಟ ಪರಂತಪರಾದ ಅವರಿಬ್ಬರೂ ಬಂಧನವನ್ನು ಕಳಚಿ ಬಿಟ್ಟ ಇಂದ್ರಧ್ವಜದಂತೆ ಶತ್ರುಗಳ ಮಧ್ಯದಲ್ಲಿ ಭೂಮಿಯ ಮೇಲೆ ಬಿದ್ದರು.

ತಾಪಯಿತ್ವಾ ಮಹೀಪಾಲಾನ್ ಕುರೂಣಾಂ ಕೀರ್ತಿವರ್ಧನಃ ।
ದೇವಕಲ್ಪೋ ಮಹೇಷ್ವಾಸಃ ಕ್ಷತ್ರಂ ದಗ್ಧ್ವಾ ಮಹಾಯಶಾಃ ॥ ೫೪ ॥

ಗದಾವೇಗೇನ ಮಹತಾ ವ್ಯಾಯಾಮೇನ ಚ ಮೋಹಿತಃ ।
ವಿಚೇತಾ ನ್ಯಪತದ್ ಭೂಮೌ ಸೌಭದ್ರಃ ಪರವೀರಹಾ ॥ ೫೫ ॥

ಕುರುವಂಶದ ಕೀರ್ತಿವರ್ಧನನಾದ, ದೇವತೆಗಳಂತೆ ಇದ್ದ, ಮಹಾಧನುರ್ಧಾರಿಯಾದ, ಕೀರ್ತಿವಂತನಾದ ಅಭಿಮನ್ಯುವು ಕ್ಷತ್ರಿಯರನ್ನು ದಹಿಸಿ, ರಾಜರನ್ನು ಸಂತಾಪಗೊಳಿಸಿ, ದೊಡ್ಡ ಗದೆಯ ಅಭಿಘಾತದಿಂದಲೂ ತನ್ನ ಅತಿಯಾದ ಆಯಾಸದಿಂದಲೂ ಸಂಜ್ಞೆಯನ್ನು ಕಳೆದುಕೊಂಡು ಶತ್ರುಘಾತಕನಾದ ಅವನು ಭೂಮಿಯ ಮೇಲೆ ಬಿದ್ದನು.

ಅಭಿಮನ್ಯುರ್ಹತೋ ರಾಜನ್ನೇಕೋ ಬಹುಭಿರಾಹವೇ ।
ಕ್ಷೋಭಯಿತ್ವಾ ಚಮೂಂ ಸರ್ವಾಂ ನಳಿನೀಮಿವ ಕುಂಜರಃ ॥ ೫೬ ॥

ಅಶೇತ ನಿಹತೋ ವೀರೋ ವ್ಯಾಧೈರ್ವನಗಜೋ ಯಥಾ ॥ ೫೭ ॥

ಎಲೈ ರಾಜನೇ, ಒಬ್ಬ ಅಭಿಮನ್ಯುವು ರಣರಂಗದಲ್ಲಿ ಅನೇಕರಿಂದ ಹೊಡೆಯಲ್ಪಟ್ಟು, ಗಜವು ಕಮಲಸರೋವರವನ್ನು ಕಲಕಾಡುವಂತೆ ಶತ್ರುಗಳನ್ನು ಕಲಕಾಡಿ ಹತನಾಗಿ, ವ್ಯಾಧರಿಂದ ಹತವಾದ ವನಗಜದಂತೆ ಭೂಮಿಯ ಮೇಲೆ ಮಲಗಿದನು.

ತಂ ತಥಾ ಪತಿತಂ ವೀರಂ ತಾವಕಾಃ ಪರ್ಯವಾರಯನ್ ।
ವನಂ ದಗ್ಧ್ವಾ ಯಥಾ ಶಾಂತಂ ಪಾವಕಂ ಶಿಶಿರಾತ್ಯಯೇ ॥ ೫೮ ॥

ಶಿಶಿರ ಋತುವು ಕಳೆದ ಮೇಲೆ ವನವನ್ನು ಸುಟ್ಟು ಶಾಂತವಾದ ಅಗ್ನಿಯಂತಿದ್ದ, ಪತಿತನಾದ ಆ ವೀರನನ್ನು ನಿನ್ನವರು ಸುತ್ತುವರಿದರು.

ವಿಮೃದ್ಯ ತರುಶೃಂಗಾಣಿ ಸನ್ನಿವೃತ್ತಮಿವಾನಿಲಮ್ ।
ಅಸ್ತಂ ಗತಮಿವಾದಿತ್ಯಂ ತಪ್ತ್ವಾ ಭಾರತವಾಹಿನೀಮ್ ॥ ೫೯ ॥

ಉಪಪ್ಲುತಂ ಯಥಾ ಸೋಮಂ ಸಂಶುಷ್ಕಮಿವ ಸಾಗರಮ್ ।
ಪೂರ್ಣಚಂದ್ರಾಭವದನಂ ಕಾಕಪಕ್ಷವೃತಾಲಕಮ್ ॥ ೬೦ ॥

ತಂ ಭೂಮೌ ಪತಿತಂ ದೃಷ್ಟ್ವಾ ತಾವಕಾಸ್ತೇ ಮಹಾರಥಾಃ ।
ಮುದಾ ಪರಮಯಾ ಯುಕ್ತಾಃ ಸಿಂಹವದ್ ವ್ಯನದನ್ ಮುಹುಃ ॥

ವೃಕ್ಷಗಳನ್ನೂ ಮತ್ತು ಪರ್ವತ ಶಿಖರಗಳನ್ನೂ ಕೆಡವಿ ಶಾಂತವಾದ ಅನಿಲದಂತೆ, ಮುಳುಗಿದ ಸೂರ್ಯನಂತೆ, ಕೌರವರ ಸೇನೆಯನ್ನು ಸಂತಾಪಗೊಳಿಸಿ, ಗ್ರಹಣ ಹಿಡಿದ ಚಂದ್ರನಂತೆ, ಒಣಗಿದ ಸಮುದ್ರದಂತೆ, ಪೂರ್ಣಚಂದ್ರ ಮುಖವುಳ್ಳ, ಶಿರಸ್ಸಿನಲ್ಲಿ ಕೂದಲುಗಳನ್ನು ಬಾಚಿ ಕಾಕಪಕ್ಷಗಳನ್ನು ಧರಿಸಿದ ಅವನು ಭೂಮಿಯಲ್ಲಿ ಬಿದ್ದಿರುವುದನ್ನು ನೋಡಿ ನಿನ್ನ ಆ ಮಹಾರಥರು ಬಹಳ ಸಂತೋಷದಿಂದ ಕೂಡಿದವರಾಗಿ ಪುನಃ ಪುನಃ ಸಿಂಹನಾದವನ್ನು ಮಾಡಿದರು.

ಆಸೀತ್ ಪರಮಕೋ ಹರ್ಷಃ ತಾವಕಾನಾಂ ವಿಶಾಂಪತೇ ।
ಇತರೇಷಾಂ ತು ವೀರಾಣಾಂ ನೇತ್ರೇಭ್ಯಃ ಪ್ರಾಪತಜ್ಜಲಮ್ ॥ ೬೨ ॥

ಎಲೈ ರಾಜನೇ, ನಿನ್ನವರಿಗೆ ಬಹಳ ಹರ್ಷವುಂಟಾಯಿತು. ಇತರ ವೀರರಿಗೆ ಕಣ್ಣುಗಳಿಂದ ನೀರು ಸುರಿದವು.

ಅತಿಕ್ರೋಶಂತಿ ಭೂತಾನಿ ಹ್ಯಂತರಿಕ್ಷೇ ವಿಶಾಂಪತೇ ।
ತಂ ದೃಷ್ಟ್ವಾ ಪತಿತಂ ವೀರಂ ಚ್ಯುತಂ ಚಂದ್ರಮಿವಾಂಬರಾತ್ ॥ ೬೩ ॥

ದ್ರೋಣಕರ್ಣಮುಖೈಃ ಷಡ್ಭಿರ್ಧಾರ್ತರಾಷ್ಟ್ರೈರ್ಮಹಾರಥೈಃ ।
ಏಕೋಽಯಂ ನಿಹತಃ ಸಂಖ್ಯೇ ನೈತದ್ ಧರ್ಮ್ಯಂ ಮತಂ ಹಿ ನಃ ॥

ಆಕಾಶದಿಂದ ಬಿದ್ದ ಚಂದ್ರನಂತೆ ಭೂಮಿಯ ಮೇಲೆ ಮಲಗಿದ ಆ ವೀರನನ್ನು ನೋಡಿ ಅಂತರಿಕ್ಷದಲ್ಲಿ ಸಂಚರಿಸುವ ಭೂತಗಳು ದ್ರೋಣ-ಕರ್ಣ ಮೊದಲಾದ ಕೌರವರ ಆರು ಮಹಾರಥರಿಂದ ಒಬ್ಬ ಅಭಿಮನ್ಯುವು ಯುದ್ಧದಲ್ಲಿ ಹತನಾಗಿದ್ದಾನೆ. ಇದು ಧರ್ಮಕ್ಕೆ ಅನುಗುಣವಾಗಿಲ್ಲ ಎಂದು ನಮ್ಮ ಅಭಿಪ್ರಾಯ ಎಂದು ಕಿರುಚಿದವು.

ತಸ್ಮಿಂಸ್ತು ನಿಹತೇ ವೀರೇ ಬಹ್ವಶೋಭತ ಮೇದಿನೀ ।
ದ್ಯೌರ್ಯಥಾ ಪೂರ್ಣಚಂದ್ರೇಣ ನಕ್ಷತ್ರಗಣಮಾಲಿನೀ ॥ ೬೫ ॥

ಮೃತನಾಗಿ ಭೂಮಿಯ ಮೇಲೆ ಬಿದ್ದ ಆ ವೀರನಿಂದ ಭೂಮಿಯು ನಕ್ಷತ್ರಗಣ ಸಹಿತವಾದ ಪೂರ್ಣಚಂದ್ರನಿಂದ ಆಕಾಶವು ಶೋಭಿಸುವಂತೆ ಬಹಳವಾಗಿ ಶೋಭಿಸಿತು.

ರುಗ್ಮಪುಂಖೈಶ್ಚ ಸಂಚ್ಛಿನ್ನಾ ರುಧಿರೌಘಪರಿಪ್ಲುತಾ ।
ಉತ್ತಮಾಂಗೈಶ್ಚ ವೀರಾಣಾಂ ಭ್ರಾಜಮಾನೈಃ ಸಕುಂಡಲೈಃ ॥ ೬೬ ॥

ವಿಚಿತ್ರೈಶ್ಚ ಪರಿಸ್ತೋಮೈಃ ಪತಾಕಾಭಿಶ್ಚ ಸಂವೃತಾ ।
ಚಾಮರೈಶ್ಚ ಕಶಾಭಿಶ್ಚ ಪ್ರವಿದ್ಧೈಶ್ಚಾಂಬರೋತ್ತಮೈಃ ॥ ೬೭ ॥

ರಥಾಶ್ವನರನಾಗಾನಾಮಲಂಕಾರೈಶ್ಚ ಸುಪ್ರಭೈಃ ।
ಖಡ್ಗೈಃ ಸುನಿಶಿತೈಃ ಪೀತೈರ್ನಿರ್ಮುಕ್ತೈರ್ಭುಜಗೈರಿವ ॥ ೬೮ ॥

ಚಾಪೈಶ್ಚ ಬಹುಭಿಶ್ಛಿನ್ನೈಃ ಶಕ್ತ್ಯೃಷ್ಟಿಪ್ರಾಸ ತೋಮರೈಃ ।
ವಿವಿಧೈರಾಯುಧೈಶ್ಚಾನ್ಯೈ ಃ ಸಂವೃತಾ ಭೂರಶೋಭತ ॥ ೬೯ ॥

ಸುವರ್ಣಪುಂಖಗಳುಳ್ಳ ಬಾಣಗಳಿಂದ ಹರಡಲ್ಪಟ್ಟು, ರಕ್ತಪ್ರವಾಹದಿಂದ ತೊಯ್ದು, ವೀರರ ಕುಂಡಲಸಹಿತವಾದ ಶೋಭಿಸುವ ಶಿರಸ್ಸುಗಳಿಂದಲೂ, ವಿಚಿತ್ರವಾದ ಕಂಬಳಿಗಳಿಂದಲೂ ಮತ್ತು ಪತಾಕೆಗಳಿಂದಲೂ ಹರಡಲ್ಪಟ್ಟು, ಚಾಮರಗಳಿಂದಲೂ, ಚಾವಟಿಗಳಿಂದಲೂ, ಎಸೆದ ಶ್ರೇಷ್ಠ ವಸ್ತ್ರಗಳಿಂದಲೂ, ರಥಾಶ್ವ-ಗಜ-ನರರ ಕಾಂತಿಯುಕ್ತವಾದ ಅಲಂಕಾರಗಳಿಂದಲೂ, ಪೊರೆಯನ್ನು ಕಳಚಿದ ಸರ್ಪಗಳಂತಿದ್ದ ಹರಿತವಾದ ಖಡ್ಗಗಳಿಂದಲೂ, ಅನೇಕರಿಂದ ಕತ್ತರಿಸಲ್ಪಟ್ಟ ಧನುಸ್ಸುಗಳಿಂದಲೂ, ಶಕ್ತಿ-ಋಷ್ಟಿ-ಪ್ರಾಸ-ತೋಮರಗಳಿಂದಲೂ, ಇನ್ನೂ ಅನೇಕ ವಿಧವಿಧವಾದ ಆಯುಧಗಳಿಂದಲೂ ಹರಡಲ್ಪಟ್ಟ ಭೂಮಿಯು ಬಹಳವಾಗಿ ಶೋಭಿಸಿತು.

ನಿಷ್ಪನ್ದಿರತೀವಾರ್ತೈರುದ್ವಮದ್ರುಧಿರಸ್ರವೈಃ ।
ನರೈಃ ಪತದ್ಭಿಃ ಪತಿತೈರ್ಹೇಮಭಾಂಡಪರಿಚ್ಛದೈಃ ॥ ೭೦ ॥

ವಾಜಿಭಿಶ್ಚಾಪಿ ನಿರ್ಜೀವೈಃ ಶ್ವಸದ್ಭಿಃ ಶೋಣಿತೋಕ್ಷಿತೈಃ ।
ಸಾರೋಹೈರ್ವಿಷಮಾ ಭೂಮಿಃ ಸೌಭದ್ರೇಣ ನಿಪಾತಿತೈಃ ॥ ೭೧ ॥

ಯುದ್ಧದಲ್ಲಿ ಪೀಡಿತವಾಗಿ ದೀರ್ಘವಾದ ಉಸಿರನ್ನು ಬಿಡುವ, ಉಕ್ಕಿ ಬರುವ ರಕ್ತವನ್ನು ಸುರಿಸುವ ಮನುಷ್ಯರಿಂದಲೂ, ಬಿದ್ದ ಮತ್ತು ಬೀಳುತ್ತಿರುವ ಉಸಿರಾಡುವ ಸುವರ್ಣಾಲಂಕಾರ ಸಹಿತವಾದ ಅಶ್ವಗಳಿಂದಲೂ, ಮೃತರಾದ ಅಶ್ವಾರೋಹಿಗಳ ಸಹಿತವಾದ ಅಭಿಮನ್ಯುವಿನಿಂದ ಕೆಡವಲ್ಪಟ್ಟ ರಕ್ತದಿಂದ ತೊಯ್ದ ಅಶ್ವಗಳಿಂದಲೂ ಯುದ್ಧಭೂಮಿಯು ವಿಷಮವಾಯಿತು.

ಸಾಂಕುಶೈಃ ಸಮಹಾಮಾತ್ರೈಃ ಸವರ್ಮಾಯುಧಕೇತುಭಃ ।
ಪರ್ವತೈರಿವ ವಿಧ್ವಸ್ತೈರ್ವಿಶಿಖೋನ್ಮಥಿತೈರ್ಗಜೈಃ ॥ ೭೨ ॥

ಪೃಥಿವ್ಯಾಮನುಕೀರ್ಣೈಶ್ಚ ವ್ಯಶ್ವಸಾರಥಿಯೋಧಿಭಃ ।
ಹ್ರದೈರಿವ ಪ್ರಕ್ಷುಭಿತೈರ್ಹತನಾಗೈ ರಥೋತ್ತಮೈಃ ॥ ೭೩ ॥

ಪದಾತಿಸಂಘೈಶ್ಚ ಹತೈರ್ವಿವಿಧಾಯುಧಭೂಷಣೈಃ ।
ಭೀರೂಣಾಂ ತ್ರಾಸಜನನೀ ಘೋರರೂಪಾऽಭವನ್ಮಹೀ ॥ ೭೪ ॥

ಅಂಕುಶವನ್ನು ಹಿಡಿದ ಗಜಗಳ ಮಹಾಮಾತ್ರರಿಂದಲೂ, ಕವಚ-ಆಯುಧ-ಧ್ವಜಗಳಿಂದಲೂ, ಬಾಣಗಳಿಂದ ಹೊಡೆಯಲ್ಪಟ್ಟು ನಾಶಗೊಳಿಸಲ್ಪಟ್ಟ ಪರ್ವತಪ್ರಾಯವಾದ ಗಜಗಳಿಂದಲೂ, ಭೂಮಿಯಲ್ಲಿ ಹರಡಿದ ಅಶ್ವ-ಸಾರಥಿ-ಯೋಧರಿಂದ ಹೀನವಾದ ಕ್ಷುಬ್ಧವಾದ ಸರೋವರದಂತೆ ಗಜಗಳಿಂದ ಭಗ್ನವಾದ ಶ್ರೇಷ್ಠವಾದ ರಥಗಳಿಂದಲೂ, ವಿವಿಧವಾದ ಆಯುಧಗಳನ್ನೂ, ಭೂಷಣಗಳನ್ನೂ ಹೊಂದಿದ ಮೃತರಾದ ಪದಾತಿ ಸಮೂಹಗಳಿಂದಲೂ, ಭೂಮಿಯು ಭೀರುಗಳಿಗೆ ಭಯಜನಕವೂ ಮತ್ತು ಘೋರವೂ ಆಯಿತು.

ತಂ ದೃಷ್ಟ್ವಾ ಪತಿತಂ ಭೂಮೌ ಚಂದ್ರಾರ್ಕಸದೃಶದ್ಯುತಿಮ್ ।
ತಾವಕಾನಾಂ ಪರಾ ಪ್ರೀತಿರಾಸೀತ್ ಪಾಂಡುಷು ಚ ವ್ಯಥಾ ॥ ೭೫ ॥

ಸೂರ್ಯ-ಚಂದ್ರರಿಗೆ ಸದೃಶವಾದ ಕಾಂತಿಯನ್ನು ಹೊಂದಿದ ಅವನು ಭೂಮಿಯ ಮೇಲೆ ಬಿದ್ದಿರುವುದನ್ನು ನೋಡಿ ನಿನ್ನವರಿಗೆ ಬಹಳ ಸಂತೋಷವಾಯಿತು. ಪಾಂಡವರಿಗೆ ವ್ಯಥೆಯಾಯಿತು.

ಅಭಿಮನ್ಯೌ ಹತೇ ರಾಜನ್ ಶಿಶುಕೇಽಪ್ರಾಪ್ತಯೌವನೇ ।
ಸಂಪ್ರಾದ್ರವಚ್ಚಮೂಃ ಸರ್ವಾ ಧರ್ಮರಾಜಸ್ಯ ಪಶ್ಯತಃ ॥ ೭೬ ॥

ರಾಜನೇ, ಶಿಶುವೂ, ಯೌವನವನ್ನು ಹೊಂದದವನೂ ಆದ ಅಭಿಮನ್ಯುವು ಹತನಾಗುತ್ತಿರಲು ಧರ್ಮರಾಜನು ನೋಡುತ್ತಿರುವಂತೆಯೇ ಅವನ ಎಲ್ಲಸೈನ್ಯವೂ ಓಡಿಹೋಯಿತು.

ದೀರ್ಯಮಾಣಂ ಬಲಂ ದೃಷ್ಟ್ವಾ ಸೌಭದ್ರೇ ವಿನಿಪಾತಿತೇ ।
ಅಜಾತಶತ್ರುಃ ಸ್ವಾನ್ ವೀರಾನಿದಂ ವಚನಮಬ್ರವೀತ್ ॥ ೭೭ ॥

ಸ್ವರ್ಗಮೇಷ ಗತಃ ಶೂರೋ ಯೋ ಹತೋ ನಪರಾಙ್ಮುಖಃ ।
ಸಂಸ್ತಂಭಯತ ಮಾ ಭೈಷ್ಟ ಜೇಷ್ಯಾಮೋ ವೈ ವಯಂ ಪರಾನ್ ॥ ೭೮ ॥

ಅಭಿಮನ್ಯುವು ಮೃತನಾಗುತ್ತಿರಲು ಭಗ್ನವಾಗುತ್ತಿದ್ದ ತನ್ನ ಸೈನ್ಯವನ್ನು ನೋಡಿ ಅಜಾತಶತ್ರುವು ತನ್ನ ವೀರರನ್ನು ಕುರಿತು– 'ಯಾವ ಈ ವೀರನು ಶತ್ರುಗಳಿಗೆ ಪರಾಙ್ಮುಖನಾಗದೆ ಯುದ್ಧದಲ್ಲಿ ಹತನಾದನೋ ಅಂತಹ ಅವನು ಸ್ವರ್ಗಕ್ಕೆ ಹೋಗಿದ್ದಾನೆ. ಸ್ಥಿರವಾಗಿ ನಿಲ್ಲಿ, ಹೆದರಬೇಡಿ, ನಾವು ಶತ್ರುಗಳನ್ನು ಜಯಿಸುವೆವು' ಎಂಬ ಈ ಮಾತುಗಳನ್ನು ಆಡಿದನು.

ಇತ್ಯೇವಂ ಸುಮಹಾತೇಜಾ ದುಃಖಿತೇಭ್ಯೋ ಮಹಾಮತಿಃ ।
ಧರ್ಮರಾಜೋ ಯುಧಿಶ್ರೇಷ್ಠೋ ಬ್ರುವನ್ ದುಃಖಮಪಾನುದತ್ ॥

ಮಹಾತೇಜಸ್ವಿಯೂ, ಮಹಾಮತಿಯೂ, ಯುದ್ಧದಲ್ಲಿ ಶ್ರೇಷ್ಠನೂ ಆದ ಧರ್ಮರಾಜನು ಈ ರೀತಿ ಮಾತನಾಡುತ್ತಾ ದುಃಖಗೊಂಡವರ ದುಃಖವನ್ನು ಪರಿಹರಿಸಿದನು.

ಯುದ್ಧೇ ಹ್ಯಾಶೀವಿಷಾಕಾರಾನ್ ರಾಜಪುತ್ರಾನ್ ಬಹೂನ್ ರಣೇ ।
ಪೂರ್ವಂ ನಿಹತ್ಯ ಸಂಗ್ರಾಮೇ ಪಶ್ಚಾದಾರ್ಜುನಿರನ್ವಗಾತ್ ॥ ೮೦ ॥

ಯುದ್ಧದಲ್ಲಿ ಸರ್ಪದಂತಿದ್ದ ಅನೇಕ ರಾಜಪುತ್ರರನ್ನು ಕೊಂದು ಅಭಿಮನ್ಯುವು ಅನಂತರ ತಾನು ಹೋಗಿದ್ದಾನೆ.

ಹತ್ವಾ ದಶಸಹಸ್ರಾಣಿ ಕೌಸಲ್ಯಂ ಚ ಮಹಾರಥಮ್ ।
ಕೃಷ್ಣಾರ್ಜುನಸಮಃ ಕಾರ್ಷ್ಣಿಃ ಶಕ್ರಸದ್ಮ ಗತೋ ಧ್ರುವಮ್ ॥ ೮೧ ॥

ಹತ್ತು ಸಹಸ್ರ ಯೋಧರನ್ನು ಮತ್ತು ಕೋಸಲಾಧಿಪತಿಯಾದ ಮಹಾರಥರನ್ನು ಕೊಂದು ಕೃಷ್ಣಾರ್ಜುನರಿಗೆ ಸಮನಾದ ಅಭಿಮನ್ಯುವು ಇಂದ್ರಭವನಕ್ಕೆ ಖಂಡಿತವಾಗಿ ಹೋಗಿದ್ದಾನೆ.

ನರಾಶ್ವರಥಮಾತಂಗಾನ್ ನಿಹತ್ಯ ಚ ಸಹಸ್ರಶಃ ।
ಅತೃಪ್ಯನ್ನೇವ ಸಂಗ್ರಾಮಾದಗಚ್ಛತ್ ಪುಣ್ಯಲೋಕಜಿತ್ ॥ ೮೨ ॥

ನರಾಶ್ವ-ರಥ-ಗಜಗಳನ್ನು ಸಹಸ್ರ ಸಂಖ್ಯೆಯಲ್ಲಿ ಕೊಂದು, ಯುದ್ಧದಲ್ಲಿ ತೃಪ್ತಿಯನ್ನೇ ಹೊಂದದೆ ಪುಣ್ಯಲೋಕವನ್ನು ಜಯಿಸಿದ ಅವನು ಹೋಗಿದ್ದಾನೆ (ಎಂದು ಧರ್ಮರಾಜನು ದುಃಖಿತರನ್ನು ಸಮಾಧಾನ ಪಡಿಸಿದನು).

ಸಂಜಯಃ

ವಯಂ ತು ಪ್ರವರಾನ್ ಹತ್ವಾ ತೇಷಾಂ ತೈಃ ಶರಪೀಡಿತಾಃ ।
ನಿವೇಶಾಯಾಭ್ಯುಪಾಯಾಮಃ ಸಾಯಾಹ್ನೇ ರುಧಿರೋಕ್ಷಿತಾಃ ॥ ೮೩ ॥

ಸಂಜಯ– ನಾವು ಅವರಲ್ಲಿ ಶ್ರೇಷ್ಠರಾದವರನ್ನು ಕೊಂದು, ಅವರ ಬಾಣಗಳಿಂದ ಪೀಡಿತರಾಗಿ, ಸಾಯಂಕಾಲದ ವೇಳೆಗೆ ರಕ್ತದಿಂದ ಲೇಪಿತರಾಗಿ ನಮ್ಮ ಶಿಬಿರಗಳಿಗೆ ಹೋದೆವು.

ನಿರೀಕ್ಷಮಾಣಾಸ್ತು ವಯಂ ಪರಸ್ಯಾಯೋಧನಂ ಶನೈಃ ।
ಅಪಾಯಾಮ ಮಹಾರಾಜ ಗ್ಲಾನಿಂ ಪ್ರಾಪ್ತಾ ವಿಚೇತಸಃ ॥ ೮೪ ॥

ಮಹಾರಾಜನೇ, ಪಾಂಡವರ ರಣಭೂಮಿಯನ್ನು ನಿಧಾನವಾಗಿ ನೋಡುತ್ತಾ ನಾವು ಗ್ಲಾನಿಯನ್ನು ಹೊಂದಿ, ಪ್ರಜ್ಞಾಶೂನ್ಯರಾಗಿ ಅಲ್ಲಿಂದ ಹೊರಟೆವು.

ತತೋ ನಿಶಾಯಾ ದಿವಸಸ್ಯ ಚಾಶಿವಃ
ಶಿವಾರುತೈಃ ಸಂಧಿರವರ್ತತಾದ್ಭುತಃ ।
ಕುಶೇಶಯಾಪೀಡನಿಭೇ ದಿವಾಕರೇ
ವಿಲಂಬಮಾನೋಽಸ್ತಮುಪೇತ್ಯ ಪರ್ವತಮ್ ॥ ೮೫ ॥

ಪದ್ಮರೂಪವಾದ ಆಭರಣದಂತಿದ್ದ ಸೂರ್ಯನು ಅಸ್ತಪರ್ವತವನ್ನು ಸೇರಿ ಜಾರುತ್ತಿರಲು, ಆಗ ನರಿಗಳ ರೋಧನಗಳಿಂದ ಕೂಡಿದ ಹಗಲು-ರಾತ್ರಿಗಳ ಅಮಂಗಳವಾದ ಅದ್ಭುತವಾದ ಸಂಧಿಕಾಲವು ಉಂಟಾಯಿತು.

ವರಾಸಿ ಶಕ್ತ್ಯೃಷ್ಟಿ ವರೂಥಚರ್ಮಣಾಂ
ವಿಭೂಷಣಾನಾಂ ಚ ಸಮಾಕ್ಷಿಪನ್ ಪ್ರಭಾಮ್
ದಿವಂ ಚ ಭೂಮಿಂ ಚ ಸಮಾನಯನ್ನಿವ
ಪ್ರಿಯಾಂ ತನುಂ ಸ್ವಾಂ ರವಿರೇತಿ ಪಾವಕೀಮ್ ॥ ೮೬ ॥

ಶ್ರೇಷ್ಠವಾದ ಖಡ್ಗ-ಶಕ್ತಿ-ಋಷ್ಟಿ-ಕವಚ-ಚರ್ಮಗಳು ಮತ್ತು ವಿಭೂಷಣಗಳು ಇವುಗಳ ಕಾಂತಿಯನ್ನು ಪರಿಹರಿಸುತ್ತಾ ಭೂಮಿಯನ್ನು ಮತ್ತು ಅಂತರಿಕ್ಷವನ್ನು ಸಮಾನವನ್ನಾಗಿ ಮಾಡುವವನಾಗಿ ಸೂರ್ಯನು ತನಗೆ ಪ್ರಿಯವಾದ ಅಗ್ನಿ ಶರೀರವನ್ನು ಪ್ರವೇಶಿಸಿದನು.

ಮಹಾಭ್ರಕೂಟಾಚಲಶೃಂಗಸನ್ನಿಭೈಃ
ಅನೀಕಪೈರ್ವಜ್ರಹತೈರಿವಾದ್ರಿಭಿಃ ।
ಸವೈಜಯಂತ್ಯಂಕುಶವರ್ಮಯಂತೃಭಿಃ
ನಿಪಾತಿತೈರ್ನಿಷ್ಪನತೀವ ಗೌಶ್ಚಿತಾ ॥ ೮೭ ॥

ಮಹಾಮೇಘಕೂಟಗಳ ಮತ್ತು ಪರ್ವತ ಶಿಖರಗಳ ಕಾಂತಿಯನ್ನು ಹೋಲುವ, ವಜ್ರಾಯುಧದಿಂದ ಹೊಡೆಯಲ್ಪಟ್ಟ ಪರ್ವತದಂತಿದ್ದ ಸೇನಾಪತಿಗಳಿಂದಲೂ, ಭೂಮಿಯ ಮೇಲೆ ಬಿದ್ದ ವೈಜಯಂತಿ, ಅಂಕುಶ, ಕವಚಸಹಿತರಾದ ಸಾರಥಿಗಳಿಂದಲೂ ತುಂಬಿದ ಭೂಮಿಯು ಗರ್ಜಿಸುವಂತೆ ಇದ್ದಿತು.

ಹತೇಶ್ವರೈಶ್ಚೂರ್ಣಿತಚಕ್ರಕೂಬರೈಃ
ಹತಾಶ್ವಸೂತೈರ್ವಿಪತಾಕಕೇತುಭಿಃ ।
ಮಹಾರಥೈರ್ಭೂಃ ಶುಶುಭೇ ವಿಚೂರ್ಣಿತೈಃ
ಪುರೈರಿವಾಮಿತ್ರಹತೈರ್ನರಾಧಿಪ ॥ ೮೮ ॥

ಎಲೈ ರಾಜನೇ, ಪ್ರಭುಗಳು ಹತರಾಗಿ, ಚಕ್ರ-ಕೂಬರಗಳು ಪುಡಿ ಮಾಡಲ್ಪಟ್ಟು, ಅಶ್ವ-ಸಾರಥಿಗಳನ್ನು ಕಳೆದುಕೊಂಡು, ಪತಾಕ-ಧ್ವಜ ಹೀನಗಳಾಗಿ, ಪುಡಿ ಮಾಡಲ್ಪಟ್ಟು

ಭೂಮಿಯ ಮೇಲೆ ಬಿದ್ದ ಮಹಾರಥಗಳಿಂದ ತುಂಬಿದ ಭೂಮಿಯು ಶತ್ರುಗಳಿಂದ ಧ್ವಂಸ ಮಾಡಲ್ಪಟ್ಟ ನಗರಗಳಂತೆ ಶೋಭಿಸಿತು.

ಗಜಾಶ್ವವೃಂದೈಃ ಸಹಸಾದಿಭಿರ್ಹತೈಃ
ಪ್ರವಿದ್ಧಭಾಂಡಾಭರಣೈಃ ಪೃಥಗ್ವಿಧೈಃ ।
ನಿರಸ್ತಜಿಹ್ವಾದಶನಾಂತ್ರಲೋಚನೈಃ
ಧರಾ ಬಭೌ ಘೋರವಿರೂಪದರ್ಶನಾ ॥ ೮೯ ॥

ಮೃತವಾದ ಆರೋಹಿಗಳಿಂದ ಸಹಿತವಾದ ಗಜಾಶ್ವ ಸಮೂಹಗಳಿಂದಲೂ, ಹೊಡೆದು ಪುಡಿ ಮಾಡಲ್ಪಟ್ಟ ವಿಧವಿಧವಾದ ಉಪಕರಣಗಳು ಮತ್ತು ಅಲಂಕಾರಗಳಿಂದಲೂ, ನಾಲಿಗೆ-ದಂತಗಳು-ಕರುಳು ಮತ್ತು ಕಣ್ಣುಗಳನ್ನು ಕಳೆದುಕೊಂಡ (ವಾಹನಗಳಿಂದಲೂ ಮತ್ತು ಯೋಧರಿಂದಲೂ) ತುಂಬಿದ ಭೂಮಿಯು ಘೋರವೂ ಮತ್ತು ಭಯಂಕರ ದರ್ಶನವುಳ್ಳದ್ದೂ ಆಯಿತು.

ಪ್ರವಿದ್ಧವರ್ಮಾಭರಣಾಯುಧಾಂಬರಾ
ವಿಪನ್ನಹಸ್ತ್ಯಶ್ವರಥಾನುಗಾ ನರಾಃ ।
ಮಹಾರ್ಹಶಯ್ಯಾಸ್ತರಣೋಚಿತಾಃ ಸದಾ
ಕ್ಷಿತಾವನಾಥಾ ಇವ ಶೇರತೇ ಹತಾಃ ॥ ೯೦ ॥

ತಮ್ಮ ಕವಚಗಳು, ಆಭರಣಗಳು, ಆಯುಧಗಳು ಮತ್ತು ವಸ್ತ್ರಗಳು ಭಗ್ನವಾಗಿ ಮೃತವಾದ ಗಜ-ಅಶ್ವ-ರಥ-ಪದಾತಿಗಳನ್ನು ಹೊಂದಿದ, ಒಳ್ಳೆಯ ಶಯನ ಮತ್ತು ಆಸನಗಳಿಗೆ ಸದಾ ಯೋಗ್ಯರಾದ ಯೋಧರು ಹತರಾಗಿ ಭೂಮಿಯ ಮೇಲೆ ಅನಾಥರಂತೆ ಮಲಗಿದರು.

ಅತೀವಹೃಷ್ಟಾ ಶ್ವಸೃಗಾಲವಾಯಸಾ
ಬಲಾಃ ಸುಪರ್ಣಾಶ್ಚ ವೃಕಾಸ್ತರಕ್ಷವಃ ।
ವಯಾಂಸ್ಯಸೃಕ್ಪಾಸ್ತ್ವಥ ರಕ್ಷಸಾಂ ಗಣಾಃ
ಪಿಶಾಚಸಂಘಾಶ್ಚ ನದಂತಿ ಭೈರವಮ್ ॥ ೯೧ ॥

ನಾಯಿಗಳು, ನರಿಗಳು, ಕಾಗೆಗಳು, ಬಲಪಕ್ಷಿಗಳು, ಗರುಡಗಳು, ತೋಳಗಳು, ಚಿರತೆಗಳು ಎಲ್ಲವೂ ಬಹಳ ಸಂತೋಷಗೊಂಡವು. ರಕ್ತಪಾನವನ್ನು ಮಾಡುವ ಪಕ್ಷಿಗಳು, ರಾಕ್ಷಸರ ಸಮೂಹಗಳು, ಪಿಶಾಚಿಗಳ ಸಮೂಹಗಳು ಭೈರವ ನಾದವನ್ನು ಮಾಡಿದವು.

ತ್ವಙೋ ವಿನಿರ್ಭಿದ್ಯ ಪಿಬಂತ್ಯಸೃಗ್ವಸಾಂ
ವಮಂತಿ ಮಜ್ಜಾಂ ಪಿಶಿತಾನ್ಯದಂತಿ ಚ ।
ವಪಾ ವಿಲುಂಪಂತಿ ಹಸಂತಿ ಗಾಂತಿ ಚ
ಪ್ರಕರ್ಷಮಾಣಾಃ ಕುಣಪಾನ್ಯನೇಕಶಃ ॥ ೯೨ ॥

ಅವು ಶವಗಳನ್ನು ಅನೇಕ ರೀತಿಯಲ್ಲಿ ಎಳೆದಾಡುತ್ತಾ, ಅವುಗಳ ಚರ್ಮವನ್ನು ಕಿತ್ತು, ರಕ್ತ ಮತ್ತು ಕೊಬ್ಬುಗಳನ್ನು ಕುಡಿದು, ಮಜ್ಜೆಗಳನ್ನು ವಾಂತಿ ಮಾಡಿದವು, ಮಾಂಸಗಳನ್ನು ತಿಂದವು, ವಪೆಗಳನ್ನು ಹರಿದವು. ನಕ್ಕವು ಮತ್ತು ಗಾನವನ್ನು ಮಾಡಿದವು.

ಶರೀರಸಂಘಾಟವಹಾ ಹ್ಯಸೃಗ್ಜಲಾ
ರಥೋಡುಪಾ ಕುಂಜರಶೈಲಸಂಕಟಾ ।
ಮನುಷ್ಯಶೀರ್ಷೋಪಲಮಾಂಸಕರ್ದಮಾ
ಪ್ರವಿದ್ಧನಾನಾವಿಧಶಸ್ತ್ರಮಾಲಿನೀ ॥ ೯೩ ॥

ಭಯಾವಹಾ ವೈತರಣೀವ ದುಸ್ತರಾ
ಪ್ರವರ್ತಿತಾ ಯೋಧವರೈಸ್ತದಾ ನದೀ ।
ಉವಾಹ ಮಧ್ಯೇನ ರಣಾಜಿರಂ ಭೃಶಂ
ಭಯಾನಕಾ ದೀನಮೃತಪ್ರವಾಹಿನೀ ॥ ೯೪ ॥

ಮೃತ ಶರೀರಗಳೆಂಬ ಸಣ್ಣಕಲ್ಲುಗಳನ್ನು ಕೊಚ್ಚಿಕೊಂಡು ಹೋಗುವ ರಕ್ತದ ಜಲವುಳ್ಳ, ರಥಗಳೆಂಬ ದೋಣಿಗಳುಳ್ಳ, ಕುಂಜರಗಳೆಂಬ ಶೈಲಗಳಿಂದ ಕೂಡಿದ, ಮನುಷ್ಯರ ಶಿರಸ್ಸೆಂಬ ಕಲ್ಲುಗಳಿಂದಲೂ, ಮಾಂಸವೆಂಬ ಕೆಸರಿನಿಂದಲೂ ಕೂಡಿದ, ಭಗ್ನಗೊಂಡ ನಾನಾವಿಧವಾದ ಶಸ್ತ್ರಗಳ ಮಾಲೆಯನ್ನು ಧರಿಸಿದ, ಭಯಂಕರವಾದ, ವೈತರಣಿಯಂತೆ ದಾಟಲು ಅಸಾಧ್ಯವಾದ, ಶ್ರೇಷ್ಠರಾದ ಯೋಧರಿಂದ ಪ್ರವರ್ತಿತವಾದ ಆ ನದಿಯು ರಣಭೂಮಿಯ ಮಧ್ಯದಲ್ಲಿ ಬಹಳ ಭಯವನ್ನುಂಟು ಮಾಡುತ್ತಾ ದೀನರನ್ನು ಮತ್ತು ಮೃತರನ್ನು ಕೊಚ್ಚಿಕೊಂಡು ಹೋಯಿತು.

ಪಿಬಂತಿ ಚ ಸ್ನಾಂತಿ ಚ ತತ್ರ ದುರ್ದೃಶಾಃ
ಪಿಶಾಚಸಂಘಾ ವಿವಿಧಾಃ ಸುಭೈರವಾಃ ।
ಸುನಂದಿತಾಃ ಪ್ರಾಣಭೃತಾಂ ಭಯಂಕರಾಃ
ಸಮಾನಭಕ್ಷಾಃ ಶ್ವಸೃಗಾಲಪಕ್ಷಿಣಃ ॥ ೯೫ ॥

ಕ್ರೂರ ದೃಷ್ಟಿಯುಳ್ಳ ವಿವಿಧವಾದ, ಭಯಂಕರವಾದ ಪಿಶಾಚ ಸಮೂಹಗಳು ಆ ಜಲವನ್ನು ಕುಡಿದು ಅಲ್ಲಿಯೇ ಸ್ನಾನವನ್ನು ಮಾಡಿದವು. ಸಮಾನವಾದ ಆಹಾರವನ್ನು ಸೇವಿಸುವ ಭಯಂಕರವಾದ ನಾಯಿ-ನರಿ ಮತ್ತು ಪಕ್ಷಿಗಳು ಆ ದೇಹಗಳನ್ನು ನೋಡಿ ಬಹಳ ಸಂತೋಷಗೊಂಡವು.

ತಥಾ ತದಾಯೋಧನಮುಗ್ರದರ್ಶನಂ
ನಿಶಾಮುಖೇ ಪಿತೃಪತಿರಾಷ್ಟ್ರಸನ್ನಿಭಮ್ ।
ನಿರೀಕ್ಷಮಾಣಾಃ ಶನಕೈಮುಹುರ್ನರಾಃ
ಸಮುತ್ಥಿತಾ ರುಂಡಗಣಾಭಿಸಂಕುಲಮ್ ॥ ೯೬ ॥

ಆ ರಣಭೂಮಿಯು ಸಂಧ್ಯಾಕಾಲದಲ್ಲಿ ಯಮನ ರಾಷ್ಟ್ರದಂತೆ ರುದ್ರದರ್ಶನವನ್ನು ಹೊಂದಿದಾಗಿ ಹಿಂದಿರುಗುವ ಯೋಧರು ಭೂತಗಣಗಳಿಂದ ನಿಬಿಡವಾದ ಆ ರಣಭೂಮಿಯನ್ನು ನೋಡುತ್ತಾ ಅಲ್ಲಿಂದ ಎದ್ದು ಹೊರಟರು.

ಅಪೇತವಿಧ್ವಸ್ತಮಹಾರ್ಹಭೂಷಣಂ
ನಿಪಾತಿತಂ ಶಕ್ರಸಮಂ ಮಹಾರಥಮ್ ।
ರಣೇऽಭಿಮನ್ಯುಂ ದದೃಶುಸ್ತದಾ ಜನಾ
ವ್ಯಪೋಢಹವ್ಯಂ ಸದಸೀವ ಪಾವಕಮ್ ॥ ೯೭ ॥

ಮಹಾಬೆಲೆ ಬಾಳುವ ಭೂಷಣಗಳಿಂದ ರಹಿತನಾಗಿ ಅಥವಾ ಅಂತಹ ಭೂಷಣಗಳು ಭಗ್ನವಾಗಿ ನೆಲದ ಮೇಲೆ ಬಿದ್ದ ಇಂದ್ರನಿಗೆ ಸಮನಾದ ಮಹಾರಥನಾದ ಹವಿಸ್ಸಿಲ್ಲದೆ ವೇದಿಕೆಯಲ್ಲಿ ಶಾಂತನಾದ ಅಗ್ನಿಯಂತಿದ್ದ ಅಭಿಮನ್ಯುವನ್ನು ಆ ಜನರು ನೋಡಿದರು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಂ ದ್ರೋಣಪರ್ವಣಿ ಸಪ್ತಚತ್ವಾರಿಂಶೋऽಧ್ಯಾಯಃ ॥

॥ ಅಭಿಮನ್ಯುವಧಪರ್ವಣಿ ಷೋಡಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನಲವತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನಲವತ್ತೆಂಟನೆಯ ಅಧ್ಯಾಯ

ಅಭಿಮನ್ಯುವನ್ನು ಕುರಿತು ಶೋಕಿಸುತ್ತಾ ಯುಧಿಷ್ಠಿರನ ಪ್ರಲಾಪ.

ಸಂಜಯಃ

ತಸ್ಮಿಂಸ್ತು ನಿಹತೇ ವೀರಾಃ ಸೌಭದ್ರೇ ರಥಯೂಥಪೇ ।
ವಿಮುಕ್ತರಥಸನ್ನಾಹಾಃ ಸರ್ವೇ ನಿಕ್ಷಿಪ್ತಕಾರ್ಮುಕಾಃ ॥ ೧ ॥

ಉಪೋಪವಿಷ್ಟಾ ರಾಜಾನಃ ಪರಿವಾರ್ಯ ಯುಧಿಷ್ಠಿರಮ್ ।
ತದೇವ ದುಃಖಂ ಧ್ಯಾಯಂತಃ ಸೌಭದ್ರಗತಮಾನಸಾಃ ॥ ೨ ॥

ಸಂಜಯ– ರಥಸಮೂಹದ ನಾಯಕನಾದ ಅಭಿಮನ್ಯುವು ಹತನಾಗುತ್ತಿರಲು ಎಲ್ಲ ಪಾಂಡವರು ತಮ್ಮ ರಥ ಸನ್ನಾಹಗಳನ್ನು ಕಳಚಿ, ಧನುಸ್ಸುಗಳನ್ನು ಇಟ್ಟು, ಯುಧಿಷ್ಠಿರನನ್ನು ಸುತ್ತುವರಿದು ಅಭಿಮನ್ಯುವಿನಲ್ಲೇ ನೆಟ್ಟ ಮನಸ್ಸುಳ್ಳವರಾಗಿ ಅದೇ ದುಃಖವನ್ನು ಚಿಂತಿಸುತ್ತಾ ಸಮೀಪದಲ್ಲಿ ಕುಳಿತರು.

ತತೋ ಯುಧಿಷ್ಠಿರೋ ರಾಜಾ ವಿಲಲಾಪ ಸುದುಃಖಿತಃ ।
ಅಭಿಮನ್ಯೌ ಹತೇ ವೀರೇ ಭ್ರಾತುಃ ಪುತ್ರೇ ಮಹಾರಥೇ ॥ ೩ ॥

ಆಗ ತನ್ನ ಸಹೋದರನ ಪುತ್ರನಾದ, ಮಹಾರಥನಾದ, ವೀರನಾದ ಅಭಿಮನ್ಯುವು ಹತನಾಗುತ್ತಿರಲು ಬಹಳ ದುಃಖದಿಂದ ಕೂಡಿದ ಯುಧಿಷ್ಠಿರನು ವಿಲಾಪವನ್ನು ಮಾಡಿದನು.

ಯುಧಿಷ್ಠಿರಃ

ಏಷ ಜಿತ್ವಾ ಕೃಪಂ ಶಲ್ಯಂ ರಾಜಾನಂ ಚ ಸುಯೋಧನಮ್ ।
ದ್ರೋಣಂ ದ್ರೌಣಿಂ ಮಹೇಷ್ವಾಸಂ ತಥೈವಾನ್ಯಾನ್ ಮಹಾರಥಾನ್ ॥

ದ್ರೋಣಾನೀಕಮಸಂಬಾಧಂ ಮಮ ಪ್ರಿಯಚಿಕೀರ್ಷಯಾ ।
ಭಿತ್ತ್ವಾ ಶತ್ರುಗಣಾನ್ ವೀರಾನ್ ಏಷ ಶೇತೇ ನಿಪಾತಿತಃ ॥ ೫ ॥

ಯುಧಿಷ್ಠಿರ– ಇವನು ಕೃಪರನ್ನೂ, ಶಲ್ಯನನ್ನೂ, ರಾಜನಾದ ಸುಯೋಧನನನ್ನೂ, ದ್ರೋಣರನ್ನೂ, ಮಹಾಧನುರ್ಧಾರಿಗಳಾದ ಅಶ್ವತ್ಥಾಮರನ್ನೂ, ಹಾಗೆಯೇ ಉಳಿದ

ಮಹಾರಥರನ್ನೂ ಗೆದ್ದು ನನಗೆ ಹಿತವನ್ನು ಉಂಟುಮಾಡಲು ನಿಬಿಡವಲ್ಲದ ದ್ರೋಣರ ಸೈನ್ಯವನ್ನು ಪ್ರವೇಶಿಸಿ ಶತ್ರುಸಮೂಹದ ವೀರರನ್ನು ಕೊಂದು ಹತನಾಗಿ ಮಲಗಿದ್ದಾನೆ.

ಕೃತಾಸ್ತ್ರಾನ್ ಯುದ್ಧಕುಶಲಾನ್ ಮಹೇಷ್ವಾಸಾನ್ ಮಹಾರಥಾನ್ ।
ಕುಲಶೀಲಗುಣೈರ್ಯುಕ್ತಾನ್ ಶೂರಾನ್ ವಿಖ್ಯಾತಪೌರುಷಾನ್ ॥ ೬ ॥

ಅಸ್ತ್ರಜ್ಞರಾದ, ಯುದ್ಧ ಕುಶಲರಾದ, ಕುಲಶೀಲಗುಣಗಳಿಂದ ಯುಕ್ತರಾದ, ಪ್ರಖ್ಯಾತ ಪೌರುಷವುಳ್ಳ, ಮಹಾಧನುರ್ಧಾರಿಗಳೂ, ಮಹಾರಥರೂ, ಶೂರರೂ ಆದ ಶತ್ರುಗಳನ್ನು ಕೊಂದು ಮಲಗಿದ್ದಾನೆ.

ದ್ರೋಣೇನ ವಿಹಿತಂ ವ್ಯೂಹಮಭೇದ್ಯಮಮರೈರಪಿ ।
ಅದೃಷ್ಟಪೂರ್ವಮಸ್ಮಾಭಿಃ ಪದ್ಮಂ ಚಕ್ರಾಯುಧಪ್ರಿಯಃ ।
ಭಿತ್ತ್ವಾನೀಕಂ ಪ್ರವಿಷ್ಟೋಽಸೌ ಗೋಮಧ್ಯಮಿವ ಕೇಸರೀ ॥ ೭ ॥

ದ್ರೋಣರು ರಚಿಸಿದ ವ್ಯೂಹವು ದೇವತೆಗಳಿಗೂ ಅಭೇದ್ಯವಾಗಿದ್ದಿತು. ಅಂತಹ ಪದ್ಮವ್ಯೂಹವನ್ನು ನಾವು ಹಿಂದೆ ನೋಡಿರಲಿಲ್ಲ. ಚಕ್ರಾಯುಧನಾದ ಕೃಷ್ಣನಿಗೆ ಪ್ರಿಯನಾದ ಅಭಿಮನ್ಯುವು ಅಂತಹ ವ್ಯೂಹವನ್ನು ಭೇದಿಸಿ ಗೋವುಗಳ ಮಧ್ಯದಲ್ಲಿ ಸಿಂಹವು ಪ್ರವೇಶಿಸಿದಂತೆ ಶತ್ರುಸಮೂಹವನ್ನು ಪ್ರವೇಶಿಸಿದನು.

ವಿಕ್ರೀಡಿತಂ ರಣೇ ತೇನ ನಿಘ್ನತಾ ವೈ ಪರಾನ್ ವರಾನ್ ॥ ೮ ॥

ಅವನು ಶತ್ರುಗಳ ಸೈನ್ಯದಲ್ಲಿ ಶ್ರೇಷ್ಠರಾದವರನ್ನು ರಣರಂಗದಲ್ಲಿ ಕೊಲ್ಲುತ್ತಾ ಆಟವಾಡಿದನು.

ಯಸ್ಯ ಶೂರಾ ಮಹೇಷ್ವಾಸಾ ಪ್ರತ್ಯನೀಕಗತಾ ರಣೇ ।
ಪ್ರಭಗ್ನಾ ವಿನಿವರ್ತಂತೇ ಕೃತಾಸ್ತ್ರಾ ಯುದ್ಧದುರ್ಮದಾಃ ॥ ೯ ॥

ಯುದ್ಧದುರ್ಮದರೂ, ಅಸ್ತ್ರಜ್ಞರೂ, ಮಹಾಧನುರ್ಧಾರಿಗಳೂ ಆದ ಶತ್ರು ಪಕ್ಷದ ಶೂರರು ಇವನನ್ನು ಎದುರಿಸಿ ಭಗ್ನರಾಗಿ ಹಿಂದಿರುಗುತ್ತಿದ್ದರು.

ಅತ್ಯಂತವೈರೀ ಚಾಸ್ಮಾಕಂ ಯೇನ ದುಃಶಾಸನಃ ಶರೈಃ ।
ಕ್ಷಿಪನ್ನಭಿಮುಖಃ ಸಂಖೇ ನಿಪಂಜ್ಞೋ ವಿಮುಖೀಕೃತಃ ॥ ೧೦ ॥

ನಮಗೆ ಅತ್ಯಂತ ವೈರಿಯಾದ, ಎದುರಿನಿಂದ ಬಾಣಗಳನ್ನು ಪ್ರಯೋಗಿಸುತ್ತಿದ್ದ ದುಶ್ಶಾಸನನು ರಣರಂಗದಲ್ಲಿ ಮೂರ್ಛೆಯನ್ನು ಹೊಂದಿ, ಯುದ್ಧವಿಮುಖನಾಗಿ ಮಾಡಲ್ಪಟ್ಟನು.

ಸ ಕಥಂ ಪ್ರಾಪ್ಯ ದುಷ್ಪ್ರಾಪಂ ದ್ರೋಣಾನೀಕಮಹಾರ್ಣವಮ್ ।
ಶೂರಗ್ರಾಹಾಕುಲಂ ಭೀಮಂ ತೀರ್ತ್ವಾ ಚೈನಮಭೀತವತ್ ।
ಪ್ರಾಪ್ತೋ ದೌಃಶಾಸನಿಂ ಪಾಪಂ ಯಾತೋ ವೈವಸ್ವತಕ್ಷಯಮ್ ॥ ೧೧ ॥

ಅಂತಹ ಇವನು ದಡವೇ ಇಲ್ಲದ ದ್ರೋಣರ ಸೇನೆಯೆಂಬ ಶೂರರಾದ ಮೊಸಳೆಗಳಿಂದ ಆವೃತವಾದ, ಭಯಂಕರವಾದ ಮಹಾಸಾಗರವನ್ನು ನಿರ್ಭಯವಾಗಿ ದಾಟಿ, ಪಾಪಿಯಾದ ದುಶ್ಶಾಸನನ ಪುತ್ರನನ್ನು ಸಮೀಪಿಸಿ ಯಮಲೋಕಕ್ಕೆ ಹೋಗಿದ್ದಾನೆ.

ಕಿಂಸ್ವಿದ್ ವಕ್ಷ್ಯಾಮಿ ಕೌಂತೇಯಂ ಸೌಭದ್ರೇ ನಿಹತೇऽರ್ಜುನಮ್ ॥೧೨॥

ಕಿಂ ವಾ ಸುಭದ್ರಾಂ ವಕ್ಷ್ಯಾಮಿ ಪ್ರಿಯಂ ಪುತ್ರಮಪಶ್ಯತೀಮ್ ।
ಹತವತ್ಸಾಂ ಯಥಾ ಧೇನುಂ ತದ್ದರ್ಶನಕೃತೋನ್ಮುಖೀಮ್ ॥ ೧೩ ॥

ಅಭಿಮನ್ಯುವು ಹತನಾಗುತ್ತಿರಲು ಅರ್ಜುನನಿಗೆ ನಾನು ಏನು ಹೇಳಲಿ? ತನ್ನ ಪ್ರಿಯ ಪುತ್ರನನ್ನು ಕಾಣದೆ ಅವನನ್ನು ನೋಡಲು ಉತ್ಕಟವಾದ ಆಸೆಯುಳ್ಳ ಕರುವನ್ನು ಕಳೆದುಕೊಂಡ ಹಸುವಿನಂತಿರುವ ಸುಭದ್ರೆಗೆ ಏನು ಹೇಳಲಿ?

ಕಿಂಸ್ವಿದ್ ವಕ್ಷ್ಯಾಮ್ಯಪೇತಾರ್ಥಮಕ್ಲಿಷ್ಟಮಸಮಂಜಸಮ್ ।
ತಾವುಭೌ ಪ್ರತಿವಕ್ಷ್ಯಾಮಿ ಪ್ರಿಯಂ ಪುತ್ರಮಪಶ್ಯತೌ ॥ ೧೪ ॥

ತಮ್ಮ ಪ್ರಿಯಪುತ್ರನನ್ನು ಕಾಣದ ಅವರಿಬ್ಬರನ್ನು ಕುರಿತು ನಾನು ನಿರರ್ಥಕವಾದ, ಅಸಂಗತವಾದ, ಕ್ಲೇಶದಾಯಕವಲ್ಲದ ಎಂತಹ ಮಾತುಗಳನ್ನು ಆಡಲಿ?

ಅಹಂ ಹ್ಯೇವಂ ಸುಭದ್ರಾಯಾಃ ಕೇಶವಾರ್ಜುನಯೋರಪಿ ।
ಪ್ರಿಯಕಾಮೋ ಜಯಾಕಾಂಕ್ಷೀ ಕೃತವಾನಿದಮಪ್ರಿಯಮ್ ॥ ೧೫ ॥

ನಾನೇ ಸುಭದ್ರೆಗೂ, ಕೇಶವಾರ್ಜುನರಿಗೂ ಪ್ರಿಯವನ್ನು ಮಾಡಲು ಬಯಸಿ, ಜಯವನ್ನು ಆಶಿಸಿ ಇಂತಹ ಅಪ್ರಿಯವಾದ ಕಾರ್ಯವನ್ನು ಮಾಡಿದೆನು.

ನ ಲುಬ್ಧೋ ಬುದ್ಧ್ಯತೇ ದೋಷಾನ್ ಮೋಹಾಲ್ಲೋಭಾತ್ ಪ್ರವರ್ತತೇ।
ಮಧು ಲಿಪ್ಸುರ್ಹಿ ನಾದ್ರಾಕ್ಷಂ ಪ್ರಪಾತಮಿದಮೀದೃಶಮ್ ॥ ೧೬ ॥

ಲೋಭಿಯಾದವನಿಗೆ ದೋಷಗಳು ಕಾಣಿಸುವುದಿಲ್ಲ. ಮೋಹದಿಂದಲೂ, ಲೋಭದಿಂದಲೂ ಪ್ರವೃತ್ತನಾಗುತ್ತಾನೆ. ಜೇನುತುಪ್ಪವನ್ನು ಪಡೆಯಲು ಬಯಸಿದ ನಾನು ಇಂತಹ ಪ್ರಪಾತವು ಇರುವುದನ್ನು ನೋಡಲಿಲ್ಲ.

ಯೋಽಸೌ ಭೋಜ್ಯೇ ಪುರಸ್ಕಾರ್ಯೋ ಯಾನೇಷು ವಸನೇಷು ಚ ।
ಭೂಷಣೇಷು ಚ ಸೋಽಸ್ಮಾಭಿರ್ಬಾಲೋ ಯುಧಿ ಪುರಸ್ಕೃತಃ ॥ ೧೭ ॥

ಯಾವ ಬಾಲಕನಾದ ಇವನನ್ನು ಭಕ್ಷ್ಯ-ಭೋಜ್ಯಗಳಲ್ಲಿ, ಯಾನಗಳಲ್ಲಿ, ವಸ್ತ್ರಗಳಲ್ಲಿ, ಆಭರಣಗಳಲ್ಲಿ ನಾವು ಪುರಸ್ಕರಿಸಬೇಕಾಗಿದ್ದಿತೋ ಅಂತಹ ಬಾಲನಾದ ಅವನನ್ನು ನಾವು ಯುದ್ಧದಲ್ಲಿ ಪುರಸ್ಕರಿಸಿದೆವು.

ಕಥಂ ಹಿ ಬಾಲಸ್ತರುಣೋ ಯುದ್ಧಾನಾಮವಿಶಾರದಃ ।
ಸದಶ್ವ ಇವ ಸಂಬಾಧೇ ವಿಷಮೇ ಕ್ಷೇಮಮರ್ಹತಿ ॥ ೧೮ ॥

ಬಾಲಕನೂ, ತರುಣನೂ, ಯುದ್ಧವಿಶಾರದನಲ್ಲದವನೂ ಆದ ಅವನು ಘೋರವಾದ ಪ್ರಸಂಗದಲ್ಲಿ ಸಿಲುಕಿದ ಒಳ್ಳೆಯ ಅಶ್ವದಂತೆ ಹೇಗೆ ಕ್ಷೇಮವನ್ನು ಹೊಂದುವನು?

ನೋ ಚೇದ್ಧಿ ವಯಮಪ್ಯೇವಂ ಮಹೀಮನುಶಯೀಮಹಿ ।
ಬೀಭತ್ಸೋಃ ಕೋಪದೀಪ್ತಸ್ಯ ದಗ್ಧಾಃ ಕೃಪಣಚಕ್ಷುಷಾ ॥ ೧೯ ॥

ಇಲ್ಲದಿದ್ದರೆ ಅರ್ಜುನನ ಕೋಪದೀಪ್ತವಾದ, ಕ್ರೂರವಾದ ದೃಷ್ಟಿಯಿಂದ ದಗ್ಧರಾಗಿ ನಾವೂ ಹೀಗೆ ಭೂಮಿಯ ಮೇಲೆ ಮಲಗುತ್ತೇವೆ.

ಅಲುಬ್ಧೋ ಮತಿಮಾನ್ ಶ್ರೀಮಾನ್ ಕ್ಷಮಾವಾನ್ ರೂಪವಾನ್ ಬಲೀ ।
ವಪುಷ್ಮಾನ್ ನಯಕೃದ್ ವೀರಃ ಪ್ರಿಯಃ ಸತ್ಯಪರಾಕ್ರಮಃ ॥ ೨೦ ॥

ಅರ್ಜುನನು ಲೋಭರಹಿತನಾದವನು, ಮೇಧಾವಿ, ಕಾಂತಿಯುಕ್ತನಾದವನು, ಕ್ಷಮೆಯನ್ನೂ-ರೂಪವನ್ನೂ-ಬಲವನ್ನೂ ಹೊಂದಿದವನು. ಒಳ್ಳೆಯ ದೇಹವನ್ನು ಹೊಂದಿ

ನಮಗೆ ಅತ್ಯಂತ ವೈರಿಯಾದ, ಎದುರಿನಿಂದ ಬಾಣಗಳನ್ನು ಪ್ರಯೋಗಿಸುತ್ತಿದ್ದ ದುಶ್ಶಾಸನನು ರಣರಂಗದಲ್ಲಿ ಮೂರ್ಛೆಯನ್ನು ಹೊಂದಿ, ಯುದ್ಧವಿಮುಖನಾಗಿ ಮಾಡಲ್ಪಟ್ಟನು.

ಸ ಕಥಂ ಪ್ರಾಪ್ಯ ದುಷ್ಪ್ರಾಪಂ ದ್ರೋಣಾನೀಕಮಹಾರ್ಣವಮ್ ।
ಶೂರಗ್ರಾಹಾಕುಲಂ ಭೀಮಂ ತೀರ್ತ್ವಾ ಚೈನಮಭೀತವತ್ ।
ಪ್ರಾಪ್ತೋ ದೌಃಶಾಸನಿಂ ಪಾಪಂ ಯಾತೋ ವೈವಸ್ವತಕ್ಷಯಮ್ ॥ ೧೧ ॥

ಅಂತಹ ಇವನು ದಡವೇ ಇಲ್ಲದ ದ್ರೋಣರ ಸೇನೆಯೆಂಬ ಶೂರರಾದ ಮೊಸಳೆಗಳಿಂದ ಆವೃತವಾದ, ಭಯಂಕರವಾದ ಮಹಾಸಾಗರವನ್ನು ನಿರ್ಭಯವಾಗಿ ದಾಟಿ, ಪಾಪಿಯಾದ ದುಶ್ಶಾಸನನ ಪುತ್ರನನ್ನು ಸಮೀಪಿಸಿ ಯಮಲೋಕಕ್ಕೆ ಹೋಗಿದ್ದಾನೆ.

ಕಿಂಸ್ವಿದ್ ವಕ್ಷ್ಯಾಮಿ ಕೌಂತೇಯಂ ಸೌಭದ್ರೇ ನಿಹತೇऽರ್ಜುನಮ್ ॥೧೨॥

ಕಿಂ ವಾ ಸುಭದ್ರಾಂ ವಕ್ಷ್ಯಾಮಿ ಪ್ರಿಯಂ ಪುತ್ರಮಪಶ್ಯತೀಮ್ ।
ಹತವತ್ಸಾಂ ಯಥಾ ಧೇನುಂ ತದ್ದರ್ಶನಕೃತೋನ್ಮುಖೀಮ್ ॥ ೧೩ ॥

ಅಭಿಮನ್ಯುವು ಹತನಾಗುತ್ತಿರಲು ಅರ್ಜುನನಿಗೆ ನಾನು ಏನು ಹೇಳಲಿ? ತನ್ನ ಪ್ರಿಯ ಪುತ್ರನನ್ನು ಕಾಣದೆ ಅವನನ್ನು ನೋಡಲು ಉತ್ಕಟವಾದ ಆಸೆಯುಳ್ಳ ಕರುವನ್ನು ಕಳೆದುಕೊಂಡ ಹಸುವಿನಂತಿರುವ ಸುಭದ್ರೆಗೆ ಏನು ಹೇಳಲಿ?

ಕಿಂಸ್ವಿದ್ ವಕ್ಷ್ಯಾಮ್ಯಪೇತಾರ್ಥಮಕ್ಲಿಷ್ಟಮಸಮಂಜಸಮ್ ।
ತಾವುಭೌ ಪ್ರತಿವಕ್ಷ್ಯಾಮಿ ಪ್ರಿಯಂ ಪುತ್ರಮಪಶ್ಯತೌ ॥ ೧೪ ॥

ತಮ್ಮ ಪ್ರಿಯಪುತ್ರನನ್ನು ಕಾಣದ ಅವರಿಬ್ಬರನ್ನು ಕುರಿತು ನಾನು ನಿರರ್ಥಕವಾದ, ಅಸಂಗತವಾದ, ಕ್ಲೇಶದಾಯಕವಲ್ಲದ ಎಂತಹ ಮಾತುಗಳನ್ನು ಆಡಲಿ?

ಅಹಂ ಹ್ಯೇವಂ ಸುಭದ್ರಾಯಾಃ ಕೇಶವಾರ್ಜುನಯೋರಪಿ ।
ಪ್ರಿಯಕಾಮೋ ಜಯಾಕಾಂಕ್ಷೀ ಕೃತವಾನಿದಮಪ್ರಿಯಮ್ ॥ ೧೫ ॥

ನಾನೇ ಸುಭದ್ರೆಗೂ, ಕೇಶವಾರ್ಜುನರಿಗೂ ಪ್ರಿಯವನ್ನು ಮಾಡಲು ಬಯಸಿ, ಜಯವನ್ನು ಆಶಿಸಿ ಇಂತಹ ಅಪ್ರಿಯವಾದ ಕಾರ್ಯವನ್ನು ಮಾಡಿದೆನು.

ನ ಲುಬ್ಧೋ ಬುದ್ಧ್ಯತೇ ದೋಷಾನ್ ಮೋಹಾಲ್ಲೋಭಾತ್ ಪ್ರವರ್ತತೇ।
ಮಧು ಲಿಪ್ಸುರ್ಹಿ ನಾದ್ರಾಕ್ಷಂ ಪ್ರಪಾತಮಿದಮೀದೃಶಮ್ ॥ ೧೬ ॥

ಲೋಭಿಯಾದವನಿಗೆ ದೋಷಗಳು ಕಾಣಿಸುವುದಿಲ್ಲ. ಮೋಹದಿಂದಲೂ, ಲೋಭದಿಂದಲೂ ಪ್ರವೃತ್ತನಾಗುತ್ತಾನೆ. ಜೇನುತುಪ್ಪವನ್ನು ಪಡೆಯಲು ಬಯಸಿದ ನಾನು ಇಂತಹ ಪ್ರಪಾತವು ಇರುವುದನ್ನು ನೋಡಲಿಲ್ಲ.

ಯೋಽಸೌ ಭೋಜ್ಯೇ ಪುರಸ್ಕಾರ್ಯೋ ಯಾನೇಷು ವಸನೇಷು ಚ ।
ಭೂಷಣೇಷು ಚ ಸೋಽಸ್ಮಾಭಿರ್ಬಾಲೋ ಯುಧಿ ಪುರಸ್ಕೃತಃ ॥ ೧೭ ॥

ಯಾವ ಬಾಲಕನಾದ ಇವನನ್ನು ಭಕ್ಷ್ಯ-ಭೋಜ್ಯಗಳಲ್ಲಿ, ಯಾನಗಳಲ್ಲಿ, ವಸ್ತ್ರಗಳಲ್ಲಿ, ಆಭರಣಗಳಲ್ಲಿ ನಾವು ಪುರಸ್ಕರಿಸಬೇಕಾಗಿದ್ದಿತೋ ಅಂತಹ ಬಾಲನಾದ ಅವನನ್ನು ನಾವು ಯುದ್ಧದಲ್ಲಿ ಪುರಸ್ಕರಿಸಿದೆವು.

ಕಥಂ ಹಿ ಬಾಲಸ್ತರುಣೋ ಯುದ್ಧಾನಾಮವಿಶಾರದಃ ।
ಸದಶ್ವ ಇವ ಸಂಬಾಧೇ ವಿಷಮೇ ಕ್ಷೇಮಮರ್ಹತಿ ॥ ೧೮ ॥

ಬಾಲಕನೂ, ತರುಣನೂ, ಯುದ್ಧವಿಶಾರದನಲ್ಲದವನೂ ಆದ ಅವನು ಘೋರವಾದ ಪ್ರಸಂಗದಲ್ಲಿ ಸಿಲುಕಿದ ಒಳ್ಳೆಯ ಅಶ್ವದಂತೆ ಹೇಗೆ ಕ್ಷೇಮವನ್ನು ಹೊಂದುವನು?

ನೋ ಚೇದ್ಧಿ ವಯಮಪ್ಯೇವಂ ಮಹೀಮನುಶಯೀಮಹಿ ।
ಬೀಭತ್ಸೋಃ ಕೋಪದೀಪ್ತಸ್ಯ ದಗ್ಧಾಃ ಕೃಪಣಚಕ್ಷುಷಾ ॥ ೧೯ ॥

ಇಲ್ಲದಿದ್ದರೆ ಅರ್ಜುನನ ಕೋಪದೀಪ್ತವಾದ, ಕ್ರೂರವಾದ ದೃಷ್ಟಿಯಿಂದ ದಗ್ಧರಾಗಿ ನಾವೂ ಹೀಗೆ ಭೂಮಿಯ ಮೇಲೆ ಮಲಗುತ್ತೇವೆ.

ಅಲುಬ್ಧೋ ಮತಿಮಾನ್ ಶ್ರೀಮಾನ್ ಕ್ಷಮಾವಾನ್ ರೂಪವಾನ್ ಬಲೀ ।
ವಪುಷ್ಮಾನ್ ನಯಕೃದ್ ವೀರಃ ಪ್ರಿಯಃ ಸತ್ಯಪರಾಕ್ರಮಃ ॥ ೨೦ ॥

ಅರ್ಜುನನು ಲೋಭರಹಿತನಾದವನು, ಮೇಧಾವಿ, ಕಾಂತಿಯುಕ್ತನಾದವನು, ಕ್ಷಮೆಯನ್ನೂ-ರೂಪವನ್ನೂ-ಬಲವನ್ನೂ ಹೊಂದಿದವನು. ಒಳ್ಳೆಯ ದೇಹವನ್ನು ಹೊಂದಿ

ರಾಜನೀತಿಯನ್ನು ತಿಳಿದ ವೀರ. ಸತ್ಯಪರಾಕ್ರಮಿಯಾದ ಅವನು ನಮಗೆ ಪ್ರಿಯನಾದವನು.

ಶ್ಲಾಘಂತೇ ಯಸ್ಯ ವಿಬುಧಾಃ ಕರ್ಮಭಿರ್ಭೀಮಕರ್ಮಣಃ ।
ನಿವಾತಕವಚಾನ್ ಜಘ್ನೇ ಕಾಲಕೇಯಾಂಶ್ಚ ವೀರ್ಯವಾನ್ ॥ ೨೧ ॥

ಭಯಂಕರ ಕಾರ್ಯವನ್ನು ಮಾಡುವ ಅವನ ಕಾರ್ಯಗಳನ್ನು ದೇವತೆಗಳೂ ಹೊಗಳುತ್ತಾರೆ. ಪರಾಕ್ರಮಶಾಲಿಯಾದ ಅವನು ನಿವಾತ-ಕವಚರನ್ನೂ ಮತ್ತು ಕಾಲಕೇಯರನ್ನೂ ಸಂಹರಿಸಿದನು.

ಮಹೇಂದ್ರಶತ್ರವೋ ಯೇನ ಹಿರಣ್ಯಪುರವಾಸಿನಃ ।
ಅಕ್ಷ್ಣೋರ್ನಿಮೇಷಮಾತ್ರೇಣ ಪೌಲೋಮಾಃ ಸಗಣಾ ಹತಾಃ ॥ ೨೨ ॥

ಹಿರಣ್ಯಪುರವಾಸಿಗಳಾದ, ಮಹೇಂದ್ರಶತ್ರುಗಳಾದ ಪೌಲೋಮರು ತಮ್ಮ ಗಣಗಳ ಸಹಿತರಾಗಿ ಕಣ್ಣನ್ನು ಮುಚ್ಚಿ ಬಿಡುವಷ್ಟು ಶೀಘ್ರ ಕಾಲದಲ್ಲಿ ಅವನಿಂದ ಹತರಾದರು.

ಪರೇಭ್ಯೋ ಹ್ಯಭಯಾರ್ಥಿಭ್ಯೋ ಯೋ ದದ್ಯಾದಭಯಂ ವಿಭುಃ ।
ತಸ್ಯಾಸ್ಮಾಭಿರ್ನ ಚ ಕೃತಂ ತ್ರಾಣಮದ್ಯಾತ್ಮನೋ ಭಯಾತ್ ॥ ೨೩ ॥

ಯಾವ ಪ್ರಭುವಾದ ಅವನು ಅಭಯವನ್ನು ಯಾಚಿಸುವ ಇನ್ನೊಬ್ಬರಿಗೆ ಅಭಯವನ್ನು ಕೊಡುತ್ತಾನೆಯೋ, ಅಂತಹ ಅವನ ಪುತ್ರನ ರಕ್ಷಣೆಯನ್ನು ಭಯದಿಂದ ಕೂಡಿದ ನಾವು ಈ ದಿನ ಮಾಡಲಿಲ್ಲ.

ಭಯಂ ತು ಸುಮಹತ್ ಪ್ರಾಪ್ತಂ ಧಾರ್ತರಾಷ್ಟ್ರಬಲಂ ಮಹತ್ ।
ಪಾರ್ಥಃ ಪುತ್ರವಧಾತ್ ಕ್ರುದ್ಧಃ ಕೌರವಾನ್ ಸಂಹರಿಷ್ಯತಿ ॥ ೨೪ ॥

ದುರ್ಯೋಧನನ ದೊಡ್ಡ ಸೇನೆಗೆ ದೊಡ್ಡ ಭಯವು ಪ್ರಾಪ್ತವಾಗಿದೆ. ಪುತ್ರನ ವಧೆಯಿಂದ ಕೋಪಗೊಂಡ ಅರ್ಜುನನು ಶತ್ರುಗಳನ್ನು ನಾಶಗೊಳಿಸುವನು.

ಕ್ಷುದ್ರಃ ಕ್ಷುದ್ರಸಹಾಯಶ್ಚ ಸ್ವಪಕ್ಷಕ್ಷಯಮಾತುರಃ ।
ವ್ಯಕ್ತಂ ದುರ್ಯೋಧನೋ ದೃಷ್ಟ್ವಾ ಶೋಚನ್ ಹಾಸ್ಯತಿ ಜೀವಿತಮ್ ॥

ಕ್ಷುದ್ರನೂ, ಕ್ಷುದ್ರರ ಸಹಾಯವುಳ್ಳವನೂ, ಆತುರನೂ ಆದ ದುರ್ಯೋಧನನು ಈ ದಿನ ತನ್ನ ಪಕ್ಷದ ವಿನಾಶವನ್ನು ಸ್ಪಷ್ಟವಾಗಿ ನೋಡಿ ಶೋಕಪಡುತ್ತಾ ಜೀವಿತವನ್ನು ತೊರೆಯುವನು.

ನ ಮೇ ಜಯಃ ಪ್ರೀತಿಕರೋ ನ ರಾಜ್ಯಂ
ನ ಚಾಮರತ್ವಂ ನ ಸುರೈಃ ಸಲೋಕತಾ ।
ಇಮಂ ಸಮೀಕ್ಷ್ಯಾಪ್ರತಿವಾರ್ಯಪೌರುಷಂ
ನಿಪಾತಿತಂ ದೇವವರಾತ್ಮಜಾತ್ಮಜಮ್ ॥ ೨೬ ॥

ಅಪ್ರತಿಮ ಪೌರುಷವುಳ್ಳ ಈ ದೇವರಾಜನಾದ ಇಂದ್ರನ ಪುತ್ರನ ಪುತ್ರನಾದ ಅಭಿಮನ್ಯುವು ಬಿದ್ದಿರುವುದನ್ನು ನೋಡುವ ನನಗೆ ಯುದ್ಧದಲ್ಲಿ ಜಯವು ಸಂತೋಷವನ್ನುಂಟು ಮಾಡುವುದಿಲ್ಲ. ರಾಜ್ಯವಾಗಲೀ, ದೇವತ್ವವೇ ಆಗಲೀ, ದೇವತೆಗಳ ಸಾಲೋಕ್ಯವಾಗಲೀ ಸಂತೋಷವನ್ನು ಉಂಟು ಮಾಡುವುದಿಲ್ಲ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಅಷ್ಟಚತ್ವಾರಿಂಶೋऽಧ್ಯಾಯಃ ॥

॥ ಅಭಿಮನ್ಯುವಧಪರ್ವಣಿ ಸಪ್ತದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನಲವತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನಲವತ್ತೊಂಬತ್ತನೆಯ ಅಧ್ಯಾಯ

ಯುಧಿಷ್ಠಿರನನ್ನು ಸಮಾಧಾನ ಪಡಿಸಲು ವ್ಯಾಸರ ಆಗಮನ.
ಅಕಂಪನೋಪಾಖ್ಯಾನ ಕಥನ ಪ್ರಾರಂಭ.

ಸಂಜಯಃ

ಏವಂ ವಿಲಪಮಾನೇ ತು ಕುಂತೀಪುತ್ರೇ ಯುಧಿಷ್ಠಿರೇ ।
ಕೃಷ್ಣದ್ವೈಪಾಯನಸ್ತತ್ರ ಪ್ರಾದುರ್ಭೂತೋ ಮಹಾನೃಷಿಃ ॥ ೧ ॥

ಸಂಜಯ– ಕುಂತೀಪುತ್ರನಾದ ಯುಧಿಷ್ಠಿರನು ಹೀಗೆ ವಿಲಾಪವನ್ನು ಮಾಡುತ್ತಿರಲು ಮಹರ್ಷಿಗಳಾದ ಕೃಷ್ಣದ್ವೈಪಾಯನರು ಅಲ್ಲಿ ಪ್ರತ್ಯಕ್ಷರಾದರು.

ಅಥ ದೃಷ್ಟ್ವಾ ಮಹಾತ್ಮಾನಂ ಪಾಂಡುಪುತ್ರೋ ಯುಧಿಷ್ಠಿರಃ ।
ಮುಕ್ತಾಸನೋ ದೀನಮನಾಃ ಪೂಜಾಂ ಚಕ್ರೇ ಮಹಾಮನಾಃ ॥ ೨ ॥

ಪಾಂಡುಪುತ್ರನಾದ ಯುಧಿಷ್ಠಿರನು ಮಹಾತ್ಮರಾದ ಅವನನ್ನು ನೋಡಿ, ದೀನ ಮನಸ್ಸಿನಿಂದ ತನ್ನ ಆಸನದಿಂದ ಎದ್ದು, ಒಳ್ಳೆಯ ಮನಸ್ಸಿನಿಂದ ಅವರ ಪೂಜೆಯನ್ನು ಮಾಡಿದನು.

ತಂ ಸಮರ್ಚ್ಯ ಯಥಾನ್ಯಾಯಮುಪಾತಿಷ್ಠದ್ ಯುಧಿಷ್ಠಿರಃ ।
ಅಬ್ರವೀಚ್ಛೋಕಸಂತಪ್ತೋ ಭ್ರಾತುಃ ಪುತ್ರವಧೇನ ಸಃ ॥ ೩ ॥

ಶಾಸ್ತ್ರೋಕ್ತವಾಗಿ ಪೂಜಿಸಿ, ಅವರ ಸಮೀಪದಲ್ಲಿ ಕುಳಿತು, ಯುಧಿಷ್ಠಿರನು ತಮ್ಮನ ಪುತ್ರನ ವಧೆಯಿಂದಾಗಿ ಶೋಕಸಂತಪ್ತನಾಗಿ ಮಾತನಾಡಿದನು.

ಯುಧಿಷ್ಠಿರಃ

ಅಧರ್ಮಯುದ್ಧೇ ಬಹುಭಿಃ ಪರಿವಾರ್ಯ ಮಹಾರಥೈಃ ।
ಯುದ್ಧ್ಯಮಾನೋ ಮಹೇಷ್ವಾಸೈಃ ಸೌಭದ್ರೋ ನಿಹತೋ ರಣೇ ॥ ೪ ॥

ಯುಧಿಷ್ಠಿರ– ಅಧರ್ಮ ಯುದ್ಧದಲ್ಲಿ ಅನೇಕ ಮಹಾರಥರಿಂದ ಮತ್ತು ಮಹಾಧನುರ್ಧಾರಿಗಳಿಂದ ಸುತ್ತುವರಿಯಲ್ಪಟ್ಟು ಅಭಿಮನ್ಯುವು ಯುದ್ಧವನ್ನು ಮಾಡುತ್ತಾ ರಣರಂಗದಲ್ಲಿ ಹತನಾದನು.

ಬಾಲಶ್ಚಾಬಾಲಬುದ್ಧಿಶ್ಚ ವೀರಶ್ಚ ಪರವೀರಹಾ ।
ಅನುಪಾಯೇನ ಸಂಗ್ರಾಮೇ ಯುದ್ಧ್ಯಮಾನೋ ವಿನಾಶಿತಃ ॥ ೫ ॥

ಬಾಲನಾದರೂ ಅಗಾಧ ಬುದ್ಧಿಯುಳ್ಳವನು ಮತ್ತು ವೀರನಾಗಿ ಪರವೀರರನ್ನು ಸಂಹರಿಸುವವನಾದ ಅವನು ರಣರಂಗದಲ್ಲಿ ಉಪಾಯವಿಲ್ಲದೆ ಯುದ್ಧವನ್ನು ಮಾಡುತ್ತಾ ವಿನಾಶವನ್ನು ಹೊಂದಿದನು.

ಮಯಾಽಪಿ ಚೋಕ್ತಃ ಸಂಗ್ರಾಮೇ ದ್ವಾರಂ ಸಂಜನಯಸ್ವ ನಃ ।
ಪ್ರವಿಷ್ಟೇ ಚ ಪರಾಂಸ್ತಸ್ಮಿನ್ ಸೈಂಧವೇನ ಸ್ಮ ವಾರಿತಾಃ ॥ ೬ ॥

ನಾನೂ ಸಹ ಅವನಿಗೆ ನಮಗೆ ಒಂದು ದ್ವಾರವನ್ನು ಮಾಡಿಕೊಡು ಎಂದು ಹೇಳಿದೆ. ಅವನು ಶತ್ರುಸೈನ್ಯವನ್ನು ಪ್ರವೇಶಿಸಿದ ಮೇಲೆ ಸೈಂಧವನು ನಮ್ಮನ್ನು ತಡೆದನು.

ನನು ನಾಮ ಸಮಂ ಯುದ್ಧಮೇಷ್ಟವ್ಯಂ ಯುದ್ಧಜೀವಿನಾ ।
ಇದಂ ಚ ವಿಷಮಂ ಯುದ್ಧಮೀದೃಶಂ ಬಹುಭಿಃ ಕೃತಮ್ ॥ ೭ ॥

ಯುದ್ಧದಿಂದ ಜೀವಿಸುವವನು ಸಮವಾದ ಯುದ್ಧವನ್ನು ಬಯಸಬೇಕಷ್ಟೆ? ಅನೇಕರಿಂದ ಮಾಡಲ್ಪಟ್ಟ ಇಂತಹ ಈ ಯುದ್ಧವು ವಿಷಮವಾದುದು.

ತೇನಾಸ್ಮಿ ಭೃಶಸಂತಪ್ತಃ ಶೋಕಬಾಷ್ಪಸಮಾಕುಲಃ ।
ಶಮಂ ನೈವಾಧಿಗಚ್ಛಾಮಿ ಚಿಂತಯಾನಃ ಪುನಃಪುನಃ ॥ ೮ ॥

ಆದ್ದರಿಂದ ನಾನು ಶೋಕಬಾಷ್ಪಗಳಿಂದ ಕೂಡಿದವನಾಗಿ ಬಹಳ ಸಂತಾಪವನ್ನು ಹೊಂದುತ್ತಿದ್ದೇನೆ. ಪುನಃ ಪುನಃ ಚಿಂತಿಸಿದರೂ ಸಮಾಧಾನವು ಉಂಟಾಗುತ್ತಿಲ್ಲ.

ಸಂಜಯಃ

ತಂ ತಥಾ ವಿಲಪಂತಂ ವೈ ಶೋಕೋಪಹತಚೇತಸಮ್ ।
ಉವಾಚ ಭಗವಾನ್ ವ್ಯಾಸೋ ಯುಧಿಷ್ಠಿರಮಿದಂ ವಚಃ ॥ ೯ ॥

ಸಂಜಯ– ಶೋಕದಿಂದ ಪೀಡಿತವಾದ ಮನಸ್ಸಿನಿಂದ ಆ ರೀತಿಯಲ್ಲಿ ವಿಲಾಪವನ್ನು ಮಾಡುತ್ತಿದ್ದ ಯುಧಿಷ್ಠಿರನನ್ನು ಕುರಿತು ಪೂಜ್ಯರಾದ ವ್ಯಾಸರು ಈ ಮಾತುಗಳನ್ನು ಆಡಿದರು.

ಯುಧಿಷ್ಠಿರ ಮಹಾಪ್ರಾಜ್ಞ ಸರ್ವಶಾಸ್ತ್ರವಿಶಾರದ ।
ವ್ಯಸನೇಷು ನ ಮುಹ್ಯಂತಿ ತ್ವಾದೃಶಾಃ ಪುರುಷರ್ಷಭ ॥ ೧೦ ॥

ಮಹಾಪ್ರಾಜ್ಞನಾದ, ಸರ್ವಶಾಸ್ತ್ರ ವಿಶಾರದನಾದ, ಪುರುಷಶ್ರೇಷ್ಠನಾದ ಯುಧಿಷ್ಠಿರನೇ, ನಿನ್ನಂತಹವರು ಕಷ್ಟ ಒದಗಿದಾಗ ಮೋಹಕ್ಕೆ ಒಳಗಾಗಬಾರದು.

ಸ್ವರ್ಗಮೇಷ ಗತಃ ಶೂರಃ ಶತ್ರೂನ್ ಹತ್ವಾ ರಣೇ ಬಹೂನ್ ।
ಅಬಾಲಸದೃಶಂ ಕರ್ಮ ಕೃತ್ವಾ ವೈ ಪುರುಷರ್ಷಭಃ ॥ ೧೧ ॥

ಪುರುಷಶ್ರೇಷ್ಠನೂ, ಶೂರನೂ ಆದ ಅವನು ಬಾಲಕರಿಗೆ ಮೀರಿದ ಕರ್ಮಗಳನ್ನು ಮಾಡಿ, ರಣರಂಗದಲ್ಲಿ ಅನೇಕ ಶತ್ರುಗಳನ್ನು ಕೊಂದು ಸ್ವರ್ಗವನ್ನು ಸೇರಿದ್ದಾನೆ.

ಅನತಿಕ್ರಮಣೀಯೋ ಹಿ ವಿಧಿರೇಷ ಸನಾತನಃ ।
ದೇವದಾನವಗಂಧರ್ವಾ ಮೃತ್ಯುಂ ಗಚ್ಛಂತಿ ಭಾರತ ॥ ೧೨ ॥

ಎಲೈ ಭಾರತನೇ, ಇದು ಅನಾದಿಕಾಲದಿಂದಲೂ ನಡೆದುಕೊಂಡು ಬಂದ, ಮೀರಲು ಸಾಧ್ಯವಿಲ್ಲದ ಒಂದು ವಿಧಿ. ದೇವ-ದಾನವ-ಗಂಧರ್ವರೂ ಮೃತ್ಯುವನ್ನು ಹೊಂದುತ್ತಾರೆ.

ಯುಧಿಷ್ಠಿರಃ

ಯ ಇಮೇ ಪೃಥಿವೀಪಾಲಾಃ ಶೇರತೇ ಪೃಥಿವೀತಳೇ ।
ನಿಹತಾಃ ಪೃತನಾಮಧ್ಯೇ ಮೃತಸಂಜ್ಞಾ ಮಹಾಬಲಾಃ ॥ ೧೩ ॥

ದೃಢಂ ನಾಗಬಲಾಶ್ಚಾನ್ಯೇ ಸರ್ವೇ ಯುದ್ಧವಿಶಾರದಾಃ ।
ತ ಏತೇ ನಿಹತಾಃ ಸಂಖೇ ತುಲ್ಯರೂಪೈರ್ನರೈರ್ನರಾಃ ॥ ೧೪ ॥

ಯುಧಿಷ್ಠಿರ– ಭೂತಳದಲ್ಲಿ ಯಾವ ಈ ಮಹಾಬಲರಾದ ರಾಜರು ರಣರಂಗದ ಮಧ್ಯದಲ್ಲಿ ಮೃತರು ಎಂಬ ಸಂಜ್ಞೆಯನ್ನು ಪಡೆದು ಮಲಗಿದ್ದಾರೆಯೋ ಅವರಲ್ಲಿ ಕೆಲವರು ಆನೆಯ ಬಲವುಳ್ಳವರು, ಉಳಿದವರೆಲ್ಲರೂ ಯುದ್ಧವಿಶಾರದರಾದವರು. ಅಂತಹ ಇವರು ರಣರಂಗದಲ್ಲಿ ಸಮಾನ ರೂಪವುಳ್ಳ ನರರಿಂದ ಹತರಾಗಿದ್ದಾರೆ.

ಏಕೈಕಶೋ ಭೀಮಬಲಾ ನಾಗಾಯುತಶತೋಪಮಾಃ ।
ಇಷುವೇಗಬಲಾಶ್ಚಾನ್ಯೇ ವಾಯುವೇಗಬಲಾಸ್ತಥಾ ।
ನೈಷಾಂ ಪಶ್ಯಾಮಿ ಹಂತಾರಂ ಪ್ರಾಣಿನಾಂ ಸಂಯುಗೇ ಕ್ವಚಿತ್ ॥ ೧೫ ॥

ಒಬ್ಬೊಬ್ಬರೂ ಭಯಂಕರವಾದ ಬಲವನ್ನೂ, ಹತ್ತು ಸಹಸ್ರ ಆನೆಗಳ ಬಲವನ್ನೂ ಹೊಂದಿದವರು. ಇನ್ನು ಕೆಲವರು ಬಾಣಗಳ ವೇಗದಂತಹ ಮತ್ತು ವಾಯು ವೇಗದಂತಹ ಬಲವನ್ನು ಹೊಂದಿದವರು. ಇಂತಹ ಪ್ರಾಣಿಗಳನ್ನು ಯುದ್ಧದಲ್ಲಿ ಸಂಹಾರ ಮಾಡುವ ಯಾವನನ್ನೂ ನಾನು ಕಾಣುವುದಿಲ್ಲ.

ಏಕ್ರಮೇಣೋಪಪನ್ನಾ ಹಿ ತೇಜೋಬಲಸಮನ್ವಿತಾಃ ।
ಜೇತವ್ಯಮಿತಿ ಚಾನ್ಯೋನ್ಯಂ ನಿತ್ಯಂ ಯೇಷಾಂ ಹೃದಿ ಸ್ಥಿತಃ ।
ಅಥ ಚೇಮೇ ಮಹಾಪ್ರಾಜ್ಞಾಃ ಶೇರತೇ ಚ ಗತಾಯುಷಃ ॥ ೧೬ ॥

ಇವರೆಲ್ಲರೂ ಪರಾಕ್ರಮದಿಂದಲೂ, ತೇಜೋಬಲದಿಂದಲೂ ಕೂಡಿದವರು. ಅವರ ಮನಸ್ಸಿನಲ್ಲಿ ಯಾವಾಗಲೂ ನಾವು ಪರಸ್ಪರವಾಗಿ ಜಯಿಸಬೇಕು ಎಂಬ ಭಾವನೆಯಿದ್ದಿತು. ಆದರೆ ಈಗ ಮಹಾಪ್ರಾಜ್ಞರೆಲ್ಲರೂ ಆಯುಸ್ಸನ್ನು ಕಳೆದುಕೊಂಡು ಭೂಮಿಯ ಮೇಲೆ ಮಲಗಿದ್ದಾರೆ.

ಮೃತಾ ಇತಿ ಚ ಶಬ್ದೋಽಯಂ ವರ್ತತೇ ಚ ಗತಾಯುಷಾಮ್ ।
ಇಮೇ ಮೃತಾ ಮಹೀಪಾಲಾಃ ಪ್ರಾಯಶೋ ಭೀಮವಿಕ್ರಮಾಃ ॥೧೭॥

ಆಯುಸ್ಸನ್ನು ಕಳೆದುಕೊಂಡವರಿಗೆ ಮೃತರು ಎಂಬ ಶಬ್ದವು ರೂಢಿಯಲ್ಲಿದೆ. ಹೆಚ್ಚಾಗಿ ಭಯಂಕರ ಪರಾಕ್ರಮವುಳ್ಳ ಈ ರಾಜರು ಮೃತರಾಗಿದ್ದಾರೆ.

ರಾಜಪುತ್ರಾಶ್ಚ ಸಂರಬ್ಧಾ ವೈಶ್ವಾನರಸಮಪ್ರಭಾಃ ।
ನಿಶ್ಚೇಷ್ಟಾಃ ನಿರಭಿಮಾನಾಃ ಶೂರಾಃ ಶತ್ರುವಶಂ ಗತಾಃ ॥ ೧೮ ॥

ಅಗ್ನಿಗೆ ಸಮಾನವಾದ ತೇಜಸ್ಸುಳ್ಳ, ಶೂರರಾದ ರಾಜಪುತ್ರರೂ ಸಹ ಅಭಿಮಾನವನ್ನು ತೊರೆದು, ಶತ್ರುಗಳಿಗೆ ವಶರಾಗಿ ನಿಶ್ಚೇಷ್ಟರಾಗಿ ಬಿದ್ದಿದ್ದಾರೆ.

ತತ್ರ ಮೇ ಸಂಶಯಃ ಪ್ರಾಪ್ತಃ ಕುತಃ ಸಂಜ್ಞಾ ಮೃತಾ ಇತಿ ।
ಕಸ್ಯ ಮೃತ್ಯುಃ ಕುತೋ ಮೃತ್ಯುಃ ಕೇನ ಮೃತ್ಯುರಿಮಾಃ ಪ್ರಜಾಃ ।
ಹರತ್ಯಮರಸಂಕಾಶ ತನ್ಮೇ ಬ್ರೂಹಿ ಪಿತಾಮಹ ॥ ೧೯ ॥

ಅದರಲ್ಲಿ ನನಗೆ ಮೃತರು ಎಂಬ ಹೆಸರು ಹೇಗೆ ಉಂಟಾಗುತ್ತದೆ ಎಂದು ಸಂಶಯವುಂಟಾಗಿದೆ. ಯಾರಿಗೆ ಮೃತ್ಯು ? ಏಕೆ ಮೃತ್ಯು ? ಯಾವ ಕಾರಣದಿಂದ ಮೃತ್ಯುವು ಈ ಪ್ರಜೆಗಳನ್ನು ತೆಗೆದುಕೊಂಡು ಹೋಗುತ್ತಾನೆ? ಎಲೈ ದೇವಸಂಕಾಶರೇ, ಪಿತಾಮಹರೇ, ಅದನ್ನು ನನಗೆ ಹೇಳಿ.

ಸಂಜಯಃ

ತಂ ತಥಾ ಪರಿಪೃಚ್ಛಂತಂ ಕುಂತೀಪುತ್ರಂ ಯುಧಿಷ್ಠಿರಮ್ ।
ಆಶ್ವಾಸನಮಿದಂ ವಾಕ್ಯಮುವಾಚ ಭಗವಾನೃಷಿಃ ॥ ೨೦ ॥

ಸಂಜಯ– ಹಾಗೆ ಪ್ರಶ್ನೆಯನ್ನು ಮಾಡುತ್ತಿದ್ದ ಕುಂತೀಪುತ್ರನಾದ ಯುಧಿಷ್ಠಿರನನ್ನು ಸಮಾಧಾನಪಡಿಸುತ್ತಾ ಪೂಜ್ಯರಾದ ವ್ಯಾಸರು ಈ ಮಾತುಗಳನ್ನು ಆಡಿದರು.

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಅಕಂಪನಸ್ಯ ಕಥಿತಂ ನಾರದೇನ ಪುರಾ ನೃಪ ॥ ೨೧ ॥

ಎಲೈ ರಾಜನೇ, ಈ ವಿಷಯದಲ್ಲಿ ಹಿಂದೆ ಅಂಕಪನ ರಾಜನಿಗೆ ನಾರದರು ಹೇಳಿದ ಈ ಪುರಾತನ ಇತಿಹಾಸವನ್ನು ಹೇಳುತ್ತಾರೆ.

ಸ ಚಾಪಿ ರಾಜಾ ರಾಜೇಂದ್ರ ಪುತ್ರವ್ಯಸನಮುತ್ತಮಮ್ ।
ಅಪ್ರಸಹ್ಯತಮಂ ಲೋಕೇ ಪ್ರಾಪ್ತವಾನಿತಿ ನಃ ಶ್ರುತಮ್ ॥ ೨೨ ॥

ಎಲೈ ರಾಜೇಂದ್ರನೇ, ಆ ರಾಜನೂ ಸಹ ಲೋಕದಲ್ಲಿ ಸಹಿಸಲು ಅಸಾಧ್ಯವಾದ ಪುತ್ರವ್ಯಸನವನ್ನು ಹೊಂದಿದನು ಎಂದು ನಾವು ಕೇಳಿದ್ದೇವೆ.

ತತ್ ತೇऽಹಂ ಸಂಪ್ರವಕ್ಷ್ಯಾಮಿ ಮೃತ್ಯೋಃ ಪ್ರಭವಮುತ್ತಮಮ್ ।
ತತಸ್ತ್ವಂ ಮೋಕ್ಷ್ಯಸೇ ದುಃಖಾದ್ ಸ್ನೇಹಬಂಧನಸಂಶ್ರಯಾತ್ ॥ ೨೩ ॥

ನಾನು ನಿನಗೆ ಆ ಮೃತ್ಯುವಿನ ಶ್ರೇಷ್ಠವಾದ ಉತ್ಪತ್ತಿಯನ್ನು ಹೇಳುವೆನು. ಆಗ ನೀನು ಸ್ನೇಹಬಂಧನದಿಂದ ಉಂಟಾದ ದುಃಖದಿಂದ ಬಿಡುಗಡೆಯನ್ನು ಹೊಂದುವಿ.

ಪುರಾವೃತ್ತಮಿದಂ ತಾತ ಮಮ ಕೀರ್ತಯತಃ ಶೃಣು ।
ಧರ್ಮ್ಯಮಾಖ್ಯಾನಮಾಯುಷ್ಯಂ ಶೋಕಘ್ನಂ ಪುಷ್ಟಿವರ್ಧನಮ್ ॥೨೪॥

ಪವಿತ್ರಮರಿಸಂಘಘ್ನಂ ಮಂಗಳಾನಾಂ ಚ ಮಂಗಳಮ್ ।
ಯಥೈವ ವೇದಾಧ್ಯಯನಮುಪಾಖ್ಯಾನಮಿದಂ ತಥಾ ॥ ೨೫ ॥

ಎಲೈ ಪ್ರೀತಿಪಾತ್ರನೇ, ಹಿಂದೆ ನಡೆದ ಈ ಘಟನೆಯನ್ನು ಹೇಳುವ ನನ್ನಿಂದ ನೀನು ಕೇಳುವವನಾಗು. ಈ ಆಖ್ಯಾನವು ಧರ್ಮಪ್ರದವಾದುದು, ಆಯುಷ್ಯಪ್ರದವಾದುದು,

ಶೋಕವನ್ನು ಪರಿಹಾರ ಮಾಡುವಂತಹದು ಮತ್ತು ಪುಷ್ಟಿಯನ್ನು ಕೊಡುವಂತಹದು. ಇದು ಪವಿತ್ರವಾದುದು, ಶತ್ರುಸಮೂಹವನ್ನು ನಾಶಮಾಡುವಂತಹದು ಮತ್ತು ಮಂಗಳಗಳಲ್ಲಿ ಮಂಗಳವಾದುದು.

ಶ್ರವಣೀಯಂ ಮಹಾರಾಜ ಪ್ರಾತರ್ನಿತ್ಯಂ ನೃಪೋತ್ತಮೈಃ ।
ಪುತ್ರಾನಾಯುಷ್ಮತೋ ರಾಜ್ಯಮೀಹಮಾನೈಃ ಶ್ರಿಯಂ ತಥಾ ॥ ೨೬ ॥

ವೇದಾಧ್ಯಯನವು ಹೇಗೆಯೋ ಈ ಉಪಾಖ್ಯಾನವೂ ಹಾಗೆಯೇ. ಎಲೈ ಮಹಾರಾಜನೇ, ಆಯುಷ್ಮವಂತನಾದ ಪುತ್ರನನ್ನೂ, ಸಂಪತ್ತನ್ನೂ ಬಯಸುವ ಶ್ರೇಷ್ಠರಾದ ರಾಜರು ನಿತ್ಯವೂ ಪ್ರಾತಃಕಾಲದಲ್ಲಿ ಇದನ್ನು ಕೇಳಬೇಕು.

ಪುರಾ ಕೃತಯುಗೇ ತಾತ ರಾಜಾ ಹ್ಯಾಸೀದಕಂಪನಃ ।
ಸ ಶತ್ರುವಶಮಾಪನ್ನೋ ಮಧ್ಯೇ ಸಂಗ್ರಾಮಮೂರ್ಧನಿ ॥ ೨೭ ॥

ಪ್ರೀತಿಪಾತ್ರನೇ, ಹಿಂದೆ ಕೃತಯುಗದಲ್ಲಿ ಅಕಂಪನನೆಂಬ ರಾಜನಿದ್ದನು. ಅವನು ತೀವ್ರವಾದ ಸಂಗ್ರಾಮ ನಡೆಯುತ್ತಿದ್ದಾಗ ಶತ್ರುಗಳಿಗೆ ವಶನಾದನು.

ತಸ್ಯ ಪುತ್ರೋ ಹರಿರ್ನಾಮ ನಾರಾಯಣಸಮದ್ಯುತಿಃ ।
ಶ್ರೀಮಾನ್ ಕೃತಾಸ್ತ್ರೋ ಮೇಧಾವೀ ಯುಧಿ ಶಕ್ರಸಮೋ ಬಲೀ ॥ ೨೮ ॥

ಅವನಿಗೆ ಹರಿ ಎಂಬ ನಾರಾಯಣನಿಗೆ ಸಮಾನವಾದ ಕಾಂತಿಯುಳ್ಳ ಪುತ್ರನಿದ್ದನು. ಅವನು ಕಾಂತಿಯುಕ್ತನೂ, ಅಸ್ತ್ರವೇತ್ತನೂ, ಮೇಧಾವಿಯೂ, ಯುದ್ಧದಲ್ಲಿ ಇಂದ್ರನಿಗೆ ಸಮಾನವಾದ ಬಲವುಳ್ಳವನೂ ಆಗಿದ್ದನು.

ಸ ಶತ್ರುಭಿಃ ಪರಿವೃತೋ ಬಹುಧಾ ರಣಮೂರ್ಧನಿ ।
ಯೋಧಯಾಮಾಸ ತಾನ್ ಸರ್ವಾನ್ ಸರ್ವಾಸ್ತ್ರಕುಶಲೋ ಬಲೀ ॥೨೯॥

ಸರ್ವಾಸ್ತ್ರಕುಶಲನೂ, ಬಲಿಷ್ಠನೂ ಆದ ಅವನು ಯುದ್ಧದಲ್ಲಿ ಅನೇಕ ರೀತಿಯಲ್ಲಿ ಶತ್ರುಗಳಿಂದ ಸುತ್ತುವರಿಯಲ್ಪಟ್ಟು ಅವರೆಲ್ಲರ ಜೊತೆಯಲ್ಲಿ ಯುದ್ಧವನ್ನು ಮಾಡಿದನು.

ವರ್ಷನ್ ಬಾಣಸಹಸ್ರಾಣಿ ಶತ್ರುಷ್ವಮಿತವಿಕ್ರಮಃ ।
ಪದಾತಿರಥನಾಗಾಶ್ವಾನ್ ಪ್ರಮಮಾಥ ಮಹಾಬಲಃ ॥ ೩೦ ॥

ಅಮಿತ ಪರಾಕ್ರಮಿಯೂ, ಮಹಾಬಲನೂ ಆದ ಅವನು ಶತ್ರುಗಳ ಮೇಲೆ ಸಹಸ್ರಾರು ಬಾಣಗಳನ್ನು ಪ್ರಯೋಗಿಸುತ್ತಾ, ಪದಾತಿ-ರಥ-ಗಜಾಶ್ವಗಳನ್ನು ಮರ್ದಿಸಿದನು.

ಸ ಕರ್ಮ ದುಷ್ಕರಂ ಕೃತ್ವಾ ಸಂಗ್ರಾಮೇ ಶತ್ರುತಾಪನಃ ।
ತದುದೀರ್ಣಂ ಬಲಂ ಸರ್ವಂ ಹತ್ವಾऽರೀನರಿಸೂದನಃ ।
ಸ ಶತ್ರುವಶಮಾಪನ್ನೋ ಮಧ್ಯೇ ಸಂಗ್ರಾಮಮೂರ್ಧನಿ ॥ ೩೧ ॥

ಶತ್ರುತಾಪನಾದ ಅವನು ಯುದ್ಧದಲ್ಲಿ ದುಷ್ಕರವಾದ ಕಾರ್ಯವನ್ನು ಮಾಡಿ, ಸಮೃದ್ಧವಾದ ಆ ಸೈನ್ಯವನ್ನೆಲ್ಲಕೊಂದು, ಯುದ್ಧರಂಗದಲ್ಲಿ ಶತ್ರುಗಳಿಗೆ ವಶನಾದನು.

ಸ ದೃಷ್ಟ್ವಾ ಪಿತರಂ ಯುದ್ಧೇ ತದವಸ್ಥಂ ಮಹಾದ್ಯುತಿಃ ।
ಅಚಿಂತಯಿತ್ವಾ ಮರಣಂ ಶತ್ರುಮಧ್ಯೇऽವಿಶತ್ ಸುತಃ ॥ ೩೨ ॥

ಮಹಾದ್ಯುತಿಯುಳ್ಳ ಅವನ ಪುತ್ರನು ತನ್ನ ತಂದೆಯು ಅಂತಹ ಪರಿಸ್ಥಿತಿಯನ್ನು ಹೊಂದಿದುದನ್ನು ನೋಡಿ ತನ್ನ ಮರಣವನ್ನು ಲೆಕ್ಕಿಸದೆ ಶತ್ರುಗಳ ಮಧ್ಯದಲ್ಲಿ ಪ್ರವೇಶಿಸಿದನು.

ಸ ಶರೈರಾಯಸೈಶ್ಚಕ್ರೈಃ ಗದಾಭಿರ್ಮುಸಲೈರಪಿ ।
ಮೃದ್ನನ್ ರಥಿಸಹಸ್ರಾಣಿ ರಥಾಂಶ್ಚ ಹಯವಾರಣಾನ್ ॥ ೩೩ ॥

ಪರಾನೀಕಂ ವಿಭಿದ್ಯಾಜೌ ಮೋಕ್ಷಯಿತ್ವಾ ಚ ತಂ ನೃಪಮ್ ।
ಪುನರೇವಾಕರೋದ್ ಯುದ್ಧಂ ಶತ್ರುಮಧ್ಯಗತೋ ಬಲೀ ॥ ೩೪ ॥

ಅವನು ಕಬ್ಬಿಣದ ಬಾಣಗಳಿಂದಲೂ, ಚಕ್ರಗಳಿಂದಲೂ, ಗದೆಗಳಿಂದಲೂ, ಅಸ್ತ್ರಗಳಿಂದಲೂ ಗಜಾಶ್ವಗಳನ್ನು, ರಥಗಳನ್ನು, ಸಹಸ್ರಾರು ರಥಿಕರನ್ನು ಮರ್ದಿಸಿದನು. ಬಲಿಷ್ಠನಾದ ಅವನು ಶತ್ರುಸೈನ್ಯವನ್ನು ಭಗ್ನಗೊಳಿಸಿ, ತನ್ನ ತಂದೆಯನ್ನು ಬಿಡಿಸಿ ಪುನಃ ಶತ್ರುಸೈನ್ಯದ ಮಧ್ಯಗತನಾಗಿ ಯುದ್ಧವನ್ನು ಮಾಡಿದನು.

ತತಸ್ತೇ ರಥಿನಃ ಸರ್ವೇ ಸಮೇತ್ಯ ಪುನರಾಹವೇ ।
ಜಘ್ನುಸ್ತಂ ಪರಿವಾಯ್ಯೈಕಂ ತೋಮರೈರಿವ ಕುಂಜರಮ್ ॥ ೩೫ ॥

ಅನಂತರ ಆ ರಥರೆಲ್ಲರೂ ಪುನಃ ರಣರಂಗದಲ್ಲಿ ಒಂದುಗೂಡಿ, ಒಂಟಿಯಾದ ಅವನನ್ನು ಸುತ್ತುವರಿದು, ತೋಮರಗಳಿಂದ ಗಜವನ್ನು ಕೊಲ್ಲುವಂತೆ ಅವನನ್ನು ಕೊಂದರು.

ಸ ಕರ್ಮ ದುಷ್ಕರಂ ಕೃತ್ವಾ ಸಂಗ್ರಾಮೇ ಶತ್ರುತಾಪನಃ ।
ಶತ್ರುಭಿರ್ನಿಹತಃ ಶೇತೇ ಪೃತನಾಯಾಂ ಯುಧಿಷ್ಠಿರ ॥ ೩೬ ॥

ಎಲೈ ಯುಧಿಷ್ಠಿರನೇ, ಶತ್ರುತಾಪನನಾದ ಅವನು ಯುದ್ಧದಲ್ಲಿ ದುಷ್ಕರವಾದ ಕರ್ಮವನ್ನು ಮಾಡಿ, ಶತ್ರುಗಳಿಂದ ಕೊಲ್ಲಲ್ಪಟ್ಟು ಸೇನೆಯಲ್ಲಿ ಮಲಗಿದನು.

ದ್ವಿಷದ್ಭಿರ್ನಿಹತಂ ದೃಷ್ಟ್ವಾ ಪ್ರಿಯಂ ಪುತ್ರಮಕಂಪನಃ ।
ಅಮರ್ಷಜನಿತಕ್ರೋಧ ಆಹವಾತ್ ಸಹಸಾऽऽಗತಃ ॥ ೩೭ ॥

ತನ್ನ ಪ್ರೀತಿಯ ಪುತ್ರನು ಶತ್ರುಗಳಿಂದ ಹತನಾದುದನ್ನು ನೋಡಿ ಕೋಪದಿಂದ ಕೂಡಿದವನಾಗಿ ಅಕಂಪನನು ಯುದ್ಧದಿಂದ ತಕ್ಷಣ ಅಲ್ಲಿಗೆ ಬಂದನು.

ಸ ರಾಜಾ ಪ್ರೇತಕೃತ್ಯಾನಿ ತಸ್ಯ ಕೃತ್ವಾ ಶುಚಾऽನ್ವಿತಃ ।
ಶೋಚನ್ನಹನಿ ರಾತ್ರೌ ಚ ನ ಲೇಭೇ ಸುಖಮಾತ್ಮನಃ ॥ ೩೮ ॥

ಆ ರಾಜನು ತನ್ನ ಪುತ್ರನಿಗೆ ಪ್ರೇತಕಾರ್ಯಗಳನ್ನು ಮಾಡಿ ಶೋಕದಿಂದ ಕೂಡಿದವನಾಗಿ, ಹಗಲೂ-ರಾತ್ರಿಯೂ ಶೋಕಪಡುತ್ತಾ ಸಮಾಧಾನವನ್ನೇ ಹೊಂದಲಿಲ್ಲ.

ತಸ್ಯ ಶೋಕಂ ವಿದಿತ್ವಾ ತು ಪುತ್ರವ್ಯಸನಸಂಭವಮ್ ।
ಅಥಾಜಗಾಮ ದೇವರ್ಷಿರ್ನಾರದೋऽಸ್ಯ ಸಮೀಪತಃ ॥ ೩೯ ॥

ಪುತ್ರವ್ಯಸನದಿಂದ ಅವನಿಗೆ ಉಂಟಾದ ಶೋಕವನ್ನು ತಿಳಿದು ಆಗ ದೇವರ್ಷಿಗಳಾದ ನಾರದರು ಅವನ ಸಮೀಪಕ್ಕೆ ಬಂದರು.

ಸ ತು ರಾಜಾ ಮಹಾಭಾಗೋ ದೃಷ್ಟ್ವಾ ದೇವರ್ಷಿಮಾಗತಮ್ ।
ಪೂಜಯಿತ್ವಾ ಯಥಾನ್ಯಾಯಂ ಕಥಾಮಕಥಯತ್ ತದಾ ॥ ೪೦ ॥

ಮಹಾನುಭಾವನಾದ ರಾಜನು ಅಲ್ಲಿಗೆ ಬಂದ ದೇವರ್ಷಿಗಳನ್ನು ನೋಡಿ ಶಾಸ್ತ್ರೋಕ್ತವಾಗಿ ಅವರನ್ನು ಪೂಜಿಸಿ ಆಗ ತನ್ನ ಕಥೆಯನ್ನು ಹೇಳಿದನು.

ತದಸ್ಮೈ ಸರ್ವಮಾಚಷ್ಟ ಯಥಾವೃತ್ತಂ ಯುಧಿಷ್ಠಿರ ।
ಶತ್ರುಭಿರ್ನಿರ್ಜಿತಂ ಸಂಖೇ ಪುತ್ರಸ್ಯ ಚ ವಧಂ ತಥಾ ॥ ೪೧ ॥

ಎಲೈ ಯುಧಿಷ್ಠಿರನೇ, ಅವನು ಯುದ್ಧದಲ್ಲಿ ಶತ್ರುಗಳಿಂದ ಹತನಾದ ತನ್ನ ಪುತ್ರನ ವಿಷಯದಲ್ಲಿ ನಡೆದುದೆಲ್ಲವನ್ನೂ ಅವರಿಗೆ ಹೇಳಿದನು.

ಅಕಂಪನಃ

ಮಮ ಪುತ್ರೋ ಮಹಾವೀರ್ಯ ಇಂದ್ರವಿಷ್ಣುಸಮದ್ಯುತಿಃ ।
ಶತ್ರುಭಿರ್ಬಹುಭಿಃ ಸಂಖೇ ಪರಾಕ್ರಮ್ಯ ಹತೋ ಯುಧಿ ॥ ೪೨ ॥

ಅಕಂಪನ– ಇಂದ್ರ-ವಿಷ್ಣುಗಳಿಗೆ ಸಮಾನವಾದ ತೇಜಸ್ಸುಳ್ಳ ಮಹಾಪರಾಕ್ರಮಶಾಲಿಯಾದ ನನ್ನ ಪುತ್ರನು ಅನೇಕ ಶತ್ರುಗಳಿಂದ ರಣರಂಗದಲ್ಲಿ ಆಕ್ರಮಿಸಲ್ಪಟ್ಟು ಯುದ್ಧದಲ್ಲಿ ಹತನಾದನು.

ಶೃಣೋಮಿ ಪ್ರಾಣಿನಾಂ ಚಾಪಿ ಮೃತ್ಯುಃ ಪ್ರಭವತೇ ಕಿಲ ।
ಕ ಏಷ ಬಲವಾನ್ ಮೃತ್ಯುಃ ಕಿಂವೀರ್ಯಬಲಪೌರುಷಃ ।
ಏತದಿಚ್ಛಾಮಿ ತತ್ತ್ವೇನ ಕಥಿತಂ ದ್ವಿಜಸತ್ತಮ ॥ ೪೩ ॥

ಪ್ರಾಣಿಗಳನ್ನು ಮೃತ್ಯುವು ಆವರಿಸುತ್ತದೆ ಎಂಬ ಮಾತನ್ನು ನಾನು ಕೇಳಿದ್ದೇನಷ್ಟೆ? ಅಂತಹ ಪ್ರಬಲವಾದ ಈ ಮೃತ್ಯುವು ಯಾವುದು? ಅದರ ಪರಾಕ್ರಮ, ಬಲ, ಪೌರುಷಗಳು ಎಂತಹವು? ದ್ವಿಜಶ್ರೇಷ್ಠರೇ, ನಾನು ಇದನ್ನು ಯಥಾರ್ಥವಾಗಿ ತಿಳಿಯಲು ಇಚ್ಛಿಸುತ್ತೇನೆ.

ವ್ಯಾಸಃ

ತಸ್ಯ ತದ್ ವಚನಂ ಶ್ರುತ್ವಾ ನಾರದೋ ಭಗವಾನ್ ಋಷಿಃ ।
ಆಖ್ಯಾನಮಿದಮಾಚಷ್ಟ ಪುತ್ರಶೋಕಾಪಹಂ ಮಹತ್ ॥ ೪೪ ॥

ವ್ಯಾಸರು– ಅವನ ಆ ಮಾತುಗಳನ್ನು ಕೇಳಿ ಪೂಜ್ಯರಾದ, ಋಷಿಗಳಾದ ನಾರದರು ಪುತ್ರಶೋಕವನ್ನು ಪರಿಹರಿಸಲು ಈ ದೊಡ್ಡ ಕಥೆಯನ್ನು ಹೇಳಿದರು.

ರಾಜನ್ ಶೃಣು ಮಮೇದಂ ತ್ವಮಾಖ್ಯಾನಂ ಬಹುವಿಸ್ತರಮ್ ।
ಯಥಾವೃತ್ತಂ ಶ್ರುತಂ ಚೈವ ಮಯಾऽಪಿ ವಸುಧಾಧಿಪ ॥ ೪೫ ॥

ರಾಜನೇ, ನಾನು ಕೇಳಿದಂತೆ ಹಿಂದೆ ನಡೆದಂತೆ ಇರುವ ಈ ಬಹುವಿಸ್ತರವಾದ ನಾನು ಹೇಳುವ ಆಖ್ಯಾನವನ್ನು ಕೇಳು.

ಪ್ರಜಾಃ ಸೃಷ್ಟ್ವಾ ಮಹಾರಾಜ ಪ್ರಜಾಸರ್ಗೇ ಪಿತಾಮಹಃ ।
ಅಸಂಹೃತಂ ಮಹಾತೇಜಾ ದೃಷ್ಟ್ವಾ ಜಗದಿದಂ ಪ್ರಭುಃ ॥ ೪೬ ॥

ತಸ್ಯ ಚಿಂತಾ ಸಮುತ್ಪನ್ನಾ ಸಂಹಾರಂ ಪ್ರತಿ ಪಾರ್ಥಿವ ।
ಚಿಂತಯನ್ ನಾಸಸಾದೈವ ಸಂಹಾರಂ ವಸುಧಾಧಿಪ ॥ ೪೭ ॥

ಎಲೈ ಮಹಾರಾಜನೇ, ಪ್ರಭುವಾದ ಪಿತಾಮಹನು ಪ್ರಜೆಗಳನ್ನು ಸೃಷ್ಟಿಸುವ ಕಾಲದಲ್ಲಿ ಪ್ರಜೆಗಳನ್ನು ಸೃಷ್ಟಿಮಾಡಿ, ವಿನಾಶವನ್ನು ಹೊಂದದಿದ್ದ ಈ ಪ್ರಪಂಚವನ್ನು ನೋಡಿ, ಎಲೈ ರಾಜನೇ, ಮಹಾತೇಜಸ್ವಿಯಾದ ಅವನಿಗೆ ಸಂಹಾರದ ವಿಷಯದಲ್ಲಿ ದೊಡ್ಡ ಚಿಂತೆಯುಂಟಾಯಿತು. ಎಲೈ ರಾಜನೇ, ಚಿಂತಿಸಿದರೂ ಅವನಿಗೆ ಸಂಹಾರದ ಉಪಾಯವು ತಿಳಿಯಲಿಲ್ಲ.

ತಸ್ಯ ರೋಷಾನ್ಮಹಾರಾಜ ಮುಖೇಭ್ಯೋऽಗ್ನಿರಜಾಯತ ।
ತೇನ ಸರ್ವಾ ದಿಶೋ ವ್ಯಾಪ್ತಾಃ ಸರ್ವಾನ್ ದೇಶಾನ್ ದಿಧಕ್ಷತಾ ॥೪೮॥

ಆಗ ಅವನಿಗೆ ಉಂಟಾದ ರೋಷದಿಂದ ಅವನ ಮುಖದಿಂದ ಅಗ್ನಿಯು ಉತ್ಪನ್ನವಾಯಿತು. ಎಲ್ಲ ದೇಶಗಳನ್ನೂ ದಹಿಸಲು ಬಯಸಿದ ಅಗ್ನಿಯಿಂದ ಎಲ್ಲ ದಿಕ್ಕುಗಳೂ ಆವರಿಸಲ್ಪಟ್ಟವು.

ತತೋ ಭುವಂ ದಿವಂ ಚೈವ ಸರ್ವಂ ಜ್ವಾಲಾಭಿರಾವೃತಮ್ ।
ಚರಾಚರಂ ಜಗತ್ ಸರ್ವಂ ದದಾಹ ಭಗವಾನ್ ಪ್ರಭುಃ।
ಮಹತಾ ಕೋಪವೇಗೇನ ತ್ರಾಸಯನ್ನಿವ ವೀರ್ಯವಾನ್ ॥ ೪೯ ॥

ಆಗ ಭೂಮಿ, ಸ್ವರ್ಗ ಎಲ್ಲವೂ ಜ್ವಾಲೆಗಳಿಂದ ಆವರಿಸಲ್ಪಟ್ಟವು. ಪೂಜ್ಯನೂ ಪ್ರಭುವೂ, ಪರಾಕ್ರಮಶಾಲಿಯೂ ಆದ ಅಗ್ನಿಯು ಮಹಾಕೋಪವೇಗದಿಂದ ಜಗತ್ತನ್ನು ಸಂಕಟಪಡಿಸುತ್ತಾ, ಚರಾಚರವಾದ ಸರ್ವ ಜಗತ್ತನ್ನೂ ದಹಿಸಿದನು.

ಕೋಪೋ ದಹತಿ ಭೂತಾನಿ ಜಂಗಮಾನಿ ಧ್ರುವಾಣಿ ಚ ।
ತಥಾ ಹತಾನಿ ಭೂತಾನಿ ತ್ರಸಾನಿ ಸ್ಥಾವರಾಣಿ ಚ ॥ ೫೦ ॥

ತತೋ ಹರೋ ಜಟೀ ಸ್ಥಾಣುರ್ನಿಶಾಚರಪತಿಃ ಶಿವಃ ।
ಜಗಾಮ ಶರಣಂ ದೇವಂ ಬ್ರಹ್ಮಾಣಂ ಪರವೀರಹನ್ ॥ ೫೧ ॥

ಕೋಪವು ಸ್ಥಾವರ-ಜಂಗಮ ಪ್ರಾಣಿಗಳನ್ನು ದಹಿಸುತ್ತದೆ. ಆ ರೀತಿಯಲ್ಲಿ ಸ್ಥಾವರ-ಜಂಗಮ ಪ್ರಾಣಿಗಳು ಹತವಾದವು. ಎಲೈ ಶತ್ರುಘಾತಕನೇ, ಆಗ ನಿಶಾಚರ ಪತಿಯಾದ, ಜಟಾಧಾರಿಯಾದ, ಸ್ಥಾಣುವೆನಿಸಿಕೊಂಡ ಶಿವನು ಬ್ರಹ್ಮದೇವರಿಗೆ ಶರಣಾಗತನಾದನು.

ತಸ್ಮಿನ್ನುಪಸ್ಥಿತೇ ಸ್ಥಾಣೌ ಪ್ರಜಾನಾಂ ಹಿತಕಾಮ್ಯಯಾ ।
ಅಬ್ರವೀತ್ ಪರಮೋ ದೇವೋ ಜ್ವಲನ್ನಿವ ಮಹಾದ್ಯುತಿಃ ॥ ೫೨ ॥

ಪ್ರಜೆಗಳ ಹಿತವನ್ನು ಬಯಸಿ ರುದ್ರನು ಸಮೀಪಕ್ಕೆ ಬಂದಿರಲು ಉತ್ತಮ ದೇವತೆಯಾದ ಬ್ರಹ್ಮದೇವರು ಮಹಾಕಾಂತಿಯಿಂದ ಬೆಳಗುವವರಾಗಿ ಅವನನ್ನು ಕುರಿತು ಹೇಳಿದರು.

ಬ್ರಹ್ಮಾ

ಕಿಂ ಕುರ್ಮಿ ಕಾಮಂ ಕಾಮಾರೇ ಕಾಮಾಜ್ಜಾತೋಽಸಿ ಪುತ್ರಕ ।
ಕರಿಷ್ಯಾಮಿ ಪ್ರಿಯಂ ಸರ್ವಂ ಬ್ರೂಹಿ ಸ್ಥಾಣೋ ಯದಿಚ್ಛಸಿ ॥ ೫೩ ॥

ಬ್ರಹ್ಮಾ- ಎಲೈ ಕಾಮಶತ್ರುವೇ, ಪುತ್ರನೇ, ನಿನ್ನ ಯಾವ ಆಸೆಯನ್ನು ಪೂರ್ಣ ಮಾಡಬೇಕು? ನೀನು ಕಾಮದಿಂದ ಜನಿಸಿದ್ದೀಯೆ. ಎಲೈ ಸ್ಥಾಣುವೇ, ನೀನು ಏನು ಬಯಸುವಿ ಎಂದು ಹೇಳು. ಅವೆಲ್ಲವನ್ನೂ ನಾನು ಮಾಡುವೆನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಏಕೋನಪಂಚಾಶತ್ತಮೋಽಧ್ಯಾಯಃ ॥

॥ ಅಭಿಮನ್ಯುವಧಪರ್ವಣಿ ಅಷ್ಟಾದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನಲವತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಐವತ್ತನೆಯ ಅಧ್ಯಾಯ

ಬ್ರಹ್ಮ-ರುದ್ರರ ಸಂವಾದ. ಮೃತ್ಯುದೇವತೆಯ ಉತ್ಪತ್ತಿ.

ಸ್ಥಾಣುಃ

ಪ್ರಜಾಸರ್ಗನಿಮಿತ್ತತ್ವಾತ್ ಕೃತೋ ಯತ್ನಸ್ತ್ವಯಾ ಪ್ರಭೋ ।
ತ್ವಯಾ ವಿಸೃಷ್ಟಾ ವೃದ್ಧಾಸ್ತು ಭೂತಗ್ರಾಮಾಃ ಪೃಥಗ್ವಿಧಾಃ ॥ ೧ ॥

ತಾಸ್ತಥೈವೇಹ ಪುನಃ ಕ್ರೋಧಾತ್ ಪ್ರಜಾ ನಶ್ಯಂತಿ ಸರ್ವಶಃ ।
ತಾ ದೃಷ್ಟ್ವಾ ಮಮ ಕಾರುಣ್ಯಂ ಪ್ರಸೀದ ಭಗವನ್ ಪ್ರಭೋ ॥ ೨ ॥

ಸ್ಥಾಣು– ಎಲೈ ಪ್ರಭುವೇ, ಪ್ರಜೆಗಳನ್ನು ಸೃಷ್ಟಿಸುವ ಉದ್ದೇಶದಿಂದ ನೀನು ಪ್ರಯತ್ನವನ್ನು ಮಾಡಿದ್ದೀಯೆ. ನೀನು ಸೃಷ್ಟಿಸಿದ ವಿಧವಿಧವಾದ ಭೂತಗ್ರಾಮಗಳು (ಪ್ರಜಾ ಸಮೂಹಗಳು) ಅಭಿವೃದ್ಧಿಯನ್ನು ಹೊಂದಿವೆ. ಆ ಪ್ರಜೆಗಳು ನಿನ್ನ ಕೋಪದಿಂದ ಹಾಗೆಯೇ ಎಲ್ಲ ಕಡೆಗಳಲ್ಲಿಯೂ ನಾಶವನ್ನು ಹೊಂದುತ್ತಿದ್ದಾರೆ. ಅವರನ್ನು ನೋಡಿ ನನಗೆ ಕರುಣೆಯುಂಟಾಗಿದೆ. ಎಲೈ ಪ್ರಭುವೇ, ಪೂಜ್ಯನೇ, ನೀನು ಪ್ರಸನ್ನನಾಗು.

ಬ್ರಹ್ಮಾ

ನ ಕ್ರುದ್ಧ್ಯೇ ನ ಚ ಮೇ ಕಾಮ ಏತದೇವಂ ಭವೇದಿತಿ ।
ಪೃಥಿವ್ಯಾ ಹಿತಕಾಮಾತ್ ತು ತತೋ ಮಾಂ ಮೃತ್ಯುರಾವಿಶತ್ ॥ ೩ ॥

ಬ್ರಹ್ಮಾ– ನಾನು ಸಿಟ್ಟುಮಾಡುವುದಿಲ್ಲ. ಹೀಗೆ ಆಗಬೇಕೆಂದು ನನ್ನ ಅಭಿಪ್ರಾಯವೂ ಇಲ್ಲ. ಪೃಥಿವಿಗೆ ಹಿತ ಮಾಡಲು ಬಯಸಿ ಮೃತ್ಯುವು ನನ್ನನ್ನು ಸಮೀಪಿಸಿತು.

ಇಯಂ ಸನ್ನಾ ಸದಾ ದೇವೀ ಭಾರಾರ್ತಾ ಮಾಮಚೂಚುದತ್ ।
ಸಂಹಾರಾರ್ಥಂ ಮಹಾದೇವ ಭಾರೇಣಾಭಿಹತಾ ಸತೀ ॥ ೪ ॥

ಎಲೈ ಮಹಾದೇವನೇ, ಪ್ರಜೆಗಳ ಭಾರದಿಂದ ಪೀಡಿತಳಾದ ಈ ಭೂದೇವಿಯು ಭಾರದಿಂದ ಪೀಡಿತಳಾಗಿ ಸಂಹಾರದ ಸಲುವಾಗಿ ನನ್ನನ್ನು ಪ್ರೇರಿಸಿದಳು.

ತತೋ ವೈ ನಾಧಿಗಚ್ಛಾಮಿ ಬುದ್ಧ್ಯಾ ಬಹು ವಿಚಾರಯನ್ ।
ಸಂಹಾರಮಪ್ರಮೇಯಾತ್ಮನ್ ತತೋ ಮಾಂ ಮನ್ಯುರಾವಿಶತ್ ॥ ೫ ॥

ಅಪ್ರಮೇಯ ಸ್ವರೂಪನೇ, ನಾನು ಎಷ್ಟು ವಿಚಾರ ಮಾಡಿದರೂ ಅವಳ ದುಃಖವನ್ನು ಪರಿಹಾರ ಮಾಡುವ ಉಪಾಯವು ನನ್ನ ಬುದ್ಧಿಗೆ ಹೊಳೆಯಲಿಲ್ಲ. ಆಗ ನನಗೆ ಕೋಪವುಂಟಾಯಿತು.

ಸ್ಥಾಣುಃ

ಸಂಹಾರಾರ್ಥಂ ಪ್ರಸೀದಸ್ವ ಮಾ ಕ್ರುಧೋ ವಿಬುಧಾಧಿಪ ।
ಮಾ ಪ್ರಜಾಃ ಸ್ಥಾವರಾಶ್ಚೈವ ಜಂಗಮಾಶ್ಚ ವ್ಯನೀನಶಃ ॥ ೬ ॥

ಸ್ಥಾಣು– ಎಲೈ ದೇವಶ್ರೇಷ್ಠನೇ, ಸಂಹಾರದ ವಿಷಯದಲ್ಲಿ ಪ್ರಸನ್ನನಾಗು. ಕ್ರೋಧವನ್ನು ಮಾಡಬೇಡ. ಸ್ಥಾವರ-ಜಂಗಮ ಪ್ರಾಣಿಗಳನ್ನು ಮತ್ತು ಪ್ರಜೆಗಳನ್ನು ವಿನಾಶಗೊಳಿಸಬೇಡ.

ತವ ಪ್ರಸಾದಾದ್ ಭಗವನ್ನಿದಂ ಜಾತಂ ತ್ರಿಧಾ ಜಗತ್ ।
ಅನಾಗತಮತೀತಂ ಚ ಯಚ್ಚ ಸಂಪ್ರತಿ ವರ್ತತೇ ॥ ೭ ॥

ಪೂಜ್ಯನೇ, ನಿನ್ನ ಅನುಗ್ರಹದಿಂದ ಭೂತ-ವರ್ತಮಾನ-ಭವಿಷ್ಯತ್ ಎಂಬ ಮೂರು ವಿಧವಾದ ಈ ಜಗತ್ತು ಜನಿಸುತ್ತದೆ.

ಭಗವನ್ ಕ್ರೋಧಸಂದೀಪ್ತಃ ಕ್ರೋಧಾದಗ್ನಿಃ ಸಮುತ್ಥಿತಃ ।
ಸ ದಹತ್ಯಶ್ಮಕೂಟಾನಿ ದ್ರುಮಾಂಶ್ಚ ಸರಿತಸ್ತಥಾ ॥ ೮ ॥

ಪಲ್ವಲಾನಿ ಚ ಸರ್ವಾಣಿ ಸರ್ವಂ ಚೈವ ತೃಣೋಪಲಮ್ ।
ಸ್ಥಾವರಂ ಜಂಗಮಂ ಚೈವ ನಿಃಶೇಷಂ ಕುರುತೇ ಜಗತ್ ॥ ೯ ॥

ಪೂಜ್ಯನೇ, ಕ್ರೋಧವಿಶಿಷ್ಟನಾದ ನಿನ್ನ ಕ್ರೋಧದಿಂದ ಅಗ್ನಿಯು ಜನಿಸಿತು. ಅದು ಕಲ್ಲುಬಂಡೆಯನ್ನೂ, ವೃಕ್ಷಗಳನ್ನೂ, ಪ್ರಜೆಗಳನ್ನೂ, ಜಾಗು ಪ್ರದೇಶಗಳನ್ನೂ, ಎಲ್ಲಾ ತೃಣಗಳನ್ನೂ ಮತ್ತು ಎಲ್ಲಾ ಸ್ಥಾವರ-ಜಂಗಮಗಳನ್ನೂ ದಹಿಸಿ ಜಗತ್ತನ್ನು ನಿಶ್ಶೇಷಗೊಳಿಸುತ್ತಿದೆ.

ತದೇತದ್ ಭಸ್ಮಸಾದ್ಭೂತಂ ಸರ್ವಂ ಜಗದನಾವಿಲಮ್ ।
ಪ್ರಸೀದ ಭಗವನ್ ದೇವ ರೋಷೋ ನ ಸ್ಯಾದ್ ವರೋ ಮಮ ॥೧೦॥

ಯಾವ ಉಪದ್ರವಕ್ಕೂ ಒಳಗಾಗದಿದ್ದ ಈ ಸರ್ವಜಗತ್ತು ಭಸ್ಮವಾಗುತ್ತಿದೆ. ಪೂಜ್ಯನಾದ ದೇವನೇ ಪ್ರಸನ್ನನಾಗು. ನಿನಗೆ ರೋಷವು ಉಂಟಾಗದಿರಲಿ. ಇದು ನಾನು ಕೇಳುವ ವರ.

ಸರ್ವೇ ವಿನಷ್ಟಾಸ್ತಪ್ಯಂತೇ ಸರ್ವೇ ದೇವಾಃ ಕಥಂಚನ ।
ತಸ್ಮಾನ್ನಿವರ್ತತಾಂ ತೇಜಸ್ತ್ವಯಿ ವೈತತ್ ಪ್ರಲೀಯತಾಮ್ ॥ ೧೧ ॥

ವಿನಷ್ಟರಾದ ಎಲ್ಲ ದೇವತೆಗಳು ಯಾವುದಾದರೂ ರೀತಿಯಲ್ಲಿ ಸಂತಾಪ ಪಡುತ್ತಾರೆ. ಆದ್ದರಿಂದ ನೀನು ಸೃಷ್ಟಿಸಿದ ಈ ತೇಜಸ್ಸು ನಿನ್ನಲ್ಲಿಯೇ ಲಯವನ್ನು ಹೊಂದಲಿ.

ಉಪಾಯಮನ್ಯಂ ಸಂಪಶ್ಯ ಪ್ರಜಾನಾಂ ಹಿತಕಾಮ್ಯಯಾ ।
ಯಥೇಮೇ ಪ್ರಾಣಿನಃ ಸರ್ವೇ ನಿವರ್ತೇರಂಸ್ತಥಾ ಕುರು ॥ ೧೨ ॥

ಪ್ರಜೆಗಳ ಹಿತದೃಷ್ಟಿಯಿಂದ ಬೇರೆ ಯಾವುದಾದರೂ ಉಪಾಯವನ್ನು ನೋಡು. ಎಲ್ಲ ಪ್ರಾಣಿಗಳೂ ಹಿಂದಿರುಗಿ ಬರುವಂತೆ ಮಾಡು.

ಅಭಾವಂ ನೈವ ಗಚ್ಛೇಯುರುತ್ಪನ್ನಪ್ರಜನಾಃ ಪ್ರಜಾಃ ।
ಭವತಾ ಹಿ ನಿಯುಕ್ತೋಽಹಂ ಪ್ರಜಾನಾಂ ಪಾಲನೇ ಪ್ರಭೋ ।
ದಯಾ ತೇನ ಮಮೋತ್ಪನ್ನಾ ಪ್ರಜಾಸು ವಿಬುಧೇಶ್ವರ ॥ ೧೩ ॥

ಉತ್ಪನ್ನರಾದ ಪ್ರಜೆಗಳು ವಿನಾಶವನ್ನು ಹೊಂದಬಾರದು. ಪ್ರಭುವೇ, ನೀನಾದರೂ ನನ್ನನ್ನು ಪ್ರಜೆಗಳ ಪಾಲನೆಯಲ್ಲಿ ಯೋಜಿಸಿದ್ದೀಯೆ. ವಿಬುಧೇಶ್ವರನೇ, ಆದ್ದರಿಂದ ನನಗೆ ಪ್ರಜೆಗಳಲ್ಲಿ ದಯೆಯುಂಟಾಗಿದೆ.

ಮಾ ವಿನಶ್ಯೇದ್ ಜಗನ್ನಾಥ ಜಗತ್ ಸ್ಥಾವರಜಂಗಮಮ್ ।
ಪ್ರಪದ್ಯೇ ಹಿ ಗುರುಂ ದೇವಂ ತಸ್ಮಾದೇತದ್ ಬ್ರವೀಮ್ಯಹಮ್ ॥ ೧೪ ॥

ಜಗನ್ನಾಥನೇ, ಸ್ಥಾವರ-ಜಂಗಮವಾದ ಈ ಜಗತ್ತು ವಿನಾಶ ಹೊಂದದಿರಲಿ. ಗುರುವೂ, ದೇವನೂ ಆದ ನಿನಗೆ ನಾನು ಶರಣಾಗತನಾಗಿದ್ದೇನೆ. ಆದ್ದರಿಂದ ಈ ಮಾತನ್ನು ಆಡುತ್ತಿದ್ದೇನೆ.

ನಾರದಃ

ಶ್ರುತ್ವಾ ತು ವಚನಂ ಸ್ಥಾಣೋರ್ನಿತ್ಯಂ ನಿಹತಪಾಪ್ಮನಃ ।
ತೇಜಃ ಸಂವೇಷ್ಟಯಾಮಾಸ ಪುನರೇವಾಂತರಾತ್ಮನಿ ॥ ೧೫ ॥

ತತೋಽಗ್ನಿಮುಪಸಂಹೃತ್ಯ ಭಗವಾಲ್ಲೋಕಸತ್ಕೃತಃ ।
ಪ್ರವೃತ್ತಿಂ ಚ ನಿವೃತ್ತಿಂ ಚ ಕಲ್ಪಯಾಮಾಸ ವೈ ಪ್ರಭುಃ ॥ ೧೬ ॥

ನಾರದರು– ನಿತ್ಯವೂ ಪಾಪದೂರನಾದ ರುದ್ರನ ಮಾತುಗಳನ್ನು ಕೇಳಿ ಬ್ರಹ್ಮನು ಆ ತೇಜಸ್ಸನ್ನು ಪುನಃ ತನ್ನ ದೇಹದೊಳಗೆ ಹಿಂತೆಗೆದುಕೊಂಡನು. ಅಗ್ನಿಯನ್ನು ಉಪಶಮಗೊಳಿಸಿ, ಲೋಕಸತ್ಕೃತನಾದ ಪೂಜ್ಯನಾದ, ಪ್ರಭುವಾದ ಬ್ರಹ್ಮನು ಪ್ರಜೆಗಳ ಪ್ರವೃತ್ತಿ ಮತ್ತು ನಿವೃತ್ತಿಗಳನ್ನು ಕಲ್ಪಿಸಿದನು.

ಉಪಸಂಹೃತವಾನ್ ಬ್ರಹ್ಮಾ ತಮಗ್ನಿಂ ರೋಷಜಂ ತಥಾ ।
ಪ್ರಾದುರ್ಬಭೂವ ವಿಶ್ವೇಭ್ಯಃ ಖೇಭ್ಯೋ ನಾರೀ ಮಹಾಮನಾಃ ॥ ೧೭ ॥

ಬ್ರಹ್ಮನು ತನ್ನ ರೋಷದಿಂದ ಉಂಟಾದ ಆ ಅಗ್ನಿಯನ್ನು ಆ ರೀತಿಯಲ್ಲಿ ಶಮನಗೊಳಿಸಿದನು. ಆಗ ಅವನ ಎಲ್ಲ ಇಂದ್ರಿಯಗೋಳಕಗಳಿಂದ ಶ್ರೇಷ್ಠವಾದ ಮನಸ್ಸನ್ನು ಹೊಂದಿದ ಒಬ್ಬ ನಾರಿಯು ಪ್ರಾದುರ್ಭೂತಳಾದಳು.

ಕೃಷ್ಣರಕ್ತಾಂಬರಧರಾ ರಕ್ತಜಿಹ್ವಾಸ್ಯಲೋಚನಾ ।
ಕುಂಡಲಾಭ್ಯಾಂ ಚ ರಾಜೇಂದ್ರ ತಪ್ತಾಭ್ಯಾಂ ಸಮಲಂಕೃತಾ ॥ ೧೮ ॥

ಎಲೈ ರಾಜೇಂದ್ರನೇ, ಕಪ್ಪು-ಕೆಂಪು ಬಣ್ಣದ ವಸ್ತ್ರವನ್ನು ಧರಿಸಿ, ಕೆಂಪಾದ ನಾಲಿಗೆ ಮುಖ ಮತ್ತು ಕಣ್ಣುಗಳಿಂದ ಯುಕ್ತಳಾಗಿ ತಪ್ತಕುಂಡಲಗಳಿಂದಲೂ, ಅವಳು ಅಲಂಕೃತಳಾಗಿದ್ದಳು.

ಸಾ ವಿನಿರ್ಗತ್ಯ ವೈ ಖೇಭ್ಯೋ ದಕ್ಷಿಣಾಂ ದಿಶಮಾಶ್ರಯತ್ ।
ಸ್ಮಯಮಾನೇವ ಚಾವೈಕ್ಷದ್ ದೇವೌ ವಿಶ್ವೇಶ್ವರಾವುಭೌ ॥ ೧೯ ॥

ಅವಳು ಬ್ರಹ್ಮದೇವರ ದೇಹದ ವಿವರಗಳಿಂದ ಹೊರಬಂದು ದಕ್ಷಿಣ ದಿಕ್ಕನ್ನು ಆಶ್ರಯಿಸಿದಳು. ನಗುತ್ತಾ ವಿಶ್ವೇಶ್ವರರಾದ ಆ ಇಬ್ಬರು ದೇವತೆಗಳನ್ನು ನೋಡಿದಳು.

ತಾಮಾಹ್ವಯತ್ ತದಾऽಚಿಂತ್ಯೋ ಲೋಕಾದಿನಿಧನೇಶ್ವರಃ ।
ತಾಂ ತು ತತ್ರ ತದಾ ದೇವೀಂ ಬ್ರಹ್ಮಾ ಲೋಕಪಿತಾಮಹಃ ॥ ೨೦ ॥

ಲೋಕದ ಸ್ಥಿತಿ-ಸಂಹಾರಗಳಿಗೆ ಕಾರಣನಾದ, ಸರ್ವಲೋಕ ಪಿತಾಮಹನಾದ, ಅಚಿಂತ್ಯ ಶಕ್ತಿಯುಳ್ಳ ಬ್ರಹ್ಮನು ಆಗ ಆ ದೇವಿಯನ್ನು ಆಹ್ವಾನಿಸಿದನು.

ಉಕ್ತವಾನ್ ಮಧುರಂ ವಾಕ್ಯಂ ಸಾಂತ್ವಯಿತ್ವಾ ಪುನಃಪುನಃ ।
ಮೃತ್ಯೋ ಇತಿ ಮಹೀಪಾಲ ಜಹಿ ಚೇಮಾಃ ಪ್ರಜಾ ಇತಿ ॥ ೨೧ ॥

ಎಲೈ ರಾಜನೇ, ಅವಳನ್ನು ಮೃತ್ಯು ಎಂದು ಸಂಬೋಧಿಸಿ ಪುನಃ ಪುನಃ ಸಮಾಧಾನ ಪಡಿಸಿ, ವಿವಿಧವಾದ ಮಾತುಗಳನ್ನು ಆಡಿ ಈ ಪ್ರಜೆಗಳನ್ನು ಸಂಹಾರ ಮಾಡು ಎಂದು ಹೇಳಿದನು.

ಪ್ರಾದುರ್ಭೂತಾ ಮಯಾ ರೋಷಾತ್ ತ್ವಂ ಹಿ ಸಂಹಾರಬುದ್ಧಿನಾ ।
ತಸ್ಮಾತ್ ಸಂಹರ ಸರ್ವಾಸ್ತ್ವಂ ಪ್ರಜಾಃ ಸಜಡಪಂಡಿತಾಃ ॥ ೨೨ ॥

ಸಂಹಾರವನ್ನು ಚಿಂತಿಸಿದ ನನ್ನ ರೋಷದಿಂದ ನೀನು ಜನಿಸಿದ್ದೀಯೆ. ಆದ್ದರಿಂದ ಎಲ್ಲ ಪಾಮರ ಪಂಡಿತಾದಿ ಪ್ರಜೆಗಳನ್ನು ನೀನು ಸಂಹರಿಸು.

ಅವಿಶೇಷೇಣ ಚೈವ ತ್ವಂ ಪ್ರಜಾಃ ಸಂಹರ ಭಾಮಿನಿ ।
ಮಮ ತ್ವಂ ಹಿ ನಿಯೋಗೇನ ತತ್ರ ಶ್ರೇಯೋ ಹ್ಯವಾಪ್ಸ್ಯಸಿ ॥ ೨೩ ॥

ಎಲೌ ಭಾಮಿನಿಯೇ, ನೀನು ಎಲ್ಲ ಪ್ರಜೆಗಳನ್ನೂ ನನ್ನ ಆಜ್ಞೆಯಿಂದ ಸಮಾನವಾಗಿ ಸಂಹರಿಸು. ಆದ್ದರಿಂದ ನಿನಗೆ ಶ್ರೇಯಸ್ಸು ಉಂಟಾಗುವುದು (ಎಂದು ಹೇಳಿದನು).

ನಾರದಃ

ಏವಮುಕ್ತಾ ತು ಸಾ ತೇನ ಮೃತ್ಯುಃ ಕಮಲಲೋಚನಾ ।
ದಧ್ಯೌ ಚಾತ್ಯರ್ಥಮಬಲಾ ಪ್ರಾಪತಂಶ್ಚಾಶ್ರುಬಿಂದವಃ ॥ ೨೪ ॥

ಬ್ರಹ್ಮದೇವರಿಂದ ಹೀಗೆ ಹೇಳಲ್ಪಟ್ಟ ಕಮಲಲೋಚನೆಯೂ, ಅಬಲೆಯೂ ಆದ ಆ ಮೃತ್ಯುವು ಬಹಳವಾಗಿ ಧ್ಯಾನ ಮಾಡಿದಳು. ಆಗ ಅವಳ ಕಣ್ಣುಗಳಿಂದ ಅಶ್ರುಬಿಂದುಗಳು ಹೊರಗೆ ಬಂದವು.

ಪಾಣಿಭ್ಯಾಂ ಪ್ರತಿಜಗ್ರಾಹ ತಾನ್ಯಶ್ರೂಣಿ ಪಿತಾಮಹಃ ।
ಸರ್ವಭೂತಹಿತಾರ್ಥಾಯ ತಾಂ ಚಾಪ್ಯನ್ವನಯದ್ ಭೃಶಮ್ ॥ ೨೫ ॥

ಪಿತಾಮಹರಾದ ಬ್ರಹ್ಮದೇವರು ಸರ್ವಪ್ರಾಣಿಗಳ ಹಿತಕ್ಕೋಸ್ಕರವಾಗಿ ಆ ಅಶ್ರುಬಿಂದುಗಳನ್ನು ತಮ್ಮ ಕೈಗಳಿಂದ ಹಿಡಿದರು ಮತ್ತು ಅವಳನ್ನು ತೀವ್ರವಾಗಿ ಸಮಾಧಾನಪಡಿಸಿದರು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಂ ದ್ರೋಣಪರ್ವಣಿ ಪಂಚಾಶೋಽಧ್ಯಾಯಃ ॥
॥ ಅಭಿಮನ್ಯುವಧಪರ್ವಣಿ ಏಕೋನವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಐವತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಐವತ್ತೊಂದನೆಯ ಅಧ್ಯಾಯ

ಮೃತ್ಯು-ಬ್ರಹ್ಮರ ಸಂವಾದವನ್ನು ಕೇಳಿಸಿ ನಾರದರಿಂದ ಅಕಂಪನನ ಶೋಕ ಪರಿಹಾರ. ವ್ಯಾಸರಿಂದ ಯುಧಿಷ್ಠಿರನ ಶೋಕಪರಿಹಾರ.

ನಾರದಃ

ವಿನೀಯ ದುಃಖಮಬಲಾ ಆತ್ಮನ್ಯೇವ ಪ್ರಜಾಪತಿಮ್ ।
ಉವಾಚ ಪ್ರಾಂಜಲಿರ್ಭೂತ್ವಾ ಲತೇವಾನಿಲಕಂಪಿತಾ ॥ ೧ ॥

ನಾರದರು– ಆ ಮೃತ್ಯುವನಿತೆಯು ತನ್ನ ದುಃಖವನ್ನು ತನ್ನಲ್ಲಿಯೇ ನುಂಗಿಕೊಂಡು ಬ್ರಹ್ಮದೇವರನ್ನು ಕುರಿತು ವಾಯುವಿನಿಂದ ಕಂಪಿತವಾದ ಲತೆಯಂತೆ ನಡುಗುತ್ತಾ ಕೈಗಳನ್ನು ಮುಗಿದು ಮಾತನಾಡಿದಳು.

ತ್ವಯಾ ಸೃಷ್ಟಾ ಕಥಂ ನಾರೀ ಮಾದೃಶೀ ವದತಾಂ ವರ ।
ಕ್ರೂರಂ ಕರ್ಮಾಹಿತಂ ಕುರ್ಯಾಂ ಮೂಢೇವ ಕಿಮು ಜಾನತೀ ॥ ೨ ॥

ಎಲೈ ಮಾತನಾಡುವವರಲ್ಲಿ ಶ್ರೇಷ್ಠನೇ, ನಿನ್ನಿಂದ ಜನಿಸಿದ ನನ್ನಂತಹ ನಾರಿಯು ಎಲ್ಲವನ್ನೂ ತಿಳಿದರೂ ಏನೂ ತಿಳಿಯದ ಮೂಢಳಂತೆ ಹೇಗೆ ಕ್ರೂರವೂ ಮತ್ತು ಅಹಿತವೂ ಆದ ಕರ್ಮವನ್ನು ಮಾಡಿಯೇನು?

ಬಿಭೇಮ್ಯಹಮಧರ್ಮಾಯ ಪ್ರಸೀದ ಭಗವನ್ ಪ್ರಭೋ ।

ಪೂಜ್ಯನಾದ ಪ್ರಭುವೇ, ನಾನು ಅಧರ್ಮಕ್ಕೆ ಹೆದರುತ್ತೇನೆ. ಆದ್ದರಿಂದ ನೀನು ಪ್ರಸನ್ನನಾಗು.

ಪ್ರಿಯಾನ್ ಪುತ್ರಾನ್ ವಯಸ್ಯಾಂಶ್ಚ ಭ್ರಾತೄನ್ ಮಾತೄಃ ಪಿತೄನ್ ಪತೀನ್॥
ಅನುಧ್ಯಾಸ್ಯಂತಿ ಯೇ ದೇವ ಮೃತಾಂಸ್ತೇಷಾಂ ಬಿಭೇಮ್ಯಹಮ್ ।
ಕೃಪಣಾಶ್ರುಪರಿಕ್ಲೇದಾತ್ ಪತೇಯಂ ಶಾಶ್ವತೀಃ ಸಮಾಃ ॥ ೩ ॥

ಮೃತರಾದ, ಪ್ರಿಯರಾದ ಪುತ್ರರನ್ನೂ, ಸ್ನೇಹಿತರನ್ನೂ, ಸಹೋದರರನ್ನೂ, ತಾಯಿಯರನ್ನೂ, ತಂದೆಗಳನ್ನೂ, ಪತಿಗಳನ್ನೂ ಉಳಿದವರು ಅನಂತರ ಯಾವಾಗಲೂ ಧ್ಯಾನ ಮಾಡುತ್ತಾರೆ. ಎಲೈ ದೇವನೇ, ಅಂತಹವರಿಗೆ ನಾನು ಹೆದರುತ್ತೇನೆ. ದುಃಖಗೊಂಡ ಅವರ ಅಶ್ರುಪಾತದಿಂದ ನಾನು ಬಹುಕಾಲದವರೆಗೆ ನರಕದಲ್ಲಿ ಬಿದ್ದೇನು!

ತೇಭ್ಯೋಽತಿಬಲವದ್ ಭೀತಾ ಶರಣಂ ತ್ವಾಽಹಮಾಗತಾ ।
ಯಮಸ್ಯ ಸದನಂ ದೇವ ನ ಗಚ್ಛೇಯಂ ಸುರೋತ್ತಮ ॥ ೪ ॥

ಅವರಿಗೆ ಬಹಳವಾಗಿ ಹೆದರಿ ನಾನು ನಿನಗೆ ಶರಣಾಗತಳಾಗಿದ್ದೇನೆ. ಎಲೈ ಸುರೋತ್ತಮನೇ, ದೇವನೇ, ನಾನು ಯಮನ ಮನೆಗೆ ಹೋಗಲಾರೆ.

ಪ್ರಸಾದಯೇ ತ್ವಾ ವರದ ಮೂರ್ಧ್ನಾ ದೇವವರ ಪ್ರಭೋ ।
ಏಕಮಿಚ್ಛಾಮಿ ಮೇ ಕಾಮಂ ತ್ವತ್ತೋ ಲೋಕಪಿತಾಮಹ ॥ ೫ ॥

ವರಪ್ರದನೇ, ದೇವಶ್ರೇಷ್ಠನೇ, ಪ್ರಭುವೇ, ನಾನು ನಿನಗೆ ತಲೆಯನ್ನು ಬಗ್ಗಿಸಿ ನಮಸ್ಕರಿಸಿ, ಪ್ರಸನ್ನನಾಗು ಎಂದು ಬೇಡುತ್ತಿದ್ದೇನೆ. ಎಲೈ ಲೋಕಪಿತಾಮಹನೇ, ನಿನ್ನಿಂದ ನಾನು ಒಂದು ಆಸೆಯನ್ನು ಬಯಸುತ್ತೇನೆ.

ಇಚ್ಛೇಯಂ ತತ್ಪ್ರಸಾದಾದ್ ವೈ ತಪಸ್ತಪ್ತುಂ ಪ್ರಜೇಶ್ವರ ।
ಪ್ರದಿಶೇಮಂ ವರಂ ದೇವ ತ್ವಂ ಮಹ್ಯಂ ಭಗವನ್ ಪ್ರಭೋ ॥ ೬ ॥

ಎಲೈ ಪ್ರಜೇಶ್ವರನೇ, ನಿನ್ನ ಅನುಗ್ರಹದಿಂದ ನಾನು ತಪಸ್ಸನ್ನು ಮಾಡಲು ಇಚ್ಛಿಸುತ್ತೇನೆ. ಎಲೈ ದೇವನೇ, ಪೂಜ್ಯನೇ, ಪ್ರಭುವೇ, ನೀನು ನನಗೆ ಈ ವರವನ್ನು ಕೊಡು.

ತ್ವಯೋಕ್ತಾऽಹಂ ಗಮಿಷ್ಯಾಮಿ ಧೇನುಕಾಶ್ರಮಮುತ್ತಮಮ್ ।
ತತ್ರ ತಪ್ಸ್ಯೇ ತಪಸ್ತೀವ್ರಂ ತವೈವಾರಾಧನೇ ರತಾ ॥ ೭ ॥

ನಿನ್ನ ಅನುಮತಿಯನ್ನು ಪಡೆದು ನಾನು ಶ್ರೇಷ್ಠವಾದ ಧೇನುಕಾಶ್ರಮಕ್ಕೆ ಹೋಗುವೆನು. ಅಲ್ಲಿ ನಿನ್ನ ಆರಾಧನೆಯಲ್ಲಿಯೇ ನಿರತಳಾಗಿ ತೀವ್ರವಾದ ತಪಸ್ಸನ್ನು ಆಚರಿಸುವೆನು.

ನಹಿ ಶಕ್ಷ್ಯಾಮಿ ದೇವೇಶ ಪ್ರಾಣಾನ್ ಪ್ರಾಣಭೃತಾಂ ಪ್ರಿಯಾನ್ ।
ಹರ್ತುಂ ವಿಲಪಮಾನಾನಾಮಧರ್ಮಾದಭಿರಕ್ಷ ಮಾಮ್ ॥ ೮ ॥

ಎಲೈ ದೇವೇಶನೇ, ದೇಹಿಗಳು ಅಳುತ್ತಿರುವಾಗ ಅವರಿಗೆ ಪ್ರಿಯವಾದ ಪ್ರಾಣಗಳನ್ನು ಅಪಹರಿಸಲು ನನಗೆ ಸಾಧ್ಯವಿಲ್ಲ. ಅಧರ್ಮದಿಂದ ನನ್ನನ್ನು ರಕ್ಷಿಸು.

ಬ್ರಹ್ಮಾ

ಮೃತ್ಯೋ ಸಂಕಲ್ಪಿತಾ ಮೇ ತ್ವಂ ಪ್ರಜಾಸಂಹರಣೇ ತು ವೈ ।
ಗಚ್ಛ ಸಂಹರ ಸರ್ವಾಸ್ತ್ವಂ ಪ್ರಜಾ ಮಾ ತೇ ವಿಚಾರಣಾ ॥ ೯ ॥

ಎಲೌ ಮೃತ್ಯುವೇ, ನಾನು ನಿನ್ನನ್ನು ಪ್ರಜಾಸಂಹಾರ ಕಾರ್ಯಕ್ಕಾಗಿ ಸಂಕಲ್ಪಿಸಿದ್ದೇನೆ. ನೀನು ಹೋಗಿ ಎಲ್ಲ ಪ್ರಜೆಗಳನ್ನೂ ಸಂಹರಿಸು. ವಿಚಾರ ಮಾಡಬೇಡ.

ಭವಿತಾ ತ್ವೇತದೇವಂ ಹಿ ನೈತಜ್ಜಾತ್ವನ್ಯಥಾ ಭವೇತ್ ।
ಭವ ತ್ವನಿಂದಿತಾ ಲೋಕೇ ಕುರುಷ್ವ ವಚನಂ ಮಮ ॥ ೧೦ ॥

ಅದು ಹೀಗೆಯೇ ಆಗುವುದೇ ಹೊರತು ಬೇರೆ ರೀತಿ ಆಗಲಾರದು. ಲೋಕದಲ್ಲಿ ನೀನು ಅನಿಂದಿತಳಾಗು ಮತ್ತು ನನ್ನ ಮಾತನ್ನು ನಡೆಸು.

ನಾರದಃ

ಏವಮುಕ್ತಾ ಭಗವತಾ ಪ್ರಾಂಜಲಿಶ್ಚಾಪ್ಯವಾಙ್ಮುಖೀ ।
ಸಂಹಾರೇ ನಾಕರೋದ್ ಬುದ್ಧಿಂ ಪ್ರಜಾನಾಂ ಹಿತಕಾಮ್ಯಯಾ ॥ ೧೧ ॥

ನಾರದರು– ಪೂಜ್ಯನಾದ ಬ್ರಹ್ಮನಿಂದ ಹೀಗೆ ಹೇಳಲ್ಪಟ್ಟ ಮೃತ್ಯುವು ಕೈಗಳನ್ನು ಮುಗಿದು, ತಲೆಯನ್ನು ತಗ್ಗಿಸಿ, ಪ್ರಜೆಗಳ ಹಿತಕಾಮನೆಯಿಂದ ಸಂಹಾರ ಮಾಡುವ ಬುದ್ಧಿಯನ್ನು ಹೊಂದಲಿಲ್ಲ.

ತೂಷ್ಣೀಮಾಸೀತ್ ತದಾ ದೇವಃ ಪ್ರಜಾನಾಮೀಶ್ವರೇಶ್ವರಃ ।
ಪ್ರಸಾದಂ ಚಾಗಮತ್ ಕ್ಷಿಪ್ರಮಾತ್ಮನ್ಯೇವ ಪಿತಾಮಹಃ ॥ ೧೨ ॥

ಆಗ ಪ್ರಜೆಗಳ ಪ್ರಭುಗಳಿಗೆ ಪ್ರಭುವಾದ ಆ ದೇವನು ಸುಮ್ಮನಾದನು ಮತ್ತು ಕ್ಷಿಪ್ರವಾಗಿ ಪಿತಾಮಹನಾದ ಅವನು ತನ್ನಲ್ಲಿಯೇ ಸಮಾಧಾನವನ್ನು ತಂದುಕೊಂಡನು.

ಸ್ಮಯಮಾನಶ್ಚ ದೇವೇಶೋ ಲೋಕಾನ್ ಸರ್ವಾನವೈಕ್ಷತ ।
ಲೋಕಾಶ್ಚಾಸನ್ ಯಥಾಪೂರ್ವಂ ದೃಷ್ಟಾಸ್ತೇನಾಪಮನ್ಯುನಾ ॥ ೧೩ ॥

ದೇವೇಶನಾದ ಅವನು ನಗುತ್ತಾ ಎಲ್ಲ ಲೋಕಗಳನ್ನೂ ನೋಡಿದನು. ಕ್ರೋಧ ರಹಿತನಾದ ಅವನಿಂದ ನೋಡಲ್ಪಟ್ಟ ಎಲ್ಲ ಲೋಕಗಳೂ ಮೊದಲಿನಂತೆಯೇ ಆದವು.

ನಿವೃತ್ತರೋಷೇ ತಸ್ಮಿಂಸ್ತು ಭಗವತ್ಯಪರಾಜಿತೇ ।
ಸಾ ಕನ್ಯಾऽಪಿ ಜಗಾಮಾಥ ಸಮೀಪಾತ್ ತಸ್ಯ ಧೀಮತಃ ॥೧೪॥

ಅಪರಾಜಿತನೂ, ಪೂಜ್ಯನೂ ಆದ ಬ್ರಹ್ಮನು ರೋಷಹೀನನಾಗುತ್ತಿರಲು ಆ ಕನ್ಯೆಯೂ ಸಹ ಮೇಧಾವಿಯಾದ ಅವನ ಸಮೀಪದಿಂದ ಹೊರಟಳು.

ಅಪಸೃತ್ಯಾಪ್ರತಿಶ್ರುತ್ಯ ಪ್ರಜಾಸಂಹರಣಂ ತಥಾ ।
ತ್ವರಮಾಣಾ ಚ ರಾಜೇಂದ್ರ ಮೃತ್ಯುರ್ಧೇನುಕಮಭ್ಯಯಾತ್ ॥ ೧೫ ॥

ಎಲೈ ರಾಜೇಂದ್ರನೇ, ಮೃತ್ಯುವು ಪ್ರಜಾಸಂಹಾರವನ್ನು ಮಾಡುತ್ತೇನೆ ಎಂದು ವಾಗ್ದಾನ ಮಾಡದೆ, ಅಲ್ಲಿಂದ ಹೊರಟು ತ್ವರೆಯನ್ನು ಮಾಡುತ್ತಾ, ಧೇನುಕರ ಬಳಿಗೆ ಹೋದಳು.

ಸಾ ತತ್ರ ಪರಮಂ ತೀವ್ರಂ ಚಚಾರ ತಪ ಉತ್ತಮಮ್ ।
ಸಮಾನಾಮೇಕಪಾದೇನ ತಸ್ಥೌ ಪದ್ಮಾನಿ ಷೋಡಶ ॥ ೧೬ ॥

ಅವಳು ಅಲ್ಲಿ ಶ್ರೇಷ್ಠವೂ, ತೀವ್ರವೂ ಆದ ಉತ್ತಮವಾದ ತಪಸ್ಸನ್ನು ಮಾಡಿದಳು. ಹದಿನಾರು ಪದ್ಮವರ್ಷಗಳವರೆಗೆ ಒಂದು ಕಾಲಿನ ಮೇಲೆ ನಿಂತಳು (ದಶಲಕ್ಷ, ಕೋಣ, ಅರ್ಜುನ, ನ್ಯರ್ಬುದ, ಶಂಖ, ಮಹಾಶಂಖ, ಪದ್ಮ, ಮಹಾಪದ್ಮ, ಖರ್ವ, ನಿಖರ್ವ ಹೀಗೆ ಹತ್ತು ಗುಣಕದಿಂದ ಹೆಚ್ಚಾಗಿ ಸಂಖ್ಯೆಗಳ ಗಣನೆ ಇದೆ).

ಪಂಚ ಚಾನ್ಯಾನಿ ಕಾರುಣ್ಯಾತ್ ಪ್ರಜಾನಾಮಭಯೈಷಿಣೀ ।
ಇಂದ್ರಿಯಾಣೀಂದ್ರಿಯಾರ್ಥೇಭ್ಯಃ ಪ್ರಿಯೇಭ್ಯಃ ಸನ್ನಿವಾರ್ಯ ಸಾ ॥೧೭॥

ಪ್ರಜೆಗಳಿಗೆ ಅಭಯವನ್ನು ಬಯಸಿ, ಪ್ರಜೆಗಳ ಮೇಲಿನ ಕರುಣೆಯಿಂದ ಅವಳು ತನ್ನ ಇಂದ್ರಿಯಗಳನ್ನು ಅವುಗಳ ಪ್ರಿಯವಸ್ತುಗಳಿಂದ ಹಿಂದೆ ಸೆಳೆದು ಬೇರೆ ಐದು ಪದ್ಮವರ್ಷಗಳವರೆಗೆ ತಪಸ್ಸನ್ನು ಮಾಡಿದಳು.

ತತಸ್ತ್ವೇಕಪದೇನೈವ ಪುನರನ್ಯಾನಿ ಸಪ್ತ ವೈ ।
ತಸ್ಥೌ ಪದ್ಮಾನಿ ಷಟ್ ಚೈವ ಸಪ್ತ ಪಂಚೈವ ವೈ ನೃಪ ।
ತತೋ ವರ್ಷಾಯುತಂ ತಾತ ಮೃಗೈಃ ಸಹ ಚಚಾರ ಸಾ ॥ ೧೮ ॥

ಅನಂತರ ಒಂದು ಪಾದದ ಮೇಲೆ ನಿಂತು ಅವಳು ಪುನಃ ಏಳು, ಆರು, ಏಳು ಮತ್ತು ಐದು ಪದ್ಮವರ್ಷಗಳ ಕಾಲ ತಪಸ್ಸನ್ನು ಮಾಡಿದಳು. ಎಲೈ ರಾಜನೇ, ಪ್ರೀತಿಪಾತ್ರನೇ, ಅನಂತರ ಹತ್ತು ಸಾವಿರ ವರ್ಷಗಳ ಕಾಲ ಅವಳು ಮೃಗಗಳ ಜೊತೆಯಲ್ಲಿ ಸಂಚರಿಸಿದಳು.

ಪುನರ್ಗತ್ವಾ ತತೋ ಗಂಗಾಂ ಪುಣ್ಯಾಂ ಶೀತಜಲಾಂ ಶಿವಾಮ್ ।
ಅಷ್ಟವರ್ಷಸಹಸ್ರಾಣಿ ಸಪ್ತ ಚೈಕಂ ಚ ಸಾऽವಸತ್ ॥ ೧೯ ॥

ಪುನಃ ಅವಳು ಪುಣ್ಯಪ್ರದವೂ, ಶೀತ ಜಲವುಳ್ಳದ್ದೂ ಆದ, ಮಂಗಳವಾದ ಗಂಗೆಗೆ ಹೋಗಿ ಎಂಟು ಸಹಸ್ರ ವರ್ಷಗಳ ಕಾಲ ನೀರಿನಲ್ಲಿ ವಾಸ ಮಾಡಿದಳು.

ತಂ ಪಾರಯಿತ್ವಾ ನಿಯಮಂ ಗಂಗಾಯಾಂ ವೀತಕಲ್ಮಷಾ ।
ಸಾ ಪುನಃ ಕೌಶಿಕೀಂ ಪುಣ್ಯಾಂ ಜಗಾಮ ನಿಯಮೈರ್ಯುತಾ ॥ ೨೦ ॥

ಗಂಗೆಯಲ್ಲಿ ಆ ನಿಯಮವನ್ನು ಪೂರ್ಣಗೊಳಿಸಿ, ಕಲ್ಮಷದೂರಳಾದ ಅವಳು ಪುನಃ ನಿಯಮದಿಂದ ಕೂಡಿದವಳಾಗಿ ಪವಿತ್ರವಾದ ಕೌಶಿಕೀ ನದಿಗೆ ಹೋದಳು.

ತತ್ರ ವಾಯುಜಲಾಹಾರಾ ಚಚಾರ ನಿಯತಂ ಪುನಃ।
ಪಂಚಗಂಗೇ ಚ ಸಾ ಪುಣ್ಯೇ ಕಾಶ್ಯಾಂ ವೈತರಣೇಷು ಚ ।
ತಪೋವಿಶೇಷೈರ್ವಿವಿಧೈಃ ಕರ್ಶಯದ್ ದೇಹಮಾತ್ಮನಃ ॥ ೨೧॥

ಅಲ್ಲಿ ಕೇವಲ ವಾಯು-ಜಲಗಳನ್ನು ಸೇವಿಸಿ, ಪುನಃ ನಿಯತವಾದ ತಪಸ್ಸನ್ನು ಆಚರಿಸಿದಳು. ಪಂಚಗಂಗಾ ಕ್ಷೇತ್ರದಲ್ಲಿಯೂ, ಕಾಶಿಯಲ್ಲಿಯೂ, ವೈತರಣಿಯಲ್ಲಿಯೂ, ವಿವಿಧವಾದ ವಿಶೇಷ ತಪಸ್ಸುಗಳನ್ನು ಮಾಡಿ ತನ್ನ ದೇಹವನ್ನು ಶೋಷಿಸಿದಳು.

ತತೋ ಗತ್ವಾ ಮಹಾಭಾಗ ಮಹಾಮೇರುಂ ಚ ಕೇವಲಮ್ ।
ತಸ್ಥಾವಶ್ಮೇವ ನಿಶ್ಚೇಷ್ಟಾ ಪ್ರಾಣಾಯಾಮಪರಾಯಣಾ ॥ ೨೨ ॥

ಎಲೈ ಮಹಾನುಭಾವನೇ, ಅವಳು ಅನಂತರ ಮಹಾಮೇರು ಪರ್ವತಕ್ಕೆ ಹೋಗಿ, ಕೇವಲ ಪ್ರಾಣಾಯಾಮ ಪರಾಯಣಳಾಗಿ (ಯಾವ ಆಹಾರವನ್ನೂ ತೆಗೆದುಕೊಳ್ಳದೆ) ಕಲ್ಲಿನಂತೆ ನಿಶ್ಚೇಷ್ಟಳಾಗಿ ನಿಂತಳು.

ತತೋ ಹಿಮವತೋ ಮೂರ್ಧ್ನಿ ಯತ್ರ ದೇವಾಃ ಪುರಾऽಯಜನ್ ।
ತತ್ರಾಂಗುಷ್ಠೇನ ಸಾ ತಸ್ಥೌ ನಿಖರ್ವಂ ಪರಮಂಗನಾ ॥ ೨೩ ॥

ಅನಂತರ ಹಿಮಾಲಯದ ಶಿಖರದಲ್ಲಿ, ಹಿಂದೆ ದೇವತೆಗಳು ಯಾಗ ಮಾಡಿದ ಸ್ಥಳದಲ್ಲಿ ಆ ಶ್ರೇಷ್ಠ ವನಿತೆಯು ತನ್ನ ಪಾದಾಂಗುಷ್ಠದ ಮೇಲೆ ನಿಖರ್ವ ವರ್ಷಗಳವರೆಗೆ ನಿಂತಳು.

ಪುಷ್ಕರೇಷ್ವಥ ಗೋಕರ್ಣೇ ನೈಮಿಶೇ ಮಲಯೇ ತಥಾ ।
ಅಕರ್ಶಯತ್ ಸ್ವಕಂ ದೇಹಂ ನಿಯಮೈರ್ಮನಸಃ ಪ್ರಿಯೈಃ ॥ ೨೪ ॥

ಅವಳು ತನ್ನ ಮನಸ್ಸಿಗೆ ಪ್ರಿಯವಾದ ನಿಯಮಗಳಿಂದ ಪುಷ್ಕರಗಳಲ್ಲಿಯೂ, ಗೋಕರ್ಣದಲ್ಲಿಯೂ, ನೈಮಿಶಾರಣ್ಯದಲ್ಲಿಯೂ, ಮಲಯ ಪರ್ವತದಲ್ಲಿಯೂ ಹಾಗೆಯೇ ತನ್ನ ದೇಹವನ್ನು ಶೋಷಿಸಿದಳು.

ಅನನ್ಯದೇವತಾ ನಿತ್ಯಂ ದೃಢಭಕ್ತಾ ಪಿತಾಮಹೇ ।
ತಸ್ಥೌ ಪಿತಾಮಹಂ ಚೈವ ತೋಷಯಾಮಾಸ ಯತ್ನತಃ ॥ ೨೫ ॥

ತತಸ್ತಾಮಬ್ರವೀತ್ ಪ್ರೀತೋ ಲೋಕಾನಾಂ ಪ್ರಭವೋಽಪ್ಯಯಃ ।
ಸೌಮ್ಯೇನ ಮನಸಾ ರಾಜನ್ ಪ್ರೀತಃ ಪ್ರೀತಮನಾಸ್ತದಾ ॥ ೨೬ ॥

ಎಲೈ ರಾಜನೇ, ಬೇರೆ ಯಾವ ದೇವತೆಯನ್ನೂ ಚಿಂತಿಸದೆ, ಬ್ರಹ್ಮನಲ್ಲಿಯೇ ದೃಢಭಕ್ತಿಯನ್ನು ಹೊಂದಿ, ಯಾವಾಗಲೂ ನಿಂತ ಅವಳು ತನ್ನ ಪ್ರಯತ್ನದಿಂದ ಬ್ರಹ್ಮನನ್ನು ಸಂತೋಷಪಡಿಸಿದಳು. ಆಗ ಲೋಕಗಳ ಪ್ರಭವ ಮತ್ತು ವಿನಾಶಕ್ಕೆ ಕಾರಣನಾದ ಬ್ರಹ್ಮನು ಪ್ರೀತನಾಗಿ, ಸೌಮ್ಯ ಮನಸ್ಸಿನಿಂದ ಕೂಡಿ, ಸಂತೋಷಗೊಂಡ ಮನಸ್ಸಿನಿಂದ ಅವಳಿಗೆ ಹೇಳಿದನು.

ಮೃತ್ಯೋ ಕಿಮಿದಮತ್ಯರ್ಥಂ ತಪಾಂಸಿ ಚರಸೀತಿ ಹ ।
ತತೋಽಬ್ರವೀತ್ ಪುನರ್ಮೃತ್ಯುಃ ಭಗವಂತಂ ಪಿತಾಮಹಮ್ ॥ ೨೭ ॥

ಎಲೌ ಮೃತ್ಯುವೇ, ಇದೇನು ಇಷ್ಟು ತೀವ್ರವಾದ ತಪಸ್ಸುಗಳನ್ನು ಆಚರಿಸುತ್ತಿದ್ದೀಯೆ? ಎಂದು ಕೇಳಿದನು. ಆಗ ಮೃತ್ಯುವು ಪೂಜ್ಯನಾದ ಪಿತಾಮಹನನ್ನು ಕುರಿತು ಪುನಃ ಮಾತನಾಡಿದಳು.

ನಾಹಂ ಹನ್ಯಾಂ ಪ್ರಜಾ ದೇವ ಸ್ವಸ್ಥಾಶ್ಚ ಕ್ರೋಶತೀಃ ಪ್ರಭೋ ।
ಏತದಿಚ್ಛಾಮಿ ಸರ್ವೇಶ ತತ್ತ್ವತೋ ವರಮಹಂ ಪ್ರಭೋ ॥ ೨೮ ॥

ಎಲೈ ದೇವನೇ, ಪ್ರಭುವೇ, ನಾನು ಸ್ವಸ್ಥರಾಗಿ ವಿಲಾಪ ಮಾಡುತ್ತಿರುವ ಪ್ರಜೆಗಳನ್ನು ಕೊಲ್ಲಲಾರೆ. ಎಲೈ ಪ್ರಭುವೇ, ಸರ್ವೇಶನೇ, ನಾನು ನಿನ್ನಿಂದ ಈ ವರವನ್ನು ಬಯಸುತ್ತೇನೆ.

ಅಧರ್ಮಭಯಭೀತಾಽಸ್ಮಿ ತತೋಽಹಂ ತಪ ಆಸ್ಥಿತಾ ।
ಭೀತಾಯಾ ಮೇ ಮಹಾಭಾಗ ಪ್ರದೇಹಿ ವರಮವ್ಯಯಮ್ ।
ಆರ್ತಾ ಚಾನಾಗಸೀ ಚ ತ್ವಾ ಯಾಚಾಮಿ ಭವ ಮೇ ಗತಿಃ ॥೨೯॥

ಅಧರ್ಮದ ಭಯದಿಂದ ಕೂಡಿದವಳಾಗಿದ್ದೇನೆ. ಆದ್ದರಿಂದ ನಾನು ತಪಸ್ಸನ್ನು ಮಾಡುತ್ತಿದ್ದೇನೆ. ಎಲೈ ಮಹಾನುಭಾವನೇ, ಭೀತಳಾದ ನನಗೆ ಶಾಶ್ವತ ವರವನ್ನು ಕೊಡು. ಆರ್ತಳೂ, ನಿರಪರಾಧಿಯೂ ಆದ ನಾನು ನಿನ್ನನ್ನು ಬೇಡುತ್ತಿದ್ದೇನೆ. ನನಗೆ ಗತಿಯಾಗು.

ನಾರದಃ

ತಾಮಬ್ರವೀತ್ ತತೋ ದೇವೋ ಭೂತಭವ್ಯಭವಿಷ್ಯಕೃತ್ ।
ಅಧರ್ಮೋ ನಾಸ್ತಿ ತೇ ಮೃತ್ಯೋ ಸಂಹರಂತ್ಯಾ ಇಮಾಃ ಪ್ರಜಾಃ ।
ಮಯಾ ಚೋಕ್ತಂ ಮೃಷಾ ಭದ್ರೇ ಭವಿತಾ ನ ಕಥಂಚನ ॥ ೩೦ ॥

ನಾರದರು– ಆಗ ಭೂತ-ವರ್ತಮಾನ-ಭವಿಷ್ಯತ್ ಲೋಕಗಳ ಸೃಷ್ಟಿಕರ್ತನಾದ ಬ್ರಹ್ಮದೇವನು ಅವಳನ್ನು ಕುರಿತು ಹೇಳಿದನು- 'ಎಲೌ ಮೃತ್ಯುವೇ, ಈ ಪ್ರಜೆಗಳನ್ನು ಸಂಹಾರ ಮಾಡುವುದರಿಂದ ನಿನಗೆ ಅಧರ್ಮವು ಉಂಟಾಗುವುದಿಲ್ಲ. ಎಲೌ ಮಂಗಳ ಸ್ವರೂಪಳೇ, ನನ್ನ ಮಾತು ಎಂದೂ ಸುಳ್ಳಾಗುವುದಿಲ್ಲ.

ತಸ್ಮಾತ್ ಸಂಹರ ಕಲ್ಯಾಣಿ ಪ್ರಜಾಃ ಸರ್ವಾಶ್ಚತುರ್ವಿಧಾಃ ।
ಧರ್ಮಃ ಸನಾತನಶ್ಚ ತ್ವಾಂ ಸರ್ವಥಾऽನುಪ್ರವೇಕ್ಷ್ಯತಿ ॥ ೩೧ ॥

ಆದ್ದರಿಂದ ಎಲೌ ಕಲ್ಯಾಣಿಯೇ, ಚತುರ್ವಿಧರಾದ ಎಲ್ಲಪ್ರಜೆಗಳನ್ನೂ ಸಂಹರಿಸು. ವೇದೋಕ್ತವಾದ ಧರ್ಮವು ನಿನ್ನನ್ನು ಬಂದು ಸೇರುವುದು.

ಶರ್ವಃ ಕಾಲೋ ಯಮಶ್ಚೈವ ಸಹಾಯಾ ವ್ಯಾಧಯಶ್ಚ ತೇ ।
ಅಹಂ ಚ ವಿಬುಧಾಶ್ಚೈವ ಪುನರ್ದಾಸ್ಯಾಮ ತೇ ವರಾನ್ ।
ಯೈಸ್ತ್ವಂ ಯುಕ್ತಾ ಭಯಾನ್ಮುಕ್ತಾ ವಿರಜಾಃ ಖ್ಯಾತಿಮೇಷ್ಯಸಿ ॥೩೨॥

ರುದ್ರ, ಕಾಲ, ಯಮ ಮತ್ತು ವ್ಯಾಧಿಗಳು ನಿನಗೆ ಸಹಾಯ ಮಾಡುವವು. ನಾನು ಮತ್ತು ದೇವತೆಗಳು ನಿನಗೆ ಪುನಃ ವರಗಳನ್ನು ಕೊಟ್ಟೇವು. ಆ ವರಗಳಿಂದ ಯುಕ್ತಳಾದ ನೀನು ಭಯದಿಂದ ಮುಕ್ತಳಾಗಿ, ದೋಷ ದೂರಳಾಗಿ ಶಾಂತಿಯನ್ನು ಹೊಂದುವಿ.

ಸೈವಮುಕ್ತಾ ಮಹಾರಾಜ ಕೃತಾಂಜಲಿರಿದಂ ಪ್ರಭುಮ್ ।
ಪುನರೇವಾಬ್ರವೀದ್ ವಾಕ್ಯಂ ಪ್ರಸಾದ್ಯ ಶಿರಸಾ ತದಾ ॥ ೩೩ ॥

ಎಲೈ ಮಹಾರಾಜನೇ, ಹೀಗೆ ಹೇಳಲ್ಪಟ್ಟ ಅವಳು ಕೈಗಳನ್ನು ಜೋಡಿಸಿ, ಶಿರಸಾ ನಮಸ್ಕರಿಸಿ, ಪ್ರಸನ್ನಗೊಳಿಸಿ, ಪ್ರಭುವಾದ ಅವನನ್ನು ಕುರಿತು ಪುನಃ ಮಾತನಾಡಿದಳು.

ಯದ್ಯೇತದೇವಂ ಕರ್ತವ್ಯಂ ಧರ್ಮತೋ ನಾಸ್ತಿಯೇ ಭಯಮ್ ।
ತವಾಜ್ಞಾ ಮೂರ್ಧ್ನಿ ಮೇ ನ್ಯಸ್ತಾ ಯತ್ ತು ವಕ್ಷ್ಯಾಮಿ ತಚ್ಛೃಣು ॥

ಇದನ್ನು ಹೀಗೆಯೇ ಮಾಡಬೇಕಾದರೆ ಮತ್ತು ಧರ್ಮದ ದೃಷ್ಟಿಯಿಂದ ಯಾವ ಭಯವೂ ಇಲ್ಲದಿದ್ದರೆ ನಿನ್ನ ಆಜ್ಞೆಯನ್ನು ನಾನು ಶಿರಸ್ಸಿನಲ್ಲಿ ಧರಿಸಿದ್ದೇನೆ. ನಾನು ಹೇಳುವ ಮಾತುಗಳನ್ನು ಕೇಳು.

ಲೋಭಃ ಕ್ರೋಧೋ ಹ್ಯಸೂಯೇರ್ಷ್ಯಾ
ಮೋಹೋ ದ್ರೋಹಶ್ಚ ದೇಹಿನಾಮ್ ।
ಅಪ್ರಿಯಾನ್ಯೋನ್ಯಜನಿತಾ ದೇಹಾನ್ ಭಿಂದ್ಯುಃ ಪೃಥಗ್ವಿಧಾಃ ॥೩೫॥

ಲೋಭ, ಕ್ರೋಧ, ಅಸೂಯೆ, ಮಾತ್ಸರ್ಯ, ಮೋಹ, ದ್ರೋಹ- ಜೀವರಿಗೆ ಅಪ್ರಿಯವನ್ನು ಮಾಡುವ ವಿಧವಿಧವಾದ ಈ ದೋಷಗಳು ದೇಹಗಳನ್ನು ನಾಶ ಮಾಡಲಿ.

ಬ್ರಹ್ಮಾ

ತಥಾ ಭವಿಷ್ಯತೇ ಮೃತ್ಯೋ ಸಾಧು ಸಂಹರ ವೈ ಪ್ರಜಾಃ ।
ಅಧರ್ಮಸ್ತೇ ನ ಭವಿತಾ ತಥಾ ದಾಸ್ಯಾಮಿ ತೇऽಭಯಮ್ ॥ ೩೬ ॥

ಬ್ರಹ್ಮ– ಎಲೌ ಮೃತ್ಯುವೇ, ಹಾಗೆಯೇ ಆಗುವುದು. ನೀನು ಪ್ರಜೆಗಳನ್ನು ಚೆನ್ನಾಗಿ ಸಂಹರಿಸು. ನಿನಗೆ ಅಧರ್ಮವು ಉಂಟಾಗುವುದಿಲ್ಲ. ನಾನು ನಿನಗೆ ಹಾಗೆ ಅಭಯವನ್ನು ಕೊಡುವೆನು.

ಯಾನ್ಯಶ್ರುಬಿಂದೂನಿ ಕರೇ ತವಾಸನ್ ।
ತೇ ವ್ಯಾಧಯಃ ಪ್ರಾಣಿನಾಂ ದೇಹಜಾಃ ಸ್ಯುಃ ।
ತೇ ಮಾರಯಿಷ್ಯಂತಿ ನರಾನ್ ಗತಾಸೂನ್
ನಾಧರ್ಮಸ್ತೇ ಭವಿತಾ ಮಾ ಸ್ಮ ಭೈಷೀಃ ॥ ೩೭ ॥

ಯಾವ ಅಶ್ರುಬಿಂದುಗಳು ನಿನ್ನ ಹಸ್ತದಲ್ಲಿ ಬಿದ್ದವೋ ಅವು ಪ್ರಾಣಿಗಳ ದೇಹದಿಂದ ಜನಿಸಿದ ವ್ಯಾಧಿಗಳಾಗುವವು. ಅವು ಆಯುಸ್ಸು ಮುಗಿದ ಮನುಷ್ಯರನ್ನು ಕೊಲ್ಲುವವು. ನಿನಗೆ ಅಧರ್ಮವು ಉಂಟಾಗುವುದಿಲ್ಲ. ಹೆದರಬೇಡ.

ಧರ್ಮೋ ಮೃತ್ಯೋ ಮಾರಣೇ ಪ್ರಾಣಿನಾಂ ತೇ
ತ್ವಂ ವೈ ಧರ್ಮಸ್ತ್ವಂ ಹಿ ಸರ್ವಸ್ಯ ಚೇಶಾ ।

ಧರ್ಮೋ ಭೂತ್ವಾ ಧರ್ಮನಿತ್ಯಾ ಧರಿತ್ರೀ
ತಸ್ಮಾತ್ ಪ್ರಾಣಾನ್ ಸರ್ವಥೇಮಾನ್ ನಿಯಚ್ಛ ॥ ೩೮ ॥

ಎಲೌ ಮೃತ್ಯುವೇ, ಪ್ರಾಣಿಗಳನ್ನು ಕೊಲ್ಲುವುದರಿಂದ ನಿನಗೆ ಧರ್ಮವೇ ಉಂಟಾಗುತ್ತದೆ. ನೀನು ಧರ್ಮರೂಪಳಾದವಳು. ಎಲ್ಲದಕ್ಕೂ ಒಡೆಯಳಾದವಳು. ಧರ್ಮಸ್ವರೂಪಳಾಗಿ, ನಿತ್ಯವೂ ಧರ್ಮಾಚರಣೆಯನ್ನು ಮಾಡುವವಳಾಗಿ ನೀನು ಎಲ್ಲವನ್ನೂ ಧರಿಸಿದ್ದೀಯೆ. ಆದ್ದರಿಂದ ಈ ಎಲ್ಲ ಪ್ರಾಣಿಗಳನ್ನು ಸ್ವತಃ ಸಂಹಾರ ಮಾಡುವವಳಾಗು.

ಪಾಪ್ಮಾ ತಥಾ ನೋ ಭವಿತಾ ಕದಾಚಿದ್
ಏವಂ ಮಯಾ ವೈ ವಿನಿಯುಜ್ಯಸೇ ತ್ವಮ್ ।
ಸರ್ವೇಷಾಂ ವೈ ಪ್ರಾಣಿನಾಂ ಕಾಮರೋಷೌ
ಸಂತ್ಯಜ್ಯ ತ್ವಂ ಸಂಹರ ಸರ್ವಜೀವಾನ್ ॥ ೩೯ ॥

ನಿನಗೆ ಹಾಗೆ ಎಂದೂ ಪಾಪವುಂಟಾಗುವುದಿಲ್ಲ. ಹೀಗೆ ನಾನು ನಿನ್ನನ್ನು ಆಜ್ಞಾಪಿಸುತ್ತಿದ್ದೇನೆ. ನಿನ್ನ ಕಾಮ-ರೋಷಗಳನ್ನು ತ್ಯಜಿಸಿ, ಸರ್ವಪ್ರಾಣಿಗಳ ಸರ್ವಜೀವಿತವನ್ನು ಸಂಹಾರ ಮಾಡು.

ಯೇಷಾಂ ಧರ್ಮಾಸ್ತೇ ಭವಿಷ್ಯಂತ್ಯನಂತಾಃ
ಮಿಥ್ಯಾವೃತ್ತಾನ್ ಮಾರಯಿಷ್ಯತ್ಯಧರ್ಮಃ ।
ತೇನಾತ್ಮಾನಂ ಪ್ಲಾವಯಸ್ವ ವ್ಯಪೇಕ್ಷಂ
ಪಾಪಾತ್ಮನೋ ಮಜ್ಜಯಿಷ್ಯಂತ್ಯಧರ್ಮಾಃ ॥ ೪೦ ॥

ಯಾರಿಗೆ ಧರ್ಮವಿದೆಯೋ ಅವರು ಅನಂತರಾಗುತ್ತಾರೆ (ನಾಶವನ್ನು ಹೊಂದುವುದಿಲ್ಲ). ಮಿಥ್ಯಾಚಾರ ನಿರತರಾದವರನ್ನು ಅಧರ್ಮವು ಕೊಲ್ಲುವುದು. ಅದರಿಂದ ನಿನ್ನನ್ನು ನೀನು ಸಮರ್ಥವಾಗಿ ಪಾಪದಿಂದ ದೂರ ಇಟ್ಟುಕೊಳ್ಳುವವಳಾಗು. ಪಾಪಾತ್ಮರಾದವರನ್ನು ಅಧರ್ಮವೇ ಮುಳುಗಿಸುತ್ತದೆ.

ತಸ್ಮಾತ್ ಕಾಮಂ ರೋಷಮಪ್ಯಾಗತಂ ತ್ವಂ
ಸಂತ್ಯಜ್ಯೋಭೌ ಸಂಹರ ಸರ್ವಜೀವಾನ್ ॥ ೪೧ ॥

ಆದ್ದರಿಂದ ನಿನಗೆ ಉಂಟಾದ ಕಾಮ, ರೋಷ ಇವೆರಡನ್ನೂ ಪರಿತ್ಯಜಿಸಿ ಸರ್ವಜೀವರನ್ನು ಸಂಹಾರ ಮಾಡು.

ನಾರದಃ

ಸಾ ಚೈವಮುಕ್ತಾ ಮೃತ್ಯುಸಂಜ್ಞಾಪದೇಶಾತ್
ಶಾಪಾದ್ ಭೀತಾ ಬಾಢಮಿತ್ಯಬ್ರವೀತ್ ತಮ್ ।
ಸಾ ಚ ಪ್ರಾಣಾನ್ ಪ್ರಾಣಿನಾಂ ಪ್ರಾಯಣಾಂತೇ
ಕಾಮಕ್ರೋಧೌ ಸಂಹರತ್ಯೇವ ಹಿತ್ವಾ ॥ ೪೨ ॥

ನಾರದರು– ಹೀಗೆ ಹೇಳಲ್ಪಟ್ಟ ಅವಳು ಮೃತ್ಯು ಎಂಬ ಹೆಸರು ಇರುವ ಕಾರಣದಿಂದ ಶಾಪಕ್ಕೆ ಹೆದರಿ, ಹಾಗೆಯೇ ಆಗಲಿ ಎಂದು ಬ್ರಹ್ಮದೇವರಿಗೆ ಹೇಳಿದಳು. ಅವಳು ಪ್ರಾಣಿಗಳ ಮರಣಕಾಲದಲ್ಲಿ ಕಾಮ-ಕ್ರೋಧಗಳನ್ನು ಬಿಟ್ಟು ಎಲ್ಲರನ್ನೂ ಸಂಹಾರ ಮಾಡುತ್ತಾಳೆ.

ಮೃತ್ಯುಸ್ತ್ವೇಷಾಂ ವ್ಯಾಧಯಸ್ತತ್ಸುತಾ
ವ್ಯಾಧೀ ರೋಗೈರ್ಯುಜ್ಯತೇ ಯೇನ ದೇಹಃ ॥ ೪೩ ॥

ವ್ಯಾಧಿಗಳಿಂದ ರೋಗವು ಗ್ರಸ್ತವಾಗುವ ಕಾರಣದಿಂದ ಮೃತ್ಯುದೇವತೆಯ ಕಣ್ಣೀರಿನಿಂದ ಹುಟ್ಟಿದ ವ್ಯಾಧಿಗಳೇ ಈ ಪ್ರಜೆಗಳಿಗೆ ಮೃತ್ಯುವಾಗುತ್ತವೆ.

ಸರ್ವೇಷಾಂ ಚ ಪ್ರಾಣಿನಾಂ ಪ್ರಾಯಣಾಂತೇ
ಪ್ರಾಣಾ ಗತ್ವಾ ಸನ್ನಿವೃತ್ತಾಸ್ತಥೈವ ।
ಏವಂ ಸರ್ವೇ ಪ್ರಾಣಿನಸ್ತತ್ರ ಗತ್ವಾ
ಭೂತ್ವಾ ದೇಹಂ ಮರ್ತ್ಯಂ ಯಾಂತಿ ಭೂಯಃ ॥ ೪೪ ॥

ಎಲ್ಲ ಪ್ರಾಣಿಗಳಿಗೂ ಮರಣಕಾಲದಲ್ಲಿ ಪ್ರಾಣಗಳು ಬೇರೆ ಕಡೆಗೆ ಹೋಗಿ ಪುನಃ ಜನ್ಮವನ್ನು ಪಡೆದಾಗ ಹಿಂದಿರುಗಿ ಬರುತ್ತವೆ. ಹೀಗೆ ಎಲ್ಲ ಪ್ರಾಣಿಗಳು ಪರಲೋಕಕ್ಕೆ ಹೋಗಿ ಪುನಃ ದೇಹವನ್ನು ಹೊಂದಿ ಈ ಮರ್ತ್ಯಲೋಕಕ್ಕೆ ಬರುತ್ತವೆ.

ಏವಂ ಸರ್ವೇ ಪ್ರಾಣಿನಸ್ತತ್ರ ಗತ್ವಾ
ವೃತ್ತಾ ದೇವಾ ಮರ್ತ್ಯವದ್ ರಾಜಸಿಂಹ ॥ ೪೫ ॥

ಎಲೈ ರಾಜೇಂದ್ರನೇ, ಹೀಗೆ ಎಲ್ಲ ದೇವತೆಗಳೂ ಸಹ ಪರಲೋಕಕ್ಕೆ ಹೋಗಿ ಮತ್ತೆ ಹಿಂದೆ ಬರುತ್ತಾರೆ.

ದೇಹಗಳಿಗೆ ಮಾತ್ರ ನಾಶ. ಜೀವಸ್ವರೂಪಕ್ಕೆ ನಾಶವಿಲ್ಲ. ಆದ್ದರಿಂದ ಶೋಕ ಪಡಬಾರದು ಎಂದು ಅಭಿಪ್ರಾಯ.

ವಾಯುರ್ಭೀಮೋ ಭೀಮನಾದೋ ಮಹೌಜಾಃ
ಸರ್ವೇಷಾಂ ಚ ಪ್ರಾಣಿನಾಂ ಪ್ರಾಣಭೂತಃ ।
ಅನಾವೃತ್ತಿರ್ದೇಹಿನಾಂ ದೇಹಪಾತೇ
ತಸ್ಮಾದ್ ವಾಯುರ್ದೇವದೇವೋ ವಿಶಿಷ್ಟಃ ॥ ೪೬ ॥

ವಾಯುದೇವರು ಮಹಾಸಾಮರ್ಥ್ಯವುಳ್ಳವರು, ಭಯಂಕರವಾದ ನಾದವುಳ್ಳವರು. ಆದ್ದರಿಂದ ಅಸುರರಿಗೆ ಭಯಂಕರಾದವರು. ಅವರು ಎಲ್ಲಾ ಪ್ರಾಣಿಗಳಿಗೂ ಚೇಷ್ಟಾದಿಪ್ರದರು. ದೇಹಗಳ ಮರಣಕ್ಕೆ ದೇಹದಲ್ಲಿ ಪ್ರಾಣದೇವರು ಇಲ್ಲದಿರುವುದು ಕಾರಣ ಅಥವಾ ದೇಹಗಳಿಗೆ ದೇಹದ ಅನಾವೃತ್ತಿಯು ಎಂದರೆ ಮೋಕ್ಷವು ವಾಯುದೇವರ ಅನುಗ್ರಹದಿಂದ ಆಗುತ್ತದೆ. ಆದ್ದರಿಂದ ದೇವದೇವರಾದ ವಾಯುದೇವರು ಸರ್ವೋತ್ಕೃಷ್ಟರಾದವರು.

ಸರ್ವೇ ದೇವಾ ಮರ್ತ್ಯಸಂಜ್ಞಾವಿಶಿಷ್ಟಃ
ಸರ್ವೇ ಮರ್ತ್ಯಾ ದೇವಸಂಜ್ಞಾವಿಶಿಷ್ಟಾಃ ।
ತಸ್ಮಾತ್ ಪುತ್ರಂ ಮಾ ಶುಚೋ ರಾಜಸಿಂಹ
ಸ್ವರ್ಗಂ ಪ್ರಾಪ್ತೋ ಮೋದತೇ ತ್ವತ್ಸುತಃ ॥ ೪೭ ॥

ಎಲ್ಲ ದೇವತೆಗಳೂ ಮರ್ತ್ಯಸಂಜ್ಞೆಯನ್ನು ಹೊಂದಿದ್ದಾರೆ. ಎಲ್ಲ ಮರ್ತ್ಯರೂ ದೇವಸಂಜ್ಞೆಯಿಂದ ಕೂಡಿದ್ದಾರೆ. ಆದ್ದರಿಂದ ಎಲೈ ರಾಜಸಿಂಹನೇ, ಪುತ್ರನನ್ನು ಕುರಿತು ಶೋಕವನ್ನು ಪಡಬೇಡ. ನಿನ್ನ ಪುತ್ರನು ಸ್ವರ್ಗವನ್ನು ಸೇರಿ ಸಂತೋಷದಿಂದಿದ್ದಾನೆ.

ನಿತ್ಯಂ ರಮ್ಯಾನ್ ವೀರಲೋಕಾನವಾಪ್ಯ
ತ್ಯಕ್ತ್ವಾ ದುಃಖಂ ಸಂಗತಃ ಪುಣ್ಯಕೃದ್ಭಿಃ ।
ಏಷಾ ಮೃತ್ಯುರ್ದೇವಸೃಷ್ಟಾ ಪ್ರಜಾನಾಂ
ಕಾಲೇ ಪ್ರಾಪ್ತೇ ಸಂಹರತ್ಯೇವ ಜಂತೂನ್ ॥ ೪೮ ॥

ನಿತ್ಯವೂ ಮನೋಹರವಾದ ವೀರಲೋಕವನ್ನು ಹೊಂದಿ, ದುಃಖವನ್ನು ತ್ಯಜಿಸಿ, ಪುಣ್ಯವಂತರಿಂದ ಸಮಾಗಮವನ್ನು ಹೊಂದಿದ್ದಾನೆ. ದೇವಸೃಷ್ಟವಾದ ಈ ಮೃತ್ಯುವಾದರೂ ಮರಣಕಾಲವು ಪ್ರಾಪ್ತವಾದಾಗ ಜಂತುಗಳನ್ನು ಸಂಹಾರ ಮಾಡಿಯೇ ತೀರುತ್ತದೆ.

ರೋಗಾ ಹ್ಯೇತೇ ವ್ಯಾಧಯೋ ದೇಹಜಾಶ್ಚ
ಸ್ವಯಂ ಕೃತಾಃ ಪ್ರಾಣಹರಾಃ ಪ್ರಜಾನಾಮ್ ।
ಆತ್ಮಾನಂ ವೈ ದೇಹಿನೋ ಘ್ನಂತಿ ಸರ್ವೇ
ನೈತಾನ್ ಮೃತ್ಯುರ್ದಂಡಪಾಣಿರ್ಹಿನಸ್ತಿ ॥ ೪೯ ॥

ದೇಹಜನ್ಯವಾದ ಈ ವ್ಯಾಧಿಗಳೇ ರೋಗಗಳು. ಇವು ಪ್ರಜೆಗಳಿಂದ ಸ್ವಯಂ ಸಂಪಾದಿಸಲ್ಪಟ್ಟು ಪ್ರಾಣಹರವಾಗುತ್ತವೆ. ಈ ಎಲ್ಲವೂ ದೇಹಗಳ ದೇಹವನ್ನು ಮಾತ್ರ ಸಂಹಾರ ಮಾಡುತ್ತವೆ. ಈ ದೇಹಗಳನ್ನು ದಂಡಪಾಣಿಯಾದ ಮೃತ್ಯುವು ಸಂಹರಿಸುವುದಿಲ್ಲ.

ತಸ್ಮಾನ್ಮೃತಾನ್ ನಾನುಶೋಚಂತಿ ಧೀರಾಃ
ತತ್ತ್ವಂ ಜ್ಞಾತ್ವಾ ನಿಶ್ಚಯಂ ಬ್ರಹ್ಮಕ್ಲೃಪ್ತಮ್ ।
ಏವಂ ಮೃತ್ಯುಂ ದೇವಕ್ಲೃಪ್ತಂ ವಿದಿತ್ವಾ
ಪುತ್ರಾನ್ನಷ್ಟಾನ್ ಶೋಕಮಾಶು ತ್ಯಜ ತ್ವಮ್ ॥ ೫೦ ॥

ಆದ್ದರಿಂದ ಬ್ರಹ್ಮದೇವರು ವಿಧಿಸಿದ ತತ್ವ-ನಿಯಮಗಳನ್ನು ತಿಳಿದು ಧೀರರಾದವರು ಮೃತರಾದವರ ವಿಷಯದಲ್ಲಿ ಶೋಕಪಡುವುದಿಲ್ಲ. ವಿಧಿಯ ನೀತಿಯನ್ನು ಮೀರಲು ಸಾಧ್ಯವಿಲ್ಲದಿರುವುದರಿಂದಲೂ, ಜೀವಸ್ವರೂಪವು ನಿತ್ಯವಾದುದರಿಂದಲೂ ದೇಹನಾಶ ಉಂಟಾದರೂ ಹೆದರಬೇಕಾದ ಕಾರಣವಿಲ್ಲ ಎಂದು ಅಭಿಪ್ರಾಯ.

ಹೀಗೆ ಮೃತ್ಯುವು ದೇವಸೃಷ್ಟವಾದುದು ಎಂದು ತಿಳಿದು ನೀನು ನಷ್ಟರಾದ ಪುತ್ರರ ವಿಷಯದಲ್ಲಿ ಶೀಘ್ರವಾಗಿ ಶೋಕವನ್ನು ತ್ಯಜಿಸು.

ವ್ಯಾಸಃ

ಏತಚ್ಛ್ರುತ್ವಾಽರ್ಥವದ್ವಾಕ್ಯಂ ನಾರದೇನ ಪ್ರಭಾಷಿತಮ್ ।
ಉವಾಚಾಕಂಪನೋ ರಾಜಾ ಸಖಾಯಂ ನಾರದಂ ತದಾ ॥ ೫೧ ॥

ವ್ಯಾಸರು– ನಾರದರು ಆಡಿದ ಈ ಅರ್ಥಪೂರ್ಣ ಮಾತುಗಳನ್ನು ಕೇಳಿ ರಾಜನಾದ ಅಕಂಪನನು ತನ್ನ ಮಿತ್ರರಾದ ನಾರದರನ್ನು ಕುರಿತು ಆಗ ಮಾತನಾಡಿದನು.

ವ್ಯಪೇತಶೋಕಃ ಪ್ರೀತೋಽಸ್ಮಿ ಭಗವನ್ಸರ್ಷಿಸತ್ತಮ ।
ಶ್ರುತ್ವೇತಿಹಾಸಂ ತತ್ತ್ವತೋಽದ್ಯ ಕೃತಾರ್ಥೋಽಸ್ಮ್ಯಭಿವಾದಯೇ ॥ ೫೨ ॥

ಪೂಜ್ಯರೇ, ಋಷಿಶ್ರೇಷ್ಠರೇ, ನಾನು ಶೋಕವನ್ನು ಕಳೆದುಕೊಂಡು ಪ್ರಸನ್ನನಾಗಿದ್ದೇನೆ. ಈ ದಿನ ನಿಮ್ಮಿಂದ ಈ ಇತಿಹಾಸವನ್ನು ಕೇಳಿ ಕೃತಾರ್ಥನಾಗಿದ್ದೇನೆ. ನಿಮಗೆ ನಮಸ್ಕರಿಸುತ್ತೇನೆ ಎಂದು ಹೇಳಿದನು.

ತಥೋಕ್ತೋ ನಾರದಸ್ತೇನ ರಾಜ್ಞಾ ದೇವರ್ಷಿಸತ್ತಮಃ ।
ಜಗಾಮ ನಂದನಂ ಶೀಘ್ರಮಶೋಕವನಮಾತ್ಮನಃ ॥ ೫೩ ॥

ಆ ರಾಜನಿಂದ ಹೀಗೆ ಹೇಳಲ್ಪಟ್ಟ ದೇವರ್ಷಿಶ್ರೇಷ್ಠರಾದ ನಾರದರು ಶೀಘ್ರವಾಗಿ ಸಂತೋಷಕರವಾದ ಅಶೋಕವನಕ್ಕೆ ಹೋದರು.

ಪುಣ್ಯಂ ಯಶಸ್ಯಮಾಯುಷ್ಯಂ ಸ್ವರ್ಗೀಯಂ ಧರ್ಮ್ಯಮೇವ ಚ ।
ಅಸ್ಯೇತಿಹಾಸಸ್ಯ ಸದಾ ಶ್ರವಣಂ ಶ್ರಾವಣಂ ತಥಾ ॥ ೫೪ ॥

ಈ ಇತಿಹಾಸದ ಶ್ರವಣ ಮತ್ತು ಶ್ರಾವಣಗಳು ಯಾವಾಗಲೂ ಪುಣ್ಯಪ್ರದವಾದವುಗಳು, ಕೀರ್ತಿಪ್ರದವಾದವುಗಳು, ಆಯುಷ್ಯಪ್ರದವಾದವುಗಳು, ಸ್ವರ್ಗಪ್ರಾಪಕವಾದ ಧರ್ಮಪ್ರದವಾದವುಗಳು.

ಏವಮರ್ಥಂ ಹಿ ಸಂಶ್ರುತ್ಯ ಜ್ಞಾತ್ವಾ ಚೈವ ಸ ಪಾಂಡವ ।
ಕ್ಷತ್ರಧರ್ಮಂ ಚ ವಿಜ್ಞಾಯ ಶೂರಾಣಾಂ ಚ ಪರಾಂ ಗತಿಮ್ ।
ಸಂಪ್ರಾಪ್ತೋ ಹಿ ಮಹಾವೀರ್ಯಃ ಸ್ವರ್ಗಲೋಕಂ ಮಹಾರಥಃ ॥ ೫೫ ॥

ಎಲೈ ಪಾಂಡವನೇ, ಈ ಅರ್ಥವನ್ನು ಚೆನ್ನಾಗಿ ಕೇಳಿ, ತಿಳಿದು, ಕ್ಷತ್ರಿಯಧರ್ಮವನ್ನು ತಿಳಿದು, ಶೂರರಿಗೆ ಉಂಟಾಗುವ ಶ್ರೇಷ್ಠಗತಿಯನ್ನು ತಿಳಿದು, ಮಹಾಪರಾಕ್ರಮಿಯೂ, ಮಹಾರಥನೂ ಆದ ಅಭಿಮನ್ಯುವು ಸ್ವರ್ಗಲೋಕವನ್ನು ಸೇರಿದ್ದಾನೆ.

ಅಭಿಮನ್ಯುಃ ಪರಾನ್ ಹತ್ವಾ ಪ್ರಮುಖೇ ಸರ್ವಧನ್ವಿನಾಮ್ ।
ಯುದ್ಧ್ಯಮಾನೋ ಮಹೇಷ್ವಾಸಃ ತ್ಯಕ್ತಾತ್ಮಾಽಭಿಮುಖೋ ರಣೇ ॥೫೬॥

ಅಸಿನಾ ಗದಯಾ ಶಕ್ತ್ಯಾ ಧನುಷಾ ಚ ಮಹಾರಥಃ ।
ವಿರಜಾಃ ಸೋಮಸೂನುಃ ಸ ಪುನಸ್ತತ್ರ ಪ್ರಲೀಯತ ॥ ೫೭ ॥

ಮಹಾಧನುರ್ಧಾರಿಯಾದ ಅಭಿಮನ್ಯುವು ಎಲ್ಲ ಧನುರ್ಧಾರಿಗಳ ಎದುರಿನಲ್ಲಿ ನಿಂತು ರಣರಂಗದಲ್ಲಿ ಯುದ್ಧವನ್ನು ಮಾಡುತ್ತಾ, ಜೀವಿತದ ಹಂಗನ್ನು ತೊರೆದು ಶತ್ರುಗಳನ್ನು ಕೊಂದಿದ್ದಾನೆ. ಆ ಮಹಾರಥನೂ, ಚಂದ್ರನ ಪುತ್ರನೂ ಆದ ಅವನು ಖಡ್ಗದಿಂದ, ಗದೆಯಿಂದ, ಶಕ್ತಿಯಿಂದ, ಧನುಸ್ಸಿನಿಂದ ಹೊಡೆಯಲ್ಪಟ್ಟು, ಎಲ್ಲ ದೋಷಗಳನ್ನೂ ಕಳೆದುಕೊಂಡು ಪುನಃ ಆ ಚಂದ್ರನಲ್ಲಿಯೇ ಹೋಗಿ ಸೇರಿದ್ದಾನೆ.

ತಸ್ಮಾತ್ ಪರಾಂ ಧೃತಿಂ ಕೃತ್ವಾ ಭ್ರಾತೃಭಿಃ ಸಹ ಪಾಂಡವ ।
ಅಪ್ರಮತ್ತಃ ಸುಸಂರಬ್ಧೋ ರಾಜನ್ ಯುದ್ಧ್ಯಸ್ವ ಶತ್ರುಭಿಃ ॥ ೫೮ ॥

ಎಲೈ ಪಾಂಡವನೇ, ಆದ್ದರಿಂದ ಸಹೋದರರ ಜೊತೆಯಲ್ಲಿ ಉತ್ತಮವಾದ ಧೈರ್ಯವನ್ನು ಆಶ್ರಯಿಸಿ, ಎಚ್ಚರಿಕೆಯಿಂದ ಕೂಡಿದವನಾಗಿ, ಕೋಪದಿಂದ ಶತ್ರುಗಳ ಜೊತೆಯಲ್ಲಿ ಯುದ್ಧವನ್ನು ಮಾಡು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಂ ದ್ರೋಣಪರ್ವಣಿ ಏಕಪಂಚಾಶೋಽಧ್ಯಾಯಃ ॥

॥ ಅಭಿಮನ್ಯುವಧಪರ್ವಣಿ ವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಐವತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಐವತ್ತೆರಡನೆಯ ಅಧ್ಯಾಯ

ವ್ಯಾಸರಿಂದ ಯುಧಿಷ್ಠಿರನನ್ನು ಕುರಿತು ಷೋಡಶ ರಾಜರ ಉಪಾಖ್ಯಾನದ ಪ್ರಾರಂಭ. ಅದರಲ್ಲಿ ಮರುತ್ತ ರಾಜನ ಚರಿತೆ.

ಸಂಜಯಃ

ಶ್ರುತ್ವಾ ಮೃತ್ಯೋಃ ಸಮುತ್ಪತ್ತಿಂ ಕರ್ಮಾಣ್ಯನುಪಮಾನಿ ಚ ।
ಧರ್ಮರಾಜಃ ಪುನರ್ವ್ಯಾಸಂ ಪ್ರಸಾದ್ಯೇನಮಥಾಬ್ರವೀತ್ ॥ ೧ ॥

ಸಂಜಯ– ಮೃತ್ಯುವಿನ ಉತ್ಪತ್ತಿಯನ್ನೂ ಮತ್ತು ಅಸದೃಶವಾದ ಕರ್ಮಗಳನ್ನೂ ಕೇಳಿ, ಧರ್ಮರಾಜನು ವ್ಯಾಸರನ್ನು ಪ್ರಸನ್ನಗೊಳಿಸಿ, ಪುನಃ ಅವರನ್ನು ಕುರಿತು ಮಾತನಾಡಿದನು.

ಸುರುಚಃ ಪುಣ್ಯಕರ್ಮಾಣಃ ಶಕ್ರಪ್ರತಿಮವಿಕ್ರಮಾಃ ।
ಪೂರ್ವಂ ರಾಜರ್ಷಯೋ ಬ್ರಹ್ಮನ್ ಕಿಯಂತೋ ಮೃತ್ಯುನಾ ಹತಾಃ ॥

ಎಲೈ ಬ್ರಾಹ್ಮಣರೇ, ಒಳ್ಳೆಯ ಕಾಂತಿಯುಕ್ತರೂ, ಪುಣ್ಯಕರ್ಮಗಳನ್ನು ಮಾಡಿದವರೂ, ಇಂದ್ರನಿಗೆ ಸಮಾನವಾದ ಪರಾಕ್ರಮಶಾಲಿಗಳೂ ಆದ ಎಷ್ಟು ಜನ ರಾಜರ್ಷಿಗಳು ಹಿಂದೆ ಮೃತ್ಯುವಿನಿಂದ ಹತರಾಗಿದ್ದಾರೆ?

ಭೂಯ ಏವ ತು ಮಾ ತಥ್ಯೈರ್ವಚೋಭಿರುಪಬೃಂಹಯ ।
ರಾಜರ್ಷೀಣಾಂ ಪುರಾಣಾನಾಂ ಸಮಾಶ್ವಾಸಯ ಕರ್ಮಭಿಃ ॥ ೩ ॥

ನನಗೆ ಪುನಃ ಯಥಾರ್ಥವಾದ ಉಪದೇಶವನ್ನು ಕೊಟ್ಟು, ನನ್ನ ಜ್ಞಾನವನ್ನು ಅಭಿವೃದ್ಧಿಪಡಿಸಿ. ಪ್ರಾಚೀನ ಕಾಲದ ರಾಜರ್ಷಿಗಳ ಶ್ರೇಷ್ಠ ಕರ್ಮಗಳನ್ನು ಹೇಳಿ ನನ್ನನ್ನು ಸಮಾಧಾನಗೊಳಿಸಿ.

ಕಿಯಂತ್ಯೋ ದಕ್ಷಿಣಾ ದತ್ತಾಃ ಕಾಶ್ಚ ದತ್ತಾ ಮಹಾತ್ಮಭಿಃ ।
ರಾಜರ್ಷಿಭಿಃ ಪುಣ್ಯಕೃದ್ಭಿಸ್ತದ್ಭವಾನ್ ಪ್ರಬ್ರವೀತು ಮೇ ॥ ೪ ॥

ಮಹಾತ್ಮರೂ, ಪುಣ್ಯಕರ್ಮವನ್ನು ಮಾಡಿದವರೂ ಆದ ಆ ರಾಜರ್ಷಿಗಳು ಎಷ್ಟು ದಕ್ಷಿಣೆಯನ್ನು ಕೊಟ್ಟರು, ಎಂತಹ ದಕ್ಷಿಣೆಯನ್ನು ಕೊಟ್ಟರು ಎಂದು ತಾವು ನನಗೆ ಹೇಳಿ.

ವ್ಯಾಸಃ

ಅನ್ಯೇಽಪಿ ಯಜ್ವನಾಂ ಲೋಕಾ ಅನ್ಯೇ ಚಾಪಿ ತಪಸ್ವಿನಾಮ್ ।
ಕ್ಷಮಾವತಾಂ ಚ ತ್ರೀಂಲ್ಲೋಕಾನ್ ಶೂರಾ ಗಚ್ಛಂತಿ ಭಾರತ ॥ ೫ ॥

ವ್ಯಾಸರು– ಯಾಗವನ್ನು ಮಾಡಿದವರ ಲೋಕಗಳು ಬೇರೆ. ತಪಸ್ಸನ್ನು ಮಾಡಿದವರ ಲೋಕಗಳು ಬೇರೆ. ಕ್ಷಮಾದಿ ಗುಣಗಳನ್ನು ಉಳ್ಳವರ ಲೋಕಗಳು ಬೇರೆ. ಎಲೈ ಭಾರತನೇ, ಶೂರರಾದವರು ಆ ಮೂರು ಲೋಕಗಳನ್ನೂ ಹೊಂದುತ್ತಾರೆ.

ಕ್ಷತ್ರಿಯಸ್ಯ ತು ಸಂಗ್ರಾಮೇ ಶತ್ರೂನ್ ಹತ್ವಾ ಹತಸ್ಯ ವಾ ।
ಫಲಮತ್ಯಂತಮಿತ್ಯಾಹುರ್ಧರ್ಮಶಾಸ್ತ್ರವಿದೋ ಜನಾಃ ॥ ೬ ॥

ಯುದ್ಧದಲ್ಲಿ ಶತ್ರುಗಳನ್ನು ಕೊಲ್ಲುವ ಅಥವಾ ತಾನೂ ಹತನಾಗುವ ಕ್ಷತ್ರಿಯನಿಗೆ ಅತ್ಯಂತ ಶ್ರೇಷ್ಠವಾದ ಫಲವಿದೆ ಎಂದು ಧರ್ಮಶಾಸ್ತ್ರವನ್ನು ತಿಳಿದ ಜನರು ಹೇಳುತ್ತಾರೆ.

ವೇದವಿದ್ಯಾವ್ರತಸ್ನಾತಾ ಯಜ್ವಾನಃ ಪುತ್ರಿಣಶ್ಚ ಯೇ ।
ತೇಭ್ಯಃ ಪರಾಘ್ರ್ಯಾ ಯಜ್ವಾನೋ ಯಜ್ವಭ್ಯಶ್ಚ ತನುತ್ಯಜಃ ॥ ೭ ॥

ವೇದವಿದ್ಯಾಪಾರಂಗತರಾದವರು, ಯಾಗವನ್ನು ಮಾಡಿದವರು, ಪುತ್ರವಂತರಾದವರು ಈ ಮೂವರಲ್ಲಿ ಯಾಗವನ್ನು ಮಾಡುವವರು ಶ್ರೇಷ್ಠರಾದವರು. ಆದರೆ ಯುದ್ಧದಲ್ಲಿ ದೇಹತ್ಯಾಗವನ್ನು ಮಾಡುವ ಕ್ಷತ್ರಿಯರು ಅವರಿಗಿಂತ ಶ್ರೇಷ್ಠರಾದವರು.

ಸ ವೀರೋ ಯಜ್ವನೋ ನಿತ್ಯಂ ಕ್ಷತ್ರಿಯಾನಾರ್ಜುನಿರ್ಗತಃ ।
ಲೋಕಾನ್ ಪುಣ್ಯತಮಾನಿಷ್ಟಾನಿತಿ ವಿದ್ಧಿ ವಿಶಾಂಪತೇ ॥ ೮ ॥

ಎಲೈ ರಾಜನೇ, ಅರ್ಜುನಪುತ್ರನಾದ, ವೀರನಾದ ಅಭಿಮನ್ಯುವು ಅತ್ಯಂತ ಪುಣ್ಯರೂಪವೂ, ಇಷ್ಟವೂ ಆದ ಯಾಗ ಮಾಡುವವರ ಲೋಕವನ್ನು ಹೊಂದಿದ್ದಾನೆಂದು ತಿಳಿ.

ಸರ್ವೇಷಾಂ ನೃಪಸಿಂಹಾನಾಂ ಶೃಣು ಯಜ್ಞಾನ್ ನೃಪೋತ್ತಮ ।
ತಾನತಿಕ್ರಮ್ಯ ಗಚ್ಛಂತಿ ಸ್ವರ್ಗಕಾಮಾಸ್ತನುತ್ಯಜಃ ॥ ೯ ॥

ಎಲೈ ರಾಜಶ್ರೇಷ್ಠನೇ, ಎಲ್ಲ ಶ್ರೇಷ್ಠರಾದ ರಾಜರುಗಳು ಮಾಡಿದ ಯಜ್ಞಗಳನ್ನು ಕೇಳು. ಸ್ವರ್ಗದ ಆಸೆಯಿಂದ ಯುದ್ಧದಲ್ಲಿ ದೇಹತ್ಯಾಗವನ್ನು ಮಾಡುವ ಕ್ಷತ್ರಿಯರು ಅವರೆಲ್ಲರನ್ನೂ ಮೀರಿ ಉನ್ನತ ಸ್ಥಾನಕ್ಕೆ ಹೋಗುತ್ತಾರೆ.

ಯುಧಿಷ್ಠಿರಃ

ಸರ್ವೇಷಾಂ ಯಜ್ವನಾಂ ಯಜ್ಞಾನ್ ಶ್ರೋತುಮಿಚ್ಛಾಮಿ ಸುವ್ರತ ।
ದಕ್ಷಿಣಾಶ್ಚಾನುರೂಪೇಭ್ಯೋ ದತ್ತಾ ರಾಜರ್ಷಿಸತ್ತಮೈಃ ॥ ೧೦ ॥

ಯುಧಿಷ್ಠಿರ– ಎಲೈ ಒಳ್ಳೆಯ ವ್ರತಶಾಲಿಗಳೇ, ರಾಜರ್ಷಿಶ್ರೇಷ್ಠರು ಮಾಡಿದ ಎಲ್ಲಾ ಯಾಗಗಳನ್ನೂ ಮತ್ತು ಯೋಗ್ಯರಾದ ಪಾತ್ರರಲ್ಲಿ ಅವರು ಮಾಡಿದ ಅನುರೂಪವಾದ ದಾನ-ದಕ್ಷಿಣೆಗಳನ್ನೂ ಕೇಳಲು ಇಷ್ಟಪಡುತ್ತೇನೆ.

ವ್ಯಾಸಃ

ಶೈಬ್ಯಸ್ಯ ನೃಪತೇಃ ಪುತ್ರಃ ಸೃಂಜಯೋ ನಾಮ ಭೂಮಿಪಃ ।
ಸಖಾಯೌ ತಸ್ಯ ಚಾಭೂತಾಮ್ ಋಷೀ ಪರ್ವತನಾರದೌ ॥ ೧೧ ॥

ವ್ಯಾಸರು– ಶೈಬ್ಯರಾಜನಿಗೆ ಸೃಂಜಯನೆಂಬ ಪುತ್ರನಿದ್ದನು. ಋಷಿಗಳಾದ ಪರ್ವತ ಮತ್ತು ನಾರದರು ಅವನಿಗೆ ಸ್ನೇಹಿತರಾಗಿದ್ದರು.

ತೌ ಕದಾಚಿದ್ ಗೃಹಂ ತಸ್ಯ ಪ್ರವಿಷ್ಟೌ ತದ್ದಿದೃಕ್ಷಯಾ ।
ವಿಧಿವಚ್ಚಾರ್ಚಿತೌ ತೇನ ಪ್ರೀತೌ ತತ್ರೋಷತುಃ ಸುಖಮ್ ॥ ೧೨ ॥

ಒಮ್ಮೆ ಅವರು ಅವನನ್ನು ನೋಡಲು ಬಯಸಿ ಅವನ ಅರಮನೆಗೆ ಬಂದರು. ಅವನಿಂದ ವಿಧಿವತ್ತಾಗಿ ಪೂಜಿಸಲ್ಪಟ್ಟು ಸಂತೋಷಗೊಂಡು ಸುಖವಾಗಿ ಅಲ್ಲಿಯೇ ವಾಸ ಮಾಡಿದರು.

ತಂ ಕದಾಚಿತ್ ಸುಖಾಸೀನಂ ತಾಭ್ಯಾಂ ಸಹ ಶುಚಿಸ್ಮಿತಾ ।
ದುಹಿತಾಽಭ್ಯಾಗಮತ್ ಕನ್ಯಾ ಸೃಂಜಯಂ ವರವರ್ಣಿನೀ ॥ ೧೩ ॥

ತಯಾಭಿವಾದಿತಂ ಕನ್ಯಾಮಭ್ಯನಂದದ್ ಯಥಾವಿಧಿ
ತತ್ಸಲಿಂಗಾಭಿರಾಶೀರ್ಭಿರಿಷ್ಟಾಭಿರಭಿತಸ್ತಥಾ ।
ತಾಂ ನಿರೀಕ್ಷ್ಯಾಬ್ರವೀದ್ ವಾಕ್ಯಂ ನಾರದಃ ಪ್ರಹಸನ್ನಿವ ॥ ೧೪ ॥

ಒಮ್ಮೆ ಆ ಇಬ್ಬರು ಋಷಿಗಳ ಜೊತೆಯಲ್ಲಿ ಸೃಂಜಯನು ಸುಖವಾಗಿ ಕುಳಿತಿರಲು ಶುಚಿಸ್ಮಿತೆಯೂ, ಸುಂದರಿಯೂ ಆದ ಸೃಂಜಯನ ಮಗಳು ಅಲ್ಲಿಯೇ ಬಂದಳು. ನಮಸ್ಕರಿಸಿದ ಅವಳನ್ನು ನೋಡಿ ನಾರದರು ವಿಧಿವತ್ತಾಗಿ ಅವಳಿಗೆ ಇಷ್ಟವಾದ ಅನೇಕ ಆಶೀರ್ವಾದಗಳನ್ನು ಮಾಡಿ, ಅವಳನ್ನು ನೋಡಿ ನಗುತ್ತಾ ಮಾತನಾಡಿದರು.

ಕಸ್ಯೇಯಂ ತ್ವಾಯತಾಪಾಂಗೀ ಸರ್ವಲಕ್ಷಣಸಂಯುತಾ ।
ಉಷಾ ಸ್ವಿದ್ಭಾಸ್ವದರ್ಕಸ್ಯ ಜ್ವಲನಸ್ಯ ಶಿಖಾ ತ್ವಿಯಮ್ ।
ಹ್ರೀಃ ಶ್ರೀಃ ಕೀರ್ತಿರ್ಧೃತಿಃ ಸಿದ್ಧಿಃ ತುಷ್ಟಿಶ್ಚಂದ್ರಮಸಃ ಪ್ರಭಾ ॥೫೫

(ಎಲೈ ರಾಜನೇ) ವಿಶಾಲನೇತ್ರೆಯೂ, ಸರ್ವಲಕ್ಷಣ ಸಂಪನ್ನಳೂ ಆದ ಇವಳು ಯಾರ ಪುತ್ರಿ? ಇವಳೇನು ಉಷಾದೇವಿಯೋ ಅಥವಾ ಸೂರ್ಯನ ಪ್ರಭೆಯೋ ಅಥವಾ ಅಗ್ನಿಯ ಶಿಖೆಯೋ ಅಥವಾ ಹ್ರೀ, ಶ್ರೀ, ಕೀರ್ತಿ, ಧೃತಿ, ಸಿದ್ಧಿ, ಪುಷ್ಟಿ ಮೊದಲಾದ ಲಕ್ಷ್ಮಿಯ ರೂಪವೋ ಅಥವಾ ಚಂದ್ರನ ಪ್ರಭೆಯೋ?

ಏವಂ ಬ್ರುವಾಣಂ ದೇವರ್ಷಿಂ ನೃಪತಿಃ ಸೃಂಜಯೋಽಬ್ರವೀತ್ ।
ಮಮೇಯಂ ಭಗವನ್ ವತ್ಸಾ ವರ್ಯಾ ವರಮಭೀಪ್ಸತಿ ॥ ೧೬ ॥

ಹೀಗೆ ಹೇಳುತ್ತಿದ್ದ ದೇವರ್ಷಿಗಳಾದ ನಾರದರನ್ನು ಕುರಿತು ರಾಜನಾದ ಸೃಂಜಯನು ಪೂಜ್ಯರೇ, ಇವಳು ನನ್ನ ಪುತ್ರಿ. ವರನನ್ನು ಬಯಸುತ್ತಾಳೆ ಎಂದು ಹೇಳಿದನು.

ನಾರದಸ್ತ್ವಬ್ರವೀದೇನಂ ದೇಹಿ ಮಹ್ಯಮಿಮಾಂ ನೃಪ ।
ಭಾರ್ಯಾರ್ಥೇ ತ್ವಂ ಮಹಚ್ಛ್ರೇಯಃ ಪ್ರಾಪ್ತುಂ ಚೇದಿಚ್ಛಸೇಽನಘ ॥೧೭॥

ನಾರದರು ಅವನನ್ನು ಕುರಿತು– ರಾಜನೇ, ಇವಳನ್ನು ನನಗೆ ಪತ್ನಿಯಾಗಿ ಕೊಟ್ಟುಬಿಡು. ಎಲೈ ಅನಘನೇ, ನಿನಗೆ ದೊಡ್ಡಶ್ರೇಯಸ್ಸು ಉಂಟಾಗಬೇಕಾದರೆ ಹೀಗೆ ಮಾಡು ಎಂದು ಹೇಳಿದರು.

ತದಾನೀತ್ಯೇವ ಸುಪ್ರೀತಃ ಪ್ರಾಂಜಲಿಃ ಪ್ರಾಹ ನಾರದಮ್ ॥ ೧೮ ॥

ರಾಜನು ಸಂತೋಷಗೊಂಡು ಕೈಮುಗಿದು, ನಾರದರನ್ನು ಕುರಿತು ಕೊಡುವೆನು ಎಂದೇ ಹೇಳಿದನು.

ಏವಮುಕ್ತೇ ನೃಪತಿನಾ ಕ್ರೋಧಪರ್ಯಾಕುಲೇಕ್ಷಣಃ ।
ಪರ್ವತಸ್ತು ಸುಸಂಕ್ರುದ್ಧೋ ನಾರದಂ ವಾಕ್ಯಮಬ್ರವೀತ್ ॥ ೧೯ ॥

ರಾಜನು ಹೀಗೆ ಹೇಳುತ್ತಿರಲು ಪರ್ವತರು ಬಹಳ ಕೋಪಗೊಂಡು, ಕೋಪದಿಂದ ಜ್ವಲಿಸುವ ನೇತ್ರವುಳ್ಳವರಾಗಿ ನಾರದರನ್ನು ಕುರಿತು ಮಾತನಾಡಿದರು.

ಪೂರ್ವಂ ಮಮೇಮಾಂ ಮನಸಾ ವಿದ್ಧಿ ಭಾರ್ಯಾಂ ವೃತಾಮೃಷೇ ।
ಯಸ್ಮಾದಪಾಚರಸ್ತಸ್ಮಾತ್ ಸ್ವರ್ಗಮಾರ್ಗಂ ನ ಗಚ್ಛಸಿ ।
ಏವಮುಕ್ತೋ ನಾರದಸ್ತಂ ಪ್ರತ್ಯುವಾಚೋತ್ತರಂ ವಚಃ ॥ ೨೦ ॥

ಎಲೈ ಋಷಿಯೇ, ಇವಳನ್ನು ನಾನು ಮೊದಲೇ ನನ್ನ ಮನಸ್ಸಿನಲ್ಲಿ ಭಾರ್ಯೆ ಎಂದು ವರಿಸಿದ್ದೇನೆ. ಅವಳನ್ನು ನೀನು ನನ್ನಿಂದ ವಿಮೋಚಿಸಿದ ಕಾರಣದಿಂದ ನೀನು ಸ್ವರ್ಗ ಮಾರ್ಗದಲ್ಲಿ ಹೋಗುವುದಿಲ್ಲ (ಎಂದು ಹೇಳಿದರು). ಈ ಮಾತುಗಳನ್ನು ಕೇಳಿದ ನಾರದರು ಅದಕ್ಕೆ ಉತ್ತರ ರೂಪವಾಗಿ ಮಾತನಾಡಿದರು.

ಮನೋವಾಗ್ಬುದ್ಧಿಸಂಭಾಷಾಃ ಸತ್ಯಂ ತೋಯಮಥಾಗ್ನಯಃ ।
ಪಾಣಿಗ್ರಹಣಮಂತ್ರಾಶ್ಚ ಪ್ರಥಿತಂ ದಾರಲಕ್ಷಣಮ್ ॥ ೨೧ ॥

ಮನೋ-ವಾಕ್-ಬುದ್ಧಿಗಳ ಸಾಮರಸ್ಯ, ಸಂಭಾಷಣೆ, ಕನ್ಯಾದಾನ ಪ್ರತಿಜ್ಞೆ, ಧಾರೋದಕ ಪೂರ್ವಕವಾಗಿ ದಾನ, ಅಗ್ನಿಯ ಸಮ್ಮುಖದಲ್ಲಿ ಪಾಣಿಗ್ರಹಣ, ವೇದಮಂತ್ರಗಳು- ಇವು ವಿವಾಹದ ಅಂಗಗಳೆಂದು ಪ್ರಸಿದ್ಧವಾಗಿವೆ.

ನ ತ್ವೇಷಾಂ ನಿಶ್ಚಿತಾ ನಿಷ್ಠಾ ತ್ವಯಾ ಸಾ ಮನಸಾ ಸ್ಮೃತಾ ।

ಇವುಗಳಲ್ಲಿ ಯಾವ ಒಂದನ್ನೂ ಇಲ್ಲಿ ಅನುಸರಿಸಿಲ್ಲ. ನೀನು ಕೇವಲ ಮನಸ್ಸಿನಿಂದ ಅವಳನ್ನು ಸ್ಮರಿಸಿದ್ದೀಯಷ್ಟೆ?

ಏವಂ ವಿದ್ವಾಂಸ್ತು ಮಾಂ ಯಸ್ಮಾದ್ ಅನುವ್ಯಾಹೃತವಾನಸಿ ॥ ೨೨ ॥

ತಸ್ಮಾತ್ ತ್ವಮಪಿ ನ ಸ್ವರ್ಗಂ ಗಮಿಷ್ಯಸಿ ಮಯಾ ವಿನಾ ।
ಅನ್ಯೋನ್ಯಮೇವಮುಕ್ತ್ವಾ ತು ಯಥಾಸತ್ಯತಮೂಷತುಃ ॥ ೨೩ ॥

ಇದು ತಿಳಿದಿದ್ದರೂ ಸಹ ನೀನು ನನ್ನನ್ನು ಕುರಿತು ಹೀಗೆ ಶಾಪರೂಪವಾದ ಮಾತನ್ನು ಆಡಿದುದರಿಂದ ನೀನೂ ಸಹ ನನ್ನ ಜೊತೆಯಿಲ್ಲದೆ ಸ್ವರ್ಗಕ್ಕೆ ಹೋಗುವುದಿಲ್ಲ, ಹೀಗೆ ಪರಸ್ಪರವಾಗಿ ಹೇಳಿಕೊಂಡು, ಸೃಂಜಯನ ಸತ್ಕಾರವನ್ನು ಸ್ವೀಕರಿಸಿ, ಅಲ್ಲಿಯೇ ವಾಸ ಮಾಡಿದರು.

ಸೃಂಜಯೋಽಹರ್ಷಯದ್ ವಿಪ್ರಾನ್ ಸ್ನಾನಾಚ್ಛಾದನಭೋಜನೈಃ ।
ಪುತ್ರಕಾಮಃ ಪರಂ ಶಕ್ತ್ಯಾ ಯತ್ನೇನಾಹರಹಃ ಶುಚಿಃ ॥ ೨೪ ॥

ಪುತ್ರಕಾಮನಾದ ಸೃಂಜಯನು ಪ್ರತಿದಿನವೂ ಬಹಳ ಪ್ರಯತ್ನಪಟ್ಟು ಶುಚಿಯಾಗಿ ಬ್ರಾಹ್ಮಣರನ್ನು ಸ್ನಾನ-ವಸ್ತ್ರ-ಭೋಜನಗಳಿಂದ ಸಂತೋಷಪಡಿಸಿದನು.

ತಸ್ಯ ಪ್ರಸನ್ನಾ ವಿಪ್ರೇಂದ್ರಾಃ ಕದಾಚಿತ್ ಪುತ್ರದರ್ಶಿನಃ ।
ತಪಃಸ್ವಾಧ್ಯಾಯನಿರತಾ ವೇದವೇದಾಂಗಪಾರಗಾಃ ॥ ೨೬ ॥

ಸಹಿತಾ ನಾರದಂ ಪ್ರಾಹುರ್ದೇಹ್ಯಸ್ಮೈ ವರಮೀಪ್ಸಿತಮ್ ।
ತಥೇತ್ಯುಕ್ತ್ವಾ ದ್ವಿಜೇಭ್ಯಶ್ಚ ಸೃಂಜಯಂ ನಾರದೋಽಬ್ರವೀತ್ ।
ವರಂ ವೃಣೀಷ್ವ ಭದ್ರಂ ತೇ ಯಾದೃಶಂ ಪುತ್ರಮಿಚ್ಛಸಿ ॥ ೨೭ ॥

ಅವನಿಗೆ ಪುತ್ರಫಲ ಇರುವುದೆಂದು ನಿರೀಕ್ಷಿಸಿದ, ಪ್ರಸನ್ನರಾದ, ವೇದವೇದಾಂಗ ಪಾರಂಗತರೂ, ತಪಃಸ್ವಾಧ್ಯಾಯ ನಿರತರೂ ಆದ ಬ್ರಾಹ್ಮಣಶ್ರೇಷ್ಠರು ಜೊತೆಯಲ್ಲಿ ಬಂದು ನಾರದರನ್ನು ಕುರಿತು ಈ ರಾಜನಿಗೆ ಇಷ್ಟವಾದ ವರವನ್ನು ಕೊಡಿ ಎಂದು ಕೇಳಿದರು. ನಾರದರು ಬ್ರಾಹ್ಮಣರನ್ನು ಕುರಿತು ಹಾಗೆಯೇ ಆಗಲಿ ಎಂದು ಹೇಳಿ, ಸೃಂಜಯನನ್ನು ಕುರಿತು– 'ನಿನಗೆ ಮಂಗಳವಾಗಲಿ, ವರವನ್ನು ಕೇಳು, ಎಂತಹ ಪುತ್ರನನ್ನು ಬಯಸುತ್ತೀಯೆ?' ಎಂದು ಕೇಳಿದರು.

ತಥೋಕ್ತಃ ಪ್ರಾಂಜಲೀ ರಾಜಾ ಪುತ್ರಂ ವವ್ರೇ ಗುಣಾನ್ವಿತಮ್ ।
ಯಶಸ್ವಿನಂ ಕೀರ್ತಿಮಂತಂ ದರ್ಶನೀಯಮನಿಂದಿತಮ್ ॥ ೨೮ ॥

ಯಸ್ಯ ಮೂತ್ರಂ ಪುರೀಷಂ ಚ ಸ್ವೇದಃ ಕ್ಲೇದಶ್ಚ ಕಾಂಚನಮ್ ।
ಸರ್ವಂ ಭವೇತ್ಪ್ರಸಾದಾದ್ ವೈ ತಾದೃಶಂ ತನಯಂ ವೃಣೇ ॥ ೨೯ ॥

ಹೀಗೆ ಹೇಳಲ್ಪಟ್ಟ ರಾಜನು ಕೈಗಳನ್ನು ಮುಗಿದು, ತನಗೆ ಗುಣವಂತನೂ, ಯಶಸ್ವಿಯೂ, ಕೀರ್ತಿವಂತನೂ, ಸುಂದರನೂ, ಅನಿಂದಿತನೂ ಆದ ಪುತ್ರನು ಬೇಕು. ಅವನ ಮೂತ್ರ-ಮಲ-ಬೆವರು ಎಲ್ಲವೂ ನಿಮ್ಮ ಅನುಗ್ರಹದಿಂದ ಸುವರ್ಣಮಯ-ವಾಗಿರಬೇಕು. ಅಂತಹ ಪುತ್ರನನ್ನು ಬೇಡುತ್ತೇನೆ ಎಂದು ಹೇಳಿದನು.

ವ್ಯಾಸಃ

ತಥಾ ಭವಿಷ್ಯತೀತ್ಯುಕ್ತೇ ಜಜ್ಞೇ ತಸ್ಯೇಪ್ಸಿತಃ ಸುತಃ ।
ಕಾಂಚನಸ್ಯಾಕರಃ ಶ್ರೀಮಾನ್ ಪ್ರಸಾದಾಚ್ಚ ಸುಕಾಂಕ್ಷಿತಃ ॥ ೩೦ ॥

ವ್ಯಾಸರು– ನಾರದರು ಹಾಗೆಯೇ ಆಗುವುದು ಎಂದು ಹೇಳುತ್ತಿರಲು, ಸೃಂಜಯನಿಗೆ ಅವನು ಬಯಸಿದಂತಹ ಕಾಂತಿಮಂತನೂ, ಎಲ್ಲರಿಂದಲೂ ಅಪೇಕ್ಷಿಸಲ್ಪಡುವವನೂ, ಸುವರ್ಣಕ್ಕೆ ಆಶ್ರಯನಾದವನೂ ಆದ ಇಷ್ಟನಾದ ಪುತ್ರನು ನಾರದರ ಅನುಗ್ರಹದಿಂದ ಜನಿಸಿದನು.

ಅಪತತ್ ತಸ್ಯ ನೇತ್ರಾಭ್ಯಾಂ ರುದತಸ್ತಸ್ಯ ನೇತ್ರಜಮ್ ।
ಮೂತ್ರಂ ಪುರೀಷಂ ಸ್ವೇದಶ್ಚ ಸರ್ವಂ ಭವತಿ ಕಾಂಚನಮ್ ।
ಸುವರ್ಣಷ್ಠೀವಿರಿತ್ಯೇವ ತಸ್ಯ ನಾಮಾऽಭವತ್ ಕೃತಮ್ ॥ ೩೧ ॥

ಅವನು ರೋದನ ಮಾಡುವಾಗ ಬಿದ್ದ ಕಣ್ಣೀರು, ಮೂತ್ರ, ಮಲ, ಬೆವರು ಎಲ್ಲವೂ ಸುವರ್ಣವಾಗುತ್ತಿದ್ದಿತು. ಆದ್ದರಿಂದ ಅವನಿಗೆ ಸುವರ್ಣಷ್ಠೀವಿ ಎಂದೇ ಹೆಸರಾಯಿತು.

ತಸ್ಮಿನ್ ವರಪ್ರದಾನೇನ ಪ್ರವೃದ್ಧಸ್ತ್ವಮಿತೈರ್ಧನೈಃ ।
ಕಾರಯಾಮಾಸ ನೃಪತಿಃ ಸೌವರ್ಣಂ ಸರ್ವಮೀಪ್ಸಿತಮ್ ॥ ೩೨ ॥

ಋಷಿಗಳ ವರಪ್ರದಾನದಿಂದ ರಾಜನಿಗೆ ಅಪರಿಮಿತವಾಗಿ ಧನವು ಅಭಿವೃದ್ಧಿ ಹೊಂದಿತು. ರಾಜನು ತನ್ನ ಪುತ್ರನಿಗೆ ಬೇಕಾದುದೆಲ್ಲವನ್ನೂ ಸುವರ್ಣದಿಂದಲೇ ಮಾಡಿಸಿದನು.

ಗೃಹಪ್ರಾಕಾರದುರ್ಗಾಣಿ ಬ್ರಾಹ್ಮಣಾವಸಥಾನ್ಯಪಿ ।
ಶಯ್ಯಾಸನಾನಿ ಯಾನಾನಿ ಸ್ಥಾಲೀಪಿಠರಭಾಜನಮ್ ॥ ೩೩ ॥

ತಸ್ಯ ಸ್ಮ ರಾಜ್ಞಸ್ತದ್ ವೇಶ್ಮ ಬಾಹ್ಯಾಶ್ಚಾಭ್ಯಂತರಾಶ್ಚ ಯೇ ।
ಸರ್ವಂ ತತ್ ಕಾಂಚನಮಯಂ ಕಾಲೇನ ಪರಿವರ್ಧಿತಮ್ ॥ ೩೪ ॥

ಅವನ ಮನೆ, ಕೋಟೆ, ಕೊತ್ತಲಗಳು, ಬ್ರಾಹ್ಮಣರ ಆವಾಸಗೃಹಗಳು, ಶಯ್ಯಾಸನಗಳು, ವಾಹನಗಳು, ಯಜ್ಞ ಮತ್ತು ಅಡುಗೆ ಮನೆಯ ಪಾತ್ರೆಗಳು, ರಾಜನ ಮನೆಯ ಒಳಗೆ-ಹೊರಗೆ ಎಲ್ಲವೂ ಸುವರ್ಣಮಯವಾಗಿ ಕಾಲಕ್ರಮದಲ್ಲಿ ಅಭಿವೃದ್ಧಿಯನ್ನು ಹೊಂದಿತು.

ಅಥ ದಸ್ಯುಗಣಾಃ ಶ್ರುತ್ವಾ ದೃಷ್ಟ್ವಾ ಚೈವ ತಥಾವಿಧಮ್ ।
ಅಶುಭಂ ತಸ್ಯ ನೃಪತೇಃ ಸಮಾರಬ್ಧಾಶ್ಚಿಕೀರ್ಷಿತುಮ್ ॥ ೩೫ ॥

ಅನಂತರ ಕಳ್ಳರ ಸಮೂಹಗಳು ರಾಜನ ಅಂತಹ ಐಶ್ವರ್ಯವನ್ನು ನೋಡಿ ಅವನಿಗೆ ಅಹಿತವನ್ನು ಮಾಡಲು ಉಪಕ್ರಮಿಸಿದರು.

ಕಶ್ಚಿತ್ ತತ್ರಾಬ್ರವೀದ್ ರಾಜ್ಞಃ ಪುತ್ರಂ ಗೃಹ್ಣೀಮ ವೈ ವಯಮ್ ।
ಸೋಽಸ್ಯಾಕರಃ ಕಾಂಚನಸ್ಯ ತಸ್ಮಿನ್ ಯತ್ನಂ ಚ ಕುರ್ಮಹೇ ॥ ೩೬ ॥

ರಾಜನ ಎಲ್ಲ ಸುವರ್ಣ ಸಂಪತ್ತಿಗೆ ಅವನ ಪುತ್ರನೇ ಕಾರಣ. ಆದ್ದರಿಂದ ನಾಮ ರಾಜಪುತ್ರನನ್ನು ಸೆರೆಹಿಡಿಯೋಣ. ಆ ವಿಷಯದಲ್ಲಿ ಪ್ರಯತ್ನವನ್ನು ಮಾಡೋಣ ಎಂದು ಅವರಲ್ಲಿ ಒಬ್ಬನು ಹೇಳಿದನು.

ತತಸ್ತೇ ದಸ್ಯವೋ ಲುಬ್ಧಾಃ ಪ್ರವಿಷ್ಟಾ ನೃಪತೇರ್ಗೃಹಮ್ ।
ರಾಜಪುತ್ರಂ ತತೋ ಜಹ್ರುಃ ಸುವರ್ಣಷ್ಠೀವಿನಂ ಬಲಾತ್ ॥ ೩೭ ॥

ಅನಂತರ ಹಣದ ಆಸೆಯುಳ್ಳ ಆ ಕಳ್ಳರು ಒಂದು ದಿನ ರಾಜನ ಅರಮನೆಯನ್ನು ಪ್ರವೇಶಿಸಿ, ರಾಜಪುತ್ರನಾದ ಸುವರ್ಣಷ್ಠೀವಿಯನ್ನು ಅಪಹರಿಸಿದರು.

ಗೃಹ್ಯೈನಮನುಪಾಯಜ್ಞಾ ನಯಿತ್ವಾಽಥ ವನಂ ತತಃ ।
ಹತ್ವಾ ವಿಶಸ್ಯ ನಾಪಶ್ಯನ್ ಸುಲುಬ್ಧಾ ವಸು ಕಿಂಚನ ॥ ೩೮ ॥

ಸುವರ್ಣವನ್ನು ಪಡೆಯುವ ಉಪಾಯವನ್ನು ತಿಳಿಯದ ಅವರು ಅವನನ್ನು ಹಿಡಿದು, ಅನಂತರ ಕಾಡಿಗೆ ಕರೆದುಕೊಂಡು ಹೋಗಿ, ಅವನನ್ನು ಕೊಂದು ಶರೀರವನ್ನು ಭಾಗಗಳನ್ನಾಗಿ ಮಾಡಿದರೂ ಅಲ್ಲಿ ಅವರಿಗೆ ಯಾವ ಸುವರ್ಣವೂ ಕಾಣಲಿಲ್ಲ.

ತಸ್ಯ ಪ್ರಾಣೈರ್ವಿಯುಕ್ತಸ್ಯ ನಷ್ಟಂ ತತ್ ಕಾಂಚನಂ ವರಮ್ ।
ದಸ್ಯವಶ್ಚ ತದಾऽನ್ಯೋನ್ಯಂ ಜಗೃಹ್ಯುಕ್ತ್ವಾ ವಿಚೇತಸಃ ॥ ೩೯ ॥

ಸುವರ್ಣಷ್ಠೀವಿಯ ಪ್ರಾಣವಿಯೋಗವಾದ ಮೇಲೆ ಅವನ ಜೊತೆಯಲ್ಲಿ ಬಂದಿದ್ದ ಸುವರ್ಣದ ವರವು ಹೊರಟು ಹೋಯಿತು. ಕಳ್ಳರು ಮೂಢರಾಗಿ ಆ ಶರೀರವನ್ನು ಅಲ್ಲಿಯೇ ಬಿಟ್ಟು ಹೊರಟುಹೋದರು.

ಹತ್ವಾ ಪರಸ್ಪರಂ ಕ್ರುಷ್ಟಾಃ ಕುಮಾರಂ ಚಾದ್ಭುತಪ್ರಭಮ್ ।
ಅಸಂಭಾವ್ಯಂ ಗತಾ ಘೋರಂ ನರಕಂ ಮೋಘಕಾರಿಣಃ ॥ ೪೦ ॥

ಅದ್ಭುತವಾದ ಕಾಂತಿಯನ್ನು ಹೊಂದಿದ್ದ ಕುಮಾರನನ್ನು ಕೊಂದು ಆ ಕಳ್ಳರು ಪರಸ್ಪರವಾಗಿ ಬೈದುಕೊಳ್ಳುತ್ತಾ, ವ್ಯರ್ಥವಾದ ಮತ್ತು ನಿಂದ್ಯವಾದ ಕಾರ್ಯವನ್ನು ಮಾಡಿದ ಕಾರಣದಿಂದ ಬಹಳ ಘೋರವಾದ ನರಕಕ್ಕೆ ಹೋದರು.

ತಂ ದೃಷ್ಟ್ವಾ ನಿಹತಂ ಪುತ್ರಂ ವರದತ್ತಂ ಮಹಾತಪಾಃ ।
ವಿಲಲಾಪ ಸುದುಃಖಾರ್ತೋ ಬಹುಧಾ ಕರುಣಂ ನೃಪಃ ॥ ೪೧ ॥

ಋಷಿಗಳ ವರದಾನದಿಂದ ಜನಿಸಿದ ಪುತ್ರನು ಹತನಾದುದನ್ನು ನೋಡಿ ಮಹಾತಪಸ್ವಿಯಾದ ಸೃಂಜಯನು ಬಹಳ ದುಃಖದಿಂದ ಕೂಡಿ, ಕರುಣಾಜನಕವಾಗಿ ಅನೇಕ ರೀತಿಯಲ್ಲಿ ವಿಲಾಪವನ್ನು ಮಾಡಿದನು.

ವಿಲಪಂತಂ ನಿಶಮ್ಯಾಥ ಪುತ್ರಶೋಕಹತಂ ನೃಪಮ್ ।
ಪ್ರತ್ಯದೃಶ್ಯತ ದೇವರ್ಷಿರ್ನಾರದೋ ನೃಪಸನ್ನಿಧೌ ॥ ೪೨ ॥

ಪುತ್ರಶೋಕದಿಂದ ಅಭಿಹತನಾಗಿ ವಿಲಾಪವನ್ನು ಮಾಡುತ್ತಿದ್ದ ರಾಜನನ್ನು ನೋಡಿ ದೇವರ್ಷಿಗಳಾದ ನಾರದರು ರಾಜನ ಸನ್ನಿಧಿಯಲ್ಲಿ ಕಾಣಿಸಿಕೊಂಡರು.

ಉವಾಚ ಚೈನಂ ದುಃಖಾರ್ತಂ ವಿಲಪಂತಮಚೇತಸಮ್ ।
ಸೃಂಜಯಂ ನಾರದೋ ಯದ್ಯತ್ ತನ್ನಿಬೋಧ ಯುಧಿಷ್ಠಿರ ॥೪೩॥

ಎಲೈ ಯುಧಿಷ್ಠಿರನೇ, ಪ್ರಜ್ಞಾಶೂನ್ಯನಾಗಿ ದುಃಖಾರ್ತನಾಗಿ ವಿಲಾಪವನ್ನು ಮಾಡುತ್ತಿದ್ದಂತಹ ಸೃಂಜಯರನ್ನು ಕುರಿತು ನಾರದರು ಏನೇನು ಹೇಳಿದರೋ ಅದನ್ನು ಕೇಳುವವನಾಗು.

ತ್ಯಜ ಶೋಕಂ ಮಹಾರಾಜ ವೈಕ್ಲವ್ಯಂ ತ್ಯಜ ಬುದ್ಧಿಮನ್ ।
ನ ಮೃತಃ ಶೋಚತೋ ಜೀವೇನ್ಮುಹ್ಯತೋ ವಾ ಜನಾಧಿಪ ॥ ೪೪ ॥

ಎಲೈ ಮಹಾರಾಜನೇ, ಶೋಕವನ್ನು ಬಿಡು. ಎಲೈ ಮೇಧಾವಿಯೇ, ಬುದ್ಧಿಯ ವೈಕಲ್ಯವನ್ನು ತ್ಯಜಿಸು. ಎಲೈ ರಾಜನೇ, ಎಷ್ಟು ಕಾಲ ಶೋಕವನ್ನು ಮಾಡಿದರೂ ಅಥವಾ ಪ್ರಜ್ಞಾಶೂನ್ಯನಾಗಿದ್ದರೂ ಮೃತನಾದವನು ಹಿಂದಕ್ಕೆ ಬರಲಾರ.

ತ್ಯಜ ಮೋಹಂ ನೃಪಶ್ರೇಷ್ಠ ನಹಿ ಮುಹ್ಯಂತಿ ತ್ವದ್ವಿಧಾಃ ।
ಧೀರೋ ಭವ ಮಹಾರಾಜ ಜ್ಞಾನವೃದ್ಧೋಽಸಿ ಮೇ ಮತಃ ॥ ೪೫ ॥

ಎಲೈ ರಾಜಶ್ರೇಷ್ಠನೇ, ಮೋಹವನ್ನು ಬಿಡು. ನಿನ್ನಂತಹವರು ಮೋಹಕ್ಕೆ ಒಳಗಾಗಬಾರದು. ಎಲೈ ಮಹಾರಾಜನೇ, ಧೀರನಾಗು. ನೀನು ಜ್ಞಾನವೃದ್ಧನೆಂದು ನನ್ನ ಅಭಿಪ್ರಾಯ.

ಕಾಮಾನಾಮವಿತೃಪ್ತಸ್ತ್ವಂ ಸೃಂಜಯೇಹ ಮರಿಷ್ಯಸಿ ।
ಯಸ್ಯ ತೇ ಯೇ ವಯಂ ಗೇಹೇ ಅಶನಾದಾ ಉಪಾಸ್ಮಹೇ ॥ ೪೬ ॥

ಎಲೈ ರಾಜನೇ, ಯಾವ ನಿನ್ನ ಮನೆಯಲ್ಲಿ ನಾವು ಭೋಜನವನ್ನು ಮಾಡಿಕೊಂಡು ನಿನ್ನ ಸಮೀಪದಲ್ಲಿದ್ದೇವೆಯೋ ಅಂತಹ ನೀನು ಹೀಗೆ ಮಾಡಿದರೆ ಎಲೈ ಸೃಂಜಯನೇ, ಇಡೇರದ ಬಯಕೆಗಳನ್ನು ಹೊಂದಿ ನೀನು ಇಲ್ಲಿಯೇ ಮೃತನಾಗುವಿ.

ಆವಿಕ್ಷಿತಂ ಮರುತ್ತಂ ಚ ಮೃತಂ ಸೃಂಜಯ ಶುಶ್ರುಮಃ ।
ಸಂವರ್ತೋ ಯಾಜಯಾಮಾಸ ಸ್ಪರ್ಧಯಾ ಯಂ ಬೃಹಸ್ಪತೇಃ ॥ ೪೭ ॥

ಎಲೈ ಸೃಂಜಯನೇ, ಅವಿಕ್ಷಿತ್ ರಾಜನ ಮಗನಾದ ಮರುತ್ತನೂ ಮೃತನಾದನೆಂದು ಕೇಳಿದ್ದೇವೆ. ಬೃಹಸ್ಪತಿಗಳ ಮೇಲಿನ ಸ್ಪರ್ಧೆಯಿಂದ ಸಂವರ್ತಋಷಿಗಳು ಅವನಿಗೆ ಯಾಗವನ್ನು ಮಾಡಿಸಿದರು.

ಯಸ್ಯೈ ರಾಜರ್ಷಯೇ ಪ್ರಾದಾತ್ ಸುಪ್ರೀತೋ ಭಗವಾನ್ ಭವಃ ।
ಹೈಮಂ ಹಿಮವತಃ ಪಾದೇ ಯಿಯಕ್ಷೋರ್ವಿವಿಧೈಃ ಸವೈಃ ॥ ೪೮ ॥

ಅನೇಕ ಯಾಗಗಳನ್ನು ಮಾಡಲು ಬಯಸಿದ ಆ ರಾಜರ್ಷಿಗೆ ಹಿಮಾಲಯ ಪರ್ವತದ ತಪಲ್ಲಿನಲ್ಲಿ ಪೂಜ್ಯರಾದ ರುದ್ರದೇವರು ಬಹಳ ಪ್ರಸನ್ನರಾಗಿ ಅಪರಿಮಿತವಾದ ಸುವರ್ಣವನ್ನು ಕೊಟ್ಟರು.

ಯಸ್ಯ ಸೇಂದ್ರಾಃ ಸವರುಣಾ ಬೃಹಸ್ಪತಿಪುರೋಗಮಾಃ ।
ದೇವಾ ವಿಶ್ವಸೃಜಃ ಸರ್ವೇ ಯಜ್ಞಾನೂಹುರ್ಮಹಾತ್ಮನಃ ॥ ೪೯ ॥

ಇಂದ್ರಸಹಿತರಾದ, ವರುಣಸಹಿತರಾದ, ಬೃಹಸ್ಪತಿಯೇ ಮೊದಲಾದ ದೇವತೆಗಳೂ ಮತ್ತು ಎಲ್ಲಾ ಪ್ರಜಾಪತಿಗಳೂ ಆ ಮಹಾತ್ಮನ ಯಜ್ಞದ ಸಲಕರಣೆಗಳನ್ನು ಹೊತ್ತರು.

ಯಜ್ಞವಾಟಶ್ಚ ಸೌವರ್ಣಾಃ ಸರ್ವೇ ಚಾನ್ಯೇ ಪರಿಚ್ಛದಾಃ ॥ ೫೦ ॥

ಮಹಾನಸೇಷು ಯಸ್ಯಾನ್ನಂ ಮನೋಭಿಪ್ರಾಯಗಂ ಶುಚಿ ।
ಕಾಮಂ ಬುಭುಜಿರೇ ವಿಪ್ರಾಃ ಸರ್ವೇ ಚಾನ್ನಾರ್ಥಿನೋ ಜನಾಃ ।
ಪಯೋ ದಧಿ ಘೃತಂ ಕ್ಷೌದ್ರಂ ಭಕ್ಷ್ಯಂ ಭೋಜ್ಯಂ ಚ ಶೋಭನಮ್ ॥೫೧॥

ಯಜ್ಞಶಾಲೆಯೂ, ಯಜ್ಞದ ಎಲ್ಲಾ ಸಲಕರಣೆಗಳೂ ಸುವರ್ಣಮಯವಾಗಿದ್ದವು. ಅವರವರ ಮನಸ್ಸಿಗೆ ಒಪ್ಪುವ ಶುಚಿಯಾದ ಅನ್ನವು ಪಾಕಶಾಲೆಯಲ್ಲಿ ಸಿದ್ಧವಾಗುತ್ತಿದ್ದಿತು. ವಿಪ್ರರೂ ಮತ್ತು ಅನ್ನಾರ್ಥಿಗಳಾದ ಜನರೂ ಕ್ಷೀರ, ದಧಿ, ಘೃತ, ಮಧು, ಭಕ್ಷ್ಯ, ಭೋಜ್ಯಗಳು- ಇವುಗಳಿಂದ ಕೂಡಿದ ಒಳ್ಳೆಯ ಭೋಜನವನ್ನು ಮಾಡಿದರು.

ಯಸ್ಯ ಯಜ್ಞೇಷು ಸರ್ವೇಷು ವಾಸಾಂಸ್ಯಾಭರಣಾನಿ ಚ ।
ಈಪ್ಸಿತಾನ್ಯುಪತಿಷ್ಠಂತಿ ಪ್ರಹೃಷ್ಟಾನ್ ವೇದಪಾರಗಾನ್ ॥ ೫೨ ॥

ಮರುತಃ ಪರಿವೇಷ್ಟಾರೋ ಮರುತ್ತಸ್ಯಾವಸನ್ ಗೃಹೇ ।
ಆವಿಕ್ಷಿತಸ್ಯ ಕ್ಷತ್ತಾऽಗ್ನಿರ್ವಿಶ್ವೇದೇವಾಃ ಸಭಾಸದಃ ॥ ೫೩ ॥

ಅವನ ಎಲ್ಲಾ ಯಜ್ಞಗಳಲ್ಲಿ ಸಂತೋಷಯುಕ್ತರಾದ, ವೇದಪಾರಂಗತರಾದ ಬ್ರಾಹ್ಮಣರಿಗೆ ಅವರು ಬಯಸಿದ ವಸ್ತ್ರಗಳು ಮತ್ತು ಆಭರಣಗಳು ದೊರೆಯುತ್ತಿದ್ದವು. ಮರುತ್ತನ ಮನೆಯಲ್ಲಿಮರುದ್ಗಣಗಳು ಊಟವನ್ನು ಬಡಿಸುವವರಾಗಿದ್ದರು. ಅಗ್ನಿಯು ಪಾಚಕನೂ ಮತ್ತು ವಿಶ್ವೇದೇವತೆಗಳು ಸಭಾಸದರೂ ಆಗಿದ್ದರು.

ಯಸ್ಯ ವೀರ್ಯವತೋ ರಾಜನ್ ಸುವೃಷ್ಟ್ಯಾ ಸಸ್ಯಸಂಪದಃ ।
ಹವಿರ್ಭಿಸ್ತರ್ಪಿತಾ ಯೇನ ಸಮ್ಯಕ್ ತೃಪ್ತಾ ದಿವೌಕಸಃ ॥ ೫೪ ॥

ಎಲೈ ರಾಜನೇ, ಪರಾಕ್ರಮಶಾಲಿಯಾದ ಅವನು ಮಾಡಿದ ಯಜ್ಞಗಳಲ್ಲಿ ಹವಿರ್ಭಾಗಗಳಿಂದ ತೃಪ್ತರಾದ ದೇವತೆಗಳು ಅವನ ರಾಜ್ಯದಲ್ಲಿ ಸುವೃಷ್ಟಿಯನ್ನು ಮತ್ತು ಒಳ್ಳೆಯ ಸಸ್ಯ ಸಂಪತ್ತಿಯನ್ನು ಉಂಟುಮಾಡಿದರು.

ಋಷೀಣಾಂ ಚ ಪಿತೄಣಾಂ ಚ ದೇವಾನಾಮುಪಜೀವಿನಾಮ್ ।
ಬ್ರಹ್ಮಚರ್ಯಶ್ರುತಸುತೈರ್ಧರ್ಮ್ಯೈರ್ದಾನೇನ ಚಾನೃಣಃ ॥ ೫೫ ॥

ಬ್ರಹ್ಮಚರ್ಯದಿಂದಲೂ, ವೇದವಿದ್ಯೆಯಿಂದಲೂ, ಯಜ್ಞದಿಂದಲೂ, ದಾನ-ಧರ್ಮಗಳಿಂದಲೂ ಅವನು ಋಷಿಗಳ ಋಣವನ್ನೂ, ದೇವತೆಗಳ ಋಣವನ್ನೂ ಮತ್ತು ಉಪಜೀವಿಸಿಕೊಂಡವರ ಋಣವನ್ನೂ ಸೇವಿಸಿದನು.

ಶಯನಾಸನಯಾನಾನಿ ಸ್ವರ್ಣರಾಶೀಂಶ್ಚ ದುಸ್ತ್ಯಜಾನ್ ।
ತತ್ ಸರ್ವಮಮಿತಂ ವಿತ್ತಂ ದತ್ವಾ ವಿಪ್ರೇಭ್ಯ ಈಪ್ಸಿತಮ್ ॥ ೫೬ ॥

ಬ್ರಾಹ್ಮಣರಿಗೆ ಇಷ್ಟವಾದ ಶಯ್ಯಾಸನ, ಯಾನಗಳನ್ನೂ, ಕೊಡಲು ಅಸಾಧ್ಯವಾದ ಸುವರ್ಣಮಯ ರಾಶಿಗಳನ್ನೂ ಮತ್ತು ಅಪರಿಮಿತವಾದ ಧನವನ್ನೂ ದಾನ ಮಾಡಿದನು.

ಸ್ಪರ್ಧಮಾನಃ ಸ ಶಕ್ರೇಣ ಪ್ರಜಾಃ ಕೃತ್ವಾ ನಿರಾಮಯಾಃ ।
ಶ್ರದ್ಧಯಾ ನಿರ್ಜಿತಾಲ್ಲೋಕಾನ್ ಗತಃ ಕಾಮದುಹೋऽಕ್ಷಯಾನ್ ॥

ಸಪ್ರಜಃ ಸನೃಪಾಮಾತ್ಯಃ ಸದಾರಾಪತ್ಯಬಾಂಧವಃ ।
ಯೌವನೇನ ಸಹಸ್ರಾಬ್ದಂ ಮರುತ್ತೋ ರಾಜ್ಯಮನ್ವಶಾತ್ ॥ ೫೭ ॥

ಅವನು ಇಂದ್ರನ ಜೊತೆಯಲ್ಲಿ ಸ್ಪರ್ಧೆಯನ್ನು ಮಾಡುತ್ತಾ, ಪ್ರಜೆಗಳಿಗೆ ಯಾವ ಉಪದ್ರವವೂ ಉಂಟಾಗದಂತೆ ಪಾಲನೆಯನ್ನು ಮಾಡಿ, ತನ್ನ ಶ್ರದ್ಧೆಯಿಂದ ಸಂಪಾದಿಸಿದ, ಕೇಳಿದ ವಸ್ತುಗಳನ್ನು ಕೊಡುವ ಅಕ್ಷಯವಾದ ಲೋಕಗಳನ್ನು ಕುರಿತು ಪ್ರಯಾಣ ಮಾಡಿದನು. ಅವನ ಪ್ರಜೆಗಳ, ಸಾಮಂತರಾಜರ, ಅಮಾತ್ಯರ, ತನ್ನ

ಪತ್ನೀ-ಪುತ್ರ-ಬಾಂಧವ ಪರಿವಾರದ ಮತ್ತು ಜೊತೆಯಲ್ಲಿ ಪೂರ್ಣ ಯೌವನದಿಂದ ಕೂಡಿದವನಾಗಿ ಒಂದು ಸಹಸ್ರ ವರ್ಷಗಳ ಕಾಲ ರಾಜ್ಯವನ್ನು ಆಳಿದನು.

ಸ ಚೇನ್ಮಮಾರ ಸೃಂಜಯ ಚತುರ್ಭದ್ರತರಸ್ತ್ವಯಾ ।
ಪುತ್ರಾತ್ ಪುಣ್ಯತರಸ್ತುಭ್ಯಂ ಮಾ ಪುತ್ರಮನುತಪ್ಯಥಾಃ।
ಅಯಜ್ವಾನಮದಕ್ಷಿಣ್ಯಮಧಿಚ್ಛೈತ್ಯೇತ್ಯುದಾಹರತ್ ॥ ೬೦ ॥

ಎಲೈ ಸೃಂಜಯನೇ, ಅವನು ನಿನಗಿಂತಲೂ ನಾಲ್ಕು ಪಟ್ಟು ಶ್ರೇಷ್ಠನಾಗಿದ್ದವನು ಮತ್ತು ಅವನ ಪುತ್ರನಾದರೂ ನಿನ್ನ ಪುತ್ರನಿಗಿಂತಲೂ ನಾಲ್ಕು ಪಟ್ಟು ಶ್ರೇಷ್ಠನಾದವನು. ಆದ್ದರಿಂದ ಎಲೈ ಜ್ಞಾನಿಶ್ರೇಷ್ಠನೇ, ಯಾಗವನ್ನು ಮಾಡದ, ದಕ್ಷಿಣೆಯನ್ನು ಕೊಡದ, ನಿನ್ನ ಪುತ್ರನ ವಿಷಯದಲ್ಲಿ ಶೋಕಪಡಬೇಡ (ಎಂದು ಹೇಳಿದರು).

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ದ್ರೋಣಪರ್ವಣಿ ದ್ವಿಪಂಚಾಶತ್ತಮೋಽಧ್ಯಾಯಃ ॥
॥ ಅಭಿಮನ್ಯುವಧಪರ್ವಣಿ ಏಕವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಐವತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಐವತ್ಮೂರನೆಯ ಅಧ್ಯಾಯ

ಷೋಡಶ ರಾಜೋಪಾಖ್ಯಾನದಲ್ಲಿ ಸುಹೋತ್ರ ಚರಿತ.

ನಾರದಃ

ಸುಹೋತ್ರಂ ಪಾರ್ಥಿವಂ ಚಾಪಿ ಮೃತಂ ಸೃಂಜಯ ಶುಶ್ರುಮ ।
ಏಕವೀರಮನಾಧೃಷ್ಯಮಮಿತ್ರಗಣಮರ್ದನಮ್ ॥ ೧ ॥

ನಾರದರು– ಎಲೈ ಸೃಂಜಯನೇ, ಶ್ರೇಷ್ಠನಾದ ವೀರನೂ, ಶತ್ರುಗಳು ಸಮೀಪಿಸಲಾರದವನೂ, ಶತ್ರುಮರ್ದನನೂ ಆದ ಸುಹೋತ್ರರಾಜನೂ ಮೃತನಾದನೆಂದು ಕೇಳಿದ್ದೇವೆ.

ಯಃ ಪ್ರಾಪ್ಯ ರಾಜ್ಯಂ ಧರ್ಮೇಣ ಋತ್ವಿಜ್ಮಂತ್ರಿಪುರೋಹಿತಾನ್ ।
ಸಮ್ಮಾನ್ಯ ಚಾತ್ಮನಃ ಶ್ರೇಯಃ ಪೃಷ್ಟ್ವಾ ತೇಷಾಂ ಮತೇ ಸ್ಥಿತಃ ॥ ೨ ॥

ಅವನು ಧರ್ಮದಿಂದ ರಾಜ್ಯವನ್ನು ಪಡೆದು, ಋತ್ವಿಜರು, ಮಂತ್ರಿಗಳು ಮತ್ತು ಪುರೋಹಿತರನ್ನು ಸನ್ಮಾನಿಸಿ, ಅವರಿಂದ ತನ್ನ ಶ್ರೇಯಸ್ಸನ್ನು ಪ್ರಶ್ನೆ ಮಾಡಿ ತಿಳಿದು ಅವರ ಅಭಿಪ್ರಾಯದಂತೆ ನಡೆದುಕೊಂಡನು.

ಪ್ರಜಾನಾಂ ಪಾಲನಂ ಧರ್ಮೋ ದಾನಮಿಜ್ಯಾ ದ್ವಿಷಜ್ಜಯಃ ।
ಏತತ್ ಸುಹೋತ್ರೋ ವಿಜ್ಞಾಯ ಧರ್ಮ್ಯಮೈಚ್ಛದ್ ಧನಾಗಮಮ್ ॥

ಪ್ರಜಾಪಾಲನೆ, ದಾನ-ಧರ್ಮಾಚರಣೆ, ಯಾಗಾಚರಣೆ, ಶತ್ರುಜಯ- ಇದನ್ನು ತನ್ನ ಧರ್ಮವೆಂದು ತಿಳಿದ ಸುಹೋತ್ರನು ಧರ್ಮದಿಂದ ಧನವನ್ನು ಪಡೆಯಲು ಇಚ್ಛಿಸಿದನು.

ಧರ್ಮೇಣಾರಾಧಯದ್ ದೇವಾನ್ ಬಾಣೈಃ ಶತ್ರೂನಜೀಜಯತ್ ।
ಸರ್ವಾಣ್ಯಪಿ ಚ ಭೂತಾನಿ ಸ್ವಗುಣೈರನ್ವರಂಜಯತ್ ॥ ೪ ॥

ದೇವತೆಗಳನ್ನು ಧರ್ಮದಿಂದ ಸಂತೋಷಪಡಿಸಿದನು. ಶತ್ರುಗಳನ್ನು ಬಾಣಗಳಿಂದ ಜಯಿಸಿದನು ಮತ್ತು ಎಲ್ಲರನ್ನೂ ತನ್ನ ಗುಣಗಳಿಂದ ಸಂತೋಷಪಡಿಸಿದನು.

ಸೋಽಭುಂಕ್ತೇಮಾಂ ವಸುಮತೀಂ ಮ್ಲೇಚ್ಛಾಟವಿಕವರ್ಜಿತಾಮ್ ।
ತಸ್ಮೈ ವವರ್ಷ ಪರ್ಜನ್ಯೋ ಹಿರಣ್ಯಂ ಪರಿವತ್ಸರಮ್ ।
ಹಿರಣ್ಯೋದಾಸ್ತಥಾ ನದ್ಯಃ ಸುಹೋತ್ರಸ್ಯ ಮಹಾತ್ಮನಃ ।
ಹೈರಣ್ಯಾಸ್ತತ್ರ ವಾಹಿನ್ಯಃ ಸ್ವೈರಿಣ್ಯೋ ಹ್ಯವಹನ್ ಪುರಾ ॥ ೫ ॥

ಅವನು ಮ್ಲೇಚ್ಛಪ್ರದೇಶ ಮತ್ತು ಅರಣ್ಯಪ್ರದೇಶಗಳನ್ನು ಬಿಟ್ಟು ಉಳಿದ ಎಲ್ಲಾ ಭೂಮಿಯನ್ನೂ ಆಳಿದನು. ಅವನಿಗೆ ಪರ್ಜನ್ಯನು ಪ್ರತಿವರ್ಷವೂ ಸುವರ್ಣದ ಮಳೆಯನ್ನು ಸುರಿಸುತ್ತಿದ್ದನು. ಮಹಾತ್ಮನಾದ ಸುಹೋತ್ರನ ಆಳ್ವಿಕೆಯಲ್ಲಿ ನದಿಗಳು ಸ್ವರ್ಣದಿಂದ ಕೂಡಿದ ನೀರನ್ನು ಹೊಂದಿದವುಗಳಾಗಿ ಸ್ವರ್ಣವಾಹಿನಿಗಳಾಗಿದ್ದವು.

ಯಸ್ಮಿನ್ ಕೂರ್ಮಾನ್ ಕರ್ಕಟಕಾನ್ ಮತ್ಸ್ಯಾಂಶ್ಚ ವಿವಿಧಾನ್ ಬಹೂನ್ ।
ಕಾಮಾನ್ ವರ್ಷತಿ ಪರ್ಜನ್ಯೋ ರೂಪ್ಯಾಣಿ ವಿವಿಧಾನಿ ಚ ॥ ೬ ॥

ಸೌವರ್ಣಾನ್ಯಪ್ರಮೇಯಾನಿ ವಾಪ್ಯಃ ಕ್ರೋಶಸುಸಮ್ಮಿತಾಃ ॥ ೭ ॥

ಅವುಗಳಲ್ಲಿ ಪರ್ಜನ್ಯನು ಸುವರ್ಣಮಯವಾದ ಕೂರ್ಮಗಳನ್ನು, ಚೇಳುಗಳನ್ನು, ಅನೇಕ ವಿಧವಾದ ಮತ್ಸ್ಯಗಳನ್ನು ಮತ್ತು ರಜತಮಯವಾದ ಅನೇಕ ವಸ್ತುಗಳನ್ನು ಮಳೆಗರೆಯುತ್ತಿದ್ದನು. ಒಂದು ಕ್ರೋಶದಷ್ಟು ಆಳವಾದ ಅವನ ಕಾಲದ ಬಾವಿಗಳು ಅಗಾಧವಾದ ಸುವರ್ಣದಿಂದ ತುಂಬಿರುತ್ತಿದ್ದವು.

ಸ ತತ್ರ ಶತಸಾಹಸ್ರಾನ್ ನಕ್ರಾನ್ ಮಕರಕಚ್ಛಪಾನ್ ।
ಸೌವರ್ಣಾನ್ ಪತಿತಾನ್ ದೃಷ್ಟ್ವಾ ತತೋಽಸ್ಮಯತ ವೈ ಮಿಥಃ ॥ ೮ ॥

ಆ ಬಾವಿಗಳಲ್ಲಿ ಸುವರ್ಣಮಯವಾದ ಶತಸಹಸ್ರ ಸಂಖ್ಯೆಯ ಮತ್ಸ್ಯ-ಕೂರ್ಮಾದಿಗಳು ಬೀಳುವುದನ್ನು ನೋಡಿ ಜನರು ವಿಸ್ಮಯಗೊಂಡರು.

ತದ್ ಹಿರಣ್ಯಮಪರ್ಯಂತಂ ರಾಜರ್ಷಿಃ ಕುರುಜಾಂಗಲೇ ।
ಈಜಾನೋ ವಿತತೇ ಯಜ್ಞೇ ಬ್ರಾಹ್ಮಣೇಭ್ಯೋ ಹ್ಯಮನ್ಯತ ॥ ೯ ॥

ರಾಜರ್ಷಿಯಾದ ಅವನು ಇಂತಹ ಅಪರ್ಯಂತವಾದ ಹಿರಣ್ಯರಾಶಿಯನ್ನು ಕುರುಜಾಂಗಲದಲ್ಲಿ ಯಜ್ಞಗಳನ್ನು ಮಾಡಿ, ಯಜ್ಞದಲ್ಲಿ ದಕ್ಷಿಣೆಯಾಗಿ ಬ್ರಾಹ್ಮಣರಿಗೆ ನೀಡಿದನು.

ಸೋಽಶ್ವಮೇಧಸಹಸ್ರೇಣ ರಾಜಸೂಯಶತೇನ ಚ ।
ಪುಣ್ಯೈಃ ಕ್ಷತ್ರಿಯಯಜ್ಞೈಶ್ಚ ಪ್ರಭೂತವರದಕ್ಷಿಣೈಃ ।
ಕಾಮ್ಯನೈಮಿತ್ತಿಕಾಜಸ್ರೈರಿಷ್ಟ್ವೇಷ್ಟಾಂ ಗತಿಮಾಪ್ತವಾನ್ ॥ ೧೦ ॥

ಅವನು ಒಂದು ಸಹಸ್ರ ಅಶ್ವಮೇಧ ಯಾಗಗಳನ್ನೂ, ನೂರು ರಾಜಸೂಯ ಯಾಗಗಳನ್ನೂ, ಬಹಳ ಶ್ರೇಷ್ಠವಾದ ದಕ್ಷಿಣೆಗಳಿಂದ ಕೂಡಿದ, ಕ್ಷತ್ರಿಯರಿಗೆ ಯೋಗ್ಯವಾದ ಪುಣ್ಯಪ್ರದವಾದ, ನಿತ್ಯನೈಮಿತ್ತಿಕ ಕಾಮ್ಯ ಯಜ್ಞಗಳನ್ನೂ ಆಚರಿಸಿ ಇಷ್ಟವಾದ ಗತಿಯನ್ನು ಪಡೆದನು.

ಸ ಚೇನ್ಮಮಾರ ಸೃಂಜಯ ಚತುರ್ಭದ್ರತರಸ್ತ್ವಯಾ ।
ಪುತ್ರಾತ್ ಪುಣ್ಯತಮಸ್ತುಭ್ಯಂ ಮಾ ಪುತ್ರಮನುತಪ್ಯಥಾಃ ॥ ೧೧ ॥

ಅಯಜ್ವಾನಮದಕ್ಷಿಣ್ಯಮಧಿಚ್ಛೈತ್ಯೇತ್ಯುದಾಹರತ್ ॥ ೧೨ ॥

ಎಲೈ ಸಂಜಯನೇ, ಅವನು ನಿನಗಿಂತ ನಾಲ್ಕು ಪಟ್ಟು ಶ್ರೇಷ್ಠನಾದವನು. ಅವನ ಪುತ್ರನೂ ನಿನ್ನ ಪುತ್ರನಿಗಿಂತ ಬಹಳ ಶ್ರೇಷ್ಠನಾದವನು. ಹೀಗಿರುವಾಗ ಎಲೈ ಜ್ಞಾನಿಗಳಲ್ಲಿ ಶ್ರೇಷ್ಠನಾದವನೇ, ಯಜ್ಞಗಳನ್ನು ಮಾಡದಿರುವ, ದಕ್ಷಿಣೆಗಳನ್ನು ಕೊಡದಿರುವ ನಿನ್ನ ಪುತ್ರನ ವಿಷಯದಲ್ಲಿ ಸಂತಾಪ ಪಡಬೇಡ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಂ ದ್ರೋಣಪರ್ವಣಿ ತ್ರಿಪಂಚಾಶತ್ತನೋಽಧ್ಯಾಯಃ ॥

॥ ಅಭಿಮನ್ಯುವಧಪರ್ವಣಿ ದ್ವಾವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಐವತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಐವತ್ನಾಲ್ಕನೆಯ ಅಧ್ಯಾಯ

ಷೋಡಶರಾಜೋಪಾಖ್ಯಾನದಲ್ಲಿ ಅಂಗರಾಜನ ಚರಿತೆ

ನಾರದಃ

ಅಂಗಂ ಚ ಪೌರವಂ ವೀರಂ ಮೃತಂ ಸೃಂಜಯ ಶುಶ್ರುಮ ।
ಯಃ ಸಹಸ್ರಂ ಸಹಸ್ರಾಣಾಂ ಶ್ವೇತಾನಶ್ವಾನವಾಸೃಜತ್ ।
ತಸ್ಯಾಶ್ವಮೇಧೇ ರಾಜರ್ಷೇಃ ಸರ್ವೇ ದೇವಾಃ ಸಮಾಯಯುಃ ॥ ೧ ॥

ಶಿಕ್ಷಾಕ್ಷರವಿಧಿಜ್ಞಾನಾಂ ನಾಸೀತ್ ಸಂಖ್ಯಾ ವಿಪಶ್ಚಿತಾಮ್ ॥೨॥

ನಾರದರು– ಎಲೈ ಸೃಂಜಯನೇ, ಕುರುವಂಶದಲ್ಲಿ ಜನಿಸಿದ ಅಂಗರಾಜನು ಮೃತನಾದನೆಂದು ಕೇಳಿದ್ದೇವೆ. ಅವನು ತಾನು ಮಾಡಿದ ಸಹಸ್ರ-ಸಹಸ್ರ ಅಶ್ವಮೇಧ ಯಾಗಗಳಲ್ಲಿ ಅಷ್ಟೇ ಸಂಖ್ಯೆಯ ಶ್ವೇತಾಶ್ವಗಳನ್ನು ಸಂಚರಿಸಲು ಬಿಟ್ಟಿದ್ದನು. ರಾಜರ್ಷಿಯಾದ ಅವನ ಅಶ್ವಮೇಧ ಯಾಗಗಳಲ್ಲಿ ಎಲ್ಲ ದೇವತೆಗಳೂ ಬಂದು ನೆರೆದರು. ಶಿಕ್ಷಾ, ವ್ಯಾಕರಣ, ಮೀಮಾಂಸಾದಿ ಶಾಸ್ತ್ರಪಾರಂಗತರಾದ ವಿದ್ವಾಂಸರಿಗೆ ಸಂಖ್ಯೆಯೇ ಇರಲಿಲ್ಲ.

ವೇದವಿದ್ಯಾವ್ರತಸ್ನಾತಾ ವದಾನ್ಯಾಃ ಪ್ರಿಯದರ್ಶನಾಃ ।
ಸುಭಕ್ಷ್ಯಚ್ಛಾದನಗೃಹಾಃ ಸುಶಯ್ಯಾಸನವಾಹನಾಃ ॥ ೩ ॥

ನಟನರ್ತಕಗಂಧರ್ವೈಃ ಪ್ಲವಕೈರ್ವರ್ಧಮಾನಕೈಃ ।
ನಿಯೋಧಕೈಶ್ಚ ಕ್ರೀಡಂತಃ ತತ್ರೋಷುಃ ಪರಮಾರ್ಚಿತಾಃ ।
ಯಜ್ಞೇ ಯಜ್ಞೇ ಯಥಾಕಾಲಂ ದಕ್ಷಿಣಾಃ ಸೋಽತ್ಯಕಾಲಯತ್ ॥ ೪ ॥

ವೇದವಿದ್ಯಾಅವಭೃಥ ಸ್ನಾನವನ್ನು ಮಾಡಿದವರೂ, ಧರ್ಮಿಷ್ಠರೂ, ಉದಾರಿಗಳೂ, ಪ್ರಿಯದರ್ಶನರೂ ಆದ ಅವನ ಸಭಾಸದರು ಒಳ್ಳೆಯ ಅಶನ-ವಸನ, ಗೃಹಗಳನ್ನು ಹೊಂದಿ, ಒಳ್ಳೆಯ ಶಯ್ಯಾಸನ ವಾಹನಗಳಿಂದ ಕೂಡಿದವರಾಗಿ, ರಾಜನಿಂದ ಬಹಳವಾಗಿ ಸತ್ಕರಿಸಲ್ಪಟ್ಟು, ನಟ-ನರ್ತನ-ಗಾಯಕರ ಜೊತೆಯಲ್ಲಿಯೂ, ಕ್ರೀಡಾಪಟುಗಳ ಮತ್ತು ಕುಸ್ತಿಯ ಪಟುಗಳ ಜೊತೆಯಲ್ಲಿಯೂ ವಿನೋದವನ್ನು ಮಾಡುತ್ತಾ ಅಲ್ಲಿ ವಾಸವನ್ನು ಮಾಡಿದರು. ಪ್ರತಿಯೊಂದು ಯಜ್ಞದಲ್ಲಿಯೂ ರಾಜನು ದಕ್ಷಿಣಾಕಾಲದಲ್ಲಿ ಬಹಳವಾದ ದಕ್ಷಿಣೆಯನ್ನು ನೀಡಿದನು.

ದ್ವಿಪಾನ್ ದಶಸಹಸ್ರಾಖ್ಯಾನ್ ಅದದಾತ್ ಕಾಂಚನಾವೃತಾನ್ ।
ಸಧ್ವಜಾನ್ ಸಪತಾಕಾಂಶ್ಚ ಸವರೂಥಾನ್ ಸುಕಲ್ಪಿತಾನ್ ॥ ೫ ॥

ಅವನು ಧ್ವಜ-ಪತಾಕೆಗಳಿಂದ ಕೂಡಿದ, ಸುವರ್ಣಾಲಂಕೃತವಾದ, ಗಜ-ರಕ್ಷಕರಿಂದ ಕೂಡಿದ, ಸುಸಜ್ಜಿತವಾದ ಹತ್ತು ಸಹಸ್ರ ಗಜಗಳನ್ನು ದಾನ ಮಾಡಿದನು.

ಸಹಸ್ರಂ ಚ ಸಹಸ್ರಾಣಾಂ ಕನ್ಯಾ ಹೇಮವಿಭೂಷಿತಾಃ ।
ಚತುರ್ಯುಜರಥಾರೂಢಾಃ ಸಗೃಹಕ್ಷೇತ್ರಗೋಧನಾಃ ॥ ೬ ॥

ಸುವರ್ಣಾಲಂಕೃತರಾದ ಹತ್ತು ಲಕ್ಷ ಕನ್ಯೆಯರನ್ನು ನಾಲ್ಕು ಕುದುರೆಯನ್ನು ಹೂಡಿದ ರಥದಲ್ಲಿ ಕುಳ್ಳಿರಿಸಿ, ಗೃಹ-ಕ್ಷೇತ್ರ-ಗೋ-ಧನ ಸಹಿತವಾಗಿ ದಾನವನ್ನು ಮಾಡಿದನು.

ಶತಂ ಶತಸಹಸ್ರಾಣಿ ಸ್ವರ್ಣಮಾಲಾನಥರ್ಷಭಾನ್ ।
ಗವಾಂ ಸಹಸ್ರಾನುಚರಾನ್ ದಕ್ಷಿಣಾಃ ಸೋಽತ್ಯಕಾಲಯತ್ ॥ ೭ ॥

ಹೇಮಶೃಂಗ್ಯೋ ರೌಪ್ಯಖುರಾಃ ಸವತ್ಸಾಃ ಕಾಂಸ್ಯದೋಹನಾಃ ।
ದಾಸೀದಾಸಖುರೋಷ್ಟ್ರಂ ಚ ಪ್ರಾದಾಚ್ಛಾಗಾವಿಕಂ ಬಹು ॥ ೮ ॥

ಸ್ವರ್ಣಮಾಲೆಗಳಿಂದ ಅಲಂಕರಿಸಲ್ಪಟ್ಟ ಹತ್ತು ಲಕ್ಷ ವೃಷಭಗಳನ್ನು ದಾನ ಮಾಡಿದನು. ಒಂದೊಂದು ವೃಷಭದ ಜೊತೆಯಲ್ಲಿಯೂ ಹೇಮಶೃಂಗವನ್ನೂ, ಬೆಳ್ಳಿಯ

ಖರ (ಗೊರಸು)ಗಳನ್ನೂ ಹೊಂದಿದ್ದ ವತ್ಸಸಹಿತವಾದ ಸಹಸ್ರ ಗೋವುಗಳನ್ನು ಕಂಚಿನ ಪಾತ್ರೆಗಳ ಜೊತೆಯಲ್ಲಿ ದಾನ ಮಾಡಿದನು.

ರತ್ನಾನಾಂ ವಿವಿಧಾನ್ ಕೂಟಾನ್ ವಿವಿಧಾನನ್ನಪರ್ವತಾನ್ ।
ತತ್ ಸರ್ವಂ ವಿತತೇ ಯಜ್ಞೇ ದಕ್ಷಿಣಾಮತ್ಯಕಾಲಯತ್ ॥ ೯ ॥

ಬಹಳ ಸಂಖ್ಯೆಯ ದಾಸಿಯರು, ದಾಸರು, ಕತ್ತೆಗಳು, ಒಂಟೆಗಳು, ಆಡುಗಳು ಮತ್ತು ಕುರಿಗಳನ್ನು ದಾನ ಮಾಡಿದನು. ವಿಸ್ತಾರವಾದ ತನ್ನ ಯಜ್ಞಗಳಲ್ಲಿ ವಿವಿಧವಾದ ರತ್ನಗಳ ರಾಶಿಗಳನ್ನೂ, ವಿವಿಧವಾದ ಅನ್ನಪರ್ವತಗಳನ್ನೂ ಅವನು ದಕ್ಷಿಣೆಯಾಗಿ ಕೊಟ್ಟು ವ್ಯಯ ಮಾಡಿದನು.

ಅತ್ರಾಪಿ ಗಾಥಾ ಗಾಯಂತಿ ತೇ ಪುರಾಣವಿದೋ ಜನಾಃ ।
ಅಂಗಸ್ಯ ಯಜಮಾನಸ್ಯ ಅಪಿ ವಿಷ್ಣುಪದೇ ವಯಮ್ ॥ ೧೦ ॥

ಅಮಾದ್ಯದಿಂದ್ರಃ ಸೋಮೇನ ದಕ್ಷಿಣಾಭಿರ್ದ್ವಿಜಾತಯಃ ।
ದೇವಮಾನುಷಗಂಧರ್ವಾಃ ಚಾತ್ಯರೋಚಂತ ದಕ್ಷಿಣಾಃ ॥ ೧೧ ॥

ಪುರಾಣವನ್ನು ತಿಳಿದ ಜನರು ಅಂಗನು ಯಾಗವನ್ನು ಮಾಡುವಾಗ ನಾವು ಎಲ್ಲಿಯಾದರೂ ಅಲ್ಲಿಯೇ ಆಕಾಶದಲ್ಲಾದರೂ ಇರಬೇಕಾಗಿದ್ದಿತು ಎಂದು ಗಾನವನ್ನು ಮಾಡುತ್ತಾರೆ. ಅವನ ಯಾಗದಲ್ಲಿ ಇಂದ್ರನು ಸೋಮರಸದಿಂದ ಸಂತೋಷಗೊಂಡನು. ಬ್ರಾಹ್ಮಣರು ದಕ್ಷಿಣೆಗಳಿಂದ ಸಂತೋಷಗೊಂಡರು. ದೇವತೆಗಳು, ಮನುಷ್ಯರು, ಗಂಧರ್ವರು ಮತ್ತು ದಕ್ಷಿಣೆಗಳು ಬಹಳವಾಗಿ ಶೋಭಿಸಿದವು.

ಅಂಗಸ್ಯ ಯಜಮಾನಸ್ಯ ಸ್ವಧರ್ಮಾನುಗತಾಃ ಶುಭಾಃ ।
ಗುಣೋತ್ತರಾಸ್ತೇ ಕ್ರತವಃ ತತ್ರಾಸನ್ ಸರ್ವಕಾಮದಾಃ ॥ ೧೨ ॥

ಅಂಗಮಹಾರಾಜನು ಮಾಡಿದ ಅವನ ಧರ್ಮಕ್ಕೆ ಅನುಗುಣವಾದ ಒಂದಕ್ಕಿಂತಲೂ ಒಂದು ಶ್ರೇಷ್ಠವಾದ ಯಜ್ಞಗಳು ಸರ್ವಕಾಮಪ್ರದವಾಗಿದ್ದವು.

ಸ ಚೇನ್ಮಮಾರ ಸೃಂಜಯ ಚತುರ್ಭದ್ರತರಸ್ತ್ವಯಾ ॥ ೧೩ ॥

ಪುತ್ರಾತ್ ಪುಣ್ಯತಮಸ್ತುಭ್ಯಂ ಮಾ ಪುತ್ರಮನುತಪ್ಯಥಾಃ ।
ಅಯಜ್ವಾನಮದಕ್ಷಿಣ್ಯಮಧಿಚ್ಛೈತ್ಯೇತ್ಯುದಾಹರತ್ ॥ ೧೪ ॥

ಎಲೈ ಸೃಂಜಯನೇ, ಅವನು ನಿನಗಿಂತಲೂ ನಾಲ್ಕುಪಟ್ಟು ಶ್ರೇಷ್ಠನಾಗಿದ್ದನು. ಅವನ ಪುತ್ರನೂ ಸಹ ನಿನ್ನ ಪುತ್ರನಿಗಿಂತಲೂ ಶ್ರೇಷ್ಠನಾಗಿದ್ದನು. ಎಲೈ ಜ್ಞಾನಿಶ್ರೇಷ್ಠನೇ, ಯಜ್ಞವನ್ನು ಮಾಡದ, ದಕ್ಷಿಣೆಯನ್ನು ಕೊಡದ ನಿನ್ನ ಪುತ್ರನನ್ನು ಚಿಂತಿಸಿ ದುಃಖಪಡಬೇಡ ಎಂದು ನಾರದರು ಸೃಂಜಯನನ್ನು ಕುರಿತು ಹೇಳಿದರು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಂ ದ್ರೋಣಪರ್ವಣಿ ಚತುಃಪಂಚಾಶತ್ತಮೋऽಧ್ಯಾಯಃ ॥

॥ ಅಭಿಮನ್ಯುವಧಪರ್ವಣಿ ತ್ರಯೋವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಐವತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಐವತ್ತೈದನೆಯ ಅಧ್ಯಾಯ

ಷೋಡಶ ರಾಜೋಪಾಖ್ಯಾನದಲ್ಲಿ ಶಿಬಿಯ ಚರಿತೆ

ನಾರದಃ

ಶಿಬಿಮೌಶೀನರಂ ಚಾಪಿ ಮೃತಂ ಸೃಂಜಯ ಶುಶ್ರುಮ ।
ಯ ಇಮಾಂ ಪೃಥಿವೀಂ ಸರ್ವಾಂ ಚರ್ಮವತ್ ಪರ್ಯವೇಷ್ಟಯತ್ ।
ಸಾದ್ರಿದ್ವೀಪಾರ್ಣವವನಾಂ ರಥಘೋಷೇಣ ನಾದಯನ್ ॥ ೧ ॥

ನಾರದರು– ಎಲೈ ಸೃಂಜಯನೇ, ಔಷೀನರನಾದ ಶಿಬಿಯೂ ಸಹ ಮೃತನಾದನೆಂದು ಕೇಳಿದ್ದೇವೆ. ಅವನು ತನ್ನ ರಥಘೋಷದಿಂದ ಭೂಮಿಯನ್ನು ಪ್ರತಿಧ್ವನಿಸುತ್ತಾ, ಪರ್ವತ, ಸಮುದ್ರ, ದ್ವೀಪ ಸಹಿತವಾದ ಈ ಎಲ್ಲ ಭೂಮಿಯನ್ನೂ ಚರ್ಮದಂತೆ ಸುತ್ತಿದನು.

ಸ ಶಿಬಿರ್ಯಶ ಆನ್ವಿಚ್ಛನ್ ಮುಖ್ಯಃ ಸರ್ವಸಪತ್ನಜಿತ್ ॥ ೨ ॥

ಯಜ್ಞೈರ್ಬಹುವಿಧೈರಿಷ್ಟ್ವಾ ತೇನಾಪರ್ಯಾಪ್ತದಕ್ಷಿಣೈಃ ।
ಅವಿಹಿಂಸ್ಯ ಜನಾನನ್ಯಾನವಾಪ ವಸು ಪುಷ್ಕಲಮ್ ॥ ೩ ॥

ಶ್ರೇಷ್ಠನೂ, ಸರ್ವಶತ್ರು ಪರಾಭವಕಾರಿಯೂ ಆದ ಅವನು ಯಶಸ್ಸನ್ನು ಬಯಸಿ ಅಪರ್ಯಾಪ್ತವಾದ ದಕ್ಷಿಣೆಯುಳ್ಳ ಬಹುವಿಧವಾದ ಯಜ್ಞಗಳನ್ನು ಆಚರಿಸಿದನು. ಪ್ರಜೆಗಳಿಗೆ ಹಿಂಸೆಯನ್ನು ಕೊಡದೆ ಪುಷ್ಕಳವಾದ ಧನವನ್ನು ಗಳಿಸಿದನು.

ಸರ್ವಮೂರ್ಧಾವಸಿಕ್ತಾನಾಂ ಸಮ್ಮತಃ ಸೋಽಭವದ್ ಯುಧಿ ।
ಅಯಜಚ್ಚಾಶ್ವಮೇಧೈರ್ಯೋ ವಿಜಿತ್ಯ ಪೃಥಿವೀಮಿಮಾಮ್ ॥ ೪ ॥

ಅವನು ಭೂಮಿಯಲ್ಲಿ ಮೂರ್ಧಾಭಿಷಿಕ್ತರಾದ ರಾಜರೆಲ್ಲರಿಗೂ ಸಮ್ಮತನಾಗಿದ್ದನು. ಈ ಭೂಮಿಯನ್ನು ಗೆದ್ದು ಅಶ್ವಮೇಧ ಯಾಗಗಳನ್ನು ಮಾಡಿದನು.

ನಿರರ್ಗಲಾಂಸಜಾರೂಥ್ಯಾನ್ ನಿಷ್ಕಕೋಟಿಂ ಸಹಸ್ರಶಃ ।
ಬಿಭರ್ತಿ ದಕ್ಷಿಣಾ ಯಸ್ಯ ಗಂಗಾಯಾಃ ಸ್ರೋತ ಆವೃಣೋತ್ ॥ ೫ ॥

ಅವನು ಕೊಟ್ಟ ಸಹಸ್ರಾರು ನಿಷ್ಕಕೋಟಿಗಳ ದಕ್ಷಿಣೆಯು ಗಂಗಾನದಿಯಲ್ಲಿ ತುಂಬಿ ಗಂಗೆಯ ಪ್ರವಾಹವನ್ನು ತಡೆಯಿತು.

ಹಸ್ತ್ಯಶ್ವಪಶುಭಿರ್ಧಾನ್ಯೈ ರ್ಮೃಗೈರ್ಗೋಜಾವಿಭಿಸ್ತಥಾ ।
ಏವಿಧೈಃ ಪೃಥಿವೀಂ ಪೂರ್ಣಾಂ ಶಿಬಿರ್ಬ್ರಾಹ್ಮಣಸಾತ್ಕರೋತ್ ॥ ೬ ॥

ಅಶ್ವ-ಗಜ ಮೊದಲಾದ ಪಶುಗಳಿಂದಲೂ, ಧಾನ್ಯಗಳಿಂದಲೂ, ಗೋವುಗಳಿಂದಲೂ, ಆಡು-ಕುರಿ ಮೊದಲಾದ ಪ್ರಾಣಿಗಳಿಂದಲೂ ಪೂರ್ಣವಾಗಿ ತುಂಬಿದ ಈ ಭೂಮಿಯನ್ನು ಶಿಬಿಯು ಬ್ರಾಹ್ಮಣರಿಗೆ ದಾನವಾಗಿ ಕೊಟ್ಟನು.

ಯಾವಂತ್ಯೋ ವರ್ಷತೋ ಧಾರಾ ಯಾವಂತ್ಯೋ ದಿವಿ ತಾರಕಾಃ ।
ತಾವತೀರದದಾದ್ ಗಾ ವೈ ಶಿಬಿರೌಶೀನರೋಽಧ್ವರೇ ॥ ೭ ॥

ಮಳೆಯ ಹನಿಗಳು ಎಷ್ಟು ಬೀಳುತ್ತವೆಯೋ, ಆಕಾಶದಲ್ಲಿ ಎಷ್ಟು ನಕ್ಷತ್ರಗಳಿವೆಯೋ ಅಷ್ಟು ಗೋವುಗಳನ್ನು ಔಶೀನರ ಶಿಬಿಯು ತನ್ನ ಯಜ್ಞಗಳಲ್ಲಿ ದಾನ ಮಾಡಿದನು. ಗಂಗೆಯ ಪಾತ್ರದಲ್ಲಿ ಎಷ್ಟು ಮರಳು ಕಣಗಳಿವೆಯೋ, ಮೇರು ಪರ್ವತದಲ್ಲಿ ಎಷ್ಟು ಶಿಲೆಗಳಿವೆಯೋ, ಸಾಗರದಲ್ಲಿ ಎಷ್ಟು ಪ್ರಾಣಿಗಳು ಮತ್ತು ರತ್ನಗಳು ಇವೆಯೋ ಅಷ್ಟು ಗೋವುಗಳನ್ನು ದಾನ ಮಾಡಿದನು.

ಯಾವತ್ಯಃ ಸಿಕತಾ ಗಾಂಗ್ಯೋ ಯಥಾ ಮೇರೌ ಮಹೋಪಲಾಃ ।
ಉದನ್ವತಿ ಚ ಯಾವಂತಿ ರತ್ನಾನಿ ಪ್ರಾಣಿನೋಽಪಿ ಚ ॥ ೮ ॥

ನೋದ್ಯಂತಾರಂ ಧುರಂ ತಸ್ಯ ಕಿಂಚಿದನ್ಯಂ ಪ್ರಜಾಪತಿಃ ।
ಭೂತಂ ಭವ್ಯಂ ಭವಿಷ್ಯಂ ವಾ ಹ್ಯಧ್ಯಗಚ್ಛನ್ನರೇಶ್ವರಮ್ ॥ ೯ ॥

ಅವನು ಮಾಡಿದ ಕಾರ್ಯಕ್ಕೆ ಸಮಾನವಾದ ಕಾರ್ಯವನ್ನು ಮಾಡುವ ಇನ್ನೊಬ್ಬ ರಾಜನನ್ನು ಭೂತಕಾಲದಲ್ಲಿಯಾಗಲೀ, ವರ್ತಮಾನಕಾಲದಲ್ಲಾಗಲೀ ಅಥವಾ ಭವಿಷ್ಯಕಾಲದಲ್ಲಾಗಲೀ ಪ್ರಜಾಪತಿಯಾದ ಬ್ರಹ್ಮದೇವರು ಕಾಣಲಿಲ್ಲ.

ತಸ್ಯಾಸನ್ ವಿವಿಧಾ ಯಜ್ಞಾಃ ಸರ್ವಕಾಮೈಃ ಸಮನ್ವಿತಾಃ ।
ಹೇಮಯೂಪಾಸನಗೃಹಾ ಹೇಮಪ್ರಾಕಾರತೋರಣಾಃ ॥ ೧೦ ॥

ಅವನ ಬಹುವಿಧವಾದ ಯಜ್ಞಗಳು ಎಲ್ಲ ಭೋಗಪದಾರ್ಥಗಳಿಂದಲೂ ಪೂರ್ಣವಾಗಿ, ಸುವರ್ಣಮಯವಾದ ಯೂಪಸ್ತಂಭಗಳಿಂದಲೂ, ಆಸನಗಳಿಂದಲೂ, ಗೃಹಗಳಿಂದಲೂ ಕೂಡಿದ್ದು, ಸುವರ್ಣಮಯವಾದ ಪ್ರಾಕಾರಗಳನ್ನು ಮತ್ತು ತೋರಣಗಳನ್ನು ಹೊಂದಿದ್ದವು.

ಶುಚಿಸ್ವಾದ್ವನ್ನಪಾನಾಶ್ಚ ಬ್ರಾಹ್ಮಣಾಃ ಪ್ರಯುತಾಯುತಾಃ ।
ನಾನಾಭಕ್ಷ್ಯೋಚ್ಚಯತಟಾಃ ಪಯೋದಧಿಮಧುಹ್ರದಾಃ ॥ ೧೧ ॥

ತಸ್ಯಾಸನ್ ಯಜ್ಞವಾಟೇಷು ನದ್ಯಃ ಶುಭ್ರಾನ್ನಪರ್ವತಾಃ ।
ಪಿಬತಾಶ್ನತ ಖಾದಧ್ವಮಿತಿ ಯತ್ರೋಚ್ಯತೇ ಜನೈಃ ॥ ೧೨ ॥

ಶುಚಿಯೂ ಮತ್ತು ರುಚಿಕರವೂ ಆದ ಅನ್ನ-ಪಾನಗಳನ್ನು ಲಕ್ಷ-ಲಕ್ಷ ಸಂಖ್ಯೆಯ ಬ್ರಾಹ್ಮಣರು ಸೇವಿಸಿದರು. ಅವನ ಯಜ್ಞಶಾಲೆಯ ಸಮೀಪದಲ್ಲಿ ಭಕ್ಷ್ಯ-ಭೋಜ್ಯಗಳ ನದಿಯನ್ನು ಹೊಂದಿದ ಕ್ಷೀರ-ದಧಿ-ಮಧು ಸರೋವರಗಳೂ, ಅಂತಹ ನದಿಗಳೂ, ಶುಭ್ರವಾದ ಅನ್ನಪರ್ವತಗಳೂ ಇದ್ದವು. ಅಲ್ಲಿ ಜನರು ಪಾನವನ್ನು ಮಾಡಿ, ಭೋಜನವನ್ನು ಮಾಡಿ ಎಂಬ ಮಾತುಗಳನ್ನು ಆಡುತ್ತಿದ್ದರು.

ತಸ್ಮೈ ಪ್ರಾದಾದ್ ವರಾನ್ ರುದ್ರಃ ತುಷ್ಟಃ ಪುಣ್ಯೇನ ಕರ್ಮಣಾ ।
ಅಕ್ಷಯಂ ಚ ದದೌ ವಿತ್ತಂ ಶ್ರದ್ಧಾಂ ಕೀರ್ತಿಂ ತತೋऽವ್ಯಯಾಮ್ ।
ಯಥಾರ್ಥಮೇವಂ ಭೂತಾನಾಂ ಪ್ರಿಯತ್ವಂ ಸ್ವರ್ಗಮುತ್ತಮಮ್ ॥

ಅವನ ಪುಣ್ಯಕರ್ಮಗಳಿಂದ ಸಂತುಷ್ಟರಾದ ರುದ್ರದೇವರು ಅವನಿಗೆ ಅಕ್ಷಯವಾದ ಧನವನ್ನೂ, ಶ್ರದ್ಧೆಯನ್ನೂ ಮತ್ತು ಶಾಶ್ವತವಾದ ಕೀರ್ತಿಯನ್ನೂ ವರಗಳನ್ನಾಗಿ ಕೊಟ್ಟರು.

ನಿಶ್ಚಯವಾಗಿ ಎಲ್ಲ ಪ್ರಜೆಗಳ ಪ್ರೀತಿಪಾತ್ರತ್ವವನ್ನು ಮತ್ತು ಶ್ರೇಷ್ಠವಾದ ಸ್ವರ್ಗವನ್ನು (ರುದ್ರದೇವರು ವರವನ್ನಾಗಿ ಕೊಟ್ಟರು).

ಏತಾಂಲ್ಲಬ್ಧ್ವಾ ವರಾನಿಷ್ಟಾನ್ ಶಿಬಿಃ ಕಾಲೇ ದಿವಂ ಗತಃ ।
ಸ ಚೇನ್ಮಮಾರ ಸೃಂಜಯ ಚತುರ್ಭದ್ರತರಸ್ತ್ವಯಾ ॥ ೧೪ ॥

ಪುತ್ರಾತ್ ಪುಣ್ಯತರಸ್ತುಭ್ಯಂ ಮಾ ಪುತ್ರಮನುತಪ್ಯಥಾಃ ।
ಅಯಜ್ವಾನಮದಕ್ಷಿಣ್ಯಮಧಿಚ್ಛೈತ್ಯೇತ್ಯುದಾಹರತ್ ॥ ೧೫ ॥

ಇಂತಹ ಇಷ್ಟವಾದ ವರವನ್ನು ಪಡೆದು ಕಾಲಕ್ರಮದಲ್ಲಿ ಸ್ವರ್ಗಸ್ಥನಾದನು. ಎಲೈ ಸೃಂಜಯನೇ, ಅವನು ನಿನಗಿಂತಲೂ ನಾಲ್ಕುಪಟ್ಟು ಶ್ರೇಷ್ಠನಾಗಿದ್ದನು. ಅವನ ಪುತ್ರನು ನಿನ್ನ ಪುತ್ರನಿಗಿಂತಲೂ ಶ್ರೇಷ್ಠನಾದವನು. ಎಲೈ ಜ್ಞಾನಿಶ್ರೇಷ್ಠನೇ, ಯಾಗಗಳನ್ನು ಮಾಡದ, ದಕ್ಷಿಣೆಯನ್ನು ಕೊಡದ ನಿನ್ನ ಪುತ್ರನನ್ನು ಕುರಿತು ಸಂತಾಪಪಡಬೇಡ ಎಂದು ಹೇಳಿದರು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಂ ದ್ರೋಣಪರ್ವಣಿ ಪಂಚಪಂಚಾಶತ್ತಮೋऽಧ್ಯಾಯಃ ॥

॥ ಅಭಿಮನ್ಯುವಧಪರ್ವಣಿ ಚತುರ್ವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಐವತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಐವತ್ತಾರನೆಯ ಅಧ್ಯಾಯ

ಷೋಡಶರಾಜೋಪಾಖ್ಯಾನದಲ್ಲಿ ರಾಮಮಹಿಮೆಯ ಕಥನ

ನಾರದಃ

ರಾಮಂ ದಾಶರಥಿಂ ಚಾಪಿ ಗತಂ ಸೃಂಜಯ ಶುಶ್ರುಮ ।
ಯಂ ಪ್ರಜಾ ಅನ್ವಮೋದಂತ ಮಾತಾ ಪುತ್ರಮಿವೌರಸಮ್ ।
ಅಸಂಖ್ಯೇಯಾ ಗುಣಾ ಯಸ್ಮಿನ್ನಾಸನ್ನಮಿತತೇಜಸಿ ॥ ೧ ॥

ನಾರದರು– ಎಲೈ ಸೃಂಜಯನೇ, ದಶರಥಪುತ್ರನಾದ ರಾಮನೂ ಸ್ವರ್ಗಸ್ಥನಾದನೆಂದು ಕೇಳಿದ್ದೇವೆ. ತಾಯಿಯು ಔರಸ ಪುತ್ರನನ್ನು ಮೆಚ್ಚುವಂತೆ ಅವನನ್ನು

ಪ್ರಜೆಗಳು ಮೆಚ್ಚಿದರು. ಅಮಿತ ತೇಜಸ್ವಿಯಾದ ಅವನಲ್ಲಿ ಸಂಖ್ಯೆಯಿಲ್ಲದಷ್ಟು ಗುಣಗಳಿದ್ದವು.

ಯಶ್ಚತುರ್ದಶವರ್ಷಾಣಿ ನಿದೇಶಾತ್ ಪಿತುರಚ್ಯುತಃ ।
ವನೇ ವನಿತಯಾ ಸಾರ್ಧಮ್ ಅವಸಲ್ಲಕ್ಷ್ಮಣಾನುಗಃ ॥ ೨ ॥

ಅವನು ತನ್ನ ಗುಣಗಳಿಂದ ಚ್ಯುತನಾಗದೆ, ತಂದೆಯ ಆಜ್ಞೆಯಂತೆ ಹದಿನಾಲ್ಕು ವರ್ಷಗಳ ಕಾಲ ಸೀತಾ-ಲಕ್ಷ್ಮಣರ ಜೊತೆಯಲ್ಲಿ ವನವಾಸವನ್ನು ಮಾಡಿದನು.

ಜಘಾನ ಚ ಜನಸ್ಥಾನೇ ರಾಕ್ಷಸಾನ್ ಮನುಜಾಧಿಪಃ ।
ತಪಸ್ವಿಜನರಕ್ಷಾರ್ಥಂ ಸಹಸ್ರಾಣಿ ಚತುರ್ದಶ ॥ ೩ ॥

ಪುರುಷಶ್ರೇಷ್ಠನಾದ ಅವನು ತಪಸ್ವಿಜನರ ರಕ್ಷಣೆಗೋಸ್ಕರ ಜನಸ್ಥಾನದಲ್ಲಿ ಹದಿನಾಲ್ಕು ಸಾವಿರ ರಾಕ್ಷಸರನ್ನು ಸಂಹರಿಸಿದನು.

ತತ್ರೈವ ವಸತಸ್ತಸ್ಯ ರಾವಣೋ ನಾಮ ರಾಕ್ಷಸಃ ।
ಜಹಾರ ಭಾರ್ಯಾಂ ವೈದೇಹೀಂ ಸಮ್ಮೋಹ್ಯೈನಂ ಸಹಾನುಜಮ್ ॥೪॥

ಅವನು ಅಲ್ಲಿಯೇ ವಾಸ ಮಾಡುತ್ತಿದ್ದಾಗ ರಾವಣನೆಂಬ ರಾಕ್ಷಸನು ಅವನನ್ನೂ ಮತ್ತು ಅವನ ತಮ್ಮನಾದ ಲಕ್ಷ್ಮಣನನ್ನೂ ಮರುಳುಗೊಳಿಸಿ, ಅವನ ಪತ್ನಿಯಾದ ಜಾನಕಿಯನ್ನು ಅಪಹರಿಸಿದನು.

ರಾಮಾಂ ಹೃತಾಂ ರಾಕ್ಷಸೇನ ಭಾರ್ಯಾಂ ಶ್ರುತ್ವಾ ಜಟಾಯುಷಃ ।
ಆತುರಃ ಶೋಕಸಂತಪ್ತೋಽಗಚ್ಛದ್ ರಾಮೋ ಹರೀಶ್ವರಮ್ ॥ ೫ ॥

ತನ್ನ ಪತ್ನಿಯು ರಾಕ್ಷಸನಿಂದ ಅಪಹರಿಸಲ್ಪಟ್ಟಳೆಂಬ ವಾರ್ತೆಯನ್ನು ಜಟಾಯುವಿನಿಂದ ಕೇಳಿ, ಶೋಕಸಂತಪ್ತನೂ, ಆತುರನೂ ಆದ ರಾಮನು ಕಪಿರಾಜನಾದ ಸುಗ್ರೀವನ ಬಳಿಗೆ ಹೋದನು.

ತೇನ ರಾಮಃ ಸುಸಂಗಮ್ಯ ವಾನರೈಶ್ಚ ಮಹಾಬಲೈಃ ।
ಆಜಗಾಮೋದಧೇಃ ಪಾರಂ ಸೇತುಂ ಕೃತ್ವಾ ಮಹಾರ್ಣವೇ ॥ ೬ ॥

ಅವನ ಜೊತೆಯಲ್ಲಿ ಒಳ್ಳೆಯ ಸ್ನೇಹವನ್ನು ಸಂಪಾದಿಸಿ, ಮಹಾಬಲಿಷ್ಠರಾದ ವಾನರರ ಜೊತೆಯಲ್ಲಿ ಸಮುದ್ರದ ತೀರಕ್ಕೆ ಬಂದು, ಮಹಾಸಮುದ್ರದಲ್ಲಿ ಸೇತುವೆಯನ್ನು ನಿರ್ಮಿಸಿ ಇನ್ನೊಂದು ದಡವನ್ನು ತಲುಪಿದನು.

ತತ್ರ ಹತ್ವಾ ತು ಪೌಲಸ್ತ್ಯಾನ್ ಸಸುಹೃದ್ಗಣಬಾಂಧವಾನ್ ।
ಮಾಯಾವಿನಂ ಮಹಾಘೋರಂ ರಾವಣಂ ಲೋಕಕಂಟಕಮ್ ॥ ೭ ॥

ಸುರಾಸುರೈರವಧ್ಯಂ ತಂ ದೇವಬ್ರಾಹ್ಮಣಕಂಟಕಮ್ ।
ಜಘಾನ ಸ ಮಹಾಬಾಹುಃ ಪೌಲಸ್ತ್ಯಂ ಸಗಣಂ ರಣೇ ॥ ೮ ॥

ಅಲ್ಲಿ ಮಹಾಬಾಹುವಾದ ಅವನು ಸುಹೃದ್ಬಾಂಧವಸಹಿತರಾದ ಪುಲಸ್ತ್ಯ ವಂಶದವರನ್ನು ಸಂಹರಿಸಿ, ಮಾಯಾವಿಯೂ, ಮಹಾಘೋರನೂ, ಲೋಕಕಂಟಕನೂ, ಸುರಾಸುರರಿಂದ ಅವಧ್ಯನಾದವನೂ, ದೇವ-ಬ್ರಾಹ್ಮಣ ಕಂಟಕನೂ ಆದ, ಪೌಲಸ್ತ್ಯನಾದ ರಾವಣನನ್ನು ಯುದ್ಧದಲ್ಲಿ ಅವನ ಪರಿವಾರಸಹಿತವಾಗಿ ಸಂಹರಿಸಿದನು.

ತಮಾಗಸ್ಕಾರಿಣಂ ರಾಮಃ ಪೌಲಸ್ತ್ಯಮಜಿತಂ ಪರೈಃ ।
ಜಘಾನ ಸಮರೇ ಕ್ರುದ್ಧಃ ಪುರೇವ ತ್ರ್ಯಂಬಕೋऽಂಧಕಮ್ ॥ ೯ ॥

ಪೌಲಸ್ತ್ಯಕುಲದಲ್ಲಿ ಜನಿಸಿ, ಲೋಕಕ್ಕೆ ಅಪಕಾರವನ್ನು ಮಾಡಿ, ಪರರಿಂದ ಅಜಿತನಾದ ಆ ಪೌಲಸ್ತ್ಯ ರಾವಣನನ್ನು ರಾಮನು ಯುದ್ಧದಲ್ಲಿ ಕ್ರುದ್ಧನಾಗಿ, ತ್ರಿನೇತ್ರರಾದ ರುದ್ರದೇವರು ಹಿಂದೆ ಅಂಧಕಾಸುರನನ್ನು ಸಂಹಾರ ಮಾಡಿದಂತೆ ಸಂಹಾರ ಮಾಡಿದನು.

ಹತ್ವಾ ತತ್ರ ರಿಪುಂ ಸಂಖ್ಯೇ ಭಾರ್ಯಯಾ ಸಹ ಸಂಗತಃ ।
ಲಂಕೇಶ್ವರಂ ಚ ಚಕ್ರೇ ಸ ಧರ್ಮಾತ್ಮಾನಂ ವಿಭೀಷಣಮ್ ॥ ೧೦ ॥

ಅಲ್ಲಿ ಯುದ್ಧದಲ್ಲಿ ಶತ್ರುವನ್ನು ಕೊಂದು, ಭಾರ್ಯೆಯ ಜೊತೆಯಲ್ಲಿ ಸಮಾಗಮವನ್ನು ಹೊಂದಿ, ಧರ್ಮಾತ್ಮನಾದ ವಿಭೀಷಣನನ್ನು ಲಂಕಾಧಿಪತಿಯನ್ನಾಗಿ ಮಾಡಿದನು.

ಭಾರ್ಯಯಾ ಸಹ ಸಂಯುಕ್ತಃ ತತೋ ವಾನರಸೇನಯಾ ।
ಅಯೋಧ್ಯಾಮಾಗತೋ ವೀರಃ ಪುಷ್ಪಕೇಣ ವಿರಾಜತಾ ॥ ೧೧ ॥

ಅನಂತರ ಶೋಭಿಸುವ ಪುಷ್ಪಕವಿಮಾನದಲ್ಲಿ ಕುಳಿತು, ಭಾರ್ಯೆಯಿಂದಲೂ, ವಾನರಸೇನೆಯಿಂದಲೂ ಸಹಿತನಾಗಿ ವೀರನಾದ ಅವನು ಅಯೋಧ್ಯೆಗೆ ಹಿಂದಿರುಗಿದನು.

ತತ್ರ ರಾಜನ್ ಪ್ರವಿಷ್ಟಃ ಸ ಅಯೋಧ್ಯಾಯಾಂ ಮಹಾಯಶಾಃ ।
ಮಾತೄರ್ವಯಸ್ಯಾನ್ ಸಚಿವಾನ್ ಋತ್ವಿಜಃ ಸಪುರೋಹಿತಾನ್॥ ೧೨ ॥

ಶುಶ್ರೂಷಮಾಣಃ ಸತತಂ ಮಂತ್ರಿಭಿಶ್ಚಾಭಿಷೇಚಿತಃ ।

ಎಲೈ ರಾಜನೇ, ಮಹಾಕೀರ್ತಿವಂತನಾದ ಅವನು ಅಯೋಧ್ಯೆಯನ್ನು ಪ್ರವೇಶಿಸಿ, ತಾಯಿಯರನ್ನೂ, ಋತ್ವಿಜರನ್ನೂ, ಪುರೋಹಿತರನ್ನೂ, ಸಚಿವರನ್ನೂ ಸತತವಾಗಿ ಸಮ್ಮಾನಿಸಿ, ಮಂತ್ರಿಗಳಿಂದ ಅಭಿಷೇಕ ಮಾಡಲ್ಪಟ್ಟನು.

ವಿಸೃಜ್ಯ ಹರಿರಾಜಾನಂ ಹನುಮಂತಂ ಸಹಾಂಗದಮ್ ॥ ೧೩ ॥

ಭ್ರಾತರಂ ಭರತಂ ವೀರಂ ಶತ್ರುಘ್ನಂ ಚೈವ ಲಕ್ಷ್ಮಣಮ್ ।
ಪೂಜಯನ್ ಪರಯಾ ಪ್ರೀತ್ಯಾ ವೈದೇಹ್ಯಾ ಚಾಭಿಪೂಜಿತಃ ॥ ೧೪ ॥

ಕಪಿರಾಜನಾದ ಸುಗ್ರೀವನನ್ನೂ, ಅಂಗದ ಸಹಿತನಾದ ಹನುಮಂತನನ್ನೂ ಕಳುಹಿಸಿಕೊಟ್ಟು, ತಮ್ಮಂದಿರಾದ ಭರತ-ಶತ್ರುಘ್ನ-ಲಕ್ಷ್ಮಣರನ್ನು ಸಮ್ಮಾನಿಸಿ, ಜಾನಕಿಯಿಂದ ಬಹಳ ಪ್ರೀತಿಯಿಂದ ಪೂಜಿಸಲ್ಪಟ್ಟನು.

ದಶವರ್ಷಸಹಸ್ರಾಣಿ ದಶವರ್ಷಶತಾನಿ ಚ ।
ಚತುಃಸಾಗರಪರ್ಯಂತಾಂ ಪೃಥಿವೀಮನ್ವಶಾಸತ ॥ ೧೫ ॥

ಹತ್ತು ಸಾವಿರ ವರ್ಷಗಳ ಕಾಲ ಮತ್ತು ಒಂದು ಸಾವಿರ ವರ್ಷದ ಕಾಲ ಅವನು ಚತುಸ್ಸಾಗರ ಪರ್ಯಂತವಾದ ಭೂಮಿಯನ್ನು ಆಳಿದನು.

ಸ ಪ್ರಜಾನುಗ್ರಹಂ ಕೃತ್ವಾ ತ್ರಿದಶೈರಭಿಪೂಜಿತಃ ।
ವ್ಯಾಪ್ಯ ಕೃತ್ಸ್ನಂ ಜಗತ್ ಕೀರ್ತ್ಯಾ ನರರ್ಷಿಗಣಸೇವಿತಃ ।
ಅಶ್ವಮೇಧಶತೈರೀಜೇ ಕ್ರತುಭಿರ್ಭೂರಿದಕ್ಷಿಣೈಃ ॥ ೧೬ ॥

ಅವನು ಪ್ರಜೆಗಳಿಗೆ ಅನುಗ್ರಹವನ್ನು ಮಾಡಿ, ದೇವತೆಗಳಿಂದ ಪೂಜಿಸಲ್ಪಟ್ಟು, ಜಗತ್ತೆಲ್ಲವನ್ನೂ ತನ್ನ ಕೀರ್ತಿಯಿಂದ ವ್ಯಾಪಿಸಿ, ಮನುಷ್ಯರಿಂದಲೂ ಮತ್ತು ಋಷಿ ಗಣಗಳಿಂದಲೂ ಸೇವಿಸಲ್ಪಟ್ಟನು. ಬಹಳ ದಕ್ಷಿಣೆಯನ್ನು ದಾನ ಮಾಡಿ ನೂರು ಅಶ್ವಮೇಧ ಯಾಗಗಳನ್ನು ಆಚರಿಸಿದನು.

ಯಶ್ಚ ವಿಪ್ರಪ್ರಸಾದೇನ ಸರ್ವಕಾಮಾನವಾಪ್ಯ ಚ ॥ ೧೭ ॥

ಸಂಪ್ರಾಪ್ಯ ವಿಧಿವದ್ ರಾಜ್ಯಂ ಸರ್ವಭೂತಾನುಕಂಪನಃ ।
ಸರ್ವದ್ವೀಪಾನವಪ್ಲಭ್ಯ ಪ್ರಜಾ ಧರ್ಮೇಣ ಪಾಲಯನ್ ॥ ೧೮ ॥

ಸ ನಿರರ್ಗಲಜಾನ್ ಮುಖ್ಯಾನ್ ಅಶ್ವಮೇಧಶತಂ ಪ್ರಭುಃ ।
ಆಜಹಾರಾಮರೇಶಸ್ಯ ಹವಿಷಾऽರ್ಚಾಂ ಚ ಸರ್ವದಾ ॥ ೧೯ ॥

ಅನ್ಯೈಶ್ಚ ವಿವಿಧೈರ್ಯಜ್ಞೈರ್ದಕ್ಷಿಣಾನುಗುಣೋದಿತೈಃ ॥ ೨೦ ॥

ಯಾವ ರಾಮನು ಬ್ರಾಹ್ಮಣರ ಅನುಗ್ರಹದಿಂದ ಎಲ್ಲ ಕಾಮಗಳನ್ನೂ ಪಡೆದು, ವಿಧಿಪ್ರಕಾರವಾಗಿ ರಾಜ್ಯವನ್ನು ಪಡೆದು, ಸರ್ವಭೂತಗಳಲ್ಲಿ ದಯೆಯನ್ನು ಹೊಂದಿದವನಾಗಿ, ಎಲ್ಲ ದ್ವೀಪಗಳನ್ನೂ ತನ್ನ ಪ್ರಭಾವದಿಂದ ವ್ಯಾಪಿಸಿ, ಪ್ರಜೆಗಳನ್ನು ಧರ್ಮದಿಂದ ಪಾಲಿಸುತ್ತಾ, ಯಾವ ಅಡ್ಡಿಯೂ ಇಲ್ಲದಂತೆ ಶ್ರೇಷ್ಠವಾದ ನೂರು ಅಶ್ವಮೇಧ ಯಾಗಗಳನ್ನು ಮಾಡಿ, ದೇವೇಶನಾದ ಇಂದ್ರನನ್ನು ಸರ್ವದಾ ಹವಿಸ್ಸುಗಳಿಂದ ಪೂಜಿಸಿದನೋ ಪ್ರಭುವಾದ ಅವನು ಪ್ರಭೂತವಾದ ದಕ್ಷಿಣೆಯನ್ನು ಹೊಂದಿದ, ಗುಣಯುಕ್ತವಾದ, ಇನ್ನೂ ಅನೇಕ ವಿಧವಾದ ಯಜ್ಞಗಳನ್ನು ಆಚರಿಸಿದನು.

ಕ್ಷುತ್ಪಿಪಾಸೇऽವಧೀದ್ ರಾಮಃ ಸರ್ವರೋಗಾಂಶ್ಚ ದೇಹಿನಾಮ್ ॥೨೧॥

ಸತತಂ ಗುಣಸಂಪನ್ನೋ ದೀಪ್ಯಮಾನಃ ಸ್ವತೇಜಸಾ ।
ಅತಿ ಸರ್ವಾಣಿ ಭೂತಾನಿ ರಾಮೋ ದಾಶರಥಿರ್ಬಭೌ ॥ ೨೨ ॥

ರಾಮನು ತನ್ನ ಆಳ್ವಿಕೆಯಲ್ಲಿ ಎಲ್ಲ ಪ್ರಾಣಿಗಳಿಗೂ ಹಸಿವು-ನೀರಡಿಕೆಗಳನ್ನೂ ಮತ್ತು ಎಲ್ಲ ರೋಗಗಳನ್ನೂ ಪರಿಹರಿಸಿದನು. ಸತತವಾಗಿ ಗುಣಪೂರ್ಣನಾಗಿದ್ದು, ತನ್ನ ತೇಜಸ್ಸಿನಿಂದ ಬೆಳಗುತ್ತಾ ದಾಶರಥಿ ರಾಮನು ಎಲ್ಲ ಸ್ಥಾವರ-ಜಂಗಮ ಪ್ರಾಣಿಗಳಿಗಿಂತ ಅತಿಶಯವಾಗಿ ಮೆರೆದನು.

ಋಷೀಣಾಂ ದೇವತಾನಾಂ ಚ ಮಾನುಷಾಣಾಂ ಚ ಸರ್ವಶಃ ।
ಪೃಥಿವ್ಯಾಂ ಸಹ ವಾಸೋಽಭೂದ್ ರಾಮೇ ರಾಜ್ಯಂ ಪ್ರಶಾಸತಿ ॥೨೩॥

ರಾಮನು ರಾಜ್ಯವಾಳುತ್ತಿದ್ದಾಗ ಭೂಮಿಯಲ್ಲಿ ಋಷಿಗಳು, ದೇವತೆಗಳು ಮತ್ತು ಮನುಷ್ಯರೆಲ್ಲರೂ ಒಟ್ಟಿಗೆ ವಾಸ ಮಾಡುತ್ತಿದ್ದರು.

ನಾಹೀಯಂತ ತದಾ ಪ್ರಾಣಾಃ ಪ್ರಾಣಿನಾಂ ನ ತದಾ ವ್ಯಥಾ ।
ಪ್ರಾಣಾಪಾನೌ ಸಮಾವಾಸ್ತಾಂ ರಾಮೇ ರಾಜ್ಯಂ ಪ್ರಶಾಸತಿ ।
ಪರ್ಯದೀಪ್ಯಂತ ತೇಜಾಂಸಿ ತಥಾನರ್ಥಶ್ಚ ನಾಭವತ್ ॥ ೨೪ ॥

ಆಗ ಪ್ರಜೆಗಳಿಗೆ ಅಕಾಲದಲ್ಲಿ ಮರಣವು ಉಂಟಾಗುತ್ತಿರಲಿಲ್ಲ. ವ್ಯಥೆಯು ಉಂಟಾಗುತ್ತಿರಲಿಲ್ಲ. ರಾಮನು ರಾಜ್ಯವಾಳುತ್ತಿದ್ದಾಗ ಎಲ್ಲ ಪ್ರಾಣಿಗಳಿಗೂ ಪ್ರಾಣಾಪಾನಗಳು ಸಮವಾಗಿದ್ದವು. ಎಲ್ಲ ಸೂರ್ಯಾದಿ ತೇಜಸ್ಸುಗಳು ಚೆನ್ನಾಗಿ ಪ್ರಕಾಶಿಸುತ್ತಿದ್ದವು ಮತ್ತು ಯಾವ ಅನರ್ಥವೂ ಇರಲಿಲ್ಲ.

ದೀರ್ಘಾಯುಷಃ ಪ್ರಜಾಃ ಸರ್ವಾ ಯುವಾನೋ ನ ಮೃತಾಸ್ತದಾ ।
ವೇದೈಶ್ಚತುರ್ಭಿಃ ಸಂಪನ್ನಾಃ ಪ್ರಾಪ್ನುವಂತಿ ದಿವಂ ದ್ವಿಜಾಃ ।
ಹವ್ಯಂ ಕವ್ಯಂ ಚ ವಿಧಿವತ್ ಪೂರ್ತಾನಿ ಹುತಮೇವ ಚ ॥ ೨೫ ॥

ಎಲ್ಲ ಪ್ರಜೆಗಳೂ ದೀರ್ಘಾಯುಷ್ಯವುಳ್ಳವರಾಗಿದ್ದರು. ಯುವಕರು ಮೃತರಾಗುತ್ತಿರಲಿಲ್ಲ. ದ್ವಿಜರು ನಾಲ್ಕು ವೇದಗಳಿಂದ ಸಂಪನ್ನರಾಗಿ ಸ್ವರ್ಗವನ್ನು ಪಡೆಯುತ್ತಿದ್ದರು. ಹವ್ಯ-ಕವ್ಯಗಳು, ಇಷ್ಟಾಪೂರ್ತಗಳು ವಿಧಿಗೆ ಅನುಗುಣವಾಗಿ ನಡೆಯುತ್ತಿದ್ದವು.

ಅದಂಶಮಶಕಾ ದೇಶಾ ನಪ್ಲವ್ಯಾಲಸರೀಸೃಪಾಃ ।
ನಾಪ್ಸು ಪ್ರಾಣಭೃತೋ ಮಗ್ನಾ ನಾಕಾಲೇ ಜ್ವಲನೋಽದಹತ್ ॥ ೨೬ ॥

ದೇಶದಲ್ಲಿ ನೊಣಗಳಾಗಲೀ, ಸೊಳ್ಳೆಗಳಾಗಲೀ ಇರಲಿಲ್ಲ. ಸರ್ಪಗಳಾಗಲೀ, ಮಹಾಸರ್ಪಗಳಾಗಲೀ ಇರಲಿಲ್ಲ. ಪ್ರಜೆಗಳು ನೀರಿನಲ್ಲಿ ಮುಳುಗಿ ಮರಣ ಹೊಂದುತ್ತಿರಲಿಲ್ಲ. ಅಕಾಲದಲ್ಲಿ ಅಗ್ನಿಯು ದಹಿಸುತ್ತಿರಲಿಲ್ಲ.

ಅಧರ್ಮರುಚಯೋ ಲುಬ್ಧಾ ಮೂರ್ಖಾ ವಾ ನಾಭವಂಸ್ತದಾ ।
ಶಿಷ್ಟೇಷ್ಟಪುಷ್ಟಕರ್ಮಾಣಃ ಸರ್ವೇ ವರ್ಣಾಸ್ತದಾऽಭವನ್ ॥ ೨೭ ॥

ಆಗ ಅಧರ್ಮದಲ್ಲಿ ಆಸಕ್ತರಾಗದವರಾಗಲೀ, ಲೋಭಿಗಳಾಗಲೀ, ಮೂರ್ಖರಾಗಲಿ ಇರಲಿಲ್ಲ. ಎಲ್ಲ ವರ್ಣಗಳವರೂ ತಮಗೆ ಅನುಗುಣವಾದ, ಪ್ರಿಯವಾದ ಕರ್ಮಗಳನ್ನು ಮಾಡುತ್ತಿದ್ದರು.

ಸ್ವಧಾಮೂರ್ಜಂ ಚ ರಕ್ಷೋಭಿರ್ಜನಸ್ಥಾನೇ ಪ್ರಣಾಶಿತೇ ।
ಪ್ರಾದಾನ್ನಿಹತ್ಯ ರಕ್ಷಾಂಸಿ ಪಿತೃದೇವೇಭ್ಯ ಈಶ್ವರಃ ॥ ೨೮ ॥

ಜನಸ್ಥಾನದಲ್ಲಿ ರಾಕ್ಷಸರನ್ನು ವಿನಾಶಗೊಳಿಸಿದ ಮೇಲೆ ಈಶ್ವರನಾದ ರಾಮನು ಪಿತೃಗಳಿಗೂ ಮತ್ತು ದೇವತೆಗಳಿಗೂ ಸ್ವಧಾರೂಪವಾದ ಮತ್ತು ಊರ್ಜರೂಪವಾದ ಅನ್ನವನ್ನು ಕೊಟ್ಟನು.

ಅಪ್ಯತ್ರ ಗಾಥಾ ಗಾಯಂತಿ ಯೇ ಪುರಾಣವಿದೋ ಜನಾಃ ॥ ೨೯ ॥

ಸಹಸ್ರಪುತ್ರಾಃ ಪುರುಷಾ ದಶವರ್ಷಶತಾಯುಷಃ ।
ನಚ ಜ್ಯೇಷ್ಠಾಃ ಕನಿಷ್ಠೇಭ್ಯಸ್ತದಾ ಶ್ರಾದ್ಧಾನಿ ಕುರ್ವತೇ ॥ ೩೦ ॥

ಪುರಾಣವನ್ನು ತಿಳಿದ ಜನರು ಆ ಕಾಲದಲ್ಲಿ ಪುರುಷರು ಸಹಸ್ರ ಪುತ್ರರನ್ನು, ಸಹಸ್ರ ವರ್ಷ ಆಯುಷ್ಯವನ್ನು ಹೊಂದಿರುತ್ತಿದ್ದರು ಎಂದು ಗೀತೆಯನ್ನು ಹಾಡುತ್ತಾರೆ. ಆಗ ದೊಡ್ಡವರು ಚಿಕ್ಕವರಿಗೆ ಶ್ರಾದ್ಧವನ್ನು ಮಾಡುವ ಪ್ರಸಂಗವಿರಲಿಲ್ಲ.

ನ ತಸ್ಕರಾ ವಾ ವ್ಯಾಧಿರ್ವಾ ವಿವಿಧೋಪದ್ರವಾಃ ಕ್ವಚಿತ್ ।
ಅನಾವೃಷ್ಟಿಭಯಂ ಚಾತ್ರ ದುರ್ಭಿಕ್ಷೋ ವ್ಯಾಧಯಃ ಕ್ವಚಿತ್ ॥ ೩೧ ॥

ಆಗ ಕಳ್ಳರಾಗಲೀ, ವ್ಯಾಧಿಗಳಾಗಲೀ, ಅನೇಕ ಉಪದ್ರವಗಳಾಗಲೀ, ಅನಾವೃಷ್ಟಿ ಭಯವಾಗಲೀ, ದುರ್ಭಿಕ್ಷವಾಗಲೀ ಅಥವಾ ಮೋಸವಾಗಲೀ ಇರಲಿಲ್ಲ.

ಸರ್ವಂ ಪ್ರಸನ್ನಮೇವಾಸೀದ್ ಅತ್ಯಂತಸುಖಸಂಯುತಮ್ ।
ಏವಂ ಲೋಕೋऽಭವತ್ ಸರ್ವೋ ರಾಮೇ ರಾಜ್ಯಂ ಪ್ರಶಾಸತಿ ॥೩೨॥

ಎಲ್ಲವೂ ಪ್ರಸನ್ನವಾಗಿದ್ದಿತು. ಎಲ್ಲರೂ ಸುಖದಿಂದ ಕೂಡಿರುತ್ತಿದ್ದರು. ರಾಮನು ರಾಜ್ಯವಾಳುತ್ತಿದ್ದಾಗ ಎಲ್ಲ ಲೋಕವೂ ಹೀಗಿದ್ದಿತು.

ಶ್ಯಾಮೋ ಯುವಾ ಲೋಹಿತಾಕ್ಷೋ ಮಾತಂಗಾನಾಮಿವರ್ಷಭಃ ।
ಆಜಾನುಬಾಹುಃ ಸುಮುಖಃ ಸಿಂಹಸ್ಕಂಧೋ ಮಹಾಭುಜಃ ॥ ೩೩ ॥

ದಶವರ್ಷಸಹಸ್ರಾಣಿ ದಶವರ್ಷಶತಾನಿ ಚ ।
ಸರ್ವಭೂತಮನಃಕಾಂತೋ ರಾಮೋ ರಾಜ್ಯಮಕಾರಯತ್ ॥ ೩೪ ॥

ಶ್ಯಾಮವರ್ಣನೂ, ಯುವಕನೂ, ಲೋಹಿತಾಕ್ಷನೂ, ಗಜರಾಜನ ಠೀವಿಯುಳ್ಳವನೂ, ಆಜಾನುಬಾಹುವೂ, ಸುಂದರಮುಖವುಳ್ಳವನೂ, ಸಿಂಹಸ್ಕಂಧನೂ ಮಹಾಭುಜನೂ ಆದ ರಾಮನು ಸರ್ವಪ್ರಾಣಿಗಳ ಮತ್ತು ಮನುಷ್ಯರ ಮನಸ್ಸಿಗೆ ಪ್ರಿಯವಾಗಿ ಹನ್ನೊಂದು ಸಾವಿರ ವರ್ಷಗಳ ಕಾಲ ರಾಜ್ಯವನ್ನು ಆಳಿದನು.

ರಾಮೋ ರಾಮೋ ರಾಮ ಇತಿ ಪ್ರಜಾನಾಮಭವನ್ ಕಥಾಃ ।
ರಾಮಭೂತಂ ಜಗದಭೂದ್ ರಾಮೇ ರಾಜ್ಯಂ ಪ್ರಶಾಸತಿ ॥ ೩೫ ॥

ರಾಮ, ರಾಮ, ರಾಮ ಎಂದೇ ಪ್ರಜೆಗಳು ಮಾತನಾಡುತ್ತಿದ್ದರು. ರಾಮನು ರಾಜ್ಯವಾಳುತ್ತಿದ್ದಾಗ ಜಗತ್ತೆಲ್ಲವೂ ರಾಮಮಯವಾಗಿದ್ದಿತು.

ಚತುರ್ವಿಧಾಃ ಪ್ರಜಾಃ ರಾಮಃ ಸ್ವರ್ಗಂ ನೀತ್ವಾ ದಿವಂ ಗತಃ ।
ಆತ್ಮೇಚ್ಛಯಾ ಪ್ರತಿಷ್ಠಾಪ್ಯ ರಾಜವಂಶಾನಿಹಾಷ್ಟಧಾ ।

ರಾಮನು ತನ್ನ ಇಚ್ಛೆಯಿಂದಲೇ ರಾಜವಂಶವನ್ನು ಎಂಟು ವಿಧವಾಗಿ ಪ್ರತಿಷ್ಠೆ ಮಾಡಿ ಜರಾಯುಜ, ಸ್ವೇದಜ, ಉದ್ಭಿಜ ಮತ್ತು ಅಂಡಜ ರೂಪವಾದ ನಾಲ್ಕು ವಿಧವಾದ ಪ್ರಾಣಿಗಳನ್ನು ಸ್ವರ್ಗಕ್ಕೆ ಕರೆದುಕೊಂಡು ಹೋದನು.

ಸ ಚೇನ್ಮಮಾರ ಸೃಂಜಯ ಚತುರ್ಭದ್ರತರಸ್ತ್ವಯಾ ॥ ೩೬ ॥

ಪುತ್ರಾತ್ ಪುಣ್ಯತರಸ್ತುಭ್ಯಂ ಮಾ ಪುತ್ರಮನುತಪ್ಯಥಾಃ ।
ಅಯಜ್ವಾನಮದಕ್ಷಿಣ್ಯಮಧಿಚ್ಛೈತ್ಕೇತ್ಯುದಾಹರತ್ ॥ ೩೭ ॥

ಎಲೈ ಸೃಂಜಯನೇ, ನಿನಗಿಂತ ನಾಲ್ಕು ಪಟ್ಟು ಶ್ರೇಷ್ಠನಾದ ಅವನೂ ಮತ್ತು ನಿನ್ನ ಪುತ್ರನಿಗಿಂತ ಶ್ರೇಷ್ಠನಾದ ಅವನ ಪುತ್ರನೂ ಮರಣ ಹೊಂದಿದರೆಂದ ಮೇಲೆ ಎಲೈ ಜ್ಞಾನಿಶ್ರೇಷ್ಠನೇ, ಯಾಗವನ್ನು ಮಾಡದಿರುವ, ದಕ್ಷಿಣೆಯನ್ನು ಕೊಡದಿರುವ ನಿನ್ನ ಪುತ್ರನ ವಿಷಯದಲ್ಲಿ ನೀನು ಸಂತಾಪಪಡಬೇಡ ಎಂದು ಹೇಳಿದರು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಂ ದ್ರೋಣಪರ್ವಣಿ ಷಟ್ಪಂಚಾಶತ್ತಮೋಽಧ್ಯಾಯಃ ॥

॥ ಅಭಿಮನ್ಯುವಧಪರ್ವಣಿ ಪಂಚವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಐವತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಐವತ್ತೇಳನೆಯ ಅಧ್ಯಾಯ

ಷೋಡಶರಾಜೋಪಾಖ್ಯಾನದಲ್ಲಿ ಭಗೀರಥನ ಚರಿತೆ

ನಾರದಃ

ಭಗೀರಥಂ ಚ ರಾಜಾನಂ ಮೃತಂ ಸೃಂಜಯ ಶುಶ್ರುಮ ।
ಪರಿತ್ರಾಣಾಯ ಪೂರ್ವೇಷಾಂ ಯೇನ ಗಂಗಾಽವತಾರಿತಾ ॥ ೧ ॥

ನಾರದರು– ಎಲೈ ಸೃಂಜಯನೇ, ತನ್ನ ಪೂರ್ವಜರನ್ನು ರಕ್ಷಿಸಲು ಗಂಗೆಯನ್ನು ಕೆಳಗೆ ತಂದ ಭಗೀರಥ ರಾಜನೂ ಮೃತನಾದನೆಂದು ಕೇಳಿದ್ದೇವೆ.

ಯಸ್ಯೇಂದ್ರೋ ಬಾಹುವೀರ್ಯೇಣ ಪ್ರೀತೋ ರಾಜ್ಞೋ ಮಹಾತ್ಮನಃ ।
ಸೋಽಶ್ವಮೇಧಶತೈರೀಜೇ ಸಮಾಪ್ತವರದಕ್ಷಿಣೈಃ ।
ಹವಿರ್ಮಂತ್ರಾನ್ನಸಂಪನ್ನೈರ್ದೇವಾನಾಮಾದಧಾನ್ಮುದಮ್ ॥ ೨ ॥

ಯಾವ ಮಹಾತ್ಮನಾದ, ಬಾಹುವೀರ್ಯನಾದ ರಾಜನನ್ನು ನೋಡಿ ಇಂದ್ರನೂ ಸಂತೋಷಪಟ್ಟನೋ ಅಂತಹವನು ಶ್ರೇಷ್ಠವಾದ ದಕ್ಷಿಣೆಗಳಿಂದ ಕೂಡಿದ, ಹವಿಸ್ಸು, ಮಂತ್ರಗಳು ಮತ್ತು ಅನ್ನದಾನಗಳಿಂದ ಕೂಡಿದ ನೂರು ಅಶ್ವಮೇಧ ಯಾಗಗಳನ್ನು ಮಾಡಿ ದೇವತೆಗಳಿಗೆ ಸಂತೋಷವನ್ನುಂಟು ಮಾಡಿದನು.

ಯಃ ಸಹಸ್ರಂ ಸಹಸ್ರಾಣಾಂ ಕನ್ಯಾ ಹೇಮವಿಭೂಷಿತಾಃ ।
ರಾಜನ್ಯಾನ್ ರಾಜಪುತ್ರ್ಯಶ್ಚ ಬ್ರಾಹ್ಮಣೇಭ್ಯೋ ಹ್ಯಮನ್ಯತ ॥ ೩ ॥

ಅವನು ಹತ್ತು ಲಕ್ಷ ಸಂಖ್ಯೆಯ ಸುವರ್ಣಾಲಂಕೃತರಾದ ಕನ್ಯೆಯರನ್ನೂ, ರಾಜಪುತ್ರರನ್ನೂ ಮತ್ತು ರಾಜಪುತ್ರಿಯರನ್ನೂ ಬ್ರಾಹ್ಮಣರಿಗೆ ದಾನ ಮಾಡಿದನು.

ಸರ್ವಾ ರಥಗತಾಃ ಕನ್ಯಾ ರಥಾಃ ಸರ್ವೇ ಚತುರ್ಯುಜಃ ।
ರಥೇ ರಥೇ ಶತಂ ನಾಗಾಃ ಪದ್ಮಿನೋ ಹೇಮಮಾಲಿನಃ ॥ ೪ ॥

ಆ ಎಲ್ಲ ಕನ್ಯೆಯರೂ ನಾಲ್ಕು ಅಶ್ವಗಳನ್ನು ಹೂಡಿದ ರಥಗಳಲ್ಲಿ ಕುಳಿತು ಪ್ರತಿ ರಥವೂ ಹೇಮಮಾಲೆಗಳನ್ನು, ಪದ್ಮಮಾಲೆಗಳನ್ನು ಧರಿಸಿದ ನೂರು ನೂರು ಗಜಗಳಿಂದ ಹಿಂಬಾಲಿಸಲ್ಪಟ್ಟರು.

ಸಹಸ್ರಮಶ್ವಾಶ್ವೈಕೈಕಂ ಗಜಾನಾಂ ಪೃಷ್ಠತೋಽನ್ವಯುಃ ।
ಅಶ್ವೇಽಶ್ವೇ ಗೋಸಹಸ್ರಂ ತು ತಥೈವ ಚ ಅಜಾವಿಕಮ್ ॥ ೫ ॥

ಪ್ರತಿಯೊಂದು ಗಜದ ಹಿಂದೆಯೂ ಅವುಗಳನ್ನು ಸಹಸ್ರ ಅಶ್ವಗಳು ಹಿಂಬಾಲಿಸಿದವು. ಪ್ರತಿಯೊಂದು ಅಶ್ವದ ಹಿಂದೆಯೂ ಸಹಸ್ರ ಗೋವುಗಳು, ಆಡುಗಳು ಮತ್ತು ಕುರಿಗಳು ಇದ್ದವು.

ತೇನ ಕ್ರಾಂತಾ ಜನೌಘೇನ ದಕ್ಷಿಣಾಭಿಶ್ಚ ಭೂಯಸೀ ।
ಉಪಹ್ವರೇಽತಿವ್ಯಥಿತಾ ತಸ್ಯಾಂಕೇ ನಿಪಪಾದ ಹ ॥ ೬ ॥

ತತೋ ಭಾಗೀರಥೀ ಗಂಗಾ ಹ್ಯೂರ್ಧ್ವಗಾ ಹ್ಯಭವತ್ ಪುರಾ ।
ದುಹಿತೃತ್ವಂ ಗತಾ ರಾಜ್ಞಃ ಪುತ್ರೀವಚ್ಚೋಪಪಾದಿತಾ ॥ ೭ ॥

ಅವನು ಕೊಟ್ಟ ಬಹಳ ದಕ್ಷಿಣೆಗಳಿಂದಲೂ ಮತ್ತು ಆ ಜನ ಸಮುದಾಯದಿಂದಲೂ ಭೂಮಿಯೆಲ್ಲವೂ ತುಂಬ ಹೋಯಿತು. ಪರ್ವತಗಳನ್ನು ಭೇದಿಸಿ, ದಣದು ಕೆಳಗೆ ಬಂದ ಗಂಗೆಯು ಪ್ರವಾಹರೂಪದಿಂದ ಅವನ ಮುಂದೆ ಮುಂದೆ ಹೋಗುತ್ತಾ ಮೊದಲು ಅವನ ತೊಡೆಯ ಮೇಲೆ ಕುಳಿತಳು. ರಾಜನು ಅವಳನ್ನು ತನ್ನ ಮಗಳಾಗಿ ಕಲ್ಪಿಸಿಕೊಂಡನು.

ತತ್ರ ಗಾಥಾಂ ಜಗುಃ ಪ್ರೀತಾ ಗಂಧರ್ವಾಃ ಸೂರ್ಯವರ್ಚಸಃ ।
ಪಿತೃದೇವಮನುಷ್ಯಾಣಾಂ ಶೃಣ್ವತಾಂ ವಲ್ಗುವಾದಿನಃ ॥ ೮ ॥

ಭಗೀರಥಂ ಯಾಜಮಾನಮ್ಐಕ್ಷ್ವಾಕಂ ಭೂರಿದಕ್ಷಿಣಮ್ ।
ಗಂಗಾ ಸಮುದ್ರಗಾ ದೇವೀ ವವ್ರೇ ಪಿತರಮೀಶ್ವರಮ್ ॥ ೯ ॥

ಸೂರ್ಯಕಾಂತಿಯುಳ್ಳ ಗಂಧರ್ವರು ಸಂತೋಷಗೊಂಡು ಪಿತೃ-ದೇವ-ಮನುಷ್ಯರು ಕೇಳುವಂತೆ ಮಧುರವಾದ ಕಂಠದಿಂದ, ಬಹಳ ದಕ್ಷಿಣೆಯಿಂದ ಕೂಡಿದ ಯಾಗವನ್ನು ಮಾಡುವ ಇಕ್ಷ್ವಾಕು ವಂಶದ, ಪ್ರಭುವಾದ ಭಗೀರಥರಾಜನನ್ನು ಸಮುದ್ರಗಾಮಿನಿಯಾದ ಗಂಗಾದೇವಿಯು ತಂದೆಯಾಗಿ ಸ್ವೀಕರಿಸಿದಳು ಎಂಬ ಗೀತೆಯನ್ನು ಹಾಡಿದರು.

ಸೇಂದ್ರೈಃ ಸವರುಣೈರ್ದೇವೈರ್ಯಸ್ಯ ಯಜ್ಞಾಃ ಸ್ವಲಂಕೃತಾಃ ।
ಸಮ್ಯಕ್ ಪರಿಗೃಹೀತಾಶ್ಚ ಶಾಂತವಿಘ್ನಾ ನಿರಾಮಯಾಃ ॥ ೧೦ ॥

ಅವನ ಯಜ್ಞಗಳು ವರುಣನೇ ಮೊದಲಾದ ದೇವತೆಗಳಿಂದ ಚೆನ್ನಾಗಿ ಸ್ವೀಕರಿಸಲ್ಪಟ್ಟು ಯಾವ ತೊಂದರೆಗಳಾಗಲೀ, ಲೋಪದೋಷಗಳಾಗಲೀ ಇಲ್ಲದಂತೆ ನಡೆದವು.

ಯೋ ಯದ್ಯದಿಚ್ಛತೇ ವಿಪ್ರೋ ಯಚ್ಚ ಯಸ್ಯಾತ್ಮನಃ ಪ್ರಿಯಮ್ ।
ತತ್ತದ್ ಭಗೀರಥಃ ಪ್ರಾದಾತ್ ತತ್ರ ತತ್ರಾನಘೋ ವಶೀ ॥ ೧೧ ॥

ಯಾವ ಯಾವ ವಿಪ್ರನು ಏನನ್ನು ಬಯಸುತ್ತಾನೆಯೋ ಅಥವಾ ಅವನಿಗೆ ಪ್ರಿಯವಾದುದು ಯಾವುದಿದೆಯೋ ಅವೆಲ್ಲವನ್ನೂ ಅನಘನೂ, ಪ್ರಭುವೂ ಆದ ಭಗೀರಥನು ಅವರಿಗೆ ಕೊಟ್ಟನು.

ನಾದೇಯಂ ಬ್ರಾಹ್ಮಣೇಷ್ವಾಸೀದಸ್ಯ ಕಿಂಚಿತ್ ಪ್ರಿಯಂ ಧನಮ್ ।
ಯಶ್ಚ ವಿಪ್ರಪ್ರಸಾದೇನ ಬ್ರಹ್ಮಲೋಕಂ ಗತೋ ನೃಪಃ ॥ ೧೨ ॥

ಬ್ರಾಹ್ಮಣರಿಗೆ ಕೊಡಲಾಗದ ಪ್ರಿಯವಾದ ಧನವು ಅವನ ಬಳಿ ಯಾವುದೂ ಇರಲಿಲ್ಲ. ಆ ರಾಜನು ಬ್ರಾಹ್ಮಣರ ಅನುಗ್ರಹದಿಂದ ಬ್ರಹ್ಮಲೋಕಕ್ಕೆ ಹೋದನು.

ಯೇನ ಯಾತಾಸ್ತ್ವಭಿಮುಖಾ ದಿಶಮದ್ಯಾಪಿ ಪಾದಪಾಃ ।
ಆನತಾಸ್ತಸ್ಥುರಿಚ್ಛಂತಃ ತಮನ್ವಾಗಂತುಮೀಶ್ವರಮ್ ॥ ೧೩ ॥

ಪ್ರಭುವಾದ ಅವನು ಹೋದ ದಿಕ್ಕಿನಲ್ಲಿ ತಾವೂ ಹೋಗಲು ಬಯಸಿ ಮರಗಳು ಅವನ ಮಾರ್ಗದ ಕಡೆಗೆ ಬಾಗಿರುವುದನ್ನು ಈಗಲೂ ನೋಡಬಹುದು.

ಸ ಚೇನ್ನಮಾರ ಸೃಂಜಯ ಚತುರ್ಭದ್ರತರಸ್ತ್ವಯಾ
ಪುತ್ರಾತ್ ಪುಣ್ಯತರಸ್ತುಭ್ಯಂ ಮಾ ಪುತ್ರಮನುತಪ್ಯಥಾಃ ।
ಅಯಜ್ವಾನಮದಕ್ಷಿಣ್ಯಮಧಿಚ್ಛೈತ್ಯೇತ್ಯುದಾಹರತ್ ॥ ೧೪ ॥

ಎಲೈ ಸೃಂಜಯನೇ, ನಿನಗಿಂತ ನಾಲ್ಕುಪಟ್ಟು ಶ್ರೇಷ್ಠನಾದ ಅವನೂ ಮತ್ತು ನಿನ್ನ ಪುತ್ರನಿಗಿಂತಲೂ ಶ್ರೇಷ್ಠನಾದ ಅವನ ಪುತ್ರನೂ ಮರಣಹೊಂದಿದ ಮೇಲೆ ಎಲೈ ಜ್ಞಾನಿಶ್ರೇಷ್ಠನೇ, ಯಾಗವನ್ನು ಮಾಡದಿರುವ, ದಕ್ಷಿಣೆಯನ್ನು ಕೊಡದಿರುವ ನಿನ್ನ ಪುತ್ರನ ವಿಷಯದಲ್ಲಿ ಸಂತಾಪವನ್ನು ಪಡಬೇಡ ಎಂದು ಹೇಳಿದರು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಸಪ್ತಪಂಚಾಶೋಽಧ್ಯಾಯಃ ॥

॥ ಅಭಿಮನ್ಯುವಧಪರ್ವಣಿ ಷಡ್ವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಐವತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಐವತ್ತೆಂಟನೆಯ ಅಧ್ಯಾಯ

ಷೋಡಶರಾಜೋಪಾಖ್ಯಾನದಲ್ಲಿ ದಿಲೀಪನ ಚರಿತೆ

ನಾರದಃ

ದಿಲೀಪಂ ಚಾಪಿ ರಾಜೇಂದ್ರ ಮೃತಂ ಸೃಂಜಯ ಶುಶ್ರುಮ ।
ಯಸ್ಯ ಯಜ್ಞಶತೇಷ್ವಾಸನ್ ಪ್ರಯುತಾಯುತಶೋ ದ್ವಿಜಾಃ ॥ ೧ ॥

ವೇದವೇದಾಂಗತತ್ತ್ವಜ್ಞಾ ಯಜ್ವಾನಃ ಪುತ್ರಪೌತ್ರಿಣಃ ।
ಸ್ವಚ್ಛಂದಾಃ ಪುಣ್ಯಗಂಧಾಶ್ಚ ಸುಭಕ್ಷಾ ಹೇಮಮಾಲಿನಃ ।
ಯಸ್ಯ ಕರ್ಮಾಣಿ ಭೂರೀಣಿ ಕಥಯಂತಿ ಮನೀಷಿಣಃ ॥ ೨ ॥

ನಾರದರು– ಎಲೈ ರಾಜೇಂದ್ರನೇ, ಸೃಂಜಯನೇ, ದಿಲೀಪನೂ ಸಹ ಮೃತನಾದನೆಂದು ನಾವು ಕೇಳಿದ್ದೇವೆ. ಅವನ ನೂರು ಯಜ್ಞಗಳಲ್ಲಿ ಪುತ್ರ-ಪೌತ್ರರಿಂದ ಕೂಡಿದವರೂ, ಯಜ್ಞಶೀಲರೂ, ವೇದವೇದಾಂಗ ಪಾರಂಗತರೂ ಆದ ದ್ವಿಜರು ಲಕ್ಷ-ಲಕ್ಷ ಸಂಖ್ಯೆಯಲ್ಲಿ ಇರುತ್ತಿದ್ದರು. ಅವರು ತಮಗೆ ಇಷ್ಟವಾದಂತೆ ಒಳ್ಳೆಯ ಗಂಧಗಳನ್ನೂ, ಒಳ್ಳೆಯ ಭಕ್ಷಗಳನ್ನೂ ಸೇವಿಸಿ ಹೇಮಮಾಲೆಗಳನ್ನು ಧರಿಸಿರುತ್ತಿದ್ದರು. ಇಂಥ ದಿಲೀಪನ ಶ್ರೇಷ್ಠವಾದ ಕರ್ಮಗಳನ್ನು ಜ್ಞಾನಿಗಳು ಕೊಂಡಾಡುತ್ತಾರೆ.

ಯ ಇಮಾಂ ಪೃಥಿವೀಂ ಪೂರ್ಣಾಂ ವಸುಧಾಂ ವಸುಧಾಧಿಪಃ ।
ಈಜಾನೋ ವಿತತೇ ಯಜ್ಞೇ ಬ್ರಾಹ್ಮಣೇಭ್ಯೋಽಭ್ಯುಪಾಹರತ್ ॥ ೩ ॥

ಭೂಪತಿಯಾದ ಅವನು ವಿಸ್ತಾರವಾದ ಯಜ್ಞದಲ್ಲಿ ದೇವತೆಗಳನ್ನು ಸಂತೋಷಪಡಿಸುತ್ತಾ ಈ ಪೂರ್ಣವಾದ ಭೂಮಿಯನ್ನು ಬ್ರಾಹ್ಮಣರಿಗೆ ದಾನವಾಗಿ ಕೊಟ್ಟನು.

ಯಸ್ಯ ವೈ ಯಜಮಾನಸ್ಯ ಯಜ್ಞೇ ಯಜ್ಞೇ ಪುರೋಹಿತಃ ।
ಸಹಸ್ರಂ ವಾರಣಾನ್ ಹೈಮಾನ್ ದಕ್ಷಿಣಾ ಅತ್ಯಕಾಲಯತ್ ॥ ೪ ॥

ಅವನು ಯಜ್ಞವನ್ನು ಮಾಡುವಾಗ ಅವನ ಪುರೋಹಿತರು ಪ್ರತಿಯಜ್ಞದಲ್ಲಿಯೂ ಸುವರ್ಣಮಯವಾದ ಸಹಸ್ರ ಗಜಗಳನ್ನು ದಕ್ಷಿಣೆಯಾಗಿ ಕೊಟ್ಟರು.

ದಿಲೀಪಸ್ಯ ಚ ಯಜ್ಞೇಷು ಕೃತಃ ಪಂಥಾ ಹಿರಣ್ಮಯಃ ।
ಸೌವರ್ಣಂ ಚಾಭವತ್ ಸರ್ವಂ ಸದಾ ಪರಮಭಾಸ್ವರಮ್ ॥ ೫ ॥

ದಿಲೀಪನ ಯಜ್ಞಗಳಲ್ಲಿ ಯಜ್ಞಕ್ಕೆ ಹೋಗುವ ಮಾರ್ಗವೂ ಸಹ ಸುವರ್ಣಮಯವಾಗಿದ್ದಿತು. ಎಲ್ಲವೂ ಸದಾ ಪ್ರಕಾಶಮಾನವಾದ ಸುವರ್ಣ-ಮಯವಾಗಿದ್ದಿತು.

ರಸಾನಾಂ ಚಾಭವನ್ ಕುಲ್ಯಾಃ ಕಂತದಧ್ನಾಃ ಸಮಂತತಃ ।
ಸಹಸ್ರಾಯಾಮಕಾ ಯೂಪಾಃ ತಸ್ಯ ಚಾಸನ್ ಹಿರಣ್ಮಯಾಃ ॥ ೬ ॥

ರಸಗಳ ಸರೋವರಗಳು ಎಲ್ಲ ಕಡೆಗಳಲ್ಲಿಯೂ ಕಂಠದಷ್ಟು ಆಳವಾಗಿದ್ದವು. ಅವನ ಯಜ್ಞದ ಯೂಪಗಳು ಸಹಸ್ರ ಯಾವುದಷ್ಟು ವ್ಯಾಪ್ತಿಯನ್ನು ಹೊಂದಿ ಸುವರ್ಣಮಯವಾಗಿದ್ದವು.

ತತ್ ಕರ್ಮ ಬಹು ಕುರ್ವಾಣಾಃ ಸೇಂದ್ರಾ ದೇವಾಃ ಸಮುಚ್ಛ್ರಯನ್ ।
ಚಷಾಲಪ್ರಚಷಾಲೌ ಚ ಯಸ್ಯ ಯೂಪೇ ಹಿರಣ್ಮಯೌ ॥ ೭ ॥

ಅವನ ಕರ್ಮಗಳನ್ನು ಬಹುಮಾನಿಸುತ್ತಾ ಇಂದ್ರಾದಿ ದೇವತೆಗಳು ಯೂಪಕ್ಕೆ ಹಾಕುವ ಸುವರ್ಣಮಯವಾದ ದೊಡ್ಡ ಮತ್ತು ಚಿಕ್ಕ ಬಳೆಗಳನ್ನು ಮೇಲಕ್ಕೆತ್ತಿದರು.

ನೃತ್ಯಂತ್ಯಪ್ಸರಸೋ ಯತ್ರ ಷಟ್ಸಹಸ್ರಾಣಿ ಸಪ್ತ ಚ ॥ ೮ ॥

ಅವಾದಯಚ್ಚ ತತ್ರಾಸ್ಯ ಪ್ರೀತ್ಯಾ ವಿಶ್ವಾವಸುಃ ಸ್ವಯಮ್ ।
ಸರ್ವಭೂತಾನ್ಯಮೋದಂತ ಮಮ ವಾದಯತೀತಿ ತಮ್ ॥ ೯ ॥

ಅವನ ಯಜ್ಞಗಳಲ್ಲಿ ಹದಿಮೂರು ಸಾವಿರ ಅಪ್ಸರೆಯರು ನರ್ತನವನ್ನು ಮಾಡಿದರು. ವಿಶ್ವಾವಸು ಗಂಧರ್ವನು ಪ್ರೀತಿಯಿಂದ ಸ್ವತಃ ಬಂದು ವಾದ್ಯಗಳನ್ನು ನುಡಿಸಿದನು. ಆ ಗೀತೆಗಳನ್ನು ಕೇಳಿದ ಎಲ್ಲ ಪ್ರಾಣಿಗಳೂ ನಮಗೆ ಪ್ರಿಯವನ್ನು ನುಡಿಸುತ್ತಿದ್ದಾನೆ ಎಂದು ತಿಳಿದವು.

ಇತ್ಥಂ ದಿಲೀಪಸ್ಯ ನೃಪಾ ಯಜ್ಞಾನ್ ನಾನ್ಯೇಽನುಚಕ್ರಿರೇ ।
ಯದ್ದೋಷಾ ಹೇಮಸಂಛನ್ನಾ ಮರ್ತ್ಯಾ ಪಥಿಷು ಶೇರತೇ ।
ತದೇವ ಚಾದ್ಭುತಂ ಮನ್ಯೇ ಅನ್ಯೈರಸದೃಶಂ ನೃಪೈಃ ॥ ೧೦ ॥

ಹೀಗೆ ದಿಲೀಪನು ಮಾಡಿದ ಯಜ್ಞಗಳನ್ನು ಬೇರೆ ಯಾವ ರಾಜರೂ ಅನುಕರಿಸಲು ಸಾಧ್ಯವಿಲ್ಲ. ಬೇರೆ ರಾಜರು ಮಾಡಲು ಸಾಧ್ಯವಲ್ಲದ ವಿಷಯವೆಂದರೆ ರಾತ್ರಿಯ ಕಾಲದಲ್ಲಿ ಸುವರ್ಣಾಲಂಕೃತರಾದ ಮನುಷ್ಯರು ಬೀದಿಗಳಲ್ಲಿ ಮಲಗುತ್ತಿದ್ದರು. ಇದೇ ಅದ್ಭುತವೆಂದು ತಿಳಿಯುತ್ತೇನೆ.

ಯಸ್ಯಾಪ್ಸು ಯುದ್ಧ್ಯಮಾನಸ್ಯ ಚಕ್ರೇ ನ ಪರಿಪೇತತುಃ ॥ ೧೧ ॥

ಅವನು ಯುದ್ಧ ಮಾಡುವಾಗ, ನೀರಿನಲ್ಲಿ ಹೋಗುವಾಗ, ಅವನ ರಥದ ಮುಂದಿನ ಚಕ್ರಗಳು ನೀರಿನಲ್ಲಿ ಮುಳುಗುತ್ತಿರಲಿಲ್ಲ (ಇದು ಅದ್ಭುತವಾದುದು).

ರಾಜಾನಂ ಚೋಗ್ರಧನ್ವಾನಂ ದಿಲೀಪಂ ಸತ್ಯವಾದಿನಮ್ ।
ಯೇಽಪಶ್ಯನ್ ಭೂರಿದಕ್ಷಿಣ್ಯಂ ತೇಽಪಿ ಸ್ವರ್ಗಮಿತೋ ಗತಾಃ ॥ ೧೨ ॥

ಯಾರು ಉಗ್ರವಾದ ಧನುಸ್ಸುಳ್ಳ, ಸತ್ಯವಾದಿಯಾದ, ಯಜ್ಞಗಳಲ್ಲಿ ಬಹಳ ದಕ್ಷಿಣೆಯನ್ನು ಕೊಡುವ ದಿಲೀಪರಾಜನನ್ನು ನೋಡಿದರೋ ಅವರೂ ಸಹ ಇಲ್ಲಿಂದ ಸ್ವರ್ಗಕ್ಕೆ ಹೋದರು.

ಇಮೇ ಶಬ್ದಾ ನ ಜೀರ್ಯಂತೇ ದಿಲೀಪಸ್ಯ ನಿವೇಶನೇ ।
ಸ್ವಾಧ್ಯಾಯಶಬ್ದೋ ಜ್ಯಾಶಬ್ದಃ ಪಿಬತಾಶ್ನೀತ ಖಾದತ ।

ದಿಲೀಪನ ಅರಮನೆಯಲ್ಲಿ ವೇದಾಧ್ಯಯನ ಶಬ್ದ, ಜ್ಯಾ ಶಬ್ದ ಮತ್ತು ತಿನ್ನಿರಿ, ಕುಡಿಯಿರಿ ಎಂಬ ಶಬ್ದಗಳು ಎಂದೂ ನಾಶವನ್ನು ಹೊಂದುತ್ತಿರಲಿಲ್ಲ.

ಸ ಚೇನ್ಮಮಾರ ಸೃಂಜಯ ಚತುರ್ಭದ್ರತರಸ್ತ್ವಯಾ ॥ ೧೩ ॥

ಪುತ್ರಾತ್ ಪುಣ್ಯತರಸ್ತುಭ್ಯಂ ಮಾ ಪುತ್ರಮನುತಪ್ಯಥಾಃ ।
ಅಯಜ್ವಾನಮದಕ್ಷಿಣ್ಯಮಧಿಚ್ಛೈತ್ಯೇತ್ಯುದಾಹರತ್ ॥ ೧೪ ॥

ಎಲೈ ಸೃಂಜಯನೇ, ನಿನಗಿಂತ ನಾಲ್ಕು ಪಟ್ಟು ಶ್ರೇಷ್ಠನಾದ ಅವನೂ, ನಿನ್ನ ಪುತ್ರನಿಗಿಂತಲೂ ಶ್ರೇಷ್ಠನಾದ ಅವನ ಪುತ್ರನೂ ಮೃತರಾದನೆಂದ ಮೇಲೆ ಎಲೈ ಜ್ಞಾನಿಶ್ರೇಷ್ಠನೇ, ಯಾಗವನ್ನು ಮಾಡದಿರುವ, ದಕ್ಷಿಣೆಯನ್ನು ಕೊಡದಿರುವ ನಿನ್ನ ಪುತ್ರನ ವಿಷಯದಲ್ಲಿ ಸಂತಾಪ ಪಡಬೇಡ ಎಂದು ಹೇಳಿದರು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಅಷ್ಟಪಂಚಾಶೋಽಧ್ಯಾಯಃ ॥

॥ ಅಭಿಮನ್ಯುವಧಪರ್ವಣಿ ಸಪ್ತವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಐವತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮಹಾಭಾರತತಾತ್ಪರ್ಯನಿರ್ಣಯ - ೨೬ನೇ ಅಧ್ಯಾಯ

ಸ್ವಯಮೇವಾಖಿಲಜಗದ್ರಕ್ಷಾದ್ಯಮಿತಶಕ್ತಿಮಾನ್ ।
ಅಪ್ಯಚ್ಯುತೋ ಗುರುದ್ವಾರಾ ಪ್ರಸಾದಕೃದಹಂ ತ್ವಿತಿ ॥

ಜ್ಞಾಪಯನ್ ಫಲ್ಗುನಸ್ಯಾಸ್ತ್ರಗುರುಂ ಗಿರಿಶಮಂಜಸಾ ।
ಪ್ರಾಪಯಿತ್ವೈನಮೇವೈತ ತ್ಪ್ರಸಾದಾದಸ್ತ್ರಮುಲ್ಬಣಮ್ ।
ಚಕ್ರೇ ತದರ್ಥಮೇವಾಸ್ಯ ರಕ್ಷಾಂ ಚಕ್ರೇ ತದಾತ್ಮಿಕಾಮ್ ॥

ಶ್ರೀಕೃಷ್ಣ ತಾನೆ ಸಕಲ ಲೋಕ ರಕ್ಷಣೆ ಮುಂತಾದ ವಿಷಯಗಳಲ್ಲಿ ಅಮಿತಶಕ್ತಿ ಉಳ್ಳವನಾದರೂ ತಾನು ಗುರುವಿನ ಮೂಲಕವೇ ಅನುಗ್ರಹ ಮಾಡುವವನೆಂದು ತೋರುವುದಕ್ಕಾಗಿ ಅರ್ಜುನನನ್ನು ಅವನ ಅಸ್ತ್ರಗುರುವಾದ ಶಿವನ ಬಳಿಗೇ ಒಯ್ದು ಶಿವನ ಅನುಗ್ರಹದಿಂದ ಅವನ ಪಾಶುಪತಾಸ್ತ್ರ ಬಲಿಷ್ಠವಾಗುವಂತೆ ಮಾಡಿದ. ಅವನಿಗೆ ಶಿವನ ರಕ್ಷೆಯೂ ಸಿಗುವಂತೆ ಮಾಡಿದ.

ಸಾಂತ್ವಯಿತ್ವಾ ಸುಭದ್ರಾಂ ಚ ಗತ್ವೋಪಪ್ಲಾವ್ಯಮಚ್ಯುತಃ ।
ಯೋಜಯಿತ್ವಾ ರಥಂ ಪ್ರಾತಃ ಸಾರ್ಜುನೋ ಯುದ್ಧಮಭ್ಯಯಾತ್ ॥

ಶ್ರೀಕೃಷ್ಣ ಬೆಳಿಗ್ಗೆ ಉಪಪ್ಲಾವ್ಯಕ್ಕೆ ಹೋಗಿ ಸುಭದ್ರೆಯನ್ನು ಸಂತೈಸಿ ರಥವನ್ನು ಕಟ್ಟಿ ಯುದ್ಧಮಾಡಲು ಅರ್ಜುನನೊಂದಿಗೆ ತೆರಳಿದ.

ಶ್ರುತ್ವಾ ಪ್ರತಿಜ್ಞಾಂ ಪುರುಹೂತಸೂನೋ
ರ್ದುರ್ಯೋಧನೇನಾರ್ಥಿತಃ ಸಿಂಧುರಾಜಮ್ ।
ತ್ರಾತಾಸ್ಮ್ಯಹಂ ಸರ್ವಥೇತಿ ಪ್ರತಿಜ್ಞಾಂ
ಕೃತ್ವಾ ದ್ರೋಣೋ ವ್ಯೂಹಮಭೇದ್ಯಮಾತನೋತ್ ॥

ಅರ್ಜುನನ ಪ್ರತಿಜ್ಞೆಯನ್ನು ಕೇಳಿ ದುರ್ಯೋಧನನಿಂದ ಪ್ರಾರ್ಥಿತನಾದ ದ್ರೋಣ ನಾನು ಎಲ್ಲ ರೀತಿಯಿಂದಲೂ ಜಯದ್ರಥನನ್ನು ರಕ್ಷಿಸುವೆನೆಂದು ಪ್ರತಿಜ್ಞೆ ಮಾಡಿ ಅಭೇದ್ಯವಾದ ವ್ಯೂಹವನ್ನು ರಚಿಸಿದ.

★ ★ ★ ★ ★

ಐವತ್ತೊಂಬತ್ತನೆಯ ಅಧ್ಯಾಯ

ಚತುರ್ದಶ ರಾಜೋಪಾಖ್ಯಾನದಲ್ಲಿ ಮಾಂಧಾತೃ ಚರಿತೆ

ನಾರದಃ

ಮಾಂಧಾತಾ ಚೇದ್ ಯೌವನಾಶ್ವಃ ತ್ರೈಲೋಕ್ಯವಿಜಯೀ ಮೃತಃ ।
ದೇವಾಸುರಮನುಷ್ಯಾಣಾಂ ತ್ರಿಲೋಕ್ಯಸ್ಯ ಜಯೀ ನೃಪಃ ।
ಯಂ ದೇವಾವಶ್ವಿನೌ ಗರ್ಭೇ ಪಿತುಃ ಪಾರ್ಶ್ವಾನ್ನಿರೂಹತುಃ ॥ ೧ ॥

ನಾರದರು– ಯುವನಾಶ್ವನ ಪುತ್ರನಾದ, ತ್ರಿಲೋಕ ಜಯಶಾಲಿಯಾದ, ದೇವಾಸುರ-ಮನುಷ್ಯರನ್ನು ಜಯಿಸಿದ, ಅಶ್ವಿನೀದೇವತೆಗಳಿಂದ ತಂದೆಯ ಗರ್ಭದಿಂದ ಹೊರಗೆ ತರಲ್ಪಟ್ಟ ಮಾಂಧಾತೃವೂ ಸಹ ಮೃತನಾದನು.

ತಾಯಿಯ ಶರೀರವನ್ನು ಪ್ರವೇಶಿಸದೆ ತಂದೆಯ ಶರೀರದಿಂದಲೇ ಹೊರಬಂದವನು ಎಂದು ಅಭಿಪ್ರಾಯ.

ಮೃಗಯಾಂ ವಿಚರನ್ ರಾಜಾ ತೃಷಿತಃ ಶ್ರಾಂತವಾಹನಃ ।
ಧೂಮಂ ದೃಷ್ಟ್ವಾಽಗಮತ್ ಸತ್ರಂ ಘೃತದಾಜ್ಯಮವಾಪ ಸಃ ॥ ೨ ॥

ಬೇಟೆಗೆ ಹೊರಟು ತಿರುಗಾಡಿದ ಯುವನಾಶ್ವರಾಜನು ತನ್ನ ವಾಹನವು ದಣಿದು, ತಾನೂ ಬಾಯಾರಿಕೆಯಿಂದ ಬಳಲಿ, ದೂರದಲ್ಲಿ ಧೂಮವನ್ನು ನೋಡಿ ಸಮೀಪಕ್ಕೆ ಹೋಗಿ ಅಲ್ಲಿ ನಡೆಯುತ್ತಿದ್ದ ಸತ್ರಯಾಗದಲ್ಲಿ ಘೃತಮಿಶ್ರಿತವಾದ ಹೋಮಾನ್ನವನ್ನು ಸ್ವೀಕರಿಸಿದನು.

ತಂ ದೃಷ್ಟ್ವಾ ಯುವನಾಶ್ವಸ್ಯ ಜಠರೇ ರವಿಸನ್ನಿಭಮ್ ।
ಗರ್ಭಂ ನಿರೂಹತುರ್ದೇವಾವಶ್ವಿನೌ ಭಿಷಜಾಂ ವರೌ ॥ ೩ ॥

ವೈದ್ಯಶ್ರೇಷ್ಠರೂ, ದೇವತೆಗಳೂ ಆದ ಅಶ್ವಿನಿಗಳು ಯುವನಾಶ್ವನ ಜಠರದಲ್ಲಿ ಸೂರ್ಯನ ಕಾಂತಿಯಿಂದ ಬೆಳಗುತ್ತಿದ್ದ ಗರ್ಭವನ್ನು ನೋಡಿ ತಮ್ಮ ಕೌಶಲದಿಂದ ಆ ಶಿಶುವನ್ನು ಹೊರಗೆ ತೆಗೆದರು.

ತಂ ದೃಷ್ಟ್ವಾ ಪಿತುರುತ್ಸಂಗೇ ಶಯಾನಂ ದೇವವರ್ಚಸಮ್ ।
ಅನ್ಯೋನ್ಯಮಬ್ರುವನ್ ದೇವಾಃ ಕಮಯಂ ಧಾಸ್ಯತೀತಿ ವೈ ॥ ೪ ॥

ಮಮೈವಾಯಂ ಧಯತ್ವಂಗಮಿತಿ ಹ ಸ್ಮಾಹ ವಾಸವಃ ।
ದೇವೇಂದ್ರಸ್ಯ ತತೋಽಂಗುಷ್ಠಾತ್ ಪ್ರಾದುರಾಸೀತ್ ಪಯೋಽಮೃತಮ್ ॥

ತಂದೆಯ ಮೇಲೆ ಮಲಗಿದ್ದ, ದೇವತಾ ಕಾಂತಿಯನ್ನು ಹೊಂದಿದ ಆ ಶಿಶುವನ್ನು ನೋಡಿ ದೇವತೆಗಳು ಇವನು ಯಾರ ಸ್ತನವನ್ನು ಪಾನ ಮಾಡುವನು ಎಂದು ಪರಸ್ಪರವಾಗಿ ಮಾತನಾಡಿಕೊಂಡರು. ಇಂದ್ರನು ನನ್ನ ಅವಯವವನ್ನೇ ಇವನು ಪಾನ ಮಾಡಲಿ ಎಂದು ಹೇಳಿದನು. ಆಗ ದೇವೇಂದ್ರನ ಅಂಗುಷ್ಠದಿಂದ ಅಮೃತಪ್ರಾಯವಾದ ಕ್ಷೀರವು ಪ್ರಾದುರ್ಭೂತವಾಯಿತು.

ತದಭೂತ್ ತೇನ ನಾಮ್ನಾಽಸ್ಯ ಮಾಂಧಾತೇತಿ ಪ್ರಚಕ್ರಿರೇ ॥ ೬ ॥

ಮಾಂ ಧಾಸ್ಯತೀತಿ ಕಾರುಣ್ಯಾದ್ ಯದಿಂದ್ರೋಽಪ್ಯನ್ವಕಂಪತ ।
ತಸ್ಮಾನ್ಮಾಂಧಾತರಿತ್ಯೇವಂ ನಾಮ ತಸ್ಯಾಭವತ್ ಕೃತಮ್ ॥ ೭ ॥

ಹಾಗೆ ಪಾನವನ್ನು ಮಾಡಿದ ಕಾರಣದಿಂದ ಅವನಿಗೆ ಮಾಂಧಾತೃ ಎಂದೇ ನಾಮಕರಣ ಮಾಡಿದರು. ಇಂದ್ರನು ತನ್ನ ಮನಸ್ಸು ಕರಗಿ ಅವನಿಗೆ ಉಪಕಾರವನ್ನು ಮಾಡಲು ನನ್ನನ್ನೇ ಪಾನ ಮಾಡುವನು ಎಂದು ಹೇಳಿದ ಕಾರಣದಿಂದ ಅವನಿಗೆ ಮಾಂಧಾತೃ ಎಂದೇ ನಾಮಕರಣವಾಯಿತು.

ತತಃ ಸ ಧಾರಾಂ ಪಯಸೋ ಘೃತಸ್ಯ ಚ ಮಹಾತ್ಮನಃ ।
ತಸ್ಯಾಸ್ಯೇ ಯೌವನಾಶ್ವಸ್ಯ ಪಾಣೇರಿಂದ್ರಸ್ಯ ಚಾಸ್ರವತ್ ॥ ೮ ॥

ಅನಂತರ ಇಂದ್ರನ ಪಾಣಿಯು ಮಹಾತ್ಮನಾದ ಯುವನಾಶ್ವನ ಪುತ್ರನಾದ ಮಾಂಧಾತೃವಿನ ವದನದಲ್ಲಿ ಘೃತ ಮತ್ತು ಕ್ಷೀರಗಳ ಧಾರೆಯನ್ನು ಸುರಿಸಿತು.

ಸ ಪಿಬನ್ ಪಾಣಿಮಿಂದ್ರಸ್ಯ ಸಮಮಹ್ನಾ ಚ ವರ್ಧತೇ ।
ಸೋಽಭವದ್ ದ್ವಾದಶಸಮೋ ದ್ವಾದಶಾಹೇನ ವೀರ್ಯವಾನ್ ॥ ೯ ॥

ಅವನು ಇಂದ್ರನ ಪಾಣಿಯನ್ನು ಪಾನ ಮಾಡುತ್ತಾ, ಒಂದು ದಿನದಲ್ಲಿ ಒಂದು ವರ್ಷದ ಬೆಳವಣಿಗೆಯನ್ನು ಪಡೆದನು. ಪರಾಕ್ರಮಶಾಲಿಯಾದ ಅವನು ಹನ್ನೆರಡು ದಿವಸಗಳಲ್ಲಿ ಹನ್ನೆರಡು ವರ್ಷಗಳ ಬೆಳವಣಿಗೆಯನ್ನು ಪಡೆದನು.

ಇಮಾಂ ಚ ಪೃಥಿವೀಂ ಕೃತ್ಸ್ನಾಮೇಕಾಹ್ನಾऽಪ್ಯಜಯಚ್ಚ ಸಃ ।
ಧರ್ಮಾತ್ಮಾ ಧೃತಿಮಾನ್ ವೀರಃ ಸತ್ಯಸಂಧೋ ಜಿತೇಂದ್ರಿಯಃ ॥೧೦॥

ಧರ್ಮಾತ್ಮನೂ, ಧೈರ್ಯಶಾಲಿಯೂ, ವೀರನೂ, ಸತ್ಯಸಂಧನೂ, ಜಿತೇಂದ್ರಿಯನೂ ಆದ ಅವನು ಈ ಸಮಗ್ರವಾದ ಭೂಮಿಯನ್ನು ಒಂದು ದಿವಸದಲ್ಲಿ ಜಯಿಸಿದನು.

ಜನಮೇಜಯಂ ಸುಧನ್ವಾನಂ ಗಯಂ ಪೂರುಂ ಬೃಹದ್ರಥಮ್ ।
ಅಸಿತಂ ಚೈವ ನಾಭಾಗಂ ಮಾಂಧಾತಾ ಮಾನವೋऽಜಯತ್ ॥ ೧೧ ॥

ಮನುವಿನ ವಂಶದಲ್ಲಿ ಜನಿಸಿದ ಮಾಂಧಾತೃವು ಜನಮೇಜಯನನ್ನೂ, ಸುಧನ್ವನನ್ನೂ, ಗಯ-ಪೂರು-ಬೃಹದ್ರಥರನ್ನೂ, ಅಸಿತನನ್ನೂ ಮತ್ತು ನಾಭಾಗನನ್ನೂ ಮೀರಿದನು.

ಯಾವತ್ ಸೂರ್ಯ ಉದೇತಿ ಸ್ಮ ಯಾವಚ್ಚ ಪ್ರತಿತಿಷ್ಠತಿ ।
ತತ್ ಸರ್ವಂ ಯೌವನಾಶ್ವಸ್ಯ ಮಾಂಧಾತುಃ ಕ್ಷೇತ್ರಮುಚ್ಯತೇ ॥ ೧೨ ॥

ಸೂರ್ಯನು ಉದಯಿಸಿ ಸಂಚರಿಸುವಷ್ಟು ಪ್ರದೇಶವೆಲ್ಲವೂ ಮಾಂಧಾತೃವಿನ ರಾಜ್ಯವಾಗಿದ್ದಿತು.

ಸೋऽಶ್ವಮೇಧಶತೇನೇಷ್ಟ್ವಾ ರಾಜಸೂಯಶತೇನ ಚ ।
ಅದದಾದ್ ರೋಹಿತಾನಶ್ವಾನ್ ಬ್ರಾಹ್ಮಣೇಭ್ಯೋ ವಿಶಾಂಪತಿಃ ।
ಹೈರಣ್ಯಾನ್ ಯೋಜನೋತ್ಸೇಧಾನ್ ಆಯತಾನ್ ದಶಯೋಜನಮ್ ॥

ರಾಜನಾದ ಅವನು ನೂರು ಅಶ್ವಮೇಧ ಯಾಗಗಳನ್ನೂ, ನೂರು ರಾಜಸೂಯಗಳನ್ನೂ ಮಾಡಿ ಲೋಹಿತವರ್ಣದ ಅಶ್ವಗಳನ್ನು ರಾಜರುಗಳಿಗೆ ನೀಡಿದನು. ಹತ್ತು ಯೋಜನ ವಿಸ್ತಾರ ಮತ್ತು ಒಂದು ಯೋಜನ ಎತ್ತರವಿದ್ದ ಸುವರ್ಣದ ರಾಶಿಯನ್ನು ಬ್ರಾಹ್ಮಣರಿಗೆ ನೀಡಿದನು.

ಬಹುಪ್ರಕಾರಾನ್ ಸುಸ್ವಾದೂನ್ ಭಕ್ಷ್ಯಭೋಜ್ಯಾನ್ನಪರ್ವತಾನ್ ।
ಅತಿರಿಕ್ತಾನ್ ಬ್ರಾಹ್ಮಣೇಭ್ಯೋ ಭುಂಜತೇ ಸ್ಮೇತರೇ ಜನಾಃ ॥ ೧೪ ॥

ಭಕ್ಷ್ಯಾನ್ನಪಾನನಿಚಯಾನ್ ಸುಶುಚೀನನ್ನಪರ್ವತಾನ್ ॥ ೧೫ ॥

ಬ್ರಾಹ್ಮಣರು ಊಟ ಮಾಡಿದ ಮೇಲೆ ಉಳಿದ ಅತ್ಯಂತ ರುಚಿಕರವಾದ, ಬಹುಪ್ರಕಾರವಾದ, ಭಕ್ಷ್ಯ-ಭೋಜ್ಯ-ಅನ್ನ ರಾಶಿಗಳನ್ನೂ ಶುಚಿಯಾದ ಪಾನಗಳನ್ನೂ ಉಳಿದವರು ಭುಂಜಿಸುತ್ತಿದ್ದರು.

ಘೃತಹ್ರದಾಃ ಸೂಪಪಂಕಾ ದಧಿಫೇನಾ ಗುಡೋಚ್ಚಯಾಃ ।
ತಾ ಊಹುಃ ಸರ್ವತೋ ನದ್ಯೋ ದಧಿಕ್ಷೀರವಹಾಃ ಶಿವಾಃ ॥ ೧೬ ॥

ದಧಿ-ಕ್ಷೀರಗಳನ್ನು ಹರಿಸುವ ಮಂಗಳಪ್ರದವಾದ ಅವನ ನದಿಗಳು ಘೃತ ಸರೋವರಗಳನ್ನೂ, ಸೂಪದ ಕೆಸರನ್ನೂ, ಮೊಸರಿನ ನೊರೆಯನ್ನೂ ಮತ್ತು ಗುಡ ಪರ್ವತಗಳನ್ನೂ ಹೊಂದಿದ್ದವು.

ದೇವಾಸುರಾ ನರಾ ಯಕ್ಷಾ ಗಂಧರ್ವೋರಗರಾಕ್ಷಸಾಃ ।
ವಿಪ್ರಾಶ್ಚೈವಾಮಿತಗುಣಾ ಯಸ್ಯ ಯಜ್ಞಾನುಪಾವಸನ್ ॥ ೧೭ ॥

ಅವನ ಯಜ್ಞಗಳಲ್ಲಿ ದೇವತೆಗಳೂ, ಅಸುರರೂ, ಮನುಷ್ಯರೂ, ಯಕ್ಷರೂ, ಗಂಧರ್ವೋರಗ ರಾಕ್ಷಸರೂ, ಅಮಿತ ಗುಣವುಳ್ಳ ವಿಪ್ರರೂ ಎಲ್ಲರೂ ಪಾಲ್ಗೊಂಡರು.

ಬ್ರಹ್ಮಣೇ ಬ್ರಹ್ಮಪುತ್ರಾಯ ಪ್ರಾದಾದ್ ಯೋಽತಿವಿಪಶ್ಚಿತೇ ।
ಸಮುದ್ರಾಂತಾಂ ವಸುಮತೀಂ ವಸುಪೂರ್ಣಾಂ ಮಹಾಮತಿಃ ।
ಸ ತಾಂ ಬ್ರಾಹ್ಮಣಸಾತ್ಕೃತ್ವಾ ಜಗಾಮ ಸ್ವಾನ್ ಗೃಹಾನ್ ಪ್ರತಿ ॥ ೧೮ ॥

ಮಹಾಮತಿಯಾದ ಅವನು ಅತ್ಯಂತ ಜ್ಞಾನಿಗಳಾದ, ಬ್ರಹ್ಮಪುತ್ರರಾದ ಕಾಶ್ಯಪರಿಗೆ ವಸುಪೂರ್ಣವಾದ ಸಮುದ್ರಾಂತವಾದ ಭೂಮಿಯನ್ನು ಕೊಟ್ಟನು. ಅವನು ಅಪ್ಪು ಭೂಮಿಯನ್ನು ಬ್ರಾಹ್ಮಣರಿಗೆ ದಾನ ಮಾಡಿ ತನ್ನ ಮನೆಗೆ ಹಿಂದಿರುಗಿದನು.

ರಾಜಾ ಹಿ ವಿವಿಧೈರಿಷ್ಟ್ವಾ ಯಜ್ಞೈರ್ವಿವಿಧದಕ್ಷಿಣೈಃ ।
ಗತಃ ಪುಣ್ಯತಮಾಲ್ಲೋಕಾನ್ ಪ್ರಾಪ್ಯಾತಿಯಶಸಾ ದಿಶಃ ॥ ೧೯ ॥

ಆ ರಾಜನು ವಿಧವಿಧವಾದ ದಕ್ಷಿಣೆಗಳನ್ನು ಹೊಂದಿದ, ವಿಧವಿಧವಾದ ಯಜ್ಞಗಳಿಂದ ದೇವತೆಗಳನ್ನು ಪ್ರಸನ್ನಗೊಳಿಸಿ, ಇಲ್ಲಿ ಎಲ್ಲ ದಿಕ್ಕುಗಳಲ್ಲಿಯೂ ತನ್ನ ಕೀರ್ತಿಗಳನ್ನು ಹರಡಿ ಅತ್ಯಂತ ಪುಣ್ಯತಮವಾದ ಲೋಕಗಳನ್ನು ಹೊಂದಿದನು.

ಸ ಚೇನ್ಮಮಾರ ಸೃಂಜಯ ಚತುರ್ಭದ್ರತರಸ್ತ್ವಯಾ ।
ಪುತ್ರಾತ್ ಪುಣ್ಯತಮಸ್ತುಭ್ಯಂ ಮಾ ಪುತ್ರಮನುತಪ್ಯಥಾಃ ।
ಅಯಜ್ವಾನಮದಕ್ಷಿಣ್ಯಮಧಿಚ್ಛೈತ್ಯೇತ್ಯುದಾಹರತ್ ॥ ೨೦ ॥

ಎಲೈ ಸೃಂಜಯನೇ, ನಿನಗಿಂತ ನಾಲ್ಕುಪಟ್ಟು ಶ್ರೇಷ್ಠನಾದ ಅವನೂ, ನಿನ್ನ ಪುತ್ರನಿಗಿಂತಲೂ ಪುಣ್ಯತಮನಾದ ಅವನ ಪುತ್ರನೂ ಮೃತರಾದ ಮೇಲೆ, ಎಲೈ ಜ್ಞಾನಿಶ್ರೇಷ್ಠನೇ, ಯಾಗವನ್ನು ಮಾಡದಿದ್ದ, ದಕ್ಷಿಣೆಯನ್ನು ಕೊಡದಿದ್ದ ನಿನ್ನ ಪುತ್ರನ ವಿಷಯದಲ್ಲಿ ಸಂತಾಪವನ್ನು ಪಡಬೇಡ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಏಕೋನಷಷ್ಟಿತಮೋऽಧ್ಯಾಯಃ ॥

॥ ಅಭಿಮನ್ಯುವಧಪರ್ವಣಿ ಅಷ್ಟಾವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಐವತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಅರವತ್ತನೆಯ ಅಧ್ಯಾಯ

ಷೋಡಶ ರಾಜೋಪಾಖ್ಯಾನದಲ್ಲಿ ಯಯಾತಿಯ ಚರಿತೆ

ನಾರದಃ

ಯಯಾತಿಂ ನಾಹುಷಂ ಚಾಪಿ ಮೃತಂ ಸೃಂಜಯ ಶುಶ್ರುಮ ।
ಯ ಇಮಾಂ ಪೃಥಿವೀಂ ಜಿತ್ವಾ ಸಸಮುದ್ರಾಂ ಸಪರ್ವತಾಮ್ ।
ಶಮ್ಯಾಪ್ರಾಸೇನ ನಿರ್ಮಾಯ ವೇದೀಃ ಸನ್ನತದಕ್ಷಿಣಾಃ ॥ ೧ ॥

ಈಜಾನಃ ಕ್ರತುಭಿಃ ಪುಣ್ಯೈಃ ಪರ್ಯಗಚ್ಛತ್ ಪ್ರದಕ್ಷಿಣಮ್ ॥ ೨ ॥

ನಾರದರು– ಎಲೈ ಸೃಂಜಯನೇ, ನಹುಷಪುತ್ರನಾದ ಯಯಾತಿಯೂ ಮರಣವನ್ನು ಹೊಂದಿದನೆಂದು ಕೇಳಿದ್ದೇವೆ. ಅವನು ಸಮುದ್ರದಿಂದ ಸುತ್ತುವರಿಯಲ್ಪಟ್ಟ, ಪರ್ವತ ಸಹಿತವಾದ ಈ ಭೂಮಿಯನ್ನು ಗೆದ್ದು ಶಮ್ಯಾಪ್ರಾಸದಿಂದ ವೇದಿಗಳನ್ನು ನಿರ್ಮಿಸಿ, ಬಹಳ ದಕ್ಷಿಣೆಯುಳ್ಳ ಪವಿತ್ರವಾದ ಯಜ್ಞಗಳಿಂದ ದೇವತೆಗಳನ್ನು ಅರ್ಚಿಸುವವನಾಗಿ ಭೂಮಿಯ ಪ್ರದಕ್ಷಿಣೆಯನ್ನು ಮಾಡಿದನು.

ಇಷ್ಟ್ವಾ ಕ್ರತುಸಹಸ್ರೇಣ ಹಯಮೇಧಶತೇನ ಚ ।
ಪೌಂಡರೀಕಸಹಸ್ರೇಣ ವಾಜಪೇಯಶತೇನ ಚ ॥ ೩ ॥

ಅತಿರಾತ್ರಸಹಸ್ರೇಣ ಚಾತುರ್ಮಾಸ್ಯೈಶ್ಚ ಕಾಮತಃ ।
ಅಗ್ನಿಷ್ಟೋಮೈಶ್ಚ ವಿವಿಧೈಃ ಸತ್ರೈರ್ನಿತ್ಯಾಪ್ತದಕ್ಷಿಣೈಃ ॥ ೪ ॥

ಅಬ್ರಾಹ್ಮಣಾನಾಂ ವಿತ್ತಂ ಯತ್ ಪೃಥಿವ್ಯಾಮಸ್ತಿ ಕಿಂಚನ ।
ತತ್ ಸರ್ವಂ ಪರಿಸಂಖ್ಯಾಯ ಸ ತದ್ ಬ್ರಾಹ್ಮಣಸಾತ್ ಕರೋತ್ ॥

ಅವನು ಪೂರ್ಣವಾದ ದಕ್ಷಿಣೆಯನ್ನು ಹೊಂದಿದ್ದ ಸಹಸ್ರ ಸತ್ರಗಳಿಂದಲೂ, ನೂರು ಅಶ್ವಮೇಧ ಯಾಗಗಳಿಂದಲೂ, ಸಹಸ್ರ ಪುಂಡರೀಕ ಯಾಗಗಳಿಂದಲೂ, ನೂರು ವಾಜಪೇಯ ಯಾಗಗಳಿಂದಲೂ, ಸಹಸ್ರ ಅತಿರಾತ್ರ ಯಾಗಗಳಿಂದಲೂ, ಚಾತುರ್ಮಾಸ್ಯ ಯಾಗಗಳಿಂದಲೂ, ಅಗ್ನಿಷ್ಟೋಮ ಯಾಗಗಳಿಂದಲೂ, ವಿಧವಿಧವಾದ ಸತ್ರಗಳಿಂದಲೂ ದೇವತೆಗಳನ್ನು ಅರ್ಚಿಸಿ, ಭೂಮಿಯಲ್ಲಿ ಬ್ರಾಹ್ಮಣೇತರರ ಬಳಿ ಇದ್ದ ಎಲ್ಲ ಧನಗಳನ್ನು ಪರಿಗಣನೆ ಮಾಡಿ, ಅದನ್ನು ಬ್ರಾಹ್ಮಣರ ವಶವನ್ನಾಗಿ ಮಾಡಿದನು.

ಸರಸ್ವತೀ ಪುಣ್ಯತಮಾ ನದೀನಾಂ
ತಥಾ ಸಮುದ್ರಾಃ ಸರಿತೋऽದ್ರಯಶ್ಚ ।
ಈಜಾನಾಯ ಪುಣ್ಯತಮಾಯ ರಾಜ್ಞೇ
ಘೃತಂ ಪಯೋ ದುದುಹುರ್ನಾಹುಷಾಯ ॥ ೬ ॥

ನದಿಗಳಲ್ಲಿ ಪವಿತ್ರವಾದ ಸರಸ್ವತೀ ನದಿ, ಸಮುದ್ರಗಳು, ಹಾಗೆಯೇ ಸಣ್ಣ ನದಿ ಮತ್ತು ಪರ್ವತಗಳು, ಯಜ್ಞವನ್ನು ಮಾಡುವ, ಪುಣ್ಯ ಪುರುಷನಾದ ನಹುಷ ಪುತ್ರನಾದ ಯಯಾತಿ ರಾಜನಿಗೆ ಘೃತ-ಕ್ಷೀರಗಳನ್ನು ತಂದು ಸುರಿಸಿದವು.

ವ್ಯೂಢೇ ದೇವಾಸುರೇ ಯುದ್ಧೇ ಜಿತ್ವಾ ದೈತ್ಯಾನ್ ಸದಾನವಾನ್ ।
ವರ್ಣೇಭ್ಯೋ ವ್ಯಭಜತ್ ಸರ್ವಾಂ ಚತುರ್ಭ್ಯಃ ಪೃಥಿವೀಮಿಮಾಮ್ ॥

ದೇವಾಸುರರ ಯುದ್ಧದಲ್ಲಿ ವ್ಯೂಹಗಳು ರಚಿಸಲ್ಪಡುತ್ತಿರಲು ಅವನು ದೈತ್ಯರನ್ನೂ ಮತ್ತು ದಾನವರನ್ನೂ ಗೆದ್ದು ಈ ಸಮಗ್ರವಾದ ಭೂಮಿಯನ್ನು ನಾಲ್ಕು ವರ್ಣದವರಿಗೂ ಹಂಚಿದನು.

ಯಜ್ಞೈರ್ಬಹುವಿಧೈರಿಷ್ಟ್ವಾ ಪ್ರಜಾಮುತ್ಪಾದ್ಯ ಚೋತ್ತಮಾಮ್ ।
ದೇವಯಾನ್ಯಾಂ ಚೌಶನಸ್ಯಾಂ ಶರ್ಮಿಷ್ಠಾಯಾಂ ಚ ಧರ್ಮತಃ ॥ ೮ ॥

ದೇವಾರಣ್ಯೇಷು ರಮ್ಯೇಷು ವಿಜಹಾರ ಸಹಪ್ರಿಯಃ ।
ಆತ್ಮನಃ ಕಾಮಚಾರೇಣ ದ್ವಿತೀಯ ಇವ ವಾಸವಃ ॥ ೯ ॥

ಅನೇಕ ವಿಧವಾದ ಯಜ್ಞಗಳಿಂದ ದೇವತೆಗಳನ್ನು ಅರ್ಚಿಸಿ, ಶುಕ್ರಾಚಾರ್ಯರ ಮಗಳಾದ ದೇವಯಾನಿಯ ಜೊತೆಯಲ್ಲಿ ಮತ್ತು ಶರ್ಮಿಷ್ಠೆಯ ಜೊತೆಯಲ್ಲಿ ಸುಂದರವಾದ ದೇವಾರಣ್ಯಗಳಲ್ಲಿ ವಿಹಾರವನ್ನು ಮಾಡಿ, ಧರ್ಮದಿಂದಲೇ ಶ್ರೇಷ್ಠವಾದ ಸಂತಾನವನ್ನು ಪಡೆದು, ತನ್ನ ವ್ಯಾಪಾರದಿಂದ ಎರಡನೆಯ ಇಂದ್ರನಂತೆ ಮೆರೆದನು.

ಯದಾ ನಾಧ್ಯಗಮಚ್ಛಾಂತಿಂ ಕಾಮಾನಾಂ ಸರ್ವಧರ್ಮವಿತ್ ।
ತತೋ ಗಾಥಾಮಿಮಾಂ ಗೀತ್ವಾ ಸದಾರಃ ಪ್ರಾವಿಶದ್ ವನಮ್ ॥೧೦॥

ಯತ್ ಪೃಥಿವ್ಯಾಂ ವ್ರೀಹಿಯವಂ ಹಿರಣ್ಯಂ ಪಶವಃ ಸ್ತ್ರಿಯಃ ।
ನಾಲಮೇಕಸ್ಯ ತತ್ ಸರ್ವಂ ಸಂತೋಷಂ ಪರಮಂ ಸುಖಮ್ ॥೧೧॥

ಯಾವಾಗ ತನ್ನ ಇಬ್ಬರು ಪತ್ನಿಯರಿಂದ ಅವನು ಕಾಮದಲ್ಲಿ ಅಲಂಬುದ್ಧಿಯನ್ನು ಹೊಂದಲಿಲ್ಲವೋ ಆಗ ಸರ್ವಧರ್ಮಜ್ಞನಾದ ಅವನು ಈ ಗೀತೆಯನ್ನು ಗಾನ ಮಾಡಿ ಪತ್ನಿಯರ ಜೊತೆಯಲ್ಲಿ ವನಕ್ಕೆ ತೆರಳಿದನು. ಭೂಮಿಯಲ್ಲಿ ಎಷ್ಟು ಧನ-ಧಾನ್ಯಗಳೂ, ಸುವರ್ಣವೂ, ಪಶುಗಳು ಮತ್ತು ಸ್ತ್ರೀಯರೂ ಇದ್ದಾರೆಯೋ ಅವರೆಲ್ಲರೂ ಒಬ್ಬನಿಗೆ ಸಾಕಾಗುವುದಿಲ್ಲ. ಆದ್ದರಿಂದ ತೃಪ್ತಿಯೇ ಪರಮ ಸುಖ ಎಂದು ಹಾಡಿದನು.

ಏವಂ ಕಾಮಾನ್ ಪರಿತ್ಯಜ್ಯ ಯಯಾತಿರ್ಧೃತಿಮಾನಥ ।
ಪೂರುಂ ರಾಜ್ಯೇ ಪ್ರತಿಷ್ಠಾಪ್ಯ ಪ್ರವಿವೇಶ ವನಮೀಶ್ವರಃ ॥ ೧೨ ॥

ಧೈರ್ಯಶಾಲಿಯಾದ ಯಯಾತಿಯು ಹೀಗೆ ತನ್ನ ಕಾಮಗಳನ್ನು ಪರಿತ್ಯಜಿಸಿ, ಪುರುವಿಗೆ ರಾಜ್ಯದಲ್ಲಿ ಅಭಿಷೇಕವನ್ನು ಮಾಡಿ, ಪ್ರಭುವಾದ ಅವನು ಕಾಡಿಗೆ ಹೋದನು.

ಸ ಚೇನ್ಮಮಾರ ಸೃಂಜಯ ಚತುರ್ಭದ್ರತರಸ್ತ್ವಯಾ।
ಪುತ್ರಾತ್ ಪುಣ್ಯತಮಸ್ತುಭ್ಯಂ ಮಾ ಪುತ್ರಮನುತಪ್ಯಥಾಃ ।
ಅಯಜ್ವಾನಮದಕ್ಷಿಣ್ಯಮಧಿಚ್ಛೈತ್ಯೇತ್ಯುದಾಹರತ್ ॥ ೧೩ ॥

ಎಲೈ ಸೃಂಜಯನೇ, ನಿನಗಿಂತ ನಾಲ್ಕುಪಟ್ಟು ಮಂಗಳಕರನಾಗಿದ್ದ ಅವನೂ, ನಿನ್ನ ಪುತ್ರನಿಗಿಂತಲೂ ಪುಣ್ಯತಮನಾದ ಅವನ ಪುತ್ರನೂ ಮರಣವನ್ನು ಹೊಂದಿದ ಮೇಲೆ, ಎಲೈ ಜ್ಞಾನಿಶ್ರೇಷ್ಠನೇ, ಯಾಗವನ್ನು ಮಾಡದೆ ದಕ್ಷಿಣೆಯನ್ನು ಕೊಡದಿದ್ದ ನಿನ್ನ ಪುತ್ರನ ವಿಷಯದಲ್ಲಿ ಸಂತಾಪವನ್ನು ಪಡಬೇಡ ಎಂದು ಹೇಳಿದರು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ದ್ರೋಣಪರ್ವಣಿ ಷಷ್ಟಿತಮೋऽಧ್ಯಾಯಃ ॥

॥ ಅಭಿಮನ್ಯುವಧಪರ್ವಣಿ ಏಕೋನತ್ರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಅರವತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಅರವತ್ತೊಂದನೆಯ ಅಧ್ಯಾಯ

ಷೋಡಶರಾಜೋಪಾಖ್ಯಾನದಲ್ಲಿ ಅಂಬರೀಶನ ಚರಿತೆ

ನಾರದಃ

ನಾಭಾಗಮಂಬರೀಷಂ ಚ ಮೃತಂ ಸೃಂಜಯ ಶುಶ್ರುಮ ।
ಯಂ ಸಹಸ್ರಂ ಸಹಸ್ರಾಣಾಂ ರಾಜ್ಞಾಮಯುತಯೋಧಿನಾಮ್ ।
ಜಿಗೀಷಮಾಣಾಃ ಸಂಗ್ರಾಮೇ ಸಮಂತಾದ್ ವೈರಿಣೋऽಭ್ಯಯುಃ ॥

ನಾರದರು– ಎಲೈ ಸೃಂಜಯನೇ, ನಾಭಾಗ ಕುಲದಲ್ಲಿ ಜನಿಸಿದ ಅಂಬರೀಷನೂ ಮೃತನಾದನೆಂದು ಕೇಳಿದ್ದೇವೆ. ಅವನನ್ನು ಗೆಲ್ಲಲು ಸಹಸ್ರ, ಸಹಸ್ರ ಶತ್ರುರಾಜರು ಸಹಸ್ರಾರು ಸೈನಿಕರ ಜೊತೆಯಲ್ಲಿ ಯುದ್ಧಕ್ಕೆ ಬಂದರು.

ಶಸ್ತ್ರಮುಚ್ಚಾವಚಂ ಘೋರಂ ಸೃಜಂತಶ್ಚಾಶಿವಾ ಗಿರಃ ॥ ೨ ॥

ಬಲಲಾಘವಶಿಕ್ಷಾಭಿಃ ತೇಷಾಂ ಶಸ್ತ್ರಬಲೇನ ಚ ।
ಛಿತ್ತ್ವಾ ऽಯುತಗಜಾನ್ ಜಿತ್ವಾ ನಾಭಾಗಸ್ತು ಗತವ್ಯಥಃ ॥ ೩ ॥

ಕ್ರೂರವಾದ ಮಾತುಗಳನ್ನು ಆಡಿ, ಉಚ್ಚನೀಚವಾದ, ಘೋರವಾದ ಶಸ್ತ್ರವನ್ನು ಪ್ರಯೋಗಿಸಿ ಯುದ್ಧವನ್ನು ಮಾಡಿದರು. ನಾಭಾಗನಾದರೂ ಯಾವ ಚಿಂತೆಯೂ

ಇಲ್ಲದೆ, ತನ್ನ ಶಸ್ತ್ರಬಲದಿಂದಲೂ, ತನ್ನ ಕ್ಷಿಪ್ರತೆ ಮತ್ತು ಅಭ್ಯಾಸದ ಬಲದಿಂದಲೂ, ಅವರ ಗಜ-ರಥಾದಿಗಳನ್ನು ಕತ್ತರಿಸಿದನು.

ತ ಏನಂ ಮುಕ್ತಸನ್ನಾಹಾ ನಾಥಂತೇ ಜೀವಿತೈಷಿಣಃ ।
ಶರಣ್ಯಮೀಯುಃ ಶರಣಂ ತವ ಸ್ಮ ಇತಿ ವಾದಿನಃ ॥ ೪ ॥

ಅವರು ತಮ್ಮ ಯುದ್ಧಕವಚಾದಿಗಳನ್ನು ಬಿಚ್ಚಿ, ತಮ್ಮ ಜೀವನವನ್ನು ಬೇಡುತ್ತಾ, ನಾವು ನಿನಗೆ ದಾಸರಾಗಿದ್ದೇವೆ ಎಂದು ಹೇಳುತ್ತಾ ಅವನಿಗೆ ಶರಣಾಗತರಾದರು.

ಸ ತು ತಾನ್ ವಶಗಾನ್ ಕೃತ್ವಾ ಜಿತ್ವಾ ಚೇಮಾಂ ವಸುಂಧರಾಮ್ ।
ಈಜೇ ಯಜ್ಞಶತೈರಿಷ್ಟೈರ್ಯಥಾ ಶಕ್ರಸ್ತಥಾಽನಘ ॥ ೫ ॥

ಎಲೈ ಅನಘನೇ, ಅವನು ಆ ರಾಜರನ್ನು ವಶಪಡಿಸಿಕೊಂಡು, ಈ ಭೂಮಿಯನ್ನು ಗೆದ್ದು, ಇಂದ್ರನಂತೆ ಇಷ್ಟವಾದ ನೂರು ಯಾಗಗಳನ್ನು ಮಾಡಿದನು.

ತಸ್ಯ ಯಜ್ಞೇಷು ವಿಪ್ರೇಂದ್ರಾಃ ಪ್ರಹೃಷ್ಟಾಃ ಪರಮಾರ್ಚಿತಾಃ ।
ಬುಭುಜುಃ ಸರ್ವಸಂಪನ್ನಮನ್ನಮನ್ಯೇ ಜನಾಸ್ತಥಾ ॥ ೬ ॥

ಅವನ ಯಜ್ಞಗಳಲ್ಲಿ ವಿಪ್ರಶ್ರೇಷ್ಠರು ಬಹಳ ಸನ್ಮಾನಿತರಾಗಿ ಸಂತೋಷಗೊಂಡು ಸರ್ವಸಂಪನ್ನವಾದ ಅನ್ನವನ್ನು ಭುಂಜಿಸಿದರು. ಉಳಿದವರೂ ಸಹ ಅಂತಹ ಅನ್ನವನ್ನೇ ಭುಂಜಿಸಿದರು.

ಮೋದಕಾನ್ ಕಾರಿಕಾಪೂಪಾನ್ ಧಾನಾ ವಟಕಶಷ್ಕುಲೀಃ ।
ಕರಂಭಾನ್ ಪೃಥುಕಾಮಂಧಾನನ್ಯಾನಿ ಸುಕೃತಾನಿ ಚ ॥ ೭ ॥

ಸೂಪಾಢ್ಯೋರಂಡ್ರಕಾನ್ ಯೂಷಾನ್ ರಾಗಷಾಡಬಪಾನಕಾನ್ ।
ನಿಭೃತಾನಿ ಸುಯುಕ್ತಾನಿ ಸ್ವಾದೂನಿ ಸುರಭೀಣಿ ಚ ॥ ೮ ॥

ಘೃತಂ ಮಧು ಪಯಸ್ತೋಯಂ ದಧೀನಿ ರಸವಂತಿ ಚ ।
ಫಲಂ ಮೂಲಂ ಚ ಸುಸ್ವಾದು ದ್ವಿಜಾಸ್ತತ್ರೋಪಭುಂಜತೇ ॥ ೯ ॥

ಕಡುಬುಗಳು, ಗಾರಿಗೆ, ಅಪೂಪ, ದೋಸೆ, ಚಕ್ಕುಲಿ ಮೊದಲಾದ ಭಕ್ಷ್ಯಗಳನ್ನೂ, ತೊವ್ವೆ ಮೊದಲಾದ ಭೋಜ್ಯಗಳನ್ನೂ, ಪಾನಕ ಮೊದಲಾದ ಪೇಯಗಳನ್ನೂ, ಚೆನ್ನಾಗಿ

ಬಡಿಸಿದ ದಿವ್ಯ-ಗಂಧಯುಕ್ತವಾದ, ರುಚಿಕರವಾದ ಘೃತ-ಮಧು-ಹಾಲು-ಮೊಸರು-ನೀರು-ಫಲಮೂಲಗಳು ಮುಂತಾದವುಗಳನ್ನೂ ದ್ವಿಜರು ಅಲ್ಲಿ ಭುಂಜಿಸಿದರು.

ಮದನೀಯಾನಿ ಪಾನಾನಿ ವಿದಂಶಾನಾತ್ಮನಃ ಪ್ರಿಯಾನ್ ।
ಪಪುಸ್ತತ್ರ ಯಥಾಕಾಮಂ ಪಾನಕಾಃ ಶೀತಕಾಃ ಪರಮ್ ॥ ೧೦ ॥

ಸಂತೋಷವನ್ನು ಕೊಡುವ, ತಮಗೆ ಪ್ರಿಯವಾದ, ಅಗಿಯುವ ಪದಾರ್ಥವಿಲ್ಲದಿರುವ ಶೀತಲವಾದ ಪಾನಕಗಳನ್ನು ತಮಗೆ ಇಷ್ಟ ಬಂದಂತೆ ಪಾನ ಮಾಡಿದರು.

ತತ್ರ ಸ್ಮ ಗಾಥಾ ಗಾಯಂತಿ ಕ್ಷೀಬಾ ಹೃಷ್ಟಾಃ ಪಠಂತಿ ಚ ।
ನಾಭಾಗಸ್ತವಸಂಯುಕ್ತಾ ನನೃತುಶ್ಚ ಸಹಸ್ರಶಃ ॥ ೧೧ ॥

ಅಂತಹ ಭೋಜನ, ಪಾನಗಳಿಂದ ಸಂತೋಷಗೊಂಡ ಗಾಯಕರು ನಾಭಾಗನ ಪ್ರಶಂಸಾ ರೂಪವಾದ ಗೀತೆಗಳನ್ನು ಹಾಡಿದರು. ಜನರು ಸಹಸ್ರಾರು ಸಂಖ್ಯೆಯಲ್ಲಿ ನರ್ತನವನ್ನು ಮಾಡಿದರು.

ತೇಷು ಯಜ್ಞೇಷು ನಾಭಾಗೋ ದಕ್ಷಿಣಾ ಅತ್ಯಕಾಲಯತ್ ।
ರಾಜ್ಞಾಂ ಶತಸಹಸ್ರಾಣಿ ಪ್ರಯುತಾಯುತವಾಜಿನಾಮ್ ॥ ೧೨ ॥

ಆ ಯಜ್ಞಗಳಲ್ಲಿ ಅಂಬರೀಷನು ಒಂದು ಲಕ್ಷ ರಾಜರನ್ನು ಮತ್ತು ಲಕ್ಷ-ಲಕ್ಷ ಕುದುರೆಗಳನ್ನು ದಕ್ಷಿಣೆಯಾಗಿ ನೀಡಿದನು.

ಹಿರಣ್ಯಕವಚಾನ್ ಸರ್ವಾನ್ ಸರ್ವಾಂಶ್ಚೋತ್ತಮಧನ್ವಿನಃ ।
ಹಿರಣ್ಯಸ್ಯಂದನಾರೂಢಾನ್ ಸಾನುಯಾತ್ರಪರಿಚ್ಛದಾನ್ ।
ಈಜಾನೋ ವಿತತೇ ಯಜ್ಞೇ ದಕ್ಷಿಣಾ ಅತ್ಯಕಾಲಯತ್ ॥ ೧೩ ॥

ಹಿರಣ್ಯಕವಚವನ್ನು ಧರಿಸಿದ, ಉತ್ತಮ ಧನುರ್ಧಾರಿಗಳಾದ, ಹಿರಣ್ಯ ರಥದಲ್ಲಿ ಕುಳಿತ ತಮ್ಮ ಸೇವಕವರ್ಗದಿಂದ ಸಹಿತರಾದ ರಾಜರನ್ನು ತನ್ನ ವಿಸ್ತಾರವಾದ ಯಜ್ಞದಲ್ಲಿ ಅವನು ದಕ್ಷಿಣೆಯಾಗಿ ಕಲ್ಪಿಸಿದನು.

ಮೂರ್ಧಾವಸಿಕ್ತಾಂಶ್ಚ ನೃಪಾನ್ ರಾಜಪುತ್ರಶತಾನಿ ಚ ।
ಸದಂಡಕೋಶವಿಷಯಾನ್ ಬ್ರಾಹ್ಮಣೇಭ್ಯೋ ಹ್ಯಮಂಸತ ॥ ೧೪ ॥

ಮೂರ್ಧಾಭಿಷಿಕ್ತರಾದ ರಾಜರನ್ನೂ ಮತ್ತು ನೂರು ಜನ ರಾಜಕುಮಾರರನ್ನೂ ಅವರ ದಂಡ-ಕೋಶ-ರಾಜ್ಯ ಸಹಿತವಾಗಿ ಬ್ರಾಹ್ಮಣರಿಗೆ ದಾನವನ್ನು ಮಾಡಿದನು.

ನೇಹ ಪೂರ್ವೇ ತಥಾ ಚಕ್ರುಃ ಕರ್ತಾರೋ ವಾ ನ ಚಾಪರೇ ।
ಯದಂಬರೀಷೋ ನೃಪತಿಃ ಕರೋತ್ಯಮಿತದಕ್ಷಿಣಃ ॥ ೧೫ ॥

ಅಪರಿಮಿತವಾದ ದಕ್ಷಿಣೆಯನ್ನು ನೀಡಿದ ಅಂಬರೀಷ ರಾಜನು ಮಾಡಿದ ಕಾರ್ಯವನ್ನು ಹಿಂದಿನವರು ಯಾರೂ ಮಾಡಲಿಲ್ಲ, ಮುಂದೆ ಬರುವವರು ಯಾರೂ ಮಾಡುವುದಿಲ್ಲ.

ಇತ್ಯೇವಮನ್ವಮೋದಂತ ಪ್ರೀತಾಃ ಸುರಮಹರ್ಷಯಃ ।

ಹೀಗೆ ಚಿಂತಿಸಿ ದೇವತೆಗಳು ಮತ್ತು ಋಷಿಗಳು ಅವನ ಕಾರ್ಯವನ್ನು ಅನುಮೋದಿಸಿದರು.

ಸ ಚೇನ್ಮಮಾರ ಸೃಂಜಯ ಚತುರ್ಭದ್ರತರಸ್ತ್ವಯಾ ॥ ೧೬ ॥

ಪುತ್ರಾತ್ ಪುಣ್ಯತಮಸ್ತುಭ್ಯಂ ಮಾ ಪುತ್ರಮನುತಪ್ಯಥಾಃ ।
ಅಯಜ್ವಾನಮದಕ್ಷಿಣ್ಯಮಧಿಚ್ಛೈತ್ಯೇತ್ಯುದಾಹರತ್ ॥ ೧೭ ॥

ಎಲೈ ಸೃಂಜಯನೇ, ನಿನಗಿಂತ ನಾಲ್ಕು ಪಟ್ಟು ಶ್ರೇಷ್ಠನಾದ ಅವನೂ, ನಿನ್ನ ಪುತ್ರನಿಗಿಂತಲೂ ಶ್ರೇಷ್ಠನಾದ ಅವನ ಪುತ್ರನೂ ಮರಣವನ್ನು ಹೊಂದಿದ ಮೇಲೆ, ಯಾಗಗಳನ್ನು ಮಾಡದ, ದಕ್ಷಿಣೆಯನ್ನು ಕೊಡದ ನಿನ್ನ ಪುತ್ರನ ವಿಷಯದಲ್ಲಿ, ಎಲೈ ಜ್ಞಾನಿಶ್ರೇಷ್ಠನೇ, ಶೋಕಪಡಬೇಡ ಎಂದು ಹೇಳಿದರು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಏಕಷಷ್ಟಿತಮೋऽಧ್ಯಾಯಃ ॥

॥ ಅಭಿಮನ್ಯುವಧಪರ್ವಣಿ ತ್ರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಅರವತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಅರವತ್ತೆರಡನೆಯ ಅಧ್ಯಾಯ

ಷೋಡಶ ರಾಜೋಪಾಖ್ಯಾನದಲ್ಲಿ ಶಶಿ(ಶಶ)ಬಿಂದು ಚರಿತೆ

ನಾರದಃ

ಶಶಿಬಿಂದುಂ ಚ ರಾಜೇಂದ್ರಂ ಮೃತಂ ಸೃಂಜಯ ಶುಶ್ರುಮ ।
ಯ ಈಜೇ ವಿವಿಧೈರ್ಯಜ್ಞೈಃ ಶ್ರೇಮಾನ್ ಸತ್ಯಪರಾಕ್ರಮಃ ।
ತಸ್ಯ ಭಾರ್ಯಾಸಹಸ್ರಾಣಾಂ ಶತಮಾಸೀನ್ಮಹಾತ್ಮನಃ ॥ ೧ ॥

ನಾರದರು– ಎಲೈ ಸೃಂಜಯನೇ, ರಾಜಶ್ರೇಷ್ಠನಾದ ಶಶಿಬಿಂದುವೂ ಸಹ ಮೃತನಾದನೆಂದು ಕೇಳಿದ್ದೇವೆ. ಸತ್ಯಪರಾಕ್ರಮನೂ, ಸಂಪದ್ಯುಕ್ತನೂ ಆದ ಅವನು ವಿಧವಿಧವಾದ ಯಜ್ಞದಿಂದ ದೇವತೆಗಳನ್ನು ಅರ್ಚಿಸಿದನು. ಆ ಮಹಾತ್ಮನಿಗೆ ಒಂದು ಲಕ್ಷ ಭಾರ್ಯೆಯರಿದ್ದರು.

ಏಕೈಕಸ್ಯಾಂ ಚ ಭಾರ್ಯಾಯಾಂ ಪುತ್ರಜನ್ಮ ತಥಾऽಭವತ್ ।
ಸಹಸ್ರಂ ತು ಸಹಸ್ರಂ ತು ತಸ್ಯಾಂ ತಸ್ಯಾಂ ಮಹಾತ್ಮನಃ ॥ ೨ ॥

ಮಹಾತ್ಮನಾದ ಅವನಿಗೆ ಒಬ್ಬೊಬ್ಬ ಪತ್ನಿಯಲ್ಲಿಯೂ ಸಹಸ್ರ ಸಹಸ್ರ ಪುತ್ರರು ಜನಿಸಿದರು.

ಶಶಿಬಿಂದುಕುಮಾರಾಸ್ತೇ ಸರ್ವೇ ನಿಯುತದಕ್ಷಿಣಾಃ ।
ರಾಜಾನಃ ಕ್ರತುಭಿರ್ಮುಖ್ಯೈರೀಜಾನಾ ವೇದಪಾರಗಾಃ ॥ ೩ ॥

ಶಶಬಿಂದುವಿನ ಆ ಕುಮಾರರೆಲ್ಲರೂ ನಿಯುತ ಸಂಖ್ಯೆಯ ದಕ್ಷಿಣೆಯನ್ನು ಕೊಡುವವರು, ರಾಜರು, ಶ್ರೇಷ್ಠವಾದ ಯಜ್ಞವನ್ನು ಮಾಡಿದವರು ಮತ್ತು ವೇದಪಾರಂಗತರು.

ಹಿರಣ್ಯಕವಚಾಃ ಸರ್ವೇ ಸರ್ವೇ ಚೋತ್ತಮಧನ್ವಿನಃ ।
ಸರ್ವೇऽಶ್ವಮೇಧೈರೀಜಾನಾಃ ಕುಮಾರಾಃ ಶಶಿಬಿಂದವಾಃ ॥ ೪ ॥

ಶಶಿಬಿಂದುವಿನ ಕುಮಾರರೆಲ್ಲರೂ ಶ್ರೇಷ್ಠ ಧನುರ್ಧಾರಿಗಳು, ಸುವರ್ಣಕವಚವನ್ನು ಧರಿಸಿದವರು ಮತ್ತು ಅಶ್ವಮೇಧ ಯಾಗವನ್ನು ಮಾಡಿದರು.

ತಾನಶ್ವಮೇಧೇ ಯಜ್ಞೇಂದ್ರೇ ಬ್ರಾಹ್ಮಣೇಭ್ಯೋಽದದಾತ್ ಪಿತಾ ।
ಶತಂ ಶತಂ ರಥಗತಾ ಏಕೈಕಂ ಪೃಷ್ಠತೋಽನ್ವಯುಃ ॥ ೫ ॥

ಅಂತಹ ಕುಮಾರರನ್ನು ಶಶಬಿಂದುವು ಶ್ರೇಷ್ಠವಾದ ಅಶ್ವಮೇಧ ಯಾಗದಲ್ಲಿ ಒಬ್ಬೊಬ್ಬ ಬ್ರಾಹ್ಮಣರಿಗೂ ನೂರು ನೂರು ಪುತ್ರರಂತೆ ದಕ್ಷಿಣೆಯಾಗಿ ಕೊಟ್ಟನು. ಅವರು ಬ್ರಾಹ್ಮಣರನ್ನು ಹಿಂಬಾಲಿಸಿ ಹೋದರು.

ರಾಜಪುತ್ರಾಂಸ್ತದಾ ಕನ್ಯಾ ರಮಣೀಯಾಃ ಸ್ವಲಂಕೃತಾಃ ।
ಕನ್ಯಾಂ ಕನ್ಯಾಂ ಶತಂ ನಾಗಾ ನಾಗೇ ನಾಗೇ ಶತಂ ರಥಾಃ ॥ ೬ ॥

ರಥೇ ರಥೇ ಶತಂ ಚಾಶ್ವಾ ಜವಿನೋ ಹೇಮಮಾಲಿನಃ ।
ಅಶ್ವೇ ಹ್ಯಶ್ವೇ ಗೋಸಹಸ್ರಂ ಗವಾಂ ಪಂಚಾಪ್ಯಜಾವಿಕಮ್ ॥ ೭ ॥

ಏತದ್ಧನಮಪರ್ಯಂತಮಶ್ವಮೇಧಮಹಾಮಖೇ ।
ಶಶಬಿಂದುರ್ಮಹಾಭಾಗೋ ಬ್ರಾಹ್ಮಣೇಭ್ಯೋಽನ್ವಮಂಸತ ॥ ೮ ॥

ಆ ರಾಜಪುತ್ರರ ಹಿಂದೆ ಚೆನ್ನಾಗಿ ಅಲಂಕೃತರಾದ, ಸುಂದರಿಯರಾದ ಕನ್ಯೆಯರೂ, ಒಬ್ಬೊಬ್ಬ ಕನ್ಯೆಯ ಹಿಂದೆಯೂ ನೂರು ಗಜಗಳು, ಒಂದೊಂದು ಗಜದ ಹಿಂದೆಯೂ ನೂರು ರಥಗಳೂ, ಒಂದೊಂದು ರಥದ ಹಿಂದೆಯೂ ವೇಗಶಾಲಿಯಾದ, ಸುವರ್ಣ ಮಾಲೆಯನ್ನು ಧರಿಸಿದ ನೂರು ಅಶ್ವಗಳೂ, ಒಂದೊಂದು ಅಶ್ವದ ಹಿಂದೆಯೂ ಸಹಸ್ರ ಗೋವುಗಳು, ಒಂದೊಂದು ಗೋವಿನ ಹಿಂದೆಯೂ ಐದೈದು ಆಡು ಮತ್ತು ಕುರಿಗಳು, ಇಂತಹ ಅಪರ್ಯಾಪ್ತ ಧನವನ್ನು ಮಹಾನುಭಾವನಾದ ಶಶಬಿಂದುವು ಅಶ್ವಮೇಧ ಮಹಾಯಾಗದಲ್ಲಿ ಬ್ರಾಹ್ಮಣರಿಗೆ ವಶವಾಗಿ ಮಾಡಿದನು.

ವೃಕ್ಷಾಶ್ಚ ಯೂಪಾ ಯಾವಂತ ಅಶ್ವಮೇಧೇ ಹಿ ಶಬ್ದಿತಾಃ ।
ತೇ ತಥೈವ ಪುನಶ್ಚಾನ್ಯೇ ತಾವಂತಃ ಕಾಂಚನಾಽಭವನ್ ॥ ೯ ॥

ಅಶ್ವಮೇಧ ಯಾಗದಲ್ಲಿ ಎಷ್ಟು ವೃಕ್ಷಗಳ ಯೂಪಗಳು (ಬಲಿಗಂಬ) ವಿಹಿತವಾಗಿವೆಯೋ ಅಷ್ಟೇ ಸುವರ್ಣಮಯವಾದ ಯೂಪಗಳನ್ನು ಮಾಡಿಸಿದನು.

ಭಕ್ಷ್ಯಾನ್ನಪಾನನಿಚಯಾಃ ಪರ್ವತಾಃ ಕ್ರೋಶಮುಚ್ಛ್ರಿತಾಃ ।
ತಸ್ಯಾಶ್ವಮೇಧೇ ನಿರ್ವೃತ್ತೇ ರಾಜ್ಞಃ ಶಿಷ್ಟಾಸ್ತ್ರಯೋದಶ ॥ ೧೦ ॥

ಆ ರಾಜನ ಅಶ್ವಮೇಧಯಾಗವು ಪೂರ್ಣವಾದ ಮೇಲೆ ಒಂದು ಕ್ರೋಶದಷ್ಟು ಎತ್ತರವಾಗಿದ್ದ ಭಕ್ಷ್ಯ-ಅನ್ನ-ಪಾನಗಳ ಪರ್ವತದಂತಹ ರಾಶಿಗಳು ಹದಿಮೂರು ಉಳಿದವು.

ತುಷ್ಟಪುಷ್ಟಜನಾಕೀರ್ಣಾಂ ಶಾಂತವಿಘ್ನಾಂ ನಿರಾಮಯಾಮ್ ।
ಶಶಿಬಿಂದುರಿಮಾಂ ಭೂಮಿಂ ಚಿರಂ ಭುಕ್ತ್ವಾ ದಿವಂ ಗತಃ ॥ ೧೧ ॥

ಸಂತುಷ್ಟರಾದ ಮತ್ತು ಪುಷ್ಟರಾದ ಜನರಿಂದ ಕೂಡಿದ, ಯಾವ ಈತಿ ಬಾಧೆಗಳಿಲ್ಲದ, ಶತ್ರುಭಯವಿಲ್ಲದ ಈ ಭೂಮಿಯನ್ನು ಶಶಬಿಂದುವು ಬಹಳ ಕಾಲ ಆಳಿ ಸ್ವರ್ಗಕ್ಕೆ ಹೋದನು.

ಸ ಚೇನ್ಮಮಾರ ಸೃಂಜಯ ಚತುರ್ಭದ್ರತರಸ್ತ್ವಯಾ ॥ ೧೨ ॥

ಪುತ್ರಾತ್ ಪುಣ್ಯತಮಸ್ತುಭ್ಯಂ ಮಾ ಪುತ್ರಮನುತಪ್ಯಥಾಃ ।
ಅಯಜ್ವಾನಮದಕ್ಷಿಣ್ಯಮಧಿಚ್ಛೈತ್ಯೇತ್ಯುದಾಹರತ್ ॥ ೧೩ ॥

ಎಲೈ ಸೃಂಜಯನೇ, ನಿನಗಿಂತ ನಾಲ್ಕು ಪಟ್ಟು ಶ್ರೇಷ್ಠನಾದ ಅವನೂ, ನಿನ್ನ ಪುತ್ರನಿಗಿಂತಲೂ ಶ್ರೇಷ್ಠನಾದ ಅವನ ಪುತ್ರನೂ ಮರಣವನ್ನು ಹೊಂದಿದ ಮೇಲೆ, ಎಲೈ ಜ್ಞಾನಿಶ್ರೇಷ್ಠನೇ, ಯಾಗಗಳನ್ನು ಮಾಡದಿರುವ, ದಕ್ಷಿಣೆಯನ್ನು ಕೊಡದ ನಿನ್ನ ಪುತ್ರನ ವಿಷಯದಲ್ಲಿ ಶೋಕಪಡಬೇಡ ಎಂದು ಹೇಳಿದರು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ದ್ವಿಷಷ್ಟಿತಮೋऽಧ್ಯಾಯಃ ॥

॥ ಅಭಿಮನ್ಯುವಧಪರ್ವಣಿ ಏಕತ್ರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಅರವತ್ತೊಂದನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ಅರವತ್ತೆರಡನೆಯ ಅಧ್ಯಾಯ

ಷೋಡಶ ರಾಜೋಪಾಖ್ಯಾನದಲ್ಲಿ ಗಯನ ಚರಿತೆ

ನಾರದಃ

ಗಯಂ ಚಾಧೂರ್ತರಜಸಂ ಮೃತಂ ಸೃಂಜಯ ಶುಶ್ರುಮ ।
ಯೋ ವೈ ವರ್ಷಶತಂ ರಾಜಾ ಹುತಶಿಷ್ಟಾಶನೋಽಭವತ್ ।
ತಸ್ಮೈ ಹ್ಯಗ್ನಿರ್ವರಂ ಪ್ರಾದಾತ್ ತತೋ ವವ್ರೇ ವರಂ ಗಯಃ ॥ ೧ ॥

ತಪಸಾ ಬ್ರಹ್ಮಚರ್ಯೇಣ ವ್ರತೇನ ಚ ದಮೇನ ಚ ।
ಗುರೂಣಾಂ ಚ ಪ್ರಸಾದೇನ ವೇದಾನಿಚ್ಛಾಮಿ ವೇದಿತುಮ್ ॥ ೨ ॥

ಸ್ವಧರ್ಮಮವಿಹಿಂಸಾಂ ಚ ಧರ್ಮಮಿಚ್ಛಾಮಿ ಚಾಕ್ಷಯಮ್ ॥ ೩ ॥

ಪಾತ್ರೇಷು ದದತಃ ಸಾ ಮೇ ಶ್ರದ್ಧಾ ಭವತು ನಿತ್ಯಶಃ ।
ಅನನ್ಯಾಸು ಸವರ್ಣಾಸು ಸುಪ್ರಜಸ್ತ್ವಂ ಚ ಮೇ ಭವೇತ್ ॥ ೪ ॥

ನಾರದರು– ಅವನು ನೂರು ವರ್ಷಗಳ ಕಾಲ ಪ್ರತಿದಿನವೂ ಹೋಮಶೇಷವನ್ನು ಭುಂಜಿಸಿದನು. ಸಂತುಷ್ಟನಾದ ಅಗ್ನಿಯು ಅವನಿಗೆ ವರವನ್ನು ಕೊಟ್ಟನು. ಆಗ ಗಯನು ಬ್ರಹ್ಮಚರ್ಯದಿಂದಲೂ, ತಪಸ್ಸಿನಿಂದಲೂ, ಇಂದ್ರಿಯಗಳ ನಿಗ್ರಹದಿಂದಲೂ, ವ್ರತಾನುಷ್ಠಾನದಿಂದಲೂ, ಗುರುಗಳ ಅನುಗ್ರಹದಿಂದಲೂ ವೇದದ ಜ್ಞಾನವನ್ನು ಪಡೆಯಲು ಬಯಸುತ್ತೇನೆ. ನನ್ನ ಸ್ವಧರ್ಮವಾದ ಅಹಿಂಸೆಯನ್ನು ಮತ್ತು ಅಕ್ಷಯವಾದ ಧರ್ಮವನ್ನು ಬಯಸುತ್ತೇನೆ. ಪಾತ್ರರಿಗೆ ದಾನ ಮಾಡಿದಂತೆ ನಿತ್ಯವೂ ನನ್ನ ಶ್ರದ್ಧೆಯು ಅಭಿವೃದ್ಧಿಯನ್ನು ಹೊಂದಬೇಕು. ಪತಿವ್ರತೆಯರಾದ ನನ್ನ ಕ್ಷತ್ರಿಯ ಪತ್ನಿಯರಲ್ಲಿ ನಾನು ಒಳ್ಳೆಯ ಮಕ್ಕಳನ್ನು ಪಡೆಯಬೇಕು.

ಅನ್ನಂ ಸ್ವಾದು ದುಹೇನ್ಮಹ್ಯಂ ಧರ್ಮೇ ಮೇ ರಮತಾಂ ಮನಃ ।
ಅವಿಘ್ನಂ ಚಾಸ್ತು ಮೇ ನಿತ್ಯಂ ಧರ್ಮಕಾರ್ಯೇಷು ಪಾವಕ ।
ತಥಾ ಭವಿಷ್ಯತೀತ್ಯುಕ್ತ್ವಾ ತತ್ರೈವಾಂತರಧೀಯತ ॥ ೫ ॥

ಎಲೈ ಅಗ್ನಿಯೇ, ನನಗೆ ಭೂಮಿಯು ರುಚಿಕರವಾದ ಅನ್ನವನ್ನು ನೀಡಬೇಕು. ನನ್ನ ಮನಸ್ಸು ಧರ್ಮದಲ್ಲಿಯೇ ಸಂತೋಷ ಪಡಬೇಕು. ನಾನು ಮಾಡುವ

ಧರ್ಮಕಾರ್ಯಗಳಿಗೆ ಯಾವ ವಿಘ್ನವೂ ಬರಬಾರದು ಎಂದು ಬೇಡಿದನು. ಅಗ್ನಿಯು ಹಾಗೆಯೇ ಆಗುವುದು ಎಂದು ಹೇಳಿ ಅಲ್ಲಿಯೇ ಅಂತರ್ಧಾನವನ್ನು ಹೊಂದಿದನು.

ಗಯೋ ಹ್ಯವಾಪ್ಯ ತತ್ ಸರ್ವಂ ಧರ್ಮೇಣಾರಾಧಯನ್ ಜಗತ್ ।
ಸ ದರ್ಶಪೂರ್ಣಮಾಸಾಭ್ಯಾಂ ಕಾಲೇಷ್ವಾಗ್ರಯಣೇನ ಚ ॥ ೬ ॥

ಚಾತುರ್ಮಾಸ್ಯೈಶ್ಚ ವಿಧಿವದ್ ಇಷ್ಟಿಭಿಶ್ಚಾಪ್ತದಕ್ಷಿಣೈಃ ।
ಅಯಜಚ್ಛ್ರದ್ಧಯಾ ರಾಜಾ ಪರಿಸಂವತ್ಸರಾನ್ ಶತಮ್ ॥ ೭ ॥

ಗಯನು ಆ ಎಲ್ಲ ವರಗಳನ್ನೂ ಪಡೆದು ಧರ್ಮದಿಂದ ಪ್ರಜೆಗಳನ್ನು ಸಂತೋಷಪಡಿಸುತ್ತಾ, ಯೋಗ್ಯವಾದ ಕಾಲಗಳಲ್ಲಿ ದರ್ಶಪೂರ್ಣಮಾಸಗಳೂ, ಆಗ್ರಯಣೇಷ್ಟಿ, ಚಾತುರ್ಮಾಸ್ಯ ಯಾಗಗಳು ಮೊದಲಾದವುಗಳನ್ನು ವಿಧಿಗೆ ಅನುಗುಣವಾಗಿ ಬಹಳ ದಕ್ಷಿಣೆಯಿಂದ ಕೂಡಿದವುಗಳನ್ನಾಗಿ ಮಾಡಿ, ಶ್ರದ್ಧೆಯಿಂದ ನೂರು ವರ್ಷಗಳ ಕಾಲ ಪ್ರತಿವರ್ಷವೂ ಆಚರಿಸಿದನು.

ದಶನಾಗಸಹಸ್ರಾಣಿ ಶತಮಶ್ವಶತಾನಿ ಚ ।
ಶತಂ ನಿಷ್ಕಸಹಸ್ರಾಣಿ ಗವಾಂ ಚಾಪ್ಯಯುತಾನಿ ಷಟ್ ॥ ೮ ॥

ಉತ್ಥಾಯೋತ್ಥಾಯ ಸಂಪ್ರಾದಾತ್ ಪರಿಸಂವತ್ಸರಾನ್ ಶತಮ್ ॥ ೯ ॥

ಅವನು ಪ್ರತಿದಿನವೂ ಎದ್ದು ಪ್ರಾತಃಕಾಲದಲ್ಲಿ ಹತ್ತು ಸಹಸ್ರ ಗಜಗಳು, ಒಂದು ಲಕ್ಷ ಅಶ್ವಗಳು, ಒಂದು ಲಕ್ಷ ನಿಷ್ಕಗಳು ಮತ್ತು ಅರವತ್ತು ಸಾವಿರ ಗೋವುಗಳನ್ನು ನೂರು ವರ್ಷದವರೆಗೂ ದಾನ ಮಾಡಿದನು.

ನಕ್ಷತ್ರೇಷು ಚ ಸರ್ವೇಷು ದದನ್ನಕ್ಷತ್ರದಕ್ಷಿಣಾಃ ।
ಈಜೇ ಚ ವಿವಿಧೈರ್ಯಜ್ಞೈರ್ಯಥಾ ಶರ್ವೋಽಂಗಿರಾ ಯಥಾ ॥ ೧೦ ॥

ಪ್ರತಿಯೊಂದು ನಕ್ಷತ್ರದಲ್ಲಿಯೂ ಆಯಾ ನಕ್ಷತ್ರದಕ್ಷಿಣೆಗಳನ್ನು ಕೊಟ್ಟು, ರುದ್ರದೇವರಂತೆ ಮತ್ತು ಅಂಗಿರಸರಂತೆ ವಿಧವಿಧವಾದ ಯಜ್ಞಗಳನ್ನು ಮಾಡಿದನು.

ಸೌವರ್ಣಾಂ ಪೃಥಿವೀಂ ಕೃತ್ವಾ ಯ ಇಮಾಂ ಮಣಿಶರ್ಕರಾಮ್ ।
ಬ್ರಾಹ್ಮಣೇಭ್ಯೋಽದದಾದ್ ರಾಜಾ ಸೋಽಶ್ವಮೇಧೇ ಮಹಾಮಖೇ ॥

ಈ ಭೂಮಿಯ ಸುವರ್ಣಮಯವಾದ ಪ್ರತಿಕೃತಿಯನ್ನು ಮಾಡಿ, ಅದರಲ್ಲಿ ಮರಳಿನ ಸ್ಥಾನದಲ್ಲಿ ಮಣಿಗಳನ್ನು ಸೇರಿಸಿ ರಾಜನು ಅಶ್ವಮೇಧ ಮಹಾಯಾಗದಲ್ಲಿ ಬ್ರಾಹ್ಮಣರಿಗೆ ದಾನವನ್ನು ಮಾಡಿದನು.

ಜಾಂಬೂನದಮಯಾ ಯೂಪಾಃ ಸರ್ವೇ ಚಾನ್ಯೇ ಪರಿಚ್ಛದಾಃ ।
ಗಯಸ್ಯಾಸನ್ ವರಪ್ರಾಪ್ತ್ಯಾ ಸರ್ವಭೂತಮನೋಹರಾಃ ॥ ೧೨ ॥

ಅಗ್ನಿಯು ಕೊಟ್ಟ ವರದ ಪ್ರಭಾವದಿಂದಾಗಿ ಗಯನ ಯಜ್ಞಗಳಲ್ಲಿ ಎಲ್ಲ ಯೂಪಗಳು ಮತ್ತು ಎಲ್ಲ ಸಲಕರಣೆಗಳು ಸುವರ್ಣಮಯವಾಗಿದ್ದು ಸರ್ವಮನೋಹರವಾಗಿದ್ದವು.

ಸರ್ವಕಾಮಸಮೃದ್ಧಂ ಚ ಪ್ರಾದಾದನ್ನಂ ಗಯಸ್ತದಾ ।
ಬ್ರಾಹ್ಮಣೇಭ್ಯಃ ಪಿತೃಭ್ಯಶ್ಚ ಸರ್ವಭೂತೇಭ್ಯ ಏವ ಚ ॥ ೧೩ ॥

ಆಗ ಗಯನು ಬ್ರಾಹ್ಮಣರಿಗೂ, ಪಿತೃಗಳಿಗೂ ಮತ್ತು ಎಲ್ಲ ಪ್ರಾಣಿಗಳಿಗೂ ಅವರಿಗೆ ಇಷ್ಟವಾದ ಸಮೃದ್ಧವಾದ ಅನ್ನವನ್ನು ನೀಡಿದನು.

ಸಮುದ್ರದ್ವೀಪಶೈಲೇಷು ನದೀನದವನೇಷು ಚ ।
ನಗರೇಷು ಚ ರಾಷ್ಟ್ರೇಷು ದಿವಿ ವ್ಯೋಮನಿ ಯೋಽವಸತ್ ॥ ೧೪ ॥

ಅವನು ಸಮುದ್ರ-ದ್ವೀಪ-ಪರ್ವತಗಳಲ್ಲಿಯೂ, ನದೀ-ವನಗಳಲ್ಲಿಯೂ, ನಗರಗಳಲ್ಲಿಯೂ, ರಾಷ್ಟ್ರಗಳಲ್ಲಿಯೂ, ಆಕಾಶದಲ್ಲಿಯೂ, ಅಂತರಿಕ್ಷದಲ್ಲಿಯೂ ವಾಸಮಾಡಿದನು.

ಭೂತಗ್ರಾಮಾ ಬಹುವಿಧಾ ವಿಸ್ಮಿತಾ ಯಜ್ಞಸಂಪದಾ ।
ಗಯಸ್ಯ ಸದೃಶೋ ಯಜ್ವಾ ನಾಸ್ತ್ಯನ್ಯ ಇತಿ ತೇಽಬ್ರುವನ್ ॥ ೧೫ ॥

ಅವನ ಯಜ್ಞದ ವೈಭವವನ್ನು ನೋಡಿ ಬಹುವಿಧವಾದ ಜೀವರೆಲ್ಲರೂ ಆಶ್ಚರ್ಯಗೊಂಡರು. ಗಯನಿಗೆ ಸದೃಶನಾದ ಯಜಮಾನನು ಇನ್ನೊಬ್ಬನು ಇಲ್ಲ ಎಂದು ಅವರು ಮಾತನಾಡಿದರು.

ಷಟಿಂಶದ್ಯೋಜನಾಯಾಮಾ ತ್ರಿಂಶದ್ಯೋಜನವಿಸ್ತೃತಾ ।
ಪಶ್ಚಾತ್ ಪುರಶ್ಚತುರ್ವಿಂಶದ್ ವೇದಿಕಾऽऽಸೀದ್ ಹಿರಣ್ಮಯೀ ।
ಗಯಸ್ಯ ಯಜಮಾನಸ್ಯ ಮುಕ್ತಾವಜ್ರಮಣಿಸ್ಥತಾ ॥ ೧೬ ॥

ಗಯನು ಯಾಗವನ್ನು ಮಾಡುವಾಗ ನಗರದ ಹೊರಭಾಗದಲ್ಲಿ ಅವನ ಯಜ್ಞ ವೇದಿಕೆಯು ಮೂವತ್ತಾರು ಯೋಜನ ಉದ್ದ ಮತ್ತು ಮೂವತ್ತು ಯೋಜನ ಅಗಲವಾಗಿ ಸುವರ್ಣಮಯವಾಗಿದ್ದು, ಮುತ್ತು-ವಜ್ರ ಮೊದಲಾದ ಮಣಿಗಳಿಂದ ತುಂಬಲ್ಪಟ್ಟಿದ್ದಿತು.

ತಾಂ ಪ್ರಾದಾದ್ ಬ್ರಾಹ್ಮಣೇಭ್ಯೋ ವೈ ವಾಸಾಂಸ್ಯಾಭರಣಾನಿ ಚ ।
ಯಥೋಕ್ತಾ ದಕ್ಷಿಣಾಶ್ಚಾನ್ಯಾ ವಿಪ್ರೇಭ್ಯೋ ಭೂರಿದಕ್ಷಿಣಃ ॥ ೧೭ ॥

ಅವನು ಆ ವೇದಿಕೆಯನ್ನು, ವಸ್ತ್ರ ಮತ್ತು ಆಭರಣಗಳನ್ನು ಬ್ರಾಹ್ಮಣರಿಗೆ ದಾನವನ್ನು ಮಾಡಿದನು. ಬಹಳ ದಕ್ಷಿಣೆಯನ್ನು ಕೊಡುವ ಅವನು ಬ್ರಾಹ್ಮಣರಿಗೆ ಶಾಸ್ತ್ರವಿಹಿತವಾದ ಬೇರೆ ದಕ್ಷಿಣೆಯನ್ನೂ ಕೊಟ್ಟನು.

ಯತ್ರ ಭೋಜನಶಿಷ್ಟಸ್ಯ ಪರ್ವತಾಃ ಪಂಚವಿಂಶತಿಃ ।
ಕುಲ್ಯಾಶ್ಚ ಕ್ಷೀರವಾಹಿನ್ಯೋ ರಸಾನಾಂ ಚಾಭವಂಸ್ತದಾ ॥ ೧೮ ॥

ವಸ್ತ್ರಾಭರಣಗಂಧಾನಾಂ ರಾಶಯಶ್ಚ ಪೃಥಗ್ವಿಧಾಃ ॥ ೧೯ ॥

ಅವನು ಯಜ್ಞವನ್ನು ಮಾಡಿದ ಮೇಲೆ, ಎಲ್ಲರ ಭೋಜನವಾದ ಮೇಲೆ ಉಳಿದ ಪರ್ವತಪ್ರಾಯವಾದ ಭಕ್ಷ್ಯಾದಿ ರಾಶಿಗಳು ಇಪ್ಪತ್ತೈದು ಇದ್ದವು. ಅಲ್ಲಿ ಕ್ಷೀರ ಮೊದಲಾದವುಗಳನ್ನು ಹೊಂದಿದ ನದಿಗಳು ಮತ್ತು ಸರೋವರಗಳು ಇದ್ದವು. ವಸ್ತ್ರಾಭರಣ ಪರಿಮಳ ದ್ರವ್ಯಗಳ ರಾಶಿಗಳು ಬೇರೆ ಇದ್ದವು.

ಯಸ್ಯ ಪ್ರಸಾದಾಚ್ಚ ಗಯಸ್ತ್ರಿಷು ಲೋಕೇಷು ವಿಶ್ರುತಃ ।
ವಟಶ್ಚಾಕ್ಷಯ್ಯಕರಣಃ ಪುಣ್ಯಂ ಬ್ರಹ್ಮಸರಶ್ಚ ತತ್ ॥ ೨೦ ॥

ಅಗ್ನಿದೇವನ ಪ್ರಸಾದದಿಂದ ಗಯನು ಮೂರು ಲೋಕಗಳಲ್ಲಿಯೂ ವಿಶ್ರುತವಾದ ಅಕ್ಷಯವಟವನ್ನೂ ಮತ್ತು ಪವಿತ್ರವಾದ ಬ್ರಹ್ಮಸರೋವರವನ್ನೂ ಪಡೆದನು.

ಸ ಚೇನ್ಮಮಾರ ಸೃಂಜಯ ಚತುರ್ಭದ್ರತರಸ್ತ್ವಯಾ ॥ ೨೧ ॥

ಪುತ್ರಾತ್ ಪುಣ್ಯತಮಸ್ತುಭ್ಯಂ ಮಾ ಪುತ್ರಮನುತಪ್ಯಥಾಃ ।
ಅಯಜ್ವಾನಮದಕ್ಷಿಣ್ಯಮಧಿಚ್ಛೈತ್ಯೇತ್ಯುದಾಹರತ್ ॥ ೨೨ ॥

ಎಲೈ ಸೃಂಜಯನೇ, ನಿನಗಿಂತ ನಾಲ್ಕು ಪಟ್ಟು ಶ್ರೇಷ್ಠನಾದ ಅವನೂ, ನಿನ್ನ ಪುತ್ರನಿಗಿಂತಲೂ ಶ್ರೇಷ್ಠನಾದ ಅವನ ಪುತ್ರನೂ ಮರಣವನ್ನು ಹೊಂದಿದ ಮೇಲೆ, ಎಲೈ ಜ್ಞಾನಿಶ್ರೇಷ್ಠನೇ, ಯಾಗಗಳನ್ನು ಮಾಡದಿರುವ, ದಕ್ಷಿಣೆಯನ್ನು ಕೊಡದ ನಿನ್ನ ಪುತ್ರನ ವಿಷಯದಲ್ಲಿ ಶೋಕಪಡಬೇಡ ಎಂದು ಹೇಳಿದರು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ತ್ರಿಷಷ್ಟಿತಮೋऽಧ್ಯಾಯಃ ॥

॥ ಅಭಿಮನ್ಯುವಧಪರ್ವಣಿ ದ್ವಾತ್ರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಅರವತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಅರವತ್ನಾಲ್ಕನೆಯ ಅಧ್ಯಾಯ

ಷೋಡಶರಾಜೋಪಾಖ್ಯಾನದಲ್ಲಿ ರಂತಿದೇವನ ಚರಿತೆ

ನಾರದಃ

ಸಾಂಕೃತಿಂ ರಂತಿದೇವಂ ಚ ಮೃತಂ ಸೃಂಜಯ ಶುಶ್ರುಮ ।
ಯಸ್ಯ ವಿಂಶತಿಸಾಹಸ್ರಾ ಆಸನ್ ಸೂದಾ ಮಹಾತ್ಮನಃ ॥ ೧ ॥

ನಾರದರು– ಎಲೈ ಸೃಂಜಯನೇ, ಸಂಕೃತಿಪುತ್ರನಾದ ರಂತಿದೇವನೂ ಮರಣ ಹೊಂದಿದನೆಂದು ನಾವು ಕೇಳಿದ್ದೇವೆ. ಮಹಾತ್ಮನಾದ ಅವನ ಅಡುಗೆಯ ಮನೆಯಲ್ಲಿ ಇಪ್ಪತ್ತು ಸಾವಿರ ಪಾಚಕರಿದ್ದರು.

ಗೃಹಾನಭ್ಯಾಗತಾನ್ ವಿಪ್ರಾನತಿಥೀನ್ ಪರಿವೇಷಕಾಃ ।
ಪಕ್ವಂ ಪಕ್ವಂ ದಿವಾರಾತ್ರಂ ವರಾನ್ನಮಮೃತೋಪಮಮ್ ॥ ೨ ॥

ಮನೆಗೆ ಬಂದ ಅತಿಥಿಗಳಿಗೆ ಮತ್ತು ಬ್ರಾಹ್ಮಣರಿಗೆ ಬಡಿಸುವವರು ಅಮೃತದಂತಹ ಶ್ರೇಷ್ಠವಾದ ಪಕ್ವಾನ್ನವನ್ನು ಬಡಿಸುತ್ತಿದ್ದರು.

ನ್ಯಾಯೇನಾಧಿಗತಂ ವಿತ್ತಂ ಯೇನಾಕ್ಷಯ್ಯಂ ನಗೋಪಮಮ್ ।
ವೇದಾನಧೀತ್ಯ ಧರ್ಮೇಣ ಯಶ್ಚಕ್ರೇ ದ್ವಿಜತಾವಶೇ ॥ ೩ ॥

ಅವನು ನ್ಯಾಯ ಮಾರ್ಗದಿಂದಲೇ ಪರ್ವತದಂತೆ ಉನ್ನತವಾದ, ಅಕ್ಷಯವಾದ ಧನರಾಶಿಯನ್ನು ಸಂಪಾದಿಸಿದನು. ವೇದಗಳನ್ನು ಅಧ್ಯಯನ ಮಾಡಿ ಆ ಧನರಾಶಿ ಎಲ್ಲವನ್ನೂ ಬ್ರಾಹ್ಮಣರ ವಶವನ್ನಾಗಿ ಮಾಡಿದನು.

ಉಪಸ್ಥಿತಾಶ್ಚ ಪಶವಃ ಸ್ವಯಂ ಯಂ ಸಂಶಿತವ್ರತಮ್ ।
ಬಹವಃ ಸ್ವರ್ಗಮಿಚ್ಛಂತೋ ವಿಧಿವತ್ ಸತ್ರಯಾಜಿನಮ್ ॥ ೪ ॥

ಒಳ್ಳೆಯ ವ್ರತಶೀಲನಾದ ಅವನು ಸತ್ರಾದಿ ಯಾಗವನ್ನು ವಿಧಿಪೂರ್ವಕವಾಗಿ ಮಾಡುವಾಗ ಸ್ವರ್ಗವನ್ನು ಬಯಸಿದ ಪಶುಗಳು ತಾವಾಗಿಯೇ ಬಂದು ನಿಲ್ಲುತ್ತಿದ್ದವು.

ನದೀ ಮಹಾನಸಾದ್ಯಸ್ಯ ಪ್ರವೃತ್ತಾ ಚರ್ಮರಾಶಿಭಿಃ ।
ತಸ್ಮಾಚ್ಚರ್ಮಣ್ವತೀ ನಾಮ ಖ್ಯಾತಾ ಪುಣ್ಯಾ ಸರಿದ್ವರಾ ॥ ೫ ॥

ಮಹಾನಸದಿಂದ (ಅಡುಗೆ ಮನೆಯಿಂದ) ಹೊರಟ ಪ್ರಾಣಿಗಳ ಚರ್ಮಗಳ ರಾಶಿಯು ನದಿಯಾಗಿ ಹರಿದು ಚರ್ಮಣ್ವತೀ ಎಂಬ ಪುಣ್ಯಪ್ರದವಾದ ಶ್ರೇಷ್ಠವಾದ ನದಿಯಾಯಿತು. ಬ್ರಾಹ್ಮಣರಿಗೆ ಸುವರ್ಣನಿಷ್ಕಗಳನ್ನು ದಾನ ಮಾಡಿದನು.

ಬ್ರಾಹ್ಮಣೇಭ್ಯೋಽದದಾನ್ನಿಷ್ಕಾನ್ ಬ್ರಾಹ್ಮಣೇಭ್ಯಃ ಪ್ರತಾಮ್ಯತಿ ।
ತುಭ್ಯಂ ನಿಷ್ಕಂ ತವ ನಿಷ್ಕಮಿತಿ ಸಂಪ್ರತಿಭಾಷತೇ ॥ ೬ ॥

ಬ್ರಾಹ್ಮಣರಿಗೆ ದುಃಖವಾದರೆ ಸಂತಾಪಪಡುತ್ತಿದ್ದನು. ನಿನಗೆ ಈ ನಿಷ್ಕ, ನಿನಗೆ ಈ ನಿಷ್ಕ ಎಂದು ಹೇಳುತ್ತಾ ಸುವರ್ಣನಿಷ್ಕಗಳನ್ನು ಕೊಡುತ್ತಿದ್ದನು.

ತುಭ್ಯಂ ತುಭ್ಯಮಿತಿ ಪ್ರಾದಾನ್ನಿಷ್ಕಾನ್ ನಿಷ್ಕಾನ್ ಸಹಸ್ರಶಃ ।
ತತಃ ಪುನಃ ಸಮಾಶ್ವಾಸ್ಯ ನಿಷ್ಕಾನೇವ ಪ್ರಯಚ್ಛತಿ ॥ ೭ ॥

ನಿನಗೆ, ನಿನಗೆ ಎಂದು ಹೇಳಿ ಸಹಸ್ರ ಸಂಖ್ಯೆಯ ನಿಷ್ಕಗಳನ್ನು ಕೊಟ್ಟನು. ಸ್ವಲ್ಪ ಸುಧಾರಿಸಿಕೊಂಡು ಪುನಃ ನಿಷ್ಕಗಳನ್ನು ಕೊಡುತ್ತಿದ್ದನು.

ಅಲ್ಪಂ ದತ್ತಂ ಮಯಾऽದ್ಯೇತಿ ನಿಷ್ಕಕೋಟಿಂ ಪ್ರದಾಯ ಸಃ ।
ಏಕಾಹ್ನಾ ತಾಮ್ಯತಿ ತತಃ ಕಾದ್ಯ ವಿಪ್ರಾ ಇತಿ ಬ್ರುವನ್ ॥ ೮ ॥

ದ್ವಿಜಪಾಣಿವಿಯೋಗೇನ ದುಃಖಂ ಮೇ ಶಾಶ್ವತಂ ಮಹತ್ ।
ಭವಿಷ್ಯತಿ ನ ಸಂದೇಹ ಏವಂ ರಾಜಾ ದದದ್ ವಸು ॥ ೯ ॥

ಒಂದು ದಿನದಲ್ಲಿ ಒಂದು ಕೋಟಿ ನಿಷ್ಕಗಳನ್ನು ಕೊಟ್ಟು, ಈ ದಿನ ನಾನು ಅಲ್ಪವನ್ನೇ ಕೊಟ್ಟಿದ್ದೇನೆ ಎಂದು ಸಂತಾಪಪಡುತ್ತಿದ್ದನು. ಅನಂತರವೂ ಈ ದಿನ ಪ್ರತಿಗ್ರಹಿಸುವ ಬ್ರಾಹ್ಮಣರು ಎಲ್ಲಿ ಎಂದು ಕೇಳುತ್ತಿದ್ದನು. ದ್ವಿಜರ ಪಾಣಿಯ ಮೇಲೆ ಪಾಣಿಯಿಟ್ಟು ದಾನ ಮಾಡದಿದ್ದರೆ ನನಗೆ ಶಾಶ್ವತವಾದ ದೊಡ್ಡ ದುಃಖವುಂಟಾಗುವುದರಲ್ಲಿ ಸಂದೇಹವಿಲ್ಲ ಎಂದು ಹೇಳುತ್ತಾ ರಾಜನು ಧನವನ್ನು ಕೊಡುತ್ತಿದ್ದನು.

ಸಹಸ್ರಶಶ್ಚ ಸೌವರ್ಣಾನ್ ವೃಷಭಾನ್ ಗೋಶತಾನುಗಾನ್ ।
ಅಧ್ಯರ್ಧಮಾಸಮದದಾದ್ ಬ್ರಾಹ್ಮಣೇಭ್ಯಃ ಶತಂ ಸಮಾಃ ॥ ೧೦ ॥

ಅವನು ನಲವತ್ತೈದು ದಿವಸಗಳ ಒಂದು ಕಾಲಪರಿಮಿತಿಯನ್ನು ಇಟ್ಟುಕೊಂಡು ಸುವರ್ಣಾಲಂಕೃತವಾದ ವೃಷಭಗಳನ್ನೂ, ಒಂದೊಂದು ವೃಷಭದ ಹಿಂದೆ ನೂರು ಗೋವುಗಳನ್ನೂ ಬ್ರಾಹ್ಮಣರಿಗೆ ನೂರು ವರ್ಷಗಳ ಕಾಲ ದಾನ ಮಾಡಿದನು.

ಅಗ್ನಿಹೋತ್ರೋಪಕರಣಂ ದ್ರವ್ಯೋಪಕರಣಂ ಚ ಯತ್ ।
ಪಾತ್ರಂ ಶರಾವಕಂ ಭಾಂಡಂ ಸ್ಥಾಲೀಃ ಪಿಠರಮೇವ ಚ ॥ ೧೧ ॥

ಶಯನಾಸನಯಾನಾನಿ ಪ್ರಾಸಾದಾಂಶ್ಚ ಗೃಹಾಣಿ ಚ ।
ಸೂಕ್ಷ್ಮಭಾಂಡಾಶ್ಚ ವಿವಿಧಾ ದೃಶ್ಯಾನ್ಯನುಪಮಾನಿ ಚ ।
ಸರ್ವಂ ಸೌವರ್ಣಮೇವಾಸೀದ್ ರಂತಿದೇವಸ್ಯ ಧೀಮತಃ ॥ ೧೨ ॥

ಅಗ್ನಿಹೋತ್ರದ ಸಲಕರಣೆಗಳು, ಯಜ್ಞದ ಸಲಕರಣೆಗಳು, ಮಡಕೆ ಮುಂತಾದ ಪಾತ್ರೆಗಳು, ಚರುವನ್ನು ಮಾಡುವ ಸ್ಥಾಲಿ-ಪಿಠರ ಮುಂತಾದ ಪಾತ್ರೆಗಳು, ಶಯನಾಸನ

ವಾಹನಗಳು, ಮನೆಗಳು, ಉಪ್ಪರಿಗೆಗಳು, ಸಣ್ಣ ಪಾತ್ರೆಗಳು, ಅಸದೃಶವಾದ ವಿವಿಧವಾದ ಅಲಂಕಾರ ಸಾಮಗ್ರಿಗಳು ಎಲ್ಲವೂ ಮೇಧಾವಿಯಾದ ರಂತಿದೇವನಿಗೆ ಸುವರ್ಣಮಯವೇ ಆಗಿದ್ದಿತು.

ತತ್ರ ಸ್ಮ ಗಾಥಾ ಗಾಯಂತಿ ಯೇ ಪುರಾಣವಿದೋ ಜನಾಃ ।
ರಂತಿದೇವಸ್ಯ ತಾಂ ದೃಷ್ಟ್ವಾ ಸಮೃದ್ಧಿಮತಿಮಾನುಷೀಮ್ ॥ ೧೩ ॥

ನೈತಾದೃಶಂ ದೃಷ್ಟಪೂರ್ವಂ ಕುಬೇರಸದನೇಷ್ವಪಿ ।
ಧನಂ ಚಾಪೂರ್ಯಮಾಣಂ ತತ್ ಕಿಂ ಪುನರ್ಮಾನುಷೇಷ್ವಿತಿ ॥ ೧೪ ॥

ಪುರಾಣವನ್ನು ತಿಳಿದ ಜನರು ರಂತಿದೇವನ ಅತಿಮಾನುಷವಾದ ಸಂಪತ್ತನ್ನು ನೋಡಿ, ಈ ವಿಷಯದಲ್ಲಿ ಕುಬೇರನ ಮನೆಯಲ್ಲಿಯೂ ಇಂತಹ ಸಂಪತ್ತು ಹರಿದು ಬರುವುದನ್ನು ಹಿಂದೆ ನೋಡಲಿಲ್ಲ. ಇನ್ನು ಮನುಷ್ಯರಲ್ಲಿ ಇಂತಹ ಸಂಪತ್ತು ಎಲ್ಲಿಂದ ಬರಬೇಕು ಎಂದು ಗಾನವನ್ನು ಮಾಡುತ್ತಾರೆ.

ವ್ಯಕ್ತಂ ವಸ್ವೋಕಸಾರೇಯಮಿತ್ಯೂಚುಸ್ತಸ್ಯ ವಿಸ್ಮಿತಾಃ ॥ ೧೫ ॥

ವಿಸ್ಮಿತರಾದ ಜನರು ಇದು ಸ್ಪಷ್ಟವಾಗಿ ವಸ್ವೋಕಸಾರ ಎಂದು ಹೇಳುತ್ತಿದ್ದರು.

ಸಾಂಕೃತೇ ರಂತಿದೇವಸ್ಯ ಯಾಂ ರಾತ್ರಿಮತಿಥಿರ್ವಸೇತ್ ।
ಅಲಭ್ಯಂತ ತದಾ ಗಾವಃ ಸಹಸ್ರಾಣ್ಯೇಕವಿಂಶತಿಃ ॥ ೧೬ ॥

ರಂತಿದೇವನ ಮನೆಯಲ್ಲಿ ಅತಿಥಿಗಳು ವಾಸವನ್ನು ಮಾಡಿದರೆ ಆ ರಾತ್ರಿಯಲ್ಲಿ ಇಪ್ಪತ್ತೊಂದು ಸಾವಿರ ಪಶುಗಳು ವಧಿಸಲ್ಪಡುತ್ತಿದ್ದವು.

ತತ್ರ ಸ್ಮ ಸೂದಾಃ ಕ್ರೋಶಂತಿ ಸುಮೃಷ್ಟಮಣಿಕುಂಡಲಾಃ ।
ಸೂಪಭೂಯಿಷ್ಠಮಶ್ನೀತ ನಾದ್ಯ ಮಾಂಸಂ ಯಥಾಪುರಮ್ ॥ ೧೭ ॥

ಅಲ್ಲಿ ಒಳ್ಳೆಯ ಮಣಿಕುಂಡಲವನ್ನು ಧರಿಸಿದ ಪಾಚಕರು ಈ ದಿನ ಸೂಪಭೂಯಿಷ್ಠವಾದ ಭೋಜನವಿದೆ. ಹಿಂದಿನಂತೆ ಮಾಂಸವಿಲ್ಲ ಎಂದು ಗಟ್ಟಿಯಾಗಿ ಕಿರುಚುತ್ತಿದ್ದರು.

ರಂತಿದೇವಸ್ಯ ಯತ್ ಕಿಂಚಿತ್ ಸೌವರ್ಣಮಭವತ್ ತದಾ ।
ತತ್ ಸರ್ವಂ ವಿತತೇ ಯಜ್ಞೇ ಬ್ರಾಹ್ಮಣೇಭ್ಯೋ ಹ್ಯಮನ್ಯತ ॥ ೧೮ ॥

ರಂತಿದೇವನ ಬಳಿಯಲ್ಲಿ ಏನು ಸುವರ್ಣವಿದ್ದಿತೋ ಅದೆಲ್ಲವನ್ನೂ ವಿಸ್ತಾರವಾದ ಯಜ್ಞದಲ್ಲಿ ಬ್ರಾಹ್ಮಣರಿಗೆ ದಾನ ಮಾಡಿದನು.

ಪ್ರತ್ಯಕ್ಷಂ ತಸ್ಯ ಹವ್ಯಾನಿ ಪ್ರತಿಗೃಹ್ಣಂತಿ ದೇವತಾಃ ।
ಕವ್ಯಾನಿ ಪಿತರಃ ಕಾಲೇ ಸರ್ವಾನ್ ಕಾಮಾನ್ ದ್ವಿಜೋತ್ತಮಾಃ ।

ಅವನು ಯಜ್ಞದಲ್ಲಿ ಕೊಟ್ಟ ಹವಿಸ್ಸನ್ನು ದೇವತೆಗಳು ಪ್ರತ್ಯಕ್ಷವಾಗಿ ಸ್ವೀಕರಿಸುತ್ತಿದ್ದರು. ಶ್ರಾದ್ಧಕಾಲದಲ್ಲಿ ಕವ್ಯಗಳನ್ನು ಪಿತೃಗಳು ಪ್ರತ್ಯಕ್ಷವಾಗಿ ಸ್ವೀಕರಿಸುತ್ತಿದ್ದರು. ಬ್ರಾಹ್ಮಣಶ್ರೇಷ್ಠರು ತಮ್ಮ ಎಲ್ಲಾ ಕಾಮಗಳನ್ನೂ ಹೊಂದಿದರು.

ಸ ಚೇನ್ಮಮಾರ ಸೃಂಜಯ ಚತುರ್ಭದ್ರತರಸ್ತ್ವಯಾ ॥ ೧೯ ॥

ಪುತ್ರಾತ್ ಪುಣ್ಯತರಸ್ತುಭ್ಯಂ ಮಾ ಪುತ್ರಮನುತಪ್ಯಥಾಃ ।
ಅಯಜ್ವಾನಮದಕ್ಷಿಣ್ಯಮಧಿಚ್ಛೈತ್ಯೇತ್ಯುದಾಹರತ್ ॥ ೨೦ ॥

ಎಲೈ ಸಂಜಯನೇ, ನಿನಗಿಂತ ನಾಲ್ಕುಪಟ್ಟು ಶ್ರೇಷ್ಠನಾದ ಅವನೂ, ನಿನ್ನ ಪುತ್ರನಿಗಿಂತಲೂ ಶ್ರೇಷ್ಠನಾದ ಅವನ ಪುತ್ರನೂ ಮರಣವನ್ನು ಹೊಂದಿದರು ಎಂದ ಮೇಲೆ, ಎಲೈ ಜ್ಞಾನಿಶ್ರೇಷ್ಠನೇ, ಯಾಗವನ್ನು ಮಾಡದ, ದಕ್ಷಿಣೆಗಳನ್ನು ಕೊಡದ ನಿನ್ನ ಪುತ್ರನ ವಿಷಯದಲ್ಲಿ ಸಂತಾಪವನ್ನು ಪಡಬೇಡ ಎಂದು ಹೇಳಿದರು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಚತುಃಷಷ್ಟಿತಮೋऽಧ್ಯಾಯಃ ॥

॥ ಅಭಿಮನ್ಯುವಧಪರ್ವಣಿ ತ್ರಯಸ್ತ್ರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಅರವತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಅರವತ್ತೈದನೆಯ ಅಧ್ಯಾಯ

ಷೋಡಶರಾಜೋಪಾಖ್ಯಾನದಲ್ಲಿ ಭರತನ ಚರಿತೆ

ನಾರದಃ

ದೌಷ್ಯಂತಿಂ ಭರತಂ ಚಾಪಿ ಮೃತಂ ಸೃಂಜಯ ಶುಶ್ರುಮ ।
ಕರ್ಮಾಣ್ಯಸುಕರಾಣ್ಯನ್ಯೈ ಃ ಕೃತವಾನ್ ಯಃ ಶಿಶುರ್ವನೇ ॥ ೧ ॥

ನಾರದರು– ಎಲೈ ಸೃಂಜಯನೇ, ದುಷ್ಮಂತನ ಮಗನಾದ ಭರತ ಚಕ್ರವರ್ತಿಯೂ ಮೃತನಾದನೆಂದು ನಾವು ಕೇಳಿದ್ದೇವೆ. ಅವನು ಕಾಡಿನಲ್ಲಿ ಬೇರೆಯವರು ಮಾಡಲು ಅಸಾಧ್ಯವಾದ ಕಾರ್ಯಗಳನ್ನು ಶಿಶುವಾಗಿದ್ದಾಗಲೇ ಮಾಡಿದನು.

ಹಿಮಾವದಾತಾನ್ ಯಃ ಸಿಂಹಾನ್ ನಖದಂಷ್ಟ್ರಾಯುಧಾನ್ ಬಲೀ ।
ನಿರ್ವೀರ್ಯಾಂಸ್ತರಸಾ ಕೃತ್ವಾ ವಿಚಕರ್ಷ ಬಬಂಧ ಚ ॥ ೨ ॥

ಹಿಂಸಾಶೀಲವಾದ (ಹಿಮದಂತೆ ಬಿಳಿಯ ಬಣ್ಣವುಳ್ಳ) ನಖದಂಷ್ಟ್ರಾಯುಧಗಳುಳ್ಳ ಸಿಂಹಗಳನ್ನು ಬಲಿಷ್ಠನಾದ ಅವನು ಶೀಘ್ರವಾಗಿ ಸಾಮರ್ಥ್ಯಹೀನಗಳನ್ನಾಗಿ ಮಾಡಿ ಎಳೆದಾಡಿ ಬಂಧಿಸಿದನು.

ಕ್ರೂರಾಂಶ್ಚೋಗ್ರಬಲಾನ್ ವ್ಯಾಘ್ರಾನ್ ದಮಯಿತ್ವಾವಕರೋದ್ ವಶೇ ।
ಮನಃಶಿಲಾಸಮಾಯುಕ್ತಾನ್ ಸ್ವಾನ್ ಕೃತ್ವಾಂಜನಕಾಶಿನಃ ॥ ೩ ॥

ಕ್ರೂರವಾದ ಮತ್ತು ಉಗ್ರವಾದ ಬಲವುಳ್ಳ ವ್ಯಾಘ್ರಗಳನ್ನು ಪಳಗಿಸಿ ವಶಪಡಿಸಿಕೊಂಡು ಅವುಗಳಿಗೆ ಧಾತು ರಸಗಳನ್ನೂ ಮತ್ತು ಅಂಜನಗಳನ್ನೂ ಬಳಿದು ತನ್ನವುಗಳನ್ನಾಗಿ ಮಾಡಿಕೊಂಡನು.

ವ್ಯಾಲಾನ್ ದ್ವಿಪಾಂಶ್ಚಾತಿಬಲಾನ್ ತ್ರಿಪ್ರಭಿನ್ನಾನ್ ಘನೋಪಮಾನ್ ।
ಕ್ರೀಡಮಾನಃ ಸುಸಂಕ್ರುದ್ಧೋ ದಮಯಿತ್ವಾ ವಿಮುಂಚತಿ ॥ ೪ ॥

ಅತಿಬಲಿಷ್ಠವಾದ ಮೇಘ ರಾಶಿಯಂತೆ ತೋರುತ್ತಿದ್ದ ಗಜಗಳನ್ನೂ ಮತ್ತು ಮೂರು ಧಾರೆಗಳಲ್ಲಿ ಮದೋದಕವನ್ನು ಸುರಿಸುವ ಮದಗಜಗಳನ್ನೂ ಹಿಡಿದು ಆಟವಾಡುತ್ತಾ ಕ್ರೋಧದಿಂದ ಅವುಗಳನ್ನು ಪಳಗಿಸಿ ಪುನಃ ಬಿಡುತ್ತಿದ್ದನು.

ಸುವರ್ಷ್ಣಾಂ ಮನ್ಯುಮತಾಂ ಬಲಿನಾಂ ಯುದ್ಧಶಾಲಿನಾಮ್ ।
ಮಹಿಷಾಣಾಂ ಸುಶೃಂಗಾಣಾಂ ಶತಾನ್ಯದಮಯದ್ ಬಲಾತ್ ॥ ೫ ॥

ಒಳ್ಳೆಯ ದೇಹವನ್ನು ಹೊಂದಿದ, ಸಿಟ್ಟಿನಿಂದ ಕೂಡಿದ, ಹೋರಾಟದಲ್ಲಿ ನಿರತವಾದ, ಒಳ್ಳೆಯ ಕೊಂಬುಗಳನ್ನು ಹೊಂದಿದ, ಬಲಿಷ್ಠವಾದ ನೂರು ಕಾಡು ಕೋಣಗಳನ್ನು ತನ್ನ ಸಾಮರ್ಥ್ಯದಿಂದ ಪಳಗಿಸಿದನು.

ಶರಭಾನ್ ಸೃಮರಾನ್ ಖಡ್ಗಾನ್ ನಾನಾಸತ್ತ್ವಾನಿ ಚಾಪ್ಯಥ ।
ಕೃಚ್ಛ್ರಪ್ರಾಣಾನ್ ವನೇ ಬದ್ಧ್ವಾ ದಮಯಿತ್ವಾಽಪ್ಯವಾಸೃಜತ್ ।
ತಂ ಸರ್ವದಮನೇತ್ಯಾಹುಃ ತದ್ವಿದಸ್ತೇನ ಕರ್ಮಣಾ ॥ ೬ ॥

ಶರಭಗಳು, ಚಮರಿ ಮೃಗಗಳು, ಖಡ್ಗ ಮೃಗಗಳು ಮೊದಲಾದ ನಾನಾ ವಿಧ ಪ್ರಾಣಿಗಳನ್ನು ಅವುಗಳಿಗೆ ಪ್ರಾಣಸಂಕಟ ಉಂಟಾಗುವವರೆಗೆ ಕಾಡಿನಲ್ಲಿ ಬಂಧಿಸಿ, ಪಳಗಿಸಿ ಅನಂತರ ಬಿಡುತ್ತಿದ್ದನು. ಅದನ್ನು ತಿಳಿದವರು ಅವನು ಮಾಡುತ್ತಿದ್ದ ಕಾರ್ಯಗಳ ನಿಮಿತ್ತದಿಂದಾಗಿ ಅವನನ್ನು ಸರ್ವದಮನ ಎಂದು ಕರೆದರು.

ತಂ ಪ್ರತ್ಯಷೇಧಜ್ಜನನೀ ಮಾ ಸತ್ತ್ವಾನಿ ವ್ಯನೀನಶಃ ॥ ೭ ॥

ಅವನ ತಾಯಿಯು, ಪ್ರಾಣಿಗಳನ್ನು ಹೀಗೆ ನಾಶಗೊಳಿಸಬೇಡ ಎಂದು ಅವನನ್ನು ಪ್ರತಿಷೇಧಿಸಿದಳು.

ಸೋಽಶ್ವಮೇಧಶತೇನೇಜೇ ಯಮುನಾಮನು ವೀರ್ಯವಾನ್ ।
ತ್ರಿಂಶತಾ ಚ ಸರಸ್ವತ್ಯಾ ಗಂಗಾಮನು ಚತುಃಶತೈಃ ॥ ೮ ॥

ಪರಾಕ್ರಮಶಾಲಿಯಾದ ಅವನು ಯಮುನಾದಡದಲ್ಲಿ ನೂರು ಅಶ್ವಮೇಧ ಯಾಗಗಳನ್ನು ಮಾಡಿದನು. ಸರಸ್ವತಿ ನದಿಯ ಸಮೀಪದಲ್ಲಿ ಮೂವತ್ತು ಅಶ್ವಮೇಧ ಯಾಗಗಳನ್ನೂ, ಗಂಗೆಯ ಸಮೀಪದಲ್ಲಿ ನಾಲ್ಕುನೂರು ಅಶ್ವಮೇಧ ಯಾಗಗಳನ್ನೂ ಮಾಡಿದನು.

ಸೋಽಶ್ವಮೇಧಸಹಸ್ರೇಣ ರಾಜಸೂಯಶತೇನ ಚ ।
ಪುನರೀಜೇ ಮಹಾಯಜ್ಞೈಃ ಸಮಾಪ್ತವರದಕ್ಷಿಣೈಃ ॥ ೯ ॥

ಅವನು ಪುನಃ ಮಹಾದಕ್ಷಿಣೆಯುಳ್ಳ ಸಹಸ್ರ ಅಶ್ವಮೇಧ ಯಾಗಗಳೂ, ನೂರು ರಾಜಸೂಯ ಯಾಗಗಳೂ ಮತ್ತು ಇನ್ನೂ ಅನೇಕ ಯಾಗಗಳನ್ನೂ ಮಾಡಿದನು.

ಅಗ್ನಿಷ್ಟೋಮಾತಿರಾತ್ರಾಣಾಮುಕ್ಥ್ಯವಿಶ್ವಜಿತಾಂ ಚ ಸಃ ।
ಚಾತುರ್ಮಾಸ್ಯೇಷ್ಟಿಸತ್ರಾಣಾಂ ಸಹಸ್ರೈಶ್ಚ ಸುಸಮ್ಮತೈಃ ॥ ೧೦ ॥

ಅಗ್ನಿಷ್ಟೋಮ, ಅತಿರಾತ್ರ, ಉಕ್ಥ್ಯ, ವಿಶ್ವಜಿತ್, ಚಾತುರ್ಮಾಸ್ಯ, ಸತ್ರ ಮೊದಲಾದ ಇಷ್ಟಿಗಳನ್ನು ಮತ್ತು ಯಾಗಗಳನ್ನು ಶಾಸ್ತ್ರಸಮ್ಮತವಾದ ರೀತಿಯಲ್ಲಿ ಸಹಸ್ರ ಸಂಖ್ಯೆಯಲ್ಲಿ ಮಾಡಿದನು.

ಇಷ್ಟ್ವಾ ಶಾಕುಂತಲೋ ರಾಜಾ ತರ್ಪಯಿತ್ವಾ ದ್ವಿಜಾನ್ ಧನೈಃ ।
ಸಹಸ್ರಂ ಯತ್ರ ಪದ್ಮಾನಾಂ ಕರ್ಣಾಯ ಭರತೋ ದದೌ ।
ಜಾಂಬೂನದಸ್ಯ ಶುದ್ಧಸ್ಯ ಕನಕಸ್ಯ ಮಹಾಯಶಾಃ ॥ ೧೧ ॥

ಶಕುಂತಲೆಯ ಪುತ್ರನಾದ ಭರತ ಚಕ್ರವರ್ತಿಯು ಹೀಗೆ ಯಾಗವನ್ನು ಮಾಡಿ, ದ್ವಿಜರನ್ನು ದಕ್ಷಿಣೆಗಳಿಂದ ಸಂತೋಷಪಡಿಸಿ, ಮಹಾಕೀರ್ತಿವಂತನಾದ ಅವನು ಕರ್ಣರಿಗೆ ಶುದ್ಧಚಿನ್ನದಿಂದ ಮಾಡಿದ ಸಹಸ್ರ ಪದ್ಮನಿಷ್ಕಗಳನ್ನು ದಾನ ಮಾಡಿದನು.

ಯಸ್ಯ ಯೂಪಾಃ ಶತವ್ಯಾಮಾಃ ಪರಿಣಾಹೇನ ಕಾಂಚನಾಃ ।
ಸಹಸ್ರವ್ಯಾಮಮುದ್ವಿದ್ಧಾಃ ಸೈಂದ್ರೈರ್ದೇವೈಃ ಸಮುಚ್ಛ್ರಿತಾಃ ॥ ೧೨ ॥

ಅವನ ಯಾಗದ ಸುವರ್ಣಮಯವಾದ ಯೂಪಗಳು (ಬಲಿಗಂಬಗಳು) ನೂರು ಮಾರು ಸುತ್ತಳತೆಯನ್ನು ಹೊಂದಿ, ಒಂದು ಸಾವಿರ ಮಾರಿನಷ್ಟು ಎತ್ತರವಾಗಿದ್ದು, ಇಂದ್ರಾದಿ ದೇವತೆಗಳಿಂದ ಮೇಲಕ್ಕೆ ಎತ್ತಲ್ಪಟ್ಟವು.

ಸ್ವಲಂಕೃತಾನ್ ಭ್ರಾಜಮಾನಾನ್ ಸರ್ವರತ್ನಮನೋರಮಾನ್ ।
ಹಿರಣ್ಮಯಾಂಶ್ಚ ದ್ವಿರದಾನ್ ಉಷ್ಟ್ರಾನಶ್ವಾನಜಾವಿಕಾನ್ ॥ ೧೩ ॥

ಚೆನ್ನಾಗಿ ಅಲಂಕೃತವಾದ, ಶೋಭಿಸುವ, ಸರ್ವರತ್ನಗಳಿಂದ ಮನೋಹರವಾದ, ಸುವರ್ಣಮಯವಾದ ಆನೆಗಳನ್ನೂ, ಒಂಟೆಗಳನ್ನೂ, ಅಶ್ವಗಳನ್ನೂ, ಆಡು-ಕುರಿಗಳನ್ನೂ (ಬ್ರಾಹ್ಮಣರಿಗೆ ದಾನ ಮಾಡಿದನು).

ದಾಸೀದಾಸಂ ಧನಂ ಧಾನ್ಯಂ ಗಾಃ ಸವತ್ಸಾಃ ಪಯಸ್ವಿನೀಃ ।
ಗ್ರಾಮಾನ್ ಗೃಹಾಣಿ ಕ್ಷೇತ್ರಾಣಿ ವಿವಿಧಾಂಶ್ಚ ಪರಿಚ್ಛದಾನ್ ॥೧೪॥

ಕೋಟೀಶತಾಯುತಂ ಚೈವ ಬ್ರಾಹ್ಮಣೇಭ್ಯೋ ಹ್ಯಮಂಸತ ।
ಚಕ್ರವರ್ತೀ ಹ್ಯದೀನಾತ್ಮಾ ಜೇತಾ ಯುದ್ಧೇऽಜಿತಃ ಪರೈಃ ॥ ೧೫ ॥

ದಾಸಿಯರು, ದಾಸರು, ಧನ-ಧಾನ್ಯಗಳು, ಹಾಲು ಕರೆಯುವ ವತ್ಸಸಹಿತವಾದ ಗೋವುಗಳು, ಗ್ರಾಮಗಳು, ಗೃಹಗಳು, ಕ್ಷೇತ್ರಗಳು, ವಿವಿಧವಾದ ವಸ್ತ್ರಗಳು ಇವುಗಳನ್ನು ಯುದ್ಧದಲ್ಲಿ ಪರಾಜಿತನಾಗದ, ಎಲ್ಲರನ್ನೂ ಜಯಿಸುವ, ಉನ್ನತವಾದ ಮನಸ್ಸುಳ್ಳ ಚಕ್ರವರ್ತಿಯಾದ ಭರತನು ನೂರಾರು ಕೋಟಿಯ ಸಂಖ್ಯೆಯಲ್ಲಿ ಬ್ರಾಹ್ಮಣರ ಅಧೀನವನ್ನಾಗಿ ಮಾಡಿದನು.

ಸ ಚೇನ್ಮಮಾರ ಸೃಂಜಯ ಚತುರ್ಭದ್ರತರಸ್ತ್ವಯಾ ॥ ೧೬ ॥

ಪುತ್ರಾತ್ ಪುಣ್ಯತರಸ್ತುಭ್ಯಂ ಮಾ ಪುತ್ರಮನುತಪ್ಯಥಾಃ ।
ಅಯಜ್ವಾನಮದಕ್ಷಿಣ್ಯಮಧಿಚೈತ್ಯೇತ್ಯುದಾಹರತ್ ॥ ೧೭ ॥

ಎಲೈ ಸೃಂಜಯನೇ, ನಿನಗಿಂತ ನಾಲ್ಕುಪಟ್ಟು ಶ್ರೇಷ್ಠನಾದ ಅವನೂ, ನಿನ್ನ ಪುತ್ರನಿಗಿಂತಲೂ ಶ್ರೇಷ್ಠನಾದ ಅವನ ಪುತ್ರನೂ ಮರಣವನ್ನು ಹೊಂದಿದರು ಎಂದ ಮೇಲೆ, ಎಲೈ ಜ್ಞಾನಿಶ್ರೇಷ್ಠನೇ, ಯಾಗವನ್ನು ಮಾಡದ, ದಕ್ಷಿಣೆಗಳನ್ನು ಕೊಡದ ನಿನ್ನ ಪುತ್ರನ ವಿಷಯದಲ್ಲಿ ಸಂತಾಪವನ್ನು ಪಡಬೇಡ ಎಂದು ಹೇಳಿದರು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಪಂಚಷಷ್ಟಿತಮೋऽಧ್ಯಾಯಃ ॥

॥ ಅಭಿಮನ್ಯುವಧಪರ್ವಣಿ ಚತುಸ್ತ್ರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಅರವತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಅರವತ್ತಾರನೆಯ ಅಧ್ಯಾಯ

ಷೋಡಶರಾಜೋಪಾಖ್ಯಾನದಲ್ಲಿ ಪೃಥುಚರಿತೆ

ನಾರದಃ

ವೈನ್ಯಂ ಪೃಥುಂ ಚ ರಾಜಾನಂ ಮೃತಂ ಸೃಂಜಯ ಶುಶ್ರುಮ ।
ಯಮಭ್ಯಷಿಂಚನ್ ಸಮ್ಮಂತ್ರ್ಯ ರಾಜಸೂಯೇ ಮಹರ್ಷಯಃ ॥ ೧ ॥

ನಾರದರು– ಎಲೈ ಸೃಂಜಯನೇ, ವೇನಪುತ್ರನಾದ ಪೃಥುರಾಜನೂ ಮೃತನಾದನೆಂದು ಕೇಳಿದ್ದೇವೆ. ಮಹರ್ಷಿಗಳು ಮಂತ್ರಾಲೋಚನೆಯನ್ನು ಮಾಡಿ ರಾಜಸೂಯಯಾಗದಲ್ಲಿ ಅವನಿಗೆ ಅಭಿಷೇಕವನ್ನು ಮಾಡಿದರು.

ಅಯಂ ನಃ ಪ್ರಥಯಿಷ್ಯೇತ ಸರ್ವಾನಿತ್ಯಭವತ್ ಪೃಥುಃ ।
ಕ್ಷತಾನ್ನಸ್ತ್ರಾಸ್ಯತೇ ನಿತ್ಯಮ್ ಇತಿ ಚ ಕ್ಷತ್ರಿಯೋಽಭವತ್ ॥ ೨ ॥

ಇವನು ನಮ್ಮೆಲ್ಲರನ್ನೂ ವಿಸ್ತಾರಗೊಳಿಸುತ್ತಾನೆ ಎಂಬ ವಿವಕ್ಷೆಯಿಂದ ಅವನು ಪೃಥುವೆನಿಸಿದನು. ಗಾಯದಿಂದ (ಕಷ್ಟಗಳಿಂದ) ನಮ್ಮನ್ನು ಯಾವಾಗಲೂ ರಕ್ಷಿಸುವನು ಎಂಬ ಕಾರಣದಿಂದ ಅವನು ಕ್ಷತ್ರಿಯನೆನಿಸಿದನು.

ಪೃಥುಂ ವೈನ್ಯಂ ಪ್ರಜಾ ದೃಷ್ಟ್ವಾ ರಕ್ತಾಃ ಸ್ಮೇತಿ ಯದಬ್ರುವನ್ ।
ತತೋ ರಾಜೇತಿ ನಾಮಾಸ್ಯ ಅನುರಾಗಾದಜಾಯತ ॥ ೩ ॥

ವೇನಪುತ್ರನಾದ ಪೃಥುವನ್ನು ನೋಡಿ ಪ್ರಜೆಗಳು, ನಾವು ನಿನ್ನಲ್ಲಿ ಪ್ರೀತಿಯಿಂದ ಇದ್ದೇವೆ ಎಂದು ಹೇಳಿದರು. ಪ್ರಜೆಗಳ ಅನುರಾಗದಿಂದಾಗಿ ಅವನಿಗೆ ರಾಜ ಎಂಬ ಹೆಸರಾಯಿತು.

ಅಕೃಷ್ಟಪಚ್ಯಾ ಪೃಥಿವೀ ಹ್ಯಾಸೀದ್ ವೈನ್ಯಸ್ಯ ಕಾಮಧುಕ್ ।
ಸರ್ವಾಃ ಕಾಮದುಘಾ ಗಾವಃ ಪುಟಕೇ ಪುಟಕೇ ಮಧು ॥ ೪ ॥

ಪೃಥುಚಕ್ರವರ್ತಿಯ ಕಾಲದಲ್ಲಿ ಭೂಮಿಯು ಉಳದೆಯೇ ಎಲ್ಲಾ ಧಾನ್ಯಗಳನ್ನು ಕೊಡುವುದಾಗಿದ್ದಿತು. ವೃಕ್ಷಗಳ ಎಲ್ಲ ಪೊಟರೆಗಳಲ್ಲಿಯೂ ಜೇನು ತುಂಬಿರುತ್ತಿದ್ದಿತು. ಗೋವುಗಳು ಕೇಳಿದುದನ್ನೆಲ್ಲ ಕೊಡುತ್ತಿದ್ದವು.

ಆಸನ್ ಹಿರಣ್ಮಯಾ ವೃಕ್ಷಾಃ ಸುಖಿಸ್ಪರ್ಶಾಃ ಸುಗಂಧಿನಃ ।
ತೇಷಾಂ ಚೀರಾಣಿ ಸಂವೀತಾಃ ಪ್ರಜಾಸ್ತೇಷ್ವೇವ ಶೇರತೇ ॥ ೫ ॥

ವೃಕ್ಷಗಳು ಒಳ್ಳೆಯ ಗಂಧದಿಂದ ಮತ್ತು ಸುಖಸ್ಪರ್ಶದಿಂದಲೂ ಕೂಡಿ ಸುವರ್ಣಮಯವಾಗಿದ್ದವು. ಅವುಗಳು ನಾರುಮಡಿಗಳನ್ನು ಸುತ್ತುಕೊಂಡಿರುತ್ತಿದ್ದವು. ಪ್ರಜೆಗಳು ಅವುಗಳಲ್ಲಿಯೇ ಮಲಗುತ್ತಿದ್ದರು.

ಫಲಾನ್ಯಮೃತಕಲ್ಪಾನಿ ಮೂಲಾನಿ ಚ ಮಧೂನಿ ಚ ।
ತೇಷಾಮಾಸೀತ್ ತದಾऽऽಹಾರೋ ನಿರಾಹಾರೋऽಪಿ ನಾಭವತ್ ॥

ಫಲಗಳೂ, ಮೂಲಗಳೂ ಮತ್ತು ಮಧುವೂ ಅಮೃತಪ್ರಾಯವಾಗಿದ್ದವು. ಪ್ರಜೆಗಳಿಗೆ ಆಗ ಅವೇ ಆಹಾರವಾಗಿದ್ದವು. ನಿರಾಹಾರರಾದವರು ಯಾರೂ ಇರಲಿಲ್ಲ.

ಅರೋಗಾಃ ಸರ್ವಸಿದ್ಧಾರ್ಥಾ ಮನುಷ್ಯಾ ಅಕುತೋಭಯಾಃ ।
ನಿವಸಂತಿ ಯಥಾಕಾಮಂ ವೃಕ್ಷೇಷು ಚ ಗೃಹೇಷು ಚ ॥ ೭ ॥

ಮನುಷ್ಯರು ಯಾವ ಭಯವೂ ಇಲ್ಲದೆ ಸರ್ವಾಭೀಷ್ಟಗಳೂ ಪೂರ್ಣವಾಗಿ, ಯಾವ ರೋಗವೂ ಇಲ್ಲದೆ ತಮ್ಮ ಮನಸ್ಸಿಗೆ ಬಂದಂತೆ ವೃಕ್ಷಗಳಲ್ಲಿ ಮತ್ತು ಗುಹೆಗಳಲ್ಲಿ ವಾಸಿಸುತ್ತಿದ್ದರು.

ಪ್ರವಿಭಾಗೋ ನ ರಾಷ್ಟ್ರಾಣಾಂ ಪುರಾಣಾಮಭವತ್ ತದಾ ।
ಯಥಾಸುಖಂ ಯಥಾರಮ್ಯಂ ತಥೈವ ಮುದಿತಾಃ ಪ್ರಜಾಃ ॥ ೮ ॥

ಆಗ ರಾಷ್ಟ್ರಗಳು, ಪಟ್ಟಣಗಳು ಎಂಬ ವಿಭಾಗವಿರಲಿಲ್ಲ. ತಮಗೆ ಅನುಕೂಲವಾದಂತೆ, ತಮ್ಮ ಮನಸ್ಸಿಗೆ ಹಿತವಾದಂತೆ ಪ್ರಜೆಗಳು ವಾಸಿಸುತ್ತಾ ಸುಖವಾಗಿದ್ದರು.

ತಸ್ಯ ಸಂಸ್ತಂಭಯನ್ನಾಪಃ ಸಮುದ್ರಮಭಿಯಾಸ್ಯತಃ ।
ಪರ್ವತಾಶ್ಚಾವಲೀಯಂತ ಧ್ವಜಭಂಗಶ್ಚ ನಾಭವತ್ ॥ ೯ ॥

ಸಮುದ್ರದ ಕಡೆಗೆ ಹೊರಟ ಅವನಿಗೆ ಅನುಕೂಲ ಮಾಡಲು ಪರ್ವತಗಳು ನೀರುಗಳನ್ನು ತಡೆದು ಮಳೆಯಾದವು. ಅವನ ರಥದ ಧ್ವಜವು ಭಗ್ನವಾಗಲಿಲ್ಲ.

ತಂ ವನಸ್ಪತಯಃ ಶೈಲಾಃ ದೇವಾಸುರನರೋರಗಾಃ ।
ಸಪ್ತರ್ಷಯಃ ಪುಣ್ಯಜನಾ ಗಂಧರ್ವಾಪ್ಸರಸೋಽಪಿ ಚ ।
ಪಿತರಶ್ಚ ಸುಖಾಸೀನಮಭಿಗಮ್ಯೇದಮಬ್ರುವನ್ ॥ ೧೦ ॥

ಸುಖವಾಗಿ ಆಸೀನನಾದ ಅವನ ಬಳಿಗೆ ವನಸ್ಪತಿಗಳು, ಪರ್ವತಗಳು, ದೇವಾಸುರರು, ಮನುಷ್ಯರು, ಸರ್ಪಗಳು, ಸಪ್ತರ್ಷಿಗಳು, ಪುಣ್ಯಜನರು, ಗಂಧರ್ವರು, ಅಪ್ಸರೆಯರು, ಪಿತೃಗಳು ಎಲ್ಲರೂ ಬಂದು ಹೀಗೆ ಮಾತನಾಡಿದರು.

ಸಮ್ರಾಡಸಿ ಕ್ಷತ್ರಿಯೋಽಸಿ ರಾಜಾ ಗೋಪ್ತಾಽಸಿ ಪಾಹಿ ನಃ ।
ದೇಹ್ಯಸ್ಮಭ್ಯಂ ಮಹಾರಾಜ ಪ್ರಭುಃ ಸನ್ನೀಪ್ಸಿತಾನ್ ವರಾನ್ ॥ ೧೧ ॥

ಯೈರ್ವಯಂ ಶಾಶ್ವತಂ ತೃಪ್ತಾ ವರ್ತಯಿಷ್ಯಾಮಹೇ ಸುಖಮ್ ॥

ನೀನು ಚಕ್ರವರ್ತಿಯಾಗಿದ್ದೀಯೆ. ಕ್ಷತ್ರಿಯನಾಗಿದ್ದೀಯೆ. ರಾಜನಾಗಿದ್ದೀಯೆ. ರಕ್ಷಕನಾಗಿದ್ದೀಯೆ. ನಮ್ಮನ್ನು ರಕ್ಷಿಸು. ಎಲೈ ಮಹಾರಾಜನೇ, ಪ್ರಭುವಾದ ನೀನು ನಮಗೆ ಅಭೀಷ್ಟವಾದ ವರವನ್ನು ಕೊಡು. ಅದರಿಂದ ನಾವು ಶಾಶ್ವತವಾಗಿ, ಸಂತುಷ್ಟರಾಗಿ ಸುಖವಾಗಿ ಜೀವಿಸುವೆವು (ಎಂದು ಹೇಳಿದರು).

ವಿಜ್ಞಾಪಿತಃ ಪ್ರಜಾಭಿಸ್ತು ಪ್ರಜಾನಾಂ ಹಿತಕಾಮ್ಯಯಾ ।
ತಥೇತ್ಯುಕ್ತ್ವಾ ಧನುರ್ಗೃಹ್ಯ ವಸುಧಾಮಾದ್ರವದ್ ಬಲೀ ॥ ೧೩ ॥

ಪ್ರಜೆಗಳಿಂದ ಹೀಗೆ ವಿಜ್ಞಾಪಿಸಲ್ಪಟ್ಟ ಪೃಥುವು, ಪ್ರಜೆಗಳಿಗೆ ಹಿತವನ್ನು ಮಾಡಲು ಬಯಸಿ, ಹಾಗೆಯೇ ಆಗಲಿ ಎಂದು ಧನುಸ್ಸನ್ನು ತೆಗೆದುಕೊಂಡು ಭೂಮಿಯನ್ನು ಬೆನ್ನಟ್ಟಿ ಹೋದನು.

ತತೋ ವೈನ್ಯಭಯಾದ್ ರಾಜನ್ ಗೌರ್ಭೂತ್ವಾ ಪ್ರಾದ್ರವನ್ಮಹೀ ।
ತಾಂ ಪೃಥುರ್ಧನುರಾದಾಯ ದ್ರವಂತೀಮನ್ವಸಾರಯತ್ ॥ ೧೪ ॥

ಎಲೈ ರಾಜನೇ, ಆಗ ಭೂಮಿಯು ಪೃಥುಚಕ್ರವರ್ತಿಯ ಭಯದಿಂದ ಗೋರೂಪವನ್ನು ಧರಿಸಿ ಓಡಿಹೋದಳು. ಪೃಥುವಾದರೂ ಕೈಯಲ್ಲಿ ಧನುಸ್ಸನ್ನು ಹಿಡಿದು ಓಡುತ್ತಿದ್ದ ಅವಳನ್ನು ಹಿಂಬಾಲಿಸಿದನು.

ಸಾ ಲೋಕಾನ್ ಬ್ರಹ್ಮಲೋಕಾದೀನ್ ಗತ್ವಾ ವೈನ್ಯಭಯಾರ್ದಿತಾ ।
ಸಾ ದದರ್ಶಾಗ್ರತೋ ವೈನ್ಯಂ ಕಾರ್ಮುಕೋದ್ಯತಪಾಣಿನಮ್ ॥ ೧೫ ॥

ಭೂಮಿಯು ವೈನ್ಯನ ಭಯದಿಂದ ವ್ಯಥೆಗೊಂಡು, ಬ್ರಹ್ಮಲೋಕಾದಿ ಸಮಸ್ತ ಲೋಕಗಳಿಗೆ ಹೋದರೂ ಕೈಯಲ್ಲಿ ಧನುಸ್ಸನ್ನು ಹಿಡಿದ ವೈನ್ಯನನ್ನು ಎದುರಿಗೇ ನೋಡುತ್ತಿದ್ದಳು.

ಜ್ವಲದ್ಭಿರ್ನಿಶಿತೈರ್ಬಾಣೈರ್ದೀಪ್ತತೇಜಃಸಮದ್ಯುತಿಮ್ ।
ಮಹಾಯೋಗಂ ಮಹಾತ್ಮಾನಂ ದುರ್ಧರ್ಷಮಮರೈರಪಿ ॥ ೧೬ ॥

ಜ್ವಲಿಸುವ ಬಾಣಗಳನ್ನು ಕೈಯಲ್ಲಿ ಹಿಡಿದಿರುವ, ದೀಪ್ತವಾದ ಅಗ್ನಿಗೆ ಸಮಾನವಾದ ಕಾಂತಿಯುಳ್ಳ, ಮಹಾಯೋಗಶಾಲಿಯಾದ, ದೇವತೆಗಳಿಂದಲೂ ಸೋಲಿಸಲು ಅಸಾಧ್ಯನಾದ, ಮಹಾತ್ಮನಾದ ಅವನನ್ನು (ಎದುರಿಗೇ ನೋಡುತ್ತಿದ್ದಳು).

ಅಲಭಂತೀ ಪರಿತ್ರಾಣಂ ವೈನ್ಯಮೇವಾನ್ವಪದ್ಯತ ।
ಕೃತಾಂಜಲಿಪುಟಾ ರಾಜನ್ ಪೂಜ್ಯಂ ಲೋಕೈಸ್ತ್ರಿಭಿಸ್ತದಾ ॥ ೧೭ ॥

ಬೇರೆ ಎಲ್ಲಿಯೂ ರಕ್ಷಣೆ ಸಿಗದೆ ಅವಳು ಎಲೈ ರಾಜನೇ, ಮೂರುಲೋಕ-ಗಳಿಂದಲೂ ಪೂಜ್ಯನಾದ ವೈನ್ಯನಿಗೆ ಶರಣಾಗತಳಾಗಿ ಕೈಗಳನ್ನು ಮುಗಿದು ಹೇಳಿದಳು.

ಉವಾಚ ಚೈನಂ ನಾಧರ್ಮ್ಯಂ ಸ್ತ್ರೀವಧಂ ಕರ್ತುಮರ್ಹಸಿ ।
ಕಥಂ ಧಾರಯಿತಾ ಚಾಸಿ ಪ್ರಜಾ ರಾಜನ್ ಮಯಾ ವಿನಾ ॥ ೧೮ ॥

ಅಧರ್ಮವಾದ ಸ್ತ್ರೀವಧೆಯನ್ನು ನೀನು ಮಾಡಬಾರದು. ನಾನು ಇಲ್ಲದಿದ್ದರೆ ನೀನು ಪ್ರಜೆಗಳನ್ನು ಹೇಗೆ ಧರಿಸುವಿ ಎಂದು ಕೇಳಿದಳು.

ಪೃಥುಃ

ಏಕಸ್ಯಾರ್ಥಾಯ ಯೋ ಹನ್ಯಾದ್ ಆತ್ಮನೋ ವಾ ಪರಸ್ಯ ವಾ ।
ಏಕಂ ಪ್ರಾಣಾನ್ ಬಹೂನ್ ವಾಽಪಿ ಪ್ರಾಣಿನಾಂ ನಾಸ್ತಿ ಪಾತಕಮ್ ॥

ಯಸ್ಮಿಂಸ್ತು ನಿಹತೇ ಭದ್ರೇ ಬಹವಃ ಸುಖಮೇಧತೇ ।
ಯಸ್ಮಿನ್ ಹತೇ ಸುಖಂ ನಾಸ್ತಿ ಪಾತಕಂ ತೋಪಭುಜ್ಯತೇ ॥ ೨೦ ॥

ಪೃಥು– ಯಾವನನ್ನು ಕೊಂದರೆ ಬಹಳ ಜನರು ಸುಖವನ್ನು ಹೊಂದುತ್ತಾರೆಯೋ ಅಂತಹ ವ್ಯಕ್ತಿಯನ್ನು ತನ್ನ ಸಲುವಾಗಿಯೇ ಆಗಲಿ ಅಥವಾ ಪರರ ಸಲುವಾಗಿಯೇ ಆಗಲಿ ಒಂದು ಪ್ರಾಣಿಯನ್ನು ಕೊಂದರೂ ಅನೇಕ ಪ್ರಾಣಿಗಳನ್ನು ಕೊಂದರೂ ಅದರಿಂದ ಪಾಪವು ಬರುವುದಿಲ್ಲ. ಯಾವನನ್ನು ಕೊಂದರೆ ಲೋಕಕ್ಕೆ ಸುಖವುಂಟಾಗುವುದಿಲ್ಲವೋ ಅಂತಹ ವ್ಯಕ್ತಿಯನ್ನು ಕೊಂದವನು ಮಾತ್ರ ಪಾಪಕ್ಕೆ ಗುರಿಯಾಗುತ್ತಾನೆ.

ಸೋಽಹಂ ಪಾಲನಿಮಿತ್ತತ್ವಾದ್ ವಧಿಷ್ಯಾಮಿ ವಸುಂಧರೇ ।
ಯದಿ ಚೇದ್ ವಚನಾದದ್ಯ ನ ಕರಿಷ್ಯಸಿ ಮೇ ಪ್ರಿಯಮ್ ॥ ೨೧ ॥

ಎಲೌ ಭೂಮಿಯೇ, ನೀನು ನನ್ನ ಮಾತನ್ನು ಕೇಳಿ, ಈ ದಿನ ನನಗೆ ಪ್ರಿಯವನ್ನು ಮಾಡದಿದ್ದರೆ ಪ್ರಜಾಪಾಲನೆಯ ನಿಮಿತ್ತದಿಂದಾಗಿ ನಾನು ನಿನ್ನನ್ನು ವಧಿಸುವೆನು.

ತ್ವಾಂ ನಿಹತ್ಯ ತು ಬಾಣೇನ ಮಚ್ಛಾಸನಪರಾಙ್ಮುಖೀಮ್ ।
ಆತ್ಮಾನಂ ಪ್ರಥಯಿತ್ವಾಽಹಂ ಪ್ರಜಾ ಧಾರಯಿತಾ ಸ್ವಯಮ್ ॥ ೨೨ ॥

ನನ್ನ ಶಾಸನವನ್ನು ಮೀರಿದ ನಿನ್ನನ್ನು ನನ್ನ ಬಾಣದಿಂದ ಸಂಹರಿಸಿ, ನನ್ನನ್ನೇ ವಿಸ್ತಾರ ಮಾಡಿಕೊಂಡು ನಾನೇ ಪ್ರಜೆಗಳನ್ನು ಧರಿಸುವೆನು.

ಸುಖಂ ವಚನಮಾಸ್ಥಾಯ ಮಮ ಧರ್ಮಭೃತಾಂ ವರೇ ।
ಸಂಜೀವಯ ಪ್ರಜಾ ನಿತ್ಯಂ ಶಕ್ತಾ ಹ್ಯಸಿ ವಸುಂಧರೇ ॥ ೨೩ ॥

ಎಲೌ ಭೂಮಿಯೇ, ಧರ್ಮಿಷ್ಠರಲ್ಲಿ ಶ್ರೇಷ್ಠಳಾದವಳೇ, ನನ್ನ ಮಾತುಗಳನ್ನು ಪಾಲಿಸಿ ಈ ಪ್ರಜೆಗಳನ್ನು ಯಾವಾಗಲೂ ಸಂಜೀವನಗೊಳಿಸು. ನೀನು ಹಾಗೆ ಮಾಡಲು ಶಕ್ತಳಾಗಿದ್ದೀಯೆ.

ದುಹಿತೃತ್ವಂ ಚ ಮೇ ಗಚ್ಛ ಏವಮೇತನ್ಮಹಾಶರಮ್ ।
ನಿಯಚ್ಛೇಯಂ ತ್ವದರ್ಥಾಯ ಉದ್ಯತಂ ಘೋರದರ್ಶನಮ್ ॥ ೨೪ ॥

ನೀನು ನನ್ನ ಮಗಳಾಗು. ಹಾಗೆ ಮಾಡಿದರೆ ಮಾತ್ರ ನಿನ್ನ ಮೇಲೆ ಪ್ರಯೋಗಿಸಲು ಉದ್ಯುಕ್ತವಾದ, ಈ ಘೋರವಾಗಿ ಕಾಣುತ್ತಿರುವ ಬಾಣವನ್ನು ಹಿಂದಕ್ಕೆ ತೆಗೆದುಕೊಂಡೇನು.

ಭೂಮಿಃ

ಸರ್ವಮೇತನ್ಮಹಾರಾಜ ವಿಧಾಸ್ಯಾಮಿ ಪರಂತಪ ।
ವತ್ಸಂ ತ್ವಂ ಪಶ್ಯ ರಾಜನ್ ವೈ ಕ್ಷರೇಯಂ ಯೇನ ವತ್ಸಲಾ ॥ ೨೫ ॥

ಭೂಮಿ– ಎಲೈ ಪರಂತಪನಾದ ಮಹಾರಾಜನೇ, ನೀನು ಹೇಳಿದ ಎಲ್ಲವನ್ನೂ ಮಾಡುತ್ತೇನೆ. ಎಲೈ ರಾಜನೇ, ನನಗೆ ಒಂದು ವತ್ಸವನ್ನು ಹುಡುಕು. ಹಾಗೆ ಮಾಡಿದರೆ ವತ್ಸಪ್ರಿಯಳಾದ ನಾನು ಕ್ಷೀರರೂಪದಲ್ಲಿ ಎಲ್ಲವನ್ನೂ ಸುರಿಸುವೆನು.

ಸಮಾಂ ಚ ಕುರು ಸರ್ವತ್ರ ಮಾಂ ವೈ ಧರ್ಮಭೃತಾಂ ವರ ।
ಯಥಾ ವಿಷ್ಯಂದಮಾನಂ ವೈ ಕ್ಷೀರಂ ಸರ್ವತ್ರ ಭಾವಯೇ ॥ ೨೬ ॥

ಎಲೈ ಧರ್ಮಿಷ್ಠರಲ್ಲಿ ಶ್ರೇಷ್ಠನೇ, ಹರಿಯುವ ನೀರು ಹರಿದು ಹೋಗದಂತೆ ಉಬ್ಬು-ತಗ್ಗುಗಳಿರುವ ನನ್ನನ್ನು ನೀರು ನಿಲ್ಲುವಂತೆ ಸಮವಾಗಿ ಮಾಡು.

ನಾರದಃ

ತತ ಉತ್ಸಾರಯಾಮಾಸ ಶಿಲಾಜಾಲಾನಿ ಸರ್ವಶಃ ।
ಪೃಥುರ್ವೈನ್ಯಸ್ತದಾ ರಾಜಾ ತೇನ ಶೈಲಾ ವಿವರ್ಧಿತಾಃ ॥ ೨೭ ॥

ನಾರದರು– ಆಗ ವೈನ್ಯನಾದ ಪೃಥುವು ಅಲ್ಲಲ್ಲಿದ್ದ ಶಿಲಾಜಾಲಗಳನ್ನು ಪಕ್ಕಕ್ಕೆ ಸರಿಸಿದನು. ಅವುಗಳನ್ನು ಪರ್ವತದ ಮೇಲಿಟ್ಟ ಕಾರಣದಿಂದ ಪರ್ವತಗಳು ಎತ್ತರವಾದವು.

ನ ಹಿ ಪೂರ್ವನಿಸರ್ಗೇ ವೈ ವಿಷಮೇ ವಸುಧಾತಳೇ ।
ಪ್ರವಿಭಾಗಃ ಪುರಾಣಾಂ ವಾ ಗ್ರಾಮಾಣಾಂ ವಾ ಮಹೀಪತೇ ॥ ೨೮ ॥

ಎಲೈ ರಾಜನೇ, ಹಿಂದೆ ಭೂಮಿಯು ಉಬ್ಬು-ತಗ್ಗುಗಳಿಂದ ಕೂಡಿದ್ದಾಗ ಪಟ್ಟಣಗಳು ಮತ್ತು ಗ್ರಾಮಗಳು ಎಂಬ ವಿಭಾಗವಿರಲಿಲ್ಲ.

ನ ಸಸ್ಯಾನಿ ನ ಗೋರಕ್ಷ್ಯಂ ನ ಕೃಷಿರ್ನ ವಣಿಕ್ಪಥಃ ।
ವೈನ್ಯಾತ್ ಪ್ರಭೃತಿ ರಾಜೇಂದ್ರ ಸರ್ವಸ್ಯೈತಸ್ಯ ಸಂಭವಃ ॥ ೨೯ ॥

ಆಗ ಸಸ್ಯಗಳಾಗಲೀ, ಗೋರಕ್ಷೆಯಾಗಲೀ, ಕೃಷಿಯಾಗಲೀ, ವಾಣಿಜ್ಯ ಮಾರ್ಗಗಳಾಗಲೀ ಇರಲಿಲ್ಲ. ಎಲೈ ರಾಜನೇ, ಪೃಥುಚಕ್ರವರ್ತಿಯ ಕಾಲದಿಂದ ಇವೆಲ್ಲವೂ ಉಂಟಾದವು.

ಯತ್ರ ಯತ್ರ ಚ ಸಾಮ್ಯಂ ತು ಭೂಮಾವಾಸೀತ್ ಕಿಲಾನಘ ।
ತತ್ರ ತತ್ರ ಪ್ರಜಾಸ್ತಾತ ನಿವಾಸಮಭಿರೋಚಯನ್ ।
ಕೃಚ್ಛ್ರೇಣೈವ ಮಹಾರಾಜ ಇತ್ಯೇವಮನುಶುಶ್ರುಮ ॥ ೩೦ ॥

ಅದಕ್ಕಿಂತ ಮೊದಲು ಎಲೈ ಅನಘನೇ, ಭೂಮಿಯಲ್ಲಿ ಎಲ್ಲಲ್ಲಿ ಸ್ವಲ್ಪ ಸಮತಟ್ಟಾದ ಪ್ರದೇಶವಿದ್ದಿತೋ ಅಲ್ಲಲ್ಲಿ ಪ್ರಜೆಗಳು ಬಹಳ ಕಷ್ಟದಿಂದ ವಾಸವನ್ನು ಮಾಡುತ್ತಿದ್ದರು ಎಂದು ನಾವು ಕೇಳಿದ್ದೇವೆ.

ತಥೇತ್ಯುಕ್ತ್ವಾ ಪುನರ್ವೈನ್ಯೋ ಗೃಹೀತ್ವಾऽऽಜಗವಂ ಧನುಃ ।
ಶರಾಂಶ್ಚಾಪ್ರತಿಮಾನ್ ಘೋರಾಂಶ್ಚಿಂತಯಿತ್ವಾऽಬ್ರವೀನ್ಮಹೀಮ್ ॥೩೧॥

ಹಾಗೆಯೇ ಆಗಲಿ ಎಂದು ಹೇಳಿದ ವೈನ್ಯನು ಪುನಃ ತನ್ನ ಅಜಗವ ಧನುಸ್ಸನ್ನು, ತನ್ನ ಅಸದೃಶವಾದ ಘೋರವಾದ ಬಾಣಗಳನ್ನು ತೆಗೆದುಕೊಂಡು ಚಿಂತಿಸಿ ಭೂಮಿಯನ್ನುಕುರಿತು ಹೇಳಿದನು.

ಏಹ್ಯೇಹಿ ವಸುಧೇ ಕ್ಷಿಪ್ರಂ ಕ್ಷರೈಭ್ಯಃ ಕಾಂಕ್ಷಿತಂ ಪಯಃ ।
ಮಚ್ಚಾಸನಾತಿಗಾಂ ವೈ ತ್ವಾಂ ಪ್ರಮಥಿಷ್ಯಾಮ್ಯಹಂ ಶರೈಃ ॥ ೩೨ ॥

ಭೂಮಿಯೇ ಬಾ ಬಾ, ಬೇಗ ಈ ಪ್ರಜೆಗಳಿಗೆ ಅವರಿಗೆ ಅಭೀಷ್ಟವಾದ ಕ್ಷೀರವನ್ನು ಸುರಿಸು. ಇಲ್ಲದಿದ್ದರೆ ನನ್ನ ಶಾಸನವನ್ನು ಮೀರಿದ ನಿನ್ನನ್ನು ನನ್ನ ಬಾಣಗಳಿಂದ ವಿನಾಶಗೊಳಿಸುವೆನು.

ನಾರದಃ

ತಥೋಕ್ತಾ ಸಾऽತ್ಮನಃ ಶ್ರೇಯಃ ಚಿಂತಯಿತ್ವಾऽಬ್ರವೀತ್ ಪೃಥುಮ್ ॥

ವತ್ಸಂ ಪಾತ್ರಾಣಿ ದೋಗ್ಧ್ರಾಂಶ್ಚ ಕ್ಷೀರಾಣಿ ಚ ಸಮಾದಿಶ ।
ತತೋ ದಾಸ್ಯಾಮ್ಯಹಂ ಭದ್ರ ಸರ್ವಂ ಯಸ್ಯ ಯಥೇಪ್ಸಿತಮ್ ।
ದುಹಿತೃತ್ವೇ ಚ ಮಾಂ ವೀರ ಸಂಕಲ್ಪಯಿತುಮರ್ಹಸಿ ॥ ೩೪ ॥

ನಾರದರು– ಹಾಗೆ ಹೇಳಲ್ಪಟ್ಟ ಭೂಮಿಯು ತನ್ನ ಶ್ರೇಯಸ್ಸನ್ನು ಚಿಂತಿಸಿ, ಪ್ರಭುವಾದ ಪೃಥುವನ್ನು ಕುರಿತು– 'ನನಗೆ ವತ್ಸಗಳನ್ನು, ಹಾಲು ಕರೆಯುವವರನ್ನು, ಹಾಲನ್ನು ಆದೇಶಿಸು. ಎಲೈ ಮಂಗಳಸ್ವರೂಪನೇ, ಆಗ ನಾನು ಅವರವರಿಗೆ ಅವರಿಗೆ ಇಷ್ಟವಾದ ಕ್ಷೀರವನ್ನು ಕೊಡುವೆನು. ಎಲೈ ವೀರನೇ, ನನ್ನನ್ನೂ ಸಹ ನಿನ್ನ ಮಗಳನ್ನಾಗಿ ಕಲ್ಪನೆ ಮಾಡು'.

ನಾರದಃ

ತಥೇತ್ಯುಕ್ತ್ವಾ ಪೃಥುಃ ಸರ್ವಂ ವಿಧಾನಮಕರೋದ್ ವಶೀ ।
ತತೋ ಭೂತನಿಕಾಯಾಸ್ತೇ ವಸುಧಾಂ ದುದುಹುಸ್ತದಾ ॥ ೩೫ ॥

ಹಾಗೆಯೇ ಆಗಲಿ ಎಂದು ಸಮರ್ಥನಾದ ಪೃಥುವು ಎಲ್ಲ ವ್ಯವಸ್ಥೆಯನ್ನೂ ಮಾಡಿದನು. ಆಗ ಎಲ್ಲ ಪ್ರಾಣಿಗಳು ಭೂಮಿಯಿಂದ ತಮಗೆ ಬೇಕಾದ ಕ್ಷೀರವನ್ನು ಕರೆದುಕೊಂಡವು.

ತಾಂ ವನಸ್ಪತಯಃ ಪೂರ್ವಮುಪತಸ್ಥುರ್ದುಧುಕ್ಷವಃ ।
ಸಾऽತಿಷ್ಠದ್ ವತ್ಸಲಾ ವತ್ಸಂ ದೋಗ್ಧ್ರೀನ್ ಪಾತ್ರಾಣಿ ಚೇಚ್ಛತೀ॥ ೩೬ ॥

ಮೊದಲು ವನಸ್ಪತಿಗಳು ಭೂಮಿಯನ್ನು ಕರೆಯಲು ಬಯಸಿ ಅವಳ ಸಮೀಪಕ್ಕೆ ಬಂದವು. ವತ್ಸಪ್ರಿಯಳಾದ ಭೂಮಿಯು ವತ್ಸವನ್ನೂ, ದೋಗ್ಧ್ರವನ್ನೂ (ಹಾಲು ಕರೆಯುವವನನ್ನೂ), ಪಾತ್ರೆಯನ್ನೂ ನಿರೀಕ್ಷಿಸುತ್ತಾ ಸುಮ್ಮನೆ ನಿಂತಳು.

ವತ್ಸೋऽಭೂತ್ ಪುಷ್ಪಿತಃ ಸಾಲಃ ಪ್ಲಕ್ಷೋ ದೋಗ್ಧಾ ದ್ವಿಜದ್ರುಮಃ ।
ಛಿನ್ನಪ್ರರೋಹಣಂ ದುಗ್ಧಂ ಪಾತ್ರಮೌದುಂಬರಂ ಶುಭಮ್ ॥ ೩೭ ॥

ಆಗ ಪುಷ್ಪಭರಿತವಾದ ಸಾಲವೃಕ್ಷವು ವತ್ಸವಾಯಿತು. ಪ್ಲಕ್ಷವೃಕ್ಷವು ದೋಗ್ಧ್ರವಾಯಿತು. ಛಿನ್ನಪ್ರರೋಹಣ (ಕತ್ತರಿಸಿದ ಕಡೆಯಲ್ಲಿ ಚಿಗುರುವುದು) ಎಂಬ ಶುಭವಾದ ಕ್ಷೀರವನ್ನು ಔದುಂಬರ ಪಾತ್ರೆಯಲ್ಲಿ ಕರೆಯಲಾಯಿತು.

ಉದಯಃ ಪರ್ವತೋ ವತ್ಸೋ ಮೇರುರ್ದೋಗ್ಧಾ ಮಹಾಗಿರಿಃ ।
ರತ್ನಾನ್ಯೋಷಧಯೋ ದುಗ್ಧಂ ಪಾತ್ರಮಶ್ಮಮಯಂ ತಥಾ ॥ ೩೮ ॥

ಉದಯ ಪರ್ವತವು ವತ್ಸ, ಮಹಾಪರ್ವತವಾದ ಮೇರುವು ದೋಗ್ಧ್ರ, ರತ್ನ ಮತ್ತು ಓಷಧಿಗಳು ಕ್ಷೀರ, ಶಿಲಾಮಯವಾದುದು ಪಾತ್ರೆಯಾಯಿತು.

ದೇವಾನಾಂ ವತ್ಸ ಇಂದ್ರೋಽಭೂತ್ ಪಾತ್ರಂ ದಾರುಮಯಂ ತಥಾ ।
ದೋಗ್ಧಾ ಚ ಸವಿತಾ ದೇವೋ ದುಗ್ಧಮೂರ್ಜಸ್ಕರಂ ಪ್ರಿಯಮ್ ॥೩೯॥

ಇಂದ್ರನು ದೇವತೆಗಳಿಗೆ ವತ್ಸನಾದನು, ದಾರುಮಯವಾದುದು ಪಾತ್ರೆಯಾಯಿತು, ಸವಿತೃವು ದೋಗ್ಧ್ರವಾದನು. ದೇವತೆಗಳಿಗೆ ಪ್ರಿಯವಾದ ಅನ್ನ ವಸ್ತುವು ಕ್ಷೀರವಾಯಿತು.

ಅಸುರಾ ದುದುಹುರ್ಮಾಯಾಮಯಃಪಾತ್ರೇ ತು ತಾಮಥ ।
ದೋಗ್ಧಾ ದ್ವಿಮೂರ್ಧಾ ತು ತದಾ ವತ್ಸಶ್ಚಾಸೀದ್ ವಿರೋಚನಃ ॥ ೪೦ ॥

ಅಸುರರು ಕಬ್ಬಿಣದ ಪಾತ್ರೆಯಲ್ಲಿ ಮಾಯಾ ಎಂಬ ಕ್ಷೀರವನ್ನು ಕರೆದರು. ಆಗ ದ್ವಿಮೂರ್ಧನು ದೋಗ್ಧ್ರವಾದನು ಮತ್ತು ವಿರೋಚನನು ವತ್ಸವಾದನು.

ಕೃಷಿಂ ಚ ಸಸ್ಯಂ ಚ ನರಾ ದುದುಹುರ್ಧರಣೀತಳೇ ।
ಸ್ವಾಯಂಭುವೋ ಮನುರ್ವತ್ಸಃ ತೇಷಾಂ ದೋಗ್ಧಾಽಭವತ್ ಪೃಥುಃ ॥

ಮನುಷ್ಯರು ಭೂತಳ ಎಂಬ ಪಾತ್ರೆಯಲ್ಲಿ, ಕೃಷಿ ಮತ್ತು ಸಸ್ಯಸಂಪತ್ತು ಎಂಬ ಹಾಲನ್ನು ಕರೆದರು. ಸ್ವಾಯಂಭುವ ಮನುವು ವತ್ಸವಾದನು, ಅವರಿಗೆ ಪೃಥು ಚಕ್ರವರ್ತಿಯೇ ದೋಗ್ಧ್ರವಾದನು.

ಅಲಾಬುಪಾತ್ರೇಷು ವಿಷಂ ನಾಗೈರ್ದುಗ್ಧಾ ವಸುಂಧರಾ ।
ಧೃತರಾಷ್ಟ್ರೋಽಭವದ್ ದೋಗ್ಧಾ ತೇಷಾಂ ವತ್ಸಸ್ತು ತಕ್ಷಕಃ ॥ ೪೨ ॥

ಸರ್ಪಗಳು ಅಲಾಬು ಪಾತ್ರೆಗಳಲ್ಲಿ (ಸೋರೆ ಬುರುಡೆಗಳಲ್ಲಿ) ಭೂಮಿಯಿಂದ ವಿಷರೂಪವಾದ ಕ್ಷೀರವನ್ನು ಕರೆದವು. ಅವುಗಳಿಗೆ ಧೃತರಾಷ್ಟ್ರನು ದೋಗ್ಧ್ರವಾಗಿದ್ದನು, ತಕ್ಷಕನು ವತ್ಸವಾದನು.

ಸಪ್ತರ್ಷಿಭಿರ್ಬ್ರಹ್ಮ ದುಗ್ಧಂ ತಪಶ್ಚಾಕ್ಲಿಷ್ಟಕರ್ಮಭಿಃ ।
ದೋಗ್ಧಾ ಬೃಹಸ್ಪತಿಃ ಪಾತ್ರಂ ಛಂದೋ ವತ್ಸಸ್ತು ಸೋಮರಾಟ್ ॥ ೪೩ ॥

ಅಕ್ಲಿಷ್ಟಕಾರಿಗಳಾದ ಸಪ್ತರ್ಷಿಗಳು ವೇದ ಎಂಬ ಕ್ಷೀರವನ್ನು ಕರೆದರು. ಬೃಹಸ್ಪತಿಯು ದೋಗ್ಧ್ರವೂ, ಛಂದಸ್ಸುಗಳು ಪಾತ್ರೆಯೂ ಮತ್ತು ಚಂದ್ರನು ವತ್ಸನೂ ಆದನು.

ಅಂತರ್ಧಾನಂ ಚಾಮಪಾತ್ರೇ ದುಗ್ಧಂ ಪುಣ್ಯಜನೈರ್ವಿರಾಟ್ ।
ದೋಗ್ಧಾ ವೈಶ್ರವಣಸ್ತೇಷಾಂ ವತ್ಸ ಆಸೀತ್ ಕುಬೇರಕಃ ॥ ೪೪ ॥

ಆಮಪಾತ್ರೆಯಲ್ಲಿ ಪುಣ್ಯಜನರು ಅಂತರ್ಧಾನವಿದ್ದೆ ಎಂಬ ಹಾಲನ್ನು ಕರೆದರು. ವಿಶೇಷವಾಗಿ ಪ್ರಕಾಶಮಾನನಾದ ವೈಶ್ರವಣನು ದೋಗ್ಧ್ರುವಾಗಿದ್ದನು. ಕುಬೇರನು ವತ್ಸವಾದನು.

ಪುಣ್ಯಗಂಧಂ ಪದ್ಮಪಾತ್ರೇ ಗಂಧರ್ವಾಪ್ಸರಸೋಽದುಹನ್ ।
ವತ್ಸಶ್ಚಿತ್ರರಥಸ್ತೇಷಾಂ ದೋಗ್ಧಾ ವಸುರಪಿ ಪ್ರಭುಃ ॥ ೪೫ ॥

ಗಂಧರ್ವಾಪ್ಸರಸರು ಪದ್ಮಪಾತ್ರೆಯಲ್ಲಿ ಶುಭಗಂಧವನ್ನು ಕ್ಷೀರವನ್ನಾಗಿ ಕರೆದರು. ಅವರಿಗೆ ಚಿತ್ರರಥನು ವತ್ಸನೂ ಮತ್ತು ಪ್ರಭುವಾದ ವಸುವು ದೋಗ್ಧ್ರುವೂ ಆದನು.

ಸ್ವಧಾಂ ರಜತಪಾತ್ರೇಷು ದುದುಹುಃ ಪಿತರಃ ಸ್ಮ ತಾಮ್ ।
ವತ್ಸೋಽತ್ರ ವತ್ಸರಸ್ತೇಷಾಂ ಯಮೋ ದೋಗ್ಧಾ ತಥಾಽಂತಕಃ ॥ ೪೬ ॥

ಪಿತೃಗಳು ರಜತಪಾತ್ರೆಯಲ್ಲಿ ಸ್ವಧಾರೂಪವಾದ ಅನ್ನವನ್ನು ಭೂಮಿಯಿಂದ ಕರೆದರು. ವತ್ಸರವು ಅವರಿಗೆ ವತ್ಸವಾಯಿತು ಮತ್ತು ಸಂಹಾರಕನಾದ ಯಮನು ದೋಗ್ಧ್ರುವಾದನು.

ಏವಂ ನಿಕಾಯ್ಯೈಸ್ತೈರ್ದುಗ್ಧಾ ಪಯಾಂಸೀಷ್ಟಾನಿ ಸಾ ವಿರಾಟ್ ।
ಯೈರ್ವರ್ತಯಂತಿ ತೇ ಹ್ಯದ್ಯ ಪಾತ್ರೈರ್ವತ್ಸಾಶ್ಚ ನಿತ್ಯಶಃ ॥ ೪೭ ॥

ಹೀಗೆ ವಿಶೇಷವಾಗಿ ಶೋಭಿಸುತ್ತಿದ್ದ ಆ ಭೂಮಿಯಿಂದ ಪ್ರಜೆಗಳು ಗುಂಪು-ಗುಂಪಾಗಿ ತಮಗೆ ಇಷ್ಟವಾದ ಕ್ಷೀರಗಳನ್ನು ಕರೆದುಕೊಂಡರು. ಈಗಲೂ ಅವರು ಯಾವಾಗಲೂ ಅದೇ ಪಾತ್ರೆಗಳಿಂದಲೂ ಮತ್ತು ವತ್ಸಗಳಿಂದಲೂ ಜೀವಿಸುತ್ತಾರೆ.

ಸ ಯಜ್ಞೈರ್ವಿವಿಧೈರಿಷ್ಟ್ವಾ ಪೃಥುರ್ವೈನ್ಯಃ ಪ್ರತಾಪವಾನ್ ।
ಸಂತರ್ಪಯಿತ್ವಾ ಭೂತಾನಿ ಸರ್ವಕಾಮೈರ್ಮನಃಪ್ರಿಯೈಃ ॥ ೪೮ ॥

ಅಂತಹ ವೇನಪುತ್ರನಾದ, ಪ್ರತಾಪಶಾಲಿಯಾದ ಪೃಥುಚಕ್ರವರ್ತಿಯು ವಿವಿಧವಾದ ಯಜ್ಞಗಳಿಂದ ದೇವತೆಗಳನ್ನು ಅರ್ಚಿಸಿ, ಎಲ್ಲಾ ಪ್ರಜೆಗಳಿಗೂ ಮತ್ತು ಪ್ರಾಣಿಗಳಿಗೂ ಇಷ್ಟವಾದ ವಸ್ತುಗಳಿಂದ ಅವರನ್ನು ತೃಪ್ತಿಪಡಿಸಿದನು.

ಹೈರಣ್ಯಾನಕರೋದ್ ರಾಜಾ ಯೇ ಕೇಚಿತ್ ಪಾರ್ಥಿವಾ ಭುವಿ ।
ತಾನ್ ಬ್ರಾಹ್ಮಣೇಭ್ಯಃ ಪ್ರಾಯಚ್ಛದ್ ಅಶ್ವಮೇಧೇ ಮಹಾಮಖೇ ॥೪೯॥

ರಾಜನಾದ ಅವನು ಯಜ್ಞಗಳಲ್ಲಿ ಉಪಯೋಗಿಸುವ ಎಲ್ಲ ಪಾತ್ರೆಗಳನ್ನೂ ಸುವರ್ಣದಿಂದಲೇ ಮಾಡಿಸಿ, ಅವುಗಳನ್ನು ಅಶ್ವಮೇಧ ಮಹಾಯಾಗದಲ್ಲಿ ಬ್ರಾಹ್ಮಣರಿಗೆ ದಾನವನ್ನು ಮಾಡಿದನು.

ಸ ಷಷ್ಟಿಂ ಗೋಸಹಸ್ರಾಣಿ ಷಷ್ಟಿಂ ನಾಗಶತಾನಿ ಚ ।
ಸೌವರ್ಣಾನಕರೋದ್ ರಾಜಾ ಬ್ರಾಹ್ಮಣೇಭ್ಯಶ್ಚ ತಾನ್ ದದೌ ॥ ೫೦ ॥

ಅವನು ಸುವರ್ಣಮಯವಾದ ಅರವತ್ತು ಸಾವಿರ ಗೋವುಗಳನ್ನೂ, ಆರು ಸಾವಿರ ಗಜಗಳನ್ನೂ ಮಾಡಿಸಿ, ಅವುಗಳನ್ನು ಬ್ರಾಹ್ಮಣರಿಗೆ ಕೊಟ್ಟನು.

ಯ ಇಮಾಂ ಪೃಥಿವೀಂ ಸರ್ವಾಂ ಮಣಿರತ್ನವಿಭೂಷಿತಾಮ್ ।
ಕೃತ್ವಾ ಹಿರಣ್ಮಯೀಂ ರಾಜಾ ಬ್ರಾಹ್ಮಣೇಭ್ಯೋ ಹ್ಯಮಂಸತ ॥ ೫೧ ॥

ರಾಜನಾದ ಅವನು ಈ ಭೂಮಿಯನ್ನೆಲ್ಲಾ ಮಣಿರತ್ನಗಳಿಂದ ಅಲಂಕರಿಸಿ, ಹಿರಣ್ಮಯವನ್ನಾಗಿ ಮಾಡಿ ಬ್ರಾಹ್ಮಣರಿಗೆ ದಾನ ಮಾಡಿದನು.

ಸ ಚೇನ್ಮಮಾರ ಸೃಂಜಯ ಚತುರ್ಭದ್ರತರಸ್ತ್ವಯಾ ।
ಪುತ್ರಾತ್ ಪುಣ್ಯತಮಸ್ತುಭ್ಯಂ ಮಾ ಪುತ್ರಮನುತಪ್ಯಥಾಃ ।
ಅಯಜ್ವಾನಮದಕ್ಷಿಣ್ಯಮಧಿಚ್ಛೈತ್ಯೇತ್ಯುದಾಹರತ್ ॥ ೫೨ ॥

ಎಲೈ ಸೃಂಜಯನೇ, ನಿನಗಿಂತ ನಾಲ್ಕುಪಟ್ಟು ಶ್ರೇಷ್ಠನಾದ ಅವನೂ ಮತ್ತು ನಿನ್ನ ಪುತ್ರನಿಗಿಂತಲೂ ಶ್ರೇಷ್ಠನಾದ ಅವನ ಪುತ್ರನೂ ಮೃತರಾದಮೇಲೆ ಎಲೈ ಜ್ಞಾನಿಶ್ರೇಷ್ಠನೇ, ನಿನ್ನ ಪುತ್ರನ ವಿಷಯದಲ್ಲಿ ಸಂತಾಪವನ್ನು ಮಾಡಬೇಡ ಎಂದು ಹೇಳಿದರು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಷಟ್ಪಷ್ಟಿತಮೋಽಧ್ಯಾಯಃ ॥

॥ ಅಭಿಮನ್ಯುವಧಪರ್ವಣಿ ಪಂಚತ್ರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಅರವತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಅರವತ್ತೇಳನೆಯ ಅಧ್ಯಾಯ

ಷೋಡಶರಾಜೋಪಾಖ್ಯಾನದಲ್ಲಿ ಪರಶುರಾಮ ಚರಿತೆ

ನಾರದಃ

ರಾಮೋ ಮಹಾತಪಾಃ ಶೂರೋ ವೀರೋ ಲೋಕನಮಸ್ಕೃತಃ ।
ಜಾಮದಗ್ನ್ಯೋ ಮಹಾರಾಜ ಅವಿತೃಪ್ತೋ ಮರಿಷ್ಯತಿ ॥ ೧ ॥

ನಾರದರು– ಎಲೈ ಮಹಾರಾಜನೇ, ಲೋಕನಮಸ್ಕೃತನೂ, ಶೂರನೂ, ವೀರನೂ, ಮಹಾತಪಸ್ವಿಯೂ ಆದ ಜಮದಗ್ನಿ ಪುತ್ರನಾದ ಪರಶುರಾಮನೂ ತೃಪ್ತನಾಗದೆಯೇ ಮರಣವನ್ನು ಹೊಂದುವನು.

ಯಶ್ಚಾಸ್ತ್ರಮನುಪರ್ಯೇತಿ ಭೂಮಿಂ ಕುರ್ವನ್ನಪಾಂಸುಲಾಮ್ ।
ನ ಚಾಸೀದ್ ವಿಕ್ರಿಯಾ ಯಸ್ಯ ಪ್ರಾಪ್ಯ ಶ್ರಿಯಮನುತ್ತಮಾಮ್ ।
ಜಾಮದಗ್ನ್ಯೋ ನ ತೇ ರಾಜನ್ ಕಚ್ಚಿತ್ಕ್ಷ್ಯೋತ್ರಮುಪಾಗತಃ ॥ ೨ ॥

ಅವನು ಭೂಮಿಯನ್ನು ನಿರ್ದುಷ್ಟವನ್ನಾಗಿ ಮಾಡುವವನಾಗಿ, ತನ್ನ ಅಸ್ತ್ರದ ಜೊತೆಯಲ್ಲಿ ಭೂಮಿಯೆಲ್ಲವನ್ನೂ ತಿರುಗುತ್ತಾನೆ. ಬಹಳ ಸಂಪತ್ತನ್ನು ಹೊಂದಿದರೂ ಅವನಿಗೆ ಯಾವ ವಿಕಾರವೂ ಉಂಟಾಗಲಿಲ್ಲ. ಎಲೈ ರಾಜನೇ, ಅಂತಹ ಪರಶುರಾಮನ ವಾರ್ತೆಯು ನಿನ್ನ ಕಿವಿಯ ಮೇಲೆ ಏನಾದರೂ ಬಿದ್ದಿದೆಯೇ?

ಯೇನೈಕೇನ ಪುರಾ ರಾಜನ್ ಕ್ರುದ್ಧೇನ ಹತಬಂಧುನಾ ।
ಭೃಗುಭಿಸ್ತಾಮ್ಯಮಾನೇನ ತ್ರಾಹಿ ರಾಮೇತಿ ವಿಸ್ವರಮ್ ॥ ೩ ॥

ತ್ರಿಃಸಪ್ತಕೃತ್ವೋ ಭೂಮಿರ್ಯತ್ ಕೃತಾ ನಿಃಕ್ಷತ್ರಿಯಾ ಪುರಾ ॥ ೪ ॥

ಭೃಗುವಂಶದವರು ಪರಶುರಾಮನೇ ಕಾಪಾಡು ಎಂದು ಅಪಸ್ವರದಲ್ಲಿ ಕಿರುಚಿದಾಗ ಸಂತಾಪಗೊಂಡು ತಂದೆಯನ್ನು ಕಳೆದುಕೊಂಡು ಕ್ರುದ್ಧನಾದ ಅವನೊಬ್ಬನೇ ಎಲೈ ರಾಜನೇ, ಹಿಂದೆ ಇಪ್ಪತ್ತೊಂದು ಬಾರಿ ಭೂಮಿಯನ್ನು ಸುತ್ತಿ, ಕ್ಷತ್ರಿಯರಹಿತವನ್ನಾಗಿ ಮಾಡಿದನು.

ಯಃ ಕ್ಷತ್ರಿಯಪರಾಮೃಷ್ಟೇ ವತ್ಸೇ ಪಿತರಿ ಚುಕ್ರುಧೇ ।
ತತೋಽವಧೀತ್ ಕಾರ್ತವೀರ್ಯಮಜಿತಂ ಸಮರೇ ಪರೈಃ ॥ ೫ ॥

ಅವನು ಕಾಮಧೇನು ವತ್ಸವೂ ತನ್ನ ತಂದೆಯಾದ ಜಮದಗ್ನಿಯೂ ಕ್ಷತ್ರಿಯರಿಂದ ಕೈ ಮಾಡಲ್ಪಡುತ್ತಿರಲು ಕೋಪಗೊಂಡು ಯುದ್ಧದಲ್ಲಿ ಅಜೇಯನಾಗಿದ್ದ ಕಾರ್ತವೀರ್ಯನನ್ನು ಕೊಂದನು.

ಕ್ಷತ್ರಿಯಾಣಾಂ ಚತುಃಷಷ್ಟಿಮ್ ಅಯುತಾನ್ಯರಿಸಂಘಹಾ ।
ಸರಸ್ವತ್ಯಾಂ ಸಮೇತಾನಿ ಏಕೇನ ಧನುಷಾऽವಧೀತ್ ॥ ೬ ॥

ಶತ್ರುಸೂದನನಾದ ಅವನು ಸರಸ್ವತೀನದಿಯ ಸಮೀಪದಲ್ಲಿ ಒಟ್ಟಿಗೆ ಸೇರಿದ ಅರವತ್ನಾಲ್ಕು ದಶಸಹಸ್ರ ಕ್ಷತ್ರಿಯರನ್ನು ಒಂದೇ ಧನುಸ್ಸಿನಿಂದ ಸಂಹರಿಸಿದನು.

ಬ್ರಹ್ಮದ್ವಿಷಾಂ ವಧೇ ಯಸ್ಮಿನ್ ಸರಾಷ್ಟ್ರಾಣಿ ಚತುರ್ದಶ ।
ಪುನರನ್ಯಾನಿ ಜಗ್ರಾಹ ಕುಠಾರೇಣ ಜಘಾನ ಹ ॥ ೭ ॥

ಬ್ರಹ್ಮದ್ವೇಷಿಗಳ ವಧೆಯನ್ನು ಮಾಡಲು ಅವನು ಮೊದಲು ಹದಿನಾಲ್ಕು ರಾಷ್ಟ್ರಗಳನ್ನು ಆರಿಸಿ, ಪುನಃ ಬೇರೆ ದೇಶಗಳನ್ನು ಆರಿಸಿ, ತನ್ನ ಕುಠಾರದಿಂದ (ಕೊಡಲಿ) ಕ್ಷತ್ರಿಯರನ್ನು ಸಂಹರಿಸಿದನು.

ಸಹಸ್ರಂ ಮುಸಲೇನಾಘ್ನತ್ ಸಹಸ್ರಮಸಿನಾऽವಧೀತ್ ।
ಉದ್ಬಂಧಿತಂ ಸಹಸ್ರಂ ಚ ಸಹಸ್ರಮುದಕೇ ಕೃತಮ್ ॥ ೮ ॥

ಸಹಸ್ರ ಕ್ಷತ್ರಿಯರನ್ನು ಮುಸಲದಿಂದಲೂ (ಒನಕೆ), ಸಹಸ್ರ ಕ್ಷತ್ರಿಯರನ್ನು ಖಡ್ಗದಿಂದಲೂ, ಸಹಸ್ರ ಕ್ಷತ್ರಿಯರನ್ನು ನೇಣು ಹಾಕುವುದರಿಂದಲೂ, ಸಹಸ್ರ ಕ್ಷತ್ರಿಯರನ್ನು ನೀರಿನಲ್ಲಿ ಮುಳುಗಿಸುವುದರಿಂದಲೂ ಸಂಹರಿಸಿದನು.

ದಂತಾನ್ ಭಂಕ್ತ್ವಾ ಸಹಸ್ರಂ ಚ ಭಿನ್ನಕರ್ಣಾಂಸ್ತಥಾऽಕರೋತ್ ।
ತತಃ ಸಪ್ತಸಹಸ್ರಾಣಿ ಕಟಧೂಮಮಪಾಯಯತ್ ।
ಶಿಷ್ಟಾನ್ ಬದ್ಧ್ವಾ ಚ ಹತ್ವಾ ಚ ತೇಷಾಂ ಮೂರ್ಧ್ನಾऽಭಿಷಿಚ್ಯ ಚ ॥೯॥

ಸಹಸ್ರ ಕ್ಷತ್ರಿಯರನ್ನು ಹಲ್ಲುಗಳನ್ನು ಮುರಿದು, ಕರ್ಣಗಳನ್ನು ಭೇದಿಸಿ, ಅನಂತರ ಸಪ್ತ ಸಹಸ್ರ ಕ್ಷತ್ರಿಯರನ್ನು ಕಟತೃಣಧೂಮವನ್ನು ಪಾನ ಮಾಡುವಂತೆ ಮಾಡಿ ಸಂಹರಿಸಿದನು. ಉಳಿದವರನ್ನು ಬಂಧಿಸಿ ಸಂಹರಿಸಿ, ಅವರ ಶಿರಃಕಪಾಲಗಳಿಂದ ಪಿತೃಗಳಿಗೆ ತರ್ಪಣವನ್ನು ನೀಡಿದನು.

ಗುಣಾವತೀಮುತ್ತರೇಣ ಪಾರ್ಥಿವಾಂ ದಕ್ಷಿಣೇನ ಚ ।
ಶೇರತೇ ಶತಸಾಹಸ್ರಾ ಹ್ಯೆಹಯಾಃ ಸಮರೇ ಹತಾಃ ॥ ೧೦ ॥

ಗುಣವತೀ ನದಿಯ ಉತ್ತರಭಾಗದಲ್ಲಿ, ಪಾರ್ಥಿವನದಿಯ ದಕ್ಷಿಣ ಭಾಗದಲ್ಲಿ ಹತ್ತು ಸಹಸ್ರ ಹೈಹಯರನ್ನು ಸಂಹರಿಸಿ ಮಲಗಿಸಿದನು.

ಪಿತುರ್ವಧಾಮರ್ಷಿತೇನ ಜಾಮದಗ್ನ್ಯೇನ ಧೀಮತಾ ।
ಸಗಜಾಃ ಸರಥಾ ವೀರಾ ರಾಮೇಣೈಕೇನ ನಿರ್ಜಿತಾಃ ॥ ೧೧ ॥

ತಂದೆಯ ವಧೆಯಿಂದ ಕೋಪಗೊಂಡ ಮೇಧಾವಿಯಾದ ಪರಶುರಾಮನು ಒಬ್ಬನೇ ಗಜ-ರಥ ಸಹಿತರಾದ ಅನೇಕ ವೀರರನ್ನು ಜಯಿಸಿದನು.

ರಾಮ ರಾಮೇತ್ಯಭಿಕ್ರುಷ್ಟೋ ಬ್ರಾಹ್ಮಣೈಃ ಕ್ಷತ್ರಿಯಾರ್ದಿತೈಃ ।
ನಿಜಘ್ನೇ ಶತಸಾಹಸ್ರಾನ್ ರಾಮಃ ಪರಶುನಾ ತದಾ ॥ ೧೨ ॥

ಕ್ಷತ್ರಿಯರ ಉಪದ್ರವಕ್ಕೆ ಒಳಗಾದ ಬ್ರಾಹ್ಮಣರು 'ರಾಮ-ರಾಮ' ಎಂದು ಕಿರುಚಿದ ತಕ್ಷಣ ಪರಶುರಾಮನು ಹೋಗಿ ತನ್ನ ಪರಶುವಿನಿಂದ ಹತ್ತು ಸಹಸ್ರ ಕ್ಷತ್ರಿಯರನ್ನು ಕೊಂದನು.

ನಾಮೃಷ್ಯತ ವಚಸ್ತ್ರಾಹೀತ್ಯಾರ್ತೈರ್ಭೃಶಮುದೀರಿತಮ್ ।
ಭೃಗೋ ರಾಮಾಭಿಧಾವೇತಿ ಯದಾऽऽಕ್ರಂದನ್ ದ್ವಿಜೋತ್ತಮಾಃ ॥೧೩॥

ಬ್ರಾಹ್ಮಣೋತ್ತಮರು ಕ್ಷತ್ರಿಯರ ಉಪದ್ರವಕ್ಕೆ ಒಳಗಾಗಿ 'ಭೃಗುವಂಶೋತ್ಪನ್ನನಾದ ಪರಶುರಾಮನೇ ಓಡಿ ಬಾ' ಎಂದು ಆರ್ತನಾದವನ್ನು ಮಾಡಿದಾಗ ಆರ್ತರ ತ್ರಾಹಿ ಎಂಬ ಮಾತುಗಳನ್ನು ಕೇಳಿ ಅವನಿಗೆ ತಡೆದುಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ.

ತತಃ ಕಾಶ್ಮೀರದರದಾನ್ ಕುಂತಿಕ್ಷುದ್ರಕಮಾಲವಾನ್ ।
ಅಂಗವಂಗಕಳಿಂಗೇಂದ್ರಾನ್ ವಿದೇಹಾಂಸ್ತಾಮ್ರಲಿಪ್ತಕಾನ್ ॥ ೧೪ ॥

ಆಹಾವಾಹಾನ್ ವೀತಿಹೋತ್ರಾನ್ ತ್ರಿಗರ್ತಾನ್ ಮಾರ್ತಿಕಾಯನಾನ್ ।
ಶಿಬೀನನ್ಯಾಂಶ್ಚ ರಾಜೇಂದ್ರ ದೇಶೇ ದೇಶೇ ಸಹಸ್ರಶಃ ।
ನಿಜಘಾನ ಶಿತೈರ್ಬಾಣೈರ್ಜಾಮದಗ್ನ್ಯಃ ಪ್ರತಾಪವಾನ್ ॥ ೧೫ ॥

ಎಲೈ ರಾಜೇಂದ್ರನೇ, ಅನಂತರ ಪ್ರತಾಪಶಾಲಿಯಾದ ಪರಶುರಾಮನು ಕಾಶ್ಮೀರರನ್ನೂ, ದರದರನ್ನೂ, ಕುಂತಿಗಳನ್ನೂ, ಕ್ಷುದ್ರಕ-ಮಾಲವರನ್ನೂ, ಅಂಗ-ವಂಗ-ಕಳಿಂಗ ಕ್ಷತ್ರಿಯರನ್ನೂ, ವಿದೇಹರನ್ನೂ, ತಾಮ್ರಲಿಪ್ತಕರನ್ನೂ, ಆಹಾವಾಹರನ್ನೂ, ವೀತಿಹೋತ್ರರನ್ನೂ, ತ್ರಿಗರ್ತರನ್ನೂ, ಮಾರ್ತಿಕಾಯನರನ್ನೂ, ಶಿಬಿಗಳನ್ನೂ ಮತ್ತು ಉಳಿದವರನ್ನೂ ದೇಶ-ದೇಶದಲ್ಲಿ ತನ್ನ ಹರಿತವಾದ ಬಾಣಗಳಿಂದ ಸಹಸ್ರ ಸಂಖ್ಯೆಯಲ್ಲಿ ಸಂಹರಿಸಿದನು.

ಕೋಟೀಶತಸಹಸ್ರಾಣಿ ಕ್ಷತ್ರಿಯಾಣಾಮಥಾವಧೀತ್ ॥ ೧೬ ॥

ಇಂದ್ರಗೋಪಕವರ್ಣಸ್ಯ ಬಂಧುಜೀವನಿಭಸ್ಯ ಚ ।
ರುಧಿರಸ್ಯ ಪರೀವಾಹೈಃ ಪೂರಯಿತ್ವಾ ಸರಾಂಸಿ ಚ ॥ ೧೭ ॥

ಅವನು ಶತಸಹಸ್ರ ಕೋಟಿ ಕ್ಷತ್ರಿಯರನ್ನು ಸಂಹಾರ ಮಾಡಿ, ಇಂದ್ರಗೋಪ ಹುಳುವಿನಂತೆ, ಬಂಧೂಕ ಪುಷ್ಪದಂತೆ ಕೆಂಪಾದ ರಕ್ತದ ಧಾರೆಗಳಿಂದ ಸರೋವರಗಳನ್ನು ತುಂಬಿದನು.

ಸರ್ವಾನಷ್ಟಾದಶ ದ್ವೀಪಾನ್ ವಶಮಾನೀಯ ಭಾರ್ಗವಃ ।
ಈಜೇ ಕ್ರತುಶತೈಃ ಪುಣ್ಯೈಃ ಸಮಾಪ್ತವರದಕ್ಷಿಣೈಃ ॥ ೧೮ ॥

ಭಾರ್ಗವನಾದ ಪರಶುರಾಮನು ಎಲ್ಲಾ ಹದಿನೆಂಟು ದ್ವೀಪಗಳನ್ನೂ ವಶಪಡಿಸಿಕೊಂಡು, ಶ್ರೇಷ್ಠವಾದ, ಬಹಳ ದಕ್ಷಿಣೆಗಳಿಂದ ಕೂಡಿದ ಪವಿತ್ರವಾದ ನೂರಾರು ಯಾಗಗಳನ್ನು ಮಾಡಿದನು.

ವೇದೀಮಷ್ಟತಲೋತ್ಸೇಧಾಂ ಸೌವರ್ಣಾಂ ವಿಧಿನಿರ್ಮಿತಾಮ್ ।
ಸರ್ವರತ್ನಶತೈಃ ಪೂರ್ಣಾಂ ಪತಾಕಾಧ್ವಜಮಾಲಿನೀಮ್ ॥ ೧೯ ॥

ಎಂಟು ಹಸ್ತತಳದಷ್ಟು ಎತ್ತರವಾದ, ಸುವರ್ಣಮಯವಾದ ವೇದಿಯನ್ನು ಶಾಸ್ತ್ರೋಕ್ತ ರೀತಿಯಲ್ಲಿ ನಿರ್ಮಿಸಿ, ಅದನ್ನು ನೂರಾರು ರತ್ನಗಳಿಂದ ಪೂರ್ಣವಾಗಿ ತುಂಬಿ, ಪತಾಕೆ-ಧ್ವಜ ಮತ್ತು ಮಾಲೆಗಳಿಂದ ಅಲಂಕರಿಸಿ (ಕಾಶ್ಯಪರಿಗೆ ಕೊಟ್ಟನು).

ಗ್ರಾಮ್ಯಾರಣ್ಯೈಃ ಪಶುಗಣೈಃ ಸಂಪೂರ್ಣಾಂ ಚ ಮಹೀಮಿಮಾಮ್ ।
ಶತಂ ಶತಸಹಸ್ರಾಣಿ ದ್ವಿಪೇಂದ್ರಾನ್ ಹೇಮಭೂಷಿತಾನ್ ।
ರಾಮಸ್ಯ ಜಾಮದಗ್ನ್ಯಸ್ಯ ಪ್ರತಿಜಗ್ರಾಹ ಕಾಶ್ಯಪಃ ॥ ೨೦ ॥

ಈ ಭೂಮಿಯನ್ನು ಗ್ರಾಮ್ಯ ಮತ್ತು ಅರಣ್ಯ ಪಶುಸಮೂಹದಿಂದ ಪೂರ್ಣವಾಗಿ ತುಂಬಿ, ಒಂದು ಕೋಟಿ ಶ್ರೇಷ್ಠ ಗಜಗಳನ್ನು ಸುವರ್ಣಾಲಂಕೃತಗಳನ್ನಾಗಿ ಮಾಡಿ, ಜಾಮದಗ್ನ್ಯನಾದ ಪರಶುರಾಮನು ಕಾಶ್ಯಪರಿಗೆ ನೀಡಿದನು.

ನಿರ್ದಸ್ಯುಂ ಪೃಥಿವೀಂ ಕೃತ್ವಾ ಶಿಷ್ಟೇಷ್ಟಜನವತ್ಸಲಃ ।
ಕಾಶ್ಯಪಾಯ ದದೌ ರಾಮೋ ಹಯಮೇಧೇ ಮಹಾಮಖೇ ॥ ೨೧ ॥

ಶಿಷ್ಟವತ್ಸಲನೂ ಮತ್ತು ಇಷ್ಟಜನವತ್ಸಲನೂ ಆದ ಪರಶುರಾಮನು ಈ ಭೂಮಿಯನ್ನು ದಸ್ಯುರಹಿತವನ್ನಾಗಿ ಮಾಡಿ ಅಶ್ವಮೇಧ ಮಹಾಯಾಗದಲ್ಲಿ ಕಾಶ್ಯಪರಿಗೆ ದಾನವಾಗಿ ಕೊಟ್ಟನು.

ತ್ರಿಃಸಪ್ತಕೃತ್ವಃ ಪೃಥಿವೀ ಯೇನ ನಿಃಕ್ಷತ್ರಿಯಾ ಕೃತಾ ।
ಇಷ್ಟ್ವಾ ಕ್ರತುಶತೈಸ್ತೈಸ್ತೈಃ ಬ್ರಾಹ್ಮಣೇಭ್ಯೋ ಹ್ಯಮಂಸತ ॥ ೨೨ ॥

ಅವನು ಇಪ್ಪತ್ತೊಂದು ಬಾರಿ ಭೂಮಿಯನ್ನು ಕ್ಷತ್ರಿಯರಹಿತವನ್ನಾಗಿ ಮಾಡಿ, ನೂರಾರು ಯಾಗಗಳನ್ನು ಮಾಡಿ ಎಲ್ಲವನ್ನೂ ಬ್ರಾಹ್ಮಣರಿಗೆ ವಶವನ್ನಾಗಿ ಮಾಡಿದನು.

ಸಪ್ತದ್ವೀಪಾಂ ವಸುಮತೀಂ ಮಾರೀಚೋ ಗೃಹ್ಯ ತು ದ್ವಿಜಃ ।
ರಾಮಂ ಪ್ರೋವಾಚ ನಿರ್ಗಚ್ಛ ವಸುಧಾತೋ ಮಮಾಜ್ಞಯಾ ॥ ೨೩ ॥

ಮರೀಚಿಗಳ ಪುತ್ರರಾದ ಕಶ್ಯಪರು ಸಪ್ತದ್ವೀಪವತಿಯಾದ ಭೂಮಿಯನ್ನು ದಾನವನ್ನಾಗಿ ತೆಗೆದುಕೊಂಡು 'ಎಲೈ ಪರಶುರಾಮನೇ, ನನ್ನ ಆಜ್ಞೆಯಂತೆ ನನ್ನ ಭೂಮಿಯಿಂದ ಹೊರಗೆ ಹೋಗು' ಎಂದು ಹೇಳಿದರು.

ಸ ಕಾಶ್ಯಪಸ್ಯ ವಚನಾದ್ ಉತ್ಸಾರ್ಯ ಸರಿತಾಂ ಪತಿಮ್ ।
ಇಷುಣೇಷುಮತಾಂ ಶ್ರೇಷ್ಠೋ ಮಹೇಂದ್ರಗಿರಿಮಾವಿಶತ್ ॥ ೨೪ ॥

ಬಾಣಧಾರಿಗಳಲ್ಲಿ ಶ್ರೇಷ್ಠನಾದ ಅವನು ಒಂದು ಬಾಣದಿಂದ ಸಮುದ್ರವನ್ನು ದೂರಕ್ಕೆ ತಳ್ಳಿ, ಅನಂತರ ಮಹೇಂದ್ರ ಪರ್ವತದಲ್ಲಿ ವಾಸವನ್ನು ಮಾಡಿದನು.

ಬ್ರಾಹ್ಮಣೋ ಬ್ರಾಹ್ಮಣಶ್ರೇಷ್ಠಃ ಕುರ್ವನ್ ಬ್ರಾಹ್ಮಣಶಾಸನಮ್ ।
ಅಧ್ಯಾವಸದ್ ಗಿರಿಶ್ರೇಷ್ಠಂ ಮಹೇಂದ್ರಮಕುತೋಭಯಃ ॥ ೨೫ ॥

ಸ್ವತಃ ಬ್ರಾಹ್ಮಣನೂ, ಬ್ರಾಹ್ಮಣಶ್ರೇಷ್ಠನೂ ಆದ, ಬ್ರಾಹ್ಮಣರ ಅಪ್ಪಣೆಯನ್ನು ಪಾಲಿಸುವ ಅವನು ಶ್ರೇಷ್ಠವಾದ ಮಹೇಂದ್ರಪರ್ವತದಲ್ಲಿ ನಿರ್ಭಯವಾಗಿ ವಾಸವನ್ನು ಮಾಡಿದನು.

ಏವಂ ಗುಣಶತೈರ್ಯುಕ್ತೋ ಭೃಗೂಣಾಂ ಕೀರ್ತಿವರ್ಧನಃ ।
ಜಾಮದಗ್ನ್ಯೋ ಹ್ಯತಿಯಶಾಃ ಚತುರ್ಭದ್ರತರಸ್ತ್ವಯಾ ॥ ೨೬ ॥

ಹೀಗೆ ನೂರಾರು ಗುಣಗಳಿಂದ ಕೂಡಿದ, ಭೃಗುವಂಶದ ಕೀರ್ತಿವರ್ಧನನಾದ, ಜಮದಗ್ನಿ ಪುತ್ರನಾದ ಪರಶುರಾಮನು ಬಹಳ ಕೀರ್ತಿವಂತನಾಗಿ, ನಿನಗಿಂತ ನಾಲ್ಕು ಪಟ್ಟು ಶ್ರೇಷ್ಠನಾಗಿದ್ದನು.

ಪುತ್ರಾತ್ ಪುಣ್ಯತರಸ್ತುಭ್ಯಮ್ ಮಾ ಪುತ್ರಮನುತಪ್ಯಥಾಃ ।
ಅಯಜ್ವಾನಮದಕ್ಷಿಣ್ಯಮಧಿಚ್ಛೈತ್ಯೇತ್ಯುದಾಹರತ್ ॥ ೨೭ ॥

ಅವನ ಪುತ್ರನೂ ಸಹ ನಿನ್ನ ಪುತ್ರನಿಗಿಂತಲೂ ಶ್ರೇಷ್ಠನಾದವನು. ಹೀಗಿರುವಾಗ ಯಾಗವನ್ನು ಮಾಡದ, ದಾನವನ್ನು ಕೊಡದ ನಿನ್ನ ಪುತ್ರನ ವಿಷಯದಲ್ಲಿ ಸಂತಾಪವನ್ನು ಪಡಬೇಡ ಎಂದು ಹೇಳಿದರು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಸಪ್ತಷಷ್ಟಿತಮೋऽಧ್ಯಾಯಃ ॥

॥ ಅಭಿಮನ್ಯುವಧಪರ್ವಣಿ ಷಟ್ಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಅರವತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಅರವತ್ತೆಂಟನೆಯ ಅಧ್ಯಾಯ

ಯುಧಿಷ್ಠಿರನನ್ನು ಸಮಾಧಾನಗೊಳಿಸಿ ವ್ಯಾಸರ ಅಂತರ್ಧಾನ

ವ್ಯಾಸಃ

ಪುಣ್ಯಂ ಯಶಸ್ಯಮಾಖ್ಯಾನಂ ಶ್ರುತ್ವಾ ಷೋಡಶರಾಜಕಮ್ ।
ಅವ್ಯಾಹರನ್ ನರಪತಿಃ ತೂಷ್ಣೀಮಾಸೀತ್ ಸ ಸೃಂಜಯಃ ॥ ೧ ॥

ವ್ಯಾಸರು– ಪುಣ್ಯಪ್ರದವೂ, ಕೀರ್ತಿಪ್ರದವೂ ಆದ ಷೋಡಶರಾಜರ ಕಥೆಗಳನ್ನು ಕೇಳಿ ರಾಜನಾದ ಸೃಂಜಯನು ಏನೂ ಮಾತನಾಡದೆ ಸುಮ್ಮನಿದ್ದನು.

ತಮಬ್ರವೀತ್ ತದಾ ದೀನಂ ನಾರದೋ ಭಗವಾನೃಷಿಃ ।
ಕಚ್ಚಿನ್ಮಯಾ ವ್ಯಾಹೃತಂ ಯದ್ ಹೃದಯೇ ತತ್ ಸ್ಥಿತಂ ತವ ।
ಆಹೋಸ್ವಿದಂತತೋ ನಷ್ಟಂ ಶ್ರಾದ್ಧಂ ಶೂದ್ರಪತಾವಿವ ॥ ೨ ॥

ಆಗ ದೀನನಾದ ಅವನನ್ನು ಕುರಿತು ಪೂಜ್ಯರಾದ ನಾರದ ಋಷಿಗಳು ನಾನು ಮಾತನಾಡಿದುದೆಲ್ಲವೂ ನಿನ್ನ ಮನಸ್ಸಿನಲ್ಲಿ ಸ್ಥಿರವಾಗಿ ಉಳಿದಿದೆಯೇ? ಅಥವಾ ಶೂದ್ರಸ್ತ್ರೀ ಪತಿಗೆ ಕೊಟ್ಟ ಶ್ರಾದ್ಧದಾನದಂತೆ ಎಲ್ಲವೂ ನಷ್ಟವಾಗಿದೆಯೇ ಎಂದು ಕೇಳಿದರು.

ಸ ಏವಮುಕ್ತಃ ಪ್ರತ್ಯಾಹ ಪ್ರಾಂಜಲಿಃ ಸೃಂಜಯಸ್ತದಾ ॥ ೩ ॥

ಪುತ್ರಶೋಕಾಪಹಂ ಶ್ರುತ್ವಾ ಧನ್ಯಮಾಖ್ಯಾನಮುತ್ತಮಮ್ ।
ರಾಜರ್ಷೀಣಾಂ ಪುರಾಣಾನಾಂ ಯಜ್ವನಾಂ ದಕ್ಷಿಣಾವತಾಮ್ ॥ ೪ ॥

ವಿಸ್ಮಯೇನ ಹತೇ ಶೋಕೇ ತಮಸೀವಾರ್ಕತೇಜಸಾ ।
ವಿಪಾಪ್ಮಾಽಸ್ಮ್ಯನು ಮಾಂ ಶಾಧಿ ಯದಾತ್ಥ ಕರವಾಣಿ ತತ್ ॥ ೫ ॥

ಹೀಗೆ ಕೇಳಲ್ಪಟ್ಟ ಸೃಂಜಯನು, ಆಗ ಕೈಗಳನ್ನು ಮುಗಿದು ಪ್ರಾಚೀನರಾದ, ಯಜ್ಞಶೀಲರಾದ, ದಕ್ಷಿಣಾಶೂರರಾದ ರಾಜರ ಶ್ರೇಷ್ಠವಾದ, ಧನ್ಯವಾದ, ಪುತ್ರಶೋಕವನ್ನು ನಿವಾರಿಸುವ ಆಖ್ಯಾನಗಳನ್ನು ಕೇಳಿ, ಸೂರ್ಯನ ತೇಜಸ್ಸಿನಿಂದ ಅಂಧಕಾರವು ನಾಶವಾಗುವಂತೆ ವಿಸ್ಮಯದಿಂದ ನನ್ನ ಶೋಕವು ನಾಶವನ್ನು ಹೊಂದಿದೆ. ನಾನು ಪಾಪರಹಿತನಾಗಿದ್ದೇನೆ. ನನಗೆ ಅಪ್ಪಣೆಯನ್ನು ಕೊಡಿ. ನೀವು ಹೇಳಿದಂತೆ ನಾನು ಮಾಡುವೆನು ಎಂದು ಹೇಳಿದನು.

ನಾರದಃ

ದಿಷ್ಟ್ಯಾಽಪಹತಶೋಕಸ್ತ್ವಂ ವೃಣೀಷ್ವ ಯದಿಹೇಚ್ಛಸಿ ।
ತತ್ ತೇ ಸಂಪತ್ಸ್ಯತೇ ಸರ್ವಂ ನ ಮೃಷಾವಾದಿನೋ ವಯಮ್ ॥೬॥

ನಾರದರು– ದೇವರ ದಯದಿಂದ ನೀನು ಶೋಕವನ್ನು ಕಳೆದುಕೊಂಡಿದ್ದೀಯೆ. ನಿನಗೆ ಬೇಕಾದ ವರವನ್ನು ಕೇಳು. ಅವೆಲ್ಲವೂ ನಿನಗೆ ನೆರವೇರುವುದು. ನಾವು ಸುಳ್ಳು ಮಾತಾಡುವವರಲ್ಲ.

ಸೃಂಜಯಃ

ಪಾವಿತೋऽಹಮನೇನೈವ ಪ್ರಸನ್ನೋ ಯದ್ ಭವಾನ್ ಮಮ ।
ಪ್ರಸನ್ನೋ ಯಸ್ಯ ಭಗವಾನ್ ನ ತಸ್ಯಾಸ್ತೀಹ ದುರ್ಲಭಮ್ ॥ ೭ ॥

ಸೃಂಜಯ– ನೀವು ನನ್ನ ಮೇಲೆ ಪ್ರಸನ್ನರಾಗಿದ್ದರೆ ನಾನು ಅದರಿಂದಲೇ ಪವಿತ್ರನಾಗಿದ್ದೇನೆ. ಪೂಜ್ಯರಾದ ಭಗವತ್ಸ್ವರೂಪರಾದ ತಾವು ಪ್ರಸನ್ನರಾದ ಮೇಲೆ ಮನುಷ್ಯನಿಗೆ ದುರ್ಲಭವಾದುದು ಯಾವುದಿದೆ?

ನಾರದಃ

ಪುನರ್ದದಾಮಿ ತೇ ಪುತ್ರಂ ದಸ್ಯುಭಿರ್ನಿಹತಂ ವೃಥಾ ।
ಉದ್ಧೃತ್ಯ ನರಕಾತ್ ಕಷ್ಟಾತ್ ಪಶುವತ್ ಪ್ರೋಕ್ಷಿತಂ ಯಥಾ ॥ ೮ ॥

ನಾರದರು– ದಸ್ಯುಗಳಿಂದ ವ್ಯರ್ಥವಾಗಿ ಹತನಾದ ನಿನ್ನ ಪುತ್ರನನ್ನು ನರಕ ಕಷ್ಟದಿಂದ ಮೇಲಕ್ಕೆ ತಂದು, ಪ್ರೋಕ್ಷಿತವಾದ ಪಶುವಿನಂತೆ ನಿನಗೆ ಪುನಃ ಕೊಡುತ್ತೇನೆ.

ವ್ಯಾಸಃ

ಪ್ರಾದುರಾಸೀತ್ ತತಃ ಪುತ್ರಃ ಸೃಂಜಯಸ್ಯಾದ್ಭುತಪ್ರಭಃ ।
ದತ್ತಃ ಪ್ರಸನ್ನೇನ ತದಾ ಋಷಿಣಾ ದಿವ್ಯವರ್ಚಸಾ ॥ ೯ ॥

ವ್ಯಾಸರು– ಆಗ ಪ್ರಸನ್ನರಾದ, ದಿವ್ಯವರ್ಚಸ್ಸುಳ್ಳ ಆ ಋಷಿಗಳಿಂದ ಕೊಡಲ್ಪಟ್ಟ ಸೃಂಜಯನ ಪುತ್ರನು ಅದ್ಭುತ ಕಾಂತಿಯುಳ್ಳವನಾಗಿ ಅಲ್ಲಿ ಪ್ರಾದುರ್ಭೂತನಾದನು.

ತತಃ ಸಂಗಮ್ಯ ಪುತ್ರೇಣ ಪ್ರೀತಿಮಾನಭವನ್ನೃಪಃ ।
ಈಜೇ ಚ ಕ್ರತುಭಿರ್ಮುಖ್ಯೈಃ ಸಮಾಪ್ತವರದಕ್ಷಿಣೈಃ ॥ ೧೦ ॥

ಅನಂತರ ಸೃಂಜಯನು ತನ್ನ ಪುತ್ರನ ಜೊತೆಯಲ್ಲಿ ಸಮಾಗಮವನ್ನು ಹೊಂದಿ ಸಂತೋಷಗೊಂಡನು ಮತ್ತು ಪೂರ್ಣವಾದ ದಕ್ಷಿಣೆಗಳನ್ನು ಹೊಂದಿದ ಶ್ರೇಷ್ಠವಾದ ಯಾಗವನ್ನು ಮಾಡಿದನು.

ಅಕೃತಾಸ್ತ್ರಶ್ಚ ಹೀನಶ್ಚ ನಚ ಸನ್ನಾಹಕೋವಿದಃ ।
ಅಯಜ್ವಾ ಚಾನಪತ್ಯಶ್ಚ ತತೋಽಪಿ ತನಯಃ ಪುನಃ ॥ ೧೧ ॥

ಶೂರೋ ವೀರಃ ಕೃತಾಸ್ತ್ರಶ್ಚ ಪ್ರಮಥ್ಯಾರೀನ್ ಸಹಸ್ರಶಃ ।
ಅಭಿಮನ್ಯುರ್ಗತಃ ಸ್ವರ್ಗಂ ಸಂಗ್ರಾಮೇಽಭಿಮುಖೋ ಹತಃ ॥ ೧೨ ॥

ಅವನ ಪುತ್ರನಾದರೂ ಶಸ್ತ್ರಾಭ್ಯಾಸ ಮಾಡದವನು, ಹೀನನಾದವನು, ಯುದ್ಧವಿಶಾರದನಲ್ಲದವನು, ಯಾಗವನ್ನು ಮಾಡದವನು ಮತ್ತು ಪುತ್ರರಹಿತನಾದವನು. ಅವನಿಗಿಂತಲೂ ನಿನ್ನ ಪುತ್ರನಾದ ಅಭಿಮನ್ಯುವು ಶೂರನೂ, ವೀರನೂ ಮತ್ತು ಅಸ್ತ್ರಪಾರಂಗತನೂ ಆದವನು. ಅಭಿಮನ್ಯುವು ಸಹಸ್ರ ಸಂಖ್ಯೆಯಲ್ಲಿ ಶತ್ರುಗಳನ್ನು ಮರ್ದಿಸಿ, ಯುದ್ಧದಲ್ಲಿ ಶತ್ರುಗಳಿಗೆ ಅಭಿಮುಖವಾಗಿ ನಿಂತು ಹತನಾಗಿ ಸ್ವರ್ಗಕ್ಕೆ ಹೋಗಿದ್ದಾನೆ.

ಬ್ರಹ್ಮಚರ್ಯೇಣ ಯಾಲ್ಲೋಕಾನ್ ಪ್ರಜಯಾ ಚ ಶ್ರುತೇನ ಚ ।
ಇಷ್ಟೈಶ್ಚ ಕ್ರತುಭಿರ್ಯಾಂತಿ ತಾನ್ ಸೌಭದ್ರೋ ಗತೋಽಕ್ಷಯಾನ್ ॥೧೩॥

ಬ್ರಹ್ಮಚರ್ಯದಿಂದಲೂ, ಸತ್ಪ್ರಜೆಗಳಿಂದಲೂ, ವಿದ್ಯೆಯಿಂದಲೂ, ಇಷ್ಟಾಪೂರ್ತಗಳಿಂದಲೂ ಮತ್ತು ಯಾಗಗಳಿಂದಲೂ ಯಾವ ಲೋಕಗಳನ್ನು ಹೊಂದುತ್ತಾರೆಯೋ ಅಭಿಮನ್ಯುವು ಅಂತಹ ಅಕ್ಷಯವಾದ ಲೋಕವನ್ನು ಪಡೆದಿದ್ದಾನೆ.

ವಿದ್ವಾಂಸಃ ಕರ್ಮಭಿಃ ಪುಣ್ಯೈಃ ಲಭಂತೇ ಸ್ವರ್ಗಮುತ್ತಮಮ್ ।
ನತು ಸ್ವರ್ಗಾದಯಂ ಲೋಕಃ ಕಾಮ್ಯತೇ ಸ್ವರ್ಗವಾಸಿಭಿಃ ॥ ೧೪ ॥

ವಿದ್ವಾಂಸರು ಪುಣ್ಯಕರ್ಮಗಳನ್ನು ಮಾಡಿ ಶ್ರೇಷ್ಠವಾದ ಸ್ವರ್ಗವನ್ನು ಪಡೆಯುತ್ತಾರೆ. ಸ್ವರ್ಗವಾಸಿಯಾದವನು ಸ್ವರ್ಗದಲ್ಲಿದ್ದು, ಸ್ವರ್ಗಕ್ಕಿಂತಲೂ ಶ್ರೇಷ್ಠವಾದುದೆಂದು ಈ ಲೋಕವನ್ನು ಬಯಸುವುದಿಲ್ಲ.

ತಸ್ಮಾತ್ ಸ್ವರ್ಗಂ ಗತೋ ರಾಜನ್ನರ್ಜುನಸ್ಯ ಸುತೋ ವಶೀ ।
ನ ಚೇಹಾನಯಿತುಂ ಶಕ್ಯಃ ಕಿಂಚಿದಪ್ರಾಪ್ಯಮೀಹತಾಮ್ ॥ ೧೫ ॥

ಅಸಾಧ್ಯವಾದ ಕೆಲಸವನ್ನು ಮಾಡಲು ಪ್ರಯತ್ನಪಟ್ಟರೆ ಅದು ಸಾಧ್ಯವಾಗುವುದಿಲ್ಲ. ಸೃಂಜಯಪುತ್ರನು ನರಕದಲ್ಲಿ ಬಿದ್ದುದರಿಂದ ನಾರದರಿಂದ ಕರೆತರಲ್ಪಟ್ಟನು.

ಅಭಿಮನ್ಯುವು ಸ್ವರ್ಗಸುಖವನ್ನು ಅನುಭವಿಸುತ್ತಿರುವುದರಿಂದ ನನಗೆ ಸಾಮರ್ಥ್ಯವಿದ್ದರೂ ಅವನನ್ನು ಇಲ್ಲಿಗೆ ಕರೆತರುವುದು ಯೋಗ್ಯವಲ್ಲ.

ಯಾಂ ಯೋಗಿನೋ ಧ್ಯಾನವಿವಿಕ್ತದರ್ಶಿನಃ
ಪ್ರಯಾಂತಿ ಯಾಂ ಚೋತ್ತಮಯಜ್ವಿನೋ ಜನಾಃ ।
ತಪೋಭಿರುಗ್ರೈರನುಯಂತಿ ಯಾಂ ತಥಾ
ತಾಮಕ್ಷಯಾಂ ತೇ ತನಯೋ ಗತೋ ಗತಿಮ್ ॥ ೧೬ ॥

ಧ್ಯಾನಾಸಕ್ತರಾಗಿ ವಿವಿಕ್ತ ಜ್ಞಾನವನ್ನು ಹೊಂದಿದ ಯೋಗಿಗಳು ಯಾವ ಗತಿಯನ್ನು ಪಡೆಯುತ್ತಾರೆಯೋ, ಶ್ರೇಷ್ಠವಾದ ಯಾಗವನ್ನು ಮಾಡಿದವರು ಯಾವ ಗತಿಯನ್ನು ಪಡೆಯುತ್ತಾರೆಯೋ, ಉಗ್ರವಾದ ತಪಸ್ಸನ್ನು ಆಚರಿಸಿದವರು ಯಾವ ಗತಿಯನ್ನು ಪಡೆಯುತ್ತಾರೆಯೋ ಅಂತಹ ಅಕ್ಷಯವಾದ ಗತಿಯನ್ನು ನಿನ್ನ ಪುತ್ರನಾದ ಅಭಿಮನ್ಯುವು ಪಡೆದಿದ್ದಾನೆ.

ಏವಂ ಜ್ಞಾತ್ವಾ ಸ್ಥಿರೋ ಭೂತ್ವಾ ಮಾ ಶುಚೋ ಧೈರ್ಯಮಾಪ್ನುಹಿ ।
ಜೀವನ್ ಹಿ ಪುರುಷಃ ಶೋಚ್ಯೋ ನ ತು ಸ್ವರ್ಗಂ ಗತೋಽನಘ ॥೧೭॥

ಎಲೈ ಅನಘನೇ, ಹೀಗೆ ತಿಳಿದು ಸ್ಥೈರ್ಯವನ್ನು ಹೊಂದಿ, ಶೋಕವನ್ನು ಬಿಟ್ಟು ಧೈರ್ಯವನ್ನು ತಂದುಕೊ. ಜೀವಿಸಿರುವ ಪುರುಷರ ವಿಷಯದಲ್ಲಿ (ಅವನು ಕಷ್ಟಕ್ಕೆ ಸಿಲುಕಿದರೆ) ಶೋಕವನ್ನು ಪಡಬೇಕು, ಸ್ವರ್ಗವನ್ನು ಹೊಂದಿದವನ ವಿಷಯದಲ್ಲಿ ಅಲ್ಲ.

ಸ ಶೋಚಾನೋ ಹ್ಯಘಾಯುಶ್ಚ ಅಘಮೇವಾನುವರ್ತತೇ ।
ತಸ್ಮಾಚ್ಛೋಕಂ ಪರಿತ್ಯಜ್ಯ ಶ್ರೇಯಸಿ ಪ್ರಯತೇದ್ ಬುಧಃ ॥ ೧೮ ॥

ಶೋಕವನ್ನು ಪಡುವವನು ವ್ಯರ್ಥವಾದ ಮತ್ತು ಪಾಪಕರವಾದ ಆಯುಸ್ಸುಳ್ಳವನಾಗಿ ಪಾಪವನ್ನೇ ಅಭಿವೃದ್ಧಿಪಡಿಸಿಕೊಳ್ಳುತ್ತಾನೆ. ಆದ್ದರಿಂದ ವಿವೇಕಿಯಾದವನು ಶೋಕವನ್ನು ಬಿಟ್ಟು ಶ್ರೇಯಸ್ಸಾಧನದಲ್ಲಿ ತೊಡಗಬೇಕು.

ಪ್ರಹರ್ಷಂ ಪ್ರೀತಿಮಾನಂದಂ ಸುಖಮುತ್ಸಿಕ್ತಚಿತ್ತತಾಮ್ ।
ಏತದಾಹುರ್ಬುಧಾಃ ಶೌಚಮಶೌಚಂ ಶೋಕ ಉಚ್ಯತೇ ॥ ೧೯ ॥

ಒಳ್ಳೆಯ ಹರ್ಷ, ಮನಸ್ಸಿನ ಪ್ರೀತಿ, ಆನಂದ, ಸುಖ, ಚಿತ್ತದ ಉನ್ನತಿ ಇವುಗಳನ್ನು ಬುಧರು ಶೌಚವೆಂದು ಕರೆಯುತ್ತಾರೆ. ಶೋಕವು ಅಶೌಚವೆನಿಸುತ್ತದೆ.

ಏವಂ ವಿದ್ವಾನ್ ಸಮುತ್ತಿಷ್ಠ ಸುಮನಾ ಭವ ಮಾ ಶುಚಃ ।
ಶ್ರುತಸ್ತೇ ಸಂಭವೋ ಮೃತ್ಯೋಃ ತಪಾಂಸ್ಯನುಪಮಾನಿ ಚ ॥ ೨೦ ॥

ಹೀಗೆ ತಿಳಿದು ಎದ್ದೇಳು. ಒಳ್ಳೆಯ ಮನಸ್ಸುಳ್ಳವನಾಗು. ಶೋಕವನ್ನು ಪಡಬೇಡ. ಮೃತ್ಯುವಿನ ಉತ್ಪತ್ತಿಯನ್ನೂ ಮತ್ತು ಅಸದೃಶವಾದ ತಪಸ್ಸುಗಳನ್ನೂ ನೀನು ಕೇಳಿದ್ದೀಯೆ.

ಸರ್ವಭೂತಸಮತ್ವಂ ಚ ಬ್ರಹ್ಮಣಾ ಚಾಪಿ ಚೋದಿತಮ್ ।
ಸೃಂಜಯಸ್ಯ ತು ಪುತ್ರೋಽಸೌ ಮೃತಃ ಸಂಜೀವಿತಃ ಶ್ರುತಃ ।
ಏವಂ ವಿದ್ವನ್ ಮಹಾರಾಜ ಮಾ ಶುಚಃ ಸಾಧಯಾಮ್ಯಹಮ್ ॥೨೧॥

ಸರ್ವಭೂತಗಳಲ್ಲಿ ಸಮತ್ವವನ್ನು ಹೊಂದಿರಬೇಕೆಂದು ಬ್ರಹ್ಮದೇವರು ಹೇಳಿದ್ದಾರೆ. ಮೃತನಾದ ಸೃಂಜಯಪುತ್ರನಾದರೂ ನಾರದರಿಂದ ಪುನಃ ಜೀವಿಸಿರುವಂತೆ ಮಾಡಲ್ಪಟ್ಟನು. ಎಲೈ ಮಹಾರಾಜನೇ, ಹೀಗೆ ತಿಳಿದು ಶೋಕವನ್ನು ಬಿಡು. ನಾನು ಹೋಗಿ ಬರುತ್ತೇನೆ.

ಸಂಜಯಃ

ಏತಾವದುಕ್ತ್ವಾ ಭಗವಾಂಸ್ತತ್ರೈವಾಂತರಧೀಯತ ॥ ೨೨ ॥

ಸಂಜಯ– ಇಷ್ಟು ಹೇಳಿ ಪೂಜ್ಯರಾದ ವ್ಯಾಸರು ಅಲ್ಲಿಯೇ ಅಂತರ್ಧಾನವನ್ನು ಹೊಂದಿದರು.

ವಾಗೀಶಾನೇ ಭಗವತಿ ವ್ಯಾಸೇಽವ್ಯಕ್ತನಭಃಪ್ರಭೇ ।
ಗತೇ ಮತಿಮತಾಂ ಶ್ರೇಷ್ಠೇ ಸಮಾಶ್ವಾಸ್ಯ ಯುಧಿಷ್ಠಿರಮ್ ॥ ೨೩ ॥

ಸರ್ವೇಷಾಂ ಪಾರ್ಥಿವೇಂದ್ರಾಣಾಂ ಮಹೇಂದ್ರಪ್ರತಿಮೌಜಸಾಮ್ ।
ನ್ಯಾಯಾಧಿಗತವಿತ್ತಾನಾಂ ಶ್ರುತ್ವಾ ಯಜ್ಞೇಷು ಸಂಪದಃ ॥ ೨೪ ॥

ಸಂಪೂಜ್ಯ ಮನಸಾ ವಿದ್ವಾನ್ ನಿಃಶೋಕೋಽಭೂದ್ ಯುಧಿಷ್ಠಿರಃ ।
ಪುನಶ್ಚಾಚಿಂತಯದ್ ದೀನಃ ಕಿಂಸ್ವಿದ್ ವಕ್ಷ್ಯೇ ಧನಂಜಯಮ್ ॥೨೫॥

ವಾಚಸ್ಪತಿಗಳಾದ, ಅವ್ಯಾಕೃತಾಕಾಶ ಸದೃಶವಾದ ಜ್ಞಾನವುಳ್ಳ, ಮೇಧಾವಿಗಳಲ್ಲಿ ಶ್ರೇಷ್ಠರಾದ, ಪೂಜ್ಯರಾದ ವ್ಯಾಸರು ಯುಧಿಷ್ಠಿರನನ್ನು ಸಮಾಧಾನಗೊಳಿಸಿ ಹೊರಟು ಹೋಗುತ್ತಿರಲು, ಮಹೇಂದ್ರನಿಗೆ ಸಮಾನವಾದ ಪರಾಕ್ರಮವುಳ್ಳ, ಎಲ್ಲ ರಾಜರ ಯಜ್ಞಗಳಲ್ಲಿ ನ್ಯಾಯದಿಂದ ಗಳಿಸಿದ ಸಂಪತ್ತಿನ ವೈಭವಗಳನ್ನು ಕೇಳಿ, ಅದನ್ನು ಮನಸ್ಸಿನಲ್ಲಿಯೇ ಸಮ್ಮಾನಿಸಿ, ಮೇಧಾವಿಯಾದ ಯುಧಿಷ್ಠಿರನು ಶೋಕವನ್ನು ಕಳೆದುಕೊಂಡನು. ಪುನಃ ದೀನನಾಗಿ ಅರ್ಜುನನಿಗೆ ನಾನು ಏನು ಹೇಳುವೆನು ಎಂದು ಚಿಂತಿಸಿದನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಅಷ್ಟಷಷ್ಟಿತಮೋऽಧ್ಯಾಯಃ ॥

॥ ಅಭಿಮನ್ಯುವಧಪರ್ವಣಿ ಸಪ್ತತ್ರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ಅರವತ್ತೆಂಟನೆಯ ಅಧ್ಯಾಯ ಮುಗಿಯಿತು.

ದ್ರೋಣರ ಸೇನಾಪತ್ಯದಲ್ಲಿ ಮೂರನೆಯ ದಿನದ ಯುದ್ಧದ ಸಮಾಪ್ತಿ.

॥ ಸಮಾಪ್ತಮಭಿಮನ್ಯುವಧಪರ್ವ ॥

★ ★ ★ ★ ★